23
~~25~~
24

SATYANVESHANA TRUST
102, 2nd 'A' Cross,
Near N.E.T. School, Gavipuram Extn,
BANGALORE South - 560 019. Karnataka

ಶ್ರೀಮದ್ವಿಶಿಷ್ಟಾದ್ವೈತ ಸಿದ್ಧಾನ್ತ ರತ್ನಮಾಲಾ

ದ್ವಿತೀಯ ರತ್ನವು—ಹನ್ನೆರಡನೆಯ ಸಂಚಿಕೆಯು

ಶ್ರೀಮನ್ನಿಗಮಾನ್ತ ಮಹಾದೇಶಿಕಪ್ರಣೀತ

ಶ್ರೀಮದ್ರಹಸ್ಯತ್ರಯಸಾರದ

ಸಿದ್ಧೋಪಾಯ ಸಾಧನಾಧಿಕಾರೋ ತ್ರಯೋವಿಂಶಃ

ವಿದ್ಯಾಭ್ಯಾಸದ ಇಲಾಖಾ ರಿಟೈರ್ಡ್ ಸರ್ಕಲ್ ಇನ್ಸ್ಪೆಕ್ಟರು

ಸಿ. ಯಂ. ವಿಜಯರಾಘವಾಚಾರ್ಯರಿಂದ

ರಚಿಸಲ್ಪಟ್ಟ

ಆಚಾರ್ಯಹೃದಯಾನ್ವೇಷಿಣೀ

ಎಂಬ ಕನ್ನಡ ಅರ್ಥ ತಾತ್ಪರ್ಯಗಳೊಂದಿಗೆ ಮುದ್ರಿಸಲ್ಪಟ್ಟಿರುತ್ತದೆ.

ಬೆಂಗಳೂರು ಸಿಟಿ

೧೯೩೬

ಬೆಲೆ ೦—೧೪—೦

ಶ್ರಿಯೈ ನಮಃ
ಶ್ರೀನಿವಾಸಾಯ ನಮಃ
ಶ್ರೀಮತೇ ರಾಮಾನುಜಾಯ ನಮಃ
ಶ್ರೀಮತೇ ನಿಗಮಾನ್ತ ಮಹಾದೇಶಿಕಾಯ ನಮಃ

ಅಥ ಶ್ರೀಮದ್ರಹಸ್ಯತ್ರಯಸಾರೇ

ಸ್ಥಿರೀಕರಣಾಖ್ಯ ದ್ವಿತೀಯಭಾಗಃ

ಸಿದ್ಧೋಪಾಯ ಶೋಧನಾಧಿಕಾರಃ ೨೩.

**ಯುಗಪದಖಿಲಂ ಪ್ರತ್ಯಕ್ಷೇಣ ಸ್ವತಸ್ಸತತಂ ವಿದನ್ ।
ನಿರವಧಿ ದಯಾನಿತ್ಯೋ (ದಿವ್ಯೋ) ದನ್ಯಾನಶಕ್ಯ ವಿವರ್ಜಿತಃ ।**

ಶ್ರೀಮತೇ ಶ್ರೀನಿವಾಸ ಮಹಾದೇಶಿಕಾಯ ನಮಃ.

ಅವತಾರಿಕೆ. ಹಿಂದಿನ ೨೨ ಅಧಿಕಾರಗಳಿಂದ ಅರ್ಥಾನುಶಾಸನವೆಂಬ ಪ್ರಥಮಭಾಗದಲ್ಲಿ ತತ್ವಹಿತ ಪುರುಷಾರ್ಥಗಳನ್ನು ಸವಿಸ್ತರವಾಗಿ ಉಪದೇಶಿಸಿ, ಈ ದ್ವಿತೀಯ ಭಾಗದಲ್ಲಿ, ಅರ್ಥಾನುಶಾಸನ ವಿಷಯದಲ್ಲಿ ತೋರಿಬರುವ ಅನೇಕ ಪೂರ್ವಪಕ್ಷಗಳನ್ನೆಲ್ಲಾ ಖಂಡಿಸಿ, ಅಲ್ಲಿ ಹೇಳಿದುದನ್ನೇ ಸ್ಥಿರಪಡಿಸುವದರಿಂದ ಇದಕ್ಕೆ ಸ್ಥಿರೀಕರಣ ಭಾಗವೆಂದು ಹೆಸರು. ಈ ಭಾಗಕ್ಕೆ ಸೇರಿದವು ನಾಲ್ಕು ಅಧಿಕಾರಗಳು:—(೧) ಸಿದ್ಧೋಪಾಯ ಶೋಧನಾಧಿಕಾರಃ. (೨) ಸಾಧ್ಯೋಪಾಯ ಶೋಧನಾಧಿಕಾರಃ, (೩) ಪ್ರಭಾವ ವ್ಯವಸ್ಥಾಧಿಕಾರಃ, (೪) ಪ್ರಭಾವ ರಕ್ಷಾಧಿಕಾರಃ. ಇದರಲ್ಲಿ ಸಿದ್ಧೋಪಾಯನು ಶ್ರಿಯಃಪತಿಯಾದ ಸರ್ವೇಶ್ವರನೆಂದು ಹೇಳುವ ಸಂದರ್ಭದಲ್ಲಿ ಉಂಟಾಗಬಹುದಾದ ಪೂರ್ವಪಕ್ಷಗಳಿಗೆ ಸಮಾಧಾನವು ಈ ಭಾಗದ ಮೊದಲಿನ ಅಧಿಕಾರದಲ್ಲೂ, ಸಾಧ್ಯೋಪಾಯಗಳು ಪರಿಕರಗಳಿಂದ

ಸೇರಿದ ಭಕ್ತಿಪ್ರಪತ್ತಿಗಳೆಂದು ಹೇಳುವದರಲ್ಲಿ ತೋರಿಬರುವ ಪೂರ್ವಪಕ್ಷಗಳಿಗೆ ಸಮಾಧಾನವು ಎರಡನೆಯ ಅಧಿಕಾರದಲ್ಲೂ, ಈ ಭರನ್ಯಾಸಕ್ಕೆ ಇಲ್ಲದಿರುವ ಹೆಚ್ಚು ಮಹಿಮೆಗಳನ್ನಾರೋಪಿಸುವ ಪೂರ್ವಪಕ್ಷಗಳಿಗೆ ಸಮಾಧಾನವು ಈ ಮೂರನೆಯ ಅಧಿಕಾರದಲ್ಲೂ, ಭರನ್ಯಾಸಕ್ಕೆ ಇರುವ ಮಹಿಮೆಗೆ ನ್ಯೂನತೆಯನ್ನು ಕಲ್ಪಿಸುವ ಆಕ್ಷೇಪಣೆಗೆ ಸಮಾಧಾನವು ಈ ನಾಲ್ಕನೆಯ ಅಧಿಕಾರದಲ್ಲೂ, ಉಪಪಾದಿತ ಗಳಾಗಿವೆ.

ಸಿದ್ಧೋಪಾಯ ವಿಷಯವಾದ ಆಕ್ಷೇಪಣೆಗಳ ನಿರಸನವು ಪ್ರಧಾನವಾದುದ ರಿಂದ ಪ್ರಥಮತಃ ಸಿದ್ಧೋಪಾಯ ಶೋಧನವು ಮಾಡಲ್ಪಡುತ್ತದೆ. ಈ ಸಂದರ್ಭ ದಲ್ಲಿ ಕೆಲವು ಪೂರ್ವಪಕ್ಷಗಳನ್ನು ತರಬಹುದು. ಹೇಗೆಂದರೆ :—

೧. ಸರ್ವೇಶ್ವರನೇ ತಂದೆಯು ಮತ್ತು ತಾಯಿಯು. ತಾನೇ ಸ್ತನ್ಯವನ್ನು ಕೊಟ್ಟು ಕಾಪಾಡುವದು ನ್ಯಾಯವಾಗಿರುವಾಗ ಬೇರೆ ಸಾಧ್ಯೋಪಾಯಾಪೇಕ್ಷೆ ಏತಕ್ಕೆ ?

೨. ಭಗವಂತನು ಹಾಗೆ ಯಾವುದರ ಸಾಪೇಕ್ಷತ್ವವೂ ಇಲ್ಲದೆ ರಕ್ಷಿಸದಿದ್ದರೆ ಆತನ ಸ್ವಾತಂತ್ರ್ಯಕ್ಕೆ ನೈಷ್ಫಲ್ಯವನ್ನು ಕಲ್ಪಿಸಿದಹಾಗಾಗುವದಿಲ್ಲವೇ ?

೩. ಭಗವಂತನೇ ಮುಖ್ಯೋಪಾಯವಾಗಿರುವಾಗ ಬೇರೇ ಉಪಾಯ ಸಾಪೇಕ್ಷತ್ವವು ಆತನ ಮಹಿಮೆಗೆ ಕುಂದಕವಲ್ಲವೇ ?

೪. ಅನೇಕ ಕಡೆಗಳಲ್ಲಿ ಸಿದ್ಧೋಪಾಯನು ಸರ್ವೇಶ್ವರನೆಂದು ಹೇಳಿರು ವಾಗ ಲಕ್ಷ್ಮಿಗೂ ಕೂಡ ಉಪಾಯಕೋಟಿಯಲ್ಲಿ ಅನ್ವಯವು ಹೇಗೆ? ಸರ್ವೇಶ್ವರನ ಅನನ್ಯೋಪಾಯತ್ವಕ್ಕೆ ಹಾನಿ ಉಂಟಾಗುವದಿಲ್ಲವೇ ? ಐಕಾಂತ್ಯಕ್ಕೆ ಭಂಗ ವಲ್ಲವೇ ? ಚರಮಶ್ಲೋಕದಲ್ಲಿ ಮಾಮೇಕಂ ಎಂದು ಹೇಳಿರುವದಕ್ಕೆ ವಿರೋಧ ವಲ್ಲವೇ ? ಇವೇ ಮೊದಲಾದ ಆಕ್ಷೇಪಣೆಗಳಿಗೆ ಸಮಂಜಸವಾದ ಸಮಾಧಾನ ಗಳು ಈ ಅಧಿಕಾರದಲ್ಲಿ ಹೇಳಲ್ಪಟ್ಟು ಸಿದ್ಧೋಪಾಯ ಲಕ್ಷಣವನ್ನು ಶೋಧನೆ ಮಾಡುವದರಿಂದ ಇದಕ್ಕೆ ಸಿದ್ಧೋಪಾಯ ಶೋಧನಾಧಿಕಾರವೆಂದು ಹೆಸರು.

ಅರ್ಥ :—ಅಖಿಲಂ - ಸಮಸ್ತವನ್ನೂ, ಉಭಯವಿಭೂತಿಯ ಸಮಸ್ತ ವಸ್ತುಗಳನ್ನೂ, **ಯುಗಪತ್** - ಕ್ರಮಕ್ರಮವಾಗಿ ಅಲ್ಲದೆ ಏಕಕಾಲದಲ್ಲೇ, **ಸ್ವತಃ**- ಇತರಾಪೇಕ್ಷೆ ಇಲ್ಲದೆ ತಾನೇ ತನ್ನ ಸ್ವರೂಪ ಮಾಹಾತ್ಮ್ಯೆಯಿಂದಲೇ, **ಸತತಂ**- ಯಾವಾಗಲಾದರೂ ಒಂದು ಕಾಲದಲ್ಲಿಲ್ಲದೆ ಎಲ್ಲಾ ಕಾಲದಲ್ಲೂ, **ಪ್ರತ್ಯಕ್ಷೇಣ** - ಅನುಮಾನ ಶಾಬ್ದಪ್ರಮಾಣಗಳ ಆವಶ್ಯಕತೆ ಇಲ್ಲದೇನೇ ಪ್ರತ್ಯಕ್ಷದಿಂದಲೇ, **ವಿರ್ದ** - ತಿಳಿಯುವನಾಗಿ, ಸಾಕ್ಷಾತ್ಕರಿಸುವನಾಗಿ, "**ಯಸ್ಸರ್ವಜ್ಞಸ್ಸರ್ವವಿತ್**" ಎಂದು ಶ್ರುತಿಯಲ್ಲಿ ಹೇಳಿರುವ ಹಾಗೆ ಸರ್ವಜ್ಞನಾಗಿಯೂ ಸರ್ವವಿತ್ತಾಗಿಯೂ ಇರು

ಜಲಧಿಸುತಯಾ ಸಾರ್ಧಂ ದೇವೋ ಜಗತ್ಪರಿಪಾಲಯನ್ ।
ಪರಮಪುರುಷಸ್ಸಿದ್ಧೋಪಾಯಃ ಪ್ರತೀಷ್ಟಭರಸ್ಸತಾಂ ॥ ೫೧ ॥

ವವನಾಗಿ, ನಿರವಧಿದಯಾದಿವ್ಯೋದನ್ವಾನ್ - ಎಲ್ಲೆ ಇಲ್ಲದಿರುವ ಕರುಣೆಗೆ ದಿವ್ಯ ಸಮುದ್ರನಾಗಿರುವ, ಸಾರಾಸ್ವಾದನಿಯವರು **ಸ್ವತಃ** - ಎಂಬುವದನ್ನು ಇದಕ್ಕೂ ಕಾಕಾಕ್ಷಿನ್ಯಾಯದಿಂದ ಸೇರಿಸಿ ಅನ್ವಯಿಸಿರುತ್ತಾರೆ; **ನಿರವಧಿದಯಾನಿತ್ಯೋದನ್ವಾನ್** ಎಂದು ಪಾಠಾಂತರವು, ಆಗ ಎಲ್ಲೆ ಇಲ್ಲದ ಕರುಣೆಗೆ ಶಾಶ್ವತವಾದ ಸಮುದ್ರಪ್ರಾಯನೆಂಬರ್ಥವು. **ಅಶಕ್ಯವಿವರ್ಜಿತಃ** - ತನಗೆ ಅಶಕ್ಯವಾದುದೇ ಇಲ್ಲದವನಾಗಿ, ಸರ್ವಶಕ್ತನಾಗಿ, **ಜಲಧಿಸುತಯಾ ಸಾರ್ಧಂ** - ಕ್ಷೀರಸಾಗರ ಕನ್ಯಕೆಯಾದ ಲಕ್ಷ್ಮಿಯೊಂದಿಗೇನೆ, ಏಕಾಕಿಯಾಗಿಯಲ್ಲದೆ ತನ್ನ ಪತ್ನಿಯೊಂದಿಗೇನೇ ಎಂಬರ್ಥವು, **ದೇವಃ** - ಲೀಲಾಪರನಾದ, **ಪರಮಪುರುಷಃ** - ಪುರುಷಸೂಕ್ತದಲ್ಲಿ ಸರ್ವಶ್ರೇಷ್ಠನೆಂದು ಹೇಳಲ್ಪಟ್ಟಿರುವ ಪುರುಷಶಬ್ದವಾಚ್ಯನಾದ ನಾರಾಯಣನು, **ಜಗತ್ಪರಿಪಾಲಯನ್** - ಜಗತ್ತುಗಳನ್ನೆಲ್ಲಾ ಚನ್ನಾಗಿ ಪಾಲಿಸುವನಾಗಿ, **ಪ್ರತೀಷ್ಟಭರಸ್ಸನ್** - ಆತನ ವಿಧ್ಯುಕ್ತಿಗಳನುಸಾರವಾಗಿ ಅನುಷ್ಠಿಸಿದ ಭರನ್ಯಾಸವ್ಯಾಜಮೂಲಕವಾಗಿ, ಅಙ್ಗೀಕರಿಸಿದ ಭರವುಳ್ಳವನಾಗಿ, **ಸತಾಂ**-ಪರಮಾತ್ಮನಲ್ಲಿ ಸಕ್ತವಾದ ಮನಸ್ಸುಳ್ಳವರಾಗಿ ಸತ್ತರ್ಕದಿಂದ ವೇದಾಂತ ವಿಚಾರ ಮಾಡುವ ಪ್ರಪನ್ನ ಜನರಿಗೆ **ಸಿದ್ಧೋಪಾಯಃ** - ಸಿದ್ಧೋಪಾಯನಾಗಿರುತ್ತಾನೆ. ಸರ್ವಜ್ಞನಾಗಿಯೂ ಸರ್ವಶಕ್ತನಾಗಿಯೂ, ಕರುಣಾಸಾಗರನಾಗಿಯೂ, ಲಕ್ಷ್ಮೀ ವಿಶಿಷ್ಟನಾಗಿ ಲೀಲಾಪರನಾಗಿ ಸಮಸ್ತ ಜಗದ್ರಕ್ಷಕನಾಗಿ ಹೀಗೆ ಸರ್ವವಿಧ ಆಶ್ರಯೋಚಿತ ಸ್ವರೂಪ ಸ್ವಭಾವಪರಿಕರಾದಿಗಳಿಂದ ಯುಕ್ತನಾದ ಶ್ರಿಯಃಪತಿಯೇ ನಮಗೆ ಪರಮಪದ ಸೋಪಾನವನ್ನು ಹತ್ತಿಸುವ ಸಿದ್ಧೋಪಾಯನೆಂದು ಇಲ್ಲಿ ಹೇಳಲ್ಪಟ್ಟಿತು.

ತಾತ್ಪರ್ಯ— ಇಲ್ಲಿ ಪರಮ ಪುರುಷನಾದ ಶ್ರೀಮನ್ನಾರಾಯಣನೇ ದ್ವಯ ಮಂತ್ರದ ಪೂರ್ವಖಂಡದಲ್ಲಿ ವ್ಯಕ್ತವಾಗಿರುವ ಹಾಗೆ ಸಿದ್ಧೋಪಾಯನು. ಈತನು ಅನಾದಿಯಾಗಿ ಸಿದ್ಧನಾಗಿಯೂ, ತನ್ನ ಪ್ರಾಪ್ತಿಗೆ ತಾನೇ ಮುಖ್ಯ ಸಾಧನನಾಗಿ ಸಿದ್ಧವಾದ ಉಪಾಯ ಭೂತನಾಗಿರುವದರಿಂದ ಸಿದ್ಧೋಪಾಯನೆಂದು ಹೇಳಲ್ಪಟ್ಟಿತು. ಗೀತೆಯಲ್ಲಿ ಪ್ರತಿಯೊಂದು ಕಾರ್ಯಕ್ಕೂ ಐದು ಅಂಶಗಳು ಆವಶ್ಯಕವೆಂದು ಹೇಳುವ ಸಂದರ್ಭದಲ್ಲಿ **ದೈವಂ ಚೈವಾತ್ರ ಪಂಚಮಂ,** ಪರಮಪುರುಷನೇ ಸರ್ವಕ್ಕೂ ಮುಖ್ಯ ಕಾರಣವೆಂದು ಹೇಳಿರುವದರಿಂದ, ಮೋಕ್ಷಪ್ರಾಪ್ತಿಗೂ ಆತನು ಮುಖ್ಯವಾದ ಉಪಾಯಭೂತನೆಂದು ಹೇಳುವದು ಸರ್ವಸಮಂಜಸವಾದ ಉಕ್ತಿಯೇ. ಈ ಉಕ್ತಿಯು ಶ್ರುತಿಪ್ರಮಾಣವನ್ನನುಸರಿಸಿದುದಾಗಿರುತ್ತದೆ:—

"**ನಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ ನ ಬಹುನಾಶ್ರುತೇನ। ಯಮೇವೈಷವೃಣುತೇ ತೇನ ಲಭ್ಯಃ ತಸ್ಯೈಷ ಆತ್ಮಾ ವಿವೃಣತೇ ತನೂಂಸ್ವಾಂ ॥**" (ಮುಂ. ೩ ೧ ೩) ಕೇವಲ ಶ್ರವಣ ಮನನ ನಿಧಿಧ್ಯಾಸನಗಳಿಂದಲೇ ಆ ಪರಮಾತ್ಮನು ಹೊಂದಲ್ಪಡುವದಿಲ್ಲವು, ಈ ಪರಮಾತ್ಮನು ಯಾವನನ್ನು ವರಿಸುವನೋ ಅವನಿಂದ ಹೊಂದಲ್ಪಡುವನು. ಹಾಗೆ ಪರಮಾತ್ಮನು ಈತನನ್ನು ವರಿಸಬೇಕಾದರೆ ತನಗೆ ಯಾರು ಪ್ರಿಯತಮನೋ ಅಂಥಾವನನ್ನು ವರಿಸುವನು. ಹಾಗೆ ಪರಮಾತ್ಮನಿಗೆ ಪ್ರಿಯತಮನಾಗುವದಕ್ಕೆ ಆ ಪರಮಾತ್ಮನಲ್ಲಿ ನಿರತಿಶಯ ಭಕ್ತಿರೂಪವಾದ ಪ್ರೀತಿಯನ್ನು ಇಟ್ಟಿರಬೇಕು. ಆದುದರಿಂದ ಶ್ರಿಯಃಪತಿಯ ಪ್ರೀತಿದ್ವಾರಾ ಭಗವತ್ಪ್ರಾಪ್ತಿಯು.

ಹೀಗೆ ಸಿದ್ಧೋಪಾಯನಾಗಬೇಕಾದರೆ ಸರ್ವೇಶ್ವರನಲ್ಲಿ, ಶ್ರುತಿಯು "**ಯಸ್ಸರ್ವಜ್ಞಸ್ಸರ್ವವಿತ್**" ಎಂದು ಹೇಳಿರುವ ಹಾಗೆ, ಸರ್ವಜ್ಞತೆ ಬೇಕು, ಸರ್ವ ವಿಷಯವನ್ನೂ ತಿಳಿಯುವ ಯೋಗ್ಯತೆ ಇದ್ದರೇನೇ ಪ್ರಪನ್ನನಾದ ಈ ಅಕಿಂಚಿನನ ಮನೋಭಿಪ್ರಾಯವನ್ನೂ, ಈತನು ಮಾಡುವ ವ್ಯಾಜರೂಪ ಸಾಧನವನ್ನೂ ಅರಿತವನಾಗಿ ಈತನ ಇಷ್ಟಾರ್ಥವನ್ನು ಸಲ್ಲಿಸಬಹುದು. ಸರ್ವಜ್ಞತೆ ಎಂಥಾದ್ದೆಂಬುದನ್ನು ವಿಶದೀಕರಿಸಿರುತ್ತಾರೆ. **ಯುಗಪದಖಿಲಂ ಪ್ರತ್ಯಕ್ಷೇಣ ಸ್ವತಸ್ಸತತಂವಿದನ್** ಎಂಬುದರಿಂದ ತಿಳಿಸುತ್ತಾರೆ. ಸಮಸ್ತವನ್ನೂ ಏಕಕಾಲದಲ್ಲೇ ತಾನೇ ಇತರ ಸಹಾಯಾಪೇಕ್ಷೆಯಿಲ್ಲದೆ ಸದಾ ಪ್ರತ್ಯಕ್ಷದಿಂದ ಸಾಕ್ಷಾತ್ಕರಿಸುವ ಶಕ್ತಿಯು. ಒಂದನ್ನು ಒಂದು ಸಲವೂ ಇನ್ನೊಂದನ್ನು ಇನ್ನೊಂದು ಸಲವೂ ಸಾಕ್ಷಾತ್ಕರಿಸುವುದು ಸರ್ವಜ್ಞತೆಯಾಗುವದಿಲ್ಲವು. ಸಾಕ್ಷಾತ್ಕರಿಸಿದುದು ಗತಿಸಿಹೋಗಿ ಪುನಃ ಪ್ರತ್ಯಕ್ಷವಾಗುವದೂ ಸರ್ವಜ್ಞತೆಯಲ್ಲವು. ಊಹೆಯಿಂದ ತಿಳಿಯುವದಾಗಲಿ ಶಾಸ್ತ್ರಮೂಲಕವಾಗಲಿ ತಿಳಿಯುವದೂ ಸಹ ಸರ್ವಜ್ಞತೆಯಾಗುವುದಿಲ್ಲವು. ಪ್ರತ್ಯಕ್ಷೀಕರಿಸುವದೇ ಸರ್ವಜ್ಞತೆಯು. **ಶ್ರೀ** ಯಾಮುನೇಯರು ತಾವು ರಚಿಸಿದ ನ್ಯಾಯತತ್ವದ ಮಂಗಳಶ್ಲೋಕದಲ್ಲಿ

"**ಯೋವೇತ್ತಿ ಯುಗಪತ್ಸರ್ವಂ ಪ್ರತ್ಯಕ್ಷೇಣ ಸದಾಸ್ವತಃ।**
ತಂ ಪ್ರಣಮ್ಯ ಹರಿಂ ಶಾಸ್ತ್ರಂ ನ್ಯಾಯತತ್ವಂ ಪ್ರಚಕ್ಷ್ಮಹೇ॥"

ಎಂದು ಹೇಳಿದ ಅಭಿಪ್ರಾಯವನ್ನೇ ಇಲ್ಲಿ ಉಪಪಾದಿಸಿ ಹೇಳಿರುತ್ತಾರೆ. ಮುಕ್ತರಿಗೂ ಕೂಡ ಸರ್ವಜ್ಞತೆಯು ಪ್ರಾಪ್ತವಾಗುವದರಿಂದ ಅವರೂ ಭಗವಂತನ ಹಾಗೆಯೇ ಏಕಕಾಲದಲ್ಲೇ ಸದಾಸ್ವತಃ ಎಲ್ಲವನ್ನೂ ಪ್ರತ್ಯಕ್ಷೀಕರಿಸುತ್ತಾರೆ. ಆದುದರಿಂದಲೇ ಮುಕ್ತರಿಗೆ ಶಾಸ್ತ್ರವು ಬೇಕಾಗಿಲ್ಲವು. ಇನ್ನು ಪರಮಾತ್ಮನಿಗೆ ಶಾಸ್ತ್ರದ ಆವಶ್ಯಕತೆಯುಂಟೇ? ಆತನೂ ಮುಕ್ತರೂ ಸಹ ನೋಡುವದು

ಎಂಬುದು ಅಪರೋಕ್ಷರೂಪಜ್ಞಾನದಿಂದ ಮಾತ್ರವೇ. ನಮ್ಮ ಹಾಗೆ ಅವರುಗಳಿಗೆ ಚಕ್ಷುರಿಂದ್ರಿಯದಾವಶ್ಯಕತೆಯಿಲ್ಲವು. ಆದುದರಿಂದಲೇ ಶ್ರುತಿಯು "ಅಪಾಣಿಪಾದೋ ಜವನೋಗ್ರಹೀತಾ ಪಶ್ಯತ್ಯ ಚಕ್ಷುಸ್ಸಶೃಣೋತ್ಯಕರ್ಣಃ" ಎಂದು ಕಣ್ಣಿನಾವಶ್ಯಕತೆಯಿಲ್ಲದೆ ಸಾಕ್ಷಾತ್ಕರಿಸುವನೆಂದು ಹೇಳುತ್ತದೆ. ಬದ್ಧರಾದವರೋ ಹಾಗಲ್ಲವು. ಕ್ರಮೇಣ ಅನೇಕ ಜನ್ಮಗಳಲ್ಲೆಲ್ಲಾ ಆಗುವ ಸಾಕ್ಷಾತ್ಕಾರವೆಲ್ಲಾ ಒಟ್ಟುಕೂಡಿಸಿದರೆ ಸ್ವಲ್ಪ ಹೆಚ್ಚಿನ ಸಾಕ್ಷಾತ್ಕಾರ ಉಂಟಾಗಬಹುದು. ಆದರೂ ಎಲ್ಲಾದರ ಸಾಕ್ಷಾತ್ಕಾರವೂ ಉಂಟಾಗುವದಿಲ್ಲವು. ಒಂದೇ ಕಾಲದಲ್ಲಂತೂ ಎಂದಿಗೂ ಉಂಟಾಗುವದಿಲ್ಲವು. ಕೆಲವು ಸಂದರ್ಭಗಳಲ್ಲಿ ಪ್ರತ್ಯಕ್ಷವಾಗಿ ನೋಡಲಿಕ್ಕಾಗದೇ ಇರುವಾಗ ಅನುಮಾನ ಶಾಬ್ದಪ್ರಮಾಣಗಳಿಂದ ಗ್ರಹಿಸತಕ್ಕದ್ದಾಗಿರುತ್ತದೆ. ಆದರೆ ಅತೀಂದ್ರಿಯವಾದ ವಿಷಯವನ್ನು "ಶಾಸ್ತ್ರೇಣೈವಸೇಯು" ವೆಂದು ಹೇಳಿರುವುದರಿಂದ ಶಾಸ್ತ್ರಮೂಲಕವಾಗಿಯೇ ಗ್ರಹಿಸತಕ್ಕದ್ದಾಗಿರುತ್ತದೆ. ಬದ್ಧರಿಗಾದರೋ ಒಂದು ಕಾಲದಲ್ಲಿ ಪ್ರತ್ಯಕ್ಷವಾಗಬಹುದು, ಇನ್ನೊಂದರಿಂದ ಆ ಪ್ರತ್ಯಕ್ಷಜ್ಞಾನವು ವ್ಯಾವರ್ತಿಸಬಹುದು. ಸುಷುಪ್ತಿದಶೆಯಲ್ಲಿ ಜ್ಞಾನವೇ ಇಲ್ಲದೇ ಇರುತ್ತದೆ. ಹೀಗಲ್ಲವೆಂದು ತಿಳಿಸುವದಕ್ಕಾಗಿ ಸರ್ವಜ್ಞನಿಗೆ ಯಾವಾಗಲೂ ಪ್ರತ್ಯಕ್ಷವೆಂದು ಹೇಳುವದಕ್ಕಾಗಿ **ಸತತಂ** ಎಂಬ ಪ್ರಯೋಗವು; ಕೆಲವು ಮಹಾಜ್ಞಾನಿಗಳಾದ ನಾರದಾದಿಗಳಿಗೆ ಸರ್ವಜ್ಞತೆಯಿರಬಹುದು. ಇದು ಯೋಗಮಾಹಾತ್ಮ್ಯಯಿಂದ ಉಂಟಾಗಿರಬಹುದು. ಹಾಗೆಯೇ ವಸಿಷ್ಠ, ವ್ಯಾಸ, ಶುಕ, ವಿಶ್ವಾಮಿತ್ರಾದಿ ಋಷಿಗಳಿಗಿರಬಹುದು. ಆದರೆ ಪರಮಾತ್ಮನ ಸರ್ವಜ್ಞತೆಯೂ ಸರ್ವವಿತ್ತ್ವಾಗಿರುವ ಭಾವವೂ ಸಹ **ಸ್ವತಃ** ಪ್ರಾಪ್ತವಾದುದು. ಆದರೆ ನಿತ್ಯಮುಕ್ತರುಗಳಿಗೂ ಸರ್ವಜ್ಞತೆ ಇದೆಯಲ್ಲಾ ಎಂದರೆ, ಅವು ಸ್ವಾಮಿಸಂಕಲ್ಪದಿಂದುಂಟಾದವು. ಆದೂ ಅಲ್ಲದೆ ಅವುಗಳು **ಸತತಂ** ಯಾವಾಗಲೂ ಎಂದರೆ ಬದ್ಧಸ್ಥಿತಿಯಲ್ಲಿರಲಿಲ್ಲವು. ಚತುರ್ಮುಖಾದಿಗಳಿಗೆ ಯಾವಾಗಲೂ ಎಂದರೆ ತ್ರಿಕಾಲದಲ್ಲೂ ಸಾಕ್ಷಾತ್ಕಾರ ಉಂಟಿಲ್ಲವೇ ಎಂದರೆ ಅವರಿಗೂ ಕೂಡ ಪರಮಾತ್ಮನ ಹಾಗೆ **ಅಖಿಲ** ಸಾಕ್ಷಾತ್ಕಾರವಿಲ್ಲವು. ಹೀಗೆ ಪರಮಾತ್ಮ ಸಾಕ್ಷಾತ್ಕಾರವು ವಿಲಕ್ಷಣವಾದುದರಿಂದ **ಯುಗಪತ್, ಅಖಿಲಂ, ಪ್ರತ್ಯಕ್ಷೇಣ, ಸ್ವತಃ, ಸತತಂ** ಎಂಬ ಐದು ಪದಗಳೂ, ಈ ವೈಲಕ್ಷಣ್ಯವನ್ನು ತೋರಿಸಲು ಆವಶ್ಯಕವು. ಆದುದರಿಂದ ಶ್ರೀ ಯಾಮುನೇಯರೇಯಾಗಲಿ, ಶ್ರೀ ದೇಶಿಕರೇಯಾಗಲಿ, ಈ ಸರ್ವೇಶ್ವರ ಸರ್ವಜ್ಞತೆಯ ಲಕ್ಷಣವನ್ನು ಬೋಧಿಸಲು ಈ ಐದು ಪದಗಳೂ ಆವಶ್ಯಕವೆಂದು ತೋರ್ಪಡಿಸಿರುತ್ತಾರೆ. ಹೀಗೆ ಶ್ರಿಯಃಪತಿಯು ಸರ್ವಜ್ಞನಾದುದರಿಂದಲೇ ತನಗೆ ತುಂಬಾ ಬೇಕಾದ ಬದ್ಧಾತ್ಮರೆಲ್ಲಾ ದುಃಖಪೀಡಿತರಾಗಿರುವುದನ್ನೂ, ಯಾರು ಆ ದುಃಖ

ದಿಂದ ತಪ್ಪಿಸಿಕೊಳ್ಳಲು ಯತ್ನಮಾಡುತ್ತಿರುವರು, ಯಾರು ಪರಿತಾಪಪಡುತ್ತಿರುವರು, ಯಾರು ಯಾರು ಇವುಗಳಿಂದ ವಿಮುಖರಾಗಿರುವವರು, ಎಂಬುದನ್ನೆಲ್ಲಾ ಅರಿತು ಅವರವರ ಸುಕೃತ ದುಷ್ಕೃತಗಳಿಗನುಸಾರವಾಗಿ ಅನುಗ್ರಹ ನಿಗ್ರಹಗಳನ್ನು ಮಾಡುವನು.

ಪ್ರಪನ್ನನ ವಿಷಯದಲ್ಲಿ ಅನುಗ್ರಹಿಸಲು ಸರ್ವಜ್ಞತೆ ಮಾತ್ರವೇ ಆವಶ್ಯಕವಲ್ಲದೆ, ಸರ್ವಶಕ್ತತೆಯೂ ಬೇಕು. ಅವನಿಗೇನಾದರೂ ಆರ್ತಿಯುಂಟಾದರೆ ತಪ್ಪಿಸುವ ಸಾಮರ್ಥ್ಯವಿರಬೇಕು. ಪಾಂಡವರಿಗೂ, ದ್ರೌಪದಿಗೂ, ಗಜೇಂದ್ರನಿಗೂ ಇಂದ್ರನಿಗೂ, ಸುಗ್ರೀವನಿಗೂ, ವಿಭೀಷಣನಿಗೂ, ವಿಶ್ವಾಮಿತ್ರರಿಗೂ, ದಂಡಕಾರಣ್ಯ ಋಷಿಗಳಿಗೂ ಹೀಗೆಯೇ ಇತರ ಭಕ್ತರುಗಳಿಗೂ ಉಂಟಾದ ಆರ್ತಿಯನ್ನು ತಪ್ಪಿಸುವ ಸಾಮರ್ಥ್ಯವಿರಬೇಕು. ಇದೂ ಅಲ್ಲದೆ ಶರಣಾಗತನಾದವರಿಗೆ ಬೇಡಿದುದನ್ನೆಲ್ಲಾ ಕೊಡುವ ಸಾಮರ್ಥ್ಯವಿರಬೇಕು. ವಿಭೀಷಣನಿಗೆ ಲಂಕಾರಾಜ್ಯವನ್ನು ಕೊಡುತ್ತೇನೆಂದು ಪ್ರತಿಜ್ಞೆಯನ್ನು ಮಾಡಿಬಿಟ್ಟು ನಡೆಸಿಕೊಡದಿರಬಹುದೇ? ಅದನ್ನು ಹೇಗಾದರೂ ನಡೆಸಿಬಿಟ್ಟು ತಾನು ಕೃತಕೃತ್ಯನಾಗಿ ವಿಜ್ವರನಾದವನಾಗಿ ಭಾವಿಸುವನು. ಅಂತಹ ಅಘಟನಘಟನಾರೂಪ ಸರ್ವಶಕ್ತಿಯುಳ್ಳವನೆಂದು ತಿಳಿಸುವದಕ್ಕಾಗಿ **ಅಶಕ್ಯವಿವರ್ಜಿತಃ** ಎಂದು ಪ್ರಯೋಗಿಸಿರುತ್ತಾರೆ. ಪ್ರಪನ್ನನಿಗೆ ಬೇಕಾದುದು ಪರಮಪದಪ್ರಾಪ್ತಿಯು. ಸಿದ್ಧೋಪಾಯನಾಗಿ ಅದನ್ನುಂಟುಮಾಡುವ ಶಕ್ತಿಯು ಆತನಿಗಿಲ್ಲವಾದರೆ, ಆತನನ್ನು ಯಾರುತಾನೇ ಆಶ್ರಯಿಸುವರು. ದಾನಮಾಡಲು ಶಕ್ತಿ ಇಲ್ಲದ ದರಿದ್ರನನ್ನು ಯಾಚಕನು ಆಶ್ರಯಿಸುವುದಿಲ್ಲವಷ್ಟೇ.

ಆಗಲಿ, ಸಿದ್ಧೋಪಾಯನಾಗಲು ಸ್ವಾಮಿಯಲ್ಲಿ ಸರ್ವಜ್ಞತ್ವವೂ ಸರ್ವಶಕ್ತಿತ್ವವೂ ಉಂಟೆಂದೇನೋ ಒಪ್ಪತಕ್ಕದ್ದೇ. ಆದರೂ ಈ ಪ್ರಪನ್ನನಿಗೆ ಹಿತವಾದುದು ಯಾವುದು ಎಂಬುದನ್ನರಿತು ಆತನಿಗೆ ದಿವ್ಯವೈಕುಂಠ ಮಾರ್ಗದರ್ಶಿಯಾಗಿರಬೇಕೆಂಬುದೇನು ? ಒಬ್ಬನಲ್ಲಿ ತುಂಬಾ ದ್ರವ್ಯವಿದ್ದು ಮಹಾ ಧನಿಕನೆಂಬ ಪ್ರಖ್ಯಾತಿ ಇರಬಹುದು. ಅದರಿಂದ ಇತರರಿಗೆ ಬಂದ ಭಾಗ್ಯವೇನು? ಎಂದರೆ ಸರ್ವೇಶ್ವರನು ಮಹಾ ಕರುಣಾಶಾಲಿಯು. ಯಾವಾಗ ಈ ಬಂಧದಲ್ಲಿದ್ದು ಕ್ಲೇಶಪಡುತ್ತಿದ್ದವನು, ಸರ್ವೇಶ್ವರನೇ ತನಗೆ ಬಂಧವಿಮೋಚಕನೆಂದು ಆಶ್ರಯಿಸುವನೋ, ಆಗ ಆ ಮಹಾನುಭಾವನು ಕರುಣಾಮಹೋದಧಿಯಾದುದರಿಂದ, ತಾನು ತನ್ನ ಉದಾರ ಭಾವದಿಂದ ಈತನು ಯಾವಾಗ ಆಶ್ರಯಿಸುವನೋ ಎಂಬ ಅವಸರ ಪ್ರತೀಕ್ಷೆಯನ್ನು ಮಾಡುತ್ತಿರುವವನಾಗಿ ಒಡನೇ ಸಿದ್ಧೋಪಾಯನಾಗಿ ಬಂದು ಪರಮಪದವನ್ನು ಸೇರುವಹಾಗೆ ಮಾಡುವನು. ಈ ಅಭಿಪ್ರಾಯವನ್ನು ತಿಳಿಸುವದಕ್ಕಾಗಿಯೇ **ದಯಾದಿವ್ಯೋದನ್ವಾನ್** ಸರ್ವೇಶ್ವರನು ಎಂದು ಹೇಳಿರುತ್ತಾರೆ.

ಅನುಗ್ರಹಕ್ಕೆ ದಯಾಸಾಮರ್ಥ್ಯವೆರಡೂ ಅವಶ್ಯಕವು; ದಯೆಯಿಲ್ಲದ ಸಾಮರ್ಥ್ಯವೂ, ಸಾಮರ್ಥ್ಯವಿಲ್ಲದ ದಯೆಯೂ, ಔದಾರ್ಯವಿಲ್ಲದ ಸೌಭಾಗ್ಯದಂತೆಯೂ, ದ್ರವ್ಯಸಹಾಯವಿಲ್ಲದ ಕರುಣೆಯಂತೆಯೂ, ಕಾರ್ಯಕಾರಿಯಾಗುವದಿಲ್ಲವು.

ಹೀಗೆ ಸರ್ವಜ್ಞನಾಗಿಯೂ ಸರ್ವಶಕ್ತನಾಗಿಯೂ ಪರಮಕಾರುಣಿಕನಾಗಿಯೂ ಆಶ್ರಯೋಪಯುಕ್ತ ಮಹಾಕಲ್ಯಾಣಗುಣಗಳಿಂದ ಯುಕ್ತನಾಗಿಯೂ ಇರುವ ಮಹನೀಯನಿಗೆ ಈ ರೀತಿಯಲ್ಲಿ ಪ್ರಪನ್ನನಿಗೆ ಸಿದ್ಧೋಪಾಯನಾಗಿ ಅನುಗ್ರಹಿಸಬೇಕೆಂಬ ಸದುದ್ದೇಶದಲ್ಲಿ,ಸಹಧರ್ಮಚಾರಿಣಿಯಾಗಿ, ಅನುಗ್ರಹಮಯಳಾಗಿ,"**ಕಾರ್ಯಂ ಕರುಣಮಾರ್ಯೇಣ ನಕಶ್ಚಿನ್ನಾಪರಾಧ್ಯತಿ**" ಎಂದು ಸಮಾಧಾನವನ್ನು ಆಂಜನೇಯನಿಗೆ ಹೇಳಿದ. ಅಜ್ಞಾತನಿಗ್ರಹಳಾದುದರಿಂದ "**ದೇವಜುಷ್ಟಾಮುದಾರಾಂ**" ಎಂಬ ಶ್ರುತಿಯಲ್ಲಿ ಕೊಂಡಾಡಲ್ಪಟ್ಟವಳಾಗಿರುವ, ಶ್ರೀಮಹಾಲಕ್ಷ್ಮಿಯು ಸಹಾಯಕಳೆಂದು ತಿಳಿಸುವದಕ್ಕಾಗಿ **ಜಲಧಿಸುತಯಾಸಾರ್ಧಂ** ಎಂದು ಪ್ರಯೋಗಿಸಿರುತ್ತಾರೆ. ಶ್ರೀಮಹಾಲಕ್ಷ್ಮಿಯು ಯಾವಾಗಲೂ ನಿತ್ಯಾನಪಾಯನಿಯಾಗಿ ಸರ್ವೇಶ್ವರನ ಸರ್ವವಿಧ ದಿವ್ಯವ್ಯಾಪಾರಗಳಲ್ಲೆಲ್ಲಾ ಸಹಾಯಮಾಡುವಂಥಾವಳು. ಅವತಾರ ಕಾಲಗಳಲ್ಲೂ "**ರಾಘವತ್ವೇ ಭವೇತ್ಸೀತಾ**" ಎಂದು ಹೇಳಿರುವ ಹಾಗೆ ಸ್ವಾಮಿಯೊಂದಿಗೇ ಇದ್ದುಕೊಂಡು ಆತನಿಗೆ ಸಹಾಯಕಳು. ಆಶ್ರಿತ ರಕ್ಷಣೋಪಾಯದಲ್ಲಿ ತನ್ನ ವಾತ್ಸಲ್ಯಾತಿಶಯದಿಂದುಂಟಾದ ಪುರುಷಕಾರತ್ವಮಾತ್ರವೇ ಅಲ್ಲದೆ ಸರ್ವೇಶ್ವರನ ಹಾಗೆಯೇ ಉಪಾಯ ಭೂತಳು. ಜಲಧಿಯು ರತ್ನಾಕರವು. ಅದರಲ್ಲಿ ಐಶ್ವರ್ಯಕ್ಕನುಗುಣವಾದ ಕಲ್ಪವೃಕ್ಷ ಕಾಮಧೇನುಗಳೂ ಉಂಟು. ಇವುಗಳಿಗೂ ಉತ್ಕೃಷ್ಟವಾದ ಅಮೃತವೂ ಉಂಟು. ಹಾಗೆಯೇ ಶ್ರೀಮಹಾಲಕ್ಷ್ಮಿಯು ಐಹಿಕೋಪಭೋಗಗಳನ್ನೂ ಪಾರಲೌಕಿಕಗಳನ್ನೂ ಕಲ್ಪಿಸುವಂಥಾವಳು. ಆದುದರಿಂದ ಲಕ್ಷ್ಮೀವಿಶಿಷ್ಟನಾಗಿಯೇ ಪ್ರಪನ್ನರಿಗೆ ಉಪಾಯಭೂತನೆಂಬುದು ಏರ್ಪಟ್ಟಿತು. "**ಲಕ್ಷ್ಮ್ಯಾಶ್ರೀಸಪ ಹೃಷೀಕೇಶೋ ದೇವ್ಯಾಕಾರುಣ್ಯರೂಪಯಾ । ರಕ್ಷಕಸ್ಸರ್ವಸಿದ್ಧಾನ್ತೇ ವೇದಾನ್ತೇಷುಚ ಗೀಯತೇ ॥**" ಎಂಬ ಲಕ್ಷ್ಮೀತಂತ್ರ ಪ್ರಮಾಣವು ಈ ಅಭಿಪ್ರಾಯವನ್ನೇ ಉದ್ಘೋಷಿಸುತ್ತದೆ. ಶ್ರೀಮನ್ನಾರಾಯಣನು **ದೇವಃ** ಲೀಲಾಸಕ್ತನು, ಲಕ್ಷ್ಮಿಯು **ದೇವಿಯು**, **ಪತಿಯ** ಹಾಗೆಯೇ ಲೀಲಾಸಕ್ತಳು. ಹೃಷೀಕೇಶನು ರಕ್ಷಕನಾಗಬೇಕಾದರೆ, ಇಂತಹ ಲೀಲಾಪರಳಾಗಿ ಕರುಣಾಮಯಳಾದ ಲಕ್ಷ್ಮಿಯೊಂದಿಗಿದ್ದುಕೊಂಡೇ ಉಪಾಯಭೂತನಾಗಿ ಈ ಚೇತನನಿಗೆ ರಕ್ಷಕನೆಂದು ಎಲ್ಲಾ ಶಾಸ್ತ್ರಗಳಲ್ಲೂ ಹೇಳಲ್ಪಟ್ಟಿರುತ್ತದೆ "**ಸ ಏಕಾಕೀ ನರಮೇತ**" ಎಂದು ಹೇಳಿರುವ ಹಾಗೆ ನಾರಾಯಣನೊಬ್ಬನೇ ಲಕ್ಷ್ಮಿಯೊಂದಿಗಿಲ್ಲದೆ ಜಗದ್ವ್ಯಾಪಾರಗಳನ್ನೆಸಗುವದು ಲೀಲಾರಸವೆಂದಿಗೂ ಆಗಲಾರದು. "**ಲೋಕವತ್ತು**

ಲೀಲಾಕೈವಲ್ಯಂ" ಎಂಬ ಸೂತ್ರದಲ್ಲಿ ಉಪಪಾದಿಸಿರುವ ಹಾಗೆ ತನ್ನ ಪತ್ನಿಯಾದ ಲಕ್ಷ್ಮಿಯ ಸಹ ಇದ್ದು ಜಗದ್ವ್ಯಾಪಾರಗಳನ್ನು ನಡೆಸಿದರೇನೇ ಲೀಲಾರಸವು ಉಪಪನ್ನತರವು. ಇದನ್ನು ಶ್ರೀ ದೇಶಿಕರವರು ಶ್ರೀ ಸ್ತುತಿಯ "ಪಶ್ಯಂತೀಷು" ಎಂಬ ಶ್ಲೋಕದಲ್ಲಿ ನಿಪುಣತರವಾಗಿ ಉಪಪಾದನೆ ಮಾಡಿರುತ್ತಾರೆ. ಇದರಭಿಪ್ರಾಯಕ್ಕೆ ದಾಸನು ಬರೆದ ಅರ್ಥ ತಾತ್ಪರ್ಯದ ೫೪—೬೦ ಪುಟಗಳನ್ನು ಪರಾಂಬರಿಸಿ. ಈ ಜಗದ್ವ್ಯಾಪಾರಗಳಿಂದ ಸೃಷ್ಟಿಸ್ಥಿತಿ ಪಾಲನ ನಿಯಮನ ಸಂಹಾರಾದಿ ಕಾರ್ಯಗಳಲ್ಲೆಲ್ಲಾ ನಾರಾಯಣನೊಂದಿಗೆ ಲಕ್ಷ್ಮಿಗೂ ಅನ್ವಯವಿರುವದರಿಂದ (ಶ್ರೀಗುಣ. ೨—೪ ಶ್ಲೋಕಗಳನ್ನು ನೋಡಿ) ಸಿದ್ಧೋಪಾಯನಾಗಿ ಈ ಲೋಕದಂಪತಿಗಳಿರುವದು ಪ್ರಕೃತವಾದುದರಿಂದ, "ಜಲಧಿಸುತಯಾ ಸಾರ್ಧಂ ಜಗತ್ಪರಿಪಾಲಯೇ" ಎಂದು ಪ್ರಯೋಗಿಸಿರುತ್ತಾರೆ.

ಹೀಗೆ ಶ್ರೀಮನ್ನಾರಾಯಣನೇ ಸಿದ್ಧೋಪಾಯನೆಂಬುದು ಶ್ರುತಿಯಲ್ಲಿ ಅನೇಕ ಕಡೆ ಹೇಳಿರುತ್ತದೆ. ಶ್ರುತಿಯಲ್ಲಿ ಅಲ್ಲೆಲ್ಲಾ ಲಕ್ಷ್ಮೀವಿಶಿಷ್ಟತೆಯು ಕಂಠೋಕ್ತವಾಗಿ ಹೇಳದಿದ್ದರೂ ಯಾವಾಗಲೂ ನಿತ್ಯಾನಪಾಯಿನಿಯಾದ ಸಹಧರ್ಮಚಾರಿಣಿಯಾದ ಪತ್ನಿಯೊಂದಿಗೆ ತನ್ನ ದಿವ್ಯ ಚೇಷ್ಟಿತಗಳನ್ನು ನಡೆಸುವದರಿಂದ "ನ ಪೃಥಗಭಿಧತ್ತೇಶ್ರುತಿ ರಪಿ" ಶ್ರುತಿಯು ಅವಳನ್ನೂ ಕೂಡ ಬೇರೆಯಾಗಿ ಹೇಳಲಿಲ್ಲವು. ಶ್ರುತಿಯು ವಶೀಕರಣೋಪಾಯಗಳನ್ನುಚ್ಚರಿಸುವಾಗ ಎಲ್ಲಾದಕ್ಕಿಂತಲೂ ಪರಮಪುರುಷನನ್ನು ವಶೀಕರಿಸುವದೇ ಸರ್ವೋತ್ಕೃಷ್ಟವಾದ ಉಪಾಯವೆಂದು ತಿಳಿಸುವ ಸಂದರ್ಭದಲ್ಲಿ (೧) "ಮಹತಃಪರಮವ್ಯಕ್ತಮವ್ಯಕ್ತಾತ್ಪುರುಷಃಪರಃ । ಪುರುಷಾನ್ನಪರಕಿಂಚಿತ್ಸಾಕಾಷ್ಠಾ ಸಾಪರಾಗತಿಃ ॥" ಎಂದು ಹೇಳಿರುತ್ತದೆ. ಹೀಗೆ ಉಪಾಯಭೂತನಾದ ಸರ್ವೇಶ್ವರನು ನಮ್ಮ ಹೃದಯದಲ್ಲೇ ಇರುತ್ತಾನೆಂದು ಗೀತೆಯಲ್ಲಿ (೨) "ಈಶ್ವರಸ್ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ । ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ॥" ಎಂದು ಹೇಳಿರುವುದರಿಂದ ಪರಮಾತ್ಮನೇ ಸಿದ್ಧೋಪಾಯನೆಂಬುದು ಸ್ಥಾಪಿತವಾಯಿತು. ಇದನ್ನು ತಿಳಿಸುವದಕ್ಕಾಗಿಯೇ ಈ ಮೇಲಿನ ಶ್ರುತಿಯ ಪದಗಳಾದ ಪುರುಷಃಪರಃ ಎಂಬುವುಗಳನ್ನನುಸರಿಸಿ ಪರಮಪುರುಷಸ್ಸಿದ್ಧೋಪಾಯಃ ಎಂದು ಹೇಳಿರುತ್ತಾರೆ. ಆ ಸಿದ್ಧೋಪಾಯನಾದ ಪರಮಪುರುಷನನ್ನು ನಾವು ಕೋರಿದ ಫಲವನ್ನು ಕೊಡುವಹಾಗೆ ವಶೀಕರಿಸಿಕೊಳ್ಳಬೇಕಾದರೆ ಒಂದು ವ್ಯಾಜವು ಬೇಕು. ಅದನ್ನೇ ಗೀತೆಯಲ್ಲಿ ಮುಂದಿನ

(೧) ಕಠ. ೧. ೩. ೧೧. (೨) ಗೀ. ೧೮. ೬೧. ೬೨.

ಅರ್ಥಾನುಶಾಸನಭಾಗಸ್ಯಾನುಸಂಧಾನಂ

ಅನಾದಿಕಾಲಮ್ ಸಂಸರಿತ್ತುಪ್ಪೋನ್ದ ಕ್ಷೇತ್ರಜ್ಞರ್ಗ ಅವಸರ ಪ್ರತೀಕ್ಷೈಯಾನ ಭಗವತ್ಕೃಪೈಯಾಲೇ ಪಿರಿನ್ದು ಸಮೀಚೀನ ಶಾಸ್ತ್ರಮುಖ

ಶ್ಲೋಕವಾದ "ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ" ಎಂಬದಾಗಿ ಆತನನ್ನೇ ಶರಣವನ್ನು ಹೊಂದು ಎಂದು ಹೇಳಿರುವದರಿಂದಲೂ, ಅದನ್ನೇ ಶ್ರೀ ಭಾಷ್ಯಕಾರರೂ "ತಸ್ಯಚ ವಶೀಕರಣಂ ತಚ್ಛರಣಾಗತಿರೇವ" ಎಂದು (ಬ್ರ. ಸೂ. ೧. ೪. ೧.) ಉಪಪಾದಿಸಿರುವದರಿಂದ ಶರಣಾಗತಿರೂಪ ಒಂದು ವ್ಯಾಜಮಾತ್ರ ಬೇಕೆಂಬುವದು ತೋರಿಬರುತ್ತದೆ. ಈ ಅಭಿಪ್ರಾಯವನ್ನೇ "ಪ್ರತೀಷ್ಟ ಭರಸ್ಸತಾಂ" ಎಂಬುವದರ ಮೂಲಕ ವ್ಯಕ್ತಪಡಿಸಿರುತ್ತಾರೆ. ಪ್ರಪನ್ನರಿಗೆ ಸತಾಂ ಎಂಬ ಪ್ರಯೋಗವು ಏಕೆಂದರೆ ಅಸ್ತಿಬ್ರಹ್ಮೇತಿಚೇದ್ವೇದ ಸಂತಮೇನಂತತೋ ವಿದುಃ ಎಂಬ ಶ್ರುತ್ಯನುಸಾರವಾಗಿ ಬ್ರಹ್ಮವಿತ್ತುಗಳಾದುದರಿಂದ ಹಾಗೆ ಪ್ರಯೋಗವು. ಅಂಥಾವರ ಭರವನ್ನು ಅಙ್ಗೀಕರಿಸುತ್ತಾನೆಂಬ ಭರವಸೆ ಹೇಗೆ ಎಂದರೆ ಹಾಗೆ ಅಂಗೀಕರಿಸುವದಾಗಿ ಬಹಳ ಸಲ ಪ್ರತಿಜ್ಞೆಮಾಡಿರುತ್ತಾನೆ. "ಸರ್ವಧರ್ಮಾನ್ ಪರಿತ್ಯಜ್ಯಮಾಮೇಕಂಶರಣಂವ್ರಜ" "ಅಪ್ಯಹಂ ಜೀವಿತಂಜಹ್ಯಾಂತ್ವಾಂ ವಾಸೀತೇಸಲಕ್ಷ್ಮಣಾಂ । ನಹಿಪ್ರತಿಜ್ಞಾಂ ಸಂಶ್ರುತ್ಯಬ್ರಾಹ್ಮಣೇಭ್ಯೋವಿಶೇಷತಃ" "ಅಭಯಂಸರ್ವಭೂತೇಭ್ಯೋದದಾಮ್ಯೇತದ್ವ್ರತಂಮಮ" ಇತ್ಯಾದಿ ಪ್ರಮಾಣಗಳು ಆತನ ಸುಸಙ್ಕಲ್ಪವನ್ನು ಸ್ಥಾಪಿಸುತ್ತವೆ.

ಆದುದರಿಂದ ಸರ್ವೇಶ್ವರನು ಸರ್ವಜ್ಞನಾಗಿ ಸರ್ವಶಕ್ತನಾಗಿ ಕಾರುಣ್ಯ ಮಹೋದಧಿಯಾಗಿ ಶ್ರಿಯಃಪತಿಯಾಗಿರುವದರಿಂದಲೇ ಪ್ರಪನ್ನರಿಗೆಲ್ಲಾ ಆತನು ಸಿದ್ಧೋಪಾಯನಾಗಿರಲು ಸಮರ್ಥನು. ಇಂತಹ ಸರ್ವೇಶ್ವರನ ವಿಶೇಷಣಗಳನ್ನುದ್ದಿಶ್ಯಮಾಡಿಕೊಂಡು ಅನೇಕ ಪೂರ್ವಪಕ್ಷಗಳು ಉಂಟಾಗುವದರಿಂದ ಅವುಗಳನ್ನೆಲ್ಲಾ ಈ ಅಧಿಕಾರದಲ್ಲಿ ನಿರಾಕರಿಸಿ ಸಮಾಧಾನಗಳನ್ನು ಹೇಳುತ್ತಾರೆ.

ಮೇಲಿನ ಸಂಗ್ರಹ ಶ್ಲೋಕದಲ್ಲಿ, "ಇಷ್ಟಂ ಹಿ ವಿದುಷಾಂ ಲೋಕೇ ಸಮಾಸವ್ಯಾಸಧಾರಣಮ್" ಎಂಬುವ ನ್ಯಾಯ ಪ್ರಕಾರ ಸಙ್ಕ್ಷೇಪಿಸಿದುದನ್ನು ಈ ಅಧಿಕಾರದಲ್ಲಿ ವಿಸ್ತರಿಸುವವರಾಗಿ ಹಿಂದೆ ಹೇಳಿದ ಇಪ್ಪತ್ತೆರಡು ಅಧಿಕಾರಾರ್ಥಗಳನ್ನು "ಸಂಪೃಷ್ಟಸ್ಸಾರನಾಗ್ನಿತ್" ಎಂಬ ಶ್ಲೋಕದಲ್ಲಿ ಹೇಳಿದಹಾಗೆ ಒಂದು ವಾಕ್ಯದ ಮೂಲಕ ಸಂಗ್ರಹವಾಗಿ ಅನುವಾದ ಮಾಡುತ್ತಾರೆ:—

ತ್ತಾಲೆ ತತ್ವಹಿತ ಪುರುಷಾರ್ಥ (ಙ್ಗಳಿಲ್) ವಿಶೇಷಙ್ಗಳೈತ್ತೆಳಿನ್ದು, ಮುಮುಕ್ಷುವಾಯ್, ಸ್ವಾಧಿಕಾರಾನುರೂಪಮಾ, ಯಿರುಪ್ಪದೊರು ಉಪಾಯ ವಿಶೇಷತ್ತೈ ಪರಿಗ್ರಹಿತ್ತು, ಕೃತಕೃತ್ಯನಾಯ್, ತನ್ನಿಷ್ಠೈಯೈತ್ತೆಳಿನ್ದು, ಅದಕ್ಕ

ಅರ್ಥಾನುಶಾಸನ ಭಾಗದ ಅನುಸಂಧಾನವು.

ಅನಾದಿಕಾಲಮ್ – ಯಾವಾಗಲಿಂದ ಎಂದು ಹೇಳಲಸಾಧ್ಯವಾದುದರಿಂದ ಅನಾದಿಕಾಲ ಎಂದು ಹೇಳಿಸಿಕೊಳ್ಳುವ ಕಾಲದಿಂದ, **ಸಂಸರಿತ್ತುಪೋನ್ದ** – ಸಂಸಾರಬಂಧಕ್ಕೆ ಸಿಕ್ಕಿದ, **ಕ್ಷೇತ್ರಜ್ಞನ್**-ದೇಹಯುಕ್ತನಾದ ಆತ್ಮನು, **ಅವಸರ ಪ್ರತೀಕ್ಷೈಯಾನ ಭಗವತ್ಕೃಪೈಯಾಲೆ** - ಜೀವಾತ್ಮನು ತನ್ನನ್ನು ಯಾವಾಗ ಆಶ್ರಯಿಸುವನೋ ಎಂದು, ಅಂತಹ ಸಮಯವನ್ನು ನಿರೀಕ್ಷಿಸುವ, ಸ್ವಾಮಿ ಕೃಪಾ ಮೂಲಕವಾಗಿ, **ಪಿರಿನ್ದು** – ತನಗೆ ಬಂಧಕವಾಗಿದ್ದ ಈ ಸಂಸಾರದಿಂದ ಬಿಡುಗಡೆಯನ್ನು ಹೊಂದಿದವನಾಗಿ, ಇದರಿಂದ ಉಪೋದ್ಘಾತಾಧಿಕಾರಾರ್ಥವು ತಿಳಿಸಲ್ಪಟ್ಟಿತು, **ಸಮೀಚೀನ ಶಾಸ್ತ್ರಮುಖತ್ತಾಲೆ** - ಸರ್ವೋತ್ಕೃಷ್ಟ ಶಾಸ್ತ್ರದ ಮೂಲಕವಾಗಿ. ಇದರಿಂದ ಸಮೀಚೀನವಾದುದು ಸಾರತಮವಾದ ಶ್ರೀಮದ್ರಹಸ್ಯತ್ರಯವಾಗಿ ಆ ಮಂತ್ರಗಳ ಜ್ಞಾನವು ಅತ್ಯಾವಶ್ಯಕವೆಂಬ ಸಾರನಿಷ್ಕರ್ಷಾಭಿಪ್ರಾಯವು ಬೋಧಿಸಲ್ಪಟ್ಟಿತು, **ತತ್ವಹಿತ ಪುರುಷಾರ್ಥ ವಿಶೇಷಙ್ಗಳೈತ್ತೆಳಿನ್ದು** - ಈ ಮೂರು ರಹಸ್ಯಗಳಲ್ಲೂ ಮುಖ್ಯವಾಗಿ ತಿಳಿಯತಕ್ಕದ್ದು, ತತ್ವವ್ಯಾವುದು, ಹಿತವಾದ ಉಪಾಯಾನುಷ್ಠಾನವು ಯಾವುದು, ಅದರಿಂದುಂಟಾಗುವ ಪುರುಷಾರ್ಥಸ್ವರೂಪವೆಂಥಾದ್ದು, ಈ ಮೂರನ್ನೂ ಮುಖ್ಯವಾಗಿ ತಿಳಿದು; ಪ್ರಧಾನವಾಗಿ ತಿಳಿಯತಕ್ಕದ್ದಾದುದರಿಂದ ವಿಶೇಷಗಳೆಂದು ಇಲ್ಲಿ ಹೇಳಲ್ಪಟ್ಟಿರುತ್ತದೆ, ಈ ಮೂರೂ ಅರ್ಥಪಂಚಕಾಧಿಕಾರದಲ್ಲಿ ಉಪಪಾದಿತವು; ತತ್ವಸ್ವರೂಪವು ತತ್ವತ್ರಯಾಧಿಕಾರದಲ್ಲೂ ಪರದೇವತಾಪಾರಮಾರ್ಥ್ಯಾಧಿಕಾರದಲ್ಲೂ ಸಂಗ್ರಹೀತವು. ಹಿತವು ಉಪಾಯವಿಭಾಗಾಧಿಕಾರದಲ್ಲಿ ಉಪಪಾದಿತವು. **ಪುರುಷಾರ್ಥವು** ಪರಿಪೂರ್ಣಬ್ರಹ್ಮಾನುಭವಾಧಿಕಾರದಲ್ಲಿ ಸುವ್ಯಕ್ತವು; **ಮುಮುಕ್ಷುವಾಯ್**-ಮೋಕ್ಷಾರ್ಥಿಯಾಗಿ, ಮುಮುಕ್ಷುತ್ವಾಧಿಕಾರಾಭಿಪ್ರಾಯವು ಜ್ಞಾಪಿಸಲ್ಪಟ್ಟಿತು ; **ಸ್ವಾಧಿಕಾರಾನುರೂಪಮಾಯ್**-ತನ್ನ ಅಧಿಕಾರಕ್ಕೆ ಅನುಗುಣವಾದ, ಅಧಿಕಾರಿವಿಭಾಗಾಧಿಕಾರಾರ್ಥವೂ ಪ್ರಪತ್ತಿಯೋಗ್ಯಾಧಿಕಾರವೂ ಸಹ ದ್ಯೋತಿತವು, **ಇರುಪ್ಪದು** - ಇರುವಂಥಾ, **ಒರು ಉಪಾಯ ವಿಶೇಷತ್ತೈ ಪರಿಗ್ರಹಿತ್ತು**-ಒಂದು ಉಪಾಯ

ನುರೂಪಮಾಗವಿರುಙ್ಗನ್ದನಾಳ್ ಯಥಾಶಾಸ್ತ್ರಮ್, ನಿರ (ಪಾಯಮಾಗ) ಪರಾಧಮಾಗಪ್ಪಣ್ಣುಮ್ ಕೈಙ್ಕರ್ಯರೂಪ ಪುರುಷಾರ್ಥ ಮಿರುಕ್ಕುಮ್ ಪಡಿಯುಮ್, ಶರೀರಪಾತಾನಂತರಮ್ ಅರ್ಚಿರಾದಿಗತಿಯಾಲೇ ಅಪ್ರಾಕೃತ ದೇಶವಿಶೇಷತ್ತಿಲೇ ಶೆನ್ರಾಲ್ ಇವನುಕ್ಕು ಅನವಚ್ಛಿನ್ನ ಭಗವದನು

ವಿಶೇಷವನ್ನು ಅಙ್ಗೀಕರಿಸಿ, ಪರಿಕರವಿಭಾಗಾಧಿಕಾರ ಮತ್ತು ಸಾಙ್ಗ ಪ್ರಪದನಾಧಿಕಾರಗಳ ಅರ್ಥವುಉಪದೇಶಿಸಲ್ಪಟ್ಟವು, **ಕೃತಕೃತ್ಯನಾಗಿ** - ಯಾವುದನ್ನು ಮಾಡಬೇಕೋ ಅದನ್ನನುಷ್ಠಿಸಿದವನಾಗಿ, ಇದು ಕೃತಕೃತ್ಯಾಧಿಕಾರಾರ್ಥವು, **ತನ್ನಿಷ್ಠೈಯ್ಯೈತೆಳಿನ್ದು** - ಸ್ವನಿಷ್ಠಾಭಿಜ್ಞಾನವನ್ನು ಹೊಂದಿದವನಾಗಿ, ಇದು ಸ್ವನಿಷ್ಠಾಭಿಜ್ಞಾನಾಧಿಕಾರಾರ್ಥವು, **ಅದಕ್ಕನುರೂಪಮಾಕವಿರುಙ್ಗನ್ದನಾಳ್**- ಆ ನಿಷ್ಠೆಗೆ ಯೋಗ್ಯವಾಗಿ ಇಲ್ಲಿರುವಕಾಲದಲ್ಲೂ, ಉತ್ತರಕೃತ್ಯಾಧಿಕಾರ ಪುರುಷಾರ್ಥಕಾಷ್ಠಾಧಿಕಾರಗಳ ಭಾವವು ಸೂಚಿಸಲ್ಪಟ್ಟವು, **ಇರುನ್ದನಾಳ್** ಎಂಬುವದರಿಂದ ಸ್ಥಾನವಿಶೇಷಾಧಿಕಾರದಭಿಪ್ರಾಯವನ್ನೂ ಗ್ರಹಿಸಬಹುದು, **ಯಥಾಶಾಸ್ತ್ರಮ್** - ಶಾಸ್ತ್ರಾನುಗುಣವಾಗಿ, ಶಾಸ್ತ್ರೀಯನಿಯಮನಾಧಿಕಾರಾಭಿಪ್ರಾಯವು ಹೇಳಲ್ಪಟ್ಟಿತು, **ನಿರಪರಾಧನಾಗಪಣ್ಣುಮ್** – ಬುದ್ಧಿಪೂರ್ವಕವಾದ ಅಪರಾಧಗಳ ಸಂಬಂಧವೇನೂ ಇಲ್ಲದಹಾಗೆ ಮಾಡುವ ಇದು ಅಪರಾಧಪರಿಹಾರಾಧಿಕಾರಾರ್ಥವು; **ಕೈಙ್ಕರ್ಯರೂಪ ಪುರುಷಾರ್ಥಂ** ಭಗವತ್ಕೈಙ್ಕರ್ಯರೂಪವಾದ ಪುರುಷಾರ್ಥವು, **ಇರುಕ್ಕುಮ್ಪಡಿಯುಮ್** - ಇರುವ ಸ್ಥಿತಿಯನ್ನೂ, ಎಂದರೆ ಅದು ಭಾಗವತಕೈಙ್ಕರ್ಯಪರ್ಯಂತವಾಗಿದ್ದುಕೊಂಡು, ಅದೇ ಪುರುಷಾರ್ಥಕಾಷ್ಠೆ ಎಂದು ಹೇಳಿಸಿಕೊಳ್ಳುವ ಪ್ರಕಾರವನ್ನೂ, ಇದರಿಂದ ಪುರುಷಾರ್ಥಕಾಷ್ಠಾಧಿಕಾರಾರ್ಥವೂ ಬೋಧಿತವಾಯಿತು, ಅಂತಹ ಪುರುಷಾರ್ಥಕಾಷ್ಠೆಯು ದಿವ್ಯ ದೇಶಗಳಲ್ಲಿ ಭಗವದ್ಭಾಗವತ ಸಾನ್ನಿಧ್ಯವೂ ಕೈಙ್ಕರ್ಯವೂ ದೊರೆಯುವದರಿಂದ, ಸ್ಥಾನವಿಶೇಷಾಧಿಕಾರಾಭಿಪ್ರಾಯವೂ ಇದರಲ್ಲೂ ದ್ಯೋತಿತವು. ಈಗ ಇಷ್ಟು ದೂರ ಹೇಳಿದುದೆಲ್ಲಾ ಶರೀರಪಾತಕ್ಕೆ ಪೂರ್ವಭಾವಿಯಾಗಿ ಮುಮುಕ್ಷುವು ಪ್ರಪನ್ನನೆನಿಸಿ ಮಾಡತಕ್ಕವುಗಳಾಗಿವೆ. ಮುಂದೆ, ಶರೀರಾವಸಾನಾನಂತರ ನಡೆಯತಕ್ಕದ್ದೆಲ್ಲಾ ಹೇಳಲ್ಪಡುತ್ತದೆ. **ಶರೀರಪಾತಾನಂತರಂ** - ಸ್ಥೂಲ ಶರೀರವು ಬಿದ್ದುಹೋದ ನಂತರ ಎಂದರೆ ದೇಹಾವಸಾನಾನಂತರ, **ಅರ್ಚಿರಾದಿಗತಿಯಾಲೇ**-ಅರ್ಚಿರಾದಿಮಾರ್ಗಮೂಲಕವಾಗಿ, ನಿರ್ಯಾಣಗತಿಚಿಂತನಾಧಿಕಾರಾಭಿಪ್ರಾಯವು ಜ್ಞಾಪಿಸಲ್ಪಟ್ಟಿತು, **ಅಪ್ರಾಕೃತದೇಶ ವಿಶೇಷತ್ತಿಲೆ ಶೆನ್ರಾಲ್** – ಶುದ್ಧ ಸತ್ವಮಯವಾದ ಪ್ರದೇ

ಭವ ಪರೀವಾಹವಾಕೆ ವರುಮ್ ಪರಿಪೂರ್ಣ ಕೈಙ್ಕರ್ಯರೂಪ ಪರಮ ಪುರುಷಾರ್ಥ ಸಿದ್ಧಿ ಇರುಕ್ಕುಮ್ ಪಡಿಯುಮ್ ಶೊನ್ನೋಮ್,

---

ಶವು, ದಿವ್ಯ ವೈಕುಂಠ ಲೋಕವು, ಅದನ್ನು ಹೋಗಿ ಸೇರುವದರಿಂದ, **ಇವನುಕ್ಕು** - ಈ ಪ್ರಪನ್ನನಾದ ಅಧಿಕಾರಿಗೆ, **ಅನವಚ್ಛಿನ್ನ** - ಅಪರಿಮಿತವಾದ, **ಭಗವದನುಭವ** - ಪ್ರಾಪ್ಯನಾದ ಶ್ರಿಯಃಪತಿಯನ್ನನುಭವಿಸುವದರ, **ಪರೀವಾಹವಾಕೆವರುಮ್** - ಪ್ರವಾಹರೂಪದಲ್ಲಿ ಬರುವ **ಪರಿಪೂರ್ಣ ಕೈಙ್ಕರ್ಯರೂಪ** ಸರ್ವದೇಶ ಸರ್ವಕಾಲ ಸರ್ವಾವಸ್ಥೋಚಿತಗಳಾಗಿ ಹೀಗೆ ಸರ್ವವಿಧಗಳಾಗಿ ಪರಿಪೂರ್ಣವೆಂದೆನಿಸಿದ ಕೈಙ್ಕರ್ಯರೂಪವಾದ, **ಪರಮಪುರುಷಾರ್ಥ ಸಿದ್ಧಿ** - ಸರ್ವೋತ್ಕೃಷ್ಟವಾದ ಪುರುಷಾರ್ಥದ ಸಿದ್ಧಿಯು, **ಇರುಕ್ಕುಮ್ ಪಡಿಯುಮ್** - ಇರುವ ರೀತಿಯನ್ನೂ, **ಶೊನ್ನೋಮ್** - ಹಿಂದಿನ ಅರ್ಥಾನುಶಾಸನದ ಇಪ್ಪತ್ತೆರಡು ಅಧಿಕಾರಗಳ ಮೂಲಕ ಹೇಳಿದೆವು. ಇದು ಬರೀ ಹೇಳಿಕೆಯಲ್ಲವು, ಪರಮಹಿತೋಪದೇಶವಾದುದರಿಂದ ಸ್ವಾಮಿ ಸುಸಙ್ಕಲ್ಪದಿಂದ ದೊರೆತ ಮಹಾಭಾಗ್ಯೋದಯವೆಂದು ಪ್ರತಿಯೊಬ್ಬ ಮೋಕ್ಷಾರ್ಥಿಯಾದ ಜ್ಞಾನಿಯು ಭಾವಿಸತಕ್ಕದ್ದು.

ತಾತ್ಪರ್ಯ—ಮಹಾಪಂಡಿತರ ಉಪದೇಶ ಲಕ್ಷಣವೆಂಥಾದ್ದೆಂದರೆ :— ತಾವು ವಿಶದವಾಗಿಯೂ, ವಿಸ್ತರವಾಗಿಯೂ ಉಪದೇಶಿಸುವ ಭಾಗವನ್ನು ಪ್ರಥಮತಃ ಸಂಕ್ಷೇಪವಾಗಿ ಹೇಳಿಬಿಟ್ಟು, ಅದನ್ನೇ ಚೆನ್ನಾಗಿ ವಿಸ್ತರಿಸಿ, ಉಪಪಾದಿಸಿ ಪ್ರಮಾಣಗಳೊಂದಿಗೆ ಬಲಪಡಿಸಿ ಹೇಳಿ, ನಿಗಮನದಲ್ಲಿ ಪುನಃ ಅದನ್ನೇ ಇನ್ನೊಂದುವಿಧವಾಗಿ ಸಂಗ್ರಹಿಸಿ ಹೇಳಿ ವಿಷಯವು ಶಿಷ್ಯನ ಮನಸ್ಸಿನಲ್ಲಿ ದೃಢವಾಗಿ ನಿಲ್ಲುವಹಾಗೆ ಮಾಡತಕ್ಕದ್ದು ಕ್ರಮವು. ಇದನ್ನನುಸರಿಸಿಯೇ ಅಧಿಕಾರಾದಿಯಲ್ಲಿ ಸಂಗ್ರಹ ಶ್ಲೋಕವೂ, ಅಧಿಕಾರದಲ್ಲಿ ಉಪಪಾದನೆಯೂ ಅಂತ್ಯದಲ್ಲಿ ನಿಗಮನ ರೂಪದಲ್ಲಿ ಪುನಸ್ಸಙ್ಗ್ರಹವೂ ಸ್ವೀಕರಿಸಲ್ಪಟ್ಟಿವೆ. ಹಾಗೆಯೇ ಇಪ್ಪತ್ತೆರಡು ಅಧಿಕಾರದಲ್ಲಿನ ಉಪಪಾದನವೂ ಈ ವಾಕ್ಯಮೂಲಕ ಸಙ್ಗ್ರಹಿಸಲ್ಪಟ್ಟಿರುತ್ತದೆ. ಈ ಕ್ಷೇತ್ರಜ್ಞನು, ಅನಾದಿಕಾಲದಿಂದ ಈ ಸಂಸಾರ ಬಂಧಕ್ಕೆ ಸಿಕ್ಕಿದವನೆಂದು ಹೇಳಲ್ಪಟ್ಟಿರುತ್ತದೆ. ಯಾವಾಗ ಇನ್ನೂ ಮುಕ್ತಿಯಿಲ್ಲವೋ, ಅನೇಕ ಸೃಷ್ಟಿಗಳಿಗೆ ಕಲ್ಪಕಲ್ಪದಲ್ಲೂ ಸಿಕ್ಕಿ ತೊಳಲುತ್ತಾ ಇದ್ದಾನೆಂಬುದು ವ್ಯಕ್ತವು. ಆದುದರಿಂದ ಯಾವ ಕಾಲದಿಂದ ಈ ಅವಸ್ಥೆಯೆಂಬುವದನ್ನು ಹೇಳಲು ಸಾಧ್ಯವಿಲ್ಲದೆ ಅನಾದಿ ಎಂದು ಹೇಳಲ್ಪಟ್ಟಿರುತ್ತದೆ. ಈ ವಿಷಯವು ಹಿಂದೆ **ಕರ್ಮಾವಿದ್ಯಾದಿ ಚಕ್ರೇ** ಎಂಬ ಶ್ಲೋಕಾಭಿಪ್ರಾಯ ವಿಚಾರದಲ್ಲಿ ಚರ್ಚಿಸಲ್ಪಟ್ಟಿರುತ್ತದೆ. ಈತನಿಗೆ ಸಂಸಾರ

ಬಂಧವು ದೇಹಮೂಲಕವಾಗಿ; ದೇಹವಿಲ್ಲದೆ ಈತನು ಕರ್ಮಗಳನ್ನು ಮಾಡಲು ಸಾಧ್ಯವಿಲ್ಲವು. ಆದುದರಿಂದಲೇ ಈತನು ಕ್ಷೇತ್ರಜ್ಞನೆಂದು ಹೇಳಲ್ಪಟ್ಟನು. ಗೀತಾ ೧೩ನೆಯ ಅಧ್ಯಾಯದ ಪ್ರಥಮ ಶ್ಲೋಕವು,

"ಇದಂ ಶರೀರಂ ಕೌನ್ತೇಯ ಕ್ಷೇತ್ರಮಿತ್ಯಭಿಧೀಯತೇ ।
ಏತದ್ಯೋವೇತ್ತಿ ತಂಪ್ರಾಹುಃ ಕ್ಷೇತ್ರಜ್ಞ ಇತಿ ತದ್ವಿದಃ ॥"

ಶ್ರೀ ಕೃಷ್ಣ ಭಗವಾನರವರು ಹೇಳುತ್ತಾರೆ; "ಓ ಕುಂತೀಪುತ್ರನೇ, ನಾನು ದೇವತೆಯು, ನಾನು ಮನುಷ್ಯನು, ನಾನು ಸ್ಥೂಲನಾದವನು, ನಾನು ಕೃಶನು ಇತ್ಯಾದಿರೂಪದಲ್ಲಿ ಭೋಕ್ತಾವಾದ ಆತ್ಮನೊಂದಿಗೆ ಸಾಮಾನಾಧಿಕರಣ್ಯದಿಂದ (ಏಕೀಭಾವದಿಂದ) ಹೇಳಲ್ಪಟ್ಟ ಭೋಕ್ತಾವಿಗೆ ಭೋಗಸಾಧಕವಾದ ಈ ಶರೀರವು, ಭೋಕ್ತಾವಿಗಿಂತ ಬೇರೆಯಾದುದೆಂದು ತತ್ವವನ್ನು ತಿಳಿದವರಿಂದ ಹೇಳಲ್ಪಡುತ್ತದೆ. ಆದುದರಿಂದಲೇ "ನಾನು ಇದನ್ನು ತಿಳಿಯುವೆನು" ಎಂಬಲ್ಲಿ ನಾನು ಎಂಬ ಜ್ಞಾತಾ, ತಿಳಿಯತಕ್ಕ ದೇಹ ಮೊದಲಾದುದಕ್ಕಿಂತ ಬೇರೆ ಎಂಬದಾಗಿ ತತ್ವವಿತ್ತುಗಳು ಹೇಳುವರು ಎಂಬುದು ಈ ಶ್ಲೋಕಾಭಿಪ್ರಾಯವು. ಹೀಗೆ ಜ್ಞಾನ ಉಂಟಾದರೆ ಈ ದೇಹವು, ನಶ್ವರಗಳಾಗಿ ಅಂತ್ಯದಲ್ಲಿ ದುಃಖಪ್ರದಗಳಾದ ಭೋಗಗಳಿಗಲ್ಲವೆಂದು ತಿಳಿದವನಾಗಿ, ಈ ಸಂಸಾರಾಂಬುಧಿಯನ್ನು ದಾಟುವದಕ್ಕಾಗಿ "ಕಾಯನೌಃ" ಸರ್ವೇಶ್ವರನಿಂದ ದಯಾಪಾಲಿಸಲ್ಪಟ್ಟ ಒಂದು ಹಡಗೆಂದು ಭಾವಿಸತಕ್ಕವನೆಂಬಭಿಪ್ರಾಯದಿಂದ ಕ್ಷೇತ್ರಜ್ಞ ಶಬ್ದವನ್ನು ಪ್ರಯೋಗಿಸಿರುತ್ತಾರೆ. ಇಂತಹ ಚೇತನನಿಗೆ ಸರ್ವೇಶ್ವರನ ಕೃಪೆಯುಂಟಾಗಿ ಕಡೆಗೆ ರಕ್ಷಿಸಲ್ಪಡುವನೆಂಬಭಿಪ್ರಾಯವು ಉಪೋದ್ಘಾತಾಧಿಕಾರದಲ್ಲಿ ಉಪಪಾದಿತವು. ಯಾವಾಗ ಈ ಕ್ಷೇತ್ರಜ್ಞನು ತನ್ನನ್ನಾಶ್ರಯಿಸುವನೋ, ಯಾವಾಗ ಆತನಿಗೆ ನಿರತಿಶಯ ನಿಶ್ರೇಯಸ್ಸನ್ನುಂಟುಮಾಡುವೆನೋ ಎಂದು ಸರ್ವೇಶ್ವರನು ಯಾವಾಗಲೂ ನಿರೀಕ್ಷಿಸುತ್ತಿರುವನೆಂದು ತಿಳಿಸುವದಕ್ಕಾಗಿ ಅವಸರ ಪ್ರತೀಕ್ಷ್ಯಯಾನ ಎಂದು ಇಲ್ಲಿ ಪ್ರಯೋಗಿಸಿರುತ್ತಾರೆ. "ತ್ರಾತವ್ಯಶ್ಶರಣಾಗತಃ" (ಸ. ಸಾಧ್ಯೋ) ಶರಣಾಗತನು ರಕ್ಷಿಸಲ್ಪಡತಕ್ಕದ್ದು, "ಅಭಯಂ ಸರ್ವಭೂತೇಭ್ಯೋ ದದಾಮ್ಯೇ ತದ್ವ್ರತಂ ಮಮ", (ರಾಮಾ.) ಶರಣಾಗತರಿಗೆ ಅಭಯವನ್ನು ಕೊಡುವದೇ ತನಗೆ ವ್ರತವೆಂದೂ, ಹೀಗೆ ದೃಢಸಂಕಲ್ಪಯುಕ್ತನಾಗಿ ಅವಸರ ಪ್ರತೀಕ್ಷೆಯಲ್ಲಿರುವನು. ನಾವುಗಳು ಮಾಡುವ ಅಲ್ಪಸುಕೃತವು ಒಂದು ವ್ಯಾಜಮಾತ್ರವೇ ವಿನಾ ನಮ್ಮನ್ನು ರಕ್ಷಿಸತಕ್ಕದ್ದು ಭಗವತ್ಕೃಪೆ ಎಂದು ಹೇಳುತ್ತಾರೆ. ಆತನಿಗೆ ಜನನ ಕಾಲದಲ್ಲಿ ತನ್ನ ದಿವ್ಯ ಕಟಾಕ್ಷದ ವೀಕ್ಷಣವು ದೊರೆತು ಸತ್ವೋದ್ರೇಕ ಉಂಟಾಗಿ ಸಾತ್ವಿಕ ಸಂಭಾಷಣೆ, ಸದ್ಗುರುಪ್ರಾಪ್ತಿ, ಉಪಾಯಾನುಷ್ಠಾನ ಮೊದಲಾದ ಸರ್ವ ಶ್ರೇಯಸ್ಸನ್ನು

ಗಳೂ ಆ ಮಹಾನುಭಾವನ ಕೃಪಾಪ್ರಭಾವವೆಂದು ಹೇಳಿರುತ್ತಾರೆ. ಸರ್ವಶ್ರೇಷ್ಠ ವಾದ ಆ ಕೃಪೆಯೊಂದು ಮಾತ್ರವಿಲ್ಲದಿದ್ದರೆ, **"ದೋಷಾಭವೇಯು ರೀತೇ ಯದಿನಾಮ ದಯೇ ತ್ವಯಾ ವಿನಾ ಭೂತಾಃ ।"** (ದಯಾ. ೧೫) ಸರ್ವೇಶ್ವರನ ಸಮಸ್ತ ಕಲ್ಯಾಣಗುಣಗಣವೂ ದೋಷಯುಕ್ತವಾದವಾಗುತ್ತಿತ್ತು. ಯಾವಾಗ ಸರ್ವೇಶ್ವರನ ಕೃಪೆಗೆ ವಶನಾವನೋ **"ತಸ್ಮಿನ್ ಪ್ರಸನ್ನೇ ಕಿಮಿಹಾಸ್ತ್ಯಲಭ್ಯಂ"** (ವಿ. ಪು.) ಎಂದು ಹೇಳಿರುವ ಹಾಗೆ, ಆಗ ಇವನಿಗೆ ಅಲಭ್ಯವಾದುದು ಯಾವುದೂ ಇಲ್ಲವು. ಆಗ ಸಮೀಚೀನ ಶಾಸ್ತ್ರಪ್ರಾಪ್ತಿಯು ಆಚಾರ್ಯಮೂಲಕ ದೊರೆಯುತ್ತದೆಂಬ ಭಾವವು. **"ಶಾಸ್ತ್ರಜ್ಞಾನಂ ಬಹುಕ್ಲೇಶಂ ಬುದ್ಧೇಶ್ಚಲನ ಕಾರಣಂ"** ಎಂದು ಹೇಳಿರುವ ಹಾಗೆ ಬಹುವಾದ ಶಾಸ್ತ್ರದ ಯಥಾರ್ಥಜ್ಞಾನವು ದುಸ್ತರವಾದುದರಿಂದ, ಶಾಸ್ತ್ರದಲ್ಲಿ ಸಾರತಮಗಳಾದ ಶ್ರೀಮದ್ರಹಸ್ಯತ್ರಯಗಳ ಸಾರವತ್ತಾದ ಅರ್ಥಗಳನ್ನು ಆಚಾರ್ಯರುಗಳ ಮೂಲಕ ಸಂಗ್ರಹಿಸತಕ್ಕದ್ದು ಎಂಬುದನ್ನು ತಿಳಿಸುವದಕ್ಕಾಗಿ **ಸಮೀಚೀನ ಶಾಸ್ತ್ರಮುಖತ್ತಾಲೆ** ಎಂಬ ಪ್ರಯೋಗವು. ಹೀಗೆ ಉಪದೇಶ ಮೂಲಕ ಎಲ್ಲ ಮುಮುಕ್ಷುಗಳಿಗೆ ಜ್ಞಾತವ್ಯಾಂಶಗಳು ಮೂರೆಂದು **ತತ್ವಹಿತ ಪುರುಷಾರ್ಥ ವಿಶೇಷಗಳೆಂದು** ನಿರೂಪಿಸಿರುತ್ತಾರೆ. ಆದರೆ ಶಾಸ್ತ್ರಗಳೆಲ್ಲಾ ಬೋಧಿಸುತ್ತಿರುವುದು ಅರ್ಥಪಂಚಕವೆಂದು ಹೇಳಿರುವಾಗ, ಇಲ್ಲಿ ಮೂರು ಮುಖ್ಯವೆಂದು ಹೇಳಿರುವುದು ಅದಕ್ಕೆ ವಿರುದ್ಧವಾದ ಅಭಿಪ್ರಾಯವೋ ಎಂದರೆ ಆ ಐದೂ ಈ ಮೂರರಲ್ಲಿ ಅಡಗಿವೆ. ತತ್ವವನ್ನು ತಿಳಿಯುವುದಕ್ಕೆ ಪ್ರಾಪ್ಯಸ್ವರೂಪವೂ ಪ್ರಾಪ್ತೃವಿನ ಸ್ವರೂಪವೂ ಮುಖ್ಯವಾಗಿ ಜ್ಞಾತವ್ಯವು. ಹಿತವ್ಯಾವುದೆಂದರೆ ಉಪಾಯಾನುಷ್ಠಾನವು ; ಪುರುಷಾರ್ಥವು ಫಲವು, ಇದನ್ನು ತಿಳಿಯುವಾಗ ಆ ಪ್ರಾಪ್ತಿರೂಪ ಫಲಕ್ಕೆ ವಿರೋಧಿಯಾವುದು ಎಂಬುದೂ ತಿಳಿಯತಕ್ಕದ್ದು ಅವಶ್ಯಕವು. ಇವುಗಳನ್ನು ಮುಖ್ಯವಾಗಿ ತಿಳಿಯತಕ್ಕದ್ದಾದುದರಿಂದ **ವಿಶೇಷಜ್ಞಳೈ ತೆಳಿನ್ದು** ಎಂದು ಹೇಳಲ್ಪಟ್ಟಿರುತ್ತದೆ. ಶಾಸ್ತ್ರಗಳ ವಿಪುಳಜ್ಞಾನವಿಲ್ಲದಿದ್ದರೂ ಮುಖ್ಯವಾಗಿ ಈ ಮೂರರ ಜ್ಞಾನವು ಎಲ್ಲಾ ಮೋಕ್ಷಾರ್ಥಿಗಳಿಗೂ ಆವಶ್ಯಕವು. ಇಂತಹ ಜ್ಞಾನಬಲದಿಂದ ಮೋಕ್ಷದಲ್ಲಿ ಇಚ್ಛೆಯುಂಟಾಗುತ್ತದೆ. ತಾನು ಮುಮುಕ್ಷುವೆಂದೆನಿಸಬೇಕಾದರೆ, ತಾನು ದೇಹಾದ್ವಿಲಕ್ಷಣನಾಗಿ ಪರಿಶುದ್ಧವಾದ ಸ್ವರೂಪವುಳ್ಳವನೆಂದು ತಿಳಿದು, ಆ ಕಾರಣದಿಂದ ಪಾಪಗಳಿಂದ ಅಪವಿತ್ರನಾಗಕೂಡದೆಂಬ ಸ್ಥಿರಸಂಕಲ್ಪಯುಕ್ತನಾಗಿ, ಸರ್ವೇಶ್ವರನೇ ತನಗೆ ಆಧಾರನಾಗಿ ನಿಯಾಮಕನಾಗಿ ಶೇಷಿಯಾಗಿ ಸ್ವಾಮಿಯಾಗಿರುವದರಿಂದ ಆತನಿಗೆ ಕೈಂಕರ್ಯ ಮಾಡುವದೇ ತನಗೆ ಸ್ವರೂಪವೆಂಬ ತಿಳುವಳಿಕೆಯನ್ನು ಹೊಂದಿ, ಅಹಂಕಾರ ಮಮಕಾರಗಳನ್ನು ತೊರೆದು ನಿವೃತ್ತಿ ಧರ್ಮಗಳನ್ನವಲಂಬಿಸತಕ್ಕದ್ದು.

ಅನಂತರ ಈತನು ಭಕ್ತಿಮಾರ್ಗ ಪ್ರಪತ್ತಿಮಾರ್ಗಗಳೆಂಬ ಎರಡು ಉಪಾಯಗಳೆಂದು ತಿಳಿದು, ಈ ಎರಡು ವಿಧ ಅಧಿಕಾರಿಗಳಿಗೂ ಇರುವ ವೈಲಕ್ಷಣ್ಯವನ್ನು ಚೆನ್ನಾಗಿ ಅರಿತು, ತಾನು ಉಪಾಸನೆಗೆ ಶಕ್ತಿಯಿಲ್ಲದೇಯಾಗಲೀ ಅನರ್ಹನಾಗಿಯಾಗಲೀ ಇದ್ದರೆ, ಆಗ ಲಘೂಪಾಯವಾದ ಪ್ರಪತ್ತಿ ಮಾರ್ಗಕ್ಕೆ ಅರ್ಹನೆಂದು ತಿಳಿದು, ಒಬ್ಬ ಪ್ರಾಜ್ಞನಾದ ಆಚಾರ್ಯನನ್ನು ವರಿಸಿ, ಉಕ್ತಿನಿಷ್ಠೆ ಆಚಾರ್ಯನಿಷ್ಠೆಯ ಮೂಲಕ ಭರನ್ಯಾಸವನ್ನು ಮಾಡತಕ್ಕದ್ದು. ಆ ಭರನ್ಯಾಸವು ಸಫಲವಾಗುವುದಕ್ಕಾಗಿ ಈತನು ಭರನ್ಯಾಸದ ಅಂಗಾಂಗಿಗಳ ಸ್ವರೂಪವನ್ನು ಚೆನ್ನಾಗಿ ವಿಮರ್ಶೆಯಿಂದ ತಿಳಿಯತಕ್ಕದ್ದು. ಕಾರ್ಪಣ್ಯ ಮಹಾವಿಶ್ವಾಸಾದಿ ಅಂಗಿಗಳ ನ್ಯೂನತೆಯಿದ್ದರೆ ಭರನ್ಯಾಸವು ಕಾರ್ಯಕಾರಿಯಾಗದು. ಹೀಗೆ ಭರನ್ಯಾಸವನ್ನನುಷ್ಠಿಸಿದವನು ನಿರ್ಭರನಾಗಿ, ನಿರ್ಭಯನಾಗಿ, ನಿಸ್ಸಂಶಯನಾಗಿ, ಹೃಷ್ಟಮನಸ್ಕನಾಗುವದರಿಂದ ಈತನು ಕೃತಕೃತ್ಯನಾಗುವನೆಂದು ತಿಳಿಸುವದಕ್ಕಾಗಿ ಕೃತಕೃತ್ಯನಾಯ್ ಎಂದು ಪ್ರಯೋಗವು. ಹೀಗೆ ಕೃತಕೃತ್ಯನಾದವನು ಉತ್ತರಕಾಲದಲ್ಲಿ ತಾನು ಅನುಷ್ಠಿಸಿದ ನಿಷ್ಠೆಯ ಮಾಹಾತ್ಮ್ಯೆಯನ್ನರಿತವನಾಗತಕ್ಕದ್ದು. ಸ್ವನಿಷ್ಠಾಭಿಜ್ಞಾನ ಉಂಟಾಗಬೇಕಾದರೆ ಪರಿಭವಾದಿಗಳಿಂದ ಮನೋವಿಕಾರವುಂಟಾಗದಹಾಗಿರುವ ತನ್ನ ಸ್ವರೂಪದ ಮಾಹಾತ್ಮ್ಯೆಯ ಜ್ಞಾನವು ಬೇಕು. ತಾನು ಅನುಷ್ಠಿಸಿದ ಉಪಾಯದ ಮಾಹಾತ್ಮ್ಯೆಯನ್ನು ಉಪಾಯಾನುಷ್ಠಾನದಿಂದುಂಟಾಗುವ ಫಲದ ಮಾಹಾತ್ಮ್ಯೆಯನ್ನೂ ತಿಳಿದಿರತಕ್ಕದ್ದು. ಈತನು ಕೃತಕೃತ್ಯನಾದರೂ ಉತ್ತರಕಾಲದಲ್ಲಿ ತಾನು ಮಾಡತಕ್ಕ ಕೆಲವು ಇತಿ ಕರ್ತವ್ಯಗಳುಂಟೆಂದು ತಿಳಿದು, ಭಗವತ್ಪ್ರೀತ್ಯರ್ಥವಾಗಿ ಆಜ್ಞಾ ಕೈಂಕರ್ಯಗಳನ್ನು ತಪ್ಪದೆ ಅನುಷ್ಠಿಸುವನಾಗಿ ಅನುಜ್ಞಾ ಕೈಂಕರ್ಯಗಳನ್ನು ನ್ಯಾಯಾರ್ಜಿತ ದ್ರವ್ಯದಿಂದ ನಡೆಸುವವನಾಗಿ ಭಗವದ್ವಿಷಯದಲ್ಲೂ ಆಚಾರ್ಯರ ವಿಷಯದಲ್ಲೂ ಸಂಪೂರ್ಣ ಕೃತಜ್ಞತೆಯುಳ್ಳವನಾಗಿ, ತುಂಬಾ ಜ್ಞಾನಿಗಳಾಗಿರುವವರಿಂದ ಉಪದೇಶವನ್ನು ಹೊಂದುತ್ತಾ, ತನಗೆ ಚೆನ್ನಾಗಿ ತಿಳಿದಿರುವವದನ್ನು ಇತರರಿಗೆ ತಿಳಿಸುತ್ತಾ, ಧನಾರ್ಜನೆ ಮೊದಲಾದ ಐಹಿಕವೃತ್ತಿಗಳಲ್ಲಿ ಆಶೆಯನ್ನು ತೊರೆದು, ಹೀಗೆ ತನ್ನ ಸ್ವರೂಪಕ್ಕೆ ಯೋಗ್ಯವಾದ ರೀತಿಯಲ್ಲಿ ಕಾಲಯಾಪನೆ ಮಾಡತಕ್ಕದ್ದು. ಈ ಅಭಿಪ್ರಾಯವನ್ನು ಸೂಚಿಸುವದಕ್ಕಾಗಿ ಅದಕ್ಕನುರೂಪಮಾಗ ವಿಜ್ಞ ಇರನ್ದನಾಳ್ ಎಂದು ಪ್ರಯೋಗಿಸಿರುತ್ತಾರೆ. ಇಂತಹ ಉತ್ತರಕೃತ್ಯಗಳಿಗೆ ಅನುಕೂಲವಾದ ಸ್ಥಳದಲ್ಲೇ ಈತನು ವಾಸಿಸತಕ್ಕದೆಂಬ ಸ್ಥಾನವಿಶೇಷಾಧಿಕಾರಾರ್ಥವೂ ಇದರಿಂದಲೇ ದ್ಯೋತಿತವು. ತನಗೆ ಜ್ಞಾನಸಂಪಾದನೆಗೆ ಯೋಗ್ಯನಾಗಿ ಮುಖ್ಯ ಭಾಗವತೋತ್ತಮರು ನೆಲಸಿರುವ ಮಹಾಪುಣ್ಯಕ್ಷೇತ್ರಗಳಲ್ಲಿ ವಾಸವು ತನ್ನ ಸ್ವರೂಪಕ್ಕೆ ಯೋಗ್ಯವಾದುದು

ಎಂಬಭಿಪ್ರಾಯವು. ಈ ಉತ್ತರಕೃತ್ಯಗಳಿಂದ ಆಜ್ಞಾನುಜ್ಞಾ ಕೈಂಕರ್ಯಗಳನ್ನೆಲ್ಲಾ ಶಾಸ್ತ್ರೀಯ ನಿಯಮವನ್ನನುಸರಿಸಿ ಮಾಡತಕ್ಕದ್ದೇ ವಿನಾ ಅತಿಲಂಘನವು ಸರ್ವಥಾ ಕೂಡದೆಂದು ತಿಳಿದವನಾಗಿ, ಬುದ್ಧಿಪೂರ್ವಕವಾಗಿ ಅಪರಾಧಗಳನ್ನೆಸಗದೆ ಆದರಲ್ಲೂ ಮುಖ್ಯವಾಗಿ ಭಾಗವತಾಪರಾಧಗಳಿಗೆ ಭಯಪಟ್ಟು ನಡೆಯುವನಾಗಿ, ತನಗೆ ದೇಹಾವಸಾನದವರೆಗೂ ಮುಖ್ಯವಾಗಿ ಉಪಾದೇಯವಾದುದು ಭಗವದ್ಭಾಗವತ ಕೈಂಕರ್ಯವೂ, ಆದರಲ್ಲಿ ಭಾಗವತ ಕೈಂಕರ್ಯವೇ ಪುರುಷಾರ್ಥಕಾಷ್ಠೆ ಎಂದರಿತವನಾಗಿ, ಮಹಾ ಭಾಗವತೋತ್ತಮರ ಪ್ರಸನ್ನತೆಯನ್ನು ಮಾತ್ರ ಅಪೇಕ್ಷಿಸುವವನಾಗಿ ಕಾಲಯಾಪನೆಯನ್ನು ಮಾಡತಕ್ಕದ್ದೆಂದು "ಕೈಙ್ಕರ್ಯರೂಪ ಪುರುಷಾರ್ಥ ಮಿರುಕ್ಕುಂಪಡಿ" ಎಂಬುವದರಿಂದ ತಿಳಿಸಲ್ಪಟ್ಟಿತು. ಶರೀರಪಾತ ಸಮಯದಲ್ಲಿ ಇಂದ್ರಿಯಗಳೆಲ್ಲಾ ಸೂಕ್ಷ್ಮಾವಸ್ಥೆಯಲ್ಲಿ ಮನಸ್ಸಿನಲ್ಲೂ, ಇಂತಹ ಮನಸ್ಸು ಪ್ರಾಣದಲ್ಲೂ, ಇವೆಲ್ಲಾ ಜೀವಾತ್ಮನಲ್ಲೂ, ಹಾಗೆಯೇ ಭೂತಸೂಕ್ಷ್ಮದಲ್ಲೂ, ಅಲ್ಲಿಂದ ಪರಮಾತ್ಮನಲ್ಲೂ, ಹೀಗೆ ಗತಿಯುಂಟಾಗುತ್ತದೆ. ಇದು ಪ್ರಪನ್ನ ಅಪ್ರಪನ್ನರಿಬ್ಬರಿಗೂ ಸಾಧಾರಣವಾದ ಗತಿಯು; ದೇಹವನ್ನು ಬಿಟ್ಟು ಬರುವಾಗ ಪ್ರಪನ್ನನಿಗೆ ಬ್ರಹ್ಮನಾಡಿಯಮೂಲಕ ಅರ್ಚಿರಾದಿಗತಿಯೂ, ಇತರ ಉಪಾಸಕರೇ ಮೊದಲಾದವರಿಗೆ ನೂರು ನಾಡಿಗಳ ಮೂಲಕ ಧೂಮಾದಿಗತಿಯೂ, ಅಪ್ರಪನ್ನರಿಗೆ ಇತರ ಗತಿಯೂ ಪ್ರಾಪ್ತವಾಗುತ್ತವೆ. ಅಲ್ಲಿಂದ ಅರ್ಚಿಸ್ಸೇ ಮೊದಲಾದ ಆತಿವಾಹಿಕರಿಂದ ಸತ್ಕಾರವೂ, ತಮ್ಮ ತಮ್ಮಗಳ ಎಲ್ಲೆಗಳವರೆಗೂ ಕರೆದುಕೊಂಡು ಹೋಗಿಬಿಡೋಣವೂ, ವಿರಜಾವಗಾಹನೆ, ಅಮಾನವ ಕರಸ್ಪರ್ಶ, ಅಪ್ರಾಕೃತ ದಿವ್ಯಮಙ್ಗಳವಿಗ್ರಹಪ್ರಾಪ್ತಿ, ಪರಿಪೂರ್ಣಬ್ರಹ್ಮಾನುಭವ ತತ್ಕೈಂಕರ್ಯಾದಿಗಳೆಲ್ಲಾ ಲಭಿಸುತ್ತವೆಂದು ಹೀಗೆ ಹಿಂದೆ ಹೇಳಿದುದನ್ನೆಲ್ಲಾ ಅನುವಾದಮಾಡಿ ಹೇಳಿರುತ್ತಾರೆ.

ಭಗವನ್ನಿಗ್ರಹವನ್ನು ಹೋಗಲಾಡಿಸುವ ಮೂರು ಕಾರಣಗಳು.

ಸಿದ್ಧೋಪಾಯಾದಿ ವಿವೇಕಜ್ಞಾನವುಳ್ಳ ಪ್ರಪನ್ನರಿಗೆ ಸಾಧಾರಣವಾಗಿ ಶಂಕಾಗಳು ಉತ್ಪನ್ನವಾಗದೇ ಇರಬಹುದು ಆಗ ಈ ಅಧಿಕಾರದಲ್ಲಿ ಮಾಡಿರುವ ಶೋಧನೆಯು ವ್ಯರ್ಥವಾಗುತ್ತದಲ್ಲಾ ಎಂದರೆ, ಮೃದುಪ್ರಜ್ಞರಾದ ಪ್ರಪನ್ನರಿಗೆ ಹೈತುಕರೊಂದಿಗೆ ಸಹವಾಸವು ದೊರೆತು, ಬುದ್ಧಿಚಲನ ಉಂಟಾಗಿ ಶಙ್ಕೆಗಳಿಗೆ ಕಾರಣವಾಗುತ್ತದೆ. ಇದೇತಕ್ಕೆಂದರೆ: ಪ್ರಾಚೀನ ದುಷ್ಕರ್ಮವಶದಿಂದ ಉಪಾಯ ನುತ್ತು ಅದರ ಪ್ರಭಾವಗಳ ವಿಷಯದಲ್ಲಿ ಬೇಗ ವಿಶದವಾದ ಜ್ಞಾನೋತ್ಪತ್ತಿ ಇಲ್ಲದಿರಬಹುದು. ಅಥವಾ ಈ ಪ್ರಪನ್ನರಿಗೇನೇ ಮಾಯಾವಾದಿಗಳೇ ಮೊದಲಾದ

ಭಗವನ್ನಿಗ್ರಹ ನಿವರ್ತಕಾ ಹೇತವಸ್ತ್ರಯಃ

ಇವ್ವರ್ಥಙ್ಗಳಿಲ್ ಜ್ಞಾತವ್ಯತಮಮಾನ ಸಿದ್ಧೋಪಾಯತ್ತೈಪ್ಪತ್ತವುಮ್, ಸಾಧ್ಯೋಪಾಯ ವಿಷಯಮಾಗವುಮ್, ಇವ್ವುಪಾಯ ಪ್ರಭಾವ ವಿಷಯಮಾಗವುಮ್, ಕರ್ಮವಶ್ಯರುಕ್ಕು ಕ್ಕಡುಗತ್ತೈಳಿವು ಪಿರವಾಪ್ಪೈಕ್ಕ ಸ್ವತನ್ತ್ರನಾನ ಸರ್ವೇಶ್ವರನ್ ಇವರ್ಗಳುಡೈಯ ಪೂರ್ವಾಪರಾಧತ್ತಾಲೇ

ವರ ಸಂಸರ್ಗವುಂಟಾಗಿ, ಭ್ರಾಮಕಬುದ್ಧಿಯು ತಲೆದೋರಿ, ವಿಭೂತಿಯೆಲ್ಲಾ ಮಿಥ್ಯಾ ಎಂದು ಹೇಳುವರು ; ಇನ್ನು ಕೆಲವರು ಶ್ರಿಯಃಪತಿಗೆ ಸೇರಿದುದೆಂದು ಭಾವಿಸದೆ ಇತರರಿಗೆ ಸೇರಿದುದೆಂದು ಹೇಳುವರು ; ಶಾಸ್ತ್ರಗಳಿಗೆ ಸರ್ವಸಾಮಂಜಸ್ಯವನ್ನು ಕಲ್ಪಿಸಲು ಯೋಗ್ಯತೆಯಿಲ್ಲದೆ, ಮಂದಮತಿಗಳಾದುದರಿಂದ ಹೀಗೆ ಅನೇಕ ಶಙ್ಕಗಳುಂಟಾಗುತ್ತವೆ, ಈ ಮಂದಮತಿಗಳಿಗೆ ಲಕ್ಷ್ಮೀಕಟಾಕ್ಷವೂ ಸದಾಚಾರ್ಯಾನುಗ್ರಹವೂ ಸತ್ಸಂಪ್ರದಾಯಸಿದ್ಧಿಯೂ ಇಲ್ಲದಿರುವದರಿಂದ ಜ್ಞಾನವು ಸಾಧಾರಣವಾಗಿ ಒಳ್ಳೆ ಮಾರ್ಗದಲ್ಲಿ ಪ್ರವರ್ತಿಸದೆ, ತಾವಾಗಿಯೇ ಸ್ವತಂತ್ರಿಸಿ ಶಾಸ್ತ್ರವನ್ನು ತಿಳಿಯಬೇಕೆಂದು ಪ್ರವರ್ತಿಸಿದರೆ, ಕುತರ್ಕಗಳಿಂದ ಮೋಹಿತರಾಗಿ ಶಾಸ್ತ್ರದಲ್ಲಿ ಪರಸ್ಪರ ವಿರುದ್ಧಗಳಿರುವಹಾಗೆ ಭಾವಿಸಿ, ಪ್ರಾಮಾಣಿಕವಾದ ಅಭಿಪ್ರಾಯಗಳನ್ನು ಗ್ರಹಿಸದೇ ಇರುತ್ತಾರೆ. ಆದರೆ ಕುತರ್ಕ ಕುವಾದಗಳು ಮೂರು ಪ್ರಧಾನ ವಿಷಯಗಳಲ್ಲಿ ಸುತರಾಂ ಇರಕೂಡದೆಂದು ಭಾವಿಸಿ, ಅಂತಹ ಶಙ್ಕಗಳಿಗೆಲ್ಲಾ ಸತ್ತರ್ಕಾದಿಗಳ ಮೂಲಕ ಸಮಾಧಾನವನ್ನು ಹೇಳಲಾರಂಭಿಸಿ, ಆ ಮೂರು ಪ್ರಧಾನ ವಿಷಯಗಳು ಸಿದ್ಧೋಪಾಯವೆಂದೂ, ಸಾಧ್ಯೋಪಾಯವೆಂದೂ ಸಾಧ್ಯೋಪಾಯದ ಪ್ರಭಾವವೆಂದೂ ಹೇಳಿ, ಇವುಗಳ ಸ್ಥಿರೀಕರಣವನ್ನು ನಾಲ್ಕು ಅಧಿಕಾರಗಳ ಮೂಲಕ ಮಾಡುತ್ತಾರೆ. ಪ್ರಥಮತಃ ಸಿದ್ಧೋಪಾಯ ವಿಷಯದಲ್ಲಿ ಮುಮುಕ್ಷುಗಳಾದ ಪ್ರಪನ್ನರಾದವರಿಗೆ ಉಂಟಾಗುವ ಶಙ್ಕಗಳೆಲ್ಲಾ ಶೋಧಿಸಲ್ಪಡುವದರಿಂದ ಇದಕ್ಕೆ ಸಿದ್ಧೋಪಾಯಶೋಧನಾಧಿಕಾರವೆಂದು ಹೆಸರು. ಹಾಗೆಯೇ ಸಾಧ್ಯೋಪಾಯವಿಷಯದಲ್ಲುಂಟಾಗುವ ಶಙ್ಕಗಳೆಲ್ಲಾ ಮುಂದಿನಧಿಕಾರದಲ್ಲಿ ಶೋಧಿಸಲ್ಪಡುವದರಿಂದ ಸಾಧ್ಯೋಪಾಯ ಶೋಧನಾಧಿಕಾರವೆಂದು ಹೆಸರು. ಇನ್ನೆರಡಧಿಕಾರಗಳು ಪ್ರಧಾನ ವಿಷಯವಾದುವು. ಒಂದರಲ್ಲಿ ಪ್ರಭಾವವು ಇಷ್ಟೇ ಎಂದು ವ್ಯವಸ್ಥಿತವಾಗುವದರಿಂದ ಪ್ರಭಾವವ್ಯವಸ್ಥಾಧಿಕಾರವೆಂದು ಹೆಸರು. ಇನ್ನೊಂದರಲ್ಲಿ ಪ್ರಭಾವಕ್ಕೆ ನ್ಯೂನತೆ ಬರುವ ಶಂಕೆಗಳಿಂದ ಪ್ರಭಾ

ಯಿಟ್ಟ ನಿನೈಪ್ಪೀಡು ಮಾರೈಗೈಕ್ಕು ಪ್ರಧಾನ ಕಾರಣಮ್ ಮೂನ್ರುಣ್ಡು; ಅವೈ ಯೆವೈ ಯೆನ್ನಿಲ್ :—(೧) "ಅಸ್ತು ಮೇ" ಎನ್ರಪೇಕ್ಷಿತ್ತಾಲ್ "ಅಸ್ತು ತೇ, ತಯೈವ ಸರ್ವಂ ಸಂಪತ್ಸ್ಯತೇ" ಎಙ್ಗ್ರ ತಿರುಮುಖಪ್ಪಾ ಶುರಮುಮ್, (೨) ಸದಾಚಾರ್ಯಾನುಗ್ರಹಮುಮ್, (೩) ಸತ್ಸಂಪ್ರದಾಯ ಸಿದ್ಧಿಯುಮ್.

ವವು ರಕ್ಷಿಸಲ್ಪಡುವದರಿಂದ ಪ್ರಭಾವರಕ್ಷಾಧಿಕಾರವೆಂದು ಹೆಸರು. ಹೀಗೆ ಈ ಸ್ಥಿರೀಕರಣ ಭಾಗದಲ್ಲಿ ನಾಲ್ಕು ಅಧಿಕಾರಗಳಿವೆ. ಈ ಅಭಿಪ್ರಾಯಗಳನ್ನೇ ಮುಂದಿನ ವಾಕ್ಯದಿಂದ ತಿಳಿಸುತ್ತಾರೆ:—

ಇವ್ವರ್ಥಙ್ಗಳಿಲ್ - ಹಿಂದೆ ವಿಸ್ತರವಾಗಿ ಉಪಪಾದಿಸಿ, ಅದನ್ನೇ ಈಗ ಅನುವಾದಿಸಿ ಹೇಳಿದ ಅಭಿಪ್ರಾಯಗಳಲ್ಲಿ, **ಜ್ಞಾತವ್ಯತಮಮಾನ** - ತಿಳಿಯಬೇಕಾದಂಶದಲ್ಲಿ ಅತ್ಯಂತ ಮುಖ್ಯವಾದ. **ಸಿದ್ಧೋಪಾಯತ್ತೈ ಪತ್ತುವುಮ್** - ಸಿದ್ಧೋಪಾಯವನ್ನು ಕುರಿತೂ, **ಸಾಧ್ಯೋಪಾಯ ವಿಷಯಮಾಗವುಮ್** - ಸಾಧ್ಯೋಪಾಯವನ್ನು ಕುರಿತೂ, **ಇವ್ವುಪಾಯ ಪ್ರಭಾವ ವಿಷಯಮಾಗವುಮ್** - ಈ ಸಾಧ್ಯೋಪಾಯದ ಮಾಹಾತ್ಮ್ಯೆಯನ್ನು ಕುರಿತೂ, **ಕರ್ಮವಶ್ಯರುಕ್ಕು** - ಕರ್ಮಾಧೀನರಾದವರಿಗೆ, **ಕಡುಗ** - ಶೀಘ್ರವಾಗಿ, **ತೆಳಿವು** - ನಿರ್ಣಯವು, **ಪಿರಿವಾಮೈಕ್ಕು** - ಹುಟ್ಟದೇ ಇರುವುವಕ್ಕೆ, ಸ್ವತಂತ್ರನಾದ ಸರ್ವೇಶ್ವರನು, **ಇವರ್ಗಳುಡೈಯ ಪೂರ್ವಾಪರಾಧತ್ತಾಲೆ** - ಇವರುಗಳ ಪೂರ್ವಾಪರಾಧದಿಂದ, **ಯಿಟ್ಟ ನಿನೈವ್ಪು** - ಮಾಡಿದ ಸಂಕಲ್ಪವು, ಎಂದರೆ ಈತನು ಅಪರಾಧಿಯಾದುದರಿಂದ ತತ್ಪಹಿತ ಪುರುಷಾರ್ಥಗಳ ಜ್ಞಾನಕ್ಕೆ ಅಯೋಗ್ಯನು ಎಂಬ ಸಂಕಲ್ಪವು ; **ಈಡುಮಾರುಕೈಕ್ಕು** - ನಿವೃತ್ತಿ ಹೊಂದುವುದಕ್ಕೆ ಎಂದರೆ ಒಳ್ಳೇ ಜ್ಞಾನವನ್ನು ಈತನಲ್ಲಿ ಉಂಟುಮಾಡುವನೆಂದು ಸಂಕಲ್ಪಿಸುವುದಕ್ಕೆ, **ಪ್ರಧಾನಕಾರಣಮ್** - ಮುಖ್ಯ ಕಾರಣಗಳು, **ಮೂನ್ರುಣ್ಡು** - ಮೂರು ಉಂಟು. **ಅವು ಯೆವೈ ಯೆನ್ನಿಲ್** - ಅವುಗಳು ಯಾವುವು ಎಂದರೆ:—(೧) **"ಅಸ್ತು ಮೇ"** - ನನಗೆ ಪರಮ ಪುರುಷಾರ್ಥಪ್ರಾಪ್ತಿಹೇತುಭೂತವಾದ ಭಗವಂತನಲ್ಲಿ ಶರಣಾಗತಿಯು ಉಂಟಾಗಲಿ, **ಎನ್ರಪೇಕ್ಷಿತ್ತಾಲ್** - ಎಂದಪೇಕ್ಷಿಸಿದರೆ, **"ಅಸ್ತು ತೇ, ತಯೈವ ಸರ್ವಂ ಸಂಪತ್ಸ್ಯತೇ"** - ಹಾಗೆಯೇ ಆಗಲಿ, **ತಯೈವ** - ಆ ನೀನು ಲಕ್ಷ್ಮಿಯಾದ ನನ್ನಲ್ಲಿ ಮಾಡಿದ ಶರಣಾಗತಿಯಿಂದಲೇ, **ಸರ್ವಂ** - ಸಮಸ್ತವೂ, **ಸಂಪತ್ಸ್ಯತೇ** -

---

(೧) ಶರಣಾಗತಿ ಗದ್ಯಂ.

ಹೊಂದಲ್ಪಡುತ್ತದೆ, ಎಙ್ಗರ - ಎಂದು ಹೇಳಿರುವ, ತಿರುಮುಖಪ್ಪಾಶುರಮ್ - ಲೋಕಮಾತೆಯ ಮುಖಕಮಲದಿಂದ ಬಂದ ಸೂಕ್ತಿಯು, (೨) ಸದಾಚಾರ್ಯಾನುಗ್ರಹಮ್ - ಕರ್ಮನಿಷ್ಠೆ ಜ್ಞಾನನಿಷ್ಠೆಗಳೊಂದಿಗೆ ಶರಣಾಗತಿಯನ್ನನುಷ್ಠಿಸಿ ಲಕ್ಷ್ಮೀನಾರಾಯಣರನ್ನು ವಶಮಾಡಿಕೊಂಡಿರುವದರಿಂದ ಸದಾಚಾರ್ಯರೆನಿಸುವವರ ಅನುಗ್ರಹವೂ, (೩) ಸತ್ಸಂಪ್ರದಾಯ ಸಿದ್ಧಿಯುಮ್ - ಈ ಮೇಲಿನ ಲಕ್ಷ್ಮೀಕಟಾಕ್ಷದಿಂದುಂಟಾದ ಆಚಾರ್ಯಾನುಗ್ರಹದಿಂದ ಪ್ರಾಪ್ತವಾದ ಸದುಪದೇಶವನ್ನು ಹೊಂದೋಣವೂ. ಇದರಲ್ಲಿ ಲಕ್ಷ್ಮೀಪ್ರಸಾದನವು ಆಚಾರ್ಯಾನುಗ್ರಹಕ್ಕೆ ಹೇತುವು ; ಆಚಾರ್ಯಾನುಗ್ರಹವು ಸತ್ಸಂಪ್ರದಾಯಸಿದ್ಧಿಗೆ ಹೇತುವೆಂದು ತಿಳಿಯತಕ್ಕದ್ದು.

ಈ ಮೇಲೆ ಇಪ್ಪತ್ತೆರಡು ಅಧಿಕಾರಗಳ ವಿಷಯದಲ್ಲೂ ಅನೇಕ ಶಂಕಾಗಳುಂಟಾಗಬಹುದಾಗಿರುವಾಗ, ಸಿದ್ಧೋಪಾಯ, ಸಾಧ್ಯೋಪಾಯ, ಉಪಾಯಪ್ರಭಾವ ಇವುಗಳ ವಿಷಯಗಳಲ್ಲಿ ಮಾತ್ರ ಉಂಟಾಗುವ ಶಂಕಾಗಳನ್ನು ಪರಿಹರಿಸಲು ಕಾರಣವೇನೆಂದರೆ, ಹೇಳುತ್ತಾರೆ. **ಇನ್ವರ್ಥಙ್ಗಳಿಲ್ ಜ್ಞಾತವ್ಯತಮಙ್ಗಳ್** ಎಂದು ಹೇಳಿರುವದರಿಂದ ಇವು ತುಂಬಾ ಪ್ರಧಾನವಾದವುಗಳು ಎಂಬ ಭಾವವು. **ಕರ್ಮವಶ್ಯರ್ಗೆ ಕ್ಕಡುಗತ್ತೆಳಿವು ಪಿರವಾನ್ಮೈಕ್ಕು** ಎಂದು ಹೇಳಿರುವುದರಭಿಪ್ರಾಯವೇನೆಂದರೆ :—"**ಪಾಪಂಪ್ರಜ್ಞಾಂ ನಾಶಯತಿ ಕ್ರಿಯಮಾಣಂ ಪುನಃಪುನಃ**" ಎಂದು ಹೇಳಿರುವ ರೀತಿಯಲ್ಲಿ ಪಾಪವು ಈತನ ಜ್ಞಾನವನ್ನು ನಾಶಮಾಡುತ್ತದೆ. ಪ್ರಪನ್ನನಾಗಿದ್ದರೂ ಈತನಿಗೆ ಒಳ್ಳೇ ಜ್ಞಾನವುಂಟಾಗದಿರಬಹುದು. ಸರ್ವೇಶ್ವರನು ಇವರುಗಳ ಅಪರಾಧಗಳನ್ನು ಕಂಡು ನಿಗ್ರಹಿಸಬೇಕೆಂಬ ಕೃತಸಂಕಲ್ಪನಾಗಿದ್ದರೂ, ಅಂತಹ ಸಂಕಲ್ಪವನ್ನು ತ್ಯಜಿಸಿ ಅನುಗ್ರಹಿಸಲು ಮೂರು ಕಾರಣಗಳುಂಟೆಂದು ಹೇಳುತ್ತಾರೆ. (೧) ಪುರುಷಕಾರರೂಪಳಾದ ಲಕ್ಷ್ಮಿಯ ಅನುಗ್ರಹವು :—ಶ್ರೀ ಯತಿವರ್ಯರು ಪರಮಪುರುಷನಲ್ಲಿ ಶರಣಾಗತಿಯನ್ನನುಷ್ಠಿಸುವುದಕ್ಕೆ ಪೂರ್ವಭಾವಿಯಾಗಿ ಶ್ರೀ ಶರಣಾಗತಿಯನ್ನು ಮಾಡಿ, ಪ್ರಾರ್ಥಿಸಿದರು, ಏನೆಂದರೆ :—"**ನಿತ್ಯಕೈಙ್ಕರ್ಯಪ್ರಾಪ್ತ್ಯಪೇಕ್ಷಯಾ ಪಾರಮಾರ್ಥಿಕೀ ಭಗವಚ್ಚರಣಾರವಿಂದ ಶರಣಾಗತಿರ್ಯಥಾವಸ್ಥಿತಾऽವಿರತಾಸ್ತು ಮೇ**" ಪರಮಪುರುಷಾರ್ಥರೂಪ ಪರಿಪೂರ್ಣ ಬ್ರಹ್ಮಾನುಭವ ನಿತ್ಯಕೈಂಕರ್ಯಪ್ರಾಪ್ತಿಗಾಗಿ ಭಗವಂತನ ಚರಣಾರವಿಂದದಲ್ಲಿ ಶರಣಾಗತ್ಯನುಷ್ಠಾನವು ಸಾಂಗವಾದುದಾಗಲೆಂದು ಪ್ರಾರ್ಥನೆಯು. ತಮಃಕಾರ್ಯ, ರಜಃಕಾರ್ಯರೂಪದಲ್ಲಿ ಪ್ರಪತ್ತಿ ವಿಷಯದಲ್ಲಿ ಅನೇಕ ವಿಪ್ರತಿಪತ್ತಿಗಳು ತೋರಿಬರುವುದರಿಂದ ಇವರ ಸ್ವರೂಪವನ್ನರಿಯುವದು ದುರವಗಾಹವೆಂದು ಭಾವಿಸಿ, ತಮಃಕಾರ್ಯದ ನಿರಾಸಕ್ಕಾಗಿ

ಪಾರಮಾರ್ಥಿಕೀ - ಯಥಾರ್ಥವಾದಂತಾ ಶರಣಾಗತಿಯು ಸಿದ್ಧಿಸುವ ಹಾಗೆ ಅನುಗ್ರಹಿಸಬೇಕೆಂದು ಬೇಡಿದರು. ಆನುಕೂಲ್ಯಾದಿ ಅಂಗಗಳಿಂದ ಇತರ ಉಪಾಯಗಳಿಗಿಂತಲೂ ಬೇರೆಯಾದ ಸ್ವರೂಪವುಳ್ಳದ್ದೆಂದು ಹೇಳಲ್ಪಟ್ಟಿತು. ರಜಃಕಾರ್ಯನಿರಸನಕ್ಕಾಗಿ **ಯಥಾವಸ್ಥಿತಾ** ಎಂದು ಹೇಳಲ್ಪಟ್ಟಿತು. ಮೋಕ್ಷ ಪ್ರಾಪ್ತಿಯುಂಟಾಗುವ ತನಕ ಈ ಶರಣಾಗತಿಯ ವ್ಯಾಪಾರವು ಸಕೃತ್ತಾದರೂ, ಅದು ಶಾಂತವಾಗುವದಿಲ್ಲವಾದುದರಿಂದ **ಅವಿರತಾ** ಎಂದು ಹೇಳಲ್ಪಟ್ಟಿತು. ಭಕ್ತ್ಯುಪಾಯದಲ್ಲಾದರೋ ಅಂಗರೂಪ ಶರಣಾಗತಿಯು ಸಾಧ್ಯಾಂತರವನ್ನುಂಟು ಮಾಡಿ ವಿರತವ್ಯಾಪಾರವಾದುದಾಗುತ್ತದೆ. ಇದಾದರೋ ಹಾಗಲ್ಲವೆಂಬ ಭಾವವು. **ಮೇ** - ಅತ್ಯಂತ ಅಕಿಂಚನನಾಗಿ ಅನನ್ಯಗತಿಕನಾದ ನಿನ್ನನ್ನೇ ಸರ್ವ ವಿಧದಲ್ಲೂ ನಂಬಿ ನಿನ್ನ ನಿಜದಾಸನಾದ **ನನಗೆ, ಅಸ್ತು** - ಉಂಟಾಗಲೆಂದು ಶ್ರೀ ಮಹಾ ಲಕ್ಷ್ಮಿಯನ್ನು ಪ್ರಾರ್ಥಿಸಲಾಗಿ, ಅದಕ್ಕೆ ಅನುಗ್ರಹಮಯಳು "**ಅಸ್ತುತೇ**" ಎಂದು ಪ್ರತ್ಯುತ್ತರವನ್ನಿತ್ತಳು; **ತೇ** - ನನ್ನಲ್ಲಿ ಭರವನ್ನು ಇಟ್ಟಿದುದರಿಂದ ಸಂಪ್ರೀತ ಳಾಗಿ ಸ್ವೀಕರಿಸಲ್ಪಟ್ಟ ಶರಣಾಗತಿಯುಳ್ಳ ನಿನಗೆ, ಪಾರಮಾರ್ಥಿಕಿಯಾದ, ಯಥಾ ವಸ್ಥಿತಾವಾದ, ಅವಿರತಾವಾದ, ನನ್ನ ಪತಿಯಾದ ನಾರಾಯಣನಲ್ಲಿ ನೀನು ಅನು ಷ್ಠಿಸುವ ಶರಣಾಗತಿಯು ಸಿದ್ಧಿಸಲಿ, **ತಯೈವ**- ಆ ಶರಣಾಗತಿಯಿಂದಲೇ, **ಸರ್ವಂ**- ಸಮಸ್ತವೂ ಎಂದರೆ ತಮ್ಮ ಮನಸ್ಸಿನಲ್ಲಿರುವ ಮುಂದೆ ಹೇಳುವ ಮೂರು ಶ್ಲೋಕ ಗಳಲ್ಲಿ ತೋರುವ (**ಶ್ಲೋಕತ್ರಯೋದಿತಜ್ಞಾನಿನಂ ಮಾಂ ಕುರುಷ್ವ**) ಜ್ಞಾನಿ ಯಾಗಬೇಕೆಂಬ ಪ್ರಾರ್ಥನೆಯನ್ನೂ, ಮತ್ತು ವಿಭೀಷಣನೊಂದಿಗೆ ಬಂದ ನಾಲ್ಕು ಭಾಗವತರುಗಳ ಹಾಗೆ, ತನಗೆ ಸೇರಿದವರಿಗೂ ಮೋಕ್ಷಫಲವೂ ಸಹ, **ಸಂಪ ತ್ಸ್ಯತೇ** - ಹೊಂದಲ್ಪಡುತ್ತದೆ ಎಂಬದಾಗಿ ಲಕ್ಷ್ಮಿಯ ವರಪ್ರದಾನವು. ಮಹಾ ಪಾಪಿಯಾದ ರಾವಣನಿಗೇನೇ "**ವಿದಿತಸ್ಸಹಿಧರ್ಮಜ್ಞಶ್ಶರಣಾಗತ ವತ್ಸಲಃ । ತೇನ ಮೈತ್ರೀ ಭವತು ತೇ ಯದಿ ಜೀವಿತು ಮಿಚ್ಛಸಿ ॥**" "ಶರಣಾಗತರಲ್ಲಿ ವಾತ್ಸಲ್ಯವುಳ್ಳವನೆಂದೂ ಶರಣಾಗತಿಯ ಧರ್ಮವನ್ನು ತಿಳಿದವನೆಂದೂ ಶ್ರೀರಾಮನು ಲೋಕಪ್ರಖ್ಯಾತಿಯುಳ್ಳವನು,ಆದುದರಿಂದ ನೀನು ಬದುಕಬೇಕೆಂಬ ಆಶೆಯಿದ್ದುದಾ ದರೆ ಎಂದರೆ ನೀನು ಸರ್ವ ಪುರುಷಾರ್ಥವನ್ನೂ ಹೊಂದಬೇಕೆಂಬಪೇಕ್ಷೆಯಿದ್ದುದಾ ದರೆ, ಆ ಕರುಣಾಸಾಗರನೊಂದಿಗೆ ಸ್ನೇಹ ಉಂಟಾಗಲಿ" ಎಂದು ಹೇಳಿದ ಮಹನೀ ಯಳು. ತನ್ನ ಪುರುಷಕಾರತ್ವ ಮಹಿಮೆಯಿಂದ ಪರಮನಿಶ್ರೇಯಸವನ್ನು ತನ್ನನ್ನು ಮರೆಹೊಕ್ಕವರಿಗೆ ಸಾಧಿಸಿಕೊಡತಕ್ಕವಳು. "**ಅಸ್ತುತೇ**" ಎಂದು ನಿಸ್ಸಂಶಯ ವಾಗಿ ಯಾವಾಗ ಹೇಳಲು ಶಕ್ತಳೋ ಆಗ ಸಾಧಿಸಿಕೊಡಲೂ ಶಕ್ತಳು. "**ತಯೈ ವ ಸರ್ವಂ ಸಂಪತ್ಸ್ಯತೇ**" ಎಂದೂ ಹೇಳಿರುವವರಿಂದ, ಲಕ್ಷ್ಮ್ಯನುಗ್ರಹದಿಂದ,

ಸದಾಚಾರ್ಯಾನುಗ್ರಹಸ್ಯ ಹೇತುಫಲಯೋಃ ದೃಷ್ಟಾನ್ತಾಃ

ಇವತ್ತಿಲ್ ಸದಾಚಾರ್ಯಾನುಗ್ರಹತ್ತುಕ್ಕು ವ್ಯಾಜಙ್ಗಳುಮ್ ಇದಿನ್

ಶರಣಾಗತಿಗೆ ಬೇಕಾದ ಜ್ಞಾನಸಂಪತ್ತಿಯೂ, ಅದಕ್ಕೆ ಬೇಕಾದ ಪರಿಕರಗಳೆಲ್ಲಾ ಒದಗಿ, ಅದರ ಸ್ವರೂಪವು ಏರ್ಪಟ್ಟು, ಸಾಂಗವಾಗಿ ನೆರವೇರಿ ಫಲಪ್ರಾಪ್ತಿಯುಂಟಾಗುತ್ತದೆ ಎಂಬ ಭಾವವು.

ಸದಾಚಾರ್ಯಾನುಗ್ರಹದಿಂದಲೇ ಸರಿಯಾದ ಜ್ಞಾನಪ್ರಾಪ್ತಿ ಮೊದಲಾದವೆಂಬುದು ಗುರುಪರಂಪರಾಸಾರದಲ್ಲಿ ಉಪಪಾದಿತವು. ಅಲ್ಲಿ **“ಪಾಪಿಷ್ಠಃ ಕ್ಷತ್ರಬಂಧುಶ್ಚ ಪುಂಡರೀಕಶ್ಚ ಪುಣ್ಯಕೃತ್ । ಆಚಾರ್ಯವತ್ತಯಾ ಮುಕ್ತೌ ತಸ್ಮಾದಾಚಾರ್ಯವಾನ್ ಭವೇತ್ ॥”** ಎಂಬ ಸ್ಥಳದಲ್ಲಿ ಉಪಪಾದಿತವಾಗಿರುತ್ತದೆ. ಸತ್ಸಂಪ್ರದಾಯವೆಂದರೇನೆಂಬುದು **ಮೂಲದಲ್ಲೇ** ಮುಂದೆ ತಿಳಿಸಲ್ಪಡುತ್ತದೆ.

ಹೀಗಾದ ಪಕ್ಷದಲ್ಲಿ ಈ ಸಿದ್ಧೋಪಾಯ ಶೋಧನಾಧಿಕಾರದ ಉಪಯೋಗವೇನೆಂದು ಕೇಳಬೇಕಾಗುತ್ತದೆ. ತಮ್ಮ ತಮ್ಮ ಆಚಾರ್ಯರುಗಳ ಅನುಗ್ರಹಮೂಲಕ ಪ್ರಾಪ್ತವಾಗುವ ಜ್ಞಾನ ಸತ್ಸಂಪ್ರದಾಯ ಸಿದ್ಧಿಯೇ ಸಾಕಾದರೂ, ಶಾಸ್ತ್ರ ಪರಿಚಯವುಳ್ಳವರಿಗೆ ಹಿಂದೆ ಉಪಪಾದಿಸಿದ ವಿಷಯಗಳು ಹೇಗೆ ಸತ್ತರ್ಕಗಳಿಂದ ದೃಢೀಕರಿಸಬಹುದೆಂಬಂಶವು ಆವಶ್ಯಕವಾಗಿ ತಿಳಿಯತಕ್ಕದ್ದು. ಶಾಸ್ತ್ರ ಪರಿಚಯ ತುಂಬಾ ಇಲ್ಲದವರಿಗೆ ಕುಬುದ್ಧಿಗಳೊಂದಿಗೆ ಸಂಸರ್ಗ ಪ್ರಾಪ್ತವಾಗಿ ಅವರುಗಳ ಕುತರ್ಕದಿಂದ ಬುದ್ಧಿಯು ಚಾಂಚಲ್ಯವನ್ನು ಹೊಂದಬಹುದು. ಅಂತಹ ದುರ್ದೆಶೆಯು ಪ್ರಾಪ್ತವಾಗದಿರುವುದಕ್ಕಾಗಿಯೂ ಇದು ಆವಶ್ಯಕವು. ಅದೂ ಅಲ್ಲದೆ ಅಂತಹ ಭಯಾವಹಗಳಾದ ಕುತರ್ಕರೂಪ ಪೂರ್ವಪಕ್ಷಗಳು ಕೆಲವಲ್ಲಿ ನೆಲಗೊಂಡಿರುವುದರಿಂದಲೂ, ಅಂತಹ ಶಂಕಾಗಳನ್ನೆಲ್ಲಾ ನಿರಸನ ಮಾಡುವುದೂ ಅತ್ಯಾವಶ್ಯಕವಾದುದರಿಂದ, ಪ್ರಮಾಣಗಳನ್ನುದಾಹರಿಸಿ ಸತ್ತರ್ಕಗಳಿಂದ ಶೋಧನಮಾಡಿ, ತಮ್ಮ ಉಪದೇಶಗಳನ್ನು ಸ್ಥಾಪನೆ ಮಾಡುತ್ತಾರೆ.

ಸದಾಚಾರ್ಯಾನುಗ್ರಹಕ್ಕೆ ಕಾರಣ ಫಲಗಳ ದೃಷ್ಟಾಂತಗಳು.

ಇವತ್ತಿಲ್ - ಈ ಮೂರರಲ್ಲಿ, **ಸದಾಚಾರ್ಯಾನುಗ್ರಹತ್ತುಕ್ಕು** - ಒಳ್ಳೇ ಶ್ರೇಷ್ಠನಾದ ಆಚಾರ್ಯನ ಅನುಗ್ರಹ ಉಂಟಾಗುವುದಕ್ಕೆ, **ವ್ಯಾಜಙ್ಗಳುಮ್** - ನೆಪರೂಪಕಾರಣಗಳನ್ನೂ, **ಇದಿನ್ ಫಲವಿಶೇಷಙ್ಗಳುಮ್** - ಅದರಿಂದುಂಟಾ

ಫಲವಿಶೇಷಙ್ಗಳುಮ್ ಪರಾಶರ ಮೈತ್ರೇಯ ಸಂಜಯಾ ಶ್ವಲಾಯನಾದಿ ವೃತ್ತಾಂತಙ್ಗಳಿಲೆ ಕಂಡುಕೊಳ್ವದು.

ಗುವ ಪ್ರಯೋಜನಗಳನ್ನೂ, ಪರಾಶರರು, ಮೈತ್ರೇಯರು, ಸಂಜಯರು, ಅಶ್ವಲಾಯನರು, ಆದಿ ಪದದಿಂದ, ವ್ಯಾಸ, ಶುಕ, ವಾಲ್ಮೀಕಿ ಮೊದಲಾದವರು ಹೇಳಲ್ಪಟ್ಟರು, ಇವರುಗಳ, **ವೃತ್ತಾಂತಙ್ಗಳಿಲೇ ಕಂಡುಕೊಳ್ವದು**- ಇವರುಗಳ ಸಚ್ಚರಿತ್ರೆಗಳಿಂದ ಗ್ರಹಿಸತಕ್ಕದ್ದು. ಆಚಾರ್ಯಾನುಗ್ರಹ ಉಂಟಾಗಲು ಕಾರಣವೇನೆಂಬುದನ್ನೂ, ಅಂತಹ ಆಚಾರ್ಯಾನುಗ್ರಹ ಉಂಟಾದುದರಿಂದ ಪ್ರಾಪ್ತವಾದ ಪ್ರಯೋಜನಗಳೇನೆಂಬುದನ್ನೂ, ತಿಳಿಯಲಪೇಕ್ಷೆಯುಳ್ಳವರು ಪರಾಶರ, ಮೈತ್ರೇಯ, ಸಂಜಯ, ಅಶ್ವಲಾಯನರು, ಹೀಗೆ ನಾಲ್ಕು ಮಹನೀಯರುಗಳ ವೃತ್ತಾಂತದಿಂದ ತಿಳಿಯಬಹುದೆಂದು ಹೇಳಿರುತ್ತಾರೆ. ಈ ಗ್ರಂಥವನ್ನುಪದೇಶಿಸುವ ಮಹನೀಯರು ಈ ವೃಂತ್ತಾಂತಗಳನ್ನು ತಿಳಿಯದ ಪಕ್ಷದಲ್ಲಿ ವ್ಯಕ್ತಪಡಿಸಲೆಂದು ಸೂಕ್ಷ್ಮವಾಗಿ ತಿಳಿಸಿದರು. ಇಲ್ಲಿ ಕಾರಣವನ್ನು ವ್ಯಾಜವೆಂದು ಏತಕ್ಕೆ ಹೇಳಲ್ಪಟ್ಟಿತೆಂದರೆ, ಇಂತಹ ಕಾರಣಗಳೆಲ್ಲಾ ಒಂದು ನೆಪಮಾತ್ರವೇ, ಅಂತಹ ಸುಕೃತವನ್ನನುಗ್ರಹಿಸುವನು ಶ್ರಿಯಃಪತಿಯೇ ಎಂಬ ತಾತ್ಪರ್ಯವು.

ಶ್ರೀ ಪರಾಶರ ವೃತ್ತಾಂತವು. ಇದು ವಿಷ್ಣುಪುರಾಣದ ಆದಿಭಾಗವಲ್ಲಿ ಹೇಳಲ್ಪಟ್ಟಿರುತ್ತದೆ. ಇವರು ವಸಿಷ್ಠರ ಪೌತ್ರರು. ವಿಶ್ವಾಮಿತ್ರರಿಂದ ಪ್ರೇರಿತನಾದ ಒಬ್ಬ ರಾಕ್ಷಸನು ಶ್ರೀ ಪರಾಶರರ ತಂದೆಯನ್ನು ಬಕ್ಷಿಸಿಬಿಟ್ಟನು. ಇವಕ್ಕೆ ಶ್ರೀ ಪರಾಶರರು ಕ್ರೋಧಾಕ್ರಾಂತರಾಗಿ ಸರ್ವ ರಾಕ್ಷಸನಾಶಕ್ಕಾಗಿ ಒಂದು ಸತ್ರವನ್ನು ಆರಂಭಿಸಿದರು. ಇದರಿಂದ ರಾಕ್ಷಸರೆಲ್ಲಾ ಭಸ್ಮೀಕೃತರಾಗಿ ನಾಶವಾಗುತ್ತಿದ್ದರು. ಇದನ್ನು ವಸಿಷ್ಠರು ತಿಳಿದು ಮೊಮ್ಮಗನಲ್ಲಿಗೆ ಬಂದು ಓ ಅಪ್ಪನೇ, ಕ್ರೋಧನನ್ನು ಬಿಟ್ಟುಬಿಡು. ಒಬ್ಬನ ತಪ್ಪಿಗಾಗಿ ಎಲ್ಲರನ್ನೂ ನಾಶಪಡಿಸುವುದು ಧರ್ಮವಲ್ಲವು. **"ಯಶಸಸ್ತಪಸಶ್ಚೈವ ಕ್ರೋಧೋ ನಾಶಕರಃ ಪರಃ"** ನಿನ್ನ ಕ್ರೋಧವು ನಿನ್ನ ಯಶಸ್ಸಿಗೂ ತಪಸ್ಸಿಗೂ ಸಹ ನಾಶಕರವು. ಆದುದರಿಂದ ನಿಲ್ಲಿಸು ಎಂದು ಹೇಳಿ ಆ ಸತ್ರವನ್ನು ನಿಲ್ಲಿಸಿಬಿಟ್ಟರು. ಶ್ರೀ ಪರಾಶರರಿಗೆ ಆಚಾರ್ಯಾನುಗ್ರಹ ಉಂಟಾಗಲು ಇದೇ ವ್ಯಾಜವಾಗಿ ಪರಿಣಮಿಸಿತು. ಇದನ್ನು ತಿಳಿದು ರಾಕ್ಷಸಕುಲಕ್ಕೆ ಮೂಲಭೂತರಾದ ಮತ್ತು ಬ್ರಹ್ಮಪುತ್ರರಾದ ಪುಲಸ್ತ್ಯರು ಬಂದು, ಅಯ್ಯಾ ವತ್ಸನಾದ ಪರಾಶರನೇ, ನೀನು ನಿನ್ನ ಪಿತಾಮಹರ ಆಜ್ಞೆಯನ್ನು ಶಿರಸಾವಹಿಸಿ ರಾಕ್ಷಸ ನಾಶವನ್ನು ಬಿಟ್ಟಿದ್ದರಿಂದ ನಾನು ಸುಪ್ರೀತನಾದೆನು.

ನೀನು ಸರ್ವ ಶಾಸ್ತ್ರಗಳನ್ನು ತಿಳಿದ ಮಹಾಜ್ಞಾತಾವಾಗಿ ದೇವತಾ ಪಾರಮಾರ್ಥ್ಯವನ್ನು ತಿಳಿಯುವಿ, ಮತ್ತು ಪುರಾಣರತ್ನವನ್ನು ರಚಿಸುವಿ, ಎಂದು ಹರಿಸಿ ಹೊರಟುಹೋದರು. ಆದುದರಿಂದ ಆ ಆಚಾರ್ಯಾನುಗ್ರಹದಿಂದ ಉಂಟಾದ ಫಲಗಳು ಯಥಾರ್ಥ ಶಾಸ್ತ್ರಜ್ಞಾನವೂ, ದೇವತಾ ಪಾರಮಾರ್ಥ್ಯವೂ, ಶ್ರೀ ವಿಷ್ಣುಪುರಾಣ ಸಂಹಿತಾ ನಿರ್ಮಾಣವೂ.

ಮೈತ್ರೇಯರು. ಇವರು ಶ್ರೀ ಪರಾಶರರ ಪ್ರಿಯಶಿಷ್ಯರು. ಇವರು ತಮ್ಮ ಆಚಾರ್ಯರನ್ನು "**ಪ್ರಣಿಪತ್ಯಾಭಿವಾದ್ಯ ಚ**" (ಶ್ರೀ ವಿ. ಪು. ೧. ೧. ೧) ಎಂದು ಹೇಳಿರುವ ಹಾಗೆ ಪರಮ ಭಕ್ತಿವಿಶ್ವಾಸಗಳಿಂದ ಆಶ್ರಯಿಸಿದುದರಿಂದ, (ಇದೇ ವ್ಯಾಜವು) ಶ್ರೀ ಪರಾಶರರಿಂದ ಪುರಾಣರತ್ನವಾದ, ವಿಷ್ಣುಪುರಾಣೋಪದೇಶವನ್ನು ಹೊಂದಿದವರಾಗಿ ಬ್ರಹ್ಮಜ್ಞಾನವನ್ನು ಹೊಂದಿ ಮೋಕ್ಷವನ್ನು ಹೊಂದಿದರು (ಇದೇ ಪ್ರಯೋಜನವು.)

ಸಂಜಯರು. ಇವರು ವ್ಯಾಸರ ಶಿಷ್ಯರು, ವ್ಯಾಸರನ್ನು ಆಶ್ರಯಿಸಿದುದೇ ವ್ಯಾಜವು. ತ್ರೈಕಾಲಿಕ ಜ್ಞಾನವನ್ನು ಹೊಂದಿದುದೇ ಫಲವು. "**ವ್ಯಾಸಪ್ರಸಾದಾಚ್ಛ್ರುತವಾನ್ ಏತದ್ಗುಹ್ಯಮಹಂ ಪರಮ್ । ಯೋಗಂಯೋಗೇಶ್ವರಾತ್ಕೃಷ್ಣಾತ್ಸಾಕ್ಷಾತ್ ಕಥಯತಸ್ಸ್ವಯಂ ॥**" ಎಂದು ಸಂಜಯರೇ ಹೇಳಿಕೊಂಡಿರುತ್ತಾರೆ. ಸಾಕ್ಷಾತ್ ಶ್ರೀ ಕೃಷ್ಣನು ತಾನೇ ಉಪದೇಶಿಸಿದ ಹಾಗೆ ಶ್ರೀ ವ್ಯಾಸರ ಅನುಗ್ರಹದಿಂದ ಅತ್ಯುತ್ಕೃಷ್ಟವಾದ ಈ ರಹಸ್ಯವನ್ನೆಲ್ಲಾ ಕೇಳಿದೆನು ಎಂದು ತಮ್ಮ ಕೃತಜ್ಞತೆಯನ್ನು ತೋರಿಸಿಕೊಂಡಿರುತ್ತಾರೆ.

ಆಶ್ವಲಾಯನರು. ಶೌನಕ ಶಿಷ್ಯರು. ಇವರು ಶೌನಕರನ್ನು ಅನುವರ್ತಿಸಿ ನಡದಿದ್ದೇ ವ್ಯಾಜವು. ಋಗ್ವೇದ ಪ್ರವರ್ತನಾದಿಯೇ ಫಲವು.

ಹಾಗೆಯೇ ವಾಲ್ಮೀಕಿ ಮಹರ್ಷಿಗಳಿಗೆ ನಾರದ ಸಮಾಗಮ, ಮತ್ತು ಕ್ರೌಂಚ ಪಕ್ಷಿವಧೆಯನ್ನು ಮಾಡಿದ ವ್ಯಾಧಶಾಪಪ್ರದಾನಾದಿಗಳು ವ್ಯಾಜವು. ಶ್ರೀಮದ್ರಾಮಾಯಣ ಮಹಾಕಾವ್ಯ ನಿರ್ಮಾಣವು ಫಲವು.

ನಾಥಮುನಿಗಳಿಗೆ ತಿರುಗೂರ್ ನಗರಿಯ ಹುಣಸೇ ಮರದಲ್ಲಿನ ತೇಜೋದರ್ಶನವು ವ್ಯಾಜವು. ನಮ್ಮಾಳ್ವಾರ್ರುವರಿಂದ ತಿರುವಾಯ್‌ಮೊಳಿಯ ಉಪದೇಶವು ಫಲವು. ಶ್ರೀ ಯಾಮುನೇಯರಿಗೆ ಹೊನಗೊನ್ನೇ ಸೊಪ್ಪಿನ ಪಲ್ಯವು ವ್ಯಾಜವು. ಮಣಕ್ಕಾಲನಂಬಿಯವರಿಂದ ರಹಸ್ಯಾರ್ಥಗಳ ಉಪದೇಶವು ಪ್ರಯೋಜನವು.

ಕ್ಷತ್ರಬಂಧುವಿಗೆ ನಾರದಸಮಾಗಮ ವ್ಯಾಜವು. ಮಂತ್ರೋಪದೇಶ ಮೋಕ್ಷಗಳು ಫಲಗಳು.

ಸತ್ಸಂಪ್ರದಾಯ ಸಿದ್ಧಿಃ

ಸತ್ಸಂಪ್ರದಾಯ ಸಿದ್ಧಿ ಯಾವದು?—ತಾನ್ ಸತ್ವೋತ್ತರನಾಯ್, ಸಮ್ಯಗುಪಸನ್ನನಾಯ್, ಸಾವಧಾನನಾಯಿರುಕ್ಕುಮ್ ಅವಸ್ಥೈಯಿಲೇ, ಖ್ಯಾತಿ ಲಾಭ ಪೂಜಾ ನಿರಪೇಕ್ಷನಾಯ್ ಕಾರುಣ್ಯ ಪರತಂತ್ರನಾನ ಸದಾಚಾರ್ಯ‌ರ್, ಸರ್ವರುಕ್ಕು ಪ್ರಥಮಾಚಾರ್ಯನಾನ ಸರ್ವೇಶ್ವರ‌ರ್

ಜಾನಶ್ರುತಿಗೆ ಹಂಸಗಳ ಸಂವಾದವು ವ್ಯಾಜವು. ರೈಕ್ವರಿಂದ ಬ್ರಹ್ಮ ಜ್ಞಾನವು ಫಲವು. ಹೀಗೆಯೇ ಇತರ ಸಂದರ್ಭಗಳಲ್ಲೂ ಗ್ರಹಿಸತಕ್ಕದ್ದು.

ಸತ್ಸಂಪ್ರದಾಯ ಸಿದ್ಧಿಯು.

ಸತ್ಸಂಪ್ರದಾಯ ಸಿದ್ಧಿಯು ಯಾವುದು? ಎಂದರೇನೆಂಬ ಭಾವವು. ಇಲ್ಲಿ ಶಿಷ್ಯನಾದವನು ತನ್ನ ಸದಾಚಾರ್ಯನಿಂದ ತತ್ವಹಿತ ಪುರುಷಾರ್ಥಗಳ ವಿಷಯದಲ್ಲಿ ಉಪದೇಶವನ್ನು ಹೊಂದುವುದೇ ಸತ್ಸಂಪ್ರದಾಯವೆಂದು ಹೇಳಲು ಹೊರಟು ತಾನು ಹೇಗಿರಬೇಕು, ಆ ಸದಾಚಾರ್ಯನು ಎಂತವನಾಗಿರಬೇಕು ಎಂಬುದನ್ನು ಹೇಳುತ್ತಾರೆ. ಮೊದಲು ಶಿಷ್ಯನು ಹೇಗಿರಬೇಕೆಂದರೆ:—

ತಾನ್ ಸತ್ವೋತ್ತರನಾಯ್ - ಸತ್ವಗುಣಾಧಿಕ್ಯವುಳ್ಳವನಾಗಿ, ಇದರಿಂದ ರಜೋಗುಣ ತಮೋಗುಣ ವಿಜೃಂಭಣೆಗಳು ಸರ್ವಾತ್ಮನಾ ಶಿಷ್ಯವೃತ್ತಿಗೆ ಕೂಡದೆಂದು ಹೇಳಲ್ಪಟ್ಟಿತು, **ಸಮ್ಯಗುಪಸನ್ನನಾಯ್** - ಶಾಸ್ತ್ರಗಳಲ್ಲಿ ಗುರುವಿಗೆ ಎಷ್ಟು ಮರ್ಯಾದೆಯನ್ನು ಮಾಡಬೇಕೆಂದು ಹೇಳಿದೆಯೋ ಹಾಗೆ, **ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ** ಎಂಬ ಗೀತಾಶ್ಲೋಕದಲ್ಲೂ, **ಪ್ರಣಿಪತ್ಯಾಭಿವಾದ್ಯ ಚ** ಎಂಬಲ್ಲಿಯೂ (ವಿ. ಪು. ಪ್ರಥಮಶ್ಲೋಕ) ಹೇಳಿರುವ ಹಾಗೆ ಪ್ರದಕ್ಷಿಣ ನಮಸ್ಕಾರ ಅಭಿವಾದನ ಶುಶ್ರೂಷಾದಿಗಳ ಮೂಲಕ ನಮ್ರನಾಗಿ, **ಸಾವಧಾನನಾಯಿರುಕ್ಕುಮ್ ಅವಸ್ಥೈಯಿಲೆ** - ಉಪದೇಶವನ್ನು ತುಂಬಾ ಆದರದಿಂದ ಆಲಿಸುವವನಾಗಿರುವ ಅವಸ್ಥೆಯಲ್ಲಿ, ಶಿಷ್ಯನಿರಬೇಕೆಂದು ಹೇಳಿದರು, ಉಪದೇಶಿಸುವ ಆಚಾರ್ಯನು ಹೇಗಿರಬೇಕೆಂದರೆ ಹೇಳುತ್ತಾರೆ:— **ಖ್ಯಾತಿ ಲಾಭ ಪೂಜಾ ನಿರಪೇಕ್ಷನಾಯ್** - ಅನೇಕ ಶಿಷ್ಯರಿಗೆ ಜ್ಞಾನೋಪದೇಶಕನು ತಾನು, ಎಂಬ ಯಶಸ್ಸಿನಲ್ಲೂ, ಧನ ವಸನ ಗೃಹಾರಾಮಾದಿಗಳ ಲಾಭದಲ್ಲೂ, ಶಿಷ್ಯರು ನಾನಾ ವಿಧವಾದ ಶುಶ್ರೂಷೆ ಮಾಡಬೇಕೆಂಬುದರಲ್ಲೂ, ಆಶೆ ಇಲ್ಲದವನಾಗಿ, **ಕಾರುಣ್ಯ ಪರತಂತ್ರ**

ಮುದಲಾಗ ಉಪದೇಶ ಪರಂಪರೈಯಾಲೇ ವನ್ದ ತತ್ವಹಿತಙ್ಗಳೈ ಅನಪೇಕ್ಷಿತ ವಿಸ್ತರಮುಮ್ ಅಪೇಕ್ಷಿತ ಸಙ್ಕೋಚಮುಮ್ ಇಲ್ಲಾದಪಡಿ (೧)"ಸರ್ವೇಷಾಮೇವ ಲೋಕಾನಾಂ ಪಿತಾ ಮಾತಾಚ ಮಾಧವಃ। ಗಚ್ಛಧ್ವ

ನಾನ - "ದೇಶಿಕೋಮೇ ದಯಾಳುಃ" ಎಂದು ಹೇಳಲು, ಯೋಗ್ಯನಾಗಿ ಶಿಷ್ಯನಲ್ಲಿ ಪರಮ ಕರುಣೆಗೆ ಕಟ್ಟುಬಿದ್ದವನಾದ, **ಸದಾಚಾರ್ಯರ್** - ಶಾಸ್ತ್ರ ಪಾರಮಾರ್ಥ್ಯವನ್ನು ಚೆನ್ನಾಗಿ ತಿಳಿದು ಅನುಷ್ಠಿಸತಕ್ಕದನ್ನು ಅನುಷ್ಠಿಸುವನಾಗಿ, ನಿರ್ಭಯನಾಗಿ ಉಪದೇಶಿಸುವ ಆಚಾರ್ಯನು, ಇದು ಸಪ್ತಮಿಯು, ಮುಂದೆ ಉಪದೇಶಿಕ್ಕ ಎಂಬುದರಿಂದ ಕ್ರಿಯೆಯು ಬೋಧಿಸವು; **ಸರ್ವರುಕ್ಕು ಪ್ರಥಮಾಚಾರ್ಯನಾನ ಸರ್ವೇಶ್ವರನ್ ಮುದಲಾಗ ಉಪದೇಶ ಪರಂಪರೈಯಾಲೇ ವನ್ದ**-ಎಲ್ಲರಿಗೂ ಪ್ರಥಮ ಗುರು, ಆದಿ ಗುರುವಾದ ಸರ್ವೇಶ್ವರನೇ ಮೊದಲಾದವರುಗಳ ಉಪದೇಶ ಪರಂಪರೆಯಿಂದ ಕ್ರಮವಾಗಿ ಬಂದ, **ತತ್ವಹಿತಙ್ಗಳೈ**-ತತ್ವ ಯಾವುದು, ಹಿತವಾದ ಉಪಾಯವು ಯಾವುದು ಎಂಬುದನ್ನೂ, ಪುರುಷಾರ್ಥವು ಹೇಳಲ್ಪಡಸೇ ಇದ್ದರೂ, ಯಾವಾಗ ತತ್ವಹಿತಗಳನ್ನು ತಿಳಿದು ಉಪಾಯಾನುಷ್ಠಾನವನ್ನು ಮಾಡಿದನೋ ಆವಾಗ ಪುರುಷಾರ್ಥವು ಸ್ವತಸ್ಸಿದ್ಧವಾದುದರಿಂದ, ಪುರುಷಾರ್ಥವೂ ಹೇಳಲ್ಪಟ್ಟಿತು, **ಅನಪೇಕ್ಷಿತ ವಿಸ್ತರಮುಮ್** - ಇಷ್ಟವಿಲ್ಲದಿರುವ ಹೆಚ್ಚು ವಿಸ್ತರವೂ, **ಅಪೇಕ್ಷಿತ ಸಙ್ಕೋಚಮುಮ್** - ಇಷ್ಟವಾದುದು ಎಂಬು ತುಂಬಾ ಸಂಗ್ರಹವಾಗಿಯೂ, **ಇಲ್ಲಾದಪಡಿ** - ಇಲ್ಲದ ಹಾಗೆ, **"ಸರ್ವೇಷಾಮೇವ ಲೋಕಾನಾಂ"** ಎಙ್ಗ್ರ ಕಟ್ಟಳೈಗಳಿಲೆ ಎಂಬ ಶ್ಲೋಕದ ಕ್ರಮಗಳಲ್ಲಿ, **ಉಪದೇಶಿಕ್ಕ** - ಹಿಂದೆ ಆಚಾರ್ಯನು ಎಂದಿದೆ, ಆಚಾರ್ಯನು ಉಪದೇಶಿಸಲಾಗಿ, **ಪೆರುಗೈ** - ಆ ಉಪದೇಶವನ್ನು ಹೊಂದುವಿಕೆಯು. ಹೀಗೆ ಸದಾಚಾರ್ಯನಿಂದ ಉಪದೇಶ ಹೊಂದೋಣವೇ ಸತ್ಸಂಪ್ರದಾಯ ಸಿದ್ಧಿಯು, ಎಂದು ಹೇಳಲ್ಪಟ್ಟಿತು. ಈ ಶ್ಲೋಕಾರ್ಥವೇನೆಂದರೆ :—ಇದು ಮಾರ್ಕಂಡೇಯರ ಯುಧಿಷ್ಠಿರಾದಿಗಳನ್ನು ಕುರಿತು ಹೇಳುವ ಉಪದೇಶವು. ಈ ಚಿಕ್ಕ ಶ್ಲೋಕದಲ್ಲಿ ತತ್ವ, ಹಿತ ಪುರುಷಾರ್ಥಗಳು ಮೂರೂ ಹೇಳಲ್ಪಟ್ಟಿವೆ ಹೇಗೆಂದರೆ :- **ಸರ್ವೇಷಾಂ ಲೋಕಾನಾಂ** - ಸಮಸ್ತ ಲೋಕಗಳ ಜನರಿಗೂ, ಸರ್ವ ವಿಧವಾಗಿ ರಕ್ಷಿಸುವ, **ಪಿತಾ** - ಹಿತಪ್ರವರ್ತನೆಯನ್ನುಂಟುಮಾಡುವ ತಂದೆಯೂ, **ಮಾತಾ ಚ** - ಸಮಸ್ತ ಭೋಗಗಳನ್ನು ಕೊಟ್ಟು ರಕ್ಷಿಸುವ ತಾಯಿಯೂ ಕೂಡ, **ಪಿತಾ**

(೧) ಭಾರತ, ವನ. ೧೯೨-೫೬.

ಮೇನಂ ಶರಣಂ ಶರಣ್ಯಂ ಪುರುಷರ್ಷಭಾಃ" ಎಙ್ಗಿರ ಕಟ್ಟಳೈಗಳಿಲೆ ಉಪದೇಶಿಕ್ಕ, ಪೆರುಗ್ಗೈ.

ಮಾತಾ ಚ ಮಾಧವ ಏವ - ಲಕ್ಷ್ಮೀಪತಿಯೇ ಸರಿ, ಇದರಿಂದ ತತ್ತ್ವಸ್ವರೂಪವು ತಿಳಿಸಲ್ಪಟ್ಟಿತು. **ಹೇ ಪುರುಷರ್ಷಭಾಃ** - ಓ ಪುರುಷ ಶ್ರೇಷ್ಠರುಗಳಿರಾ, **ಏನಂ** - ಈ ಶ್ರಿಯಃಪತಿಯನ್ನು, **ಶರಣಂ** - ಉಪಾಯವನ್ನಾಗಿ, **ಗಚ್ಛಧ್ವಂ** - ಹೊಂದಿರಿ, ಎಂದರೆ ಆತನ ಪಾದದಲ್ಲಿ ಶರಣಾಗತಿಯನ್ನು ಮಾಡಿರಿ, ಇದರಿಂದ ಹಿತವು ಉಪದೇಶಿಸಲ್ಪಟ್ಟಿತು, **ಏನಂ** - ಎಂತಹವನನ್ನು ಶರಣು ಹೊಂದುವದು ಎಂದರೆ **ಶರಣ್ಯಂ** - ಎಲ್ಲರಿಗೂ ರಕ್ಷಕನಾಗಿ ಪುರುಷಾರ್ಥದಾಯಕನನ್ನು ಎಂದು ಮಹರ್ಷಿಯು ಉಪದೇಶಿಸಿದರು. **ಶರಣ್ಯಂ** ಎಂಬುದರಿಂದ ಪುರುಷಾರ್ಥವು ಶಿಕ್ಷಿಸಲ್ಪಟ್ಟಿತು. ಈ ಶ್ಲೋಕಾಭಿಪ್ರಾಯವನ್ನೇ ಶ್ರೀ ದೇಶಿಕರವರೇ ಹಿಂದೆ ತತ್ತ್ವತ್ರಯಾಧಿಕಾರದಲ್ಲಿ **"ಶ್ರೀಮಾನ್ನಾರಾಯಣೋ ನಃ ಪತಿರಖಿಲತನುರ್ಮುಕ್ತಿದೋ ಮುಕ್ತಭೋಗ್ಯಃ"** ಎಂಬುದರಿಂದ ವ್ಯಕ್ತಪಡಿಸಿರುತ್ತಾರೆ. ಇಲ್ಲಿಯೂ ತತ್ತ್ವಹಿತಪುರುಷಾರ್ಥಗಳು ಸಂಗ್ರಹಿಸಲ್ಪಟ್ಟವು. ಇದರಿಂದ ಶ್ರಿಯಃಪತಿಯೇ ಪರತತ್ತ್ವವು, ಆತನಲ್ಲಿ ಮಾಡುವ ಶರಣಾಗತಿಯೇ ಹಿತವಾದ ಉಪಾಯಾನುಷ್ಠಾನವು, ಆತನೇ ಪ್ರಾಪ್ಯವು, ಇದೇ ಪುರುಷಾರ್ಥವು, ಹೀಗೆ ತತ್ತ್ವ ಹಿತ ಪುರುಷಾರ್ಥಗಳು ಮೂರೂ ಇಲ್ಲಿ ಹೇಳಲ್ಪಟ್ಟವು; ಇಂತಹ ಸಂಗ್ರಹ ಶ್ಲೋಕವನ್ನೇ ಸದಾಚಾರ್ಯನು ಮೂಲಾಧಾರವಾಗಿಟ್ಟುಕೊಂಡು ಮಾರ್ಕಂಡೇಯರು ಯುಧಿಷ್ಠಿರಾದಿಗಳಿಗೆ ಉಪದೇಶ ಮಾಡಿದ ಹಾಗೆ ತುಂಬಾ ವಿಸ್ತರವೂ ತುಂಬಾ ಸಂಕೋಚವೂ ಇಲ್ಲದ ಹಾಗೆ ಶಿಷ್ಯನಿಗೆ ಉಪದೇಶಿಸತಕ್ಕದ್ದು. ಇದನ್ನು ಶಿಷ್ಯನು ತತ್ತ್ವಬುಭುತ್ಸುವಾಗಿದ್ದುಕೊಂಡು, ಪ್ರದಕ್ಷಿಣ ನಮಸ್ಕಾರ ಶುಶ್ರೂಷಾದಿಗಳಿಂದ ಪ್ರಾರ್ಥಿಸಿ, ಅತ್ಯಾದರದಿಂದ ಕೇಳಿ ತಿಳಿದುಕೊಳ್ಳುವುದೇ ಸತ್ಸಂಪ್ರದಾಯವೆಂದು ಹೇಳಿದರು. ಸ್ವಾಮಿಯವರು ಸಂಗ್ರಹವಾಗಿ ಆಚಾರ್ಯನು ಎಂತವನಾಗಿರಬೇಕೆಂಬುದನ್ನು ನ್ಯಾಸವಿಂಶತಿಯ ಮೊದಲಿನ ಎರಡು ಶ್ಲೋಕಗಳಿಂದ ಉಪದೇಶಿಸಿರುತ್ತಾರೆ. ಇವೆರಡು ಶ್ಲೋಕಗಳೂ ಹಿಂದೆ ಉದಾಹರಿಸಲ್ಪಟ್ಟಿವೆ. ಮೊದಲನೆಯ ಶ್ಲೋಕವನ್ನು ಗುರುಪರಂಪರಾ ಸಾರದ ೧೯ನೆಯ ಪುಟದಲ್ಲೂ, ಎರಡನೆಯ ಶ್ಲೋಕವನ್ನು ೪೬ನೆಯ ಪುಟದಲ್ಲೂ ಕಾಣಬಹುದು. **ಸರ್ವರಕ್ಷ್ಯಮ್ ಪ್ರಥಮಾಚಾರ್ಯ ಸರ್ವೇಶ್ವರ** ಎಂಬುದಕ್ಕೆ ೬೬ನೆಯ ಪುಟವನ್ನು ಪರಾಂಬರಿಸಿ. ಸಾಧಾರಣವಾಗಿ ಜನಗಳಿಗೆ ವಿಸ್ತರವಾಗಿ ಉಪದೇಶವು ಅನಪೇಕ್ಷಿತವು, ಸಂಗ್ರಹವಾಗಿ

ಹೇಳುವದು ಅಪೇಕ್ಷಿತವು. ಇವೆರಡೂ ಸರಿಯಲ್ಲವಾದುದರಿಂದ, ಇವೆರಡೂ ಇಲ್ಲಾದಪಡಿ ಉಪದೇಶಿಕ್ಕ, ಪೆರುಗೈ ಎಂದು ಹೇಳಿರುತ್ತಾರೆ.

ಶ್ರೀ ನಿಗಮಾಂತ ಮಹಾದೇಶಿಕರವರು ಈ ಸತ್ಸಂಪ್ರದಾಯ ಸಿದ್ಧಿಯು ಅತ್ಯಾವಶ್ಯಕವೆಂದು ಭಾವಿಸಿ ತಾವು ಬರೆದ ದ್ವಾತ್ರಿಂಶದ್ರಹಸ್ಯಗಳಲ್ಲಿ ಪ್ರಥಮ ರಹಸ್ಯವಾಗಿ ಇದನ್ನು "ಸಂಪ್ರದಾಯ ಪರಿಶುದ್ಧಿ" ಎಂಬ ಹೆಸರಿನಿಂದ ಅನುಗ್ರಹಿಸಿರುತ್ತಾರೆ. ಅಲ್ಲಿ ಮುಖ್ಯವಾಗಿ ಹೇಳಿರುವದೇನೆಂದರೆ :—ಅಧ್ಯಾತ್ಮ ಶಾಸ್ತ್ರಾರ್ಥ ನಿರ್ಣಯಕ್ಕೆ ಸದಾಚಾರ್ಯ ಸಂಪ್ರದಾಯವೇ ಮುಖ್ಯವೆಂದೂ, ಅಂತಹ ನಿರ್ಣಯಶಕ್ತಿಯು ಎಲ್ಲರಿಗೂ ಇಲ್ಲವಾದುದರಿಂದ "**ಉಪದೇಶಾದ್ಧರಿಂ ಬುಧ್ವಾ**" ಎಂದು ಹೇಳಿರುವ ಹಾಗೆ ಸದಾಚಾರ್ಯ ಸಂಪ್ರದಾಯ ಮೂಲಕವಾದ ಉಪದೇಶವೇ ಶಾಸ್ತ್ರಾರ್ಥ ನಿರ್ಣಾಯಕವು. ಇಂತಹ ಸಂಪ್ರದಾಯ ಸಂಸ್ಕಾರರಹಿತವಾದ ಶಾಸ್ತ್ರಜ್ಞಾನದಿಂದ ಯಥಾರ್ಥನಿರ್ಣಯವು ತುಂಬಾ ದುಷ್ಕರವು. ಇಂತಹ ಸಂಸ್ಕಾರ ಜ್ಞಾನಾಭಾವವು ಸರಿಯಾದ ಮಾರ್ಗದಲ್ಲಿ ಪ್ರವರ್ತಿಸುವ ಹಾಗೆ ಮಾಡದೆ ವಿಪರೀತ ಪ್ರವೃತ್ತಿಗೂ ಹೇತುವಾಗುತ್ತದೆ. ಅನ್ಯಾದೃಶವಾದ ಶಾಸ್ತ್ರಪರಿಚಯವುಳ್ಳವರೂ ಕೂಡ ಸತ್ಸಂಪ್ರದಾಯ ಸಿದ್ಧಿಯಿಲ್ಲದೆ ಇರುವುದರಿಂದ ಆ "**ಶಾಸ್ತ್ರವಿಪಶ್ಚಿತ್ತ್ವ**"ವು "**ಶ್ರಮ ಏವಹಿ ಕೇವಲಂ**" (ರಾ. ಸುಂ. ೫೨. ೮) ಎಂದು ಹೇಳಿರುವ ಹಾಗೆ ಕಾರ್ಯಕಾರಿಯಾಗದೆ ನಿರರ್ಥಕವಾದುದಾಗುತ್ತದೆ. "**ತಥಾಪಿ ವಿಪರೀತಾತೇ ಬುದ್ಧಿರಾಚಾರವರ್ಜಿತಾ**" ಎಂದು ಹೇಳಿರುವ ಹಾಗೆ, ಸತಾಂ ಅನುವರ್ತನವಿಲ್ಲವುದರಿಂದ, ಬುದ್ಧಿ ವಿಪರೀತವಾಗಿ ಪರಿಣಮಿಸುತ್ತದೆ. ಇದಕ್ಕೆ ನಿದರ್ಶನವಾಗಿ ಅಂತವರಲ್ಲೊಬ್ಬರು ರಾಮಾಯಣವನ್ನೆಲ್ಲಾ ಓದಿ, ರಾಮ, ಸೀತಾ, ಲಕ್ಷ್ಮಣ, ಭರತ, ಶತ್ರುಘ್ನ, ಹಾಗೆಯೇ ರಾವಣ, ಕುಂಭಕರ್ಣ, ತಾಟಕಿ, ಶೂರ್ಪನಖಾ ಮೊದಲಾದ ಪಾತ್ರಗಳೆಲ್ಲಾ ಕವಿನಿರ್ಮಿತವಾದ ಧರ್ಮಾಧರ್ಮಗಳನ್ನು ಬೋಧಿಸುವವೆಂದೂ, ಅದು ವಾಸ್ತವವಾದ ಚರಿತ್ರೆಯಲ್ಲವೆಂದೂ ಹೀಗೆ ಅಸಂಬದ್ಧವಾದ ಪ್ರಲಾಪವನ್ನು ಮಾಡುತ್ತಾ ಅಜ್ಞಾನಿಗಳಿಗೆ ಇನ್ನೂ ಭ್ರಮೆಯನ್ನುಂಟು ಮಾಡಿರುವದನ್ನು ಕಂಡಿರುವೆನು. ಅಂತವರಿಗೆ ಸತ್ಸಂಪ್ರದಾಯದ ಮೂಲಕ ಉಪದೇಶವು ದೊರಕಿದ್ದರೆ ಅವರು ಹಾಗೆ ಮಾಡುತ್ತಿರಲಿಲ್ಲವು. ಈ ಸಂದರ್ಭದಲ್ಲಿ ಮುಖ್ಯವಾಗಿ ನಾವು ಗಮನಿಸತಕ್ಕ ಇನ್ನೊಂದು ವಿಷಯವೂ ಉಂಟು. ಶಾಸ್ತ್ರಪರಿಚಯಕ್ಕೆ ಸತ್ಸಂಪ್ರದಾಯವು ಹೇಗೆ ಮುಖ್ಯವೋ, ಹಾಗೆಯೇ ಸತ್ಸಂಪ್ರದಾಯಕ್ಕೂ ಸಂಪೂರ್ಣಶಾಸ್ತ್ರಪರಿಚಯವು ಅತ್ಯಾವಶ್ಯಕವು. ಸತ್ಸಂಪ್ರದಾಯವುಂಟೆಂದು ಶಾಸ್ತ್ರಪರಿಚಯವಿಲ್ಲದವರನ್ನು ಆಚಾರ್ಯರನ್ನಾಗಿ ಮಾಡಕೂಡದು. ಆದುದರಿಂದ ಶಾಸ್ತ್ರಪರಿಚಯವು ಚೆನ್ನಾಗಿ ಉಳ್ಳ ಸತ್ಸಂಪ್ರದಾಯವೇ ಉಪಜೀವ್ಯವು. ಅಂತಹ

ಸ್ಥಿರೀಕರಣಭಾಗಸ್ಯ ಆವಶ್ಯಕತ್ವಕಥನಮ್

ಬಹುಕ್ಲೇಶಮಾಯ್ ಬುದ್ಧಿಚಲನ ಸಂಭಾವನೈಯುಂಡಾನ ಶಾಸ್ತ್ರ ಪರಿಶ್ರಮತ್ತಿಲ್ ಅನಧಿಕೃತರುಮಾಯ್ ಪರಮಾಸ್ತಿಕರುಮಾಯಿರುಪ್ಪಾರ್ಕ್ಕು ಇವ್ವುಪದೇಶಮೇ ಪ್ರಧಾನಮ್. ಮತ್ತು ಳಾರ್ಯ್ಕತ್ತಾ ಜಳ್ ತ್ರೆಳಿಕ್ಕೈ

ಸಂಪ್ರದಾಯ ಶುದ್ಧಿಯು, "ಶ್ರದ್ಧಾತವ್ಯಾ ಚಾತಕನ್ಯಾಯನಿಷ್ಠೈಃ" ಎಂದು, ಶ್ರದ್ಧೆಯಿಂದ ಏಕಾನ್ತಿಗಳು ಆದರಿಸತಕ್ಕದ್ದೆಂದು ಹೇಳಿ, ಅಂತಹ ದೇಶಿಕೇಂದ್ರರ ಪ್ರಸಾದದಿಂದ "**ಪ್ರಪನ್ನಃ ಪರಮಾತ್ಮಾನಂ ಪ್ರಾಪ್ನೋತಿ ಪರಮಂಪದಂ**" ಎಂದು ಹಿತೋಪದೇಶವನ್ನು ಮಾಡಿರುತ್ತಾರೆ.

ಸ್ಥಿರೀಕರಣ ಭಾಗದ ಆವಶ್ಯಕತೆಯ ಸಮರ್ಥನವು.

ಬಹು ಕ್ಲೇಶಮಾಯ್ - ಮನಸ್ಸಿಗೆ ತುಂಬಾ ತೊಂದರೆಯನ್ನುಂಟು ಮಾಡುವುದಾಗಿಯೂ, **ಬುದ್ಧಿಚಲನ ಸಂಭಾವನೈಯುಂಡಾನ** - ಅನೇಕ ಸಂದೇಹಗಳುಂಟಾಗುವದರ ಮೂಲಕ ಬುದ್ಧಿಗೆ ಚಾಂಚಲ್ಯವನ್ನುಂಟುಮಾಡುವ, **ಶಾಸ್ತ್ರಪರಿಶ್ರಮತ್ತಿಲ್** - ಶಾಸ್ತ್ರಜ್ಞಾನ ಹೊಂದುವುದರಲ್ಲಿ, **ಅನಧಿಕೃತರುಮಾಯ್** - ಅಧಿಕಾರವನ್ನು ಸಂಪಾದಿಸಿಕೊಳ್ಳದಿರುವ, **ಪರಮಾಸ್ತಿಕರುಮಾಯಿರುಪ್ಪಾರ್ಕು** - ನಾಸ್ತಿಕರಲ್ಲದೆ ದೇವರು ಒಬ್ಬನುಂಟೆಂದು ಹೇಳುವ ಶಾಸ್ತ್ರ ಪ್ರಾಮಾಣ್ಯದಲ್ಲಿ ಮಾತ್ರ ವಿಶ್ವಾಸವಿದ್ದು ಶಾಸ್ತ್ರಾಭ್ಯಾಸಕ್ಕೆ ಸೋಮಾರಿಗಳಾದವರಿಗೆ **ಇವ್ವುಪದೇಶಮೇ** - ಇಂತಹ ಹಿಂದೆ ಹೇಳಿದ ಉಪದೇಶವೇ, **ಪ್ರಧಾನಮ್** - ಮುಖ್ಯವಾದುದು. ಕೆಲವರು ತಾವಾಗಿಯೇ ಶಾಸ್ತ್ರಾಭ್ಯಾಸವನ್ನು ಮಾಡಲು ಶಕ್ತಿಯಿಲ್ಲದೆಯೋ ಅಥವಾ ಸಮಯವಿಲ್ಲದೆಯೋ ಕುಶಲತೆಯಿಲ್ಲದೆಯೋ ಅನಧಿಕಾರಿಗಳಾಗಿರಬಹುದು. ಅಂತವರುಗಳಿಗೆ ಸ್ವತಃ ಶಾಸ್ತ್ರಜ್ಞಾನವು "**ಶಾಸ್ತ್ರಜ್ಞಾನಂ ಬಹುಕ್ಲೇಶಂ ಬುದ್ಧೇಶ್ಚಲನ ಕಾರಣಂ। ಉಪದೇಶಾದ್ಧರಿಂ ಬುದ್ಧ್ವಾ ವಿರಮೇತ್ಸರ್ವಕರ್ಮಸು**" ಎಂದು ಹೇಳಿರುವ ಹಾಗೆ ಬಹು ಕ್ಲೇಶಕರವಾಗಿಯೂ ಬುದ್ಧಿ ಚಾಂಚಲ್ಯವನ್ನುಂಟುಮಾಡುವದಾಗಿಯೂ ಇರುತ್ತದೆಯಾದುದರಿಂದ, ಅಂತವರಿಗೆ ಹಿಂದಿನ ಉಪದೇಶವೇ ಸಾಕು ಎಂಬ ಭಾವವು. ಪ್ರಧಾನವೆಂದು ಹೇಳಿದುದರಿಂದ, ಅಪ್ರಧಾನವಾಗಿ ತಿಳಿದಷ್ಟು ಮಟ್ಟಿಗೆ ಈ ಸ್ಥಿರೀಕರಣದ ಭಾಗವ ಉಪದೇಶವನ್ನು ಮಾಡಿದರೂ ಮಾಡಬಹುದೆಂಬ ಭಾವವೂ ತೋರಿಬರುತ್ತವೆ. ಈ ಮುಮುಕ್ಷುಗಳು ಎರಡು ವಿಧವೆಂದು ವಿಕಲ್ಪಿಸಲ್ಪಟ್ಟಿತು. (೧) ತಾವಾಗಿಯೇ ಶಾಸ್ತ್ರಪರಿ

ಕ್ಕಾಗವುಮ್, ಕುತರ್ಕಙ್ಗಳಾಲೇ ಕಲಙ್ಗನಾರ್ಕ್ಕು ತ್ತೆಳಿವಿಕ್ಕೈಕ್ಕಾಗವುಮ್, ಸಮೀಚೀನ ಯುಕ್ತಿಗಳೋಡೆ ಕೇಳ್ಕ್ಕ ಪ್ರಾಪ್ತಮ್.

ಚಯ ಮಾಡಿಕೊಳ್ಳಲು ಶಕ್ತಿಯಿಲ್ಲದವರು. (೨) ಶಕ್ತಿಯುಳ್ಳವರು. ಅಥವಾ (೧) ಮಂದಬುದ್ಧಿಯುಳ್ಳವರು, ಮತ್ತು (೨) ಸೂಕ್ಷ್ಮಬುದ್ಧಿಯುಳ್ಳವರು. ಶಾಸ್ತ್ರ ಪರಿಚಯ ತಾವಾಗಿಯೇ ಮಾಡಿಕೊಳ್ಳದವರಿಗೇನೋ ಇಷ್ಟೇ ಸಾಕೆಂದು ಹೇಳಲ್ಪಟ್ಟಿತು. ಶಾಸ್ತ್ರಪರಿಚಯ ಮಾಡಿಕೊಳ್ಳತಕ್ಕವರಿಗೆ ಇದು ಅನಾವಶ್ಯಕವಲ್ಲವೋ, ಅವರೇ, ತಾವಾಗಿಯೇ ಶಾಸ್ತ್ರದಿಂದ ಗ್ರಹಿಸಬಹುದಲ್ಲಾ ಎಂದರೆ, ಹಾಗಲ್ಲವು. ಏಕೆಂದರೆ ಇಂತಹ ವಾದಗಳನ್ನು ತಾವೂ ಗ್ರಹಿಸಿ ಕುತರ್ಕಗಳಿಂದ ಸರಿಯಾದಭಿಪ್ರಾಯಗಳಿಲ್ಲದೆ ಶಂಕಾವಿಷ್ಟರಾದವರನ್ನು ಸಮೀಚೀನ ತರ್ಕಗಳಿಂದ ತಿದ್ದುವುದೂ ಆವಶ್ಯಕವೆಂದು ಹೇಳುತ್ತಾರೆ.

ಮತ್ತುಳ್ಳಾರ್ಕ್ಕು - ಇನ್ನು ಮಿಕ್ಕವರಿಗೆ ಎಂದರೆ ಶಾಸ್ತ್ರಪರಿಚಯ ಶಕ್ತಿಯುಳ್ಳವರಿಗೆ, **ತಾಙ್ಗಳ್ ತೆಳಿಗೈಕ್ಕಾಗವುಮ್** - ತಾವೂ ತಿಳಿದುಕೊಳ್ಳುವುದಕ್ಕಾಗಿಯೂ, ಹಾಗೆ ತಿಳಿದುಕೊಂಡ ನಂತರ, **ಕುತರ್ಕಙ್ಗಳಾಲೆ** - ಶಾಸ್ತ್ರವಿರುದ್ಧವಾದ ಬರೀ ತರ್ಕಗಳಿಂದ, **ಕಲಙ್ಗನಾರ್ಕ್ಕು** - ಬುದ್ಧಿಭ್ರಮೆ ಅಥವಾ ಬುದ್ಧಿಚಾಂಚಲ್ಯವುಂಟಾಗುವವರಿಗೆ, **ತೆಳಿವಿಕ್ಕೈಕ್ಕಾಗವುಮ್** - ಅಂತಹ ಸಂಶಯಗಳ ನಿವೃತ್ತಿಗಾಗಿ ಸರಿಯಾದ ಅಭಿಪ್ರಾಯಗಳನ್ನು ತಿಳಿಸುವದಕ್ಕಾಗಿಯೂ, **ಸಮೀಚೀನ ಯುಕ್ತಿಗಳೋಡು**–ಶಾಸ್ತ್ರಮರ್ಯಾದೆಯನ್ನುಲ್ಲಂಘಿಸದ ಸತ್ತರ್ಕಗಳ ಮೂಲಕ, **ಕೇಳ್ಕ್ಕ ಪ್ರಾಪ್ತಮ್** - ಈ ಉಪದೇಶವನ್ನು ಕೇಳುವದು ಉಚಿತವು. ತಾವೇ ಸ್ವತಃ ಶಾಸ್ತ್ರಪರಿಚಯ ಹೊಂದುವ ಯೋಗ್ಯತೆಯುಳ್ಳವರೂ ಕೂಡ, ಏನು ಹೇಳಿರುತ್ತಾರೆ ಎಂದು ತಾವೇ ಗ್ರಹಿಸಿ, ಅದು ಸತ್ತರ್ಕಗಳಿಂದ ಯುಕ್ತವಾದುದಾಗಿದ್ದ ಪಕ್ಷದಲ್ಲಿ ಶಾಸ್ತ್ರಪ್ರಮಾಣಗಳನ್ನುಲ್ಲಂಘಿಸಿದ ಬರೀ ಶುಷ್ಕತರ್ಕಗಳಿಂದ ಸರಿಯಾದಭಿಪ್ರಾಯಗಳಿಲ್ಲದವರನ್ನು ತಿದ್ದಲು ಸಹಕಾರಿಯಾಗುವದರಿಂದ ಅವರೂ ಕೂಡ ಈ ಸ್ಥಿರೀಕರಣ ಭಾಗವನ್ನು ಪರಿಗ್ರಹಿಸತಕ್ಕವರಾಗಿರುತ್ತದೆ ಎಂದು ಹೇಳುತ್ತಾರೆ. ಇದರಿಂದ ತಾವು ಮುಂದೆ ಹೇಳುವ ವಾದಗಳೆಲ್ಲಾ ಶಾಸ್ತ್ರಪ್ರಮಾಣಗಳಿಗೆ ವಿರೋಧವಿಲ್ಲದ ತರ್ಕಗಳಾದುದರಿಂದ ಸತ್ತರ್ಕಗಳೆನಿಸಿ ಉಪಾದೇಯಗಳೆಂದೂ, ಅವಕ್ಕೆ ವಿರುದ್ಧವಾದುವು ಶಾಸ್ತ್ರಪ್ರಮಾಣಗಳಿಗೆ ವಿರುದ್ಧವಾದುದರಿಂದ ಕುತರ್ಕಗಳಾಗಿ ಪರಿಗ್ರಾಹ್ಯಗಳಲ್ಲವೆಂದೂ, ಹೇಳಲು ಹೊರಟು, ಅದಕ್ಕೆ ಮನುಸ್ಮೃತಿಯ ಪ್ರಮಾಣವನ್ನು ತೋರಿಸುತ್ತಾರೆ.

ಸತ್ತರ್ಕ ಕುತರ್ಕ ನಿರೂಪಣಮ್

(೧) "ಆರ್ಷಂ ಧರ್ಮೋಪದೇಶಂಚ ವೇದಶಾಸ್ತ್ರಾಽವಿರೋಧಿನಾ । ಯಸ್ತರ್ಕೇಣಾನುಸಂಧತ್ತೇ ಸಧರ್ಮಂ ವೇದ ನೇತರಃ" ಎಂಬ್ಗರಪಡಿಯೇ

ಸತ್ತರ್ಕ ಕುತರ್ಕಗಳ ನಿರೂಪಣವು.

"**ಆರ್ಷಂ** - ಋಷಿ ಎಂದರೆ ವೇದವು, ಆದುದರಿಂದ ಆರ್ಷಂ ಎಂದರೆ ವೇದಾರ್ಥವನ್ನೂ, **ಧರ್ಮೋಪದೇಶಂ ಚ** – ಆ ವೇದೋಪಬೃಹ್ಮಣಗಳಾದ ಸ್ಮೃತೀತಿಹಾಸಾದಿಗಳಲ್ಲಿರುವ ಮನ್ವಾದಿ ಧರ್ಮೋಪದೇಶಗಳನ್ನೂ ಕೂಡ, ಅಥವಾ **ಆರ್ಷಂ** ಎಂಬುದನ್ನು **ಧರ್ಮೋಪದೇಶಂ** ಎಂಬುದಕ್ಕೆ ವಿಶೇಷಣವಾಗಿ ಭಾವಿಸಿದರೆ, ಆಗ, **ಆರ್ಷಂ** - ಋಷಿಪ್ರೋಕ್ತವಾದ, **ಧರ್ಮೋಪದೇಶಂ ಚ** - ಮನ್ವಾದಿ ಧರ್ಮಶಾಸ್ತ್ರಗಳಲ್ಲಿ ಹೇಳಿರುವದನ್ನಾದರೋ, **ಯಃ** - ಯಾವನು, **ವೇದಶಾಸ್ತ್ರಾಽವಿರೋಧಿನಾ** – ವೇದಶಾಸ್ತ್ರಾಭಿಪ್ರಾಯಕ್ಕೆ ವಿರೋಧವಿಲ್ಲದಂತೆ, **ತರ್ಕೇಣ** - ಸಮೀಚೀನವಾದ ವಾದದಿಂದ, **ಅನುಸಂಧತ್ತೇ** - ಅನುಸಂಧಾನ ಮಾಡುತ್ತಾನೋ, **ಸಃ** - ಅವನು, **ಧರ್ಮಂವೇದ** ಧರ್ಮಸ್ವರೂಪವನ್ನು ತಿಳಿದವನು. ಶಾಸ್ತ್ರದ ವಿಧಿ ನಿಷೇಧಾಭಿಪ್ರಾಯಗಳನ್ನು ಚೆನ್ನಾಗಿ ತಿಳಿದವನು. **ಇತರಃ** - ವೇದಶಾಸ್ತ್ರಕ್ಕೆ ವಿರೋಧವಿಲ್ಲದ ತರ್ಕದಿಂದ ಅನುಸಂಧಾನ ಮಾಡದವನು **ನ** - ಧರ್ಮವನ್ನು ತಿಳಿದವನಲ್ಲವು ಶ್ರುತಿಸ್ಮೃತೀತಿಹಾಸಗಳು ಪರಸ್ಪರ ವಿರುದ್ಧವಿಲ್ಲದೆ ಇರುವುವು. ಶ್ರುತಿ ಪ್ರತಿಪಾದಿತಾರ್ಥಗಳೇ, ಸ್ಮೃತಿ ಇತಿಹಾಸ ಪುರಾಣಗಳಲ್ಲೂ ಉಪಪಾದಿತಗಳಾಗಿವೆ. ಜ್ಞಾನಕ್ಕೆ ತರ್ಕ ಮೂಲಕ ಜಿಜ್ಞಾಸವು ಆವಶ್ಯಕವು. ಹೀಗೆ ತರ್ಕ ಮಾಡುವಾಗ, ವಾದವು ವೇದಾರ್ಥಕ್ಕೆ ವಿರುದ್ಧವಾದುದಾಗಿರಕೂಡದು. ಇಂತಹ ತರ್ಕವು ಸತ್ತರ್ಕವು ಹೀಗಲ್ಲದೆ, ವೇದಾರ್ಥವನ್ನು ದೂರೀಕರಿಸಿ ಬರೀ ಶುಷ್ಕ ತರ್ಕದಿಂದಲೇ ತತ್ವ ನಿರ್ಧಾರಣೆ ಮಾಡಲು ಹೊರಡುವದು ಕುತರ್ಕವು. ಅಂತವನಿಗೆ "**ಧರ್ಮಸ್ಯ ತತ್ವಂ ನಿಹಿತಂ ಗುಹಾಯಾಂ**" ಧರ್ಮದ ತತ್ವವು ಗುಹೆಯಲ್ಲಿ ಅಡಗಿಕೊಂಡಿತು. ಆದುದರಿಂದಲೇ ಶ್ರೀ ವ್ಯಾಸರು "**ತರ್ಕಾಽಪ್ರತಿಷ್ಠಾನಾತ್**" ಎಂಬ ಸೂತ್ರದಲ್ಲಿ ಬರೀ ತರ್ಕದಿಂದ ಯಥಾರ್ಥಜ್ಞಾನವು ಪ್ರತಿಷ್ಠಿತವಾಗುವುದಿಲ್ಲವೆಂದು ಹೇಳಿರುತ್ತಾರೆ. ಕೆಲವು

---

(೧) ಮನುಸ್ಮೃತಿ ೧೨. ೧೦೬.

ಇವ್ವರ್ಥಂಗಳೈ ಸಮೀಚೀನ ತರ್ಕಙ್ಗಳಾಲೆ ತೆಳಿಯಾದವರ್‌ಗಳ್, (೧) "ಕಾಣಾದ ಶಾಕ್ಯಪಾಷಂಡೈ ಸ್ತ್ರಯೀಧರ್ಮೋ ವಿಲೋಪಿತಃ" ಎಙ್ಗಿರಪಡಿಯೇ ಹೈತುಕರಾಯ್ ವೇದವಿರೋಧಿತತ್ವಙ್ಗಳೈ ಇಟ್ಟು ಪ್ರಾಮಾಣಿಕಾರ್ಥಙ್ಗಳೈ ಅಪಹರಿಪ್ಪರ್‌ಗಳ್.

ಮಹರ್ಷಿಗಳು ಸ್ಮೃತಿ ಪುರಾಣಗಳ ಮೂಲಕ ಉಪದೇಶ ಮಾಡಿರುತ್ತಾರೆ. ಆದರೆ ವೇದಶಾಸ್ತ್ರ ವಿರೋಧಿನಾ ಮಾಡಲಿಲ್ಲವು. ವೇದಶಾಸ್ತ್ರಕ್ಕೆ ವಿರುದ್ಧವಾದುದರಿಂದ ಅನುಪಾದೇಯವು. ಆ ಕಾರಣದಿಂದಲೇ ಪ್ರಜಾಪತಿಸ್ಮೃತಿಯು ಚತುರ್ಮುಖ ಬ್ರಹ್ಮಪ್ರೋಕ್ತವಾದರೂ ಉಪಾದೇಯುವಲ್ಲವು. ಕಾಪಿಲ ಸಾಂಖ್ಯತತ್ವವೂ ಕೂಡ ಗ್ರಾಹ್ಯವಲ್ಲವು ಬೃಹಸ್ಪತ್ಯಾಚಾರ್ಯರು ಅಸುರ ಮೋಹನಾರ್ಥವಾಗಿ ನಾಸ್ತಿಕವಾದವನ್ನು ಹೇಳಿದರು. ಹಾಗೆಯೇ ತಾಮಸ ರಾಜಸ ಪುರಾಣಗಳೂ ಉಪಾದೇಯಗಳಲ್ಲವು. **ಎಙ್ಗಿರಪಡಿಯೇ** - ಎಂದು ಹೇಳಿರುವ ಹಾಗೆ, **ಇವ್ವರ್ಥಙ್ಗಳೈ** - ಈ ಶ್ರುತಿ ಸ್ಮೃತಿಗಳಲ್ಲಿ ಪ್ರತಿಪಾದಿಸಿರುವ ಅಭಿಪ್ರಾಯಗಳನ್ನು, **ಸಮೀಚೀನ ತರ್ಕಙ್ಗಳಾಲೆ** - ಶಾಸ್ತ್ರವಿರುದ್ಧವಲ್ಲದ ಒಳ್ಳೇ ತರ್ಕಗಳಿಂದ, **ತೆಳಿಯಾದವರ್** - ತಿಳಿದುಕೊಳ್ಳದಿರುವವರು, "**ಕಾಣಾದ** - ತಾರ್ಕಿಕರು, **ಶಾಕ್ಯ** - ಬೌದ್ಧರು, **ಪಾಷಂಡೈಃ** - ಪಾಷಂಡಿಗಳು ಇವರುಗಳಿಂದ, **ತ್ರಯೀಧರ್ಮಃ** - ವೇದಧರ್ಮವು, **ವಿಲೋಪಿತಃ** - ನಷ್ಟವನ್ನು ಹೊಂದಿತು" **ಎಙ್ಗಿರಪಡಿಯೇ** - ಎಂದು ಹೇಳಿರುವ ಹಾಗೆ, **ಹೈತುಕರಾಯ್** - ಶುಷ್ಕತಾರ್ಕಿಕರಾಗಿ, ಬರೀ ಹೇತುಗಳ ಮೂಲಕ ಅನುಮಾನ ತರ್ಕಗಳನ್ನು ಹೇಳುವವರಾಗಿ, ಹೇಗೆಂದರೆ, **ಜಗನ್ಮಿಥ್ಯಾ ದೃಶ್ಯತ್ವಾತ್** - ಕಣ್ಣಿಗೆ ಪ್ರತ್ಯಕ್ಷವಾಗಿ ಕಾಣುವ ಹೇತುವಿನಿಂದ ಜಗತ್ತು ಮಿಥ್ಯೆಯು, ಇಂತಹ ಅನುಮಾನ ತರ್ಕವನ್ನು ಹೇಳುವದು, **ವೇದವಿರೋಧ ತತ್ವಙ್ಗಳೈ ಯಿಟ್ಟು** - ವೇದ ವಿರುದ್ಧವಾದ ಅಭಿಪ್ರಾಯಗಳನ್ನು ಮುಂದುಮಾಡಿಕೊಂಡು **ಪ್ರಾಮಾಣಿಕಾರ್ಥಙ್ಗಳೈ** - ಶ್ರುತಿಪ್ರತಿಪಾದಿತಗಳಾದ ನಿಶ್ಚಯವಾದ ಅಭಿಪ್ರಾಯಗಳನ್ನು, **ಅಪಹರಿಪ್ಪರ್‌ಗಳ್** - ಅಪಹರಿಸುವರು. ಕಾಣಾದ, ಶಾಕ್ಯರ ಸಿದ್ಧಾಂತಗಳು ಹೇಗೆ ಅನುಪಾದೇಯವೆಂಬುದಕ್ಕೆ ಸಾರನಿಷ್ಕರ್ಷ ಗ್ರಂಥಕಾರವನ್ನು ಪರಾಂಬರಿಶಬಹುದು. ಪಾಷಂಡಿಗಳು ಎಂತವರೆಂದರೆ:— ಭಾಗವತದಲ್ಲಿ,

---

(೧) ಅತ್ರಿಸ್ಮೃತಿ.

Permanent

"ವಿಷ್ಣೋರನ್ಯಂ ಪರತ್ವೇನ ಚಿಂತಯಾನೋಹ್ಯಚೇತನಃ ।
ಸಪಾಷಂಡೀತು ವಿಜ್ಞೇಯಃ ಸ್ಸರ್ವಕರ್ಮ ಬಹಿಷ್ಕೃತಃ ॥"

ವಿಷ್ಣುವಿಗಿಂತ ಬೇರೆಯಾದ ಪರವಸ್ತುವುಂಟೆಂದು ಯಾವನು ಚಿಂತಿಸುವನೋ ಅವನು ಅಚೇತನಕ್ಕೆ ಸಮಾನನು. ಆತನನ್ನು ಪಾಷಂಡಿ ಎಂದು ತಿಳಿಯತಕ್ಕದ್ದು. ಸಮಸ್ತ ಕರ್ಮಗಳಿಗೂ ಬಾಹಿರನು. ಪಾದ್ಮಪುರಾಣದಲ್ಲಿ,

"ಯೇತು ಸಾಮಾನ್ಯಭಾವೇನ ಮನ್ಯಂತೇ ಪುರುಷೋತ್ತಮಂ ।
ತೇವೈ ಪಾಷಂಡಿನೋ ಜ್ಞೇಯಾ ಸ್ಸರ್ವಕರ್ಮ ಬಹಿಷ್ಕೃತಾಃ ।"

ಯಾರು ಪುರುಷೋತ್ತಮನನ್ನು ಸಾಮಾನ್ಯ ಚೇತನನೆಂಬ ಭಾವನೆಯಿಂದ ತಿಳಿಯುತ್ತಾರೋ ಅವರೇ ಪಾಷಂಡಿಗಳು, ಸಮಸ್ತ ಕರ್ಮಗಳಿಗೂ ಹೊರಗಿರುವವರಾದವರು ಎಂದು ತಿಳಿಯತಕ್ಕದ್ದು, "ನರಕಾರ್ಹಾ ನರಾಧಮಾಃ" ಎಂದು ನಾಲ್ಕನೆಯ ಪಾದದ ಪಾಠಾಂತರವು. ಪ್ರಾಜಾಪತ್ಯ ಸ್ಮೃತಿ ಮತ್ತು ಬೃಹನ್ನಾರದೀಯದಲ್ಲಿ,

ಯಸ್ಸ್ವಧರ್ಮಪರಿತ್ಯಾಗೀ ಪಾಷಂಡೀತ್ಯುಚ್ಯತೇ ಬುಧೈಃ ।
ತತ್ಸಂಸರ್ಗೀ ತತ್ಸಮ ಸ್ಸ್ಯಾತ್ತಾವುಭಾವಪಿ ಪಾಪಿನೌ ॥

ಯಾವನು ತನ್ನ ಸ್ವಂತ ಧರ್ಮವನ್ನು ತ್ಯಾಗ ಮಾಡುವನೋ ಆತನು ಪಂಡಿತರಿಂದ ಪಾಷಂಡಿ ಎಂದು ಹೇಳಲ್ಪಡುವನು. ಆತನೊಂದಿಗೆ ಸಂಸರ್ಗವನ್ನು ಹೊಂದಿದವನೂ ಆತನಿಗೆ ಸಮನಾಗಿ ಪಾಷಂಡಿಯೇ ಆಗುವನು. ಈ ಇಬ್ಬರೂ ಪಾಪಿಗಳೇ. ವಾರಾಹಪುರಾಣದಲ್ಲಿ,

ಕುಬುದ್ಧಿ ರಚಿತಂ ಶಾಸ್ತ್ರಂ ಪಠಿತ್ವಾ ಯೇ ಕಲೌಯುಗೇ ।
ನ ಕುರ್ವಂತಿ ವಿನಿಂದಂತಿ ಯಜ್ಞಾನ್ ವರ್ಣಾಶ್ರಮೋಚಿತಾನ್ ॥
ತೇವೈ ಪಾಷಂಡಿನೋ ಜ್ಞೇಯಾ ಸ್ಸರ್ವಕರ್ಮಸುಗರ್ಹಿತಾಃ ।
ತೇಷಾಂ ಸಂಭಾಷಣಂ ಸ್ಪರ್ಶಂ ಪ್ರಮಾದೇನಾಪಿ ನಾಚರೇತ್ ॥

ಕಲಿಯುಗದಲ್ಲಿ ಕೆಟ್ಟ ಬುದ್ಧಿಯುಳ್ಳವರು ಬರೆದ ಶಾಸ್ತ್ರವನ್ನು ಪಠಿಸಿ, ಯಜ್ಞಗಳನ್ನೂ ವರ್ಣಾಶ್ರಮಗಳಿಗೆ ಯೋಗ್ಯವಾದ ಧರ್ಮಗಳನ್ನೂ ಆಚರಿಸದೆ, ಅವುಗಳನ್ನು ಯಾರು ಹೆಚ್ಚಾಗಿ ದೂಷಿಸುತ್ತಾರೋ, ಅವರು ಸಮಸ್ತ ಕರ್ಮಗಳಿಗೂ ಅಯೋಗ್ಯರು, ಅವರೇ ಪಾಷಂಡಿಗಳು ಎಂದು ತಿಳಿಯತಕ್ಕದ್ದು. ಅವರೊಂದಿಗೆ ಸಂಭಾಷಣವನ್ನಾಗಲಿ ಸಂಸರ್ಗವನ್ನಾಗಲಿ ಪ್ರಮಾದದಿಂದಲೂ ಕೂಡ ಮಾಡತಕ್ಕದ್ದಲ್ಲವು. ಆಶ್ವಮೇಧಿಕದಲ್ಲಿ,

ಕುಶೀಲೈಃ ಕೃತಶಾಸ್ತ್ರಾಣಿ ಯೇ ಪಠಿತ್ವಾ ನರಾಧಮಾಃ ।
ವಿಪ್ರಾನ್ನಿಂದಂತಿ ಯಜ್ಞಾಂಶ್ಚ ವೃಥಾಜೀವಂತಿ ತೇ ನರಾಃ ॥

ಕೌತುಸ್ಕೃತ್ಯೈಃ ಪ್ರಾಪ್ತಾನರ್ಥಾನಾಹ.

ಇನ್ನಪಹಾರಮ್ ವಿಭೂತಿಯೈಯುಮ್ ವಿಭೂತಿಮಾನೈಯುಮ್...ತ್ತ

ದುಷ್ಟಾಚಾರವುಳ್ಳವರು ಬರೆದ ಶಾಸ್ತ್ರಗಳನ್ನು ಪಠಿಸಿ, ಪಾಷಂಡಿಗಳಂತ ಅಧಮ ಪುರುಷರು ಬ್ರಾಹ್ಮಣರನ್ನೂ ಯಜ್ಞಗಳನ್ನೂ ನಿಂದಿಸುವರು, ಅವರ ...ವು ವ್ಯರ್ಥವು. ವಿಷ್ಣುಪುರಾಣದಲ್ಲಿ, (೬.೧.೫೧)

"ಕಿಂ ದೇವೈಃ ಕಿಂದ್ವಿಜೈ ರ್ವೇದೈಃ ಕಿಂ ಶೌಚೇನಾಂಬು ಜನ್ಮನಾ।
ಇತ್ಯೇವಂ ವಿಪ್ರ ವಕ್ಷ್ಯಂತಿ ಪಾಷಂಡೋಪಹತಾ ಜನಾಃ ॥
ಕಲೌ ಜಗತ್ಪತಿಂ ವಿಷ್ಣುಂ ಸರ್ವಸ್ರಷ್ಟಾರ ಮೀಶ್ವರಂ।
ನಾರ್ಚಯಿಷ್ಯಂತಿ ಮೈತ್ರೇಯ ಪಾಷಂಡೋಪಹತಾ ಜನಾಃ ॥"

"ದೇವತೆಗಳಿಂದೇನು, ಬ್ರಾಹ್ಮಣರಿಂದೇನು, ವೇದಗಳಿಂದೇನು, ನೀರಿನಲ್ಲಿ ಸ್ನಾನದಿಂದೇನು, ಹೀಗೆಲ್ಲಾ ಓ ಬ್ರಾಹ್ಮಣವರ್ಯರಾದ ಮೈತ್ರೇಯರೇ ಪಾಷಂಡಿಗಳು ಆಕ್ಷೇಪಿಸುವರು. ಕಲಿಯುಗದಲ್ಲಿ ಜಗತ್ಪತಿಯಾಗಿ ಸರ್ವ ಸೃಷ್ಟಿಕ್ರಮವನ್ನೂ ನಡೆಸುವ ಸರ್ವನಿಯಾಮಕನಾಗಿ ಈಶ್ವರನೆನಿಸುವ ಶ್ರೀ ಮಹಾವಿಷ್ಣುವನ್ನು ಅರ್ಚಿಸುವದಿಲ್ಲವು." ಮಿತಾಕ್ಷರ ವಾಕ್ಯವು,

"ನರಶಿರಃ ಕಪಾಲಾದಿ ಶ್ರುತಿಬಾಹ್ಯಲಿಙ್ಗಧಾರಣಂ ಪಾಷಣ್ಡಮ್"

ಮನುಷ್ಯನ ತಲೆಬುರುಡೆ ಕಪಾಲವೇ ಮೊದಲಾದ ಶ್ರುತಿ ವಿರುದ್ಧವಾದ ಚಿಹ್ನೆಗಳನ್ನು ಧರಿಸುವುದೇ ಪಾಷಂಡವು. ಪಾಷಂಡವು ಯಾನನಲ್ಲುಂಟೋ ಆತನು ಪಾಷಂಡಿಯು.

ಹೀಗೆಲ್ಲಾ ಹೇಳಿರುವದರಿಂದ ಪಾಷಂಡಿಗಳೆಂದರೆ ಪಾಶಾನ್ ಷಣ್ಡಂತಿ ಎಂಬ ವ್ಯುತ್ಪತ್ತಿಯಿಂದ ಅಸಚ್ಛಾಸ್ತ್ರಗಳನ್ನು ಹೇಳುವ ವೇದಬಾಹ್ಯರು. ಇವರಗಳಿಗೆ ವಾದಮಾತ್ರ ಮುಖ್ಯವೇ ವಿನಾ ಶಾಬ್ದಪ್ರಮಾಣ ಮುಖ್ಯವಲ್ಲವು. ಆದುದರಿಂದ ವೇದವಿರುದ್ಧ ವಾದಗಳ ಮೂಲಕ ಪ್ರಾಮಾಣಿಕಾರ್ಥಗಳನ್ನು ಅಪಹರಿಸಿಬಿಡುತ್ತಾರೆಂದು ಹೇಳಿದರು. ಮುಂದೆ ಈ ಅಪಹಾರವು ಎರಡು ವಿಧವೆಂದು ಹೇಳಿ ಅವುಗಳನ್ನು ತಿಳಿಸುತ್ತಾರೆ.

ಈ ಕುವಾದಿಗಳಿಂದುಂಟಾಗುವ ಅನರ್ಥಗಳನ್ನು ಹೇಳುತ್ತಾರೆ.

ಇನ್ನಪಹಾರಮ್ - ಈ ಕುವಾದಿಗಳು ತಮ್ಮ ಕುತರ್ಕದಿಂದ ಮಾಡುವ

ವಿರಣ್ಡುವಗೈ ಯಾಯಿರುಕ್ಕುಮ್, ಅದಿಲ್ ವಿಭೂತಿ ಮಾನೈ ಅಪಹ ಕ್ಕೈ ಯಾವದು ? ಶ್ರಿಯಃಪತಿಯಾನ ಸರ್ವೇಶ್ವರನೈ ಇಲ್ಲೈ ಎನ್ರು ದಲ್, ವೇರೊರುತ್ತನೈ ಈಶ್ವರನಾಗ (ಕ್ಕಾಟ್ಟಿ) ಕ್ಕಟ್ಟಿ ಸರ್ವೇಶ್ವರನೈ ವಿಭೂತಿ ಕೋಟಿಯಿಲೆ ವೈತ್ತಲ್ ಶೈಯ್‍ಗೈ.

ವಿಭೂತಿಯೈ ಅಪಹರಿಕ್ಕೈಯಾವದು ? ವಿಭೂತಿಯೈ ಒರುಮುಖ ತ್ತಾಲೇ ಯಿಲ್ಲೈ ಎನ್ನುದಲ್, ಉಣ್ಡಾಕ್ಕಿ ಈಶ್ವರನೋಡು ಸಂಬಂಧ

ಅಪಹಾರವು, (೧) ವಿಭೂತಿಯೈಯುಮ್ - ಸರ್ವೇಶ್ವರನ ನಿಯಾಮ್ಯವರ್ಗವಾದ ಸರ್ವ ವಿಶ್ವವನ್ನೂ, (೨) ವಿಭೂತಿಮಾನೈಯುಮ್ - ಈ ನಿಯಾಮ್ಯವರ್ಗ ವನ್ನು ನಿಯಮಿಸುವ ಸರ್ವೇಶ್ವರನನ್ನೂ, ಪತ್ತಿ - ಕುರಿತದ್ದಾಗಿ, ಇರಣ್ಡುವಗೈ ಯಾಯಿರುಕ್ಕುಮ್ - ಎರಡು ವಿಧವಾಗಿರುತ್ತದೆ. ಆ ಎರಡು ವಿಧ ಅಪಹಾರ ಗಳನ್ನು ವಿಶದೀಕರಿಸುತ್ತಾರೆ:—(೧) ಅದಿಲ್ - ಇವೆರಡರಲ್ಲಿ, ವಿಭೂತಿ ಮಾನೈ - ಸರ್ವ ವಿಭೂತಿಗೂ ನಿಯಾಮಕನಾಗಿರುವವನನ್ನು, ಅಪಹರಿಕ್ಕೈ ಯಾವುದು - ಅಪಹರಿಸುವುದೆಂದರೇನು ? ಶ್ರಿಯಃಪತಿಯಾದ ಸರ್ವೇಶ್ವರನು, ಇಲ್ಲೈ ಎನ್ರುದಲ್ - ಇಲ್ಲವೆಂದು ಹೇಳುವದಾಗಲಿ, ಇದರಿಂದ ನಾಸ್ತಿಕರೂ ನಿರೀಶ್ವರ ಮೀಮಾಂಸಕರೂ ಹೇಳಲ್ಪಟ್ಟರು; ಅಥವಾ, ವೇರೊರುತ್ತನೈ - ಬೇರೆಯೊಬ್ಬನನ್ನು, ಈಶ್ವರನಾಗಕ್ಕಟ್ಟಿ - ಈಶ್ವರನೆಂದು ಕಲ್ಪಿಸಿ ಸರ್ವೇಶ್ವರ ನಾದ ಶ್ರೀ ಮಹಾವಿಷ್ಣುವನ್ನು, ವಿಭೂತಿಕೋಟಿಯಿಲೆ - ಆ ಕಲ್ಪಿಸಿದ ಈಶ್ವರ ನಿಗೆ ನಿಯಾಮ್ಯ ವರ್ಗದಲ್ಲಿ, ವೈತ್ತಲ್ ಶೆಯ್‍ಗೈ - ಇಡೋಣವು ಅಥವಾ ಪ್ರವೇಶಮಾಡಿಸೋಣವು. ಇದರಿಂದ ಶೈವ ಪಾಶುಮತಗಳು ಹೇಳಲ್ಪಟ್ಟವು. ಬ್ರಹ್ಮ ವಿಷ್ಣು ಶಿವರಿಗೆ ನಿಯಾಮಕನಾಗಿ ಪರಮಶಿವನುಂಟೆಂಬ ಅದ್ವೈತ ಪ್ರಭೇದವೂ ಇಲ್ಲಿ ಹೇಳಲ್ಪಟ್ಟಿತು. ಪರದೇವತಾ ಪಾರಮಾರ್ಥ್ಯಾಧಿಕಾರದಲ್ಲಿ ಈ ಅಭಿಪ್ರಾಯಗಳೆಲ್ಲಾ ನಿರಸನ ಮಾಡಲ್ಪಟ್ಟವೆ.

(೨) ವಿಭೂತಿಯನ್ನು ಅಪಹರಿಸೋಣವೆಂದರೇನು ? ವಿಭೂತಿಯೈ - ನಿಯಾಮ್ಯವರ್ಗವನ್ನು, ಒರು ಮುಖತ್ತಾಲೆ - ಒಂದು ಪ್ರಕಾರವಾಗಿ, ಯಿಲ್ಲೈ ಎನ್ರುದಲ್ - ಇಲ್ಲವೆಂದು ಹೇಳೋಣವಾಗಲಿ, ವ್ಯಾವಹಾರಿಕವಾಗಿ ಸತ್ಯವೆಂದೂ ಪಾರಮಾರ್ಥಿಕವಾಗಿ ಮಿಥ್ಯೆಯೆಂದೂ ಅದ್ವೈತಿಗಳು ಹೇಳುವರು, ಜ್ಞಾನ ಕಾಲದಲ್ಲಿ ವಿಷಯವು ಗತಿಸಿಹೋಗುವುದರಿಂದ ವಿಭೂತಿಯು ಇಲ್ಲವೆಂದು ಬೌದ್ಧರು ಹೇಳುವರು; ಅಥವಾ, ಉಣ್ಡಾಕ್ಕಿ - ವಿಭೂತಿಯುಂಟೆಂದು ಹೇಳಿ, ಈಶ್ವರ

ಮರುತ್ತು ಸ್ವತಂತ್ರಮ್ ಎನ್ರುದಲ್, ಪರತಂತ್ರಮಾಕ್ಕಿ ತನ್ನೋಡು ಪಿರರೋಡು ಪಣ್ಣೈಪ್ಪುದಲ್ ಶೆಯ್‌ಗೈ.

ಹೈತುಕ ಸಂಸರ್ಗೋ ಅವಶ್ಯಪರಿಹರಣೀಯಃ. ತತ್ರಪ್ರಮಾಣಾನಿ.

ಇವ್ವಪಹಾರಙ್ಗಳಿಲ್ ಏದೇನು ಮೊನ್ರು ಸ್ವರುಪತ್ತಿಲ್ ಮೃದುಪ್ರಜ್ಞನಾಯ್ ಆತ್ಮಸಮರ್ಪಣಂ ಪಣ್ಣಿನವನುಕ್ಕು ವಿಪರೀತ ಸಂಸರ್ಗ
Sharpness ಇಲ್ಲದ ಜ್ಞಾನ. ಬದ್ಧಿ opposite ...

ನೋಡು ಸಂಬಂಧಮರುತ್ತು-ಈಶ್ವರನೊಂದಿಗೆ ಅದಕ್ಕೆ ಸಂಬಂಧವನ್ನು ಛೇದಿಸಿ, ಸ್ವತಂತ್ರಮೆನ್ರುದಲ್ - ವಿಭೂತಿಯು ಈಶ್ವರನಿಗೆ ವಶವಲ್ಲವು, ಅದು ಸ್ವತಂತ್ರವು, ಎನ್ರುದಲ್ - ಎಂದು ಹೇಳೋಣವು, ಸೇಶ್ವರ ಮೀಮಾಂಸಕರ ಮತವು. ಚೇತನನು ಏನೂ ಮಾಡುವದಿಲ್ಲವು, ಪ್ರಕೃತಿಯೇ ಎಲ್ಲಾ ಮಾಡುತ್ತದೆ ಎಂಬುದು ಸಾಂಖ್ಯರ ಮತವು; ಪರತಂತ್ರಮಾಕ್ಕಿ - ಈ ವಿಭೂತಿಯೆಲ್ಲಾ ಪರತಂತ್ರವೆಂದು ಹೇಳಿ, ತನ್ನೋಡು - ತನಗೂ, ಪಿರರೋಡು - ಇತರರಿಗೂ, ಪಣ್ಣೈಪ್ಪುದಲ್ - ಶೇಷಭೂತವಾಗಿ ಅಧೀನವೆಂದು ಪ್ರತಿಪಾದನವು, ಶೈಯ್‌ಗೈ - ಹೀಗೆ ಮೂರು ವಿಧವಾಗಿ ಹೇಳಿ ಅಪಹರಿಸುತ್ತಾರೆಂಬ ಭಾವವು; ಈ ಮೂರನೆಯ ವಿಧಕ್ಕೆ ನಿದರ್ಶನವು-ಚೇತನನಿಗೆ ಅಧೀನವೆಂಬುದು ಪಾಶುಮತ ಮತ ಸಾಂಖ್ಯ ಮತ ವಿಷಯವು; ಇತರರಿಗೆ ಶೇಷಭೂತವೆನ್ನುವುದು ಶೈವ ಮತವು. ವಿಭೂತಿಯ ಅಪಹಾರವು ಮೂರು ವಿಧವಾಗಿ ನಡೆಯಬಹುದೆಂದು ತಿಳಿಸಿದರು :—(೧) ವಿಭೂತಿಯೇ ಒಂದು ವಿಧವಾಗಿ ಇಲ್ಲವೆಂದು ಹೇಳಬಹುದು. ಪಾರಮಾರ್ಥಿಕವಾಗಿ ವಿಭೂತಿಯೇ ಇಲ್ಲವೆಂದು ಹೇಳುವದು. (೨) ವಿಭೂತಿಯೇನೋ ಉಂಟು, ಆದರೆ ಅದು ಸ್ವತಂತ್ರವು, ಈಶ್ವರನಿಗೆ ಸಂಬಂಧಿಸಿದುದು ಅಲ್ಲವೆಂದು ಹೇಳುವದು. (೩) ಅದು ಪರತಂತ್ರವೇನೋ ಅಹುದು, ಜೀವನಿಗೆ ಪರತಂತ್ರವೆಂದು ಹೇಳುವರು ಅಥವಾ ಇತರರಿಗೂ ಪರತಂತ್ರವೆಂದು ಹೇಳುವುದು.

ಹೈತುಕರೊಂದಿಗೆ ಸಂಸರ್ಗವನ್ನು ಮುಖ್ಯವಾಗಿ ಬಿಡತಕ್ಕದ್ದು. ಇದಕ್ಕೆ ಪ್ರಮಾಣಗಳು.

ಇವ್ವಪಹಾರಙ್ಗಳಿಲೇ - ಈ ಎರಡು ವಿಧ ಅಪಹಾರಗಳಲ್ಲೂ, ಏದೇನುಮೊನ್ರು - ಯಾವುದಾದರೂ ಒಂದು, ಸ್ವರೂಪತ್ತಿಲ್ ಮೃದುಪ್ರಜ್ಞನಾಯ್- ತನ್ನ ಉತ್ಕೃಷ್ಟ ಸ್ವರೂಪದ ವಿಷಯದಲ್ಲಿ ಸರಿಯಾದ ಜ್ಞಾನವಿಲ್ಲದೆ ಮಂದಮತಿಯುಳ್ಳವನಾಗಿ, ಆತ್ಮಸಮರ್ಪಣಮ್ ಪಣ್ಣಿನವನುಕ್ಕು - ಭರನ್ಯಾಸಾನುಷ್ಠಾನ

ತ್ತಾಲೆ ವರುವಾಗಿಲ್ (೧)"ದತ್ತಸ್ಯ ಹರಣನೇನಚ" ಎಙ್ಗಿರ ಅಪಹಾರತ್ತಿ ಲುಮ್ ಕೊಡಿಯದಾಯ್ ಕಳವು ಕೊಂಡುಕೊಡುತ್ತ ದ್ರವ್ಯತ್ತೈ ಮೀಳ ಕ್ಕಳವು ಕೊಂಡಾರ್ಪೋಲೆಯಾಮ್.

ಮಾಡಿದವನಿಗೆ, ವಿಪರೀತ **ಸಂಸರ್ಗತ್ತಾಲೆ** - ಶಾಸ್ತ್ರಮರ್ಯಾದೆಗೆ ವ್ಯತ್ಯಸ್ತ ವಾಗಿ ನಡೆಯುವ ಈ ಹೈತುಕರ ಸಂಬಂಧದಿಂದ, **ವರುವಾಗಿಲ್** - ಇಂತಹ ಅನ್ಯಥಾ ಜ್ಞಾನವು ಪ್ರಾಪ್ತವಾದರೆ, **"ದತ್ತಸ್ಯ ಹರಣೇನ ಚ" ಎಙ್ಗಿರ** - ದಾನ ಕೊಟ್ಟದ್ದನ್ನು ಅಪಹಾರ ಮಾಡಿರುವದರಿಂದ ಎಂದು ಹೇಳಿರುವ, **ಅಪ ಹಾರತ್ತಿಲುಮ್ ಕೊಡಿಯದಾಯ್** - ಅಂತಹ ಅಪಹಾರಕ್ಕಿಂತಲೂ ಕ್ರೂರ ವಾದುದಾಗಿ, ಎಂದರೆ ದತ್ತಾಪಹಾರ ಕೂಡದು, ದೋಷಾವಹವು, ಅದಕ್ಕಿಂತಲೂ ದೋಷಾವಹವಾಗಿ ಎಂಬ ತಾತ್ಪರ್ಯವು; **ಕಳವುಕೊಂಡು**-ಅಪಹರಿಸಿ ತಂದು, **ಕೊಡುತ್ತ ದ್ರವ್ಯತ್ತೈ** - ದಾನಮಾಡಿದ ದ್ರವ್ಯವನ್ನು, **ಮೀಳ** - ಪುನಃ, **ಕಳವು ಕೊಂಡಾರ್ಪೋಲೆಯಾಮ್** - ಅಪಹರಿಸಿದ ಹಾಗೆ ಆಗುವದು, **ಪೂರ್ವ**ದಲ್ಲಿ ನೃಗನೆಂಬ ಇಕ್ಷ್ವಾಕು ಕುಲದ ರಾಜನೊಬ್ಬನಿದ್ದನು. ಆತನು ದಾನಶೌಂಡನಾಗಿ ಬ್ರಾಹ್ಮಣರಿಗೆ ಗೋದಾನ ಮಾಡುತ್ತಿದ್ದನು. ಎಷ್ಟು ಗೋದಾನ ಕೊಟ್ಟನೆಂಬುದು ಲೆಖ್ಖ ಮಾಡಲು ಕೂಡ ಸಾಧ್ಯವಿಲ್ಲವು. ಒಂದು ದಿನ ಒಬ್ಬ ದ್ವಿಜಶ್ರೇಷ್ಠನಿಗೆ ದಾನವಾಗಿ ಕೊಟ್ಟ ದಿವ್ಯ ಪಶುವು ರಾಜನ ಗೋವುಗಳ ಹಿಂಡಿಗೇನೆ ಬಂದು ಸೇರಿತು. ಅದನ್ನು ರಾಜನು ತಿಳಿಯದೆ ಇನ್ನೊಬ್ಬ ದ್ವಿಜವರ್ಯನಿಗೆ ದಾನವಾಗಿ ಕೊಟ್ಟನು. ಈತನು ತೆಗೆದುಕೊಂಡು ಹೋಗುವಾಗ ಮಾರ್ಗದಲ್ಲಿ ಮೊದಲನೆಯ ಬ್ರಾಹ್ಮಣನು, ಇದು ನನ್ನದು, ನನಗೆ ರಾಜನು ಕೊಟ್ಟಿದ್ದೆಂದು ಜಗಳವಾಡಿದನು. ಆಗ ರಾಜನು, ತಿಳುವಳಿಕೆಯಿಲ್ಲದೆ ಈ ಅಚಾತುರ್ಯವು ನಡೆಯಿತು. ಆದುದರಿಂದ ಮೊದಲನೆಯವನಿಗೆ ಕೊಟ್ಟುಬಿಡು, ನಿನಗೆ ಒಂದು ಲಕ್ಷ ಗೋವನ್ನು ಪ್ರತಿಯಾಗಿ ಕೊಡುವೆನು, ಎಂದರೆ ಅದಕ್ಕೆ ಇಬ್ಬರೂ **"ಭವಾನ್ ದಾತಾಽಪಹರ್ತೇತಿ ಮಾಮೂಚತುಃ"** ನೀನು ದತ್ತಾಪಹಾರಿ ಎಂದು ಇಬ್ಬರೂ ಬೈದರು. ಯಾವನು ಗೋವನ್ನು ಬಿಟ್ಟುಕೊಡುವನೋ, ಆತನಿಗೆ ಪ್ರತಿಯಾಗಿ ಲಕ್ಷ ಗೋವುಗಳನ್ನು ಕೊಡುವೆನೆಂದು ಎಷ್ಟು ಒಡಂಬಡಿಸಿದರೂ ಒಪ್ಪದೆ ಇಬ್ಬರೂ ಹೊರಟುಹೋದರು. ಅನಂತರ ಈ ನೃಗನಿಗೆ ಕೆಲವು ಕಾಲಾನಂತರ ದೇಹಾವಸಾನ ಪ್ರಾಪ್ತವಾಗಲಾಗಿ ಯಮನು ಬಂದು ಅನೇಕ ಗೋದಾನಗಳಿಂದ ಅನೇಕ ಶುಭಫಲವೂ, ಈ ದತ್ತಾಪಹಾರದಿಂದ

---

(೧) ಶಾಂ. ಸ್ಮೃ.

ಆಗ್ನೈಯಾಲ್ ಬಹು ವಿಧಙ್ಗಳಾನ ವ್ಯಾಮೋಹ ಕಾರಣಙ್ಗಳಿಲ್ ದೈತುಕ ಸಂಸರ್ಗಂ ಪ್ರೋತಪ್ಪರಿಹರಣೀಯುಮ್.

[illegible]

ಅಶುಭಫಲವೂ ಉಂಟು, ಯಾವುವನ್ನು ಮುಂದೆ ಅನುಭವಿಸುತ್ತೀಯೆ ಎಂದು ಕೇಳಲು, ಈತನು ಅಲ್ಪವಾಗಿರುವ ಅಶುಭಫಲವನ್ನನುಭವಿಸಲು ಒಪ್ಪಿದುದರಿಂದ ಒಡನೆ ಕೃಕಲಾಸ ವೆಂಬುವ ಊಸರವಳ್ಳಿಯ ಜನ್ಮವನ್ನು ಎತ್ತಿ ಒಂದು ಭಾವಿಯಲ್ಲಿ ಬಹುಕಾಲ ಬಿದ್ದಿದ್ದನು. ಶ್ರೀಕೃಷ್ಣನು ಬಾಲಕರೊಂದಿಗೆ ವಿಹರಿಸುವಾಗ ಈ ಊಸರವಳ್ಳಿಯನ್ನು ಇತರ ಬಾಲಕರೆಲ್ಲಾ ಹಗ್ಗ ಕಟ್ಟಿ ಎಷ್ಟು ಎಳೆದರೂ ಮೇಲಕ್ಕೆ ಬರದೆ, ಈತನು ಮಾಡಿದ ಗೋದಾನಗಳ ಸುಕೃತಫಲದಿಂದ ಕಡೆಗೆ ಶ್ರೀ ಕೃಷ್ಣನು ಎಡಗೈಯಿಂದ ಲೀಲೆಯಿಂದ ಎತ್ತಿಬಿಟ್ಟನು. ಸ್ವಾಮಿಯ ಕರಸ್ಪರ್ಶಮಾಹಾತ್ಮ್ಯೆಯಿಂದ ಆಗ ನೃಗರಾಜನಿಗೆ ಈ ಜನ್ಮವು ಕಳೆದು, ದಿವ್ಯ ದೇವತೆಯ ಜನ್ಮವನ್ನು ಹೊಂದಿ ಸರ್ವಾಲಂಕಾರ ವಸ್ತ್ರಾಭರಣಭೂಷಿತನಾಗಿ ಸ್ವರ್ಗವನ್ನು ಕುರಿತು ತೆರಳಿದನೆಂಬ ಇತಿಹಾಸ ಉಂಟು. ಯಾವಾಗ ದಾನ ಕೊಟ್ಟನೋ ಆಗ ಅದು ಬ್ರಹ್ಮಸ್ವವಾಯಿತು. ಬ್ರಹ್ಮಸ್ವಾಪಹರಣವು **ಸ್ವದತ್ತಾಂ ಪರದತ್ತಾಂ ವಾ ಬ್ರಹ್ಮವೃತ್ತಿಂ ಹರೇತಯಃ । ಷಷ್ಟಿರ್ವರ್ಷ ಸಹಸ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮಿಃ ॥** ಎಂದು ಹೇಳಿರುವದರಿಂದ, ಸರ್ವಥಾ ಕೂಡದೆಂಬ ಭಾವವು. ಹೀಗೆ ದತ್ತಾಪಹಾರವೇ ಅತಿ ಕ್ರೂರ ಫಲವುಳ್ಳದ್ದಾದುದರಿಂದ ಈ ವಿಭೂತ್ಯಪಹಾರವಾಗಲಿ ವಿಭೂತಿಮಾನಿನ ಅಪಹಾರವಾಗಲಿ ಇದಕ್ಕಿಂತ ಕ್ರೂರಫಲಪ್ರಸ್ಪಿಂದುಪಜೀವಿಸುತ್ತಾರೆ. ಹೇಗೆಂದರೆ:—ವಿಭೂತಿಯೇ ಮಿಥ್ಯಾ ಎಂದು ಹೇಳುವದೂ ಅಥವಾ ಇನ್ನೊಬ್ಬರಿಗೆ ಸೇರಿದುದು ಎಂದು ಹೇಳುವದೂ, ಅಪಹರಿಸಿದುದೂ ಅಲ್ಲದೆ ಆ ದ್ರವ್ಯವೇ ಇಲ್ಲವೆಂದು ಸಾಧಿಸುವುದೂ, ಹೆಚ್ಚಾದ ಅಪರಾಧವೆಂಬ ಭಾವವು. ವಿಭೂತಿಮಾನಿನ ಅಪಹಾರ ವಿಷಯದಲ್ಲಿ ಹೇಗೆಂದರೆ:—ನೈಜವಾಗಿ ದಾಸತ್ವವು ತನ್ನದು, ಸ್ವಾಮಿತ್ವವು ಸರ್ವೇಶ್ವರನದು; ಈ ಸ್ವಾಮಿತ್ವವನ್ನು ತಾನು ಈಗ ಅಪಹರಿಸಿಬಿಟ್ಟು ತಾನೇ ಸರ್ವೇಶ್ವರನು ಎಂದು ಹೇಳಿಕೊಳ್ಳುವದಲ್ಲದೆ, ಆತನ ಸರ್ವವಿಭೂತಿಯೂ ತಾನೂ ಸರ್ವೇಶ್ವರನಾಗಿರುವಾಗ, ತನ್ನ ವಿಭೂತಿ ಎಂದೆನಿಸುವದೂ. ಇದನ್ನು ಹೆಚ್ಚಾದ ಅಪರಾಧವೆಂಬ ಭಾವವು; ಅಥವಾ ಆ ಸ್ವಾಮಿತ್ವವನ್ನು ಅಪಹರಿಸುವದಲ್ಲದೆ, ಇನ್ನೊಬ್ಬನಲ್ಲಿ ಅನ್ವಯಿಸುವುದೂ, ಇನ್ನೂ ಹೆಚ್ಚಿನದು ಎಂಬ ಭಾವವು.

ಆಗ್ನೈಯಾಲ್ - ಆದುದರಿಂದ ಎಂದರೆ ಬಹಳ ಅನರ್ಥ ಬಾಹುಳ್ಯವುಳ್ಳದಾ

ಇವ್ವರ್ಥತ್ತೈ (೧) "ಪಾಷಂಡಿನೋ ವಿಕರ್ಮಸ್ಥಾ೯ ಬೈಡಾಲವ್ರತಿಕಾ೯

ದುದರಿಂದ, **ಬಹು ವಿಧಙ್ಗಳಾನ** - ಬಹು ವಿಧಗಳಾದ, **ವ್ಯಾಮೋಹಕಾರಣಙ್ಗಳಿಲ್** – ವ್ಯಾಮೋಹಕ್ಕೆ ಕಾರಣಗಳಾಗಿರುವುವಗಳಲ್ಲಿ, **ಹೈತುಕ ಸಂಸರ್ಗಮ್** - ಇಂತಹ ಕುವಾದಿಗಳೊಂದಿಗೆ ಸರಸ ಸಂಭಾಷಣಾದಿಗಳು, **ಘೋರ ಪರಿಹರಣೀಯಮ್** - ಅತ್ಯಂತ ಪರಿಹರಣೀಯವು. ಇಂತವರ ಸಂಬಂಧವೇ ಬೇಡ ಎಂದು ಉಪದೇಶಿಸಿದರು. ಆದರೆ ಭರನ್ಯಾಸಮಾಡಿ ಕೃತಕೃತ್ಯನಾದವನಿಗೆ ಎಂದಿಗಿದ್ದರೂ ಭಯವಿಲ್ಲವು, ದೇಹಾವಸಾನಾನಂತರ ರಕ್ಷಿಸಿ ಮೋಕ್ಷಪದವನ್ನು ಕೊಡುತ್ತೇನೆಂದು ವಾಗ್ದಾನ ಮಾಡಿಯಾಯಿತು. **ಅನೃತಂ ನೋಕ್ತಪೂರ್ವಂಮೇ ನ ಚ ವಕ್ಷ್ಯೇ ಕದಾಚನ** ಎಂದು ಪ್ರತಿಜ್ಞೆ ಮಾಡಿದ್ದಾನೆ. ಇಂತಹ ಹೈತುಕ ಸಂವಾದದಿಂದ ಸ್ವಲ್ಪ ದಂಡನೆಯಾದೀತು, **ಇಷ್ಟೇ ತಾನೆ** ಎಂದರೆ, ಹಾಗಲ್ಲವು. ಕೃತಕೃತ್ಯನು ತನ್ನ ಸ್ವರೂಪಕ್ಕನುಗುಣವಾಗಿ ನಡೆಯತಕ್ಕದ್ದುಚಿತವು. **"ಪ್ರಕ್ಷಾಳನಾದ್ಧಿ ಪಙ್ಕಸ್ಯ ದೂರಾದ ಸ್ಪರ್ಶನಂ ವರಂ"** ಕೆಸರು ತುಳಿದು ಕಾಲನ್ನು ಕೆಸರು ಮಾಡಿಕೊಂಡು ಎಲ್ಲರೂ ನಗುವಹಾಗೆ ಮಾಡಿಕೊಳ್ಳುವದಕ್ಕಿಂತ ಕೆಸರನ್ನು ಸ್ಪರ್ಶ ಮಾಡದೇ ಇರುವುದು ಹೇಗೆ ಉಚಿತವೋ, ಹಾಗೆ ಹೈತುಕರೊಂದಿಗೆ ಸಂಸರ್ಗ ವಿಟ್ಟು ಸ್ವರೂಪಹಾನಿ ಮಾಡಿಕೊಳ್ಳುವದಕ್ಕಿಂತ, ಅವರ ಹತ್ತಿರ ಹೋಗದೇ ಇರುವುದೇ ಉತ್ತಮವು ಎಂಬಭಾವವು.

ಹಾಗೆ ಹೈತುಕರ ಸಂಬಂಧ ಸುತರಾಂ ಕೂಡದೆಂಬುದಕ್ಕೆ ಪ್ರಮಾಣಗಳನ್ನು ಉದಾಹರಿಸುತ್ತಾರೆ:— **ಪಾಷಂಡಿನಃ** - **"ಯೋನ್ಯಂ ದೇವಂ ಪರತ್ವೇನ"** ಎಂದು ಹೇಳಿರುವ ಹಾಗೆ, ಅನ್ಯದೇವತೆಯನ್ನು ಪರದೇವತೆ ಎಂದು ಭಾವಿಸುವವರು, ಇವರು ಎಂತವರೆಂಬುದು ಹಿಂದೆ ಉಪಪಾದಿಸಲ್ಪಟ್ಟಿರುತ್ತದೆ; **ವಿಕರ್ಮಸ್ಥಾ೯** - **"ಅಸಾರ್ಥಂ ಶ್ರುತಿವಾಕ್ಯಾನಾಂ ದರ್ಶಯನ್ ಲೋಕಗರ್ಹಿತಂ। ಸರ್ವಕರ್ಮ ಪರಿಭ್ರಷ್ಟೋ ವಿಕರ್ಮಸ್ಥಸ್ಸ ಉಚ್ಯತೇ॥"** ಎಂದು ಹೇಳಿರುವ ಹಾಗೆ, ಶ್ರುತಿವಾಕ್ಯಗಳಿಗೆ ಲೋಕನಿಂದಿತವಾದ ಅಪಾರ್ಥಗಳನ್ನು ಹೇಳುತ್ತಾ, ಸಮಸ್ತ ವೈದಿಕಕರ್ಮಭ್ರಷ್ಟರಾಗಿ ಶಿಖಾ ಯಜ್ಞೋಪವೀತಗಳನ್ನು ಬಿಟ್ಟು ಐಹಿಕ ಕರ್ಮಗಳಲ್ಲೇ ಮಗ್ನರಾಗಿರುವವರನ್ನೂ, **ಬೈಡಾಲವ್ರತಿಕಾ೯** - **"ಬೈಡಾಲವ್ರತಿಕೋ ಜ್ಞೇಯೋ ಹಿಂಸ್ರಃ ಸರ್ವಾಭಿಸಂಧಕಃ"** ಎಂದು ಹೇಳಿರುವ ಹಾಗೆ ಬೆಕ್ಕು ಬಚ್ಚಿಟ್ಟುಕೊಂಡು ಭದ್ರನೆಯಿಂದ ಇಲಿಗಳನ್ನು ಹೇಗೆ ಹಿಡಿಯುತ್ತದೋ, ಹಾಗೆ ವಂಚಕ

---

(೧) ಮನುಸ್ಮೃತಿ ೪.೩೦.

ಶಠಾನ್ । ಹೈತುಕಾನ್ ಬಕವೃತ್ತೀಂಶ್ಚ ವಾಙ್ಮಾತ್ರೇಣಾಪಿ ನಾರ್ಚಯೇತ್" (೨) "ಡಂಭಿ ಹೈತುಕ ಪಾಷಂಡೀ ಬಕ ವೃತ್ತೀಂಶ್ಚ ವರ್ಜಯೇತ್ । (೩) ನಾಸದ್ಭಿಃ ಕಿಂಚಿದಾಚರೇತ್" (೪) "ತ್ಯಜದುರ್ಜನ ಸಂಸರ್ಗಮ್ (೫) "ವರಂ ಹುತವಹಜ್ವಾಲಾ ಪಂಜರಾಂತರ್ವ್ಯವಸ್ಥಿತಿಃ । ನಶೌರಿ ಚಿನ್ತಾ

ರಾಗಿ ಗೂಢವಾಗಿ ಜನರನ್ನು ಹಿಂಸಿಸುತ್ತಾ ಎಲ್ಲರಿಂದಲೂ ನಿಂದಿಸಲ್ಪಟ್ಟವರನ್ನೂ, ಶಠಾನ್–ವೇದವು ಪ್ರಮಾಣವಲ್ಲವೆಂದು ಹೇಳುವ ನಾಸ್ತಿಕರನ್ನೂ, ಹೈತುಕಾನ್ - ಕುತರ್ಕ ಕುವಾದಗಳನ್ನು ಮಾಡುವವರನ್ನೂ, ಬಕವೃತ್ತೀಂಶ್ಚ - ಬಕಪಕ್ಷಿಯು ಹೇಗೆ ನೀರಿನ ಮಧ್ಯೆ ಸುಮ್ಮನೆ ಇದ್ದು ಹತ್ತಿರ ಬಂದ ಮತ್ಸ್ಯಗಳನ್ನು ಹಿಡಿದು ತಿನ್ನುತ್ತದೋ ಅಂತಹ ವೃತ್ತಿಯುಳ್ಳವರನ್ನೂ, ಬೈಡಾಲವೃತ್ತಿಗೂ ಬಕವೃತ್ತಿಗೂ ಇರುವ ವ್ಯತ್ಯಾಸವು "ಧರ್ಮಧ್ವಜಸ್ಸದಾಲುಬ್ಧೋ ಛಾದ್ಮಿಕೋ ಲೋಕಡಾಂಭಿಕಃ । ಬೈಡಾಲವ್ರತಿಕೋಜ್ಞೇಯೋ ಹಿಂಸಕಸ್ಸರ್ವನಿಂದಕಃ", "ಅಧೋದೃಷ್ಟಿರ್ನೈಷ್ಕೃತಿಕ ಸ್ಸ್ವಾರ್ಥಸಾಧನ ತತ್ಪರಃ । ಶಠೋ ಮಿಥ್ಯಾ ವಿನೀತಶ್ಚ ಬಕವೃತ್ತಿರುದಾಹೃತಃ" ಎಂಬ ಶ್ಲೋಕಗಳಿಂದ ವ್ಯಕ್ತವು. ಧರ್ಮನಿರತನೆಂಬ ಧ್ವಜವುಳ್ಳವನೆಂದು ಪ್ರಕಟಿಸುತ್ತಾ ಯಾವಾಗಲೂ ಲುಬ್ಧನಾಗಿ, ಕಾಪಟ್ಯವುಳ್ಳವನಾಗಿ, ಡಾಂಭಿಕನಾಗಿ, ಜನರಿಗೆ ಹಿಂಸೆ ಮಾಡುವವನಾಗಿ ಸರ್ವರನ್ನೂ ನಿಂದಿಸುವವನು ಬೈಡಾಲವ್ರತಿಕನು ಎಂದರೆ ಬೆಕ್ಕಿನ ಹಾಗೆ ನಟಿಸುವವನೆಂದು ತಿಳಿಯತಕ್ಕದ್ದು. ಯಾವಾಗಲೂ ಕೆಳಗೇ ನೋಡುವವನಾಗಿ ಒಬ್ಬರ ತಂಟೆಗೆ ಹೋಗದವನಾಗಿ ಕಾಣಿಸಿಕೊಂಡು, ಮೋಸಕೃತ್ಯವುಳ್ಳವನಾಗಿ, ತನ್ನ ಪ್ರಯೋಜನವನ್ನು ಸಾಧಿಸಿಕೊಳ್ಳುವದರಲ್ಲಿ ಆಸಕ್ತಿಯುಳ್ಳವನಾಗಿ, ನಾಸ್ತಿಕವಾದ ಮಾಡುವವನಾಗಿ, ತುಂಬಾ ವಿನಯವುಳ್ಳವನ ಹಾಗೆ ತೋರಿಸಿಕೊಳ್ಳುವನಾಗಿ ಆದರೆ ದುರ್ವಿನೀತನಾಗಿ ಇರುವವನು ಬಕವೃತ್ತಿಯುಳ್ಳವನೆನಿಸುವನು ; ಇಂತವರುಗಳನ್ನು, ವಾಙ್ಮಾತ್ರೇಣಾಪಿ ನಾರ್ಚಯೇತ್ - ಏನು ಕ್ಷೇಮವೇ ಇತ್ಯಾದಿ ಬರೀ ಮಾತಿನ ಉಪಚಾರಗಳನ್ನೂ ಕೂಡ ಮಾಡಬಾರದು.

(೨) ಡಂಭಿ – ಡಾಂಭಿಕರು, ಡಂಭಾಚಾರವುಳ್ಳವರು, ಮತ್ತು ಹೈತುಕರು, ಪಾಷಂಡಿಗಳು, ಬಕವೃತ್ತಿಯುಳ್ಳವರು. ಇವರುಗಳನ್ನೆಲ್ಲಾ ಬಿಡತಕ್ಕದ್ದು.

(೩) ಅಸದ್ಭಿಃ - ಬ್ರಹ್ಮಜ್ಞಾನವಿಲ್ಲದೆ, ಬ್ರಹ್ಮವನ್ನು ಧ್ಯಾನಿಸದೇ ಇರುವದರಿಂದ ಅಸತ್ತುಗಳೆಂದು ಹೇಳಿಸಿಕೊಳ್ಳುವವರೊಂದಿಗೆ ನ ಕಿಂಚಿದಾಚರೇತ್- ಸ್ವಲ್ಪನಾಗಲಿ ನಡತೆಯಿಡಕೂಡದು.

(೨) ಯಾಜ್ಞವಲ್ಕ್ಯಸ್ಮೃತಿ. (೩) (೪) ಭಾರತ ಆರ. (೫)

ವಿಮುಖ ಜನ ಸಂವಾಸ ವೈಶಸಂ ।" ಇತ್ಯಾದಿಗಳಿಲೆ ಪ್ರಪಂಚಿತ್ತಾರ್ ಗಳ್.

ಅಥ ಹೈತುಕ ಸಂಸರ್ಗ ಪ್ರಾಪ್ತಾಽನರ್ಥಾನಾಹ

ಇನ್ದ ಹೈತುಕರೊಟ್ಟ್ರೆ ಸಂಭಾಷಣಮ್ (೧) "ಮಾಯಯಾಪಹೃತ ಜ್ಞಾನಾಃ" ಎಜ್ಙಗಪಡಿಯೇ ಕಂಡು ಮತಿಕೆಟ್ಟ್ರಾನಾಕ್ಕಿ (೨) "ಚತುರ್ವಿಧಾ

---

(೪) ದುರ್ಜನ ಸಂಸರ್ಗಂ - ಸಜ್ಜನರನ್ನು ಸಹಿಸದೇ ಇರುವವನೊಂದಿಗೆ ಸಂಸರ್ಗವನ್ನು, ತ್ಯಜ - ಬಿಟ್ಟುಬಿಡು

(೫) ಹುತವಹ ಜ್ವಾಲಾಪಂಜರಾಂತ ರ್ವ್ಯವಸ್ಥಿತಿಃ, ಹುತವಹ-ಅಗ್ನಿಯ, ಜ್ವಾಲಾ-ಜ್ವಾಲೆಯೆಂಬ ಪಂಜರದಲ್ಲಿ ಇರೋಣವಾದರೂ, ವರಂ-ಶ್ರೇಷ್ಠವು. ಶೌರಿಚಿಂತಾ - ಶ್ರೀ ಕೃಷ್ಣನ ಧ್ಯಾನದಿಂದ, ವಿಮುಖ - ವಿಮುಖರಾದ, ಜನ ಸಂವಾಸ - ಜನರೊಂದಿಗೆ ಸಹವಾಸರೂಪವಾದ, ವೈಶಸಂ - ಹಾನಿಯು, ನ ವರಂ - ಒಳ್ಳೆಯದಲ್ಲವು." ಇತ್ಯಾದಿಗಳಿಲೆ - ಇಂತಹ ಪ್ರಮಾಣಗಳಲ್ಲಿ, ಪ್ರಪಂಚಿತ್ತಾರ್‌ಗಳ್ - ಉಪಪಾದಿಸಿರುತ್ತಾರೆ. ಯಾರೆಂದರೆ ಈ ಪ್ರಮಾಣಗಳನ್ನನುಗ್ರಹಿಸಿರುವ, ಮನು, ವ್ಯಾಸ, ಯಾಜ್ಞವಲ್ಕ್ಯ ಮೊದಲಾದವರು. ಈ ಶ್ಲೋಕ ತಾತ್ಪರ್ಯವೇನೆಂದರೆ, ಭಗವಂತನ ವಿಷಯವಾದ ಚಿಂತೆಯಿಲ್ಲದವರ ಮಧ್ಯದಲ್ಲಿರುವುದು ಬೆಂಕಿಯ ಮಧ್ಯದಲ್ಲಿರುವುದಕ್ಕಿಂತ ಹೆಚ್ಚು ಅನರ್ಥವನ್ನುಂಟು ಮಾಡುವಂಥಾದ್ದೆಂಬ ಭಾವವು. ಬೆಂಕಿಯು ತಾಪವು ದೇಹವನ್ನು ಮಾತ್ರ ಸುಡುತ್ತದೆ, ದುಸ್ಸಹವಾಸವಾದರೋ ಆತ್ಮಾವಿನ ಗತಿಯನ್ನೇ ಕೆಡಿಸುತ್ತದೆಂಬರ್ಥವು.

ಹೈತುಕರ ಸಂಸರ್ಗದಿಂದುಂಟಾದ ಅನರ್ಥಗಳು.

ಇನ್ದ ಹೈತುಕರೊಟ್ಟ್ರೆ ಸಂಭಾಷಣಮ್ - ಈ ಕುತರ್ಕಗಳಿಂದ ವಾದ ಮಾಡುವವರೊಂದಿಗೆ ಸಂಭಾಷಣೆಯು, (೧) "ಮಾಯಯಾಪಹೃತ ಜ್ಞಾನಾಃ" "ದುಷ್ಕರ್ಮಪರಿಪಾಕದಿಂದ ಪ್ರಾಪ್ತವಾದ ಶರೀರರೂಪ ಪ್ರಕೃತಿಯಿಂದ ಅಪಹರಿಸಲ್ಪಟ್ಟ ಜ್ಞಾನವುಳ್ಳವರು, ಎಂದರೆ ಪ್ರಕೃತಿಯಿಂದ ತಿರೋಹಿತವಾದ ಜ್ಞಾನವುಳ್ಳವರು," ಇನ್ನೊಂದು ವಿಧ ಅರ್ಥವು ಕೆಳಗೆ ಉಪಪಾದಿಸಲ್ಪಟ್ಟಿರುತ್ತದೆ. ಎಜ್ಙಗಪಡಿಯೇ - ಎಂದು ಹೇಳಿರುವ ಹಾಗೆ, ಕಂಡು ಮತಿಗೆಟ್ಟ್ರಾನಾಕ್ಕಿ - ತಿಳಿದವನಾದರೂ ಮತಿಭ್ರಷ್ಟನನ್ನಾಗಿ ಮಾಡಿ ಇದೊಂದನರ್ಥವು, (೨) ಚತುರ್ವಿಧಾಃ

---

(೧) ಗೀ. ೭.೧೫ (೨) ಭಾರ. ಶಾಂತಿ. ೩೫೦.೩೪

ಮನುಜನಾ ಭಕ್ತಾ ವಿವಹಿ ತೇ ಶ್ರುತಾಃ" ಎನ್ರು ಈಶ್ವರನ್ ನಮ್ಮುಡೈಯವರ್‌ಗಳೆನ್ರು ನಾಲುವಗೈಯಿಲುಮ್ ಕೂಟಾದೆ (೩) "ಅಱಿಯುನಮ್ ಪಯ್ಯಲ್" ಎನ್ನಾದಪಡಿ ಪಣ್ಣಿ (೪) "ನ ಮಾಂ ದುಷ್ಕೃತಿನೋ ಮೂಢಾಃ ಪ್ರಪದ್ಯಂತೇ" ಎಙ್ಗಿರ ಭಗವದಭಿಮಾನ ಬಾಹ್ಯವರ್ಗತ್ತಿಲ್ ಕೊಪ್ಪುಣ್ಣಪ್ಪಣ್ಣುಮ್.

ಆರ್ತನು, ಜಿಜ್ಞಾಸು, ಅರ್ಥಾರ್ಥೀ, ಜ್ಞಾನೀ ಎಂಬ ನಾಲ್ಕು ವಿಧರಾದ, ಭಕ್ತಾಃ- ನನ್ನ ಭಕ್ತರು, ತೇ - ಅವರು, ಮನುಜನಾ ವಿವಹಿ - ನನಗೆ ತುಂಬಾ ಪ್ರಿಯರಾಗಿ ನನ್ನ ಜನರೇ ಎಂದು, ಶ್ರುತಾಃ - ಹೇಳಲ್ಪಟ್ಟವರು," ಎನ್ರು - ಎಂದು, ಈಶ್ವರನ್ - ಸರ್ವೇಶ್ವರನು, ನಮ್ಮುಡೈಯವರ್‌ಗಳೆನ್ರು - ನಮಗೆ ತುಂಬಾ ಪ್ರಿಯರಾದ ಸ್ವಜನವೆಂಬ, ನಾಲುವಗೈಯಿಲುಮ್ ಕೂಟಾದೆ - ನಾಲ್ಕು ವಿಧ ಭಕ್ತರಲ್ಲೂ ಸೇರಿಸದೆ, "ಅಱಿಯುನಮ್ ಪಯ್ಯಲ್" - ಕೃಪೆ ಮಾಡಲು ಯೋಗ್ಯನಾದ ನಮ್ಮ ಬಾಲನು ಎಂದು (ಈ ಪಾಶುರಾರ್ಥಕ್ಕೆ ಅಪರಾಧ ಪರಿಹಾರಾಧಿಕಾರದ ೧೫೫ನೆಯ ಪುಟವನ್ನು ಪರಾಂಬರಿಸಿ.) ಎನ್ನಾದಪಡಿ ಪಣ್ಣಿ - ಹೇಳಿಸಿಕೊಳ್ಳದ ಹಾಗೆ ಮಾಡಿ, ಇದು ಎರಡನೆಯ ಅನರ್ಥವು, "ತೇಷಾಮೇಕಾನ್ತಿನಃ ಶ್ರೇಷ್ಠಾ ಯೇ ಚೈವಾನನ್ಯ ದೇವತಾಃ" ಎಂದು ಮುಂದಕ್ಕೆ ಇರುತ್ತದೆ. (೪) ಮಾಂ - ನನ್ನನ್ನು, ದುಷ್ಕೃತಿನಃ - ಪಾಪಕರ್ಮಗಳನ್ನು ನಡೆಸಿದವರು, ದುಷ್ಕೃತ ತಾರತಮ್ಯದಿಂದ ನಾಲ್ಕು ವಿಧವಾದವರು, ನ ಪ್ರಪದ್ಯನ್ತೇ - ಉಪಾಸನವನ್ನು ಮಾಡಿ ತದಂಗವಾಗಿ ಶರಣಾಗತಿಯನ್ನು ಮಾಡುವುದಿಲ್ಲವು. ಮುಂದಕ್ಕೆ "ಪ್ರಪದ್ಯಂತೇ ನರಾಧಮಾಃ । ಮಾಯಯಾಪಹೃತ ಜ್ಞಾನಾ ಆಸುರಂ ಭಾವಮಾಶ್ರಿತಾಃ" ಎಂದು ಇರುತ್ತದೆ. ಆ ನಾಲ್ಕು ವಿಧ ದುಷ್ಕೃತಿಗಳು ಯಾರೆಂದರೆ:—(೧) ಮೂಢಾಃ - ವಿಪರೀತಜ್ಞಾನವುಳ್ಳವರು, ಅವರು ಯಾರೆಂದರೆ ಭಗವಂತನಿಗೆ ಶೇಷಭೂತನಾದ ತನ್ನನ್ನೂ ಭೋಗ್ಯಸಮುದಾಯವನ್ನೂ ಸ್ವತಂತ್ರವೆಂದೂ ತನಗೇ ಶೇಷಭೂತವೆಂದೂ ಭಾವಿಸುವವರು, (೨) ನರಾಧಮಾಃ - ಸಾಮಾನ್ಯವಾಗಿ ಸರ್ವೇಶ್ವರನ ಸ್ವರೂಪ ತಿಳಿದಿದ್ದರೂ, ಸರ್ವೇಶ್ವರಾಭಿಮುಖ್ಯಕ್ಕೆ ಅನರ್ಹರಾದ ನೀಚರು, (೩) ಮಾಯಯಾಪಹೃತ ಜ್ಞಾನಾಃ - ಸರ್ವೇಶ್ವರನ ವಿಷಯವಾದ ಮತ್ತು ಆತನ ಐಶ್ವರ್ಯ ವಿಷಯವಾದ ಜ್ಞಾನಕ್ಕೆ ವಿರುದ್ಧವಾದ ಶಾಸ್ತ್ರಜನಕನಾದ ಕುದೃಷ್ಟಿಗಳ ಮತ್ತು ವೇದಬಾಹ್ಯರ ರೂಪವಾದ ಕುತರ್ಕಗಳಿಂದ ಅಪಹರಿಸ

---

(೩) ತಿರುಮಾಲೈ ೩೬. (೪) ಗೀ. ೭-೧೫.

ಪ್ರಪನ್ನೇಷು ಹೈತುಕ ಸಂಸರ್ಗಃ ಕಿಂಕರೋತಿ ?

ಅಶರಣ್ಯ ಶರಣ್ಯನಾನ ಸರ್ವೇಶ್ವರನೈ ಶರಣಮಾಗ ಪ್ಪತ್ತ್ರಗಿರ ಪರ ಮಾಸ್ತಿಕನುಕ್ಕು ಚ್ಚಿಲರೋಡು ಶೇರ್ತಿಯಾಲ್ ಬಾಹ್ಯತೆ ವಾರಾದಾಗಿ

ಲ್ಪಟ್ಟ ಜ್ಞಾನವುಳ್ಳವರು, (೪) **ಆಸುರಂ ಭಾವಮಾಶ್ರಿತಾಃ** - ಸರ್ವೇಶ್ವರನ ವಿಷಯವಾದ ಮತ್ತು ಆತನ ಐಶ್ವರ್ಯವಿಷಯವಾದ ಜ್ಞಾನವು ಭಗವಂತನನ್ನು ದ್ವೇಷಿಸುವದಕ್ಕಾಗಿಯೇ ಯಾರಿಗೆ ಆಗುವದೋ ಅಂತವರು, ಇವರು ನಾಲ್ಕು ಮಂದಿಯೂ ಉತ್ತರೋತ್ತರ ಹೆಚ್ಚು ಪಾಪಿಷ್ಠರು. ಎಙ್ಗ್ರ-ಎಂದು ಗೀತೆಯ ಸಪ್ತಮಾಧ್ಯಾಯದಲ್ಲಿ ಹೇಳಿರುವ, **ಭಗವದಭಿಮಾನ ಬಾಹ್ಯವರ್ಗತ್ತಿಲ್** - ಭಗವಂತನ ಕೃಪೆಗೆ ಹೊರಗಿರುವವರ ಕೋಟಿಯಲ್ಲಿ, **ಕೊಪ್ಪುಣ್ಣಪ್ಪಣ್ಣುಮ್**-ಸೇರಿ ಸಂಕ್ಷೀಭವಿಸುವ ಹಾಗೆ ಮಾಡುತ್ತದೆ ಹೀಗೆ ಹೈತುಕ ಸಂಸರ್ಗವು ಮೂರು ವಿಧ ಅನರ್ಥಗಳನ್ನುಂಟುಮಾಡಬಹುದು :—(೧) ಒಳ್ಳೇ ಶಾಸ್ತ್ರಜ್ಞಾನ ಹೊಂದಿದ್ದರೂ ಆ ಹೈತುಕರ ಸಹವಾಸದಿಂದ ಜ್ಞಾನವು ತಿರೋಹಿತವಾಗಬಹುದು. (೨) ಸುಕೃತಿಗಳಾದ ಭಕ್ತಮಂಡಲಿಯಲ್ಲಿ ಸೇರದಹಾಗೆ ಮಾಡುತ್ತದೆ. (೩) ದುಷ್ಕೃತಿಗಳ ಗುಂಪಿಗೆ ಸೇರಿಸಿ ಭಗವದನುಗ್ರಹಕ್ಕೆ ದೂರಮಾಡುತ್ತದೆ; ಎಂದು ಉಪದೇಶಿಸಿದರು.

ಆದರೆ ಇವೆಲ್ಲಾ ಸಾಧಾರಣ ಜನಗಳಿಗುಂಟಾಗುವ ಅನರ್ಥಗಳು; ಉಪಾಯಾನುಷ್ಠಾನ ಮಾಡಿ ಪ್ರಪನ್ನನೆನಿಸಿದವನಿಗೆ ಈ ಹೈತುಕ ಸಂಸರ್ಗದಿಂದ ಉಂಟಾಗುವ ಅನರ್ಥ ತಾನೇ ಏನಿದೆ? **"ನ ವಾಸುದೇವ ಭಕ್ತಾನಾಮಶುಭಂ ವಿದ್ಯತೇ ಕ್ವಚಿತ್"** ವಾಸುದೇವ ಭಕ್ತರುಗಳಿಗೆ ಸ್ವಲ್ಪವಾಗಲಿ ಅಶುಭಗಳಿಲ್ಲವು. **"ಜನಾರ್ದನಂ ಪ್ರಣಿಪತಿತೋ ನಸೀದತಿ"** ಜನಾರ್ದನನಲ್ಲಿ ಶರಣಾಗತಿ ಮಾಡಿದವನು ದುಃಖಿಸುವುದಿಲ್ಲವು, **"ನಮೇ ಭಕ್ತಃ ಪ್ರಣಶ್ಯತಿ"** ನನ್ನ ಭಕ್ತನು ಎಂದಿಗೂ ನಾಶವನ್ನು ಹೊಂದುವುದಿಲ್ಲವು ಎಂದರೆ ಎಂದಿಗೂ ದುಃಖಭಾಕ್ಕಾಗುವುದಿಲ್ಲವು, ಹೀಗೆಲ್ಲಾ ಪ್ರಮಾಣಗಳಿರುವಾಗ ಭಗವದಭಿಮಾನ ಬಾಹ್ಯತಾ ಹೇಗೆ ಎಂದಾಕ್ಷೇಪಿಸಿದರೆ ಅದಕ್ಕೆ ಸಮಾಧಾನವನ್ನು ಹೇಳುತ್ತಾರೆ.

ಪ್ರಪನ್ನರುಗಳಲ್ಲಿ ಹೈತುಕ ಸಂಸರ್ಗವು ಏನು ಮಾಡೀತು ?

ಭಗವದ್ವಿಮುಖರಿಗೇನೋ ಭಗವದಭಿಮಾನ ಬಾಹ್ಯತೆಯು ಬಂದರೂ ಬರಬಹುದು. ಆದರೆ ಸದಾಚಾರ್ಯನ ಮೂಲಕ ಸದುಪದೇಶವನ್ನು ಹೊಂದಿ, ತನ್ನೂ

ಲುಮ್, ಅನನುಕ್ಕುಕ್ಕಲಕ್ಕಙ್ಗಳ್‌ವರವುಮ್, ಅದುಕ್ಕು ಸದಾಚಾರ್ಯರ್ ಗಳ್ ಪರಿಹಾರಮ್ ಪಣ್ಣವುಮ್, ಕಾಣಾನಿನ್ರೋಮ್.

ಮಹರ್ಷಿಗಳುಮ್ (೧) ಏಕಂ ಯದಿ ಭವೇಚ್ಛಾಸ್ತ್ರಂ ಜ್ಞಾನಂ ನಿಸ್ಸಂಶಯಂ ಭವೇತ್ । ಬಹುತ್ವಾದಿಹ ಶಾಸ್ತ್ರಾಣಾಂ ಜ್ಞಾನತತ್ವಂ ಸುದುರ್ಲಭಮ್" ಎನ್ನುಮ್, (೨) "ನಿಸ್ಸಂಶಯೇಷು ಸರ್ವೇಷು ನಿತ್ಯಂ ವಸತಿ

ಲಕ ಅವರುಗಳ ಕೃಪೆಯಿಂದ ತುಂಬಾ ವಿಶ್ವಾಸಪೂರ್ವಕ ಭರನ್ಯಾಸಾನುಷ್ಠಾನ ಮಾಡಿದವನಿಗೆ, ಇಂತಹ ಬಾಹ್ಯತೆ ಎಂದಿಗಾದರೂ ಉಂಟೋ ಎಂದರೆ, **ಅಶರಣ್ಯ ಶರಣ್ಯನಾನ** - ಅನನ್ಯಗತಿಕರಿಗೆಲ್ಲಾ ಪರಮಗತಿಯಾದ, ಸರ್ವೇಶ್ವರನನ್ನು, **ಶರಣಮಾಗ** - ಉಪಾಯವಾಗಿ, **ಪತ್ತುಗಿರ** - ಭರನ್ಯಾಸ ಮಾಡುವ, **ಪರಮಾಸ್ತಿಕನುಕ್ಕು** - **"ಅಸ್ತಿ ಬ್ರಹ್ಮೇತಿಚೇದ್ವೇದ ಸಂತಮೇನಂತತೋ ವಿದುಃ"** ಎಂದು ಹೇಳಿರುವ ಹಾಗೆ ತುಂಬಾ ಆಸ್ತಿಕನಾಗಿ ಸಂತರಲ್ಲಿ ಸೇರಲು ಯೋಗ್ಯನೆಂದಿರುವವನಿಗೆ, **ಶಿಲರೋಡು ಶೇರ್ತಿಯಾಲ್**-ಹೀಗೆ ಕೆಲವು ಹೈತುಕರ ಸಂಸರ್ಗದಿಂದ, **ಬಾಹ್ಯತೆ ವಾರಾದಾಗಿಲುಮ್** - ಭಗವದಭಿಮಾನ ಬಾಹ್ಯತೆಯು ಬಾರದಿದ್ದರೂ, **ಅನನುಕ್ಕುಕ್ಕಲಕ್ಕಙ್ಗಳ್ ವರುಮ್** - ಬುದ್ಧಿಭ್ರಂಶಗಳು ಬರುವ ಸಂಭವ ಉಂಟು. **ಅದುಕ್ಕು** - ಹಾಗೆ ಬಂದ ಜ್ಞಾನಭ್ರಂಶಕ್ಕೆ ಸದಾಚಾರ್ಯರುಗಳು ಪರಿಹಾರ ಮಾಡಿರುವವನ್ನು, **ಕಾಣಾನಿನ್ರೋಹಮ್** – ಕಂಡಿರುವೆವಷ್ಟೇ. ಅಂತವರುಗಳಿಗೆ ಆಚಾರ್ಯ ಕೃಪೆಯಿಂದ ಆ ಬುದ್ಧಿಭ್ರಮವು ತೊಲಗಿ ಪುನಃ ಸರಿಯಾದ ಜ್ಞಾನಪ್ರಾಪ್ತಿಯುಂಟಾದುದಕ್ಕೆ ನಿದರ್ಶನಗಳುಂಟೆಂದು ಹೇಳುತ್ತಾರೆ. ಶ್ರೀ ಎಂಬಾರರೇ ಮೊದಲಾದವರುಗಳಿಗೆ ವಿಪರೀತ ಸಂಸರ್ಗದಿಂದ ಬುದ್ಧಿಭ್ರಮವೂ ಆಚಾರ್ಯರ ಕೃಪೆಯಿಂದ ತತ್ಪರಿಹಾರವೂ ಉಂಟಾಯಿತೆಂದು ಶ್ರೀ ಸಾರಾಸ್ವಾದಿನಿಯವರು ತಿಳಿಸುತ್ತಾರೆ. ಹಾಗೆಯೇ ಶ್ರೀ ಭಾಷ್ಯಕಾರರ ತಮ್ಮಂದಿರಾದ ಗೋವಿಂದ ಭಟ್ಟರಿಗೆ ಶೈವಸಂಸರ್ಗದಿಂದ ಬುದ್ಧಿಭ್ರಮವೂ ಅನಂತರ ತತ್ಪರಿಹಾರವೂ ಉಂಟಾದ ವೃತ್ತಾಂತವೂ ಉಂಟು. ತಮ್ಮ ಈ ಅಭಿಪ್ರಾಯವನ್ನು ಸಮರ್ಥನೆ ಮಾಡುವದಕ್ಕಾಗಿ ಮಹರ್ಷಿಗಳ ಸೂಕ್ತಿಗಳನ್ನು ಉದಾಹರಿಸಿರುತ್ತಾರೆ. **"ಶಾಸ್ತ್ರಂ**-ಶಾಸ್ತ್ರವು, **ಏಕಂ ಯದಿ ಭವೇತ್** - ಒಂದೇಯಾಗಿದ್ದರೆ, ಅಥವಾ ಶಾಸ್ತ್ರವೆಲ್ಲಾ ಐಕಕಂಠ್ಯದಿಂದ ಸಮಂಜಸವಾಗಿ ಒಂದೇಯಾಗಿ ತೋರಿದರೆ, **ಜ್ಞಾನಂ ನಿಸ್ಸಂಶಯಂ ಭವೇತ್** - ಜ್ಞಾನವು ನಿಸ್ಸಂಶಯವಾದುದಾಗುತ್ತದೆ. **ಇಹ** - ಈ ಲೋಕದಲ್ಲಿ

---

(೧) ಇತಿಹಾಸ ಸಮುಚ್ಚಯಂ. (೨) ಭಾರ. ಶಾಂ. ೩೪೯-೭೧.

ಸಸಂಶಯಾನ್ ಹೇತುಬಲಾನ್ನಾಧ್ಯಾವಸತಿ ಮಾಧವಃ" ಎನ್ನುವ್ ಶೊನ್ನಾರ್‌ಗಳಿರೇ.

ಯಾದರೋ, ಶಾಸ್ತ್ರಾಣಾಂ ಬಹುತ್ವಾತ್ - ಶಾಸ್ತ್ರಗಳು ಬಹುವಾಗಿರುವವರಿಂದ, ಜ್ಞಾನತತ್ತ್ವಂ - ಯಥಾರ್ಥವಾದ ತತ್ವದ ಜ್ಞಾನವು ಅಥವಾ ಜ್ಞಾನದ ಯಾಥಾರ್ಥ್ಯವು, ಸುದುರ್ಲಭಮ್ - ಅತ್ಯಂತ ಕಷ್ಟತರವಾದುದು," ಎನ್ನುವ್ - ಎಂದೂ, "ನಿಸ್ಸಂಶಯೇಷು - ಸಂಶಯವಿಲ್ಲದ, ಸರ್ವೇಷು - ಸಮಸ್ತರಲ್ಲೂ, ಹರಿಃ - ಶ್ರೀಕೃಷ್ಣನು, ನಿತ್ಯಂ ವಸತಿ - ಸದಾ ವಸಿಸುತ್ತಾನೆ, ಯಾವಾಗಲೂ ಸನ್ನಿಹಿತನಾಗಿರುತ್ತಾನೆ. ಸಸಂಶಯಾನ್ - ಸಂಶಯಾವಿಷ್ಟರಾದ, ಹೇತು ಬಲಾನ್ - ಶಾಸ್ತ್ರಬಲವಿಲ್ಲದೆ ವಾದವೇ ಮುಖ್ಯಬಲವಾಗಿ ಉಳ್ಳ ಹೈತುಕರನ್ನು, ಮಾಧವಃ-ಲಕ್ಷ್ಮೀಪತಿಯು, ನಾಧ್ಯಾವಸತಿ-ಬಿಟ್ಟಗಲುವನು." ಎನ್ನುವ್-ಎಂಬ ದಾಗಿಯೂ, ಶೊನ್ನಾರ್‌ಗಳಿರೇ-ಹೇಳಿದರಷ್ಟೇ. ಎಲ್ಲವೂ ಶಾಸ್ತ್ರಗಳಾಗುವುದಿಲ್ಲವು. ಯಾರು ಯಾರಿಗೆ ಹೇಗೆ ಹೇಗೆ ತೋರಿತೋ ಹಾಗೆಲ್ಲಾ ಬರೆದುದೆಲ್ಲವೂ ಶಾಸ್ತ್ರಗಳಲ್ಲವು. ವೇದಗಳೇ ಮುಖ್ಯ ಶಾಸ್ತ್ರಗಳು. ಅವುಗಳಿಗೆ ವಿರೋಧವಲ್ಲದೆ ಅವುಗಳ ಉಪಬೃಹ್ಮಣಗಳಾದ ಸ್ಮೃತಿ ಇತಿಹಾಸಗಳೇ ಪ್ರಮಾಣಗಳು, ಹೀಗೆ ಹದಿನಾಲ್ಕು ಶಾಸ್ತ್ರಗಳು ಉಪಾದೇಯಗಳು. ಅವುಗಳು ಯಾವುವೆಂದರೆ :— "ಅಙ್ಗಾನಿ ವೇದಾಶ್ಚತ್ವಾರೋ ಮೀಮಾಂಸಾನ್ಯಾಯ ವಿಸ್ತರಃ । ಪುರಾಣಂ ಧರ್ಮಶಾಸ್ತ್ರಂಚ ವಿದ್ಯಾಹ್ಯೇತಾ ಶ್ಚತುರ್ದಶ॥" ಎಂಬ ಶ್ಲೋಕದಲ್ಲಿ ಉಪಪಾದಿತವು. ಇಲ್ಲಿ ಪುರಾಣಂ ಎಂದರೆ ಬೇರೆ ಪ್ರಮಾಣ ಮೂಲಕ ಆರು ಸಾತ್ವಿಕ ಪುರಾಣಗಳು ಮಾತ್ರವೇ. ಧರ್ಮಶಾಸ್ತ್ರವೆಂದರೆ ಮಾನವಾದಿ ಮುಖ್ಯ ಸ್ಮೃತಿಗಳು. ಇವು ವೇದಗಳಿಗೆ ವಿರುದ್ಧವಲ್ಲದೇ ಇರಬೇಕು.

ಇವುಗಳಿಗೆಲ್ಲಾ ಐಕಕಂಠ್ಯ ಉಂಟಾಗುವ ಹಾಗೆ ಸಮಂಜಸಾರ್ಥಗಳನ್ನು ಹೇಳಬಹುದು. ಯಾವನಿಗೆ ಇಂತಹ ಸಮಂಜಸಾರ್ಥವು ಉಪದೇಶ ಬಲದಿಂದಲೂ ಶ್ರೀ ಹರಿಕೃಪೆಯಿಂದಲೂ ಉಂಟಾಗುತ್ತದೋ ಅವನಿಗೆ ಶ್ರೀ ಹರಿಕೃಪೆಯುಂಟೆಂಬುವದು ಸಿದ್ಧವು. ಯಾವನಿಗೆ ಹಾಗೆ ಸಮಂಜಸಾರ್ಥ ತೋರದೆ ಐಕಕಂಠ್ಯವು ತೋರದೆ, ಪರಸ್ಪರ ವಿರುದ್ಧಗಳಾಗಿ ತೋರುತ್ತವೋ, ಅಂತವನು ಸಂಶಯಾವಿಷ್ಟ ಹೃದಯನು. ಕುತರ್ಕಗಳನ್ನೂ ಯುಕ್ತಿವಾದಗಳನ್ನೂ ಮಾಡುತ್ತಾ ನಷ್ಟನಾಗುವನು ; "ಸಂಶಯಾತ್ಮಾ ವಿನಶ್ಯತಿ" ಎಂದು ಹೇಳಲ್ಪಟ್ಟಿರುತ್ತದೆ. ಯದ್ಯಪಿ ಪುರಾಣಗಳೂ ಕೂಡ ಶ್ರುತಿಯ ಉಪಬೃಹ್ಮಣಗಳಾಗಿ ಪ್ರಮಾಣಗಳಾ

ದರೂ, ಶ್ರುತಿಯಲ್ಲಿರುವದೆಲ್ಲಾ ಹೇಗೆ ಉಪಾದೇಯವಲ್ಲವೋ, ಶ್ರೀ ಕೃಷ್ಣನೇ ಹಾಗೆ ಎಲ್ಲಾ ಉಪಾದೇಯವಲ್ಲವೆಂದು **"ತ್ರೈಗುಣ್ಯವಿಷಯಾವೇದಾ ನಿಸ್ತ್ರೈಗುಣ್ಯೋ ಭವಾರ್ಜುನ"** (ಗೀ. ೨.೪೫) ಎಂಬ ವಾಕ್ಯದಿಂದ ತಿಳಿಸಿ ಸತ್ವಪ್ರಚುರ ಭಾಗಮಾತ್ರ ಹೇಗೆ ಉಪಾದೇಯವೋ, ಹಾಗೆಯೇ ೧೮ ಪುರಾಣಗಳಲ್ಲಿ ಆರು ಸಾತ್ವಿಕ, ಆರು ರಾಜಸ, ಆರು ತಾಮಸಗಳಾದುದರಿಂದ ೧೨ ಪುರಾಣಗಳನ್ನು ತ್ಯಜಿಸಿ, ಆರನ್ನು ಮಾತ್ರ ಪರಿಗ್ರಹಿಸತಕ್ಕದ್ದು. ಆದುದರಿಂದ ಶಾಸ್ತ್ರಗಳಿಗೆ ಹೈತುಕರ ಮೂಲಕ ಅಪಲಾಪ ಸಂಶಯಾದಿಗಳಿಲ್ಲದಹಾಗೆ ಉಪದೇಶ ಉಪಬ್ರಹ್ಮಣಗಳು ಆವಶ್ಯಕ ವೆಂದು ಏರ್ಪಟ್ಟಿತು. ಇಲ್ಲಿ **ಮಹರ್ಷಿಗಳ್ ಶೊನ್ನಾರ್ಗಳಿರೆ** ಎಂಬಲ್ಲಿ ಮಹ ರ್ಷಿಗಳು ಯಾರೆಂದರೆ, ಇತಿಹಾಸ ಸಮುಚ್ಚಯ ಗ್ರಂಥಕರ್ತರು ಮತ್ತು ವ್ಯಾಸ ಮಹರ್ಷಿಗಳು ಹೇಳಲ್ಪಟ್ಟರು. ಹೀಗೆ ಹೈತುಕ ಸಂಸರ್ಗದಿಂದ ಸಂಶಯ ಅದರಿಂದ ಅನರ್ಥಗಳೂ ಪ್ರಾಪ್ತವಾಗಬಹುದೆಂಬುದು ಸಮರ್ಥಿಸಲ್ಪಟ್ಟಿತು.

ಆದರೆ, ಪ್ರಪನ್ನನಿಗೆ ಅಂತಹ ಸಂಶಯ, ಬುದ್ಧಿಭ್ರಂಶ, ದುರ್ಗತಿಯು ಉಂಟಾಗುವುದಿಲ್ಲವೆಂದು ಶಾಸ್ತ್ರಗಳಲ್ಲಿ ಹೇಳಿದೆಯಲ್ಲಾ ಎಂದರೆ ಅದಕ್ಕೆ ಸಮಾ ಧಾನ ಹೇಳುತ್ತಾರೆ. ಆ ಪ್ರಮಾಣಗಳು ಯಾವುವೆಂದರೆ :—

"ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್" (ಗೀ. ೨.೪೦) ಸ್ವಲ್ಪವಾಗಿ ಅನುಷ್ಠಿಸಿದ ಧರ್ಮವೂ ಕೂಡ ಮಹತ್ತಾದ ಭಯದಿಂದ ರಕ್ಷಿಸುತ್ತದೆ.

"ನ ಹಿ ಕಲ್ಯಾಣ ಕೃತ್ಕಶ್ಚಿದ್ದುರ್ಗತಿಂ ತಾತಗಚ್ಛತಿ" (ಗೀ ೬.೪೦) ಭಗವದುಪಾಸನಾದಿ ಶುಭಕರ್ಮವನ್ನು ಮಾಡದವನಿಗೆ ದುರ್ಗತಿ ಎಂಬುದಿಲ್ಲವು.

"ನ ಕ್ರೋಧೋ ನ ಚ ಮಾತ್ಸರ್ಯಂ ನ ಲೋಭೋ ನಾಶುಭಾಮತಿಃ । ಭವಂತಿ ಕೃತಪುಣ್ಯಾನಾಂ ಭಕ್ತಾನಾಂ ಪುರುಷೋತ್ತಮೇ ॥" ಪುರುಷೋ ತ್ತಮನಲ್ಲಿ ಭಕ್ತಿಯುಳ್ಳ ಕೃತೋಪಾಯರಿಗೆ ಕ್ರೋಧವಾಗಲಿ, ಮಾತ್ಸರ್ಯವಾಗಲಿ, ಮಾತ್ಸರ್ಯವೆಂದರೆ ದೋಷವಿಲ್ಲದ ಸ್ಥಳದಲ್ಲಿ ದೋಷಾರೋಪಣೆಯು, ಲೋಭವಾ ಗಲಿ, ಅಮಂಗಳ ಬುದ್ಧಿಯಾಗಲಿ, ಇದರಿಂದ ಸಂಶಯ ಮತಿಭ್ರಂಶಾದಿಗಳು ಹೇಳಲ್ಪಟ್ಟವು, ಇವು ಯಾವುವೂ ಉಂಟಾಗುವುದಿಲ್ಲವು.

"ಬುದ್ಧಿಭ್ರಂಶೋ ನ ಭವೇತ್" ಉಪಾಯನಿಷ್ಠರಿಗೆ ಬುದ್ಧಿಭ್ರಂಶವುಂ ಟಾಗುವುದಿಲ್ಲವು.

ಇತ್ಯಾದಿ ಪ್ರಮಾಣಗಳೆಲ್ಲಾ ಇರುವಾಗ ಕೃತೋಪಾಯನಾದ ಪ್ರಪನ್ನನಿಗೂ ಸಂಶಯ ಬುದ್ಧಿಭ್ರಂಶಾದಿಗಳುಂಟೆಂದು ಹೇಳಿದುದು ಹೇಗೆ? ಕರ್ಮಯೋಗ ಜ್ಞಾನಯೋಗಾದಿ ಉಪಾಸನೆಯಲ್ಲಿದ್ದು ಉಪಾಯ ಪೂರ್ತಿಯಿಲ್ಲದವರಿಗೇನೇ

(೧) "ನಕ್ರೋಧೋ ನಚಮಾತ್ಸರ್ಯಂ ನಲೋಭೋ ನಾಶುಭಾಮತಿಃ" ಇತ್ಯಾದಿಗಳುವ್ ಆತ್ಮಗುಣ ಪರಿಪೂರ್ಣಾಧಿಕಾರಿ ವಿಶೇಷ ವಿಷಯತ್ತಿಲೆ ಯಾಗಕ್ಕಡವನ. ಆನ ಪಿನ್ಪು, ಆರುರುಕ್ಷುಕ್ಕಳುಕ್ಕುಕ್ಕಲಕ್ಕಮುಂಡೆನ್ರು ಮಿಡಮ್ (೨) "ಶ್ರೂಯತೇಕಿಲಗೋವಿಂದೇ ಭಕ್ತಿಮುದ್ವಹತಾಂನೃಣಾಂ।

ಮಹದ್ಭಯವೂ ದುರ್ಗತಿಯೂ ಇಲ್ಲವೆಂದು ಹೇಳಿರುವಾಗ, ಪ್ರಪತ್ತಿಯನ್ನನುಷ್ಠಿಸಿ ಕೃತಕೃತ್ಯನಾದವನಿಗೆ ಬುದ್ಧಿಭ್ರಂಶವೂ, ಅಶುಭವೂ, ದುರ್ಗತಿಯೂ ಇಲ್ಲವೆಂಬುದು ಕೈಮುತಿಕ ನ್ಯಾಯಸಿದ್ಧವಲ್ಲವೇ ? ಎಂದರೆ, ಇವೆಲ್ಲಾ ಆತ್ಮಗುಣ ಪರಿಪೂರ್ಣರಾಗಿ ಸಂಶಯಾದಿಗಳಿಗೆ ಅವಕಾಶವಿಲ್ಲದವರ ವಿಷಯವೆಂದು ಗ್ರಹಿಸತಕ್ಕದ್ದೆಂದು ಹೇಳಬೇಕೆಂದೂ, ಉಪದೇಶಬಲದಿಂದ ಉಪಾಯಾನುಷ್ಠಾನ ಮಾಡಿದ ಮಂದಪ್ರಜ್ಞರಿಗೆ ಸಂಶಯ ಮತಿಭ್ರಂಶಾದಿಗಳು ಹೈತುಕಸಂಸರ್ಗದಿಂದ ಪ್ರಾಪ್ತವಾಗುವುದು ಸಿದ್ಧವೆಂದೂ, ಹೇಳುತ್ತಾರೆ.

"ನ ಕ್ರೋಧೋ ನ ಚ ಮಾತ್ಸರ್ಯಂ" ಇತ್ಯಾದಿಗಳುವ್ - ಇವೇ ಮೊದಲಾದ ಪ್ರಮಾಣಗಳು, **ಆತ್ಮಗುಣ ಪರಿಪೂರ್ಣಾಧಿಕಾರಿ ವಿಶೇಷ** - ಜೀವಾತ್ಮನ ಸರ್ವಶ್ರೇಷ್ಠ ಗುಣಗಳು ಜ್ಞಾನ, ಭಕ್ತಿ ವೈರಾಗ್ಯಗಳು, ಇವುಗಳು ಪರಿಪೂರ್ಣವಾಗಿರುವ ವಿಶೇಷಾಧಿಕಾರಿಯನ್ನು, **ವಿಷಯತ್ತಿಲೆ ಆಗಕ್ಕಡವನ** - ಕುರಿತು ಹೇಳಿದುದಾಗಿ ಭಾವಿಸತಕ್ಕದ್ದೇ ಯುಕ್ತವು. ಹೀಗೆ ಜ್ಞಾನ ಭಕ್ತಿ ವೈರಾಗ್ಯಗಳು ಪರಿಪೂರ್ಣವಾಗಿರುವವನ ವಿಷಯದಲ್ಲಿ ಹೇಳಿದ ಪ್ರಮಾಣಗಳೆಂದು ಇವುಗಳಿಗೆ ಗತಿ ಕಲ್ಪಿಸತಕ್ಕದ್ದೇ ಯುಕ್ತವು. ಏಕೆಂದರೆ ಹಾಗೆ ಈ ಆತ್ಮಗುಣ ಪೂರ್ತಿಗಳು ಪೂರ್ಣವಾಗದ ಅಧಿಕಾರಿಗಳಿಗೆ ಸಂಶಯ ಭ್ರಮಾದಿಗಳು ತಪ್ಪಿದ್ದಲ್ಲವೆಂದು ಮುಂದಿನ ವಾಕ್ಯದಿಂದ ಹೇಳುತ್ತಾರೆ.

ಆನ ಪಿನ್ಪು - ಹೀಗಾದ ಮೇಲೆ ಎಂದರೆ, **"ನ ಕ್ರೋಧೋ ನ ಚ ಮಾತ್ಸರ್ಯಂ"** ಇತ್ಯಾದಿ ಪ್ರಮಾಣಗಳು ಆತ್ಮಗುಣ ಪರಿಪೂರ್ಣಾಧಿಕಾರ ವಿಷಯವೆಂದಾದ ನಂತರ, **ಆರುರುಕ್ಷುಗಳುಕ್ಕು** - ಹಾಗೆ ಆತ್ಮಗುಣ ಪರಿಪೂರ್ಣವಿಲ್ಲದ ಅಧಿಕಾರಿಗಳಾಗಿ ಭಗವದ್ವಿಷಯದಲ್ಲಿ ಪ್ರವರ್ತಿಸಲು ಇಚ್ಛೆಯುಳ್ಳವರಿಗೆ, ಅದಕ್ಕಾಗಿ ಶಾಸ್ತ್ರಾಭ್ಯಾಸ ಪ್ರಾರಂಭಿಸಿರುವವರಿಗೆ, **ಕಲಕ್ಕ ಮುಂಡೆನ್ರುಮಿಡಮ್** - ಬುದ್ಧಿವೈಕಲ್ಯವು, ಬುದ್ಧಿಭ್ರಂಶವು ಉಂಟೆಂಬುದು, **"ಗೋವಿಂದೇ** - ಗೋವಿಂದನಲ್ಲಿ, **ಭಕ್ತಿಂ** - ಭಕ್ತಿಯನ್ನು, **ಉದ್ವಹತಾಂ** - ವಹಿಸುತ್ತಿರುವ,

(೧) ಭಾರತ. ಅನು. (೨) ವಿಷ್ಣುಧರ್ಮ. ೨.೨೫.

ಸಂಸಾರ ನ್ಯೂನತಾಭೀತಾ ಸ್ತ್ರಿದಶಾಃ ಪರಿಪನ್ಥಿನಃ" (೧) "ಸತ್ಯಂ ಶತೇನ ವಿಘ್ನಾನಾಂ ಸಹಸ್ರೇಣ ತಥಾ ತಪಃ । ವಿಘ್ನಾಯುತೇನ ಗೋವಿಂದೇ ನೃಣಾಂ ಭಕ್ತಿರ್ನಿವಾರ್ಯತೇ" ಇತ್ಯಾದಿಗಳಿಲೇ ಪ್ರಸಿದ್ಧಮ್.

ನೃಣಾಂ - ಮನುಷ್ಯರಿಗೆ, **ಸಂಸಾರನ್ಯೂನತಾ ಭೀತಾಃ** - ತಮ್ಮ ಭೋಗರೂಪ ಸಂಸಾರಕ್ಕೆ ನ್ಯೂನತೆ ಬರುತ್ತದೆಂದು ಭಯಪಟ್ಟ, **ತ್ರಿದಿಶಾಃ** - ದೇವತೆಗಳು, **ಪರಿಪಂಥಿನಃ** - ಶತ್ರುಗಳು, ಎಂದು, **ಶ್ರೂಯತೇಕಿಲ** - ಶ್ರುತಿಯಲ್ಲಿ ಹೇಳಲ್ಪಟ್ಟಿರುತ್ತದಲ್ಲವೇ ? ಇಲ್ಲಿ ಭಕ್ತಿಮುದ್ವಹತಾಂ ಎಂದು ಹೇಳಿರುವುದರಿಂದ ಆರುರುಕ್ಷುಗಳೆಂಬುದು ವ್ಯಕ್ತವು, ಅಂತವರಿಗೆ ದೇವತೆಗಳಿಂದ ತೊಂದರೆಯುಂಟೆಂಬುದು ತೋರಿಬರುತ್ತದೆ. ಏಕೆಂದರೆ, ಇವರು ಭಕ್ತಿಯನ್ನು ಮಾಡಿ ಎಲ್ಲಿ ತಮ್ಮ ಪದವಿಗೆ ಬರುತ್ತಾರೋ, ಅದರಿಂದ ತಮಗೆಲ್ಲಿ ತೊಂದರೆಯುಂಟಾಗುತ್ತದೋ ಎಂದು ಭೀತರಾಗಿ ಅಂತಹ ಭಕ್ತಿ ಮಾಡುವವರನ್ನು ದ್ವೇಷಿಸಿ ಅವರಿಗೆ ಅನೇಕ ವಿಘ್ನಗಳನ್ನುಂಟುಮಾಡಿರುತ್ತಾರೆಂಬ ತಾತ್ಪರ್ಯವು. ಆದುದರಿಂದ ಇಂತಹ ಆರುರುಕ್ಷುಗಳಿಗೆ ದೇವತೆಗಳ ದ್ವೇಷದಿಂದ ಮತಿಭ್ರಂಶವು ಉಂಟಾಗಬಹುದೆಂಬ ಭಾವವು. ಇನ್ನೊಂದು ಪ್ರಮಾಣದಿಂದಲೂ ವಿಘ್ನಗಳುಂಟೆಂದು ತೋರಿಸುತ್ತಾರೆ. **ನೃಣಾಂ**-ಮನುಷ್ಯರಿಗೆ, **ವಿಘ್ನಾನಾಂ ಶತೇನ**-ವಿಘ್ನಗಳ ನೂರರಿಂದ, **ಸತ್ಯಂ**-ಸತ್ಯವು, **ನಿವಾರ್ಯತೇ**-ನಿವಾರಣೆ ಮಾಡಲ್ಪಡುತ್ತದೆ. ಸತ್ಯಕ್ಕೆ ನೂರು ವಿಘ್ನಗಳುಂಟು ಎಂದರೆ ಅನೇಕ ವಿಘ್ನಗಳುಂಟೆಂಬ ಭಾವವು. **ತಥಾ** - ಹಾಗೆಯೇ, **ವಿಘ್ನಾನಾಂ ಸಹಸ್ರೇಣ** - ಸಾವಿರ ವಿಘ್ನಗಳಿಂದ, **ತಪಃ**-ತಪಸ್ಸು, **ನಿವಾರ್ಯತೇ**-ನಿವಾರಣೆ ಮಾಡಲ್ಪಡುತ್ತದೆ. **ವಿಘ್ನಾಯುತೇನ**-ಹತ್ತುಸಾವಿರ ವಿಘ್ನಗಳಿಂದ **ಗೋವಿಂದೇ ಭಕ್ತಿಃ**-ಗೋವಿಂದನಲ್ಲಿರುವ ಭಕ್ತಿಯು, **ನಿವಾರ್ಯತೇ**-ನಿವಾರಣೆಮಾಡಲ್ಪಡುತ್ತದೆ. ಹೀಗೆ ಸತ್ಯಕ್ಕೂ, ತಪಸ್ಸಿಗೂ, ಭಕ್ತಿಗೂ ಸಹ ವಿಘ್ನಗಳುಂಟೆಂದು ಹೇಳಲ್ಪಟ್ಟಿರುತ್ತದೆ. ಇಲ್ಲಿಯೂ ವಿಘ್ನಕರ್ತರು ಯಾರೆಂಬುವ ಪ್ರಶ್ನೆಯುಂಟಾದರೆ, ಮೇಲಿನ ಶ್ಲೋಕದಲ್ಲಿ **ತ್ರಿದಶಾಃಪರಿಪನ್ಥಿನಃ** ಎಂದು ಹೇಳಿರುವ ಹಾಗೆ ದೇವತೆಗಳೇ ವಿಘ್ನಮಾಡುವವರು. ವಿಶ್ವಾಮಿತ್ರಾದಿಗಳ ತಪಸ್ಸಿಗೆ ದೇವತೆಗಳು ವಿಘ್ನಮಾಡಿರುವದು ಸುಪ್ರಸಿದ್ಧವು. **ಇತ್ಯಾದಿಗಳಿಲೆ ಪ್ರಸಿದ್ಧವು** ಇವೇ ಮೊದಲಾದ ಪ್ರಮಾಣಗಳಲ್ಲಿ ಬಹು ವ್ಯಕ್ತವಾಗಿ ತೋರುತ್ತವೆ. ಇಲ್ಲಿ ಎರಡು ಪರಸ್ಪರ ವಿರುದ್ಧಗಳಾದ ಪ್ರಮಾಣಗಳಿವೆ. ಕೆಲವು **ನಕ್ರೋಧೋ ನ ಚ ಮಾತ್ಸರ್ಯಂ** ಇತ್ಯಾದಿ ಪ್ರಮಾಣಗಳು, ಪ್ರಪನ್ನನಿಗೆ

(೧) ವಿಷ್ಣು ಧರ್ಮ ೭೪.೯೪.

ಸಿದ್ಧೋಪಾಯ ವಿಷಯೇ ಶಙ್ಕಾಃ, ತಾಸಾಂ ಪರಿಹಾರಾಶ್ಚ.

ಅದಿಲ್ ಮುರ್ಪಡ ಸಿದ್ಧೋಪಾಯತ್ತೈಪ್ಪತ್ತೆ ವರುಮ್ ಕಲಕ್ಕಙ್ಗಳುಮ್, ಅವತ್ತಿನ್ ಪರಿಹಾರಙ್ಗಳುಮ್ ಶೊಲ್ಲುಗಿರೋಮ್.

ಏನೊಂದೂ ತೊಂದರೆಗಳಿಲ್ಲವು, ಆತನಿಗೆ ಬುದ್ಧಿಭ್ರಂಶಾದಿಗಳಿಲ್ಲವೆಂದು ಹೇಳುತ್ತವೆ. ಇನ್ನು ಕೆಲವು "ಸತ್ಯಂ ಶತೇನ" ಇತ್ಯಾದಿಗಳಿಂದ ವಿಘ್ನಗಳೂ ಅನರ್ಥಗಳೂ ಉಂಟೆಂದು ಹೇಳುತ್ತವೆ. ಇವುಗಳಿಗೆ ಸಾಮಂಜಸ್ಯವನ್ನು ಕಲ್ಪಿಸುವದಕ್ಕಾಗಿ ಮೊದಲಿನ ಪ್ರಮಾಣಗಳು ಆತ್ಮಗುಣ ಪರಿಪೂರ್ಣಾಧಿಕಾರ ವಿಷಯವಾದುವು, ಎರಡನೆಯವು ಹಾಗೆ ಪರಿಪೂರ್ಣಾಧಿಕಾರಿ ವಿಷಯವಲ್ಲದೆ ಆರುರುಕ್ಷುಗಳ ವಿಷಯವಾದುವೆಂದೇ ನಿರ್ಧರಿಸಬೇಕಾಗಿದೆ ಎಂಬ ತಾತ್ಪರ್ಯವು. ಆದುದರಿಂದ ಉಪಾಯಾನುಷ್ಠಾನ ಮಾಡಿದವನಿಗೂ ಹೈತುಕವಾದಗಳಿಂದ ಬುದ್ಧಿ ಭ್ರಂಶವೇ ಮೊದಲಾದಅನರ್ಥಗಳು ಉಂಟೆಂಬುದು ಸ್ಥಾಪಿಸಲ್ಪಟ್ಟಿತು. ಆ ಕಾರಣದಿಂದಲೇ ಸ್ಥಿರೀಕರಣಭಾಗದ ಆರಂಭವು ಅತ್ಯಾವಶ್ಯಕವೆಂಬುದು ಏರ್ಪಟ್ಟಿತು. ಹೀಗೆ ಬುದ್ಧಿಭ್ರಂಶಗಳಿಂದ ಶಙ್ಕಾಗಳು ಉತ್ಪನ್ನವಾಗುವದರಿಂದ ಅವುಗಳಿಗೆ ಸಮಾಧಾನಗಳನ್ನು ಹೇಳತಕ್ಕದ್ದು ಅತ್ಯಾವಶ್ಯಕವು. ಹಿಂದೆಯೇ ಈ ಶಂಕಾಗಳು ನಾಲ್ಕು ಸಂದರ್ಭದಲ್ಲಿ ಪ್ರಾಪ್ತವಾಗಬಹುದೆಂದು ಹೇಳಲ್ಪಟ್ಟವು. ಅದರಲ್ಲಿ ಮೊದಲು ಸಿದ್ಧೋಪಾಯ ವಿಷಯದಲ್ಲುಂಟಾಗುವ ಶಂಕಾಗಳನ್ನು ಹೇಳಿ ಅವುಗಳಿಗೆ ಪರಿಹಾರಗಳನ್ನು ತಿಳಿಸುವುದಾಗಿ ಪ್ರತಿಜ್ಞೆ ಮಾಡಿರುತ್ತಾರೆ:—

ಸಿದ್ಧೋಪಾಯ ವಿಷಯದಲ್ಲುಂಟಾಗುವ ಶಙ್ಕಾಗಳೂ, ಅವುಗಳ ಪರಿಹಾರಗಳೂ.

ಅದಿಲ್ - ಬರೀ ಯುಕ್ತಿವಾದದಿಂದ ಶಂಕಾಗಳು ಉತ್ಪನ್ನವಾಗುತ್ತವೆಂಬ ಸಂದರ್ಭದಲ್ಲಿ, ಮುರ್ಪಡ - ಮೊದಲು, ಸಿದ್ಧೋಪಾಯತ್ತೈಪ್ಪತ್ತೆ - ಸಿದ್ಧೋಪಾಯವನ್ನು ಕುರಿತು, ವರುಮ್ - ಯುಕ್ತಿ ಮೂಲಕ ಪ್ರಾಪ್ತವಾಗುವ, ಕಲಕ್ಕಙ್ಗಳುಮ್ - ಭ್ರಮೆಗಳನ್ನೂ, ಶಂಕಾಗಳನ್ನೂ, ಅವತ್ತಿನ್ ಪರಿಹಾರಙ್ಗಳುಮ್ - ಅವುಗಳ ಪರಿಹಾರಗಳನ್ನೂ, ಶೊಲ್ಲುಗಿರೋಮ್ - ಹೇಳುವೆವು, ಎಂಬದಾಗಿ ಪ್ರತಿಜ್ಞಾ ವಾಕ್ಯವನ್ನು ಹೇಳಿ ಉಪದೇಶಿಸುತ್ತಾರೆ.

ಇಲ್ಲಿ ಮುಂದೆ ಉಪಪಾದಿಸಲ್ಪಡುವ ಶಂಕಾಗಳನ್ನು ಮೂರು ವಿಧವಾಗಿ ವಿಭಾಗಿಸಬಹುದು. ಅವು ಯಾವುವೆಂದರೆ:—(೧) ಸರ್ವೇಶ್ವರನ ಸ್ವಾತಂತ್ರ್ಯ

28.10.02

೧. ಭಗವತ್ಸ್ವಾತಂತ್ರ್ಯಕಾರುಣ್ಯಾಪೇಕ್ಷಯಾ ಪ್ರಪತ್ತ್ಯನನುಷ್ಠೇಯತ್ವಮಿತಿ ಶಙ್ಕಾ ನಿರಾಸಃ

ಅನಾದಿಕಾಲ ಮನಾದರಿತ್ತ ಈಶ್ವರ್ರ್, ಇನ್ರೊರುತ್ತನೈ ಆದರಿಕ್ಕಿರದು ತನ್ ಸ್ವಾತಂತ್ರ್ಯಮಾತ್ರತ್ತಾಲೆ ಯನ್ರೋ? ಇಙ್ಙನನ್ರಾಗಿಲ್, (೧) "ಇನ್ರೆನ್ನೈಪ್ಪೊರುಳಾಕ್ಕಿತ್ತನ್ನೈ ಯೆನ್ನುಳ್ ವೈತ್ತಾನ್, ಅನ್ರೆನ್ನೈ

ಸಹಜಕಾರುಣ್ಯಮೂಲಕವಾಗಿ ಉಂಟಾಗುವ ಶಂಕಾಗಳೂ ಅವುಗಳ ಪರಿಹಾರಗಳೂ, (೨) ಗುಣವಿಶೇಷ ಸಂಬಂಧವಿಶೇಷ ಮೂಲಕವಾಗಿ ಉಂಟಾಗುವ ಶಂಕಾಗಳೂ ಪರಿಹಾರಗಳೂ, (೩) ಪತ್ನಿಯ ಸಂಬಂಧದಿಂದುಂಟಾಗುವ ಶಂಕಾಗಳೂ ಪರಿಹಾರಗಳೂ. ಇವುಗಳಲ್ಲಿ ಮೊದಲು ಸರ್ವೇಶ್ವರನ ಸ್ವಾತಂತ್ರ್ಯ ಸಹಜಕಾರುಣ್ಯ ಮೂಲಕ ಉಂಟಾಗುವ ಶಂಕಾಗಳೂ ಪರಿಹಾರಗಳೂ ಉಪಪಾದಿಸಲ್ಪಡುವುವು.

೧. ಭಗವಂತನ ಸ್ವಾತಂತ್ರ್ಯ ಕಾರುಣ್ಯಗಳ ಮುಂದೆ ಪ್ರಪತ್ತ್ಯನುಷ್ಠಾನವು ಬೇಕಿಲ್ಲವೆಂಬ ಶಙ್ಕಾವಿನ ನಿರಾಸವು.

ಮೊದಲು ಪೂರ್ವಪಕ್ಷ ರೀತಿಯಲ್ಲಿ ಶಂಕಾವನ್ನು ಅನಾದಿಕಾಲಂ ಎಂದಾರಂಭಿಸಿ, ಕೆಲಙ್ಙವರ್‌ಗಳ್ ಎನ್ನುವವರೆಗೂ, ಉಪಪಾದಿಸುತ್ತಾರೆ :— ಅನಾದಿಕಾಲಂ-ಅನಂತವಾದ ಪೂರ್ವಕಾಲದಿಂದಲೂ, ಯಾವಾಗಲಿಂದ ಎಂದು ಹೇಳಲು ಸಾಧ್ಯವಿಲ್ಲದ ಕಾಲದಿಂದ, ಅನಾದರಿತ್ತ - ತನ್ನ ಭಕ್ತನನ್ನಾಗಿ ಭಾವಿಸಿ ದಿವ್ಯ ವೈಕುಂಠಪ್ರಾಪ್ತಿಯನ್ನು ಕೊಡದೆ ಅನಾದರ ಮಾಡಿದ್ದ ಸರ್ವೇಶ್ವರನು, ಇನ್ರು - ಈಗ, ಒರುತ್ತನೈ - ಒಬ್ಬ ಬದ್ಧಚೇತನನ್ನು, ಆದರಿಕ್ಕಿರದು - ಆತನಲ್ಲಿ ಪ್ರೀತಿಮಾಡಿ ಆತನಿಗೆ ವೈಕುಂಠಪ್ರಾಪ್ತಿಯನ್ನು ದಯಪಾಲಿಸುವದು, ತನ್ ಸ್ವಾತಂತ್ರ್ಯ ಮಾತ್ರತ್ತಾಲೆಯನ್ರೋ - ತನಗಿರುವ ಸ್ವಾತಂತ್ರ್ಯ ಮೂಲಕವಾಗಿಯುಲ್ಲವೇ? ಎಂದರೆ ಈಶ್ವರ ಸಹಜ ಸ್ವಾತಂತ್ರ್ಯವೇ ಮುಖ್ಯಕಾರಣವಾಗಿರುವಾಗ ಇದಕ್ಕೆ ಬೇರೆ ವ್ಯಾಜವಿನ್ನೊಂದು ಬೇಕೇ? ಉಪಾಯಾನುಷ್ಠಾನವೆಂಬ ವ್ಯಾಜ ಬೇಕೇ? ಎಂಬದಾಗಿ ಆಕ್ಷೇಪವು ಅದರ ಸಮರ್ಥನೆಗಾಗಿ ನಮ್ಮಾಳ್ವಾರ್ರವರ ಪಾಶುರವೊಂದನ್ನು ಪೂರ್ವಪಕ್ಷ ರೀತ್ಯಾ ಉದಾಹರಿಸಬಹುದು, ಅದು ಯಾವುದೆಂದರೆ ಹೇಳುತ್ತಾರೆ :—

ಇನ್ರು - ಈಗ, ಎನ್ನೈ ಪೊರುಳಾಕ್ಕಿ - "ಅಸನ್ನೇವ ಸ ಭವತಿ" ಎಂಬ

(೧) ತಿರುವಾಯ್‌ಮೊಳಿ ೧೦.೮.೯.

ಪ್ಪುರವ್ಪೋಗಪ್ಪುಣರ್ತ್ತುದೆನ್ ಶೆಯ್‌ವಾ" ಎನ್ರು ಆಳ್‌ವಾರ್ ವಿಣ್ಣ

ಹಾಗೆ ಅಸತ್ತೆಂದೆನಿಸಿಕೊಂಡಿದ್ದ ನನ್ನನ್ನು, "ಅಸ್ತಿ ಬ್ರಹ್ಮೇತಿಚೇದ್ವೇದ ಸಂತ ಮೇನಂತತೋವಿದುಃ" ಎಂದು ಹೇಳಿರುವ ಹಾಗೆ, ಎನ್ನೈ ಪೊರಳಾಕ್ಕಿ - ನನ್ನನ್ನು ಒಂದು ವಸ್ತುವನ್ನಾಗಿ ಮಾಡಿ, ತನ್ನೈ - ವಿಶೇಷ ಭೋಗ್ಯನಾದ ತನ್ನನ್ನು, ಎನ್ನುಳ್ ವೈತ್ತಾನ್ ಹೇಯವಾದ ನನ್ನ ಹೃದಯ ಗುಹೆಯಲ್ಲಿ ದಿವ್ಯ ಮಙ್ಗಳ ವಿಗ್ರಹಯುಕ್ತ ದೆಶೆಯನ್ನು ಹೊಂದುವ ಹಾಗೆ ಮಾಡಿಕೊಂಡನು. ಅಥವಾ ನನ್ನ ಮನಸ್ಸಿನಲ್ಲಿ ಸದಾ ಇರುವ ಹಾಗೆ ಮಾಡಿಕೊಂಡನು. ಅನ್ರು - ಅನಂತವಾದ ಪೂರ್ವಕಾಲದಲ್ಲಿ, ಎನ್ನೈ ಪುರುವ್ಪೋಕ - ಬಾಹ್ಯ ವಿಷಯ ಮಾರ್ಗದಲ್ಲಿ ಹೋಗುವ ಹಾಗೆ ಮಾಡಿ, ಪುಣರ್ತ್ತದು - ಬಂಧಕ್ಕೆ ಸಿಕ್ಕುವ ಹಾಗೆ ಮಾಡಿದುದು, ಎನ್‌ಶೆಯ್‌ವಾ - ಏತಕ್ಕಾಗಿ ಮಾಡಿದನು? "ಕುನ್ರನ್ನ ತ್ತಿಗಳ್ ಮಾಡಙ್ಗಳ್ ಶೂಳ್ ತಿರುಪ್ಪೇರಾ । ನೊನ್ರನಕ್ಕರುಳ್‌ಶೆಯ್ಯ ಪುಣರ್ತ್ತಲು*ಣ್ರ*ನೇ" ಎಂಬುವದು ಉತ್ತರಾರ್ಧವು, ಇದರರ್ಥವು, ಕುನ್ರನ್ನ ತಿಗಳ್ ಮಾಡಙ್ಗಳ್ ಶೂಳ್ - ಬೆಟ್ಟಗಳೋ ಎಂದು ಹೇಳಬಹುದಾದ ಪ್ರಕಾಶಿ ಸುತ್ತಿರುವ ಹರ್ಮ್ಯಪ್ರಾಸಾದಗಳಿಂದ ತುಂಬಿದ, ತಿರುಪ್ಪೇರಾ - ತಿರುಪ್ಪೇ ರೆಂಬ ಕ್ಷೇತ್ರದಲ್ಲಿ ಬಿಜಮಾಡಿಸಿರುವ ಸ್ವಾಮಿಯು, ಒನ್ರು - ಹಿಂದೆ ಏಕೆ ದಯ ಪಾಲಿಸಲಿಲ್ಲ, ಈಗ ಏಕೆ ದಯಪಾಲಿಸಿದನು ಎಂಬೆರಡು ಪ್ರಶ್ನೆಯಲ್ಲಿ ಒಂದಕ್ಕೆ ಪ್ರತ್ಯುತ್ತರವನ್ನು, ಎನಕ್ಕರುಳ್ ಶೆಯ್ಯ - ನನಗೆ ಕೃಪೆ ಮಾಡಿ ಹೇಳಬೇಕೆಂದು ಉಣರ್ತ್ತಲುತ್ತೇನ್ - ನಿನ್ನ ಮನಸ್ಸಿಗೆ ಹಿಡಿಯುವಹಾಗೆ ತಿಳಿಸಬೇಕೆಂದು ಉದ್ಯೋಗಿಸಿದ್ದೆನು." ನಮ್ಮಾಳ್ವಾರವರು ಸರ್ವೇಶ್ವರನನ್ನು ಕೇಳುತ್ತಾರೆ:— ಹಿಂದೆ ಅನಾದಿ ಕಾಲದಿಂದಲೂ ಅನಾದರದಿಂದ ಕಂಡಿರಿ, ಈಗ ಆದರದಿಂದ ಕಾಣುತ್ತೀರಿ. ಇವೆರಡರಲ್ಲಿ ಒಂದಕ್ಕಾದರೂ ದಯಮಾಡಿ ಕಾರಣವನ್ನು ತಿಳಿಸ ಬೇಕೆಂದು ಪ್ರಾರ್ಥಿಸಿರುತ್ತಾರೆ. ನಂಜೀಯರವರು ಈ ಪಾಶುರಾರ್ಥವನ್ನು ತಮ್ಮ ಆಚಾರ್ಯರಾದ ಭಟ್ಟರವರ ಮೂಲಕ ಸಂಗ್ರಹಿಸುವ ಕಾಲದಲ್ಲಿ ಸರ್ವೇಶ್ವರನು ಏನು ಪ್ರತ್ಯುತ್ತರವನ್ನು ಕೊಟ್ಟನೆಂದು ಕೇಳಲು ಅದಕ್ಕೆ ಭಟ್ಟರು, "ಈ ಆಳ್ವಾರ್ ತಲೆಗೆ ಇಷ್ಟು ದಿನವೂ ಏನೋ ದೋಷಗಳನ್ನು ಕಟ್ಟಿಬಿಟ್ಟೆನು, ಇದಕ್ಕೇನು ಉತ್ತರ ಹೇಳಲಾಗುತ್ತದೆ" ಎಂದು ಲಜ್ಜೆಯಿಂದ ಸುಮ್ಮನಿದ್ದನು ಎಂದು ಪ್ರತ್ಯುತ್ತರ ಕೊಟ್ಟರೆಂದು ಹೇಳುತ್ತಾರೆ; ಹಿಂದೆ ಆಳ್ವಾರಿಗೆ ರುಚಿ ಹುಟ್ಟಿರಲಿಲ್ಲನೆಂದೂ ಕಾರಣ ಹೇಳಲಾಗುವದಿಲ್ಲವು, ಈಗ ಸಾಧನಾನುಷ್ಠಾನ ಮಾಡಿದನು ಎಂಬ

ಪ್ಪಂಶೆಯ್‌ಯು, ಸರ್ವೇಶ್ವರ್ರ ಶೂಳ್‌ವಿಶುವ್ ಪಣಿಮುಗಿಲ್ ತೂರಿಯ ಮುಳಕ್ಕಿನ, ಇತೊಳಿಯವೇರೊರು ಉತ್ತರ ಮರುಳಿಚ್ಚೆಯ್‌ದಾನೋ? ಅಗ್ಗೈಯಾಲ್ ನಾಮೊರು ಉಪಾಯಾನುಷ್ಠಾನಮ್ ಪಣ್ಣುಗೈ ಯೆನ್ನೆನ್ಪದು

ಕಾರಣವನ್ನೂ ಹೇಳಲಾಗುವದಿಲ್ಲವು, ಎಂದರು. ಹೀಗಾದರೆ, ಈಶ್ವರನಿಗೆ ವೈಷಮ್ಯ ನೈರ್ಘೃಣ್ಯಾದಿಗಳು ಉಂಟಾಗುವುದಿಲ್ಲವೇ? ಮತ್ತು ಸರ್ವಮುಕ್ತಿ ಪ್ರಸಂಗವೂ ಉಂಟಾಗುವುದಿಲ್ಲವೇ? ಎಂಬಾಕ್ಷೇಪಗಳುಂಟಾಗುತ್ತವೆಯಲ್ಲಾ ಎಂದು ನಂಜೀಯರು ಕೇಳಲು, ಅವುಗಳಿಗೇನೂ ಕಾರಣವಿಲ್ಲವು ಏಕೆಂದರೆ, ಆತನೇ ಸಿದ್ಧೋಪಾಯನಾದುದರಿಂದ ಆತನೇ ಇಷ್ಟುದಿನ ಕಾದು ಇದ್ದು ಇವರಿಗೆ ಅದ್ವೇಷವೂ ಇದರಲ್ಲಿ ಅಭಿರುಚಿಯೂ ಉಂಟಾಗುವ ಹಾಗೆ ಆತನೇ ಮಾಡಿ ಈಗ ಕೃಪೆ ಮಾಡಿರುತ್ತಾನೆ. ಸರ್ವೇಶ್ವರನೇ ಇಲ್ಲಿ ಮುಖ್ಯಕಾರಣವಾದುದರಿಂದ ಈ ಆಳ್ವಾರ್ರವರ ಪ್ರಶ್ನೆಗೆ ಏನುತ್ತರವನ್ನೂ ಕೊಡಲಿಕ್ಕಾಗದೆ ಲಜ್ಜಿತನಾಗಿ ಸುಮ್ಮನಾದನು ಎಂದು ಶ್ರೀ ಭಟ್ಟರು ಉತ್ತರವನ್ನು ಕೊಟ್ಟರೆಂದು ಹೇಳುವರು. ಈ ಅಭಿಪ್ರಾಯವನ್ನು ಶ್ರೀ ದೇಶಿಕರವರು ಮುಂದೆ ಖಂಡಿಸುತ್ತಾರೆ. ಇನ್ನೂ ಪೂರ್ವಪಕ್ಷವನ್ನೇ ಉಪಪಾದಿಸುತ್ತಾರೆ:—**ಸರ್ವೇಶ್ವರ್ರ** – ಸರ್ವೇಶ್ವರನು, **ಶೂಳ್‌ವಿಶುಮ್‌ಪು** – ಈ ವ್ಯಾಪಿಸಿರುವ ಆಕಾಶದ, **ಅಣಿ** - ಅಲಂಕಾರಭೂತವಾದ, **ಮುಗಿಲ್ ತೂರಿಯ**– ಮೇಘತೂರ್ಯ, ಮೇಘಧ್ವನಿಗೆ ಸಮಾನವಾದ ಧ್ವನಿಯು, **ಮುಳಕ್ಕಿನ** - ಭೇರಿತಾಡನವು, **ಇದೊಳಿಯ** - ಇದನ್ನು ಬಿಟ್ಟು, **ವೇರೊರು** - ಬೇರೊಂದು, **ಉತ್ತರಂ** – ಪ್ರತ್ಯುತ್ತರವನ್ನು, **ಅರುಳಿಚ್ಚೆಯ್‌ದಾನೋ** - ದಯಪಾಲಿಸಿದನೋ. ಮೇಲೆ ಆಳ್ವಾರರು ಕೇಳಿದ ಎರಡು ಪ್ರಶ್ನೆಗಳಿಗೂ ಬರೀ ಆಕಾಶದಲ್ಲಿ ಮೇಘಧ್ವನಿಗೆ ಸಮಾನವಾದ ದೇವದುಂದುಭಿವಾದ್ಯವು ಕೇಳಿಸಿತೇ ವಿನಾ, ಸರ್ವೇಶ್ವರನು ಏನೊಂದೂ ಉತ್ತರ ಕೊಡಲಿಲ್ಲವು. ಏತಕ್ಕೆ ಉತ್ತರ ಕೊಡಲಿಲ್ಲವೆಂದರೆ, ಸರಿಯಾಗಿ ಹೇಳತಕ್ಕದ್ದೇನಾದರೂ ಇದ್ದರೆ, ಸುಮ್ಮನಿರುವನೋ? ಯಾವಾಗ ಉತ್ತರವಿಲ್ಲವೋ ಅಲ್ಲಿ ಸರಿಯಾಗಿ ಹೇಳತಕ್ಕದ್ದೇನೂ ಇಲ್ಲವೆಂಬ ಭಾವವು. ಉಪಾಯಾನುಷ್ಠಾನವನ್ನು ಈಗ ನೀನು ಮಾಡಿರುತ್ತೀಯೆ, ಆದುದರಿಂದ ಈಗ ನಿನ್ನನ್ನು ಆದರಿಸುತ್ತೇನೆ, ಹಿಂದೆ ಮಾಡಲಿಲ್ಲವಾದುದರಿಂದ ಅನಾದರಿಸಿದೆನು ಎಂದೇನಾದರೂ ಹೇಳಿದ್ದರೆ ಉಪಾಯಾನುಷ್ಠಾನವು ಆವಶ್ಯಕವೆಂದು ಭಾವಿಸಬಹುದಾಗಿತ್ತೆಂಬ ಭಾವವು. **ಅಗ್ಗೈಯಾಲ್** - ಆದುದರಿಂದ, **ನಾಮೊರುಪಾಯಾನುಷ್ಠಾನಮ್ ಪಣ್ಣುಗೈ** - ನಾವು ಒಂದುಪಾಯಾನುಷ್ಠಾನವನ್ನು ಮಾಡುವದು'

(೧) "ನಡುವೆ ವಂದುಯ್ಯ ಕೊಳ್‌ಗಿನ್ರನಾರ್ಥ" ಎಜ್ಞ್ರಪಡಿಯೇ ಅರುಳ್ ಪುರಿನ್ದ ಚಿನ್ತೈ ಯಡಿಯಾರ್ ಮೇಲ್ ವೈತ್ತವನ್ತಾನೇ ರಕ್ಷಿತ್ತ ಪೋದು ಕಾಣಾಮುತ್ತನೈ ಯನ್ರೋವೆನ್ನು ಶಿಲರ್ ಕಲಙ್ಗುವರ್‌ಗಳ್.

ಎನ್ಬದು ಎನ್ನ - ಎಂದರೆ ಏನು ? ಎಂದರೆ ಯಾವ ಪ್ರಯೋಜನಕ್ಕಾಗಿ ಎಂಬ ಭಾವವು. ಸರ್ವೇಶ್ವರನು ಕೃಪಾಸಾಗರನು ಮತ್ತು ಸ್ವತಂತ್ರನು, ಹೀಗಿರುವಾಗ ನಾವುಗಳು ಉಪಾಯಾನುಷ್ಠಾನ ಮಾಡುವದು ಏತಕ್ಕೆ ಎಂಬುದು ಅಭಿಪ್ರಾಯವು. "ನಡುವೆ - ಜನ್ಮಪರಂಪರೆಯ ಮಧ್ಯದಲ್ಲಿ ಅಥವಾ ಸಮಯ ನೋಡಿ ಮಧ್ಯದಲ್ಲಿ ಆಕಸ್ಮಿಕವಾಗಿ ಸಂಪೂರ್ಣ ಪರತಂತ್ರರಾದ ನಮ್ಮಿಂದೇನೂ ಪ್ರಯತ್ನ ಮೊದಲಾದವುಗಳಿಲ್ಲದೆ ಇರುವಾಗ ಎಂಬ ಭಾವವು. ವನ್ದು - ಬಂದು, ಉಯ್ಯಕೊಳ್‌ಗಿನ್ರ ನಾಥನೈ - ಉಜ್ಜೀವಿಸುವ ಹಾಗೆ ಮಾಡುವ ಸ್ವಾಮಿಯನ್ನು" ಎಂದು ನಮ್ಮಾಳ್ವಾರ್‌ವರ ಪಾಶುರದಲ್ಲಿ ಹೇಳಿರುವ ಹಾಗೆ, ಅರುಳ್ ಪುರಿನ್ದ ಚಿನ್ತೈ - ದಯೆಯಿಂದ ಕೂಡಿಕೊಂಡಿರುವ ಮನಸ್ಸನ್ನು, ಅವನ್ ತಾನೇ - ಭಗವಂತನು ತಾನಾಗಿಯೇ, ಅಡಿಯಾರ್ ಮೇಲೆ ವೈತ್ತು - ದಾಸರಾದ ನಮ್ಮ ಮೇಲೆ ಇಟ್ಟು, ರಕ್ಷಿತ್ತಪೋದು - ರಕ್ಷಿಸಿದುದಾದರೆ, ಕಾಣಾಮುತ್ತನೈ-ನಾವು ಸುಮ್ಮನೆ ಆದನ್ನು ನೋಡಿಕೊಂಡಿರುವದೆಷ್ಟೋ ಅಷ್ಟು ಮಾತ್ರವೇ, ಎನ್ರೋ - ಎಂಬದಾಗಿಯಲ್ಲವೇ, ಶಿಲರ್ - ಕೆಲವರು, ಕಲಙ್ಗುವರ್‌ಗಳ್ - ಭ್ರಾಂತರಾಗುವರು. ಸರ್ವೇಶ್ವರನು ಕೃಪೋದಧಿಯು ಮತ್ತು ಸ್ವತಂತ್ರನು. ತನಗೆ ಇಷ್ಟ ಬಂದಾಗ ಚೇತನನನ್ನುರಕ್ಷಿಸಬಹುದು. ಆತನೇ ಸಿದ್ಧೋಪಾಯನಾದುದರಿಂದ, ಯಾವಾಗಲೋ ಒಂದು ಕಾಲದಲ್ಲಿ ಅಕಸ್ಮಾತ್ತಾಗಿ ಬಂದು ರಕ್ಷಿಸಿಬಿಡುತ್ತಾನೆಂಬ ತಾತ್ಪರ್ಯವು. ಈ ಚೇತನನಿಂದ ಯಾವ ಪ್ರಯತ್ನವನ್ನಾಗಲಿ ವ್ಯಾಜವನ್ನಾಗಲಿ ಅಪೇಕ್ಷಿಸುವದಿಲ್ಲವು ಎಂದು ಹೇಳುತ್ತಾರೆ. ನಮ್ಮಾಳ್ವಾರ್‌ವರೂ ಹೀಗೆಯೇ ಹೇಳುವರೆಂದು ಅವರ ಪಾಶುರ ಒಂದನ್ನು ಉದಾಹರಿಸಿರುತ್ತಾರೆ. ಆ ಪಾಶುರವು ಯಾವುದೆಂದರೆ :—

ವಿಡುವೇನೋ ವೆನ್ನಿಳಕ್ಕ ಯೆನ್ನಾವಿಯೈ
ನಡುವೇ ವನ್ದುಯ್ಯಕ್ಕೊಳ್‌ಗಿನ್ರ ನಾತನೈ ।
ತ್ತೊಡುವೇ ಶೆಯ್‌ದಿಳುವಾಯ್‌ಚ್ಚಿಯರ್ ಕಣ್ಣಿನು
ಳ್ವಿಡವೇ ಶೆಯ್‌ದು ವಿಳುಕ್ಕುಮ್ಬಿರಾನೈಯೇ ॥

---

(೧) ತಿರು. ೧. ೭. ೫.

ಎನ್ ವಿಳಕ್ಕೈ - ನನಗೆ ಪ್ರಕಾಶಕನೇ, ಬೆಳಕು ಹೇಗೆ ತನ್ನನ್ನೂ ತೋರಿಸಿ ಇತರ ಪದಾರ್ಥಗಳನ್ನೂ ತೋರಿಸುತ್ತದೆಯೋ ಹಾಗೆ, ಇವರಿಗೆ ತನ್ನನ್ನೂ ತೋರಿಸಿ, ಸ್ವಸ್ವರೂಪವನ್ನೂ ವಿರೋಧಿಸ್ವರೂಪವನ್ನೂ ತೋರಿಸಿಕೊಡುವವನಾದ, **ಎನ್ನಾವಿಯೈ ನಡುವೆ ವನ್ದು** - ಪ್ರಕೃತಿ ಸಂಬಂಧದಿಂದ ನನ್ನದು ಈ ಆತ್ಮವೆಂದು ಭ್ರಮಿಸಿರುವುದನ್ನು, ಈ ಆತ್ಮ ನಿನ್ನದಾದುದರಿಂದ ನೀನೇ ಸ್ವತಂತ್ರಿಸಿ ನಿನಗೆ ಸಂಪ್ರೀಣನ ದೊರೆತ ಕಾಲದಲ್ಲಿ ಅಕಸ್ಮಾತ್ತಾಗಿ ಸ್ವತಂತ್ರಿಸಿ ಬಂದು, **ಉಯ್‌ಕೊಳ್‌ಗಿನ್ರ** - ಇದೊಂದು ವಸ್ತುವು ಎಂದು ಹೇಳಿಸಿಕೊಳ್ಳಲು ಯೋಗ್ಯವಾದುದನ್ನಾಗಿ ಮಾಡಿದ, **ನಾತನ್ನೈ** - ಈ ವಸ್ತುವಿಗೆ ಒಡೆಯನಾದ ಸ್ವಾಮಿಯನ್ನು, **ತೊಡವೆ ಶೆಯ್‌ದು** - ಕಪಟ ವ್ಯಾಪಾರಗಳನ್ನು ಮಾಡಿ, **ಇಳವಾಚ್ಚಿಯರ** - ಒಳ್ಳೇ ಯೌವನಾವಸ್ಥೆಯ ವಯಸ್ಸುಳ್ಳ ಗೋಪಸ್ತ್ರೀಯರ, **ಕಣ್ಣಿನುಳ್** - ಕಣ್ಣಿನ ಮೂಲಕ, **ವಿಡವೇ ಶೆಯ್‌ದು** - ಧೂರ್ತಕೃತ್ಯವನ್ನು ಮಾಡಿ, **ವಿಳುಕ್ಕುಮ್** - ಅವರನ್ನೇ ಕೃಪಾಕಟಾಕ್ಷದಿಂದ ನೋಡಿದ, **ಪಿರಾನೈ** - ಪರಮೋಪಕಾರಕನನ್ನು, **ವಿಡುವೇನೋ** - ನಾನು ಬಿಟ್ಟಿರುವೆನೋ? ಎಂದಿಗೂ ಇಲ್ಲವೆಂಬ ಭಾವವು ಆಧೇಯತ್ವ ನಿಯಾಮ್ಯತ್ವಶೇಷತ್ವಗಳಿಂದ ಸರ್ವೇಶ್ವರನಿಂದ ಸತ್ತೆಯನ್ನು ಹೊಂದಿದನೆಂಬ ಜ್ಞಾನವು, ಈಗ ಸರ್ವೇಶ್ವರ ಕೃಪೆಯಿಂದ ಉಂಟಾಗಿ, ನನ್ನ ಯಥಾರ್ಥಸ್ವರೂಪಜ್ಞಾನ ಉಂಟಾಗಿರುತ್ತದೆ ಎಂದು ಎನ್ವಿಳಕ್ಕೈ ಎಂಬುದರಿಂದ ತಿಳಿಸಿರುತ್ತಾರೆ. ಆದರೆ ಇಷ್ಟು ದಿನವೂ ಸ್ವಾಮಿ ಅನುಗ್ರಹ ಮಾಡದಿರುವದು "ಈ ಆವಿಯು ಯೆನ್ನಾವಿ" ಎಂದು ತಿಳಿದಿದ್ದೆನು. ಈಗಲಾದರೋ ನಿನ್ನ ಕೃಪಾಪ್ರಭಾವದಿಂದ, ಈ ಆತ್ಮ ನಿನ್ನದು, ನೀನು ಈ ಆತ್ಮವಿಗೆ ಸ್ವಾಮಿ, ನಾಥನೆಂದೂ, ನೀನೇ ಸಿದ್ಧೋಪಾಯನಾಗಿ ಬಂದು ನನ್ನನ್ನು ರಕ್ಷಿಸುವ ಮಹೋಪಕಾರನೆಂದೂ, ತಿಳಿದ ನಂತರ, ನಿನ್ನನ್ನು ಬಿಟ್ಟಗಲುವೆನೋ ಎಂದು ಹೇಳುತ್ತಾರೆ. ಗೋಪಸ್ತ್ರೀಯರಾದರೋ ನನ್ನ ಹಾಗಲ್ಲದೆ ಕಾಮಮೋಹಗಳಿಂದ ಯುಕ್ತರಾಗಿ ನಿನ್ನನ್ನು ವಂಚಿಸಿದವರು; ಅವರೊಂದಿಗೆ ಧೂರ್ತಕೃತ್ಯಗಳನ್ನು ನಡೆಸಿ, ಹಾಗಿದ್ದರೂ ಆ ಗೋಪಿಯರೇ ನಿನ್ನನ್ನಗಲಿರಲು ಇಷ್ಟವಿಲ್ಲದ ಹಾಗೆ ಮಾಡಿ, ಅಂತವರಿಗೂ ಉಪಕಾರಕನಾಗಿಯೂ, ಇರುವ ನಿನ್ನನ್ನು, ನೀನೇ ಸಮಸ್ತ ವಿಧದಲ್ಲೂ ಸತ್ತೆ ಮೊದಲಾದವುಗಳನ್ನಿತ್ತು, ಕಾಪಾಡಿದವನೆಂದು ತಿಳಿದ ನಾನು ಅಗಲಿದವನೋ ಎಂಬ ಭಾವವು. ಪೂರ್ವಪಕ್ಷವಾದವನ್ನು ಮಾಡುವವರಭಿಪ್ರಾಯವಾದರೋ- "ಈ ಚೇತನನು ಯಾರ ವಸ್ತು? ಸರ್ವೇಶ್ವರನದು, ಸರ್ವೇಶ್ವರನ ವಸ್ತುವಿನ ವಿಷಯದಲ್ಲಿ ಈ ಚೇತನನು ಏನಾದರೂ ಮಾಡತಕ್ಕದ್ದೇನಿರುತ್ತದೆ? ನಾನ್ ಎಂಬುವದೇ ತಪ್ಪು. ಅವನೇ ಸ್ವತಂತ್ರನು. ಅವನಿಗೆ ಯಾವಾಗ ಇಷ್ಟ ಬಂತೋ

ವ್ಯಾಜಸಾಪೇಕ್ಷತ್ವೇ ಶ್ರೀ ಶಠಕೋಪಸೂರಿಸೂಕ್ತಿಃ.

ಇವರ್‌ಗಳೈ ತ್ತೆಳಿವಿಕ್ಕುಮ್ ಪಡಿ:—ಈಶ್ವರರ್ ಸ್ವತಂತ್ರನೇಯಾಗಿ ಲುಮ್, ವೈಷಮ್ಯ ನೈರ್ಘೃಣ್ಯಙ್ಗಳಾಗಿರ ದೋಷಙ್ಗಳ್ ತನಕ್ಕುತ್ತಟ್ಟಾ

(ನೈಷಮ್ಯ ನೈಘೃಣ್ಯ ಇದ್ವ ನೋಕ್ಕಿ)

ಆಗ ನಡುವೇ ವನ್ದುಯ್ಯಕ್ಕೊಳ್ಳನಾಥನು, ಆದರಿಸುವನು, ರಕ್ಷಿಸುವನು. "ಆರೇನುಮ್ಬೇಱುಕ್ಕು ಆರೇನುಮ್ ಯತ್ನಂಮ್ಪಣ್ಣಿನಾರ್‌ಗಳೋ? ಗೋಪಿಕಾಸ್ತ್ರೀಯ.ರೇನಾದರೂ ಯತ್ನ ಮಾಡಿದರೋ? ತುಂಟತನಮಾಡಿದವ ನೆಲ್ಲಾ ಶ್ರೀ ಕೃಷ್ಣನಲ್ಲವೇ? ಹೀಗಿರುವಾಗ ಈ ಚೇತನನು ಏಕೆ ಉಪಾಯಾ ವಲಂಬನ ಮಾಡತಕ್ಕದ್ದು? ಈತನ ಪಾರತಂತ್ರ್ಯಕ್ಕೆ ವಿರುದ್ಧ ಧರ್ಮವಲ್ಲವೇ? ನಡುವೇ ವನ್ದು ಎಂದಿರುವದರಿಂದ ತನ್ನ ಸ್ವಾತಂತ್ರ್ಯಾನುಗುಣವಾಗಿ ಯಾವಾಗ ರಕ್ಷಿಸಬೇಕೋ, ಆಗ ತನ್ನ ವಸ್ತುವನ್ನು ತಾನೇ ರಕ್ಷಿಸಿಬಿಡುವನು ಎಂಬುದು." ಈ ಅಭಿಪ್ರಾಯವು ಶಾಸ್ತ್ರಪ್ರಮಾಣವಿರುದ್ಧವಾದುದರಿಂದ ಶ್ರೀ ದೇಶಿಕರವರು ಈ ವಾದವನ್ನು ಅಙ್ಗೀಕರಿಸದೆ, ಹೀಗೆ ವಾದ ಮಾಡುವವರು ಶ್ರೀ ದೇಶಿಕ ರವರಿಗೆ ಪರಮ ಗೌರವವುಳ್ಳ ನಮ್ಮಾಳ್ವಾರ್ರವರ ಸಂಬಂಧವುಳ್ಳವರಾಗಿ, ಆ ನಮ್ಮಾಳ್ವಾರ್ರವರ ಶ್ರೀ ಸೂಕ್ತಿಯಲ್ಲಿ ಪರಮಾದರವುಳ್ಳವರಾದುದರಿಂದ ಅವರಿಗೆ ಹಿತೋಕ್ತಿಮೂಲಕ ಸಕಾರಣವಾಗಿ, ಹೇಳುವದಲ್ಲದೆ, ಶ್ರೀ ನಮ್ಮಾಳ್ವಾರ್ರವರಿಗೆ ಹಾಗೆ ಅಭಿಪ್ರಾಯವಲ್ಲವೆಂಬುದನ್ನು ಶ್ರೀ ನಮ್ಮಾಳ್ವಾರವರ ಇನ್ನೊಂದು ಪಾಶುರದಿಂದಲೇ ವ್ಯಕ್ತಪಡಿಸುತ್ತಾರೆ. ಸರ್ವೇಶ್ವರನು ಕೃಪಾಶಾಲಿಯಾಗಿಯೂ ಸ್ವತಂತ್ರನಾಗಿಯೂ ಇದ್ದರೂ ಶಾಸ್ತ್ರಮರ್ಯಾದಾನುಗುಣವಾಗಿ ಒಂದು ವ್ಯಾಜಸಾ ಪೇಕ್ಷವಾಗಿಯೇ ರಕ್ಷಿಸುವನು. ಹಾಗೆ ವ್ಯಾಜವೂ ಅವಶ್ಯಕವೆಂದು ನಮ್ಮಾಳ್ವಾ ರ್ರವರೇ ಹೇಳಿರುತ್ತಾರೆಂದು ಅವರ ಸೂಕ್ತಿಯನ್ನೇ ಉದಾಹರಿಸುತ್ತಾರೆ ಆ ವ್ಯಾಜ ಯಾವುದೆಂದರೆ ಭಕ್ತಿ ಅಥವಾ ಪ್ರಪತ್ತಿ ರೂಪ ಉಪಾಯಾನುಷ್ಠಾನವು.

ಒಂದು ವ್ಯಾಜವಾವಶ್ಯಕವೆಂಬುದಕ್ಕೆ ಶ್ರೀ ನಮ್ಮಾಳ್ವಾರವರ ದಿವ್ಯ ಸೂಕ್ತಿಯು.

ಇವರ್‌ಗಳೈ - ಮೇಲೆ ಹೇಳಿದ ರೀತಿಯಲ್ಲಿ ಸರ್ವೇಶ್ವರನ ನಿರ್ಹೇತುಕ ಕೃಪೆಯೇ ರಕ್ಷಿಸುವದಕ್ಕೆ ಸಿದ್ಧವಾಗಿರುವಾಗ, ಈತನು ಉಪಾಯಾನುಷ್ಠಾನ ರೂಪ ದಲ್ಲಿ ಏನನ್ನೂ ಮಾಡುವದು ಅನಾವಶ್ಯಕವೆಂದು ವಾದಿಸುವವರಿಗೆ, ತೆಳಿವಿ ಕ್ಕುಮ್ ಪಡಿ - ಸಂಶಯ ಭ್ರಮಾದಿಗಳು ಹೋಗುವ ಹಾಗೆ ಹಿತೋಪದೇಶವು

ನೈಕ್ಕಾಗ, ಇರ್ವ ಪಕ್ಕಲಿಲೇಯೊರುವ್ಯಾಜತ್ತೈ ಯುಣ್ಡಾಕ್ಕಿ, ಯತ್ತೈ ಅವಲಂಬಿತ್ತು ತಾನ್ ರಕ್ಷಿಕ್ಕುಮ್.

ಹೇಗೆ ಎಂದರೆ ; ಈಶ್ವರನು ಸ್ವತಂತ್ರನಾಗಿದ್ದರೂ, ನೈಷಮ್ಯ-ಪಕ್ಷಪಾತವು, ತನಗೆ ಕೃಪೆ ಮಾಡುವ ಸ್ವಾತಂತ್ರ್ಯವಿದ್ದರೂ ಒಬ್ಬನಿಗೆ ಸಂಸಾರದ ನಾನಾವಿಧವಾದ ಕ್ಲೇಶವೂ ಇನ್ನೊಬ್ಬನಿಗೆ ಮುಕ್ತಿಯೂ ಹೀಗೆ ಪಕ್ಷಪಾತವು, **ನೈರ್ಘೃಣ್ಯ**-ಒಬ್ಬನ ವಿಷಯದಲ್ಲಿ ಕೃಪೆ ಇಲ್ಲದಿರುವಿಕೆಯು ಕ್ರೂರವಾಗಿರೋಣವು ; ಒಬ್ಬನು ಬಹಳ ದುಃಖಿಸುತ್ತಿದ್ದರೂ ಅದನ್ನು ನೋಡಿಕೊಂಡು ಲೀಲೆಯು ಹಾಗೆ ತಟಸ್ಥಭಾವದಿಂದಿರುವದು, ಇನ್ನೊಬ್ಬನಲ್ಲಿ ತುಂಬಾ ಕೃಪೆ, **ಈ ದೋಷಙ್ಗಳ್ ತನಕ್ಕು ತಟ್ಟಾವೈಕ್ಕಾಗ**-ಈ ದೋಷಗಳು ಸರ್ವೇಶ್ವರನಾಗಿ ಹೇಯ ಗುಣರಹಿತನಾದ ತನಗೆ ಅಂಟದಿರುವದಕ್ಕಾಗಿ, **ಇರ್ವ ಪಕ್ಕಲಿಲೇ**-ಈ ಬದ್ಧನಾದ ಜೀವಾತ್ಮನ ವಿಷಯದಲ್ಲಿ, **ಒರು ವ್ಯಾಜತ್ತೈ** - ಒಂದು ನೆಪರೂಪವಲ್ಲಿರುವ ಉಪಾಯಾನುಷ್ಠಾನವನ್ನು ಉಪಾಸನವನ್ನೋ ಅಥವಾ ಭರನ್ಯಾಸವನ್ನೋ, **ಉಣ್ಡಾಕ್ಕಿ**-ಉಂಟುಮಾಡಿ ಎಂದರೆ ಅನುಷ್ಠಿಸುವಹಾಗೆ ಮಾಡಿ, **ಅತ್ತೈ ಅವಲಂಬಿತ್ತು** - ಅದನ್ನು ಸಂಗ್ರಹಿಸಿ, **ತಾನ್ ರಕ್ಷಿಕ್ಕುಮ್** - ತಾನೇ ರಕ್ಷಿಸುವನು ; ಇಸೀಗ ತತ್ತ್ವಾರ್ಥವು ಎಂಬಭಿಪ್ರಾಯವು ಸರ್ವೇಶ್ವರನು ಒಂದು ವ್ಯಾಜ, ನೆಪ ಅಥವಾ ಕಾರಣವಿಲ್ಲದೆ ರಕ್ಷಿಸುವದಿಲ್ಲವೆಂಬ ತನ್ನ ಸಙ್ಕಲ್ಪವನ್ನು ಶಾಸ್ತ್ರಮೂಲಕ ತಿಳಿಸಿರುತ್ತಾನೆ. ಮೋಕ್ಷವನ್ನಿತ್ತು ರಕ್ಷಿಸಬೇಕಾದರೆ, ಇಲ್ಲವೇ ಭಕ್ತಿಮಾರ್ಗರೀತ್ಯಾ, ಅಥವಾ ಭರನ್ಯಾಸರೀತ್ಯಾ ಉಪಾಯಾನುಷ್ಠಾನಮಾಡಬೇಕು. ಹಾಗೆ ಪ್ರಪನ್ನನಾದರೇನೇ ಮೋಕ್ಷವು, ಇಲ್ಲದಿದ್ದರಿಲ್ಲವು ಎಂದು ತಿಳಿಸಿರುತ್ತಾನೆ. ಆದುದರಿಂದ ಈ ವ್ಯಾಜವನ್ನು ಅಪೇಕ್ಷಿಸುವನು. ಹೀಗಾದರೆ ಈ ವ್ಯಾಜವೇ ಫಲ ಕೊಡತಕ್ಕದ್ದಾಗುತ್ತದೆ, ಸರ್ವೇಶ್ವರನ ಸ್ವಾತಂತ್ರ್ಯಕ್ಕೆ ಕುಂದಕವುಂಟುಮಾಡಿದಹಾಗಾಗುತ್ತದೆಯಲ್ಲವೇ ಎಂದರೆ, ಉಪಾಯಾನುಷ್ಠಾನರೂಪಕರ್ಮವು ಜಡವಾಗಿ ಫಲವನ್ನು ಕೊಡತಕ್ಕದ್ದಲ್ಲವು, ಸರ್ವೇಶ್ವರನೇ ಕೊಡುವವನು ; ಆತನ ಸ್ವಾತಂತ್ರ್ಯಕ್ಕೂ ಏನೊಂದೂ ಹಾನಿ ಇಲ್ಲವು. ಆತನು ಸ್ವತಂತ್ರನಾದುದರಿಂದಲೇ ವ್ಯಾಜವು ಆವಶ್ಯಕವೆಂಬ ಶಾಸ್ತ್ರರೂಪಕಾನೂನನ್ನು ಏರ್ಪಡಿಸಿ ಅದಕ್ಕನುಸಾರವಾಗಿ ವರ್ತಿಸುತ್ತಾನೆ. ಹಾಗೆ ನಡೆಯುವದರಿಂದ ಪಕ್ಷಪಾತ ದೋಷವೂ ಇಲ್ಲವು, ಕರ್ಮಾನುಗುಣ ಆಜ್ಞಾಛೇದಿಗೆ ಶಿಕ್ಷೆಯನ್ನು ವಿಧಿಸುವದರಿಂದ ನಿರ್ಘೃಣನೆಂಬ ದೋಷವೂ ಇಲ್ಲವು. ಲೋಕದಲ್ಲಿಯೂ ರಾಜನು ಸ್ವತಂತ್ರನಾಗಿದ್ದರೂ, ತಾನು ಪಕ್ಷಪಾತಿ ನಿರ್ಘೃಣ ಎಂಬ ಲೋಕಾಪವಾದಗಳನ್ನು ತಪ್ಪಿಸಿಕೊಳ್ಳುವದಕ್ಕಾಗಿ ಕಾನೂನುಗಳನ್ನು ಏರ್ಪಡಿಸಿ,

ಇನ್ವರ್ಥತ್ತೈ (೧) "ತಿರುಮಾಲಿರುಮ್ ಶೋಲೈಮಲೈ ಯೆನ್ರೇನೆನ್ನ ತಿರುಮಾಲ್ ವನ್ದೆನ್ನೆಞ್ಜು ನಿರೈಯಪ್ಪುಗುನ್ದಾರ್" ಎನ್ರು ತಾಮೇ ಆಳ್ವಾರರುಳಿಚ್ಚೆಯ್ದಾರ್.

ಅವುಗಳನ್ನನುಸರಿಸಿ, ಧರ್ಮಕೆಲಸಗಳನ್ನು ಮಾಡಿದವರಿಗೆ ಮನ್ನಣೆಯೂ, ವಿರುದ್ಧಾಚರಣೆಮಾಡಿದವರಿಗೆ ಶಿಕ್ಷೆಯೂ ಉಂಟಾಗುವಹಾಗೆ ಮಾಡಿರುವನು. ಆದುದರಿಂದ ಲೋಕದಲ್ಲೂ ಕೂಡ ವ್ಯಾಜಗಳನ್ನನುಸರಿಸಿಯೇ ಮನ್ನಣೆ ಶಿಕ್ಷೆಗಳು; ಆದುದರಿಂದ ಈ ಭರನ್ಯಾಸರೂಪವ್ಯಾಜವಿಲ್ಲದೆ ಸರ್ವೇಶ್ವರನು ರಕ್ಷಿಸಲಾರನು. ಏಕೆಂದರೆ ತನ್ನ ಶಾಸ್ತ್ರ ಮರ್ಯಾದೆಗೆ ವಿರುದ್ಧವಾಗಿ ತಾನೇ ಎಂದಿಗೂ ನಡೆಯಲಾರನು. ಹಾಗೆಯೇ ಶ್ರೀ ನಮ್ಮಾಳ್ವಾರವರು, ವ್ಯಾಜವು ಆವಶ್ಯಕವೆಂದು ಮುಂದಿನ ಪಾಶುರದಲ್ಲಿ ಉಪದೇಶಿಸುತ್ತಾರೆ.

ಇನ್ವರ್ಥತ್ತೈ - ಈ ವ್ಯಾಜಸಾಪೇಕ್ಷವಾಗಿಯೇ ಸರ್ವೇಶ್ವರನು ರಕ್ಷಿಸುವನೆಂಬ ಅಭಿಪ್ರಾಯವನ್ನು ತಿರುಮಾಲಿರುಮ್ ಶೋಲೈ ಮಲೈ ಎನ್ರೇ ನಿನ್ನು ಇದು ಯಾವ ಪುಣ್ಯಕ್ಷೇತ್ರವೆನ್ನಲು ತಿರುಮಾಲಿರುಮ್ ಶೋಲೈ ಮಲೆಯು ಎಂದು ಹೇಳಿದ ಒಡನೆಯೇ, ಎಂದರೆ ಶ್ರಿಯಃಪತಿ ಇರುವ ವನದುರ್ಗವೆಂದು ಹೇಳಿದುದನ್ನೇ ವ್ಯಾಜವಾಗಿ ಮಾಡಿಕೊಂಡು, ತಿರುಮಾಲ್ ವನ್ದು - ಶ್ರಿಯಃಪತಿಯು ಬೇಗನೇ ಬಂದು, ಹೇಗೆಂದರೆ ವಾಕ್ಯ ಹೇಗೆ ಹೇಳಲ್ಪಟ್ಟರೂ ಅದರ ಸ್ವಭಾವಾದರ್ಥವನ್ನು ಹೇಗೆ ಬಿಡದೇ ಜೊತೆಯಲ್ಲೇ ಬರುತ್ತದೆಯೋ ಹಾಗೆ, ಶ್ರೀ ಪರಾಶರೋಕ್ತಿಯಾದ "ಅರ್ಥೋ ವಿಷ್ಣುರಿಯಂ ವಾಣೀ" (ವಿ. ಪು. ೧.೮.೧೭) ಎಂಬುವಹಾಗೆ ನಿತ್ಯಾನಪಾಯಿನಿಯಾದ ಲಕ್ಷ್ಮಿಯೊಂದಿಗೆ ಬಂದು, (ಇದರಿಂದ ವ್ಯಾಜಸಾಪೇಕ್ಷತೆಯೂ ಅಲ್ಲದೆ, ತಿರುಮಾಲ್ ವನ್ದು ಎಂಬುದರಿಂದ ಲಕ್ಷ್ಮಿಯ ಪುರುಷಕಾರತ್ವ ಉಪಾಯತ್ವವೂ ಹೇಳಲ್ಪಟ್ಟವು. ಅದೂ ಅಲ್ಲದೆ ದ್ವಯದ ಪೂರ್ವಖಂಡದ ಶ್ರೀಮಚ್ಛಬ್ದಾರ್ಥವೂ ಇಲ್ಲಿ ಉಪಪಾದಿಸಲ್ಪಟ್ಟಿತು) ಯಾವಾಗ ಶ್ರಿಯಃಪತಿ ಇರುವ ವನಗಿರಿ ಎಂದು ಹೇಳಲ್ಪಟ್ಟಿತೋ, ಆಗ ಶ್ರಿಯಃಪತಿಯು ಅದರಿಂದ ಹೃಷ್ಟಮನಸ್ಕನಾಗಿ, ಈ ವ್ಯಾಜವನ್ನಂಗೀಕರಿಸಿ, ಎನ್ನೆಂಜು ನಿರೈಯಪ್ಪುಗುನ್ದಾರ್-ನನ್ನ ಮನಸ್ಸು ಪರಿಪೂರ್ಣತೆಯನ್ನು ಹೊಂದುವಹಾಗೆ, ಲಕ್ಷ್ಮಿಯೊಂದಿಗೆ ತಾನೂ ಸಹ ಒಡನೆ ಪ್ರವೇಶಿಸಿದನು. ಇಷ್ಟು ದಿನ, ಅನಾದಿ ಕಾಲದಿಂದಲೂ ಕೃಪೆ ಮಾಡದೇ ಈಗ ಕೃಪೆ ಮಾಡಲು ಕಾರಣವೇನು? ಎಂಬುದು ಈಗಲೂ

---

(೧) ತಿರು. ೧೦. ೮. ೧.

(ಇನ್ನ ವ್ಯಾಜನ್ತಾನುಮ್ ಈಶ್ವರ್ತ ತನ್ನಾಲೇ ಯಾಗಿಲಿತ್ತೈ ಮುನ್ನೇಯುಂಡಾಕ್ಕಾದೇ ವಿಟ್ಟದೆನ್ನೆನ್ನಿಲ್,) (ಇವ್ವಾತ್ಮಾಕ್ಕಳುಕ್ಕು

ಪ್ರಶ್ನೆಯು ಹಿಂದೆ ತಮ್ಮ (೧. ೭. ೫.) ನೆಯ ಪಾಶುರದಲ್ಲಿ ಸರ್ವೇಶ್ವರನನ್ನು ಕೇಳಿದ ಪ್ರಶ್ನೆಗೆ ಈಗ ತಾವೇ ಉತ್ತರವನ್ನು ದಯಪಾಲಿಸುತ್ತಾರೆ. ಹಿಂದೆ ಶ್ರಿಯಃಪತಿಯನ್ನು ನಂಬಿ, ನಾಮೋಚ್ಚಾರಣೆ ಧ್ಯಾನ ಮುಂತಾದ ಯಾವ ವ್ಯಾಜಗಳನ್ನೂ ಅಂಗೀಕರಿಸಲಿಲ್ಲವು. ಈಗ ಶ್ರಿಯಃಪತಿಯ ನಾಮೋಚ್ಚಾರಣೆಯನ್ನು ಮಾಡಿದೆನು, ಅದಕ್ಕೆ ಸುಪ್ರೀತನಾಗಿ ಈಗ ನನ್ನ ಹೃದಯಗುಹೆಯನ್ನು ಪ್ರವೇಶಿಸಿದನು. ಅಲ್ಲಿನ ಸನ್ನಿವೇಶ ಹೇಗೆಂದರೆ:—ಪ್ರಣವದ ಹಾಗೆ ಅಕಾರ ಉಕಾರ ಮಕಾರಗಳಿಂದ ಯುಕ್ತರಾಗಿರುವಿಕೆಯು. ಆದುದರಿಂದ ಸರ್ವೇಶ್ವರನು ರಕ್ಷಣೆಗೆ ಒಂದು ವ್ಯಾಜವನ್ನು ನಿರೀಕ್ಷಿಸುತ್ತಾ ಏನೂ ಉತ್ತರ ಕೊಡಲಿಲ್ಲವೆಂಬ ಭಾವವು. ಉತ್ತರಾರ್ಧದಿಂದ ಆ ತಿರುಮಾಲಿರಞ್ಜೋಲೈ ಮಲೈ ಎಂತಹ ಪ್ರದೇಶವೆಂಬುದನ್ನು ತಿಳಿಸುತ್ತಾರೆ:—

ಕುರುಮಾಮಣಿಯುನ್ದು ಪುನರ್ಪೊನ್ನಿತ್ತೆನ್ಪಾಲ್ ।
ತಿರುಮಾಲ್ ಶೆನ್ರು ಶೇರ್ವಿಡನ್ನೆನ್ನಿರುಪ್ಪೇರೇ ॥

ತಿರುಮಾಲ್ - ಶ್ರಿಯಃಪತಿಯು, ಶೆನ್ರು ಶೇರ್ವಿಡಮ್ - ಬಂದು ವಾಸಮಾಡುತ್ತಿರುವ ಆ ದೇಶವಿಶೇಷವು, ಕುರುಮಾಮಣಿ ಉನ್ದು - ಶ್ಲಾಘ್ಯವಾದ ಸುಂದರವಾದ ರತ್ನಗಳನ್ನು ತೆಗೆದುಕೊಂಡು ಬರುವ, ಪುನಲ್ ಪೊನ್ನಿ - ನೀರನ್ನುಳ್ಳ ಕಾವೇರೀ ನದಿಯು, ತೆನ್ ಪಾಲ್ - ದಕ್ಷಿಣತೀರದ, ತೆನ್ ತಿರುಪ್ಪೇರ್ ಎಂಬ ದಿವ್ಯದೇಶವು.

ಆಗಲಿ ವ್ಯಾಜಸಾಪೇಕ್ಷವೇಸೋ ಆವಶ್ಯಕವೆಂಬುದನ್ನು ಒಪ್ಪಿಕೊಳ್ಳೋಣ. ಆ ವ್ಯಾಜವೇನು ಈಶ್ವರಾಯತ್ತವೇ, ಅಲ್ಲವೇ ಈತನ ಅಧೀನವೇ, ಎಂಬ ಶಂಕೆಯಲ್ಲಿ ಈಶ್ವರಾಯತ್ತವಲ್ಲ, ಈತನಧೀನವೆಂದರೆ, ಈಶ್ವರನ ಸ್ವಾತಂತ್ರ್ಯಕ್ಕೆ ಹಾನಿಯು. ಈಶ್ವರಾಯತ್ತವೆಂದರೆ, ಸ್ವತಂತ್ರನಾದ ಈಶ್ವರನು ಇದುವರೆಗೂ ಏಕೆ ಈ ವ್ಯಾಜವನ್ನುಂಟುಮಾಡಲಿಲ್ಲವೆಂದು ಆಗಲೂ ಕೇಳಬೇಕಾಗುತ್ತದೆ. ಹೀಗೆ ಪೂರ್ವಪಕ್ಷ ಬಂದೀತೆಂದು ಬಗೆದು ಸಮಾಧಾನವನ್ನು ಹೇಳುತ್ತಾರೆ.

ಇನ್ನ ವ್ಯಾಜಮ್ ತಾನುಮ್ - ಈ ವ್ಯಾಜವಿಶೇಷವಾದರೋ, ಈಶ್ವರ್ತ ತನ್ನಾಲ್ - ಈಶ್ವರನ ಮೂಲಕವಾಗಿ, ಆಗಿಲ್ - ಉಂಟಾದುದು ಆದರೂ, ಇತ್ತೈ - ಈ ವ್ಯಾಜವನ್ನು, ಮುನ್ನೇ - ಇಷ್ಟು ಜನ್ಮಗಳ ಕಳೆಯುವದಕ್ಕೆ

84 lakhs ಜನ್ಮ ನಂತರ ಬಂದಿರುವುದು ಈ ಜನ್ಮ.

ಅನಾದಿಯಾನ ಕರ್ಮಪ್ರವಾಹಙ್ಗಳ್ ವಿಷಮವಿಪಾಕ ಸಮಯಙ್ಗಳಾಯ್ ಕ್ಕೊಂಡು ಪೋರುಗೈಯಾಲೇ, ಈಶ್ವರ್ ಕರ್ಮಾನುರೂಪ ಫಲಪ್ರದ ನಲ್ಲಾದ ಪೋದು ವೈಷಮ್ಯದೋಷಮ್ ವರುಗೈಯಾಲೆ, ಮುನ್ಪಿದಕ್ಕು ಅವಸರಮಾಯಿತ್ತಿಲ್ಲೈ ಯೆನ್ನುಮಿಡಮ್ ಕಾರ್ಯವಿಶೇಷದರ್ಶನತ್ತಾಲೇ ಕಲ್ಪಿತಮ್.

ಮುಂಚೆಯೇ, **ಉಂಡಾಕ್ಕಾದೆ** - ಉಂಟುಮಾಡದೆ, **ವಿಟ್ಟದೆನ್ನೆನ್ನಿಲ್** - ಬಿಟ್ಟಿದ್ದಕ್ಕೆ ಕಾರಣವೇನೆಂದರೆ :— **ಇವ್ವಾತ್ಮಾಕ್ಕಳುಕ್ಕು** - ಈ ಬದ್ಧಚೇತನನಿಗೆ, **ಅನಾದಿ**ಯಾಗಿ ಬಂದಿರುವ ಕರ್ಮಪ್ರವಾಹಗಳು, ವಿಷಮ ವಿಪಾಕ ಸಮಯಙ್ಗ **ಳಾಯ್ಕ್ಕೊಂಡು**, ವಿಷಮ - ವ್ಯತ್ಯಸ್ತನಾದ, ವಿಪಾಕ - ಕರ್ಮದ ಫಲ ಕೊಡುವ ದೆಶೆಯ, **ಸಮಯಙ್ಗಳಾಯ್ಕೊಂಡು** - ಕಾಲವಾದುದಾಗಿ, **ಪೋರು ಗೈಯಾಲ್** - ಪರಿಣಮಿಸುವದರಿಂದ, **ಈಶ್ವರನು** ಕರ್ಮಾನುರೂಪವಾಗಿ ಫಲ ವನ್ನು ಕೊಡುವದರಿಂದ, **ಅವಸರಮಾಯಿತ್ತಿಲ್ಲೈ** - ರಕ್ಷಿಸುವ ಕಾಲವು ಇನ್ನೂ ಒದಗಲಿಲ್ಲವು ; ಏಕೆಂದರೆ :— **ಕರ್ಮಾನುಸಾರ ಫಲಪ್ರದನಲ್ಲಾದಪೋದು** - ಹಾಗೆ ಕರ್ಮಾನುಗುಣವಾಗಿ ಫಲವನ್ನು ಕೊಡದೆ ಇದ್ದರೆ, **ವೈಷಮ್ಯ ದೋಷಮ್ ವರುಮ್** - ವೈಷಮ್ಯ ನೈರ್ಘೃಣ್ಯವೇ ಮೊದಲಾದ ದೋಷಗಳು ಬರುವುವು, **ಎನ್ನುಮಿಡಮ್** - ಎಂಬ ಸಂದರ್ಭವು, **ಕಾರ್ಯವಿಶೇಷ ದರ್ಶನತ್ತಾಲೆ ಕಲ್ಪಿತಮ್** - ಕಾರಣದ ಫಲರೂಪವಾಗಿ ಕಾರ್ಯವಿಶೇಷವು ತೋರಿಬಂದರೆ ವ್ಯಾಜರೂಪವಾದ ಒಂದು ಕಾರಣಮೂಲಕವೇ ಅದು ಉಂಟಾಯಿತೆಂದು ಭಾವಿಸ ತಕ್ಕದ್ದು. ಇದೀಗ ಸಮಂಜಸವಾದ ವಿಷಯವೆಂಬ ಭಾವವು. ಸರ್ವೇಶ್ವರನು ಸ್ವತಂತ್ರನು, ನಾವೇನೂ ಮಾಡತಕ್ಕದ್ದಿಲ್ಲವು, ಏನೊಂದೂ ವ್ಯಾಜವು ಬೇಕಿಲ್ಲವು, ಅವನು ಯಾವ ಸಮಯದಲ್ಲಿ ಬೇಕೋ ಆಗ ರಕ್ಷಿಸುವನು ಎಂದು ನೀವು ಹೇಳುವುದಕ್ಕೂ, ಸ್ವತಂತ್ರನಾದರೂ ಒಂದು ವ್ಯಾಜ ಬೇಕು, ಅದನ್ನು ಅಪೇಕ್ಷಿಸುವನು ಹಿಂದಿನ ದುಷ್ಕೃತಗಳ ವ್ಯಾಜದಿಂದ ಇದುವರೆಗೂ ಆದರಿಸಲಿಲ್ಲವು, ಈಗ ಸುಕೃತ ವ್ಯಾಜದಿಂದ ಈ ಅನುಗ್ರಹವುಂಟಾಗಿರುತ್ತದೆ ಎಂದು ನಾವು ಹೇಳಿರುವುದಕ್ಕೂ, ಏನೂ ತುಂಬಾ ವ್ಯತ್ಯಾಸವಿಲ್ಲವು. ನೀವೂ ಅವನೇ ಸಿದ್ಧೋಪಾಯನೆಂದು ಹೇಳಿದಿರಿ, ನಾವೂ ಹಾಗೆಯೇ ಹೇಳುವೆವು. ನಿಮ್ಮ ಹೇಳಿಕೆಯಲ್ಲಿ ಸರ್ವೇಶ್ವರನು ವ್ಯಾಜ ನಿರಪೇಕ್ಷನೆಂದು ಹೇಳುವುದರಿಂದ ವೈಷಮ್ಯ ನೈರ್ಘೃಣ್ಯಾದಿ ದೋಷಗಳು ಪ್ರಾಪ್ತವಾಗುತ್ತವೆ. ವ್ಯಾಜಸಾಪೇಕ್ಷನೆಂದು ನಾವು ಹೇಳುವದರಿಂದ, ಪಕ್ಷಪಾತವಿಲ್ಲದೆ

ಒಂದು ನಿಯಮವನ್ನನುಸರಿಸಿ ನಡೆಯುವುದರಿಂದ ವೈಷಮ್ಯ ನೈರ್ಘೃಣ್ಯಾದಿ ದೋಷಗಳಿಗೆ ಕಾರಣವಿಲ್ಲವು. "ಸರ್ವಸ್ಯ ಶರಣಮ್ ಸುಹೃತ್" ಎಲ್ಲರಿಗೂ ಉಪಾಯಭೂತನು, ಪರಮ ಸ್ನೇಹಿತನು, "ಸಮೋಹಂ ಸರ್ವಭೂತೇಷು" ಎಲ್ಲಾ ಚೇತನರ ವಿಷಯದಲ್ಲೂ ಸಮನಾಗಿರುವೆನು, "ನಮೇದ್ವೇಷ್ಯೋಸ್ತಿ ನಪ್ರಿಯಃ" ನನಗೆ ದ್ವೇಷಿಗಳೂ ಇಲ್ಲವು ಪ್ರಿಯರೂ ಇಲ್ಲವು, ಇತ್ಯಾದಿ ಪ್ರಮಾಣಗಳೆಲ್ಲಾ ನಮಗೆ ಸರಿಹೋಗುತ್ತದೆಂಬ ತಾತ್ಪರ್ಯವು. ಆಗಲಿ, ಒಂದು ನಿಯಮವನ್ನನು ಸರಿಸಿ ಸರ್ವೇಶ್ವರನು ನಡೆಯುವನೆಂದು ಹೇಳಿದರೆ, ಸರ್ವೇಶ್ವರನ ಸ್ವಾತಂತ್ರ್ಯಕ್ಕೆ ನ್ಯೂನತೆ ಕಲ್ಪಿಸಿದಹಾಗಾಗುವುದಿಲ್ಲವೇ ಎಂದರೆ, ಇಲ್ಲವು. ಏಕೆಂದರೆ ಆ ನಿಯಮವೂ ಕೂಡ ಸರ್ವೇಶ್ವರ ಸ್ವಾತಂತ್ರ್ಯವಾದ ಸಂಕಲ್ಪ ಮೂಲಕ ಉಂಟಾದುದೇ. ಇದಕ್ಕೆ ಒಂದು ಸಮಂಜಸವಾದ ದೃಷ್ಟಾಂತವನ್ನು ಹೇಳಬಹುದು. ಎಲ್ಲಾ ವನಸ್ಪತಿಗಳಿಗೂ ಬೇಕಾದ ಜಲವು ಭೂಮಿಯಲ್ಲಿ ಬಿದ್ದರೆ ಬೀಜಗಳಿಗನುಸಾರವಾಗಿ, ತತ್ಫಲವಾಗಿ ವನಸ್ಪತಿಗಳು ಹುಟ್ಟುತ್ತವೆ. ನೀರೇನೋ ಸಮವಾಗಿ ಎಲ್ಲಾದಕ್ಕೂ ಬೇಕು. ಹಾಗೆಯೇ ನೀರಿನೋಪಾದಿಯಲ್ಲಿರುವ ಭಗವತ್ಕೃಪೆಯು ಎಲ್ಲಾ ಚೇತನರಿಗೂ ಸಮವಾದುದೇ. ತನ್ಮೂಲಕ ಚೇತನರ ಕರ್ಮಬೀಜಾನುಸಾರವಾಗಿ ತಿರಸ್ಕಾರ ಸತ್ಕಾರಗಳು ಪ್ರಾಪ್ತವಾಗುತ್ತವೆ. ಬೇವಿನ ಬೀಜ ನೆಲದಲ್ಲಿದ್ದರೆ ನೀರಿನ ಸಹಾಯದಿಂದ ಕಹಿಯಾದ ಬೇವಿನ ಫಲ ಸಿಕ್ಕುತ್ತದೆ. ಮಾವಿನ ಬೀಜ ವಿದ್ದರೆ ನೀರಿನ ಸಹಾಯದಿಂದ ರುಚಿಯಾದ ಮಾವಿನ ಫಲವು ಸಿಕ್ಕುತ್ತದೆ. ನೀರು ಹೇಗೆ ಸಾರ್ವತ್ರಿಕವಾಗಿ ಸರ್ವ ವನಸ್ಪತಿಗಳಿಗೂ ಸಮವಾಗಿ ಬೇಕೋ, ಹಾಗೆಯೇ ಸರ್ವೇಶ್ವರನ ಸಹಾಯವು ಎಲ್ಲಾ ಚೇತನರಿಗೂ ಬೇಕು, ಅದು ಎಲ್ಲರಿಗೂ ಸಮವು, ಅದಿಲ್ಲದೆ ಏನೊಂದೂ ನಡೆಯುವುದಿಲ್ಲವು. ಇಷ್ಟು ದಿನವೂ ಅನುಗ್ರಹವಿಲ್ಲದೆ ಈಗ ಅನುಗ್ರಹಕ್ಕೆ ಕಾರಣವೇನೆಂದರೆ, ಅನಾದಿಯಾಗಿ ಮಾಡುತ್ತಿದ್ದ ದುಷ್ಕರ್ಮ ಫಲಗಳಿಂದ ಅನುಗ್ರಹವಿಲ್ಲವು, ಈಗ ಸುಕೃತ ಸಂಚಿತವಿದ್ದುದರಿಂದ ಅನುಗ್ರಹವು. ಆದುದರಿಂದ ವ್ಯಾಜ ಸಾಪೇಕ್ಷವಾಗಿಯೇ ಸರ್ವೇಶ್ವರಾನುಗ್ರಹವೇ ವಿನಾ ಅನ್ಯಥಾ ಇಲ್ಲವೆಂಬುದೇ ಸರ್ವಸಮಂಜಸವಾದ ವಿಷಯವು. ಲೋಕದಲ್ಲಿ ಒಬ್ಬನು ಹೆಚ್ಚು ಸುಖ ಭೋಗಗಳನ್ನು ಹೊಂದಿರುವುದಕ್ಕೂ, ಇನ್ನೊಬ್ಬನು ಅನಂತ ಕ್ಲೇಶಗಳನ್ನು ಹೊಂದಿರುವುದಕ್ಕೂ, ಸರ್ವೇಶ್ವರನ ಸಂಕಲ್ಪದೊಂದಿಗೆ ಈ ಚೇತನನ ಸಂಬಂಧವಾದುದು ಏನೋ ಕಾರಣವಿರಬೇಕೆಂದು ಕಲ್ಪಿಸುವುದು ಯುಕ್ತವಾದುದೇ. ನಿಗ್ರಹಾನುಗ್ರಹಗಳು, ಚೇತನನ ಸಂಬಂಧವಾದ ವ್ಯಾಜವಿಲ್ಲದೇ ಎಂದಿಗೂ ಉಂಟಾಗಲಾರದೆಂಬುದು ಶಾಸ್ತ್ರಸಮ್ಮತವಾದ ಲೋಕಸಮ್ಮತವಾದ ವಿಷಯವು. ಆ ಕಾರಣದಿಂದ ಉಪಾಯಾನುಷ್ಠಾನ ಮಾಡಿದರೇನೆ ಮೋಕ್ಷವೆಂದು ಸ್ವಾಮಿಯು "ಮಾ

ಇಜ್ಜನಿಶ್ಶೈಯಾಡಪ್ಪೋದು ಸರ್ವಸಿದ್ಧಾನ್ತಿಗಳುಕ್ಕುಮ್ ಇದುಕ್ಕು ಮುನ್ಬಿಲ್ಲಾದ ಮೋಕ್ಷಶ್ರದ್ಧಾದಿಗಳಿಪ್ಪೋದು ಪಿರಕ್ಕೈಕ್ಕಡಿಯೆನ್ನೆನ್ನಾಲ್ ಉತ್ತರಮ್ ಶೊಲ್ಲವಿರಗಿಲ್ಲೈ. ಅನಾದಿಕರ್ಮಪ್ರವಾಹ ವೈಚಿತ್ರ್ಯತ್ತಾಲೆ ಎನ್ನುಮ್ ಉತ್ತರಮ್ ಈಶ್ವರನೈ ಇಶ್ಶೈನ್ಪಾರ್ಕ್ಕುಮಿಶ್ಶೈಯಾದಾರ್ಕ್ಕುಮ್

ಮೇಕಂ ಶರಣಂ ವ್ರಜ" ಇತ್ಯಾದಿ ಅನೇಕ ಪ್ರಮಾಣಗಳಿಂದ ಸರ್ವಸ್ವತಂತ್ರನಾಗಿ ಸಂಕಲ್ಪಿಸಿರುವ್ರದರಿಂದ, ಈ ಭರನ್ಯಾಸರೂಪ ಉಪಾಯಾನುಷ್ಠಾನವು ಬೀಜರೂಪವಾಗಿ ವ್ಯಾಜವಾದರೆ ಆಗ ಉತ್ಕೃಷ್ಟ ಫಲರೂಪ ಮೋಕ್ಷವು ಸಿದ್ಧಿಸುವುದು. ಬೀಜವೇ ಇಲ್ಲದಿದ್ದರೆ ಫಲವೆಲ್ಲಿಯದು ?

ಹೀಗೆ ವ್ಯಾಜ ಸಾಪೇಕ್ಷತ್ವವನ್ನು ಅಂಗೀಕರಿಸದಿದ್ದರೆ, ಸರ್ವೇಶ್ವರನಿಗೆ ವೈಷಮ್ಯ ನೈರ್ಘೃಣ್ಯ ದೋಷಾಪಾದನೆಯಲ್ಲದೆ ಇನ್ನೇನಾದರೂ ಬಾಧಕವುಂಟೋ ಎಂದರೆ ಹೇಳುತ್ತಾರೆ. **ಇಜ್ಜನಿಶ್ಶೈಯಾಡಪ್ಪೋದು** - ಹೀಗೆ ವ್ಯಾಜ ಸಾಪೇಕ್ಷತ್ವವನ್ನಂಗೀಕರಿಸದೇ ಹೋದರೆ, **ಸಮಸ್ತ** ಸಿದ್ಧಾಂತಗಳಿಗೂ ಈಶ್ವರನೊಬ್ಬನಿದ್ದಾನೆಂಬುವವರಿಗೂ ಈಶ್ವರನಿಲ್ಲವೆಂಬುವವರಿಗೂ, **ಇದಕ್ಕು ಮುನ್ಬಿಲ್ಲಾದ** - ಇದಕ್ಕೆ ಮೊದಲಿಲ್ಲದೇ ಇರುವ, ಮೋಕ್ಷದಲ್ಲಿ ಶ್ರದ್ಧೆಯೇ ಮೊದಲಾದವುಗಳು, **ಇಪ್ಪೋದು ಪಿರಕ್ಕೈಕ್ಕು** - ಈಗ ಉಂಟಾಗುವುದಕ್ಕೆ, **ಅಡಿ ಎನ್ನೆನ್ನಾಲ್** - ಮೂಲಕಾರಣವೇನೆಂದು ಕೇಳಿದರೆ, **ಉತ್ತರಂ ಶೊಲ್ಲವಿರುಗಿಲ್ಲೈ** - ಉತ್ತರವನ್ನು ಹೇಳಲು ಮಾರ್ಗವಿಲ್ಲವು. ಒಂದು ವ್ಯಾಜ ಉಂಟೆಂದು ಹೇಳುವವರು ಕಾರಣವನ್ನು ಹೇಳಬಹುದು, ವ್ಯಾಜವೇ ಬೇಕಿಲ್ಲವೆಂಬುವವರು ಏನು ಕಾರಣವನ್ನೂ ಹೇಳಲಾಗುವದಿಲ್ಲವೆಂಬ ಭಾವವು.

ಆದರೆ ಒಂದು ವ್ಯಾಜವನ್ನಂಗೀಕರಿಸಿದರೆ ಸರ್ವಸಿದ್ಧಾಂತಿಗಳೂ ಈ ಪ್ರಶ್ನೆಗೆ ಉತ್ತರವನ್ನು ಹೇಳಬಹುದು ಅದೇನೆಂದರೆ, ಅನಾದಿ ಕರ್ಮಪ್ರವಾಹ ವೈಚಿತ್ರ್ಯವೆಂದು ಹೇಳುತ್ತಾರೆ:—**ಅನಾದಿಕರ್ಮಪ್ರವಾಹ ವೈಚಿತ್ರ್ಯತ್ತಾಲೆ** - ಅನಾದಿ ಕರ್ಮ ಪ್ರವಾಹದ ವೈಲಕ್ಷಣ್ಯದಿಂದ, **ಎನ್ನುಮ್ ಉತ್ತರಮ್** - ಎಂಬದಾಗಿ ಮೇಲಿನ ಪ್ರಶ್ನೆಗೆ ಉತ್ತರವು, **ಈಶ್ವರನೈ ಇಶ್ಶೈನ್ಪಾರ್ಕ್ಕುಮ್** - ಈಶ್ವರನನ್ನಂಗೀಕರಿಸುವ ಸಿದ್ಧಾಂತಿಗಳಿಗೂ, **ಇಶ್ಶೈಯಾತಾರ್ಕ್ಕುಮ್** - ಹಾಗೆ ಈಶ್ವರನನ್ನಂಗೀಕರಿಸದ ಸಿದ್ಧಾಂತಿಗಳಿಗೂ, **ತುಲ್ಯಮ್** - ಸಮಾನವಾದುದೇ ; ಫಲಕ್ಕೆ ಕಾರಣವಾಗಿ ಒಂದು ಕರ್ಮವೆಂದೂ, ಕರ್ಮಕ್ಕೆ ಅನುಗುಣವಾಗಿ ಫಲವೆಂದೂ ಸಮಸ್ತ ಸಿದ್ಧಾಂತಿಗಳೂ ಒಪ್ಪತಕ್ಕದ್ದಾಗಿದೆ. ಈ ಅಂಶವು ಹಿಂದೆಯೇ ಉಪಪಾದಿತವಾ

ತುಲ್ಯಮ್, ಈಶ್ವರ ಸ್ವಾತಂತ್ರ್ಯ ಮೊರು ವ್ಯಾಜತ್ತೈ ಕೊಂಡು ಅವನ್ ನಿನೈತ್ತ ಪೋದೇ ರಕ್ಷಿಕ್ಕೈಕ್ಕುಮ್ ವಿಲಕ್ಕುವಲ್ಲಾರಿಲ್ಲಾಮೈಕ್ಕು ಮುರುಪ್ಪಾಮ್.

ಗಿದೆ ೧೯೦ನೆಯ ಪುಟ ನೋಡಿ. ವ್ಯಾಜವನ್ನಂಗೀಕರಿಸದೇ ಇರುವವರಿಗೀಗ ಮೇಲಿನ ಪ್ರಶ್ನೆಗೆ ಉತ್ತರ ದೊರೆಯುವದಿಲ್ಲವೇ ವಿನಾ, ವ್ಯಾಜವನ್ನಂಗೀಕರಿಸುವ ಸ್ವಸಿದ್ಧಾಂತಿಗಳಿಗೂ ಉತ್ತರ ಉಂಟು. ಅದೇನೆಂದರೆ ಅನಾದಿಕರ್ಮ ಪ್ರವಾಹ ವಿಚಿತ್ರತೆಯು ಇಷ್ಟುಕಾಲವೂ ದುಷ್ಕರ್ಮಪರಿಪಾಕದಿಂದ ಉಂಟಾಗಲಿಲ್ಲವು, ಸುಕೃತ ಪರಿಪಾಕದಿಂದ ಈಗ ಉಂಟಾಯಿತೆಂಬ ತಾತ್ಪರ್ಯವು. ಹೀಗೆ ಈ ಉತ್ತರವು ಆಸ್ತಿಕ ನಾಸ್ತಿಕರಿಬ್ಬರಿಗೂ ಸಮಾನಾದರೆ ಅನಾದಿ ಕರ್ಮಪ್ರವಾಹವಿಚಿತ್ರ್ಯತೆಯೇ ಫಲಕ್ಕೆ ಕಾರಣಭೂತವಾದುದಾಗಿ ಈಶ್ವರನಿಂದ ಏನೂಪ್ರಯೋಜನ ವಿಲ್ಲವಾದುದರಿಂದ ಆತನ ಸ್ವಾತಂತ್ರ್ಯವನ್ನು ಅಂಗೀಕರಿಸುವದು ಏತಕ್ಕೆ ? ಎಂದು ಆತನ ಸ್ವಾತಂತ್ರ್ಯಕ್ಕೂ ಹಾನಿಯಲ್ಲವೇ, ಎಂದರೆ ಸ್ವಾಮಿಸಙ್ಕಲ್ಪವೂ ಆವಶ್ಯಕವೆಂದೂ, ಆತನ ಸ್ವಾತಂತ್ರ್ಯಕ್ಕೂ ಏನೊಂದು ಕುಂದಕವಿಲ್ಲವೆಂದೂ, ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.

ಈಶ್ವರನ ಸ್ವಾತಂತ್ರ್ಯವು, ಒರುವ್ಯಾಜತ್ತೈಕ್ಕೊಂಡು - ಒಂದು ಅಲ್ಪ ವ್ಯಾಪಾರರೂಪ ನೆಪವನ್ನು ಮೂಲ ಮಾಡಿಕೊಂಡು, ಅವನ್ ನಿನೈತ್ತಪೋದೆ- ಸರ್ವೇಶ್ವರನು ಸಂಕಲ್ಪಿಸಿದಾಗಲೇ, ರಕ್ಷಿಕ್ಕೈಕ್ಕುಮ್-ರಕ್ಷಿಸುವದಕ್ಕೂ, ವಿಲಕ್ಕ ವಲ್ಲಾರಿಲ್ಲಾಮೈಕ್ಕು - ಹೀಗೆ ರಕ್ಷಿಸುವಾಗ ಅದಕ್ಕೆ ಪ್ರತಿಬಂಧಕರ್‍ಯಾರೂ ಇಲ್ಲದೆ ಇರುವದಕ್ಕೂ, ಉರುಪ್ಪಾಮ್-ಕಾರಣವಾಗಬಹುದು. ಈಶ್ವರ ಸ್ವಾತಂತ್ರ್ಯಕ್ಕೆ ಯಾವ ವಿಧವಾದ ಕುಂದಕವೂ ಇಲ್ಲವು, ಅದರಿಂದ ಮೂರು ಪ್ರಯೋಜನಗಳುಂಟೆಂದು ಹೇಳುತ್ತಾರೆ:—(೧) ಸ್ವಾತಂತ್ರ್ಯವಿರುವದರಿಂದಲೇ ಈ ಅಲ್ಪ ವ್ಯಾಪಾರ ವಾದ ಭರನ್ಯಾಸದಿಂದ ಮಹತ್ತಾದ ಮೋಕ್ಷಫಲವು ಸಿದ್ಧಿಸಲಿ ಎಂದು ಸಙ್ಕಲ್ಪಿಸುತ್ತಾನೆ. (೨) ಈ ಅಲ್ಪವ್ಯಾಪಾರವಾದ ಭರನ್ಯಾಸವು ಯಾವಾಗ ಅನುಷ್ಠಿಸಲ್ಪಟ್ಟಿತೋ ಆಗ, ಸರ್ವೇಶ್ವರನೇ ರಕ್ಷಿಸಬೇಕೆಂದು ಸಙ್ಕಲ್ಪಿಸಿ, ತಾನೇ ಸಿದ್ಧೋಪಾಯನಾಗಿ ನಿಂತು ರಕ್ಷಿಸುವನು. (೩) ಹೀಗೆ ರಕ್ಷಿಸುವಾಗ ಸರ್ವೇಶ್ವರನಿಗೆ ಯಾವ ವಿಧವಾದ ಅಡ್ಡಿಯೂ ಇರುವದಿಲ್ಲವು. ಒಂದನೆಯದು "ಸರ್ವ ಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ" ಎಂಬಿವೇ ಮೊದಲಾದ ಪ್ರಮಾಣಗಳಿಂದ ಸ್ಪಷ್ಟವು. ಎರಡನೆಯದು "ಯಮೇವೈಷ ವೃಣುತೇ ತೇನಲಭ್ಯಃ",

ಇಪ್ಪಡಿಯಾನಾಲ್ "ಇನ್ನೈನ್ನೈ" ಯೆಜ್ಞ್ಗರ ಪಾಟ್ಟುಕ್ಕು ಮಿದುಕ್ಕು ಮೂಲವಾನ ವಚನಜ್ಞಳುಕ್ಕುಮ್ ನಿರ್ವಾಹಮೇದೆನ್ನಿಲ್ ? ಅದು ಶೊಲ್ಲುಗಿರೋಮ್.

"ಕೃಷ್ಣಂ ಧರ್ಮಂ ಸನಾತನಂ" "ಸರ್ವಸ್ಯ ಶರಣಂ ಸುಹೃತ್" ಇತ್ಯಾದ್ಯನೇಕ ಪ್ರಮಾಣಗಳಿಂದ ವ್ಯಕ್ತವು. ಮೂರನೆಯದು, **"ರಿರಕ್ಷಿಷತಿ ಯತ್ರ ಚ ಪ್ರತಿ ಭಯಂ ನ ಕಿಂಚಿತ್ ಕ್ವಚಿತ್"** ಎಂಬಲ್ಲಿಯೂ ಇದೇ ಅಭಿಪ್ರಾಯವನ್ನೇ ಉಪಪಾದಿಸಿರುತ್ತಾರೆ. **"ಯಸ್ಯ ಮನ್ತ್ರೀಚ ಗೋಪ್ತಾಚ ಸುಹೃಚ್ಚೈವ ಜನಾರ್ದನಃ । ಹರಿಸ್ತ್ರೈಲೋಕ್ಯ ನಾಥಸ್ಸಕಿನ್ನುತಸ್ಯನನಿರ್ಜಿತಂ"** ॥ ರಾಜಸೂಯ ಕಾಲದಲ್ಲಿ ಧೃತರಾಷ್ಟ್ರನು ಹೇಳುತ್ತಾನೆ. ''ಯಾರಿಗೆ ಹಿತಾಲೋಚನೆಯನ್ನು ಹೇಳುವನೂ, ರಕ್ಷಕನೂ, ಪ್ರಿಯ ಸ್ನೇಹಿತನೂ, ಸಹ ಶತ್ರುಪಕ್ಷದವರನ್ನೆಲ್ಲಾ ಮರ್ದನಮಾಡುವ ತ್ರಿಲೋಕಾಧಿಪತಿಯಾದ ಶ್ರೀ ಹರಿಯೋ, ಅಂತವರಿಗೆ ಎಂದರೆ ಪಾಂಡವರಿಗೆ ಯಾವದು ತಾನೇ ಜಯಿಸಲ್ಪಡದೆ ಇರುತ್ತದೆ. ಸರ್ವವಿಧದಲ್ಲೂ ಜಯವುಂಟೆಂಬ ಭಾವವು.'' ಎಂಬ ಭಾರತ ವಚನವು ಈ ಮೂರನೆಯ ಅಭಿಪ್ರಾಯವನ್ನು ಸಮರ್ಥನೆ ಮಾಡುತ್ತದೆ.

ಹೀಗೆ ವ್ಯಾಜಸಾಪೇಕ್ಷವಾಗಿಯೇ ಮುಕುಂದನು ಮುಕ್ತಿದಾಯಕನೆಂದು ಒಪ್ಪಿಕೊಂಡರೆ, **"ಪ್ರಪನ್ನಾದನ್ಯೇಷಾಂ ನದಿಶತಿ ಮುಕುಂದೋ ನಿಜಪದಂ"** (೮೪೮ನೆಯ ಪುಟ ನೋಡಿ) ಎಂಬುದು ಯಥಾರ್ಥವಾದ ಅಭಿಪ್ರಾಯವಾದರೆ, ಹಿಂದೆ ಪೂರ್ವಪಕ್ಷಿಯು ತಂದ **"ಇನ್ನೈನ್ನೈ"** ಎಂಬ ನಮ್ಮಾಳ್ವಾರವರ ಪಾಶುರಕ್ಕೆ ಸರಿಯಾದಭಿಪ್ರಾಯವೇನೆಂದು ಕೇಳುವದು ಯುಕ್ತವಾದ ಪ್ರಶ್ನೆಯಾದುದರಿಂದ ಆ ಪಾಶುರಕ್ಕೆ ಪೂರ್ವಪಕ್ಷಿಗಳು ಹೇಳಿದರ್ಥವಲ್ಲವು, ಸರಿಯಾದ ಅರ್ಥವು ಹೀಗೆಂಬದಾಗಿ ತಿಳಿಸುತ್ತಾರೆ.

ಇಪ್ಪಡಿಯಾನಾಲ್ - ಈಶ್ವರಸ್ವಾತಂತ್ರ್ಯ ಮಾತ್ರವೇ ಬಂಧಮೋಕ್ಷಗಳಿಗೆ ಕಾರಣವೆಂದೂ, ಅದು ವ್ಯಾಜನಿರಪೇಕ್ಷವೆಂದೂ, ಆ ಈಶ್ವರಸ್ವಾತಂತ್ರ್ಯವು ರಕ್ಷಿಸದೆ ಇದ್ದಕಾಲದಲ್ಲಿ ಸ್ವಾಮಿಯಲ್ಲಿ ಕಾರುಣ್ಯವಿಲ್ಲವೆಂದೂ, ಹೀಗೆಲ್ಲಾ ಹೇಳದೆ, ಈಶ್ವರಸ್ವಾತಂತ್ರ್ಯವು ವ್ಯಾಜಸಾಪೇಕ್ಷವಾಗಿಯೇ ಬಂಧಮೋಕ್ಷಗಳಿಗೆ ಕಾರಣವೆಂದೂ ಅದೂ ಅಲ್ಲದೆ ಅತನು ಕರುಣಾಸಾಗರನೆಂದೂ ಒಪ್ಪಿಕೊಂಡರೆ, "ಇನ್ನೈನ್ನೈ" ಎಂಬ ಹಿಂದೆ ಪೂರ್ವಪಕ್ಷಕ್ಕಾಗಿ ತಂದ ನಮ್ಮಾಳ್ವಾರ್ರವರ ಪಾಶುರಕ್ಕು, **ಇದುಕ್ಕು** - ಈ ಪಾಶುರಕ್ಕೆ, **ಮೂಲವಾನ ವಚನಜ್ಞಳುಕ್ಕುಮ್**

ಪ್ರಮಾಣರೂಪದಲ್ಲಿ ಕಾರಣಭೂತವಾದ ವಚನಗಳಿಗೂ, ನಿರ್ವಾಹವೋದೆನ್ನಿಲ್ ಸಮಂಜಸಾಭಿಪ್ರಾಯವು ಯಾವುದೆಂದರೆ ? ಅದು ಶೊಲ್ಲುಗಿರೋವ್ - ಅದನ್ನು ಹೇಳುವೆವು:—ಈ ಪಾಶುರಕ್ಕೆ ಮೂಲಭೂತಗಳಾದ ವಚನಗಳು ಯಾವುವೆಂದರೆ:—

(೧) "ನಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ ನ ಬಹುನಾ ಶ್ರುತೇನ । ಯಮೇವೈಷ ವೃಣುತೇ ತೇನ ಲಭ್ಯಸ್ತಸ್ಯೈಷ ಆತ್ಮಾ ವಿವೃಣುತೇ ತನೂಗ್‌ಸ್ವಾಂ ॥" (ಕಠ. ೧. ೨. ೨೩)

ಇದಕ್ಕೆ ಸರಿಯಾದರ್ಥವೇನೆಂದರೆ. ಈ ಶ್ರುತಿಯಲ್ಲೂ ಸಹ ಈತನು ತನಗೆ ಪ್ರಿಯತಮನೆಂದು ವರಿಸಿ ಉಪಾಯಭೂತನಾಗಿ ರಕ್ಷಿಸುವದಕ್ಕೂ, ಪ್ರಾಪ್ಯನಾಗುವದಕ್ಕೂ, ವ್ಯಾಜಸಾಪೇಕ್ಷವೆಂದೇ ಹೇಳಲ್ಪಟ್ಟಿರುತ್ತದೆ. ಈ ಆತ್ಮನು ಬರೀ ಮನನ, ಜ್ಞಾನ, ತುಂಬಾ ವೇದವನ್ನು ತಿಳಿದವನು ಎಂಬದಾಗಿ ಸ್ವಾಮಿಗೆ ಪ್ರಿಯನಾಗುವದಿಲ್ಲವು. ಈ ಚೇತನನು ಮಾಡಿದ ಉಪಾಸನಾದಿಗಳಿಂದ ಸುಪ್ರೀತನಾಗಿ ಯಾವನು ಯೋಗ್ಯನೆಂದು ಆತನು ವರಿಸುವನೋ ಅಂತವನಿಗೆ ಪ್ರಾಪ್ತಿ ಹೇತುಭೂತನಾಗುವನು, ಅಂತಹ ಉಪಾಸಕನಿಗೀಗ ಈ ಪರಮಾತ್ಮನು ತನ್ನ ಸ್ವರೂಪವನ್ನು ಪ್ರಕಾಶಗೊಳಿಸುವನು"

(೨) "ಕೇವಲಂ ಕೃಪಯೈವಾಹಂ ಪ್ರೇಕ್ಷ್ಯೇ ಕಂಚಿತ್ಕದಾಚನ" "ಕೇವಲ ಕೃಪೆಯಿಂದೀಗ ನಾನು ಯಾವನೋ ಒಬ್ಬೊಬ್ಬನನ್ನು ಯಾವಾಗಲೋ ಈಕ್ಷಿಸುವೆನು" ಇಲ್ಲಿಯೂ ಇಷ್ಟಬಂದಹಾಗೆ ಆತನು ಕೃಪೆಮಾಡುವನೆಂಬರ್ಥವಲ್ಲವು, ಈತನು ಸಹಸ್ರಾಪರಾಧಿಯಾಗಿದ್ದರೂ ಈತನು ಮಾಡಿದ ಉಪಾಯಾನುಷ್ಠಾನರೂಪ ವ್ಯಾಜದಿಂದ ಸುಪ್ರೀತನಾಗಿ, ಕೇವಲ ಕೃಪೆಯಿಂದಲೇ ಆತನನ್ನು ನೋಡುವೆನು ಎಂಬರ್ಥವು. ಹಾಗೆ ಅನುಷ್ಠಾನಮಾಡುವನು ಯಾವನೋ ಒಬ್ಬನೂ ಎಲ್ಲಿಯೋ ಒಂದು ಕಾಲದಲ್ಲಿಯಾದುದರಿಂದ "ಕಂಚಿತ್ಕದಾಚನ" ಎಂಬ ಪ್ರಯೋಗವು. ಅಂತವರು ಅತಿ ವಿರಳವೆಂಬ ಭಾವವು.

(೩) "ಅಜ್ಞೋಜಂತು ರನೀಶೋಯ ಮಾತ್ಮನ ಸ್ಸುಖದುಃಖಯೋಃ। ಈಶ್ವರಪ್ರೇರಿತೋಗಚ್ಛೇತ್ಸ್ವರ್ಗಂ ವಾ ಶ್ವಭ್ರಮೇವಚ ॥"

ಈ ಜನ್ಮವೆತ್ತಿದ ಪ್ರಾಣಿಯು ಅಜ್ಞನು, ತನ್ನ ಸುಖದುಃಖಗಳಿಗೂ ಪರಾಧೀನನು, ಈಶ್ವರಪ್ರೇರಿತನಾಗಿ ಸ್ವರ್ಗಕ್ಕಾದರೂ ಹೋಗುವನು ಅಥವಾ ನರಕಕ್ಕಾಗಲಿ ಹೋಗುವನು ಇಲ್ಲಿಯೂ ಈಶ್ವರನು ಸರ್ವಸ್ವತಂತ್ರನಾಗಿ ತನ್ನ ಇಷ್ಟಬಂದಹಾಗೆ ಸುಖವಾದರೂ ಕೊಡುವನು, ದುಃಖವನ್ನಾದರೂ ಉಂಟುಮಾಡುವನು, ಸ್ವರ್ಗಕ್ಕಾದರೂ ಕಳುಹಿಸುವನು, ಇಲ್ಲವೇ ನರಕದ ಗುಂಡಿಯಲ್ಲಾದರೂ

ಶ್ರಿಯಃಪತೇಃ ಸ್ವಾತಂತ್ರ್ಯಕಾರುಣ್ಯೇ ಚೇತನ ನಿಗ್ರಹಾನುಗ್ರಹಯೋಃ ಪ್ರಧಾನ ಹೇತೂ.

ಈಶ್ವರನುಕ್ಕು ಸಹಜಙ್ಗಳಾನ ಸ್ವಾತಂತ್ರ್ಯ ಕಾರುಣ್ಯಙ್ಗಳಿನುಡೈಯ ಪ್ರಾಧಾನ್ಯತ್ತಾಲೆ ಇವತ್ತುಕ್ಕು ವ್ಯಾಜಭೂತಙ್ಗಳಾನ ವಿಶೇಷ ಕಾರಣಙ್ಗಳೈ ಅನಾದರಿತ್ತು ಪಣ್ಡು ಎನ್ನೈ ಪರಾಙ್ಮುಖನಾಕ್ಕು ಕೈಕ್ಕುವರ್, ಇನ್ರು

ಬೀಳಿಸುವನು ಎಂಬರ್ಥವಲ್ಲವು. ಇವುಗಳನ್ನು ಆತನು ಮಾಡುವದು ಇವರಿವರ ಕರ್ಮಾನುಗುಣವಾಗಿಯಾದುದರಿಂದ, ಹೀಗೆ ವ್ಯಾಜಸಾಪೇಕ್ಷನಾಗಿಯೇ, ಈ ವ್ಯಾಜಕ್ಕನುಗುಣವಾಗಿಯೇ ಸುಖದುಃಖಗಳನ್ನುಂಟುಮಾಡುವನು; ಸ್ವರ್ಗನರಕಾದಿಗಳುಂಟಾಗುವ ಹಾಗೆ ಮಾಡುವನು.

(೪) ಹೀಗೆ ಇನ್ನೂ ಅನೇಕಗಳಾದ **“ಯೋಮೇ ಗರ್ಭಗತಸ್ಯಾಪಿ” “ಸ್ವಯಂ ಮೃತ್ಪಿಂಡ ಭೂತಸ್ಯ”** ಎಂಬೀ ಪ್ರಮಾಣಗಳನ್ನು ಶ್ರೀ ದೇಶಿಕರವರೇ ಮುಂದೆ ಉದಾಹರಿಸಿ ಅವುಗಳಿಗೆ ಸಮಂಜಸವಾದ ಅರ್ಥಗಳನ್ನುಪದೇಶಿಸುತ್ತಾರೆ.

ಈ ಪ್ರಮಾಣಗಳನ್ನೆಲ್ಲಾ ಸರಿಯಾಗಿ ಪರಿಶೀಲಿಸದೆ ವ್ಯಾಜವು ಬೇಕಾಗಿಯೇ ಇಲ್ಲವು; ಸರ್ವೇಶ್ವರನೇ ಸ್ವತಂತ್ರನಾದುದರಿಂದ ತನ್ನಿಷ್ಟಬಂದಂತೆ ನಡೆಯುವನೆಂದು ಅಪಾರ್ಥಗಳನ್ನು ಹೇಳುತ್ತಾರೆ. ಆದುದರಿಂದಲೇ ಇದುಕ್ಕು ಮೂಲಮಾನ ವಚನಙ್ಗಳುಕ್ಕುಮ್ ಎಂಬ ಪ್ರಯೋಗವು.

ಶ್ರಿಯಃಪತಿಯ ಸ್ವಾತಂತ್ರ್ಯ ಕಾರುಣ್ಯಗಳು ಈ ಚೇತನನ ನಿಗ್ರಹಾನುಗ್ರಹಗಳಿಗೆ ಪ್ರಧಾನ ಕಾರಣಗಳು.

ಈಶ್ವರನುಕ್ಕು - ಸರ್ವೇಶ್ವರನಿಗೆ **ಸಹಜಙ್ಗಳಾನ** - ಸಹಜ ಧರ್ಮಗಳಾದ ಸ್ವಾತಂತ್ರ್ಯಕಾರುಣ್ಯಗಳ, **ಪ್ರಾಧಾನ್ಯತ್ತಾಲೆ** - ಮುಖ್ಯಕಾರಣವಾಗಿರೋಣದರಿಂದ ಎಂದರೆ, ಸ್ವಾತಂತ್ರ್ಯವು ಲೀಲೋಪಕರಣವಾಗಿ ಮಾಡಿ ಬಂಧನಿಗ್ರಹಾದಿಗಳಿಗೆ ಪ್ರಧಾನ ಕಾರಣವು, ಕಾರುಣ್ಯವು ಭೋಗೋಪಕರಣವಾಗಿ ರಕ್ಷಣಾನುಗ್ರಹಗಳಿಗೆ ಕಾರಣವು ಎಂಬ ಭಾವವು; **ಇವತ್ತುಕ್ಕು** - ಈ ಸ್ವಾತಂತ್ರ್ಯಕಾರುಣ್ಯಗಳಿಗೆ, **ವ್ಯಾಜಭೂತಙ್ಗಳಾನ** - ಕಾರಣಗಳು ದುಷ್ಕೃತ ಸುಕೃತರೂಪಗಳಾದ **ವಿಶೇಷ ಕಾರಣಙ್ಗಳೈ** - ವಿಶೇಷ ಕಾರಣಗಳನ್ನು, **ಅನಾದರಿತ್ತು** - ಪರಿಗಣಿಸದೆ, **ಪಣ್ಡು** - ಇದಕ್ಕೆ ಹಿಂದಿನ ಕಾಲದಲ್ಲಿ, **ಎನ್ನೈ** - ನನ್ನನ್ನು **ಪರಾಙ್ಮುಖನಾಕ್ಕುಗೈಕ್ಕುವರ್** - ಸರ್ವೇಶ್ವರನಿಗೆ ಅಭಿಮುಖನಾಗದೇ ಇರುವದಕ್ಕೂ,

ನ್ನೈ ಯಭಿಮುಖನಾಕ್ಕ ಕ್ಕೈಕ್ಕುವ್, ಉನ್ ಸ್ವಾತಂತ್ರ್ಯಮುಮ್ ಕೃಪೈಯು ಮೊಳಿಯ ವೇರೊರು ಪ್ರಧಾನ ಕಾರಣಂ ಕಣ್ಡಿಲೇನ್, ಎನಕ್ಕು ಕಾಟ್ಟಾದೇ ಸ್ವತಸ್ಸರ್ವಜ್ಞನಾನ ನೀ ಕಣ್ಡದುಣ್ಡಾಗಿಲ್ ಅರುಳಿಚ್ಚೆಯ್ಯ ವೇಣು ಮೆನ್ನ; ಈಶ್ವರನ್ ನಿರುತ್ತರನಾಯಿರುಕ್ಕಿರ ಇರುಪ್ಪಾಲೇ ಸ್ವಾತಂತ್ರ್ಯ ಕೃಪೆಗಳಿನುಡೈಯ ಪ್ರಾಧಾನ್ಯತ್ತೈ ನಾಟ್ಟುಕ್ಕು ವೆಳಿಯಿಡುಗಿರಾರ್.

ಇನ್ರು - ಈಗ ಎನ್ನೈ - ನನ್ನನ್ನು, ಅಭಿಮುಖನಾಕ್ಕಕ್ಕೈಕ್ಕುವ್ - ಅಭಿಮುಖನಾಗಿಮಾಡಿದಕ್ಕೂ ಸಹ, ಉನ್ ಸ್ವಾತಂತ್ರ್ಯಮುಮ್ ಕೃಪೆಯುಮ್ ಒಳಿಯ-ನಿನ್ನ ಸ್ವಾತಂತ್ರ್ಯ ಕೃಪೆಗಳಲ್ಲದೆ, ವೇರೊರು ಪ್ರಧಾನ ಕಾರಣಂ-ಬೇರೊಂದು ಮುಖ್ಯ ಕಾರಣವನ್ನೂ, ಕಣ್ಡಿಲೇನ್-ನಾನು ಕಂಡಿಲ್ಲವು, ಎನಕ್ಕು ಕಾಟ್ಟಾದೆ-ನನಗೆ ತಿಳಿಯಪಡಿಸದೇನೆ, ಸ್ವತಸ್ಸರ್ವಜ್ಞನಾದ, ನೀ ಕಣ್ಡದುಣ್ಡಾಗಿಲ್-ನಿನಗೆ ಗೊತ್ತಿರುವದೇನಾದರೂ ಇದ್ದರೆ, ಅರುಳಿಚ್ಚೆಯ್ಯ ವೇಣುಮೆನ್ನ ದಯಮಾಡಿ ತಿಳಿಸಬೇಕೆಂದು ಪ್ರಾರ್ಥಿಸಲಾಗಿ, ಅದಕ್ಕೆ, ಈಶ್ವರನ್-ಸರ್ವೇಶ್ವರನು, ನಿರುತ್ತರನಾಯಿರುಕ್ಕಿರ – ಮೌನಧ್ವನಿಯನ್ನುಂಟುಮಾಡಿದನೇ ವಿನಾ ಏನೊಂದೂ ಉತ್ತರವನ್ನು ಕೊಡದೇ ಇರುವ, ಇರುಪ್ಪಾಲೇ - ಸ್ಥಿತಿಯಿಂದ, ಸ್ವಾತಂತ್ರ್ಯ ಕೃಪೆಗಳ, ಪ್ರಾಧಾನ್ಯತ್ತೈ - ಪ್ರಾಮುಖ್ಯತೆಯನ್ನು, ನಾಟ್ಟುಕ್ಕು - ಲೋಕದ ಜನರಿಗೆಲ್ಲಾ, ವೆಳಿಯಿಡುಗಿರಾರ್ - ಪ್ರಕಟಿಸುತ್ತಾರೆ. ಈ ಮೇಲಿನ ವಾಕ್ಯದಿಂದ ಇನ್ರೆನ್ನೈ ಎಂಬ ಪಾಶುರಕ್ಕೆ ಸರಿಯಾದ ಅರ್ಥವನ್ನು ತಿಳಿಸುತ್ತಾರೆ. ಸರ್ವೇಶ್ವರನಿಗೆ ಸಹಜ ಧರ್ಮಗಳಾದ ಸ್ವಾತಂತ್ರ್ಯಕಾರುಣ್ಯಗಳು ಈ ಚೇತನನ ಬಂಧಮೋಕ್ಷಾದಿಗಳಿಗೆ ಪ್ರಧಾನಹೇತುಗಳೆಂದು ತಿಳಿಸುತ್ತಾರೆ. ಸ್ವಾತಂತ್ರ್ಯವು ಈ ಚೇತನನ ದುಷ್ಕೃತಗಳನ್ನೇ ವ್ಯಾಜಮಾಡಿಗುರಿಮಾಡಿಕೊಂಡು ಭಗವನ್ನಿಗ್ರಹರೂಪವಾದ ಬಂಧಾದಿ ಶಿಕ್ಷೆಗಳಿಗೆ ಈ ಚೇತನನನ್ನು ಲೀಲೋಪಕರಣನೇ ಜಾತನಾಗಿ ಮಾಡುತ್ತದೆ; ಕಾರುಣ್ಯವು ಈ ಚೇತನನ ಸುಕೃತಗಳನ್ನು ಮೂಲಮಾಡಿಕೊಂಡು ಭಗವದನುಗ್ರಹರೂಪವಾದ ಮೋಕ್ಷವನ್ನುಂಟುಮಾಡಿ, ಭೋಗೋಪಕರಣವಾಗಿ ಮಾಡುತ್ತದೆ. ಇವತ್ತುಕ್ಕು ವ್ಯಾಜಭೂತಜ್ಞಾನ ವಿಶೇಷ ಕಾರಣಙ್ಗಳೈ ಅನಾದರಿತ್ತು ಎಂಬುದರ ಭಾವವೇನೆಂದರೆ, ಮೊದಲು ಈ ಚೇತನನು ಸರ್ವೇಶ್ವರನಿಗೆ ಅಭಿಮುಖನಾಗದೆ ಪುನಃಪುನಃ ಬಂಧಾದಿಗಳನ್ನು ಹೊಂದಿದುದಕ್ಕೆ ಕಾರಣವೇನೆಂದರೆ, ಕಾರುಣ್ಯಕ್ಕೆ ವ್ಯಾಜಭೂತವಾದ ವಿಶೇಷ ಕಾರಣವು ಅಲ್ಲಿ

ಇತ್ತಾಲಿ ಚ್ಚೇತನನ್ನೈ ಲೀಲೋಪಕರಣ ವಾಕ್ಯೈಕ್ಯ ಪ್ರಧಾನ

ಸುಕೃತವು, ಇದನ್ನು ಅನಾದರಿಸಿ ಸ್ವಾತಂತ್ರ್ಯಮೂಲಕವಾಗಿ ಹಾಗೆ ಲೀಲಾ ವಿಭೂತಿಯಲ್ಲೇ ಅಲೆಯುವ ಹಾಗೆ ಮಾಡುತ್ತದೆ. ಹಾಗೆಯೇ ಈ ಚೇತನನು ಈಗ ಸ್ವಾಮಿಗೆ ಅಭಿಮುಖನಾಗಿ ರಕ್ಷಿಸಲ್ಪಡಲು ಕಾರಣವೇನೆಂದರೆ:—ಸ್ವಾತಂತ್ರ್ಯಕ್ಕೆ ವ್ಯಾಜಭೂತವಾದ ವಿಶೇಷ ಕಾರಣವು ಅಲ್ಪ ದುಷ್ಕೃತವು, ಇದನ್ನು ಅನಾದರಿಸಿ, ಕಾರುಣ್ಯಮೂಲಕವಾಗಿ ಭೋಗವಿಭೂತಿಯನ್ನು ಹೋಗಿ ಸೇರುವಹಾಗೆ ಮಾಡುತ್ತದೆಂಬ ತಾತ್ಪರ್ಯವು ಈ ಅಭಿಪ್ರಾಯವನ್ನೇ ಶ್ರೀ ನಮ್ಮಾಳ್ವಾರ್ರವರು ಇನ್ರೆನ್ನೈ ಎಂಬ ಪಾಶುರದಲ್ಲಿ ಉಪದೇಶಿಸಿರುತ್ತಾರೆ. ಹೇಗೆಂದರೆ:—ಇನ್ರು ಎನ್ನೈ ಪೊರುಳಾಕ್ಕಿ ಎನ್ನೈಉಳ್ಳೈವೈತ್ತದು, ಅನುಗ್ರಹಿಸಿದುದು ಕಾರುಣ್ಯದ ಪ್ರಭಾವವು, ಅನ್ರು ಎನ್ನೈ ಪುರಮ್ಪೋಗ ಪುಣರ್ತ್ತದು ಸ್ವಾತಂತ್ರ್ಯದ ಪ್ರಭಾವವು, ಹೀಗೆ ಇವುಗಳಲ್ಲದೆ ಬೇರೆ ಯಾವ ಪ್ರಧಾನ ಕಾರಣವೂ ನನಗೆ ತಿಳಿಯದು, ನೀನು ಸರ್ವಜ್ಞನಾದುದರಿಂದ ನಿನಗೇನಾದರೂ ತಿಳಿದಿದ್ದರೆ ತಿಳಿಸೈಯ್ಯಾ ಎಂಬದಾಗಿ ಸರ್ವೇಶ್ವರನನ್ನು ಪ್ರಶ್ನಿಸಿದರು. ಇವುಗಳೇ ಪ್ರಧಾನ ಕಾರಣಗಳಾಗಿ ಇನ್ನು ಯಾವ ಕಾರಣಗಳೂ ಇಲ್ಲವಾದುದರಿಂದ ನಿರುತ್ತರನಾಗಿ, ಮೌನಧ್ವನಿಯ ಮೂಲಕ ಆಳ್ವಾರರಭಿಪ್ರಾಯವೇ ಸರಿಯಾದುದೆಂದು ಲೋಕಕ್ಕೆಲ್ಲಾ ಸರ್ವೇಶ್ವರನು ಪ್ರಕಟಿಸಿದನು ಎಂಬ ಭಾವವು. ಇಲ್ಲಿ ಮುಖ್ಯವಾಗಿ ಗ್ರಹಿಸತಕ್ಕ ಅಂಶವು ಇಷ್ಟೇ:—ಸಂಸಾರ ಬಂಧಕ್ಕೆ ಈ ಚೇತನನ ದುಷ್ಕೃತವು ವ್ಯಾಜವಾಗಿ ಸರ್ವೇಶ್ವರನಿಗೆ ಲೀಲೋಪಕರಣವಾಗುವುದು. ಮೋಕ್ಷಕ್ಕೆ ಈ ಚೇತನನ ಸುಕೃತರೂಪವಾದ ಉಪಾಯಾನುಷ್ಠಾನವು ವ್ಯಾಜವಾಗಿ ಸ್ವಾಮಿಯ ಭೋಗೋಪಕರಣವಾಗುವುದು, ಎಂಬುದು; ಹೀಗೆ ಚೇತನನ ವಿಷಯದಲ್ಲಿ ಸ್ವಾತಂತ್ರ್ಯಕ್ಕೂ ಕೃಪೆಗೂ ಪರಸ್ಪರ ಸ್ಪರ್ಧೆಯುಂಟು, ಈ ಸ್ಪರ್ಧೆಯಲ್ಲಿ ಭಗವತ್ಕೃಪೆಯೇ ಪ್ರಬಲತರವಾದುದು. ಈ ಸರ್ವ ಮಂಗಳದಾಯಕವಾದ ಕೃಪಾಪ್ರಭಾವವನ್ನೇ ಮಹರ್ಷಿಯು "ವ್ಯಸನೇಷು ಮನುಷ್ಯಾಣಾಂ ಭೃಶಂ ಭವತಿ ದುಃಖಿತಃ । ಉತ್ಸವೇಷು ಚ ಸರ್ವೇಷು ಪಿತೇವ ಪರಿತುಷ್ಯತಿ" (ರಾ. ಅಯೋಧ್ಯಾ) ಎಂದು ಕೊಂಡಾಡಿರುತ್ತಾರೆ. ಆದುದರಿಂದ ಈ ಪ್ರಬಲವಾದ ಕೃಪೆಯುಂಟಾಗುವ ಹಾಗೆ ಮಾಡಿಕೊಳ್ಳತಕ್ಕದ್ದು ನಮ್ಮ ಮುಖ್ಯ ಕರ್ತವ್ಯವು.

ಹಿಂದಿನ ವಾಕ್ಯದಲ್ಲಿ ಹೇಳಿದುದನ್ನೇ ಬಹು ವಿಶದವಾಗಿ, "ಇತ್ತಾಲಿ ಚ್ಚೇತನನ್ನೈ" ಎಂಬ ಮುಂದಿನ ವಾಕ್ಯದಿಂದ ವಿಶದೀಕರಿಸುತ್ತಾರೆ:—ಇತ್ತಾಲ್-ಹೀಗೆ

ಕಾರಣಮ್ ಈಶ್ವರ ಸ್ವಾತಂತ್ರ್ಯಮ್; ಇದುಕ್ಕು ಸಹಕಾರಿ ಕಾರಣಮ್ ಪ್ರವಾಹಾನಾದಿಯಾನ ಸ್ವತಂತ್ರಾಜ್ಞಾತಿಲಂಘನಮ್. ಇವನೈ ಭೋಗೋಪಕರಣಮಾಕ್ಕುಗೈಕ್ಕು ಪ್ರಧಾನಕಾರಣಮ್ ಈಶ್ವರನುಡೈಯ ಸ್ವಾಭಾವಿಕ ಕಾರುಣ್ಯಮ್; ಇದುಕ್ಕು ಪ್ರತಿಬಂಧಕಮಾನ ಈಶ್ವರನಿಗ್ರಹತ್ತೈ ಶಮಿಪ್ಪಿತ್ತುಕ್ಕೊಂಡು ಸಹಕಾರಿ ಕಾರಣಮೆನ್ನು ಪೇರ್ ಪೆತ್ತದು, ಇವನುಡೈಯ ಸುಕೃತ ವಿಶೇಷ ದ್ವಾರಕ ಕೃಪೈಯಡಿಯಾಗ ವನ್ದ ವಶೀಕರಣ ವಿಶೇಷಙ್ಗಳ್; ಎನ್ರು ಈಶ್ವರನುಡೈಯ ಸ್ವಭಾವತ್ತೈಯುಮ್, ವೈಷಮ್ಯ

ನಮ್ಮಾಳ್ವಾರ್ರವರು ಸ್ವಾತಂತ್ರ್ಯ ಕಾರುಣ್ಯಗಳೇ ಪ್ರಧಾನ ಹೇತುಗಳೆಂಬ ಉಪದೇಶದಿಂದ, ಇಚ್ಚೇತನನೈ - ಈ ಚೇತನನನ್ನು, ಲೀಲೋಪಕರಣ ಮಾಕ್ಕುಗೈಕ್ಕು - ಈ ಲೀಲಾವಿಭೂತಿಗೆ ಸೇರಿದ ವಸ್ತುವಾಗಿ ಮಾಡಲು, ಎಂದರೆ ಜನ್ಮಸಂತತಿಗಳನ್ನುಂಟುಮಾಡಿ ಪುನಃಪುನಃ ಸಂಸಾರಬಂಧಕ್ಕೆ ಸಿಕ್ಕುವ ಹಾಗೆ ಮಾಡಲು, ಪ್ರಧಾನ ಕಾರಣಮ್ - ಮುಖ್ಯ ಕಾರಣವು, ಈಶ್ವರಸ್ವಾತಂತ್ರ್ಯಮ್ ಸರ್ವೇಶ್ವರನ ಸ್ವಾತಂತ್ರ್ಯವು. ಇದಕ್ಕು - ಹೀಗೆ ಪುನಸ್ಸಂಸೃತಿಗೆ, ಸಹಕಾರಿ ಕಾರಣಮ್ - ಎರಡನೆಯ ಸಹಾಯಕಾರಣವು ಎಂದರೆ ವ್ಯಾಜರೂಪಕಾರಣವು, ಪ್ರವಾಹಾನಾದಿಯಾನ - ಪ್ರವಾಹರೂಪದಲ್ಲಿ ಅನಾದಿಯಾಗಿರುವ, ಸ್ವತಂತ್ರಾಜ್ಞಾತಿಲಂಘನಮ್ - ತಾನೇ ಸ್ವತಂತ್ರಿಸಿ ಸ್ವಾಮಿಯ ಆಜ್ಞೆಯನ್ನುಲ್ಲಂಘಿಸೋಣವು. ಇವನೈ - ಈ ಚೇತನನನ್ನು, ಭೋಗೋಪಕರಣಮಾಕ್ಕುಗೈಕ್ಕು - ಭೋಗವಿಭೂತಿಯಾದ ನಿತ್ಯವಿಭೂತಿಯಲ್ಲಿ ಮುಕ್ತನನ್ನಾಗಿ ಮಾಡಲು, ಪ್ರಧಾನ ಕಾರಣವು, ಈಶ್ವರನ ಸ್ವಾಭಾವಿಕವಾದ ಕಾರುಣ್ಯವು; ಇದುಕ್ಕು ಪ್ರತಿಬಂಧಕಮಾನ ಈಶ್ವರನಿಗ್ರಹತ್ತೈ - ಹೀಗೆ ಮುಕ್ತನನ್ನಾಗಿ ಮಾಡುವದಕ್ಕೆ ಅಡ್ಡಿಯಾಗಿರುವ ಭಗವನ್ನಿಗ್ರಹವನ್ನು, ಶಮಿಪ್ಪಿತ್ತುಕ್ಕೊಂಡು - ಹೋಗಲಾಡಿಸಿಕೊಂಡು ಸಹಕಾರಿ ಕಾರಣಮೆನ್ನು ಪೇರ್ ಪೆತ್ತದು - ಎರಡನೆಯದಾದ ಸಹಾಯ ಕಾರಣ ಎಂದರೆ ವ್ಯಾಜರೂಪಕಾರಣವೆಂಬ ಹೆಸರನ್ನು ಹೊಂದಿರುವದು, ಯಾವುದೆಂದರೆ ಹೇಳುತ್ತಾರೆ:— ಇವನುಡೈಯ ಈ ಚೇತನನ, ಸುಕೃತ ವಿಶೇಷದ್ವಾರಕ - ಸುಕೃತವಿಶೇಷವೇ ಮೂಲವಾಗಿ ಉಳ್ಳ ಎಂದರೆ ಸುಕೃತವಿಶೇಷದಿಂದ ಉಂಟಾಗುವ ಕೃಪೈಯಡಿಯಾಗ - ಕೃಪೆಯು ಮೂಲಕವಾಗಿ, ವನ್ದ - ಪ್ರಾಪ್ತವಾದ, ವಶೀಕರಣ ವಿಶೇಷಙ್ಗಳ್ - ಸರ್ವೇಶ್ವರನನ್ನು ವಶಮಾಡಿಕೊಳ್ಳುವ ಉಪಾಯ ವಿಶೇಷಗಳು, "ತಸ್ಯ ಚ ವಶೀಕರಣಂ ತಚ್ಛರಣಾಗತಿರೇವ" ಆ ಕರುಣಾಸಾಗರ

ನೈರ್ಘೃಣ್ಯಙ್ಗಳಿಲ್ಲಾಮೈಯೈಯುಮ್, ಬಂಧಮೋಕ್ಷಾದಿ ವ್ಯವಸ್ಥೈಯೈಯುಮ್, ಪ್ರಮಾಣ ಪ್ರತಿನಿಯತಮಾನ ಪಡಿಯಿಲೇ ಅನುಸಂಧಿತ್ತು ಸ್ವತಂತ್ರನುಡೈಯ ಕೃಪೈಯಿಲೇ ಯೂನ್ರಿಪ್ಪೋರ ವಡಕ್ಕು ಮೆನ್ರುಕರುತ್ತು.

ನನ್ನು ವಶಮಾಡಿಕೊಳ್ಳುವ ಮಾರ್ಗವು, ಆತನಲ್ಲಿ ಮಾಡುವ ಶರಣಾಗತಿಯೇ, ಅದ್ವಾರಕ ಪ್ರಪತ್ತಿಯಾಗಲಿ ಸದ್ವಾರಕ ಪ್ರಪತ್ತಿಯಾಗಲಿ ಆಗಬಹುದು. ಹೀಗೆ ಸರ್ವ ಫಲಗಳಿಗೂ ಬಂಧರೂಪವೇ ಆಗಲಿ ಮೋಕ್ಷರೂಪವೇ ಆಗಲಿ ಎರಡೆರಡು ಕಾರಣಗಳುಂಟೆಂದು ಹೇಳಲ್ಪಟ್ಟವು. ಒಂದು ಪ್ರಧಾನ ಕಾರಣವು, ಸರ್ವೇಶ್ವರನ ಸ್ವಾತಂತ್ರ್ಯವಾಗಲಿ, ಕಾರುಣ್ಯವಾಗಲಿ ; ಇನ್ನೊಂದು ವ್ಯಾಜರೂಪವಾಗಿ ಸಹಕಾರಿ ಕಾರಣವು, ಭಗವದಾಜ್ಞಾತಿ ಲಂಘನವು ಅಥವಾ ಉಪಾಯಾನುಷ್ಠಾನವು. ಹೀಗೆ ಸರ್ವೇಶ್ವರನಿಂದ ಒಂದೂ, ಜೀವನಿಂದ ಒಂದೂ, ಎರಡು ಕಾರಣಗಳೂ ಸೇರಿದರೇನೇ ಫಲವು. ಒಂದರಿಂದ ಮಾತ್ರವೇ ಉಂಟಾಗುವದಿಲ್ಲವು. ಸರ್ವೇಶ್ವರನ ಸ್ವಾತಂತ್ರ್ಯ, ಚೇತನನ ಆಜ್ಞಾತಿಲಂಘನ, ಇವುಗಳಿಂದ ಬಂಧವು ; ಸರ್ವೇಶ್ವರನ ಸ್ವಾತಂತ್ರ್ಯಯುಕ್ತ ಕಾರುಣ್ಯ, ಚೇತನನ ವಶೀಕರಣೋಪಾಯ, ಇವುಗಳಿಂದ ಮೋಕ್ಷವು ಎಂಬ ಭಾವವು. ಇದರಿಂದ ಸರ್ವೇಶ್ವರನೇ ಫಲಪ್ರದನು, ಆತನು ಚೇತನನ ಒಂದು ವ್ಯಾಜವನ್ನು ಅಪೇಕ್ಷಿಸಿಯೇ ಫಲವನ್ನು ಕೊಡುವನೇ ವಿನಾ ಅನ್ಯಥಾ ಇಲ್ಲವೆಂದು ಸ್ಥಾಪಿತವಾಯಿತು.

ಇನ್ನು ವಾಕ್ಯಶೇಷದಿಂದ ಹೀಗೀಗ ಮೇಲಿನ **ಇನ್ರುನ್ನೈ** ಎಂಬ ಪಾಶುರಕ್ಕೆ ಅರ್ಥ ಹೇಳಿದರೆ ಸರ್ವಸಮಂಜಸವೂ ಉಂಟಾಗುತ್ತದೆಂದು ಹೇಳುತ್ತಾರೆ :— **ಎನ್ರು** - ಮೇಲೆ ಉಪಪಾದಿಸಿದಹಾಗೆ ಅರ್ಥ ಹೇಳುವದರ ಮೂಲಕ, **ಈಶ್ವರನುಡೈಯ ಸ್ವಭಾವತ್ತೈಯುಮ್** - ಸರ್ವೇಶ್ವರನ ಸ್ವಭಾವಗಳಾದ ಸ್ವಾತಂತ್ರ್ಯ ಕಾರುಣ್ಯಗಳನ್ನೂ, ವೈಷಮ್ಯ ನೈರ್ಘೃಣಾದಿಗಳಿಲ್ಲವೆಂಬುವದನ್ನೂ, **ಬಂಧಮೋಕ್ಷಾದಿ ವ್ಯವಸ್ಥೈಯುಮ್** - ಬಂಧಮೋಕ್ಷಾದಿಗಳುಂಟಾಗುವದಕ್ಕೆ ಕಾರಣಗಳು ಯಾವುವು ಎಂಬ ವ್ಯವಸ್ಥೆಯನ್ನೂ, ವ್ಯವಸ್ಥೆ ಹೇಗೆಂದರೆ, ಆಜ್ಞಾತಿ ಲಂಘನದಿಂದ ಬಂಧವೂ, ವ್ಯಾಜರೂಪೋಪಾಯಾನುಷ್ಠಾನದಿಂದ ಮೋಕ್ಷವೂ ಎಂಬದಾಗಿ ವ್ಯವಸ್ಥೆಯು, **ಪ್ರಮಾಣಪ್ರತಿನಿಯತಮಾನ ಪಡಿಯಿಲೇ**-ಪ್ರಮಾಣವನ್ನನುಸರಿಸಿ ತೋರಿಬರುವಹಾಗೆ, ಅನುಸಂಧಾನಮಾಡಿ, **ಸ್ವತಂತ್ರನುಡೈಯ ಕೃಪೈಯಿಲೆ** – ಸ್ವತಂತ್ರನಾದ ಸರ್ವೇಶ್ವರನ ಕೃಪೆಯಲ್ಲಿ, **ಊನ್ರಿಪ್ಪೋರ** - ಮುಖ್ಯಾವಲಂಬನವಾಗಿ ನೆನಿಸಿ ಆಶ್ರಯಿಸುವದು, **ಅಡಕ್ಕುಮ್**-ಉಚಿತವು, **ಎನ್ರುಕರುತ್ತು**-

ಎಂಬಭಿಪ್ರಾಯವು; ಎಂದರೆ ವ್ಯಾಜವನ್ನನುಷ್ಠಿಸಿ ಅವನನ್ನು ವಶಮಾಡಿಕೊಂಡು ಅನುಗ್ರಹವನ್ನು ಹೊಂದುವದು ಉಚಿತವೆಂಬ ಭಾವವು. ವ್ಯಾಜ ನಿರಪೇಕ್ಷವಾದಿಗಳು ಹೇಳುವದರಲ್ಲಿ ನಾಲ್ಕು ವಿಧ ದೋಷಗಳುಂಟೆಂದೂ ತಾವು ಈಗ ಹೇಳಿದ ವ್ಯಾಜಸಾಪೇಕ್ಷವಾದದಲ್ಲಿ ನಾಲ್ಕು ವಿಧ ಗುಣಗಳುಂಟೆಂದು ತಿಳಿಸುತ್ತಾರೆ.

೧. ಅವರುಗಳು ಹೇಳಿದುದರಲ್ಲಿ ಈಶ್ವರ ಸ್ವಾತಂತ್ರ್ಯಕ್ಕೆ ಪ್ರಾಮುಖ್ಯತೆ ಹೇಳಲ್ಪಟ್ಟಿತೇ ವಿನಾ, ಸ್ವಾತಂತ್ರ್ಯದಿಂದ ಸೇರಿದ ಕಾರುಣ್ಯದ ಮಹಿಮೆಯು ಹೇಳಲ್ಪಡಲಿಲ್ಲವು. ಈ ಎರಡು ಸ್ವಭಾವಗಳೂ ಲೀಲಾವಿಭೂತಿ ಭೋಗ ವಿಭೂತಿಗಳ ವ್ಯಾಪಾರಗಳಿಗೆಲ್ಲಾ ಹೇತುವಾಗಿ ಮುಖ್ಯವೆಂದು ತೋರಿಸಲ್ಪಟ್ಟಿತು.

೨. ಆ ವಾದದಲ್ಲಿ ವೈಷಮ್ಯನೈರ್ಘೃಣ್ಯಗಳನ್ನು ಸರ್ವೇಶ್ವರನಿಗೆ ಆರೋಪಿಸಿದಹಾಗೆ ಆಗುತ್ತದೆ. ಅನಾದಿಕರ್ಮ ವಿಶೇಷಗಳಿಗನುಸಾರವಾಗಿ ಶಿಕ್ಷೆ ರಕ್ಷಣೆಗಳೂ ಎಂದು ಹೇಳುವವರಿಂದ ವೈಷಮ್ಯನೈರ್ಘೃಣ್ಯಗಳಿಗೆ ಅವಕಾಶವೇ ಇಲ್ಲವು. ಈ ಅಭಿಪ್ರಾಯವು "**ವೈಷಮ್ಯನೈರ್ಘೃಣ್ಯೇ ನಸಾಪೇಕ್ಷತ್ವಾತ್ ತಥಾಹಿ ದರ್ಶಯತಿ**" ಎಂಬ ಬ್ರಹ್ಮಸೂತ್ರದಲ್ಲಿ (೨. ೧. ೩೪) **ಉಪಪಾದಿತ**ವಾಗಿರುತ್ತದೆ. ಇದು ಸೃಷ್ಟಿ ಕ್ರಮವನ್ನು ಕುರಿತು ಹೇಳಿದುದಾದರೂ, ಸಾರ್ವತ್ರಿಕವಾಗಿಯೂ ಅನ್ವಯಿಸಬಹುದು. ಭಿನ್ನಭೋಗಗಳನ್ನುಂಟುಮಾಡಿದನೆಂಬ ವೈಷಮ್ಯವೂ, ಕ್ರೂರ ದುಃಖವನ್ನುಂಟುಮಾಡಿದನೆಂಬ ನೈರ್ಘೃಣ್ಯವೂ ಆತನಿಗಿಲ್ಲವು. ಏಕೆಂದರೆ ಕ್ಷೇತ್ರಜ್ಞರ ಪೂರ್ವಕರ್ಮಾನುಗುಣವಾಗಿ ಸುಖದುಃಖಗಳುಪಭೋಗವು, ಶ್ರುತಿಯೂ ಹಾಗೆಯೇ ಹೇಳುತ್ತದೆ; "**ಸಾಧುಕಾರೀ ಸಾಧುರ್ಭವತಿ, ಪಾಪಕಾರೀ ಪಾಪೋ ಭವತಿ**" ಎಂಬದಾಗಿ; ಆದುದರಿಂದ ಶಿಕ್ಷೆರಕ್ಷಣೆ ಇವುಗಳು ವ್ಯಾಜಸಾಪೇಕ್ಷವಾಗಿಯೇ ಎಂದು ತಿಳಿಯತಕ್ಕದ್ದು.

೩. ಆ ವಾದದಲ್ಲಿ ಬಂಧಕ್ಕೇನು ಕಾರಣ, ಮೋಕ್ಷಕ್ಕೇನು ಕಾರಣವೆಂದರೆ ಸರ್ವೇಶ್ವರನ ಸ್ವಾತಂತ್ರ್ಯದಿಂದುಂಟಾದ ಸಂಕಲ್ಪವೆಂದು ಹೇಳಬೇಕಾಗುತ್ತದೆ. ಇದರಿಂದ ಸರ್ವಮುಕ್ತಿ ಪ್ರಸಂಗ ಏಕೆ ಆಗದೆಂಬ ಆಕ್ಷೇಪಕ್ಕೆ ಉತ್ತರವಿಲ್ಲವು. ಈ ವ್ಯಾಜಸಾಪೇಕ್ಷವಾದದಲ್ಲಾದರೋ, ಚೇತನನ ದುಷ್ಕೃತ ಸುಕೃತಗಳು ಕಾರಣವಾಗಿ, ಭಗವನ್ನಿಗ್ರಹಾನುಗ್ರಹಗಳುಂಟಾಗಿ ಬಂಧಮೋಕ್ಷಪ್ರಾಪ್ತಿಗೆ ಸರಿಯಾದ ವ್ಯವಸ್ಥೆಯು ದೊರೆಯುತ್ತದೆ.

೪. ಆ ವಾದದಲ್ಲಿ ವಿಧಿವಾಕ್ಯಗಳಾದ ಪ್ರಮಾಣಗಳು ಮೋಕ್ಷಕ್ಕೆ ಕೃತಮಾತ್ರ ವ್ಯರ್ಥವು "ಓಮಿತ್ಯಾತ್ಮಾನಂ ಯುಂಜೀತ" "ಮಾಮೇಕಂ ಶರಣಂ ವ್ರಜ" "ಆತ್ಮಾನಂ ಮಯಿ ನಿಕ್ಷಿಪೇತ್" "ಸಕೃದೇವ ಪ್ರಪನ್ನಾಯ

ಸ್ವಾತಂತ್ರ್ಯ ಕಾರುಣ್ಯಯೋರುಭಯೋರಾವಶ್ಯಕತಾಂದರ್ಶಯಿತಿ

ನಿಷ್ಕೃಪನುಡೈಯ ಸ್ವಾತಂತ್ರ್ಯಮ್ ಬಾಧಕಮ್, ಅಸ್ವತಂತ್ರನುಡೈಯ ಕಾರುಣ್ಯಮ್ ಪಿರರ್ಕ್ಕುಮ್ ಅನುಪಕಾರಕಮಾಯ್, ತನಕ್ಕುಮ್ ಕ್ಲೇಶಾವಹಮಾಯಿರುಕ್ಕುಮ್.

ತವಾಸ್ಮೀತಿ ಚ ಯಾಚತೇ" ಇತ್ಯಾದಿ ವ್ಯಾಜಗಳ ಆವಶ್ಯಕತೆಯೂ ಈಗ ತಾವು ಹೇಳಿದ ಪಾಠಾರ್ಥದಿಂದ ಪ್ರದರ್ಶಿಸಲ್ಪಟ್ಟಿತು.

ಆದುದರಿಂದ ಇನ್ನೆನ್ನೈ ಎಂಬ ಪಾಠಾರ್ಥವು ಅವರುಗಳು ಹೇಳಿದ ಹಾಗಲ್ಲವೆಂದೂ, ತಾವು ಈಗ ಅನುಗ್ರಹಿಸಿದ ಅರ್ಥವು ಈ ನಾಲ್ಕು ವಿಧವಾಗಿ ಸಾಮಂಜಸ್ಯವನ್ನುಂಟುಮಾಡುವದರಿಂದ ಗ್ರಾಹ್ಯವೆಂದೂ ತಿಳಿಸಿರುತ್ತಾರೆ. ಆದಕಾರಣ ಏಕಾಂತಿಗಳು ಭಗವಂತನ ಸ್ವಾತಂತ್ರ್ಯಯುಕ್ತ ಕಾರುಣ್ಯವನ್ನೇ ಅನುಸಂಧಾನಮಾಡತಕ್ಕದ್ದು.

ಸ್ವಾತಂತ್ರ್ಯಕಾರುಣ್ಯಗಳೆರಡೂ ರಕ್ಷಣೆಗೆ ಆವಶ್ಯಕವೆಂದು ತೋರಿಸುತ್ತಾರೆ.

ಸ್ವಾತಂತ್ರ್ಯ ಕಾರುಣ್ಯಗಳಲ್ಲಿ ಒಂದೊಂದೇ ನಿಗ್ರಹಾನುಗ್ರಹಗಳಿಗೆ ಸಾಲದೇ ? ಎಂದರೆ ಎರಡೂ ಆವಶ್ಯಕವು ಎಂದುಪಪಾದಿಸುತ್ತಾರೆ. ನಿಷ್ಕೃಪನುಡೈಯ – ಕಾರುಣ್ಯವಿಲ್ಲದಿರುವವನ, ಸ್ವಾತಂತ್ರ್ಯವು, ಬಾಧಕಮ್ – ಬಾಧಕವಾದುದು ; ಅಸ್ವತಂತ್ರನುಡೈಯ – ಸ್ವಾತಂತ್ರ್ಯವಿಲ್ಲದಿರುವವನ, ಕಾರುಣ್ಯಮ್ – ಕೃಪೆಯು, ಪಿರರ್ಕ್ಕುಮ್ ಅನುಪಕಾರಕಮಾಯ್ – ಇತರರಿಗೆ ಉಪಕಾರಮಾಡಲು ಶಕ್ತಿ ಇಲ್ಲದ್ದಾಗಿಯೂ, ತನಕ್ಕುಮ್ ಕ್ಲೇಶಾವಹಮಾಯ್ – ಸಹಾಯ ಮಾಡಲು ಶಕ್ತಿ ಇಲ್ಲವೇ! ಎಂಬ ಪರಿತಾಪದಿಂದ ತನಗೂ ದುಃಖಕರವಾಗಿ, ಇರುಕ್ಕುಮ್ – ಇರುತ್ತದೆ. ಶಿಕ್ಷಿಸುವದಕ್ಕೆ ಸ್ವಾತಂತ್ರ್ಯ ಮಾತ್ರವಿದ್ದರೆ ಸಾಲದೇ ? ಶಿಕ್ಷಿಸುವವನಲ್ಲಿ ಕೃಪೆಯೂ ಇರಬೇಕೇ ? ಎಂದರೆ ನಿಷ್ಕೃಪೆಯುಳ್ಳವನ ಸ್ವಾತಂತ್ರ್ಯವು ತುಂಬಾ ಬಾಧಕವ ಎಂದು ಹೇಳುತ್ತಾರೆ. ಯಾರಿಗೆಂದರೆ ಆಶ್ರಿತರಿಗೂ ಕೂಡ ಬಾಧಕವೇ ಎಂಬ ತಾತ್ಪರ್ಯವು. ಅತೃಪ್ತರಾದ ಪ್ರಜೆಗಳು ರಾಜನನ್ನು ಆಶ್ರಯಿಸಿ ಯಾಚಿಸಲು ಗುಂಪುಕೂಡಿದರೆ, ಇದನ್ನು ಸಹಿಸದೆ ಅಧಿಕಾರಿಗಳು ನಿಷ್ಕೃಪೆಯುಳ್ಳ ಪೋಲೀಸಿನವರಿಗೆ ಗುಂಪನ್ನು

ಸ್ವತಂತ್ರನುಡೈಯ ಕಾರುಣ್ಯಮ್ ನಿನೈತ್ತದು ಮುಡಿಕ್ಕೈಯಾಲೇ ತನಕ್ಕುಮ್ ಅತಿರಸಮಾಯ್, ಆಶ್ರಯಿತ್ತಾರ್ಕೆಲ್ಲಾಮ್ ಅನ್ರೇ ಅನಿಷ್ಟ ನಿವೃತ್ತಿಕ್ಕುಮ್ ಇಷ್ಟಪ್ರಾಪ್ತಿಕ್ಕು ಉಡಲಾಯಿರುಕ್ಕುಮ್.

ಚಪರಿಸುವ ಸ್ವಾತಂತ್ರ್ಯವನ್ನು ಕೊಟ್ಟರೆ ಅವರು ಹೇಗೆ ಮಿತಿಮೀರಿ ನಡೆದು ತುಂಬಾ ಬಾಧಕವನ್ನುಂಟುಮಾಡುವರೋ ಹಾಗೆ ಎಂಬ ಭಾವವು. ಆದರೆ ನಿಷ್ಠುರರಾದ ಪೋಲೀಸ್‌ನವರಿಗೆ ಬದಲಾಗಿ ಕೃಪಾಯುಕ್ತರಾದ ಮೇಜಿಸ್ಟ್ರೇಟ ಮೊದಲಾದ ಅಧಿಕಾರಿಗಳಿಗಾಗಲಿ, ಸಹೃದಯರಾದ ಮಂತ್ರಿಗಳಿಗಾಗಲಿ ಸ್ವಾತಂತ್ರ್ಯವನ್ನು ಕೊಟ್ಟರೆ ಅನಾಹುತಗಳೇನೂ ನಡೆಯುವದಿಲ್ಲವು. ಆದುದರಿಂದ ಸರ್ವೇಶ್ವರನು ಸ್ವತಂತ್ರನೂ ಕೃಪಾಪರಿಪೂರ್ಣನೂ ಆಗಿರುವದರಿಂದ ಕೃಪಾವಿಶಿಷ್ಟ ಮ್ಯಾಜಿಸ್ಟ್ರೇಟಿನೋಪಾದಿಯಲ್ಲಿ ಯುಕ್ತ ಶಿಕ್ಷೆಯನ್ನು ವಿಧಿಸಿ ಆತನನ್ನು ಒಳ್ಳೇ ಮಾರ್ಗಕ್ಕೆ ತರುವನು. ಆಗ ಬಾಧಕವೇನೂ ಇಲ್ಲವು. ಹಾಗೆಯೇ ಸ್ವಾತಂತ್ರ್ಯವಿಲ್ಲದಿರುವ ಕೃಪಾವಿಶಿಷ್ಟನಿಂದ ಅನುಗ್ರಹವೂ ಉಂಟಾಗುವದಿಲ್ಲವು, ಇತರರಿಗೆ ಪ್ರಯೋಜನವೂ ಇಲ್ಲವು, ಸಹಾಯಮಾಡಲು ಶಕ್ತಿ ಇಲ್ಲವೇ ಎಂಬ ಪರಿತಾಪದಿಂದ ತನಗೂ ಕ್ಲೇಶವು ಎಂದು ತಿಳಿಸುತ್ತಾರೆ. ಹೇಗೆಂದರೆ, ಮಹಾ ಕೃಪೆಯುಳ್ಳ ಸ್ವಾತಂತ್ರ್ಯವಿಲ್ಲದ ರಾಜಭಟನನ್ನು ಆಶ್ರಯಿಸುವದರಿಂದ ಬಡ ಬ್ರಾಹ್ಮಣನ ದಾರಿದ್ರ್ಯವು ಹಿಂಗೀತೇ? ಆ ರಾಜಭಟನು ಆತನ ದೈನ್ಯವನ್ನು ನೋಡಿ ಶೋಕಿಸಬಹುದು ಉಪಕಾರವೆಸಗಲು ಆತನಿಗೆ ಸ್ವಾತಂತ್ರ್ಯವೆಲ್ಲಿಯದು? ಆದರೆ ಸ್ವಾತಂತ್ರ್ಯವುಳ್ಳವನಾಗಿಯೂ ಕೃಪಾಯುಕ್ತನಾಗಿಯೂ ಇರುವ ರಾಜನನ್ನಾಶ್ರಯಿಸಿದರೆ ತನ್ನ ಮನೋರಥವು ಪೂರ್ಣವಾಗುವ ಸಂಭವವು ಉಂಟು. ಹಾಗೆಯೇ ಸರ್ವೇಶ್ವರನು ಸ್ವತಂತ್ರನಾಗಿಯೂ ಕೃಪಾಶಾಲಿಯಾಗಿಯೂ ಇರುವದರಿಂದ ಪರಮನಿಶ್ರೇಯಸ್ಸು ಕೂಡ ಸಾಧ್ಯವು. ಈ ಅಭಿಪ್ರಾಯವನ್ನೇ ಮುಂದಿನವಾಕ್ಯದಿಂದುಪದೇಶಿಸುತ್ತಾರೆ. ಸ್ವತಂತ್ರನುಡೈಯ ಕಾರುಣ್ಯಮ್ - ಸ್ವತಂತ್ರನಾಗಿರುವವನ ಕರುಣೆಯು. ನಿನೈತ್ತದು ಮುಡಿಕ್ಕೈಯಾಲೇ - ಸಂಕಲ್ಪಿಸಿದುದನ್ನು ಪೂರ್ತಿ ಮಾಡಿಬಿಡುವದರಿಂದ. ತನಕ್ಕುಮ್ ಅತಿರಸಮಾಯ್ - ತನಗೂ ತುಂಬಾ ಆನಂದಕರವಾಗಿ, ಆಶ್ರಯಿತ್ತಾರ್ಕೆಲ್ಲಾಮ್ - ಆಶ್ರಯಿಸಿದ ಎಲ್ಲರಿಗೂ, ಅನ್ರೇ - ಆಗಲೇ, ಒಡನೇ ಅನಿಷ್ಟ ನಿವೃತ್ತಿಗೂ ಇಷ್ಟಪ್ರಾಪ್ತಿಗೂ ಉಡಲಾಯಿರುಕ್ಕುಮ್ - ಮೂಲವಾಗಿರುತ್ತದೆ. ಅಸ್ವತಂತ್ರನ ಕಾರುಣ್ಯವು ಯಾರಿಗೂ ಪ್ರಯೋಜನವಾಗದೆ ತನಗೆ ಕ್ಲೇಶಕ್ಕೆ ಕಾರಣವೆಂದು ಹೇಳಿ, ಸ್ವತಂತ್ರನ

ಇಪ್ಪಡಿ (ಇರುಗ್ಗೈಯಾಲೆ) ಯೊಗ್ಗೈಯಾಲೇ ಅವತಾರ ದಶೈಯಿಲುಮ್ (೧) "ವ್ಯಸನೇಷು ಮನುಷ್ಯಾಣಾಂ ಭೃಶಂ ಭವತಿ ದುಃಖಿತಃ" ಎನ್ರಿಪ್ಪಡೈಗಳಿಲ್ ಶೊಲ್ಲುಮವೈಯೆಲ್ಲಾಮ್ ಅನುಗ್ರಹ ವಿಷಯಮಾಯಿರುಪ್ಪಾರ್ ಶಿಲರೈ ರಂಜಿಪ್ಪಿಕ್ಕೈಕ್ಕುಮ್, ಆಸುರ ಪ್ರಕೃತಿಗಳೈ ಮೋಹಿಪ್ಪಿಕ್ಕೈಕ್ಕು ಮಾಗವತ್ತನೈ.

ಕಾರುಣ್ಯವು ಆಶ್ರಿತರಿಗೆಲ್ಲಾ ಅನಿಷ್ಟನಿವೃತ್ತಿ ಇಷ್ಟಪ್ರಾಪ್ತಿಯುಂಟಾಗುವದಲ್ಲದೆ ತನಗೂ ಸಂತೋಷಕರವಾಗುತ್ತದೆ ಎಂಬ ಭಾವವು.

ಸ್ವತಂತ್ರನ ಕಾರುಣ್ಯವು ತನಗೆ ಆಹ್ಲಾದಕರವೆಂದು ಹೇಳಲ್ಪಟ್ಟಿತು. ಆದರೆ ಶ್ರೀ ವಾಲ್ಮೀಕಿ ಮಹರ್ಷಿಯು, ಶ್ರೀರಾಮನು ಸ್ವತಂತ್ರನಾದರೂ ತನ್ನ ಪ್ರಜೆಗಳ ವ್ಯಸನದಲ್ಲಿ ತಾನೂ ತುಂಬಾ ದುಃಖವುಳ್ಳವನಾಗುವನೆಂದು ಹೇಳಿರುತ್ತಾರಲ್ಲಾ ? ಎಂದು ಆಕ್ಷೇಪಿಸಿದರೆ, ಅದಕ್ಕೆ ಸಮಾಧಾನವನ್ನು ಮುಂದಿನ ವಾಕ್ಯದಿಂದ ಹೇಳುತ್ತಾರೆ. **ಇಪ್ಪಡಿ ಇರುಗ್ಗೈಯಾಲೆ** - ಸ್ವತಂತ್ರನ ಕರುಣೆಯು ಆತನಿಗೆ ಆಹ್ಲಾದಕರವಾಗಿರುವದರಿಂದ. **ಅವತಾರ ದಶೈಯಿಲುಮ್** - ಅವತಾರವನ್ನು ಮಾಡಿದ ಸ್ಥಿತಿಯಲ್ಲಿ, "**ಮನುಷ್ಯಾಣಾಂ**-ಅಂತಹ ಪುರಜನಗಳಾದ ಸ್ವಕೀಯರಲ್ಲಿ ಮಾತ್ರವೇಯಲ್ಲದೆ ಸಾಧಾರಣರಾದ ಮನುಷ್ಯಸಾಮಾನ್ಯರ **ವ್ಯಸನೇಷು**-ವ್ಯಸನಗಳಲ್ಲಿ, **ಭೃಶಂ**-ಬೇಗ, **ದುಃಖಿತಃ**-ದುಃಖವನ್ನು ಹೊಂದಿರುವವನು, **ಭವತಿ**-ಆಗುವನು. ಇದಕ್ಕೆ ಉತ್ತರಾರ್ಧವು—**ಉತ್ಸವೇಷು ಚ ಸರ್ವೇಷು ಪಿತೇವ ಪರಿತುಷ್ಯತಿ** - ಸಮಸ್ತಗಳಾದ ಉತ್ಸವಗಳಲ್ಲಿ, **ಪಿತೇವ** - ಸ್ವಂತ ತಂದೆಯೋಪಾದಿಯಲ್ಲಿ, **ಪರಿತುಷ್ಯತಿ** - ಪುನಃಪುನಃ ಸಂತೋಷಪಡುವನು." **ಎನ್ರಿಪ್ಪಡೈಗಳಿಲ್** ಎಂಬೀ ಸ್ಥಳಗಳಲ್ಲಿ, **ಶೊಲ್ಲುಮವೈ ಯೆಲ್ಲಾಮ್** - ಹೇಳುವದೆಲ್ಲವೂ, **ಅನುಗ್ರಹ ವಿಷಯಮಾಯಿರುಪ್ಪಾರ್ ಶಿಲರೈ** - ಶ್ರೀರಾಮನ ಅನುಗ್ರಹವನ್ನು ಸಂಪಾದಿಸಬೇಕೆಂದಿರುವ ಕೆಲವರನ್ನು, **ರಂಜಿಪ್ಪಿಕ್ಕೈಕ್ಕುಮ್** - ತನ್ನನ್ನು ಆಶ್ರಯಿಸುವ ಹಾಗೆ ಪ್ರೇಮೋತ್ಪಾದನವಾಗುವದಕ್ಕಾಗಿ ಚಿತ್ತರಂಜನ ಉಂಟುಮಾಡುವದಕ್ಕಾಗಿಯೂ, ಮತ್ತು **ಆಸುರಪ್ರಕೃತಿಗಳೈ** - ಆಸುರಸ್ವಭಾವವುಳ್ಳವರಿಗೆ, **ಮೋಹಿಪ್ಪಿಕ್ಕೈಕ್ಕು ಮಾಗವತ್ತನೈ** - ಶ್ರೀರಾಮನು ಸರ್ವೇಶ್ವರನಲ್ಲವೆಂದು ಭ್ರಮೆಯನ್ನುಂಟುಮಾಡುವದಕ್ಕಾಗಿಯೂ, ಎಂದು **ಅತ್ತನೈ** - ಅಷ್ಟು ಮಾತ್ರಕ್ಕಾಗಿ ಎಂದು ಆ ಶ್ಲೋಕಾಭಿಪ್ರಾಯವು. ವ್ಯಸ

---

(೧) ರಾಮಾ. ಅಯೋಧ್ಯಾ. ೨.೪೦.

ನೇಷು ಮನುಷ್ಯಾಣಾಂ ಎಂಬ ಶ್ಲೋಕದಲ್ಲಿ ಸರ್ವೇಶ್ವರನಾದ ಶ್ರೀರಾಮನ ಕಾರುಣ್ಯಾತಿಶಯವು ಉಪಪಾದಿಸಲ್ಪಟ್ಟಿರುತ್ತದೆ. ಹಿಂದಿನ ವಾಕ್ಯದಲ್ಲಿ ಸ್ವತಂತ್ರನ ಕೃಪೆಯು ಆಹ್ಲಾದಕರವಾದುದು ಎಂದು ಹೇಳಿದುದಕ್ಕೆ ಮಹರ್ಷಿಯ ಸೂಕ್ತಿಯು ವಿರೋಧವಾಯಿತಲ್ಲಾ ? "**ನ ತೇ ವಾಗ ನೃತಾ ಕಾವ್ಯೇಕಾಚಿದತ್ರ ಭವಿಷ್ಯತಿ**" "ನೀನು ಬರೆಯುವ ರಾಮಾಯಣ ಕಾವ್ಯದಲ್ಲಿ ಸುಳ್ಳಾದ ವಾಕ್ಯ ಎಂದಿಗೂ ಉಂಟಾಗಲಾರದು" ಎಂಬ ಬ್ರಹ್ಮನ ಅನುಗ್ರಹವು ಮಹರ್ಷಿಗೆ ಇರುವಾಗ "**ವ್ಯಸನೇಷು**" ಎಂಬ ಶ್ಲೋಕಾಭಿಪ್ರಾಯವು ಎಂದಿಗೂ ಸುಳ್ಳಾಗಲಾರದಷ್ಟೇ. ಹಾಗಾದರೆ ಸರಿಯಾದ ಶ್ಲೋಕಾಭಿಪ್ರಾಯವೇನೆಂದರೆ ಹೇಳುತ್ತಾರೆ. ಮನುಷ್ಯರು ದೈವ ಸ್ವಭಾವವುಳ್ಳವರು ಆಸುರಸ್ವಭಾವವುಳ್ಳವರು ಎಂಬದಾಗಿ ಎರಡು ವಿಧವೆಂದು ಗೀತೆಯಲ್ಲಿ ಹೇಳಲ್ಪಟ್ಟಿರುತ್ತದೆ. ಸರ್ವೇಶ್ವರನಿಗೆ ವ್ಯಸನವೆಲ್ಲಿಯದು ? ಶ್ರೀರಾಮನು ಮನುಷ್ಯಾವತಾರಿಯಾದುದರಿಂದ ಮನುಷ್ಯರಹಾಗೆ ನಟನೆಯು. ಇತರರು ದುಃಖಪಟ್ಟರೆ ತಾನೂ ಅವರೊಂದಿಗೆ ಖಿನ್ನನಾಗುವನು. ಇದರಿಂದ ದೈವ ಸ್ವಭಾವವುಳ್ಳವರಿಗೆ ಈತನು ಸಹೃದಯನಾಗಿ ವರ್ತಿಸಿದುದರಿಂದ, ತನ್ನನ್ನು ಅವರು ಆಶ್ರಯಿಸುವಹಾಗೆ ಮಾಡಿಕೊಳ್ಳುವನು, ಆಸುರಸ್ವಭಾವದವರಲ್ಲಿ ತನ್ನ ಈ ವಿಡಂಬನದಿಂದ ಸಾಧಾರಣ ಮನುಷ್ಯನೆಂದು ಭಾವಿಸಿ, ತನ್ನನ್ನು ಆಶ್ರಯಿಸದೇ ಇರುವರು. ಹೀಗೆ ಈತನ ವ್ಯಸನನಟನ ನಾಟಕವು ದೈವಸ್ವಭಾವದವರನ್ನು ಆಶ್ರಯಿಸುವ ಹಾಗೆ ಮಾಡುವದಕ್ಕೂ, ಆಸುರಸ್ವಭಾವದವರನ್ನು ಆಶ್ರಯಿಸದ ಹಾಗೆ ಮಾಡುವದಕ್ಕೂ ಸಹಕಾರಿಯಾಗುತ್ತದೆಂಬ ಭಾವವು. ಮನುಷ್ಯರ ವ್ಯಸನವಲ್ಲಿ ದುಃಖ ನಟನೆಯೂ ಉತ್ಸವದಲ್ಲಿ ಸಂತೋಷದ ನಟನೆಯೂ, ಸಹ ಸ್ವಾತಂತ್ರ್ಯಕಾರುಣ್ಯಗಳುಳ್ಳ ಸರ್ವೇಶ್ವರನ ಲೀಲಾರಸದ ಪರೀವಾಹವೇ ವಿನಾ ಬೇರೆಯಲ್ಲವು. ಆದುದರಿಂದ ವಿರೋಧವೇನೂ ಇಲ್ಲವೆಂಬ ಭಾವವು. ಸತ್ವಗುಣಾಧಿಕ್ಯವುಳ್ಳ ಪುರುಷನು ಇತರರು ಕಷ್ಟಪಡುತ್ತಲಿರುವದನ್ನೂ, ಕೆಟ್ಟುಹೋಗುತ್ತಿರುವದನ್ನೂ ಕಂಡು ಪರಿತಾಪಪಡುವದೂ ಸಹಜವಾದ ಕಲ್ಯಾಣಗುಣವೇ ಸರಿ. ಆದುದರಿಂದ ತನ್ನನ್ನು ಆಶ್ರಯಿಸಿದ್ದಾದರೆ ಇಂತಹ ವ್ಯಸನಗಳಿಗೆ ಕಾರಣವಿರುತ್ತಿರಲಿಲ್ಲವೇ ? ಇಂತಹ ಸುಲಭೋಪಾಯವನ್ನವಲಂಬಿಸುವದಿಲ್ಲವೇ ? ಎಂಬ ಪಶ್ಚಾತ್ತಾಪದ ಪ್ರಕಟನೆಯಾದರೂ ಆಗಬಹುದು. ಉತ್ಸವವು ಯಾವಾಗನೆಂದರೆ, ತನ್ನನುಗ್ರಹವನ್ನು ಹೊಂದಿದಾಗ ; ಆದುದರಿಂದ ತನ್ನನುಗ್ರಹಕ್ಕೆ ಪಾತ್ರರಾದರಲ್ಲಾ ಎಂಬ ಹರ್ಷಪ್ರದರ್ಶನವನ್ನು ಶ್ರೀರಾಮನು ಮಾಡಿದನೆಂದೂ ಭಾವಿಸಬಹುದು, ಅಂತೂ ಕಾರುಣ್ಯ ಪ್ರದರ್ಶನವು ತನಗೆ ತುಂಬಾ ರಸಾವಹವಾದುದೆಂದು ಹೇಳಲು

ಇನ್ವರ್ಥತ್ವೈ (೧) "ಕಾಲಸ್ಯ ಹಿ ಚ ಮೃತ್ಯೋಶ್ಚ ಜಙ್ಗಮಸ್ಥಾವರಸ್ಯಚ । ಈಶತೇ ಭಗವಾನೇಕಸ್ಸತ್ಯ ಮೇತದ್ಬ್ರವೀಮಿತೇ । ಈಶನ್ನಪಿ ಮಹಾಯೋಗೀ ಸರ್ವಸ್ಯ ಜಗತಃಪ್ರಭುಃ । ಕರ್ಮಾಣ್ಯಾ

ಅಭ್ಯಂತರವಿರುವದಿಲ್ಲವು. ಹೀಗೆ ವ್ಯಸನಪ್ರದರ್ಶನ ಮೊದಲಾದವೆಲ್ಲಾ ಕೇವಲ ವಿಡಂಬನವೇ ವಿನಾ ಯಥಾರ್ಥವಾದುದಲ್ಲವು. ಕಾಲಯವನನಿಗೆ ಅಂಜಿ ಪಲಾಯನಮಾಡಿದಹಾಗೆ ನಟಿಸಿದುದು, ಮುಚುಕುಂದರು ತಮ್ಮ ನಿದ್ರೆ ತಿಳಿದು ಕಣ್ಣು ಬಿಟ್ಟು ನೋಡಿದಾಗ ಕಾಲಯವನನು ಭಸ್ಮವಾಗಲಿ ಎಂಬ ಉದ್ದೇಶ್ಯದಿಂದೆಂದು ಭಾವಿಸತಕ್ಕದ್ದು. ಸರ್ವಶಕ್ತನಾಗಿ "ಅಂಗುಳ್ಯಗ್ರೇಣತಾನ್ ಹನ್ಯಾಮಿಚ್ಛನ್ ಹರಿಗಣೇಶ್ವರ" "ಓ ವಾನರ ರಾಜನಾದ ಸುಗ್ರೀವನೇ ಒಂದು ಬೆರಳು ತುದಿಯು ಹೊಡತದಿಂದ ಅವರೆಲ್ಲರನ್ನೂ ಕೊಲ್ಲಲು ಶಕ್ತಿ ಇರುವದು" ಎಂದು ಹೇಳಿಕೊಂಡವನಿಗೆ ಪಲಾಯನವು ಹೇಗೆ ಅಯಥಾರ್ಥವಾದುದೋ, ಹಾಗೆಯೇ ಇಲ್ಲಿಯೂ ದೀನರಾದವರನ್ನು ಕಂಡುದರಿಂದ ವ್ಯಸನನೆಂದು ಹೇಳಿಕೊಂಡಿರುವದೂ ಕೇವಲ ನಟನೆಯೇ ಎಂದು ಭಾವಿಸತಕ್ಕದ್ದು.

ಈ ಮೇಲಿನ ಹೇಳಿಕೆಗಳಿಗೆ ಋಷಿವಾಕ್ಯಗಳನ್ನು ಉದಾಹರಿಸುತ್ತಾರೆ:— **ಕಾಲಸ್ಯ ಹಿ ಚ** - ಕಾಲಕ್ಕೂ, **ಮೃತ್ಯೋಶ್ಚ** - ಯಮನಿಗೂ. **ಜಙ್ಗಮಸ್ಥಾವರಸ್ಯಚ** - ಚಲಿಸುವ ಚಲಿಸದೇ ಇರುವ ಚರಾಚರಭೂತಗಳಿಗೂ ಎಲ್ಲಕ್ಕೂ **ಭಗವಾನ್ ಏಕಃ** - ಷಾಡ್ಗುಣ್ಯಪರಿಪೂರ್ಣನಾದ ಈಶ್ವರನೊಬ್ಬನೇ, **ಈಶತೇ** - ನಿಯಮಿಸುವನಾಗಿದ್ದಾನೆ; **ತೇ** - ನಿನಗೆ, **ಏತತ್ ಸತ್ಯಂ** ಈ ಸತ್ಯವಾದ ಮಾತನ್ನು, **ಬ್ರವೀಮಿ** ಹೇಳುವೆನು; **ಈಶನ್ನಪಿ** - ಹೀಗೆ ಸರ್ವಕ್ಕೂ ಸ್ವತಂತ್ರನಾದ ಸ್ವಾಮಿಯಾಗಿದ್ದರೂ, **ಸರ್ವಸ್ಯ ಜಗತಃಪ್ರಭುಃ** - ಸಮಸ್ತ ಜಗತ್ತಿಗೂ ಸ್ವಾಮಿಯಾಗಿ, **ಮಹಾಯೋಗೀ** - ಮಹಾ ಯೋಗವನ್ನು ಹೊಂದಿದ ಶ್ರೀ ಕೃಷ್ಣನು, ಜ್ಞಾನಾದಿ ಮಹಾಕಲ್ಯಾಣಗುಣಗಳು ಅಘಟಿತ ಘಟನಾಶಕ್ತಿ ಮೊದಲಾದವುಗಳ ಪರಿಪೂರ್ಣತೆ ಹೊಂದಿದ್ದರೂ ಕೂಡ, ಎಂಬ ಭಾವವು. ಶ್ರೀ ಕೃಷ್ಣನು **ದುರ್ಬಲಃ**-ಶಕ್ತಿ ಇಲ್ಲದೆ, **ಕೀನಾಶ ಇವ**-ಕೃಷಿ ಮಾಡುವ ರೈತನ ಹಾಗೆ, **ಕರ್ಮಾಣ್ಯಾರಭತೇ** - ಪಲಾಯನಾದಿ ಕರ್ಮಗಳನ್ನು ಮಾಡಲುಪಕ್ರಮಿಸುವನು. "**ವರ್ತ ಏವಚ ಕರ್ಮಣಿ**" (ಗೀ. ೩. ೨೨.) ಎಂದು ಹೇಳಿರುವ ಹಾಗೆ ಏನನ್ನೂ ಮಾಡಬೇಕಾದವಶ್ಯಕತೆ ಇಲ್ಲದಿದ್ದರೂ ಸದಾ ಲೋಕಶಿಕ್ಷಣಾರ್ಥವಾಗಿಯೂ, ಲೋಕ

---

(೧) ಭಾರತ. ಉದ್ಯೋಗ ೬೭-೧೩, ೧೪.

ರಭತೇ ಕರ್ತುಂ ಕೀನಾಶ ಇವ ದುರ್ಬಲಃ । ತೇನ ವಂಚಯತೇ ಲೋಕಾ ನ್ಮಾಯಾ ಯೋಗೇನ ಕೇಶವಃ । ಯೇ ತಮೇವ ಪ್ರಪದ್ಯಂತೇ ನತೇ ಮುಹ್ಯನ್ತಿ ಮಾನವಾಃ" (೧) "ಕೃತ್ವಾ ಭಾರಾವತರಣಂ ಪೃಥಿವ್ಯಾಃ ಪೃಥುಲೋಚನಃ । ಮೋಹಯಿತ್ವಾ ಜಗತ್ಸರ್ವಂ ಗತಸ್ಸಂಸ್ಥಾನಮುತ್ತಮಂ ।" (೨) "ಮನುಷ್ಯದೇಹಿನಾಂ ಚೇಷ್ಟಾ ಮಿತ್ಯೇವ ಮನುವರ್ತತೇ ।

ಸಂಗ್ರಹಾರ್ಥವಾಗಿಯೂ ದುಷ್ಟನಿಗ್ರಹ ಶಿಷ್ಟ ಪರಿಪಾಲನೆಗಾಗಿಯೂ ಯಾವಾಗಲೂ ಕರ್ಮವನ್ನೆಸಗುತ್ತಲೇ ಇರುವನೆಂಬ ಭಾವವು. ಹೀಗೆ ದುರ್ಬಲನಾಗಿ ತೋರಿಸಿಕೊಂಡಿದ್ದ ಶ್ರೀ ಕೃಷ್ಣಾವತಾರ ಮಾತ್ರದಲ್ಲೇ ಅಲ್ಲದೆ, ಶ್ರೀ ರಾಮಾವತಾರದಲ್ಲೂ ಲೋಕ ನಾಥಃ ಪುರಾಭೂತ್ವಾ ಸುಗ್ರೀವಂ ನಾಥಮಿಚ್ಛತಿ, ತಾನು ಲೋಕಕ್ಕೆಲ್ಲಾ ನಿಯಾಮಕನಾದ ಸ್ವಾಮಿಯಾದರೂ ಸುಗ್ರೀವನನ್ನು ತನಗೆ ಸ್ವಾಮಿಯನ್ನಾಗಿ ಅಪೇಕ್ಷಿಸಿದನು, ಎಂದೂ "ಯಸ್ಯ ಪ್ರಸಾದೇ ಸತತಂ ಪ್ರಸೀದೇಯು ರಿಮಾಃಪ್ರಜಾಃ । ಸರಾಮೋ ವಾನರೇಂದ್ರಸ್ಯ ಪ್ರಸಾದಮಭಿಕಾಂಕ್ಷತಿ" ಯಾವ ಶ್ರೀರಾಮನು ಪ್ರಸನ್ನನಾಗಲು, ಈ ಪ್ರಜೆಗಳೆಲ್ಲಾ ಸರ್ವಶ್ರೇಯಸ್ಸನ್ನೂ ಹೊಂದುವರಾಗುವರೋ, ಅಂತಹ ಶ್ರೀರಾಮನು ಈಗ ಕಪಿರಾಜನ ಪ್ರಸನ್ನತೆಯನ್ನು ಪ್ರಾರ್ಥಿಸುವನಾಗಿದ್ದಾನೆ" ಎಂದೂ ಹೇಳಿರುವಲ್ಲಿಯೂ ತೋರಿಸಿರುತ್ತದೆ. ಕೇಶವಃ-ಬ್ರಹ್ಮರುದ್ರಾದಿಗಳಿಗೂ ನಿಯಾಮಕನಾದ ಶ್ರೀ ಕೃಷ್ಣನು. ತೇನಮಾಯಾ ಯೋಗೇನ-ಅಂತಹ ವಿವಿಧ ವಿಚಿತ್ರ ಚೇಷ್ಟೆಗಳನ್ನು ಮಾಡುವ ಸಙ್ಕಲ್ಪ ಮಾಹಾತ್ಮ್ಯಯಿಂದ, ಲೋಕಾನ್ ವಂಚಯತೇ-ಅಸುರಸ್ವಭಾವವುಳ್ಳ ಜನರನ್ನು ವಂಚಿಸುವನು ; ಯೇ - ಯಾವ ದೈವ ಸ್ವಭಾವಯುಕ್ತರು, ತಮೇವ - ಹೀಗೆ ಅಸುರ ಸ್ವಭಾವಜನರಿಗೆ ಸಾಧಾರಣ ಮನುಷ್ಯನೆಂದು ತೋರುವ ಆ ಶ್ರೀ ಕೃಷ್ಣನನ್ನೇ, ಪ್ರಪದ್ಯನ್ತೇ- ಶರಣಾಗತರಾಗಿ ಆಶ್ರಯಿಸುತ್ತಾರೋ, ತೇ ಮಾನವಾಃ – ಆ ಮನುಷ್ಯರು, ನಮುಹ್ಯನ್ತಿ - ಮೋಸಹೋಗುವದಿಲ್ಲವ, ಭ್ರಮೆಯನ್ನು ಹೊಂದುವದಿಲ್ಲವ. ಇದು ಮಹಾ ಭಾಗವತನಾದ ಸಂಜಯನು ಧೃತರಾಷ್ಟ್ರನಿಗೆ ಶ್ರೀ ಕೃಷ್ಣನ ಚರಿತ್ರವನ್ನು ಉಪದೇಶಿಸುವ ಪ್ರಕರಣವು. "ಪೃಥುಲೋಚನಃ - ಕೃಪಾಸೂಚಕ ವಿಶಾಲ ನೇತ್ರಗಳುಳ್ಳ ಶ್ರೀ ಕೃಷ್ಣನು, ಪೃಥಿವ್ಯಾಃ-ಭೂಮಿಯ, ಭಾರಾವತರಣಂ ಕೃತ್ವಾ - ಭಾರವನ್ನಿಳುಹಿದವನಾಗಿ, ಜಗತ್ಸರ್ವಂ-ಸಮಸ್ತ ಜಗತ್ತನ್ನೂ, ಮೋಹಯಿತ್ವಾ-

---

(೧) ಭಾರತ, ಮೌಸ ೯. ೩೪ (೨) ವಿ. ಪು. ೫. ೩೩. ೧೮.

ಲೀಲಾ ಜಗತ್ಪತೇಃ ಸ್ವಸ್ಯಚ್ಛಂದತಃ ಸಂಪ್ರವರ್ತತೇ" ಇತ್ಯಾದಿಗಳಿಲೇ ಮಹರ್ಷಿಗಳ್ ಅರುದಿ ಇಟ್ಟಾರ್‌ಗಳ್. ಆಗೈಯಾಲ್ ಅವತಾರ ವೃತ್ತಾಂತಙ್ಗಳಿಲುಮ್ ದುಃಖಾಭಿನಯಮಾತ್ರಮೇಯುಳ್ಳದು. ಅದು ತಾನುಮ್ ಕೃಪಾ

ಮೋಹಗೊಳಿಸಿದವನಾಗಿ, ಉತ್ತಮಂ-ಸರ್ವೋತ್ತಮವಾದ, ಸ್ವಂಸ್ಥಾನಂ - ತನ್ನ ಸ್ವಕೀಯಸ್ಥಾನವಾದ ನಿತ್ಯ ವಿಭೂತಿಯನ್ನು ಕುರಿತು, ಗತಃ - ತೆರಳಿದನು. ಈ ಶ್ಲೋಕದಲ್ಲೂ ಎಲ್ಲರನ್ನೂ ಮೋಹಗೊಳಿಸಿದನೆಂದು ತೋರಿಬರುತ್ತದೆ. (೨) "ಮನುಷ್ಯದೇಹಿನಾಂ ಮನುಷ್ಯ ದೇಹವನ್ನು ಹೊಂದಿರುವವರ, ಚೇಷ್ಟಾಂ - ವ್ಯಾಪಾರವನ್ನು, ಇತ್ಥೇನಂ - ಮೇಲೆ ಹೇಳಿದ ರೀತಿಯಲ್ಲಿ ಎಂದರೆ ಹಿಂದೆ ಸಾಮದಾನ ಭೇದ ದಂಡರೂಪದಲ್ಲಾಗಲಿ, ಅಥವಾ ಪಲಾಯನವನ್ನು ಮಾಡಿಯಾಗಲಿ, ಅನುವರ್ತತೇ - ಅನುಸರಿಸುತ್ತಾನೆ. ತಸ್ಯ - ಆ, ಜಗತ್ಪತೇಃ - ಜಗತ್ತಿಗೆಲ್ಲಾ ಸ್ವಾಮಿಯಾದ ಶ್ರೀಕೃಷ್ಣನ, ಲೀಲೆಯು, ಛಂದತಃ - ಆತನ ಸಂಕಲ್ಪದಿಂದ, ಸಂಪ್ರವರ್ತತೇ ಚನ್ನಾಗಿ ಪ್ರವರ್ತಿಸಲ್ಪಡುತ್ತದೆ. (ಪರಿವರ್ತತೇ) ಎಂದು ಪಾಠಾಂತರ ಉಂಟು) ಇತ್ಯಾದಿಗಳಿಲೇ - ಇವೇ ಮೊದಲಾದವುಗಳಲ್ಲಿ ಮಹರ್ಷಿಗಳ್ - ವಾಲ್ಮೀಕಿ, ವ್ಯಾಸ, ಪರಾಶರಾದಿಗಳು, ಅರುದಿ ಇಟ್ಟಾರ್‌ಗಳ್ - ನಿರೂಪಿಸಿರುತ್ತಾರೆ ಆಗೈಯಾಲ್ - ದೈವ ಪ್ರಕೃತಿಗಳನ್ನು ಆಕರ್ಷಣ ಮಾಡುವದಕ್ಕೂ, ಅಸುರ ಪ್ರಕೃತಿಗಳನ್ನು ವಂಚಿಸುವದಕ್ಕೂ, ಹೀಗೆ ಲೋಕವಿಡಂಬನವಾದುದರಿಂದ, ಅವತಾರವೃತ್ತಾಂತಗಳಲ್ಲಿ, ದುಃಖಾಭಿನಯಮಾತ್ರಮೇ ಯುಳ್ಳದು - ಯಥಾರ್ಥವಾಗಿಯೂ ದುಃಖಪಟ್ಟನೆಂದು ಭಾವಿಸತಕ್ಕದ್ದಲ್ಲದೆ, ದುಃಖವಾದ ಹಾಗೆ ನಟನೆ ಮಾತ್ರವನ್ನೇ ಪ್ರದರ್ಶಿಸುವಂಥಾವುಗಳು. ಇದಕ್ಕೆ ನಿದರ್ಶನವಾಗಿ ಸೀತಾವಾಕ್ಯವನ್ನು ಉದಾಹರಿಸಬಹುದು. "ವಿಧಿರ್ನೂನಮಸಂಹಾರ್ಯಃ ಪ್ರಾಣಿನಾಂ ಪ್ಲವಗೋತ್ತಮ। ಸೌಮಿತ್ರಿಂ ಮಾಂಚ ರಾಮಂಚ ವ್ಯಸನೈಃ ಪಶ್ಯ ಮೋಹಿತಾನ್" ಜ್ಯೇಷ್ಠ ಭ್ರಾತಾವನ್ನು ಪಿತಾ ಅಥವಾ ಗುರು ಎಂದು ಭಾವಿಸಿ ಸದಾ ಆತನ ಶುಶ್ರೂಷೆಯಲ್ಲಿ ನಿರತನಾದ ಲಕ್ಷ್ಮಣನೂ, ಪತಿಯೇ ಪರದೈವವೆಂದು ಭಾವಿಸಿದ ತನಗೂ, ಧರ್ಮದೇವತೆಯೇ ತಾನು ಎಂದು ವರ್ತಿಸುವ ಶ್ರೀರಾಮನಿಗೂ ದುಃಖವು ತಪ್ಪಿದ್ದಲ್ಲವೆಂದರೆ, ಪ್ರಾಣಿಗಳಿಗೆ ವಿಧಿಯನ್ನು ವಿಾರಲು ಸಾಧ್ಯವಲ್ಲವೆಂದು ತಿಳಿಯುತ್ತೇನೆಂದು ಸೀತೆಯು ಆಂಜನೇಯನನ್ನು ಕುರಿತು ಹೇಳುತ್ತಾಳೆ. ಇಲ್ಲಿ ಪ್ರಾಣಿಗಳಿಗೆ ಅವರುಗಳ ದುಷ್ಕೃತಾನುಗುಣವಾಗಿ ವ್ಯಸನ ಪ್ರಾಪ್ತಿಯು ಎಂಬ ಲೋಕಶಿಕ್ಷಣಾರ್ಥವಾಗಿ ವ್ಯಸನದ ಅಭಿನಯವೆಂದು ತಿಳಿಯು

ಮೂಲಮ್. ಇನು ಸ್ವತಂತ್ರನಾನ ತನಕ್ಕು ಲೀಲೈಯುಮಾಯಿರು ಕ್ಕುಮ್. ಕೂನರ್ ಕುರಳರೈಕ್ಕೊಂಡಾಡಿ ರಕ್ಷಿಕ್ಕೈ ನಿರಪೇಕ್ಷರಾನ ರಾಜಾಕ್ಕಳುಕ್ಕು ಲೀಲೆಯುಮಾಯ್ ಕೃಪಾಕಾರ್ಯಮುಮಾಯ್ ಕ್ಕಾಣಾ

ತಕ್ಕದು. ಅದು ತಾನುಮ್ - ಅದೂ ಕೂಡ, ಕೃಪಾಮೂಲಂ - ಭಗವತ್ಕೃಪೆಯೇ ಮೂಲವಾಗಿಯುಳ್ಳದು; ಅಂತಹ ಅಭಿನಯವೂ ಕೂಡ ಭಗವತ್ಕೃಪಾಮೂಲವಾದುದೆಂದೇ ಭಾವಿಸತಕ್ಕದ್ದೆಂಬ ಭಾವವು. ಆಸುರ ಸ್ವಭಾವವುಳ್ಳವರನ್ನು ನಿರಾಕರಿಸಿ ದೈವ ಸ್ವಭಾವವುಳ್ಳವರು ತನ್ನನ್ನು ಆಶ್ರಯಿಸುವ ಹಾಗೆಮಾಡುವುದೂ ಕೂಡ ಕೃಪಾಪ್ರಭಾವವೇ ಎಂದು ಹೇಳುತ್ತಾರೆ. ಹೀಗೆ ಆಸುರ ಪ್ರಕೃತಿಗಳನ್ನು ನಿರಾಕರಿಸಿ, ದೈವೀ ಪ್ರಕೃತಿಗಳಿಗೆ ಚಿತ್ತರಂಜನೆಯು ಮ್ನಾಡುವದರಿಂದ ತನಗೆ ಆಗತಕ್ಕದ್ದೇನೆಂದರೆ, "ಲೋಕವತ್ತು ಲೀಲಾ ಕೈವಲ್ಯಂ" ಎಂಬ ಸೂತ್ರದಲ್ಲಿ ಹೇಳಿರುವ ಹಾಗೆ "ಸಮ್ರಾಡಿವಾತ್ಮ ಸಮಾಯಾ ಸಹಮೋದಸೇತ್ವಂ" ಪೂರ್ಣಕಾಮನಾದ ರಾಜಾಧಿರಾಜನು ತನ್ನ ಪತ್ನಿಯೊಂದಿಗೆ ಹೇಗೆ ಇಂತಹ ದಿವ್ಯ ಚೇಷ್ಟಿತಗಳ ಮೂಲಕ ಲೀಲಾ ವಿಹಾರವನ್ನನುಭವಿಸುವನೋ, ಹಾಗೆಯೇ ಸರ್ವೇಶ್ವರನು ಪರಿಪೂರ್ಣ ಕಾಮನಾದುದರಿಂದ ತನಗೆ ಸಮಳಾದ ಪತ್ನಿಯೊಂದಿಗೆ ಇವೆಲ್ಲಾ ಆತನಿಗೆ ಲೀಲೆ ಎಂದು ತಿಳಿಸುತ್ತಾರೆ. ಇದು - ಇಂತಹ ದುಃಖಾಭಿನಯವೇ ಮೊದಲಾದ ವ್ಯಾಪಾರವು, ಸ್ವತಂತ್ರನಾದ ತನಗೆ ಎಂದರೆ ಸರ್ವೇಶ್ವರನಿಗೆ, ಲೀಲೈಯುಮಾ ಯಿರುಕ್ಕುಮ್ - ಲೀಲೆಯಾಗಿರುತ್ತದೆ. ಇದನ್ನೇ ದೃಷ್ಟಾಂತ ಮೂಲಕ ಸಮರ್ಥನೆ ಮಾಡುತ್ತಾರೆ. ಕೃಪಾಕಾರ್ಯವಾಗಿರುವದು ಲೀಲೆಯಾಗಿ ಪರಿಣಮಿಸುವುದುಂಟೋ ಎಂದರೆ ದೃಷ್ಟಾಂತಮೂಲಕ ಉಂಟೆಂದು ಸಮರ್ಥನೆ ಮಾಡುತ್ತಾರೆ ಕೂನರ್ - ಗೂನರನ್ನೂ, ಕುರುಳರೈ - ಕುಳ್ಳರನ್ನೂ, ಕೊಂಡಾಡಿ ರಕ್ಷಿಕ್ಕೈ - ಉದ್ದೇಶಿಸಿ ವಿನೋದಮಾಡಿ ರಕ್ಷಿಸುವುದು, ನಿರಪೇಕ್ಷರಾನ ರಾಜಾಕ್ಕಳುಕ್ಕು - ಪೂರ್ಣಕಾಮರಾದ ರಾಜರುಗಳಿಗೆ, ಲೀಲೆಯೂ ಕೃಪಾಕಾರ್ಯವೂ ಆಗಿರುವುದನ್ನು, ಕಾಣಾನಿನ್ರೋಮಿರೆ - ಕಾಡುವೆವಷ್ಟೇ. ಹಾಗೆಯೇ ಶ್ರೀ ಕೃಷ್ಣನೂ ಕೂಡ ತ್ರಿವಕ್ರಳಾದ ಕುಬ್ಜೆಯ ಕಾಲನ್ನು ಕಾಲಿಂದ ಮೆಟ್ಟಿಕೊಂಡು ಕೈಹಿಡಿದು ಎತ್ತಿದುದರಿಂದ ಋಜುವಾದವಳಾಗಿ "ಮುಕುಂದಸ್ಪರ್ಶನಾತ್ಸದ್ಯೋ ಬಭೂವ ಪ್ರಮದೋತ್ತಮಾ" ಎಂದು ಹೇಳಿರುವ ಹಾಗೆ ಸರ್ವಲಾವಣ್ಯಯುಕ್ತಳಾದ ಸ್ತ್ರೀರತ್ನವಾದಳೆಂಬ ವೃತ್ತಾಂತ

ನಿನ್ನೋಮಿರೆ. ಇಪ್ಪಡಿಯಾಗೈಯಾಲೇ (೧) "ಉಪಾದತ್ತೇ ಸತ್ತಾಸ್ಥಿತಿ ನಿಯಮನಾದ್ಯೈರ್ಚಿದ ಚಿದಾ ಸ್ವಮುದ್ದಿಶ್ಯ ಶ್ರೀಮಾನ್" ಎನ್ರದು.

ವುಂಟು. ಹಾಗೆಯೇ ರಾಮಾವತಾರದಲ್ಲೂ ವನವನ್ನು ಕುರಿತು ತೆರಳುವ ದುಃಖ ಕಾಲದಲ್ಲಿ ಮುಂಚೆ, ಉಂಛವೃತ್ತಿಯಿಂದ ಜೀವಿಸುತ್ತಾ, "ಶಾಟೀಮಾಚ್ಛಾದ್ಯ ದುಶ್ಛದಾಂ" ಹೊದೆಯುವುದಕ್ಕೆ ಆಗದ ಹಾಗೆ ಹರಕಾಗಿರುವ ಬಟ್ಟೆಯನ್ನು ಹೊದ್ದುಕೊಂಡು ಬಂದ ತ್ರಿಜಟನೆಂಬ ಬ್ರಾಹ್ಮಣನಿಗೆ, ಪರಿಹಾಸ ಸಮನ್ವಿತನಾಗಿ ದಂಡವನ್ನು ಎಲ್ಲಿಯವರೆಗೆ ಎಸೆಯುತ್ತೀಯೋ ಅಲ್ಲಿಯವರೆಗೆ ಆಕಳುಗಳು ನಿನ್ನವು ಎಂದು ಹೇಳಿ ಆ ಬಡ ಬ್ರಾಹ್ಮಣನು ತನ್ನ ಬಲವನ್ನೆಲ್ಲಾ ಬಿಟ್ಟು ಕೋಲನ್ನು ಎಸೆಯುವ ಹಾಗೆ ಮಾಡಿ ಆಕಳನ್ನು ಕೊಟ್ಟನೆಂಬುದು ಮಹರ್ಷಿಗಳಿಂದ ವಿದಿತವು. ತುಂಬಾ ಶೋಕ ಸಮಯದಲ್ಲಿ ಇಂತಹ ಪರಿಹಾಸವೃತ್ತಿಯು ಲೋಕವಿಡಂಬನವೆಂಬುದು ಇದರಿಂದ ಸುವ್ಯಕ್ತವು ಆದುದರಿಂದ ಅವತಾರ ಸಮಯಗಳಲ್ಲಿ ಶೋಕಾದಿಗಳಿಲ್ಲವು. ಅದೂ ಅಲ್ಲದೆ ಆತನ ದಾರಿದ್ರ್ಯಕ್ಕೆ ಮರುಗಿ ಅನುಗ್ರಹಿಸಿದ್ದು ಕೃಪಾಪ್ರಭಾವವೆಂಬುದೂ ವ್ಯಕ್ತವು ಮತ್ತು ಶೋಕಮಧ್ಯದಲ್ಲಿ ಇಂತಹ ಪರಿಹಾಸಕರ ವ್ಯಾಪಾರದಿಂದ ಎಲ್ಲವೂ ಲೀಲೆ ಎಂಬುದೂ ನಿಸ್ಸಂಶಯವು ಇಲ್ಲಿ ಶ್ರೀ ದೇಶಿಕರವರು ಕೂನರ್ ಕುರುಳರ್ ಎಂದು ಪ್ರಯೋಗಿಸಿರುವುದು ಕರ್ಮಪರಿಪಾಕದಿಂದ ದೀನದೆಶೆಯನ್ನು ಹೊಂದಿರುವ ಮಾನುಷರಿಗೂ ಉಪಲಕ್ಷಣವೆಂದು ಭಾವಿಸಬಹುದು.

ಜಗದ್ರಕ್ಷಣಾದಿಗಳೆಲ್ಲಾ ಲೀಲಾರೂಪವಾಗಿ ಕೃಪಾಕಾರ್ಯಗಳೆಂಬುದಕ್ಕೂ, ಸ್ವಾತಂತ್ರ್ಯದಿಂದ ಕೂಡಿದ ಕೃಪೆಯು ರಕ್ಷಣೋಪಯುಕ್ತವಾಗಬೇಕಾದರೆ ವ್ಯಾಜವನ್ನಪೇಕ್ಷಿಸುತ್ತದೆ ಎಂಬುದಕ್ಕೂ ಪೂಜ್ಯರಾದ ಶ್ರೀ ಪರಾಶರಭಟ್ಟರ ಶ್ರೀ ರಂಗರಾಜಸ್ತವದ ಶ್ಲೋಕವನ್ನು ಉದಾಹರಿಸುತ್ತಾರೆ:—ಶ್ರೀಮಾನ್-ಶ್ರಿಯಃಪತಿಯು, ಲಕ್ಷ್ಮಿಯಿಂದ ಸೇರಿದವನಾದುದರಿಂದಲೇ ಜಗದ್ವ್ಯಾಪಾರಗಳಲ್ಲಿರುವ ಲೀಲಾರಸವು ಭೋಗ್ಯತಮವೆಂಬ ಭಾವವು, ಚಿದಚಿತಾ - ಸಮಸ್ತ ಚೇತನಾಚೇತನಗಳನ್ನು, ಸ್ವಮುದ್ದಿಶ್ಯ - ತನ್ನನ್ನು ಕುರಿತೇ ಎಂದರೆ ತನ್ನ ಲೀಲಾರೂಪ ಪ್ರಯೋಜನಕ್ಕಾಗಿಯೇ, ಸತ್ತಾ ಸ್ಥಿತಿ ನಿಯಮನ ಮೊದಲಾದವುಗಳಿಂದ, ಉಪಾದತ್ತೇ – ಅಂಗೀಕರಿಸಿರುತ್ತಾನೆಂದು, ಎನ್ರದು – ಎಂದು ಶ್ರೀ ಪರಾಶರ ಭಟ್ಟರು ಹೇಳಿರುವುದು ಹೀಗೆ ಇವೆಲ್ಲವೂ ಶ್ರೀಮನ್ನಾರಾಯಣನಿಗೆ ಲೀಲೆಯು. (ಪ್ರಧಾನ. ೨೬೩ನೆಯ

---

(೧) ಶ್ರೀರಂಗರಾಜಸ್ತವ ೨೯.

ಇಪ್ಪಡಿ ಪರಹಿತ ವ್ಯಾಪಾರಾಶ್ರಯ ವಾಗೈಯಾಲೇ ಆಶ್ರಿತರ್ಕ್ಕು ರಕ್ಷಕನುಮಾಯ್, ಉಪಾಯಾಂತರ ಸ್ಥಾನ ನಿವೇಶತ್ತಾಲೆ ಉಪಾಯ ಮಾಯಿರುಕ್ಕುಮ್. ರಕ್ಷಣವ್ಯಾಪಾರ ಫಲಾಶ್ರಯಮಾಗೈಯಾಲೇ ಶೇಷಿ

ಪುಟ ನೋಡಿ. ಶ್ರೀಸ್ತುತಿ ೭ನೆಯ ಶ್ಲೋಕವನ್ನು ನೋಡಿ) ಮುಂದೆ "**ಇತಿವದತಿ ವಾಗೌಪನಿಷದೀ। ಉಪಾಯೋಪೇಯತ್ವೇತದಿಹ ತವತತ್ತ್ವಂ ನತುಗುಣಾ ವತಸ್ತ್ವಾಂ ಶ್ರೀರಂಗೇಶಯ ಶರಣಮವ್ಯಾಜಮಭಜಂ ॥**" ಎಂದಿರುವುದರಿಂದ ಸ್ವಾತಂತ್ರ್ಯಯುಕ್ತ ಕೃಪೆಯು ಶರಣಾಗತಿರೂಪ ವ್ಯಾಜವನ್ನು ಅಪೇಕ್ಷಿಸುತ್ತದೆಂದು ಹೇಳಲ್ಪಟ್ಟಿರುತ್ತದೆ. ಈ ಶ್ಲೋಕಾರ್ಥಕ್ಕೆ ೨೬೩ನೆಯ ಪುಟವನ್ನು ನೋಡಿ.

ಈ ಜಗತ್ತಿನ ಸೃಷ್ಟಿಸ್ಥಿತಿನಿಯಮನಾದಿಗಳಲ್ಲಿ ಶ್ರಿಯಃಪತಿಗೆ ಲೀಲೆಯಲ್ಲದೆ ಬೇರೆ ಪ್ರಯೋಜನವಿಲ್ಲವಾದುದರಿಂದಲೂ, ಇವುಗಳೆಲ್ಲಾ ಪರಹಿತಕ್ಕಾಗಿಯೇ ಆದುದರಿಂದ, ಕೃಪಾಕಾರ್ಯವೆಂಬುದು ಸಿದ್ಧವೆಂದು ಹೇಳಲ್ಪಟ್ಟಿತು. **ಚಿದಚಿತಾ ಸ್ಸಮುದ್ದಿಶ್ಯ ಉಪಾದತ್ತೇ** ಎಂದು ಸ್ವಾತಂತ್ರ್ಯವೂ ಲೀಲೆಯೂ ಹೇಳಲ್ಪಟ್ಟವು. ಉತ್ತರಾರ್ಧದಲ್ಲಿ ಹೇಳಿರುವ ಅಮೋಘಾಭಿಪ್ರಾಯಗಳನ್ನು ಮುಂದಿನ ಎರಡು ವಾಕ್ಯಗಳಿಂದ ತಿಳಿಸುತ್ತಾರೆ. ಪರಹಿತವೇ ಆತನಿಗೆ ಮುಖ್ಯೋದ್ದೇಶವಾದುದ ರಿಂದ, ಉಪಾಯಭೂತನೂ ಅವನೇ, ಉಪೇಯನೂ (ಪ್ರಾಪ್ಯನು) ಅವನೇ ಎಂದು ತಿಳಿಸುತ್ತಾರೆ. **ಇಪ್ಪಡಿ** - ಈ ಮೇಲಿನ ಶ್ಲೋಕದಲ್ಲಿ ಉಪಪಾದಿಸಿರುವ ಹಾಗೆ, **ಪರಹಿತ ವ್ಯಾಪಾರಾಶ್ರಯಮಾಗೈಯಾಲೇ** - ಈ ಸತ್ತಾ ಸ್ಥಿತಿ ನಿಯಮನಾದಿ ಗಳೆಲ್ಲಾ ಇತರರ ಹಿತರೂಪವಾದ ವ್ಯಾಪಾರಗಳನ್ನೇ ಆಶ್ರಯವಾಗಿವುಳ್ಳದ್ದರಿಂದ, **ಆಶ್ರಿತರ್ಕ್ಕು** - ಭರನ್ಯಾಸ ಮೂಲಕ ಆಶ್ರಯಿಸಿದವರಿಗೆ, **ರಕ್ಷಕನುಮಾಯ್** - ರಕ್ಷಿಸುವವನಾಗಿ, **ಉಪಾಯಾಂತರ ಸ್ಥಾನನಿವೇಶತ್ತಾಲೆ** - ಬೇರೆ ಉಪಾಯ ವಾದ ಭಕ್ತಿಮಾರ್ಗದ ಸ್ಥಾನದಲ್ಲಿ ತಾನೇ ನಿಲ್ಲುವುದರಿಂದ, **ಉಪಾಯಮಾ ಯಿರುಕ್ಕುಮ್** - ಆ ಶ್ರಿಯಃಪತಿಯೇ ಸಿದ್ಧೋಪಾಯನಾಗಿರುವನು. **ರಕ್ಷಣ ವ್ಯಾಪಾರ ಫಲಾಶ್ರಯಮಾಗೈಯಾಲೇ** - ಸರ್ವೇಶ್ವರನೇ ಈ ಚೇತನನ ರಕ್ಷಣ ವ್ಯಾಪಾರರೂಪ ಫಲಕ್ಕೆ ಆಶ್ರಯನಾದುದರಿಂದ, ಶೇಷಿಯೂ ಆಗಿರುವುದರಿಂದ, **ಅದಡಿಯಾಗ** - ಅದರ ಮೂಲಕವಾಗಿ, ಪ್ರಾಪ್ಯನೂ ಸಹ ಆಗಿರುವನು. **ಸತ್ತಾ** ಸ್ಥಿತಿ ನಿಯಮನಾದಿಗಳು ಲೀಲಾರೂಪವಾಗಿ ಸ್ವಪ್ರಯೋಜನವುಳ್ಳವುಗಳು ಆದ ರೂ ಚೇತನನಿಗೂ ಪ್ರಯೋಜನವುಳ್ಳವುಗಳಾದುದರಿಂದ ಪರಹಿತ ವ್ಯಾಪಾರಾಶ್ರ ಯಗಳು. **ಸ್ವಮುದ್ದಿಶ್ಯ** ಎಂಬುದರಿಂದ ಸ್ವತಂತ್ರದಿಂದ ಕೂಡಿದ ಲೀಲಾ

ಯುವೂಯ್, ಅದಡಿಯಾಗ ಪ್ರಾಪ್ಯನುವಾಯಿರುಕ್ಕುವ್. ಇಪ್ಪಡಿ ಇರುಕ್ಕೈ, ಇವನುಕ್ಕು ಸ್ವರೂಪಪ್ರಯುಕ್ತ ಮೆನ್ರು ಧರ್ಮಿಗ್ರಾಹಿಕ ಪ್ರಮಾಣ ಸಿದ್ಧಮ್.

ಪ್ರಯೋಜನವೂ, **ಸತ್ತಾ ಸ್ಥಿತಿ ನಿಯಮನಾದ್ಯೈಃ ಚಿದಚಿತೌ** ಎಂದು ಹೇಳಿರುವುದರಿಂದ ಕೃಪಾಕಾರ್ಯವಾದ ಪರಹಿತ ವ್ಯಾಪಾರವೆಂದೂ ಹೇಳಿದಂತಾಯಿತು. ಯಾವಾಗ ಪರಹಿತ ವ್ಯಾಪಾರಕ್ಕೆ ಆಶ್ರಯನೆಂದು ಹೇಳಲ್ಪಟ್ಟಿತೋ ಆಗ ಆಶ್ರಿತರಿಗೆ ರಕ್ಷಕನೆಂದೂ ಹೇಳಿದಂತಾಗಿ ಸಿದ್ಧೋಪಾಯನೆಂದು ಹೇಳಲ್ಪಟ್ಟಿತು. ಇದು ಶ್ಲೋಕದಲ್ಲಿ **ತದಿಹ** ಎಂಬ ಪದಗಳಿಂದ ವಿವರಿಸಲ್ಪಟ್ಟಿತು. ರಕ್ಷಣ ವ್ಯಾಪಾರ ಫಲಾಶ್ರಯನೂ ಆದುದರಿಂದ ಆತನಿಗೆ ಉಪೇಯತ್ವವೂ ಕೂಡುತ್ತದೆಂದು ಹೇಳಲ್ಪಟ್ಟಿತು. ಹೀಗೆ ಉಪಾಯಭಾವ ಉಪೇಯಭಾವವೆರಡೂ ಇವನಿಗೆ ಸ್ವರೂಪವೆಂದು ಶ್ಲೋಕದಲ್ಲಿ **ಉಪಾಯೋಪೇಯತ್ವೇ ತವ ತತ್ವಂ** ಎಂಬುದರಿಂದ ವಿವರಿಸಲ್ಪಟ್ಟಿತು. "**ಶರಣಮವ್ಯಾಜಮನುಭಜಂ**" ಎಂದು ಹೇಳಿರುವುದರಿಂದ, ವ್ಯಾಜಾಂತರ, ಉಪಾಯಾಂತರ ಬೇಕಿಲ್ಲವೆಂದೂ, ಅದರ ಸ್ಥಾನದಲ್ಲಿ ತಾನೇ ನಿಲ್ಲುವುದರಿಂದ ಸಿದ್ಧೋಪಾಯನೆಂಬಭಿಪ್ರಾಯವೆಂದೂ, ತೋರಿಬರುತ್ತದೆ. ಹೀಗೆ ಸಿದ್ಧೋಪಾಯನಾಗಲು **ಶರಣಮನುಭಜಂ** ಎಂದಿರುವುದರಿಂದ ಶರಣಾಗತಿರೂಪ ವ್ಯಾಜಸಾಪೇಕ್ಷೆಯುಂಟೆಂಬುದು ಸಿದ್ಧವು. ಮುಂದೆ ಅದೇ ಶ್ಲೋಕದಲ್ಲಿರುವ "**ತವ ತತ್ವಮ್ ನತು ಗುಣೌ**" ಎಂಬುದರರ್ಥವನ್ನುಪದೇಶಿಸುತ್ತಾರೆ. ಹಿಂದೆ ಆಶ್ರಿತರಿಗೆ ರಕ್ಷಕನಾಗಿ ಉಪಾಯಭೂತನು, ಮತ್ತು ಆ ರಕ್ಷಣೆಗೆ ಆಶ್ರಯನಾಗಿ ಉಪೇಯಭೂತನು ಎಂದರೆ ಪ್ರಾಪ್ಯನು ಎಂದು ಹೇಳಲ್ಪಟ್ಟಿತು. ಈತನು ಸ್ವರೂಪತಃ ಉಪಾಯೋಪೇಯನೇ, ಇಲ್ಲವೇ ಗುಣತಃ ಎಂಬ ವಿಷಯದಲ್ಲಿ, ಸ್ವರೂಪಪ್ರಯುಕ್ತವಾಗಿಯೇ ಎಂದು ಹೇಳುತ್ತಾರೆ. ಈ ಉಪಾಯೋಪೇಯತ್ವಗಳು ಔಪಾಧಿಕವಾಗಿ ಆಗಂತುಕವಾಗಿ ಬಂದವುಗಳಲ್ಲವು ಎಂದು ತಿಳಿಸುತ್ತಾರೆ:—

ಇಪ್ಪಡಿ ಇರುಕ್ಕೈ - ಹೀಗೆ ಆಶ್ರಿತರಕ್ಷಕನಾಗಿರುವುದರಿಂದ ಉಪಾಯವಾಗಿಯೂ, ಆ ರಕ್ಷಣ ಫಲಕ್ಕೆ ಆಶ್ರಯನಾಗಿರುವುದರಿಂದ ಉಪೇಯನಾಗಿಯೂ, ಇರೋಣವು, **ಇವನುಕ್ಕು** - ಈ ಲಕ್ಷ್ಮೀಯುಕ್ತನಾದ ನಾರಾಯಣನಿಗೆ, **ಸ್ವರೂಪಪ್ರಯುಕ್ತಮೆನ್ರು**-ಸ್ವರೂಪತಃ ಉಂಟಾದುದೆಂಬು, **ಧರ್ಮಿಗ್ರಾಹಕ ಪ್ರಮಾಣ ಸಿದ್ಧಮ್** - ಧರ್ಮಿಯು ಪರಮಾತ್ಮನು, ಆತನನ್ನು ಬೋಧಿಸುವ ಪ್ರಮಾಣವು ಯಾವುದೆಂದರೆ ಶ್ರುತಿಯಲ್ಲಿ ಸ್ವರೂಪಶೋಧಕ ವಾಕ್ಯವು, ಅದರಿಂದ ಸಿದ್ಧವು.

ಭಗವತಃ ಕಾರುಣ್ಯಸ್ಯ ಮಾಹಾತ್ಮ್ಯಮ್

ಇಪ್ಪಡಿ ರಕ್ಷಕನಾನ ಈಶ್ವರನುಕ್ಕು ಪ್ರಧಾನಮಾನ ಜ್ಞಾನಶಕ್ತಿ ಕರುಣೈಗಳಿಲ್, ಜ್ಞಾನ ಶಕ್ತಿಗಳ್ ನಿಗ್ರಹಾನುಗ್ರಹ ಸಾಧಾರಣಙ್ಗಳ್ ; ಕಾರು

ಆ ವಾಕ್ಯವು ಯಾವುದೆಂದರೆ "ಸರ್ವಸ್ಯ ಶರಣಂ ಸುಹೃತ್" ಎಂಬ ಶ್ವೇತಾಶ್ವತರೋಪನಿಷದ್ವಾಕ್ಯವು. ಈ ಸ್ವರೂಪಶೋಧಕ ವಾಕ್ಯದಲ್ಲಿ ಶರಣಂ ಎಂಬುದರಿಂದ ಉಪಾಯವೂ, ಸುಹೃತ್ ಎಂಬುದರಿಂದ ಉಪೇಯವೂ ಹೇಳಲ್ಪಟ್ಟವು ಹಾಗೆಯೇ (೧) "ಕೋಹ್ಯೇವಾನ್ಯಾತ್ಕಃ ಪ್ರಾಣ್ಯಾತ್, ಯದೇಷ ಆಕಾಶ ಆನಂದೋ ನಸ್ಯಾತ್, ಏಷಹ್ಯೇವಾನನ್ದಯಾತಿ" ಈ ಆಕಾಶ ಶಬ್ದವಾಚ್ಯನಾದ ಪರಮಾತ್ಮನು, ಆನಂದಮಯನಾಗದಿದ್ದರೆ, ಯಾರು ತಾನೇ ಇಹದಲ್ಲಿ ಸುಖವಾಗಿ ಜೀವಿಸಲಾದೀತು? ಯಾರು ತಾನೇ ಆಮುಷ್ಮಿಕ ಸುಖವನ್ನು ಹೊಂದಲಾದೀತು? ಆತನು ತಾನೇ ಸರ್ವವಿಧ ಸುಖವನ್ನುಂಟುಮಾಡುವನು. ಉಪಾಯೋಪೇಯನು ಸರ್ವೇಶ್ವರನೇ ಎಂದು ಈ ಪ್ರಮಾಣವೂ ಹೇಳುತ್ತದೆ. ಮತ್ತು (೨) ಅಮೃತಸ್ಯೈಷ ಸೇತುಃ - ಈ ಸಂಸಾರ ಸಮುದ್ರದ ಆಚೇ ದಡದಲ್ಲಿರುವ ನಿತ್ಯ ವಿಭೂತಿಯನ್ನು ಸೇರಲು ಈತನೇ ಸೇತುವೆಯು ಎಂದು ಹೇಳಿರುವುದು ಆತನೇ ಉಪಾಯವೆಂದು ಹೇಳಲ್ಪಟ್ಟಿತು. (೩) "ಪರಾತ್ಪರಂ ಪುರುಷಮುಪೈತಿ ದಿವ್ಯಮ್" ಪರ ನೆಂದರೆ, ಅಕ್ಷರವೆಂದು ಹೇಳಿಸಿಕೊಳ್ಳುವ ಅವ್ಯಾಕೃತ ಪ್ರಕೃತಿಗಿಂತಲೂ ಶ್ರೇಷ್ಠನಾದ ಜೀವಾತ್ಮನು, ಆದುದರಿಂದ, ಪರಾತ್ಪರಂ - ಜೀವನಿಗಿಂತ ಶ್ರೇಷ್ಠನಾದ, ಹೀಗೆ, ದಿವ್ಯಂ - ಸರ್ವೋತ್ಕೃಷ್ಟನಾದ, ಪುರುಷಂ - ಪರಮ ಪುರುಷನನ್ನು, ಉಪೈತಿ - ಹೊಂದುವನು, ಎಂಬುದರಿಂದ ಉಪೇಯತ್ವವು ಹೇಳಲ್ಪಟ್ಟಿತು. (೪) "ನಾರಾಯಣ ಸಾಯುಜ್ಯಮವಾಪ್ನೋತಿ" - ನಾರಾಯಣ ಸಾಯುಜ್ಯವನ್ನು ಹೊಂದುವನು. ಇದರಿಂದಲೂ ಪ್ರಾಪ್ಯತ್ವವು ಹೇಳಲ್ಪಟ್ಟಿತು. ಇಂತಹ ಧರ್ಮಿಗ್ರಾಹಕ ಪ್ರಮಾಣಗಳಿಂದ ಸಿದ್ಧವೆಂಬ ತಾತ್ಪರ್ಯವು.

ಇಪ್ಪಡಿ - ಮೇಲೆ ಉಪಪಾದಿಸಿದ ರೀತಿಯಲ್ಲಿ, ರಕ್ಷಕನಾನ, ಈಶ್ವರನುಕ್ಕು - ಸರ್ವೇಶ್ವರನಿಗೆ, ಪ್ರಧಾನಮಾನ - ಮುಖ್ಯ ಗುಣಗಳಾದ, ಜ್ಞಾನಶಕ್ತಿ ಕರುಣೈಗಳಿಲ್ - ಸರ್ವಜ್ಞತ್ವ, ಸರ್ವಶಕ್ತಿತ್ವ ಕಾರುಣ್ಯಗಳಲ್ಲಿ, ಜ್ಞಾನಶಕ್ತಿಗಳೆ

---

(೧) ತೈ ಆನಂದ. (೨) ಮುಂ. ೨ ೨. ೫ (೩) ಮುಂ. ೩ ೨. ೮. (೪) ನಾರಾಯಣಾನುವಾಕವು.

ಣ್ಯಮ್ ಅನುಗ್ರಹತ್ತುಕ್ಕು ಅಸಾಧಾರಣಮ್. ಇಙ್ಗು ಕಾರುಣ್ಯ ಮಾವ ತು ? ಪರಹಿತ ಪ್ರವಣತ್ವೈ.

ರಡೂ ಚೇತನನ ನಿಗ್ರಹಕ್ಕೂ ಅನುಗ್ರಹಕ್ಕೂ, ಸಾಧಾರಣಙ್ಗಳ್ - ಉಪಯುಕ್ತ ವಾದ ಸಾಧಾರಣ ಗುಣಗಳು; ಕಾರುಣ್ಯವು, ಅನುಗ್ರಹತ್ತುಕ್ಕು ಅಸಾಧಾರಣ ಮ್ - ಅನುಗ್ರಹಕ್ಕೆ ಮಾತ್ರವೇ ಅಸಾಧಾರಣವು. ಇಂತಹ ಮಾಹಾತ್ಮ್ಯೆಯು ಕಾರುಣ್ಯಕ್ಕಿರುವುದರಿಂದಲೇ ಸರ್ವೇಶ್ವರನ ಇತರ ಗುಣಗಳೂ ಕೂಡ ಕಲ್ಯಾಣಗುಣ ಗಳೆಂದು ಹೇಳಿಸಿಕೊಂಡಿವೆ ಎಂದು ದಯಾಶತಕದಲ್ಲಿ ಕೊಂಡಾಡಿರುತ್ತಾರೆ:—
"ವೃಷಗಿರಿ ಗೃಹಮೇಧಿಗುಣಾ ಬೋಧಬಲೈಶ್ವರ್ಯ ವೀರ್ಯಶಕ್ತಿಮುಖಾಃ । ದೋಷಾಭವೇಯುರೇತೇ ಯದಿನಾಮ ದಯೇ ತ್ವಯಾವಿನಾಭೂತಾಃ ॥"
ಶ್ರೀನಿವಾಸನ ಜ್ಞಾನ ಬಲೈಶ್ವರ್ಯ ವೀರ್ಯ ಶಕ್ತಿ ತೇಜಸ್ಸುಗಳೆಂಬ ಷಡ್ಗುಣಗಳೂ ದಯೆಯೊಂದಿಗೆ ಸೇರದೇ ಇದ್ದ ಪಕ್ಷದಲ್ಲಿ ದೋಷಯುಕ್ತವಾದವುಗಳಾಗುತ್ತಿದ್ದವು. ಈಗ ದಯೆಯೊಂದಿಗೆ ಸೇರಿರುವುದರಿಂದ ಕಲ್ಯಾಣಗುಣಗಳೆನ್ನಿಸಿಕೊಂಡಿವೆ ಎಂಬ ಭಾವವು ಮುಂದೆ ಕಾರುಣ್ಯವೆಂದರೇನು ಎಂಬುದನ್ನು ತಿಳಿಸುತ್ತಾರೆ. ಇಙ್ಗು- ಇಲ್ಲಿ, ಎಂದರೆ ಅನುಗ್ರಹ ಉಂಟಾಗುವ ಸಂದರ್ಭದಲ್ಲಿ, ಅಥವಾ ಅನುಗ್ರಹಕ್ಕೆ ಬೇಕಾದ ಮೂರು ಗುಣಗಳಲ್ಲಿ, ಕಾರುಣ್ಯಮಾವದು - ಕಾರುಣ್ಯವೆಂದರೇನು ? ಪರಹಿತ ಪ್ರವಣತ್ವೈ - ಇತರರಿಗೆ ಎಂದರೆ ಈ ಸಂದರ್ಭವಲ್ಲಿ ಚೇತನರಿಗೆ ಪ್ರತ್ಯು ಪಕಾರಾಪೇಕ್ಷೆಯಿಲ್ಲದೆ, ಹಿತವನ್ನು ಮಾಡಬೇಕೆಂಬುದನ್ನೇ ಸ್ವಭಾವವಾಗಿರೋ ಣವು. "ವ್ಯಸನೇಷು ಮನುಷ್ಯಾಣಾಂ ಭೃಶಂ ಭವತಿ ದುಃಖಿತಃ" ಎಂಬ ಶ್ಲೋಕದಲ್ಲಿ ತೋರುವ, ಪರದುಃಖ ದುಃಖಿತ್ವಂ - ಇತರರು ದುಃಖಪಟ್ಟರೆ ತಾನೂ ದುಃಖಪಡುವ ಸ್ವಭಾವಮಾತ್ರವೇ ಅಲ್ಲವು ಪರದುಃಖದಿಂದ ದುಃಖ ವುಂಟಾಗ ವುದರಿಂದ, ಆ ದುಃಖವನ್ನು ಹೋಗಲಾಡಿಸಿ ಹಿತವನ್ನು ಮಾಡಬೇಕೆಂ ಬಭಿಲಾಷೆಯುಂಟಾಗಿ ಹಿತವನ್ನು ಮಾಡುತ್ತಾನೆಂಬ ಭಾವವು. ಇದೀಗ ಕಾರು ಣ್ಯದ ಪ್ರಭಾವವು. ಇದಕ್ಕೆ ವ್ಯಾಜಸಾಪೇಕ್ಷೆಯನ್ನು ಎದುರುನೋಡುವನು. ವ್ಯಾಜಸಾಪೇಕ್ಷೆಯಿಲ್ಲವೆಯೂ ಎಲ್ಲಾ ಚೇತನರಿಗೂ ಹಿತವನ್ನು ಮಾಡಬೇಕೆಂಬಭಿ ಲಾಷೆಯುಂಟಾಗಿ ಅದನ್ನು ಮಾಡುವುದೂ ಉಂಟು. ಇವುಗಳನ್ನೆಲ್ಲಾ ಶ್ರೀ ದೇಶಿಕ ರವರು ದಯಾಶತಕವಲ್ಲಿ ಉಪಪಾದಿಸಿರುತ್ತಾರೆ:- "ಅಚಿದ ವಿಶಿಷ್ಟಾನ್ಪ್ರಳಯೇ ಜಂತೂನವಲೋಕ್ಯ ಜಾತನಿರ್ವೇದಾ । ಕರಣ ಕಳೇಬರ ಯೋಗಂ ವಿತರಸಿ ವೃಷಶೈಲನಾಥ ಕರುಣೇತ್ವಂ ॥" ಹೀಗೆ ಚೇತನರ ಅಚಿತ್ಸಂಸರ್ಗದಿಂದ ಪ್ರಾಪ್ತ

ಕಾರುಣ್ಯಸ್ಯ ಕಾರ್ಯವಿಶೇಷ ಪರಂಪರಾಃ

(ಇದು ತ್ರಿವಿಧ ಚೇತನರ್ಗಳುಡೈಯ ಸತ್ತಾಸ್ಥಿತಿಗಳುಕ್ಕುಮ್, ಅನು

ವಾದ ದುಸ್ಥಿತಿಯಿಂದ ಖೇದಗೊಂಡವನಾಗಿ, ಕರಣಕಳೇಬರ ಯೋಗವನ್ನುಂಟು ಮಾಡಿದನೆಂದು ಹೇಳಲ್ಪಟ್ಟಿರುವನು. ಹಾಗೆಯೇ ಶಾಸ್ತ್ರಪ್ರದೀಪವನ್ನು ದಯಪಾಲಿಸಿ, ಶಾಸ್ತ್ರವನ್ನು ಬೋಧಿಸುವವರನ್ನೂ ಕಲ್ಪಿಸಿಕೊಟ್ಟು, ಉಪಾಯಾನುಷ್ಠಾನಗಳಿಗೆ ಸೌಕರ್ಯವನ್ನುಂಟುಮಾಡಿ ತನ್ನನ್ನು ಭಜಿಸಲಿ ಎಂದು ಅವತಾರಗಳನ್ನೆತ್ತಿ, ಅವತಾರ ಕಾಲಗಳಲ್ಲಿದ್ದವರಿಗೆ ಮಾತ್ರವೇ ಅಲ್ಲದೆ ಸದಾ ಎಲ್ಲರಿಗೂ ಅನುಕೂಲವಾಗಲೆಂದು ಅರ್ಚಾವತಾರಿಯಾಗಿ ಅಲ್ಲಲ್ಲೇ ಬಿಜಮಾಡಿ, ಭಕ್ತಿಯಿಂದ ಉಪಾಸಿಸಲಿ ಎಂದು ಈ ಚೇತನನ ದೇಹದಲ್ಲೇ ಹಾರ್ದಾವತಾರಿಯಾಗಿದ್ದುಕೊಂಡು ಹೀಗೆ ನಾನಾವಿಧ ಪರಹಿತ ಪ್ರವಣತೆಯಲ್ಲಿ ಸ್ಥಿರಸಂಕಲ್ಪನಾಗಿರುತ್ತಾನೆ. ಮುಂದೆ ಈ ಕಾರುಣ್ಯದ ಮಹಿಮೆಯಿಂದ ಚೇತನರಿಗುಂಟಾಗುವ ಸರ್ವವಿಧ ಪ್ರಯೋಜನಗಳನ್ನೂ ತಿಳಿಸುತ್ತಾರೆ. ಕಾರುಣ್ಯವು ನಿರುಪಾಧಿಕವಾಗಿ ಪರಹಿತೇಚ್ಛೆಯು. ಸರ್ವೇಶ್ವರನು ಹೀಗೆ ಕರುಣೆಯನ್ನು ತೋರಿಸುವದರಿಂದ, ಚೇತನನಿಂದ ಯಾವ ಪ್ರತ್ಯುಪಕಾರವನ್ನೂ ಅಪೇಕ್ಷಿಸದೇನೆ ಹಿತವನ್ನುಂಟುಮಾಡುವನು. ಹೀಗೆ ಹಿತವನ್ನು ಮಾಡುವುದರಲ್ಲಿ ಸಾರ್ವತ್ರಿಕವಾಗಿ ಎಲ್ಲರನ್ನೂ ಉದ್ದೇಶಿಸಿ ಮಾಡುವುದರಲ್ಲಿ ಯಾವ ವ್ಯಾಜಸಾಪೇಕ್ಷೆಯೂ ಇಲ್ಲದೆ ಮಾಡುವನು. ಆದರೆ ಒಬ್ಬ ಚೇತನನಿಗೆ ಮಾತ್ರವೇ ಹಿತವನ್ನು ಮಾಡುವ ಸಂದರ್ಭದಲ್ಲಿ ವ್ಯಾಜಸಾಪೇಕ್ಷೆಯುಂಟು. ಲೋಕದಲ್ಲೂ ಕೂಡ ಹೀಗೆಯೇ ಕಂಡಿರುವೆವು. ರಾಜನು ಕೂಡ ತನ್ನ ನಿರುಪಾಧಿಕ ಕೃಪೆಯಿಂದ ಪ್ರಜೆಗಳೆಲ್ಲರಿಗೂ ಅನುಕೂಲವಾಗಲೆಂದು ಆವಶ್ಯಕವಿರುವ ಸ್ಥಳಗಳಲ್ಲಿ ಪಾಠಶಾಲೆಗಳನ್ನೂ, ಆಸ್ಪತ್ರೆಗಳನ್ನೂ, ರಸ್ತೆ ಸೇತುವೆಗಳನ್ನೂ, ಕೆರೆ ಕಟ್ಟೆಗಳು ಮುಂತಾದುವುಗಳನ್ನೂ ಏರ್ಪಡಿಸುವನು. ಆ ಪ್ರಜೆಗಳಲ್ಲೊಬ್ಬನಿಗೆ ಏನಾದರೂ ಹಿತವನ್ನು ಪ್ರತ್ಯೇಕವಾಗಿ ಮಾಡಬೇಕಾದರೆ, ಆತನ ವಿದ್ಯಾ, ಇತರ ಕುಶಲತೆಗಳಿಗನುಸಾರವಾಗಿ ಸನ್ಮಾನಿಸುವನು. ಸರ್ವೇಶ್ವರನೂ ಕೂಡ ಹಾಗೆಯೇ ಎಂಬಭಿಪ್ರಾಯವು ಮಾಧುರ್ಯವು ಕೂಡ ಮೊದಲು ಒಂದು ವಿಧವಾದ ಕೃಪೆಯ ಮೂಲಕ ಮಾಡುವ ರಕ್ಷಣೆಯು ಸಾರ್ವತ್ರಿಕವಾದುದರಿಂದ "ರಕ್ಷಿತಾ ಜೀವಲೋಕಸ್ಯ ಎಂದು ಶ್ರೀರಾಮನನ್ನು ಕೊಂಡಾಡಿ, ಉಪಾಯಾನುಷ್ಠಾನವನ್ನು ಮಾಡಿ ಸ್ವಜನನಾದ ಪ್ರಪನ್ನನಿಗೆ ಎರಡನೆಯ ವಿಧವಾದ ಕೃಪೆಯ ಮೂಲಕ ಮಾಡುವ

ಕೂಲ ಪ್ರವೃತ್ತಿಗಳುಕ್ಕುಮ್, ನಿತ್ಯರುಡೈಯ ನಿತ್ಯಾನುಭವತ್ತುಕ್ಕುಮ್ ಮುಕ್ತರುಡೈಯ ಆನಾವೃತ್ತಿತ್ವಕ್ಕುಮ್, ಲೀಲಾವಿಭೂತಿಯಿಲ್ ಸಾಮಾನ್ಯ ಸೃಷ್ಟ್ಯಾದಿಗಳುಕ್ಕುಮ್, ಸ್ವಾವತಾರ ರೂಪೈಯಾನ ಶುದ್ಧಸೃಷ್ಟಿಕ್ಕುಮ್, ಶಾಸ್ತ್ರಪ್ರವರ್ತನತ್ತುಕ್ಕುಮ್, ಅದಡಿಯಾಗ ತತ್ವಹಿತ

ಸಂರಕ್ಷಣೆಯು ವ್ಯಾಜರೂಪವಾದುದಾಗಿ **ಸ್ವಜನಸ್ಯ ಚ ರಕ್ಷಿತಾ** ಎಂದು ಕೊಂಡಾಡಿರುತ್ತಾರೆ.

ಕಾರುಣ್ಯದಿಂದುಂಟಾಗುವ ಪ್ರಯೋಜನ ಪರಂಪರೆಗಳು.

ಇದು- ಈ ಕಾರುಣ್ಯವು ಇದಕ್ಕೆ ಕ್ರಿಯಾಪದವು ತುಂಬಾ ದೂರದಲ್ಲಿ "**ಸಾಮಾನ್ಯ ನಿದಾನಮಾಯಿರುಕ್ಕುಮ್**" ಎಂದಿರುತ್ತದೆ. (೧) **ತ್ರಿವಿಧ ಚೇತನರುಗಳುಡೈಯ ಸತ್ತಾಸ್ಥಿತಿಗಳುಕ್ಕುಮ್** - ನಿತ್ಯಮುಕ್ತ ಬದ್ಧರಾದ ಮೂರು ವಿಧವಾದ ಚೇತನರ ಸ್ವರೂಪ ಲಾಭ ಸ್ಥಿತಿಗಳಿಗೂ **ಅನುಕೂಲಪ್ರವೃತ್ತಿಗಳುಕ್ಕುಮ್** - ಶಾಸ್ತ್ರವಿಧಿಗಳಿಗೆ ವಿರೋಧವಲ್ಲದೇ ಇರುವ ವ್ಯಾಪಾರಗಳಿಗೂ (೨) **ನಿತ್ಯರುಡೈಯ ನಿತ್ಯಾನುಭವತ್ತುಕ್ಕುಮ್** - ನಿತ್ಯಸೂರಿಗಳು **ಸದಾ ಪಶ್ಯಂತಿ ಸೂರಯಃ**" ಎಂದು ಹೇಳಿರುವ ಹಾಗೆ, ಯಾವಾಗಲೂ ಪರಮಾತ್ಮನನ್ನು ಅನುಭವಿಸುವದಕ್ಕೂ (೩) **ಮುಕ್ತರುಡೈಯ ಅನಾವೃತ್ತಿಕ್ಕುಮ್** - ಮೋಕ್ಷವಾದ ನಂತರ ಮುಕ್ತರಿಗೆ ಪುನಃ ಲೀಲಾವಿಭೂತಿಯಲ್ಲಿ ಸಂಬಂಧವಿಲ್ಲದ ಹಾಗೆ ಮಾಡೋಣವೂ, (೪) **ಲೀಲಾವಿಭೂತಿಯಿಲ್ ಸಾಮಾನ್ಯ ಸೃಷ್ಟ್ಯಾದಿಗಳುಕ್ಕುಮ್** ಲೀಲಾವಿಭೂತಿಯಲ್ಲಿ ಪ್ರಕೃತಿಯ ವಿಕೃತಿ ರೂಪವಾದ ಸಮಷ್ಟಿ ಸೃಷ್ಟಿಗಳಿಗೂ, ಇಲ್ಲಿ ಆದಿ ಪದದಿಂದ ತ್ರಿವೃತ್ಕರಣಸ್ಥಿತಿಲಯಾದಿಗಳು ಹೇಳಲ್ಪಟ್ಟವು; ವಿಶೇಷ ಸೃಷ್ಟಿಯಾದ ವ್ಯಷ್ಟಿಸೃಷ್ಟ್ಯಾದಿಗಳು ಏತಕ್ಕೆ ಹೇಳಲ್ಪಡಲಿಲ್ಲವೆಂದರೆ ಅವುಗಳನ್ನು ಸರ್ವೇಶ್ವರನ ಸಂಕಲ್ಪಾನುಸಾರವಾಗಿ ನಡೆಸಲು ಚತುರ್ಮುಖಾದಿಗಳು ನಿಯಮಿಸಲ್ಪಟ್ಟಿರುವದರಿಂದ ಅದು ಇಲ್ಲಿ ಹೇಳಲ್ಪಡಲಿಲ್ಲವು. ಚತುರ್ಮುಖನ ಮೂಲಕವಾಗುವ ಸೃಷ್ಟಿಯು ಸಾಮಾನ್ಯವಾದುದಲ್ಲವು, ಅದು ಚೇತನರ ಕರ್ಮವನ್ನನುಸರಿಸಿ ಮಾಡುವ ಸೃಷ್ಟಿಯಾದುದರಿಂದ ವೈಷಮ್ಯ ಸೃಷ್ಟಿಯು, ದೇವತಿರ್ಯಙ್ಮನುಷ್ಯ ಸ್ಥಾವರಾದಿ ರೂಪವಾದುದು. (೫) **ಸ್ವಾವತಾರರೂಪೈಯಾನ ಶುದ್ಧಸೃಷ್ಟಿಕ್ಕುಮ್** - ತನ್ನ ಅವತಾರ ರೂಪವಾದ ದಿವ್ಯಮಂಗಳ ವಿಗ್ರಹವನ್ನು ಹೊಂದುವುದಕ್ಕೂ, (೬) **ಶಾಸ್ತ್ರಪ್ರವರ್ತನತ್ತುಕ್ಕುಮ್ - ಶಾಸ್ತ್ರ**

ವಿಷಯಮಾನ ಜ್ಞಾನತ್ತೈ ಪಿರಪ್ಪಿಕ್ಕೈಕ್ಕುಮ್, ಮೋಕ್ಷಶ್ರದ್ಧೈಯೈಯುಣ್ಡಾಕ್ಕೈಕ್ಕುಮ್, ಇದು ಕೊಡುಕ್ಕೈಕ್ಕು ವ್ಯಾಜಮಾನ ಸುಕೃತ ವಿಶೇಷತ್ತೈಕ್ಕುಮ್, ಅಧಿಕಾರಾನುರೂಪಙ್ಗಳಾನ ನಿಗ್ರಹ ಶಮನೋಪಾಯಙ್ಗಳೈಕ್ಕೊಡುಕ್ಕೈಕ್ಕುಮ್, ಇವತ್ತಿಲ್ ಕರಣ ಪ್ರೇರಣ ದಶೈಯಿಲ್ ಸಹಕಾರಿಯಾಯ್ ನಿರ್ಕೈಕ್ಕುಮ್, ಉಪಾಸಕನಕ್ಕು ಅನ್ತರಾಯಮ್ ವನ್ದಾಲ್ ಪ್ರತಿಸಮಾಧಾನಮ್ ಪಣ್ಣಿಕ್ಕೈಕ್ಕುಮ್, ಆಕಿಂಚನರುಕ್ಕು ಉಪಾ

ಗಳು ತಮ್ಮ ತಮ್ಮ ಶಿಷ್ಯರುಗಳು ಪರಂಪರಾಕ್ರಮದಿಂದ ಉಚ್ಚಾರಣಾನೂಚ್ಚಾರಣ ರೂಪವಲ್ಲಿ ಈಗಿನ ಗುರುಗಳವರೆಗೂ ಬರುವಹಾಗೆ ಮಾಡೋಣವೂ, (೭) **ಅದಡಿಯಾಗ ತತ್ತ್ವಹಿತ ವಿಷಯಮಾನ ಜ್ಞಾನತ್ತೈ ಪಿರಪ್ಪಿಕ್ಕೈಕ್ಕುಮ್** - ಆ ಶಾಸ್ತ್ರಪ್ರವರ್ತನ ಮೂಲಕವಾಗಿ, ತತ್ತ್ವವು ಶ್ರೀಮನ್ನಾರಾಯಣನೇ ಎಂಬ, ಹಿತವು ಭಕ್ತಿಪ್ರಪತ್ತಿರೂಪ ಉಪಾಯಾನುಷ್ಠಾನವೆಂಬ, ಜ್ಞಾನ ಉಂಟುಮಾಡುವುದಕ್ಕೂ, ಪುರುಷಾರ್ಥವು ಇಲ್ಲಿ ಏಕೆ ಹೇಳಲ್ಪಡಲಿಲ್ಲವೆಂದರೆ, ಯಾವಾಗ ಉಪಾಯಾನುಷ್ಠಾನವಾಯಿತೋ ಆಗ ಪುರುಷಾರ್ಥವು ಸ್ವತಸ್ಸಿದ್ಧವೆಂಬ ಭಾವದಿಂದರಿಯುತಕ್ಕದ್ದು, (೮) **ಮೋಕ್ಷಶ್ರದ್ಧೈಯೈ ಯುಂಡಾಕ್ಕೈಕ್ಕುಮ್**-ಸುಕೃತವನ್ನಾಚರಿಸಿದ ಚೇತನನಿಗೆ ಮೋಕ್ಷದಲ್ಲಿ ಅಭಿರುಚಿಯುಂಟಾಗುವ ಹಾಗೆ ಮಾಡುವುದಕ್ಕೂ, (೯) **ಇದು ಕೊಡುಕ್ಕೈಕ್ಕು** - ಈ ಮೋಕ್ಷವನ್ನು ಕೊಡುವುದಕ್ಕೂ, **ವ್ಯಾಜಮಾನ** - ನೆಪರೂಪದಲ್ಲಿ ಸಹಕಾರಿ ಕಾರಣವಾದ, **ಸುಕೃತ ವಿಶೇಷತ್ತೈಕ್ಕುಮ್** - ಸುಕೃತವಿಶೇಷವನ್ನುಂಟುಮಾಡುವುದಕ್ಕೂ. (೧೦) **ಅಧಿಕಾರಾನುರೂಪಙ್ಗಳಾನ** - ಆಯಾ ಅಧಿಕಾರಿಗಳಿಗೆ, **ಅನುರೂಪಙ್ಗಳಾನ** - ಯೋಗ್ಯಗಳಾದ, **ನಿಗ್ರಹ ಶಮನೋಪಾಯಙ್ಗಳೈ ಕ್ಕೊಡುಕ್ಕೈಕ್ಕುಮ್** - ಭಗವನ್ನಿಗ್ರಹ ಸಂಕಲ್ಪವನ್ನು ಶಮನಮಾಡುವ ಉಪಾಯಗಳಾದ ಗುರು ಲಘು ಲಘುತರ ಲಘುತಮರೂಪ ಭಕ್ತಿ ಸ್ವತಂತ್ರಪ್ರಪತ್ತಿ ಉಕ್ತಿನಿಷ್ಠೆ ಆಚಾರ್ಯನಿಷ್ಠೆಗಳನ್ನು ಕೊಡುವುದಕ್ಕೂ, (೧೧) **ಇವತ್ತಿಲ್** - ಈ ಮೇಲೆ ಹೇಳಿದ ಉಪಾಯಗಳಲ್ಲಿ, **ಕರಣ ಪ್ರೇರಣ ದಶಾಯಾಂ** - ಮನಸ್ಸನ್ನು ಪ್ರೇರಿಸುವ ಅವಸ್ಥೆಯಲ್ಲಿ, **ಸಹಕಾರಿಯಾಗಿ ನಿರ್ಕೈಕ್ಕುಮ್**-ಸಹಕಾರಿಯಾಗಿರುವುದಕ್ಕೂ. (೧೨) **ಉಪಾಸಕನಕ್ಕು ಅನ್ತರಾಯಮ್ ವನ್ದಾಲ್** - ಉಪಾಸನವು ಅಸಕೃದಾವರ್ತಿಯುಳ್ಳದ್ದಾಗಿ ದೇಹಾವಸಾನದವರೆಗೂ ಮಾಡತಕ್ಕದ್ದಾದುದರಿಂದ ಮಧ್ಯದಲ್ಲೇನಾದರೂ ವಿಘ್ನವು ಒದಗಿದರೆ, **ಪ್ರತಿಸಮಾಧಾನಮ್ ಪಣ್ಣಿಕ್ಕೈಕ್ಕುಮ್**-ಆ ವಿಘ್ನವು ಶಮನ

ಯಾಂತರ ಸ್ಥಾನತ್ತಿಲೆ ನಿನ್ರು ನಿರಪಾಯಮಾಗ ರಕ್ಷಿಕ್ಕೈಕ್ಕುಮ್, ಇವ್ಯಾಜಙ್ಗಳೈಕ್ಕೊಂಡು ಪ್ರಸನ್ನನಾಯ್ ಅನಾದಿಕಾಲಮ್ ಪಣ್ಣಿನ ಅನಂತ ಮಹಾಪರಾಧಙ್ಗಳೈ ಅನಾದರಿತ್ತು ಅನಂತ ಸುಖತ್ತಿಲೇ ವಿಶ್ರಮಿಕ್ಕುಮ್ಪಡಿ ಸಂಸಾರ ನಿವರ್ತಕನಾಕೈಕ್ಕುಮ್, ಆರ್ತಪ್ರಪನ್ನರ್ಕ್ಕು ಅಪ್ಪೋದೇ ಮೋಕ್ಷಮ್ ಕೊಡುಕ್ಕೈಕ್ಕುಮ್, ಇಙ್ಗಿರುನ್ದನಾಳ್ ನಿರಪರಾಧನಾ ಯಿರುಕ್ಕ

ವಾಗುವ ಹಾಗೆ ಮಾಡಿ, ಉಪಾಸನವು ಪುನಃ ಪ್ರಾರಂಭಿಸಲ್ಪಟ್ಟು ಪೂರ್ತಿಯಾಗುವ ಹಾಗೆ ಮಾಡಿಸುವುದಕ್ಕೂ, ಇದರಲ್ಲಿ ಉಪಾಸನೋಚ್ಛಿತ್ತಿಗಾಗಿ ಪ್ರಾಯಶ್ಚಿತ್ತವನ್ನನುಷ್ಠಿಸುವ ಹಾಗೆ ಮಾಡುವುದೂ ಕೂಡ ಕಾರುಣ್ಯಕಾರ್ಯವೆಂದು ಭಾವಿಸತಕ್ಕದ್ದು, (೧೩) **ಅಕಿಂಚನರ್ಕ್ಕು** - ಉಪಾಸನೆಗೆ ಯೋಗ್ಯತೆಯಿಲ್ಲದ ಅಸಮರ್ಥರಿಗೆ. **ಉಪಾಯಾಂತರ ಸ್ಥಾನತ್ತಿಲೆ** - ಆ ಉಪಾಯಾಂತರವಾದ ಉಪಾಸನೆಯ ಸ್ಥಳದಲ್ಲಿ ಎಂದರೆ ಅದಕ್ಕೆ ಬದಲಾಗಿ, **ನಿನ್ರು** - ತಾನೇ ನಿಂತು, **ನಿರಪಾಯಮಾಗ** ಏನೊಂದೂ ಅಪಾಯ ಸಂಭವಿಸದ ಹಾಗೆ, **ರಕ್ಷಿಕ್ಕೈಕ್ಕುಮ್** - ರಕ್ಷಿಸುವುದಕ್ಕೂ, ಎಂದರೆ ಭಕ್ತಿಮಾರ್ಗದಲ್ಲಿ ಪ್ರವರ್ತಿಸಲು ಯೋಗ್ಯತೆಯಿಲ್ಲದೆ ಪ್ರಪತ್ತಿಮಾರ್ಗದಲ್ಲಿ ಪ್ರವರ್ತಿಸಿದವನಿಗೆ ಭಕ್ತಿಸ್ಥಾನದಲ್ಲಿ ತಾನೇ ನಿಂತು ಪ್ರಪತ್ತಿಗೆ ಏನೂ ಅಪಾಯ ಬರದ ಹಾಗೆ ಕಾಪಾಡುವುದಕ್ಕೂ ಎಂಬ ಭಾವವು, (೧೪) **ಇವ್ಯಾಜಙ್ಗಳೈಕ್ಕೊಂಡು**- ಈ ಭಕ್ತ್ಯಾದಿ ಉಪಾಯಾನುಷ್ಠಾನಗಳನ್ನು ಸ್ವೀಕರಿಸಿ, ಪ್ರಸನ್ನನಾಗಿ, "**ತಸ್ಮಿನ್ ಪ್ರಸನ್ನೇ ಕಿಮಿಹಾಸ್ತ್ಯಲಭ್ಯಮ್**" ಎಂದು ಹೇಳಿರುವ ಹಾಗೆ, ಅನಾದಿಕಾಲದಿಂದಲೂ ಮಾಡಿದ, **ಅನಂತ ಮಹಾಪರಾಧಙ್ಗಳೈ** - ಅಸಂಖ್ಯಾಕಗಳಾಗಿಯೂ ಬಹು ಕ್ರೂರವಾದವುಗಳಾಗಿಯೂ ಇರುವ ಪಾಪಗಳನ್ನೆಲ್ಲಾ, **ಅನಾದರಿತ್ತು** - ತಿರಸ್ಕರಿಸಿ, ಸ್ಮರಿಸದೆ, **ಅನಂತ ಸುಖತ್ತಿಲೆ** - ಸ್ವಾಮಿಯನ್ನು ಭಜಿಸಿ ಕೈಂಕರ್ಯ ಮಾಡುವ ನಿರತಿಶಯ ಸುಖದಲ್ಲಿ, **ವಿಶ್ರಮಿಕ್ಕುಮ್ಪಡಿ** - ವಿಶ್ರಾಂತಿಯನ್ನು ಹೊಂದುವ ಹಾಗೆ, **ಸಂಸಾರ ನಿವರ್ತಕನಾಗೈಕ್ಕುಮ್** - "**ಪರಮಾತ್ಮನಿಯೋ ರಕ್ತಃ ವಿರಕ್ತೋಽಪರಮಾತ್ಮನಿ**" ಎಂದು ಹೇಳಿರುವ ಹಾಗೆ ಐಹಿಕಗಳಾದ ಸಂಸಾರ ವಿಷಯಗಳಲ್ಲಿ ವೈರಾಗ್ಯ ಹುಟ್ಟುವ ಹಾಗೆ ಮಾಡುವುದಕ್ಕೂ, (೧೫) **ಆರ್ತ ಪ್ರಪನ್ನರುಕ್ಕು** – ಈ ಲೋಕದಲ್ಲಿರುವ ಸ್ಥಿತಿಯು ಅಗ್ನಿಯ ಮಧ್ಯದಲ್ಲಿರುವ ಹಾಗೆ ಭಾವಿಸಿ ಒಂದು ಮುಹೂರ್ತವೂ ಇಲ್ಲಿರುವುದು ದುಸ್ಸಹವೆಂದು ಭಾವಿಸಿ ಪ್ರಪದನ ಮಾಡಿದ ಆರ್ತರಿಗೆ, **ಅಪ್ಪೋದೆ** – ಆ ಪ್ರಪತ್ತ್ಯನುಷ್ಠಾನ ಕಾಲದಲ್ಲೇ, **ಮೋಕ್ಷಮ್ ಕೊಡುಕ್ಕೈಕ್ಕುಮ್** - ಮೋಕ್ಷವನ್ನು ಕೊಡುವು

ವೇಣು ಮೆನ್ನು ಫಲಮ್ ಕೋಲ ಮರನ್ದ ದೃಪ್ತ ಪ್ರಪನ್ನನುಕ್ಕು ಪ್ರಾರಬ್ಧ ಕರ್ಮವಶತ್ತಾಲೆ ಪುಗುನ್ದ ಅಪರಾಧತ್ತುಕ್ಕು ಅನುತಾಪತ್ತೈ ವಿಳೈಪ್ಪಿತ್ತು ಅಧಿಕಾರಾನುರೂಪಮಾನ ಪ್ರಾಯಶ್ಚಿತ್ತ ವಿಶೇಷತ್ತಿಲೆ ಮೂಟ್ಟುಗೈಕ್ಕುಮ್, ಅಜ್ಞನ ಮೃದುಪ್ರಕೃತಿಗಳಲ್ಲಾದಾರ್ಕ್ಕು ಯಮವಿಷಯ ಗಮನಮುಮ್ ಕೋಲಿನ ಫಲತ್ತುಕ್ಕು ಪ್ರತಿಬಂಧಕಮುಮ್ ವಾರಾದಪಡಿ ಪಣ್ಣಿ ಉಪಕ್ಲೇಶಙ್ಗಳಾಲೇ ಶಿಕ್ಷಿಕ್ಕೈಯುಕ್ಕುಮ್, ಪ್ರಧಾನಮಾನ ಸಾಮಾನ್ಯ ನಿದಾನಮಾಯಿರುಕ್ಕುಮ್.)

ದಕ್ಕೂ, (೧೬) ಇಜ್ಞರುಂದ ನಾಳ್ - ಪ್ರಪದನಾನುಷ್ಠಾನಾನಂತರ ಇಲ್ಲಿ ಇದ್ದಷ್ಟು ಕಾಲವೂ, ನಿರಪರಾಧನಾಯಿರುಕ್ಕವೇಣುಮ್ - ಪ್ರಾರಬ್ಧ ಕರ್ಮ ಬಲದಿಂದ ಉತ್ತರಾಘಕ್ಕೆ ಕಾರಣವಿದ್ದರೂ ಅಂತಹ ಪಾಪಗಳೊಂದನ್ನೂ ಮಾಡದೇ ಇರಬೇಕೆಂಬ, ಫಲಮ್ ಕೋಲ ಮರನ್ದ - ಫಲವನ್ನು ಪ್ರಾರ್ಥಿಸಲು ಮರೆತ, ದೃಪ್ತ ಪ್ರಪನ್ನನುಕ್ಕು - ದೇಹಾವಸಾನದಲ್ಲಿ ಮೋಕ್ಷವನ್ನಪೇಕ್ಷಿಸಿದ ಪ್ರಪನ್ನನಿಗೆ, ಪ್ರಾರಬ್ಧಕರ್ಮವಶತ್ತಾಲೆ ಪುಗುನ್ದ - ಪ್ರಾರಬ್ಧ ಕರ್ಮ ಮೂಲಕ ಪ್ರಾಪ್ತವಾದ, ಅಪರಾಧತ್ತುಕ್ಕು ಅನುತಾಪತ್ತೈ ವಿಳೈಪ್ಪಿತ್ತು - ಅಪರಾಧಕ್ಕೆ ಅನುತಾಪವನ್ನುಂಟುಮಾಡಿಸಿ, ಅಧಿಕಾರಾನುರೂಪಮಾನ - ಆ ಪಾಪಮಾಡಿದ ಅಧಿಕಾರಿಗೆ ಯೋಗ್ಯವಾದ, ಪ್ರಾಯಶ್ಚಿತ್ತತ್ತಿಲೆ ಮೂಟ್ಟುಗೈಕ್ಕುಮ್ - ಪ್ರಾಯಶ್ಚಿತ್ತವನ್ನು ಮಾಡುವ ಹಾಗೆ ಪ್ರೇರಿಸುವುದಕ್ಕೂ, ಪ್ರಾಯಶ್ಚಿತ್ತಗಳು ಎಲ್ಲಾ ವರ್ಣಾಶ್ರಮದವರಿಗೂ ಏಕರೂಪವಾದವುಗಳಲ್ಲವು, ಮತ್ತು ಬೇರೆ ಬೇರೆ ಪಾತಕಗಳಿಗೆ ಬೇರೆ ಬೇರೆ ಪ್ರಾಯಶ್ಚಿತ್ತಗಳು ; ಆದುದರಿಂದ ಆಯಾ ಅಧಿಕಾರಿಗಳಿಗೆ ಯೋಗ್ಯಗಳಾದ ಪ್ರಾಯಶ್ಚಿತ್ತಗಳನ್ನನುಷ್ಠಿಸಬೇಕು ; ಆದುದರಿಂದ ಅಧಿಕಾರಾನುರೂಪಮಾನವೆಂಬ ಪ್ರಯೋಗವು. (೧೭) ಅಜ್ಞನ - ತದಾ, ಆ ಪ್ರಪದನಾನುಷ್ಠಾನ ಕಾಲದಲ್ಲಿ, ಮೃದು ಪ್ರಕೃತಿಗಳಲ್ಲಾದಾರ್ಕ್ಕು - ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವಷ್ಟು ಮೃದುಸ್ವಭಾವವಿಲ್ಲದೆ ಬುದ್ಧಿಪೂರ್ವೋತ್ತರಾಘಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳದವನಿಗೆ, ಯಮವಿಷಯಗಮನಮುಮ್-ಯಮನ ಪಟ್ಟಣವನ್ನು ಕುರಿತು ಶಿಕ್ಷೆಯನ್ನನುಭವಿಸುವುದಕ್ಕಾಗಿ ಹೋಗೋಣವೇನು, ಕೋಲಿನ ಫಲತ್ತುಕ್ಕು ಪ್ರತಿಬಂಧಕಮುಮ್ - ಪ್ರಾರ್ಥಿಸಿದ ಫಲವಾದ ಮೋಕ್ಷಪ್ರಾಪ್ತಿಗೆ ತಡೆಯೇನು, ಇವುಗಳು, ವಾರಾದಪಡಿ ಪಣ್ಣಿ - ಬಾರದ ಹಾಗೆ ಮಾಡಿ, ಉಪಕ್ಲೇಶಙ್ಗಳಾಲೆ - ಖಂಜಾಭವಂತಿ, ಕಾಣಾಭವಂತಿ, ಅವಿಧೇಯ ಪುತ್ರಾ

ಭವಂತಿ ಇತ್ಯಾದಿ ಅಲ್ಪವಾದ ಕ್ಲೇಶಗಳನ್ನು ಕೊಟ್ಟು, ಶಿಕ್ಷಿಕ್ಕೈಕ್ಕುಮ್-ಶಿಕ್ಷಿಸುವುದಕ್ಕೂ ಸಹ, **ಪ್ರಧಾನಮಾನ** - ಮುಖ್ಯವಾದ, **ಸಾಮಾನ್ಯ ನಿದಾನಮಾಯಿರುಕ್ಕುಮ್** - ಸಾಮಾನ್ಯವಾದ ಕಾರಣವಾಗಿರುತ್ತದೆ. ಸರ್ವೇಶ್ವರನ ಕಾರುಣ್ಯವು ಈ ಮೇಲೆ ಉಪಪಾದಿಸಲ್ಪಟ್ಟ ಹದಿನೇಳು ವಿಧವಾದ ಕಾರ್ಯಪರಂಪರೆಗಳನ್ನುಂಟುಮಾಡಲು ಪ್ರಧಾನಕಾರಣವಾಗಿಯೂ ಸಾಮಾನ್ಯವಾದ ಕಾರಣವಾಗಿಯೂ ಇರುತ್ತದೆ. ಆದರೆ ಈ ಹದಿನೇಳರಲ್ಲಿ ಮೊದಲಿನ ಆರುವಿಧ ಕಾರ್ಯಗಳಿಗೆ ವ್ಯಾಜಸಾಪೇಕ್ಷೆಯಿಲ್ಲದೆ ಬರೀ ಈಶ್ವರ ಕೃಪಾಪೂರ್ವಕ ಸಂಕಲ್ಪದಿಂದಲೇ ನಡೆಯುವುದರಿಂದ, ಕೃಪೆಯು ಪ್ರಧಾನಸಾಮಾನ್ಯ ಕಾರಣವು, ವಿಶೇಷಕಾರಣವು ಯಾವುದೂ ಇರುವದಿಲ್ಲವು. ಮಿಕ್ಕ ಹನ್ನೊಂದು ವಿಧವಾದ ಕಾರ್ಯಗಳಲ್ಲಿ ಚೇತನನ ವ್ಯಾಜರೂಪವಾಗಿರುವ ಸಹಕಾರಿರೂಪ ವಿಶೇಷಕಾರಣವೂ ಸಹ ಆವಶ್ಯಕವಾದುದರಿಂದ ಕಾರುಣ್ಯವು ಈ ಕಾರ್ಯಗಳಿಗೆ ಪ್ರಧಾನವಾದರೂ ಸಾಮಾನ್ಯವಾದ ಕಾರಣವೆಂದು ಹೇಳಲ್ಪಟ್ಟಿತು. ಹೇಗೆಂದರೆ, ಸರ್ವೇಶ್ವರನ ಕಾರುಣ್ಯವು ನೀರಿನ ಹಾಗೆ ನಾನಾ ವಿಧ ಸಸ್ಯರೂಪ ಪೈರಿಗೆ ಕಾರಣವಾಗಿ ಪ್ರಧಾನವಾಗಿಯೂ ಸಮವಾಗಿಯೂ ಇದ್ದರೂ ಆಯಾ ಸಸ್ಯಗಳಿಗೆ ಬೇಕಾದ ಬೀಜಗಳು ಭೂಮಿಯಲ್ಲಿರುವದು ಹೇಗೆ ಸಹಕಾರಿರೂಪ ವಿಶೇಷಕಾರಣವಾಗಿ ಆವಶ್ಯಕವೋ, ಹಾಗೆಯೇ ಈ ಮೇಲಿನ ಕಾರ್ಯಗಳಿಗೆ ಸರ್ವೇಶ್ವರನ ಕೃಪೆಯು ಪ್ರಧಾನವಾದ ಸಮಾನವಾದ ಕಾರಣವು, ಚೇತನನ ವಿವಿಧ ಸುಕೃತಗಳು ಸಹಕಾರಿಯಾದ ವಿಶೇಷವಾದ ಕಾರಣವೆಂಬ ಭಾವವು

ಸಿದ್ಧೋಪಾಯನು ಶ್ರಿಯಃಪತಿಯು, ಭಕ್ತಿಪ್ರಪತ್ತಿಗಳು ಸಾಧ್ಯೋಪಾಯಗಳು.

"ಅಧಿಷ್ಠಾನಂ ತಥಾಕರ್ತಾ ಕರಣಂಚ ಪೃಥಗ್ವಿಧಮ್ । ವಿವಿಧಾಶ್ಚ ಪೃಥಕ್ಚೇಷ್ಟಾ ದೈವಂಚೈವಾತ್ರ ಪಂಚಮಂ ॥" ಎಂಬ ಶ್ಲೋಕದಲ್ಲಿ ತೋರಿಬರುವಂತೆ ಚೇತನನ ಮೋಕ್ಷಪ್ರಾಪ್ತಿರೂಪಕಾರ್ಯಕ್ಕೆ ಸಾಧನವಾಗಿ ಕರ್ತಾವಾದ ತನ್ನ ಕಾರ್ಯವೂ, ದೈವವಾದ ಶ್ರಿಯಃಪತಿಯ ಕಾರ್ಯವೂ, ಎರಡೂ ಆವಶ್ಯಕವು. ಇವುಗಳಲ್ಲಿ ಶ್ರಿಯಃಪತಿಯ ಕಾರ್ಯವು ಪ್ರಧಾನವಾದುದಾಗಿ ಕರುಣೆಯಿಂದ ಕೂಡಿದುದಾಗಿ ಸಿದ್ಧೋಪಾಯನೆಂದೆನಿಸುತ್ತದೆ. ಅಂತಹ ಕಾರುಣ್ಯೋತ್ತೇಜಕವಾದ ಜೀವಾತ್ಮನ ಕಾರ್ಯಗಳು ಭಕ್ತಿಪ್ರಪತ್ತಿಗಳಾಗಿ ಸಾಧ್ಯೋಪಾಯಗಳೆನಿಸುತ್ತವೆ ಎಂದು ಮುಂದಿನ ವಾಕ್ಯದಿಂದ ಉಪದೇಶಿಸುತ್ತಾರೆ. ಚೇತನನು ಸರ್ವೇಶ್ವರನಿಗೆ ಅಧೀನವಾದುದರಿಂದ, ಚೇತನನ ಕಾರ್ಯವೂ ಸರ್ವೇಶ್ವರನ ಕಾರ್ಯವೂ ಎರಡೂ ಆವ

ಶ್ರಿಯಃಪತಿ ಸ್ಸಿದ್ಧೋಪಾಯಃ, ಭಕ್ತಿ ಪ್ರಪತ್ತೀ ಸಾಧ್ಯೋಪಾಯೌ.

ಇಪ್ಪಡಿಪ್ಪಟ್ಟ ಕೃಪಾವಿಶಿಷ್ಟನಾನ ವೀಶ್ವರ್ (೧) "ಕೃಷ್ಣಂ ಧರ್ಮಂ ಸನಾತನಂ" ಎಙ್ಗಿರಪಡಿಯೇ ಸಿದ್ಧೋಪಾಯಮ್. ಇವನುಕ್ಕು ಪ್ರಸಾದನಙ್ಗಳಾನ ಭಕ್ತಿಪ್ರಪತ್ತಿಗಳ್ ಸಾಧ್ಯೋಪಾಯಙ್ಗಳ್.

ಶ್ಯಕವು. ಆದರೆ ಸರ್ವೇಶ್ವರನು ಸ್ವತಂತ್ರಿಸಿ ಮಾಡಿದ ಕಾರ್ಯದಲ್ಲಿ ಚೇತನ ಕಾರ್ಯಸಂಬಂಧವು ಯಾವುದೂ ಇರುವುದಿಲ್ಲವು.

ಇಪ್ಪಡಿ ಪಟ್ಟ – ಹೀಗೆ ಪ್ರಯೋಜನ ಪರಂಪರೆಗಳನ್ನು ನಮಗೆ ಉಂಟು ಮಾಡುವ, **ಕೃಪಾವಿಶಿಷ್ಟನಾನ** – ಕೃಪೆಯಿಂದ ಕೂಡಿದ, **ಈಶ್ವರ್** - ಸರ್ವೇಶ್ವರನು, **"ಕೃಷ್ಣಂ ಧರ್ಮಂ ಸನಾತನಂ"** - "ಶ್ರೀಕೃಷ್ಣನು ಅನಾದಿಯಾಗಿರುವ ಧರ್ಮವೆಂದು, ಸಿದ್ಧೋಪಾಯನೆಂದು ಹೇಳಲ್ಪಟ್ಟಿರುತ್ತದೆ", **"ಯೇಚ ವೇದವಿದೋ ವಿಪ್ರಾಃ ಯೇಚಾಧ್ಯಾತ್ಮವಿದೋಜನಾಃ । ತೇವದಂತಿ ಮಹಾತ್ಮಾನಂ ಕೃಷ್ಣಂ ಧರ್ಮ ಸನಾತನಂ"** ಎಂಬುದು ಪೂರಾ ಶ್ಲೋಕವು. **ಎಙ್ಗಿರಪಡಿಯೇ** - ಎಂದು ಹೇಳಿರುವ ಹಾಗೆ, **ಸಿದ್ಧೋಪಾಯಮ್ ; ಇವನುಕ್ಕು**-ಈ ಸರ್ವೇಶ್ವರನಿಗೆ, **ಪ್ರಸಾದನಙ್ಗಳಾನ**-ಪ್ರಸನ್ನತೆಯನ್ನುಂಟುಮಾಡುವ, ಭಕ್ತಿಪ್ರಪತ್ತಿಗಳು ಸಾಧ್ಯೋಪಾಯಗಳು. ಶ್ರಿಯಃಪತಿಯು ಸಿದ್ಧೋಪಾಯನೆಂಬುದಕ್ಕೆ ಅನೇಕ ಶ್ರುತಿ ಪ್ರಮಾಣಗಳುಂಟು. ಅವುಗಳಲ್ಲಿ **"ನಾಯಮಾತ್ಮಾ ಪ್ರವಚನೇನ ಲಭ್ಯೋ ನಮೇಧಯಾ ನ ಬಹುನಾ ಶ್ರುತೇನ । ಯಮೇವೈಷ ವೃಣುತೇ ತೇನ ಲಭ್ಯಸ್ತಸ್ಯೈಷ ಆತ್ಮಾ ವಿವೃಣುತೇ ತನೂಂಸ್ವಾಂ॥"** (ಮುಂ. ೩ ೧. ೩) ಎಂಬುದೊಂದಾಗಿರುತ್ತದೆ. ಈ ಪರಮಾತ್ಮನು ಕೇವಲ ಶ್ರವಣ ಮನನ ನಿಧಿಧ್ಯಾಸನಾದಿಗಳಿಂದ ಲಭ್ಯನಲ್ಲವು. ಈ ಪರಮಾತ್ಮನು ಯಾವ ಉಪಾಸಕನನ್ನು ಯೋಗ್ಯನನ್ನಾಗಿ ಭಾವಿಸುವನೋ (ವರಿಸುವನೋ) ಅವನಿಂದ ಹೊಂದಲ್ಪಡುವನು ಅಂತಹ ಉಪಾಸಕನಿಗೆ ಈ ಪರಮಾತ್ಮನು ತನ್ನ ದಿವ್ಯಮಂಗಳ ವಿಗ್ರಹವನ್ನು ಪ್ರಕಾಶಿಸುವ ಹಾಗೆ ಮಾಡುವನು, ಅದೂ ಅಲ್ಲದೆ ಪರಿಪೂರ್ಣನಾದ ತನ್ನ ಅನುಭವವನ್ನು ಉಂಟುಮಾಡುವನು". ಇದರಿಂದ ಪರಮಾತ್ಮನು ಯಾವನು ತನಗೆ ಪ್ರಿಯತಮನೆಂದು ಭಾವಿಸುವನೋ ಆತನಿಗೆ ಸಿದ್ಧೋಪಾಯನಾಗಿ ಕರೆಣಿಸುವನು ; ಹಾಗೆ ಪ್ರಿಯತಮನೆಂದು ಭಾವಿಸಬೇಕಾದರೋ ಪ್ರೀತಿರೂಪಾಪನ್ನ

(೧) ಭಾರತ. ವನ. ೭೧ ೯೨೩.

ನ್ಯಾಸ ಮಾತ್ರದಿಂದ ಉಪಾಯ ಕುರಿತಾಗಿ
ಅನ್ಯ ನಿರಪೇಕ್ಷ ಸಿದ್ಧಾಂತ

೨. ಪ್ರಪತ್ತೇರಧಿಕಾರಿ ವಿಶೇಷಣತ್ವ ವಾದ ನಿರಾಸಃ

ಓರಧಿಕಾರಿ ವಿಶೇಷತ್ತುಕ್ಕು ಕರ್ತವ್ಯಮಾಗ "ಮಾಮೇಕಂ ಶರಣಂ

ವಾದ ಏಕಾಂತ ಮನಸ್ಸಿನಿಂದ ಭಗವದುಪಾಸನೆ ಮಾಡಿಯೇ ತೀರಬೇಕು ಅಥವಾ ಶರಣಾಗತಿಯನ್ನು ಮಾಡಬೇಕು. ಆದುದರಿಂದ ಭಗವದುಪಾಸನ ಶರಣಾಗತಿಗಳು ಆವಶ್ಯಕವು. ಇವುಗಳ ಆವಶ್ಯಕತೆಯೇ ಇಲ್ಲದೆ ಪ್ರಿಯತಮನಾಗಿ ಎಂದಿಗೂ ಭಾವಿಸಲಾರನು. ಆದುದರಿಂದ ಸಿದ್ಧೋಪಾಯನಾದ ಸರ್ವೇಶ್ವರನ ಕೃಪೆಯೂ, ಸಾಧ್ಯೋಪಾಯವಾದ ಭಕ್ತಿಯಾಗಲಿ ಅಥವಾ ಪ್ರಪತ್ತಿಯಾಗಲಿ ಎರಡೂ ಮುಕ್ತೈಶ್ವರ್ಯಪ್ರಾಪ್ತಿಗೆ ಆವಶ್ಯಕವೆಂಬ ಭಾವವು.

ಸುಕೃತ ಪರಿಪಾಕವಿದ್ದುದಾದರೆ, ಕರುಣಾಸಾಗರನಾದ ಶ್ರಿಯಃಪತಿಯು ಯಾವಾಗಲೂ ಸಿದ್ಧೋಪಾಯನಾಗಿದ್ದುಕೊಂಡು, ಈತನ ಮೂಲಕ ವ್ಯಾಜರೂಪಗಳಾದ ಸಾಧ್ಯೋಪಾಯಗಳಲ್ಲಿ ಒಂದನ್ನು ಅನುಷ್ಠಿಸುವ ಹಾಗೆ ಮಾಡಿ, ಆತನ ಪಾಪಗಳನ್ನೆಲ್ಲಾ ನಿರ್ಮೂಲಮಾಡಿ, ಆತನನ್ನು ಪ್ರಿಯತಮನಾಗಿ ಎಣಿಸಿ, ಆತನಿಗೆ ಅಂತಿಮಸ್ಮೃತಿ, ದೇಹಾವಸಾನ, ಬ್ರಹ್ಮನಾಡೀ ಪ್ರವೇಶ, ಅರ್ಚಿರಾದಿ ಗಮನ, ದಿವ್ಯ ವೈಕುಂಠಪ್ರಾಪ್ತಿ, ತನ್ನೊಂದಿಗೆ ಸಾಯುಜ್ಯ, ಪರಿಪೂರ್ಣನಾದ ತನ್ನ ಅನುಭವ, ಇವೆಲ್ಲವನ್ನೂ ತಾನೇ ಆಗಲೂ ಸಿದ್ಧೋಪಾಯನಾಗಿ ಮಾಡಿಸುವನೆಂಬುದು ಮುಖ್ಯ ತಾತ್ಪರ್ಯವು.

೨. ಎರಡನೆಯ ಪೂರ್ವಪಕ್ಷವು. ಚರಮಶ್ಲೋಕದಲ್ಲಿ ಸರ್ವೇಶ್ವರನು "ಮಾಮೇಕಂ ಶರಣಂ ವ್ರಜ" ಎಂದು ಏಕಶಬ್ದವಿರುವುದರಿಂದ, ಸರ್ವೇಶ್ವರನೊಬ್ಬನೇ ಉಪಾಯವೇ ವಿನಾ, ಇನ್ನು ಯಾರಾಗಲಿ, ಯಾವುದಾಗಲಿ ಉಪಾಯವಾಗಲಾರದು. ಈ ಏಕ ಶಬ್ದವು ಸಾರ್ಥಕ್ಯ ಹೊಂದಬೇಕಾದರೆ ಇನ್ನು ಯಾವುದನ್ನೂ ಅಂಗೀಕರಿಸಬಾರದು. ಅದಕ್ಕಾಗಿ ಭರನ್ಯಾಸವನ್ನು ಉಪಾಯವಾಗಿ ವರಿಸುವುದು ನ್ಯಾಯವಲ್ಲವೆಂದು ಪೂರ್ವಪಕ್ಷಿಗಳ ಭಾವವು. ಆದರೆ ಮುಂದೆ ಶರಣಂ ವ್ರಜ ಎಂದು ಶರಣಾಗತಿಯೂ ಉಪಾಯವಾಗಿ ವಿಧೇಯವಾಗಿದೆಯಲ್ಲಾ ಎಂದರೆ, ಅದು ಇಂತಹ ಭಗವತ್ಕೃಪೆಗೆ ಅರ್ಹನಾದ ಅಧಿಕಾರಿಗೆ ವಿಶೇಷಣ ರೂಪವೇ ವಿನಾ ಸಾಕ್ಷಾತ್ ಉಪಾಯವಾಗುವುದಿಲ್ಲವು. ಹೇಗೆಂದರೆ ಸಂಧ್ಯೋಪಾಸನೆ ಮಾಡುವ ಅಧಿಕಾರಿಗೆ ಶುಚಿತ್ವವು ಹೇಗೆ ಅಧಿಕಾರಿ ವಿಶೇಷಣವಾಗಿ ಸ್ವತಃ ಉಪಾಯವಲ್ಲವೋ ಹಾಗೆ ಎಂಬ ಭಾವವು. ಈ ವಾದವನ್ನು ಮುಂದಿನ ವಾಕ್ಯದಿಂದ ಖಂಡಿಸುತ್ತಾರೆ.

ವ್ರಜ" ಎನ್ರು ವಿಧಿಕ್ಕಪ್ಪಡುಗಿರ ಪ್ರಪತ್ತಿಯೈ ಅಧಿಕಾರಿ ವಿಶೇಷಣಮೆನ್ರು ಶಿಲರ್ ಶೊನ್ನವಿಡಮ್ ಅಧಿಕಾರಿ ವಿಶೇಷಣತ್ತುಕ್ಕು ಚ್ಚೊಲ್ಲುಮ್ ಲಕ್ಷಣ ತ್ತೋಡು ಶೇರಾಮೈಯಾಲೇ ಅತಿ ವಾದಮ್.

---

೨. ಪ್ರಪತ್ತಿಯು ಅಧಿಕಾರಿವಿಶೇಷಣವೆಂಬ ವಾದದ ನಿರಾಸವು.

ಓರಧಿಕಾರ ವಿಶೇಷತ್ತುಕ್ಕು - ಒಬ್ಬ ಮುಖ್ಯನಾದ ಅಧಿಕಾರಿಗೆ, ಇಲ್ಲಿ ಪ್ರಪತ್ತಿನಿಷ್ಠನು ಹೇಳಲ್ಪಟ್ಟನು, ಅಂತವನಿಗೆ, **ಕರ್ತವ್ಯಮಾಗ** - ಆವಶ್ಯಕ ವಾಗ ಮಾಡಬೇಕಾದ, **ಮಾಮೇಕಂ ಶರಣಂವ್ರಜ** - ನನ್ನೊಬ್ಬನನ್ನೇ ಶರಣು ಹೊಂದು, **ಎನ್ರು** - ಎಂಬದಾಗಿ, **ವಿಧಿಕ್ಕಪಡುಗಿರ** - ವಿಧಿಸಲ್ಪಡುವ, **ಪ್ರಪತ್ತಿ** ಯನ್ನು, ಅಧಿಕಾರಿ ವಿಶೇಷಣವೆಂದು, **ಶಿಲರ್ ಶೊನ್ನವಿಡಮ್** - ಕೆಲವರು ಹೇಳಿದ ಸ್ಥಳವಲ್ಲಿ, **ಅಧಿಕಾರಿ ವಿಶೇಷಣತ್ತುಕ್ಕು** - ಅಧಿಕಾರಿಯ ವಿಶೇಷಣಕ್ಕೆ, **ಶೊಲ್ಲುಮ್ ಲಕ್ಷಣತ್ತೋಡು** - ಹೇಳುವ ಲಕ್ಷಣಸ್ವರೂಪದೊಂದಿಗೆ, **ಶೇರಾ ಮೈಯಾಲೇ** - ಸೇರದೇ ಇರುವುದರಿಂದ, **ಅತಿ ವಾದಮ್** - ಬರೀ ಹೆಚ್ಚಾದ ವಾದವೇ ವಿನಾ ಶಾಸ್ತ್ರಸಮ್ಮತ ವಿಷಯವಲ್ಲವು. ಯಾವುದೆಂಡರೆ ಒಬ್ಬ ಅಧಿಕಾರಿಗೆ ಇರಬೇಕಾದ ವಿಶೇಷಣವನ್ನು ಬೋಧಿಸುತ್ತದೆಂಬ ವಾದವು. **ಮಾಮೇಕಂ ಶರಣಂ ವ್ರಜ** ಎಂಬ ವಾಕ್ಯದಲ್ಲಿ, **ಮಾಮೇಕಂ ವ್ರಜ** ಎಂಬುದರಿಂದ ಭಗವಂತನನ್ನು ಪ್ರಧಾನನಾದ ಸಿದ್ಧೋಪಾಯನಾಗಿ ಹೊಂದು; **ಶರಣಂ ವ್ರಜ** ಎಂಬುದರಿಂದ ಪ್ರಪತ್ತಿಯನ್ನು ಸಾಧ್ಯೋಪಾಯವಾಗಿ ಹೊಂದು ಎಂಬದಾಗಿ ಆಚಾರ್ಯರವರ ಅಭಿಪ್ರಾಯವಾದುದರಿಂದ **ಎನ್ರು ವಿಧಿಕ್ಕಪಡುಗಿರ ಪ್ರಪತ್ತಿಯೈ** ಎಂದು ಹೇಳಿರುತ್ತಾರೆ. ಇದರಿಂದ ಅಧಿಕಾರಿ ವಿಶೇಷಣವು ವಿಧಿವಾಕ್ಯ ವಿಷಯವಾಗಲಾರದೆಂಬ ಅಭಿಪ್ರಾಯವು. ಅಧಿಕಾರಿಗೆ ವಿಧೇಯವಾಗಿ ಹೇಳಿರುವುದಕ್ಕೆ ಪೂರ್ವಭಾವಿಯಾಗಿಯೇ ಅಧಿಕಾರಿ ವಿಶೇಷಣ ಧರ್ಮವು ಆತನಲ್ಲಿ ಇರಬೇಕಾಗುತ್ತದೆ. ಹಾಗಾದರೇನೇ ಆತನು ಅಧಿಕಾರಿಯಾಗುತ್ತಾನೆ. ಕರ್ತವ್ಯವಾಗಿ ಹೇಳಿರುವುದು ಅಧಿಕಾರಿ ಮಾಡ ತಕ್ಕದ್ದು. ಅದು ಹೇಗೆ ಅಧಿಕಾರಿ ವಿಶೇಷಣವಾದೀತೆಂಬ ಭಾವವು. ಪ್ರಪತ್ತಿಯು ಏತಕ್ಕೆ ಅಧಿಕಾರಿ ವಿಶೇಷಣವಲ್ಲವೆಂದರೆ ಅಧಿಕಾರಿ ವಿಶೇಷಣ ಲಕ್ಷಣವು ಅದರಲ್ಲಿಲ್ಲವು. ಅಧಿಕಾರಿ ವಿಶೇಷಣಕ್ಕೆ ಲಕ್ಷಣವು ಯಾವುದು ಎಂಬ ಪ್ರಶ್ನೆಯು ಉಂಟಾಗತಕ್ಕದ್ದು ಯುಕ್ತವು. ಇದಕ್ಕೆ ಲಕ್ಷಣವನ್ನು ಶ್ರೀ ಯಾಮುನೇಯರವರು ಅವರು ಅನುಗ್ರಹಿಸಿರುವ ಆಗಮಪ್ರಾಮಾಣ್ಯವೆಂಬ ಗ್ರಂಥದಲ್ಲಿ "**ಸಿದ್ಧಮೇವಹಿ**

ಸರ್ವತ್ರ ನಿಯೋಜ್ಯಸ್ಯ ವಿಶೇಷಣಮ್" "ನಿಯೋಜ್ಯನು - ಅಧಿಕಾರಿಯು, ಆತನಿಗೆ ವಿಶೇಷಣವಾದುದು ಆತನಿಗೆ ಕರ್ತವ್ಯವಾಗಿ ಯಾವುದು ವಿಧಿಸಲ್ಪಟ್ಟಿರುತ್ತದೋ ಅದಕ್ಕೆ ಮೊದಲೇ ಸಿದ್ಧವಾದುದಾಗಿರತಕ್ಕದ್ದು" ಎಂದು ಮೀಮಾಂಸಕರ ಅಭಿಪ್ರಾಯವನ್ನು ಅನುಮೋದಿಸಿ ಹೇಳಿರುತ್ತಾರೆ. ಪ್ರಪತ್ತಿಯು ಮೋಕ್ಷಫಲ ಕಾಮನೆಯಿಂದಲಾಗಲಿ ಪ್ರಾಯಶ್ಚಿತ್ತರೂಪಫಲದಿಂದಾಗಲಿ ಅಧಿಕಾರಿ ವಿಶೇಷಣವೇ ಎಂದು ಹೇಳಬಹುದಲ್ಲಾ ಎಂದರೆ, ಈ ಫಲಗಳನ್ನು ಅಚೇತನವಾದ ಪ್ರಪತ್ತಿಯು ಸಾಕ್ಷಾತ್ತಾಗಿ ಉಂಟುಮಾಡಲಾರದು. ಭಗವತ್ಕೃಪೆಯಿಂದ ಫಲವೇ ವಿನಾ ಇವುಗಳಿಂದಲ್ಲವು. ಆದುದರಿಂದ ಈ ವ್ಯಾಜವಾದ ಕರ್ತವ್ಯವಾದ ಪ್ರಪತ್ತಿಯು ಅಧಿಕಾರಿ ವಿಶೇಷಣವಾಗಲಾರದು. ಪ್ರಪತ್ತಿಯು ಅಧಿಕಾರಿ ವಿಶೇಷಣವಾದ ಪಕ್ಷದಲ್ಲಿ ವಿಧೇಯವಾಗಿ ಕರ್ತವ್ಯವ್ಯಾವುದು ಎಂಬ ಪ್ರಶ್ನವು ನಿರುತ್ತರವಾದುದಾಗುತ್ತದೆ. ಅದೂ ಅಲ್ಲದೆ ಈ ಪ್ರಪತ್ತಿಗೆ ಸರ್ವಾಧಿಕಾರತ್ವವನ್ನು ಸ್ಥಾಪಿಸಿರುವುದರಿಂದಲೂ, ಅರ್ಥಿತ್ವ ಸಾಮರ್ಥ್ಯವೆರಡೂ ಸಾಮಾನ್ಯ ವಿಶೇಷಣಗಳಾಗಿರುವುದರಿಂದಲೂ, ಇನ್ನು ಯಾವ ವಿಶೇಷಣವಪೇಕ್ಷೆಯೂ ಈ ಅಧಿಕಾರಿಗೆ ಇಲ್ಲವು ಎಂದು ಹಿಂದೆಯೇ ಅಧಿಕಾರಿ ವಿಭಾಗಾಧಿಕಾರದಲ್ಲಿ ತಿಳಿಸಿರುತ್ತಾರೆ. ಅದೂ ಅಲ್ಲದೆ ಈ ಪ್ರಪತ್ತಿಯು ಒಂದು ಕ್ಷಣಕಾಲವರ್ತಿಯಾಗಿ, ಫಲವನ್ನು ತಾನೇ ಹೇಗೆ ಸ್ವತಂತ್ರಿಸಿ ಸಾಧಿಸಿ ಕೊಡುವುದಾಗಿ ಅಧಿಕಾರಿ ವಿಶೇಷಣವಾದೀತು ? ಈ ಪ್ರಪತ್ತಿಯು ಅಧಿಕಾರಿ ವಿಶೇಷಣವಾದರೆ ಅದೇಕಾರಣದಿಂದಲೇ ವಿಧೇಯವಾದುದಾಗಿ ಕರ್ತವ್ಯವಾಗಿ ಸಾಧ್ಯೋಪಾಯವಾಗಿ ಹೇಳಿರುವ ಭಕ್ತಿಮಾರ್ಗವೂ ಕೂಡ ಅಧಿಕಾರಿ ವಿಶೇಷಣದಲ್ಲೇ ಸೇರಿಸಬೇಕಾಗಿ ಬಂದೀತು. ಆದರೆ ಮುಮುಕ್ಷುರ್ಬ್ರಹ್ಮೋಪಾಸೀತ ಎಂಬ ವಿಧಿವಾಕ್ಯವು ಸಾಕ್ಷಾತ್ತಾಗಿರುವುದರಿಂದ ಭಕ್ತಿಯು ಸಾಧ್ಯೋಪಾಯವೆಂದರೆ ಅದೇ ಕಾರಣದಿಂದಲೇ ಪ್ರಪತ್ತಿಯೂ ಸಾಧ್ಯೋಪಾಯವೇ. "ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ" "ಯದ್ಯೇನ ಕಾಮಕಾಮೇನ ನ ಸಾಧ್ಯಂ ಸಾಧನಾನ್ತರೈಃ । ತೇನತೇನಾಪ್ಯತೇ ತತ್ರನ್ಯಾಸೇನೈವ ಮಹಾಮುನೇ ॥" "ಓಮಿತ್ಯಾತ್ಮಾನಂ ಯುಂಜೀತ" ಇತ್ಯಾದಿ ಪ್ರಮಾಣಗಳು ಸಾಧ್ಯೋಪಾಯವೇ ಪ್ರಪತ್ತಿ ಎಂದು ಪ್ರಕಟಿಸುತ್ತವೆ.

ಇದೂ ಅಲ್ಲದೆ, ಮಾಮೇಕಂ ಶರಣಂ ವ್ರಜ ಎಂಬ ವಾಕ್ಯಮಾತ್ರವಲ್ಲದೆ, ಇನ್ನೂ ಇತರ ಪ್ರಪತ್ತಿಯನ್ನು ವಿಧಿಸುವ ವಾಕ್ಯಗಳನ್ನು ಪರಿಶೀಲಿಸಿದರೂ ಪ್ರಪತ್ತಿಯು ಸಾಧ್ಯೋಪಾಯವೆಂದೇ, ಭಗವಂತನನ್ನು ಪ್ರಧಾನವಾದ ಸಿದ್ಧೋಪಾಯನೆಂದೇ, ವಿಧಿಸಿರುತ್ತವೆಯೋ ವಿನಾ, ಅಧಿಕಾರಿ ವಿಶೇಷಣವೆಂದು ಎಲ್ಲಿಯೂ ತೋರಿಬರುವುದಿಲ್ಲವು. "ತಂಗಚ್ಛ ಶರಣಂ ಹರಿಮ್" ಎಂಬಲ್ಲಿ ಸಿದ್ಧೋಪಾಯನು

ಪ್ರಪತ್ತೇಃ ಅಧಿಕಾರಿ ವಿಶೇಷಣತ್ವೇ ಬಾಧಕಮಾಹ

ಇಜ್ಞನಲ್ಲಾದಪ್ಪೋದು ಈಶ್ವರನುಪಾಯಮಾಯ್ ನಿರ್ಕ, ಉಪಾಸನಾದಿ ಶಾಸ್ತ್ರಙ್ಗಳುಮ್ ಅಧಿಕಾರಿ ವಿಶೇಷಣಙ್ಗಳಾಮ್. ಆಗೈಯಾಲ್

ಹರಿ ಎಂಬ ಪ್ರಪತ್ತಿ ಸಾಧ್ಯೋಪಾಯವೆಂದೂ ವಿಧಿಸಿರುತ್ತದೆ. "ಓಮಿತ್ಯಾತ್ಮಾನಂ ಯುಂಜೀತ" "ಆತ್ಮಾನಂ ಮಯಿ ನಿಕ್ಷಿಪೇತ್" ಇತ್ಯಾದಿ ಪ್ರಮಾಣಗಳಲ್ಲಿ ಪ್ರಪತ್ತಿಯು ಸಾಧ್ಯೋಪಾಯವೆಂದೇ ವಿಧಿಸಿರುತ್ತದೆ. ಅಧಿಕಾರಿ ವಿಶೇಷಣಕ್ಕೆ ಹೀಗೆ ವಿಧೇಯತ್ವವಿಲ್ಲದಿರುವುದರಿಂದ ಪ್ರಪತ್ತಿಯು ಅಧಿಕಾರಿ ವಿಶೇಷಣವೆಂದಿಗೂ ಅಲ್ಲವು. ಇಂತಹ ಹೇಳಿದ ಅಭಿಪ್ರಾಯಗಳನ್ನೆಲ್ಲಾ ಸಂಗ್ರಹವಾಗಿ ತಿಳಿಸುವುದಕ್ಕಾಗಿ ಒಂದು ಕಾರಿಕೆಯನ್ನು ಅನುಗ್ರಹಿಸಿರುತ್ತಾರೆ. ಅದು ಯಾವುದೆಂದರೆ:— "ಫಲಾದಿಭ್ಯೋ ವಿಭಿನ್ನತ್ವಾತ್ಪ್ರಪತ್ತಿರ್ವಿಧ್ಯನನ್ವಯಾತ್ । ವಿಧೇಯಾಂತರ ನಾಪೇಕ್ಷ್ಯಾನಾಧಿಕಾರಿ ವಿಶೇಷಣಮ್" ಪ್ರಪತ್ತಿಯು ಮೂರು ಕಾರಣಗಳಿಂದ ಅಧಿಕಾರಿವಿಶೇಷಣವಲ್ಲವು:—(೧) ಫಲ, ಆದಿಶಬ್ದದಿಂದ ನಿಮಿತ್ತವು ಹೇಳಲ್ಪಟ್ಟಿದೆ, ಇವುಗಳಿಗಿಂತಲೂ ಪ್ರಪತ್ತಿಯು ಬೇರೆಯಾದುದರಿಂದಲೂ, (೨) ಪ್ರಪತ್ತಿಗೆ ವಿಧಿಗೆ ಅನನ್ವಯವು ಸಂಭವಿಸುವದರಿಂದಲೂ (೩) ಪ್ರಪತ್ತಿಯಲ್ಲದೆ ಬೇರೆ ಯಾವುದನ್ನೂ ಕರ್ತವ್ಯವೆಂಬದಾಗಿ ಹೇಳದೆ ಇರುವದರಿಂದಲೂ, ಅದು ಅಧಿಕಾರಿ ವಿಶೇಷಣವಲ್ಲವು ಎಂದು ಹೇಳಿರುತ್ತಾರೆ. ಹೀಗೆ ಅಭಿಪ್ರಾಯವಾದರೆ ಚರಮ ಶ್ಲೋಕದಲ್ಲಿ ಮಾಮೇಕಂ ಶರಣಂ ವ್ರಜ ಎಂಬ ವಾಕ್ಯದಲ್ಲಿ ಮಾಮೇಕಂ ಎಂದು ತಾನೊಬ್ಬನೇ ಉಪಾಯವೆಂದು ಹೇಳಿರುವದರಭಿಪ್ರಾಯವೇನೆಂದು ಪ್ರಶ್ನಿಸಿದರೆ ಅದಕ್ಕೆ ಉತ್ತರವದು "ಪ್ರಪತ್ತೇರ್ವ್ಯಾಜಮಾತ್ರತ್ವ ಮೇಕ ಶಬ್ದೇನ ದ್ಯೋತ್ಯತೇ" ಎಂಬುದರಿಂದ ಭಗವಂತನೇ ಸಾಕ್ಷಾದುಪಾಯಭೂತನಾಗಿ ಪ್ರಧಾನೋಪಾಯವೇ ವಿನಾ ಸಾಧ್ಯೋಪಾಯವಾದ ಪ್ರಪತ್ತಿಯು ವ್ಯಾಜ ಮಾತ್ರವೇ ಎಂದುಪದೇಶಿಸಿರುತ್ತಾರೆ.

ಹೀಗೆ ವಿಧಿವಾಕ್ಯವಾಗಿ ಕರ್ತವ್ಯವಾಗಿರುವ ಪ್ರಪತ್ತಿಯನ್ನು ಅಧಿಕಾರಿ ವಿಶೇಷಣವೆಂದು ಹೇಳಿದರೆ ಉಂಟಾಗುವ ಬಾಧಕವನ್ನು "ಇಜ್ಞನಲ್ಲಾದಪ್ಪೋದು" ಎಂದಾರಂಭಿಸಿ, ತಿಳಿಸುತ್ತಾರೆ.

ಇಜ್ಞನಲ್ಲಾದಪ್ಪೋದು - ಹೀಗೆ ಪ್ರಪತ್ತಿಯು ಸಾಧ್ಯೋಪಾಯವಾಗದೇ ಅಧಿಕಾರಿ ವಿಶೇಷಣವೇ ಆದರೆ, ಈಶ್ವರನೇ ಉಪಾಯಮಾಯ್ ನಿರ್ಕ -

ಪ್ರಪತ್ತಿಯುಮ್ ಕೂಡ ಉಪಾಯಮನ್ರೆನ್ರು ಶಿಲರ್ ಅತಿವಾದಮ್ ಪಣ್ಣಿಗಿರುದುವುಮ್ ಸಿದ್ಧೋಪಾಯತ್ತಿನುಡೈಯ ಪ್ರಾಧಾನ್ಯಮುಡಿಯಾಗ ವಿತ್ತನೈ. ಅದು ಪ್ರಧಾನಮಾನಪಡಿ :—ಪ್ರಸಾದನಙ್ಗಳಾಲೇ ಪ್ರತಿಬಂಧಕಮಾನ ನಿಗ್ರಹಮ್ ಶಮಿತ್ತಾಲ್ ಸ್ವಾಭಾವಿಕಾನುಭವತ್ತುಕ್ಕು ಪ್ಪ್ರಯೋ

ಸರ್ವೇಶ್ವರನೇ ಪ್ರಧಾನೋಪಾಯನಾಗಿ ನಿಂತಿರುವಾಗ, ಉಪಾಸನವೇ ಮೊದಲಾದ ಶಾಸ್ತ್ರಗಳೂ ಸಹ, ಅಧಿಕಾರಿ ವಿಶೇಷಣವಾಗಬೇಕಾಗುತ್ತದೆ. ಇಲ್ಲಿ ಆದಿ ಶಬ್ದದಿಂದ ಕರ್ಮಜ್ಞಾನನಿಷ್ಠೆಗಳು ಹೇಳಲ್ಪಟ್ಟವು.

ಹೀಗೆ ಬಾಧಕವು ಪ್ರಾಪ್ತವಾದರೆ, ಪ್ರಪತ್ತಿಯನ್ನು ಅಧಿಕಾರಿ ವಿಶೇಷಣವೆಂದು ಕೆಲವು ಮಹನೀಯರುಗಳೇ ಅಭಿಪ್ರಾಯಪಡುತ್ತಾರಲ್ಲಾ ಅದಕ್ಕೆ ಕಾರಣವೇನೆಂದರೆ ತಿಳಿಸುತ್ತಾರೆ. ಸರ್ವೇಶ್ವರನು ಸಿದ್ಧೋಪಾಯನಾಗಿ ಪ್ರಧಾನೋಪಾಯವು ಸಾಧ್ಯೋಪಾಯವೂ ಸಹ ಒಂದುಂಟು ಎಂದು ಒಪ್ಪಿಕೊಂಡರೆ ಸಿದ್ಧೋಪಾಯಪ್ರಾಧಾನ್ಯಕ್ಕೆ ಎಲ್ಲಿ ನ್ಯೂನತೆ ಬರುತ್ತದೋ ಎಂದು ಪ್ರಪತ್ತಿಯು ಉಪಾಯವಲ್ಲ, ಅಧಿಕಾರಿವಿಶೇಷಣವೆಂದು ಹೇಳಿದರೆಂದು ತಿಳಿಸುತ್ತಾರೆ :— **ಅಗ್ಗೈಯಾಲ್** - ಇಂತಹ ಬಾಧಕಗಳು ಉಂಟಾಗುವದರ ದೆಶೆಯಿಂದ, **ಪ್ರಪತ್ತಿಯುಮ್ ಕೂಡ** - ಭರನ್ಯಾಸವೂ ಕೂಡ, **ಉಪಾಯ ಮನ್ರೆನ್ರು** - ಉಪಾಯವಲ್ಲವೆಂಬದಾಗಿ, **ಶಿಲರ್** - ಕೆಲವರು, **ಅತಿವಾದಮ್ ಪಣ್ಣಿಗಿರದುಮ್** - ಅತಿವಾದವನ್ನು ಮಾಡುವದೂ, **ಸಿದ್ಧೋಪಾಯತ್ತಿನುಡೈಯ** - ಸಿದ್ಧೋಪಾಯದ, **ಪ್ರಾಧಾನ್ಯಮುಡಿಯಾಗ ವಿತ್ತನೈ** - ಪ್ರಾಧಾನ್ಯದ ಮೂಲಕವಾಗಿ ಮಾತ್ರವೇ, ಹಾಗೆ ಹೇಳುತ್ತಾರೆಂಬ ಭಾವವು. ಆಗಲಿ, ಸರ್ವೇಶ್ವರನೇ ತಾನೇ ಪ್ರಧಾನ ಸಿದ್ಧೋಪಾಯನು ಹೇಗೆ ? ಎಂದರೆ ಅನೇಕ ಜನ್ಮಗಳನ್ನೆತ್ತಿದ್ದರೂ ಮೋಕ್ಷಪ್ರಾಪ್ತಿಗೆ ಪುಣ್ಯಾಪಾಪರೂಪಾನೇಕ ಪಾಪರಾಶಿಯ ಮೂಲಕ ಪ್ರತಿಬಂಧಕವಿದ್ದಿತು, ಇದು ಭಗವನ್ನಿಗ್ರಹ ಮೂಲಕ ಪ್ರತಿಬಂಧಕವಾಗಿತ್ತು. ಅದು ಕಳೆದು ಹೋದರೆ, ಮೋಕ್ಷಪ್ರಾಪ್ತಿಯು ಸ್ವಾಭಾವಿಕವಾಗಿಯೇ ಉಂಟಾಗುತ್ತದೆಂಬ ಭಾವವು. **ಅದು ಪ್ರಧಾನಮಾನಪಡಿ** - ಆ ಸಿದ್ಧೋಪಾಯವು ಮುಖ್ಯವಾದುದು ಏತರಿಂದೆಂದರೆ :—**ಪ್ರತಿಬಂಧಕಮಾನ ನಿಗ್ರಹಂ** - ಭಗವನ್ನಿಗ್ರಹವು ಭಗವದನುಗ್ರಹಕ್ಕೆ ಅಡ್ಡಿಯಾಗಿತ್ತು, ಅದನ್ನು ಈಗ **ಪ್ರಸಾದನಙ್ಗಳಾಲೆ ಶಮಿತ್ತಾಲ್** - ಆತನನ್ನು ಪ್ರಸನ್ನನಾಗಿ ಮಾಡಿಕೊಳ್ಳುವದರಿಂದ ಶಮನ ಹೊಂದುವ ಹಾಗೆ ಮಾಡಿದರೆ, **ಸ್ವಾಭಾವಿಕಾನುಭವತ್ತುಕ್ಕು** - ತನಗೆ ಸಹಜವಾದ ಆಕಾರ

ಪ್ರಾಪ್ತಿಗೆ, ಪ್ರಯೋಜನವಾಗೈಯಾಲೇ-ಪ್ರಯೋಜನವಾಗುವದರ ಮೂಲಕ ಪ್ರಾಧಾನ್ಯವೆಂಬ ಭಾವವು. ಈ ಮೇಲಿನ ವಾಕ್ಯಗಳಿಂದ ಮುಖ್ಯವಾಗಿ ನಮಗೆ ತೋರಿಬರುವದೇನೆಂದರೆ—ಪ್ರತಿಬಂಧಕನಿವೃತ್ತಿಯು ಸಾಧ್ಯೋಪಾಯಗಳಾದ ಭಕ್ತಿಪ್ರಪತ್ತಿಗಳ ಅನುಷ್ಠಾನದ ಮೂಲಕ ಉಂಟಾಗುತ್ತದೆ. ಹಾಗೆ ನಿವೃತ್ತಿಸಲು ಪ್ರಧಾನ ಕಾರಣವು ಶ್ರಿಯಃಪತಿಯ ಕೃಪೆಯು, ಪ್ರಸನ್ನನಾದ ಸರ್ವೇಶ್ವರನು ಸುಪ್ರೀತನಾಗಿ ಪ್ರತಿಬಂಧಕನಿವೃತ್ತಿಯನ್ನುಂಟುಮಾಡುವನು. ಅದರಿಂದ ಈ ಅನುಗ್ರಹ ಹೊಂದಿದ ಚೇತನನ ಸ್ವಸ್ವರೂಪಾವಿರ್ಭಾವವು ಉಂಟಾಗಿ ಅನಂತರ ಸರ್ವ ಶ್ರೇಯಸ್ಸೂ ಉಂಟಾಗುತ್ತದೆ. ಆದರೆ ಭಕ್ತಿ ಪ್ರಪತ್ತಿಗಳಿಂದ ಪ್ರತಿಬಂಧಕವು ತೊಲಗಿದರೆ, ಸ್ವಾಭಾವಿಕವಾದ ಆಕಾರದ ಆವಿರ್ಭಾವ ಉಂಟಾದರೆ, ಈಶ್ವರನಿಂದ ಆಗ ಆಗತಕ್ಕದ್ದೇನಿರುತ್ತದೆ? ಆಗ ಆತನು ಸಿದ್ಧೋಪಾಯನಾಗಿ ಪ್ರಧಾನ ಕಾರಣವೆಂಬುದು ದೂರೀಕೃತವಾಗಲಿಲ್ಲವೇ? ಎಂದರೆ ಹಾಗಲ್ಲವು. ಪ್ರತಿಬಂಧಕ ನಿವೃತ್ತಿಗಾಗಿ, ಸಾಧ್ಯೋಪಾಯಗಳಾದ ಭಕ್ತಿಪ್ರಪತ್ತಿಗಳಾದರೋ ಅಪ್ರಧಾನ ಗಳಾದರೂ ಅವಶ್ಯಕವು. ಆದರೆ ಇವುಗಳೇ ಸಾಕ್ಷಾತ್ತಾಗಿ ಪ್ರತಿಬಂಧಕ ನಿವೃತ್ತಿಯನ್ನುಂಟುಮಾಡಲಾರವು. ಅಚಿತ್ತಾದ ಇವುಗಳಿಗೆ ಆ ಶಕ್ತಿಯಿಲ್ಲವು. ಆದರೆ ಇವುಗಳಿಂದ ಸುಪ್ರೀತನಾದ ಶ್ರಿಯಃಪತಿಯು ಈತನ ಪ್ರತಿಬಂಧಕ ಗಳನ್ನು ಹೋಗಲಾಡಿಸಿ, ಅರ್ಚಿರಾದಿ ದ್ವಾರಾ ಸ್ವಸ್ವರೂಪಾವಿರ್ಭಾವ ಮೂಲಕ ತನ್ನನ್ನು ಹೊಂದುವ ಹಾಗೆ ಮಾಡುವನು. ಆದುದರಿಂದ ಸರ್ವೇಶ್ವರನು ಪ್ರಧಾನೋಪಾಯವು. ನೀರಿಗೆ ಒಂದು ಅಣೆಯನ್ನು ಕಟ್ಟಿದರೆ, ನೀರು ಪ್ರವಹಿಸಲು ಪ್ರತಿಬಂಧಕವಿರುತ್ತದೆ. ಪ್ರತಿಬಂಧಕವಾದ ಅಣೆಯು ಕಿತ್ತುಹೋದರೆ ನೀರು ಹೇಗೆ ಸ್ವಾಭಾವಿಕವಾಗಿಯೇ ಪ್ರವಹಿಸುತ್ತದೆಯೋ ಹಾಗೆ ಎಂಬ ಭಾವವು. ಈ ದೃಷ್ಟಾಂತದಲ್ಲೂ ಈಶ್ವರನ ಸಿದ್ಧೋಪಾಯತ್ವದ ಹಾಗೆ ಬೇರೆಯೊಂದು ಪ್ರಧಾನೋಪಾಯವು ತೋರಿಬರುವದಿಲ್ಲವಲ್ಲಾ ಎಂದರೆ; ನೀರು ಪ್ರವಹಿಸುವುದಕ್ಕೆ ಬೇಕಾದ ಅನುಕೂಲಗಳಾದ ತಗ್ಗಾದ ಭೂಮಿಯನ್ನುಂಟುಮಾಡುವುದೇ ಮೊದಲಾದವು ಭಗವತ್ಸಂಕಲ್ಪಕ್ಕೆ ಹೇಗೆ ಅಧೀನವೋ, ಹಾಗೆಯೇ ಪರಮಪದ ಗಮನಕ್ಕೂ ಈಶ್ವರನೇ ಪ್ರಧಾನೋಪಾಯವು ಎಂಬ ಭಾವವು. ಶ್ರುತಿಗಳೂ ಈ ಅಭಿಪ್ರಾಯವನ್ನೇ ಉಪದೇಶಿಸುತ್ತವೆ:—"ಅಮೃತಸ್ಯೈಷಸೇತುಃ" ಸರ್ವೇಶ್ವರನೇ ಮೋಕ್ಷಪ್ರಾಪಕನು, ಅಥವಾ ಸಂಸಾರಾರ್ಣವವನ್ನು ದಾಟಿಸುವವನು, "ಏಷಹ್ಯೇವಾನಂದಯಾತಿ" ಈತನೇ ಆನಂದವನ್ನುಂಟುಮಾಡುವವನು, "ಏಷ ಏವ ಸಾಧು ಕರ್ಮ ಕಾರಯತಿ" ಈತನೇ ಜೀವಾತ್ಮನಿಂದ ಸಾಧುವಾದ ಕರ್ಮವನ್ನು ಮಾಡಿಸುವವನು, "ಯಮೇಭ್ಯೋ ಲೋಕೇಭ್ಯ ಉನ್ನಿನೀಷತಿ" ಯಂ - ಯಾವ ಈ

ಜಕಮಾಗೈಯಾಲೇ. ಅದೆಙ್ಙನೇ ಯೆನ್ನಿಲ್—ರತ್ನತ್ತುಕ್ಕು ಅಳಕ್ಕತ್ತಾಲ್ ವರುಮ್ ಸ್ವಾಭಾವಿಕಮಾನ ಪ್ರಭಾವಿಕಾಸಮುಮ್ ಅದುಕ್ಕು ಅನುರೂಪಮಾನ ಭಗವತ್ಸಙ್ಕಲ್ಪ ಮಾತ್ರತ್ತಾಲೇ ಯಾನಾರ್ಪ್ಪೋಲೆ, ಮುಕ್ತನುಕ್ಕುಮ್ ವರುಮ್ ಜ್ಞಾನವಿಕಾಸಾದಿಗಳುಮ್ ಅದುಕ್ಕನುರೂಪಮಾಯ್ಕ್ಕೊಂಡು ವ್ಯವಸ್ಥಿತಮಾನ ಭಗವತ್ಸಙ್ಕಲ್ಪ ಮಡಿಯಾಗನಾಯು

ಭಕ್ತನನ್ನು **ಏಭ್ಯಲೋಕೇಭ್ಯಃ** - ಅಸ್ಥಿರಗಳಾದ ಈ ಕರ್ಮ ಲೋಕಗಳಿಂದ, **ಉನ್ನಿನೀಷತಿ** - ಕೈ ಹಿಡಿದು ಮೇಲಕ್ಕೆ ಎತ್ತುವನೋ” ಈ ಅಭಿಪ್ರಾಯವನ್ನೇ ಸಮರ್ಥನೆ ಮಾಡಲು ರತ್ನ ದೃಷ್ಟಾಂತವನ್ನು ತಂದಿರುತ್ತಾರೆ, ಹೇಗೆಂದರೆ :— **ರತ್ನತ್ತುಕ್ಕು ಅಳಕ್ಕತ್ತಾಲ್** - ಭೂಮಿಯಲ್ಲಿ ಸಿಕ್ಕಿರುವ ರತ್ನಕ್ಕೆ ಅದರ ಮೇಲಿರುವ ಕೊಳೆಯನ್ನು ತೆಗೆದುಹಾಕಿದರೆ, **ವರುಮ್** - ಉಂಟಾಗುವ, ಸ್ವಾಭಾವಿಕವಾದ, ಅದರ, **ಪ್ರಭಾ ವಿಕಾಸಮುಮ್** - ಕಾಂತಿಯ ಪ್ರಕಾಶವು, **ಅದುಕ್ಕು** - ಆ ಪ್ರಕಾಶಕ್ಕೆ, **ಅನುರೂಪಮಾನ** - ಯೋಗ್ಯವಾದ, **ಭಗವತ್ಸಙ್ಕಲ್ಪ ಮಾತ್ರತ್ತಾಲೇ ಯಾನಾರ್ಪ್ಪೋಲೆ** - ಭಗವತ್ಸಂಕಲ್ಪಮಾತ್ರದಿಂದಲಾದುದು ಹೇಗೋ, ಹಾಗೆಯೇ ಮುಕ್ತನಿಗೂ ಕೂಡ, **ವರುಮ್** - ಉಂಟಾಗುವ, **ಜ್ಞಾನವಿಕಾಸಾದಿಗಳುಮ್** - ಸ್ವಸ್ವರೂಪಾವಿರ್ಭಾವ ಮೂಲಕ ಪ್ರಾಪ್ತವಾಗುವ ಜ್ಞಾನವಿಕಾಸವೇ ಮೊದಲಾದವುಗಳೂ, ಇಲ್ಲಿ ಆದಿಪದದಿಂದ ಸಂಪೂರ್ಣಬ್ರಹ್ಮಾನುಭವವೂ ಕೈಂಕರ್ಯ ಪ್ರಾಪ್ತಿಯೂ ಹೇಳಲ್ಪಟ್ಟವು. **ಅದುಕ್ಕನುರೂಪಮಾಯ್ಕ್ಕೊಂಡು** - ಆ ಜ್ಞಾನವಿಕಾಸಕ್ಕೆ ಅನುರೂಪವಾಗಿ, ವ್ಯವಸ್ಥಿತವಾದ ಭಗವತ್ಸಂಕಲ್ಪದ, **ಅಡಿಯಾಗನಾಯಿರುಕ್ಕುಮ್** - ಮೂಲಕವಾಗಿರುತ್ತದೆ. ರತ್ನದ ಮೇಲಿನ ಕೊಳೆ ಹೋದರೆ ಎಂದರೆ ಸಾಣೆ ಹಿಡಿಯುವುದರ ಮೂಲಕ ಮೇಲಿನ ಧೂಳೆಲ್ಲವು ಹೋದರೆ, ಹೇಗೆ ರತ್ನದಲ್ಲೇ ಇದ್ದ ಪ್ರಭೆಯು ಸ್ವಯಂಪ್ರಕಾಶವಾಗಿ ಉಂಟಾದರೂ, ಆ ರತ್ನಕ್ಕೆ ಆ ಪ್ರಭೆಯಿರಲೆಂಬ ಸರ್ವೇಶ್ವರ ಸಂಕಲ್ಪವು ಹೇಗೆ ಪ್ರಧಾನ ಕಾರಣವೋ, ಹಾಗೆಯೇ ಇಲ್ಲೂ ಕೂಡ, ಈ ಜೀವಾತ್ಮನಿಗೆ ಕರ್ಮ ಮೂಲಕ ಈತನ ಜ್ಞಾನವಿಕಾಸವು ತಿರೋಧಾನವನ್ನು ಹೊಂದಿದ್ದುದು ಈಗ ಕರ್ಮವೆಲ್ಲಾ ತೊಲಗಿದುದರಿಂದ ಸ್ವಸ್ವರೂಪಾವಿರ್ಭಾವವು ಉಂಟಾದರೂ, ಅದು ಸರ್ವೇಶ್ವರ ಸಂಕಲ್ಪ ಮೂಲಕ ಉಂಟಾದುದರಿಂದ ಸರ್ವೇಶ್ವರನೇ ಪ್ರಧಾನೋಪಾಯನೆಂಬ ಭಾವವು. ಮುಕ್ತರ ವಿಷಯದಲ್ಲೇನೋ ಪರಮಾತ್ಮ ಸಂಕಲ್ಪ ಮೂಲಕ ಜ್ಞಾನ ತಿರೋಧಾನವು ತಪ್ಪಿ ಜ್ಞಾನವಿಕಾಸ ಉಂಟಾಗುತ್ತದೆ. ನಿತ್ಯರಿಗಾದರೋ ಜ್ಞಾನ

ರುಕ್ಕುಮ್. ಇಪ್ಪಡಿ ನಿತ್ಯರ್ಕ್ಕುಮ್. ಇವ್ವರ್ಥತ್ತೈ (೧) "ಇಚ್ಛಾತ ಏವ ತವ ವಿಶ್ವಪದಾರ್ಥಸತ್ತಾ" ಎನ್ರು ಅಭಿಯುಕ್ತರ್ ಸಙ್ಗ್ರಹಿತ್ತಾರ್ಗಳ್. ಅಗ್ಗೈಯಾಲ್ ಸಿದ್ಧೋಪಾಯಮ್ ಪ್ರಧಾನಮೇ ಯಾಗಿಲುಮ್, ತದ್ವಿಶೀ

ವಿಕಾಸಾದಿಗಳು ಅನಾದಿಯಾಗಿ ಉಂಟಲ್ಲಾ, ಅದು ಈಶ್ವರ ಸಂಕಲ್ಪಕ್ಕೆ ಅಧೀನ ಹೇಗೆ? ಎಂಬಾಕ್ಷೇಪವು ಉಂಟಾದೀತೆಂದು ಭಾವಿಸಿ ಹೇಳುತ್ತಾರೆ. "ಇಪ್ಪಡಿ ನಿತ್ಯರ್ಕ್ಕುಮ್" ಎಂಬ ವಾಕ್ಯದ ಮೂಲಕ ನಿತ್ಯರಿಗೂ ಜ್ಞಾನವಿಕಾಸಾದಿಗಳು ಅನಾದಿಯಾಗಿ ಉಂಟಾಗಿರುವುದೂ ಕೂಡ ಆತನ ನಿತ್ಯವಾಗಿರಬೇಕೆಂಬ ಸಂಕಲ್ಪದ ಮೂಲಕವೇ ಎಂದು ಹೇಳುತ್ತಾರೆ. ಈ ಅಭಿಪ್ರಾಯವು ಹಿಂದೆ ಪ್ರಧಾನಪ್ರತಿತಂತ್ರಾಧಿಕಾರದಲ್ಲಿ "ನಿತ್ಯಙ್ಗಳ್ ನಿತ್ಯೇಚ್ಛಾಸಿದ್ಧಙ್ಗಳ್" ಎಂದು ಹೇಳಲ್ಪಟ್ಟಿರುತ್ತದೆ. ([illegible]ನೆಯ ಪುಟ ನೋಡಿ) ಇವ್ವರ್ಥತ್ತೈ - ಈ ಅಭಿಪ್ರಾಯವನ್ನು "ಇಚ್ಛಾತ ಏವ" ಎನ್ರು - ಎಂಬದಾಗಿ, ಅಭಿಯುಕ್ತರ್ - ಪೂಜಾರ್ಹರಾದ ಕೂರತ್ತಾಳ್ವಾರವರು ಸಂಗ್ರಹಿಸಿದರು. ಈ "ಇಚ್ಛಾತ ಏವ" ಎಂಬ ಪೂರ್ಣ ಶ್ಲೋಕವನ್ನೂ ಅದರ ತಾತ್ಪರ್ಯಕ್ಕೂ ಹಿಂದೆ [illegible]ನೆಯ ಪುಟವನ್ನು ಪರಾಂಬರಿಸಿ.

ಇಷ್ಟುಮಾತ್ರ ಉಪಪಾದನೆಯನ್ನು ಮಾಡಿ, ತಾವು ತುಂಬಾ ವಿಶದವಾಗಿ ಉಪದೇಶಿಸಿದ ಸಾಧ್ಯೋಪಾಯವು ಅಪ್ರಧಾನವಾಗಿ ವ್ಯಾಜರೂಪವಾದರೂ ಆವಶ್ಯಕವಾಗಿ ಕರ್ತವ್ಯವೆಂಬ ಸಿದ್ಧಾಂತವನ್ನು ಸ್ಥಾಪಿಸಿ ನಿಗಮನ ಮಾಡಿ "ಅಗ್ಗೈಯಾಲ್" ಎಂಬ ವಾಕ್ಯದ ಮೂಲಕ ಹೇಳುತ್ತಾರೆ. ಹಿಂದೆ ನಮ್ಮಾಳ್ವಾರ್ ಪಾಶುರವಾದ "ಇನ್ರಿನ್ನು" ಎಂಬುವಕ್ಕೆ ವಿರುದ್ಧಾರ್ಥವನ್ನು ಕಲ್ಪಿಸಿ ಹೇಳಿದುದು ಸರಿಯಲ್ಲವೆಂದೂ, ಶ್ರೀ ದೇಶಿಕರವರ ಅಭಿಪ್ರಾಯವು ಹಾಗಲ್ಲವೆಂದೂ, ಪೂರ್ವಾಚಾರ್ಯರುಗಳ ವಾಕ್ಯಕ್ಕೆ ಇದು ವಿರುದ್ಧವಲ್ಲವೆಂದೂ ತೋರಿ, ಈ ವಿಷಯವನ್ನು ಮುಗಿಸುತ್ತಾರೆ — ಅಗ್ಗೈಯಾಲ್ - ಈಗ ತಾವು ಉಪದೇಶಿಸಿರುವುದು ಅಭಿಯುಕ್ತರ ಅಭಿಪ್ರಾಯಕ್ಕೆ ಅನುಗುಣವಾದುದರಿಂದ, ಸಿದ್ಧೋಪಾಯಮ್ ಪ್ರಧಾನಮೇಯಾಗಿಲುಮ್ - ಸಿದ್ಧೋಪಾಯನಾದ ಭಗವಂತನು ಮುಖ್ಯನಾದುದಾದರೂ. ತದ್ವಿಶೇಷಣಭೂತವಾದ, ಆತನನ್ನು ನಮ್ಮ ವಶಮಾಡಿಕೊಳ್ಳಲು ಉಚಿತ ಮುಕ್ತವಾದ, ಸಾಧ್ಯೋಪಾಯಾನುಷ್ಠಾನತ್ತುಕ್ಕು - ಭಗವದನುಗ್ರಹವನ್ನು ಸಾಧಿಸಿಕೊಳ್ಳಲು ಉಪಾಯಗಳಾದ ಭಕ್ತಿಪ್ರಪತ್ತಿಗಳ ಅನುಷ್ಠಾನಕ್ಕೆ, ಇನ್ರಿನ್ನು

---

(೧) ಶ್ರೀ ವೈಕುಂಠಸ್ತವ ೩೭.

ಕರಣಾರ್ಥವಾನ ಸಾಧ್ಯೋಪಾಯಾನುಷ್ಠಾನತ್ತುಕ್ಕು "ಇನ್ರೈನ್ಕೈ" ಇತ್ಯಾದಿ ಪೂರ್ವಾಚಾರ್ಯವಾಕ್ಯವಿರೋಧಮಿಲ್ಲೈ.

ಜೀವಪಾರತಂತ್ರ್ಯೇ ಪ್ರಮಾಣಾನಿ, ಸಾಧ್ಯೋಪಾಯಂ ನನಿರಾಕುರ್ವಂತಿ.

(೧) "ಯೋಮೇ ಗರ್ಭಗತಸ್ಯಾಪಿ ವೃತ್ತಿಂ ಕಲ್ಪಿತವಾನ್ ಪ್ರಭುಃ।

ಇತ್ಯಾದಿ ಪೂರ್ವಾಚಾರ್ಯರುಗಳ ವಾಕ್ಯಗಳ ವಿರೋಧವು ಇಲ್ಲವು. ಯದ್ಯಪಿ ಸ್ವಾಮಿ ಸಂಕಲ್ಪವಿಲ್ಲದೆ "ತೇನ ವಿನಾತೃಣಮಪಿ ನ ಚಲತಿ" ಎಂದು ಹೇಳಿರುವಹಾಗೆ ಈ ಪೃಥ್ವಿಯಲ್ಲಿಯಾಗಲಿ ನಿತ್ಯವಿಭೂತಿಯಲ್ಲಿಯಾಗಲಿ ಎಲ್ಲಿಯೂ ಏನೊಂದೂ ನಡೆಯುವದಿಲ್ಲವು. ಆದರೆ ಈ ಚೇತನನಿಗೆ ಸ್ವಾಮಿ ಸಂಕಲ್ಪವು ಫಲಿಸಬೇಕಾದರೆ ಈತನ ಲಘು ವ್ಯಾಪಾರವು ಅಲ್ಪವಾದರೂ, ಅದರಿಂದ ಸಂಪ್ರೀತನಾಗಿ ಮಾಡುವನೇ ವಿನಾ ಅದಿಲ್ಲದೆ ಮಾಡುವದಿಲ್ಲವು. ಈ ಅಲ್ಪವ್ಯಾಪಾರವು ಆತನ ವಶೀಕರಣಾರ್ಥವಾದುದು. ಇಲ್ಲಿ ತದ್ವಶೀಕರಣಾರ್ಥವೆಂದು ಪ್ರಯೋಗಿಸಿರುವದು ಶ್ರೀ ಭಾಷ್ಯಕಾರರ ವಾಕ್ಯವಾದ "ತಸ್ಯ ಚ ವಶೀಕರಣಂ ತಚ್ಛರಣಾಗತಿರೇವ" ಎಂದು ವಶೀಕರಣ ಪರಂಪರೆಯಂ ಕುರಿತ ಶ್ರುತ್ಯರ್ಥವನ್ನುಪಪಾದಿಸುವ ವಾಕ್ಯಸ್ಮರಣರೂಪವಾದುದೆಂದು ಭಾವಿಸತಕ್ಕದ್ದು. ಆದುದರಿಂದ ಶಾಸ್ತ್ರವಿಧ್ಯುಕ್ತಗಳಿಗನುಸಾರವಾಗಿ ಸರ್ವೇಶ್ವರನು ತಾನು ಪ್ರಧಾನೋಪಾಯವಾದರೂ ಈ ಶರಣಾಗತಿರೂಪ ಭರನ್ಯಾಸಾನುಷ್ಠಾನವನ್ನು ಎದುರು ನೋಡುವನು. ಇದಿಲ್ಲದೆ ಆತನು ರಕ್ಷಿಸನು. ಏತಕ್ಕೆಂದರೆ ಈತನಿಗೆ "ಕರ್ತಾ ಶಾಸ್ತ್ರಾರ್ಥವತ್ವಾತ್" ಎಂಬ ಸೂತ್ರದಲ್ಲಿ ಹೇಳಿರುವ ಹಾಗೆ ಕರ್ತೃತ್ವವನ್ನು ಕೊಟ್ಟಿರುವನು. ಈ "ಕಥಂಚಿದುಪಕಾರ" ದಿಂದ ಕೃತೇನೈಕೇನ ತುಷ್ಯತಿ ಎಂದು ಹೇಳಿರುವ ಹಾಗೆ ಪ್ರೀತಿಯನ್ನು ಹೊಂದಿ ಅನುಗ್ರಹ ಮಾಡುವನು. ಗೀತೆಯೂ ಕೂಡ ಪ್ರತಿಯೊಂದು ಪ್ರಯೋಜನಕ್ಕೂ ಕರ್ತಾವಿನ ಚೇಷ್ಟೆಯೂ, ದೈವಸಙ್ಕಲ್ಪವೂ ಎರಡೂ ಆವಶ್ಯಕವೆಂದು "ಅಧಿಷ್ಠಾನಂ ತಥಾಕರ್ತಾ" ಎಂದು ಆರಂಭಿಸಿ ಹೇಳುತ್ತದೆ. ನಮ್ಮ ಕರ್ತವ್ಯವೇನೂ ಇಲ್ಲದೆ ಸರ್ವೇಶ್ವರನೇ ನಡೆಸುತ್ತಾನೆ ಎಂದರೆ ಕರಣಕಳೇಬರಯೋಗವು ಕರ್ಮಾನುಭವಕ್ಕೆ ಮಾತ್ರವೇ ವಿನಾ ಸುಸಾಧನೆಯ ವಿಷಯದಲ್ಲಿ ನಿಷ್ಪ್ರಯೋಜನವಾದುದೆಂದು ಏರ್ಪಡುತ್ತದೆ. ಆಗ ಶಾಸ್ತ್ರವೈಯರ್ಥ್ಯವೂ, ಆಚಾರ್ಯ ನಿರಪೇಕ್ಷೆಯೂ ಉಂಟಾಗುತ್ತದೆ. ಚರಮಶ್ಲೋಕದಲ್ಲಿ ಶರಣಾಗತಿ ಮಾಡಿದರೇನೇ ಪಾಪಗಳಿಂದ ಬಿಡುಗಡೆಯೆಂದು ಕಂಠೋಕ್ತವಾಗಿ ಶ್ರೀ ಕೃಷ್ಣ

ಶೇಷವೃತ್ತಿ ವಿಧಾನೇಽಪಿ ಕಿಂ ಸುಪ್ತಸ್ಸೋಽಥವಾಗತಃ ||" ಇತ್ಯಾದಿಗಳುಮ್ ರಕ್ಷಕಾಂತರಂ ತೇಡಾನ್ಮೈಕ್ಕುಚ್ಚೊನ್ನವೈ ಯತ್ತನ್ನೈ. ಅಲ್ಲಾದಪೋದು

ಭಗವಾನ್ ಅವರು ಉಪದೇಶಿಸುತ್ತಾರೆ. ಆದುದರಿಂದ ಈ ಸಾಧ್ಯೋಪಾಯವು ನ್ಯಾಜರೂಪವಾದರೂ ಅವಶ್ಯಕವಾಗಿ ಅನುಷ್ಠಿಸತಕ್ಕದ್ದೆಂದು ಸ್ಥಾಪಿಸಿರುತ್ತಾರೆ.

ಜೀವಪಾರತಂತ್ರ್ಯವನ್ನು ಹೇಳುವ ಪ್ರಮಾಣಗಳೇನೂ ಸಾಧ್ಯೋಪಾಯವನ್ನು ನಿರಾಕರಿಸುವದಿಲ್ಲವು.

---

(೧) **ಯಃ** - ಯಾವ ಪ್ರಸಿದ್ಧನಾದ, **ಪ್ರಭುಃ** - ಸರ್ವ ಶಕ್ತನಾದ ಸರ್ವೇಶ್ವರನು, **ಮೇ** - ಪರತಂತ್ರನಾದ ನನಗೆ, **ಗರ್ಭಗತಸ್ಯಾಪಿ** - ತಾಯಿಯ ಉದರದಲ್ಲಿರುವಾಗಲೇ, **ವೃತ್ತಿಂ** - ಜೀವನೋಪಾಯವನ್ನು, **ಕಲ್ಪಿತವಾನ್** - ತನ್ನ ಕರ್ಮಾನುಗುಣವಾಗಿ ತನ್ನ ಸಂಕಲ್ಪ ಮೂಲಕವಾಗಿಯೇ ಉಂಟುಮಾಡಿದನೋ, **ಸಃ** (ಎಂದು ಇಟ್ಟುಕೊಳ್ಳತಕ್ಕದ್ದು) - ಅಂತಹ ಸ್ವಾಮಿಯು, **ಶೇಷವೃತ್ತಿ ವಿಧಾನೇಽಪಿ** - ಇಂತಹ ಪರತಂತ್ರರೂಪವಾದ ಬಾಲ್ಯಾದಿ ಜೀವಮಾನದಶೆಯ ವ್ಯಾಪಾರಗಳನ್ನು ಮಾಡಿಸುವುದರಲ್ಲೂ ಕೂಡ, **ಕಿಂ ಸುಪ್ತಃ** - ಏನಾದರೂ ಮಲಗಿಬಿಟ್ಟನೇನು? **ಅಥವಾ ಗತಃ** - ಅಥವಾ ಎಲ್ಲಿಯಾದರೂ ದೇಶಾಂತರಕ್ಕೆ ಹೋದನೇನು? ಎಂದರೆ ಅವನೇನೂ ಮಲಗಲೂ ಇಲ್ಲವು, ಎಲ್ಲಿಯೂ ಓಡಿಹೋಗಲೂ ಇಲ್ಲವು, ಅವನೇ ಜಾಗರೂಕನಾಗಿ ನಿಂತು ಎಲ್ಲವನ್ನೂ ಈ ಜೀವಮಾನ ಕಾಲವಲ್ಲೂ ನಡಿಸಿಕೊಡುತ್ತಾನೆಂಬ ಭಾವವು." **ಇತ್ಯಾದಿಗಳುಮ್** - ಇವೇ ಮೊದಲಾದ ಪ್ರಮಾಣಗಳು, **ರಕ್ಷಕಾಂತರಂ ತೇಡಾನ್ಮೈಕ್ಕು** - ಬೇರೆ ರಕ್ಷಕನನ್ನು ಹುಡುಕಿಕೊಂಡು ಹೋಗದೇ ಇರುವುದಕ್ಕಾಗಿ, **ಚೊನ್ನವೈ ಯತ್ತನ್ನೈ** - ಹೇಳಲ್ಪಟ್ಟವೇ ವಿನಾ ಬೇರೆಯಲ್ಲವು. ಯಾವಾಗ ತಾಯಿಯ ಗರ್ಭದಲ್ಲಿರುವಾಗಲೇ ಈತನ ಕರ್ಮಾನುಗುಣ ಈತನ ವೃತ್ತಿಯನ್ನು ಕಲ್ಪಿಸಿದನೋ ಅವನೇ ಜೀವಮಾನ ಕಾಲದಲ್ಲೂ ನಿಂತು ನಡೆಸಿಕೊಡುವನು. ಹೀಗಿರುವಲ್ಲಿ ಅನ್ಯದೇವತೆಗಳನ್ನು ಕುರಿತು ಹುಡುಕಿಕೊಂಡು ಹೋಗುವುದೇತಕ್ಕೆ ಎಂಬ ಭಾವವು. ಇದರಿಂದ ಸ್ವಾಮಿ ಸಂಕಲ್ಪರೀತ್ಯಾ ನಡೆಯುವುದರಿಂದ ನಾವು ಮಾಡತಕ್ಕದ್ದೇನಿದೆ? ಶಿಶುವಾಗಿ ಜ್ಞಾನವಿಲ್ಲದಿರುವ ಕಾಲದಲ್ಲಿ ಹೇಗೆ ರಕ್ಷಿಸಿದನೋ ಹಾಗೆಯೇ ಈಗಲೂ ರಕ್ಷಿಸುವನೆಂದು ತಟಸ್ಥನಾಗಿರದೆ, ಸರ್ವೇಶ್ವರನಲ್ಲೇ ಸರ್ವ ಭರವನ್ನೂ ಇಟ್ಟು ಇಹ

---

(೧) ವಿಷ್ಣುಧರ್ಮಮ್.

ಭೋಜನಾದಿ ವ್ಯಾಪಾರಙ್ಗಳುವರ್ ತವಿರವೇಣುವರ್. (೨) "ಸ್ವಯಂ ಮೃತ್ಪಿಂಡ ಭೂತಸ್ಯ ಪರತಂತ್ರಸ್ಯ ದೇಹಿನಃ," (೩) "ಅಜ್ಞೋಜಂತು

ಲೋಕ ಪಾರಲೌಕಿಕ ಸುಖಗಳಿಗಾಗಿ ಸರ್ವ ಪ್ರಯತ್ನವನ್ನೂ ಮಾಡತಕ್ಕದ್ದೆಂಬ ಭಾವವು. ಅಲ್ಲಾದಪ್ರೋದು - ಹೀಗಲ್ಲದಿದ್ದರೆ, ಎಂದರೆ "ದೈವಮೇವ ಪರಂ ಮನ್ಯೇ ಪೌರುಷಂತು ನಿರರ್ಥಕಮ್" ದೈವಸಂಕಲ್ಪವೇ ಪ್ರಧಾನವು, ನಮ್ಮ ಪೌರುಷವೂ, ಸಾಹಸವೂ ನಿರರ್ಥಕವಾದುದು ಎಂದು ಹೇಳಿರುವ ಹಾಗೆ, ಸರ್ವೇಶ್ವರನೇ ಎಲ್ಲವನ್ನೂ ನಡೆಸಿಕೊಡುವವನು, ನಮ್ಮ ಪ್ರಯತ್ನವು ವ್ಯರ್ಥವು, ಎಂದು ಅಭಿಪ್ರಾಯಪಟ್ಟರೆ, ಭೋಜನ ಮೊದಲಾದ ವ್ಯಾಪಾರಗಳೂ, ತವಿರವೇಣುವರ್- ಬಿಡತಕ್ಕವುಗಳಾಗುವುವು. ಆದುದರಿಂದ ಇವನಿಗೆ ಕರಣಕಳೇಬರ ಯೋಗವನ್ನುಂಟುಮಾಡಿರುವುದರಿಂದ, ಇವನು ಸರ್ವ ಪ್ರಯತ್ನವನ್ನೂ ಮಾಡಿಯೇ ತೀರಬೇಕು. ಅದು ಫಲಕಾರಿಯಾಗಬೇಕಾದರೆ ದೈವಾನುಗ್ರಹವಿರಬೇಕು. ದೈವಮೇವ ಪರಂಮನ್ಯೇ ಎಂಬದಾಗಿ ಮೇಲೆ ಉದಾಹರಿಸಿರುವ ವಾಕ್ಯಾಭಿಪ್ರಾಯವೂ ಕೂಡ ಬರೀ ಮನುಷ್ಯ ಪ್ರಯತ್ನವು ದೈವಾನುಕೂಲವಿಲ್ಲದೆ ನಿರರ್ಥಕವೆಂಬ ಭಾವವು. ಇದರಿಂದ ಮನುಷ್ಯ ಪ್ರಯತ್ನವು ಬೇಡವೆಂಬಭಿಪ್ರಾಯವಲ್ಲವು. ಇನ್ನೂ ಇಂತಹ ಅನೇಕ ಪ್ರಮಾಣಗಳುಂಟು. ಅಲ್ಲೆಲ್ಲಾ ಹೀಗೆಯೇ ಅಭಿಪ್ರಾಯವೇ ವಿನಾ, ಚೇತನನು ಏನನ್ನೂ ಮಾಡದೆ ತನ್ನ ಪಾರತಂತ್ರ್ಯದಿಂದ ದೀನನಾಗಿ ಅವಸಾದದಿಂದ ತಟಸ್ಥನಾಗಿರತಕ್ಕದ್ದಲ್ಲವೆಂದು ತಿಳಿಸುವುದಕ್ಕಾಗಿ, ಇತಿಹಾಸ ಸಮುಚ್ಚಯದಿಂದಲೂ ಶ್ರೀ ಭಾರತದಿಂದಲೂ ಉದಾಹರಿಸುತ್ತಾರೆ.

(೨) ಇದು ಪೂರ್ವಾರ್ಧವು. ಉತ್ತರಾರ್ಧವು:—"ಸ್ವರಕ್ಷಣೇಪ್ಯ ಶಕ್ತಸ್ಯ ಕೋಹೇತುಃ ಪರರಕ್ಷಣೇ" ಎಂದಿರುತ್ತದೆ. ಸ್ವಯಂ - ತಾನೇ, ಮೃತ್ಪಿಂಡ ಭೂತಸ್ಯ - ಮಣ್ಣಿನ ಮುದ್ದೆಯ ಹಾಗಿರುವ ಎಂದರೆ ಸ್ವತಂತ್ರನಾಗಿ ಏನನ್ನೂ ಮಾಡಲಶಕ್ತನಾದ, ಪರತಂತ್ರಸ್ಯ - ಹೀಗೆ ಸರ್ವೇಶ್ವರನಿಗೆ ಅಧೀನನಾದ, ದೇಹಿನಃ - ಚೇತನರೂಪವನ್ನು ಮಾತ್ರ ಹೊಂದಿರುವ, ಸ್ವರಕ್ಷಣೇಪ್ಯಶಕ್ತಸ್ಯ - ತನ್ನನ್ನು ರಕ್ಷಿಸಿಕೊಳ್ಳುವುದಕ್ಕೆ ಶಕ್ತಿಯಿಲ್ಲದವನಿಗೆ, ಪರರಕ್ಷಣೇ - ಇತರರನ್ನು ರಕ್ಷಿಸುವದರಲ್ಲಿ, ಕೋ ಹೇತುಃ - ಹೇಗೆ ಶಕ್ತನಾದಾನು? ಎಂದಿಗೂ ಆಗಲಾರನೆಂಬ ಭಾವವು. ಇದರಿಂದಲೂ ಈತನ ಪ್ರಯತ್ನ ಮಾತ್ರವೇ ನಿರರ್ಥಕವು, ಸ್ವಾಮಿಯ ಸಹಾಯವಿಲ್ಲದೆ ಈತನು ಏನನ್ನೂ ಮಾಡಲು ಸಾಮರ್ಥ್ಯವಿಲ್ಲವೆಂಬ ಭಾವವು.

---

(೨) ಇತಿಹಾಸ ಸಮುಚ್ಚಯಂ ೧೯. ೯೭. (೩) ಭಾರತ ಶಾಂತಿ. ೧೨೨. ೩೬.

ರನೀಶೋಽಯ ಮಾತ್ಮನಸ್ಸುಖದುಃಖಯೋಃ । ಈಶ್ವರಪ್ರೇರಿತೋಗಚ್ಛೇತ್ಸ್ವರ್ಗಂ ವಾ ಶ್ವಭ್ರಮೇವ ವಾ" (೪) "ಅಪ್ರಮೇಯೋಽನಿಯೋಜ್ಯಶ್ಚ ಯತ್ರಕಾಮಗಮೋವಶೀ । ಮೋದತೇ ಭಗವಾನ್ ಭೂತೈರ್ಬಾಲಃ ಕ್ರೀಡನ ಕೈರಿವ" ಇತ್ಯಾದಿಗಳಿಲ್ ಜೀವನುಡೈಯ ಪಾರತಂತ್ರ್ಯಮುಮ್,

---

(೩) ಇದು ನಕುಲನು ಯುಧಿಷ್ಠಿರನನ್ನು ಕುರಿತು ಹೇಳುವ ವಾಕ್ಯವು. ಜಂತುಃ - ಈ ಜನ್ಮವೆತ್ತಿದ ಪ್ರಾಣಿಯು, ಅಜ್ಞಃ - ತನ್ನ ಹಿತಾಹಿತಗಳನ್ನು ತಿಳಿಯದವನು ಅಥವಾ ತನ್ನ ಸ್ವರೂಪ ಪರಸ್ವರೂಪಾದಿಗಳನ್ನು ತಿಳಿಯದವನು, ಆತ್ಮನಃ - ತನ್ನ, ಸುಖದುಃಖಯೋಃ - ಸುಖದುಃಖಗಳ ವಿಷಯದಲ್ಲಿ, ಅಯಂ - ಈತನು, ಅನೀಶಃ - ಅಸ್ವತಂತ್ರನು, ಈಶ್ವರ ಪ್ರೇರಿತಃ - ಈಶ್ವರನಿಂದ ಪ್ರೇರಿತನಾಗಿ, ಸ್ವರ್ಗಂವಾ - ಸ್ವರ್ಗವನ್ನಾಗಲಿ ಕುರಿತು, ಗಚ್ಛೇತ್ - ಹೋಗುವನು, ಅಥವಾ ಶ್ವಭ್ರಮೇವವಾ - ನರಕ ಗುಂಡಿಯನ್ನಾಗಲಿ ಕುರಿತು, ಗಚ್ಛೇತ್ - ಹೋಗುವನು. ಇಲ್ಲಿಯೂ ಈಶ್ವರ ಸಂಕಲ್ಪಾಧೀನವಾಗಿಯೇ ಸುಖದುಃಖಗಳ ಪ್ರಾಪ್ತಿಯೂ, ಸ್ವರ್ಗವನ್ನಾಗಲಿ ನರಕವನ್ನಾಗಲಿ ಕುರಿತು ಪ್ರಯಾಣಮಾಡುವನು ಎಂಬದಾಗಿ ಹೇಳಲ್ಪಟ್ಟಿರುತ್ತದೆ. "ಅನೀಶೋಽಯಮಾತ್ಮನಃ" ಎಂಬುದಕ್ಕೆ "ಅನೀಶಶ್ಚ ಭಾಜನಂ" ಎಂಬುದು ಪಾಠಾಂತರವು.

(೪) "ಅಪ್ರಮೇಯಃ - ಪರಿಪೂರ್ಣನಾದವನು, ಅನಿಯೋಜ್ಯಃ - ತಾನು ಸಮಸ್ತವನ್ನೂ ನಿಯಮಿಸುವನಾಗಿ, ತಾನು ಮಾತ್ರ ಯಾರಿಂದಲೂ ನಿಯಮಿಸಲ್ಪಡದವನು, ಯತ್ರಕಾಮಗಮಃ - ಎಲ್ಲಿ ಇಷ್ಟ ಉಂಟೋ ಅಲ್ಲಿಗೆ ಹೋಗುವ ಶಕ್ತಿಯುಳ್ಳವನು. ವಶೀ - ಸರ್ವವನ್ನೂ ತನ್ನ ವಶದಲ್ಲಿಟ್ಟುಕೊಳ್ಳುವವನು, ತನ್ನ ಸ್ವಾಧೀನದಲ್ಲಿಟ್ಟುಕೊಳ್ಳುವವನು, ಹೀಗೆ ಸರ್ವೇಶ್ವರನಾಗಿ ಲೋಕನಾಯಕನಾಗಿರುವ, ಭಗವಾನ್ - ಷಾಡ್ಗುಣ್ಯಪರಿಪೂರ್ಣನಾದ ಭಗವಂತನು, ಭೂತೈಃ - ಸಮಸ್ತ ಚಿದಚಿದ್ವರ್ಗದಿಂದಲೂ, ಹೇಗೆ, ಬಾಲಃ - ಚಿಕ್ಕ ಬಾಲಕನು, ಕ್ರೀಡನಕೈಃ - ಆಟದ ಸಾಮಾನುಗಳಿಂದ, ಮೋದತೇ - ಸಂತೋಷಪಡುತ್ತಾನೋ, ಹಾಗೆಯೇ, ಮೋದತೇ - ಲೀಲಾಸಕ್ತನಾಗಿ ಸಂತೋಷಪಡುತ್ತಾನೆ ಇಲ್ಲಿ ಎಲ್ಲಾ ಚಿದಚಿತ್ತುಗಳೂ ಸರ್ವೇಶ್ವರನಿಗೆ ನಿಯಾಮ್ಯ ವರ್ಗಕ್ಕೆ ಸೇರಿದುದಾಗಿ ಆತನಿಗೆ ಅಧೀನವಾದವುಗಳೆಂದು ಹೇಳಿರುವುದರಿಂದ ಪಾರತಂತ್ರ್ಯವು ಬೋಧಿಸಲ್ಪಟ್ಟಿತು." ಇತ್ಯಾದಿಗಳಿಲ್ - ಇವೇ ಮೊದಲಾದ ಪ್ರಮಾಣಗಳಲ್ಲಿ ಜೀವನ

---

(೪) ಭಾರತ ಸಭಾ. ೪೦. ೨೮.

ಈಶ್ವರನ್ ಇವನುಡೈಯ ಕರ್ಮಾನುಗುಣಮಾಗ ನಡತ್ತುಮ್ ಪಡಿಯೈಯುಮ್ ಶೊನ್ನವಿತ್ತನೈ. ಇಪ್ಪಾಟ್ಟುಕ್ಕುಮ್ ಇವ್ವಚನಙ್ಗಳುಕ್ಕುಮ್ ಇಪ್ಪಡಿ ತಾತ್ಪರ್ಯಮಿಲ್ಲಾದ ಪೋದು ಸರ್ವ ಶಾಸ್ತ್ರ ವಿರೋಧಮುಮ್

ಪಾರತಂತ್ರ್ಯವೂ ಮಾತ್ರ, **ಈಶ್ವರನ್** – ಸರ್ವೇಶ್ವರನು, **ಇವನುಡೈಯ** - ಈ ಚೇತನನ, **ಕರ್ಮಾನುಗುಣಮಾಗ** – ಕರ್ಮಾನುಸಾರವಾಗಿ, **ನಡತ್ತುಮ್ ಪಡಿಯೈಯುಮ್** – ನಡೆಸುವ ಪ್ರಕಾರವನ್ನೂ, **ಶೊನ್ನವಿತ್ತನೈ**-ಹೇಳಿದವು ಅಷ್ಟು ಮಾತ್ರವೇ ವಿನಾ ಅನ್ಯಥಾ ಅಲ್ಲವೆಂಬ ಭಾವವು; ಎಂದರೆ ಜೀವಾತ್ಮನ ಕರ್ತೃತ್ವಾಂಶವೇ ಬೇಕಾಗಿಲ್ಲವೆಂದೇನೂ ಬೋಧಿಸಲಿಲ್ಲವೆಂಬ ಭಾವವು. **ಇಪ್ಪಾಟ್ಟುಕ್ಕು** - ಈ ಇನ್ರುನ್ನೈ ಎಂದು ಮೇಲೆ ಉದಾಹರಿಸಿರುವ ನಮ್ಮಾಳ್ವಾರ್ರವರ ಪಾಶುರಕ್ಕೂ, **ಇವ್ವಚನಙ್ಗಳುಕ್ಕುಮ್**|- ಈ ಮೇಲೆ ಉದಾಹರಿಸಿರುವ ಮಹರ್ಷಿಗಳ ವಚನಗಳಿಗೂ, **ಇಪ್ಪಡಿ ತಾತ್ಪರ್ಯಮಲ್ಲಾದಪೋದು**-ಈಗ ತಾವು ಉಪದೇಶಿಸಿದ ಅಭಿಪ್ರಾಯವು ಅಲ್ಲವೆಂದರೆ, ಸರ್ವಶಾಸ್ತ್ರಗಳ ವಿರೋಧವೂ, **ಪೂರ್ವಾಪರ ವಿರೋಧಮುಮ್** - ಒಂದು ಶಾಸ್ತ್ರದಲ್ಲೇ ಮೊದಲು ಹೇಳಿದುದಕ್ಕೆ ಆಮೇಲೆ ಹೇಳಿದುದರ ವಿರೋಧವೂ, **ವರುಮ್** - ಪ್ರಾಪ್ತವಾಗುವುದು. ಶಾಸ್ತ್ರವಿರೋಧ ಹೇಗೆಂದರೆ, **"ಆತ್ಮಾನಂ ಮಯಿನಿಕ್ಷಿಪೇತ್"**, "ಓಮಿತ್ಯಾತ್ಮಾನಂ ಮಯಿ ನಿಕ್ಷಿಪೇತ್" ಇತ್ಯಾದಿ ಶ್ರುತಿವಿರೋಧವೂ, (೧) **"ಕರ್ತಾ ಶಾಸ್ತ್ರಾರ್ಥವತ್ವಾತ್,"** (೨) **"ಕೃತಪ್ರಯತ್ನಾಪೇಕ್ಷಸ್ತು ವಿಹಿತ ಪ್ರತಿಷಿದ್ಧ ವೈಯರ್ಥ್ಯಾದಿಭ್ಯಃ,"** (೩) **"ವೈಷಮ್ಯ ನೈರ್ಘೃಣ್ಯೇನ ಸಾಪೇಕ್ಷತ್ವಾತ್, ತಥಾಹಿ ದರ್ಶಯತಿ"** ಇತ್ಯಾದಿ ಸೂತ್ರಗಳ ವಿರೋಧವೂ **"ಮಾಮೇಕಂ ಶರಣಂ ವ್ರಜ"** ಇತ್ಯಾದಿ ಸ್ಮೃತಿ ವಿರೋಧವೂ, **"ಲಕ್ಷ್ಮೀಶಂ ಮಾಂ ಸುರೇಶೇಶಂ ದ್ವಯೇನ ಶರಣಂ ಗತಃ । ಮಲ್ಲೋಕ ಮಚಿರಾಲ್ಲಬ್ಧ್ವಾ ಮತ್ಸಾಯುಜ್ಯಂ ಸ ಗಚ್ಛತಿ ॥" "ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ । ಅಭಯಂ ಸರ್ವ ಭೂತೇಭ್ಯೋ ದದಾಮ್ಯೇ ತದ್ವ್ರತಂ ಮಮ ॥"** ಇತ್ಯಾದಿ ಪುರಾಣವಾಕ್ಯ ವಿರೋಧವೂ, ಉಂಟಾಗುತ್ತದೆಂಬ ಭಾವವು. **ಪೂರ್ವಾಪರ ವಿರೋಧ** ಹೇಗೆಂದರೆ :—ಶ್ರೀ ನಮ್ಮಾಳ್ವಾರ್ರವರ ಇನ್ರುನ್ನೈ ಎಂಬ (ತಿರು. ೧೦. ೮. ೯) ಪಾಶುರಕ್ಕೆ ಅರ್ಥವನ್ನು ತಾವು ಹೇಳಿದ ಹಾಗೆ ತಾತ್ಪರ್ಯವನ್ನು ಹೇಳದಿದ್ದರೆ ಪೂರ್ವದಲ್ಲಿ **"ಅಗಲಿಗಿಲ್ಲೇನ್"** ಎಂಬ (೬. ೧೦. ೧೦) ಪಾಶುರದಲ್ಲಿ **"ಉನ್ನಡಿ**

---

(೧) ಬ್ರ. ಸೂ. ೨.೩.೩೩ (೨) ಬ್ರ. ಸೂ. ೨.೩.೪೧ (೩) ಬ್ರ. ಸೂ. ೨.೧.೩೪

ವರುಮ್. ಇಪ್ಪಡಿ ಈಶ್ವರ ಸ್ವಾತಂತ್ರ್ಯ ಸಹಜ ಕಾರುಣ್ಯಙ್ಗಳಡಿಯಾಗ ವರುಮ್ ಕಲಕ್ಕಙ್ಗಳುಕ್ಕು ಪರಿಹಾರಮ್ ಶೊನ್ನೋಮ್.

೨. ಅಥ ಸಂಬಂಧಮೂಲಕ ಶಙ್ಕಾಃ ಪರಿಹ್ರಿಯಂತೇ.

ಸಂಬಂಧ ವಿಶೇಷಮಡಿಯಾಗ ವರುಮ್ ಕಲಕ್ಕತ್ತುಕ್ಕು ಪರಿಹಾ

ಕೇಳ್ ಮುರ್‌ನ್ನು ಪುಗನ್ಪೇನೇ" ಪೂರ್ಣ ಶರಣಾಗತಿಯನ್ನನುಷ್ಠಿಸಿದುದಕ್ಕೆ ವಿರೋಧವಾಗುತ್ತದೆ ಎಂಬ ಭಾವವು.

ಹೀಗೆ ಪ್ರಥಮ ಪೂರ್ವಪಕ್ಷದ ಖಂಡನವನ್ನು ನಿಗಮನ ಮಾಡಿ ಹೇಳುತ್ತಾರೆ:—**ಇಪ್ಪಡಿ**- ಈ ಮೇಲೆ ಉಪಪಾದಿಸಿದ ರೀತಿಯಲ್ಲಿ, **ಈಶ್ವರ ಸ್ವಾತಂತ್ರ್ಯ ಸಹಜ ಕಾರುಣ್ಯಙ್ಗಳಡಿಯಾಗ** - ಸರ್ವೇಶ್ವರನ ಸ್ವಾತಂತ್ರ್ಯದ ಮತ್ತು ಆತನ ಸ್ವಾಭಾವಿಕವಾದ ಕಾರುಣ್ಯದ ಮೂಲಕವಾಗಿ, **ವರುಮ್ ಕಲಕ್ಕಙ್ಗಳುಕ್ಕು** - ಉಂಟಾಗುವ ಸಂಶಯಗಳಿಗೆ, **ಪರಿಹಾರಮ್ ಶೊನ್ನೋಮ್** - ಪರಿಹಾರವನ್ನು ಹೇಳಿ ಈಗ ಮುಗಿಸಿದ್ದಾಯಿತು. ಆತನಿಗೆ ಸರ್ವ ಸ್ವಾತಂತ್ರ್ಯವೂ ಉಂಟು, ಇದೂ ಅಲ್ಲದೆ ಮಹಾ ಕರುಣಾಸಾಗರನು, ಹೀಗಿರುವಾಗ ನಾವು ಮಾಡುವ ಪ್ರಪದನವು ಅಜ್ಞಾಗಳ ಸ್ಥಾನವಲ್ಲವೇ ಎಂಬ ಪೂರ್ವಪಕ್ಷಕ್ಕೆ ಸಮಾಧಾನವನ್ನು ಹೇಳಿದ್ದಾಯಿತೆಂಬ ಭಾವವು ; ಮತ್ತು ಆತನು ಸ್ವತಂತ್ರನು, ಪ್ರಪದನ ಮಾಡಿದರೂ ರಕ್ಷಿಸದೇ ಇದ್ದರೂ ಇರಬಹುದು ಎಂಬ ಪೂರ್ವಪಕ್ಷವೂ ಕೂಡ ಖಂಡಿಸಲ್ಪಟ್ಟಿತೆಂಬ ತಾತ್ಪರ್ಯವು.

೨ ಸಂಬಂಧದ ಮೂಲಕವಾದ ಶಙ್ಕಾಗಳ ಪರಿಹಾರವು.

ಮುಂದೆ ಸರ್ವೇಶ್ವರನು ಶೇಷಿಯಾಗಿ, ನಾವುಗಳು ಆತನಿಗೆ ಶೇಷಭೂತರಾಗಿ ನಾವುಗಳೆಲ್ಲಾ ಆ ಸರ್ವೇಶ್ವರನ ಪ್ರಯೋಜನಕ್ಕಾಗಿಯೇ ವಿನಾ, ನಮ್ಮ ಪ್ರಯೋಜನಕ್ಕಲ್ಲವು. ಎಂಬ ಈ ಶೇಷಿಶೇಷ ಸಂಬಂಧದ ಮೂಲಕ ಉಂಟಾಗುವ ಶಂಕಾಗಳನ್ನು ಪರಿಹರಿಸುತ್ತೇವೆ ಎಂಬ ಪ್ರತಿಜ್ಞಾ ವಾಕ್ಯವನ್ನು ದಯಪಾಲಿಸುತ್ತಾರೆ:- **ಸಂಬಂಧ ವಿಶೇಷಮಡಿಯಾಗ ವರುಮ್** - ಸರ್ವೇಶ್ವರನು ನಮಗೆ ಶೇಷಿಯಾಗಿರುವ ಸಂಬಂಧದ ಮೂಲಕ ಉಂಟಾಗುವ, **ಕಲಕ್ಕತ್ತುಕ್ಕು** - ಶಂಕಾಗಳಿಗೆ, **ಪರಿಹಾರಮ್ ಶೊಲ್ಲುಗಿರೋಮ್** - ನಿವೃತ್ತಿಯನ್ನು ಹೇಳುವೆವು. ಸರ್ವೇಶ್ವರನು ಚೇತನರಿಗೆಲ್ಲಾ ಶೇಷಿ ಎಂಬುವರ ಮೂಲಕ ಉಂಟಾಗಬಹುದಾದ ಪೂರ್ವಪಕ್ಷಕ್ಕೆ ಸಮಾಧಾನವನ್ನು

ರಮ್ ಶೊಲ್ಲುಗಿರೋಮ್. ಈಶ್ವರೞ್ ಶೇಷಿಯಾಯಿರುಕ್ಕ, ನಾಮ್ (೧) “ಗರ್ಭಭೂತಾಸ್ತಪೋಧನಾಃ” ಎನ್ರುಮ್ ಕಣಕ್ಕಿಲೇ ಸ್ತನಂಧಯ ಪ್ರಾಯರಾ ಇರುಕ್ಕ, ತ್ತಾಯ್‌ಮುಲೈ ಪಾಲಕ್ಕು ಅರ್ತ್ತನಾಯುಳುದಲ್ ಶೆಯ್ಯುಮ್ ಅಳವನ್ರಿಕ್ಕೆ, ಕೂಲಿ ಕೊಡುಪ್ಪಾರೈಪ್ಪೋಲೆ, ನಾಮ್ ಆತ್ಮಸಮರ್ಪಣಮ್ ಪಣ್ಣುಗೈಯುಮ್, ರಕ್ಷಿಕ್ಕವೇಣುಮೆನ್ರು ಅಪೇಕ್ಷಿಕ್ಕೈಯುಮ್, ವಿಶ್ವಸಿಕ್ಕೈಯುಮೆನ್ರಾರ್ಪ್ಪೋಲೆ, ಶೊಲ್ಲುಗಿರ ಇವೈಯೆಲ್ಲಾಮ್ ಸ್ವರೂಪತ್ತುಕ್ಕು ಪೊರುನ್ದವೋ ವೆನ್ರು ಶಿಲರ್ ಸಿದ್ಧೋಪಾಯ ಮುಖತ್ತಾಲೆ ಸಾಧ್ಯೋಪಾಯ ಶರೀರತ್ತೈ ಯುಳಿಪ್ಪಾರ್‌ಗಳ್.

ಹೇಳುವೆವು ಎಂಬ ಭಾವವು. ಪ್ರಥಮತಃ ಪೂರ್ವಪಕ್ಷವನ್ನುಪಪಾದಿಸಿ ಅನಂತರ ಅದನ್ನು ನಿರಸನ ಮಾಡುತ್ತಾರೆ. ಪೂರ್ವಪಕ್ಷವು ಹೇಗೆಂದರೆ :— ಈಶ್ವರೞ್ ಶೇಷಿಯಾಯಿರುಕ್ಕ - “ಪತಿಂ ವಿಶ್ವಸ್ಯ” ಎಂದು ಹೇಳಿರುವ ಹಾಗೆ ಸರ್ವೇಶ್ವರನು ಶೇಷಿಯಾಗಿರಲಾಗಿ, ನಾಮ್ - ನಾವು, “ತಪೋಧನಾಃ - ತಪಸ್ಸನ್ನೇ ಧನವಾಗಿ ಉಳ್ಳ ನಾವು, ಗರ್ಭಭೂತಾಃ-ನಿನಗೆ ಮಕ್ಕಳ ರೂಪವಲ್ಲಿರುವವರು” ಎಂದು ಹೇಳಿರುವ, ಕಣಕ್ಕಿಲೇ - ರೀತಿಯಲ್ಲಿ, ನ್ಯಾಯವಲ್ಲಿ, ಸ್ತನಂಧಯಪ್ರಾಯರಾಯಿರುಕ್ಕ-ಸ್ತನ್ಯವನ್ನು ಕುಡಿಯುವ ಎಳೇ ಮಕ್ಕಳ ರೂಪವಲ್ಲಿರಲಾಗಿ, ತಾಯ್ ಮುಲೈ ಪಾಲಕ್ಕು - ತಾಯಿಯ ಸ್ತನ್ಯಕ್ಕೆ, ಅರ್ತ್ತನಾಯುಳುದಲ್ ಶೆಯ್ಯುಮ್ ಅಳವನ್ರಿಕ್ಕೆ - ದೀನನಾಗಿ ರೋದನ ಮಾಡುವವರ ಮಾತ್ರವಲ್ಲದೆ, ಕೂಲಿ ಕೊಡುಪ್ಪಾರ್ ಪೋಲೆ - ಕೂಲಿಯನ್ನು ಕೊಡುವವರ ಹಾಗೆ, ನಾಮ್ - ನಾವು, ಆತ್ಮಸಮರ್ಪಣಂ ಪಣ್ಣುಗೈಯುಮ್ - ಆತ್ಮಸಮರ್ಪಣೆಯನ್ನು ಮಾಡುವದೂ, ರಕ್ಷಿಕ್ಕವೇಣುಮೆನ್ರು ಅಪೇಕ್ಷಿಕ್ಕೈಯುಮ್ - ರಕ್ಷಿಸಬೇಕೆಂಬು ಎಂದರೆ ಮೋಕ್ಷಪ್ರಾಪ್ತಿಯನ್ನುಂಟುಮಾಡಬೇಕೆಂದು ಅಪೇಕ್ಷಿಸೋಣವೂ, ವಿಶ್ವಸಿಕ್ಕೈಯುಮ್ - ಸುಪ್ರೀತನಾಗುವ ಹಾಗೆ ಮಾಡೋಣವೂ, ಎನ್ನಾರ್‌ಪೋಲೆ - ಎಂಬುವ ಈ ಪ್ರಕಾರದಲ್ಲಿ, ಶೊಲ್ಲುಗಿರ - ಹೇಳುವ, ಇವೈ ಯೆಲ್ಲಾಮ್ - ಹೀಗೆ ಹೇಳುವುದೆಲ್ಲವೂ, ಸ್ವರೂಪತ್ತುಕ್ಕು ಪೊರುನ್ದುಮೋ - ಅತ್ಯಂತ ಪಾರತಂತ್ರ್ಯ ವಿಶಿಷ್ಟ ಶೇಷಭೂತನಾಗಿರುವ ಈತನ ಸ್ವರೂಪಕ್ಕೆ ಸರಿಯೋ? ಎನ್ರು - ಎಂದು, ಶಿಲರ್ - ಕೆಲವರು, ಸಿದ್ಧೋಪಾಯ ಮುಖತ್ತಾಲೆ - ಸರ್ವೇಶ್ವರನೇ ಮುಖ್ಯ ಸಿದ್ಧೋಪಾಯನಾಗಿ ನಿಂತಿರುವುದರಿಂದ, ಸಾಧ್ಯೋಪಾಯ ಶರೀರತ್ತೈ -

---

(೧) ರಾಮಾ. ಆರಣ್ಯ. ೧.೨೧.

ಸಾಧ್ಯೋಪಾಯವಾದ ಪ್ರಪದನವೂ ಒಂದು ಅವಯವವಾಗಿರುವ, ಅಂಶವಾಗಿರುವ ಭಾವವನ್ನು, ಅಳಿಸ್ಸಾರ್‌ಗಳ್ - ನಾಶಮಾಡುವರು. ಸರ್ವೇಶ್ವರನು ಸರ್ವ ಶೇಷಿಯು, ನಾವುಗಳೆಲ್ಲಾ ಇರುವುದು ಅವನಿಗಾಗಿಯೇ. ನಾವುಗಳಾದರೋ ಅವ ನಿಗೆ ಸ್ತನಂಧಯಪ್ರಾಯರು. ಏನೂ ತಿಳಿಯದ ಶಿಶುಪ್ರಾಯರು. ಅಂತಹವರು ಗಳನ್ನು ತಾಯಿಯು ಹೇಗೆ ಮಗುವು ಅಳಲಿ, ಅಳದೇ ಇರಲಿ, ಕಾಲಕ್ಕೆ ಸರಿಯಾಗಿ ಸ್ತನ್ಯವನ್ನು ಕೊಟ್ಟು ಕಾಪಾಡುವಳೋ, ಹಾಗೆಯೇ ಸರ್ವೇಶ್ವರನೂ ಕೂಡ ತನಗೆ ಸಂಪೂರ್ಣ ಪರತಂತ್ರನಾದ ಈ ಚೇತನನನ್ನು ಸ್ವತಃ ಕಾಪಾಡದೆ, ಇಂತಹ ಪರತಂತ್ರನಾಗಿ ಶೇಷಭೂತನಾದವನು ಪ್ರಪದನವನ್ನು ಮಾಡಿಯೇ ತೀರಬೇಕು, ತನ್ನನ್ನು ರಕ್ಷಿಸಬೇಕೆಂದು ಪ್ರಾರ್ಥಿಸಲೇಬೇಕು, ತನ್ನ ಪ್ರೀತಿಯನ್ನು ಸಂಪಾದಿಸ ಲೇಬೇಕು, ಇತ್ಯಾದಿ ನಿರ್ಬಂಧಗಳನ್ನು ಎಳ್ಳಿನಷ್ಟಾದರೂ ಎದುರು ನೋಡುವನೋ, ಈ ಚೇತನನ ಪರತಂತ್ರ ಸ್ವರೂಪಕ್ಕೆ ವಿರುದ್ಧವಾದ ನಿರ್ಬಂಧವಲ್ಲವೇ? ಎಂಬ ತಾತ್ಪರ್ಯವು. ಈ ಪೂರ್ವಪಕ್ಷ ಸಮರ್ಥನೆಗಾಗಿ ಪೂರ್ವಪಕ್ಷಿಯು ಶ್ರೀಮದ್ರಾ ಮಾಯಣದ ಅರಣ್ಯಕಾಂಡದಲ್ಲಿ ದಂಡಕಾರಣ್ಯ ಋಷಿಗಳು ಶ್ರೀರಾಮನನ್ನು ಕುರಿತು ಪ್ರಾರ್ಥಿಸಿದ ವಾಕ್ಯವನ್ನು ಉದಾಹರಿಸಿರುತ್ತಾರೆ. ಆ ಪೂರಾ ಶ್ಲೋಕವು ಯಾವು ದೆಂದರೆ:—

"ನ್ಯಸ್ತದಂಡಾ ವಯಂ ರಾಜನ್ ಜಿತಕ್ರೋಧಾಃ ಜಿತೇಂದ್ರಿಯಾಃ ।
ರಕ್ಷಿತವ್ಯಾ ಸ್ತ್ವಯಾ ಶಶ್ವದ್ಗರ್ಭಭೂತಾಸ್ತಪೋಧನಾಃ ॥"

ಇದರರ್ಥವೇನೆಂದರೆ:—ವಯಂ - ನಾವುಗಳು, ನ್ಯಸ್ತದಂಡಾಃ – ತಾಪಸರಾಗಿ ಮುನಿಗಳೆನಿಸಿಕೊಂಡಿರುವುದರಿಂದ ದಂಡೋಪಾಯವು ನಮಗೆ ಸ್ವರೂಪವಲ್ಲದುದ ರಿಂದ ಅದನ್ನು ಬಿಟ್ಟವರು. ತಪೋಬಲದಿಂದ ಭಸ್ಮಮಾಡಿಬಿಡಬಾರದೋ ಎಂದರೆ, ಜಿತಕ್ರೋಧಾಃ-ಕ್ರೋಧವೂ ನಮಗೆ ಸ್ವರೂಪವಲ್ಲದುದರಿಂದ ಅದನ್ನು ಜಯಿಸಿರುವ ಶಾಂತಮಾನಸರು. ಕ್ರೋಧವುಂಟಾಗಬೇಕಾದರೆ, "ಕಾಮಾತ್ಕ್ರೋಧೋಭಿಜಾ ಯತೇ" ಎಂಬ ಉಕ್ತ್ಯನುಸಾರವಾಗಿ ಕಾಮಾದಿಗಳಿದ್ದರೆ ಕ್ರೋಧ ಉಂಟಾ ದೀತು, ನಾವಾದರೋ, ಜಿತೇಂದ್ರಿಯಾಃ - ಇಂದ್ರಿಯಗಳನ್ನೆಲ್ಲಾ ಜಯಿಸಿ ಐಹಿಕದಲ್ಲಿ ವೈರಾಗ್ಯವುಳ್ಳವರು. ಹೀಗೆ ನಾವು ಬ್ರಾಹ್ಮಣವೃತ್ತಿಯುಳ್ಳವರು, ದಂಡವನ್ನು ಪ್ರಯೋಗಿಸುವುದು ಬ್ರಾಹ್ಮಣ ಕರ್ತವ್ಯವಲ್ಲವು. ನೀನಾದರೋ ಅಧ ರ್ಮಿಗಳನ್ನು ಶಾಸನ ಮಾಡುವುದಕ್ಕಾಗಿ ಕ್ಷತ್ರಿಯಕುಲ, ರಾಜನ್ಯಕುಲದಲ್ಲಿ ಹುಟ್ಟಿ ದವನು. ಆದುದರಿಂದಲೇ ರಾಜನ್ ಎಂಬ ಸಂಬೋಧನೆಯು. ಆದುದರಿಂದ, ತ್ವಯಾ ರಕ್ಷಿತವ್ಯಾಃ ಶಶ್ವತ್ – ಸರ್ವಲೋಕಶರಣ್ಯನಾದ ನಿನ್ನಿಂದ ಯಾವಾ ಗಲೂ ರಕ್ಷಿಸಲ್ಪಡಲು ಯೋಗ್ಯರು, ಅದೇನು ರಕ್ಷಿಸಬೇಕು ಎಂದರೆ, ಶಶ್ವತ್ ಗರ

ಇವರ್‍ಗಳೈ ವಿಲಕ್ಕುಮ್ಪಡಿ:— ಪರಮರ್ಷಿಗಳುಮ್ ಶ್ರೀ ಭಾಷ್ಯ ಕಾರಾದಿಗಳುಮ್, ವಿಶ್ವಾಸಪೂರ್ವಕ ಪ್ರಾರ್ಥನಾತ್ಮನಿಕ್ಷೇಪಾದಿಗಳೈತ್ತಾಙ್ಗ

ಭೂತಾಃ - ಯಾವಾಗಲೂ ನಿನಗೆ ಸ್ವಸಂಬಂಧಯುಕ್ತರು, ಅನನ್ಯಾರ್ಹ ಶೇಷರಾಗಿರುವುದರಿಂದಲೂ ಅನನ್ಯಾರ್ಹ ಶರಣರಾದುದರಿಂದಲೂ ರಕ್ಷಣೀಯರು ಎಂಬ ಭಾವವು. ಅದು ಮಾತ್ರದಿಂದಲೇ ರಕ್ಷಿಸಬೇಕೇ ಎಂದರೆ, ನಾವುಗಳು, **ತಪೋಧನಾಃ** - ಇಲ್ಲಿ ತಪಶ್ಶಬ್ದವು, ಇವರುಗಳು ಶ್ರೀರಾಮನಲ್ಲಿ ಶರಣಾಗತಿ ಮಾಡಿದುದರಿಂದ, "**ತಸ್ಮಾನ್ನ್ಯಾಸಮೇಷಾಂ ತಪಸಾಮತಿರಿಕ್ತಮಾಹುಃ**" ಪ್ರಪದನವು ಎಲ್ಲಾ ತಪಸ್ಸಿಗಿಂತಲೂ ಮೇಲಾದುದು ಎಂಬ ಶ್ರುತಿವಾಕ್ಯಬಲದಿಂದ, ಪ್ರಪದನವನ್ನು ಬೋಧಿಸುತ್ತದೆ. ಇಂತಹ ಪ್ರಪದನವನ್ನೇ ಧನವಾಗಿ ಉಳ್ಳ ಪ್ರಪನ್ನರಾದ ನಿನ್ನ ದಾಸಭೂತರು. ಆದುದರಿಂದಲೇ ರಕ್ಷಿತವ್ಯಾಃ ರಕ್ಷಿಸಲ್ಪಡಲು ಯೋಗ್ಯರು, ನೀನು ರಕ್ಷಿಸಿಯೇ ತೀರಬೇಕೆಂಬ ಭಾವವು. ಹೀಗೆ ಪೂರ್ವಪಕ್ಷಿಯು "**ಗರ್ಭಭೂತಾಃ**" ಎಂಬ ಪ್ರಯೋಗವು ತನಗೆ ಸಾಧಕವೆಂದು ಹೇಳಿದುದು, ಆತನಿಗೇನೇ ಪ್ರತ್ಯುತಬಾಧಕವು; ಏಕೆಂದರೆ ಮುಂದೆ **ತಪೋಧನಾಃ** ಎಂದಿರುವುದರಿಂದ ಈ ವ್ಯಾಜಮೂಲಕವಾಗಿಯೇ ಆತನು ಸಿದ್ಧೋಪಾಯನಾಗಿ ರಕ್ಷಕನಾದನು. **ಪೂರ್ವ** ಪಕ್ಷದಭಿಪ್ರಾಯವು ಇಷ್ಟೇ :- —ಚೇತನನು ಶೇಷಭೂತನಾಗಿ ಸಂಪೂರ್ಣ ಪರತಂತ್ರನಾಗಿ ಅಶಕ್ತನು. ಆದುದರಿಂದ ಆತ್ಮಸಮರ್ಪಣೆ ಮಾಡುವದೂ, ರಕ್ಷಿಸಬೇಕೆಂಬ ಪ್ರಾರ್ಥನೆಯೂ, ಅಂತಹ ಮಹೋನ್ನತ ಪದವಿಯಲ್ಲಿರುವವನ ವಿಶ್ವಾಸವನ್ನು ಸಂಪಾದಿಸೋಣವೂ. ಇವೆಲ್ಲಾ ಈ ಅಶಕ್ತನಿಗೆ ಸಾಧ್ಯವೇ ? ಎಂದಿಗೂ ಸಾಧ್ಯವಲ್ಲವಾದುದರಿಂದ ಸರ್ವಶೇಷಿಯು ಎಂದಿಗೂ ಇವುಗಳನ್ನು ನಿರೀಕ್ಷಿಸನು, ಎಂಬದಾಗಿ ಪೂರ್ವಪಕ್ಷವು. ಇದನ್ನು "ಇವರ್‍ಗಳೈ ವಿಲಕ್ಕುಮ್ಪಡಿ" ಎಂಬ ವಾಕ್ಯ ಮೂಲಕ ನಿರಸನ ಮಾಡುತ್ತಾರೆ.

ಇವರ್‍ಗಳೈ - ಇಂತಹ ಪೂರ್ವಪಕ್ಷಿಗಳನ್ನು, **ವಿಲಕ್ಕುಮ್ಪಡಿ** - ನಿರಾಕರಿಸಿ ಸಮಾಧಾನವನ್ನು ಹೇಳುವ ರೀತಿಯನ್ನು, **ಶೊಲ್ಲುಗಿರೋಮ್** - ಹೇಳುತ್ತೇವೆ, ಏನೆಂದರೆ ಎಂದು ಅಧ್ಯಾಹಾರಮಾಡಿಕೊಳ್ಳತಕ್ಕದ್ದು. ತೆಳಿವಿಕ್ಕುಮ್ಪಡಿ- ತಿಳಿಸುವ ರೀತಿ ಎಂಬದಾಗಿ ಪಾಠಾಂತರವು. **ಪರಮರ್ಷಿಗಳುಮ್** - ಶ್ರೇಷ್ಠರಾದ ಋಷಿಗಳು ಯಾರೆಂದರೆ ಪರಾಶರ ವ್ಯಾಸ ವಾಲ್ಮೀಕಿ ಮಹರ್ಷಿಗಳೂ, **ಶ್ರೀ ಭಾಷ್ಯಕಾರಾದಿಗಳುಮ್** - ಶ್ರೀ ಯತಿವರ್ಯರೇ ಮೊದಲಾದವರುಗಳೂ ಆದಿಶಬ್ದದಿಂದ ಅವರ ಶಿಷ್ಯಪರಂಪರೆಗೆ ಸೇರಿದವರೂ ಸಹ, **ವಿಶ್ವಾಸಪೂರ್ವಕ** -

ಳುಮ್ ಅನುಷ್ಠಿತ್ತು, ಇದುಕ್ಕು ಶಾಸ್ತ್ರಙ್ಗಳೈ ಮೂದಲಿಪ್ಪಿತ್ತುಕ್ಕೊಂಡು, ಉಪದೇಶ ಪರಂಪರೈಯುಮ್ ನಡತ್ತಿಪ್ಪೋರುಗೈಯಾಲೇ ಶೇಷಿತ್ವಾದಿ ಸಂಬಂಧಮ್ ನಿತ್ಯಮೇಯಾಗಿಲುಮ್ ಕರ್ಮಾರ್ಣಗಳಾನ ಜೀವರ್‌ಗಳ್ ವಿಷಯತ್ತಿಲ್, ಈಶ್ವರನೊರು ಸಾಧ್ಯೋಪಾಯವಿಶೇಷತ್ತೈ ಮುನ್ನಿಟ್ಟಲ್ಲದು ರಕ್ಷಿಯಾರ್ ಎನ್ರು ಶಾಸ್ತ್ರನಿಷ್ಠರ್‌ಕ್ಕು ಪರಿಗ್ರಹಿಕ್ಕವೇಣುಮ್.

ಮಹಾವಿಶ್ವಾಸದಿಂದ ಯುಕ್ತವಾದ, **ಪ್ರಾರ್ಥನಾತ್ಮನಿಕ್ಷೇಪಾದಿಗಳೈ** - ಗೋಪ್ತೃತ್ವವರಣದಿಂದ ಸೇರಿದ ಆತ್ಮನಿಕ್ಷೇಪರೂಪ ಭರನ್ಯಾಸಾದಿಗಳನ್ನು, **ತಾಙ್ಗಳುಮ್** - ತಾವೂ, **ಅನುಷ್ಠಿತ್ತು** - ಅನುಷ್ಠಾನಮಾಡಿ, **ಇದುಕ್ಕು** - ಈ ಭರನ್ಯಾಸಮಾಡುವುದಕ್ಕೆ, **ಶಾಸ್ತ್ರಙ್ಗಳೈ**-ಶಾಸ್ತ್ರಗಳನ್ನು, **ಮೂದಲಿಪ್ಪಿತ್ತುಕೊಂಡು**-ಪ್ರಮಾಣವನ್ನಾಗಿ ತೋರಿಸಿ, **ಉಪದೇಶಪರಂಪರೈಯುಮ್** - ತಾವು ತಮ್ಮ ಶಿಷ್ಯರಿಗೂ ಈ ಶಿಷ್ಯರೂ, ತಮ್ಮ ಶಿಷ್ಯರಿಗೂ, ಹೀಗೆ ಕ್ರಮಕ್ರಮವಾಗಿ ಉಪದೇಶವನ್ನು, **ನಡತ್ತಿಪ್ಪೋರುಗೈಯಾಲೇ** - ಮಾಡಿಹೋಗಿರುವುದರಿಂದ, ಶೇಷಿತ್ವವೇ ಮೊದಲಾದ ಸಂಬಂಧವು ಎಂಬಲ್ಲಿರುವ ಆದಿಪದದಿಂದ, ಪಿತಾ ಪುತ್ರ ಸಂಬಂಧವೇ ಮೊದಲಾದವು ಹೇಳಲ್ಪಟ್ಟಿತು, **ನಿತ್ಯಮೇಯಾಗಿಲುಮ್**-ನಿತ್ಯವಾದರೂ ಕೂಡ, **ಕರ್ಮಾರ್ಣಗಳಾನ** - ಕರ್ಮಬಂಧಕ್ಕೆ ಸಿಲುಕಿದ, ಜೀವಾತ್ಮರ ವಿಷಯದಲ್ಲಿ, **ಈಶ್ವರನ್** - ಸರ್ವೇಶ್ವರನು, **ಒರು ಸಾಧ್ಯೋಪಾಯ ವಿಶೇಷತ್ತೈ** - ಒಂದು ಸಾಧ್ಯೋಪಾಯ ವಿಶೇಷವನ್ನು, **ಮುನ್ನಿಟ್ಟಲ್ಲದು** - ಪುರಸ್ಕರಿಸಿ ಅಲ್ಲದೆ, **ರಕ್ಷಿಯಾರ್** - ರಕ್ಷಿಸುವುದಿಲ್ಲವು, **ಎನ್ರು** - ಎಂಬದಾಗಿ, **ಶಾಸ್ತ್ರನಿಷ್ಠರ್‌ಕು** - ಶಾಸ್ತ್ರದಲ್ಲಿ ಹೇಳಿರುವ ಹಾಗೆ ಆಚಾರವುಳ್ಳವರು, **ಪರಿಗ್ರಹಿಕ್ಕವೇಣುಮ್** - ಅಂಗೀಕರಿಸತಕ್ಕದ್ದು. ಈ ವ್ಯಾಜರೂಪ ಭರನ್ಯಾಸ ಮೂಲಕವಾಗಿಯೇ ಶ್ರಿಯಃಪತಿಯು ರಕ್ಷಿಸುವನೇ ವಿನಾ ಅನ್ಯಥಾ ಇಲ್ಲವೆಂದು ಹೇಳುತ್ತಾರೆ. ಈ ಅಭಿಪ್ರಾಯವನ್ನು ಹಿಂದೆಯೂ ಅಧಿಕಾರಿ ವಿಭಾಗಾಧಿಕಾರದಲ್ಲಿ "**ಪ್ರಪನ್ನಾದನ್ಯೇಷಾಂ ನದಿಶತಿಮುಕುಂದೋ ನಿಜಪದಂ**" ಎಂಬ ಶ್ಲೋಕಮೂಲಕ ಸ್ಥಾಪಿಸಿರುತ್ತಾರೆ. ೮೪೮ನೆಯ ಪುಟ ನೋಡಿ. ಹೀಗೆ ಹೇಳಲು ತಮಗೆ ಸಾಧನವೇನು? ಎಂದರೆ ತುಂಬಾ ಜ್ಞಾನಸಿದ್ಧಿಗಳಾದ ಮಹರ್ಷಿಗಳು ಮಹಾವಿಶ್ವಾಸಪೂರ್ವಕವಾದ ಆತ್ಮನಿಕ್ಷೇಪವು ಆವಶ್ಯಕವೆಂದು ಹೇಳಿರುತ್ತಾರೆ. ಶ್ರೀ ಪರಾಶರರು "**ತಾವದಾರ್ತಿಸ್ತಥಾವಾಂಛಾ**" ಎಂಬ ಶ್ಲೋಕದಲ್ಲಿ ಶರಣಾಗತಿಯು ಆವಶ್ಯಕತೆಯನ್ನು ಉಪಪಾದಿಸಿರುತ್ತಾರೆ. ೮೪೦ನೆಯ ಪುಟವನ್ನು ನೋಡಬಹುದು. ಶ್ರೀ ವ್ಯಾಸಮಹರ್ಷಿಯು "**ಸರ್ವೇಷಾ**

ಶಾಸ್ತ್ರತ್ತೈ ಕ್ಕೈವಿಟ್ಟಾಲ್, ಇಸ್ಸಂಬಂಧಮ್ ಶೊಲ್ಲುಗೈಕ್ಕು ಈಶ್ವರ

ಮೇವ ಲೋಕಾನಾಂ ಪಿತಾಮಾತಾ ಚ ಮಾಧವಃ । ಗಚ್ಛಧ್ವಮೇನಂ ಶರಣಂ ಶರಣ್ಯಂ ಪುರುಷರ್ಷಭಾಃ" (ಭಾರ. ಆರ. ೧೯೨. ೫೬) ಎಂದು ಹೇಳಿರುತ್ತಾರೆ. ಇದು ಮಾರ್ಕಂಡೇಯರು ಯುಧಿಷ್ಠಿರಾದಿಗಳನ್ನು ಕುರಿತ ಪರಮ ಹಿತೋಪದೇಶವು. ಶ್ರೀ ಕೃಷ್ಣನೇ ಪುರುಷೋತ್ತಮನಾದುದರಿಂದ ಆತನಲ್ಲಿ ಶರಣಾಗತಿಯನ್ನನುಷ್ಠಿಸಿರಿ ಎಂದು ಉಪದೇಶಿಸಿರುತ್ತಾರೆ. ಹಾಗೆಯೇ ಶ್ರೀ ವಾಲ್ಮೀಕಿ ರಾಮಾಯಣದಲ್ಲೂ "ವಿದಿತಸ್ಸಹಿಧರ್ಮಜ್ಞಶ್ಶರಣಾಗತವತ್ಸಲಃ । ತೇನ ಮೈತ್ರೀ ಭವತು ತೇ ಯದಿ ಜೀವಿತು ಮಿಚ್ಛಸಿ । ಪ್ರಸಾದಯಸ್ವತ್ವಂ ಚೈನಂ ಶರಣಾಗತ ವತ್ಸಲಂ । ಮಾಂ ಚಾಸ್ಮೈಪ್ರಯತೋಭೂತ್ವಾ ನಿರ್ಯಾತಯಿತು ಮರ್ಹಸಿ" ಇದರರ್ಥಕ್ಕೆ ನೆಯ ಪುಟವನ್ನು ಪರಾಂಬರಿಸಿ. "ತಮೇವ ಶರಣಂಗಚ್ಛ" "ರಾಘವಂ ಶರಣಂಗತಃ" ಇತ್ಯಾದಿ ಪ್ರಮಾಣಗಳನೇಕ ಇವೆ ಶ್ರುತಿ, ಸ್ಮೃತಿ, ಪ್ರಮಾಣಗಳುಂಟೆಂದು ಹಿಂದೆಯೇ ಅವುಗಳು ಉದಾಹರಿಸಲ್ಪಟ್ಟವೆ. "ತಮೇವಂ ವಿದ್ವಾ ನಮೃತ ಇಹಭವತಿ", ಎಂದು ಭಕ್ತಿ ಮಾರ್ಗವು ಉಪಾಯವಾಗಿ ವಿಧಿಸಲ್ಪಟ್ಟಿರುತ್ತದೆ. "ಭಕ್ತ್ಯಾ ಪರಮಯಾವಾಪಿ ಪ್ರಪತ್ತ್ಯಾವಾ ಮಹಾಮತೇ । ಪ್ರಾಪ್ಯೋಽಹಂ ನಾನ್ಯಥಾ ಪ್ರಾಪ್ಯೋ ಮಮ ಕೈಙ್ಕರ್ಯ ಲಿಪ್ಸುಭಿಃ" ಎಂಬೀ ಪ್ರಮಾಣದಲ್ಲಿ ಭಕ್ತಿಪ್ರಪತ್ತಿಯಾಗಲಿ ಸಾಧ್ಯೋಪಾಯವಾಗುತ್ತೆಂದೂ, ಇವೆರಡರಲ್ಲಿ ಯಾವುದಾದರೊ ಒಂದರ ಅನುಷ್ಠಾನದಿಂದ ನನ್ನ ಕೈಂಕರ್ಯಾಭಿಲಾಷೆಯುಳ್ಳವರಿಂದ ಎಂದರೆ ಮೋಕ್ಷಾರ್ಥಿಗಳಿಂದ ಪ್ರಾಪ್ಯನೇ ವಿನಾ ಅನ್ಯಥಾ ಇಲ್ಲವೆಂದು ಭಗವಂತನೇ ಹೇಳಿರುತ್ತಾನೆ. ಹೀಗೆ ಶಾಸ್ತ್ರಬಲ ಮಾತ್ರವೇ ಅಲ್ಲದೆ, ನಮ್ಮ ಪೂರ್ವಾಚಾರ್ಯರುಗಳು ತಾವು ಅನುಷ್ಠಿಸಿ, ತಮ್ಮ ಶಿಷ್ಯರಿಗೂ ಉಪದೇಶಿಸಿ ಅವರೂ ಅನುಷ್ಠಿಸುವ ಹಾಗೆ ಮಾಡಿರುತ್ತಾರೆ. ಅಂತವರಲ್ಲಿ ಅಗ್ರಗಣ್ಯರಾಗಿ ನಮ್ಮ ದರ್ಶನಸ್ಥಾಪಕರಾದ ಶ್ರೀ ಭಾಷ್ಯಕಾರರು ತಾವೂ ಅನುಷ್ಠಿಸಿ, ತಮ್ಮ ಶಿಷ್ಯರೂ ಕೂಡ ಅನುಷ್ಠಿಸುವ ಹಾಗೆ ಮಾಡಿರುತ್ತಾರೆ. ಹೀಗೆ ಎರಡು ಬಲವೂ ಇರುವದರಿಂದ ಈ ಪೂರ್ವ ಪಕ್ಷವು ಎಂದಿಗೂ ನಿಲ್ಲಲಾರದು. ಸರ್ವೇಶ್ವರನು ನಿರುಪಾಧಿಕಶೇಷಿಯಾಗಿಯೂ, ಈತನು ಶೇಷನಾಗಿಯೂ, ಹೀಗೆ ಈ ಸಂಬಂಧವು ನಿತ್ಯವಾಗಿದ್ದರೂ, ಸಾಧ್ಯೋಪಾಯವನ್ನನುಷ್ಠಿಸಿದ ಹೊರತು, ಆತನು ಸಿದ್ಧೋಪಾಯನಾಗಿ ನಿಂತು ರಕ್ಷಿಸನು ಎಂದು ಸ್ಥಾಪಿಸಿರುತ್ತಾರೆ. ಶಾಸ್ತ್ರವು ಬೇಕಿಲ್ಲವೆಂದು ಈ ಶೇಷಿಶೇಷ ಸಂಬಂಧ ಮೂಲಕ ಯುಕ್ತಿವಾದವನ್ನು ತಂದಿರು

ನೈಯುಮ್ ಕಿಡೈಯಾದು.

ತ್ತೇವೆ ಎಂದರೆ, ಈ ಸಂಬಂಧವೂ ಶಾಸ್ತ್ರಮೂಲಕವಾದುದರಿಂದ, ಶಾಸ್ತ್ರ ಬೇಡವೆಂಬುವನಿಗೆ ಈ ಸಂಬಂಧವೂ ಇಲ್ಲವು, ಆತನಿಗೆ ಸರ್ವೇಶ್ವರನೂ ಇಲ್ಲವು, ಏಕೆಂದರೆ ಶಾಸ್ತ್ರಮೂಲಕವಾಗಿಯಲ್ಲವೇ ಸರ್ವೇಶ್ವರನುಂಟು ಎಂದು ಸ್ಥಾಪಿಸಬಹುದು, ಎಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. **ಶಾಸ್ತ್ರತ್ತೈ ಕ್ಕೈವಿಟ್ಟಾಲ್** - ಶಾಸ್ತ್ರವು ಬೇಡವೆಂದು ಕೈಬಿಟ್ಟರೆ, **ಇಸ್ಸಂಬಂಧಮ್ ಶೊಲ್ಲುಗೈಕ್ಕು** - ಈ ಶೇಷಿಶೇಷ ಸಂಬಂಧವನ್ನು ಹೇಳುವುದಕ್ಕೆ, **ಈಶ್ವರನೈಯುಮ್ ಕಿಡೈಯಾದು**- ಈಶ್ವರಸಿದ್ಧಿಯೂ ಉಂಟಾಗುವುದಿಲ್ಲವು. ಅಥವಾ ಅಂತವನಿಗೆ ಈಶ್ವರನೇ ಇಲ್ಲವು. "ಯತೋ ವಾ ಇಮಾನಿ ಭೂತಾನಿ" (ತೈ. ಭೃ. ೧) ಇತ್ಯಾದಿ ಶ್ರುತಿವಾಕ್ಯವೇ ಜಗತ್ಕಾರಣನಾದ ಸರ್ವೇಶ್ವರನಿದ್ದಾನೆಂಬುದಕ್ಕೆ ಪ್ರಮಾಣವಾದುದರಿಂದ, **ಶಾಸ್ತ್ರಯೋನಿತ್ವಾತ್** (೧. ೧. ೩) ಎಂಬ ವ್ಯಾಸಸೂತ್ರದಲ್ಲಿ ಶಾಸ್ತ್ರದಿಂದಲೇ ಪರಬ್ರಹ್ಮನನ್ನು ತಿಳಿಯಬಹುದೇ ವಿನಾ ಅನ್ಯಥಾ ಆಗುವುದಿಲ್ಲವೆಂದು ಸ್ಥಾಪಿತವಾಗಿರುವುದರಿಂದ, ಯಾವಾಗ ಶಾಸ್ತ್ರವನ್ನು ಕೈಬಿಟ್ಟದ್ದಾಯಿತೋ ಆಗ ಸರ್ವೇಶ್ವರನೇ ಇಲ್ಲವೆಂದಾಯಿತು. ಹಾಗಾದ ನಂತರ ಶೇಷಿಶೇಷಭಾವ ತಾನೇ ಎಲ್ಲಿಯದು? ನಿಮ್ಮ ವಾದಕ್ಕೆ ತಳಹದಿಯೇ ಇಲ್ಲವಾಯಿತೆಂಬ ಭಾವವು.

ಹೀಗೆ ವ್ಯಾಜಸಾಪೇಕ್ಷಿತನಾಗಿಯೇ ಸರ್ವಶೇಷಿಯಾದ ಸರ್ವೇಶ್ವರನು ಈ ಪರತಂತ್ರನಾದ ಚೇತನನನ್ನು ರಕ್ಷಿಸುವನೆಂಬುದು (೧) ಶಾಸ್ತ್ರಸಮ್ಮತವಾದುದು (೨) ಪೂರ್ವಾಚಾರ್ಯಾನುಷ್ಠಾನಕ್ಕೆ ಸಮ್ಮತವಾದುದು ಎಂದು ಒಪ್ಪಿಕೊಂಡರೆ ಪೂರ್ವಪಕ್ಷಿಯು ಇನ್ನೊಂದು ಆಕ್ಷೇಪವನ್ನು ಹೇಳುತ್ತಾನೆ. ಶ್ರೀ ದೇಶಿಕರವರೇ ಪ್ರಧಾನ ಪ್ರತಿತಂತ್ರಾಧಿಕಾರದಲ್ಲಿ ಹೇಳಿರುವುದೇನೆಂದರೆ:—(೩೦೮-೯ನೆಯ ಪುಟಗಳನ್ನು ನೋಡಿ) "**ಚೇತನರುಡೈಯ ರಕ್ಷಣತ್ತಿಲ್, ಈಶ್ವರನ್ ಪ್ರಾಪ್ತನುಮಾಯ್ ಶಕ್ತನುಮಾಯ್, ತದಧೀನ ಪ್ರವೃತ್ತಿಯು ಯೊಳಿಯ ಚೇತನರ್ ಅಪ್ರಾಪ್ತರುಮಾಯ್ ಅಶಕ್ತರುಮಾಯ್, ಇರುಕ್ಕೈಕ್ಕು ನಿಬಂಧನಮ್**:— ಈಶ್ವರನುಡೈಯ ನಿರುಪಾಧಿಕ ಶೇಷಿತ್ವಮುಮ್, ನಿರುಪಾಧಿಕ ನಿಯಂತೃತ್ವಮುಮ್, ಇವರುಡೈಯ ನಿರುಪಾಧಿಕ ಶೇಷತ್ವಮುಮ್ ನಿರುಪಾಧಿಕ ನಿಯಾಮ್ಯತ್ವಮುಮ್" ಎಂದುಪದೇಶಿಸಿರುತ್ತಾರೆ. ಚೇತನರು ಸರ್ವೇಶ್ವರನಿಗೆ ಶೇಷಭೂತರಾಗಿ ತದಧೀನ ಪ್ರವೃತ್ತಿಯುಳ್ಳವರಾದುದರಿಂದ ಪೂರ್ಣ ಅಶಕ್ತರು ಎಂದು ಅಲ್ಲಿ ಹೇಳಿರುತ್ತಾರೆ. ಈಗ ಸಾಧ್ಯೋಪಾಯಾನುಷ್ಠಾನದಿಂದ ತನ್ನನ್ನು

ಸ್ವೋಕ್ತಿ ವಿರೋಧಮ್ ಪೂರ್ವಪಕ್ಷೀ ದರ್ಶಯತಿ, ತತ್ಪರಿಹಾರಃ.

ಆನ ಪಿನ್ಬು ಸಂಬಂಧಮಡಿಯಾಗ ಈಶ್ವರ್ಱ ರಕ್ಷಿಕ್ಕ ಪ್ರಾಪ್ತನೆನ್ರುಮ್, ಶೇಷಭೂತನಾನ ಇವರ್ಱ ತನ್ನೈ ರಕ್ಷಿತ್ತುಕೊಳ್ಳ ಪ್ರಾಪ್ತನನ್ರೆನ್ರುಮ್, ಮುನ್ಬು ಶೊನ್ನತವುಮ್, ರಕ್ಷ್ಯ ರಕ್ಷಕಭಾವತ್ತುಕ್ಕು ಲೋಕದೃಷ್ಟತ್ತುಕ್ಕು ಲೋಕದೃಷ್ಟಪ್ರಕ್ರಿಯೈಯಾಲೇ ಔಚಿತ್ಯಮ್ ಶೊನ್ನಪಡಿಯತ್ತನ್ನೈ ; ಇನ್ವಳವೇ ರಕ್ಷೈಕ್ಕು ನಿರಪೇಕ್ಷಕಾರಣ ಮೆನ್ರುಪಡಿಯನ್ರು. ಅಪ್ಪಡಿ

ತಾನು ರಕ್ಷಿಸಿಕೊಳ್ಳಲು ಶಕ್ತನೆಂದು ಹೇಳಿದಂತಾಗಿ ಪರಸ್ಪರ ವಿರುದ್ಧವಾಕ್ಯವಾಗಲಿಲ್ಲವೇ ಎಂದು ಆಕ್ಷೇಪಿಸುತ್ತಾನೆ. ಇದಕ್ಕೆ ಸಮಾಧಾನವನ್ನು ಹೇಳುವುದೂ ಅಲ್ಲದೆ, ಹೀಗೆ ಸಾಧ್ಯೋಪಾಯಾನುಷ್ಠಾನ ಬೇಡವೆಂದರೆ ಉಂಟಾಗುವ ಬಾಧಕಗಳನ್ನು ಮುಂದಿನ ವಾಕ್ಯಗಳಿಂದ ತಿಳಿಸುತ್ತಾರೆ.

ತಮ್ಮ ಉಕ್ತಿಗೇನೇ ವಿರೋಧವೆಂಬ ಪೂರ್ವಪಕ್ಷಿಯಾಕ್ಷೇಪವನ್ನು ಪರಿಹರಿಸಿ ಅನ್ಯಥಾ ಉಂಟಾಗುವ ಬಾಧಕಗಳನ್ನೂ ತೋರಿಸುತ್ತಾರೆ.

ಆನ ಪಿನ್ಬು - ಹೀಗಾದ ಮೇಲೆ ಎಂದರೆ ಉಪಾಯಾನುಷ್ಠಾನವು ಅವಶ್ಯಕವೆಂದಾದ ನಂತರ, **ಸಂಬಂಧಮುಡಿಯಾಗ** - ಸರ್ವೇಶ್ವರನು ಶೇಷಿಯಾಗಿ ನಾವು ಶೇಷರಾಗಿರುವದರ ಮೂಲಕ, **ಈಶ್ವರ್ಱ ರಕ್ಷಿಕ್ಕ ಪ್ರಾಪ್ತನೆನ್ರು** - ಈಶ್ವರನೇ ರಕ್ಷಿಸಲು ಶಕ್ತನೆಂದೂ, ಶೇಷಭೂತನಾದ, **ಇವರ್ಱ** - ಈ ಚೇತನನು, **ರಕ್ಷಿತ್ತುಕೊಳ್ಳ ಪ್ರಾಪ್ತನನ್ರೆನ್ರುಮ್** - ರಕ್ಷಿಸಿಕೊಳ್ಳಲು ಶಕ್ತನಲ್ಲವೆಂದೂ, **ಮುನ್ಬು**-ಮೊದಲು ಪ್ರಧಾನಪ್ರತಿತಂತ್ರಾಧಿಕಾರದಲ್ಲಿ, **ಶೊನ್ನದವುಮ್**-ಹೇಳಿದುದಾದರೋ, **ರಕ್ಷ್ಯ ರಕ್ಷಕ ಭಾವತ್ತುಕ್ಕು** - ಸರ್ವೇಶ್ವರನು ರಕ್ಷಕನು ನಾವು ರಕ್ಷಿಸಲ್ಪಡಲು ಅರ್ಹರು ಎಂಬೀ ಅಭಿಪ್ರಾಯಕ್ಕೆ ಎಂದರೆ ಆತನೇ ನಿರುಪಾಧಿಕ ಶೇಷಿಯಾಗಿ ರಕ್ಷಿಸಲು ಶಕ್ತನು, ನಾವು ಆತನಿಗೆ ನಿರುಪಾಧಿಕ ಶೇಷರಾಗಿ ನಾವಾಗಿಯೇ ರಕ್ಷಿಸಿಕೊಳ್ಳಲಶಕ್ತರಾದ ಪ್ರಯುಕ್ತ ಆತನಿಂದ ರಕ್ಷಿಸಲ್ಪಡಲು ಯೋಗ್ಯರು ಎಂಬಭಿಪ್ರಾಯಕ್ಕೆ, **ಲೋಕದೃಷ್ಟಪ್ರಕ್ರಿಯೈಯಾಲೆ** - ನಾವು ಲೋಕದಲ್ಲಿ ಸ್ವಾಮಿಭೃತ್ಯರಿಗಿರುವ ನ್ಯಾಯ ಮೂಲಕ, **ಔಚಿತ್ಯಮ್ ಶೊನ್ನಪಡಿಯತ್ತನ್ನೈ** - ಪ್ರಾಶಸ್ತ್ಯವನ್ನು ಹೇಳುವುದಕ್ಕಾಗಿ ಮಾತ್ರವೇ ; ಹಾಗಲ್ಲದೆ, **ಇನ್ವಳವೇ**-ಈ ಶೇಷಿಶೇಷ ಸಂಬಂಧ ಮಾತ್ರವೇ, **ರಕ್ಷೈಕ್ಕು** - ರಕ್ಷಣೆಗೆ, **ನಿರಪೇಕ್ಷ ಕಾರಣಮೆನ್ರುಪಡಿಯನ್ರು** - ಇನ್ನು ಯಾವುದರ ಅಪೇಕ್ಷೆಯಿಲ್ಲದೆ ಕಾರಣವೆಂದು ಹೇಳಿದ ಹಾಗಲ್ಲವು. ಪ್ರಧಾನ

ಕ್ಕೊಳ್ಳಿಲ್ ಸರ್ವರುಮ್ ನಿತ್ಯಮುಕ್ತರಾಗ ಪ್ರಸಂಗಿಕ್ಕುಮ್. ಸ್ವಾತಂತ್ರ್ಯತ್ತಾಲೇ ನಿಯಮಮುಮ್ ಶೊಲ್ಲಿಲ್, ಮುನ್ ಶೊನ್ನಪಡಿಯೇ ವೈಷಮ್ಯನೈರ್ಘೃಣ್ಯಙ್ಗಳ್ ಪ್ರಸಙ್ಗಿಕ್ಕುಮ್.

ಪ್ರತಿತಂತ್ರಾಧಿಕಾರದಲ್ಲಿ ಹೇಳಿದುದೇನೋ ಉಂಟು. ಈ ಶೇಷಿ ಶೇಷ ಸಂಬಂಧ ಮೂಲಕ ರಕ್ಷಿಸಲು ಸರ್ವೇಶ್ವರನೇ ಶಕ್ತನು, ತಾನೇ ರಕ್ಷಿಸಿಕೊಳ್ಳಲು ಜೀವಾತ್ಮನು ಅಶಕ್ತನೆಂದೇನೋ ಹೇಳಿದುದುಂಟು. ಆದರೆ ಇಷ್ಟು ಮಾತ್ರವೇ ಸಾಕು ಆತನು ರಕ್ಷಿಸುವುದಕ್ಕೂ ಈತನು ರಕ್ಷಿಸಲ್ಪಡುವುದಕ್ಕೂ ಎಂದೇನೂ ಅಲ್ಲಿ ಹೇಳಲಿಲ್ಲವು. ಲೋಕದಲ್ಲೂ ಸ್ವಾಮಿಯಾದವನು ರಕ್ಷಿಸಲು ಶಕ್ತನು, ಭೃತ್ಯನು ತಾನೇ ಅಶಕ್ತನಾಗಿ ಸ್ವಾಮಿಯಿಂದ ರಕ್ಷಿಸಲ್ಪಡತಕ್ಕವನು. ಇಷ್ಟು ಮಾತ್ರ ಹೇಳಿದುದರಿಂದ ಸ್ವಾಮಿಯಾದವನು ತನಗೆ ರಕ್ಷಿಸುವ ಶಕ್ತಿಯಿದ್ದ ಮಾತ್ರಕ್ಕೇನೆ, ಭೃತ್ಯನಿಗೆ ತಾನೇ ರಕ್ಷಿಸಿಕೊಳ್ಳಲು ಅಶಕ್ತತೆಯಿದ್ದ ಮಾತ್ರಕ್ಕೇನೆ. ಭೃತ್ಯನು ರಕ್ಷಿಸಲ್ಪಡುವನೇ ? ಭೃತ್ಯನ ಕಿಂಚಿತ್ಕಾರ್ಯವಿಲ್ಲದೇನೇ ರಕ್ಷಿಸಿಬಿಡುವನೇ ? ಹಾಗೆಯೇ ಈ ಸಂದರ್ಭದಲ್ಲೂ ಎಂದು ಭಾವಿಸತಕ್ಕದ್ದು.

ಆದರೆ ಈ ಸಂಬಂಧ ಮಾತ್ರವೇ ರಕ್ಷಣೆಗೆ ನಿರಪೇಕ್ಷವಾದ ಕಾರಣವೆಂದರೆ ಅದರಿಂದುಂಟಾಗುವ ಬಾಧಕವನ್ನು ತಿಳಿಸುತ್ತಾರೆ **ಅಪ್ಪಡಿಕ್ಕೊಳ್ಳಿಲ್** - ಹಾಗೆ ಅಭಿಪ್ರಾಯಪಟ್ಟರೆ, ಎಂದರೆ ಈ ಸಂಬಂಧ ಮಾತ್ರವೇ ಇನ್ನು ಯಾವುದರ ಅಪೇಕ್ಷೆಯೂ ಇಲ್ಲದೇನೆ ಕಾರಣವೆಂದಭಿಪ್ರಾಯಪಟ್ಟರೆ, **ಸರ್ವರೂ, ನಿತ್ಯಮುಕ್ತರಾಗ ಪ್ರಸಙ್ಗಿಕ್ಕುಮ್** - ಅನಾದಿ ಕಾಲದಿಂದಲೂ ಸದಾ ಮುಕ್ತರಾಗಿಯೇ ಇರಬೇಕಾಗಿ ಬರುತ್ತದೆ ಹಾಗಾಗಲೇನೂ ಕಾರಣವಿಲ್ಲವು, ಏಕೆಂದರೆ ಸರ್ವೇಶ್ವರನು ಸ್ವತಂತ್ರನು, ಆದುದರಿಂದ ಆತನು ಯೋಗ್ಯತೆಯನ್ನರಿತು ಯಾರನ್ನು ರಕ್ಷಿಸಬೇಕೋ ಅವರನ್ನು ಮಾತ್ರ ರಕ್ಷಿಸುವನೇ ವಿನಾ ಎಲ್ಲರನ್ನೂ ರಕ್ಷಿಸುವುದಿಲ್ಲವು ಎಂದು ಹೇಳುವುದಾದರೆ ಆಗಲೂ ಬಾಧಕ ತಪ್ಪಿದ್ದಲ್ಲವೆಂದು ಹೇಳುತ್ತಾರೆ:— **ಸ್ವಾತಂತ್ರ್ಯತ್ತಾಲೆ** - ಸರ್ವೇಶ್ವರನು ಸ್ವತಂತ್ರನಾದುದರಿಂದ, **ನಿಯಮಮುಮ್ ಶೊಲ್ಲಿಲ್** - ಯೋಗ್ಯರನ್ನು ರಕ್ಷಿಸುವುದ ಇತರರನ್ನು ರಕ್ಷಿಸದಿರುವುದು ಹೀಂಗೆ ನಿಯಮವನ್ನು ಹೇಳುವುದಾದರೆ, **ಮುನ್ ಶೊನ್ನಪಡಿಯೇ** - ಹಿಂದೆ ಹೇಳಿದ ಹಾಗೆಯೇ, ವೈಷಮ್ಯ ನೈರ್ಘೃಣ್ಯಗಳು ಸರ್ವೇಶ್ವರನಿಗೆ, **ಪ್ರಸಙ್ಗಿಕ್ಕುಮ್** - ಪ್ರಾಪ್ತವಾಗುವುವು. ತಾನು ಸ್ವತಂತ್ರನಾದುದರಿಂದ ತನಗೆ ಅಭಿಮತನಾದಾಗ ಯಾರನ್ನು ರಕ್ಷಿಸಬೇಕೋ ಅವರನ್ನು ಮಾತ್ರ ರಕ್ಷಿಸುವನು, ಮಿಕ್ಕವರನ್ನು

ಯುಕ್ತಿಮಾತ್ರತ್ತಾಲ್ ಇವ್ವರ್ಥಙ್ಗಳ್ ಶೊಲ್ಲುವಾರ್ಕ್ಕು ಸಂಬಂಧಜ್ಞಾನಮೇ ಅಪೇಕ್ಷಿತಮ್ ರಕ್ಷಾಪೇಕ್ಷಾದಿಗಳ್ ವೇಣ್ಡಾ,ವೆನ್ರುಶೊಲ್ಲವೊಣ್ಣಾದು; ಅಚಿದ್ದ್ರವ್ಯಙ್ಗಳುಮ್. ಪಶುಮೃಗಪಕ್ಷ್ಯಾದಿಗಳುಮ್, ಸ್ತನಂಧಯರುಮ್, ರಕ್ಷಾಪೇಕ್ಷಾರಹಿತಙ್ಗಳಾನಾರ್ಪ್ಪೋಲೆ ಸಂಬಂಧಜ್ಞಾನರಹಿತಙ್ಗಳುಮಾಯಿರುಕ್ಕ, ಅವತ್ತೈ ರಕ್ಷಿಕ್ಕಕ್ಕಾಣಾನಿನ್ರೋಮಿರೆ. ಅಪ್ಪಡಿ ಕಂಡೋ

ಇಲ್ಲವು, ಆದುದರಿಂದ ಸರ್ವಮುಕ್ತಿ ಪ್ರಸಂಗರೂಪ ದೋಷವನ್ನಾರೋಪಿಸಲು ಮಾರ್ಗವಿಲ್ಲವೆಂದರೆ ಆಗ ವೈಷಮ್ಯ ನೈರ್ಘೃಣ್ಯರೂಪ ದೋಷಗಳು ತಪ್ಪಿದ್ದಲ್ಲವೆಂಬ ಭಾವವು.

ಆದರೆ ಈ ಶೇಷಿ ಶೇಷಸಂಬಂಧ ಜ್ಞಾನವೇ ಆವಶ್ಯಕವೆಂದು ಪೂರ್ವಪಕ್ಷ ತಂದಿರುವವರನ್ನು ವಿಕಲ್ಪಿಸಿ ಆಚಾರ್ಯರವರು ಕೇಳುತ್ತಾರೆ. ಹೀಗೆ ಆವಶ್ಯಕವೆಂದು ಹೇಳುತ್ತೀರಲ್ಲಾ ಇದೇನು (೧) ಯುಕ್ತಿಬಲದಿಂದಲೋ (೨) ಶಾಸ್ತ್ರಬಲದಿಂದಲೋ ಎಂದು ಪ್ರಶ್ನಿಸಿ, ಪ್ರಥಮಕಲ್ಪವು ಶಾಸ್ತ್ರವನ್ನತಿಕ್ರಮಿಸಿದುದು, ಆದುದರಿಂದ ಸರಿಯಲ್ಲವಾದರೂ, ಆಗಲೂ ದೋಷವು ತಪ್ಪಿದ್ದಲ್ಲವೆಂದು ಹೇಳುತ್ತಾರೆ. ಹೇಗೆಂದರೆ:—ಯುಕ್ತಿ ಮಾತ್ರತ್ತಾಲ್ - ಕೇವಲ ಯುಕ್ತಿ ಬಲದಿಂದಲೇ, ಇಲ್ಲಿ ಮಾತ್ರತ್ತಾಲ್ ಎಂದು ಹೇಳಿರುವದರಿಂದ ಶಾಸ್ತ್ರಬಲವನ್ನು ನಿರಾಕರಿಸಿ ಎಂಬಭಿಪ್ರಾಯವು. ಇವ್ವರ್ಥಙ್ಗಳ್ ಶೊಲ್ಲುವಾರ್ಕ್ಕು - ಈ ಅಭಿಪ್ರಾಯಗಳನ್ನು ಹೇಳುವವರಿಗೆ, ಸಂಬಂಧಜ್ಞಾನವೇ ಆವಶ್ಯಕ, ಪ್ರಪದನವು ಅನಾವಶ್ಯಕವು ಎಂಬದಾಗಿ ಅಭಿಪ್ರಾಯಪಡುವವರಿಗೆ, ಸಂಬಂಧ ಜ್ಞಾನಮೇ ಅಪೇಕ್ಷಿತಮ್ - ಶೇಷಿ ಶೇಷಸಂಬಂಧ ಜ್ಞಾನವೇ ಆವಶ್ಯಕವು, ರಕ್ಷಾಪೇಕ್ಷಾದಿಗಳ್ - ಗೋಪ್ತೃತ್ವವರಣವೇ ಮೊದಲಾದ ಪರಿಕರ ಪ್ರಪತ್ತಿಯು, ವೇಣ್ಡಾವೆನ್ರು - ಬೇಡವೆಂಬದಾಗಿ, ಶೊಲ್ಲವೊಣ್ಣಾದು - ನೀವು ಹೇಳಲಾಗುವದಿಲ್ಲವು. ಏಕೆಂದರೆ ಮುಂದೆ ಕಾರಣವನ್ನು ತಿಳಿಸುತ್ತಾರೆ: —ಅಚಿದ್ದ್ರವ್ಯಗಳೂ, ಪಶು, ಮೃಗ, ಪಕ್ಷ್ಯಾದಿಗಳೂ, ಬಾಲರೂ ಸಹ, ರಕ್ಷಾಪೇಕ್ಷಾ ರಹಿತಙ್ಗಳಾನಾರ್ಪ್ಪೋಲೆ - ಎಲ್ಲಾ ಜ್ಞಾನಶೂನ್ಯತೆಯುಳ್ಳವಾದ ಪ್ರಯುಕ್ತ ರಕ್ಷಾಪೇಕ್ಷೆ ಮೊದಲಾದವುಗಳು ಅವುಗಳಿಗೆ ಹೇಗೆ ಇಲ್ಲವೋ, ಹಾಗೆಯೇ, ಸಂಬಂಧಜ್ಞಾನ ರಹಿತಙ್ಗಳುಮಾಯಿರುಕ್ಕ - ಶೇಷಭೂತರೆಂಬ ಜ್ಞಾನವಿಲ್ಲದವರಾಗಿದ್ದರೂ, ಅವತ್ತೈ ರಕ್ಷಿಕ್ಕಕಾಣಾನಿನ್ರೋಮಿರೆ - ಅವುಗಳನ್ನೂ ಕೂಡ ಸರ್ವೇಶ್ವರನು ರಕ್ಷಿಸಿರುವುದನ್ನು ಕಂಡಿರುವೆವಷ್ಟೇ. ಹೀಗೆ ಈ ಅಚಿತ್ತು ಪಶು ಮೃಗ ಪಕ್ಷ್ಯಾದಿಗಳೂ ಬಾಲರೂ

ಮಾಗಿಲುಮ್ ಶಾಸ್ತ್ರ ಬಲತ್ತಾಲೇ ಇಜ್ಙು ಸಂಬಂಧಜ್ಞಾನಮ್ ಅಪೇಕ್ಷಿತ ಮೆನ್ನಿಲ್, ಶಾಸ್ತ್ರಮ್ ಶೊನ್ನಕಟ್ಟಳೈಯಿಲೆ ಜ್ಞಾನವಿಶೇಷಮ್ ಸ್ವೀಕರಿಕ್ಕ

ಪ್ರಪದನ ಜ್ಞಾನ

ಸಹ ಸರ್ವಜ್ಞಾನಶೂನ್ಯವಾಗಿರುವುವು ರಕ್ಷಿಸಲ್ಪಟ್ಟಿರುವುದರಿಂದ, ಆಗಮೋತ್ಥ ಜ್ಞಾನವೇನು, ವಿವೇಕೋತ್ಥ ಜ್ಞಾನವೇನು ಇವುಗಳುಳ್ಳ ನಾವು ಅಚಿತ್ತು ಪಶು ಮೃಗ ಪಕ್ಷ್ಯಾದಿಗಳ ಹಾಗೆಯೇ ಇರಬಹುದು, ಆಗ ಸಂಬಂಧಜ್ಞಾನ ತಾನೇ ಏಕೆ ಎಂಬದಾಗಿ ಆಕ್ಷೇಪಣೆಯು ಹಾಗಲ್ಲವು, ನಮಗೆ ಶಾಸ್ತ್ರಜ್ಞಾನವೂ ಆವಶ್ಯಕವು ತನ್ಮೂಲಕ ಸಂಬಂಧಜ್ಞಾನವೂ ಆವಶ್ಯಕವು ಎಂದು ಎರಡನೆಯ ವಿಕಲ್ಪವನ್ನು ಅವಲಂಬಿಸಿರುವೆವು ಎಂದರೆ ಆಗಲೂ ಆಕ್ಷೇಪಣೆಯು ತಪ್ಪಿದ್ದಲ್ಲವೆಂದು ತಿಳಿಸು ತ್ತಾರೆ:—**ಅಪ್ಪಡಿ ಕಣ್ಡೋಮಾಗಿಲುಮ್** - ಹಾಗೆ ಅಚಿದ್ದ್ರವ್ಯಗಳನ್ನೂ ಪಶು ಮೃಗ ಪಕ್ಷ್ಯಾದಿಗಳನ್ನೂ ಯಾವ ವಿಧವಾದ ಜ್ಞಾನವಿಲ್ಲದಿದ್ದರೂ ರಕ್ಷಿಸ ಲ್ಪಟ್ಟಿವುದನ್ನು ನಾವು ಕಂಡಿದ್ದರೂ, ಶಾಸ್ತ್ರಬಲದಿಂದ, **ಇಜ್ಙು** - ಈ ಸಂದರ್ಭದಲ್ಲಿ, ಎಂದರೆ ರಕ್ಷಿಸುವ ಸಂದರ್ಭದಲ್ಲಿ, **ಸಂಬಂಧಜ್ಞಾನಮ್** - ಶೇಷಿ ಶೇಷಸಂಬಂ ಧದ ಜ್ಞಾನವು, **ಅಪೇಕ್ಷಿತಮೆನ್ನಿಲ್** - ಆವಶ್ಯಕವೆಂದು ಹೇಳಿದರೆ, ಇದಕ್ಕೆ ಪ್ರಮಾಣ ಉಂಟೋ ಎಂದರೆ:— **ಸ್ವೋಜ್ಜೀವನೇಚ್ಛಾಯದಿತೇ ಸ್ವಸತ್ತಾಯಾಂ ಸ್ಪೃಹಾಯದಿ । ಆತ್ಮದಾಸ್ಯಂ ಹರೇಸ್ಸ್ವಾಮ್ಯಂ ಸ್ವಭಾವಂಚ ಸದಾ ಸ್ಮರ**" ಎಂದಿದ್ದತ್ತದೆ. ಆತ್ಮೋಜ್ಜೀವನದಲ್ಲಿ ಇಚ್ಛೆಯಿದ್ದರೆ, ತನ್ನ ಸತ್ತೆಯನ್ನು **ಕಾಪಾಡಿಕೊಳ್ಳ**ಬೇಕೆಂಬ ಆಶೆಯಿದ್ದರೆ, ತನ್ನ ದಾಸಭಾವವನ್ನೂ, ಹರಿಯ ಸ್ವಾಮಿತ್ವ ವನ್ನೂ, ಆತನ ಕಲ್ಯಾಣಗುಣಗಳನ್ನೂ ಯಾವಾಗಲೂ ಸ್ಮರಿಸತಕ್ಕದ್ದು ಎಂಬ ಶಾಸ್ತ್ರವಿಧ್ಯಾಯಿರುತ್ತದೆ. **ಶಾಸ್ತ್ರಮ್ ಶೊನ್ನ ಕಟ್ಟಳೈಯಿಲೇ** - ಶಾಸ್ತ್ರವು ಹೇಳಿದ ವಿಧ್ಯುಕ್ತಿಗಳ ಪ್ರಕಾರ, **ಜ್ಞಾನವಿಶೇಷಮ್** - ಈ ಪ್ರಪದನರೂಪ ಜ್ಞಾನ ವಿಶೇಷವನ್ನು, **ಸ್ವೀಕರಿಕ್ಕವೇಣುಮ್** - ಅಂಗೀಕರಿಸತಕ್ಕದ್ದು. ಶಾಸ್ತ್ರಮೂಲಕ ಶೇಷಶೇಷಿಜ್ಞಾನವು ಆವಶ್ಯಕವಾದರೆ, ಈ ಪ್ರಪತ್ತಿಯೂ ಶಾಸ್ತ್ರ ವಿಧ್ಯುಕ್ತಿಯಾಗಿ ಒಂದು ಜ್ಞಾನವಿಶೇಷವಾದರೆ, ಇದು ಮಾತ್ರ ಏತಕ್ಕೆ ಆವಶ್ಯಕವಲ್ಲವು? ಶಾಸ್ತ್ರ ದಲ್ಲಿ ಒಂದು ಜ್ಞಾನ ಮಾತ್ರ ಆವಶ್ಯಕವು ಇನ್ನೊಂದು ಅನಾವಶ್ಯಕವೆಂದು ಹೇಳ ಬಹುದೋ? ಎಂಬ ತಾತ್ಪರ್ಯವು. ಪ್ರಪದನವೂ ಒಂದು ಜ್ಞಾನವಿಶೇಷವೆಂಬು ದಕ್ಕೆ ಹಿಂದೆ ೮೬೭ನೆಯ ಪುಟ ನೋಡಿ. "ಓಮಿತ್ಯಾತ್ಮಾನಂ ಯುಂಜೀತ" ಇತ್ಯಾದಿ ವಾಕ್ಯಗಳನ್ನೂ ಅಂಗೀಕರಿಸಿ ಭರನ್ಯಾಸವನ್ನನುಷ್ಠಿಸತಕ್ಕದ್ದು ಆವಶ್ಯಕ ವೆಂದೇ ಹೇಳಬೇಕಾಗುತ್ತದೆ ಎಂಬುದು ಮುಖ್ಯಾಭಿಪ್ರಾಯವು.

ವೇಣುಮ್ ತನ್ನೈ ಈಶ್ವರನ್ ರಕ್ಷಿಕ್ಕುಮ್ಪೋದು ಸಂಬಂಧಮ್ಹೋಡೆ ಕೂಡ ವಿಲಕ್ಕಾಮೈಯೇ ವೇಣ್ಡುವದೆನ್ನಿಲ್, ಅದುವುಮ್ ಅನುಪಪನ್ನಮ್; ಸುಷುಪ್ತ್ಯಾದ್ಯವಸ್ಥೈಗಳಿಲೇ ಎಲ್ಲಾರ್ಕ್ಕುಮ್ ಮೋಕ್ಷಮ್ ಕೊಡುಕ್ಕ ಪ್ರಸಙ್ಗಿಕ್ಕೈಯಾಲೆ. ತಾನ್ ವಿಲಕ್ಕುಗೈಕ್ಕು ಯೋಗ್ಯತೆಯುಳ್ಳ ಅವ

ಶೇಷಶೇಷಿ ಜ್ಞಾನವು ಶಾಸ್ತ್ರಮುಖೇನ ಅವಶ್ಯಕವಾದರೆ, ಭರನ್ಯಾಸರೂಪ ಜ್ಞಾನವಿಶೇಷವೂ ವಿಧಿಸಲ್ಪಟ್ಟಿದ್ದರೂ ಹೇಗೆ ಅನಾವಶ್ಯಕವೆಂದು ಸಿದ್ಧಾಂತಿ ಕೇಳಿದುದಕ್ಕೆ ಪೂರ್ವಪಕ್ಷಿಯು ಈ ಆಕ್ಷೇಪವನ್ನು ತಪ್ಪಿಸಿಕೊಳ್ಳುವುದಕ್ಕೆ ಹೇಳುವುದೇನೆಂದರೆ, ಬರೀ ಶೇಷಶೇಷಿ ಸಂಬಂಧವೇ ಇಲ್ಲಿ ರಕ್ಷಣೆಗೆ ಕಾರಣವೆಂದು ನಾವು ಹೇಳುವುದಿಲ್ಲವು, ಇದರೊಂದಿಗೆ ಸರ್ವೇಶ್ವರನು ರಕ್ಷಣೆಗೆ ಅಯೋಗ್ಯನೆಂದು ನಿರಾಕರಣೆ ಮಾಡದೇ ಇರುವುದೂ ಸಹ ಅವಶ್ಯಕವೆಂದು ಹೇಳುವೆವು. ಆಗ ಸರ್ವಮುಕ್ತಿ ಪ್ರಸಂಗಕ್ಕೂ ಅವಕಾಶವಿಲ್ಲವು; ಹೀಗೆ ಪೂರ್ವಪಕ್ಷಿ ತಂದರೆ ಅದೂ ಕೂಡ ಅಸಂಗತವಾದುದೇ, ಏಕೆಂದರೆ ಆಗಲೂ ಸರ್ವಮುಕ್ತಿ ಪ್ರಸಂಗವು ತಪ್ಪಿದ್ದಲ್ಲವೆಂದು ಮುಂದೆ ತಿಳಿಸುತ್ತಾರೆ:— ತನ್ನೈ, ಈಶ್ವರನ್ ರಕ್ಷಿಕ್ಕುಮ್ಪೋದು - ತನ್ನನ್ನು ಸರ್ವೇಶ್ವರನು ರಕ್ಷಿಸುವಾಗ, ಸಂಬಂಧಮ್ಹೋಡೆ ಕೂಡ - ಈ ಶೇಷಶೇಷಿ ಸಂಬಂಧ ಜ್ಞಾನದೊಂದಿಗೆ, ವಿಲಕ್ಕಾಮೈಯೇ - ಸರ್ವೇಶ್ವರನು ನಮ್ಮನ್ನು ತಿರಸ್ಕರಿಸದೇ ಇರೋಣವೇ, ವೇಣ್ಡುವದೆನ್ನಿಲ್ - ಬೇಕಾದುದು ಎಂದರೆ, ಅದುವುಮ್ - ಆ ಅಭಿಪ್ರಾಯವೂ, ಅನುಪಪನ್ನಮ್ - ಯುಕ್ತವಾದುದಲ್ಲವು, ಅಸಂಗತವೆಂಬ ಭಾವವು. ಕಾರಣವೇನೆಂದರೆ ಹೇಳುತ್ತಾರೆ:—ಸುಷುಪ್ತ್ಯಾದ್ಯವಸ್ಥೈಗಳಿಲೇ - ಸುಷುಪ್ತಿ ಮೊದಲಾದ ಅವಸ್ಥೆಗಳಲ್ಲಿ. ಇಲ್ಲಿ ಆದಿ ಶಬ್ದದಿಂದ ದೇಹಾವಸಾನ ಕಾಲದಲ್ಲಿ ಉಂಟಾಗುವ ಪರಮಾತ್ಮ ಸಂಪತ್ತಿರೂಪ ಅವಸ್ಥೆಯು ಹೇಳಲ್ಪಟ್ಟಿತು. ಎಲ್ಲಾರ್ಕ್ಕುಮ್ - ಎಲ್ಲರಿಗೂ, ಮೋಕ್ಷಮ್ ಕೊಡುಕ್ಕ ಪ್ರಸಙ್ಗಿಕ್ಕೈಯಾಲೇ - ಸರ್ವೇಶ್ವರನು ಮೋಕ್ಷ ಕೊಡಬೇಕಾಗಿ ಬರುವುದರಿಂದ ಅನುಪಪನ್ನವು. ಏಕೆಂದರೆ ಸುಷುಪ್ತಿಯಲ್ಲಿ ನಿರಾಕರಣವಿಲ್ಲದೆ ಪರಮಾತ್ಮ ಸಂಪತ್ತಿಯೂ ಇದೆ ಮತ್ತು ಶೇಷ ಶೇಷಿ ಸಂಬಂಧವೂ ಇದೆ; ಆದುದರಿಂದ ಸರ್ವಮುಕ್ತಿ ಪ್ರಸಂಗ ಉಂಟಾಗುತ್ತದೆ ಎಂಬ ದೋಷವು ತಪ್ಪಿದ್ದಲ್ಲವು.

ಪೂರ್ವಪಕ್ಷಿಯು ತನ್ನಭಿಪ್ರಾಯಕ್ಕೆ ಇನ್ನೊಂದು ವಿಧ ನಿರ್ವಾಹವನ್ನು ತರುತ್ತಾನೆ ಹೇಗೆಂದರೆ:—ಕರ್ಮಪರಿಪಾಕದಿಂದಲೋ ಅಥವಾ ಸ್ವಪ್ನಾವಸ್ಥೆಯಲ್ಲದೆ ಜಾಗರಾವಸ್ಥೆಯಲ್ಲೋ ಹೇಗೋ ಅಂತೂ ನಿವಾರಣೆಯನ್ನು ಹೊಂದಲು

ಷ್ಟ್ಯಮಿಲೇ ವಿಲಕ್ಷಣ್ಯದೊಳಿಯುನೇ ಅಪೇಕ್ಷಿತನೆನ್ನವು ಪೊಣ್ಣಾದು; ವಿಲಕ್ಷಣ್ಯಗೈಕ್ಕು ಯೋಗ್ಯತೈಯಿಲ್ಲಾದ ಅಚಿತ್ತೈಯುಮ್ ವಿಲಕ್ಕಿರ ಪಶ್ವಾದಿಗಳೈಯುಮ್ ಪುತ್ರಾದಿಗಳೈಯುಮ್ ರಕ್ಷಿಕ್ಕ ಕಾಣ್ಗೈಯಾಲ್.

ಯೋಗ್ಯವಾದ ಅಪಕ್ಷೆಯಲ್ಲಿರುತ್ತಾನೆಂದು ಭಾವಿಸೋಣ; ಅಂತವನನ್ನು ಕೂಡ ನಿರಾಕರಣೆ ಮಾಡದೇ ಇರುವುದೇ ಈಗ ನಮಗೆ ಅಪೇಕ್ಷಿತವೆಂದು ಹೇಳುವೆವು ಎಂದು ಹೇಳಬಹುದು. ಈ ಅಭಿಪ್ರಾಯವೂ ಸರಿಯಲ್ಲವೆಂದು ಹೇಳುತ್ತಾರೆ:— ಏಕೆಂದರೆ, ವಿಲಕ್ಷಣ್ಯಗೈಕ್ಕು ಯೋಗ್ಯತೈಯಿಲ್ಲಾದ - ನಿರಾಕರಣೆ ಮಾಡುವುದಕ್ಕೆ ಯೋಗ್ಯತೆಯೇ ಇಲ್ಲದ ಅಚಿತ್ತನ್ನೂ, ನಿರಾಕರಣೆ ಮಾಡಲು ಯೋಗ್ಯತೆಯುಳ್ಳ ಪಶುವೇ ಮೊದಲಾದವುಗಳನ್ನೂ, ಜ್ಞಾನಶೂನ್ಯರಾದ ಪುತ್ರಾದಿಗಳನ್ನೂ, ರಕ್ಷಿಕ್ಕ ಕಾಣ್ಗೈಯಾಲೇ - ಸರ್ವೇಶ್ವರನು ರಕ್ಷಿಸಿರುವುದನ್ನು ಕಂಡಿರೋಣದರಿಂದ, ನಿರಾಕರಣೆ ಮಾಡಿಬಿಡುವ ದಶೆಯನ್ನು ಹೊಂದಿದ್ದರೂ ನಿರಾಕರಣ ಮಾಡದೆ ಸರ್ವೇಶ್ವರನು ಇರುತ್ತಾನೆ; ಇದೇ ಬೇಕಾದುದೆಂದು ಪೂರ್ವಪಕ್ಷಿಯು ಹೇಳಿದನು. ಅಂತಹ ದೆಸೆಯಲ್ಲದೇ ಇರುವ ಅಚಿತ್ತುಗಳೂ, ಅಂತಹ ದೆಸೆಯಿರುವವೂ ಸಹ ರಕ್ಷಣೆಯನ್ನು ಹೊಂದುತ್ತಿರುವುದರಿಂದ ಆ ಅಭಿಪ್ರಾಯವು ಸರಿಯಾದುದಲ್ಲವೆಂದು ಹೇಳಿದರು,

ಪೂರ್ವಪಕ್ಷಿಯು ಪುನಃ ಹೇಳುತ್ತಾನೆ:—ಆಗಲಿ ಕೆಲವು ಮಹರ್ಷಿಗಳು ನಮ್ಮಭಿಪ್ರಾಯವನ್ನು ಅನುಮೋದಿಸಿ ಹೇಳಿರುತ್ತಾರಲ್ಲಾ. **“ಯೇನಾಥವಂತ್ರೋಹಿ”** ಎಂಬ ಭಾರತ ವನಪರ್ವದ ವಚನವು. ಈ ಚೇತನನ ವ್ಯಾಪಾರವು ನಾಥನಾದ ಸರ್ವೇಶ್ವರನನ್ನು ನಂಬಿರುವವರಿಗೆ ಬೇಕಾಗಿಲ್ಲವೆಂದು ಹೇಳಿದೆಯಲ್ಲಾ ಅಪೇಕ್ಷಿತವಾದವು ಎಂಬ ಪೂರ್ವಪಕ್ಷಿಯ ಪ್ರಶ್ನೆಗೆ ಆ ಶ್ಲೋಕವಭಿಪ್ರಾಯವು ಪ್ರಪನ್ನಪನ್ನವೇನೂ ಬೇಡ ಎಂಬುದಲ್ಲವು, ಅದರ ಸರಿಯಾದಭಿಪ್ರಾಯವೇನೆಂಬುದನ್ನು ನಿರೂಪಿಸುತ್ತಾರೆ:—**ಯೇ** - ಯಾವ ಪುಣ್ಯಶಾಲಿಗಳು, **ಲೋಕೇ** - ಈ ಲೋಕದಲ್ಲಿ, **ನಾಥವಂತಃ** - ಶಕ್ತರಾದ ಸ್ವಾಮಿಗಳನ್ನು ಹೊಂದಿರುವವರೋ, **ತೇ** - ಅವರು, **ಆತ್ಮಕರ್ಮಾಣಿ** - ತಮ್ಮ ಕೆಲಸಗಳನ್ನು, **ನ ಸಮಾರಭಂತೇ** - ಪ್ರಾರಂಭಿಸುವದಿಲ್ಲವು. ಏಕೆಂದರೆ ಹೇಳುತ್ತಾರೆ:—**ತೇಷಾಂ** - ಅಂತವರುಗಳಿಗೆ, **ಕಾರ್ಯೇಷು** - ಕಾರ್ಯಗಳಲ್ಲಿ, **ನಾಥಾಃ** - ಸ್ವಾಮಿಗಳು, **ಭವನ್ತಿಹಿ** - ಕರ್ತೃಗಳಾದವರು ಆಗುವರು. ನಿರ್ವಾಹ ಮಾಡುವರಾಗುವರು, ಹೇಗೆಂದರೆ:—**ಹೇ ರಾಜನ್** - ಓ ಜಲರಾಜನೇ ಕೇಳು ಎಂದು ಸಾತ್ಯಕಿಯು ಒಂದು ದೃಷ್ಟಾಂತವನ್ನು ಹೇಳುತ್ತಾರೆ, **ಯಯಾತೇಃ** - ಯಯಾತಿಗೆ, **ಶೈಬ್ಯಾದಯಃ** - ಶೈಬ್ಯನೇ ಮೊದ

ಅನಪಿನ್ನು (೧) "ಯೇ ನಾಥ ವಂತೋಹಿ ಭವನ್ತಿ ಲೋಕೇ ತೇ ನಾತ್ಮ ಕರ್ಮಾಣಿ ಸಮಾರಭಂತೇ । ತೇಷಾಂ ಹಿ ಕಾರ್ಯೇಷು ಭವಂತಿ ನಾಥಾ ಶ್ಶೈಬ್ಯಾದಯೋ ರಾಮ ಯಥಾ ಯಯಾತೇಃ ॥"

ಲಿಂದ ನಾಲ್ಕು ಜನ ದೌಹಿತ್ರರು ಹೇಗೆ ನಾಥರಾಗಿ ಆ ಯಯಾತಿಗೆ ಬೇಕಾದ ಸ್ವರ್ಗಪ್ರಾಪ್ತಿಯನ್ನುಂಟುಮಾಡಿಕೊಟ್ಟರೋ ಹಾಗೆ ಎಂಬ ಭಾವವು. ಇಲ್ಲಿ ಯಯಾತಿಯು ಏನನ್ನೂ ಮಾಡದೆ ಆತನ ನಾಥರ ರೂಪದಲ್ಲಿರುವ ನಾಲ್ಕು ಜನ ದೌಹಿತ್ರರುಗಳಿಂದ ಹೇಗೆ ಸ್ವರ್ಗರೂಪ ಪುರುಷಾರ್ಥವನ್ನು ಹೊಂದಿದನೋ ಹಾಗೆ ಯೇ ನಾವೂ ಸಹ ನಾಥನಾದ ಶ್ರಿಯಃಪತಿಯಿಂದಲೇ ನಮ್ಮ ಪ್ರಯತ್ನದ ಅಪೇಕ್ಷೆ ಯಿಲ್ಲವೇನೇ ಹೊಂದುವೆವೆಂಬ ಪೂರ್ವಪಕ್ಷಿಯ ಅಭಿಪ್ರಾಯವು. ಪ್ರಕರಣವೇ ನೆಂದರೆ ಪ್ರಭಾಸಕ್ಷೇತ್ರಕ್ಕೆ, ಯುಧಿಷ್ಠಿರಾದಿಗಳು ವನವಾಸದಲ್ಲಿರುವಾಗ, ತೆರಳಿ ಅಲ್ಲಿ ಬಲರಾಮ ಕೃಷ್ಣ ಸಾತ್ಯಕಿ ಮೊದಲಾದವರನ್ನು ಕಂಡ ಕಾಲದಲ್ಲಿ ಬಲರಾಮರು ಶ್ರೀಕೃಷ್ಣನನ್ನು ಕುರಿತು ಅಧರ್ಮಿಯಾದ ದುರ್ಯೋಧನನಿಗೆ ಸರ್ವ ಶ್ರೇಯಸ್ಸೂ, ತುಂಬಾ ಧರ್ಮಿಷ್ಟರಾದ ಪಾಂಡವರಿಗೆ "ಹೃತಸ್ವರಾಜ್ಯಾಯತನಾರ್ಥಭಾರ್ಯಾಃ" ಅಪಹರಿಸಲ್ಪಟ್ಟ ರಾಜ್ಯ, ಮನೆ ಧನವುಳ್ಳವರಾಗಿ, ಹೆಂಡತಿಗೆ ಸಭೆಯಲ್ಲಿ ವಿಶೇಷಾವ ಮಾನವುಳ್ಳವರಾಗಿ, ಹೀಗೆ ನಾನಾವಿಧ ಕ್ಲೇಶವನ್ನು ಹೊಂದಿರುವುದು ಸರಿಯಾಗಿ ಕಾಣುವುದಿಲ್ಲವೇ ಎಂದು ಪರಿತಾಪ ಪಡುತ್ತಿದ್ದಾಗ, ಸಾತ್ಯಕಿಯು ಬಲರಾಮರನ್ನು ಕುರಿತು ಹೇಳುವ ಸಂದರ್ಭವು. ಅಭಿಪ್ರಾಯವೇನೆಂದರೆ, ಈಗ ನೋಡಿದರೆ ಕ್ಲೇಶಾನುಭವವಿರುವ ಹಾಗೆ ತೋರಿದರೂ, ಶ್ರೀ ಕೃಷ್ಣನನ್ನೇ ನಾಥನಾಗಿ ಉಳ್ಳವ ರಾದುದರಿಂದ ಯುಧಿಷ್ಠಿರಾದಿಗಳಿಗೆ ಏನೂ ಕೊರತೆಯಿಲ್ಲವು, ಸರ್ವ ಶ್ರೇಯಸ್ಸನ್ನೂ ನಾಥನಾದ ಶ್ರೀ ಕೃಷ್ಣನು ಉಂಟುಮಾಡತಕ್ಕವನು, ಇದರಲ್ಲಿ ಸಂದೇಹವೇನೂ ಇಲ್ಲವೆಂದು ಹೇಳುವುದಕ್ಕಾಗಿ ಸಾಮಾನ್ಯೋಕ್ತಿರೂಪದಲ್ಲಿ ನಾಥರನ್ನು ಹೊಂದಿರು ವವರು ತಾವೇ ಕಾರ್ಯದಲ್ಲಿ ಸ್ವತಃ ಪ್ರವರ್ತಿಸುವುದಿಲ್ಲವು. ನಾಥರನ್ನು ಪುರಸ್ಕ ರಿಸುವುದರಿಂದ ಅವರೇ ಸಾಧಿಸಿಕೊಡುವರು ಎಂಬಭಿಪ್ರಾಯವು. **ನಾತ್ಮಕರ್ಮಾಣಿ ಸಮಾರಭಂತೇ**-ತಮ್ಮ ಕೆಲಸಗಳನ್ನು ತಾವೇ ಆರಂಭಿಸುವುದಿಲ್ಲವು **ಕಾರ್ಯೇಷು**- ಅವರ ಕಾರ್ಯಗಳಲ್ಲಿ, **ಭವಂತಿಹಿ ನಾಥಾಃ** - ನಾಥರಾದವರು ಸಾಧಕರಾಗುವರು ಎಂಬ ಭಾವವು. ಅವರುಗಳು ಏನನ್ನೂ ಮಾಡದೆ ಸುಮ್ಮನೆಯೇ ಇದ್ದುಬಿಡು ವರು, ನಾಥರೇ ಎಲ್ಲವನ್ನೂ ಮಾಡುವರು ಎಂಬರ್ಥವಲ್ಲವು. **ತೇಷಾಂಹಿ ಕಾರ್ಯೇಷು ಭವನ್ತಿ** ಎಂಬಲ್ಲಿ ಕಾರ್ಯೇಷು ಯಾರ ಕೆಲಸಗಳು ಎಂಬುದರಲ್ಲಿ ನಿಸ್ಸಂದೇಹ

ಮಾಗಿರುವ ಹಾಗೆ ತೇಷಾಂ ಎಂದಿರುವದರಿಂದ, ಅವರುಗಳನ್ನು ಕಿಂಚಿತ್ಪ್ರಯತ್ನ ಪಡು ತ್ತಿರುವರು ಸ್ವಪ್ರಯತ್ನವು ಸರ್ವೇಶ್ವರನೇ ಸಾಧನವಾಗಿ ಸಿದ್ಧೋಪಾಯನಾಗಿ ಸರ್ವವನ್ನೂ ನಿರ್ವಹಿಸುವವನಾದರೂ ಸ್ವಲ್ಪ ಪ್ರಯತ್ನವನ್ನು ಮಾಡಲೇ ಬೇಕು. ರೋಗಿಗೆ ರೋಗವು ಪ್ರಬಲವಾಗಿರುವಾಗ ಸರ್ವೇಶ್ವರನೇ ಗುಣವನ್ನು ಮಾಡುವವನಾದರೂ ಆತನು ಸರ್ವ ಪ್ರಯತ್ನವನ್ನೂ ಮಾಡಿ ಸಾಧನಾದ ಚಿಕಿತ್ಸೆ ಯನ್ನು ನಿಮಿತ್ತಮಾತ್ರಕ್ಕೆ ಮಾಡಿಯೇ ತೀರಬೇಕು. ಇಲ್ಲದಿದ್ದರೆ ಸರ್ವೇಶ್ವರನು ಸಹಾಯಕನಾಗುವುದಿಲ್ಲವು ಶ್ರೀಕೃಷ್ಣನು ಏನೂ ಮಾಡದೆ ಸುಮ್ಮನೆ ಸಾರಥಿಯಾ ಗಿರುವನಾಗೂ, ಸರ್ವಪ್ರಯತ್ನವನ್ನು ಯುದ್ಧದಲ್ಲಿ ಅರ್ಜುನನು ನಡೆಸುವನಾಗೂ, ಲೋಕದಲ್ಲಿ ಹೀಗೆಯೇ ಮಾಡತಕ್ಕದ್ದೆಂದೂ, ಹಾಗೆಮಾಡಿದರೆ ಅರ್ಜುನನಿಗೆ ಜಯ ವಾದ ಹಾಗೆ ಎಲ್ಲರಿಗೂ ಜಯವುಂಟು, ತಟಸ್ಥರಾಗಿದ್ದರೆ ಇಲ್ಲವು ಎಂಬ ಭಾವವು. ಆದರೆ ಇದರಲ್ಲಿ ಜ್ಞಾನವಿಷಯವಾತ್ರ ಹೇಗೆ ಎಂದರೆ ಅರ್ಜುನನು ಎಷ್ಟು ಪ್ರಯತ್ನ ಮಾಡಿದರೂ ಅದು ಅತ್ಯಲ್ಪವು ಈ ಜಯದಲ್ಲಿ ಸರ್ವ ಪ್ರಾಧಾನ್ಯವೂ ಶ್ರೀಕೃಷ್ಣನದೇ ಎಂದು ಜ್ಞಾನಿಯು ತಿಳಿಯತಕ್ಕದ್ದು. ಆದನ್ನೇ ಶ್ರೀಕೃಷ್ಣ ಭಗವಾನರವರು ಅರ್ಜುನನಿಗೆ "ನಿಮಿತ್ತ ಮಾತ್ರಂ ಭವ ಸವ್ಯಸಾಚಿನ್" ನಿಮಿತ್ತ ಮಾತ್ರಕ್ಕೆ ನೀನು ನಿಂತು ಯುದ್ಧ ಮಾಡು; ಮಿಕ್ಕೆಲ್ಲವನ್ನೂ ನಾನೇ ನೋಡಿ ಕೊಳ್ಳುತ್ತೇನೆಂದು ಉಪದೇಶಿಸುತ್ತಾರೆ. ಆದುದರಿಂದ ಸಾಧನನ್ನು ನಂಬಿದವರು ಸ್ವಾಮಿಪ್ರೇರಿತರಾಗಿ ಕೆಲಸಗಳನ್ನು ಮಾಡುವರೇ ವಿನಾ ಸ್ವತಂತ್ರಿಸಿ ಮಾಡುವದಿಲ್ಲ ವೆಂಬುದು ತಾತ್ಪರ್ಯವೇ ವಿನಾ, ಅವರು ಏನೂ ಮಾಡದೆ ತಟಸ್ಥರಾಗಿರುವರು ಎಂಬುದು ಅರ್ಥವಲ್ಲವು. ಈ ಅಭಿಪ್ರಾಯವೇ "ಕರ್ತಾ ಶಾಸ್ತ್ರಾರ್ಥವತ್ವಾತ್" "ಪರಾತ್ತು ತಚ್ಛ್ರುತೇಃ" "ಕೃತಪ್ರಯತ್ನಾಪೇಕ್ಷಸ್ತು ವಿಹಿತ ಪ್ರತಿಷಿದ್ಧಾ ವೈಯರ್ಥ್ಯಾದಿಭ್ಯಃ" ಎಂಬೀ ಮೂರು ಬ್ರಹ್ಮಸೂತ್ರಗಳಿಂದ ಉಪಪಾದಿತವಾಗಿರು ತ್ತದೆ. ಮೊದಲನೆಯ ಸೂತ್ರದಿಂದ ಪುರುಷನಿಗೆ ಕರ್ತೃತ್ವವೂ, ಎರಡನೆಯ ಸೂತ್ರದಿಂದ ಅದು ಸರ್ವೇಶ್ವರ ಸಂಕಲ್ಪಾಧೀನವೆಂದೂ. ಹಾಗಾದರೆ ಅಂತಹ ಕರ್ತೃತ್ವವು ಹೇಗೆ ಕಾರ್ಯಕಾರಿಯಾದೀತು? ಆದುದರಿಂದ ಆತನೇ ಎಲ್ಲವನ್ನೂ ನಿರ್ವಹಿಸಲಿ ಎಂದರೆ, ಮೂರನೆಯ ಸೂತ್ರದಿಂದ ಈ ಪುರುಷನು ಸ್ವಬುದ್ಧಿಯಿಂದ ಮಾಡಲ್ಪಟ್ಟ ಪ್ರಯತ್ನವನ್ನಪೇಕ್ಷಿಸುವನಾಗಿ ಆ ಕರ್ತೃತ್ವವು ಸರ್ವೇಶ್ವರಾನುಮತಿ ಯನ್ನು ಹೊಂದುವುದು ಎಂದು ಹೇಳುತ್ತದೆ. ಆದುದರಿಂದ ಸಿದ್ಧೋಪಾಯನು ಸಾಧ್ಯೋಪಾಯವನ್ನು ಅಪೇಕ್ಷಿಸುತ್ತಾನೆ. ಆಗ "[illegible]" ಇತ್ಯಾದಿ ವಿಧಿವಾಕ್ಯಕ್ಕೆ ವೈಯರ್ಥ್ಯವಿಲ್ಲವು. (೧೧೩೦—೩೧ನೆಯ ಪುಟ ಗಳನ್ನು ನೋಡಿ)

ಅಷ್ಟು ಭಾರತ ಶ್ಲೋಕಗಳಲ್ಲಿ ಈ **"ಯೋ ನಾಥವಂತೋಹಿ"** ಎಂಬ ಶ್ಲೋಕವನ್ನು ಆರಿಸಿ ಅದಕ್ಕೆ ಸರಿಮಾದಭಿಪ್ರಾಯವನ್ನು ಹೇಳಿರುವುದರಿಂದ ಬಹುಶಃ ಸಾಧ್ಯೋಪಾಯದ ಆವಶ್ಯಕತೆಯನ್ನು ನಿರಾಕರಿಸುವವರು ಈ ಶ್ಲೋಕ ವನ್ನು ತನಗೆ ಸಾಧಕವಾದ ಪ್ರಮಾಣವಾಗಿ ತಂದಿರಬಹುದು. ಅವರಭಿಪ್ರಾ ಯಕ್ಕೆ, ಸರಿಯಾಗಿ ನೋಡಿದರೆ ಬಾಧಕವೇ ವಿನಾ, ಸಾಧಕವಲ್ಲವು. ಈ ಶ್ಲೋಕತಾತ್ಪರ್ಯವೇನೆಂದು ಚೆನ್ನಾಗಿ ಪ್ರದರ್ಶಿಸುವುದಕ್ಕಾಗಿ ತುಂಬಾ ವಾದ ವನ್ನು ನಿರಾಕರಿಸಿ **"ನಾಥವಂತಃ"** ಎಂಬ ಶಬ್ದವ್ಯುತ್ಪತ್ತಿಯನ್ನು ಅವಗಾಹನೆಗೆ ತಂದರೆ ತಮ್ಮ ಅಭಿಪ್ರಾಯವು ವ್ಯಕ್ತಪಡುತ್ತದೆಂದು ಮುಂದಿನ ವಾಕ್ಯಶೇಷದಿಂದ ತಿಳಿಸುತ್ತಾರೆ. **"ಶೈಬ್ಯಾದಯೋರಾಮ ಯಥಾ ಯಯಾತೇಃ"** ಎಂಬ ದೃಷ್ಟಾಂತದಲ್ಲಿ ತೋರಿಬರುವ ಪೂರ್ವ ಕಥೆಯು ಏನೆಂದರೆ:—ಧರ್ಮದೇವತೆಯು ವಸಿಷ್ಠರ ವೇಷದಿಂದ ವಿಶ್ವಾಮಿತ್ರರನ್ನು ಪರೀಕ್ಷಿಸುವ ಸಂದರ್ಭದಲ್ಲಿ ಗಾಲವರು ವಿಶ್ವಾಮಿತ್ರರಿಗೆ ಶುಶ್ರೂಷೆಯನ್ನು ಮಾಡಿದುದರಿಂದ ವಿಶ್ವಾಮಿತ್ರರು ಗಾಲವರಿಗೆ ಬ್ರಹ್ಮವಿದ್ಯಾಪ್ರದಾನ ಮಾಡಿದರು. ಪ್ರತ್ಯುಪಕಾರ ರೂಪದಲ್ಲಿ ತನ್ನ ಗುರುವನ್ನು ಕುರಿತು ಗುರುದಕ್ಷಿಣೆ ಏನನ್ನು ಸಮರ್ಪಿಸಬೇಕೆಂದು ಗಾಲವರು ಪ್ರಾರ್ಥಿಸಲು, ಏನೂ ಬೇಡವೆಂದು ಎಷ್ಟು ಹೇಳಿದರೂ ಕೇಳದೆ ನಿರ್ಬಂಧಪಡಿಸಿದುದರಿಂದ, ಒಂದು ಕಿವಿ ಕಪ್ಪಾಗಿಯೂ ಶರೀರವೆಲ್ಲಾ ಬೆಳ್ಳಗೂ ಇರುವ ಎಂಟು ನೂರು ಕುದುರೆಗಳನ್ನು ತಂದುಕೊಡೆಂದು ವಿಶ್ವಾಮಿತ್ರರು ತಮ್ಮ ಶಿಷ್ಯನಿಗೆ ಆಜ್ಞಾಪಿಸಿ ದರು. ಗಾಲವರು ಇಂತಹ ವಿಚಿತ್ರ ಗುರುದಕ್ಷಿಣೆಯನ್ನು ಒದಗಿಸುವುದು ಹೇಗೆಂದು ಚಿಂತಾಕ್ರಾಂತರಾಗಿರುವಾಗ, ಗರುಡನ ಸ್ನೇಹ ದೊರೆತು, ಇಬ್ಬರೂ ಯಯಾತಿ ಮಹಾರಾಜನಲ್ಲಿಗೆ ಹೋಗಿ ಧನವನ್ನು ಪ್ರಾರ್ಥಿಸಲು, ಆಗ ಯಯಾತಿಗೆ ಬೊಕ್ಕಸ ದಲ್ಲಿ ಧನವಿಲ್ಲದುದರಿಂದ ಮಾಧವೀ ಎಂಬ ಕನ್ನಿಕೆಯನ್ನು ಗಾಲವರಿಗೆ ಸಮರ್ಪಿಸಿ, ಈಕೆಯ ಮೂಲಕ ನಿಮಗೆ ೮೦೦ ಅಶ್ವಗಳು ಸಿಕ್ಕುವುದರಲ್ಲಿ ಸಂದೇಹವಿಲ್ಲವೆಂದು ಯಯಾತಿಯು ಹೇಳಿದನು. ಆಗ ಗಾಲವರು ಹರ್ಯಶ್ವನೆಂಬ ರಾಜನಲ್ಲಿಗೆ ಹೋಗಿ "ಓ ರಾಜನೇ ಈ ಲಾವಣ್ಯಯುಕ್ತಳಾದ ಕನ್ನಿಕೆಯನ್ನು ಮದುವೆ ಮಾಡಿಕೋ, ನಿನಗೆ ಒಬ್ಬ ಪುತ್ರನು ಜನಿಸಿದ ಒಡನೆಯೇ ಈ ಕನ್ಯಾರತ್ನವನ್ನು ನನಗೆ ಹಿಂತಿ ರುಗಿ ಕೊಡುವುದಲ್ಲದೆ, ಇದಕ್ಕಾಗಿ ನೀನು ನಿನ್ನಲ್ಲಿರುವ ಇನ್ನೂರು ಕುದುರೆಗಳನ್ನು ಕೊಡಬೇಕೆಂದು ಪ್ರಾರ್ಥಿಸಲು, ರಾಜನು ಅದಕ್ಕೆ ಒಪ್ಪಿ. ಆ ಮಾಧವಿಯ ಮೂಲಕ ವಸುಮನನೆಂಬ ಪುತ್ರನನ್ನು ಪಡೆದು, ಮಾಧವಿಯನ್ನು ಪುನಃ ಗಾಲವ ರಿಗೆ ಸಮರ್ಪಿಸಿಬಿಟ್ಟನು. ಆ ಮಾಧವಿಯು ಆಕೆಗಿದ್ದ ವರಬಲದಿಂದ ಪುನಃ ಕನ್ಯಾತ್ವವನ್ನು ಹೊಂದಿದಳು. ಹೀಗೆಯೇ ಗಾಲವರು ಕ್ರಮವಾಗಿ ಮಾಧವಿ

ಯನ್ನು ದಿವೋದಾಸನಿಗೆ ಕೊಟ್ಟು ಪ್ರದರ್ತನನೆಂಬ ಪುತ್ರೋತ್ಪತ್ತಿಯಾದ ನಂತರ, ಆಕೆಯನ್ನು ಪುನಃ ಉಶೀನರನೆಂಬ ರಾಜನಿಗೆ ಕೊಟ್ಟು ಶಿಬಿ ಎಂಬ ಪುತ್ರೋತ್ಪಾದನವಾದ ನಂತರ ಮಾಧವಿಯನ್ನು ಹಿಂತಿರುಗಿ ಪಡೆದರು. ಹೀಗೆ ಇವರಿಬ್ಬರಿಂದಲೂ ಇನ್ನೂರು ಇನ್ನೂರು ಕುದುರೆಗಳನ್ನು ಕಷ್ಟಪಟ್ಟು ಸಂಪಾದಿಸಿದರು. ಇನ್ನು ಇನ್ನೂರು ಕುದುರೆಗಳು ಎಲ್ಲೂ ಸಿಕ್ಕದೇ ಇದ್ದುದರಿಂದ, ಈ ಆರು ನೂರು ಕುದುರೆಗಳನ್ನೂ ಈ ಮಾಧವಿಯನ್ನೂ ಪರಿಗ್ರಹಿಸಿ ಗುರುದಕ್ಷಿಣೆ ಸಂಪೂರ್ಣವಾಗಿ ಬಂದಹಾಗೆ ಭಾವಿಸಬೇಕಾಗಿ ಗಾಲವರು ವಿಶ್ವಾಮಿತ್ರರನ್ನು ಪ್ರಾರ್ಥಿಸಲು, ಆಗ ಅವರು ಸಂತುಷ್ಟರಾಗಿ, ತಮ್ಮ ಶಿಷ್ಯರಂ ಕುರಿತು, ಮೊದಲೇ ಮಾಧವಿಯನ್ನು ತಂದು ಸಮರ್ಪಿಸಿದ್ದರೆ ಯಾವ ತೊಂದರೆಯೂ ನಿಮಗಿರುತ್ತಿರಲಿಲ್ಲವಲ್ಲಾ ಎಂದು ಹೇಳಿ, ಮಾಧವಿಯೊಂದಿಗೆ ರಮಿಸಿ ಅಷ್ಟಕನೆಂಬ ಪುತ್ರನನ್ನು ಪಡೆದರು. ಅನಂತರ ಮಾಧವಿಯನ್ನು ಗಾಲವರ ವಶಕ್ಕೆ ಕೊಟ್ಟುಬಿಟ್ಟುದರಿಂದ, ಗಾಲವರು ಯಯಾತಿಗೆ ಆಕೆಯನ್ನು ಸಮರ್ಪಿಸಿಬಿಟ್ಟರು. ಅನಂತರ ಯಯಾತಿಯು ಆಕೆಗೆ ಸ್ವಯಂವರ ಮೂಲಕ ಮದುವೆಯನ್ನು ಮಾಡಲು ಯತ್ನಿಸಲು, ಮಾಧವಿಯು ಒಪ್ಪದೆ ವನಕ್ಕೆ ತೆರಳಿ ಬಹುಕಾಲ ತಪಸ್ಸು ಮಾಡುತ್ತಿದ್ದಳು. ಯಯಾತಿಯು ಅನೇಕ ಯಜ್ಞಗಳನ್ನು ಮಾಡಿ ಕೆಲವುಕಾಲದ ಮೇಲೆ ಸ್ವರ್ಗಸ್ಥನಾದನು. ಅಲ್ಲಿ ಬಹುಕಾಲವಿದ್ದ ನಂತರ ಸಭೆಯಲ್ಲಿ ದೇವರ್ಷ್ಯಾದಿಗಳಿಗೆ ಮಾಡಿದ ಅವಮಾನದಿಂದ ಸ್ಥಾನಭ್ರಷ್ಟನಾಗಿ ಭೂಮಿಗೆ ಬೀಳುವಾಗ, ತನ್ನ ನಾಲ್ವರು ದೌಹಿತ್ರರಾದ ರಾಜರು ಸೇರಿ ಯಜ್ಞವನ್ನು ಮಾಡಿ ದೇವೇಂದ್ರನನ್ನು ಸಂತೋಷಪಡಿಸುತ್ತಿರುವಾಗ ಅವರ ಮಧ್ಯೆ ಬಂದು ನಿಲ್ಲಲು, ಆ ನಾಲ್ಕು ಜನವೂ ಈತನು ಯಾರೆಂಬುದನ್ನು ತಿಳಿದು ತಮ್ಮ ಪುಣ್ಯವನ್ನು ಆತನಿಗೆ ಸಮರ್ಪಿಸಲು ಒಪ್ಪಿದರೂ ಯಯಾತಿಯು ಅಂಗೀಕರಿಸದಿರುವ ಸಮಯದಲ್ಲಿ, ಮಾಧವಿಯೂ ಅಲ್ಲಿಗೆ ಬರಲಾಗಿ, ಆಕೆಯು ತನ್ನ ಮಕ್ಕಳನ್ನೂ, ತಂದೆಯನ್ನೂ ಕಂಡು ಹರ್ಷಿತಳಾಗಿ, ತನ್ನ ತಂದೆಯು, ಆತನ ದೌಹಿತ್ರರ ಪುಣ್ಯಮೂಲಕವೂ, ತನ್ನ ತಪಃಪ್ರಭಾವದಿಂದಲೂ, ಆ ವೇಳೆಗೆ ಸರಿಯಾಗಿ ಅಲ್ಲಿಗೆ ಬಂದ ಗಾಲವರು ತಮ್ಮ ತಪಸ್ಸಿನ ಎಂಟರ ಒಂದು ಭಾಗವನ್ನು ಕೊಟ್ಟುದರಿಂದಲೂ, ಸ್ವರ್ಗಾರೋಹಣವನ್ನು ಮಾಡಿದುದನ್ನು ಕಂಡು ಸಂತೋಷಯುಕ್ತಳಾದಳು. ಇದೀಗ ಪೂರ್ವಕಥೆಯು. ಈ ಕಥೆಯಲ್ಲೂ ಕೂಡ ವ್ಯಾಜಸಾಪೇಕ್ಷೆಯಿಲ್ಲದೆ ಸರ್ವೇಶ್ವರನು ಯಯಾತಿಗೆ ಸ್ವರ್ಗಾರೋಹಣವನ್ನು ದಯಪಾಲಿಸಲಿಲ್ಲವು ದೌಹಿತ್ರರುಗಳ ಕಿಂಚಿತ್ಕಾರದಿಂದಲೂ, ಮಾಧವಿ ಗಾಲವರ ತಪೋಬಲದಿಂದಲೂ, ಸ್ವರ್ಗಪ್ರಾಪ್ತಿಯನ್ನು ಯಯಾತಿಗೆ ಸರ್ವೇಶ್ವರನುಂಟುಮಾಡಿದನೆಂಬಂಶವನ್ನು ನಾವು ಗ್ರಹಿಸತಕ್ಕದ್ದು.

ಎಙ್ಗ್ಗರ ಶ್ಲೋಕತ್ತಿಲುಮ್ ನಾಥಶಬ್ದತ್ತಿಲ್ ವ್ಯುತ್ಪತ್ತಿಯಾಲುಮ್, ನಿರ್ಭರತ್ವೈಕ್ಕು ಉಪಯುಕ್ತಮಾನ ಸಂಬಂಧ ವಿಶೇಷತ್ತೈ ಚೊಲ್ಲುಗಿರ ಮತುಪ್ ಪ್ರತ್ಯಯತ್ತಾಲುಮ್, ಯಾಚನಮುಮ್, ಆತ್ಮನಿಕ್ಷೇಪಮುಮ್, ವ್ಯಂಜಿತಮಾಯಿತ್ತು.

ಈ ಶ್ಲೋಕದ ಸರಿಯಾದಭಿಪ್ರಾಯವು ಯಾವುದೆಂದು "ನಾಥವಂತಃ" ಎಂಬ ಶಬ್ದವ್ಯುತ್ಪತ್ತಿ ಮೂಲಕ ತಿಳಿಸುತ್ತಾರೆ. ಎಙ್ಗ್ಗರ ಶ್ಲೋಕತ್ತಿಲುಮ್ - ಯೋ ನಾಥವನ್ತೋಹಿ ಎಂಬ ಶ್ಲೋಕದಲ್ಲಿ, ನಾಥಶಬ್ದತ್ತಿಲ್ ವ್ಯುತ್ಪತ್ತಿಯಾಲುಮ್ - ನಾಥೃ ಯಾಚ್ಞಾಯಾಂ ಎಂಬ ಧಾತುವಿನಿಂದ, ಗೋಪ್ತೃತ್ವವರಣವು ಬೋಧಿಸಲ್ಪಟ್ಟಿತು; ಮತ್ತು ವಂತಃ ಎಂಬ ಮತುಪ್ ಪ್ರತ್ಯಯದಿಂದ ನೈರ್ಭರ್ಯವು ಹೇಳಲ್ಪಟ್ಟಿತು ಎಂದು ಮುಂದೆ ತಿಳಿಸುತ್ತಾರೆ. ನಿರ್ಭರತ್ವೈಕ್ಕು ಉಪಯುಕ್ತಮಾನ ಸಂಬಂಧವಿಶೇಷತ್ತೈ - ಹೀಗೆ ರಕ್ಷಣಾರ್ಥವಾಗಿ ನಾಥರನ್ನು ಯಾಚಿಸಿಬಿಟ್ಟು ನಿರ್ಭರನಾಗಿರಲು ಪ್ರಯೋಜನಕಾರಿಯಾದ ಸಂಬಂಧವನ್ನು, ಶೊಲ್ಲುಗಿರ-ಹೇಳುವ, ತಿಳಿಸುವ, ಮತುಪ್ ಪ್ರತ್ಯಯದಿಂದ, ಯಾಚನಮುಮ್ - ರಕ್ಷಿಸಬೇಕೆಂಬ ಪ್ರಾರ್ಥನೆಯೂ, ಆತ್ಮನಿಕ್ಷೇಪಮುಮ್ - ಭರಸಮರ್ಪಣೆಯೂ ಸಹ, ವ್ಯಂಜಿತಮಾಯಿತ್ತು - ವ್ಯಕ್ತಪಡಿಸಲ್ಪಟ್ಟಿತು. ನಾಥನನ್ನು ಆಶ್ರಯಿಸಿ ನಾಥವಂತರಾಗುವುದು ಏತಕ್ಕೆಂದರೆ, ತನಗೆ ಸಾಧ್ಯವಲ್ಲದ ಒಂದು ಕಾರ್ಯನಿರ್ವಹಣದಲ್ಲಿ, ಆ ನಾಥನಲ್ಲಿ ಸರ್ವಭಾರವನ್ನಿಟ್ಟು ರಕ್ಷಿಸು ಎಂದು ಪ್ರಾರ್ಥಿಸೋಣವು. ಇದಕ್ಕೇ ಭರನ್ಯಾಸ, ಪ್ರಪದನಾದಿ ಹೆಸರುಗಳುಂಟು. ಸಾಂಗಪ್ರಪದನಾಧಿಕಾರದ ಸಂಗ್ರಹಶ್ಲೋಕದಲ್ಲಿ "ಭರನ್ಯಾಸಂ ಯಾಚ್ಞಾನ್ವಿತಮಭಿವದಂತಿ ಪ್ರಪದನಂ" ಎಂದು ಹೇಳಲ್ಪಟ್ಟಿರುತ್ತದೆ. ([illegible] ನೆಯ ಪುಟಗಳನ್ನು ನೋಡಿ) ಅಲ್ಲದಪ್ಪೋದು - ಹೀಗೆ ನಾಥವಂತಃ ಎಂಬ ಪದಕ್ಕೆ ಅರ್ಥ ಹೇಳದೆ ಇದ್ದರೆ ಸಾಧ್ಯೋಪಾಯವ [illegible] ಮೂಲಕ. ಅತಿ ಪ್ರಸಜ್ಗಾದಿ ದೋಷಙ್ಗಳ್ ವರುಮ್ - ಹಿಂದೆ ಹೇಳಿದ ಸರ್ವಮುಕ್ತಿ ಪ್ರಸಂಗವೇ ಮೊದಲಾದ ದೋಷಗಳು ಪರಮಾತ್ಮನಿಗೆ ಉಂಟಾಗುವವು. ಇಲ್ಲಿ ಆದಿ ಪದದಿಂದ ವೈಷಮ್ಯ ನೈರ್ಘೃಣ್ಯ ದೋಷಗಳೂ ಸೂಚಿಸಲ್ಪಟ್ಟಿವೆ.

ಆದರೆ ನಾಥವಂತಃ ಎಂಬ ಶಬ್ದಕ್ಕೆ ಸಾಧಾರಣವಾಗಿ ರೂಢಿಯಲ್ಲಿ ಸ್ವಾಮಿಯನ್ನು ಹೊಂದಿರುವವನು ಎಂದು ಇಷ್ಟು ಮಾತ್ರ ಅರ್ಥ ತೋರುವಾಗ, ಮತ್ತು ನಿಘಂಟಿನಲ್ಲಿ "ಪರತಂತ್ರಃ ಪರಾಧೀನಃ ಪರವಾನ್ ನಾಥವಾನಪಿ" ಎಂದಿರು

ಅಲ್ಲಾದಪ್ರೋದು ಅತಿಪ್ರಸಜ್ಞಾದಿ ದೋಷಙ್ಗಳ್ ವರುಮ್ "ನಾಥ ವಂತಃ" ಎನ್ಗಿರ ವಿಭಕ್ತಿಲಿತ್ತನೈ ವಿವಕ್ಷಿತ್ತು ಕೊಳ್ಳಾದಪ್ರೋದು ಲೋಕ ನೀತಿಯಿಲುಳ್ಳದೆಲ್ಲಾ ಮೋಕ್ಷಶಾಸ್ತ್ರತ್ತಿಲ್ ಊಹಿಕ್ಕೈ ವಚನವಿರುದ್ಧಮ್.

ವುದರಿಂದ ಪರಾಧೀನನೆಂಬ ಇಷ್ಟು ಮಾತ್ರ ಅರ್ಥವೇ ಬೋಧಿತವಾಗಿರುವಾಗ, ಸಾತ್ಯಕಿಯ ವಾಕ್ಯದ ನಾಥವಂತ ಶಬ್ದವನ್ನು ಹೇಳುವಾಗ ವ್ಯಾಸರು ರೂಢಾರ್ಥವನ್ನು ತ್ಯಜಿಸಿ ಯೋಗಾರ್ಥವನ್ನು ಮನಸ್ಸಿನಲ್ಲಿಟ್ಟು, ಧಾತು ವ್ಯುತ್ಪತ್ತಿಯೇನು. ಮತುಪ್ ಪ್ರತ್ಯಯಾರ್ಥವೇನು, ಇವುಗಳ ಮೂಲಕ ಭರತಮುನಿಯ ವಾಕ್ಯ ಅಹಿರ್ಬುಧ್ನ್ಯಸಂಹಿತಾ ವಾಕ್ಯ ಇವುಗಳ ತಾತ್ಪರ್ಯವನ್ನು ವ್ಯಕ್ತಪಡಿಸಿದರೆಂದು ಹೇಳುವುದು ಇಲ್ಲದ ಅತಿಶಯ ಕಲ್ಪನೆಯಲ್ಲವೋ ಎಂಬಾಕ್ಷೇಪ ಬಂದೀತಾಗಿ ಭಾವಿಸಿ ಸಮಾಧಾನವನ್ನು ಹೇಳುತ್ತಾರೆ. ಮಹರ್ಷಿಗಳಾದ ವಾಲ್ಮೀಕಿ ಪರಾಶರ ವ್ಯಾಸ ಶುಕಮಹರ್ಷಿಗಳು ಸಾಧಾರಣ ಪ್ರಯೋಗಗಳಲ್ಲೂ ವಿಶೇಷ ಆಧ್ಯಾತ್ಮ ಸಂಬೋಧವು ಆಗುವ ಹಾಗೆ ಉಪದೇಶಿಸುವುದು ವಾಡಿಕೆಯು; ಅಂತಹ ಶಕ್ತಿಯೂ ಅವರುಗಳಿಗೆ ಉಂಟು. ಹಾಗೆಯೇ ಇಲ್ಲಿಯೂ, ಯಾರಿಗೆ ತಮ್ಮ ಕಾರ್ಯವನ್ನು ತಾವೇ ಸಾಧಿಸಿಕೊಳ್ಳಲು ಶಕ್ತಿಯಿಲ್ಲವೋ, ಅವರು ಒಬ್ಬ ನಾಥನನ್ನು ಆಶ್ರಯಿಸಿ, ತಾವೇ ಸ್ವತಂತ್ರಿಸಿ ಕಾರ್ಯ ಮಾಡದೆ ಅವರನ್ನು ಪ್ರಾರ್ಥಿಸಿ, ಅದರ ಸರ್ವ ಭರವನ್ನು ಆ ನಾಥನಲ್ಲಿಟ್ಟು, ತಾವು ಕೃತಕೃತ್ಯರಾಗುವರು. ಹಾಗೆಯೇ ಇಲ್ಲಿಯೂ, ಯೇ - ಯಾರು ನಾಥವಂತರೋ ಎಂದರೆ ಒಬ್ಬ ನಾಥನನ್ನು ಆಶ್ರಯಿಸಿ, ಆತನನ್ನು ಕಾರ್ಯಸಾಧನೆಗಾಗಿ ಯಾಚಿಸಿ, ಆತನಲ್ಲಿ ಕಾರ್ಯಸಾಧನೆಯ ಸರ್ವ ಭರವನ್ನಿಟ್ಟಿರುವರೋ, ಇದರಿಂದ ಆಧ್ಯಾತ್ಮ ಪರವಾದ ಅರ್ಥವೇನೆಂದರೆ, ಯಾರು ಮೋಕ್ಷಾರ್ಥಿಗಳಾಗಿ ಸರ್ವೇಶ್ವರನಾಗಿರುವ ಶ್ರೀಪತಿಯನ್ನು ಆಶ್ರಯಿಸಿ, ಆತನಲ್ಲಿ ಸರ್ವ ಭರವನ್ನಿಟ್ಟು ಪ್ರಪದನವನ್ನು ಅನುಷ್ಠಿಸುವರೋ ಅವರು, ಆತ್ಮಕೃತಾನ್ಯಪಿ - ಅನಂತರ ಇವರು ಯಾವ ಆಕಿಞ್ಚನ್ಯಕ್ಕಾಗಿ ಮಾಡುವ ಕರ್ಮಗಳನ್ನು, ಸಕಲಸಾರಥಂ ತೇ - ಪ್ರಾರಂಭಿಸಿದ ಅವಶ್ಯಕವಿರುವುದೆಲ್ಲವೂ ಎಂಬುದಾಗಿ ಹೇಳಬಹುದು ಅರ್ಥ ಹೇಳಬಹುದು. ಇದರಿಂದ ಹೇಳುತ್ತಾರೆನೆಂದರೆ — ನಾಥವಂತಃ ಎನ್ಗಿರ ವಿಭಕ್ತಿಲ್ - ನಾಥವಂತಃ ಎಂಬ ಪ್ರಯೋಗದಲ್ಲಿ, ಇತ್ತನೈ ವಿವಕ್ಷಿತ್ತು - ನಾವು ಉಪಪಾದಿಸಿದ ಅಭಿಪ್ರಾಯವನ್ನು, ಕೊಳ್ಳಾದ ಪ್ರೋದು - ಗ್ರಹಿಸದೆ ಹೋದರೆ, ಲೋಕನೀತಿಯಿಲುಳ್ಳದೆಲ್ಲಾಮ್ - ಲೋಕನೀತಿಯಿಂದ ಪ್ರಸಿದ್ಧವಾದದೆಲ್ಲವನ್ನು, ಮೋಕ್ಷಶಾಸ್ತ್ರತ್ತಿಲ್ ಊಹಿ

ಸಾಧ್ಯೋಪಾಯಾವಶ್ಯಕತ್ವೇಽಪಿ ಸ್ವರಕ್ಷಣೇಽಶಕ್ತ ಇತಿ
ಆಪ್ತವಾಕ್ಯಸ್ಯ ನವಿರೋಧಃ.

ಸರ್ವರಕ್ಷಕನಾನ ಈಶ್ವರನುಂಡಾಯಿರುಕ್ಕ ಸ್ವರಕ್ಷಣಾರ್ಥ ವ್ಯಾಪಾರತ್ತಿಲ್ ನಮುಕ್ಕು ಅನ್ವಯಮಿಲ್ಲೈ ಎಙ್ಗಿರ ಆಪ್ತರ್ ಪಾಶುರತ್ತುಕ್ಕು ತಾತ್ಪರ್ಯಮ್ ಶೊಲ್ಲುಗಿರೋಮ್ :—

ಯದರ್ಥಂತು ಕೃತೋನ್ಯಾಸಸ್ತದರ್ಥಂ ನಪುನಃ ಕ್ರಿಯಾ ।
ಪೂರ್ವಮುಪ್ಯಪರಾಧೀನ ಪ್ರವೃತ್ತಾವಸ್ಯ ನಾನ್ವಯಃ ॥ ೨೧ ॥

ಕ್ಕೈ - ಮೋಕ್ಷಶಾಸ್ತ್ರಾರ್ಥವಾಗಿ ಊಹಿಸೋಣವು, ವಚನವಿರುದ್ಧಮ್ - ಸಾಕ್ಷಾತ್ತಾಗಿ ಮೋಕ್ಷಶಾಸ್ತ್ರದಲ್ಲಿ ಹೇಳಿರುವ ವಚನಗಳಿಗೆ ವಿರುದ್ಧವಾಗುತ್ತದೆ. "ಭಕ್ತ್ಯಾ ಪರಮಯಾವಾಪಿ ಕೃಪಯಾ ವಾ ಮಹಾಮುನೇ । ಪ್ರಾಪ್ಯೋಽಹಂ ನಾನ್ಯಥಾಪ್ರಾಪ್ಯಃ ಮಮಕೈಙ್ಕರ್ಯಲಿಪ್ಸುಭಿಃ", "ಯದ್ಯೇನ ಕಾಮಕಾಮೇನ ನ ಸಾಧ್ಯಂ ಸಾಧನಾಂತರೈಃ । ತೇನ ತೇನಾಪ್ಯತೇ ತತ್ತನ್ನ್ಯಾಸೇನೈವ ಮಹಾಮುನೇ ॥", "ಸರ್ವಜ್ಞೋಽಪಿಹಿ ವಿಶ್ವೇಶಃ ಸದಾ ಕಾರುಣಿಕೋಽಪಿಸನ್ । ಸಂಸಾರ ತಂತ್ರವಾಹಿತ್ವಾ ದ್ರಕ್ಷ್ಯಾಪೇಕ್ಷ್ಯಾಂ ಪ್ರತೀಕ್ಷತೇ ॥" ಇತ್ಯಾದಿ ಅನೇಕ ಪ್ರಮಾಣ ವಚನಗಳಿಗೆ ವಿರುದ್ಧವಾಗುತ್ತದೆ.

ಹೀಗೆ ಸಾಧ್ಯೋಪಾಯವಾವಶ್ಯಕವೆಂದ ಹೇಳಿದರೂ, ಚೇತನನು
ಸ್ವರಕ್ಷಣವಲ್ಲಿ ಅಶಕ್ತನೆಂಬ ಆಪ್ತವಾಕ್ಯವೇನೂ ವಿರೋಧವಲ್ಲವು.

ಸರ್ವರಕ್ಷಕನಾನ ಈಶ್ವರನುಣ್ಡಾಯಿರುಕ್ಕ - "ಸರ್ವಲೋಕ ಶರಣ್ಯ" ನೆಂದೂ, "ಸರ್ವಸ್ಯ ಶರಣಂ ಸುಹೃತ್" ಎಂದೂ ಹೇಳಿರುವ ಹಾಗೆ ಸರ್ವರಿಗೂ ರಕ್ಷಕನಾದ ಸರ್ವೇಶ್ವರನಿರುತ್ತಿರಲಾಗಿ, ಸ್ವರಕ್ಷಣಾರ್ಥ ವ್ಯಾಪಾರತ್ತಿಲ್-ತನ್ನನ್ನು ರಕ್ಷಿಸಿಕೊಳ್ಳುವ ವ್ಯಾಪಾರದಲ್ಲಿ, ನಮುಕ್ಕು ಅನ್ವಯಮಿಲ್ಲೈ - "ನಕರ್ತೃತ್ವಂ ನಕರ್ಮಾಣಿ ಲೋಕಸ್ಯ ಸೃಜತಿ ಪ್ರಭುಃ" (ಗೀ.೫ ೧೪) ಎಂದು ಹೇಳಿರುವಹಾಗೆ ಸಂಪೂರ್ಣಪರತಂತ್ರರಾದ ನಮಗೆ ಸಂಬಂಧವಿಲ್ಲವು, ಎಙ್ಗಿರ ಆಪ್ತರ್ ಪಾಶುರತ್ತುಕ್ಕು-ಎಂದು ಹೇಳುವ ಸಂಪ್ರದಾಯ ತಿಳಿದ ಮಹಾನುಭಾವರ ಅಭಿಪ್ರಾಯಕ್ಕೆ, ತಾತ್ಪರ್ಯವನ್ನು ಹೇಳುವೆವು. ಏನೆಂದರೆ :— ಇದು ಮುಖ್ಯವಾದುದರಿಂದ ಒಂದು ಕಾರಿಕೆಯ ಮೂಲಕ ಆ ಆಪ್ತರ ಅಭಿಪ್ರಾಯವನ್ನು ತಿಳಿಸುತ್ತಾರೆ :—

ಯಥಾಪ್ರಮಾಣಮ್ ಸ್ವರಕ್ಷಣ ಭರಸಮರ್ಪಣಂ ಪಣ್ಣಿನವನು ಕ್ಕುಪ್ಪಿನ್ಬು ಸ್ವರಕ್ಷಣಾರ್ಥ ವ್ಯಾಪಾರತ್ತಿಲ್ ಪ್ರಾಪ್ತಿಯಿಲ್ಲೈ. ಮುನ್ಬು ತಾನುಂ ಸ್ವರಕ್ಷಣಾರ್ಥಮಾಗಪ್ಪಣ್ಣಿನ ಸಮರ್ಪಣಾದಿ ವ್ಯಾಪಾರಮುಮ್

ಯದರ್ಥಂ - ಏತಕ್ಕಾಗಿ ಎಂದರೆ ಯಾವ ಆತ್ಮ ಸಂರಕ್ಷಣಾರ್ಥವಾಗಿ, **ನ್ಯಾಸಃ** - ಭರನ್ಯಾಸವು, **ಕೃತಃ** - ಮೋಕ್ಷಾರ್ಥಿಯಿಂದ ಮಾಡಲ್ಪಟ್ಟಿತೋ. ತದರ್ಥಂ-ಅದಕ್ಕಾಗಿ ಎಂದರೆ ಅಂತಹ ತನ್ನ ರಕ್ಷಣೆಗಾಗಿ, **ನಪುನಃಕ್ರಿಯಾ**-ಪುನಃ ಮಾಡತಕ್ಕ ವ್ಯಾಪಾರವು ಯಾವುದೂ ಇರುವುದಿಲ್ಲವು. **ಪೂರ್ವಮಪಿ** - ಭರನ್ಯಾಸಕ್ಕೆ ಪೂರ್ವದಲ್ಲೂ ಕೂಡ, **ಅಪರಾಧೀನಪ್ರವೃತ್ತೌ**-ತನ್ನ ಇಚ್ಛೆಗೆ ಅಧೀನವಾದ ಎಂದರೆ, ಸ್ವರಕ್ಷಣೆಗಾಗಿ ತನಗೆ ಸ್ವಾಧೀನವಾದ ಪ್ರವೃತ್ತಿಯಲ್ಲೂ, **ಅಸ್ಯ** - ಈ ಮೋಕ್ಷಾರ್ಥಿಗೆ, **ನಾನ್ವಯಃ** - ಸಂಬಂಧವಿರುವುದಿಲ್ಲವು. ಹೀಗೀಗ ಅವರುಗಳ ಅಭಿಪ್ರಾಯವೆಂಬ ಭಾವವು. ಭರನ್ಯಾಸಾನಂತರ ಕೃತಕೃತ್ಯನಾದುದರಿಂದ ತನ್ನ ರಕ್ಷಣೆಗಾಗಿ ಏನೊಂದೂ ಮಾಡಬೇಕಾದುದಿಲ್ಲವು. ಆದರೆ ಆ ಭರನ್ಯಾಸಕ್ಕೆ ಪೂರ್ವದಲ್ಲಾದರೋ ಯದ್ಯಪಿ ಸ್ವರಕ್ಷಣೆಗಾಗಿ ಭರನ್ಯಾಸಾದಿ ಸಾಧ್ಯೋಪಾಯದಲ್ಲಿ ಈಶ್ವರಾಧೀನವಾದ ಪ್ರವೃತ್ತಿಯಿದ್ದರೂ, ಸರ್ವಸ್ವಾತಂತ್ರ್ಯನಾದ ಪ್ರವೃತ್ತಿಯಲ್ಲಿ ಅನ್ವಯವಿಲ್ಲದುದರಿಂದ, ತನಗೆ ಯಾವುದರಲ್ಲೂ ಅಂತಹ ಕರ್ತೃತ್ವವಿಲ್ಲವೆಂಬನು ಸಂಧಾನವೇ ಯುಕ್ತವೆಂಬುದೇ ಈ ಮಹಾ ಪೂಜ್ಯರಾದ ಆಪ್ತರಭಿಪ್ರಾಯವು. ಸಾಧ್ಯೋಪಾಯವು ಅನಾವಶ್ಯಕವೆಂಬಭಿಪ್ರಾಯವಲ್ಲವು. ಸಾಧ್ಯೋಪಾಯಾನುಷ್ಠಾನದಲ್ಲಿಯೂ ಕೂಡ ತನಗೆ ಸ್ವತಂತ್ರಪ್ರವೃತ್ತಿ ಎಲ್ಲಿಯದು? ಅದರಲ್ಲೂ ಕರ್ತೃತ್ವವು ಪರಾಯತ್ತವಾದುದೆಂಬ ಭಾವವು.

ಈ ಶ್ಲೋಕಾಭಿಪ್ರಾಯವನ್ನೇ ಚನ್ನಾಗಿ ವಿವರಿಸುತ್ತಾರೆ:— **ಯಥಾಪ್ರಮಾಣಂ** - ಶಾಸ್ತ್ರದಲ್ಲಿ ಹೇಗೆ ಹೇಳಿದೆಯೋ ಹಾಗೆ, ಎಂದರೆ ಸಸಂಕಲ್ಪವಾಗಿ, **ಸ್ವರಕ್ಷಣ ಭರಸಮರ್ಪಣಂ ಪಣ್ಣಿನವನುಕ್ಕು** - ತನ್ನ ಸಂರಕ್ಷಣೆಗಾಗಿ ಭರಸಮರ್ಪಣವನ್ನು ಮಾಡಿದವನಿಗೆ, **ಪಿನ್ಬು** - ಭರಸಮರ್ಪಣವಾದ ನಂತರ, **ಸ್ವರಕ್ಷಣಾರ್ಥ ವ್ಯಾಪಾರತ್ತಿಲ್ ಪ್ರಾಪ್ತಿಯಿಲ್ಲೈ** - ತನ್ನನ್ನು ರಕ್ಷಿಸಿಕೊಳ್ಳುವ ವ್ಯಾಪಾರದಲ್ಲಿ ತನಗೆ ಸಂಬಂಧವಿಲ್ಲವು. **ಮುನ್ಬು** - ಇದಕ್ಕೆ ಹಿಂದೆ, ತಾನು ತನ್ನ ಸಂರಕ್ಷಣೆಗಾಗಿ ಮಾಡಿದ, **ಸಮರ್ಪಣಾದಿ ವ್ಯಾಪಾರಮುಮ್** - ಭರಸಮರ್ಪಣಾದಿ ವ್ಯಾಪಾರವನ್ನೂ ಕೂಡ, ಇದು ಮುಂದೆ **ಪಣ್ಣುವಿತ್ತಾನ್** ಎಂಬುದಕ್ಕೆ ಕರ್ಮಪದವು, **ಸರ್ವಕರ್ತಾವಾನ** - ಸಮಸ್ತ ಕಾರ್ಯಗಳಿಗೂ ಕರ್ತನಾದ, ಅವ

ಸರ್ವಶರಣ್ಯನಾನ ಅನನ್ತನೇ ಬೀಜಾಙ್ಕುರ ನ್ಯಾಯತ್ತಾಲೆ ಅನಾದಿಯಾಗ ಪ್ರವರ್ತಿಪ್ಪಿತ್ತ ಕರ್ಮಪ್ರವಾಹ ವಿಪಾಕ ವಿಶೇಷತ್ತಿಲೆ ವನ್ದೊರು ಯಾದೃಚ್ಛಿಕ ಸುಕೃತಾದಿ ವಿಶೇಷಕಾರಣತ್ತೈ ಮುನ್ನಿಟ್ಟುಕ್ಕೊಂಡು ಪಣ್ಣಿವಿತ್ತಾನಾಗೈಯಾಲೇ ನಾಮೇ ನಮ್ಮೈ ರಕ್ಷಿತ್ತುಕೊಳ್ಳುಗಿರೋಮೆನ್ನಿರುಕ್ಕ ಪ್ರಾಪ್ತಿಯಿಲ್ಲೈ.

ನನ್ತನೇ - ಆ ಸರ್ವೇಶ್ವರನೇ, ಬೀಜಾಙ್ಕುರ ನ್ಯಾಯತ್ತಾಲೆ - ಬೀಜದಿಂದ ಗಿಡವೋ, ಗಿಡದಿಂದ ಬೀಜವೋ ಎಂದು ವಿಮರ್ಶೆ ಮಾಡಿ ಹೇಳುವುದಕ್ಕಾಗದ ರೀತಿಯಲ್ಲಿ, ಆದುದರಿಂದಲೇ, ಅನಾದಿಯಾಗ - ಅನಾದಿ ಎಂದು ಹೇಳಿಸಿಕೊಳ್ಳುವ ಹಾಗೆ, ಪ್ರವರ್ತಿಪ್ಪಿತ್ತ - ಪ್ರವರ್ತಿಸುವ ಹಾಗೆ ಮಾಡಿದ, ಕರ್ಮಪ್ರವಾಹ ವಿಪಾಕ ವಿಶೇಷತ್ತಿಲೆ - ಕರ್ಮಪ್ರವಾಹದ ಪರಿಪಕ್ವ ದಶೆಯಲ್ಲಿ, ವನ್ದದು - ಬಂದಂತ, ಒರು ಯಾದೃಚ್ಛಿಕ ಸುಕೃತಾದಿ ವಿಶೇಷಕಾರಣತ್ತೈ ಮುನ್ನಿಟ್ಟುಕೊಂಡು - ಒಂದು ಸುಕೃತವನ್ನು ಮಾಡಬೇಕೆಂಬ ಸಂಕಲ್ಪವೇನೂ ಇಲ್ಲದೆ ತಾನಾಗಿಯೇ ಪರಿಣಮಿಸಿದಂತ ಸುಕೃತವೇ ಮೊದಲಾದುದನ್ನು ನಾಲಿ ಮಾಡಿಕೊಂಡು, ಪಣ್ಣಿವಿತ್ತಾನಾಗೈಯಾಲೆ - ಭರಸಮರ್ಪಣವನ್ನು ಈ ಮುಮುಕ್ಷುಗಳಾದ ನಮ್ಮ ಕೈಯಲ್ಲಿ ಮಾಡಿಸಿದನಾದುದರಿಂದ, ನಾಮೇ - ನಾವುಗಳೇ, ನಮ್ಮೈ ರಕ್ಷಿತ್ತುಕ್ಕೊಳ್ಳುಗಿರೋಮೆನ್ - ನಮ್ಮನ್ನು ಸ್ವತಂತ್ರಿಸಿ ರಕ್ಷಿಸಿಕೊಳ್ಳುವೆವು, ಎನ್ನಿರುಕ್ಕ - ಎಂದು ಇರಲು, ಪ್ರಾಪ್ತಿಯಿಲ್ಲೈ - ಸಾಧ್ಯವಿಲ್ಲವು. ಐದು ಅಂಗಗಳಿಂದಲೂ ಕೂಡಿದ ಭರನ್ಯಾಸವನ್ನು ಒಬ್ಬ ಮುಮುಕ್ಷುವು ಅನುಷ್ಠಿಸಿದರೆ, ಅಂತಹ ಅನುಷ್ಠಾನದಿಂದ ತನಗೆ ಮೋಕ್ಷವು ಉಂಟೆಂದು ಸರ್ವೇಶ್ವರನು ಅಭಯ ಪ್ರದಾನ ಮಾಡುವುದರಿಂದ, ಆತನು ಕೃತಕೃತ್ಯನಾಗುವನು; ಇದರಿಂದ ಮುಂದಕ್ಕೆ ಮೋಕ್ಷಾರ್ಥವಾಗಿ ಇನ್ನೇನನ್ನು ಮಾಡಬೇಕಾದ್ದಿಲ್ಲವೆಂಬುದು ಆಪ್ತರ ವಾಕ್ಯಕ್ಕೆ ಇದೊಂದು ಅಭಿಪ್ರಾಯವು. ಭರನ್ಯಾಸಕ್ಕೆ ಪೂರ್ವಭಾವಿಯಾಗಿಯೂ ಇಂತಹ ನಿರತಿಶಯ ಫಲವನ್ನು ಕರಗತವಾಗುವ ಹಾಗೆ ಮಾಡಿಕೊಡುವ ಭರನ್ಯಾಸಾನುಷ್ಠಾನಕ್ಕೂ ಮೂಲಕಾರಣನು ಸರ್ವ ಕರ್ತೃತ್ವವುಳ್ಳ ಸರ್ವೇಶ್ವರನು. ನಾವು ಅನಾದಿಯಾಗಿ ಮಾಡುತ್ತಿರುವ ಕರ್ಮಪ್ರವಾಹರೂಪ ಪರಂಪರೆಯಲ್ಲಿ ಯಾವುದೋ ಒಂದು ಸುಕೃತ ಪರಿಪಾಕವನ್ನು ಮುಂದಿಟ್ಟುಕೊಂಡು, ಜನನ ಕಾಲದಲ್ಲಿ ಕಟಾಕ್ಷವೀಕ್ಷಣೆ, ಸತ್ತ್ವಗುಣಾಧಿಕ್ಯವು, ಸಾತ್ವಿಕ ಸಂಭಾಷಣೆ, ಗುರೂಪಸದನ, ಉಪಾಯಾನುಷ್ಠಾನಗಳನ್ನು ಆತನೇ ಪರಮಕೃಪೆಯೂ ಉಂಟುಮಾಡುವುದರಿಂದಲೂ, ನಾವುಗಳ

ನಿಗಮನೇ ಸ್ವಸಿದ್ಧಾನ್ತಮಾಹ

ಸರ್ವರಕ್ಷಕನಾಗ ಮೂಲಮನ್ತ್ರಾದಿಗಳಿಲೆ ಶಿಕ್ಷಿತನಾನ ಇವನ್ತಾನೇ

ನಮ್ಮನ್ನು ರಕ್ಷಿಸಿಕೊಳ್ಳುವುದಕ್ಕೆ ತುಂಬಾ ಅಶಕ್ತರಾದುದರಿಂದಲೂ, ಸ್ವರಕ್ಷಣೆಯ ವ್ಯಾಪಾರದಲ್ಲಿ ನಮಗೆ ಅನ್ವಯವಿಲ್ಲವೆಂದೂ ಹೇಳಿದರು. ಇದು ಎರಡನೆಯ ಅಭಿಪ್ರಾಯವು. ಇಷ್ಟು ಮಾತ್ರವೇ ಆ ಆಪ್ತರ ವಾಕ್ಯಕ್ಕೆ ಅಭಿಪ್ರಾಯವೇ ವಿನಾ ಉಪಾಯಾನುಷ್ಠಾನವು ಯಥಾವಿಧಿ ಮಾಡತಕ್ಕದ್ದಲ್ಲವೆಂಬುದು ಅವರ ತಾತ್ಪರ್ಯ ವಲ್ಲವು. ಕರ್ಮವು ಅನಾದಿಯಾಗಿ ಈತನಿಗೆ ಬಂದಿರುತ್ತದೆ. ಈ ಚೇತನನು ಮೊದಲೋ, ಕರ್ಮವು ಮೊದಲೋ, ಎಂದು ಹೇಳಲು ಸಾಧ್ಯವಿಲ್ಲವಾದುದರಿಂದ ಬೀಜಾಂಕುರ ನ್ಯಾಯಪ್ರಕಾರ ಚೇತನನೂ ಆತನ ಕರ್ಮಾದಿಗಳೂ ಅನಾದಿ ಎಂದು ಹೇಳಲ್ಪಟ್ಟವು. ಯಾವುದೋ ಒಂದು ಕಾಲದಲ್ಲಿ ಯಾದೃಚ್ಛಿಕ ಸುಕೃತಮೂಲಕ ಇಂತಹ "**ಏಷ ಏವ ಸಾಧುಕರ್ಮ ಕಾರಯತಿ**" ಉತ್ತಮ ಕೆಲಸಗಳನ್ನು ಮಾಡಿಸಿ ನಿರತಿಶಯ ಫಲವನ್ನು ಕೊಡುವನು. ಇದೆಲ್ಲಾ ಬಹು ನಿಪುಣತರವಾಗಿ ಹಿಂದೆಯೇ ಉಪಪಾದಿಸಿರುತ್ತಾರೆ. ೧೬೬—೧೯೩ನೆಯ ಪುಟಗಳನ್ನು ನೋಡಿ. "**ಅಧಿಷ್ಠಾನಂ ತಥಾ ಕರ್ತಾ**" ಎಂಬ ಗೀತಾ ಶ್ಲೋಕದಲ್ಲೂ ಸರ್ವೇಶ್ವರ ಸಂಕಲ್ಪವಿಲ್ಲದೆ ಈತನು ಯಾವ ಕೆಲಸವನ್ನೂ ಮಾಡಲು ಸಾಧ್ಯವಿಲ್ಲವೆಂಬುದೂ ಸಹ ಹಿಂದೆಯೇ **ಉಪಪಾದಿತವಾಗಿರುತ್ತದೆ**

ಹೀಗೆ ಸ್ವರಕ್ಷಣೆಯಲ್ಲಿ ನಮಗೆ ಸಂಪೂರ್ಣವಾದ ಅಶಕ್ತತೆಯು ಸ್ಪಷ್ಟವಾದ ನಂತರ **ಸರ್ವಶಕ್ತನಾದ** ಸರ್ವೇಶ್ವರನು ತಾನೇ ರಕ್ಷಕನಾಗಬೇಕಲ್ಲವೇ ಎಂದರೆ ಹೌದು, ವ್ಯಾಜಸಾಪೇಕ್ಷಕನಾಗಿಯೇ ರಕ್ಷಿಸುವನು ; ಹಾಗೆಯೇ ಮೂಲಮಂತ್ರಾದಿಗಳು ಹೇಳುವುದರಿಂದ ತಮಗೆ ಈ ಅಭಿಪ್ರಾಯದಲ್ಲಿ ಶಾಸ್ತ್ರ ಸಮ್ಮತಿಯೂ ಉಂಟೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ :—

ಕೊನೆಯಲ್ಲಿ ತಮ್ಮ ಸಿದ್ಧಾಂತವನ್ನು ತಿಳಿಸುತ್ತಾರೆ.

ಅಭಿಯುಕ್ತರಭಿಪ್ರಾಯವೂ ತಮ್ಮಭಿಪ್ರಾಯವೂ ಎಲ್ಲಾ ಒಂದೇ, ಏನೂ ವ್ಯತ್ಯಾಸವಿಲ್ಲವು. ಅದು ಯಾವುದೆಂದರೆ ಸಿದ್ಧಾಂತಿಸಿ ಹೇಳುತ್ತಾರೆ:–**ಸರ್ವರಕ್ಷಕನಾಗ** - ಸರ್ವರಿಗೂ ರಕ್ಷಕನೆಂದು, **ಮೂಲಮಂತ್ರಾದಿಗಳಿಲೇ** - ಅಷ್ಟಾಕ್ಷರ, ಆದಿ ಪದದಿಂದ ದ್ವಯ, ಚರಮಶ್ಲೋಕಗಳಲ್ಲೂ. **ಶಿಕ್ಷಿತನಾನ** - ಉಪದೇಶಿಸಲ್ಪಟ್ಟಿರುವ, **ಇವನ್** - ಈ ಸರ್ವೇಶ್ವರನೇ, **ತಾನೇ** - ತಾನಾಗಿಯೇ, **ನಮ್ಮ** -

ನಮ್ಮೈ ಒರು ಉಪಾಯತ್ತಿಲೆ ವ್ಯಾಪರಿಪ್ಪಿತ್ತು, ಅನ್ವ ವ್ಯಾಪಾರತ್ತಾಲೆ ಪ್ರಸನ್ನನಾಯ್ ರಕ್ಷಿಕ್ಕಿರಾನೆನ್ನಿರುಕ್ಕೈ ಪ್ರಾಪ್ತಮ್.

ಸ್ವಾಮಿೀ ಸ್ವಶೇಷಂ ಸ್ವವಶಂ ಸ್ವಭರತ್ವೇನ ನಿರ್ಭರಮ್ ।
ಸ್ವದತ್ತ ಸ್ವಧಿಯಾ ಸ್ವಾರ್ಥಂ ಸ್ವಸ್ಮಿನ್ನ್ಯಸ್ಯತಿ ಮಾಂ ಸ್ವಯಮ್ ॥೬೨॥

ಅಲ್ಪಸುಕೃತವನ್ನೆಸಗಿದ ನಮ್ಮನ್ನು, ಒರು ಉಪಾಯತ್ತಿಲೆ - ಒಂದು ಉಪಾಯದಲ್ಲಿ, ವ್ಯಾಪರಿಪ್ಪಿತ್ತು - ಪ್ರವರ್ತಿಸುವ ಹಾಗೆ ಮಾಡಿ, ಅನ್ವ ವ್ಯಾಪಾರತ್ತಾಲೆ- ಆ ಉಪಾಯಾನುಷ್ಠಾನದಿಂದ, ಪ್ರಸನ್ನನಾಯ್ - ಸುಪ್ರೀತನಾಗಿ ಅನುಗ್ರಹ ಮುಖನಾಗಿ, ರಕ್ಷಿಕ್ಕಿರಾನ್ - ನಮ್ಮನ್ನು ರಕ್ಷಿಸುವನು, ಎನ್ನಿರುಕ್ಕೈ ಪ್ರಾಪ್ತಮ್- ಎಂದು ತಿಳಿದಿರುವುದು ಉಚಿತವು. ಸರ್ವರಕ್ಷಕನು ಈಶ್ವರನು ಎಂಬುದು ಶ್ರುತಿ ಸ್ಮೃತಿಗಳಲ್ಲಿ ಉಪಪಾದಿತವೆಂದು ಹಿಂದೆಯೇ ಹೇಳಲ್ಪಟ್ಟಿರುತ್ತದೆ. ಹಾಗೆಯೇ ಮೂರು ರಹಸ್ಯಗಳಲ್ಲೂ ಉಪಪಾದಿತವು; ಮೂಲಮಂತ್ರದ ಅಕಾರದಲ್ಲಿರುವ ಅವ ರಕ್ಷಣೆ ಎಂಬ ಧಾತುವಿನಿಂದಲೂ, ನಾರಾಯಣ ಶಬ್ದದ ಅಯನಪದದ ಅರ್ಥದಲ್ಲೂ, ಹಾಗೆಯೇ ದ್ವಯದ ನಾರಾಯಣ ಶಬ್ದದಲ್ಲೂ, ಚರಮಶ್ಲೋಕದ "ಅಹಂ ಮೋಕ್ಷಯಿಷ್ಯಾಮಿ" ಎಂಬ ಪದಗಳಲ್ಲೂ ಸರ್ವರಕ್ಷಕತ್ವವು ವ್ಯಕ್ತವು. ಇಂತಹ ಸರ್ವರಕ್ಷಕನು ನಮ್ಮನ್ನು ಒಂದು ಉಪಾಯವನ್ನು ಆಚರಿಸುವ ಹಾಗೆ ಮಾಡಿ, ಅದರಿಂದ ಸುಪ್ರೀತನಾಗಿ ರಕ್ಷಿಸುವನು. ಇದೀಗ ಶಾಸ್ತ್ರಸಮ್ಮತವಾದ ನಿರ್ದುಷ್ಟವಾದ ಅಭಿಪ್ರಾಯವು. ಈ ಅಭಿಪ್ರಾಯದಲ್ಲಿ ಪರಮೇಶ್ವರನಿಗೆ ಸರ್ವಮುಕ್ತಿ ಪ್ರಸಂಗ ವೈಷಮ್ಯ ನೈರ್ಘೃಣ್ಯಾದಿ ಯಾವ ದೋಷಗಳಿಗೂ ಅವಕಾಶವಿಲ್ಲವೆಂಬ ಭಾವವು.

ಈ ಅಭಿಪ್ರಾಯವೇ ಭರನ್ಯಾಸ ಪ್ರಕ್ರಿಯೆಯನ್ನು ಸಂಗ್ರಹವಾಗಿಯೂ ವಿಶದವಾಗಿಯೂ ಉಪಪಾದಿಸಿರುವ ನ್ಯಾಸ ದಶಕದಲ್ಲಿ ಪ್ರಕಟಿಸಲ್ಪಟ್ಟಿದೆ ಎಂದು ಅದರ ಶ್ಲೋಕವನ್ನು ಮುಂದೆ ಉದಾಹರಿಸುತ್ತಾರೆ:— ಸರ್ವವಿಧ ಶಂಕೆಗಳಿಗೂ ಸಮಾಧಾನ ಹೇಳಿ, ಭರನ್ಯಾಸ ವಿಷಯದಲ್ಲಿ ಯಾವ ವಿಧವಾದ ಮರುತೆಯೂ ಇಲ್ಲದೆ ಸ್ವನಿಷ್ಠಾಭಿಜ್ಞಾನವಿರಬೇಕೆಂದು ಹಿಂದೆ ಹೇಳಿದುದನ್ನೆಲ್ಲಾ ಸ್ಮರಿಸುವ ಹಾಗೆ ಮಾಡುವ ಉತ್ಕೃಷ್ಟ ಶ್ಲೋಕವಾಗಿರುತ್ತದೆ. ಸ್ವಾಮೀ - ನಾವು ಮೊದಲುಗೊಂಡು ಸರ್ವ ಚಿದಚಿತ್ತುಗಳೂ ಆತನಿಗೆ ಸ್ವಂ ಆಗಿ, ಆತನ ಪ್ರಯೋಜನಕ್ಕಾಗಿಯೇ ಆಗಿರುವುದರಿಂದ ಸರ್ವಶೇಷಿಯಾದ ಪರಮೇಶ್ವರನು, ಸ್ವವಶಂ - ತನಗೆ ಅಧೀನನಾದ, ಮಾಂ - ನನ್ನನ್ನು. ಸ್ವದತ್ತಸ್ವಧಿಯಾ - "ದದಾಮಿ ಬುದ್ಧಿಯೋಗಂತಂ ಯೇನಮಾ ಮುಪಯಾಂತಿತೇ" (ಗೀ. ೧೦.೧೦) ಎಂದು ಹೇಳಿರುವ ಹಾಗೆ

ಅತಃ ದೋಷಸಪ್ತಕ ವಿವರ್ಜಿತ ಭರನ್ಯಾಸಸ್ಯ ಅನವಶ್ಯಕತ್ವಮ್

ಇದು ಆತ್ಮಸಮರ್ಪಣ ದರ್ಶ್ಯಯುಲ್ ಖ್ಯಾತಿ ಲಾಭ ಪೂಜಾ ಫಲ

ತನ್ನಿಂದಲೇ ಅನುಗ್ರಹಿಸಿ ಕೊಡಲ್ಪಟ್ಟ ಸ್ವಕೀಯವಾದ ಜ್ಞಾನದಿಂದ, **ಸ್ವಾರ್ಥಂ**- ಸ್ವಪ್ರಯೋಜನಕ್ಕಾಗಿಯೇ, ಸ್ವಸ್ಮಿನ್ - ತನ್ನಲ್ಲಿ, ಸ್ವಯಂ - ತಾನಾಗಿಯೇ, ಸ್ವಭರತ್ವೇನ - ತಾನು ರಕ್ಷಿಸಿಬಿಡುವನೆಂಬ ಸಂಪೂರ್ಣ ನಂಬಿಕೆಯಿಂದ, ನಿರ್ಭರಂ – ರಕ್ಷಾಭರದ ಯೋಚನೆಯಿಲ್ಲದಿರೋಣ ಹೇಗೋ ಹಾಗೆ, ನ್ಯಸ್ಯತಿ - ಭರನ್ಯಾಸವನ್ನು ಮಾಡಿಸುತ್ತಾನೆ. ಈ ಭರನ್ಯಾಸದಲ್ಲಿ **ಸ್ವಾಮೀ ಸ್ವಶೇಷಂ** ಎಂಬುದರಿಂದ, ಸ್ವರೂಪ ಸಮರ್ಪಣವೂ ಸ್ವಭರತ್ವೇನ ನಿರ್ಭರಂ ಎಂಬುದರಿಂದ ರಕ್ಷಾಭರಸಮರ್ಪಣವೂ, ಸ್ವಾರ್ಥಂ ಎಂಬುದರಿಂದ ಫಲಸಮರ್ಪಣವೂ, ಹೇಳಲ್ಪಟ್ಟಿತು. ಸ್ವಯಂ ಸ್ವಸ್ಮಿನ್ ನ್ಯಸ್ಯತಿ ಎಂಬುದರಿಂದ ಕರ್ತೃತ್ವದಲ್ಲಿ ಮಮತಾತ್ಯಾಗವೂ, ನಿರ್ಭರಂ ಎಂದು ಹೇಳಿರುವುದರಿಂದ ರಕ್ಷಾಭರದಲ್ಲಿ ತನಗೆ ಸಂಬಂಧ ವಿಲ್ಲವೆಂಬುದೂ, ಸ್ವಶೇಷಂ ಸ್ವಭರಂ ಎಂಬುದರಿಂದ ಸಂಪೂರ್ಣಪಾರತಂತ್ರ್ಯವೂ ಬೋಧಿಸಲ್ಪಟ್ಟಿತು. ಸ್ವದತ್ತ ಸ್ವಧಿಯಾ ಎಂಬುದರಿಂದ ಮಮತಾತ್ಯಾಗವೂ ಹೇಳಲ್ಪಟ್ಟಿತು. ಹೀಗೆ ಅನುಸಂಧಾನಪೂರ್ವಕವಾಗಿ ಭರನ್ಯಾಸವನ್ನನುಷ್ಠಿಸಿ ಮುಕ್ತಿ ಹೊಂದುವನು.

ಈ ಶ್ಲೋಕದಿಂದ ನಾವು ಮುಖ್ಯವಾಗಿ ಗ್ರಹಿಸತಕ್ಕದ್ದೇನೆಂದರೆ:—"ಮಾಮೇಕಂ ಶರಣಂ ವ್ರಜ" ಎಂಬ ಚರಮಶ್ಲೋಕದಲ್ಲಿ ಮಾಮೇಕಂ ಎಂದು ಹೇಳಲ್ಪಟ್ಟಿರುವುದನ್ನು ನೋಡಿದರೆ ಏಕಮೇವ ಎಂದು ಅರ್ಥ ಮಾಡಿ, ಶ್ರೀಕೃಷ್ಣನನ್ನು ಮಾತ್ರವೇ ಉಪಾಯವಾಗಿ ನಂಬತಕ್ಕದ್ದೇ ವಿನಾ, ಇನ್ನು ಯಾವುದನ್ನೂ ಉಪಾಯವಾಗಿ ಅಂಗೀಕರಿಸುವುದು ಯುಕ್ತವಲ್ಲವು. ಆದುದರಿಂದ ಭರನ್ಯಾಸವನ್ನನುಷ್ಠಿಸಿದರೆ ಮಾಮೇಕಂ ಎಂಬುದು ವಿರುದ್ಧವಾಗುತ್ತದೆ; ಮುಮುಕ್ಷುವು ಪ್ರಪತ್ತಿಯನ್ನು ಮಾಡಿದರೆ ಇದೂ ಉಪಾಯವೆಂದೇ ತಿಳಿಯುವನು, ಇದೂ ವಿರುದ್ಧವು; ತನ್ನಲ್ಲಿ ಹೀಗೆ ಕರ್ತೃತ್ವ ಉಂಟಾದರೆ ಸರ್ವೇಶ್ವರನೇ ಕರ್ತೃ ತಾನಲ್ಲವೆಂಬ ಪರಿಜ್ಞಾನ ತಾನೇ ಹೇಗೆ ಉಂಟಾದೀತು; ತಾನು ಪೂರ್ಣ ಪರತಂತ್ರನು. ತನಗೆ ಪ್ರಪತ್ತಿಯಲ್ಲಿ ಕರ್ತೃತ್ವವಿಲ್ಲವೆಂಬ ಅನುಸಂಧಾನ ತಾನೇ ಹೇಗೆ ಉಂಟಾಗಲು ಕಾರಣವಾಗುತ್ತದೆ? ಇತ್ಯಾದಿ ಶಂಕೆಗಳಿಗೆಲ್ಲಾ ಈ ಶ್ಲೋಕವು ಸಮಾಧಾನ ಹೇಳುತ್ತದೆ ಎಂಬುದಾಗಿ ಭಾವಿಸತಕ್ಕದ್ದು.

ಸಂಗ ಕರ್ತೃತ್ವೋಪಾಯತ್ವಙ್ಗಳಾಗಿರ ತು (ತೂ) ರಾಲತ್ತ ಭಗವದನು ಸಂಧಾನ ಕಟ್ಟಳೈ.

ಆದುದರಿಂದ ದೋಷಸಪ್ತಕಗಳಿಲ್ಲದ ಭರನ್ಯಾಸದ ಆವಶ್ಯಕತೆಯು.

ಇದು - ಈ ಮೇಲಿನ ಕಾರಿಕೆಯಲ್ಲಿ ಹೇಳಿರುವುದು, ಆತ್ಮಸಮರ್ಪಣ ದಶೈಯಿಲ್ - ಭರಸಮರ್ಪಣೆ ಕಾಲದಲ್ಲಿ, ಖ್ಯಾತಿ - ತಾನು ತುಂಬಾ ಶ್ರೇಷ್ಠನಾದ ಪ್ರಪನ್ನನಾಗುವನೆಂಬ ಯಶಸ್ಸು, ಲಾಭ - ತನಗೆ ತುಂಬಾ ಲಾಭ ಉಂಟಾಯಿತೆಂಬ ಗರ್ವವು, ಪೂಜಾ - ಪ್ರಪನ್ನನಾದುದರಿಂದ ಭಾಗವತ ಗೋಷ್ಠಿಯಲ್ಲಿ ತನಗೆ ಸನ್ಮಾನವು ದೊರಕುತ್ತದೆಂಬ ಹೆಮ್ಮೆಯು, ಫಲ - ಸರ್ವೇಶ್ವರಾಭಿಮಾನ ಉಂಟಾಯಿತೆಂಬ ಗರ್ವವು, ಸಂಗ - ಈ ಅನುಷ್ಠಾನ ಮೊದಲಾದವುಗಳಲ್ಲಿ ಅನ್ವಯ ಉಂಟೆಂದು ಭಾವಿಸೋಣವು, ಕರ್ತೃತ್ವ - ತಾನೇ ಭರನ್ಯಾಸವನ್ನು ಅನುಷ್ಠಿಸಿದೆನೆಂಬ ಭಾವವು, ಉಪಾಯತ್ವ - ಈ ಭರನ್ಯಾಸದ ಮೂಲಕ ಮೋಕ್ಷವು ಸಾಧಿಸಲ್ಪಟ್ಟಿತೆಂಬ ಅಭಿಮಾನವು, ಹೀಗೆ, ತುರಾಲತ್ತ - ಇಂತಹ ದೋಷಗಳೊಂದೂ ಇಲ್ಲದಿರುವ ಹಾಗೆ, ಭಗವದನುಸಂಧಾನ ಕಟ್ಟಳೈ - ಭಗವಂತನ ಪಾದಾರವಿಂದದಲ್ಲಿ ಈ ಆತ್ಮಾವನ್ನು ಸಮರ್ಪಿಸಿದ ಹಾಗೆ ಭಗವದನುಸಂಧಾನದ ನಿಬಂಧನೆಯು. ಕಟ್ಟಳೆ ಎಂದು ಏಕೆ ಹೇಳಿ ನಿಗಮನ ಮಾಡಿದರು ಎಂದರೆ, ವಿಧಿವಾಕ್ಯಬಲದಿಂದ ಮುಮುಕ್ಷುವು ಮಾಡಿಯೇ ತೀರಬೇಕೆಂಬ ಭಾವವು. ವಾದಗಳ ಮೂಲಕ ಅನಾವಶ್ಯಕವೆಂದು ಬಿಡತಕ್ಕದ್ದಲ್ಲವೆಂಬುದೂ ತೋರಿಬರುತ್ತದೆ. ಇವೆಲ್ಲಾ ಮಾಡಿಸುವನು ಸರ್ವೇಶ್ವರನೇ. ಅವನಿಗೇ ಇವನು ಪರತಂತ್ರನು, ಇದನ್ನು ಮಾಡಲು ಈತನ ಅಲ್ಪ ಸುಕೃತ ವ್ಯಾಜದಿಂದ ಬುದ್ಧಿಯೋಗವನ್ನು ಕೊಡುವನೂ ಅವನೇ, ಈತನಿಗೆ ಶಕ್ತಿಯನ್ನು ಕೊಡುವುದೂ ಸರ್ವೇಶ್ವರನ ಪ್ರಯೋಜನಕ್ಕಾಗಿಯೇ, ಹೀಗೆ ಅನುಸಂಧಾನವು ಆತ್ಮನಿಕ್ಷೇಪ ಕಾಲದಲ್ಲಿದ್ದರೆ, ಈ ಏಳುವಿಧವಾದಭಿಪ್ರಾಯಗಳಿಗೆ ಕಾರಣವೇ ಇರುವುದಿಲ್ಲವು. ಸ್ವಾರ್ಥಂ ಎಂದು ಸರ್ವೇಶ್ವರನ ಪ್ರಯೋಜನಕ್ಕಾದರೆ, ಈತನಿಗೆ ಖ್ಯಾತಿಯಾಗಲಿ, ಲಾಭವಾಗಲಿ, ಪೂಜೆಗಾಗಲಿ, ಫಲಕ್ಕಾಗಲಿ ಕಾರಣವೇ ಇಲ್ಲವು. ಎಲ್ಲಾ ಸರ್ವೇಶ್ವರನೇ ಮಾಡಿಸುವಾಗ, ಇವನಿಗೆ ಸಂಗವಾಗಲಿ ಕರ್ತೃತ್ವವಾಗಲಿ ಎಲ್ಲಿಯದು? ಅಚೇತನನಾದ ಭರನ್ಯಾಸವು ಏನನ್ನು ಸಾಧಿಸಿಕೊಟ್ಟೀತು? ಈ ವ್ಯಾಜಮೂಲಕ ಭಗವಂತನು ಪ್ರಸನ್ನನಾಗಿ ರಕ್ಷಿಸುವನೆಂಬ ಅನುಸಂಧಾನವಿರುವುದರಿಂದ ಉಪಾಯತ್ವ ಬುದ್ಧಿಯೂ ಇಲ್ಲವು

ಆಗೈಯಾಲ್ ತಾಯ್ ಮುಲೈಪ್ಪಾಲ್ ಪೋಲೇ ವರುಗಿರ ಈಶ್ವರ ಪ್ರಸಾದತ್ತುಕ್ಕು ಸ್ತನಂಧಯನುಡೈಯ ಮುಲೈ ಯುಣ್ಗಿರ ವ್ಯಾಪಾರ ಮ್ಪೋಲೆ ಇವನುಡೈಯ ಅಪೇಕ್ಷಾದಿಗಳ್. ಇತ್ತಾಲ್ ಸಿದ್ಧೋಪಾಯ ಸ್ವರೂಪತ್ತುಕ್ಕು ಕೊತ್ತೈಯಾರಾದು.

ಹಿಂದಿನ ಕಾರಿಕೆಯಲ್ಲಿ **ಸ್ವಯಂ ನ್ಯಸ್ಯತಿ** - ಸರ್ವೇಶ್ವರನು ತಾನೇ ಭರನ್ಯಾಸವನ್ನನುಷ್ಠಿಸುವ ಹಾಗೆ ಮಾಡಿ ಪ್ರೀತನಾಗಿ ರಕ್ಷಿಸುವನೆಂದಲ್ಲವೇ, ಸರ್ವಕರ್ತೃತ್ವವೂ ಭಗವಂತನದೆಂದು ಹೇಳಲ್ಪಟ್ಟಿತು. ಹಾಗಾದರೆ ತಾಯಿಯು ತಾನೇ ಮಗುವಿಗೆ ಸ್ತನ್ಯವನ್ನು ಕೊಟ್ಟು ಕಾಪಾಡುವ ಹಾಗೆ ಸರ್ವೇಶ್ವರನು ತಾನೇ ಕಾಪಾಡುವನು, ಈ ವ್ಯಾಜರೂಪವಾದ ಭರನ್ಯಾಸಾಪೇಕ್ಷೆಯು ಸರ್ವೇಶ್ವರನಿಗೆ ಏತಕ್ಕೆ ? **ಸ್ವಯಂ ನ್ಯಸ್ಯತಿ** ಎಂದು ಹೇಳಿರುವ ಹಾಗೆ **ಸ್ವಯಂ ರಕ್ಷತಿ** ಎಂದು ಏಕೆ ಹೇಳಕೂಡದು ? ಎಂಬಾಕ್ಷೇಪಕ್ಕೆ ಸಮಾಧಾನ ಹೇಳಿ ವ್ಯಾಜರೂಪ ಭರನ್ಯಾಸವು ಆವಶ್ಯಕವೆನ್ನುತ್ತಾರೆ. ತಾಯಿಯೇನೋ ಅಂಬಾ ಕೃಪೆಯಿಂದಲೂ ವಾತ್ಸಲ್ಯದಿಂದಲೂ ತನ್ನ ಮಗುವಿಗೆ ಹಾಲು ಕೊಟ್ಟು ಸಂರಕ್ಷಿಸಲು ಕಂಕಣಬದ್ಧಳಾಗಿರಬಹುದು. ಮಗುವು ಹಾಲನ್ನು ಕುಡಿಯಬೇಕಷ್ಟೆ ಕುಡಿದರಲ್ಲವೇ ಅದಕ್ಕೆ ಶಕ್ತಿ ಬರುತ್ತದೆ. ವ್ಯಾಧಿಪೀಡಿತನಾಗಿ ಕುಡಿಯದೇ ಇದ್ದರೆ ತಾಯಿಯ ಎದೆಯಲ್ಲಿ ಎಷ್ಟು ಹಾಲಿದ್ದರೇನು ಫಲ? ತಾಯಿಯೇ ರಕ್ಷಿಸುವಳಾಗಿದ್ದರೂ ಮಗುವಿಗೆ ಕುಡಿಯುವ ವ್ಯಾಪಾರವು ಹೇಗೆ ಆವಶ್ಯಕವೋ, ಹಾಗೆಯೇ ಮುಮುಕ್ಷುವಿಗೂ ಸಿದ್ಧೋಪಾಯನು ರಕ್ಷಿಸಲು ಸಿದ್ಧನಾಗಿದ್ದರೂ ಸಾಧ್ಯೋಪಾಯಾನುಷ್ಠಾನವೂ ಆವಶ್ಯಕವು. ಈ ಅಭಿಪ್ರಾಯವನ್ನೇ ಮುಂದಿನ ವಾಕ್ಯದಿಂದ ಉಪಪಾದಿಸುತ್ತಾರೆ :-

ಆಗೈಯಾಲ್ - ಆ ಕಾರಣದಿಂದ, ಎಂದರೆ ಭರನ್ಯಾಸರೂಪ ವ್ಯಾಜವಾದ ಸಾಧ್ಯೋಪಾಯದ ಅನುಷ್ಠಾನವೂ ಆವಶ್ಯಕವಾದುದರಿಂದ, **ತಾಯ್ ಮುಲೈಪಾಲ್ ಪೋಲೇ ವರುಗಿರ** - ತಾಯಿಯ ಸ್ತನ್ಯದ ಹಾಗೆ ಬರುವ, **ಈಶ್ವರ ಪ್ರಸಾದತ್ತುಕ್ಕು** - ಸರ್ವೇಶ್ವರನ ಅನುಗ್ರಹಕ್ಕೆ, **ಸ್ತನಂಧಯನುಡೈಯ** - ಮಗುವಿನ, ಮುಲೈಯುಣ್ಗಿರ ವ್ಯಾಪಾರಮ್ಪೋಲೆ - ಸ್ತನ್ಯಪಾನ ಮಾಡುವ ವ್ಯಾಪಾರದ ಹಾಗೆ, ಇವನುಡೈಯ - ಈ ಮುಮುಕ್ಷುವಿನ, **ಅಪೇಕ್ಷಾದಿಗಳ್** - ಗೋಪ್ತೃತ್ವವರಣವೇ ಮೊದಲಾದವುಗಳು; ಮೊದಲಾದವುಗಳೆಂದು ಹೇಳಿರುವುದರಿಂದ, ಇತರ ಪ್ರಪತ್ತಿಯ ಅಂಗಗಳು ಮತ್ತು ಆತ್ಮನಿಕ್ಷೇಪವೂ ಹೇಳಲ್ಪಟ್ಟವು. ತಾಯಿಯು ಸ್ತನ್ಯ ಕೊಟ್ಟರೂ, ಅದನ್ನು ಶಿಶುವು ಪಾನಮಾಡಬೇಕಾದುದು ಆವ

ಅಥ ಪತ್ನೀ ಸಂಬಂಧ ಪ್ರಾಪ್ತ ಶಜ್ಕಾ ನಿರಸ್ಯಂತೇ

ಇಪ್ಪಡಿ ನಾರಾಯಣ ಶಬ್ದತ್ತಿಲ್ ಸಿದ್ಧಮಾನ ಗುಣವಿಶೇಷ ಸಂಬಂಧ

ಶ್ಯಕವಾದುದರಿಂದ ಹಾಗೆ ಸ್ತನ್ಯಪಾನವನ್ನು ಯಾವಾಗ ಬಿಟ್ಟುಬಿಟ್ಟಿತೋ, ಆಗ ತಾಯಿಯು ಹಾಲನ್ನು ಕೊಡುವುದು ನಿವರ್ತಿಸಿಹೋಗುತ್ತದೆ, ಹಾಗೆ ಜೀವನ ವ್ಯಾಪಾರವಾದ ಸಾಧ್ಯೋಪಾಯಾನುಷ್ಠಾನವಿಲ್ಲವೋ, ಮಾತೃವಿನೋಪಾದಿಯಲ್ಲಿ ಸಂರಕ್ಷಣೋದ್ಯುಕ್ತನಾದ ಸರ್ವೇಶ್ವರನು ಈತನ ರಕ್ಷಣೆಯಿಂದ ನಿವರ್ತಿಸುವನೆಂಬ ಭಾವವು. ಇತ್ತಾಲ್ - ಈ ಸಾಧ್ಯೋಪಾಯವಾದ ಭರನ್ಯಾಸಾನುಷ್ಠಾನದಿಂದ, ಸಿದ್ಧೋಪಾಯದ ಸ್ವರೂಪಕ್ಕೆ, ಕೊತ್ತೈಯಾರಾದು - ಸರ್ವಶಕ್ತಿತ್ವ ಕಾರುಣ್ಯ ಸ್ವತಂತ್ರತ್ವಾದಿಗಳ ಹಾನಿರೂಪದೋಷವು ಬರುವುದಿಲ್ಲವು. ಏತ್ತೇನೆಂದರೋ ಈ ಸಾಧ್ಯೋಪಾಯವನ್ನು, ಸಿದ್ಧೋಪಾಯನು ಎದುರುನೋಡುವುದು ವೈಷಮ್ಯ ನೈರ್ಘೃಣ್ಯ ಸರ್ವಮುಕ್ತಿ ಪ್ರಸಂಗಾದಿ ದೋಷಗಳ ಪರಿಹಾರಾರ್ಥವಾಗಿ ತನ್ನ ಸ್ವಾತಂತ್ರ್ಯ ಮೂಲಕ ಸ್ವಸಂಕಲ್ಪಸಿದ್ಧವಾಗಿ ಇದನ್ನು ಏರ್ಪಡಿಸಿರುವುದು ಸರ್ವೇಶ್ವರನ ಸ್ವಾತಂತ್ರ್ಯದ ಪರಾಕಾಷ್ಠೆ ಎಂಬುದೇ ಅಭಿಪ್ರಾಯವು.

ಈಗ ಎರಡು ಮುಖ್ಯ ಪೂರ್ವಪಕ್ಷಗಳಿಗೆ ಸಮಾಧಾನ ಹೇಳಿದರು:—(೧) ಗುಣಸಂಬಂಧವಾದ ಪೂರ್ವಪಕ್ಷವು; ಸರ್ವಸ್ವಾತಂತ್ರ್ಯ, ನಿರ್ಹೇತುಕ ಕಾರುಣ್ಯ ಮೂಲಕ ಉಂಟಾದುದು, ಸರ್ವಸ್ವತಂತ್ರನಾಗಿರುವ ಕರುಣಾಸಾಗರನು ತಾನೇ ನಿರಪೇಕ್ಷವಾಗಿ ರಕ್ಷಿಸಬೇಕೆಂಬುದು, ಇದು ಪರಿಹರಿಸಲ್ಪಟ್ಟಿತು (೨) ಸಂಬಂಧ ವಿಶೇಷ ಮೂಲಕ ಉಂಟಾದುದು; ಶೇಷಿಯಾದವನು ತಾನೇ ಶೇಷನನ್ನು ರಕ್ಷಿಸ ಬೇಕೆಂಬುದು, ಇದೂ ಪರಿಹರಿಸಲ್ಪಟ್ಟಿತು

ಮುಂದೆ ಪತ್ನೀ ಸಂಬಂಧದಿಂದುಂಟಾಗುವ ಶಜ್ಕಾದಿಗಳು ನಿರಸನ ಮಾಡಲ್ಪಡುತ್ತವೆ.

ಮುಂದೆ ಏನು ಮಾಡುತ್ತಾರೆಂಬುದಕ್ಕೆ ಪ್ರತಿಜ್ಞಾ ವಾಕ್ಯವನ್ನು ಹೇಳ ತಕ್ಕದ್ದು ಸಂಪ್ರದಾಯವು. ಅದಕ್ಕೆ ಮುಂಚೆ ಹಿಂದೆ ಹೇಳಿದುದಕ್ಕೂ ಮುಂದೆ ಹೇಳುವುದಕ್ಕೂ ಸಂಗತಿ ಏನೆಂಬುದನ್ನು ತಿಳಿಸುತ್ತಾರೆ:— ಇಪ್ಪಡಿ - ಮೇಲೆ ಉಪಪಾದಿಸಿದ ರೀತಿಯಲ್ಲಿ; ನಾರಾಯಣ ಶಬ್ದತ್ತಿಲ್ ಸಿದ್ಧಮಾನ - ನಾರಾ ಯಣ ಶಬ್ದದಲ್ಲಿ ಅರ್ಥವಾಗಿ ವ್ಯಕ್ತವಾಗಿರುವ, ಗುಣವಿಶೇಷ - ಸ್ವಾತಂತ್ರ್ಯ

ವಿಶೇಷಙ್ಗಳ್ ಅಡಿಯಾಗ ಪ್ಪಿರಕ್ಕುಮ್ ಕಲಕ್ಕಙ್ಗಳುಕ್ಕು ಪರಿಹಾರಮ್ ಉದಾಹರಿತ್ತೋಮ್। ಇನಿ, (೧) ಲಕ್ಷ್ಮ್ಯಾ ಸಹ ಹೃಷೀಕೇಶೋ ದೇವ್ಯಾ ಕಾರುಣ್ಯರೂಪಯಾ। ರಕ್ಷಕಸ್ಸರ್ವಸಿದ್ಧಾನ್ತೇ ವೇದಾನ್ತೇಷು ಚ ಗೀಯತೇ” ಎಙ್ಗಿರಪಡಿಯೇ, ಸಪತ್ನೀಕನಾಯ್ ಕೊಣ್ಡು ಸರ್ವರಕ್ಷಣ ಯಜ್ಞದೀಕ್ಷಿತನಾನ ಸರ್ವೇಶ್ವರನುಕ್ಕು ಶ್ರೀಮಚ್ಛಬ್ದತ್ತಿಲೆ ಶೊಲ್ಲುಗಿರ ಪತ್ನೀಸಂಬಂಧತ್ತಿಲೇ ವರುಮ್ ಕಲಕ್ಕಙ್ಗಳುಕ್ಕು ದಿಙ್ಮಾತ್ರತ್ತಾಲೆ ಪರಿಹಾರಮ್ ಕಾಟ್ಟುಗಿರೋಮ್.

ಕಾರುಣ್ಯಗಳ ಸಂಬಂಧ ವಿಶೇಷ - ಶೇಷಿ ಶೇಷ ಸಂಬಂಧಗಳ, ಅಡಿಯಾಗ - ಮೂಲಕವಾಗಿ, ಪಿರಕ್ಕುಮ್ - ಹುಟ್ಟುವ, ಕಲಕ್ಕಙ್ಗಳುಕ್ಕು - ಶಂಕಾಗಳಿಗೆ, ಪರಿಹಾರವನ್ನು, ಉದಾಹರಿತ್ತೋಮ್ - ಸಪ್ರಮಾಣವಾಗಿ, ಹೇಳಿದೆವು. ಇನಿ ಮುಂದೆ, “ಲಕ್ಷ್ಮ್ಯಾ ಸಹ” ಎಂಬ ಶ್ಲೋಕದಲ್ಲಿ, ಎಙ್ಗಿರಪಡಿಯೇ - ಹೇಳಿರುವ ರೀತಿಯಲ್ಲಿ, ಸಪತ್ನೀಕನಾಯ್ ಕೊಣ್ಡು - ಸರ್ವೇಶ್ವರನ ಸಕಲ ದಿವ್ಯ ಚೇಷ್ಟಿತ ಲೀಲಾಗಳಲ್ಲೂ ಪತ್ನೀಸಹಿತನಾಗಿಯೇ, ಸರ್ವ ರಕ್ಷಕ ಯಜ್ಞದೀಕ್ಷಿತನಾನ - ಸರ್ವರನ್ನೂ ರಕ್ಷಿಸಬೇಕೆಂಬುದೇ ಒಂದು ಮಹಾಯಜ್ಞವು, ಅದನ್ನು ಮಾಡಬೇಕೆಂದು ಸಂಕಲ್ಪಮಾಡಿ ದೀಕ್ಷೆಯನ್ನು ವಹಿಸಿರುವ, ಸರ್ವೇಶ್ವರನಿಗೆ, ಶ್ರೀಮಚ್ಛಬ್ದತ್ತಿಲೆ ಶೊಲ್ಲುಗಿರ - ಶ್ರೀಮಾತ್ ಎಂಬ ದ್ವಯದ ಆದಿಪದದಲ್ಲಿ ಹೇಳಿರುವ ಪತ್ನೀಸಂಬಂಧದಲ್ಲಿ, ವರುಮ್ - ತೋರಿಬರುವ, ಕಲಕ್ಕಙ್ಗಳುಕ್ಕು - ಶಂಕಾಗಳಿಗೆ, ದಿಙ್ಮಾತ್ರತ್ತಾಲೆ - ಅದರ ಪರಿಹಾರದ ಮಾರ್ಗವನ್ನು ತೋರಿಸುವ ಹಾಗೆ ಎಂದರೆ ಅತಿ ಸಂಗ್ರಹವಾಗಿ, ಪರಿಹಾರಮ್ ಕಾಟ್ಟುಗಿರೋಮ್ - ಪರಿಹಾರವನ್ನು ತೋರಿಸಿಕೊಡುವೆವು. ಲಕ್ಷ್ಮೀತಂತ್ರ ಶ್ಲೋಕಾಭಿಪ್ರಾಯವೇನೆಂದರೆ:—ಹೃಷೀಕೇಶಃ - “ಹೃಷೀಕಾಣೀನ್ದ್ರಿಯಾಣ್ಯಾಹುಃ ತೇಷಾಮೀಶೋ ಯತೋ ಭವಾನ್। ಹೃಷೀಕೇಶಸ್ತತೋ ವಿಷ್ಣುಃ ಖ್ಯಾತೋ ದೇವೇಷು ಕೇಶವಃ॥” ಎಂದು ಹರಿವಂಶದೊಳಗೆ ಹೇಳಿರುವ ಹಾಗೆ ಇಂದ್ರಿಯಗಳಿಗೆ ನಿಯಾಮಕನಾದ ಶ್ರೀಹರಿಯು, ದೇವ್ಯಾ - ಶ್ರೀಯಃಸಕ್ತನಾದ, ಕಾರುಣ್ಯರೂಪಯಾ - ಕಾರುಣ್ಯದಿಂದ ಯುಕ್ತವಾದ ದಿವ್ಯಮಂಗಳವಿಗ್ರಹವುಳ್ಳ, ಅಥವಾ “ ಕರುಣಾಮಿವರೂಪಿಣೀಂ ” (ದಯಾ) ಎಂದು ಹೇಳಿರುವ ಹಾಗೆ ಕಾರುಣ್ಯವೇ ಮೂರ್ತಿಭವಿಸಿದ ಹಾಗಿರುವ ಕಾರುಣ್ಯವೇ ಸ್ವರೂಪವಾಗಿ ಉಳ್ಳ

---

(೧) ಲಕ್ಷ್ಮೀತಂತ್ರ ೨೮. ೧೫.

ಲಕ್ಷ್ಮ್ಯಾ ಸಹ - ಲಕ್ಷ್ಮಿಯೊಂದಿಗೇನೆ, **ರಕ್ಷಕಃ** - ಹೀಗೆ ಇಬ್ಬರೂ ಸೇರಿಯೇ ರಕ್ಷಕರೆಂದು, **ಸರ್ವ ಸಿದ್ಧಾನ್ತೇ** - ಎಲ್ಲಾ ಸಿದ್ಧಾಂತದಲ್ಲೂ, ಅವು ಯಾವುವೆಂದರೆ, ಮಂತ್ರ ಸಿದ್ಧಾನ್ತ, ತಂತ್ರ ಸಿದ್ಧಾನ್ತ, ತಂತ್ರಾಂತರ ಸಿದ್ಧಾನ್ತ, ಆಗಮ ಸಿದ್ಧಾನ್ತವೆಂಬದಾಗಿ ನಾಲ್ಕು ಸಿದ್ಧಾನ್ತಗಳು, **ವೇದಾಂತೇಷಿಚ** - ವೇದಾಂತದಲ್ಲೂ ಕೂಡ, **ಗೀಯತೇ** - ಗಾನಮಾಡಲ್ಪಟ್ಟಿದೆ, ಹೊಗಳಲ್ಪಟ್ಟಿದೆ ಎಂಬ ಭಾವವು. ಈ ಶ್ಲೋಕವು ಸ್ವಸಿದ್ಧಾಂತವನ್ನು ತಿಳಿಯಪಡಿಸುತ್ತದೆಯಾದುದರಿಂದ, ಅದನ್ನು ಮೊದಲು ಉದಾಹರಿಸಿರುತ್ತಾರೆ. ಈ ಶ್ಲೋಕದ ಮುಖ್ಯಾಭಿಪ್ರಾಯವನ್ನು **"ಸಪತ್ನೀಕನಾಯ್‌ಕ್ಕೊಣ್ಡು ಸರ್ವರಕ್ಷಣಯಜ್ಞದೀಕ್ಷಿತನ್ ಸರ್ವೇಶ್ವರನ್"** ಎಂಬದಾಗಿ ತಿಳಿಸಿರುತ್ತಾರೆ. ಜಗತ್ಸೃಷ್ಟಿ ಸ್ಥಿತಿ ಲಯಗಳು, ಚೇತನರಿಗೆ ಉಪಾಯೋಪೇಯವಾಗಿರೋಣ, ಅವತಾರಗಳಲ್ಲಿ ವಿವಿಧಚೇಷ್ಟಿತಗಳು, ಮೋಕ್ಷಪ್ರದತ್ವ, ಇವುಗಳನ್ನೆಲ್ಲಾ ಸರ್ವೇಶ್ವರನು ಲಕ್ಷ್ಮೀಯುಕ್ತನಾಗಿಯೇ, ಲಕ್ಷ್ಮೀಸಹಾಯಕನಾಗಿಯೇ ನಡೆಸುತ್ತಾನಾದುದರಿಂದ ಲಕ್ಷ್ಮೀಯುಕ್ತನಾಗಿಯೇ ಚೇತನರಿಗೆ ಉಪಾಯಭೂತನಾಗಿ ರಕ್ಷಕನು ಎಂಬುದು ಪ್ರತಿಜ್ಞಾವಾಕ್ಯವು. ಇದನ್ನು ಪೂರ್ವಪಕ್ಷ ಮಾಡಿ ಸ್ಥಾಪಿಸುತ್ತಾರೆ. ಇಲ್ಲಿ **ಯಜ್ಞದೀಕ್ಷಿತನು** ಸರ್ವೇಶ್ವರನು ಎಂದು ಏಕೆ ಹೇಳಿದರೆಂದರೆ, ಭಕ್ತರನ್ನು ರಕ್ಷಿಸುವುದೆಂಬುದು ಒಂದು ಯಜ್ಞದೀಕ್ಷೆಯು; ಯಜ್ಞದಲ್ಲಿ ಯಜಮಾನನು ಸಮಸ್ತ ಕಾರ್ಯಗಳನ್ನು ಸಪತ್ನೀಕನಾಗಿಯೇ ಮಾಡಬೇಕೇ ವಿನಾ, ಪತ್ನಿಯನ್ನು ಬಿಟ್ಟು ಮಾಡುವುದು ಯುಕ್ತವಲ್ಲವು. ಅಪತ್ನೀಕನು ರಕ್ಷಾರೂಪ ಯಜ್ಞದೀಕ್ಷೆಯನ್ನು ಆಚರಿಸಕೂಡದಷ್ಟೇ ?

ಆದರೆ ಇಲ್ಲಿ **ಲಕ್ಷ್ಮ್ಯಾ ಸಹ**, ಲಕ್ಷ್ಮಿಯೊಂದಿಗೆ ಸರ್ವೇಶ್ವರನಿರುವವನಾಗಿ ರಕ್ಷಕನಾಗಿದ್ದಾನೆ ಎಂದು ಹೇಳಿದರೆ, ಲಕ್ಷ್ಮಿಯೂ ಸಹ ರಕ್ಷಕಳು ಎಂದು ಹೇಗಾಗುತ್ತದೆ ? ಸುಮ್ಮನೆ ಜೊತೆಯಲ್ಲಿರಕೂಡದೆ ಎಂದರೆ ಲಕ್ಷ್ಮಿಯೊಂದಿಗೇನೇ ರಕ್ಷಕನೆಂದು ತೋರುವುದಕ್ಕಾಗಿ, **ದೇವ್ಯಾ ಕಾರುಣ್ಯರೂಪಯಾ** ಎಂಬ ಎರಡು ವಿಶೇಷಣಗಳು ಕೊಟ್ಟಿರುತ್ತವೆ. ಹೃಷೀಕೇಶನು ರಕ್ಷಕನೆಂಬುದು ನಿರ್ವಿವಾದ ವಿಷಯವಾದುದರಿಂದ, ಹೃಷೀಕೇಶ ಶಬ್ದಕ್ಕೆ ಯಾವ ವಿಶೇಷಣವೂ ಇಲ್ಲವು. ಲಕ್ಷ್ಮಿಯೂ ರಕ್ಷಕಳು ಹೌದೋ ಅಲ್ಲವೋ ಎಂಬ ವಿವಾದ ಉಂಟಾಗಬಹುದು ಎಂದು ಭಾವಿಸಿ, ಅದನ್ನು ತಪ್ಪಿಸುವುದಕ್ಕಾಗಿಯೇ, **ದೇವ್ಯಾ ಕಾರುಣ್ಯರೂಪಯಾ** ಎಂಬ ಎರಡು ವಿಶೇಷಣಗಳು **ಲಕ್ಷ್ಮ್ಯಾ ಸಹ** ಎಂಬುದಕ್ಕೆ ಕೊಡಲ್ಪಟ್ಟಿವೆ. **ದಿವ್ ಕ್ರೀಡನೇ** ಎಂಬ ಧಾತ್ವರ್ಥದಿಂದ **ದೇವ್ಯಾ** - ಜಗತ್ತಿನ **ಲೀಲೆ**ಯಲ್ಲಿ ಆಸಕ್ತಳಾದ ಎಂದು ಹೇಳಲ್ಪಟ್ಟಿತು. **"ಸ ಏಕಾಕೀ ನರಮೇತ"** ಎಂಬ ಉಕ್ತಿಗನುಸಾರವಾಗಿ ಸರ್ವೇಶ್ವರನು ಲಕ್ಷ್ಮಿಯೊಂದಿಗೆ ಸೇರಿಯೇ ಈ ಲೀಲಾ

ವಿಭೂತಿಯ ಸರ್ವವಿಧ ವ್ಯಾಪಾರಗಳನ್ನೂ ನಡೆಸುತ್ತಾನೆ. ಶ್ರುತಿಯೂ ಕೂಡ ಶ್ರದ್ಧಯಾದೇವೋ ದೇವತ್ವಮಶ್ನುತೇ, ಶ್ರದ್ಧಯಾ - ಲಕ್ಷ್ಮಿಯೊಂದಿಗೆ ಲೀಲಾಸಕ್ತನಾದ ಸರ್ವೇಶ್ವರನು ಲೀಲಾರಸವನ್ನನುಭವಿಸುವನೆಂದು ಹೇಳಲ್ಪಟ್ಟಿರುತ್ತದೆ. ರಕ್ಷಣೆಗೆ ಕಾರುಣ್ಯವು ಮುಖ್ಯ ಗುಣವಾದುದರಿಂದ, ಅಜ್ಞಾತನಿಗ್ರಹವಾದ ಕರುಣಾಮೂರ್ತಿಯಾದ ಲಕ್ಷ್ಮಿಯೊಂದಿಗೆ ರಕ್ಷಣೆಯು ಸರಸವು. ಹೀಗೆ ಈ ಎರಡು ವಿಶೇಷಣಗಳೂ ಇರುವದರಿಂದ ರಕ್ಷಣೋಪಾಯದಲ್ಲಿ ಲಕ್ಷ್ಮಿಯೂ ಸೇರಿರುವವಳೆಂಬುದು ವ್ಯಕ್ತವು. ಹೀಗೆ ವೇದಾಂತದಲ್ಲೂ ಸರ್ವಸಿದ್ಧಾಂತದಲ್ಲೂ ಹೇಳಲ್ಪಟ್ಟಿದೆ ಎಂಬರ್ಥವು. **ಸರ್ವಸಿದ್ಧಾನ್ತೇ ವೇದಾನ್ತೇಷು** ಎಂದು ಹೇಳಿರುವದರಿಂದ ಈ ಅಭಿಪ್ರಾಯವು ಸರ್ವಸಿದ್ಧಾಂತಿಗಳಿಗೂ ಅಭಿಮತವಾಗಿ ಶ್ರುತಿಯಲ್ಲೂ ಹೇಳಲ್ಪಟ್ಟಿರುವದರಿಂದ, ತಾವು ಬರೀ ವಾದವನ್ನು ದೂರೀಕರಿಸಿ ತಮ್ಮ ಪೂರ್ವಾಚಾರ್ಯರುಗಳಿಗೆ ಅಭಿಮತವಾದುದಾಗಿಯೂ ಶಾಸ್ತ್ರಪ್ರಮಾಣಸಿದ್ಧವಾದುದಾಗಿಯೂ ಇರುವದರಿಂದ ತಮ್ಮ ಸಿದ್ಧಾಂತವು ಪೂರ್ಣ ದಾರ್ಢ್ಯವುಳ್ಳದುದೆಂಬ ಭಾವವೂ ದ್ಯೋತಿತವು. **ಪತ್ನೀಸಂಬಂಧತ್ತಿಲ್ ವರುಮ್ ಕಲಕ್ಕಙ್ಗಳ್** ಎಂಬುವದರಿಂದ, ಲಕ್ಷ್ಮಿಗೆ ಮೇಲೆ ಹೇಳಿದವುಗಳಲ್ಲಿ ಸಂಬಂಧವಿಲ್ಲವೆಂಬುದೇ ಶಙ್ಕೆಗಳೆಂಬುವದೂ ಈ ವಾಕ್ಯದಲ್ಲಿ ತೋರಿ ಬರುತ್ತವೆ. ಇವುಗಳಿಗೆ ಪರಿಹಾರವನ್ನು **ದಿಙ್ಮಾತ್ರದಿಂದ** ತೋರಿಸುವೆವು ಎಂದು ಹೇಳಿರುವದರಿಂದ, ಹಿಂದಿನ ಎರಡು ಪ್ರಬಲ ಶಙ್ಕೆಗಳಹಾಗಲ್ಲದೆ, ಸಾಧಾರಣವಾಗಿ, ಅವುಗಳನ್ನು ಪರಿಹರಿಸುವದು ತುಂಬಾ ಸುಲಭವೆಂಬಭಿಪ್ರಾಯದಿಂದಲಾಗಲಿ ಅಥವಾ ಶಙ್ಕೆಗೆ ಯಾವ ಕಾರಣವೂ ಪ್ರಮಾಣವೂ ಇಲ್ಲದುದರಿಂದ ಅವನ್ನು ನಿರಸನ ಮಾಡುವದು ಲೀಲಾರೂಪವಾದುದೆಂದಾಗಲಿ, ಅಥವಾ ಇತರ ಸ್ಥಳಗಳಾದ ಚತುಶ್ಲೋಕಿಯ ವ್ಯಾಖ್ಯಾನ ಮೊದಲಾದವುಗಳಲ್ಲಿ ವಿಸ್ತರವಾಗಿ ಹೇಳಿರುವದರಿಂದ ಇಲ್ಲಿ ಸೂಕ್ಷ್ಮವಾಗಿ ಹೇಳುವೆವೆಂಬಭಿಪ್ರಾಯದಿಂದಾಗಲಿ ಹಾಗೆ ಪ್ರಯೋಗವು.

೧. ಮೊದಲು ಲಕ್ಷ್ಮಿಗೆ ಉಪಾಯದಲ್ಲಿ ಸಂಬಂಧವಿಲ್ಲವೆಂಬ ವಾದವು ನಿರಸನ ಮಾಡಲ್ಪಡುತ್ತದೆ.

ಇತರರು ಹೇಳುವ ಪೂರ್ವಪಕ್ಷವನ್ನು ಅನುವಾದ ಮಾಡುತ್ತಾರೆ:—**ಶಿಲರ್** ಎನರು, **ದ್ವಯತ್ತಿಲ್** - ದ್ವಯಮಂತ್ರದ ಪೂರ್ವಖಂಡದಲ್ಲಿರುವ, ನೀರುಣ್ಣಾರಾಯಣ ಎಂಬಲ್ಲಿರುವ ಲಕ್ಷ್ಮೀಯುಕ್ತನಾದ ನಾರಾಯಣನೆಂಬ ಪದವಿರುವ **ಶ್ರೀಮತ್** ಎಂಬ ಶಬ್ದವನ್ನು, **ಉಪಲಕ್ಷಣ ಪರಮೆನ್ಬರ್-ಉಪ**ಲಕ್ಷಣವ ಅರ್ಥಬೋಧಕವೆಂದೂ, ಉತ್ತರ ಖಂಡದಲ್ಲಿ **ಶ್ರೀಮತೇ ನಾರಾಯ**

೧. ಪ್ರಥಮಂ, ಲಕ್ಷ್ಮ್ಯಾಃ ಉಪಾಯತ್ವೇ ಸಾನ್ವಯ ಇತಿ ಪಕ್ಷಂ ನಿರಸ್ಯತಿ.

ಶಿಲರ್ ದ್ವಯತ್ತಿಲ್ ಪೂರ್ವಖಂಡತ್ತಿಲ್ ಶ್ರೀಮಚ್ಛಬ್ದಮ್ ಉಪ ಲಕ್ಷಣ ಪರಮೆನ್ರುಮ್, ಉತ್ತರಖಂಡತ್ತಿಲ್ ಶ್ರೀಮಚ್ಛಬ್ದಮ್ ವಿಶೇ ಷಣ ಪರಮೆನ್ರುಮ್, ಶಿರಿಯ ಚೊನ್ನಾರ್ಗಳ್.

ಣಾಯ ಎಂಬಲ್ಲಿರುವ ಶ್ರೀಮಚ್ಛಬ್ದವು ವಿಶೇಷಣಪರಮೆನ್ರು-ವಿಶೇಷಣವನ್ನು
ಬೋಧಿಸುತ್ತದೆಂದೂ, ಶಿರಿಯ ಚೊನ್ನಾರ್ಗಳ್-ಹೀಗೆ ಶ್ರೀಮತ್ ಎಂಬ ಒಂದೇ
ಪದಕ್ಕೆ ಎರಡು ವಿಧವಾದ ವ್ಯತ್ಯಸ್ತವಾದ ಬೇರೆ ಬೇರೆ ಅರ್ಥಗಳನ್ನು ಹೇಳಿದರು.
ಇಲ್ಲಿ ಮೊದಲಿನ ಶ್ರೀಮಚ್ಛಬ್ದವು ಉಪಲಕ್ಷಣವೆಂದೂ, ಎರಡನೆಯದಾದ
ಶ್ರೀಮತೇ ಎಂಬ ಪದದಲ್ಲಿನ ಶ್ರೀಮಚ್ಛಬ್ದವು ವಿಶೇಷಣವೆಂದೂ ಹೇಳುತ್ತಾ
ರೆಂಬ ಭಾವವು. ಒಂದು ವಸ್ತುವಿನಲ್ಲಿ ಒಂದು ಧರ್ಮವು ಇರುವದಾಗಿ ವ್ಯಾವರ್ತಿಸಿ
ಹೇಳಿದರೆ, ಆ ಧರ್ಮವು ಆ ವಸ್ತುವಿಗೆ ವಿಶೇಷಣವೆನಿಸುತ್ತದೆ. ಹೇಗೆಂದರೆ:—
ನೀಲವಾದ ಘಟವು. ನೈಲ್ಯವು ಘಟದೊಂದಿಗೆ ಇರುವದರಿಂದ ಅದು ವಿಶೇಷ
ಣವು. ಒಂದು ಧರ್ಮವು ವಸ್ತುವಿನಲ್ಲಿಲ್ಲದೆ ಅದರ ಹೊರಗೆ ಇರುವದಾಗಿ ವ್ಯಾವ
ರ್ತಿಸಿ ಹೇಳಿದರೆ ಆ ಧರ್ಮವು ಉಪಲಕ್ಷಣವೆನಿಸುತ್ತದೆ. ಒಂದು ಲಕ್ಷಣವು
ಲಕ್ಷ್ಯದಲ್ಲಿ ಯಾವಾಗಲೂ ಇದ್ದರೆ ಅದು ವಿಶೇಷಣವೆಂದೂ ಒಂದು ಕಾಲದಲ್ಲಿದ್ದು,
ಇನ್ನೊಂದುಕಾಲದಲ್ಲಿಲ್ಲದಿದ್ದರೆ ಉಪಲಕ್ಷಣವೆಂದೂ ಹೇಳತಕ್ಕದ್ದೆಂಬ ಭಾವವು.
ಹೇಗೆಂದರೆ, ಸಾರಸಪಕ್ಷಿ ಇರುವ ಗದ್ದೆಯು ದೇವದತ್ತನದು, ಎಂಬಲ್ಲಿ ಸಾರಸ
ಪಕ್ಷಿ ಇರುವದು ಎಂಬುವ ಧರ್ಮವು ಗದ್ದೆಯೊಂದಿಗೇನೇ ಇಲ್ಲದೆ ಹೊರಗೆ ಇರು
ವದರಿಂದ ಉಪಲಕ್ಷಣವೆಂದು ಹೆಸರು. ಮೇಲಿನ ನೀಲಘಟವೆಂಬಲ್ಲಿ, ಈ ಘಟ
ವಿರುವ ಕಡೆಯಲ್ಲೆಲ್ಲಾ ನೈಲ್ಯವು ಇರುವದರಿಂದ ನೈಲ್ಯವೇ ವಿಶೇಷಣವು, ಆದರೆ
ಗದ್ದೆಯಲ್ಲಿ ಕೂತಿರುವ ಸಾರಸಪಕ್ಷಿಯು ಸ್ವಲ್ಪ ಕಾಲವಾದ ನಂತರ ಗದ್ದೆಯನ್ನು
ಬಿಟ್ಟು ಹೋಗಿರಬಹುದು. ಆದುದರಿಂದ ಅದು ಉಪಲಕ್ಷಣವು ಎಂಬ ಭಾವವು.
ದ್ವಯದ ಪೂರ್ವ ಖಂಡದ ಶ್ರೀಮಚ್ಛಬ್ದವು ಉಪಲಕ್ಷಣವೆಂದು ಹೇಳುವದರಲ್ಲಿ
ಲಕ್ಷ್ಮಿಯು ಉಪಾಯ ಕೋಟಿಗೆ ಹೊರಗೆ ಇರುವಳೆಂದೂ, ಉತ್ತರಖಂಡದ ಶ್ರೀಮ
ಚ್ಛಬ್ದವು ಪ್ರಾಪ್ಯಕೋಟಿಗೆ ಸೇರಿ, ಮುಕ್ತರಿಂದ ಕೈಙ್ಕರ್ಯಗಳನ್ನು ಸ್ವೀಕರಿಸುವದ
ರಿಂದ ವಿಶೇಷಣವೆಂದೂ, ಹೇಳುವರು. ಒಬ್ಬಳಾದ, ಸರ್ವದಾ ನಾರಾಯಣನೊಂದಿ

ಇನ್ನಿಡತ್ತಿಲ್ ಶಬ್ದಮ್ ಏಕರೂಪಮಾಯಿರುಕ್ಕ, ಸ್ವಾರಸ್ಯತ್ತುಕ್ಕು ಬಾಧಕಮುಮಿನ್ರಿಕ್ಕೇ ಇರುಕ್ಕ, "ಸ್ವರೂಪಂ ಸ್ವಾತಂತ್ರ್ಯ"ಮಿತ್ಯಾದಿಗಳಿಲೆ ಪ್ರಸಿದ್ಧಮಾನ ಕೂಟಸ್ಥ ಸಂಪ್ರದಾಯ ವಿರುದ್ಧಮಾಗಪ್ಪಣ್ಣುಗಿರ ಇನ್ನಿ ಭಾಗಮ್ ಅನುಪಪನ್ನಮ್.

ಗೇನೇ ಸೇರಿ ಅಪೃಥಕ್ಸಿದ್ಧವಿಶೇಷಣಳಾದ ಲಕ್ಷ್ಮಿಯನ್ನು ಬೋಧಿಸುವ ಶ್ರೀಮಚ್ಛಬ್ದವು ಒಂದು ಕಡೆ ಉಪಲಕ್ಷಣವು, ಒಂದು ಕಡೆ ವಿಶೇಷಣವು ಎಂಬುದು ಹೇಗೆ ಸಮಂಜಸವೋ ತಿಳಿಯದು ಎಂಬ ಭಾವದಿಂದ ಅಪ್ಪಣೆ ಕೊಡಿಸಿದ ವಾಕ್ಯವಾಗಿರುತ್ತದೆ. ಅದೂ ಅಲ್ಲದೆ ವಿಶೇಷಣವೆಂದು ಹೇಳುವ ಶ್ರೀಮಚ್ಛಬ್ದವು ಶ್ರೀಮತೇ ಎಂದು ಪ್ರತ್ಯೇಕ ಪದ[illegible]ರುವಾಗ, ಉಪಾಯವನ್ನು ಬೋಧಿಸುವ ನಾರಾಯಣ ಶಬ್ದದೊಂದಿಗೆ ಸಮಾಸ ಪದವಾಗಿರುವ ಶ್ರೀಮಚ್ಛಬ್ದವು ವಿಶೇಷಣವಲ್ಲ, ಉಪಲಕ್ಷಣ ಮಾತ್ರವೇ ಎಂದು ಹೇಳಿರುವದು ಸಾಹಸವೇ ಸರಿ. ಅದಕ್ಕೆ ಪ್ರಮಾಣ ಬಲವಾದರೂ ಇದ್ದರೆ ಹಾಗೆ ಹೇಳಬಹುದಾಗಿತ್ತು. ಪ್ರಮಾಣ ಬಲವು ಮೊದಲೆಯೇ ಇಲ್ಲವು.

ಹೀಗೆ ಮಂತ್ರಪ್ರತಿಪಾದ್ಯವಾದ ಒಂದೇ ಅರ್ಥವುಳ್ಳ ಪದಕ್ಕೆ ವ್ಯತ್ಯಸ್ತವಾಗಿ ಅರ್ಥ ಹೇಳುವುದು ಸ್ವಾರಸ್ಯಕ್ಕೆ ಬಾಧಕವೂ, ಪ್ರಮಾಣವಿರುದ್ಧವೂ ಆಗಿರುವದಲ್ಲದೆ, ಹಾಗೆ ಹೇಳುವವರ ಪರಮಾಚಾರ್ಯ ಸೂಕ್ತಿಗಳಿಗೇನೇ ವಿರೋಧವೆಂದು ವ್ಯಕ್ತಪಡಿಸುತ್ತಾರೆ—ಇನ್ನಿಡತ್ತಿಲ್ - ಈ ಸ್ಥಳದಲ್ಲಿ ಎಂದರೆ ದ್ವಯಮಂತ್ರದಲ್ಲಿ ಶಬ್ದಮ್ ಏಕರೂಪಮಾಯಿರುಕ್ಕ-ಪ್ರಕೃತಿಪ್ರತ್ಯಯಗಳಿಂದ ಸೇರಿದ ಪದವು ಒಂದೇ ವಿಧವಾಗಿದ್ದರೂ ಒಂದೇ ವ್ಯಕ್ತಿಯನ್ನೇ ಬೋಧಿಸುವರೂ, ಸ್ವಾರಸ್ಯತ್ತುಕ್ಕು ಬಾಧಕಮುಮಿನ್ರಿಕ್ಕೇ-ಸ್ವಾರಸ್ಯಕ್ಕೇನೂ ತೊಂದರೆಯು ಇಲ್ಲದಿದ್ದರೂ, ಇಲ್ಲಿ ಸ್ವಾರಸ್ಯವ್ಯಾವುದೆಂದರೆ ಶಾಸ್ತ್ರಗಳಿಂದ ತೋರಿಬರುವ ಲಕ್ಷ್ಮೀ ಮಾಹಾತ್ಮ್ಯವೇ ಯು, ಅಥವಾ ಸರಸವಾದ ಅರ್ಥಕ್ಕೆ ತೊಂದರೆ ಏನೂ ಇಲ್ಲದಿರೋಣವೂ, "ಸ್ವರೂಪಂ ಸ್ವಾತಂತ್ರ್ಯಮ್" ಇತ್ಯಾದಿಗಳಿಲೇ - ಸ್ವರೂಪಂ ಸ್ವಾತಂತ್ರ್ಯಮ್ ಎಂಬಿವೇ ಮೊದಲಾದ ಅಭಿಯುಕ್ತರ ದಿವ್ಯ ಸೂಕ್ತಿಗಳಲ್ಲಿ, ಪ್ರಸಿದ್ಧಮಾನ - ಚೆನ್ನಾಗಿ ತೋರಿಬರುವ, ಕೂಟಸ್ಥಸ್ಸಂಪ್ರದಾಯವಿರುದ್ಧಮಾಕ - ಕೂಟಸ್ಥರೆಂದರೆ ಪ್ರಪನ್ನ ಜನಸಂತಾನಕ್ಕೆಲ್ಲಾ ಮುಖ್ಯಸ್ಥರು ಇಲ್ಲಿ ನಮ್ಮಾಳ್ವಾರ್, ನಾಥಮುನಿ, ಯಾಮುನ, ಭಾಷ್ಯಕಾರರೂ ಅವರಿಂದೀಚೆಗೆ ತನ್ನ ಅವಲಂಬಿಗಳಾದ ಪರಾಶರಭಟ್ಟರೇ ಮೊದಲಾದವರು ಹೇಳಲ್ಪಟ್ಟಿರು, ಇಂತ

ವರ ಆಚಾರಕ್ಕೆ ವಿರುದ್ಧವಾಗಿ, ಪಣ್ಣುಗಿರ - ಮಾಡುವ, ಇವ್ವಿಭಾಗವ್ - ಈ ವ್ಯತ್ಯಾಸವು, ಮೊದಲನೆಯ ಶ್ರೀಮಚ್ಛಬ್ದವು ಉಪಲಕ್ಷಣವು ಎರಡನೆಯದು ವಿಶೇಷಣವು ಎಂಬ ವ್ಯತ್ಯಾಸವು, ಅನುಪಪನ್ನಮ್ - ಅಸಮಂಜಸವು. ಈ ಅಭಿಪ್ರಾಯವು ಸರಿಯಲ್ಲವೆಂಬುದಕ್ಕೆ ಮೂರು ಕಾರಣಗಳನ್ನು ಹೇಳಿದರು— (೧) ಒಂದೇ ಮಂತ್ರದಲ್ಲಿರುವ ಒಂದೇ ಪ್ರಕೃತಿ ಪ್ರತ್ಯಯವುಳ್ಳ ಒಂದೇ ಅರ್ಥವುಳ್ಳ ಶಬ್ದಕ್ಕೆ ಬೇರೆ ಬೇರೆ ಅಭಿಪ್ರಾಯಗಳನ್ನು ಕಲ್ಪಿಸುವದು ಯುಕ್ತವಲ್ಲವು, (೨) ಒಂದೇ ವಿಧವಾದ ಅರ್ಥವನ್ನು ಹೇಳುವದರಿಂದ ಸ್ವಾರಸ್ಯಕ್ಕೇನೂ ತೊಂದರೆ ಇಲ್ಲದುದರಿಂದ ಭಿನ್ನಾಭಿಪ್ರಾಯಗಳನ್ನು ಕಲ್ಪಿಸುವದು ಸರಿಯಲ್ಲವು. ಸ್ವಾರಸ್ಯವಿದ್ದರೆ ಭಿನ್ನಾಭಿಪ್ರಾಯಗಳನ್ನು ಕಲ್ಪಿಸಬಹುದು. ಅಂತಹ ಸ್ವಾರಸ್ಯವೂ ಕಾಣಲಿಲ್ಲವು. (೩) ಹಾಗೆ ಕಲ್ಪಿಸುವದು, ಪರಮಾಚಾರ್ಯರುಗಳಾದ ನಾಥಮುನಿ ಯಾಮುನ ಯತಿರಾಜರುಗಳ ಮತ್ತು ಪರಾಶರ ಭಟ್ಟರೇ ಮೊದಲಾದವರುಗಳ ದಿವ್ಯ ಸೂಕ್ತಿಗಳಿಗೆ ವಿರೋಧವಾದುದರಿಂದಲೂ ಅಸಮಂಜಸವು. ಹೀಗೆ ಮೂರು ಕಾರಣಗಳಿಂದ ಸರಿಯಲ್ಲವೆಂದು ಹೇಳಿ ನಿದರ್ಶನಕ್ಕಾಗಿ ಪರಾಶರಭಟ್ಟರ ದಿವ್ಯ ಸೂಕ್ತಿಯನ್ನು ಉದಾಹರಿಸುತ್ತಾರೆ. ಆ ಶ್ಲೋಕವು ಯಾವುದೆಂದರೆ :—

ಸ್ವರೂಪಂ ಸ್ವಾತಂತ್ರ್ಯಂ ಭಗವತ ಇದಂ ಚಂದ್ರವದನೇ ।
ತ್ವದಾಶ್ಲೇಷೋತ್ಕರ್ಷಾದ್ಭವತಿ ಖಲು ನಿಷ್ಕರ್ಷ ಸಮಯೇ ।
ತ್ವಮಾಸೀರ್ಮಾತಃ ಶ್ರೀಃ ಕಮಿತು ರಿದಮಿತ್ಥಂ ತ್ವವಿಭವ ।
ಸ್ತದನ್ತರ್ಭಾವಾತ್ತ್ವಂ ನ ಪೃಥಗಭಿಧತ್ತೇ ಶ್ರುತಿರಪಿ ॥ (ಶ್ರೀಗುಣ ೨೮)

ಇದರರ್ಥವು—ಹೇ ಚಂದ್ರವದನೇ - ಚಂದ್ರನಿಗೆ ಸಮಾನವಾದ ಮುಖವುಳ್ಳ ಲಕ್ಷ್ಮಿಯೇ, ಭಗವತಃ - ಪುರುಷಸೂಕ್ತದಲ್ಲಿ ನಾರಾಯಣ ಶಬ್ದ ಸಾಮಾನಾಧಿಕರಣ್ಯದಿಂದ ಹೇಳಲ್ಪಟ್ಟ ಶ್ರುತಿ ಪ್ರತಿಪಾದಿತಗಳಾದ ಸರ್ವ ಭಗವಚ್ಛಬ್ದ ವಾಚ್ಯನಾದ ಸರ್ವೇಶ್ವರನ, ಸ್ವರೂಪಂ - ಸ್ವರೂಪವೂ, ಸ್ವಾತಂತ್ರ್ಯವೂ ಸಹ ತ್ವದಾಶ್ಲೇಷೋತ್ಕರ್ಷಾತ್ - "ನಿತ್ಯೈವೈಷಾ ಜಗನ್ಮಾತಾ ವಿಷ್ಣೋಃ ಶ್ರೀರನಪಾಯಿನೀ" ಎಂಬ ಪರಾಶರೋಕ್ತಿಯ ಪ್ರಕಾರ ನಿನ್ನೊಡನೆ ಯಾವಾಗಲೂ ನಿತ್ಯಯೋಗವಿರುವ ಮಹಿಮೆಯಿಂದ ಭವತಿ ಖಲು - ಉಂಟಾಗುತ್ತದೆಯಲ್ಲವೇ ? ಹೇ ಮಾತಃ - ಓ ತಾಯಿಯೇ, ಶ್ರೀಃ-ಆರು ವಿಧ ಅರ್ಥಗಳನ್ನು ಒಳಗೊಂಡಿರುವ (ಶ್ರೀಸ್ತು ೩)ಶ್ರೀ ಶಬ್ದವಾಚ್ಯಳಾದ ಲಕ್ಷ್ಮಿಯೇ, ನಿಷ್ಕರ್ಷಸಮಯೇ- ಈ ಸ್ವರೂಪ ಸ್ವಾತಂತ್ರ್ಯಗಳನ್ನು ನಿರ್ಣಯಿಸುವ ಸಮಯದಲ್ಲಿ ಕಮಿತುಃ - ನಿನಗೆ ಪ್ರಿಯ ವಲ್ಲಭನಾದ, ಇದಮಿತ್ಥಂ ತ್ವವಿಭವಃ - ಇದಂತ್ವ - ಇದೀಗ, ಎಂಬದಾಗಿಯೂ ಇತ್ಥಂತ್ವ - ಈಪ್ರಕಾರವಾದುದೆಂಬದಾಗಿಯೂ, ಹೇಳಲ್ಪಡುವ ಐಶ್ವರ್ಯವು,

ತ್ವಮಾಸೀಃ - ನೀನೇಯಾಗಿರುತ್ತೀಯೇ. ತದನನ್ಯರ್ಹ್ಯಾನಾತ್ - ಹೀಗೆ ಆತನ ಸ್ವರೂಪಸ್ವಾತಂತ್ರ್ಯಗಳ ಮಹಿಮೆಯು ನಿನ್ನನ್ನು ಹೊಂದಿ, ನೀನು ಆತನಲ್ಲಿ ಅಂತರ್ಭೂತಳಾದುದರಿಂದ, ಹೇಗೆಂದರೆ ಪರಿಮಳವು ಹೂವಿನಲ್ಲೂ, ಜ್ಯೋತಿಸ್ಸು ರತ್ನದಲ್ಲೂ ಅಂತರ್ಭೂತವಾಗಿರುವ ಹಾಗೆ ಯಾವಾಗಲೂ ಒಟ್ಟಿಗೇನೆ ಇರುವದರಿಂದ, ಶ್ರುತಿರಪಿ - ಶ್ರುತಿಯೂ ಕೂಡ, ನಪೃಥಗಭಿದತ್ತೇ - ನಿನ್ನನ್ನು ಬೇರೆಯಾಗಿ ಹೇಳಲಿಲ್ಲವು. ನಿನ್ನ ಪತಿಯನ್ನು ಕುರಿತು ಹೇಳಿದರೆ ನೀನೂ ಆತನಿಗೆ ಅಪೃಥಕ್ಸಿದ್ಧ ವಿಶೇಷಣವಾಗಿ, ನಿತ್ಯಾನಪಾಯಿನಿಯಾಗಿ ಒಟ್ಟಿಗೇ ಇರುವದರಿಂದ ಸನ್ನಿಯೋಗ ಶಿಷ್ಟನ್ಯಾಯಪ್ರಕಾರ ಒಂದನ್ನು ಹೇಳಿದರೆ, ಅದರೊಂದಿಗೆ ಯಾವಾಗಲೂ ಅನುವರ್ತಿಸಿ ಬರುವ ಇನ್ನೊಂದನ್ನು ಹೇಳಬೇಕಾದ ಅವಶ್ಯಕವಿಲ್ಲವು ಎಂಬ ಭಾವವು. ಸೂರ್ಯನು ಉದಯಿಸಿದನು ಎಂದು ಹೇಳುವಾಗ ಅದರೊಂದಿಗೆ ಯಾವಾಗಲೂ ಇರುವ ಸೂರ್ಯಕಿರಣಗಳೂ ಉದಯಿಸಿದವು ಎಂದು ಹೇಳುವ ಅವಶ್ಯಕವು ಹೇಗೆ ಇಲ್ಲವೋ ಹಾಗೆ ಎಂಬ ತಾತ್ಪರ್ಯವು. ಸರ್ವೇಶ್ವರನೆಂಬ ವಿಶೇಷ್ಯಕ್ಕೆ ಲಕ್ಷ್ಮೀ ಎಂಬ ವಿಶೇಷಣವಿಲ್ಲದೆ ಮಾಹಾತ್ಮ್ಯ ಇಲ್ಲವೆಂದು ಹೇಳಿಬಿಟ್ಟರೆ, ಸದೇವ ಸೌಮ್ಯೇದಮಗ್ರ ಆಸೀತ್ ಇತ್ಯಾದಿ ಶ್ರುತಿ ವಾಕ್ಯಗಳಲ್ಲಿ ಭಗವಂತನಿಗೆ ಹೇಗೆ ಉಪಾದಾನತ್ವವೆಂದರೆ, ಆತನಿಗೆ ಉಪಾದಾನತ್ವವನ್ನು ಹೇಳಬೇಕೆಂಬ ಆಶೆಯಿಂದಲೇ, ಶ್ರುತಿಗಳು ಲಕ್ಷ್ಮಿಯಾದ ನಿನ್ನ ಹೆಸರನ್ನು ಬಿಟ್ಟು ನಿನ್ನ ಪತಿಯ ಹೆಸರನ್ನು ಮಾತ್ರವೇ ಹೇಳಿದವು. ನಿನಗೆ ಮಹಿಮೆಯೇ ಇರುವದರಿಂದ ನಿನಗೇನೋ ಉಪಾದಾನತ್ವವು ಸ್ಪಷ್ಟವು ಎಂಬ ಭಾವವು. ಪುರುಷಸೂಕ್ತವೇನೋ ಕಾರಣಾದಿ ವಾಕ್ಯಗಳಲ್ಲಿನ ಸತ್, ಆತ್ಮಾ, ಬ್ರಹ್ಮಾದಿ ಶಬ್ದಗಳಿಗೆ, ಏಕೋಹವೈ ನಾರಾಯಣ ಆಸೀತ್" ಎಂಬ ವಾಕ್ಯದ ನಾರಾಯಣ ಶಬ್ದದೊಂದಿಗೆ ಸಾಮಾನಾಧಿಕರಣ್ಯವನ್ನೇನೋ ಸಮರ್ಥಿಸಿರುತ್ತದೆ; ಲಕ್ಷ್ಮಿಯೊಂದಿಗೆ ಈ ನಾರಾಯಣ ಶಬ್ದಕ್ಕೆ ಅನ್ವಯ ಹೇಗೆ, ಎಂದರೆ "ಹ್ರೀಶ್ಚತೇ ಲಕ್ಷ್ಮೀಶ್ಚ ಪತ್ನ್ಯೌ" ಎಂಬ ವಾಕ್ಯದ ಮೂಲಕ ಊಹಿಸಬಹುದೆಂಬ ತಾತ್ಪರ್ಯವು. ಶ್ರುತಿಯೂ ಈ ನಿತ್ಯಯೋಗವನ್ನೇ ದೇವಜುಷ್ಟಾಮುದಾರಾಂ ಎಂಬುದರಿಂದ ತಿಳಿಸಿರುತ್ತದೆ. ಅದನ್ನೇ ಶ್ರೀ ಪರಾಶರರೂ ವಿಷ್ಣೋಶ್ಶ್ರೀರನಪಾಯಿನೀ (ವಿ. ಪು. ೧-೮-೧೭) ಎಂದು ಉಪದೇಶಿಸಿರುತ್ತಾರೆ. ಶ್ರೀ ವಾಲ್ಮೀಕಿ ಮಹರ್ಷಿಯೂ ಕೂಡ "ಅನನ್ಯಾ ರಾಘವೇಣಾಹಂ ಭಾಸ್ಕರೇಣ ಪ್ರಭಾಯಥಾ" ಸೂರ್ಯನನ್ನಗಲಿ ಹೇಗೆ ಪ್ರಭೆ ಇರುವದಿಲ್ಲವೋ ಹಾಗೆ ಶ್ರೀರಾಮನನ್ನಗಲಿ ತಾನೂ ಇರಲಾರೆನೆಂಬ ಸೀತಾ ವಾಕ್ಯದಿಂದಲೂ, "ಅನನ್ಯಾಹಿ ಮಯಾ ಸೀತಾ ಮೈಥಿಲೀ ಜನಕಾತ್ಮಜಾ" "ಸೀತೆಯು ತನ್ನಿಂದ ಪೃಥಕ್ಕಾದವಳಲ್ಲವು" ಎಂಬ ಶ್ರೀರಾಮೋಕ್ತಿಯಿಂದಲೂ ಸ್ಪಷ್ಟಪಡಿ

ಸಿರುತ್ತಾರೆ. ಈ ಶ್ರೀ ಪರಾಶರ ಭಟ್ಟರ ದಿವ್ಯಸೂಕ್ತಿಯಿಂದ ಈ ನಿತ್ಯ ಯೋಗವು ಸ್ವರೂಪತಃ ಉಂಟೆಂದು ವ್ಯಕ್ತಪಡುತ್ತದೆ. ಶ್ರೀ ಪರಾಶರರೂ ಕೂಡ "ನಿತ್ಯೈವೈಷಾ ಜಗನ್ಮಾತಾ ವಿಷ್ಣೋಃ ಶ್ರೀರನಪಾಯಿನೀ" ಎಂದು ಪೂರ್ವಾರ್ಧದಿಂದ ನಿತ್ಯ ಯೋಗವನ್ನು ಹೇಳಿ, ಮುಂದಕ್ಕೆ ಉತ್ತರಾರ್ಧದಿಂದ "ಯಥಾ ಸರ್ವಗತೋ ವಿಷ್ಣುಸ್ತಥೈವೇಯಂ ದ್ವಿಜೋತ್ತಮ" ಎಂಬುವರಿಂದ ಸ್ವರೂಪತಃ ನಿತ್ಯ ಯೋಗವನ್ನು ಪ್ರಪಾದಿಸಿರುತ್ತಾರೆ. ಇದರಂತೆಯೇ ವಿಷ್ವಕ್ಸೇನ ಸಂಹಿತೆಯಲ್ಲಿಯೂ

ತಥಾ ಲಕ್ಷ್ಮ್ಯಾಃ ಸ್ವರೂಪಂಚ ವಕ್ಷ್ಯೇ ಶೃಣು ಸಮಾಹಿತಃ ।
ಗುಣತತ್ತ್ವಸ್ವರೂಪೇಣ ವ್ಯಾಪ್ತಿ ಸ್ಸಾಧಾರಣೀ ಮತಾ ।
ಯಥಾಮಯಾ ಜಗದ್ವ್ಯಾಪ್ತಂ ಸ್ವರೂಪೇಣ ಸ್ವಭಾವತಃ ।
ತಥಾ ವ್ಯಾಪ್ತಂ ತಯಾ ಸರ್ವಂ ನಿಯಂತ್ರೀಚ ತಥೇಶ್ವರೀ ॥"

ಇದರಿಂದ ಸ್ವರೂಪತಃ ನಿತ್ಯಯೋಗ ಹೇಳದೆ ಗುಣದಿಂದ ಮಾತ್ರ ಹೇಳುವವರ ವಾದವು ದೂರೀಕೃತವಾಯಿತು.

ಅದರೆ ಲಕ್ಷ್ಮಿಯಿಂದ ನಾರಾಯಣನಿಗೆ ಸ್ವರೂಪನಿರೂಪಣ ಹೇಗೆ? ಸರ್ವ ಶ್ರುತಿ ಸಾರಭೂತವಾದ ಪುರುಷಸೂಕ್ತವು ಶ್ರುತಿಗಳಲ್ಲಿ ಅನೇಕ ಕಡೆಗಳಲ್ಲಿ ಪ್ರತಿಪಾದ್ಯವಾದ ಶಬ್ದಗಳಾದ ಹಿರಣ್ಯಗರ್ಭ, ಶಿವ, ಶಂಭು, ಪರಮಾತ್ಮಾ, ಪರಂಜ್ಯೋತಿಸ್ಸು, ವಿಶ್ವಾತ್ಮಾ, ಹರಿ, ಅಚ್ಯುತ, ಇತ್ಯಾದಿಗಳೆಲ್ಲಾ ನಾರಾಯಣನನ್ನೇ ಬೋಧಿಸುತ್ತವೆಂದು ಸಾಮಾನಾಧಿಕರಣ್ಯದಿಂದ ಹೇಳಿ, ಆ ನಾರಾಯಣನು ಯಾರೋ ಎಂಬ ಯೋಗಿಗಳ ಸಂದೇಹ ನಿವರ್ತನಗಾಗಿ, "ಹ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ" ಎಂಬುದರಿಂದ ಲಕ್ಷ್ಮೀಪತಿಯು ಯಾರೋ, ಅತನೇ ನಾರಾಯಣನು ಎಂದು ಸೂಕ್ತವು ಮುಂದೆ ನಿರ್ಣಯಿಸಿರುವುದರಿಂದ ಲಕ್ಷ್ಮೀ ಸಂಬಂಧವು, ಶ್ರಿಯಃಪತಿತ್ವವು ಸ್ವರೂಪನಿರೂಪಕ ಧರ್ಮವಾಯಿತು ಎಂಬುದು ಈ ಶ್ಲೋಕದ ಮುಖ್ಯ ತಾತ್ಪರ್ಯವು. ಆದುದರಿಂದಲೇ ನಮ್ಮ ಸಿದ್ಧಾಂತಿಗಳೆಲ್ಲರೂ, ಭಗವಂತನನ್ನು ಕುರಿತು ಹೇಳುವಾಗ "ಶ್ರಿಯಃಪತಿಯಾದ" ಎಂದು ಪ್ರಾರಂಭಿಸುತ್ತಾರೆ. ಮಹರ್ಷಿಯೂ ಕೂಡ ಈ ಅಭಿಪ್ರಾಯವನ್ನು ಮಾರೀಚ ವಾಕ್ಯವಾದ "ಅಪ್ರಮೇಯಂ ಹಿ ತತ್ತೇಜಃ ಯಸ್ಯಸಾ ಜನಕಾತ್ಮಜಾ" ಎಂಬುದರಿಂದ ವ್ಯಕ್ತಪಡಿಸಿರುತ್ತಾರೆ.

ಲಕ್ಷ್ಮಿಯಿಂದ ಸ್ವಾತಂತ್ರ್ಯದ ವಿಕಾಸ ಹೇಗೆ? ಎಂದರೆ, ಸ್ವಾತಂತ್ರ್ಯವು ದುಷ್ಟರ ಶಿಕ್ಷೆಯಲ್ಲಿ ಮಾತ್ರ ಪರಿಣಮಿಸಿದರೆ ಅಷ್ಟು ಶ್ಲಾಘ್ಯವಲ್ಲದ್ದು, ಶಿಷ್ಟ ಪರಿಪಾಲನದಲ್ಲಿ ಅನ್ವಯಿಸಿದರೆ ಹೆಚ್ಚು ಶ್ಲಾಘ್ಯವಾದುದಾಗುತ್ತದೆ. ಶಾಸನ ಕಾರ್ಯವನ್ನೂ ನಾರಾಯಣನೂ, ಅನುಗ್ರಹ ಕಾರ್ಯವನ್ನೂ ಲಕ್ಷ್ಮಿಯೂ, ಹೀಗೆ ಕಾರ್ಯ

ವಿಧಾನವನ್ನೂ ಮಾಡಿಕೊಂಡಿದ್ದಾನೆಂದು "ಯುವತ್ಯಾ ದೌತುಲ್ಯೇ" ಎಂಬ ಶ್ರೀಗುಣ ೩೪ನೆಯ ಶ್ಲೋಕದಲ್ಲಿ ಶ್ರೀ ಪರಾಶರಭಟ್ಟರು ಉಪಪಾದಿಸಿರುತ್ತಾರೆ. ಇದು ೬೬(೨೫೮ನೆಯ ಪುಟ ನೋಡಿ)ತತ್ತ್ವತ್ರಯಾಧಿಕಾರದಲ್ಲಿ ಚರ್ಚಿಸಲ್ಪಟ್ಟಿರುತ್ತದೆ. "ಕಾರ್ಯಂ ಕರುಣಮಾರ್ಯೇಣ ನ ಕಶ್ಚಿನ್ನಾಪರಾಧ್ಯತಿ" ರಾ. ಯು. ೧೧೬. ೪೪. ಎಂದು ಆಂಜನೇಯನಿಗೆ ಕರುಣೆಯ ಮಾಹಾತ್ಮ್ಯವನ್ನು ಪದೇಶಿಸಿದ ಅಜ್ಞಾತ ನಿಗ್ರಹಳಾಗಿ ಅನುಗ್ರಹ ಮಯಳಾದ ಸೀತೆಯ ಸಂಬಂಧವಿರುವದರಿಂದಲೇ ಶರಣಾಗತರ ವಿಷಯದಲ್ಲಿ ದೋಷವನ್ನೆಣಿಸುವದಿಲ್ಲವೆಂದು "ಮಿತ್ರಭಾವೇನ ಸಂಪ್ರಾಪ್ತಂ ನ ತ್ಯಜೇಯಂ ಕಥಂಚನ । ದೋಷೋಯದ್ಯಪಿ ತಸ್ಯಸ್ಯಾತ್ ಸತಾಮೇತದಗರ್ಹಿತಂ" ಎಂದು ಶ್ರೀರಾಮಚಂದ್ರನು ತನ್ನ ಸತ್ಯ ಸಙ್ಕಲ್ಪತೆಯನ್ನು ವ್ಯಕ್ತಪಡಿಸಿರುತ್ತಾನೆ. ಆದುದರಿಂದ ಇಂತಹ ಸ್ವಾತಂತ್ರ್ಯದ ಮಹಿಮೆಯೂ ಕೂಡ ಲಕ್ಷ್ಮೀ ಸಂಬಂಧದಿಂದಲೇ ಎಂದು ಉಪದೇಶಿಸಿರುತ್ತಾರೆ. ಈ ಅಭಿಪ್ರಾಯವನ್ನೇ ಲಕ್ಷ್ಮೀತಂತ್ರಶ್ಲೋಕವಾದ

ಲಕ್ಷ್ಮ್ಯಾ ಸಹ ಹೃಷೀಕೇಶೋ ದೇವ್ಯಾ ಕಾರುಣ್ಯರೂಪಯಾ ।
ರಕ್ಷಕಸ್ಸರ್ವಸಿದ್ಧಾನ್ತೇ ವೇದಾನ್ತೇಷು ಚ ಗೀಯತೇ ॥ ಎಂದು

ಬಹು ಸ್ವಾರಸ್ಯವಾಗಿ ಉಪಪಾದಿಸುತ್ತದೆಂಬುದು ಭಾವವು.

ಆಗಲಿ, ನಮ್ಮಾಳ್ವಾರವರು ಲಕ್ಷ್ಮಿಗೂ ಉಪಾಯ ಕೋಟಿಯಲ್ಲಿ ಅನ್ವಯವನ್ನು ಎಲ್ಲಿಯಾದರೂ ಹೇಳಿರುವದುಂಟೋ ಎಂದರೆ "ಅಗಲಗಿಲ್ಲೇನ್" (ತಿರು ೬.೧೦.೧೦.) ಎಂಬ ಪಾಶುರದಲ್ಲೂ, "ಮಾಧವನೆನ್ರೇ"(ತಿರು ೧೦ ೫.೭)ಎಂಬಿವೇ ಮೊದಲಾದ ಪಾಶುರಗಳಲ್ಲಿ ಹೇಳಿರುತ್ತಾರೆ. ಶ್ರೀ ಯಾಮುನೇಯರವರು ಚತುಶ್ಶ್ಲೋಕಿಯಲ್ಲಿ "ಶ್ರೀಯಃ ಸತ್ಯರವಿಂದ ಲೋಚನಮನಃ ಕಾನ್ತಾ ಪ್ರಸಾದಾದೃತೇ ಸಂಸೃತ್ಯಕ್ಷರ ವೈಷ್ಣವಾಧ್ವಸು ನೃಣಾಂ ಸಂಭಾವ್ಯತೇ ಕರ್ಹಿಚಿತ್" ॥೩॥ ಎಂಬ ಶ್ಲೋಕದಲ್ಲಿ ಉಪಪಾದಿಸಿರುತ್ತಾರೆ. ಇವರ ಅರ್ಥ ತಾತ್ಪರ್ಯಾದಿಗಳಿಗೆ ದಾಸನು ಬರೆದಿರುವ ಚತುಶ್ಶ್ಲೋಕಿ ವ್ಯಾಖ್ಯಾನದ ೫೩ರಿಂದ ೭೦ನೆಯ ಪುಟಗಳನ್ನು ಪರಾಂಬರಿಸಿರಿ. ಶ್ರೀ ಭಾಷ್ಯಕಾರರ ಹೇಳಿಕೆಗೂ ಅದೇ ಗ್ರಂಥದ ೬೬ನೆಯ ಪುಟವನ್ನು ನೋಡಿ. ಶ್ರೀ ಪರಾಶರಭಟ್ಟರೂ ದ್ವಯಾರ್ಥಾಭಿಪ್ರಾಯವನ್ನು ಅಷ್ಟಶ್ಲೋಕಿಯಲ್ಲಿ ಉಪಪಾದಿಸುವಾಗಲೂ ಲಕ್ಷ್ಮಿಗೂ ಉಪಾಯತ್ವವನ್ನು ಸ್ಥಾಪಿಸಿರುತ್ತಾರೆ. ಚತುಶ್ಶ್ಲೋಕಿಯ ೬೭ನೆಯ ಪುಟವನ್ನು ನೋಡಿ.

ಈ ಶ್ಲೋಕಾಂಶದಲ್ಲಿ ಶ್ರುತಿಯು ನಿನ್ನನ್ನು ಪೃಥಕ್ಕರಿಸಿ ಹೇಳಲಿಲ್ಲವು. ಏಕೆಂದರೆ ನಿನ್ನ ಪತಿಯನ್ನು ಕುರಿತು ಹೇಳಿರುವುದು ಅನುರೂಪವಾಗಿ ನಿನಗೂ ಸಹ ಅನ್ವಯಿಸುತ್ತದೆ ಎಂದು ಹೇಳಿದರು. ಆದರೆ ನಿನ್ನ ಸಂಬಂಧವನ್ನು ತಿಳಿಸಿ

ಶ್ರುತಿಯು ಎಲ್ಲಿಯೂ ಹೇಳಲಿಲ್ಲವೇ ಎಂದರೆ ಅನೇಕ ಕಡೆಗಳಲ್ಲಿ ಹೇಳಲಿಲ್ಲವೆಂದು ತಾತ್ಪರ್ಯವು. ಎಲ್ಲಿಯೂ ಹೇಳಿಯೇ ಇಲ್ಲವೆಂಬ ತಾತ್ಪರ್ಯವಲ್ಲವು. **"ಆನೀದವಾತಗ್ಂ ಸ್ವಧಯಾ ತದೇಕಂ"** ಎಂಬ ಶ್ರುತಿಯು ಜಗತ್ಸೃಷ್ಟಿ ಪ್ರಳಯಗಳಲ್ಲೂ ಅನ್ವಯ ಉಂಟೆಂದು ಹೇಳುವದಲ್ಲದೆ, **ಸ್ವಧಯಾ ತದೇಕಂ** ಎಂದು ಹೇಳಿರುವದರಿಂದ ಲಕ್ಷ್ಮಿಯೊಂದಿಗೆ ಸೇರಿದ ನಾರಾಯಣನೇ, **ಏಕಂ** ಒಬ್ಬನಾದ ಪರತತ್ವವೆಂದು ಬೋಧಿಸುತ್ತದೆ. ಇಲ್ಲಿ **ಸ್ವಧಾ** ಶಬ್ದವು ಇತರ ಅನೇಕ ಕಡೆಗಳಲ್ಲಿ ಬೋಧಿಸುವ ಹಾಗೆ ಲಕ್ಷ್ಮೀಪರವು. ಇತರರು ಹೇಳುವ ಅನಿಷ್ಟವಾದ ಅವಿದ್ಯಾಪರವಲ್ಲವು. ಹಾಗೆ ಹೇಳಿದರೆ **"ಮಙ್ಗಳಾನಾಂಚ ಮಙ್ಗಳಂ"** ಎಂದು ಹೇಳಿಸಿಕೊಳ್ಳುವನಿಗೆ ಹೇಯಸಂಬಂಧವನ್ನು ಕಲ್ಪಿಸಿದಂತಾಗುತ್ತದೆ. ಭಾರತ ಮೋಕ್ಷ ಪರ್ವದಲ್ಲೂ ಶ್ರೀ ವ್ಯಾಸಮಹರ್ಷಿಯೂ **"ಏಕಾಕೀ ವಿದ್ಯಯಾ ಸಾರ್ಧಂ"** ಲಕ್ಷ್ಮಿಯೊಂದಿಗೆ ಒಬ್ಬನು ಎಂದು ಹೇಳಿ, **ತತೋ ಭೂಯೋ ಜಗತ್ಸೃಷ್ಟಿಂ ಕರಿಷ್ಯಾಮೀಹ ವಿದ್ಯಯಾ"** ಎಂದು ಲಕ್ಷ್ಮಿಯು ನಿತ್ಯಯೋಗವನ್ನೂ, ಸೃಷ್ಟ್ಯಾದಿ ಸರ್ವ ವ್ಯಾಪಾರಗಳಲ್ಲೂ ಲಕ್ಷ್ಮಿಗೆ ಅನ್ವಯವನ್ನೂ, ಬೋಧಿಸಿರುತ್ತಾರೆ. ಹಾಗೆಯೇ ಶ್ರುತಿಯು **"ಶ್ರದ್ಧಯಾದೇವೋ ದೇವತ್ವ ಮಶ್ನುತೇ"** ಲಕ್ಷ್ಮಿಗೆ ಜಗತ್ತಿನ ಸಮಸ್ತ ಲೀಲಾ ವ್ಯಾಪಾರಗಳಲ್ಲಿ ಅನ್ವಯವನ್ನು ಬೋಧಿಸುತ್ತದೆ. **"ಈಶ್ವರೀಗ್ಂ ಸರ್ವಭೂತಾನಾಂ"** ಎಂಬೀ ಶ್ರುತಿವಾಕ್ಯವೂ ಲಕ್ಷ್ಮಿಗೆ ಜಗದ್ವ್ಯಾಪಾರಗಳಲ್ಲಿ ಸಂಬಂಧವುಂಟೆಂದು ಬೋಧಿಸುತ್ತದೆ. ಹೀಗೆ ಒಂದೆರಡು ಶ್ರುತಿಗಳು ಮಾತ್ರ ಹೇಳುತ್ತವೆಂದೂ, ಅನೇಕ ಶ್ರುತಿಗಳು ಪೃಥಕ್ಕರಿಸಿ ಹೇಳಲಿಲ್ಲವೆಂದೂ ತಾತ್ಪರ್ಯವು.

ಹೀಗೆ ಈ ಮೂರು ಕಾರಣಗಳಿಂದಲೂ ಮೊದಲನೆಯ ಶ್ರೀಮಚ್ಛಬ್ದವು ಉಪಲಕ್ಷಣವೆಂಬಭಿಪ್ರಾಯವು ಅನುಪಪನ್ನವೆಂದು ಉಪದೇಶಿಸಿರುತ್ತಾರೆ.

ಪೂರ್ವಖಂಡದಲ್ಲೂ ವಿಶೇಷಣನಾದರೆ ಉಪಾಯದ್ವಿತ್ವವು ಎಂಬ ಆಕ್ಷೇಪದ ಖಂಡನವು.

ಲಕ್ಷ್ಮಿಯನ್ನು ಉಪಾಯಕೋಟಿಯಲ್ಲಿ ಸೇರಿಸಿದರೆ, ಸರ್ವೇಶ್ವರನಿಗೆ ಅನನ್ಯೋಪಾಯತ್ವವನ್ನು ಹೇಳುವದು ಹೇಗೆ? ಆದಕ್ಕೆ ಭಂಗಬರಲಿಲ್ಲವೇ? ಎಂದರೆ, ಈ ದೂಷಣೆಯನ್ನು ಪ್ರತಿ ದೂಷಣೆಯಿಂದ ಖಂಡಿಸುತ್ತಾರೆ—ಹೇಗೆಂದರೆ, ನೀವು ದ್ವಯೋತ್ತರಖಂಡದಲ್ಲಿ ವಿಶೇಷಣವೆಂದು ಹೇಳುವದರಿಂದ, ಪ್ರಾಪ್ಯದ್ವಿತ್ವ ಉಂಟಾಯಿತು. ಆದುದರಿಂದ ಮಾಡುವ ಕೈಙ್ಕರ್ಯದ ಅನನ್ಯಪ್ರಯೋಜನತ್ವಕ್ಕೆ ಭಂಗ ಬರಲಿಲ್ಲವೇ? ಇಲ್ಲವೆಂದು ಸ್ಥಾಪಿಸುವದಾದರೆ,

ಲಕ್ಷ್ಮ್ಯಾ ಉಪಾಯತ್ವೇ ಉಪಾಯದ್ವಿತ್ವಮಿತಿ ಪೂರ್ವಪಕ್ಷಸ್ಯ ಖಂಡನಮ್

ಅನನ್ಯೋಪಾಯತ್ವವಿರುದ್ಧಮಾನ ಉಪಾಯದ್ವಿತ್ವಪ್ರಸಙ್ಗಮ್ ಇವ್ವಿಡತ್ತಿಲ್ ಬಾಧಕಮಾನಾಲೋವೆನ್ನಿಲ್ ? ಅನನ್ಯಪ್ರಯೋಜನತ್ವ ವಿರುದ್ಧಮಾನ ಪ್ರಾಪ್ಯದ್ವಿತ್ವಪ್ರಸಙ್ಗತ್ತಾಲೆ ಉತ್ತರಖಂಡತ್ತಿಲುಮ್ ವಿಶೇಷಣತ್ವಮ್ ತವಿರಪ್ರಸಙ್ಗಿಕ್ಕುಮ್.

ಉಪಾಯದ್ವಿತ್ವದಿಂದ ಸರ್ವೇಶ್ವರನ ಅನನ್ಯೋಪಾಯತ್ವಕ್ಕೂ ಭಂಗವಿಲ್ಲವೆಂದುಪಪಾದಿಸುತ್ತಾರೆ—

ಅನನ್ಯೋಪಾಯತ್ವವಿರುದ್ಧಮಾನ-ಸರ್ವೇಶ್ವರನಲ್ಲದೆ ಇನ್ನು ಯಾರೂ ಉಪಾಯನಲ್ಲವು ಎಂಬಭಿಪ್ರಾಯಕ್ಕೆ ವಿರುದ್ಧವಾದ, **ಉಪಾಯದ್ವಿತ್ವ ಪ್ರಸಙ್ಗಿಕ್ಕುಮ್** - ಲಕ್ಷ್ಮಿಯೂ ಉಪಾಯಕೋಟಿಯಲ್ಲಿ ಸೇರಿದವಳೆಂದು ಹೇಳಿ, ಹೀಗೆ ಇಬ್ಬರೂ ಉಪಾಯವೆಂಬಭಿಪ್ರಾಯವು, **ಇವ್ವಿಡತ್ತಿಲ್** - ಈ ಸಂದರ್ಭದಲ್ಲಿ ಎಂದರೆ ದ್ವಯಮಂತ್ರದ ಶ್ರೀಮಚ್ಛಬ್ದಗಳ ಅರ್ಥ ನಿರ್ಣಯದಲ್ಲಿ, **ಬಾಧಕಮಾನಾಲೋವೆನ್ನಿಲ್** – ಅನನ್ಯೋಪಾಯತ್ವಕ್ಕೆ ಬಾಧಕವಾದರೋ ? ಎಂದರೆ, ಆಗ ನಿಮ್ಮ ಇಷ್ಟಾಪತ್ತಿ, ಇಷ್ಟಾಭಿಪ್ರಾಯಕ್ಕೂ ವಿರೋಧ ಉಂಟಾಗುತ್ತದೆಂದು ಹೇಳುತ್ತಾರೆ—**ಅನನ್ಯ ಪ್ರಯೋಜನತ್ವ ವಿರುದ್ಧಮಾನ** - ಸರ್ವರೂ ಮೋಕ್ಷದೆಶೆಯಲ್ಲಿ ಮಾಡುವ ಎಲ್ಲಾ ಕೈಂಕರ್ಯಗಳೂ ಸರ್ವೇಶ್ವರನಿಗೇನೇ ಎಂಬಭಿಪ್ರಾಯಕ್ಕೆ ವಿರುದ್ಧವಾದ **ಪ್ರಾಪ್ಯದ್ವಿತ್ವ ಪ್ರಸಙ್ಗತ್ತಾಲೆ** - ಲಕ್ಷ್ಮೀನಾರಾಯಣರಿಬ್ಬರೂ ಪ್ರಾಪ್ಯದೆಶೆಯಲ್ಲಿ ಉದ್ದೇಶ್ಯರಾದುದರಿಂದ, **ಉತ್ತರಖಂಡದಲ್ಲೂ, ವಿಶೇಷಣತ್ವ ತವಿರ ಪ್ರಸಙ್ಗಿಕ್ಕುಮ್** - ವಿಶೇಷಣವಲ್ಲವೆಂದು ಹೇಳಬೇಕಾಗಿ ಬರುವದು. ಅನನ್ಯ ಪ್ರಯೋಜನತ್ವಕ್ಕೆ ಹಾನಿ ಉಂಟಾಗುವದರಿಂದ ಪ್ರಾಪ್ಯದ್ವಿತ್ವ ಸರಿಯಿಲ್ಲವಾಗಿ, ಅನನ್ಯ ಪ್ರಯೋಜನತ್ವವು ಸರ್ವೇಶ್ವರನಿಗೆ ಸಿದ್ಧಿಸುವದಕ್ಕಾಗಿ ಉತ್ತರ ಖಂಡದ ಶ್ರೀಮಚ್ಛಬ್ದವೂ, ಉಪಲಕ್ಷಣವೆಂದೇ ಹೇಳಬೇಕಾಗುತ್ತದೇ ವಿನಾ ವಿಶೇಷಣವಾಗುವದಿಲ್ಲವು.

ಆಗಲಿ, ಹಾಗೆಯೋ ಈ ಉತ್ತರ ಖಂಡದಲ್ಲೂ ವಿಶೇಷಣವೆಂದು ಹೇಳದೆ ಎರಡು ಕಡೆಯಲ್ಲೂ ಉಪಲಕ್ಷಣವೆಂದೇ ಹೇಳಿಬಿಡುವೆವು ಎಂದರೆ ಆಗಲೂ ವಿರೋಧವು ತಪ್ಪಿದ್ದಲ್ಲವೆಂದು ಹೇಳುತ್ತಾರೆ. ಶ್ರೀಮಚ್ಛಬ್ದವು ಎರಡುಕಡೆಯಲ್ಲೂ ಒಂದೇ ವಿಧವಾಗಿರುವಾಗ ಒಂದೇ ವಿಧವಾಗಿ ಭಾವಿಸತಕ್ಕದ್ದು ಯುಕ್ತವು ಎಂದು

ಆನಾಲ್ ಇರಣ್ಡಿಡತ್ತಿಲುಮ್ ಉಪಲಕ್ಷಣಮಾನಾಲೋ ವೆನ್ನಿಲ್ ? ಗುಣವಿಗ್ರಹ ವ್ಯಾಪಾರ ವಿಶೇಷಙ್ಗಳುಮ್ ಇರಣ್ಡಿಡತ್ತಿಲುಮ್ ಉಪಲಕ್ಷಣ ಙ್ಗಳಾಗ ಪ್ರಸಙ್ಗಿಕ್ಕುಮ್. ಉಪಯುಕ್ತಙ್ಗಳಾಗೈಯಾಲೇ ಯವೈ ವಿಶೇ

ನೀವು ಹೇಳಿದುದನ್ನು ಅಂಗೀಕರಿಸಿ ಎರಡುಕಡೆಯೂ ಉಪಲಕ್ಷಣವೇ ಎಂದು ಹೇಳಿದರೆ ಬಾಧಕವೇನು? ಎಂದು ಕೇಳಿದರೆ, ಬಾಧಕವನ್ನು ತೋರ್ಪಡಿಸುತ್ತಾರೆ.

ಆನಾಲ್-ಹೀಗೆ ಪತ್ನೀ ಸಂಬಂಧವು ಪ್ರಾಪ್ಯದೆಶೆಯಲ್ಲಿ, ಅನನ್ಯಪ್ರಯೋಜನ ತ್ವಕ್ಕೆ ಬಾಧಕವುಂಟಾಗುವದರಿಂದ, ವಿಶೇಷಣವಾಗಲಾರದು ಎಂದರೆ, **ಇರಣ್ಡಿಡ ತ್ತಿಲುಮ್**-ಎರಡುಕಡೆ ಎಂದರೆ ಖಂಡದಲ್ಲೂ, ಉಪಲಕ್ಷಣವಾದರೋ, ಎಂದರೆ ? **ಗುಣವಿಗ್ರಹವ್ಯಾಪಾರ ವಿಶೇಷಙ್ಗಳುಮ್**-ಉಪಾಯಾವಸ್ಥೆಗೂ, ಉಪೇಯಾವ ಸ್ಥೆಗೂ ಆವಶ್ಯಕಗಳಾದ ಸರ್ವೇಶ್ವರನ ಕಲ್ಯಾಣಗುಣಗಳೇನು, ಶರೀರದ ಲಾವಣ್ಯ ಸೌಂದರ್ಯಾದಿಗಳಿಂದ ಸೇರಿದ ದಿವ್ಯಮಙ್ಗಳವಿಗ್ರಹವೇನು, ಸತ್ಯಸಙ್ಕಲ್ಪತೆಯಿಂದ ಮಾಡುವ ದಿವ್ಯ ಚೇಷ್ಟಿತಗಳೇನು ಇವುಗಳೆಲ್ಲಾ, **ಉಪಲಕ್ಷಣಙ್ಗಳಾಗ ಪ್ರಸ ಙ್ಗಿಕ್ಕುಮ್** - ಉಪಲಕ್ಷಣಗಳಾಗಬೇಕಾಗುತ್ತದೆ. ಯಾವಾಗ ಸರ್ವೇಶ್ವರ ನೊಂದಿಗೇನೇ ಇರುವ ಲಕ್ಷ್ಮಿಯೇ ಉಪಾಯದೆಶೆಯಲ್ಲೂ ಉಪೇಯದೆಶೆಯಲ್ಲೂ ಉಪಲಕ್ಷಣವೆಂದಾಯಿತೋ, ಹಾಗೆಯೇ ಅನನ್ಯೋಪಾಯತ್ವ, ಅನನ್ಯ ಪ್ರಯೋಜನತ್ವಸಿದ್ಧಿಗಾಗಿ, ಸ್ವಾಮಿಗೆ ಸಂಬಂಧಿಸಿರುವ, ಗುಣ, ವಿಗ್ರಹವ್ಯಾಪಾರ ಗಳೂ ಕೂಡ ಉಪಾಯದೆಶೆಯಲ್ಲೂ ಉಪೇಯ ದೆಶೆಯಲ್ಲೂ, ಉಪಲಕ್ಷಣಗಳೆಂದೇ ಹೇಳಬೇಕಾಯಿತು ಎಂಬ ತಾತ್ಪರ್ಯವು. ಹಾಗಲ್ಲದಿದ್ದರೆ ಆಗಲೂ ಅನನ್ಯೋ ಪಾಯತ್ವ, ಅನನ್ಯ ಪ್ರಯೋಜನತ್ವಗಳಿಗೆ ಹಾನಿಯುಂಟಾಗುತ್ತದೆಂಬ ಭಾವವು. ಉಪಯುಕ್ತವಾದ ಗುಣಗಳು—(೧) **ಉಪಾಯತ್ವಕ್ಕೆ**-ಜ್ಞಾನ, ಶಕ್ತ್ಯಾದಿಗಳು, ಸ್ವಾತಂತ್ರ್ಯ, ಕಾರುಣ್ಯಾದಿಗಳು, (೨) **ಉಪೇಯತ್ವಕ್ಕೆ**-ಆನಂದ ಸೌಂದರ್ಯಾದಿ ಗಳು. ಉಪಯುಕ್ತವಾದ ವಿಗ್ರಹ ವಿಶೇಷವು—(೧) **ಉಪಾಯತ್ವಕ್ಕೆ**-ಸೌಂದ ರ್ಯಾದಿಗಳಿಂದ ಕೂಡಿರುವ ಅರ್ಚಾ ವಿಗ್ರಹವಿಶೇಷವು (೨) **ಉಪೇಯತ್ವಕ್ಕೆ**-ಶಂಖ ಚಕ್ರಾದಿ ದಿವ್ಯಾಯುಧ ದಿವ್ಯಾಭರಣಗಳಿಂದ ಯುಕ್ತವಾದ ಪರವಾಸುದೇವ ಮೂರ್ತಿಯು, ಉಪಯುಕ್ತವಾದ ವ್ಯಾಪಾರಗಳು—(೧) **ಉಪಾಯತ್ವಕ್ಕೆ** - ಸಂಸಾರದಿಂದ ಬಿಡಿಸುವ ಸಂಕಲ್ಪಾದಿಗಳು. (೨) **ಉಪೇಯತ್ವಕ್ಕೆ**-ಮುಕ್ತಿ ಹೊಂದಿದ ನಂತರ ಅನುಸಂಚರಣಾದಿಗಳಿಗೆ ಕಾರಣಭೂತಗಳಾದ ಸಙ್ಕಲ್ಪವಿಶೇಷ ಗಳು. ಹೀಗೆ ಇವುಗಳೆಲ್ಲಾ ಉಪಲಕ್ಷಣವೆಂದು ಹೇಳುವದು ಸಿದ್ಧಾಂತಕ್ಕೇ

ಷಣಙ್ಗಳೆನ್ನಿಲ್. ಇದುವುಮ್ ಪೂರ್ವೋತ್ತರ ಖಂಡಙ್ಗಳಿಲ್ ಪತ್ನೀ ಸಂಬಂಧತ್ತಿಲುಮ್ ತುಲ್ಯಮ್.

ವಿರೋಧವಾಗುವದರಿಂದಲೂ, ಅವುಗಳು ಪ್ರಾಪ್ಯತ್ವಕ್ಕೂ ಉಪಾಯತ್ವಕ್ಕೂ ಉಪಯುಕ್ತಗಳಾಗುವದರಿಂದಲೂ, ವಿಶೇಷಣಗಳೆಂದೇ ಹೇಳಬೇಕಾಗುತ್ತದೆಂದು ಭಾವಿಸಿ ಪೂರ್ವಪಕ್ಷಿಯು ಈ ಗುಣವಿಗ್ರಹ ವ್ಯಾಪಾರಗಳು ಉಪಯುಕ್ತಗಳಾದುದರಿಂದ ಸರ್ವೇಶ್ವರನಿಗೆ ವಿಶೇಷಣಗಳೇ ವಿನಾ ಉಪಲಕ್ಷಣಗಳಾಗುವದಿಲ್ಲವೆಂದು ಹೇಳುತ್ತಾರೆ - ಹಾಗಾದರೆ ಲಕ್ಷ್ಮೀ ಸಂಬಂಧವೂ ಕೂಡ ಉಪಯುಕ್ತವೆಂಬುದಕ್ಕೆ ಪ್ರಮಾಣ ಸಂಪ್ರದಾಯಗಳಿರುವದರಿಂದ, ಇದೂ ಕೂಡ ವಿಶೇಷಣವೇ ಎಂದು ಸ್ಥಾಪಿಸುತ್ತಾರೆ—

ಉಪಯುಕ್ತಙ್ಗಳಾಗೈಯಾಲೆ - ಉಪಯೋಗವಾದವುಗಳಾದುದರಿಂದ, **ಅವೈ** - ಆ ಗುಣವಿಗ್ರಹವ್ಯಾಪಾರಗಳು, **ವಿಶೇಷಣಙ್ಗಳೆನ್ನಿಲ್** - ವಿಶೇಷಣಗಳು ಎಂದು ಹೇಳಿದರೆ, **ಪತ್ನೀಸಂಬಂಧತ್ತಿಲ್** - ಪತ್ನಿಯಾದ ಲಕ್ಷ್ಮಿಯ ಸಂಬಂಧದಲ್ಲೂ ಸಹ, **ತುಲ್ಯಮ್** - ಸಮಾನವು. ಪತ್ನೀ ಸಂಬಂಧವೂ ಪ್ರಾಪ್ಯ ಪ್ರಾಪಕಾವಸ್ಥೆಯಲ್ಲೂ ಉಪಯುಕ್ತವಾದುದೇ, ಇದಕ್ಕೆ ಪ್ರಮಾಣಗಳೂ ಉಂಟು, ಸಂಪ್ರದಾಯದಲ್ಲೂ ಕಂಡಿರುವೆವು. ಪ್ರಮಾಣಗಳು ಯಾವುವು ಎಂಬುದನ್ನು ಉದಾಹರಿಸುತ್ತಾರೆ ಯಜ್ಞ ಯಾಗಾದಿಗಳಲ್ಲಿ ಪತ್ನೀ ಸಂಬಂಧವು ಆವಶ್ಯಕವಾಗಿ ಬೇಕು ಎಂಬುದು ವ್ಯಕ್ತವು, ಅಪತ್ನೀಕನಿಗೆ ಅವುಗಳಲ್ಲಿ ಅಧಿಕಾರವಿಲ್ಲವು. ಪ್ರಣತರಕ್ಷಣೆ, ಶರಣಾಗತ ಪರಿಪಾಲನೆ, ಮೋಕ್ಷಯಿಷ್ಯಾಮಿ ಎಂಬ ವ್ರತರೂಪ ಸಙ್ಕಲ್ಪವು ಒಂದು ಯಾಗ ರೂಪವ್ರತವು. ಇದಕ್ಕೂ ಪತ್ನೀ ಸಂಬಂಧವೂ ಆವಶ್ಯಕವು. ಪುರುಷನಿಗೆ ದಾನದಲ್ಲಿ ಅಧಿಕಾರವಿಲ್ಲವು. ತನ್ನ ಪತ್ನಿಯ ಮೂಲಕವಾಗಿಯೇ ದಾನಮಾಡತಕ್ಕದ್ದು. ಆದುದರಿಂದ ಸರ್ವೇಶ್ವರನಿಗೆ ಮೋಕ್ಷಪ್ರದತ್ವ ರೂಪದಾನವು ತನ್ನ ಪತ್ನಿಯ ಮೂಲಕವಾಗಿಯೇ ಎಂದು ಭಾವಿಸತಕ್ಕದ್ದು. ಪತ್ನೀ ಎಂಬ ಶಬ್ದವು ಯಜ್ಞಸಂಯೋಗವನ್ನು ಸೂಚಿಸುತ್ತದೆ. ಆದುದರಿಂದ ವಿಷ್ಣು ಪತ್ನಿಯು ವಿಷ್ಣುವಿಗೆ ಅನುರೂಪಳಾಗಿ ವಿಷ್ಣುವಿನ ಸಂಕಲ್ಪರೂಪ ಮಹಾಯಜ್ಞಗಳಲ್ಲೆಲ್ಲಾ "**ಪತ್ಯುರ್ನೋ ಯಜ್ಞಸಂಯೋಗೇ**" ಎಂಬ ವಚನಾನುಸಾರ ಉಪಯುಕ್ತಳಾಗಿದ್ದಾಳೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. ಪತಿಯು ದಾನಮಾಡಬೇಕಾದರೆ, ಪತ್ನಿಯು ಅನುಮೋದಿಸಿ, ಆಕೆಯ ಹಸ್ತ ಮೂಲಕವಾಗಿಯೇ ದಾನಕ್ರಿಯೆಯು ನಡೆಯತಕ್ಕದ್ದು. ಹಾಗೆಯೇ ಮೋಕ್ಷ

ಪ್ರಾಪ್ಯ ಪ್ರಾಪಕಾವಸ್ಥಯೋಃ ಶ್ರೀ ಸಹಾಯ ಇತ್ಯತ್ರ ಪ್ರಮಾಣಾನಿಚ

ಉಪಯೋಗ ವಿಶೇಷಙ್ಗಳ್ ತತ್ತದ್ವಸ್ತುಗಳುಕ್ಕು ಅನುರೂಪಮಾನ ಪಡಿಯಿಲೇ ಪ್ರಮಾಣ ಸಂಪ್ರದಾಯಙ್ಗಳಾಲೇ ಕಂಡುಕೊಳ್ವದು. ವಸ್ತ್ವನುರೂಪಮಾಯಿರೇ ಉಪಯೋಗ ಮಿರುಪ್ಪದು.

ಪ್ರದತ್ವವೂ ಕೂಡ ಲಕ್ಷ್ಮಿಯ ಮೂಲಕನೇ ನಡೆಯುತಕ್ಕದ್ದೆಂಬ ಭಾವವು. ಇದನ್ನೇ ಮಹರ್ಷಿಯು "ಸಹಧರ್ಮ ಚರೀತವ" ಎಂಬುದರಿಂದ ಉಪದೇಶಿಸಿದರು. (ರಾ. ಬಾ.)

ಪ್ರಾಪ್ಯಪ್ರಾಪಕವೆರಡವಸ್ಥೆಯಲ್ಲಿಯೂ ಲಕ್ಷ್ಮಿಯ ಉಪಯೋಗಗಳೂ, ಪ್ರಮಾಣಗಳು.

ಪ್ರಾಪ್ಯ ದೆಶೆಯಲ್ಲಿಯೂ ಪ್ರಾಪಕದೆಶೆಯಲ್ಲಿಯೂ, ಲಕ್ಷ್ಮಿಯ ಸಂಬಂಧದ ಉಪಯೋಗವೇನು ಎಂದರೆ, ಲೋಕರೂಢಿಯಲ್ಲಿ ಸಾಮಾನ್ಯವಾಗಿ ಪತ್ನೀ ಸಂಬಂಧವು ಹೇಗೆ ಉಪಯುಕ್ತವೆಂಬುದನ್ನು ತಿಳಿಸಿ, ಲಕ್ಷ್ಮಿಯ ಉಪಯೋಗ ಹೇಗೆ ಎಂಬುದಕ್ಕೆ ಅನೇಕ ಪ್ರಮಾಣಗಳನ್ನು ಉದಾಹರಿಸುತ್ತಾರೆ. ಉಪಾಯ ದೆಶೆಯಲ್ಲಿ ಲಕ್ಷ್ಮಿಯ ಸಂಬಂಧದ ಉಪಯೋಗದಲ್ಲಿ ಸಂದೇಹಪಡುವವರಿಗೆ ಅವರಿಗೆ ಯಾವ ಪ್ರಮಾಣದಲ್ಲಿ ಅತಿಶಯವಾದ ಆದರವೋ ಅಂತಹ ಪ್ರಮಾಣಗಳನ್ನು ಪ್ರಥಮತಃ ಉದಾಹರಿಸುವುದು ಯುಕ್ತವೆಂದರಿತು ಉಪಾಯೋಪೇಯವಾದ ಎರಡು ದೆಶೆಯಲ್ಲಿಯೂ ಉಪಯುಕ್ತವೆಂದು ನಮ್ಮಾಳ್ವಾರ್ರವರ ಪಾಶುರಗಳಿಂದ ತೋರಿಸುತ್ತಾರೆ

ಉಪಯೋಗ ವಿಶೇಷಙ್ಗಳ್ - ಉಪಯೋಗ ವಿಶೇಷಗಳು (ಈ ಸಂದರ್ಭದಲ್ಲಿ ಲಕ್ಷ್ಮಿಯಿಂದ ಪ್ರಯೋಜನಗಳು ಯಾವುವೆಂದರೆ, ಪುರುಷಕಾರತ್ವವೂ ಉಪಾಯತ್ವವೂ ರಕ್ಷಾಭರಸ್ವೀಕಾರತ್ವವೇ ಮೊದಲಾದವು) **ತತ್ತದ್ವಸ್ತುಗಳುಕ್ಕು** - ಆಯಾ ವಸ್ತುಗಳಿಗೆ, **ಅನುರೂಪಮಾನಪಡಿಯಿಲೇ** - ಸ್ವರೂಪಕ್ಕೆ ಯೋಗ್ಯವಾದ ರೀತಿಯಲ್ಲಿ, **ಪ್ರಮಾಣ ಸಂಪ್ರದಾಯಙ್ಗಳಾಲೇ** - ಪ್ರಮಾಣಗಳಿಂದಲೂ ಸಂಪ್ರದಾಯಗಳಿಂದಲೂ, **ಕಣ್ಡುಕೊಳ್ವದ**-ತಿಳಿದುಕೊಳ್ಳಬಹುದು. ಇದು ಸಾಧಾರಣವಾಗಿ ಎಲ್ಲಾ ವಸ್ತುಗಳ ಉಪಯೋಗವಾಗಿಯೂ ಕುರಿತು ಹೇಳಿದುದು. "**ಈಶ್ವರೀಂಗ್ ಸರ್ವಭೂತಾನಾಂ**" ಎಂಬ ಶ್ರುತ್ಯರ್ಥವನ್ನು ಮಹ

ಜ್ಞಾನನಿಧಿಗಳಾದ ಶ್ರೀ ಯಾಮುನೇಯರವರು "**ಲೋಕೈಕೇಶ್ವರಿ ಲೋಕನಾಥದಯಿತೇ**" ಎಂದು ವಿವರಿಸಿರುವದರಿಂದ, ಇಂತಹ ಲಕ್ಷ್ಮಿಯ ಸ್ವರೂಪ ಸ್ವಭಾವಗಳಿಗೆ ಅನುಗುಣವಾಗಿ ಲಕ್ಷ್ಮಿಯ ಉಪಯೋಗವನ್ನು ಹೇಳತಕ್ಕದ್ದು. ಲಕ್ಷ್ಮಿಯ ಸ್ವರೂಪಾದಿಗಳಿಗೆ ಅನುರೂಪವಾದ ಉಪಯೋಗಗಳೇನೆಂಬುದಕ್ಕೆ "**ಲೋಕೈಕೇಶ್ವರಿ ಲೋಕನಾಥ ದಯಿತೇ**" ಎಂಬ ಪ್ರಯೋಗದಲ್ಲಿ ತೋರಿ ಬರುವ ಸ್ವಾರಸ್ಯಾರ್ಥಗಳಿಗೆ ದಾಸನು ಬರೆದ ಚತುಶ್ಲೋಕಿಯ ವ್ಯಾಖ್ಯಾನದ ೩೭ ರಿಂದ ೪೯ನೆಯ ಪುಟಗಳನ್ನು ಪರಾಂಬರಿಸಿ. ಆದುದರಿಂದ, **ವಸ್ತುವನುರೂಪಮಾಯಿರೆ** - ವಸ್ತುವಿನ ಸ್ವರೂಪ ಸ್ವಭಾವಗಳಿಗೆ ಅನುಗುಣವಾಗಿ ತಾನೇ, ಉಪಯೋಗಮಿರುಪ್ಪದು - ಅದರ ಉಪಯೋಗವಿರುತ್ತದೆ. ಸರ್ವ ಲೋಕಕ್ಕೂ ನಾಥನಾದವನಿಗೆ ಪತ್ನಿಯಾಗಿ, ಸರ್ವಲೋಕದ ಚೇತನರಿಗೂ ನಿಯಾಮಕಳಾಗಿರುವದರಿಂದ ಲೋಕೈಕೇಶ್ವರಿಯಾದವಳ ಸ್ವರೂಪಸ್ವಭಾವಕ್ಕನುಗುಣವಾಗಿಯಲ್ಲವೇ ಉಪಯೋಗವಿರತಕ್ಕದ್ದೆಂಬಭಾವವು. ಲಕ್ಷ್ಮಿಯ ಉಪಯೋಗವು ಪುರುಷಕಾರತ್ವದಲ್ಲಿ ಉಂಟು ಎಂಬುದಕ್ಕೆ ಕೆಲವು ಪ್ರಮಾಣವಿದ್ದರೂ, ಪುರುಷಕಾರತ್ವದಲ್ಲಿ ಮಾತ್ರವೇ ಉಪಾಯತ್ವದಲ್ಲಿ ಇಲ್ಲವೆಂಬುದಕ್ಕೆ ಪ್ರಮಾಣವಿಲ್ಲವಾದುದರಿಂದಲೂ, ಉಪಾಯತ್ವ ಭರಸ್ವೀಕಾರತ್ವದಲ್ಲಿ ಅನ್ವಯವುಂಟೆಂಬುದಕ್ಕೆ ಪ್ರಮಾಣಗಳಿರುವದರಿಂದಲೂ, ಹಾಗೆಯೇ ಪೂರ್ವಾಚಾರ್ಯರುಗಳ ಸಂಪ್ರದಾಯವೂ ಇರುವದರಿಂದಲೂ, ಲಕ್ಷ್ಮಿಗೆ ಅನುರೂಪವಾದ ಉಪಯೋಗವನ್ನು ಗ್ರಹಿಸತಕ್ಕದ್ದೆಂಬ ಭಾವವು. ಇಲ್ಲಿ ಮುಖ್ಯವಾಗಿ ಗ್ರಹಿಸತಕ್ಕ ವಿಷಯವೇನೆಂದರೆ:—ಸರ್ವೇಶ್ವರನ ಸ್ವಾತಂತ್ರ್ಯ, ಕೃಪಾ ಮೊದಲಾದ ಕಲ್ಯಾಣಗುಣಗಳು ವಿಶೇಷಣಗಳಾಗಿ ಸರ್ವೇಶ್ವರನ ಉಪಾಯತ್ವಕ್ಕೆ ಉಪಯುಕ್ತಗಳಾಗಿ ವಿಶೇಷಣಗಳಾದರೆ, ಚೇತನಳಾಗಿ ಕಲ್ಯಾಣಗುಣಾಕರಳಾಗಿ ಅಜ್ಞಾತನಿಗ್ರಹಳಾಗಿ, ಅನುಗ್ರಹಮಯಳಾಗಿ, ನಿತ್ಯಾನಪಾಯಿನಿಯಾಗಿ, ಲೋಕೈಕೇಶ್ವರಿಯಾಗಿ, ಲೋಕನಾಥದಯಿತೆಯಾಗಿರುವ ಮಹಾಲಕ್ಷ್ಮಿಯು ಭರಸ್ವೀಕಾರದಲ್ಲಿ ಉಪಯುಕ್ತಳಲ್ಲವೆಂಬ ವಾದವು ಹೇಗೆ ಸಮಂಜಸವೋ ತಿಳಿಯದು ಆದುದರಿಂದ ಲಕ್ಷ್ಮಿಗೆ ಅನುರೂಪವಾಗಿ ಉಪಯೋಗವನ್ನು ಪ್ರಮಾಣಾನುಸಾರವಾಗಿ ಹೇಳತಕ್ಕದ್ದೇ ವಿನಾ ವಾದವು ಉಪಯೋಗವಿಲ್ಲವೆಂಬ ಭಾವವು.

"**ಉಪಯೋಗವಿಶೇಷಙ್ಗಳ್**" ಎಂಬದಾಗಿ ಸಾಧಾರಣವಾದ ಸಙ್ಗ್ರಹವಾದ ಉಕ್ತಿಯು ಗ್ರಂಥವಿಸ್ತರಭಯದಿಂದ ಎಂಬದಾಗಿ ತಿಳಿಯತಕ್ಕದ್ದು. ಗುಣವಿಗ್ರಹ ವ್ಯಾಪಾರಗಳು ಹೇಗೆ ಉಪಯುಕ್ತಗಳೆಂಬುವನ್ನು ಆ ಕಾರಣದಿಂದಲೇ ವಿಸ್ತರಿಸಲಿಲ್ಲವು. ಕೆಲವು ಗುಣಗಳನ್ನು ಕುರಿತು ಚರ್ಚಿಸಿ ಅವು ಹೇಗೆ ಉಪ

ಯುಕ್ತಗಳೆಂಬುದನ್ನು ತಿಳಿಯಬಹುದು. ಗುಣಗಳಲ್ಲಿ ಪ್ರಧಾನಗಳಾದವು ಷಾಡ್ಗುಣ್ಯಗಳೂ, ಸರ್ವಜ್ಞತ್ವ ಸರ್ವಶಕ್ತಿತ್ವ ಸತ್ಯಸಙ್ಕಲ್ಪತ್ವ, ಪರಮಕಾರುಣಿಕತ್ವ, ವಾತ್ಸಲ್ಯ, ಸೌಶೀಲ್ಯಾದಿಗಳು. ಈ ಸರ್ವೇಶ್ವರನ ಗುಣಗಳ ಉಪಯೋಗವೇನೆಂದರೆ— ಆತನು ಆಶ್ರಯಿಸಲು ಯೋಗ್ಯನೆಂಬುದನ್ನು ಪ್ರದರ್ಶಿಸುತ್ತವೆ. ಜ್ಞಾನದಿಂದ ಆಶ್ರಿತನನ್ನು ವರಿಸಿ ಆತನ ವಿರೋಧಿಯ ನಿರಸನವನ್ನು ಮಾಡಬಹುದು. ಶಕ್ತಿಯಿಂದ ಭಕ್ತವಿರೋಧಿಗಳನ್ನು ನಿರಸನ ಮಾಡಬಹುದು. ಬಲ ವೀರ್ಯ ತೇಜಸ್ಸುಗಳಿಂದ ಶ್ರಮಾದ್ಯವದ್ಯಗಳಿಲ್ಲದೇ ಇರೋಣವು ಸತ್ಯಸಂಕಲ್ಪನಾದುದರಿಂದ ಆಶ್ರಿತನಿಗೆ ಸರ್ವಶ್ರೇಯಸ್ಸನ್ನೂ ಅಪ್ರತಿಹತನಾಗಿ ನಡೆಸಿಕೊಡೋಣವು, ಮತ್ತು ಆಶ್ರಿತನು ಆಶ್ರಯಣಾನಂತರ ಅಪರಾಧಮಾಡಿದರೂ ಅಲ್ಪದಂಡನಾದಿಗಳ ಮೂಲಕ ನಡೆಸಿಕೊಡೋಣವು. ಪರಮಕಾರುಣಿಕತ್ವವಿರುವದರಿಂದ ಅಲ್ಪವಾದ ವ್ಯಾಜರೂಪವಾದ ಭರನ್ಯಾಸದ ಮೂಲಕ ಪರಮನಿಶ್ರೇಯಸ್ಸಿನ ದಾನವು. ವಾತ್ಸಲ್ಯವಿರುವದರಿಂದ ಆಶ್ರಿತನಲ್ಲಿ ಅನೇಕ ದೋಷಗಳಿದ್ದರೂ **"ದೋಷೋ ಯದ್ಯಪಿ ತಸ್ಯ ಸ್ಯಾತ್ ಸತಾಮೇತದಗರ್ಹಿತಂ"** (ರಾ.ಯು.) ಎಂದು ಹೇಳಿ ಅವುಗಳನ್ನು ಪರಿಗಣಿಸದಿರೋಣವು. ಸ್ವಾಮಿತ್ವವಿರುವದರಿಂದ **"ರಕ್ಷತೇ ಭಗವಾನ್ ವಿಷ್ಣುರ್ಭಕ್ತಾನಾತ್ಮಶರೀರವತ್"** ತನ್ನ ಶರೀರವನ್ನು ಒಬ್ಬನು ತನ್ನದಾದುದರಿಂದ ಹೇಗೆ ಕಾಪಾಡಿಕೊಳ್ಳುವನೋ, ಹಾಗೆ ತನ್ನ ಶರೀರವಾದ ಭಕ್ತರನ್ನು ಕಾಪಾಡುವನು. ಸೌಶೀಲ್ಯವಿರುವದರಿಂದ, **"ಗುಹೇನ ಸಹಿತೋರಾಮಃ"** (ರಾ.ಅಯೋ.) ಎಂದೂ **"ಅಹಂ ವೋ ಬಾಂಧವೋಜಾತಃ"** ಎಂದೂ ಹೇಳಿರುವಹಾಗೆ ಪರತ್ವವನ್ನು ಹೊಂದಿರುವವನು ಆಶ್ರಿತರಾದ ನಮಗೆ ವಶ್ಯನೇ ಎಂಬ ಸಂಶಯಕ್ಕೆ ಅವಕಾಶವಿಲ್ಲದಿರೋಣವು.

ಹೀಗೆ ಸರ್ವೇಶ್ವರನ ಗುಣಗಳು ಉಪಯುಕ್ತವಾದವು. ಹೀಗೆ ಭಗವಂತನು ಇಂತಹ ಗುಣಗಳಿಂದ ಯುಕ್ತನಾಗಿ ಉಪಾಯವಾಗಿರುವಾಗ, ಲಕ್ಷ್ಮಿಯು ಉಪಾಯತ್ವದಿಂದೇನೆಂಬ ಶಂಕೆಯುಂಟಾಗಬಹುದು. ಈ ಗುಣಗಳೆಲ್ಲಾ ಲಕ್ಷ್ಮಿಗೂ ಉಂಟು, ಅಂತಹ ಲಕ್ಷ್ಮಿಯು ಉಪಾಯವಾಗಲೇನೂ ಪ್ರತಿಬಂಧಕವಿಲ್ಲವು. ಆದರೆ ಭಗವಂತನೇ ಉಪಾಯವಾದರೆ, ಗುಣಗಳಿಂದೇನು ? ಗುಣಗಳೇ ಉಪಾಯವಾದರೆ ಭಗವಂತನಿಂದೇನು ? ಎಂಬಾಕ್ಷೇಪಣೆಗೆ ಗುಣಗಳು ಉಪಯುಕ್ತಗಳಾಗಿರುವದರಿಂದ ವಿಶೇಷಣಗಳಾಗಿ, ಅಂತಹ ಗುಣಗಳಿಂದ ಯುಕ್ತನಾದ ಸರ್ವೇಶ್ವರನೇ ಉಪಾಯವೆಂದು ಪ್ರಮಾಣಗಳಿರುವದರಿಂದ ಆಕ್ಷೇಪಣೆಗೆ ಕಾರಣ

ಇವ್ವಿಶೇಷಣತ್ತಿನುಡೈಯ ಉಪಯೋಗ ಪ್ರಕಾರತ್ತೈ "ನೇರಿ ಮಾರಾದ ಪೂಮೇಲಿರುಪ್ಪಾಳ್ ವಿನೈ ತೀರ್ಕ್ಕುಮೇ" ಎನ್ರು ನ್,

ವಿಲ್ಲವೆಂದರೆ, ಹಾಗೆಯೇ ಲಕ್ಷ್ಮಿಯೂ ಉಪಯುಕ್ತಳಾದುದರಿಂದ ವಿಶೇಷಣವಾಗಿಯೇ ಉಪಾಯಭೂತಳೆಂದೂ ಅನೇಕ ಪ್ರಮಾಣಗಳಿರುವದರಿಂದ ಯಾವದೊಂದು ಆಕ್ಷೇಪಣೆಗೂ ಕಾರಣವಿಲ್ಲವೆಂಬ ಭಾವವು.

ಹಾಗೆ ಹೇಳುವ ಪ್ರಮಾಣಗಳು **ಯಾವುವು** ಎಂದರೆ, **ಶ್ರುತಿ,** ಸ್ಮೃತಿ, ಇತಿಹಾಸ ವಾಕ್ಯಗಳುಂಟೆಂದೂ ಸಂಪ್ರದಾಯಕ್ಕೆ ನಮ್ಮಾಳ್ವಾರರೇ ಮೊದಲಾದವರ ಪಾಶುರಗಳುಂಟೆಂದೂ ತಿಳಿಸುತ್ತಾರೆ:—

ಉಪಾಯೋಪೇಯ ಪರಮಾನ - ಉಪಾಯವನ್ನು ಪ್ರತಿಪಾದಿಸುವ ದ್ವಯಮಂತ್ರದ ಪೂರ್ವಖಂಡವು, ಉಪೇಯವನ್ನು ಪ್ರತಿಪಾದಿಸುವ ಉತ್ತರಖಂಡವು ಇವುಗಳೆಂದ, **ವಾಕ್ಯದ್ವಯತ್ತಿಲುಮ್** - ಎರಡು ವಾಕ್ಯದಲ್ಲೂ, **ಶ್ರುತಮಾನ**-ಹೇಳಲ್ಪಟ್ಟಿರುವ, **ಇವ್ವಿಶೇಷತ್ತಿನುಡೈಯ** - "**ಶ್ರೀಮತ್**" ಎಂದು ಲಕ್ಷ್ಮಿಯನ್ನು ಬೋಧಿಸುವ ವಿಶೇಷಣದ, ಎಂಬಭಿಪ್ರಾಯವು, ಎರಡು ಕಡೆಯಲ್ಲೂ ಇರುವ ಶ್ರೀಮಚ್ಛಬ್ದವು ವಿಶೇಷಣವೆಂದು ಸ್ಥಾಪಿಸಿರುವದರಿಂದ ಇಲ್ಲಿ "ಇವ್ವಿಶೇಷಣ" ವೆಂದು ಹೇಳಲ್ಪಟ್ಟಿತು, **ಉಪಯೋಗಪ್ರಕಾರತ್ತೈ** - ಉಪಯೋಗ ವಿಶೇಷವನ್ನು, ನಮ್ಮಾಳ್ವಾರವರು ಕೃಪಯಾ ಉಪದೇಶಿಸಿದರು ಎಂದು ತಿಳಿಸುತ್ತಾರೆ. ಉಪಾಯತ್ವವನ್ನು ಬೋಧಿಸುವದಕ್ಕೆ ಒಂದು ಪಾಶುರವನ್ನೂ ಉಪೇಯತ್ವವನ್ನು ಬೋಧಿಸುವದಕ್ಕೆ ಒಂದು ಪಾಶುರವನ್ನೂ ಅನುಗ್ರಹಿಸಿರುತ್ತಾರೆ ಅವು ಯಾವುವೆಂದರೆ:—

(೧) "**ಮಾರಿಮಾರಾದ ತಣ್ಣಮ್ಮಲೈ ವೇಙ್ಗಡತಣ್ಣಲೈ ।**
ವಾರಿಮಾರಾದ ಪೈಮ್ಪೂವಿಪ್ಪೊಳಿಲ್ ಶೂಳ್ ಕುರುಕೂರ್ ನಗರ್ ।
ಕಾರಿಮಾರ್ರ ಶಡಗೋಪರ್ ಶೊಲ್ಲಾಯಿರತ್ತಿಪ್ಪತ್ತಾಲ್ ।
ನೇರಿಮಾರಾದ ಪೂಮೇಲಿರುಪ್ಪಾಳ್ ವಿನೈತೀರ್ಕ್ಕುಮೇ ॥

ಅರ್ಥ - **ಮಾರಿ** - ಮಳೆಯು, **ಮಾರಾದ** - ತಪ್ಪದೆ ಬರುವದರಿಂದ, **ತಣ್** - ತಂಪಾಗಿಯೂ, **ಅಮ್** - ದರ್ಶನೀಯವಾಗಿಯೂ, **ಇರುವ, ವೇಙ್ಗಡನ್ ಮಲೈ** - ತಿರುವೇಙ್ಗಡವೆಂಬ ಹೆಸರುಳ್ಳ ಬೆಟ್ಟದಲ್ಲಿ ಬೀಡಮಾಡಿಕೊಂಡಿರುವ, **ಅಣ್ಣಲೈ** - ನಿರುಪಾಧಿಕ ಸ್ವಾಮಿಯಾದ ಶ್ರೀನಿವಾಸನನ್ನು, ಕುರಿತು ಇದು ಶೊನ್ನ

(೧) ತಿರುವಾಯ್ಮೊಳಿ ೪. ೫. ೧೧.

ಎಂಬುದಕ್ಕೆ ಕರ್ಮವು, **ವಾರಿ ಮಾರಾದ** - ಜಲಸಮೃದ್ಧಿಯು ತಪ್ಪದೆ ಇರುವ **ಪೈ** - ಸುಂದರಗಳಾದ, **ಪೂ** - ಪುಷ್ಪಸಮೃದ್ಧಿಯುಳ್ಳ, **ಪೊಳಿಲ್** - ತೋಟಗಳಿಂದ, **ಶೂಳ್** - ವ್ಯಾಪ್ತವಾದ, **ಕುರುಗೂರ್‌ನಗರಿ** ಆಳ್ವಾರ್ ತಿರುನಗರಿಯು, **ಕಾರಿಮಾರ್ರ್** - ಕಾರಿಯೆಂದು ಪ್ರಸಿದ್ಧರಾದವರ ಪುತ್ರರಾದ, **ಶಡಗೋಪರ್** - ನಮ್ಮಾಳ್ವಾರ್ರವರು, **ಶೊನ್ನ** - ಅನುಗ್ರಹಿಸಿದ, **ಆಯಿರತ್ತು** - ಸಾವಿರ ಪಾಶುರಗಳಲ್ಲಿನ, **ಇಪ್ಪತ್ತಾಲೆ** - ಈ ೧೦ ಪಾಶುರಗಳಿಂದ, **ವೇರಿ** - ಪರಿಮಳವು, ಆದುದರಿಂದ ಮಧುಪ್ರವಾಹವು, **ಮಾರಾದ** - ಕಮ್ಮಿಯಾಗದಿರುವ, **ಪೂಮೇಲಿರುಪ್ಪಾಳ್** - ಕಮಲಪುಷ್ಪದಲ್ಲಿ ನಿತ್ಯವಾಸವನ್ನು ಮಾಡುವ, ಅನುಗ್ರಹಮಯಳಾದ ಶ್ರೀ ಮಹಾಲಕ್ಷ್ಮಿಯು, **ವಿನೈತೀರ್ಕ್ಕುಮೇ** - ಭಗವದನುಭವ ವಿರೋಧಿಯಾದ ಸಮಸ್ತ ಪಾಪಗಳನ್ನೂ ಹೋಗಲಾಡಿಸುವಳು, ನಿಶ್ಚಯವು. ಹೀಗೆ ಆಶ್ರಿತನ ಅನಿಷ್ಟನಿವೃತ್ತಿಮೂಲಕ ಇಷ್ಟಪ್ರಾಪ್ತಿಯನ್ನು ಹೊಂದಿಸುವಳೆಂದು ಹೇಳಿರುವದರಿಂದ, ಉಪಾಯತ್ವವೂ ಉಂಟೆಂಬುದು ಸಿದ್ಧವು. ಪುರುಷಕಾರರೂಪದಿಂದ ಮಾತ್ರವು ಎಂದು ನಮ್ಮಾಳ್ವಾರವರು ಹೇಳಲಿಲ್ಲವು. “**ಅಸ್ಯಾ ಮಮ ಚ ಶೇಷಂ ಹಿ ವಿಭೂತಿರುಭಯಾತ್ಮಿಕಾ । ಇತಿ ಶ್ರುತಿ ಶಿರಸ್ಸಿದ್ಧಂ ಮಚ್ಛಾಸ್ತ್ರೇಷ್ವಪಿಮಾನದ**” ಎಂದು ಹೇಳಿರುವ ಹಾಗೆ ಎಲ್ಲಾ ವಿಭೂತಿಯು ಭಗವಂತನಿಗೂ ಲಕ್ಷ್ಮಿಗೂ ಸಹ ಶೇಷಭೂತವೆಂಬುದು ಭಗವಚ್ಛಾಸ್ತ್ರ, ಉಪನಿಷತ್ತುಗಳಲ್ಲೂ ಸಿದ್ಧವಾಗಿರುವದರಿಂದ, ಇಬ್ಬರೂ ಸಿದ್ಧೋಪಾಯರೆಂದು ತಿಳಿಯುವದೇ ಶಾಸ್ತ್ರಜ್ಞಾನಕ್ಕೆ ಅನುಸಾರವಾದುದೇ. **ಉಭಯಾಧಿಷ್ಠಾನಂಚೈಕಂ ಶೇಷಿತ್ವಂ** ಎಂದು ಶ್ರೀ ಸೋಮೇಶಯಾಂಡಾರವರೂ ಹೇಳಿರುವದರಿಂದ ತಮಗೆ ಶೇಷಭೂತರಾದ ಚೇತನರ ಉಪಾಯತ್ವದಲ್ಲಿ ಇಬ್ಬರಿಗೂ ಅಧಿಕಾರ ಉಂಟೆಂಬುದೇ ಸ್ವಾರಸ್ಯವಾದ ಅಭಿಪ್ರಾಯವು. “**ಜಾಯಾಪತ್ಯೋರ್ನವಿಭಾಗೋ ವಿದ್ಯತೇ**” ಎಂಬ ಧರ್ಮಾನುಸಾರವಾಗಿ ಈ ಲೋಕದಲ್ಲೇ ಪತಿ ಪತ್ನಿಯರಿಗೆ ಅವರವರುಗಳಿಗೆ ಉಚಿತವಾದ ವಿಭೂತಿಗಳೂ ವ್ಯಾಪಾರಗಳೂ ಇದ್ದರೂ, ಇಬ್ಬರಿಗೂ ಯಾವುದೊಂದು ವಿಭಾಗವಿಲ್ಲದಿರುವಾಗ, ಇಬ್ಬರೂ ಸರ್ವಜ್ಞರಾಗಿ, (೨) “**ಅಸ್ಯಾದೇವ್ಯಾ ಮನಸ್ತಸ್ಮಿನ್ ತಸ್ಯಚಾಸ್ಯಾಂ ಪ್ರತಿಷ್ಠಿತಂ**” ಎಂದೂ (೩) “**ರಾಮಸ್ಯ ವ್ಯವಸಾಯಜ್ಞಾ**” ಎಂದೂ ಮಹರ್ಷಿಯು ಉಪಪಾದಿಸಿರುವಹಾಗೆ ಪರಸ್ಪರ ಇಂಗಿತವನ್ನರಿತವರಾಗಿರುವಾಗ ಇಬ್ಬರಿಗೂ ಚೇತನೋದ್ಧಾರ ವಿಷಯದಲ್ಲಿ ಅಧಿಕಾರ ಉಂಟೆಂದು ಭಾವಿಸುವದರಲ್ಲಿ ಯಾವದೊಂದು ವಿರೋಧವೂ ಇಲ್ಲವು, ಶಾಸ್ತ್ರಪ್ರಮಾಣ ಬಲ

---

(೨) ರಾಮಾ. ಸುಂ. ೧೫. ೫೨. (೩) ರಾಮಾ. ಸುಂ. ೧೬. ೪.

ಹಾಗೆಂಬುದಕ್ಕೆ ಅನೇಕ ಪ್ರಮಾಣಗಳನ್ನು ಉದಾಹರಿಸುತ್ತಾರೆ. ಆದರೆ ಕೆಲವು ದೋಷಗಳನ್ನು ಪೂರ್ವಪಕ್ಷರೀತಿಯಲ್ಲಿ ಪರಿಹಾರ. ಹೇಗೆಂದರೆ—

(೧) ಈಶ್ವರದ್ವಿತ್ವದಿಂದ ಪರಸ್ಪರ ವೈಮನಸ್ಯದಿಂದ ವ್ಯಾಘಾತ ಉಂಟಾಗಬಹುದು ಎಂಬುದು ಒಂದು ಪೂರ್ವಪಕ್ಷವು. ಪರಸ್ಪರ ಇಂಗಿತಗಳನ್ನರಿತವರಾಗಿ ಸರ್ವಜ್ಞರಾಗಿ, ಶುದ್ಧ ಸತ್ವಗುಣಗಳುಳ್ಳವರಾದುದರಿಂದ ಪರಸ್ಪರ ವೈಮನಸ್ಯಕ್ಕೆ ಕಾರಣವೇ ಇಲ್ಲವು. ಶ್ರೀರಾಮನಿಗೆ ಸೈನ್ಯವನ್ನು ಲಂಕೆಗೆ ತೆಗೆದುಕೊಂಡು ಹೋಗಿ ದುಷ್ಟ ರಾಕ್ಷಸರನ್ನೆಲ್ಲಾ ಕೊಲ್ಲಬೇಕೆಂಬ ಇಷ್ಟವಿರುವಾಗ, ತಾನು ಎಂದಿಗೂ ರಾವಣನನ್ನು ತನ್ನ ಪಾತಿವ್ರತ್ಯ ತಪೋಬಲದಿಂದ ಭಸ್ಮಮಾಡುವದಿಲ್ಲವೆಂದು "ಅಸಂದೇಶಾತ್ತು ರಾಮಸ್ಯ ತಪಸಶ್ಚಾನುಪಾಲನಾತ್ । ನತ್ವಾಂ ಕುರ್ಮಿ ದಶಗ್ರೀವ ಭಸ್ಮ ಭಸ್ಮಾರ್ಹ ತೇಜಸಾ" ಎಂಬುದರಿಂದ ತಿಳಿಸಿ, ತನ್ನ ಪತಿಯ ಸಂಕಲ್ಪದ ಪ್ರಕಾರ "ಶರೈಸ್ತು ಸಂಕುಲಾಂ ಕೃತ್ವಾ ಲಂಕಾಂ ಪರಬಲಾರ್ದನಃ । ಮಾಂ ನಯೇದ್ಯದಿ ಕಾಕುತ್ಸ್ಥಸ್ತತ್ತಸ್ಯ ಸದೃಶಂ ಭವೇತ್" ಲಂಕೆಗೆ ಸೈನ್ಯ ಸಮೇತ ಬಂದು ಮುತ್ತಿಗೆ ಹಾಕಿ ಬಾಣಪ್ರಯೋಗದಿಂದ ಶತ್ರು ಬಲವನ್ನೆಲ್ಲಾ ನಿರ್ಮೂಲವಮಾಡಿ ತನ್ನನ್ನು ಕರೆದುಕೊಂಡುಹೋದರೆ, ಆಗೀಗ ಆ ಧೀರೋದಾತ್ತನಾದ ರಾಮನ ಪೌರುಷಕ್ಕೆ ಸಮಾನವಾದುದಾಗುತ್ತದೆಂದು ಆಂಜನೇಯನಲ್ಲಿ ಹೇಳಿ ಕಳುಹಿಸಿದಳು. ಆದುದರಿಂದ ಪರಸ್ಪರ ವೈಮನಸ್ಯಕ್ಕೇ ಕಾರಣವೇ ಇಲ್ಲವು.

(೨) ಏಕಾಂತ್ಯಕ್ಕೆ ಹಾನಿ ಎಂಬುದು ಎರಡನೆಯ ದೂಷಣವು. ಲಕ್ಷ್ಮೀನಾರಾಯಣರು ಇಬ್ಬರಾದುದರಿಂದ ಧ್ಯಾನಿಸುವ ಯೋಗಿಯ ಏಕಾಂತ್ಯಕ್ಕೆ ಭಂಗ ಬರಬಹುದು. ಇದರ ಸಮಾಧಾನವು ಧ್ಯಾನದಲ್ಲಿ ಏಕಾಂತ್ಯಕ್ಕೇನೂ ಲಕ್ಷ್ಮಿಯ ಸಂಬಂಧದ ಭಂಗವಿಲ್ಲವು. ನಾರಾಯಣನೇ ವಿಶೇಷ್ಯನಾಗಿ ಲಕ್ಷ್ಮಿಯು ಆತನಿಗೆ ವಿಶೇಷಣವಾದ ಪ್ರಯುಕ್ತ, ವಿಶೇಷಣದಿಂದ ಕೂಡಿದ ವಿಶೇಷ್ಯವನ್ನು ಧ್ಯಾನಿಸುವದರಿಂದ ಏಕಾಂತ್ಯಕ್ಕೇನೂ ತೊಂದರೆ ಇಲ್ಲವು. ಹೀಗೆ ವಿಶೇಷಣವೂ ಬಾಧಕವೆಂದರೆ, ಕಲ್ಯಾಣಗುಣಗಳಾದ ವಿಶೇಷಣಗಳೂ ಬಾಧಕವೆಂದು ಭಾವಿಸಬೇಕಾಗುತ್ತದೆ. ಆಗ ಅದ್ವೈತಿಗಳಹಾಗೆ ಪರಬ್ರಹ್ಮವು ನಿರ್ವಿಶೇಷವಾಗಿಯೂ ಇರತಕ್ಕದ್ದೆಂದು ಒಪ್ಪಬೇಕಾಗುತ್ತದೆ.

(೩) ಹೀಗೆ ಲಕ್ಷ್ಮಿಗೂ ಉಪಾಯತ್ವ ಮೊದಲಾದ ಸಂಬಂಧಿತ್ವವುಂಟೆಂದು ಒಪ್ಪಿದರೆ, ಸತ್ಯಮಾಪೃಥಕಶ್ರುತಿಗೆ ವಿರೋಧವಾಗಿ ಇಬ್ಬರೂ ಸಮರು ಎಂದು ಒಪ್ಪಬೇಕಾಗುತ್ತದೆ. ಲಕ್ಷ್ಮಿಯು ನಾರಾಯಣನಿಗೆ ಶೇಷಭೂತಳಾಗಿದ್ದುಕೊಂಡು ಆತನಿಗೆ ಸಹಧರ್ಮಚಾರಿಣಿಯಾಗಿ, ಆತನೊಂದಿಗೇನೆ ಸಕಲ ವ್ಯಾಪಾರಗಳಲ್ಲೂ ಸಹಾಯಕಳಾಗಿಯೂ ಅನುಮೋದಿಸಿಯೂ, ಲೀಲಾರಸವನ್ನು ಪತಿಯೊಂದಿಗೆ ಅನುಭವಿ

(೨) "ನಿನ್ತಿರುವರುಳುಮ್ ಪಙ್ಗಯತ್ತಾಳ್ ತಿರುವರುಳುಮ್ ಕೊಣ್ಡು, ನಿನ್ ಕೋಯಿಲ್ ಶೀಯ್ತ್ತು" ಎನ್ರುಮ್ ನಮ್ಮಾೞ್ವಾರ್ ಅರುಳಿ

ಸವಳಿಂದು ಅಙ್ಗೀಕರಿಸುವದರಿಂದ ಈ ಶ್ರುತಿಗೇನೂ ವಿರೋಧವಿಲ್ಲವು. ಇತ್ಯಾದಿ.

"ಪಣ್ಡೈನಾಳಾಲೇ ನಿನ್ತಿರುವರುಳುಮ್ ಪಙ್ಗಯತ್ತಾಳ್ ತಿರುವರುಳು |
ಙ್ಗೊಣ್ಡು, ನಿನ್ಕೋಯಿಲ್ ಶೀಯ್ತ್ತುಪ್ಪಲ್ ಪಡಿಕಾಲ್ ಕುಡಿಕುಡಿವ
ೞಿವನ್ದಾಟ್ಚೆಯ್ಯುಮ್ |
ತೊಣ್ಡರೋರ್ಕ್ಕರುಳಿಚ್ಚೋತಿವಾಯ್ ತಿರನ್ದುನ್ತಾಮರೈಕ್ಕಣ್ಗಳಾನೋ
ಕ್ಕಾಯ್ |
ತೆಣ್ತಿರೈಪ್ಪೊರುನಲ್ತಣ್ಪಣೈ ಶೂೞ್ನ್ದ ತಿರುಪ್ಪುಳಿಙ್ಗುಡಿಕ್ಕಿಡನ್ದಾನೇ ||"

ಎಂಬುದು ದ್ರಾವಿಡ ಪಾಶುರವು. ಇದರರ್ಥವು:—"ತೆಣ್ತಿರೈ - ನಿರ್ಮಲವಾದ ಅಲೆಗಳುಳ್ಳ, **ಪೊರುನಲ್** - ತಾಮ್ರಪರ್ಣೀ ನದಿಯು, **ತಣ್ಪಣೈ** - ತಂಪಾದ ಜಲಾಶಯಗಳಿಂದ, **ಶೂೞ್ನ್ದ** - ವ್ಯಾಪ್ತವಾಗಿರುವ, ತೀರವನ್ನು ಹೊಂದಿರುವ, ತುಂಬಿರುವ, **ತಿರುಪ್ಪುಳಿಙ್ಗುಡಿ ಕಿಡನ್ದಾನೇ** - ತಿರುಪ್ಪುಳಿಙ್ಗುಡಿಯಲ್ಲಿ ಬಿಜಮಾಡಿಸಿರುವ ಸ್ವಾಮಿಯೇ, **ನಿನ್ ತಿರುವರುಳುಮ್** - ನಿನ್ನ ಕೃಪಾಕಟಾಕ್ಷವನ್ನೂ, ಅದಕ್ಕೆ ಕಾರಣವಾದ, **ಪಙ್ಗಯತ್ತಾಳ್ ತಿರುವರುಳುಮ್** - ನಿನ್ನ ಪ್ರಿಯವಲ್ಲಭಳಾದ ಕಮಲವಾಸಿನಿಯಾದ ಲಕ್ಷ್ಮಿಯ ಕೃಪಾ ಪ್ರಭಾವವನ್ನೂ, **ಪಣ್ಡೈನಾಳಾಲೆ ಕೊಂಡು** - ಬಹು ಕಾಲದಿಂದ ಹೊಂದಿ, **ನಿನ್ನ ಕೋಯಿಲ್ ಶೀಯ್ತ್ತು** - ನಿನಗಭಿಮತವಾದ ದಿವ್ಯದೇಶದಲ್ಲಿ ಸಮ್ಮಾರ್ಜನೆಯನ್ನು (ಸಾರಿಸುವದು) ಇದು ಸ್ವರೂಪೋಚಿತವಾದ ಸರ್ವ ಕೈಂಕರ್ಯಗಳಿಗೂ ಉಪಲಕ್ಷಣವು. **ಪಲ್ಪಡಿಕಾಲ್** - ಬಹು ಜನ್ಮದಿಂದಲೂ, **ಕುಡಿಕುಡಿ ವೞಿವನ್ದು** - ಕುಲಕ್ರಮವಾಗಿ ಬಂದು ಶಾಸ್ತ್ರನಿಯಮಾನುಸಾರವಾಗಿ, **ಆಳ್ ಶೆಯ್ಯುಮ್** - ದಾಸ್ಯವನ್ನು ಮಾಡುವ, **ತೊಣ್ಡರೋರ್ಕ್ಕು ಅರುಳಿ** - ಆಶ್ರಿತರಾದ ನಿನ್ನ ಭಕ್ತರಾದ ನಮಗೆ ಕೃಪೆಗೈದು, **ಶೋತಿವಾಯ್ ತಿರನ್ದು** - ನಿನ್ನ ಪ್ರಕಾಶಕರವಾದ ಬಾಯನ್ನು ತೆರೆದು ಎಂದರೆ ನಮ್ಮನ್ನು ಬಂದೆಯಾ ಎಂದು ಕೃಪೆಮಾಡಿ ಬರಮಾಡಿಕೊಂಡು, **ಉನ್ ತಾಮರೈ ಕಣ್ಗಳಾಲ್** - ನಿನಗೇನೇ ಅಸಾಧಾರಣವಾದ ಪುಂಡರೀಕ ಸದೃಶವಾದ ಕಣ್ಣುಗಳಿಂದ, **ನೋಕ್ಕಾಯ್** - ವಿಭೀಷಣಾದಿಗಳನ್ನು ಕಟಾಕ್ಷಿಸಿದ ಹಾಗೆ ಕಟಾಕ್ಷಿಸಯ್ಯಾ." ಇಲ್ಲಿ ನಾವು ಮಾಡುವ ಕೈಂಕರ್ಯಗಳು ಲಕ್ಷ್ಮೀ

(೨) ತಿರುವಾಯ್ಮೊೞಿ ೯.೨.೧.

ಚ್ಚೆಯ್‌ದಾರ್. (೩) "ಅಲಮೇಷಾ ಪರಿತ್ರಾತುಂ ರಾಕ್ಷಸ್ಯೋ ಮಹತೋ ಭಯಾತ್" ಎನ್ರುಮ್, (೪) ಅಲಮೇಷಾ ಪರಿತ್ರಾತುಂ ರಾಘವಾದ್ರಾಕ್ಷ

ನಾರಾಯಣರಿಬ್ಬರಿಗೂ ಎಂದು ಹೇಳುವದರಿಂದ ಪ್ರಾಪ್ಯದೆಶೆಯಲ್ಲಿ ಕೈಂಕರ್ಯವು ಇಬ್ಬರಿಗೂ ಎಂಬ ಭಾವವು. ಹೀಗೆ ನಮ್ಮಾಳ್ವಾರ್‌ರವರು ಉಪಾಯ ದೆಶೆಯಲ್ಲೂ ಉಪೇಯ ದೆಶೆಯಲ್ಲೂ ಲಕ್ಷ್ಮೀಯುಕ್ತನಾಗಿಯೇ ಇರುವನೆಂದುಪಪಾದಿಸಿರುವುದರಿಂದ ಎರಡು ಕಡೆಯಲ್ಲೂ ದ್ವಯದಲ್ಲಿ ಶ್ರೀಮಚ್ಛಬ್ದವು ವಿಶೇಷಣವೇ ಎಂಬ ಭಾವವು." ಎನ್ರು ನಮ್ಮಾಳ್ವಾರ್ ಅರುಳಿಚ್ಚೆಯ್‌ದಾರ್ - ಎಂದು ನಮ್ಮಾಳ್ವಾರ್‌ರವರು ಅನುಗ್ರಹಿಸಿರುತ್ತಾರೆ.

ಮುಂದೆ ಲಕ್ಷ್ಮಿಯೂ ಉಪಾಯಭೂತಳೆಂಬುದಕ್ಕೆ ಮಹರ್ಷಿಗಳ ಶ್ರೀಸೂಕ್ತಿಗಳನ್ನು ಉದಾಹರಿಸುತ್ತಾರೆ:— **ಏಷಾ** - ಈ ಜಗನ್ಮಾತೆಯೇ, **ರಾಕ್ಷಸ್ಯಃ** - ಅವಳ ಸುತ್ತಲೂ ಇರುವ ರಾಕ್ಷಸ ಸ್ತ್ರೀಯರನ್ನು, **ಮಹತಃ ಭಯಾತ್**-ಅಂತಹ ಲೋಕಮಾತೆಗೆ ಮಾಡಿದ ಮಹಾಪರಾಧಕ್ಕಾಗಿ ಉಂಟಾಗುವ ಶಿಕ್ಷೆಯ ಭಯದಿಂದ, **ಪರಿತ್ರಾತುಂ** - ಅದರ ಶಙ್ಕಾ ಈಷದಪಿ ಇಲ್ಲದಹಾಗೆ ಸಂರಕ್ಷಿಸಲು, **ಅಲಂ** - ಸಮರ್ಥಳು. ಅಥವಾ **ಮಹತೋ ಭಯಾತ್** - ಸಂಸಾರರೂಪವಾದ ಮಹತ್ತಾದ ಭಯದಿಂದ ಕಾಪಾಡಲು ಸಮರ್ಥಳು. ಹೀಗಿರುವಾಗ ನಮ್ಮನ್ನು ಪ್ರಾಣಭಯದಿಂದ ಕಾಪಾಡುವುದರಲ್ಲಿ ಸಂದೇಹವೇನಿದೆ ಎಂಬ ಭಾವವು. ಇದರ ಪೂರ್ವಾರ್ಧವು:— "**ಪ್ರಣಿಪಾತ ಪ್ರಸನ್ನಾಹಿ ಮೈಥಿಲೀ ಜನಕಾತ್ಮಜಾ**" ಎಂಬುದು. ಇವಳೂ ಶರಣಾಗತ ರಕ್ಷಕಳು ಎಂಬ ಭಾವವು. **ಅಲಮೇಷಾ ಪರಿತ್ರಾತುಂ** ಎಂದಿರುವುದರಿಂದ ಉಪಾಯಭೂತವಾಗಿ ಸಂರಕ್ಷಣೆಗೆ ಶ್ರೀರಾಮನೇ ಆಗಬೇಕೆಂಬುದೇನೂ ಇಲ್ಲವು, ಈಕೆಗೂ ಕೂಡ ರಕ್ಷಣ ಶಕ್ತಿಯುಂಟು ಎಂಬ ಭಾವವು ತೋರಿಬರುತ್ತದೆ." ಪುರುಷಕಾರರೂಪದಲ್ಲಿ ಸಮರ್ಥಳು ಎಂದು ಅರ್ಥ ಮಾಡಬಹುದಲ್ಲಾ ಎಂದರೆ, ಹಾಗೆ ಮಹರ್ಷಿಯು ಕಂಠೋಕ್ತವಾಗಿ ಎಲ್ಲೂ ಹೇಳದಿರುವದರಿಂದಲೂ, ಇಲ್ಲಿ ಅಲಂ ಪರಿತ್ರಾತುಂ ಎಂಬ ಪ್ರಯೋಗಗಳಿರುವದರಿಂದಲೂ, ಮಹರ್ಷಿಯು ಅಭಿಪ್ರಾಯವು ಉಪಾಯ ಪರೋಕ್ಷವಾಗಿಯೇ ಎಂದು ತೋರಿಬರುತ್ತದೆ. ಪ್ರತಿಕೂಲಾವಸ್ಥೆಯಲ್ಲಿರುವ ತ್ರಿಜಟೆಗೇನೇ ಲಕ್ಷ್ಮಿಯನ್ನಾಶ್ರಯಿಸಿದರೆ ಉಪಾಯಭೂತಳಾಗಿ ತನಗೂ ತನಗೆ ಸೇರಿದವರಿಗೂ ರಕ್ಷಕಳಾಗುವಳೆಂಬ ಪೂರ್ಣ ನಂಬಿಕೆ ಇರುವಾಗ ಅನುಕೂಲಾವಸ್ಥೆಯಲ್ಲಿರುವವರು ಸಂದೇಹ

---

(೩) ರಾಮಾ. ಸುಂ. ೨೭ ೪೪. (೪) ರಾಮಾ. ಸುಂ. ೫೮ ೯೧.

ಸೀಗಣಮ್ ಎನ್ರುಮ್, ಶ್ರೀ ವಾಲ್ಮೀಕಿ ಭಗವಾನ್ ಶರಣಾಗತಿ ಸಾರಮಾನ ಆದಿಕಾವ್ಯತ್ತಿಲೇ ನಿಬಂಧಿತ್ತಾನ್.

ಪಡಲು ಈಷದಪಿ ಕಾರಣವಿರುವದಿಲ್ಲವು. ಎನ್ರುಮ್ - ಎಂದೂ, ವಿಷಾ - ಈ ಸೀತೆಯು, ರಾಘವಾತ್ - ಸೀತೆಗೆ ಭರ್ತ್ಸನ ತರ್ಜನಾದಿಗಳನ್ನು ಮಾಡಿದ ದೋಷಗಳಿಗಾಗಿ ಕೋಪವೇನಾದರೂ ಬಂದಿರುವ ಶ್ರೀರಾಮನ ಕಡೆಯಿಂದ, ಹಿಂದೆ ಮಹತೋಭಯಾತ್ ಎಂದು ಹೇಳಿರುವದನ್ನೇ ಆಂಜನೇಯನ ದಿವ್ಯ ಸೂಕ್ತಿ ಮೂಲಕ ಶ್ರೀರಾಮನಿಂದ ಪ್ರಾಪ್ತವಾಗಬಹುದಾದ ಭಯವೆಂದು ವಿವರಿಸಿ ವ್ಯಾಖ್ಯಾನಮಾಡಿರುವದರಿಂದ, ಇದೇ ಮಹತ್ತಾದ ಭಯವೆಂಬ ಭಾವವು, ಎಲ್ಲರಿಗೂ ದೊಡ್ಡವನು ಶ್ರೀರಾಮನು. ಅವನ ಕಡೆಯಿಂದ ಭಯವು ಮಹತ್ತಾದ ಭಯವೆಂದಾಗಲಿ ಆಗಬಹುದು. ರಾಕ್ಷಸೀಗಣಂ - ಈ ರಾಕ್ಷಸಿಯರ ಸಮೂಹವನ್ನು, ಪರಿತ್ರಾತುಂ - ಸಂರಕ್ಷಿಸಲು, ಅಲಂ - ಸಮರ್ಥಳು ಅಥವಾ ಸಾಕು. ಮುಂದಕ್ಕೆ "ಅಭಿಯಾಚಾಮ ವೈದೇಹೀಂ ಏತದ್ಧಿ ಮಮ ರೋಚತೇ" ಎಂಬುದರ ಉಕ್ತಾರ್ಥವು:—ವೈದೇಹಿಯನ್ನು ಪ್ರಾರ್ಥಿಸೋಣ. ಇದೀಗ ಒಳ್ಳೇ ಉಪಾಯವೆಂಬುದು ನನ್ನ ಅಭಿಪ್ರಾಯವೆಂದು ತ್ರಿಜಟೆಯು ತನ್ನ ಸಖಿಯರಾದ ರಾಕ್ಷಸಸ್ತ್ರೀಯರಿಗೆ ಹೇಳುತ್ತಾಳೆ. ಹೀಗೆ ಹೇಳಿ ಪ್ರಾರ್ಥಿಸಿದ ತ್ರಿಜಟೆಗೆ ಸೀತೆಯು

> "ತತಸ್ಸಾಹ್ರೀಮತೀ ಬಾಲಾ ಭರ್ತುರ್ವಿಜಯಹರ್ಷಿತಾ ।
> ಅವೋಚದ್ಯದಿ ತತ್ತಥ್ಯಂ ಭವೇಯಂ ಶರಣಂ ಹಿ ವಃ"

"ಅನಂತರದಲ್ಲಿ ಲಜ್ಜೆಯುಳ್ಳವಳಾಗಿ ಬಾಲೆಯಾದ ಸೀತೆಯು ತನ್ನ ಪತಿಯಾದ ಶ್ರೀರಾಮನಿಗೆ ಜಯಸೂಚಕವಾದ ಸ್ವಪ್ನವೃತ್ತಾಂತದಿಂದ ಹರ್ಷಿತಳಾಗಿ, ನೀವು ಹೇಳುವ ಮಾತು ಸತ್ಯವಾದುದಾದರೆ ನಿಮಗೆ ರಕ್ಷಕಳಾಗುವೆನು" ಎಂದು ಹೇಳಿದ ಸೀತಾ ವಾಕ್ಯವನ್ನು ಆಂಜನೇಯನು ಶ್ರೀರಾಮನಿಗೆ ಹರ್ಷವನ್ನುಂಟುಮಾಡುವದಕ್ಕಾಗಿ ಹೇಳಿದನಂತರ ಸೀತೆಯು ಉಪಾಯಭೂತಳಾಗಿರುವದು ಶ್ರೀರಾಮನಿಗೂ ತುಂಬಾ ಇಷ್ಟವಾದುದೆಂಬಭಿಪ್ರಾಯವೂ ಸೂಚಿತವು. ಆದುದರಿಂದ ಶ್ರೀ ದೇಶಿಕರು ಈ ಮೇಲಿನ ರಾಮಾಯಣ ವಾಕ್ಯವನ್ನು ಉದಾಹರಿಸಿದ್ದಾರೆ. ಎನ್ರುಮ್ - ಎಂಬವಾಗಿಯೂ, ಪೂಜ್ಯರಾದ ಶ್ರೀ ವಾಲ್ಮೀಕಿ ಮಹರ್ಷಿಗಳು, ಶರಣಾಗತಿ ಸಾರಮಾನ - ಶರಣಾಗತಿಯೇ ಸಾರ ವಿಷಯವಾಗಿ ಪ್ರತಿಪಾದಿಸಲ್ಪಟ್ಟಿರುವ; ಈ ಗ್ರಂಥದಲ್ಲಿ ಮೊದಲಿಂದ ಹಿಡಿದು ಕೊನೆಯವರೆಗೂ ಶರಣಾಗತಿಯು ನಾನಾ

ವಿಧ ಪುರುಷಾರ್ಥಗಳಿಗಾಗಿ ಮಾಡಿರುವುದೇ ಉಪಪಾದಿತವಾಗಿರುತ್ತದೆ. ಇವುಗಳಲ್ಲೆಲ್ಲಾ ಅಙ್ಗಗಳಲ್ಲಿ ವ್ಯತ್ಯಾಸ ಉಂಟು, ಇಂತಹ ಶರಣಾಗತಿಗಳೆಲ್ಲಾ ಉಪದೇಶಿಸಲ್ಪಡುವುದರಿಂದ ಶರಣಾಗತಿ ಸಾಧನಾನ ಎಂಬ ಪ್ರಯೋಗವು, ಹೀಗೆ ಶರಣಾಗತಿಯೇ ಸಾರವಾದ ವಿಷಯವಾಗಿರುವ, ಆದಿಕಾವ್ಯತ್ತಿಲೆ ನಿಬಂಧಿತ್ತಾರ್- ಆದಿಕಾವ್ಯವಾದ ಶ್ರೀಮದ್ರಾಮಾಯಣದಲ್ಲಿ, ಶಾಸ್ತ್ರವಿಧಿರೂಪದಲ್ಲಿ ಉಪದೇಶಿಸಿರುತ್ತಾರೆ. ಆದರೆ ಈ ಶ್ರೀಮದ್ರಾಮಾಯಣ ವಾಕ್ಯವನ್ನು ನಂಬಬಹುದೋ ? ಆದಿಕಾವ್ಯವೆಂದು ಕಾವ್ಯಗಳಲ್ಲಿ ಸೇರಿರುವುದರಿಂದ ಅತಿಶಯೋಕ್ತಿ, ಉತ್ಪ್ರೇಕ್ಷಾದಿಗಳ ಮೂಲಕ ಹೇಳಿದ ಮಾತೋ ಎಂದರೆ "ನತೇ ವಾಗನೃತಾ ಕಾವ್ಯೇ ಕಾಚಿದತ್ರ ಭವಿಷ್ಯತಿ । ಕುರು ರಾಮ ಕಥಾಂ ಪುಣ್ಯಾಂ ಶ್ಲೋಕಬದ್ಧಾಂ ಮನೋರಮಾಂ ॥" (ರಾ. ಬಾ. ೨-೩೫) ಶ್ರೀ ವಾಲ್ಮೀಕಿ ಮಹರ್ಷಿಯು, ಕ್ರೌಂಚ ಪಕ್ಷಿಯ ವಧ ಮೂಲಕ ಉಂಟಾದ "ಮಾನಿಷಾದ" ವೆಂಬ ಅಶ್ಲೀಲ ವಾಕ್ಯದಿಂದ ದುಃಖಾಕ್ರಾಂತರಾಗಿರುವಾಗ, ಚತುರ್ಮುಖಬ್ರಹ್ಮನು ಬಂದು ಅದೇ ಅದ್ಭುತವಾದ ಮಹಾಶ್ಲೋಕವೆಂದು ತೋರ್ಪಡಿಸಿ, ಅವರ ಶೋಕವನ್ನು ಹೋಗಲಾಡಿಸಿ, ಓ ವಾಲ್ಮೀಕಿಯೇ ನಿನ್ನ ಕಾವ್ಯದಲ್ಲಿ ಶಾಸ್ತ್ರದುಷ್ಟವಾಗಿ ಸುಳ್ಳಾದ ಮಾತು ಯಾವುದೂ ಇರುವುದಿಲ್ಲವು, ಎಂದರೆ ಯಾವ ವಿಧವಾದ ದೋಷವೂ ಅದರಲ್ಲಿರುವುದಿಲ್ಲವು, ಆದುದರಿಂದ ಸಂತತ್ವ ಯಥಾರ್ಥವನ್ನು ಪ್ರದರ್ಶಿಸುವ ರಾಮಕಥೆಯನ್ನು ಬರೆಯಲು ನೀನು ಯೋಗ್ಯನಾದುದರಿಂದ, ಕುರು ರಾಮಕಥಾಂ - ಶ್ರೀರಾಮ ಕಥೆಯನ್ನು ರಚಿಸು, ಅದು ಎಂಥಾದ್ದು ಆಗುತ್ತದೆಂದರೆ, ಪುಣ್ಯಾಂ - ಪಾವನವಾಗುತ್ತದೆ, ಮತ್ತು ಮನೋರಮಾಂ ಕೃತಿಗೆ ಮನೋಹರವಾಗಿಯೂ ವಿಚಿತ್ರ ಕಥೆಗಳಿಂದ ಮನಸ್ಸಿಗೆ ಆಹ್ಲಾದಕರವಾಗಿ ಪುನಃಪುನಃ ಕೇಳಬೇಕೆಂಬ ಆಸೆಯನ್ನು ಹುಟ್ಟಿಸುವಂಥಾದ್ದಾಗುತ್ತದೆ. ಮತ್ತು ಶ್ಲೋಕಬದ್ಧಾಂ - ನಾಟಕಾದಿಗಳಿಂದ ಉಂಟಾಗುವ ಆನಂದಕ್ಕಿಂತ ಹೆಚ್ಚಿನ ಆನಂದವನ್ನುಂಟುಮಾಡುವ ಹಾಗೆ ನಾನಾ ವಿಧ ವೃತ್ತಗಳಿಂದ ಯುಕ್ತವಾಗಿ ಮನಸ್ಸಿಗೆ ರಂಜಕವಾದುದು ಇಂತಹ ರಾಮಾಯಣವನ್ನು ರಚಿಸು ಎಂದು ಅನುಗ್ರಹಿಸಿ ಹೋಗಿರುವುದರಿಂದ, ಸತ್ಯವಾಗಿ ಶರಣಾಗತಿ ಶಾಸ್ತ್ರವನ್ನು ಪ್ರತಿಪಾದಿಸುವ ಕಾವ್ಯವೇ ಎಂದು ಹೇಳಿದರು. ಇಲ್ಲಿ ನಿಬಂಧಿತ್ತಾರ್ ಎಂದು ಹೇಳಿರುವುದರಿಂದ, ಶ್ರೀ ವಾಲ್ಮೀಕಿ ಭಗವಾನರು ಹೇಳಿರುವ ವಾಕ್ಯವು, ಶ್ರುತಿಯ ವಿಧಿವಾಕ್ಯದಂತಾಗಿ ಉಪದೇಶಿಸುವ ಅಭಿಪ್ರಾಯದಿಂದ ಹೇಳಲಾಗಿರುತ್ತದೆ. ಹೇಗೆಂದರೆ — ಸತು ಮೇಧಾವಿನೌ ದೃಷ್ಟ್ವಾ ವೇದೇಷು ಪರಿನಿಷ್ಠಿತೌ । ವೇದೋಪಬೃಂಹಣಾರ್ಥಾಯ ತಾವಗ್ರಾಹಯತ ಪ್ರಭುಃ । ಕಾವ್ಯಂ ರಾಮಾಯಣಂ ಕೃತ್ಸ್ನಂ ಸೀತಾಯಾಶ್ಚರಿತಂ ಮಹತ್ ॥" ಆದ

(ಅ) "ಸಂಸಾರಾರ್ಣವ ತಾರಿಣೀಂ" ಎನ್ರು ಹಿರಣ್ಯಗರ್ಭಕಾಶ್ಯಪಾದಿಗಳುಮ್ ಶೊನ್ನಾರ್‍ಗಳ್.

ಕುಶರು ನಾಲ್ಕು ವೇದಗಳ ಸಾಂಗಾಧ್ಯಯನದಿಂದುಂಟಾದ ಆಪಾತ ಪ್ರತಿಪನ್ನ ವೇದಾರ್ಥಗಳುಳ್ಳವರಾದುದರಿಂದ ಸತ್ಪಾತ್ರರಾದ ಶಿಷ್ಯರೆಂದು ಭಾವಿಸಿ, ವೇದಾರ್ಥಗಳ ಉಪಬೃಹ್ಮಣರೂಪದಲ್ಲಿ ರಚಿಸಿರುವ ಆದಿಕಾವ್ಯದ ಉಪದೇಶಕ್ಕೆ ಅರ್ಹರೆಂದು ಭಾವಿಸಿ, ಸ್ವಾಮಿಯಾದ ವಾಲ್ಮೀಕಿ ಭಗವಾನರವರು ಅವರನ್ನು ಅಂಗೀಕರಿಸಿ ತಮ್ಮ ಕಾವ್ಯವನ್ನುಪದೇಶಿಸಿದರು, ಅದೆಂಥಾದ್ದೆಂದರೆ, **ರಾಮಾಯಣಂ** - ಮನಸ್ಸು ರಮಿಸುವ ಹಾಗೆ ಮಾಡುವ ಶ್ರೀರಾಮನ ಚರಿತ್ರವು, ಅಥವಾ ಸರ್ವರೂ ಈ ಕಾವ್ಯದ ಅರ್ಥಗ್ರಹಣ ಮಾಡಿ ಆನಂದಿಸುವಂತಹ ಚರಿತ್ರವು, ಮತ್ತು ಸಂಪೂರ್ಣವಾಗಿಯೂ, ಸೀತಾಸ್ವಯಂವರ ಮೊದಲುಗೊಂಡು ರಾವಣಸಂಹಾರ, ಅಯೋಧ್ಯೆಯಲ್ಲಿ ಪಟ್ಟಾಭಿಷೇಕದವರೆಗೂ ತದನಂತರವೂ ಸಹ ಸೀತಾಚರಿತ್ರವೇ ಆದುದರಿಂದ ಮಹತ್ತಾದ ಕಾವ್ಯವೆಂದೆನಿಸಿದುದು, ಇಂತಹ ವೇದೋಪಬೃಹ್ಮಣವಾಗಿ ವೇದಾರ್ಥಗಳನ್ನು ವ್ಯಕ್ತಪಡಿಸುವದರಿಂದ ನಿಬಂಧಿತ್ತಾರೆ ಎಂಬ ಪ್ರಯೋಗವು.

(ಅ) "ಸಂಸಾರಾರ್ಣವ ತಾರಿಣೀಂ" ಸಂಸಾರವೆಂಬ ಸಮುದ್ರವನ್ನು ದಾಟಿಸುವವಳಾದ ಲಕ್ಷ್ಮಿಯನ್ನು ಎನ್ರು ಮಗ್ - ಎಂಬದಾಗಿ ಹಿರಣ್ಯಗರ್ಭಕಾಶ್ಯಪ ಮೊದಲಾದವರೂ ಶೊನ್ನಾರ್‍ಗಳ್ - ಹೇಳಿರುತ್ತಾರೆ, ಪ್ರಯೋಗಿಸಿರುತ್ತಾರೆ, ಹಿರಣ್ಯಗರ್ಭಾದಿ ಸಂಹಿತೆಗಳಲ್ಲಿ ಹೇಳಲ್ಪಟ್ಟಿದೆ ಎಂಬರ್ಥವು. "ಸರ್ವಕಾಮಪ್ರದಾಂ ರಮ್ಯಾಂ ಸಂಸಾರಾರ್ಣವ ತಾರಿಣೀಂ । ಕ್ಷಿಪ್ರಪ್ರಸಾದಿನೀಂ ದೇವೀಂ ಶರಣ್ಯಾಮನುಚಿಂತಯೇತ್" ಎಂಬುದು ಪೂರಾ ಶ್ಲೋಕವು. ಇದರರ್ಥವು ವ್ಯಕ್ತವು. ಸರ್ವಕಾಮಪ್ರದಾಂ ಎಂದೂ ಸಂಸಾರಾರ್ಣವತಾರಿಣೀಂ ಎಂದೂ. ಸಾಕ್ಷಾತ್ತಾಗಿ ಉಪಾಯತ್ವವನ್ನೇ ಹೇಳಿ, ಪುರುಷಕಾರತ್ವ ಮಾತ್ರವೆಂದು ಹೇಳದೇ ಇರುವದರಿಂದ ಉಪಾಯತ್ವದಲ್ಲಿ ಅನ್ವಯವುಂಟೆಂಬುವದು ಸಿದ್ಧವು. ಕಾಶ್ಯಪರು ಏನು ಹೇಳುತ್ತಾರೆಂದರೆ :—"ಬ್ರಹ್ಮಾದ್ಯಾಶ್ಚ ಸುರಾಃ ಸರ್ವೇ ಮುನಯಶ್ಚ ತಪೋಧನಾಃ । ವಿಧಂತೇ ತ್ವತ್ಪದಚ್ಛಾಯಾ ಮಾಶ್ರಿತ್ಯ ಕಮಲೇಶ್ವರಿ ।" ಚತುರ್ಮುಖ ಬ್ರಹ್ಮ ರುದ್ರೇಂದ್ರರೇ ಮೊದಲಾದ ಸಮಸ್ತ ದೇವತೆಗಳೂ ಮುನಿ

(ಅ) ಹಿರಣ್ಯಗರ್ಭ ಸಂಹಿತೆ.

(೧) "ವಾಚಃ ಪರಂ ಪ್ರಾರ್ಥಯಿತಾ ಪ್ರಪದ್ಯೇನ್ನಿಯತಶ್ಶ್ರಿಯಮ್" ಎನ್ನು ಶ್ರೀ ಶೌನಕ ಭಗವಾನ್ ವಿಧಿತ್ಸಾನ್. (೨) ಆತ್ಮವಿದ್ಯಾ ಚದೇವಿತ್ವಂ

ಗಳೂ ತಪೋಧನರೂ ಎಲ್ಲರೂ, ಓ ಲಕ್ಷ್ಮಿಯೇ, ನಿನ್ನ ಪಾದಕಮಲಗಳ ನೆರಳಿನಲ್ಲಿ ಸರ್ವ ಶ್ರೇಯಸ್ಸನ್ನು ಹೊಂದಿರುತ್ತಾರೆಂದು ಹೇಳಲ್ಪಟ್ಟಿರುತ್ತದೆ.

(೧) **ವಾಚಃಪರಂ** - ವಾಚಾಮಗೋಚರ ಮಹಿಮೆಯುಳ್ಳ ನಾರಾಯಣನನ್ನು, **ಪ್ರಾರ್ಥಯಿತಾ** - ಹೊಂದಬೇಕೆಂದು ಅಪೇಕ್ಷಿಸುವ ಪುರುಷನು, **ಶ್ರಿಯಂ** - ಶ್ರೀ ಮಹಾಲಕ್ಷ್ಮಿಯನ್ನು, **ನಿಯತಃ** - ನಿಯಮವಿಶಿಷ್ಟನಾಗಿ, ಅಥವಾ ತಪ್ಪದಿರುವವನಾಗಿ ನಿಯಮೇನ, **ಪ್ರಪದ್ಯೇತ್** - ಶರಣು ಹೊಂದತಕ್ಕದ್ದು. "ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ" ಎಂಬುದು ಹೇಗೆ ವಿಧಿವಾಕ್ಯವೋ, ಹಾಗೆಯೇ ಇಲ್ಲಿಯೂ **ಪ್ರಪದ್ಯೇತ್** ಎಂಬುದು ವಿಧಿವಾಕ್ಯವಾದುದರಿಂದ ಮುಂದೆ, **ಎನ್ನು ಶ್ರೀ ಶೌನಕ ಭಗವಾನ್ ವಿಧಿತ್ಸಾನ್** - ಎಂದು ಪೂಜ್ಯರಾದ ಶ್ರೀ ಶೌನಕ ಮಹರ್ಷಿಯು ತಮ್ಮ ಸಂಹಿತೆಯಲ್ಲಿ ವಿಧಿಸಿರುತ್ತಾರೆಂದು ಹೇಳಿರುತ್ತಾರೆ. ಇಲ್ಲಿ ಕೈವಲ್ಯಾರ್ಥಿಯಾದ ಜಿಜ್ಞಾಸುವು **ವಾಚಃ ಪರಂ ಪ್ರಾರ್ಥಯಿತಾ** ಎಂಬುವರಿಂದ ಹೇಳಲ್ಪಡಲಿಲ್ಲವು, ಸಾಕ್ಷಾತ್ ಮೋಕ್ಷಾರ್ಥಿಯೇ ಹೇಳಲ್ಪಟ್ಟಿರುವವರಿಂದ, ಲಕ್ಷ್ಮಿಗೆ ಉಪಾಸ್ಯತ್ವವೂ ಮೋಕ್ಷಪ್ರದತ್ವವೂ ಉಂಟು.

(೨) ಮುಂದೆ ಲಕ್ಷ್ಮಿಯು ಹೇಗೆ ಸಕಲ ಐಹಿಕಾಮುಷ್ಮಿಕ ಸುಖಗಳಿಗೆ ಕಾರಣಭೂತಳಾಗಿ, ಸಕಲ ವಿದ್ಯಾಮಯಳಾಗಿ, ಉಪಾಸ್ಯಭೂತಳಾಗಿ, ಮೋಕ್ಷಪರ್ಯಂತವಾದ ಸಕಲಾಭೀಷ್ಟಗಳನ್ನು ಕೊಡುವವಳೆಂಬುದಕ್ಕೆ ಮಹಾಪ್ರಮಾಣದಿಂದ ವಿಶೇಷ ಜ್ಞಾನನಿಧಿಗಳಾದ ಶ್ರೀ ಪರಾಶರ ಬ್ರಹ್ಮರ್ಷಿಯು ವಾಕ್ಯವನ್ನು ದಾಹರಿಸುತ್ತಾರೆ:— **"ಯಜ್ಞವಿದ್ಯಾ ಮಹಾವಿದ್ಯಾ ಗುಹ್ಯವಿದ್ಯಾ ಚ ಶೋಭನೇ"** ಎಂಬುದು ಪೂರ್ವಾರ್ಧವು. ಯಜ್ಞವಿದ್ಯಾ ಎಂದರೆ ಧರ್ಮವಿಚಾರಮೀಮಾಂಸಾ ವಿದ್ಯಾಸ್ವರೂಪಳು, ಮಹಾವಿದ್ಯಾ ಎಂಬುದಕ್ಕೆ ಶ್ರೀ ವಿಷ್ಣುಚಿತ್ತೀಯರು ಇಂದ್ರಜಾಲಾದಿ ಕುಹಕವಿದ್ಯೆ ಎಂದು ಅರ್ಥ ಬರೆದಿರುತ್ತಾರೆ, ಶ್ರೀ ಧರ್ಮಯರು ವಿಶ್ವರೂಪಾದ್ಯುಪಾಸನಾ ಎಂದು ಬರೆದಿರುತ್ತಾರೆ. ಯದ್ಯಪಿ ಇಂದ್ರಜಾಲಾದಿ ವಿದ್ಯೆಯೂ ಲಕ್ಷ್ಮಿಯ ವಿಭೂತಿಯಾದರೂ ಸ್ತೋತ್ರ ಮಾಡುವ ಸಂದರ್ಭದಲ್ಲಿ ಕೆಟ್ಟದ್ದನ್ನು ಹೇಳುವುದು ಸರಿಯಲ್ಲವು. ಸರ್ವಗತತ್ವವನ್ನು ಹೇಳುವುದಕ್ಕಾಗಿ ಅಸಹ್ಯಕರವಾದ ಸ್ಥಳವಲ್ಲಿರುವಿಕೆಯನ್ನು ಹೇಳಬಹುದೋ? ಹಾಗೆಯೇ ಇಲ್ಲಿಯೂ ಎಂದು ತಿಳಿಯುವುದು.

---

(೧) ಶ್ರೀ ಶೌನಕ ಸಂಹಿತೆ. (೨) ವಿ.ಪು. ೧.೯.೧೨೦

ವಿಮುಕ್ತಿ ಫಲದಾಯಿನೀ” ಎನ್ನು ಪುಲಸ್ತ್ಯ ವಸಿಷ್ಠವರ ಪ್ರಸಾದ ಲಬ್ಧ ಪರದೇವತಾ ಪಾರಮಾರ್ಥ್ಯ ಜ್ಞಾನಸಮುಚ್ಛ್ರಯ ಶ್ರೀ ಪರಾಶರಬ್ರಹ್ಮರ್ಷಿ

ವಿಶ್ವರೂಪೋಪಾಸನವೂ ಆತ್ಮವಿದ್ಯೆಯಲ್ಲೇ ಬರುವದರಿಂದ ಪೌನರುಕ್ತ್ಯವಾಗುತ್ತದೆ. ಆದುದರಿಂದ ಮಹಾವಿದ್ಯೆಯು ಗೀತೆಯಲ್ಲಿರುವ ಜಿಜ್ಞಾಸುವಿನ ವಿದ್ಯೆಯು, ಆತ್ಮಾವಲೋಕನಕ್ಕೆ ಸಾಧನವಾದ ವಿದ್ಯೆಯು, ಪ್ರಕೃತಿ ವಿಯುಕ್ತ ಆತ್ಮೋಪಾಸನೆಯು. ಹೀಗೆ ಅರ್ಥ ಮಾಡುವದರಿಂದ ಗೀತೆಯಲ್ಲಿ ಹೇಳಿರುವ ನಾಲ್ಕು ವಿಧ ಸುಕೃತಿಗಳ ವಿದ್ಯೆಗೂ ಅಭಿಮಾನ ದೇವತೆಯು ಲಕ್ಷ್ಮಿ ಎಂದಾಗುತ್ತದೆ. ಅರ್ಥಾರ್ಥಿಗೆ ಬೇಕಾದುದು ಯಜ್ಞವಿದ್ಯೆಯು. ಜಿಜ್ಞಾಸುವಿಗೆ ಬೇಕಾದುದು ಮಹಾವಿದ್ಯೆಯು ಆರ್ತನಿಗೆ ಗುಹ್ಯವಿದ್ಯೆಯು ಎಂದರೆ ಅಷ್ಟಾಕ್ಷರ, ಷಡಕ್ಷರ, ದ್ವಾದಶಾಕ್ಷರ ಮಂತ್ರವಿದ್ಯೆಯು, ಮೋಕ್ಷಾರ್ಥಿಗೆ ಆತ್ಮವಿದ್ಯೆಯು ಎಂದರೆ ಪರಮಾತ್ಮನನ್ನು ಸಾಕ್ಷಾತ್ಕರಿಸುವ ಬ್ರಹ್ಮವಿದ್ಯೆಯು, ಇವುಗಳಿಗೆಲ್ಲಾ ಅಭಿಮಾನದೇವತೆಯು, ಇಂತಹ ವಿದ್ಯೆಗಳೆಲ್ಲಾ ಆಕೆಯ ವಿಭೂತಿಯಾದುದರಿಂದ, **ವಿಮುಕ್ತಿ ಫಲದಾಯಿನೀ** - ವಿಶೇಷವಾದ ಮುಕ್ತಿಫಲವನ್ನು ಕೊಡುವವಳು ಮಹಾಲಕ್ಷ್ಮಿಯು ಎಂಬ ಭಾವವು; ಯಾವಾಗ ಮುಕ್ತಿಫಲವನ್ನೇ ಕೊಡಲು ಸಮರ್ಥಳೋ, ಐಶ್ವರ್ಯ ಕೈವಲ್ಯಗಳನ್ನು ಕೊಡುವ ಶಕ್ತಿಯನ್ನು ಹೊಂದಿರುವಳೆಂಬುದು ಕೈಮುತಿಕನ್ಯಾಯ ಸಿದ್ಧವು. ಇದು “ಐಶ್ವರ್ಯಮಕ್ಷರಗತಿಂ ಪರಮಂ ಪದಂ ವಾ” ಎಂಬ ಶ್ರೀ ಗುಣರತ್ನಕೋಶದ ಶ್ಲೋಕದಲ್ಲಿ ಉಪಪಾದಿತವು. ಆದುದರಿಂದ ವಿಮುಕ್ತಿ ಫಲದಾಯಿನೀ ಎಂಬುದು ಇತರ ಐಶ್ವರ್ಯಕೈವಲ್ಯಾದಿ ಪುರುಷಾರ್ಥಗಳಿಗೂ ಉಪಲಕ್ಷಣವು. ಆದರೆ ಕೆಲವರು ಲಕ್ಷ್ಮಿಗೆ ಮೋಕ್ಷಪ್ರದತ್ವವನ್ನಂಗೀಕರಿಸಲಿಷ್ಟವಿಲ್ಲದೆ ಆತ್ಮವಿದ್ಯೆಯ ವೈಲಕ್ಷಣ್ಯವನ್ನು ಹೇಳುವದಕ್ಕಾಗಿ ಅದಕ್ಕೆ ವಿಶೇಷಣವಾಗಿ ವಿಮುಕ್ತಿಫಲದಾಯಿನೀ ಎಂಬುದನ್ನು ಅನ್ವಯಿಸುತ್ತಾರೆ. ಹಾಗೆ ಹೇಳಿದರೂ ಯಾವಾಗ ಲಕ್ಷ್ಮಿಗೆ ಆತ್ಮವಿದ್ಯಾದಿಗಳು ವಿಭೂತಿಗಳಾದವೋ, ಯಾವಾಗ ಆತ್ಮವಿದ್ಯೆಯನ್ನು ಕರುಣಿಸಿದಳೋ, ತತ್ಫಲಕ್ಕೂ ಆಕೆಯೇ ಕಾರಣಭೂತಳಾದಳೆಂದು ಅಂಗೀಕರಿಸಲೇಬೇಕೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ; ಎನ್ನು-ಎಂಬದಾಗಿ, **ಪುಲಸ್ತ್ಯ ವಸಿಷ್ಠವರಪ್ರಸಾದ ಲಬ್ಧ** - ಪುಲಸ್ತ್ಯರು ಚತುರ್ಮುಖ ಬ್ರಹ್ಮನ ಪುತ್ರರು, ವಸಿಷ್ಠರು ಶ್ರೀ ಪರಾಶರರ ಪಿತಾಮಹರು, ಇವರಿಬ್ಬರ, **ಪ್ರಸಾದ ಲಬ್ಧ** - ಕೃಪೆಯಿಂದ ಹೊಂದಿದ, **ಪರದೇವತಾ ಪಾರಮಾರ್ಥ್ಯ ಜ್ಞಾನಸಮುಚ್ಛ್ರಯ** - ಪರತತ್ತ್ವದ ಯಾಥಾತ್ಮ್ಯರೂಪ ಜ್ಞಾನವನ್ನು ಹೊಂದಿದ, **ಶ್ರೀ ಪರಾಶರ ಬ್ರಹ್ಮರ್ಷಿಯು,**

ಅರುಳಿಚ್ಚೆಯ್‌ದಾನ್. "ವಿಮುಕ್ತಿ ಫಲದಾಯಿನೀ" ಎಜ್ಞಾರವಿದು ಆತ್ಮ ವಿದ್ಯಾ ವಿಶೇಷಣ ಮಾನಾಲುಮ್, ತತ್ಸಾಮಾನಾಧಿಕರಣ್ಯತ್ತಾಲ್ ಅದು ಇವಳುಡೈಯ ವಿಭೂತಿಯಾಯಿತ್ತು.

ಶ್ರಿಯಃಪತಿ ತಾನುಮ್, (೮) "ಯಾಮಾಲಂಬ್ಯ ಸುಖೇನೇಮಂ ದುಸ್ತರಂ ತ್ರಿಗುಣೋದಧಿಮ್ । ನಿಸ್ತರಂತ್ಯ ಚಿರೇಣೈವ ವ್ಯಕ್ತಧ್ಯಾನ

ಅರುಳಿಚ್ಚೆಯ್‌ದಾರ್ - ಅನುಗ್ರಹಿಸಿ ಹೇಳಿದರು. ಪುಲಸ್ತ್ಯ ವಸಿಷ್ಠರಿಬ್ಬರೂ ಇವರಿಗೆ ವರವನ್ನು ಅನುಗ್ರಹಿಸಿದ ಪೂರ್ವವೃತ್ತಾಂತಕ್ಕೆ ಹಿಂದೆ ೩೪ನೆಯ ಪುಟವನ್ನು ಪರಾಂಬರಿಸಿ; ವಿಮುಕ್ತಿ ಫಲದಾಯಿನೀ, ಎಜ್ಞಾರವಿದು-ಎಂಬುವ ಈ ಪದವು, ಆತ್ಮವಿದ್ಯೆಯು, ವಿಶೇಷಣ ಮಾನಾಲುಮ್ - ವಿಶೇಷಣವೆಂದು ಅಂಗೀಕರಿಸಿದರೂ, ತತ್ಸಾಮಾನಾಧಿಕರಣ್ಯತ್ತಾಲೇ - ಈ ಎಲ್ಲಾ ವಿದ್ಯೆಗಳೂ ಲಕ್ಷ್ಮಿಗೆ ಸಾಮಾನಾಧಿಕರಣ್ಯಭಾವದಿಂದ ಹೇಳಲ್ಪಟ್ಟಿರುವವರಿಂದ, ಅದು - ಆ ವಿದ್ಯೆಯೂ, ಇವಳುಡೈಯ - ಈ ಲಕ್ಷ್ಮಿಯ, ವಿಭೂತಿಯಾಯಿತ್ತು - ಐಶ್ವರ್ಯವರ್ಗಕ್ಕೆ ಸೇರಿದುದಾಯಿತು. ಈ ವಿದ್ಯೆಗಳೆಲ್ಲಾ ಆಕೆಗೆ ಶೇಷಭೂತವಾಗಿ ಆಕೆಗೆ ಅಧೀನವಾದವು. ಈ ವಿದ್ಯೆಗಳೆಲ್ಲಾ ಉಂಟಾಗಬೇಕಾದರೆ ಲಕ್ಷ್ಮಿಯ ಅನುಗ್ರಹವಿಲ್ಲದೇ ಇಲ್ಲವು. ಯಾವಾಗ ವಿದ್ಯಾನುಗ್ರಹ ಉಂಟಾಯಿತೋ, ತತ್ತತ್ಫಲವೂ ಉಂಟಾಗುತ್ತದೆಂದು ಹೇಳಲು ಅಭ್ಯಂತರವೇನೂ ಇಲ್ಲವು. ಯಾವಾಗ ಕಾರಣವು ಇವಳ ವಶವೋ, ಕಾರ್ಯವೂ ಅವಳ ವಶವೇ ಎಂಬ ತಾತ್ಪರ್ಯವು. ಆದರೆ ವಿಮುಕ್ತಿ ಫಲದಾಯಿನೀ ಎಂಬ ದಾತೃತ್ವವನ್ನು ಚೇತನಳಾದ ಲಕ್ಷ್ಮಿಯಲ್ಲಿ ಅನ್ವಯಿಸುವದು ಸ್ವಾರಸ್ಯವೇ ವಿನಾ, ಆತ್ಮವಿದ್ಯೆಗೆ ಸಂಬಂಧಿಸುವ ಹಾಗೆ ಅರ್ಥ ಹೇಳುವದು ಅಷ್ಟು ಸ್ವಾರಸ್ಯವಲ್ಲವು.

ಮುಂದೆ ಶ್ರಿಯಃಪತಿಯ ವಾಕ್ಯವೇ ಪ್ರಮಾಣವಾಗಿ ಶ್ರೀ ಸಾತ್ವತದಲ್ಲಿ ಲಕ್ಷ್ಮಿಗೆ ಉಪಾಯತ್ವವನ್ನು ಸಮರ್ಥಿಸುತ್ತದೆ ಎಂದು ಹೇಳುತ್ತಾರೆ. ಶ್ರಿಯಃಪತಿ ತಾನುಮ್ - ಶ್ರಿಯಃಪತಿಯೇ ಸಾಕ್ಷಾತ್ತಾಗಿ, "ಯಾಂ - ಯಾವ ಪ್ರಸಿದ್ಧಳಾದ ಲಕ್ಷ್ಮಿಯನ್ನು, ಆಲಂಬ್ಯ - ಅವಲಂಬಿಸಿ, ಎಂದರೆ ಆಕೆಯ ಸನ್ನಿಧಿಯಲ್ಲಿ ಶರಣಾಗತಿಯನ್ನನುಷ್ಠಿಸಿ, ವ್ಯಕ್ತಧ್ಯಾನ ಪರಾಯಣಾಃ - ವ್ಯಕ್ತವಾದ ಸರ್ವೇಶ್ವರನ ದಿವ್ಯಮಂಗಳ ವಿಗ್ರಹದ ಧ್ಯಾನದಲ್ಲಿ ನಿರತರಾದವರು, ಸುಖೇನ - ಬಹಳ ಸುಲಭವಾಗಿ, ಏನೊಂದೂ ಕಷ್ಟವಿಲ್ಲದೆ, ಇಮಂ ದುಸ್ತರಂ - ಈ ದಾಟಲಶಕ್ಯ

---

(೮) ಶ್ರೀ ಸಾತ್ವತ ಸಂಹಿತೆ ೧೨. ೮೪.

ಪರಾಯಣಾಃ" ಎನ್ರು ಶ್ರೀ ಸಾತ್ವತತ್ತಿಲೇ ಶ್ರಿಯಃ (ಶ್ರಿಯ್) ಪತಿರೂಪ ಧ್ಯಾನತ್ತಿಲೇ ಯರುಳಿಚ್ಚೆಯ್‌ದಾನ್. ತತ್ಪರಙ್ಗಳಾನ ಶಾಸ್ತ್ರಙ್ಗಳ್ ನಿರ್ಕ, ಇಮ್ಮಧ್ಯಸ್ಥ ಶಾಸ್ತ್ರಙ್ಗಳತಿಪ್ರಬಲಙ್ಗಳ್.

ವಾದ, **ತ್ರಿಗುಣೋದಧಿಂ** - ಸತ್ವರಜಸ್ತಮೋಗುಣಗಳಿಂದ ಸೇರಿದ ಪ್ರಕೃತಿ ಎಂಬ ಸಮುದ್ರವನ್ನು ಅಂದರೆ ಸಂಸಾರವನ್ನು, **ಅಚಿರೇಣೈವ** - ಇನ್ನೊಂದು ಸಾಧನದಪೇಕ್ಷೆಯಿಲ್ಲದೆ ಕ್ಷಿಪ್ರವಾಗಿಯೇ, **ನಿಸ್ತರಂತಿ** - ದಾಟುತ್ತಾರೆ." ಎಂದರೆ ಲಕ್ಷ್ಮಿಯೊಂದಿಗೆ ತನ್ನನ್ನು ಆಶ್ರಯಿಸಿದರೇನೇ ಸುಲಭವಾಗಿ ದಾಟಬಹುದೇ ವಿನಾ, ಅನ್ಯಥಾ ಇಲ್ಲವೆಂದು ಶ್ರೀ ಸಾತ್ವತ ಸಂಹಿತೆಯಲ್ಲಿ, **ಶ್ರಿಯಃಪತಿರೂಪ ಧ್ಯಾನತ್ತಿಲೇ**-ಲಕ್ಷ್ಮೀನಾರಾಯಣರಿಬ್ಬರೂ ಸೇರಿ ಏಕತತ್ವವಾದುದರಿಂದ ಅಂತಹ ಶ್ರೀಪತಿಯನ್ನು ಧ್ಯಾನಿಸುವ ಪ್ರಕರಣದಲ್ಲಿ, **ಅರುಳಿಚ್ಚೆಯ್‌ದಾನ್** - ಕೃಪಯಾ ಅಪ್ಪಣೆ ಕೊಡಿಸಿದ್ದಾನೆ; ಇದಕ್ಕೆ **ಶ್ರಿಯಃಪತಿ** ತಾನಾನ್ ಎಂಬುದು ಷಷ್ಟ್ಯಪದವು "ಶ್ರೀಪತಿ" ಎಂಬ ಸಮಾಸಯುಕ್ತ ಪಾಠದಲ್ಲಿ ಇಬ್ಬರೂ ಸೇರಿ ಪರತತ್ವವೆಂಬ ಭಾವವು ವ್ಯಕ್ತವು.

ಆದರೆ ಲಕ್ಷ್ಮೀತಂತ್ರಾದಿ ಶಾಸ್ತ್ರಗಳು ಲಕ್ಷ್ಮಿಗೆ ಉಪಾಯತ್ವ ಉಪೇಯತ್ವ ಜಗತ್ಕಾರಣತ್ವಾದಿಗಳನ್ನು ಮತ್ತು ಸರ್ವಾಂತರ್ಯಾಮಿತ್ವ ಇವೇ ಮೊದಲಾದವುಗಳನ್ನು ಉಪಪಾದಿಸುತ್ತಿರುವಾಗ ಅಂತಹ ಪ್ರಮಾಣಗಳನ್ನು ಬಿಟ್ಟು, ಶ್ರೀ ವಾಲ್ಮೀಕಿ ಮಹರ್ಷಿ, ಹಿರಣ್ಯಗರ್ಭ, ಕಾಶ್ಯಪ, ಪರಾಶರಾದಿಗಳ ದಿವ್ಯಸೂಕ್ತಿಗಳನ್ನೂ, ಶ್ರೀ ಸಾತ್ವತೋಕ್ತಿಯನ್ನೂ ಏಕೆ ಮುಖ್ಯವಾಗಿ ಉದಾಹರಿಸಿದುದು? ಎಂದರೆ ಅದಕ್ಕೆ ಕಾರಣ ಹೇಳುತ್ತಾರೆ. ಲಕ್ಷ್ಮೀ ಪ್ರಭಾವ ಪ್ರಶಂಸೆಗಾಗಿಯೇ ಏರ್ಪಟ್ಟ ಪ್ರಮಾಣಗಳು ಅತಿಶಯೋಕ್ತಿಯುಳ್ಳವೆಂದು ಕೆಲವರು ಅಭಿಪ್ರಾಯಪಡಬಹುದು. ಆದುದರಿಂದ ಅಂತಹ ಪ್ರಮಾಣಗಳನ್ನು ಬಿಟ್ಟು ಇತರ ಜ್ಞಾನನಿಧಿಗಳ ದಿವ್ಯಸೂಕ್ತಿಗಳಲ್ಲಿ ಯಾವುದೊಂದು ಪಕ್ಷಪಾತದ ಆರೋಪಣೆಗೆ ಅವಕಾಶವಿಲ್ಲದ ಪ್ರಯುಕ್ತ, ಅವುಗಳು ಈ ಸಂದರ್ಭದಲ್ಲಿ ಪ್ರಮಾಣಗಳೆಂದು ಉಪದೇಶಿಸುತ್ತಾರೆ. **ತತ್ಪರಙ್ಗಳಾನ** - ಲಕ್ಷ್ಮೀ ಸಂಬಂಧವಾದ, **ಶಾಸ್ತ್ರಙ್ಗಳ್**-ಎಂದರೆ ಲಕ್ಷ್ಮಿಗೆ ಮಾಹಾತ್ಮ್ಯವನ್ನುಪಪಾದಿಸುವ ಶಾಸ್ತ್ರಗಳು, ಅವುಗಳು ಯಾವುವೆಂದರೆ ಲಕ್ಷ್ಮೀತಂತ್ರ, ಲಕ್ಷ್ಮಿಯ ಅಷ್ಟೋತ್ತರ ಸಹಸ್ರನಾಮಗಳು, ಲಕ್ಷ್ಮಿಯ ಪ್ರಭಾವವನ್ನು ಹೇಳುವ ಪುರಾಣಭಾಗಗಳು, **ನಿರ್ಕ**- ಇಂತಹವುಗಳೆಲ್ಲಾ ಇದ್ದರೂ ಎಂದರೆ ಇವುಗಳೂ ಕೂಡ ನಮಗೆ ಪ್ರಮಾಣವಾದರೂ, **ಈ ಮಧ್ಯಸ್ಥ ಶಾಸ್ತ್ರಙ್ಗಳ್**- ಈ ಲಕ್ಷ್ಮಿಯ ಮಾಹಾತ್ಮ್ಯೆಯನ್ನೇ

ಶ್ರಿಯಃ ಉಪಾಯತ್ವೇ ಆಚಾರ್ಯದಿವ್ಯ ಸೂಕ್ತಯಃ

ಆಳವಣ್ಡಾರುಗಳ್, (೧) “ಜಗತ್ಸಮಸ್ತಂ ಯದಪಾಂಗ ಸಂಶ್ರಯಂ” ಎನ್ನುವರ್ (೨) ಶ್ರೀಯೋಗಿಸಜ್ಜರವಿಂದ ಶೋಚನ ಮನಃಕಾಂತಾ ಪ್ರಸಾ

ಉಪಪಾದಿಸಬೇಕೆಂಬ ಸಂಕಲ್ಪವೇನೂ ಇಲ್ಲದೆ, ಮಧ್ಯಸ್ಥವಾಗಿ ಲಕ್ಷ್ಮಿಯ ಪ್ರಕರಣ ಬಂದಾಗ ಮಾತ್ರ ಯಾಥಾರ್ಥ್ಯವನ್ನು ಬೋಧಿಸುವ ಶಾಸ್ತ್ರಗಳಾದ ಶ್ರೀಪದ್ಮಪುರಾಣ, ಹಿರಣ್ಯಗರ್ಭಸಂಹಿತೆ, ಶೌನಕಸಂಹಿತೆ, ವಿಷ್ಣುಪುರಾಣ, ಸಾತ್ವತಸಂಹಿತೆ ಮೊದಲಾದವುಗಳು. ಅತಿ ಪ್ರಬಲಗಳ್ - ಪ್ರತಿಕಕ್ಷಿಗಳು ಪಕ್ಷಪಾತವನ್ನು ಆರೋಪಿಸಲು ಸಾಧ್ಯವಲ್ಲದುದರಿಂದ ತುಂಬಾ ಪ್ರಬಲವಾದ ಪ್ರಮಾಣಗಳು. ತತ್ತ್ವ ಶಾಸ್ತ್ರಗಳು ಲಕ್ಷ್ಮಿಗೆ ಉಪಾಯತ್ವವನ್ನು ಬೋಧಿಸುತ್ತವೆ. “ಲಕ್ಷ್ಮ್ಯಾ ಸಹ ಹೃಷೀಕೇಶೋ ದೇವ್ಯಾ ಕಾರುಣ್ಯರೂಪಯಾ । ರಕ್ಷಕಸ್ಸರ್ವಸಿದ್ಧಾಂತೇ ವೇದಾಂತೇಽಪಿ ಚ ಗೀಯತೇ ।” ಎಂಬುದು ಉಪಾಯತ್ವವನ್ನು ಬೋಧಿಸುವ ಲಕ್ಷ್ಮೀತಂತ್ರ ಪ್ರಮಾಣವು. ಅಷ್ಟೋತ್ತರ ಸಹಸ್ರನಾಮಾದಿಗಳಲ್ಲಿ ಉಪಾಯತ್ವವನ್ನು ಬೋಧಿಸುವ ಅನೇಕ ನಾಮಗಳಿವೆ. ಹಾಗೆಯೇ ಭಗವಚ್ಛಾಸ್ತ್ರದಲ್ಲಿ ಲಕ್ಷ್ಮೀ ಮಾಹಾತ್ಮ್ಯವನ್ನು ಹೇಳುವ ಪ್ರಕರಣದಲ್ಲೂ ಪ್ರಮಾಣಗಳುಂಟು. (೧೮೧ನೆಯ ಪುಟವನ್ನೂ ೨೦೨ನೆಯ ಪುಟವನ್ನೂ ನೋಡಿ)

ಆಯಾಯ ವಸ್ತುಗಳಿಗೆ ಅನುರೂಪವಾದ ಪ್ರಯೋಜನವನ್ನು “ಪ್ರಮಾಣ ಸಂಪ್ರದಾಯಾಭ್ಯಾಂ ಕಲ್ಪಿಸಿಕೊಳ್ಳಬೇಕು” ಎಂದು ಹಿಂದೆ ಹೇಳಿ, ಪ್ರಮಾಣಗಳನ್ನು ಉದಾಹರಿಸಿ, ಇನ್ನು ಮುಂದೆ ಸಂಪ್ರದಾಯಕ್ಕೆ ಆಚಾರ್ಯರುಗಳ ದಿವ್ಯ ಸೂಕ್ತಿಗಳನ್ನು ಉದಾಹರಿಸುತ್ತಾರೆ.

ಲಕ್ಷ್ಮಿಗೆ ಉಪಾಯತ್ವವುಂಟೆಂಬುದಕ್ಕೆ ಆಚಾರ್ಯರುಗಳ ದಿವ್ಯಸೂಕ್ತಿಗಳು.

ಆಳವಂದಾರುಗಳ್ - ಶ್ರೀ ಯಾಮುನಾಚಾರ್ಯರು. “ಜಗತ್ಸಮಸ್ತಂ - ಸಮಸ್ತ ಜಗತ್ತು, ಯದಪಾಂಗ ಸಂಶ್ರಯಂ - ಯಾವ ಲಕ್ಷ್ಮಿಯ ಕೃಪಾ ಕಟಾಕ್ಷವನ್ನು ಆಶ್ರಯಿಸಿರುತ್ತದೋ,” ಎನ್ನುವರ್ - ಎಂದು, ಅರುಳಿಚ್ಚೆಯ್ದಾರ್ - ಅನುಗ್ರಹಿಸಿದ್ದಾರೆಂದು ಮುಂದೆ ಇದೆ. ಆ ಶ್ಲೋಕವು ಯಾವುದೆಂದರೆ :—

---

(೧) ಸ್ತೋತ್ರರತ್ನ ೩೭. (೨) ಚತುಶ್ಶ್ಲೋಕಿ ೩.

ಚಕರ್ಥ ಯಸ್ಯಾ ಭವನಂ ಭುಜಾಂತರಂ
ತವಪ್ರಿಯಂ ಧಾಮ ಯದೀಯ ಜನ್ಮಭೂಃ ।
ಜಗತ್ಸಮಸ್ತಂ ಯದಪಾಙ್ಗಸಂಶ್ರಯಂ
ಯದರ್ಥಮಂಭೋಧಿ ರಮಂಥ್ಯ ಬಂಧಿಚ ॥

ಇದರರ್ಥವು—ತವ - ನಿನ್ನ ಎಂದರೆ ನಾರಾಯಣನ, **ಭುಜಾಂತರಂ**-ಭುಜಗಳ ಮಧ್ಯಪ್ರದೇಶವಾದ ವಕ್ಷಸ್ಥಳವನ್ನು, **ಯಸ್ಯಾಃ**-ಯಾವ ಮಹಾಲಕ್ಷ್ಮಿಗೆ, **ಭವನಂ**-ವಾಸಸ್ಥಾನವಾಗಿ, **ಚಕರ್ಥ**-ಮಾಡಿದೆಯೋ, ತವ ಎಂಬುದು ಮಧ್ಯದಲ್ಲಿರುವುದರಿಂದ ಕಾಕಾಕ್ಷಿನ್ಯಾಯಪ್ರಕಾರ ಎರಡುಕಡೆಗೂ ಅನ್ವಯವು, ತವ-ನಿನ್ನ, **ಪ್ರಿಯಂ ಧಾಮ**-ಪ್ರಿಯವಾದ ಸ್ಥಾನವಾದ ಕ್ಷೀರಸಮುದ್ರವು, **ಯದೀಯ ಜನ್ಮಭೂಃ**-ಯಾವ ಲಕ್ಷ್ಮಿಗೆ ಜನ್ಮಸ್ಥಾನವೋ, **ಸಮಸ್ತಂ ಜಗತ್**-ಸಮಸ್ತ ಲೋಕವೂ, **ಯದಪಾಂಗ ಸಂಶ್ರಯಂ**-ಯಾವ ಉದಾರಳಾದ ಲಕ್ಷ್ಮಿಯ ಕಟಾಕ್ಷವನ್ನೇ ಆಶ್ರಯವಾಗಿ ಉಳ್ಳದೋ, **ಯದರ್ಥಂ**-ಯಾವ ಲಕ್ಷ್ಮಿಗೋಸ್ಕರವಾಗಿ, **ಅಂಭೋಧಿಃ**-ಕ್ಷೀರಸಮುದ್ರವು, **ಅಮಂಥಿ** - ಮಥನ ಮಾಡಲ್ಪಟ್ಟಿತೋ, ಸಮುದ್ರ ಮಥನ ಕಾಲದಲ್ಲಿ ಹುಟ್ಟಿದವಳು, **ಅಬಂಧಿಚ** - ಮತ್ತು ಸಮುದ್ರದಲ್ಲಿ ಸೇತುವೆಯು ಕಟ್ಟಲ್ಪಟ್ಟಿತೋ, ರಾಮಾವತಾರದಲ್ಲಿ ಸೇತುಬಂಧನವು ಹೇಳಲ್ಪಟ್ಟಿತು, ಅಂತಹ ಲಕ್ಷ್ಮಿಯೊಂದಿಗೆ ಎಂದು, ೩ನೆಯ ಶ್ಲೋಕದಲ್ಲಿ **ತಯಾ ಸಹಾಸೀನಂ** ಎಂಬದಾಗಿ ಮುಂದೆ ಇರುತ್ತದೆ. ಇಲ್ಲಿ ಜಗತ್ತೆಲ್ಲಾ ಯಾವ ಲಕ್ಷ್ಮಿಯ ಅಪಾಂಗ ಸಂಶ್ರಯವೆಂದು ಹೇಳಿ, ಸರ್ವ ಚೇತನರ ಅನಿಷ್ಟನಿವೃತ್ತಿ ಇಷ್ಟಪ್ರಾಪ್ತಿಯೂ ಸಹ ಲಕ್ಷ್ಮೀಕಟಾಕ್ಷಾನುಸಾರವೆಂದು ಹೇಳಿರುವದರಿಂದ ಉಪಾಯತ್ವವನ್ನು ಹೇಳಿದಂತಾಯಿತು. ಲಕ್ಷ್ಮೀಕಟಾಕ್ಷವಿಲ್ಲದಿರುವಾಗ ಏನು ದುರವಸ್ಥೆಯುಂಟಾಗುತ್ತದೆಂಬುವಕ್ಕೆ ಇಂದ್ರಸ್ತುತಿಯಲ್ಲೇ "**ತ್ವಯಾದೇವಿ ಪರಿತ್ಯಕ್ತಂ ಸಕಲಂ ಭುವನತ್ರಯಂ । ವಿನಷ್ಟ ಪ್ರಾಯಮಭವತ್ತ್ವ ಯೇದಾನೀಂ ಸಮೇಧಿತಂ** ॥" ಎಂಬದು ಪ್ರಮಾಣವಾಗಿ, ಸರ್ವವೂ ನಷ್ಟಪ್ರಾಯವಾಗುತ್ತದೆಂದು ಹೇಳಲ್ಪಟ್ಟಿರುತ್ತದೆ. ಮುಂದೆ "**ತ್ವಯಾವಲೋಕಿತಾಸ್ಸದ್ಯ ಶ್ಶೀಲಾದ್ಯೈಸ್ಸಕಲೈರ್ಗುಣೈಃ । ಧನೈಶ್ವರ್ಯೈಶ್ಚ ಯುಜ್ಯನ್ತೇ ಪುರುಷಾ ನಿರ್ಗುಣಾ ಅಪಿ । ಸಶ್ಲಾಘ್ಯಸ್ಸಗುಣೀ ಧನ್ಯ ಸ್ಸಕುಲೀನ ಸ್ಸಬುದ್ಧಿಮಾನ್** ॥" ನಿನ್ನ ಕಟಾಕ್ಷ ಬಂದಿದ್ದರೆ ಓ ಲಕ್ಷ್ಮಿಯೇ, ಸಕಲ ಕಲ್ಯಾಣಗುಣಗಳಿಂದಲೂ ಧನೈಶ್ವರ್ಯಗಳಿಂದಲೂ ಕೂಡಿದವರಾಗುತ್ತಾರೆ; ಅಷ್ಟು ಮಾತ್ರವೇ ಅಲ್ಲವು, ಏನೊಂದೂ ಶ್ಲಾಘ್ಯತೆಯಿಲ್ಲದಿದ್ದರೂ ಅವನೇ ಶ್ಲಾಘ್ಯನೆನಿಸುವನು, ಗುಣಹೀನನು ಗುಣವಂತನಾಗುವನು, ಧನ್ಯನಾಗುವನು, ಅಕುಲೀನನು ಕುಲೀನನಾಗುವನು, ಬುದ್ಧಿಯಿಲ್ಲ

ದಾದೃತೇ ಸಂಸೃತ್ಯಕ್ಷರ ವೈಷ್ಣವಾಧ್ವಸು ನೃಣಾಂ ಸಂಭಾವ್ಯತೇ ಕರ್ಹಿಚಿತ್" ಎನ್ರುಮ್ ಅರುಳಿಚ್ಚೆಯ್‌ದಾರ್.

ದವನು ಬುದ್ಧಿವರ್ಣ ಎಂದು ಹೇಳಲ್ಪಡುವನು" ಎಂದು ವಿಷ್ಣುಪುರಾಣದಲ್ಲಿ ಹೇಳಲ್ಪಟ್ಟಿರುತ್ತದೆ ಹಾಗೆಯೇ ಕಾಶ್ಯಪ ದಿವ್ಯಸೂಕ್ತಿಯು ಬ್ರಹ್ಮರುದ್ರೇಂದ್ರಾದಿ ಸರ್ವ ದೇವತೆಗಳ ಶ್ರೇಯಸ್ಸಿಗೂ ಲಕ್ಷ್ಮಿಯು ಕಾರಣವೆಂದು ಹೇಳುತ್ತದೆ. (೨೧೧೭ನೆಯ ಪುಟ ನೋಡಿ) ಹೀಗೆ ಉಪಾಯತ್ವ ಉಂಟೆಂಬುದನ್ನು ಈ ಮೇಲಿನ ವಾಕ್ಯದಲ್ಲಿ ಅನ್ವಯ ಮುಖೇನ ಹೇಳಿ, ಆ ಅಭಿಪ್ರಾಯವನ್ನೇ ಮುಂದಿನ ವಾಕ್ಯದಲ್ಲಿ ವ್ಯತಿರೇಕಮುಖೇನ ಶ್ರೀ ಯಾಮುನೇಯರು ತಾವು ಬರೆದಿರುವ ಚತುಶ್ಶ್ಲೋಕಿಯಲ್ಲೂ ಉಪಪಾದಿಸಿರುತ್ತಾರೆಂದು ಹೇಳುತ್ತಾರೆ (೨) "**ಅರವಿಂದಲೋಚನ**-ಕಮಲಸದೃಶವಾದ ಕಣ್ಣುಳ್ಳ ಸರ್ವೇಶ್ವರನ, **ಮನಃ**-ಮನಸ್ಸಿಗೆ, ಜ್ಞಾನಕ್ಕೆ, **ಕಾಂತಾ** - ಅತಿ ಮನೋಹರಳಾದ ಲಕ್ಷ್ಮಿಯು, **ಪ್ರಸಾದಾದೃತೇ** - ಅನುಗ್ರಹ ವಿಲ್ಲದೆ, **ಸಂಸೃತಿ** - ಸಂಸಾರ, ಇದರಿಂದ ಐಹಿಕ ಸ್ವರ್ಗಲೋಕಾದಿ ಭೋಗಗಳು ಹೇಳಲ್ಪಟ್ಟವು, **ಅಕ್ಷರ** - ಕೈವಲ್ಯ, **ವೈಷ್ಣವಾಧ್ವಸು** - ಮೋಕ್ಷ, ಇವುಗಳ ಮಾರ್ಗಗಳಲ್ಲಿ **ಕರ್ಹಿಚಿತ್** - ಎಂದಿಗೂ, ಯಾವಾಗಲೂ, **ಶ್ರೇಯಃ**-ಶ್ರೇಯಸ್ಸು, **ನಸಂಭಾವ್ಯತೇ** - ಉಂಟಾಗುವದಿಲ್ಲವು, ಹಿ - ಇದು ಸಿದ್ಧವು. ಎಂದರೆ ಶ್ರುತಿ ಸ್ಮೃತಿ ಪುರಾಣೇತಿಹಾಸಗಳಿಂದ ಸಿದ್ಧವು ಎಂಬ ಭಾವವು." ಇದರಿಂದ ಲಕ್ಷ್ಮಿಗೆ ಐಹಿಕ ಭೋಗಗಳನ್ನೂ, ಸ್ವರ್ಗಾದಿ ಸುಖಗಳನ್ನೂ, ಕೈವಲ್ಯಪ್ರಾಪ್ತಿಯನ್ನೂ ಮೋಕ್ಷಾನುಭವವನ್ನೂ ಹೊಂದಿಸುವ ಶಕ್ತಿಯುಂಟೆಂದು ಹೇಳಿದಂತಾಯಿತು. ಇದರಿಂದ ಲಕ್ಷ್ಮಿಗೆ ಉಪಾಯತ್ವವೂ ಮೋಕ್ಷಪ್ರದತ್ವವೂ ಉಂಟೆಂದು ಹೇಳಲ್ಪಟ್ಟಿತು. ಇದನ್ನೇ ಮನಸ್ಸಿನಲ್ಲಿಟ್ಟು ಶ್ರೀ ಪರಾಶರಭಟ್ಟರು, "**ಐಶ್ವರ್ಯಮಕ್ಷರಗತಿಂ ಪರಮಂಪದಂವಾ ಕಸ್ಮೈಚಿದಂಜಲಿಭರಂ ವಹತೇವಿತೀರ್ಯ**" ಎಂಬ ಶ್ರೀ ಗುಣರತ್ನಕೋಶ ೩೮ನೆಯ ಶ್ಲೋಕದಲ್ಲಿ ಉಪಪಾದಿಸಿ, "**ದೇವಜುಷ್ಟಾಮುದಾರಾಂ**" ಎಂಬ ಶ್ರುತ್ಯರ್ಥವನ್ನು ವಿಶದೀಕರಿಸಿರುತ್ತಾರೆ. ಉಪಾಯತ್ವವೂ ಮೋಕ್ಷಪ್ರದತ್ವವೂ ಇಲ್ಲದಿದ್ದರೆ ಆಕೆಯು ಉದಾರಳು ಹೇಗೆ? ಶ್ರುತಿಯೂ ಅತಿಶಯೋಕ್ತಿಯನ್ನು ಅಪೇಕ್ಷಿಸಿದಂತಾಗುತ್ತದೆ.

ಈ ವಾಕ್ಯಕ್ಕೆ ಬಹು ವಿಸ್ತರವಾದ ಉಪಪಾದನೆಯನ್ನು ದಾಸನು ಬರೆದಿರುವ ಚತುಃಶ್ಲೋಕೀ ಆಚಾರ್ಯಹೃದಯಾನ್ವೇಷಿಣೀ ಎಂಬ ವ್ಯಾಖ್ಯಾನದಲ್ಲಿ ಕಾಣಬಹುದು. ೫೨ ರಿಂದ ೭೦ನೆಯ ಪುಟಗಳವರೆಗೆ ಪರಾಂಬರಿಸಿ. ಆಕೆಗೆ ಮೋಕ್ಷ

ಪ್ರದತ್ವವೂ ಉಂಟೆಂಬುದಕ್ಕೆ ಹಿಂದೆ ಉದಾಹರಿಸಿರುವ ವಿಷ್ಣುಪುರಾಣ, ಹಿರಣ್ಯಗರ್ಭ ಸ್ಮೃತಿ, ಕಾಶ್ಯಪ ಸ್ಮೃತಿ, ಶೌನಕ ಸಂಹಿತಾ ವಾಕ್ಯಗಳಿವೆ. ಯಾವಾಗ ಮೋಕ್ಷಪ್ರದತ್ವವುಂಟೋ ಉಪಾಯತ್ವವೂ ಉಂಟೆಂದೇ ಭಾವಿಸತಕ್ಕದ್ದು.

ಆದರೆ ಸ್ವಾಮಿಯವರು ಪ್ರಮಾಣವಾಗಿ ಉದಾಹರಿಸಿರುವರು ಶ್ರುತಿಯಲ್ಲದೆ ಇತರ ಪ್ರಮಾಣಗಳೇ ಆಗಿವೆ, ಇದರಿಂದ ಶ್ರುತಿಯು ಆಧಾರವಿಲ್ಲವೆಂದು ಭಾವಿಸತಕ್ಕದ್ದಲ್ಲವು. ಈ ಗ್ರಂಥವು ಶ್ರುತ್ಯಧಿಕಾರವಿಲ್ಲದವರಿಗೂ ಉಪಯುಕ್ತವಾಗಿರಲೆಂಬ ಉದಾರ ಮನಸ್ಸಿನಿಂದ ಬರೆದಿರುವುದರಿಂದ ಶ್ರುತಿ ಪ್ರಮಾಣಗಳನ್ನು ಉದಾಹರಿಸಲಿಲ್ಲವು. ಉಪಾಯತ್ವವನ್ನು ಸಮರ್ಥಿಸುವ ಶ್ರುತಿಪ್ರಮಾಣಗಳು ಯಾವುವೆಂದರೆ:—

೧. "ಆನೀತವಾದಗ್ಂ ಸ್ವಧಯಾತದೇಕಂ" ಈ ಶ್ರುತಿಯ ವಿವರಣೆಗೆ ದಾಸನು ಬರೆದಿರುವ ಶ್ರೀ ಸ್ತುತಿಯ ವ್ಯಾಖ್ಯಾನವಾದ ಆಚಾರ್ಯಹೃದಯಾಸ್ವಾದಿನಿಯ ೫೭ನೆಯ ಪುಟವನ್ನು ಪರಾಂಬರಿಸಿ.

೨. "ಶ್ರಿಯಂ ಲೋಕೇ ದೇವಜುಷ್ಟಾಮುದಾರಾಂ" ಉಪಾಯತ್ವ ರಕ್ಷಕತ್ವಗಳಿಲ್ಲದೆ ಹೋದರೆ ಉದಾರತ್ವವು ಕೂಡದಲ್ಲವು.

೩. "ಸಾನೋ ಲೋಕಮಮೃತಂ ದಧಾತು" ಉಪಾಯತ್ವವಿಲ್ಲದಿದ್ದರೆ ಇಲ್ಲಿ ಹೇಳಿರುವ ಹಾಗೆ ದಿವ್ಯ ವೈಕುಂಠವನ್ನು ಹೇಗೆ ಕೊಡಬಲ್ಲಳು.

೪. "ಈಶಾನಾದೇವೀ ಭುವನಸ್ಯಾಧಿಪತ್ನೀ" ಇದರಿಂದ ಸರ್ವನಿಯಾಮಕತ್ವವೂ ಲಕ್ಷ್ಮಿಗೆ ಉಂಟೆಂಬುದು ಹೇಳಲ್ಪಟ್ಟಿತು.

೫. "ಶ್ರಿಯಂ ವಸಾನಾ ಅಮೃತತ್ವಮಾಯನ್" ಲಕ್ಷ್ಮಿಯನ್ನು ಆಶ್ರಯಿಸುವದರಿಂದ ಮೋಕ್ಷವುಂಟೆಂಬುವದು ಇದರಿಂದ ವ್ಯಕ್ತವು.

೬. "ಈಶ್ವರೀಗ್ಂ ಸರ್ವಭೂತಾನಾಂ" ಇಲ್ಲಿಯೂ ಲಕ್ಷ್ಮಿಯು ಜಗನ್ನಿಯಾಮಕಳೆಂದು ಹೇಳಲ್ಪಟ್ಟಿತು.

೭. ಶ್ರದ್ಧಯಾದೇವೋ ದೇವತ್ವಮಶ್ನುತೇ" ಲಕ್ಷ್ಮಿಯೊಂದಿಗೇನೇ ಸರ್ವೇಶ್ವರನಿಗೆ ಈ ವಿಭೂತಿಯಲ್ಲಿ ಲೀಲಾರಸಾನುಭವವೆಂದು ಹೇಳಿರುವದರಿಂದ ಉಪಾಯತ್ವ ರಕ್ಷಕಾದಿಗಳಲ್ಲಿಯೂ ಅನ್ವಯ ಉಂಟೆಂಬುದು ಸಿದ್ಧವು.

ಸ್ಮೃತಿ ಪ್ರಮಾಣಗಳು ಕೆಲವು ಮೇಲೆ ಶ್ರೀ ದೇಶಿಕರವರೇ ಉದಾಹರಿಸಿರುತ್ತಾರೆ:—

೮. ಮಂಕಣ ಸಂಹಿತೆಯಲ್ಲಿ

"ಪದ್ಮೇಸ್ಥಿತಾ ಪದ್ಮವರ್ಣಾ ಪದ್ಮನಾಭಪ್ರಿಯಾ ಶುಭಾ ।
ಅನುಗ್ರಹಪರಾಮೃದ್ಧಿ ಮನಘಾಂ ಹರಿವಲ್ಲಭಾಂ ॥"

೯. ಮತ್ತು ಅದೇ ಸಂಹಿತೆಯಲ್ಲಿ,

"ಸಾಮರ್ಥ್ಯ ಪಾರ್ಷ್ಣಿಯಾಂ ದೇವೀಂ ವೇದಗರ್ಭಾಂ ಮನಸ್ವಿನೀಂ"
"ಲೋಕೇಶೇಷ ವಿಭೂತೀನಾಂ ಕಾರಣಂ ಯನ್ನಿರೀಕ್ಷಣಂ ॥"

೧೦. ಯಥಾಹ ಕಾಶ್ಯಪಃ

ಬ್ರಹ್ಮಾದ್ಯಾಶ್ಚ ಸುರಾಸ್ಸರ್ವೇ ಮುನಯಶ್ಚ ತಪೋಧನಾಃ ।
ವಿಭಾಂತೇ ತ್ವತ್ಪದಚ್ಛಾಯಾ ಸಮಾಶ್ರಿತ್ಯ ಕಮಲೇಶ್ವರಿ ॥"

ಓ ಲಕ್ಷ್ಮಿಯೇ ಬ್ರಹ್ಮರುದ್ರೇಂದ್ರಾದಿ ಸಮಸ್ತ ದೇವತೆಗಳೂ, ಮುನಿಗಳೂ ತಪೋಧನರೂ ಎಲ್ಲರೂ ನಿನ್ನ ಪಾದಚ್ಛಾಯೆಯನ್ನಾಶ್ರಯಿಸಿ ಶ್ರೇಯಸ್ಸನ್ನು ಹೊಂದಿರುತ್ತಾರೆ.

೧೧. ಬ್ರಾಹ್ಮಪುರಾಣೇ —

"ಪದ್ಮಯೋನಿರಿದಂ ಪ್ರಾಪ್ಯ ಪಠನ್ ಸ್ತೋತ್ರಂ ತತಃ ಕ್ರಮಾತ್ ।
ದಿವ್ಯಂ ಚಾಷ್ಟಗುಣೈಶ್ವರ್ಯಂ ತತ್ಪ್ರಸಾದಾಚ್ಚ ಲಬ್ಧವಾನ್ ॥"

ಲಕ್ಷ್ಮೀಸ್ತೋತ್ರದಿಂದ ಚತುರ್ಮುಖ ಬ್ರಹ್ಮನೂ ತನ್ನ ಶ್ರೇಯಸ್ಸನ್ನೆಲ್ಲಾ ಹೊಂದಿದನೆಂದು ಹೇಳಲ್ಪಟ್ಟಿರುತ್ತದೆ. ಹಾಗೆಯೇ ಅದೇ ಪುರಾಣದಲ್ಲಿ,

೧೨. "ಸಕೃದ್ವಿಭಾತಾ ಸಂಸಾರ ಸಮುದ್ರ ಪರಿಶೋಷಿಣೀ"
೧೩. "ಭವಭಂಗಾಪಹಾರಿಣೀ" ೧೪. "ಪರನಿರ್ವಾಣದಾಯಿನೀ"
೧೫. "ಜ್ಯೋತಿಷ್ಮತ್ಯನ್ಯಕಾಮದಾ" ಇಂತಹ ನಾಮಗಳಿಂದ ಲಕ್ಷ್ಮಿಯು ಸ್ತುತಿಸಲ್ಪಟ್ಟಿರುತ್ತಾಳೆ. ೧೬. ಶ್ರೀ[illegible]ತಿ ೧೭. ಶ್ರೀ ವಿಷ್ಣು ಪುರಾಣ ೧೮. ಶ್ರೀಮನ್ನಾರಾಯಣ ವಾಕ್ಯಗಳನ್ನು ಮೂಲದಲ್ಲೇ ಉದಾಹರಿಸಿರುತ್ತಾರೆ. ಈ ಮೇಲಿನ ಪ್ರಮಾಣಗಳನ್ನೆಲ್ಲಾ ಶ್ರೀ ದೇಶಿಕರವರೇ ಚತುಶ್ಶ್ಲೋಕಿ ವ್ಯಾಖ್ಯಾನದಲ್ಲಿ ಉದಾಹರಿಸಿರುತ್ತಾರೆ.

ಹೀಗೆ ಸರ್ವೇಶ್ವರನ ಇಂಗಿತವನ್ನರಿವ ಸರ್ವಜ್ಞಳಾದುದರಿಂದ, ಅವರ ಮನಸ್ಸನ್ನರಿತು ತಾನೇ ಉಪಾಯವೂ ರಕ್ಷಕಳೂ ಆಗುವಳು. ಪರಮಾತ್ಮನು ಮೋಕ್ಷವನ್ನು ಕೊಡುವ ಸಂದರ್ಭದಲ್ಲೂ ಈಕೆಗೆ ತಿಳಿಸದೇ ನಡೆಯುವುದಿಲ್ಲವಾದುದರಿಂದ ಘಟಕರೂಪ ಪುರುಷಕಾರತ್ವವೂ ಉಂಟೆಂಬುದೂ ಸರ್ವಸಮ್ಮತವಾದ ವಿಷಯವೇ. ಪರಿಪೂರ್ಣಾನಂದಪದವನ್ನು ಕಡೆಗೆ ದಯಪಾಲಿಸುವುದು ಪರಮಾತ್ಮನೇನೇ ಎಂದಾಗಲೀ ಅಥವಾ ಲಕ್ಷ್ಮೀಯುಕ್ತನಾದ ನಾರಾಯಣನಿಗೇ ಎಂದಾಗಲೀ ಪ್ರಮಾಣಾನುಸಾರ ನಿರ್ಧರಿಸಿಕೊಳ್ಳಬಹುದು. ಆದರೆ ಲಕ್ಷ್ಮಿಗೆ ಉಪಾಯತ್ವವನ್ನು ಹೇಳುವುದರಲ್ಲಿ ಈ ಮೇಲಿನ ಪ್ರಮಾಣಗಳಿಂದ ಯಾವುದೊಂದು ವಿರೋಧವೂ ತೋರಿಬರುವುದಿಲ್ಲವು.

ಶ್ರೀ ಭಾಷ್ಯಕಾರರುಮ್ ಶ್ರೀ ವೈಕುಂಠ ಗದ್ಯತ್ತಿಲೇ "ಶೇಷಶೇಷಾಶನಾದಿ ಸರ್ವಂ ಪರಿಜನಂ ಭಗವತಸ್ತತ್ತದವಸ್ಥೋಚಿತ ಪರಿಚರ್ಯಾಯಾಮಾಜ್ಞಾಪಯಂತ್ಯಾ" ಎನ್ರು ಭಗವತ್ಕೈಂಙ್ಕರ್ಯರೂಪ ಪರಮಪುರುಷಾರ್ಥಮ್ ಇವಳ್ ನಿಯೋಗತ್ತಾಲೇ ಪಡಿಯೇ ನಡತ್ತವೇಣುಮೆನ್ರರುಳಿಚ್ಚೆಯ್‌ದಾರ್.

ಮುಂದೆ ಶ್ರೀ ಭಾಷ್ಯಕಾರವರ ದಿವ್ಯಸೂಕ್ತಿಯನ್ನು ಉದಾಹರಿಸುತ್ತಾರೆ:—

ಶ್ರೀ ಭಾಷ್ಯಕಾರರೂ ಕೂಡ ತಾವು ಬರೆದ ಶ್ರೀ ವೈಕುಂಠಗದ್ಯದಲ್ಲಿ, "**ಶೇಷ**-ಆದಿಶೇಷನು, **ಶೇಷಾಸನಾದಿ** - ವಿಷ್ವಕ್ಸೇನರು, ಇವರೇ ಮೊದಲಾದ, **ಸರ್ವಂ ಪರಿಜನಂ** - ಸಮಸ್ತ ಪರಿವಾರದ ಜನವನ್ನೂ, ಇದರಿಂದ ಮುಕ್ತರೂ ಹೇಳಲ್ಪಟ್ಟರು; ಅಥವಾ ಆದಿಶೇಷರು ವಿಷ್ವಕ್ಸೇನರೇ ಮೊದಲಾದ ಸಮಸ್ತ ಪರಿವಾರವೂ ಎಂದು ಹೇಳಿರುವದರಿಂದ ನಿತ್ಯಸೂರಿಗಳನ್ನು ಲಕ್ಷ್ಮಿಯು ಆಯಾಯ ಕೈಂಕರ್ಯಗಳಲ್ಲಿ ನಿಯಮಿಸುವಳು ಎಂದು ಹೇಳಿದರೈ ಕೈಮುತಿಕನ್ಯಾಯದಿಂದ ಮುಕ್ತರನ್ನೂ ಸಹ ಹಾಗೆಯೇ ಆಜ್ಞಾಪಿಸುವಳು ಎಂಬುದು ಸಿದ್ಧವು; **ಭಗವತಃ** - ಹೇಯಪ್ರತ್ಯನೀಕನಾಗಿ ಕಲ್ಯಾಣಗುಣಾಕರನಾದ ನಾರಾಯಣನ, **ತತ್ತತ್**-ಆಯಾಯಾ, **ಅವಸ್ಥೋಚಿತ** - ಸಂದರ್ಭಗಳಿಗೆ ಯೋಗ್ಯವಾದ, **ಪರಿಚರ್ಯಾಯಾಂ** - ಕೈಂಕರ್ಯದಲ್ಲಿ, **ಆಜ್ಞಾಪಯಂತ್ಯಾ** - ಆಜ್ಞಾಪಿಸುವ, **ಶ್ರಿಯಾ ಸಹಾಸೀನಂ** - ಲಕ್ಷ್ಮಿಯೊಂದಿಗೆ ಬಿಜಮಾಡಿಸಿರುವ ಎಂದು ಮುಂದೆ ಇದೆ. ಯಾವಾಗ ಲಕ್ಷ್ಮಿಗೆ ನಿತ್ಯರನ್ನೇ ಆಜ್ಞಾಪಿಸುವ ಸ್ವಾತಂತ್ರ್ಯವುಂಟೋ ಮುಕ್ತರಿಗೂ ಉಂಟೆಂಬುದು ಕೈಮುತಿಕ ನ್ಯಾಯಸಿದ್ಧವು. ದಿವ್ಯ ವೈಕುಂಠದಲ್ಲೇ ಹೀಗೆ ಆಜ್ಞಾಪಿಸುವ ಶಕ್ತಿಯಿದ್ದುದಾದರೆ ಲೀಲಾವಿಭೂತಿಯಲ್ಲಿ ತಾನೇ ಏಕೆ ಇಂತಹ ನಿಯಮನಾದಿಗಳು ಇಲ್ಲವೆಂದು ಹೇಳಲಾಗುತ್ತದೆ? ಆದುದರಿಂದ ಲೀಲಾವಿಭೂತಿಯ ಚೇತನರುಗಳಿಗೆ ಲಕ್ಷ್ಮಿಯೂ ಉಪಾಯತ್ವದಲ್ಲಿ ಸೇರಿದವಳು ಎಂಬ ಭಾವವು. ಈ ಅಭಿಪ್ರಾಯದಿಂದಲೇ ಶ್ರೀ ದೇಶಿಕರವರು ಈ ವೈಕುಂಠಗದ್ಯ ವಾಕ್ಯವನ್ನು ಉದಾಹರಿಸಿರುವದೂ ಅಲ್ಲದೆ ಈ ಅಭಿಪ್ರಾಯವು ಶ್ರೀ ಭಾಷ್ಯಕಾರರಿಗೂ ಸಮ್ಮತವೆಂಬ ಭಾವವು; ಎನ್ರು - ಎಂಬದಾಗಿ, ಭಗವತ್ಕೈಂಕರ್ಯರೂಪವಾದ, **ಪರಮ ಪುರುಷಾರ್ಥವು** - ಮುಕ್ತೈಶ್ವರ್ಯರೂಪವಾದ ಶ್ರೇಷ್ಠವಾದ ಪ್ರಯೋಜನವು, **ಇವಳ್**-ಈ ಶ್ರೀ ಮಹಾಲಕ್ಷ್ಮಿಯು, **ನಿಯೋಗತ್ತಾಲೇ ಪಡಿಯೇ**-ಆಜ್ಞೆಯ ಹಾಗೆಯೇ, **ನಡತ್ತವೇಣುಮ್** - ನಡೆಸಬೇಕು, **ಎನ್ರು** - ಎಂಬದಾಗಿ, **ಅರುಳಿಚ್ಚೆಯ್**

ದಾರ್ - ಕೃಪಯಾ ಅನುಗ್ರಹಿಸಿದರು. ಇದಕ್ಕೆ ಕರ್ತೃಪದವು **ಭಾಷ್ಯಕಾರರ್** ಎಂದು ವಾಕ್ಯಾದಿಯಲ್ಲಿ ಇದೆ. ಆದರೆ ಈ ವಾಕ್ಯದಲ್ಲಿ ಲಕ್ಷ್ಮಿಗೆ ಉಪಾಯತ್ವ ವನ್ನು ಹೇಳಲು ಇಷ್ಟವಿಲ್ಲದವರು, **ಪರಿಚರ್ಯಾಯಾಂ ಆಜ್ಞಾಪಯಂತ್ಯಾ** ಎಂದರೆ ಸರ್ವೇಶ್ವರನಿಂದ ಆಜ್ಞಪ್ತವಾದ ಕೈಂಕರ್ಯಗಳಲ್ಲೇ ಮಾಡತಕ್ಕದ್ದೆಂಬು ವದನ್ನು ಜ್ಞಾಪಕಕ್ಕೆ ಕೊಡುವದಕ್ಕಾಗಿ ಇವಳ ಆಜ್ಞೆಯೇ ವಿನಾ ಇವಳೇ ಸ್ವತಂತ್ರಿಸಿ ನಿಯಮಿಸಿದಳೆಂಬಭಿಪ್ರಾಯವಲ್ಲವೆಂದು ಅರ್ಥ ಹೇಳಬಹುದು. ಇದು ಸರಿಯಾದ ಅಭಿಪ್ರಾಯವಲ್ಲವು; ಏಕೆಂದರೆ ತತ್ತದವಸ್ಥೋಚಿತ ಎಂದು ಇರುವದ ರಿಂದ ಆಯಾಯಾ ಸಂದರ್ಭಗಳಿಗೆ ಯೋಗ್ಯವಾದ ಕೈಙ್ಕರ್ಯಗಳನ್ನು ಈಕೆಯೇ ವಿಧಿಸುವಳೆಂದು ಹೇಳಿರುವವರಿಂದ, ಈಕೆಯೇ ಪತಿಯ ಇಙ್ಗಿತವನ್ನು ತಿಳಿದವ ಳಾದುದರಿಂದ ಸ್ವತಂತ್ರಿಸಿ ತನ್ನ ಆಜ್ಞೆಯ ಮೂಲಕ ಅವರಿಗೆ ಕೈಂಕರ್ಯದಲ್ಲಿ ಆಸೆಯನ್ನುಂಟುಮಾಡುವಳೆಂದು ಹೇಳಿದಂತಾಯಿತು. ಆದುದರಿಂದಲೇ **ಇವಳ್ ನಿಯೋಗತ್ತಿಲೇ ಪಡಿಯೇ** ಎಂಬ ಪ್ರಯೋಗವು.

ಸರ್ವೇಶ್ವರನಿಗೂ ಉಪಾಯತ್ವವನ್ನೂ, ಲಕ್ಷ್ಮಿಗೂ ಉಪಾಯತ್ವವನ್ನೂ ಹೇಳಿ ದರೆ, ಪರಸ್ಪರ ವಿರೋಧವೃತ್ತಿ, ಅದರಿಂದ ವೈಮನಸ್ಯ ಮುಂತಾದ ಅನರ್ಥಗಳಿಗೆ ಕಾರಣವಾಗುವದಿಲ್ಲವೇ ? ಇಬ್ಬರ ಯಾಜಮಾನ್ಯವು ಹೀಗೆ ಅನರ್ಥಕ್ಕೆ ಕಾರಣ ವಾಗಿ ಪರಿಣಮಿಸುವದಿಲ್ಲವೇ ? ಎಂದರೆ ಲೋಕದಲ್ಲಿ ಒಂದು ಗೃಹದಲ್ಲಿ ಪಿತಾ ಮಾತಾ ಇಬ್ಬರ ಅಧಿಕಾರಕ್ಕೂ ಒಬ್ಬ ಬಾಲನು ಸಿಕ್ಕಿ, ಏನೊಂದೂ ತೊಂದರೆ ಇಲ್ಲದೆ ಸಂಪೂರ್ಣ ಐಕಮತ್ಯವು ದಂಪತಿಗಳಿಗಿದ್ದು ಬಾಲನು ಒಳ್ಳೇ ಶ್ರೇಯಸ್ಸನ್ನು ಹೊಂದಿರುವನನ್ನು ನಾವೇ ಬಹಳವಾಗಿ ಕಂಡಿರುವೆವು. ಹೀಗಿರುವಾಗ ಇಬ್ಬರೂ ಸರ್ವಜ್ಞರಾಗಿ, ಹೇಯಗುಣ ಸಂಪರ್ಕವೇ ಇಲ್ಲವರಾಗಿ, ಇಬ್ಬರೂ ಪರಸ್ಪರ ನಿರತಿಶಯ ಪ್ರೀತಿವಿಶಿಷ್ಟರಾಗಿ, ಯಾವಾಗಲೂ ಒಟ್ಟಿಗೇ ಇರುವವರಾಗಿ, ಇರು ವಾಗ ಪರಸ್ಪರ ವೈಮನಸ್ಯಕ್ಕೆ ಅವಕಾಶವೆಲ್ಲಿಯದು ? ವೈಮನಸ್ಯ, ಜಗಳ, ಮುಂತಾದವೆಲ್ಲಾ ಪರಸ್ಪರ ಮನಸ್ಸುಗಳನ್ನು ತಿಳಿಯಲವಕಾಶವಿಲ್ಲದೆ ರಜೋಗುಣ ತಮೋಗುಣ ಭೂಯಿಷ್ಠರಾದ ಮನುಷ್ಯರಲ್ಲುಂಟೇ ವಿನಾ, "**ತುಲ್ಯಶೀಲವಯೋ ವೃತ್ತಾ**" (ರಾಮಾ. ಸುಂದರ) ರಾದ ಲೋಕ ದಂಪತಿಗಳಲ್ಲಿ ಎಂದಿಗೂ ವೈಮನಸ್ಯ ವಿಲ್ಲವು. ಇದನ್ನೇ ಮಹಾಪ್ರಾಜ್ಞನಾದ ಆಂಜನೇಯನು ಕಂಡು ಆಶ್ಚರ್ಯಪಡುತ್ತಾನೆ. "**ಅಸ್ಯಾದೇವ್ಯಾ ಮನಸ್ತಸ್ಮಿನ್ ತಸ್ಯಚಾಸ್ಯಾಂ ಪ್ರತಿಷ್ಠಿತಂ**" ಆಹ ! ಈ ಸೀತೆ ಯ ಮನಸ್ಸು ಯಾವಾಗಲೂ ಶ್ರೀರಾಮಚಂದ್ರನಲ್ಲೂ, ಶ್ರೀರಾಮಚಂದ್ರನ ಮನಸ್ಸು ಈಕೆಯಲ್ಲೂ, ಪ್ರತಿಷ್ಠಿತವಾಗಿರುವದು" ಎಂದು ಪ್ರಶಂಸಿಸಿರುತ್ತಾನೆ. "**ಅಸಂದೇ ಶಾತ್ತು ರಾಮಸ್ಯ**" (ರಾ. ಸುಂ ೨೨. ೨೦) ಎಂದೂ "**ಅಹಂ ತಸ್ಯ ಪ್ರಭಾ**

ಕೂರತ್ತಾಳ್ವಾನುಮ್-(೧) "**ಸ್ವಸ್ತಿಶ್ರೀರ್ದಿಶತಾ ದಶೇಷ ಜಗತಾಂ ಸರ್ಗೋಪಸರ್ಗಸ್ಥಿತೀಸ್ಸ್ವರ್ಗಂ ದುರ್ಗತಿ ಮಾಪವರ್ಗಿಕೆ ಪದಂ ಸರ್ವಂಚ ಕುರ್ವನ್ ಹರಿಃ। ಯಸ್ಯಾ ವೀಕ್ಷ್ಯ ಮುಖಂ ತದಿಙ್ಗಿತ ಪರಾಧೀನೋವಿಧತ್ತೇzಖಿಲಂ ಕ್ರೀಡೇಯಂ ಖಲು ನಾನ್ಯಥಾಸ್ಯ ರಸದಾ ಸ್ಯಾದೈಕರಸ್ಯಾ**

ವಜ್ಞಾ" (ರಾ. ಸುಂ. ೩೭.೧೫.) ಎಂದೂ **ಹೇಳಿಕೊಂಡಿರು**ವಹಾಗೆ ಪತಿಯ ಮನಸ್ಸನ್ನರಿತ **ಸರ್ವಜ್ಞ**ಳಿಗೆ ವೈಮನಸ್ಯ ಉಂಟಾಗಲು ಕಾರಣವೇ ಇಲ್ಲವು ಆದುದರಿಂದ ಇಬ್ಬರಿಗೂ ಉಪಾಯತ್ವ ಉಂಟೆಂದು ಹೇಳುವದರಿಂದ, **ಐಕರಸ್ಯಕ್ಕೇನೂ** ಹಾನಿ ಇಲ್ಲವೆಂದು ಹೇಳಲು ಹೊರಟು, ಶ್ರೀ ಭಾಷ್ಯಕಾರರ ಪ್ರಿಯ ಶಿಷ್ಯರಾದ **ಕೂರತ್ತಾಳ್ವಾ**ರವರ ದಿವ್ಯ **ಸೂಕ್ತಿ**ಯ ಪ್ರಮಾಣವನ್ನು ಪ್ರದರ್ಶಿಸುತ್ತಾರೆ :—

"**ಅಶೇಷ ಜಗತಾಂ**-ಸಮಸ್ತ ಜಗತ್ತಿನ, **ಸರ್ಗೋಪಸರ್ಗ ಸ್ಥಿತೀಃ, ಸರ್ಗ**-ಸೃಷ್ಟಿ, **ಉಪಸರ್ಗ** - ಪ್ರಳಯ, **ಸ್ಥಿತಿ** - ರಕ್ಷಣೆಯು, **ಇವುಗಳನ್ನೂ, ಸ್ವರ್ಗಂ** - ಸ್ವರ್ಗವನ್ನೂ, **ದುರ್ಗತಿಂ** - ನರಕವನ್ನೂ, **ಆಪವರ್ಗಿಕ ಪದಂ**-ಮೋಕ್ಷವನ್ನೂ, **ಸರ್ವಂಚ**-ಹೀಗೆ ಸಮಸ್ತವನ್ನೂ, **ಶ್ರೀ ಹರಿಯು, ಯಸ್ಯ** - ಯಾವ ಅನುಗ್ರಹಮಯಳಾದ ತನ್ನ ಪ್ರಿಯವಲ್ಲಭೆಯ, **ಮುಖಂ**-ಮುಖವನ್ನು, **ವೀಕ್ಷ್ಯ** - ನೋಡಿ, **ತದಿಙ್ಗಿತ ಪರಾಧೀನಃ** - ಆ ಪ್ರಿಯಪತ್ನಿಯ ಇಷ್ಟಕ್ಕೆ ಅಧೀನನಾಗಿ, **ಅಖಿಲಂ** - ಮೇಲೆ ಹೇಳಿದ ಎಲ್ಲವನ್ನೂ, **ವಿಧತ್ತೇ** - ಮಾಡುವನೋ, ಅಂತಹ, **ಶ್ರೀಃ** - ಲಕ್ಷ್ಮಿಯು, **ಸ್ವಸ್ತಿ** - ಮಂಗಳವನ್ನು, **ದಿಶತಾತ್** - ಕೊಡಲಿ; ಪ್ರಿಯವಲ್ಲಭೆಯ ಇಷ್ಟವನ್ನರಿತು, ಆದಕ್ಕೆ ವಶನಾಗಿ ಸೃಷ್ಟಿಸ್ಥಿತಿಲಯಗಳನ್ನು ಮಾಡುತ್ತಾನೆಂದು **ಹೇಳಿ**ದರು. ಅದನ್ನೇ ಪುನಃ ಸಮರ್ಥಿಸಿ ಹೇಳುತ್ತಾರೆ. **ಅನ್ಯಥಾ** - ಹಾಗಿಲ್ಲದೇ ಹೋದರೆ, **ಅಯಂ ಕ್ರೀಡಾ** - ಈ ಲೀಲಾವಿಭೂತಿಯಲ್ಲಿನ ಲೀಲೆಯು, **ತಯಾ** - ಆ "**ತುಲ್ಯ ಶೀಲ ವಯೋವೃತ್ತ**" ಗಳುಳ್ಳ ಲಕ್ಷ್ಮಿಯಿಂದ, **ಐಕರಸ್ಯಾತ್** - ಸಮವಾದ ಆನಂದವನ್ನು ಹೊಂದಿರುವುದರಿಂದ, **ರಸದಾ** - ಆನಂದವನ್ನು ಕೊಡುವಂಥಾದ್ದು. **ನಸ್ಯಾತ್ ಖಲು**-ಆಗಲಾರದಷ್ಟೇ. "**ಸ ಏಕಾಕೀ ನರಮೇತ**" ಎಂದು ಹೇಳಿರುವ ಹಾಗೆ, ಸರ್ವೇಶ್ವರನಿಗೆ "**ಸ್ವರೂಪ ರೂಪಗುಣ** ವಿಭವೈಶ್ವರ್ಯಾದಿ"ಗಳಲ್ಲೆಲ್ಲಾ ಅಭಿಮತವಾಗಿರುವ ಪ್ರಿಯವಲ್ಲಭೆಯೊಂದಿಗೆ ಇಲ್ಲದೆ ಈ ಲೀಲಾವಿಭೂತಿಯ ಸೃಷ್ಟಿ ಸ್ಥಿತಿ ಲಯರೂಪ ಕ್ರೀಡೆಯು ಆತನಿಗೆ ಎಂದಿಗಾದರೂ ರುಚಿಸೀತೇ? ಆದುದರಿಂದ ಶ್ರುತಿ ಸ್ಮೃತೀತಿಹಾಸ

---

(೧) ಶ್ರೀಸ್ತವ, ಪ್ರಥಮ ಶ್ಲೋಕ.

ತ್ರಯಾ," ಎನ್ರು ಸಙ್ಗ್ರಹಿತ್ತ ವರ್ಥತ್ತೈ "ದೇವಿತ್ವನ್ಮಹಿಮಾವಧಿ ರ್ನ ಹರಿಣಾ ನಾಪಿ ತ್ವಯಾ ಜ್ಞಾಯತೇ" ಎನ್ರು ತುಡಙ್ಗಿ ವಿಸ್ತರಿತ್ತಾರ್.

ಪುರಾಣ ಪ್ರಮಾಣಗಳೆಲ್ಲಾ ಆಕೆಗೆ ಜಗದ್ವ್ಯಾಪಾರಗಳಲ್ಲಿ ಅನ್ವಯ ಉಂಟೆಂದು ಉದ್ಘೋಷಿಸುತ್ತವೆ. ಹೀಗಿರುವಾಗ ಈ ಅಲ್ಪಜೀವಾತ್ಮನಿಗೆ ಉಪಾಯತ್ವದಲ್ಲಿ ಆಕೆಗೆ ತನ್ನ ಪತಿಯೊಂದಿಗೆ ಅನ್ವಯವಿಲ್ಲವೆಂದು ಹೇಳಲು ಹೇಗೆ ಸಾಧ್ಯವು? ನಮ್ಮ ಮತೋದ್ಧಾರಕರ ಸರ್ವಾಭಿಪ್ರಾಯವನ್ನೂ ಚನ್ನಾಗಿ ಅರಿತ ಕೂರಾತ್ತಾಳ್ವಾರವರ ವಾಕ್ಯದಲ್ಲಿ ನಮಗೆ ಪೂರ್ಣವಿಶ್ವಾಸವಿರಬೇಕೆಂದು ಅವರ ವಾಕ್ಯವನ್ನು ಇಲ್ಲಿ ಉದಾಹರಿಸಿರುತ್ತಾರೆ; **ಎನ್ರು ಸಙ್ಗ್ರಹಿತ್ತರ್ಥತ್ತೈ** - ಎಂದು ಸಂಗ್ರಹವಾಗಿ ಹೇಳಿದಭಿಪ್ರಾಯವನ್ನೇ, **ದೇವಿತ್ವನ್ಮಹಿಮಾವಧಿ" ಎನ್ರು ತುಡಙ್ಗಿ** - ಎಂಬ ಶ್ಲೋಕದಿಂದಾರಂಭಿಸಿ ಶ್ರೀಸ್ತವವೆಂಬ ಹೆಸರಿನಿಂದ, **ವಿಸ್ತರಿತ್ತಾರ್** - ವಿಸ್ತರಿಸಿ ಹೇಳಿದರು. **ಹೇ ದೇವಿ** - ಈ ವಿಭೂತಿಯ ಲೀಲಾರಸವನ್ನನುಭವಿಸುವ ಓ ಲಕ್ಷ್ಮಿಯೇ, **ತ್ವನ್ಮಹಿಮಾವಧಿಃ** - ನಿನ್ನ ಮಹಿಮೆಯ ಎಲ್ಲೆಯು, **ಹರಿಣಾ ನ ಜ್ಞಾಯತೇ** - ಶ್ರೀಹರಿಗೂ ತಿಳಿಯದು, **ನಾಪಿತ್ವಯಾ ಜ್ಞಾಯತೇ** – ನಿನಗೂ ಸಹ ತಿಳಿಯದು ; ಮುಂದಿನ ಮೂರು ಪಾದಗಳು :—

ಯದ್ಯಪ್ಯೇವ ಮಥಾಪಿ ನೈವ ಯುವಯೋ ಸ್ಸರ್ವಜ್ಞತಾ ಹೀಯತೇ ॥
ಯನ್ನಾಸ್ತ್ಯೇವ ತದಜ್ಞತಾ ಮನುಗುಣಾಂ ಸರ್ವಜ್ಞತಾಯಾ ವಿದು ।
ರ್ವ್ಯೋಮಾಂಭೋಜ ಮಿದನ್ತಯಾ ಕಿಲ ವಿದರ್ ಭ್ರಾನ್ತೋಯ
ಮಿತ್ಯುಚ್ಯತೇ ॥

ಹೀಗೆ ಲಕ್ಷ್ಮಿಯಾದ ನಿನ್ನ ಮಹಿಮೆಯ ಎಲ್ಲೆಯು ಶ್ರೀ ಹರಿಗೂ ನಿನಗೂ ತಿಳಿಯದು ಎಂದರೇನಾದರೂ ನಿಮ್ಮಗಳ ಸರ್ವಜ್ಞತೆಗೆ ಕುಂದಕವೋ ಎಂದರೆ ಹಾಗೇನೂ ಇಲ್ಲವೆಂದು, **ನೈವಯುವಯೋ ಸ್ಸರ್ವಜ್ಞತಾ ಹೀಯತೇ** ಎಂದು ಹೇಳುತ್ತಾರೆ; ನಿಮ್ಮಗಳ ಸರ್ವಜ್ಞತೆಯೇನೂ ಇದರಿಂದ ನಷ್ಟವಾಗಲಿಲ್ಲವು. ಅದು ಹೇಗೆಂದರೆ :—**ಯನ್ನಾಸ್ತ್ಯೇವ** - ಯಾವದು ಇಲ್ಲವೋ, **ತದಜ್ಞತಾಂ** - ಅದರ ತಿಳುವಳಿಕೆ ಇಲ್ಲದಿರುವದನ್ನೇ, ಸರ್ವಜ್ಞತೆಗೆ ಅನುಗುಣವಾದುದನ್ನಾಗಿಯೇ ಭಾವಿಸಿದರು. ಇಲ್ಲದೇ ಇರುವದನ್ನು 'ತಿಳಿಯದಿರುವಂಥಾದ್ದೆಂದು, ಹೇಳುವದೇ, ಸರ್ವಜ್ಞತೆಯು. ಹಾಗಲ್ಲದೆ, ಇಲ್ಲದೇ ಇರುವದೂ ನನಗೆ ತಿಳಿಯುವದು ಎಂದು ಹೇಳಿದರೆ, ಅಂತವನನ್ನು ಹುಚ್ಚನೆಂದೇ ಭಾವಿಸತಕ್ಕದ್ದೆಂದು ಒಂದು ನಿದರ್ಶನಪೂರ್ವಕ ತಿಳಿಸುತ್ತಾರೆ. **ವ್ಯೋಮಾಂಭೋಜ ಮಿದಂತಯಾ ಕಿಲ ವಿದರ್** - ಗಗನ

ಭಟ್ಟರುಮ್ (೧) "ಐಶ್ವರ್ಯ ಮಕ್ಷರಗತಿಂ ಪರಮಂ ಪದಂವಾ ಕಸ್ಮೈ ಚಿದಂಜಲಿ ಭರಂ ವಹತೇ ವಿತೀರ್ಯ। ಅಸ್ಮೈ ನ ಕಿಂಚಿದುಚಿತಂ ಕೃತ

ಕುಸುಮವು ಇಲ್ಲದಿರುವಂಥಾದ್ದು, ಅದು ಇಂಥಾದ್ದೆಂದು ಹೇಳುವವನು ಭ್ರಾಂತನು, ಹುಚ್ಚನೆಂದು ಹೇಳಲ್ಪಡುತ್ತದೆ. ಹಾಗೆಯೇ ಲಕ್ಷ್ಮಿಯ ಮಹಿಮೆಯು ಎಲ್ಲಿಯು, ಇಲ್ಲದಿರುವಂಥಾದ್ದು; ಅದು ಉಂಟು, ಇಂಥಾದ್ದು, ಎಂದು ಹೇಳುವವನು ಉನ್ಮತ್ತನೆಂಬ ತಾತ್ಪರ್ಯವು. ಈ ಅಭಿಪ್ರಾಯವನ್ನನುಸರಿಸಿಯೇ ಶ್ರೀ ಪರಾಶರ ಭಟ್ಟರೂ ಕೂಡ "ಉಲ್ಲಾಸ ಪಲ್ಲವಿತ ಪಾಲಿತ ಸಪ್ತಲೋಕೀ ನಿರ್ವಾಹ ಕೋರಕಿತ ನೇಮ ಕಟಾಕ್ಷ ಲೀಲಾಮ್" ಎಂದು ಲಕ್ಷ್ಮಿಯನ್ನು ಕೊಂಡಾಡಿರುತ್ತಾರೆ. ಹೀಗೆ ಪೂರ್ವಪಕ್ಷ ಸಿದ್ಧಾಂತ ಎರಡು ಪಂಗಡದವರಿಂದಲೂ ಮಾನನೀಯರಾದ ಶ್ರೀ ಪರಾಶರ ಭಟ್ಟರವರ ದಿವ್ಯಸೂಕ್ತಿಯನ್ನು ಉದಾಹರಿಸುತ್ತಾರೆ. ಶ್ರೀ ಪರಾಶರಭಟ್ಟರು. ಶ್ರೀ ಯತಿವರ್ಯರ ಮುಖ್ಯ ಶಿಷ್ಯರಾದ ಶ್ರೀ ಕೂರತ್ತಾಳ್ವಾರವರ ಮಕ್ಕಳು, ಲಕ್ಷ್ಮೀವರಪ್ರಸಾದದಿಂದ ಹುಟ್ಟಿದ ಮಹಾಪ್ರಾಜ್ಞರು. ಅಂತವರ ವಾಕ್ಕಿನಲ್ಲಿ ಪರಮ ಗೌರವವನ್ನು ಉಭಯ ಪಂಗಡದವರೂ ಇಟ್ಟಿರುವದು ಹೆಚ್ಚಲ್ಲವೆ. ಆದುದರಿಂದ ಅಂತಹ ಮಹನೀಯರ ವಾಕ್ಯವು ಆಪ್ತ ವಾಕ್ಯವಾಗಿ ಅದರಲ್ಲಿ ತುಂಬಾ ವಿಶ್ವಾಸವಿಡತಕ್ಕದ್ದೆಂಬಭಿಪ್ರಾಯದಿಂದ ಭಟ್ಟರುಮ್ ಎಂದು ಅಪಿ ಶಬ್ದವನ್ನುಪಯೋಗಿಸಿರುತ್ತಾರೆ. "ವಸಿಷ್ಠೋಽಪಿ ಮಹಾ ತೇಜಾಃ" (ರಾಮಾ. ಬಾಲ) ಎಂದು ಹೇಳಿರುವಲ್ಲಿರುವ ಅಪಿ ಶಬ್ದದ ಹಾಗೆ ಭಟ್ಟರುಮ್ ಎಂಬ ಪ್ರಯೋಗವು. ಪೂರ್ವಪಕ್ಷ ಮಾಡುವವರ ಕಡೆಯವರಾಗಿ ಪರಮಗೌರವಾರ್ಹರಾಗಿರುವವರ ದಿವ್ಯಸೂಕ್ತಿಯಿಂದಲೇ ಪೂರ್ವಪಕ್ಷಕ್ಕೆ ಸಮಾಧಾನ ಹೇಳಿದರೆ ಆ ಸಮಾಧಾನವು ಅತ್ಯಂತೋಪಾದೇಯವೆಂಬ ಭಾವವು. "ಐಶ್ವರ್ಯಂ - ಇಹಲೋಕದ ಐಶ್ವರ್ಯವನ್ನೂ, ಇತರ ಲೋಕಗಳಾದ ಇಂದ್ರಾದಿ ಲೋಕಗಳ ಐಶ್ವರ್ಯವನ್ನೂ, ಅಕ್ಷರಗತಿಂ - ಕೈವಲ್ಯವನ್ನೂ, ಪರಮಂಪದಂ - ದಿವ್ಯ ವೈಕುಂಠವನ್ನೂ, ವಾ - ಎಂಬುದರಿಂದ ಇವುಗಳೆಲ್ಲವನ್ನೂ (ಸಮುಚ್ಚಯಾರ್ಥವು), ಅಂಜಲಿಭರಂ - ಅಂಜಲಿರೂಪ ಭರವನ್ನು, ವಹತೇ - ವಹಿಸಿರುವ, ಕಸ್ಮೈಚಿತ್ - ಜಾತಿ ಕುಲ ಗುಣ ವೃತ್ತಗಳ ಉತ್ಕರ್ಷಾಪಕರ್ಷಗಳನ್ನು ನೋಡದೇ ಯಾರಿಗಾಗಲಿ ಒಬ್ಬನಿಗೆ, ವಿತೀರ್ಯ - ಕೊಟ್ಟುಬಿಟ್ಟು, ಅಸ್ಮೈ - ಈ ಪ್ರಪನ್ನನಿಗೆ ಉಚಿತಂ - ಕೇಳಿದ್ದಲ್ಲದೆ ಉಚಿತವಾಗಿ, ಕಿಂಚಿತ್ - ಏನೊಂದೂ, ನ ಕೃತಂ -

(೧) ಶ್ರೀಗುಣ. ೫೮.

ಮಿಕ್ಕೈಯಾಂಬ ತ್ವಂ ಲಜ್ಜಸೇ ಕಥಯ ಕೋಯ ಮುದಾರ ಭಾವಃ" ಎನ್ರು
ಶ್ರುತಿಯಿಲುದಾರ ಶಬ್ದತ್ತುಕ್ಕು ವ್ಯಾಖ್ಯಾನಮ್ ಪಣ್ಣಿನಾರ್.

ಮಾಡಲ್ಪಡಲಿಲ್ಲವು. ಏಕೆಂದರೆ, ಮೋಕ್ಷವನ್ನು ಕೊಟ್ಟ ನಂತರ ಅದಕ್ಕಿಂತಲೂ ಹೆಚ್ಚಾದದು ಇನ್ನು ಯಾವುದೂ ಕೊಡಲು ಯೋಗ್ಯವಾದುದಿಲ್ಲದುದರಿಂದ ಮಾಡಲಿಲ್ಲವೆಂಬ ಭಾವವು, ಇತಿ - ಎಂಬದಾಗಿ, ಅಥ – ಅನಂತರದಲ್ಲಿ, ಹೇ ಅಂಬ - ಓ ಲೋಕಮಾತೆಯೇ, ತ್ವಂ ಲಜ್ಜಸೇ - ನೀನದಕ್ಕಾಗಿ ನಾಚಿಕೆಪಡುತ್ತೀಯೋ, ಶ್ರೀ ರಂಗನಾಯಕಿಯು ದಿವ್ಯಮಂಗಳ ವಿಗ್ರಹದ ಶಿರಸ್ಸು ಸ್ವಲ್ಪ ಬಾಗಿರುವುದರಿಂದ, ಪ್ರಪನ್ನನು ಮೋಕ್ಷವನ್ನು ಕೇಳಿದುದರಿಂದ ಅದನ್ನು ಕೊಟ್ಟುಬಿಟ್ಟು ಉಚಿತವಾಗಿ ಕೊಡಲು ಅದಕ್ಕೆ ಮೇಲಾದುದು ಯಾವುದೂ ಇಲ್ಲವೆಂದೇನಾದರೂ ತಲೆ ಬಾಗಿ ಲಜ್ಜಿಸುತ್ತೀಯೋ ಎಂದು ಉತ್ಪ್ರೇಕ್ಷೆಯು, ಅಯಂ ಉದಾರಭಾವಃ- ಈ ಉದಾರ ಭಾವವು, ಆಹ, ಕಃ - ಎಂತಹುದು, ಕಥಯ - ಹೇಳು," ಎನ್ರು - ಎಂಬದಾಗಿ, ಶ್ರುತಿಯಿಲ್ - "ದೇವಜುಷ್ಟಾ ಮುದಾರಾಂ" ಎಂಬ ಶ್ರೀಸೂಕ್ತದಲ್ಲಿರುವ, ಉದಾರ ಶಬ್ದಕ್ಕೆ ವ್ಯಾಖ್ಯಾನ ಮಾಡಿದರು. ಲೋಕದಂಪತಿಗಳಿಬ್ಬರೂ ಯಾವಾಗಲೂ ಒಟ್ಟಿಗೆ ಇರುವುದರಿಂದ, ಯಾವಾಗ ಉಪಾಯತ್ವೇನ ಶರಣಾಗತಿ ಮಾಡಲ್ಪಡುತ್ತದೋ, ಆಗ ಇಬ್ಬರೂ ಉಪಾಯಭೂತರೆಂಬಭಿಪ್ರಾಯವೇ ವಿನಾ ಅನ್ಯಥಾ ಇಲ್ಲವು. ಇಬ್ಬರನ್ನೂ ಸೇರಿಸಿಯೇ ಯಾವಾಗಲೂ ಶರಣಾಗತಿಯು. ಆದರೆ ಶ್ರೀ ಭಾಷ್ಯಕಾರರು ಪ್ರತ್ಯೇಕವಾಗಿ ಮೊದಲು ಲಕ್ಷ್ಮಿಯಲ್ಲೂ, ಅನಂತರ ನಾರಾಯಣನಲ್ಲೂ ಶರಣಾಗತಿ ಮಾಡಿದರಲ್ಲಾ ಎಂದರೆ, ಇದರಲ್ಲೇನೂ ವಿರೋಧವಿಲ್ಲವು. ದಂಪತಿಗಳಿಬ್ಬರೂ ಒಟ್ಟಿಗೆ ಕುಳಿತ್ತಿದ್ದರೆ, ಆಶೀರ್ವಾದಕ್ಕೆ ಹೋಗುವವನು ಪ್ರತ್ಯೇಕ ಪ್ರತ್ಯೇಕವಾಗಿ ಅವರಿಬ್ಬರಿಗೂ ನಮಸ್ಕರಿಸಬಹುದು. ಒಟ್ಟಿಗೆ ಇಬ್ಬರನ್ನೂ ಉದ್ದೇಶಿಸಿ ನಮಸ್ಕರಿಸಿದರೂ ನಮಸ್ಕರಿಸಬಹುದು. ಆದರೆ ಯತಿವರ್ಯರು ಈ ಶರಣಾಗತಿಯನ್ನು ಮಾಡಿದುದು ಪುರುಷಕಾರ ಭಾವನೆಯಿಂದಲೇ ಅಥವಾ ಉಪಾಯವೆಂಬ ಭಾವನೆಯಿಂದಲೇ ಎಂದರೆ, ಎರಡು ಭಾವನೆಯಿಂದಲೇ ಎಂದು ಹೇಳಬೇಕು. ಪುರುಷತ್ವವೇ ಶ್ರೀಯಃಪತಿಯಾದುದರಿಂದ ಸಾಧ್ಯೋಪಾಯವಾಗಿ ಧರ್ಮ್ಯವನವು ಇಬ್ಬರಲ್ಲೂ ಇರುವುದರಿಂದ, ಇಬ್ಬರಿಗೂ ಉಪಾಯತ್ವವು. ಅನುಗ್ರಹವಾಯಾಗಿ ಅನುಗ್ರಹಿಸುವ ವ್ಯಾಪಾರವನ್ನು ಲಕ್ಷ್ಮಿಯೂ, ಶಾಸನ ಮಾಡುವ ವ್ಯಾಪಾರವನ್ನು ನಾರಾಯಣನೂ, ವಿಭಾಗಿಸಿ ಇಟ್ಟುಕೊಂಡಿರುವುದರಿಂದ, ಪ್ರಬಲ ಪಾಪಗಳಿಗಾಗಿ ಶಾಸಿತಾವಿನ ವ್ಯಾಪಾರವು ಮುಂದುವರಿದರೆ, ಆಗ ಪುರುಷಕಾರ ರೂಪ

ದಲ್ಲಿ ದಂಡನಿವೃತ್ತಿಗೂ, ಲಕ್ಷ್ಮಿಯಲ್ಲಿ ಶರಣಾಗತಿ ಮಾಡಲ್ಪಟ್ಟಿತೆಂದು ಭಾವಿಸಬಹುದು. ಬರೀ ಪುರುಷಕಾರವೇ ಆದರೆ ಕೈಯಲ್ಲಿ ಕಾಸಿಲ್ಲದವನ ಒಣದಯೆಯ ಹಾಗೆ ಆಗ ಉದಾರಭಾವವು ಎಲ್ಲಿಯದು? ಶ್ರುತಿಯೂ ಕೂಡ ಅತಿಶಯೋಕ್ತಿಯನ್ನು ಹೇಳಿತೆಂಬ ನಿಂದೆಗೆ ಆಗ ಗುರಿಯಾಗುತ್ತದೆ. ಉಪಾಯತ್ವವು ಲಕ್ಷ್ಮಿಗೆ ಇಲ್ಲವೆಂದು ಹೇಳುವವರ ಪಂಗಡಕ್ಕೆ ಸೇರಿದವರು ಪರಾಶರಭಟ್ಟರಾದುದರಿಂದ, ಅವರಭಿಪ್ರಾಯವು "ವಸಿಷ್ಠೋಽಪಿ ಮಹಾ ತೇಜಾಃ" ಎಂದು ಹೇಳಿರುವ ಹಾಗೆ ಪ್ರಬಲತರವಾದುದೇದು ಉದಾಹರಿಸಿರುತ್ತಾರೆ. ಏನೋ ಅತಿಶಯೋಕ್ತಿಗಾಗಿ ಹೀಗೆ ಉದಾರಶಬ್ದಕ್ಕೆ ವ್ಯಾಖ್ಯಾನ ಮಾಡಿರಬಹುದೆಂದರೆ,ಹಾಗಲ್ಲವೆಂದು ತಿಳಿಸುವದಕ್ಕಾಗಿ ಪರಾಶರಭಟ್ಟರ ಇನ್ನೊಂದು ದಿವ್ಯಸೂಕ್ತಿಯನ್ನು ಸಾರದೀಪಿಕಾ ವ್ಯಾಖ್ಯಾತೃವು ಉದಾಹರಿಸುತ್ತಾರೆ:—"**ಸ್ವಯಂವಸ್ತೂ ಕುರ್ವ್ವನ್ ಜನಮಿಮ ಮಕಸ್ಮಾತ್ಸರಸಿಜಪ್ರಕಾರೌ ಪದ್ಮಾಯಾಸ್ತವಚ ಚರಣೌನ ಶ್ಶರಣಯನ್**" ಎಂದು ನಮ್ಮಾಳ್ವಾರ್ ಪಾಶುರಕ್ಕೆ ಅರ್ಥವೆಂದು ತಾವು ಅನುಗ್ರಹಿಸಿರುವ ಲಕ್ಷ್ಮೀ ಕಲ್ಯಾಣ ಸ್ತೋತ್ರದಲ್ಲಿ ಉಪದೇಶಿಸಿರುತ್ತಾರೆ ಇದರರ್ಥವೇನೆಂದರೆ:—**ಇಮಂಜನಂ**-ಈ ಜನವನ್ನು, **ಸ್ವಯಂ**-ತಾನಾಗಿಯೇ **ವಸ್ತೂಕುರ್ವನ್**-ಅವರಿಗೆ ಜ್ಞಾನ ಬುದ್ಧಿಯೋಗಸತ್ತಾದಿಗಳನ್ನಿತ್ತು ಅವರನ್ನು "**ಪೂರಣಾಕ್ಕಿ**" ಎಂದು ಹೇಳಿರುವ ಹಾಗೆ ವಸ್ತುವಾಗಿ ಮಾಡಿ, ಅಕಸ್ಮಾತ್ತಾಗಿ ಒಂದು ವ್ಯಾಜ ಮೂಲಕ, **ಸರಸಿಜಪ್ರಕಾರೌ**-ಕಮಲ ಸದೃಶಗಳಾದ, **ಪದ್ಮಾಯಾಃ**-ಲಕ್ಷ್ಮಿಯ, ಮತ್ತು **ತವಚ**-ನಿನ್ನಕಹ, **ಪಾದೌ**-ಚರಣಗಳನ್ನು, **ನಃ**-ನಮಗೆ **ಶರಣಯನ್**-ಶರಣವಾಗಿ ಪ್ರದರ್ಶಿಸಿ" ಎಂಬರ್ಥವು. ಇಲ್ಲಿ ಸ್ವಯಂ-ಎಂಬುದರಿಂದ **ಯಮೇವೈಷ ವೃಣುತೇ ತೇನ ಲಭ್ಯಃ** ಎಂಬ ಶ್ರುತ್ಯರ್ಥವು ಹೇಳಲ್ಪಟ್ಟಿತು. ದ್ವಯದಲ್ಲಿಯೂಯೂ ಹೀಗೆಯೇ ಇಬ್ಬರೂ ಭರನ್ಯಾಸಕ್ಕೆ ಉದ್ದೇಶ್ಯರೆಂದೂ, ಅಲ್ಲಿ ಇಬ್ಬರಿದ್ದರೂ **ಚರಣೌ** ಎಂದು ಹೇಗೆ ದ್ವಿವಚನವೋ, ಹಾಗೆಯೇ ಇಲ್ಲಿಯೂ ದ್ವಿವಚನವೇ ಉಪಯೋಗಿಸಲ್ಪಟ್ಟಿರುತ್ತದೆ. ಲಕ್ಷ್ಮಿಯು ವಿಶೇಷಣವಾದ ಪ್ರಯುಕ್ತ ಬಹು ವಚನ ಬೇಕಿಲ್ಲವು. ಮುಂದೆ ಆ ಮಂಡಲಿಯಲ್ಲೇ ಅಗ್ರಗಣ್ಯರಾದ ಪೆರಿಯಜೀಯರವರ ಭಿಪ್ರಾಯವೂ ತಮ್ಮ ಅಭಿಪ್ರಾಯಗಳಿಗೆ ವಿರೋಧವಾದುವಲ್ಲವೆಂದು ತಿಳಿಸುತ್ತಾರೆ. ಲಕ್ಷ್ಮಿಗೂ ಉಪಾಯತ್ವ ಪ್ರಾಪ್ಯತ್ವ ಉಂಟೆಂದರೆ ಲಕ್ಷ್ಮಿಗೆ ಸ್ವಾತಂತ್ರ್ಯವು ಏರ್ಪಡಲಿಲ್ಲವೋ, ಪತಿಶೇಷಳಲ್ಲವೋ ಎಂದರೆ ಈ ಪೆರಿಯಜೀಯರೇ ಅಂತಹ ಸಂದೇಹಗಳುಂಟಾಗದಹಾಗೆ ಅವರಿಬ್ಬರೂ "**ಅಸ್ಯಾದೇವ್ಯಾ ಮನಸ್ತಸ್ಮಿನ್ ತಸ್ಯ ಚಾಸ್ಯಾಂ ಪ್ರತಿಷ್ಠಿತಂ**" ಎಂದು ಮಹರ್ಷಿಯು ಬಹು ಸ್ವಾರಸ್ಯದಿಂದುಪಪಾದಿಸಿರುವ ಹಾಗೆ ಪರಸ್ಪರೈಕಮತ್ಯದಿಂದಲೂ ಪತಿಗಧೀನಳಾಗಿಯೂ ನಡೆಯುವಳೆಂದು

ಶ್ರೀ ಸೂಕ್ತಭಾಷ್ಯತ್ತಿಲೇ ಪೆರಿಯ ಜೀಯರುಮ್ ಅಪೇಕ್ಷಿತಾರ್ಥಙ್ಗಳೆಲ್ಲಾಮುಪಪಾದಿತ್ತಾರ್. ಇಪ್ಪಡಿ ಶ್ರುತಿ ಸ್ಮೃತಿ ಸಂಪ್ರದಾಯಙ್ಗಳ್ ನಿರ್ಕ್ಕಿರ ನಿಲೈಗಳೈಕ್ಕೊಣ್ಡು (ಕ್ಕ) ಶ್ರೀಮಚ್ಛಬ್ದತ್ತಿಲ್ ಶೊನ್ನ ವಿಶೇಷಣತ್ತುಕ್ಕು ವಿಗ್ರಹಾದಿಗಳುಕ್ಕುಪ್ಪೋಲೆ ವಸ್ತ್ವನುರೂಪಮಾನ ಉಪಯೋಗ ವಿಶೇಷಙ್ಗಳೈ ಸಹೃದಯರ್ ಅರಿನ್ದುಕೊಳ್ವದು.

ಹೇಳುವದರಿಂದ ಅವರ ಶ್ರೀ ಸೂಕ್ತಭಾಷ್ಯಮೂಲಕವಾಗಿ ಅಪೇಕ್ಷಿತಗಳಾದ ಅಭಿಪ್ರಾಯಗಳನ್ನೆಲ್ಲಾ ಅರಿಯಬಹುದೆಂದು ಹೇಳುತ್ತಾರೆ:—ಶ್ರೀ ಸೂಕ್ತ ಭಾಷ್ಯದಲ್ಲಿ, **ಪೆರಿಯಜೀಯರುಮ್** – ಪೆರಿಯಜೀಯರೂ ಸಹ, **ಅಪೇಕ್ಷಿತಾರ್ಥಙ್ಗಳೆಲ್ಲಾಮ್** - ನಾವು ಸರಿಯಾಗಿ ತಿಳಿಯಬೇಕಾದ ಅಭಿಪ್ರಾಯಗಳೆಲ್ಲವನ್ನೂ ಉಪಪಾದಿಸಿದರು.

ಇಷ್ಟು ದೂರ ಸಪ್ರಮಾಣವಾಗಿ ಸಾಧಿಸಿದ ವಿಷಯವನ್ನು ನಿಗಮನಮಾಡಿ ಹೇಳುವದು ಆವಶ್ಯಕವಾದುದರಿಂದ ಒಂದು ವಾಕ್ಯ ಮೂಲಕ ಸಂಗ್ರಹಿಸುತ್ತಾರೆ :- ದ್ವಯಪೂರ್ವಖಂಡದ ಶ್ರೀಮಚ್ಛಬ್ದವು ವಿಶೇಷಣವೇ ಉಪಲಕ್ಷಣವೇ ಎಂಬ ವಿಷಯದಲ್ಲಿ ಮಾಡಿದ ಜಿಜ್ಞಾಸೆಯ ಮೂಲಕವಾಗಿಯೂ, ಶ್ರುತಿ ಸ್ಮೃತಿ ಪುರಾಣೇತಿಹಾಸ ಆಳ್ವಾರಾಚಾರ್ಯ ಸಂಪ್ರದಾಯಾದಿ ಆಪ್ತ ವಾಕ್ಯಗಳ ಮೂಲಕವಾಗಿಯೂ, ಶ್ರೀಮಚ್ಛಬ್ದವು ವಿಶೇಷಣವೇ ವಿನಾ ಉಪಲಕ್ಷಣವಲ್ಲವೆಂದು ಸ್ಥಾಪಿಸಿ ಮುಗಿಸುತ್ತಾರೆ. **ಇಪ್ಪಡಿ** - ಈ ಮೇಲೆ ಉಪಪಾದಿಸಿದ ರೀತಿಯಲ್ಲಿ, **ಶ್ರುತಿ, ಸ್ಮೃತಿ ಸಂಪ್ರದಾಯಙ್ಗಳ್** – ಆಳ್ವಾರಾಚಾರ್ಯರುಗಳ ದಿವ್ಯ ಸೂಕ್ತಿ ಮತ್ತು ಅನುಷ್ಠಾನವೂ, ಇವುಗಳು, **ನಿರ್ಕ್ಕಿರ ನಿಲೈಗಳೈಕ್ಕೊಣ್ಡು** - ಇರುವ ಯಥಾವತ್ತಾದ ಸ್ಥಿತಿಯನ್ನು ಪರ್ಯಾಲೋಚಿಸಿ, **ಶ್ರೀಮಚ್ಛಬ್ದತ್ತಿಲ್ ಶೊನ್ನ ವಿಶೇಷಣತ್ತುಕ್ಕು** - ದ್ವಯ ಪೂರ್ವಖಂಡದ ಶ್ರೀಮತ್ ಎಂಬ ಶಬ್ದಮೂಲಕ ಹೇಳಲ್ಪಟ್ಟ ವಿಶೇಷಣಕ್ಕೆ, ಆ ವಿಶೇಷಣವು ಯಾವುದು ಎಂದರೆ ಲಕ್ಷ್ಮಿಯೊಂದಿಗೆ ಸೇರಿದ ಭಾವವು, **ವಿಗ್ರಹಾದಿಗಳುಕ್ಕುಪ್ಪೋಲೆ** - ಸರ್ವೇಶ್ವರನ ದಿವ್ಯ ಮಂಗಳ ವಿಗ್ರಹ, ಆದಿಪದದಿಂದ ಆತನ ಪ್ರಪನ್ನಾನುಗ್ರಹಕ್ಕೆ ಉಪಯುಕ್ತವಾದ ಕಲ್ಯಾಣಗುಣಗಳೇ ಮೊದಲಾದವು ಸಂಗ್ರಹಿಸಲ್ಪಟ್ಟವು, ಇವುಗಳೆಲ್ಲಾ ನೀವು ಹೇಗೆ ವಿಶೇಷಣಗಳೆಂದು ಒಪ್ಪಿಕೊಳ್ಳುವಿರೋ ಹಾಗೆಯೇ, **ವಸ್ತ್ವನುರೂಪಮಾನ** - ಇಲ್ಲಿ ವಸ್ತುವು ಲಕ್ಷ್ಮೀ ವಿಷಯವು, ಆದುದರಿಂದ ಲಕ್ಷ್ಮಿಗೆ ಅನುರೂಪವಾದ, **ಉಪಯೋಗ ವಿಶೇಷಙ್ಗಳ್** - ಉಪಯೋಗ ವಿಶೇಷಗಳನ್ನು, ಉಪಾಯವಾಗಿರಲು ಆಕೆಗೆ ಮಾಹಾತ್ಮ್ಯ ಇಲ್ಲವೇ

ಭರಸ್ವೀಕಾರ ರಹಿತಂ ರಕ್ಷಾ ಸಙ್ಕಲ್ಪ ವರ್ಜಿತಂ ।
ಗುಣಾದಿಕ ಮಿಷ್ಟಂ ಹಿ ಶರಣ್ಯಸ್ಯ ವಿಶೇಷಣಂ ॥೨೨॥

ಎಂಬುದನ್ನು ಚೆನ್ನಾಗಿ ವಿಮರ್ಶಿಸಿ, ಅವಳ ಮಾಹಾತ್ಮ್ಯಗೆ ಉಪಾಯವಾಗಿರುವ ಪ್ರಯೋಜನವು, ಸರಿಯಾದುದೆಂದು, **ಸಹೃದಯರು** - ಪ್ರೀತಿಯುಳ್ಳವರು, ಎಂದರೆ ಪ್ರತಿ ಕಕ್ಷಿಯವರು, ಹೇಳುವದಕ್ಕೆ ವಿರುದ್ಧವಾಗಿ ಹೇಳಬೇಕೆಂಬ ಅಪ್ರೀತಿ ಇಲ್ಲವೆ ಶಾಸ್ತ್ರಸಂಪ್ರದಾಯಾದಿಗಳನುಗುಣವಾಗಿ ನಡೆಯುವರಲ್ಲಿ ವಿಶ್ವಾಸವಿಟ್ಟರು ವವರ, **ಅರಿಸ್ತು ಕೊಳ್ವದು** - ತಿಳಿದುಕೊಳ್ಳತಕ್ಕದ್ದು. ಈರ್ಷಾಸೂಯೆ ಗಳನ್ನು ಬಿಟ್ಟು ಶಾಸ್ತ್ರ ಸಂಪ್ರದಾಯಗಳನ್ನು ವಿಮರ್ಶಿಸಿ ತಿಳಿಯುವವರಿಗೆ ಶ್ರೀಮ ಚ್ಛಬ್ದವನ್ನು ವಿಶೇಷಣವೆಂದು ಭಾವಿಸುವದು ಯುಕ್ತವೇ, ಉಪಲಕ್ಷಣವಾಗಿ ಭಾವಿಸುವದು ಯುಕ್ತವೇ, ಎಂಬ ವಿಷಯವು ತಮ್ಮ ಮನಸ್ಸಿಗೇನೇ ವೇದ್ಯವಾಗು ತ್ತದೆಂಬ ಭಾವವು.

ಸಮರ್ಥಿಸಿದ ಅರ್ಥಗಳ ಸ್ಥಿರೀಕರಣಕ್ಕಾಗಿ ನಾಲ್ಕು ಕಾರಿಕೆಗಳನ್ನನುಗ್ರಹಿ ಸುತ್ತಾರೆ- ಈ ಪ್ರಥಮ ಶ್ಲೋಕದಿಂದ ಹಿಂದೆ ವಿವರಿಸಿದ ದೂಷಣವನ್ನೇ ಹೇಳು ತ್ತಾರೆ:—**ಭರಸ್ವೀಕಾರರಹಿತಂ** - ಮಾಡಿದ ಭರನ್ಯಾಸವನ್ನು ಅಚೇತನವಾದು ದರಿಂದ ಸ್ವೀಕರಿಸುವ ಶಕ್ತಿಯಿಲ್ಲದುದು, **ರಕ್ಷಾ ಸಙ್ಕಲ್ಪ ವರ್ಜಿತಂ** - ಭರನ್ಯಾಸ ಮಾಡಿದುದಕ್ಕೆ ಪ್ರತಿಫಲವಾಗಿ ರಕ್ಷಿಸುತ್ತೇನೆಂಬ ಸಙ್ಕಲ್ಪವಿಲ್ಲದುದು, ಇಂತಹ **ಗುಣಾದಿಕಂ** - ಸರ್ವೇಶ್ವರನ ಕಲ್ಯಾಣಗುಣಗಳೇ ಮೊದಲಾದವು, ಇಲ್ಲಿ ಆದಿಶಬ್ದ ದಿಂದ ದಿವ್ಯಮಙ್ಗಳ ವಿಗ್ರಹವೂ ಹೇಳಲ್ಪಟ್ಟಿತು, ನ್ಯಾಸವಿದ್ಯೆಗೆ ಉಪಯೋಗ ವಾಗಿರುವದರಿಂದ ಆ ನ್ಯಾಸವಿದ್ಯಾಪ್ರಮಾಣ ಸಿದ್ಧವಾದುದಾಗಿ, **ಶರಣ್ಯಸ್ಯ ವಿಶೇ ಷಣಂ** - ಸರ್ವ ಶರಣ್ಯನಾದ ಭಗವಂತನಿಗೆ ವಿಶೇಷಣವೆಂಬುದು, **ಇಷ್ಟಂ ಹಿ** - ಎಲ್ಲರಿಗೂ ಇಷ್ಟವಾದುದಷ್ಟೇ. ಸರ್ವೇಶ್ವರನ ಕಲ್ಯಾಣಗುಣಗಳು ಅಚೇತನಗಳು; ಹಾಗೆ ಅಚೇತನವಾದುದರಿಂದ ಒಂದು ವೇಳೆ ಭರನ್ಯಾಸ ಮಾಡಿದರೆ, ಲಕ್ಷ್ಮಿಯ ಹಾಗೆ ಭರಸ್ವೀಕಾರ ಮಾಡಲೂ ಶಕ್ತಿಯಿಲ್ಲವು, ರಕ್ಷಿಸುತ್ತೇನೆಂದು ಸಙ್ಕಲ್ಪಿಸಲೂ ಲಾರದು. ಆದರೂ ಸ್ವಾಮಿಯ ಭರಸ್ವೀಕಾರ ರಕ್ಷಾಸಙ್ಕಲ್ಪಗಳಿಗೆ ಬಹಳ ಉಪ ಯುಕ್ತಗಳಾದವಾದುದರಿಂದ ಕಲ್ಯಾಣಗುಣ ದಿವ್ಯಮಙ್ಗಳ ವಿಗ್ರಹಗಳನ್ನು ವಿಶೇಷಣಗಳೆಂದು ಭಾವಿಸುವದು ನಿಮಗೆ ತುಂಬಾ ಇಷ್ಟವು. ಆದರೆ ಲಕ್ಷ್ಮಿಯು ಚೇತನವಾಗಿ ಭರಸ್ವೀಕಾರ ಮಾಡುವ ಯೋಗ್ಯತೆಯೂ, ರಕ್ಷಾಸಙ್ಕಲ್ಪಯುಕ್ತ ಳಾಗಲು ಯೋಗ್ಯತೆಯೂ, ಸಹ ಇದ್ದರೂ ವಿಶೇಷಣವೆಂದು ಹೇಳಲು ಏಕೆ ನಿಮಗೆ

ಇಷ್ಟವಿಲ್ಲವು ? ಎಂಬ ಭಾವವು ಭರಸ್ವೀಕಾರವೆಂದರೆ "ಹೇಗಾದರೂ ಮಾಡಿ ನೀವು ನನಗೆ ಉಪಾಯವಾಗಿ ಉದ್ಧಾರಮಾಡಬೇಕು" ಎಂಬ ಪ್ರಾರ್ಥನೆಯಲ್ಲಿ, "ಭವೇಯಂ ಶರಣಂ ಹಿವಃ" (ರಾಮಾ· ಸುಂದರ ಕಾಂಡ) "ನಿಮಗೆ ನಾನು ಉಪಾಯವಾಗುವೆನು" ಎಂಬ ಲಕ್ಷ್ಮಿಯ ಅಭಯಪ್ರದರೂಪ ಪ್ರತ್ಯುತ್ತರವು. ಗುಣಾದಿಗಳೇ ವಿಶೇಷಣವಾದರೆ, ಲಕ್ಷ್ಮಿಯು (೧) ಚೇತನವು, (೨) ಭರಸ್ವೀಕಾರ ಮಾಡಲು ಅರ್ಹಳು; (೩) ರಕ್ಷಾ ಸಙ್ಕಲ್ಪ ಮಾಡತಕ್ಕವಳು; ಹೀಗಿರುವದರಿಂದ ಕೈಮುತಿಕ ನ್ಯಾಯಪ್ರಕಾರ ಆಕೆಯೂ ವಿಶೇಷಣವೇ ಎಂಬುದರಲ್ಲಿ ಸಂದೇಹವಿಲ್ಲವೆಂಬ ತಾತ್ಪರ್ಯವು. ಭಗವಂತನ ಈ ಕಲ್ಯಾಣಗುಣಗಳು ಹೇಗೆ ಉಪಯುಕ್ತಗಳಾದವು ಎಂದರೆ :—ಭಗವಂತನ (೧) ಜ್ಞಾನವು ತನ್ನ ಆಶ್ರಿತರ ಗುಣದೋಷಗಳನ್ನೂ ಆಶ್ರಿತ ಅನಾಶ್ರಿತರೆಂದೂ ವಿವೇಚನೆ ಮಾಡುವದಕ್ಕೂ ಉಪಯುಕ್ತವು. ಹಾಗೆಯೇ (೨) ಶಕ್ತಿಯು, ಆಶ್ರಿತರ ದೋಷಗಳನ್ನು ಹೋಗಲಾಡಿಸುವದರಲ್ಲೂ, (೩) ಕರುಣೆಯು, ಆಶ್ರಿತನ ದುಃಖಗಳಿಂದ ಬಿಡಿಸುವದರಲ್ಲೂ, (೪) ಕ್ಷಮಾ, ಅಪರಾಧ ಸಹನೆಯಲ್ಲೂ, (೫) ಸೌಶೀಲ್ಯವು, ತಾನು ಸರ್ವಶ್ರೇಷ್ಠನೆಂದು ಆಶ್ರಿತನಿಗೆ ವಿಮುಖನಾಗದೇ ಸುಮುಖನಾಗುವದಕ್ಕೂ (೬) ವಾತ್ಸಲ್ಯವು, ದೋಷಗಳನ್ನು ಪರಿಗಣಿಸದೇ ಇರುವದಕ್ಕೂ (೭) ಸ್ವಾಮಿತ್ವವು, ತನ್ನ ದಾಸನನ್ನು ಹೇಗಾದರೂ ಮಾಡಿ ರಕ್ಷಿಸಿಯೇ ಬಿಡಬೇಕೆಂಬ ಸಙ್ಕಲ್ಪಕ್ಕೂ, ಹೀಗೆ ಉಪಯುಕ್ತವಾದವುಗಳು ಹಾಗೆಯೇ ದಿವ್ಯಮಙ್ಗಳ ವಿಗ್ರಹಕ್ಕೂ (೧) ಭಕ್ತಜನಾಕರ್ಷಣ (೨) ಮನಸಃ ಸಂಪ್ರೀಣನ (೩) ಕೈಙ್ಕರ್ಯಪರಿಗ್ರಹಣ (೪) ಐಕಾಂತಿಕ ಭಕ್ತಿಜನನವೇ ಮೊದಲಾದ ಉಪಯೋಗಗಳುಂಟು.

ಹೀಗೆ ವಿಶೇಷಣತ್ವವನ್ನು ಲಕ್ಷ್ಮಿಗೆ ಉಪಪಾದಿಸಿ, ಹಾಗೆ ವಿಶೇಷಣವೆಂದು ಹೇಳಿದರೆ ನಿಮಗೆ ವಿಪ್ರತಿಪತ್ತಿ, ವಿರೋಧವೇನೆಂದು ಈ ಎರಡನೆಯ ಶ್ಲೋಕವಲ್ಲಿ ಹೇಳುತ್ತಾರೆ, ಲಕ್ಷ್ಮಿಯು ಸರ್ವೇಶ್ವರನಿಗೆ ಸಹಧರ್ಮಚರೀ, ಯಾವಾಗಲೂ ಆತನೊಂದಿಗೆ ಇದ್ದು ಆತನ ಎಲ್ಲಾ ದಿವ್ಯ ಚೇಷ್ಟಿತಗಳಲ್ಲೂ ಸಹಾಯಭೂತಳು ಈ ಲೀಲಾವಿಭೂತಿಯಲ್ಲಿ ಇಬ್ಬರೂ ಸೇರಿ ಸರ್ವವ್ಯಾಪಾರಗಳನ್ನೂ ನಡೆಸಿ ಆನಂದಿಸುವವರು; ಹೀಗಿರುವಾಗ ಲಕ್ಷ್ಮಿಯು ವಿಶೇಷಣವೆಂದು ಹೇಳಲು ನಿಮಗೆ ತೊಂದರೆ ಏನು ? ಎಂದು ಕೇಳುತ್ತಾರೆ :—

ಸರ್ವ ಕರ್ಮಸು - ಜಗತ್ತಿನ ಸೃಷ್ಟಿಸ್ಥಿತಿ ಲಯಾದಿ ಸಮಸ್ತ ಲೀಲಾ ಕರ್ಮಗಳಲ್ಲೂ, ಮೋಕ್ಷೋಪಾಯವಾದ ವಿದ್ಯೆಯಿಂದ ವೇದ್ಯನಾಗುವನು ಸರ್ವಫಲಗಳನ್ನು ಕೊಡುವವನೂ ಹೀಗೆ ಎಲ್ಲಾ ಕರ್ಮಗಳಲ್ಲೂ, ಐಕರಸ್ಯಜುಷೋಃ- ಇಬ್ಬರಿಗೂ ಒಂದೇ ವಿಧವಾದ ಭೋಗ, ಆನಂದಗಳುಳ್ಳ, ಶೇಷಿದಂಪತ್ಯೋಃ - "ದ್ವಾಚ

ಐಕರಸ್ಯ ಜುಷೋಶ್ಯೇಷಿ ದಂಪತ್ಯೋಸ್ಸರ್ವಕರ್ಮಸು
ವಿಶೇಷಣ ವಿಶೇಷ್ಯತ್ವಂ ಶ್ರುತಂ ಕಸ್ಮಾನ್ನರೋಚತೇ ॥೨೪॥

ಸದೈಕಶೇಷೀ" ಎಂದು ಹೇಳಿರುವ ಹಾಗೆ ಲೋಕಕ್ಕೆಲ್ಲಾ ಶೇಷಿಗಳಾಗಿರುವ ಲೋಕದಂಪತಿಗಳಿಗೆ, ವಿಶೇಷಣ ವಿಶೇಷ್ಯತ್ವಂ ಸರ್ವೇಶ್ವರನು ವಿಶೇಷ್ಯವು, ಲಕ್ಷ್ಮಿಯು ಆತನಿಗೆ ವಿಶೇಷಣವು ಎಂಬ ಭಾವವು, ಶ್ರುತಂ - ದ್ವಯದ ಶ್ರೀಮ ಚ್ಛಬ್ದದಲ್ಲಿ ನಾವು ಹಿಂದೆ ಉಪಪಾದಿಸಿದ ರೀತಿಯಲ್ಲಿ ವ್ಯಕ್ತವಾಗಿ ಹೇಳಲ್ಪಟ್ಟಿ ದ್ದರೂ ಅಥವಾ ಶ್ರುತಿಯಿಂದ ವ್ಯಕ್ತವಾಗಿದ್ದರೂ, ಅದು ಕಸ್ಮಾತ್ - ಏನು ಕಾರಣದಿಂದ, ನರೋಚತೇ - ಇಷ್ಟವಾಗುವದಿಲ್ಲವು? ಇಷ್ಟವಿದ್ದಹಾಗೆ ಒಪ್ಪಿ ಕೊಳ್ಳುವೆವು ಎಂದು ಹೇಳಲು ಸಾಧ್ಯವಿಲ್ಲವು, ಏಕೆಂದರೆ, ಶ್ರುತಂ - ದ್ವಯಮಂತ್ರದಲ್ಲಿ ಪ್ರಮಾಣರೂಪೇಣ ಹೇಳಲ್ಪಟ್ಟಿರುತ್ತದೆ; ಮತುಪ್ ಪ್ರತ್ಯ ಯವು ವಿಶೇಷಣವೆಂದು ಉದ್ಘೋಷಿಸುತ್ತಿರುವಾಗ, ನಿಮಗೆ ವಿಶೇಷಣವೆಂದು ಒಪ್ಪಿಗೆ ಇಲ್ಲದುದು ತುಂಬಾ ಆಶ್ಚರ್ಯವು. ಕಸ್ಮಾನ್ನರೋಚತೇ? ಯಾವ ಕಾರಣದಿಂದವೆಂದು ಆಲೋಚಿಸಿದರೂ ತೋರಿಬರುವದಿಲ್ಲವು. ಏನು, (೧) ಪ್ರಮಾಣವಿಲ್ಲದುದರಿಂದಲೇ (೨) ಅಥವಾ ಉಪಾಯೈಕ್ಯಕ್ಕೆ ವಿರೋಧವೆಂಬು ದರಿಂದಲೇ (೩) ಅಥವಾ ಲಕ್ಷ್ಮಿಯ ಉಪಯೋಗವಿಲ್ಲದುದರಿಂದಲೇ ಎಂದು ವಿಕಲ್ಪಿಸಿದರೂ, ಇವು ಯಾವ ಕಾರಣಗಳಿಂದಲೂ ವಿಶೇಷಣವಲ್ಲವೆಂದು ತೋರಿ ಬರುವದಿಲ್ಲವು, ಆದುದರಿಂದ ಇನ್ನು ಯಾವ ಕಾರಣದಿಂದ ನಿಮಗಿದು ಇಷ್ಟವಲ್ಲ ವೆಂದು ಕೇಳುತ್ತಾರೆ. ಮೊದಲನೆಯ ಕಾರಣದಿಂದಲ್ಲವು, ಏಕೆಂದರೆ, "ಸಾನೋ ಲೋಕಮಮೃತಂ ದದಾತು" ಆಕೆಯು ನಮಗೆ ದಿವ್ಯ ವೈಕುಂಠಲೋಕವನ್ನು ಕೊಡಲಿ ಎಂದೂ, "ಶ್ರಿಯಂ ವಸಾನಾ ಅಮೃತತ್ವಮಾಯನ್" ಲಕ್ಷ್ಮಿಯನ್ನಾ ಶ್ರಯಿಸಿದವರು ನಿರತಿಶಯ ಸುಖವನ್ನು ಮೋಕ್ಷವನ್ನು ಹೊಂದಿದರು ಎಂದೂ, "ಯಾಮಾಲಂಬ್ಯ ಸುಖೇನೈವ ದುಸ್ತರಂ ತ್ರಿಗುಣೋದಧಿಂ । ನಿಸ್ತರಂತ್ಯ ಚಿರೇಣೈವ ವ್ಯಕ್ತಂ ಧ್ಯಾನ ಪರಾಯಣಾಃ" ಲಕ್ಷ್ಮಿಯನ್ನಾಶ್ರಯಿಸುವದರಿಂದ ಸುಖವಾಗಿ ಈ ಸಂಸಾರಸಾಗರವನ್ನು ದಾಟುವರು ಎಂದೂ, "ಅಮೃತಾವಹಾ" ಮೋಕ್ಷದಾಯಕಳೆಂದೂ, "ವಿಮುಕ್ತಿ ಫಲದಾಯಿನೀ" ಎಂದೂ, "ಭೋಗದಾ ಮುಕ್ತಿದಾಯಿನೀ" "ಸ್ವಧಯಾತದೇಕಂ" ಇತ್ಯಾದ್ಯನೇಕ ಪ್ರಮಾಣಗಳಿರು ತ್ತವೆ. ಎರಡನೆಯ ಕಾರಣವೂ ಅಲ್ಲವು; ಲಕ್ಷ್ಮಿಯು ವಿಶೇಷಣವಾದರೆ ಉಪಾಯೈ ಕ್ಯಕ್ಕೆ ತೊಂದರೆ ಬಂದರೆ, ಸರ್ವೇಶ್ವರನ ಕಲ್ಯಾಣಗುಣಗಳೂ ಆ ಕಾರಣದಿಂದ ವಿಶೇ ಷಣವಲ್ಲವೆಂದು ಹೇಳಬೇಕಾಗುತ್ತದೆ. ಮೂರನೆಯದೂ ಅಲ್ಲವು, ಏಕೆಂದರೆ,

ಪ್ರತರ್ದನಾದಿ ವಿದ್ಯಾಸು ವೇದ್ಯೇಪಿ ಪರಮಾತ್ಮನಿ ।
ಅಚೇತನ ವದಿಚ್ಛಾನು ಶ್ಚೇತನಂಚ ವಿಶೇಷಣಮ್ ॥೨೫॥

ಲಕ್ಷ್ಮಿಯ ಉಪಯೋಗವು ಆ ಮೇಲಿನ ಪ್ರಮಾಣಗಳಿಂದಲೇ ವ್ಯಕ್ತವು. ಆದುದರಿಂದ ನಮ್ಮ ಬುದ್ಧಿಗೆ ತೋಚಿದಹಾಗೆ ಯಾವ ಕಾರಣವೂ ತೋರಿಬರುವದಿಲ್ಲವು, ಹೀಗಿರುವಾಗ ನಿಮಗೇಕೆ ಇಷ್ಟವಿಲ್ಲವೋ ತಿಳಿಯದು ಎಂಬ ತಾತ್ಪರ್ಯವು

ಲಕ್ಷ್ಮಿಯನ್ನೂ ಗುಣಗಳಹಾಗೆಯೇ ವಿಶೇಷಣವೆಂದೇ ಒಪ್ಪಿಕೊಳ್ಳಬಹುದು. ಆದರೆ ಚೇತನಗಳು ವಿಶೇಷಣವೆಂದು ಎಲ್ಲಿಯೂ ಕಾಣಲಿಲ್ಲವು ಎಂದು ಪ್ರತಿಕಕ್ಷಿಯಿಂದ ಆಕ್ಷೇಪ ಬಂದೀತೆಂದು ಭಾವಿಸಿ, ಚೇತನವೂ ವಿಶೇಷಣವಾಗಿರುವದಕ್ಕೆ ದೃಷ್ಟಾಂತವನ್ನನುಗ್ರಹಿಸುತ್ತಾರೆ:—**ಪ್ರತರ್ದನಾದಿ ವಿದ್ಯಾಸು** – ಕೌಷೀತಕೀ ಬ್ರಾಹ್ಮಣದಲ್ಲಿ ಹೇಳಿರುವ **ಪ್ರತರ್ದನ** ವಿದ್ಯೆಯೇ ಮೊದಲಾದವುಗಳಲ್ಲಿ, ಇಲ್ಲಿ ಆದಿ ಪದದಿಂದ ರುದ್ರಾಂತರ್ಯಾಮಿಯಾದ ಪರಮಾತ್ಮೋಪಾಸನವೇ ಮೊದಲಾದವು ಹೇಳಲ್ಪಟ್ಟವು, **ಪರಮಾತ್ಮನಿ** - ಪರಮಾತ್ಮನೇ, **ವೇದ್ಯೇಪಿ** - ವಿಶೇಷ್ಯವಾಗಿ ಉಪಾಸ್ಯನಾಗಿದ್ದರೂ, **ಅಚೇತನವತ್** - ಅಚೇತನವಾದ ಪ್ರಾಣದ ಹಾಗೆ, (ಅಂತರಾದಿತ್ಯ ವಿದ್ಯೆಗಳಲ್ಲಿ ಹೇಗೋ ಹಾಗೆಯೂ) **ಯಥಾ ವಿಶೇಷಣಂ** - ಹೇಗೆ ವಿಶೇಷಣವೋ ಹಾಗೆ, **ಚೇತನಂ ಚ** – ಚೇತನನಾದ ಇಂದ್ರನೂ ಕೂಡ ವಿಶೇಷಣವು ಹೀಗಿರುವಲ್ಲಿ ಚೇತನಳಾದ ಲಕ್ಷ್ಮಿಯೂ ಕೂಡ ವಿಶೇಷಣವೆಂದು ಹೇಳುವದರಲ್ಲಿ ಬಾಧಕವೇನು? ಎಂಬ ತಾತ್ಪರ್ಯವು. ಈ ಶ್ಲೋಕಾಭಿಪ್ರಾಯವು ಏನೆಂದರೆ:—ಪ್ರತರ್ದನನೆಂಬುವರು ಇಂದ್ರನಲ್ಲಿಗೆ ಹೋಗಿ ತನಗೆ ಅತ್ಯಂತ ಹಿತವಾದುದು ಯಾವುದು ಎಂದು ಪ್ರಾರ್ಥಿಸಲಾಗಿ ಅದಕ್ಕೆ ಇಂದ್ರನು **"ಸಹೋವಾಚ ಪ್ರಾಣೋಸ್ಮಿ ಪ್ರಜ್ಞಾತ್ಮಾ ತಂ ಮಾ ಮಾಯುರಮೃತ ಮಿತ್ಯುಪಾಸ್ವ"** ನಾನೇ ಪ್ರಾಣ ಶಬ್ದವಾಚ್ಯನು, ನಾನೇ ಅಮೃತವೆಂದು ಉಪಾಸನೆ ಮಾಡು, ಎಂದು ಹೇಳಿದನು. ಇಲ್ಲಿ ಪ್ರಾಣಶಬ್ದವಾಚ್ಯನು ಇಂದ್ರನಲ್ಲವು, ತಚ್ಛರೀರಕ ಪರಮಾತ್ಮನು. ಏಕೆಂದರೆ ಮುಂದೆ **"ಸ ಏಷ ಪ್ರಾಣ ಏವ ಪ್ರಜ್ಞಾತ್ಮಾನಂದೋಽಜರಃ"** ಎಂದು ಹೇಳಿರುವದರಿಂದ ಈ ಇಂದ್ರನಿಗೆ ಆನಂದತ್ವ, ಅಜರತ್ವ ಅಮೃತತ್ವಾದಿಗಳು ಇಲ್ಲದುದರಿಂದ ಪರಮಾತ್ಮನೇ ಈ ಪ್ರಾಣಶಬ್ದವಾಚ್ಯನೆಂದು ಹೇಳಲ್ಪಟ್ಟಿರುತ್ತದೆ. ಇಲ್ಲಿ ಅಚೇತನವಾದ ಪ್ರಾಣವಿಶಿಷ್ಟನಾದ ಪರಮಾತ್ಮನು ಉಪಾಸ್ಯನೆಂದರೆ ಅಚಿತ್ತಾದ ಪ್ರಾಣವು ವಿಶೇಷಣವಾಯಿತು. ಚೇತನನಾದ ಇಂದ್ರವಿಶಿಷ್ಟನಾದ ಪರಮಾತ್ಮನು ಉಪಾಸ್ಯನಾದರೆ ಇಂದ್ರನು ವಿಶೇಷಣವಾಯಿತು,

> ಇತ್ಥಂ ಪ್ರಪತ್ತಿ ವಿದ್ಯಾಯಾಂ ತತ್ತನ್ಮಂತ್ರಾನುಸಾರತಃ ।
> ವಿಭುಃ ಪತ್ನ್ಯಾ ಗುಣಾದ್ಯೈಶ್ಚ ವಿಶಿಷ್ಟೋ ವಿಷಯೋऽತ್ರನಃ ॥೨೬॥

ಲಕ್ಷ್ಮೀವಿಶಿಷ್ಟನು ಉಪಾಸ್ಯನಾದರೆ ಲಕ್ಷ್ಮಿಯು ವಿಶೇಷಣವಲ್ಲವೇ? ಎಂಬ ತಾತ್ಪರ್ಯವು. ಇಂದ್ರನು ಪರಮಾತ್ಮನಿಗೆ ಶರೀರವಾಗಿ ಹೇಗೆ ವಿಶೇಷಣವೋ, ಹಾಗೆಯೇ ಲಕ್ಷ್ಮಿಯೂ ವಿಶೇಷಣವು. ಆದುದರಿಂದ ಚೇತನವೆಲ್ಲಾ ಸರ್ವೇಶ್ವರನಿಗೆ ವಿಶೇಷಣವೇ ಎಂಬ ಭಾವವು. ಇಂದ್ರನೇ ವಿಶೇಷಣವಾದರೆ ಲಕ್ಷ್ಮಿಯು ಆಗಕೂಡದೇ? ಹಾಗೆ ವಿಶೇಷಣವೆಂದು ಹೇಳುವದರಲ್ಲಿ ಯಾವ ಬಾಧಕವೂ ಇಲ್ಲವು. ವಿಶೇಷಣವಲ್ಲವೆಂದರೆ ಶಾಸ್ತ್ರಪ್ರಮಾಣಕ್ಕೆ ಬಾಧಕವು ಎಂಬ ತಾತ್ಪರ್ಯವು.

ಈ ಶ್ಲೋಕದಿಂದ ತಮ್ಮ ಸಿದ್ಧಾಂತರೂಪಾಭಿಪ್ರಾಯವನ್ನು ತಿಳಿಸುತ್ತಾರೆ:- **ಇತ್ಥಂ** - ಹೀಗೆ ಎಂದರೆ ಪ್ರತರ್ದನಾದಿ ವಿದ್ಯಾ ದೃಷ್ಟಾಂತ ಕೊಟ್ಟು ಉಪಪಾದಿಸಿದ ರೀತಿಯಲ್ಲಿ, ಅಥವಾ **ಇತ್ಥಂ** - ಪೂರ್ವಪಕ್ಷಗಳಿಗೆಲ್ಲಾ ಹೀಗೆ ಸಮಂಜಸಗಳಾದ ಸಮಾಧಾನವನ್ನು ಹೇಳಿದ ನಂತರ, **ಪ್ರಪತ್ತಿ ವಿದ್ಯಾಯಾಂ** - ಈ ನ್ಯಾಸವಿದ್ಯೆಯಲ್ಲೂ ಕೂಡ, **ತತ್ತನ್ಮಂತ್ರಾನುಸಾರತಃ** - ಆಯಾಯಾ ಮಂತ್ರಗಳನ್ನನುಸರಿಸಿ, **ವಿಭುಃ** - ಸರ್ವೇಶ್ವರನು, **ಪತ್ನ್ಯಾ** - ಪತ್ನಿಯಾದ ಲಕ್ಷ್ಮಿಯಿಂದಲೂ, **ಗುಣಾದ್ಯೈಶ್ಚ** - ಸ್ವಾಶ್ರಯಕ್ಕೆ ಉಚಿತಗಳಾದ ಸ್ವಾತಂತ್ರ್ಯ ಕರುಣಾ ಸೌಲಭ್ಯ ಸೌಶೀಲ್ಯಾದಿಗಳಿಂದಲೂ ಸಹ, ಇಲ್ಲಿ ಆದಿಪದದಿಂದ ದಿವ್ಯಮಂಗಳ ವಿಗ್ರಹ ಯುಕ್ತತೆಯು ಹೇಳಲ್ಪಟ್ಟಿತು, **ವಿಶಿಷ್ಟ ಏವ** - ಕೂಡಿದವನಾಗಿಯೇ, **ನಃ** - ಪ್ರಪನ್ನರಾದ ನಮಗೆಲ್ಲಾ, **ಅತ್ರ** - ಈ ಉಪಾಯವಾಗಿರುವ ಸಂದರ್ಭದಲ್ಲಿ, **ವಿಷಯಃ** - ವಿಷಯನು. ಲಕ್ಷ್ಮೀವಿಶಿಷ್ಟನಾಗಿಯೂ, ಕಲ್ಯಾಣಗುಣ ದಿವ್ಯಮಂಗಳ ವಿಗ್ರಹಗಳಿಂದ ವಿಶಿಷ್ಟನಾಗಿಯೂ ಇರುವ ಸರ್ವೇಶ್ವರನೇ ನಮಗೆ ಸಿದ್ಧೋಪಾಯನು. ತತ್ತನ್ಮಂತ್ರಾನುಸಾರತಃ ಎಂದು ಹೇಳಿರುವದರಭಿಪ್ರಾಯವೇನೆಂದರೆ, **"ಓಮಿತ್ಯಾತ್ಮಾನಂ ಯುಂಜೀತ"** ಎಂಬುವ ಕರಣಮಂತ್ರವಾದರೆ, ಅದರಲ್ಲಿರುವ ಪ್ರಣವದ ಉಕಾರವು ಲಕ್ಷ್ಮೀವಾಚಕವಾಗಿ, ಅಕಾರ ಉಕಾರ ವಾಚ್ಯರಾದ ಲೋಕದಂಪತಿಗಳಿಗೆ ಈ ಆತ್ಮಹವಿಸ್ಸಿನ ಸಮರ್ಪಣವೆಂದೂ, ಮೂಲಮಂತ್ರವಾದರೆ ಲಕ್ಷ್ಮೀನಾರಾಯಣರಿಗೆ ಎಂದೂ, ದ್ವಯವಾದರೆ ಕಂಠೋಕ್ತವಾಗಿ ಹೇಳಲ್ಪಟ್ಟಿರುವ ಲಕ್ಷ್ಮೀನಾರಾಯಣರಿಗೆ ಎಂದೂ, ಹೀಗೆಯೇ ಇತರ ಮಂತ್ರಗಳಲ್ಲಿಯೂ ತಿಳಿಯತಕ್ಕದ್ದೆಂಬ ಭಾವವು. ಆದರೆ ಚರಮಶ್ಲೋಕದಲ್ಲಿ **"ಮಾಮೇಕಂ ಶರಣಂವ್ರಜ"** ಇದೆಯಲ್ಲಾ ಎಂದರೆ ಇಲ್ಲಿಯೂ ಲಕ್ಷ್ಮಿಯು ಅನಾವಶ್ಯಕವೇನಲ್ಲವು.

ಇಚ್ಛಾ ಕೇವಲ ಕುತರ್ಕಜಲ್ಪೈರ್ಯುಕ್ತ್ಯಾ ಪ್ರಮಾಣಜಲ್ಪೈ ಬಾಧಿಕ್ಕಲಾಗಾದೆನ್ನುಮಿಡಂ ಮುನ್ನೈ ಶೊನ್ನೋಮ್

ಮಾಮೇಕಂ ಎಂದರೆ ಮಾಂ ಲಕ್ಷ್ಮ್ಯಾ ಸಹ ಏಕಂ ಎಂದು ಇಟ್ಟುಕೊಳ್ಳಬೇಕು. ಶ್ರುತಿಪ್ರಯೋಗವೇ ಹಾಗೆ ಸ್ವಧಯಾ ತದೇಕಂ - ಲಕ್ಷ್ಮಿಯೊಂದಿಗೆ ಪರಬ್ರಹ್ಮನು ಒಬ್ಬನೇ ಎಂದು ಶ್ರುತಿಯು ಲಕ್ಷ್ಮೀವಿಶಿಷ್ಟತೆಯನ್ನು ಪ್ರತಿಪಾದಿಸಿರುತ್ತದೆ. ಇದನ್ನನು ಸರಿಸಿಯೇ ಜ್ಞಾನಶಿಖರರಾದ ಶ್ರೀ ವ್ಯಾಸಮಹರ್ಷಿಯೂ "ಏಕಾಕೀ ವಿದ್ಯಯಾ ಸಾರ್ಧಂ" ಎಂದು ಮೋಕ್ಷಧರ್ಮದಲ್ಲೂ, **ಮಾಮೇಕಂ ಚ ಶ್ರಿಯಾಯುಕ್ತಂ**" ಎಂದು ಪಾದ್ಮಪುರಾಣದಲ್ಲೂ, ಪ್ರಯೋಗಿಸುತ್ತಾರೆ. ಹೀಗೆ ಲಕ್ಷ್ಮಿಗೆ ಪರಮಾತ್ಮನೊಂದಿಗೆ ಸದಾ ನಿತ್ಯಯೋಗವಿರುವುದರಿಂದ ಶ್ರುತಿಯಲ್ಲಿ ಅನೇಕ ಕಡೆಗಳಲ್ಲಿ ನಾರಾಯಣನೊಬ್ಬನೇ ಹೇಳಲ್ಪಟ್ಟಿದ್ದುದರಿಂದ "**ತದಂತರ್ಭಾವಾತ್ ತ್ವಂ ನಪೃಥಗಭವತ್ತ್ರೇಶ್ರುತಿರಪಿ**" ಎಂದು ಪರಾಶರಭಟ್ಟರವರು ಹೇಳುತ್ತಾರೆ.

ಇಷ್ಟು ದೂರ ಉಪಪಾದಿಸಿ ಹೇಳಿದುದನ್ನು ನಿಗಮನಮಾಡಿ ಹೇಳುತ್ತಾರೆ:- ಮೇಲೆ ಹೀಗೆಲ್ಲಾ ಪೂರ್ವಪಕ್ಷಗಳನ್ನು ತಂದವರಿಗೆ ಒಂದು ಬುದ್ಧಿವಾದವನ್ನು ಹೇಳುತ್ತಾರೆ. ಪ್ರಮಾಣಗಳಿಗೆ ಪ್ರಾಮುಖ್ಯವನ್ನು ಕೊಟ್ಟು ವಾದಗಳನ್ನು ದೂರ ಮಾಡತಕ್ಕದ್ದು ನ್ಯಾಯವು ಎಂದು ಹೇಳುತ್ತಾರೆ. **ಇಚ್ಛಾ** - ಈ ಸಂದರ್ಭದಲ್ಲಿ, **ಕೇವಲ ಕುತರ್ಕಜಲ್ಪೈ ಯುಕ್ತ್ಯಾ** - ಶಾಸ್ತ್ರಪ್ರಮಾಣವನ್ನನುಸರಿಸದ ಬರೀ ತರ್ಕಗಳ ಮೂಲಕವಾಗಿ, **ಪ್ರಮಾಣಜಲ್ಪೈ** - ಮುಖ್ಯವಾಗಿ ಇಲ್ಲಿ ಶಾಸ್ತ್ರ ಪ್ರಮಾಣಗಳನ್ನು **ಬಾಧಿಕ್ಕಲಾಗಾದು** - ನಿರಸನ ಮಾಡಕೂಡದೆಂಬುವದನ್ನು, **ಮುನ್ನೈ ಶೊನ್ನೋಮ್** - ಹಿಂದೆಯೇ ಹೇಳಿದೆವು. "**ನಹಿ ವಚನ ವಿರೋಧೇ ನ್ಯಾಯಃ ಪ್ರವರ್ತತೇ**" ಎಂದು ಹೇಳಿರುವದರಿಂದ ಪ್ರಮಾಣಕ್ಕೆ ವಿರೋಧವಿರುವಾಗ ವಾದಕ್ಕೆ ಅವಕಾಶವಿಲ್ಲವು. ಶ್ರೀ ವ್ಯಾಸಮಹರ್ಷಿಯೂ ತರ್ಕಾ **ಪ್ರತಿಷ್ಠಾನಾತ್** ಎಂಬ ಸೂತ್ರದಲ್ಲಿ ಹೀಗೆಯೇ ಹೇಳುತ್ತಾರೆ. ಈ ಅಭಿಪ್ರಾಯವನ್ನು ಹಿಂದೆ ತತ್ತ್ವತ್ರಯಾಧಿಕಾರದಲ್ಲಿ "ವೃಥಾ ನಿರ್ಬಂಧವಾಗಾದು" ಎಂದು "ತರ್ಕಪಾಂಡಿತ್ಯತ್ತಾಲೆ ನಿನ್ನೈತ್ತದೆಲ್ಲಾಮ್ ಸಾಧಿಕ್ಕಲಾ ಇರುಕ್ಕ ಚೆಯ್ದೇಯುಂ, ನಾಮ್ ಪ್ರಮಾಣಶರಣರಾಯ್ ಪ್ರೋಗಿರದು" ಎಂದೂ ಹೇಳುತ್ತಾರೆ. ೬೦-೬೧ನೆಯ ಪುಟಗಳನ್ನು ನೋಡಬಹುದು. ಉಪಾಯ ದ್ವಿತ್ವ ಪ್ರಸಂಗವೂ, ವಿಶೇಷಣದಿಂದ ವಿಶಿಷ್ಟಕ್ಕೆ ಏಕತ್ವ ಹಾನಿಯೂ, ಇತ್ಯಾದಿ ಆಕ್ಷೇಪಗಳನ್ನು ತರುವದು ಯುಕ್ತವಲ್ಲವೆಂಬ ಭಾವವು.

ಆಗೈಯಾಲ್ ಯಥಾಪ್ರಮಾಣಮ್ ಶರಣ್ಯಾಭಿಪ್ರಾಯಾನುಗುಣಮಾಗ ವಿಶಿಷ್ಟಮುಮ್ ಉಪೇಯಮಾನಾರ್ಪೋಲೆ, ವಿಶಿಷ್ಟಮುಮ್ ಉಪಾಯಮಾಗಕ್ಕುರೈಯಿಲ್ಲೈ.

ಉಪಾಯ ದ್ವಿತ್ವವಾದ ನಿರಾಸಃ

ಗುಣ ವಿಶೇಷ ವಿಗ್ರಹ ವಿಶೇಷಾದಿ ವಿಶಿಷ್ಟಮಾನ ವಿಕಮ್ ಉಪಾಯಮಾನಾರ್ಪೋಲೆ ತುಲ್ಯಯೋಗಕ್ಷೇಮಮಾನ ಶ್ರೀಮಚ್ಚಬ್ದತ್ತಿಲ್ ತೋ

ಆಗೈಯಾಲ್ - ಆದುದರಿಂದ, ಯಥಾಪ್ರಮಾಣಮ್ - ಈಗ ನಾವು ಉದಾಹರಿಸಿದ ಅನೇಕ ಪ್ರಮಾಣಗಳನ್ನನುಸರಿಸಿ, ಶರಣ್ಯಾಭಿಪ್ರಾಯಾನುಗುಣಮಾಗ ಅಂತಹ ಶಾಸ್ತ್ರಪ್ರಮಾಣಗಳಲ್ಲಿ ತೋರಿಬರುವ ಸರ್ವಶರಣ್ಯನಾದ ಸರ್ವೇಶ್ವರನ ಅಭಿಪ್ರಾಯಕ್ಕನುಗುಣವಾಗಿ, ವಿಶಿಷ್ಟಮ್ ಉಪೇಯಮಾನಾರ್ಪೋಲೇ - ಲಕ್ಷ್ಮೀ ವಿಶಿಷ್ಟ ನಾರಾಯಣನೇ ಉಪೇಯವೆಂದು ಹೇಳುವ ಹಾಗೆ, ವಿಶಿಷ್ಟಮುಮ್ ಉಪಾಯಮಾಗಕ್ಕುರೈಯಿಲ್ಲೈ - ಲಕ್ಷ್ಮೀ ವಿಶಿಷ್ಟನೇ ಉಪಾಯವೆಂಬುದರಲ್ಲಿ ಏನೊಂದೂ ನ್ಯೂನತೆ ಇಲ್ಲವು ಶರಣ್ಯನು ಯಾವಾಗಲೂ ಲಕ್ಷ್ಮೀ ವಿಶಿಷ್ಟನಾಗಿಯೇ ಇರುತ್ತಾನೆ ಲಕ್ಷ್ಮೀ ವಿಶಿಷ್ಟ ನಾರಾಯಣನೇ ಉಪೇಯವೆಂದೂ ನಿತ್ಯಮುಕ್ತರುಗಳು ಮಾಡುವ ಕೈಂಕರ್ಯಗಳು ಇಬ್ಬರಿಗೂ ಎಂದು ಒಪ್ಪಿಕೊಂಡಿರುತ್ತೀರಿ. ಹಾಗೆಯೇ ಲಕ್ಷ್ಮೀ ವಿಶಿಷ್ಟನಾದ ನಾರಾಯಣನೇ ಉಪಾಯವೆಂದು ಪ್ರಮಾಣಗಳನ್ನನುಸರಿಸಿ ಒಪ್ಪಿಕೊಂಡರೆ ಬಾಧಕವೇನೆಂಬಭಿಪ್ರಾಯವು.

ಲಕ್ಷ್ಮಿಗೂ ಉಪಾಯತ್ವ ಹೇಳಿದರೆ. ಉಪಾಯ ದ್ವಿತ್ವವೆಂಬ ವಾದದ ನಿರಾಸವು.

ಲಕ್ಷ್ಮಿಗೂ ಉಪಾಯತ್ವದಲ್ಲಿ ಅನ್ವಯ ಉಂಟೆಂದರೆ, ಉಪಾಯದ್ವಿತ್ವ ಪ್ರಸಂಗವುಂಟಾಗುವದಿಲ್ಲವೇ ? ಆದುದರಿಂದ ಲಕ್ಷ್ಮಿಗೆ ಉಪಾಯತ್ವವು ಕೂಡುವದಿಲ್ಲವು, ಐಕಾಂತ್ಯಕ್ಕೂ ಹಾನಿಯು ಎಂದು ಪೂರ್ವಪಕ್ಷವನ್ನು ತರಬಹುದು ; ಅದನ್ನು ಖಂಡಿಸುತ್ತಾರೆ. ಗುಣವಿಶೇಷ - ಆಶ್ರಯಕ್ಕೆ ಯೋಗ್ಯವಾದ ಗುಣ ವಿಶೇಷಗಳಿಂದಲೂ, ವಿಗ್ರಹವಿಶೇಷಾದಿ ವಿಶಿಷ್ಟಮಾನ - ದಿವ್ಯ ಮಂಗಳ ವಿಗ್ರಹವೇ ಮೊದಲಾದವುಗಳಿಂದಲೂ ಸೇರಿರುವ, ಏಕಮ್ - ಒಬ್ಬನಾದ ಪರಮಾತ್ಮನು ಉಪಾಯ ಮಾನಾರ್ಪೋಲೆ - ನಿಮ್ಮಭಿಪ್ರಾಯುಪ್ರಕಾರ ಉಪಾಯವಾದಹಾಗೆಯೇ ತುಲ್ಯಯೋಗಕ್ಷೇಮಮಾನ-ಪರಸ್ಪರ ವಿರೋಧವಿಲ್ಲದೆ ಸಮಾನ

ತ್ತಿನ ನಿತ್ಯಪತ್ನೀ ಸಂಬಂಧ ವಿಶಿಷ್ಟನಾನಾಲುಮ್ ಉಪಾಯೈಕ್ಯತ್ತುಕ್ಕು ಕ್ಕುರೈ ಯಿಲ್ಲೈ.

ಯೋಗಕ್ಷೇಮ ವಹಿಕ್ಕುಮ ಶ್ರೀಮಚ್ಛಬ್ದತ್ತಿಲ್ ಶೋತ್ತಿನ - ಮತುಪ್ ಪ್ರತ್ಯಯದಿಂದ ಯುಕ್ತವಾದ ಶ್ರೀ ಶಬ್ದದಿಂದ ತೋರಿ ಬರುವ, ನಿತ್ಯಪತ್ನೀ ಸಂಬಂಧ ವಿಶಿಷ್ಟನಾನಾಲುಮ್ - ಸದಾ ಪತ್ನಿಯೊಂದಿಗೇನೇ ಸೇರಿರುವ ಸಂಬಂಧದಿಂದಲೂ ಯುಕ್ತನಾದನೆಂದು ಒಪ್ಪಿದರೂ, ಉಪಾಯೈಕ್ಯತ್ತುಕ್ಕು-ಇಬ್ಬರೂ ಸೇರಿ ಒಂದೇ ಉಪಾಯವೆಂಬ ಭಾವನೆಗೂ, ಕುರೈ ಇಲ್ಲೈ - ಬಾಧಕವಿಲ್ಲವು. ಲಕ್ಷ್ಮೀ ನಾರಾಯಣರಿಬ್ಬರೂ ಸೇರಿ ಉಪಾಯವು ಎಂದರೆ "ಎತ್ತು ಏರಿಗೆ ಎಳೆಯಿತು, ಕೋಣ ಕೇರಿಗೆ ಎಳೆಯಿತು." ಎಂಬ ಹಾಗೆ ಪರಸ್ಪರ ವಿರೋಧ ಉಂಟಾಗಲಾರದೇ? ಲೋಕದಲ್ಲಿ ದಂಪತಿಗಳಿಬ್ಬರೂ ಏಕ ಗೃಹಕೃತ್ಯದಲ್ಲಿದ್ದರೂ ಪರಸ್ಪರೈಕಮತ್ಯವಿಲ್ಲದೆ ಜಗಳವಾಡುವದನ್ನು ಕಂಡಿರುವೆವಲ್ಲಾ, ಎಂದರೆ, ಇಲ್ಲಿ ಇಬ್ಬರೂ ಸರ್ವಜ್ಞರು, "ಅಸ್ಯಾದೇವ್ಯಾ ಮನಸ್ತಸ್ಮಿನ್ ತಸ್ಯ ಚಾಸ್ಯಾಂ ಪ್ರತಿಷ್ಠಿತಂ" (ರಾ. ಸುಂ) ಎಂದು ಆಂಜನೇಯನು ಆಶ್ಚರ್ಯಪಡುವ ಹಾಗೆ ಪರಸ್ಪರ ಇಂಗಿತಜ್ಞರು; ಭಕ್ತರ ಯೋಗಕ್ಷೇಮವನ್ನು ವಹಿಸುವದರಲ್ಲಿ ಇಬ್ಬರೂ ಕಂಕಣಬದ್ಧರು; ಇದನ್ನು ತಿಳಿಸುವದಕ್ಕಾಗಿಯೇ ತುಲ್ಯ ಯೋಗಕ್ಷೇಮ ಮಾನ ಎಂಬ ಪ್ರಯೋಗವು. ಆದುದರಿಂದ ಇಬ್ಬರೂ ಸೇರಿಯೇ ಪರಸ್ಪರ ವಿರೋಧವಿಲ್ಲದೆ ಯೋಗಕ್ಷೇಮವನ್ನು ವಹಿಸುವರು. ಈ ಲೋಕದ ದಂಪತಿಗಳಲ್ಲಿ ಪರಸ್ಪರ ವಿರೋಧಕ್ಕೆ ಕಾರಣವು ರಾಜಸ ತಾಮಸ ಗುಣಗಳ ವಿಜೃಂಭಣೆಯು. ಇಂತಹ ಗುಣಗಳ ಸ್ಪರ್ಶೇ ಇಲ್ಲದವರಿಗೆ ಪರಸ್ಪರ ವಿರೋಧವೆಲ್ಲಿಯದು ? ಇಲ್ಲಿ ಯೋಗ ವೆಂದರೆ ತನ್ನ ಪ್ರಾಪ್ತಿ ರೂಪ ಲಕ್ಷಣವುಳ್ಳದ್ದು, ಕ್ಷೇಮ ವೆಂದರೆ ಪುನರಾವೃತ್ತಿ ಇಲ್ಲದಿರುವ ಶ್ರೀಯಸ್ಸು; ಇವೆರಡನ್ನು ಭಕ್ತರಿಗುಂಟುಮಾಡುವವರಲ್ಲಿ ಇಬ್ಬರೂ ಆದರವುಳ್ಳವರು. ಪತ್ನೀಯೋಗವು ಸರ್ವೇಶ್ವರನಿಗೆ ನಿತ್ಯವಾದುದೆಂದು ಶ್ರೀ ಪರಾಶರರು ತಮ್ಮ ಶಿಷ್ಯರಾದ ಮೈತ್ರೇಯರಿಗೆ "ನಿತ್ಯೈವೈಷಾ ಜಗನ್ಮಾತಾ ವಿಷ್ಣೋಃ ಶ್ರೀ ರನಪಾಯಿನೀ । ಯಥಾ ಸರ್ವಗತೋ ವಿಷ್ಣುಸ್ತಥೈವೇಯಂ ದ್ವಿಜೋತ್ತಮ" (ವಿ. ಪು. ೧-೮.೧೭) ಎಂಬುದಾಗಿ ಉಪದೇಶಿಸಿರುತ್ತಾರೆ. ಹೀಗೆ ಲಕ್ಷ್ಮೀ ವಿಶಿಷ್ಟನಾಗಿಯೇ ಸರ್ವೇಶ್ವರನು ಇರುತ್ತಾನೆಂಬುದು ಸಿದ್ಧವು. ಉಪಾಯತ್ವಕ್ಕೆ ಗುಣವಿಗ್ರಹ ವಿಶಿಷ್ಟನು ಸರ್ವೇಶ್ವರನಿಗೆ ಅವಶ್ಯಕವು. ಇಲ್ಲದಿದ್ದರೆ ಉಪಾಯತ್ವವೇ ಕೂಡುವದಿಲ್ಲವೆಂದು ನೀವೇ ಅಂಗೀಕರಿಸುತ್ತೀರಿ. ಸರ್ವಜ್ಞತೆ, ಸ್ವಾತಂತ್ರ್ಯ,

ಉಪಾಯ ವಿಶೇಷಣಙ್ಗಳೈ ಎಲ್ಲಾಮ್ ವಿಟ್ಟು ಉಪಾಯತ್ತೈ ಏಕ ಮಾಕ್ಕವೇಣುಮೆನ್ನಿಲ್ ಉಪಾಯತ್ವಮ್ ವಿಶೇಷಣಮಿನ್ರಿಕ್ಕೆ ಪೋಮ್.

ಕಾರುಣ್ಯ, ಸೌಲಭ್ಯ, ಸೌಶೀಲ್ಯಾದಿಗುಣಗಳ ಮತ್ತು ದಿವ್ಯ ಮಙ್ಗಳ ವಿಗ್ರಹದ ವಿಶಿಷ್ಟತೆಯು ಆವಶ್ಯಕವೆಂದು ಒಪ್ಪಿದರೆ, ಯಾವಾಗಲೂ ಜೊತೆಯಲ್ಲೇ ಲಕ್ಷ್ಮಿಯು ಇರುವದರಿಂದ ಅಂತಹ ಲಕ್ಷ್ಮೀ ವಿಶಿಷ್ಟತೆಯೂ ಆವಶ್ಯಕವೆಂದು ಅಙ್ಗೀಕರಿಸುವದರಲ್ಲಿ ಬಾಧಕವೇನಿಲ್ಲವಾದು ಎಂದು ಕೇಳುತ್ತಾರೆ. ಆದರೆ ಭಕ್ತನು ಅನನ್ಯ ಮನಸ್ಕನಾಗಿ ಚಿಂತಿಸಬೇಕಾದ ಐಕಾಂತ್ಯಕ್ಕೆ ಹಾನಿಯುಂಟಾಗುವದಿಲ್ಲವೇ ? ಹೀಗೆ ಉಪಾಯತ್ವದಲ್ಲಿ ಇಬ್ಬರೂ ಸಲ್ಲುವದರಿಂದ ಐಕಾಂತ್ಯ ಕೂಡುವದಿಲ್ಲವೆಂಬಾಕ್ಷೇಪ ಉಂಟಾಗಬಹುದು. ಇದೂ ಅಲ್ಲದೆ ಚರಮಶ್ಲೋಕದಲ್ಲೂ ಮಾಮೇಕಂ ಶರಣಂ ವ್ರಜ ಎಂದಿರುವದರಿಂದ ಉಪಾಯತ್ವಕ್ಕೆ ಏಕತ್ವವು ಮುಖ್ಯವು. ಇಬ್ಬರಿಗೂ ಅನ್ವಯವು ಕೂಡುವದಿಲ್ಲವೆಂಬಾಕ್ಷೇಪವೂ ಉಂಟಾಗಬಹುದು. ಆದುದರಿಂದ ಸರ್ವ ವಿಶೇಷಣಗಳೊಂದೂ ಇಲ್ಲದ ಸರ್ವೇಶ್ವರನೊಬ್ಬನೇ ಉಪಾಯವೆಂದು ಹೇಳಿಬಿಡುವೆವು ಎಂದರೆ ಆಗಲೂ ದೋಷವು ತಪ್ಪಲಿಲ್ಲವೆಂದು ಹೇಳುತ್ತಾರೆ. **ಉಪಾಯ ವಿಶೇಷಣಗಳನ್ನೆಲ್ಲಾ ವಿಟ್ಟು** - ಬಿಟ್ಟು, **ಉಪಾಯತ್ತೈ** - ಉಪಾಯವಾಗಿರುವದನ್ನು, **ಏಕಮಾಕ್ಕ ವೇಣುಮೆನ್ನಿಲ್** - ಒಂದೇಯಾಗಿರಬೇಕಾದರೆ ಉಪಾಯತ್ವವು, **ವಿಶೇಷಣಮಿನ್ರಿಕ್ಕೆ ಪೋಮ್** - ವಿಶೇಷಣವಿಲ್ಲದೆ ಹೋಗಬೇಕಾಗುತ್ತದೆ. ಕಲ್ಯಾಣಗುಣಗಳೂ ಅದರಲ್ಲಿ ಮುಖ್ಯವಾಗಿ ಆಶ್ರಯಣೋಚಿತ ಗುಣಗಳೂ ದಿವ್ಯ ಮಙ್ಗಳ ವಿಗ್ರಹವೂ, ಈ ವಿಶೇಷಣಗಳಿಂದ ಯುಕ್ತನಾಗಿರುವ ಸರ್ವೇಶ್ವರನೇ ಉಪಾಯವಾಗಿರಲು ಅರ್ಹನೆಂದೂ, ಈ ವಿಶೇಷಣಗಳಿಲ್ಲದಿದ್ದರೆ ಸರ್ವೇಶ್ವರನಿಗೆ ಉಪಾಯಭಾವವೇ ಕೂಡುವದಿಲ್ಲವೆಂದೂ, ಒಪ್ಪಿಕೊಳ್ಳುತ್ತೀರಿ. ಈ ಕಲ್ಯಾಣ ಗುಣಾದಿಗಳು ವಿಶೇಷಣವಾಗಿದ್ದುಕೊಂಡು ಉಪಾಯೈಕ್ಯಕ್ಕೆ ಹಾನಿ ಇಲ್ಲದಿದ್ದರೆ, ಲಕ್ಷ್ಮಿಯು ಮಾತ್ರ ವಿಶೇಷಣವಾದರೆ ಉಪಾಯೈಕ್ಯಕ್ಕೆ ಹಾನಿ ಹೇಗೆ? ಹಾಗೆ ವಿಶೇಷಣ ಕೂಡದೆಂದರೆ, ಕಲ್ಯಾಣಗುಣಾದಿಗಳೂ ಉಪಾಯತ್ವಕ್ಕೆ ವಿಶೇಷಣವಾಗಿರದೆ, ಉಪಾಯವಾಗುವ ಪರಮಾತ್ಮನು ಅದ್ವೈತ ಸಿದ್ಧಾನ್ತದ ಹಾಗೆ ನಿರ್ವಿಶೇಷನಾಗಬೇಕಾಗುತ್ತದೆಂಬ ಭಾವವು. ಪರಮಾತ್ಮನು ನಿರ್ವಿಶೇಷನಲ್ಲವು, ಕಲ್ಯಾಣಗುಣಗಳಿಂದಲೂ ದಿವ್ಯಮಙ್ಗಳ ವಿಗ್ರಹದಿಂದಲೂ ಯುಕ್ತನಾಗಿರುವದು ವಿಶೇಷಣವಾಗಿರಲು ಅಭ್ಯಂತರವಿಲ್ಲವೆಂಬ ಭಾವವು. ಆದರೆ ಈ ಸಂದರ್ಭದಲ್ಲಿ ಇನ್ನೊಂದು ವಾದವನ್ನು ತರಬಹುದು ಹೇಗೆಂದರೆ:—**ಕಲ್ಯಾಣಗುಣಗಳೂ**

ಶ್ರೀ ಸಂಬಂಧೇನ ವೈಗುಣ್ಯಮಿತಿ ವಾದಸ್ಯ ನಿರಾಸಃ.

ವಿಶೇಷಣ ಪ್ರಯುಕ್ತಮಾಯ್ ವಿಶೇಷ್ಯತ್ತುಕ್ಕು ವರುಮ್ ಪಿತ್ತತ್ತಾಲ್ ವಿಶೇಷ್ಯತ್ತುಕ್ಕು ವೈಗುಣ್ಯಾದಿಗಳ್ ವಾರಾದೆನ್ರು (೧) "ಸ್ವತಶ್ರೀ

ವಿನ್ಯ ಮಸ್ಸಳ ವಿಗ್ರಹವೂ ಉಪಾಯ ಭಾವಕ್ಕೆ ಆವಶ್ಯಕವಾದರೂ ಅವುಗಳು ಹೇಗೆ ಉಪಾಯವಲ್ಲವೋ, ಹಾಗೆಯೇ ಲಕ್ಷ್ಮಿಯೂ ಉಪಾಯವಲ್ಲವು ಎಂದು ಹೇಳಬಹುದು. ಆದರೆ ಕಲ್ಯಾಣಗುಣಗಳೂ ವಿಗ್ರಹವೂ ಚೈತನ್ಯವುಳ್ಳವುಗಳಲ್ಲ ವಾದರಿಂದ ಸಙ್ಕಲ್ಪಿಸಲಾರವು. ಹಾಗಲ್ಲದೆ ಲಕ್ಷ್ಮಿಯು, ಸಙ್ಕಲ್ಪಿಸುವ ಶಕ್ತಿಯ ಮೂಲಕ ಉಪಾಯವಾಗಿರಲು ಅಭ್ಯಂತರವಿಲ್ಲವು. ಹೀಗೆ ವಿಶೇಷಣವಾಗಿರುವದ. ಉಪಾಯತ್ವದ ಐಕಾಂತ್ಯಕ್ಕೇನೂ ನ್ಯೂನತೆ ಇಲ್ಲವೆಂಬುದು ಮುಖ್ಯ ತಾತ್ಪರ್ಯವು ಇಬ್ಬರೂ ಇಂಗಿತಜ್ಞರಾಗಿ ಸತ್ಯಸಿಧಿಗಳಾಗಿ ಐಕಮತ್ಯದಿಂದ ವರ್ತಿಸುವದರಿಂದ ಪರಸ್ಪರ ವಿರೋಧ ತನ್ಮೂಲಕ ವ್ಯಾಘಾತ ಮುಂತಾದುದಕ್ಕೇನೂ ಕಾರಣವಿಲ್ಲವು ಆಶ್ರಯೋಚಿತ ಕಲ್ಯಾಣಗುಣಗಳಿಂದ ಸರ್ವೇಶ್ವರನಿಗೆ ಅತಿಶಯವುಂಟಾಗುವದರಿಂದ, ಉಪಾಯ ಭಾವದಲ್ಲಿ ವಿಶೇಷಣವಾಗಿ ಆವಶ್ಯಕವೆಂದು ಭಾವಿಸಬಹುದು. ಲಕ್ಷ್ಮಿಯಿಂದಾಗುವ ಅಂತಹ ಅತಿಶಯವೇನು? ಅದರಿಂದ ಸರ್ವೇಶ್ವರನಿಗೆ ಏನೊಂದೂ ನ್ಯೂನತೆ ಇಲ್ಲವೇ ಎಂದರೆ, ಸರ್ವೇಶ್ವರನಿಗೆ ಅತಿಶಯವೇ ವಿನಾ ನ್ಯೂನತೆ ಏನೂ ಇಲ್ಲವೆಂದು ಹೇಳುತ್ತಾರೆ. ಹಾಗೆ ಲಕ್ಷ್ಮಿಯಿಂದ ಅತಿಶಯ ಉಂಟಾಯಿತು ಎಂದರೆ ಸರ್ವೇಶ್ವರಾತಿಶಯವು ಲಕ್ಷ್ಮಿಗೆ ಅಧೀನವಾದುದೆಂಬ ದೋಷವು ಪ್ರಾಪ್ತವಾಗುವದಿಲ್ಲವೇ? ಎಂದರೆ ಅಂತಹ ನ್ಯೂನತೆ ದೋಷಗಳಿಗೆ ಕಾರಣವಿಲ್ಲವೆಂದು ಸದೃಷ್ಟಾಂತವಾಗಿ ನಮಗೂ, ಪ್ರತಿಕಕ್ಷಿಗಳಿಗೂ, ಸಂಬಾಧಿಮತರಾದ ಶ್ರೀ ಪರಾಶರ ಭಟ್ಟರ ದಿವ್ಯ ಸೂಕ್ತಿಯ ಮೂಲಕ ಉಪಪಾದಿಸುತ್ತಾರೆ.

ಲಕ್ಷ್ಮೀ ಸಂಬಂಧದಿಂದ ಸರ್ವೇಶ್ವರನಿಗೆ ವೈಗುಣ್ಯವೆಂಬ ವಾದ ನಿರಾಸವು

ವಿಶೇಷಣ ಪ್ರಯುಕ್ತಮಾಯ್ - ವಿಶೇಷಣದ ಮೂಲಕವಾಗಿ, ವಿಶೇಷ್ಯಕ್ಕೆ, ವರುಮ್ ಪಿತ್ತತ್ತಾಲ್-ಬರುವ ಅತಿಶಯದಿಂದ, ವಿಶೇಷ್ಯತ್ತುಕ್ಕು-ವಿಶೇಷ್ಯಕ್ಕೆ ವೈಗುಣ್ಯಾದಿಗಳ್ ವಾರಾದೆನ್ರು - ದೋಷವೇ ಮೊದಲಾದವುಗಳು ಬರುವದಿಲ್ಲವೆಂದ, "ಸತ್ಯಶ್ರೀಸ್ತ್ವಂ ವಿಷ್ಣೋಃ" ಎಂಬ ಶ್ರೀ ಪರಾಶರ

(೧) ಶ್ರೀಗುಣ. ೩೧.

ಸ್ತ್ವಂ ವಿಷ್ಣೋಸ್ಸ್ವಮಸಿ ತತ ಏವೈಷ ಭಗವಾ್ ತ್ವದಾಯತ್ತರ್ದ್ಧಿತ್ವೇಪ್ಯಭವದ ಪರಾಧೀನ ವಿಭವಃ । ಸ್ವಯಾದೀಪ್ತ್ಯಾ ರತ್ನಂ ಭವದಪಿ ಮಹಾರ್ಘಂ ನವಿಗುಣಂ ನ ಕುಂಠಸ್ವಾತಂತ್ರ್ಯಂ ಭವತಿಚ ನ ಚಾನ್ಯಾಹಿ ತಗುಣನ್ । " ಎಂಬ ಗುರುಶ್ಲೋಕತ್ತಿಲೆ ನಿರ್ಣಯಿಕ್ಕಪಟ್ಟದು.

ಭಟ್ಟರ ಶ್ರೀ ಗುಣ ರತ್ನಕೋಶದ ಶ್ಲೋಕದಲ್ಲಿ, ನಿರ್ಣಯಿಕ್ಕಪಟ್ಟದು - ನಿರ್ಣಯಿಸಲ್ಪಟ್ಟಿತು. ಆ ಶ್ಲೋಕಾರ್ಥವೇನೆಂದರೆ :—ಹೇ ಶ್ರೀಃ ಓ ಲಕ್ಷ್ಮಿಯೇ, ತ್ವಂ - ನೀನು, ಸ್ವತಃ - ತಾನಾಗಿಯೇ, ವಿಷ್ಣೋಃ - ಶ್ರೀ ಮಹಾವಿಷ್ಣುವಿನ ಸ್ವಂ – ಶೇಷಭೂತಳಾದ ವಸ್ತು, ಅಸಿ - ಆಗಿದ್ದೀಯೇ, ನಾವುಗಳೆಲ್ಲಾ ಸರ್ವೇಶ್ವರ ಸಙ್ಕಲ್ಪ ಮೂಲಕ ದಾಸಭೂತರಾಗಿದ್ದೇವೆ ; ಲಕ್ಷ್ಮಿಯಾದರೋ ಹಾಗಲ್ಲದೆ ತಾನೇ ದಾಸಭೂತಳಾಗಿದ್ದಾಳೆಂಬ ಭಾವವು ತತ ಏವ - ಆ ಕಾರಣದಿಂದಲೇ, ಏಷಭಗವಾ್ - ಈ ಹೇಯ ಪ್ರತ್ಯನೀಕನಾದ ಕಲ್ಯಾಣಗುಣಾಕರನು, ತ್ವದಾಯತ್ತರ್ದ್ಧಿತ್ವೇಪಿ - ನಿನಗೆ ಅಧೀನವಾದ ಸರ್ವ ಸಂಪತ್ಸಮೃದ್ಧಿಯನ್ನು ಹೊಂದಿದ್ದರೂ ಕೂಡ, ಅಪರಾಧೀನ ವಿಭವಃ - ನಿನ್ನ ಪತಿಯು ಇತರರಿಗೆ ಎಂದರೆ ನಿನಗಧೀನವಲ್ಲದ ವಿಭವವುಳ್ಳವನು, ಅಭವತ್–ಆದನು, ಸರ್ವೇಶ್ವರನ ಸ್ವರೂಪ ಸ್ವಭಾವಾದಿಗಳೇ ಪರಮೋತ್ಕೃಷ್ಟವಾದವು ; ಲಕ್ಷ್ಮೀ ವಿಶಿಷ್ಟತೆಯಿಂದ ಅವುಗಳಿಗೆ ಇನ್ನೂ ಅತಿಶಯವು, (೧) "ಅಪ್ರಮೇಯಂ ಹಿ ತತ್ತೇಜೋಯಸ್ಯಸಾ ಜನಕಾತ್ಮಜಾ" "ಯಾವ ಮಹನೀಯನಿಗೆ ಆ ಜನಕ ನಂದನಿಯು ಪತ್ನಿಯೋ, ಅಂತಹ ಶ್ರೀರಾಮನ ತೇಜಸ್ಸು ನಿರುಪಮವಾದುದು" ಎಂಬ ಮಾರೀಚೋಕ್ತಿಯ ಹಾಗೆ ಪರಮ ಶ್ಲಾಘ್ಯವಾದುದು ಆಯಿತು. ಇದರಿಂದ ಸರ್ವೇಶ್ವರನ ವೈಭವವು ಲಕ್ಷ್ಮಿಗೆ ಅಧೀನವಾಯಿತೆಂಬಭಿಪ್ರಾಯವಲ್ಲವು. ಇದನ್ನು ಒಂದು ದೃಷ್ಟಾಂತ ಮೂಲಕ ಸಮರ್ಥನೆ ಮಾಡುತ್ತಾರೆ. ರತ್ನಂ - ರತ್ನವು. ಸ್ವಯಾ ದೀಪ್ತ್ಯಾ - ತನಗೆ ವಿಶೇಷಣವಾಗಿರುವ ತನ್ನ ಕಾಂತಿಯಿಂದ, ಮಹಾರ್ಘಂ - ತುಂಬಾ ಬೆಲೆಯುಳ್ಳದ್ದು ಮತ್ತು ಪ್ರಾಶಸ್ತ್ಯ ಉಳ್ಳದುದು, ಭವದಪಿ-ಆದರೂನೂ, ನವಿಗುಣಂ ಭವತಿ - ಅದು ಆ ರತ್ನಕ್ಕೆ ವಿಗುಣವಲ್ಲದುದು ಎಂದರೆ ಅದರ ಶ್ಲಾಘ್ಯತೆಗೆ ಏನೊಂದೂ ನ್ಯೂನತೆಯಾಗುವದಲ್ಲವು ; ನ ಕುಂಠ ಸ್ವಾತಂತ್ರ್ಯಂ - ಪ್ರತಿಹತ ಸ್ವಾತಂತ್ರ್ಯವುಳ್ಳದೂ ಆಗುವದಿಲ್ಲವು, ನ ಚಾನ್ಯಾಹಿತ ಗುಣಂ ಭವತಿ - ಇನ್ನೊಂದಿರುಂಟಾದ ಗುಣವುಳ್ಳದುದೂ ಆಗುವದಿಲ್ಲವು. ಯದ್ಯಪಿ ರತ್ನಕ್ಕೆ

---

(೧) ರಾಮಾ.

ಏವಂ ಲೋಕ ಪಿತರೌ ವಿಶೇಷಣ ವಿಶೇಷ್ಯಭಾವೇನ ಪರಸ್ಪರಾತಿಶಯಾವಹೌ.

ವಿಶೇಷಣತ್ತಾಲ್ ವಿಶೇಷ್ಯತ್ತುಕ್ಕು ವರುಮ್ ಅತಿಶಯಮ್ ಪೋಲೆ ವಿಶೇಷ್ಯತ್ತುಕ್ಕು ಸ್ವರೂಪಾನುಬಂಧಿಯಾನ ಅತಿಶಯಮುಮ್ (೧) "ಅನನ್ಯಾ ರಾಘವೇಣಾಹಂ ಭಾಸ್ಕರೇಣ ಪ್ರಭಾಯಥಾ" ಎನ್ಗಿರ ದೃಷ್ಟಾನ್ತ

ಅದರ ಕಾಂತಿಯ ಮೂಲಕ ಬೆಲೆಯೂ ಪ್ರಾಶಸ್ತ್ಯವೂ ಆದರೂ, ರತ್ನವು ಅಮೋಘವಾದುದು, ಎಂದು ಹೇಳುತ್ತಾರೆಯೇ ವಿನಾ ಬೇರೇ ಅಲ್ಲವು, ಇದರಿಂದ ಅದರ ಶ್ಲಾಘ್ಯತೆಗೆ ಏನೂ ಕುಂದಕವಿಲ್ಲವು, ಅದು ಆದರ ಕಾಂತಿಗೆ ಅಧೀನವಾದುದೆಂದು ಯಾರೂ ಹೇಳುವದಿಲ್ಲವು ರತ್ನಕ್ಕೆ ನೈಜವಾದ ಗುಣವಲ್ಲವು, ಬೇರೆ ಇನ್ನೊಂದರಿಂದುಂಟಾದುದೆಂದು ಯಾರೂ ಹೇಳುವದಿಲ್ಲವು. ರತ್ನವು ತನ್ನ ಪ್ರಕೃತ್ಯಾ ನಿಷ್ಕಲ್ಮಷವಾದ ಸ್ವರೂಪವನ್ನು ಹೊಂದಿಲ್ಲದೆ ಇದ್ದರೆ ಬರೀ ಕಾಂತಿಯಿಂದಲೇ ಅದಕ್ಕೆ ಶ್ಲಾಘ್ಯತೆಯು ಬಾರದು. ಆದುದರಿಂದ ವಿಶೇಷ್ಯದ ಸ್ವರೂಪವೂ ಅಮೋಘವಾಗಿ ಅತಿಶಯವಾಗಿ, ವಿಶೇಷಣದಿಂದಲೂ ಅತಿಶಯವುಂಟಾದರೆ ಪರಮಶ್ಲಾಘ್ಯವು. ಸರ್ವೇಶ್ವರನೇ ತನ್ನ ಸ್ವರೂಪಗುಣ ವಿಭೂತ್ಯೈಶ್ವರ್ಯಾದಿಗಳಿಂದ ಪರಮಶ್ಲಾಘ್ಯನು. ಲಕ್ಷ್ಮಿಯೂ ಅನುರೂಪ ಸ್ವರೂಪ ರೂಪಗುಣ ವಿಭೂತ್ಯೈಶ್ವರ್ಯಾದಿಗಳುಳ್ಳವಳು ಆದುದರಿಂದ ಹೀಗೆ ವಿಶೇಷಣವಾದ ಲಕ್ಷ್ಮಿಯಿಂದ ಶ್ರೀಹರಿಗೆ ಯಾವದೊಂದು ವೈಗುಣ್ಯವಿಲ್ಲವೆಂದು ಹೇಳಿ ಮುಂದೆ ವಿಶೇಷಣ ವಿಶೇಷ್ಯಗಳಿಗೆ ಇಂತಹ ನಿತ್ಯಯೋಗದಿಂದ ಪರಸ್ಪರಾತಿಶಯಕ್ಕೆ ಕಾರಣವೆಂದು ಉಪದೇಶಿಸುತ್ತಾರೆ.

ಹೀಗೆ ಲೋಕ ದಂಪತಿಗಳು ವಿಶೇಷಣ ವಿಶೇಷ್ಯ ಭಾವದಿಂದ ಪರಸ್ಪರಾತಿಶಯಗಳನ್ನುಂಟುಮಾಡುವವರು.

ವಿಶೇಷಣತ್ತಾಲ್ ವಿಶೇಷ್ಯತ್ತುಕ್ಕು ವರುಮ್ ಅತಿಶಯಂ ಪೋಲೆ - ವಿಶೇಷಣದಿಂದ ವಿಶೇಷ್ಯಕ್ಕುಂಟಾಗುವ ಅತಿಶಯದ ಹಾಗೆಯೇ, ವಿಶೇಷ್ಯತ್ತುಕ್ಕು ವಿಶೇಷ್ಯಕ್ಕೆ, ಸ್ವರೂಪಾನುಬಂಧಿಯಾನ ಆ ವಿಶೇಷ್ಯದ ಸ್ವರೂಪಕ್ಕೆ ಸೇರಿದ, ಅತಿಶಯವನ್ನು, ಭಾಸ್ಕರೇಣ - ಜ್ಯೋತಿಸ್ಸ್ವರೂಪನಾದ ಸೂರ್ಯನಿಂದ, ಪ್ರಭಾಯಥಾ - ಪ್ರಭೆಯು ಹೇಗೆ ಬೇರೆಯಾಗಿರಲಾರದೋ, ಹಾಗೆಯೇ ಅಹಂ-ನಾನೂ

---

(೧) ರಾಮಾ. ಸುಂದರ. ೨೧.೧೫,

ತ್ತಿಲೆ ಕಾಣಲಾಮ್. ಭಾಸ್ಕರನುಕ್ಕುಮ್ ಪ್ರಭೈಕ್ಕುಮ್ ಸ್ವತಸಿದ್ಧಮಾನ ತೇಜಸ್ತ್ವಮ್ಪೋಲೆ ಇರುವರ್ಕ್ಕುಮ್ (೧) "ಅನನ್ಯಾಧೀನ ಕಲ್ಯಾಣಂ" ಎಙ್ಗಿರ ಪಡಿಯೇ ಸ್ವಭಾವ ಸಿದ್ಧ ಕಲ್ಯಾಣ ತ್ತೈಯಾಲೇ (೨) "ಅಪ್ರ

ಕೂಡ, ರಾಘವೇಣ - ರಘುಕುಲದಿನಮಣಿಯಾದ ನನ್ನ ಪತಿಯಿಂದ ಅನನ್ಯಾ ಬೇರೆಯಾಗಿರುವಳಲ್ಲವು." ಎಙ್ಗಿರ ದೃಷ್ಟಾಂತತ್ತಿಲೆ ಎನ್ನುವ ಸೀತಾವಾಕ್ಯದ ದೃಷ್ಟಾಂತದಲ್ಲಿ, ಕಾಣಲಾಮ್ - ತಿಳಿಯಬಹುದು. ನಿತ್ಯಯೋಗವನ್ನು ತನ್ನ ಪತಿಯೊಂದಿಗೆ ಹೊಂದಿರುವದರಿಂದಲೇ ತನಗೆ ಅತಿಶಯವೆಂದು ಸೀತೆ ಸಹ ಹೇಳಿಕೊಂಡಿರುತ್ತಾಳೆ. ಈಗ ಪತಿಯಿಂದಗಲಿದ್ದಾಳಲ್ಲಾ ನಿತ್ಯಯೋಗವೆಲ್ಲಿಯಿದೆ ಎಂದರೆ ಈ ವಿಶ್ಲೇಷೆಯು ಲೋಕವಿಡಂಬನಾರ್ಥವಾಗಿ ರಾವಣ ವಧೆಗಾಗಿ ಆರೋಪಿತವು. ಇನ್ನೊಂದು ಕಡೆಯಲ್ಲಿಯೂ "ಯಸ್ತ್ವಯಾ ಸಹ ಸ ಸ್ವರ್ಗೋ ನಿರಯೋಯಸ್ತ್ವಯಾವಿನಾ" (ರಾಮಾ. ಅಯೋಧ್ಯಾ ೩೦-೧೮) ಸೀತೆಯು "ಓ ಪತಿಯೇ ನಿನ್ನೊಂದಿಗಿರುವದೇ ನನಗೆ ಸ್ವರ್ಗವು, ನಿನ್ನನ್ನಗಲಿರುವದೇ ನರಕವು" ಎಂದು ಹೇಳಿಕೊಂಡಿರುತ್ತಾಳೆ. ಶ್ರೀರಾಮನ ಸಂಶ್ಲೇಷವು ಸೀತೆಗೆ ಹೇಗೆ ಅತಿಶಯಾವಹವೋ, ಹಾಗೆಯೇ ಸೀತೆಯ ಸಂಬಂಧವೂ ಶ್ರೀರಾಮನಿಗೂ ಅತಿಶಯಾವಹವಾದುದು ಎಂಬ ಭಾವವು. ಹೇಗೆಂದರೆ ಪ್ರಭೆ ಇಲ್ಲದೆ ಭಾಸ್ಕರನು ಹೇಗೆ ಶೋಭಿಸುವದಿಲ್ಲವೋ, ಹಾಗೆಯೇ ಸೀತೆಯಿಲ್ಲದೆ ಶ್ರೀರಾಮನೂ ಶೋಭಿಸನು ಎಂಬುದು ಇಲ್ಲಿಯೂ ತೋರಿಬರುತ್ತದೆ. ಹೀಗೆ ಇವರುಗಳ ನಿತ್ಯಯೋಗವು ಪರಸ್ಪರಾತಿಶಯಕ್ಕೆ ಕಾರಣವೆಂದು ಮುಂದೆ ಭಾಸ್ಕರ ದೃಷ್ಟಾಂತದಿಂದಲೇ ಉಪಪಾದಿಸುತ್ತಾರೆ.

ಭಾಸ್ಕರನುಕ್ಕುಮ್ - ಸೂರ್ಯನಿಗೂ, ಪ್ರಭೈಕ್ಕುಮ್ - ಆತನ ಪ್ರಭೆಗೂ ಎಂದರೆ ಕಿರಣಗಳಿಗೂ, ಸ್ವತಸಿದ್ಧಮಾನ - ಸ್ವರೂಪತಃ ಉಂಟಾಗಿರುವ, ತೇಜಸ್ತ್ವಮ್ಪೋಲೆ - ತೇಜೋರೂಪದ ಹಾಗೆ, ಇರುವರ್ಕ್ಕುಮ್ - ಲಕ್ಷ್ಮೀನಾರಾಯಣರಿಬ್ಬರಿಗೂ, "ಅನನ್ಯಾಧೀನ ಕಲ್ಯಾಣಂ" ಎಂದರೆ "ಇನ್ನಾರಿಗೂ ಅಧೀನವಾಗದೇ ಇರುವ ಐಶ್ವರ್ಯವುಳ್ಳ, ಇದು ಶ್ಲೋಕದಲ್ಲಿ ದ್ವಂದ್ವಂ ಎಂದು ಮುಂದೆ ಇದೆ, ಅದಕ್ಕೆ ವಿಶೇಷಣವು, ಅಂತಹ ದಂಪತಿಗಳನ್ನು ವಂದಿಸುವೆನು." ಎಙ್ಗಿರ ಪಡಿಯೇ - ಎಂದು ಹೇಳಿರುವ ಹಾಗೆ. ಸ್ವಭಾವಸಿದ್ಧ ಕಲ್ಯಾಣತ್ತೈಯಾಲೆ - ಸ್ವರೂಪತಃ ಉಂಟಾದ ಕಲ್ಯಾಣತೆಯಿಂದ, ಮುಂದೆ ಅನೇಕ ಆಳ್ವಾರಾಚಾರ್ಯ

---

(೧) ಲಕ್ಷ್ಮೀ ಕಲ್ಯಾಣ. ೭. ೭. (೨) ರಾಮಾ. ಅರಣ್ಯ. ೩೭,೧೮.

ಮೇಯಂ - ಪ್ರಮೇಯಂ - ಅಪ್ರಮೇಯ .

ಮೇಯಂ ಹಿ ತತ್ತೇಜೋ ಯಸ್ಯ ಸಾ ಜನಕಾತ್ಮಜಾ" ಎನ್ನುವ್, (೧) ತವ ಶ್ರಿಯಾ" ಎನ್ನುವ್,

---

ದಿವ್ಯಸೂಕ್ತಿಗಳಿಂದ ಸಮರ್ಥಿಸಿ, ವಿಶೇಷ್ಯ ವಿಶೇಷಣಗಳು ಈ ಸಂದರ್ಭದಲ್ಲಿ ಪರಸ್ಪರಾತಿಶಯಾವಹಗಳೆಂದು ಹೇಳುತ್ತಾರೆ. "ಅನನ್ಯಾಧೀನ ಕಲ್ಯಾಣಂ" ಎಂಬುದು. ಶ್ರೀ ಪರಾಶರ ಭಟ್ಟರ ಲಕ್ಷ್ಮೀ ಕಲ್ಯಾಣ ಶ್ಲೋಕವು ಪೂರ್ವಶ್ಲೋಕವು ಯಾವುದೆಂದರೆ:—

ಅನನ್ಯಾಧೀನ ಕಲ್ಯಾಣ ಮನ್ಯ ಮಂಗಳ ಕಾರಣಮ್ ।
ಜಗನ್ನಿದಾನ ಮದ್ವಂದ್ವಂ ದ್ವಂದ್ವಂ ವಂದಾ ಮಹೇ ಮಹಃ ॥

"ಇವರ ಐಶ್ವರ್ಯಾದಿಗಳು ಯಾರ ಅಧೀನವಾದವೂ ಅಲ್ಲವು. ಸ್ವರೂಪತಃ ಸ್ವತಸ್ಸಿದ್ಧವಾದವು. ಇತರರ ಶ್ರೇಯಸ್ಸಿಗೆ ಕಾರಣವಾಗಿ ಉಳ್ಳವರು, ಇಬ್ಬರೂ ಜಗನ್ನಿದಾನಂ - ಜಗತ್ತಿಗೆ ಸೃಷ್ಟಿ ಕಾರಣಭೂತರು, ಅದ್ವಂದ್ವಂ - ಅವರಿಗೆ ಸಮಾನರಿಲ್ಲದೇ ಇರುವವರು, ದ್ವಂದ್ವಂ-ದಂಪತಿಗಳಾಗಿ ಯಾವಾಗಲೂ ಒಟ್ಟಿಗೇ ಇರುವವರು, ಮಹಃ - ಇಂತಹ ತೇಜೋಮಯರನ್ನು, ವಂದಾಮಹೇ - ನಮಸ್ಕರಿಸುತ್ತೇನೆ" ಎಂಬುದು ಈ ಶ್ಲೋಕಾರ್ಥವು. ಇಲ್ಲಿ ದ್ವಂದ್ವಂ ಎಂಬ ಪದ ಪ್ರಯೋಗದಿಂದ ಗೀತೆಯಲ್ಲಿ (೧೦-೩) "ದ್ವಂದ್ವಸ್ಸಾಮಾಸಿಕಸ್ಯಚ" ಎಂಬಲ್ಲಿ ಹೇಳಿರುವ ಉಭಯ ಪದಗಳ ಪ್ರಾಧಾನ್ಯತೆಯಿಂದ ಪರಸ್ಪರಾತಿಶಯವೆಂಬ ಭಾವವು ಸೂಚಿತವು.

ಯಸ್ಯ - ಯಾವ ಪರಾಕ್ರಮಿಯಾಗಿ ಪ್ರಸಿದ್ಧನಾದ ರಾಮನಿಗೆ, ಜನಕಾತ್ಮಜಾ - ಕರ್ಮಯೋಗನಿಷ್ಠನಾದ ಜನಕರಾಜನಿಗೆ ಮಗಳಾದ ಸೀತೆಯು ಪತ್ನಿಯೋ, ತತ್ತೇಜಃ - ಅಂತಹ ತೇಜೋರೂಪನಾದ ತಚ್ಛಬ್ದವಾಚ್ಯನಾದ ಈ ಶ್ರೀರಾಮರೂಪೀ ಪರತತ್ತ್ವವು, ಅಪ್ರಮೇಯಂ ಹಿ-ಅಪರಿಚ್ಛೇದ್ಯವಾದದ್ದೋ, "ನ ತ್ವಂ ಸಮರ್ಥ ಸ್ತಾಂ ಹರ್ತುಂ ರಾಮಚಾಪಾಶ್ರಯಾಂ ವನೇ" ಎಂಬುದು ಉತ್ತರಾರ್ಧವು. ರಾವಣನನ್ನು ಕುರಿತ ಮಾರೀಚ ವಾಕ್ಯವು, ತಾಂ - ಅಂತಹ ಪ್ರಸಿದ್ಧಳಾದ. ವನೇ ರಾಮಚಾಪಾಶ್ರಯಾಂ - ವನದಲ್ಲಿ ಶ್ರೀರಾಮನ ಬಾಣವನ್ನು ಆಶ್ರಯಿಸಿರುವವಳನ್ನು, ಅಂತಹ ಶ್ರೀರಾಮನನ್ನು ಆಶ್ರಯಿಸಿರುವವಳನ್ನು ಎಂಬ ಭಾವವು, ಹರ್ತುಂ - ಅಪಹರಿಸಲು, ನತ್ವಂ ಸಮರ್ಥಃ-ನೀನು ಸಮರ್ಥನಾಗಲಾರೆ. ಒಂದು ವೇಳೆ ಅಪಹರಿಸುವನಾದರೆ ರಾಮಬಾಣದಿಂದ ದಗ್ಧನಾಗುವೆ; ಅಥವಾ ಜನಕಾತ್ಮಜೆಯಾದುದರಿಂದ ನೀನು ಅಪಹರಿಸಿದುದು ಆಕೆಯ

---

(೧) ಆಳ. ಸ್ತೋತ್ರ. ೩೮.

ತಂದೆಗೆ ತಿಳಿದರೂ ಆ ಜನಕನು ಮಹಾಕರ್ಮಯೋಗಿಯಾದುದರಿಂದ ಆತನ ಶಾಪವು ನಿನ್ನನ್ನು ದಹಿಸೀತು ಎಂಬ ಭಾವವು. ಈ ಮಾರೀಚೋಕ್ತಿಯಲ್ಲಿ ಸೀತೆಯ ಮಹಿಮೆಯಿಂದ ಶ್ರೀರಾಮನಿಗೆ ಉತ್ಕರ್ಷವು ಉಪಪಾದಿಸಲ್ಪಟ್ಟಿತು. ರಾಮ ಚಾಪಾಶ್ರಯಾಂ - ಎಂಬುದರಿಂದ ರಾಮಾಶ್ರಯದಿಂದ ಸೀತೆಗೆ ಉತ್ಕರ್ಷವೆಂಬುದೂ ತೋರಿಬರುತ್ತದೆ.

“ತವಶ್ರಿಯಾ” ಎನ್ನುವದ್-“ನಿನ್ನ ಲಕ್ಷ್ಮಿಯೊಡನೆ” ಎಂದೂ, ಇಲ್ಲಿ ನಿನ್ನ ಲಕ್ಷ್ಮೀ ಎಂಬುದರಿಂದ ನಿನಗೆ ಅತಿಶಯವನ್ನುಂಟುಮಾಡುವ ಲಕ್ಷ್ಮಿಯೊಡನೆ ಎಂಬರ್ಥವಾಗಲಿ ಆಗಬಹುದು. ಅಥವಾ ಸರ್ವೇಶ್ವರನೊಂದಿಗೆ ನಿತ್ಯಯೋಗವನ್ನು ಹೊಂದಿ ತನ್ಮೂಲಕ ಅತಿಶಯ ಹೊಂದಿದ ನಿನ್ನ ಲಕ್ಷ್ಮಿಯೊಡನೆ ಎಂಬರ್ಥವಾಗಲಿ ಆಗಬಹುದು. “ಸ್ವವೈಶ್ವರೂಪ್ಯೇಣ ಸದಾನುಭೂತಯಾ ಪ್ಯಪೂರ್ವವದ್ವಿಸ್ಮಯ ಮಾದಧಾನಯಾ । ಗುಣೇನ ರೂಪೇಣ ವಿಲಾಸಚೇಷ್ಟಿತೈಸ್ಸದಾ ತವೈವೋಚಿತಯಾ ತವಶ್ರಿಯಾ ॥” ಎಂಬುದು ಪೂರಾ ಶ್ಲೋಕವು. ಸ್ವವೈಶ್ವರೂಪ್ಯೇಣ ತಾನೂ ಸರ್ವೇಶ್ವರನ ಹಾಗೆಯೇ ಎಲ್ಲ ವಸ್ತುಗಳಿಗೂ ಶರೀರವಾಗಿ ಇವಕ್ಕೆಲ್ಲಾ ಆತ್ಮಾವಾಗಿರುವ, ಸದಾನುಭೂತಯಾ - ಸರ್ವೇಶ್ವರನ ಹಾಗೆ ತಾನೂ ಎಲ್ಲರನ್ನೂ ಸದಾ ಸಾಕ್ಷಾತ್ಕರಿಸಿರುವ ಅಥವಾ ಹೀಗೆ ಸ್ವರೂಪಸ್ವಭಾವಾದಿ ಸಾಮ್ಯಕಾರದಿಂದಲೂ ಸರ್ವೇಶ್ವರನೊಂದಿಗೆ ನಿತ್ಯಯೋಗವನ್ನು ಹೊಂದಿರುವುದರಿಂದ ವಿಶ್ವಾನುಭವವುಳ್ಳ, ಅಪೂರ್ವವತ್ - ಹಿಂದೆ ಎಂದೂ ನೋಡದೇ ಇರುವ ಹಾಗೆ ವಿಸ್ಮಯಂ - ಆಶ್ಚರ್ಯವನ್ನು, ಆದಧಾನಯಾ - ಬೀರುತ್ತಿರುವ, ಉಂಟು ಮಾಡುತ್ತಿರುವ ಗುಣೇನ - ಭಗವಂತನಿಗೆ ಅಭಿಮತವಾದ ಜ್ಞಾನಕಾರುಣ್ಯಾದಿ ಕಲ್ಯಾಣಗುಣಗಳಿಂದಲೂ, ರೂಪೇಣ - “ರಾಘವತ್ವೇ ಭವೇತ್ಸೀತಾ ರುಕ್ಮಿಣೀ ಕೃಷ್ಣ ಜನ್ಮನಿ” ಎಂದು ಶ್ರೀ ಪರಾಶರರು ಹೇಳಿರುವ ಹಾಗೆ, ಆತನಿಗೆ ಅಭಿಮತವಾದ ದಿವ್ಯಮಂಗಳ ವಿಗ್ರಹದಿಂದಲೂ (ಇವೆಲ್ಲಾ ಜಾತ್ಯೇಕವಚನಗಳು). ವಿಲಾಸ ಚೇಷ್ಟಿತೈಃ - “ದೇವತ್ವೇ ದೇವದೇಹೇಯಂ ಮನುಷ್ಯತ್ವೇ ಚ ಮಾನುಷೀ” ಎಂದು ಹೇಳಿರುವಹಾಗೆ, ಆತನಿಗೆ ಅಭಿಮತವಾದ ಲೀಲಾ ವಿಭವಗಳಿಂದಲೂ ಆಶ್ರಿತ ಸಂರಕ್ಷಣಾರ್ಥವಾದ ಅವತಾರ ಮೊದಲಾದ ದಿವ್ಯವ್ಯಾಪಾರಗಳಿಂದಲೂ, ತವೈವೋಚಿತಯಾ-“ತುಲ್ಯ ಶೀಲವಯೋವೃತ್ತಾಂ ತುಲ್ಯಾಭಿಲಕ್ಷಣಾಂ ರಾಘವೋಽರ್ಹತಿ ವೈದೇಹೀಂ ತಂಚೇಯ ಮಸಿತೇಕ್ಷಣಾ” ಎಂದು ಹೇಳಿರುವ ಹಾಗೆ, ಭಗವಂತನಾದ ನಿನಗೆ ಮಾತ್ರವೇ ಉಚಿತಳಾದ, ತವಶ್ರಿಯಾ - ನಿನ್ನ ಲಕ್ಷ್ಮಿಯೊಡನೆ, ಸಹಾಸೀನಂ - ಯಾವಾಗಲೂ ಬಿಜಮಾಡಿಸಿ ಎಂದು ಮುಂದಿನ ಶ್ಲೋಕದಲ್ಲಿರುವವರೊಂದಿಗೆ ಅನ್ವಯವು.

(೧) "ಉನ್ತಿರು" ಎನ್ಱುಮ್,

(೧) "ಉನ್ತಿರು" ಎನ್ಱುಮ್ - ಈ ಪಾಶುರವು ಯಾವುದೆಂದರೆ:—

ಮಾಯಂಶೆಯ್ಯೇಲೆನ್ನೈಯುನ್ತಿರು ಮಾರ್ವತ್ತು ಮಾಲೈ ನಙ್ಗೈ ।
ವಾಶಂಶೆಯ್ ಪೂಙ್ಗುೞಲಾಳ್ ತಿರುವಾಣೈ ನಿನ್ನಾಣೈ ಕಣ್ಡಾಯ್ ।
ನೇಶಂಶೆಯ್ದು ನ್ನೊಡೆನ್ನೈ ಯುಯಿರ್ವೇಱಿನ್ಱಿಯೊನ್ಱಾಗವೇ ।
ಕೂಶಂಶೆಯ್ಯಾದು ಕೊಣ್ಡಾಯೆನ್ನೈ ಕೂವಿಕ್ಕೊಳ್ಳಾಯ್ ವನ್ದನ್ದೋ ॥

ಎನ್ನೈ ಮಾಯಂಶೆಯ್ಯೇಲ್ - ನಿನ್ನನ್ನು ಕ್ಷಣಕಾಲವೂ ಬಿಟ್ಟಿರಲಾರದ ನನಗೆ ಇನ್ನಾದರೂ ವಂಚನೆಯನ್ನು ಮಾಡಬೇಡ, ಉನ್ ತಿರು - ನೀನೇನೋ ಸರ್ವರಿಗೂ ಸಮಾಶ್ರಯಣೀಯನಾದರೂ ಪುರುಷಕಾರಭೂತಳಾದವಳು ಲಕ್ಷ್ಮಿಯು. ಶ್ರೀ ಪರಾಶರರು ವಿಷ್ಣೋಃ ಶ್ರೀಃ ವಿಷ್ಣುವಿಗೂ ಸಂಪತ್ತಾದವಳೆಂದು ಹೇಳಿರುತ್ತಾರೆ; ಅನ್ಯೋನ್ಯ ವಿಶೇಷಣ ವಿಶೇಷ್ಯಗಳಾಗಿ ಪರಸ್ಪರಾತಿಶಯಗಳನ್ನುಂಟು ಮಾಡುವರೆಂಬ ಭಾವವು, ಮತ್ತು, ಮಾರ್ವತ್ತು ಮಾಲೈ-ನಿನ್ನ ವಕ್ಷಸ್ಥಳಕ್ಕೆ ದಿವ್ಯ ಕಾಂಚನಮಾಲಾರೂಪಳಾಗಿ ವಕ್ಷಸ್ಥಳಕ್ಕೆ ಅಲಂಕಾರಭೂತಳು, ದಿವ್ಯ ವಕ್ಷಸ್ಥಳವೂ ಆಕೆಗೆ ಅಲಂಕಾರವು. ಇಂತಹ, ನಙ್ಗೈ ವಾಶಮ್ ಶೆಯ್-ನಿನ್ನ ಹಾಗೆಯೇ ಸಕಲ ಕಲ್ಯಾಣಗುಣಪರಿಪೂರ್ಣಳಾಗಿ "ಸರ್ವಗಂಧ ಸ್ಸರ್ವರಸಃ" ಎಂದು ಹೇಳಿರುವ ಹಾಗೆ ತಾನೇ ಸರ್ವ ಪರಿಮಳತ್ವವನ್ನು ಉಂಟುಮಾಡುವಳಾದ, ಪೂಙ್ಗುೞಲಾಳ್-ಹೂವಿನಿಂದ ಅಲಂಕರಿಸಲ್ಪಟ್ಟ ಸುಂದರವಾದ ಕುರುಳುಗಳನ್ನು ಹೊಂದಿರುವ ತಿರುವಾಣೈ-ಭೋಗ್ಯಭೂತಳಾದ ಲಕ್ಷ್ಮಿಯ ಮೇಲೆ ಆಣೆಯು. ತನ್ನ ಕೆಲಸ ಮಾಡಿಕೊಟ್ಟಿಲ್ಲವೆ ಶೀರನೆಂಬ ನಿರ್ಬಂಧದಲ್ಲಿ ಆಣೆ ಇಡುವದುಂಟು ; ಹಾಗೆಯೇ ನಿನ್ನಾಣೆ ಕಣ್ಡಾಯ್-ನಿನ್ನ ಮೇಲೆಯೂ ಆಣೆಯುಂಟು. ಹೀಗೆ ಹೇಳುವದರಿಂದ ಇಬ್ಬರೂ ಉಪಾಯಭೂತರೆಂದು ಹೇಳಲ್ಪಟ್ಟಿತು. ನೇಶಮ್ ಶೆಯ್ದು - ನಿರ್ಹೇತುಕ ಕೃಪೆಯಿಂದ ನಮ್ಮೊಂದಿಗೆ ಸ್ನೇಹವನ್ನು ಬೆಳಸಿ, ಉನ್ನೊಡು ಎನ್ನೈ - ಪರತ್ವಾದಿ ಸಮಸ್ತ ಕಲ್ಯಾಣಗುಣಗಳಿಂದ ವಿರಾಜಿಸುವ ನಿನ್ನೊಂದಿಗೆ ತುಂಬಾ ನಿಕೃಷ್ಟನಾದ ನನ್ನನ್ನು, ಉಯಿರ್ ವೇಱಿನ್ಱಿ - ಆತ್ಮಭೇದವು ತೋರದಹಾಗೆ, ಒನ್ಱಾಗವೇ - ಅಪೃಥಕ್ಸಿದ್ಧ ವಿಶೇಷಣವಾಗಿ ಒಂದಾಗಿಯೇ, ಕೂಶಮ್ ಶೆಯ್ಯಾದು - ನನ್ನ ನಿಕೃಷ್ಟತ್ವಭಾವಕ್ಕಾಗಿ ಸಂಕೋಚಪಡದೆ, ಕೊಣ್ಡಾಯ್ - ನನ್ನನ್ನು ಅಂಗೀಕರಿಸಿರುತ್ತೀಯೆ. ಎನ್ನೈ ವನ್ದು - ನನ್ನನ್ನು ಬಂದು,

(೧) ತಿರು ೧೦. ೧೦. ೨. (೨) ಶ್ರೀಗುಣ ೯.

(೨) "ಶ್ರಿಯಶ್ಶ್ರೀಃ" ಎನ್ರುದು,

ಕೊವಿಕ್ಕೊಳ್ಳಿಯರ್ - ಕರೆದುಕೊಂಡು ಹೋಗತಕ್ಕದ್ದು, ಅನ್ರೋ - ಅಲ್ಲವೇ.

(೨) ಶ್ರಿಯಶ್ಶ್ರೀಃ ಶ್ರೀರಙ್ಗೇಶಯ ತವ ಚ ಹೃದ್ಯಾಂ ಭಗವತೀಂ ।
ಶ್ರಿಯಂ ತ್ವತ್ತೋಽಪ್ಯುಚ್ಚೈರ್ವಯಮಿಹ ಫಣಾಮಃ ಶೃಣುತರಾಂ ।
ದೃಶೌ ತೇ ಭೂಯಾಸ್ತಾಂ ಸುಖತರಳತಾರೇ ಶ್ರವಣತಃ ।
ಪುನರ್ಹರ್ಷೋತ್ಕರ್ಷಾತ್ ಸ್ಫುಟತು ಭುಜಯೋಃ ಕಂಚುಕಶತಂ ॥

ಅರ್ಥ—ಹೇ ಶ್ರೀರಙ್ಗೇಶಯ-ಓ ಶ್ರೀರಙ್ಗದಲ್ಲಿ ಶಯನಿಸಿರುವ ಮಹಾನುಭಾವನೇ, ನೀನು ಶ್ರಿಯಃಶ್ರೀಃ - ಲಕ್ಷ್ಮಿಗೂ ಆಶ್ರಯನು, ಶೇಷಿಯು, ತವಚ- ಎಲ್ಲಾ ಪ್ರಪನ್ನರಿಗೂ ಹೃದ್ಯನಾಗಿರುವ ನಿನಗೂ ಕೂಡ ಹೃದ್ಯಾಂ - ವಾತ್ಸಲ್ಯಾತಿಶಯದಿಂದ ಹೃದ್ಯಳಾಗಿರುವದರಿಂದಲೇ ಸದಾ ವಕ್ಷಸ್ಥಳದಲ್ಲಿ ಧರಿಸಲ್ಪಟ್ಟಿರುವ, ಭಗವತೀಂ - ಷಾಡ್ಗುಣ್ಯಾದಿ ಕಲ್ಯಾಣಗುಣಾಕರತ್ವ ಹೇಯಪ್ರತ್ಯನೀಕತ್ವಾದಿಗಳಿಂದ ನಿನಗೆ ಅನುರೂಪವಾದ ಸ್ವರೂಪಗುಣಾದಿಗಳುಳ್ಳ, ಶ್ರಿಯಂ - ಲಕ್ಷ್ಮಿಯನ್ನು, ತ್ವತ್ತಃ - ನಿನಗಿಂತಲೂ, ಉಚ್ಚೈಃ - ಹೆಚ್ಚಾಗಿ, ವಯಂ - ಇಂತಹ ಲಕ್ಷ್ಮೀ ಕಟಾಕ್ಷದಿಂದಲೂ ಆಕೆಯ ವರಪ್ರಸಾದದಿಂದಲೂ ಶ್ರಿ ಯತಿವರ್ಯರ ಸಙ್ಕಲ್ಪಾತಿಶಯದಿಂದಲೂ ತುಂಬಾ ಉನ್ನತ ವೈಷ್ಣವ ಜನ್ಮವನ್ನು ಹೊಂದಿ, ಆಕೆಯ ಕೃಪೆಯಿಂದಲೇ ನಿರತಿಶಯ ಜ್ಞಾನಾಧಿಕ್ಯವನ್ನು ಹೊಂದಿದ ನಾವು, ಕವಿಗಳಿಗೆ ಸಲ್ಲುವ ಬಹುವಚನವು, ಅಥವಾ ತಮ್ಮ ಹಾಗೆ ತತ್ವತ್ರಯಾದಿಗಳ ಜ್ಞಾನವುಳ್ಳ ವೈಷ್ಣವಾಗ್ರೇಸರರೂ ಎಂದು ಬಹು ವಚನವು, ಇಹಫಣಾಮಃ - ಇಲ್ಲಿ ಸ್ತೋತ್ರ ಮಾಡುತ್ತೇವೆ. ಈಗ ನಿನ್ನ ಎದುರಿಗೇನೇ ಈ ಶ್ರೀಗುಣರತ್ನಕೋಶದ ಮೂಲಕ ಸ್ತೋತ್ರಮಾಡುತ್ತೇವೆ. ಎಂದು ಹೇಳಿಕೊಂಡರು ನಿನ್ನ ವಾತ್ಸಲ್ಯಾತಿಶಯವಾದರೋ ಎಂಥಾದ್ದೆಂದರೆ ಶೃಣುತರಾಂ - ಚನ್ನಾಗಿ ಆಲಿಸುವದು ಎಂದು ಹೇಳುತ್ತಾರೆ. ಆ ಪ್ರಿಯಪತ್ನಿಯ ಸ್ತೋತ್ರದ ಆನಂದದಿಂದ ಪರವಶನಾಗಿ ಆಲೈಸಿ ಕೇಳುವ, ತೇ - ನಿನ್ನ, ದೃಶೌ • ದಿವ್ಯ ಪುಂಡರೀಕಾಕ್ಷಗಳಾದರೋ, ಸುಖ ತರಳತಾರೇ-ಆನಂದದಿಂದ ಚಂಚಲವಾಗಿ ಚಲಿಸುವ ಕಣ್ಣು ಗುಡ್ಡೆಗಳುಳ್ಳವಳಾಗಲಿ; ಪುನಃ ಹರ್ಷೋತ್ಕರ್ಷಾತ್-ಹಾಗೆಯೇ ಪುನಃ ಸಂತೋಷಾಧಿಕ್ಯದಿಂದ ಭುಜಯೋಃ - ನಿನ್ನ ಭುಜಗಳಲ್ಲಿರುವ, ಕಂಚುಕಶತಂ ಸ್ಫುಟತು - ಅನೇಕ ಕಂಚುಕಗಳು ದೇಹವು ಉಬ್ಬುವದರ ಮೂಲಕ ಬಿಚ್ಚಿಹೋಗಲಿ. ಈ ಶ್ಲೋಕದ ಮೂಲಕ ಶ್ರೀರಙ್ಗನಾಥನ ಅನುಜ್ಞೆಯನ್ನು ಲಕ್ಷ್ಮೀಸ್ತೋತ್ರಾರಂಭಕ್ಕಾಗಿ ಪೂಜ್ಯರಾದ ಶ್ರೀ ಪರಾಶರ ಭಟ್ಟರು ಪ್ರಾರ್ಥಿಸುವರಾಗಿ, ಲಕ್ಷ್ಮಿಯನ್ನು ಸ್ತುತಿಸಿರುತ್ತಾರೆ.

(೩) "ತಿರುವುಕ್ಕುಮ್ ತಿರು" ಎನ್ರುಮ್,[೩] ಅನ್ಯೋನ್ಯಾತಿಶಯಾವಹಙ್ಗಳಾಗ ವಿಶೇಷಣ ವಿಶೇಷ್ಯಙ್ಗಳೈ ನಿರ್ದೇಶಿಕ್ಕಿರದಱ್ಕುಕ್ಕರುತ್ತೈಯಿಲ್ಲೈ.

---

(೩) ತಿರುವುಕ್ಕುನ್ತಿರುವಾಗಿಯ ಶೆಲ್ವಾ ದೆಯ್ ವತ್ತುಕ್ಕರಶೇ, ಶೆಯ್ಯ
ಕಣ್ಣಾ। ಉರುವಚ್ಚೆಂಶುಡರಾಳಿವಲ್ಲಾನೇ, ಉಲಗುಣ್ಡ ವೊರುವಾ,
ತಿರುಮಾರ್ವಾ। ಒರುವರ್ ಕಾಱ್ಱಿಯುಯ್ಯುಮ್ ವಗೈ ಯುನ್ರಾಲ್
ಉಡನಿನ್ರು ಐವರೆನ್ನುಳ್ ಪುಗುನ್ದು ಒಳಿಯಾದು। ಅರುವಿತ್ತಿನ್ನಿಡ
ಅಂಜಿ ನಿನ್ನಡೈನ್ದೇನ್ ಅಳುನ್ದೂರ್ ಮೇಲ್ ದಿಶೈನಿನ್ರ ವಮ್ಮಾನೇ॥

ತಿರುವುಕ್ಕುನ್ ತಿರುವಾಗಿಯ ಶೆಲ್ವಾ - ಲಕ್ಷ್ಮಿಯು ಎಲ್ಲರಿಗೂ ಸಂಪದ್ರೂಪಳು, ಅಂತಹ ಲಕ್ಷ್ಮಿಗೂ ಸಂಪದ್ರೂಪನು, ಮತ್ತು ಶ್ರೀ ಶಬ್ದದಿಂದ ಸರ್ವೇಶ್ವರನಿಗೂ ಅತಿಶಯವನ್ನುಂಟು ಮಾಡುವವಳು ಎಂಬರ್ಥವೂ ಉಂಟಾಗುವದರಿಂದ ಪರಸ್ಪರಾತಿಶಯಗಳನ್ನುಂಟುಮಾಡುವವರು ಲಕ್ಷ್ಮಿಯೂ ನಾರಾಯಣನೂ ಎಂಬ ಭಾವವು, ಇಂತಹ ಸುಂದರನೇ, ದೇಯ್‌ವತ್ತುಕ್ಕು ಅರಶೇ ನಿತ್ಯ ಸೂರಿಗಳಿಗೂ ನಿರ್ವಾಹಕನೇ, ಶೆಯ್ಯ ಕಣ್ಣಾ - ಕಮಲದ ಹಾಗೆ ಕೆಂಪಾದ ಕಣ್ಣುಗಳುಳ್ಳವನೇ, ಉರವುಚ್ ಶೆಮ್ ಶುಡರಾಳಿ ವಲ್ಲಾನೇ - ಕೆಂಪಗೆ ತೇಜೋಮಯವಾದ ಸುದರ್ಶನ ಚಕ್ರವನ್ನು ಪ್ರಯೋಗಿಸುವದರಲ್ಲಿ ಸಮರ್ಥನೇ, ಉಲಗುಣ್ಡ ಒರುವಾ - ಪ್ರಳಯಕಾಲದಲ್ಲಿ ಪ್ರಪಂಚವನ್ನೆಲ್ಲಾ ನುಂಗುವ ಓ ಅದ್ವಿತೀಯನೇ, ತಿರುಮಾರ್ವಾ - ಲಕ್ಷ್ಮಿಯನ್ನು ವಕ್ಷಸ್ಥಳದಲ್ಲುಳ್ಳವನೇ, ಅಳನ್ದೂರ್ ಮೇಲ್ ದಿಶೈ ನಿನ್ರ ಅಮ್ಮಾನೇ ತಿರುವಳನ್ದೂರಿನಲ್ಲಿ ಬಿಜಮಾಡಿರುವ ಓ ಸ್ವಾಮಿಯೇ, ಒರುವರ್ಕ್ಕು ಆಱ್ಱಿ ಉಯ್ಯುಮ್ ವಗೈಯನ್ರು-ಒಂದು ಇಂದ್ರಿಯಕ್ಕಾಗಲಿ ತೃಪ್ತಿಯನ್ನುಂಟ ಮಾಡಿ ಉಜ್ಜೀವಿಸುವ ರೀತಿಯು ನನಗಿಲ್ಲವು; ಆಲ್ - ಅಯ್ಯೋ, ಐವರ್ ಉಡನ್ ನಿನ್ರು - ಐದು ಇಂದ್ರಿಯಗಳೂ ಒಟ್ಟಿಗೆ ಸೇರಿ, ಎನ್ನುಳ್ ಪುಗುನ್ದು-ನನ್ನ ಮನಸ್ಸನ್ನು ಪ್ರವೇಶಿಸಿ, ಒಳಿಯಾದು-ಒಂದು ಕ್ಷಣವಾದರೂ ಬಿಟ್ಟರದೆ ಅರುವಿತಿನ್ರಿಡ - ನಿರ್ಬಂಧಿಸಲಾಗಿ ಅಂಜಿ - ಅದಕ್ಕೆ ಭಯಪಟ್ಟು, ನಿನ್ನಡೈನ್ದೇನ್ - ನಿನ್ನನ್ನು ಶರಣು ಹೊಕ್ಕೆನು" ಎನ್ರುಮ್ - ಎಂಬದಾಗಿಯೂ, ಅನ್ಯೋನ್ಯಾತಿಶಯಾವಹಙ್ಗಳಾಗ - ಪರಸ್ಪರಾತಿಶಯವನ್ನುಂಟುಮಾಡುವವುಗಳಾಗಿ, ವಿಶೇಷಣ ವಿಶೇಷ್ಯಙ್ಗಳೈ - ವಿಶೇಷಣವಾದ ಲಕ್ಷ್ಮಿಯನ್ನೂ, ವಿಶೇಷ್ಯವಾದ ನಾರಾಯಣನನ್ನೂ, ನಿರ್ದೇಶಿ

---

(೩) ಪೆರಿ. ತಿರು. ೭. ೭. ೧.

ಲಕ್ಷ್ಮ್ಯಾಃ ವಿಶೇಷಣತ್ವ ಸಮರ್ಥನೇ ಪ್ರಧಾನ ಫಲವಾಹ.

ಶ್ರುತಿಬಲತ್ತಾಲೆ (೧) "ದ್ವೌಚ ಸದೈಕಶೇಷೀ" ಎಙ್ಗಿರಪಡಿಯೇ, "ಉಭಯಾಧಿಷ್ಠಾನಂ ಚೈಕಂ ಶೇಷಿತ್ವಂ" ಎನ್ರು ಶೋವಾಶಿ ಯಾಂಡಾ ಷಡರ್ಥಸಂಕ್ಷೇಪತ್ತಿಲೆ ನಿಷ್ಕರ್ಷಿತ್ತ ಪಡಿಯೇ ಇರುವರುಮ್ ಏಕ ಶೇಷಿ

ಕ್ಕಿರದರ್ಕ್ಕು ಕ್ಕುರೈ ಯಿಲ್ಲೈ - ಹೇಳುವುದಕ್ಕೇನೂ ನ್ಯೂನತೆಯಿಲ್ಲವು ಎಂದರೆ ಅಭ್ಯಂತರವೇನೂ ಇಲ್ಲವು ಎಂಬ ಭಾವವು ಇಬ್ಬರೂ ಇಲ್ಲಿ ಸ್ವತಸಿದ್ಧವಾದ ಅತಿಶಯವುಳ್ಳವರಾಗಿ ಯಾವಾಗಲೂ ವಿಶೇಷಣ ವಿಶೇಷ್ಯಭಾವದಿಂದಿರುವದರಿಂದ ಪರಸ್ಪರ ಅತಿಶಯವನ್ನುಂಟುಮಾಡತಕ್ಕಂಬುದು ಸಹಜವಾದುದೇ ಎಂಬ ತಾತ್ಪರ್ಯವು.

ಲೋಕದೃಷ್ಟಾಂತದಲ್ಲೂ ತುಂಬಾ ಧರ್ಮಿಷ್ಠನಾದ ರಾಜನಿಂದ ರಾಜಪತ್ನಿಗೂ, ಹಾಗೆಯೇ ಮಹಾಪತಿವ್ರತೆ ಶಿರೋಮಣಿಯಾಗಿ ಲೋಕಾನುಗ್ರಹಕಾರಿಣಿಯಾದ ರಾಜಪತ್ನಿಯಿಂದ ರಾಜನಿಗೂ ಪರಸ್ಪರಾತಿಶಯವುಂಟು. ಹಾಗೆಯೇ ಕಾಂತಿಯಿಂದ ರತ್ನಕ್ಕೂ ರತ್ನದಿಂದ ಕಾಂತಿಗೂ ಪರಸ್ಪರಾತಿಶಯವು. ಮನೋಹರವಾದ ಪುಷ್ಪದಿಂದ ಪರಿಮಳಕ್ಕೂ, ಪರಿಮಳದಿಂದ ಪುಷ್ಪಕ್ಕೂ ಅತಿಶಯವುಂಟು.

ಲಕ್ಷ್ಮಿಗೆ ವಿಶೇಷಣತ್ವ ಸಮರ್ಥನೆಯಿಂದುಂಟಾಗುವ ಪ್ರಧಾನ ಫಲವನ್ನು ಹೇಳುತ್ತಾರೆ.

ಶ್ರುತಿ ಬಲತ್ತಾಲೆ - ಕೆಲವು ಶ್ರುತಿಗಳು ನಾರಾಯಣನಿಗೆ ಶೇಷಿತ್ವವನ್ನೂ ಇನ್ನು ಕೆಲವು ಲಕ್ಷ್ಮಿಗೆ ಶೇಷಿತ್ವವನ್ನೂ ಹೇಳುವ ಬಲದಿಂದ, "ಪತಿಂವಿಶ್ವಸ್ಯಾತ್ಮೇಶ್ವರಂ" ಇತ್ಯಾದಿ ಶ್ರುತಿಗಳು ನಾರಾಯಣನು ಲೋಕೈಕೇಶ್ವರನೆಂದೂ, "ಅಸ್ಯೇಶಾನಾ ಜಗತೋ ವಿಷ್ಣುಪತ್ನೀ" "ಈಶ್ವರೀಗ್ಂ ಸರ್ವಭೂತಾನಾಂ" ಇತ್ಯಾದಿ ಶ್ರುತಿಗಳು ಲಕ್ಷ್ಮಿಯನ್ನು ಲೋಕೈಕೇಶ್ವರಿ ಎಂದೂ ಹೇಳುವ ಬಲದಿಂದ ಎಂಬ ಭಾವವು, "ದ್ವೌಚ ಸದೈಕಶೇಷೀ" - ದ್ವೌಚ - ಲಕ್ಷ್ಮೀನಾರಾಯಣರಿಬ್ಬರೂ, ಸದಾ - ಯಾವಾಗಲೂ ಎಂದರೆ ಸರ್ವದೇಶ ಸರ್ವಕಾಲ ಸರ್ವಾವಸ್ಥೆಯಲ್ಲಿಯೂ, ಉಪಾಯೋಪೇಯಾವಸ್ಥೆಗಳಲ್ಲಿಯೂ, ಏಕಶೇಷೀ - ಏಕಂಚ ತತ್ ಶೇಷೀಚ ಎಂಬ ವಿಗ್ರಹವಾಕ್ಯಾನುಸಾರ ಜಗತ್ತಿಗೆ ಒಬ್ಬರಾದ ಶೇಷಭೂತ

---

(೧) ಶ್ರೀ ಸಾತ್ವತಂ

ತ್ವಾಶ್ರಯ ಮಾನ ಪಡಿಯಾಲೇ, ಹವಿರ್ವಿಶೇಷಙ್ಗಳಿಲೆ ಅಗ್ನಾವಿಷ್ಣು ಪ್ರಭೃತಿಗಳುಕ್ಕುಪ್ಪೋಲೆ ಆತ್ಮಹವಿಸ್ಸಮರ್ಪಣ ಪ್ರತಿಸಂಬಂಧಿಗಳಾಗೈಕ್ಕುಮ್ ಕುರೈ ಯಿಲ್ಲೈ.

ವಸ್ತು" ಎಙ್ಗಿರಪಡಿಯೇ - ಎಂದು ಹೇಳಿರುವ ಹಾಗೆಯೇ, **ಏಕಂ ಶೇಷಿತ್ವಂ** - ಒಂದಾದ ಶೇಷಭಾವವು ಒಂದಾದ ಶೇಷಿತ್ವಕ್ಕೆ ಆಶ್ರಯರು, **ಉಭಯಾಧಿಷ್ಠಾನಂ** - ಲೋಕದಂಪತಿಗಳಿಬ್ಬರನ್ನೂ ಅಧಿಷ್ಠಾನವಾಗಿವುಳ್ಳದು, ಶ್ರಿಯಃಪತಿಯೇನು, ವಿಷ್ಣುಪತ್ನಿಯೇನು ಹೀಗೆ ಉಭಯಾಶ್ರಯವೆಂದು, **ಎನ್ರು** - ಎಂಬದಾಗಿ, ಶ್ರೀವಾಶಿವಾಂಡಾರ್‌ರವರು ಅವರು ರಚಿಸಿದ **ಷಡರ್ಥಸಂಕ್ಷೇಪ** ವೆಂಬ ಗ್ರಂಥದಲ್ಲಿ, **ನಿಷ್ಕರ್ಷಿತ್ತಪಡಿಯೇ** - ನಿರ್ಣಯಮಾಡಿ ಹೇಳಿದಹಾಗೆ, **ಇರುವರುಮ್** - ಲಕ್ಷ್ಮೀನಾರಾಯಣರಿಬ್ಬರೂ, **ಏಕಶೇಷಿತ್ವಾಶ್ರಯಮಾನ ಪಡಿಯಾಲೆ** - ಒಂದಾದ ಶೇಷಿತ್ವಕ್ಕೆ ಆಶ್ರಯವಾಗಿರುವದರಿಂದ, **ಹವಿರ್ವಿಶೇಷಙ್ಗಳಿಲೆ** - ಹವಿರ್ವಿಶೇಷಕ್ಕೆ ಉದ್ದೇಶ್ಯರಾದ, **ಅಗ್ನಾವಿಷ್ಣುಪ್ರಭೃತಿಗಳುಕ್ಕುಪ್ಪೋಲೆ** - ಒಂದೇ ಹವಿಸ್ಸಿಗೆ ಇಬ್ಬರಾದ ಅಗ್ನಿ ವಿಷ್ಣುಗಳೇ ಮೊದಲಾದವರಿಗೆ ಉದ್ದೇಶ್ಯವಾದಹಾಗೆ, ಎಂದರೆ ಇಬ್ಬರೂ ಸೇರಿ ಒಂದು ದೇವತಾತ್ವವು ಹೇಗೋ, **ಆತ್ಮ ಹವಿಸ್ಸಮರ್ಪಣ ಪ್ರತಿ ಸಂಬಂಧಿಗಳಾಗೈಕ್ಕುಮ್** - ಓಂ ಎಂಬದಾಗಿ ಪ್ರಣವ ಮೂಲಕವಾಗಿ ಈ ನಮ್ಮ ಆತ್ಮಾ ಎಂಬ ಹವಿಸ್ಸನ್ನು ಸಮರ್ಪಿಸಲು ಉದ್ದೇಶ್ಯರಾಗಿರುವದಕ್ಕೆ ಇಲ್ಲಿ ಆತ್ಮನು ಸಂಬಂಧಿಯು, ಲಕ್ಷ್ಮೀನಾರಾಯಣರು ಪ್ರತಿ ಸಂಬಂಧಿಗಳು. ಈ ಪ್ರತಿ ಸಂಬಂಧಿಗಳನ್ನು ನೈಯಾಯಿಕರು ಅನುಯೋಗಿ ಎಂದು ಹೇಳುತ್ತಾರೆ, ಆದುದರಿಂದಲೇ ಪ್ರತಿಸಂಬಂಧಿಗಳೆಂಬ ಪ್ರಯೋಗವು. ಆದುದರಿಂದ ಪ್ರತಿಸಂಬಂಧಿಗಳೆಂದರೆ ಉದ್ದೇಶ್ಯರು, ಹೀಗೆ ಉದ್ದೇಶ್ಯರಾಗಿರುವದಕ್ಕೆ, **ಕುರೈ ಯಿಲ್ಲೈ** - ನ್ಯೂನತೆ ಏನೂ ಇಲ್ಲವು ಭರನ್ಯಾಸದಲ್ಲಿ ಆತ್ಮ ಹವಿಸ್ಸಮರ್ಪಣೆಯೇ ಅಙ್ಗವು, ಇದೇ ಆತ್ಮ ಹವಿಸ್ಸು, ಇದನ್ನು "**ಓಮಿತ್ಯಾತ್ಮಾನಂ ಯುಞ್ಜೀತ**" ಎಂಬ ವಿಧಿವಾಕ್ಯಾನುಸಾರವಾಗಿ ಸಮರ್ಪಿಸುವಾಗ, ಲೋಕದಂಪತಿಗಳಾದ ಇಬ್ಬರ ಪಾದಗಳಲ್ಲೂ ಸಮರ್ಪಿಸತಕ್ಕದ್ದೆಂದು ಹೇಳಲ್ಪಟ್ಟಿತು. ಪ್ರಣವಾರ್ಥವೇ ಇಬ್ಬರೂ ಉದ್ದೇಶ್ಯರೆಂದು ತಿಳಿಸುತ್ತದೆ ಅಕಾರವು ಲಕ್ಷ್ಮೀ ವಿಶಿಷ್ಟನಾದ ವಿಷ್ಣುವನ್ನೇ ಬೋಧಿಸಿ, ಅವರಿಬ್ಬರಿಗೋಸ್ಕರವಾಗಿಯೇ ಈ ಮಕಾರ ವಾಚ್ಯನಾದ ಜೀವನು ಎಂಬದ್ದರಿಂದಲೇ ದ್ಯೋತಿತವು. ಅಥವಾ "**ಅಕಾರೇಣೋಚ್ಯತೇ ವಿಷ್ಣುಸ್ಸರ್ವಲೋಕೇಶ್ವರೋ ಹರಿಃ । ಉದ್ಧೃತಾ**

ಏಕ ಶೇಷಿತ್ವ ಕಥನಂ ಏಕಪ್ರಾಧಾನ್ಯಾತ್.

(೧) "ಯುವತ್ವಾದೌ ತುಲ್ಯೇಪ್ಯ ಪರವಶತಾ ಶತ್ರುಶಮನ ಸ್ಥಿರತ್ವಾ

ವಿಷ್ಣುನಾಲಕ್ಷ್ಮೀರುಕಾರೇಣೋಚ್ಯತೇ ತಥಾ । ಮಕಾರಸ್ತು ತಯೋರ್ದಾಸ ಇತಿ ಪ್ರಣವ ಲಕ್ಷಣಂ" ಎಂಬ ಪ್ರಮಾಣದಲ್ಲಿ ಇದು ಸುವ್ಯಕ್ತವು. ಆದುದರಿಂದ ಓಂ ಎಂಬದಾಗಿ ಆತ್ಮಹವಿಸ್ಸಮರ್ಪಣೆಯು ಇಬ್ಬರ ಪಾದಾರವಿಂದದಲ್ಲೂ ಎಂದು ತಿಳಿಯತಕ್ಕದ್ದು. ಹೀಗೆ ಒಂದು ಹವಿಸ್ಸಿಗೆ ಇಬ್ಬರು ಉದ್ದೇಶ್ಯರುಂಟೋ ಎಂದರೆ, ಉಂಟೆಂಬದಾಗಿ ದೃಷ್ಟಾಂತಮೂಲಕವಾಗಿ ತಿಳಿಸುತ್ತಾರೆ:—ಅಗ್ನಾವಿಷ್ಣೂ ಪ್ರಭೃತಿಗಳುಕ್ಕುಪ್ಪೋಲೆ ಎಂದು ಹೇಳಿದರು. ಆತ್ಮಹವಿಸ್ಸಮರ್ಪಣ ಮಂತ್ರವು "ವಸುರಣ್ಯೋ ವಿಭೂರಸಿ" ಎಂಬದಾಗಿ ಪ್ರಾರಂಭಿಸಿ ಓಮಿತ್ಯಾತ್ಮಾನಂ ಯುಂಜೀತ ಎಂದು ಮುಗಿಯುವವರೆಗೂ ಇರುವ ಮಂತ್ರವು. ಈ ಮಂತ್ರ ಮತ್ತು ಅರ್ಥಗಳಿಗೆ ದಾಸನು ಬರೆದಿರುವ ಶ್ರೀ ಸ್ತುತಿಯ ೪ನೆಯ ಪುಟವನ್ನು ಪರಾಂಬರಿಸಿ, ಶ್ರೀ ಸ್ತುತಿಯ ೬ನೆಯ ಶ್ಲೋಕದಲ್ಲೂ ಶ್ರೀ ದೇಶಿಕರವರು ಈ ಅಭಿಪ್ರಾಯವನ್ನೇ ಸಮರ್ಥನೆಮಾಡಿರುತ್ತಾರೆ:—"ಪ್ರತ್ಯಗ್ರೂಪೇ ಹವಿಷಿ ಯುವಯೋರೇಕಶೇಷಿತ್ವ ಯೋಗಾತ್ ಎಂದು ಹೇಳಿರುತ್ತಾರೆ. ಇದರ ಅರ್ಥವು ಅಲ್ಲಿಯೇ ಉಪಪಾದಿಸಲ್ಪಟ್ಟಿರುತ್ತದೆ.

ಆದರೆ, ಆತ್ಮ ಹವಿಸ್ಸಮರ್ಪಣೆಗೆ ಪ್ರತಿಸಂಬಂಧಿತ್ವವಿಬ್ಬರಿಗೂ ಉಂಟಾದರೆ "ತಮೇವಂ ವಿದಿತ್ವಾತಿ ಮೃತ್ಯುಮೇತಿ", "ತಮೇವಂ ವಿದ್ವಾ ನಮೃತ ಇಹ ಭವತಿ" "ತಂ ವಾಸುದೇವಂ ಶರಣಂ ಗತೋಽಸ್ಮಿ", ಮಾಮೇಕಂ ಶರಣಂ ವ್ರಜ" ಇತ್ಯಾದಿ ವಾಕ್ಯಗಳಲ್ಲಿ ನಾರಾಯಣನು ಮಾತ್ರವೇ ಹೇಳಲ್ಪಟ್ಟಿರುತ್ತಾನಲ್ಲಾ ಎಂದರೆ ಅದಕ್ಕೆ ಸಮಾಧಾನವನ್ನು ಹೇಳುತ್ತಾರೆ.

ಶ್ರುತಿಗಳಲ್ಲಿ ಒಬ್ಬ ಯಜಮಾನನೆಂಬ ನಿರ್ದೇಶವು, ಯಜಮಾನ ಪ್ರಾಧಾನ್ಯದಿಂದ

ಈ ಮೇಲಿನ ಶ್ರುತಿಗಳಲ್ಲಿ ನಾರಾಯಣನೊಬ್ಬನನ್ನೇ ಹೇಳಿರುವದು ಸನಿಯೋಗ ಶಿಷ್ಟನ್ಯಾಯದಿಂದ ಹೇಳಬಹುದು. ಲಕ್ಷ್ಮಿಯು ಅಪೃಥಕ್ಸಿದ್ಧ ವಿಶೇಷಣವಾದುದರಿಂದ ಯಾವಾಗ ನಾರಾಯಣನು ಹೇಳಲ್ಪಟ್ಟನೋ, ಲಕ್ಷ್ಮಿಯು ಸದಾ

---

(೧) ಶ್ರೀಗುಣ ೩೪.

ದೀನ್ ಕೃತ್ವಾ ಭಗವತಿ ಗುಣಾನ್ ಪುಂಸ್ತ್ವ ಸುಲಭಾನ್ । ತ್ವಯಿ ಸ್ತ್ರೀತ್ವೈಕಾಂತಾನ್ ಮೃದಿಮ ಪತಿಪಾರಾರ್ಥ್ಯ ಕರುಣಾ ಕ್ಷಮಾದೀನ್ವಾ ಭೋಕ್ತ್ರಂ ಭವತಿ ಯುವಯೋ ರಾತ್ಮನಿ ಭಿದಾ", ಎಜ್ಞ್ರಪಡಿಯೋ, ಪತ್ನಿಕ್ಕು

ಜೊತೆಯಲ್ಲೇ ಇರುವದರಿಂದ ಆಕೆಯೂ ಹೇಳಲ್ಪಟ್ಟಳೆಂದು ಭಾವಿಸಬಹುದು. ಸೀತೆಯು ಹಾಗೆಯೇ ಹೇಳಿಕೊಂಡಿರುತ್ತಾಳೆ :—"**ಅನನ್ಯಾ ರಾಘವೇಣಾಹಂ ಭಾಸ್ಕರೇಣ ಪ್ರಭಾಯಥಾ**" ಸೂರ್ಯನಿಗೆ ಪ್ರಭೆಯು ಹೇಗೆ ಯಾವಾಗಲೂ ಒಟ್ಟಿಗಿರುತ್ತದೋ ಹಾಗೆಯೇ ನಾನೂ ಶ್ರೀರಾಮನನ್ನಗಲಿರಲಾರೆನು." ಪ್ರವೃತ್ತಿ ನಿವೃತ್ತಿಗಳು ಇಬ್ಬರಿಗೂ ಒಟ್ಟಿಗೆ ಉಂಟಾಗುವದರಿಂದ ಒಂದನ್ನು ಹೇಳಿದ ನಂತರ ಇನ್ನೊಂದನ್ನು ಹೇಳಿದಂತಾಯಿತೆಂದು ಭಾವಿಸಬಹುದು. ಇದರಿಂದಲೇ ಶ್ರುತಿಯು ಲಕ್ಷ್ಮಿಯನ್ನು ಬೇರೆಯಾಗಿ ಅನೇಕ ಕಡೆಗಳಲ್ಲಿ ಹೇಳಲಿಲ್ಲವೆಂದು "**ನ ಪೃಥಗಭಿಧತ್ತೇ ಶ್ರುತಿರಪಿ**" ಎಂದು ಶ್ರೀ ಪರಾಶರಭಟ್ಟರು ಹೇಳಿದರು. ಇದನ್ನು ಮುಂದೆ ಶ್ರೀ ದೇಶಿಕರವರು ಉಪಪಾದಿಸುತ್ತಾರೆ. ಹೀಗೆ ಇಬ್ಬರು ಯಾವಾಗಲೂ ಜೊತೆಯಲ್ಲಿದ್ದುದಾದರೆ ಶ್ರುತಿಯು ಲಕ್ಷ್ಮಿಯನ್ನು ಮಾತ್ರವೇ ಹೇಳಲಿ. ನಾರಾಯಣನನ್ನು ಊಹಿಸೋಣ ಎಂಬ ಪೂರ್ವಪಕ್ಷವು ಬರಬಹುದು ಅದಕ್ಕೆ ಸಮಾಧಾನವಾಗಿ ಸನ್ನಿಯೋಗಶಿಷ್ಟನ್ಯಾಯದ ಪ್ರಕಾರ ಇದಕ್ಕೆ ಸಮಾಧಾನವು ಮುಂದೆ ಉಪಪಾದಿಸುವಹಾಗೆ ಆದರೂ, ಪತಿಪಾರಾರ್ಥ್ಯವು ಆಕೆಗೆ ಇಷ್ಟವಾದುದರಿಂದ, ನಾರಾಯಣನಿಗೆ ಪ್ರಾಧಾನ್ಯವನ್ನು ಈ ನಾರಾಯಣನೊಬ್ಬನನ್ನು ಮಾತ್ರ ಹೇಳುವ ಶ್ರುತ್ಯಾದಿಗಳು ಬೋಧಿಸುತ್ತವೆಂದು ಹೇಳಲು "ಯುವತ್ವಾದೌ" ಎಂಬ ಪರಾಶರ ಭಟ್ಟರ ಶ್ಲೋಕವನ್ನು ಮುಂದೆ ಉದಾಹರಿಸುತ್ತಾರೆ. ಈ ಶ್ಲೋಕವು ಹಿಂದೆ ತತ್ತ್ವತ್ರಯಾಧಿಕಾರದಲ್ಲೂ ಉದಾಹರಿಸಲ್ಪಟ್ಟಿರುತ್ತದೆ. ೫೯೮ನೆಯ ಪುಟ ನೋಡಿ.

ಯುವತ್ವಾದೌ - ಇದರ ಹಿಂದಿನ ಶ್ಲೋಕದಲ್ಲಿ ಉಪಪಾದಿಸಿದಹಾಗೆ ಯೌವ್ವನ ಮೊದಲಾದವುಗಳು. ತುಲ್ಯೇಪಿ - ನಿನಗೂ ನಿನ್ನ ಪತಿಗೂ ಸಹ ಸಮವಾದರೂ ಕೂಡ, **ಅಪರವಶತಾ**-ಇನ್ನೊಬ್ಬರಿಗೆ ಅಧೀನನಾಗದಿರುವಿಕೆಯೂ, **ಶತ್ರುಶಮನ** - ಶತ್ರುವನ್ನು ನಾಶಮಾಡುವದು. **ಸ್ಥಿರತ್ವಾದೀನ್** - ಸತ್ಯಪರಾಕ್ರಮನು ಸತ್ಯಸಂಕಲ್ಪನು ಇತ್ಯಾದಿ ನಿನ್ನ ಬಿರುದುಗಳಲ್ಲಿ ತೋರುವ ಸ್ಥಿರತ್ವ ಮೊದಲಾದವುಗಳಾದ **ಪುಂಸ್ತ್ವ ಸುಲಭಾನ್** - ಪುರುಷನಿಗೆ ಯೋಗ್ಯವಾಗಿ ಸುಲಭವಾದ, **ಗುಣಾನ್** - ಗುಣಗಳನ್ನು **ಭಗವತಿ** - ನಿನ್ನ ಪತಿಯಾದ ಭಗ

ವಂತನಲ್ಲಿ, ಕೃತ್ವಾ - ಮಾಡಿ, ಎಂದರೆ ಆವನಲ್ಲಿ ಬಿಟ್ಟು, ತ್ವಯಿ-ನಿನ್ನಲ್ಲಾದರೋ, ಸ್ತ್ರೀತ್ವೈಕ ಕಾಂತಾರ್ಹ - ಸ್ತ್ರೀಯಾಗಿರುವದಕ್ಕೆ ಮಾತ್ರವೇ ಯೋಗ್ಯವಾದ, ಮೃದಿಮ - ಮೃದುಸ್ವಭಾವ, ಪತಿಪಾರಾರ್ಥ್ಯ - ಪತಿಗೆ ಸರ್ವ ವಿಧದಲ್ಲೂ ಅಧೀನಳಾಗಿರುವಿಕೆ, ಕರುಣೆ, ಕ್ಷಮಾ ಆದೀ - ಇವೇ ಮೊದಲಾದ ಗುಣಗಳನ್ನು, ಭೋಕ್ತುಂ - ಅನುಭವಿಸುವದಕ್ಕೆ ಎಂದರೆ ಹೊಂದಿರುವದಕ್ಕೆ, ಯುವಯೋಃ - ನಿಮ್ಮಿಬ್ಬರಿಗೂ, ಆತ್ಮನಿ ಭಿದಾ - ಸ್ವರೂಪದಲ್ಲಿ ಸ್ವಲ್ಪ ವ್ಯತ್ಯಾಸವು, ಭವತಿ - ಉಂಟಾಗುತ್ತದೆ. ಶ್ರೀ ಭಟ್ಟರು ಹಿಂದಿನ ಶ್ಲೋಕಗಳಲ್ಲಿ ಇಬ್ಬರ ಸ್ವರೂಪದಲ್ಲೂ ಏನೂ ವ್ಯತ್ಯಾಸವಿಲ್ಲವೆಂಬ ಶ್ರೀ ವಿಷಕ್ಸೇನ ಸಂಹಿತಾ ಪ್ರಮಾಣಾಭಿಪ್ರಾಯವನ್ನು ಉಪಪಾದಿಸಿದರು. ಅಲ್ಲಿ ಹೇಳಿರುವದೇನಂದರೆ :—

ತಥಾ ಲಕ್ಷ್ಮ್ಯಾಃ ಸ್ವರೂಪಂಚ ವಕ್ಷ್ಯೇ ಶೃಣು ಸಮಾಹಿತಃ ।
ಗುಣತಶ್ಚ ಸ್ವರೂಪೇಣ ವ್ಯಾಪ್ತಿಸ್ಸಾಧಾರಣೀ ಮತಾ ॥
ಯಥಾ ಮಯಾ ಜಗದ್ವ್ಯಾಪ್ತಂ ಸ್ವರೂಪೇಣ ಸ್ವಭಾವತಃ ।
ತಥಾ ವ್ಯಾಪ್ತಂ ತಯಾಸರ್ವಂ ನಿಯನ್ತ್ರೀಚ ತಥೇಶ್ವರೀ ॥

ಭಗವಂತನು ವಿಷಕ್ಸೇನನಿಗೆ ಹೇಳುತ್ತಾನೆ :—ಲಕ್ಷ್ಮಿಯ ಸ್ವರೂಪವನ್ನೂ ಹಾಗೆಯೇ ಹೇಳುತ್ತೇನೆ, ಸಮಾಧಾನ ಚಿತ್ತನಾಗಿ ಕೇಳು ; ಗುಣಗಳಿಂದಲೂ, ಸ್ವರೂಪದಿಂದಲೂ ವ್ಯಾಪ್ತಿ ಎಂಬುದು ನಮ್ಮಿಬ್ಬರಿಗೂ ಸಾಧಾರಣವಾದುದು. ಈ ಜಗತ್ತೆಲ್ಲವೂ ನನ್ನಿಂದ ಹೇಗೆ ವ್ಯಾಪಿಸಲ್ಪಟ್ಟಿರುತ್ತದೆಯೋ ಹಾಗೆಯೇ ಲಕ್ಷ್ಮಿಯಿಂದಲೂ ಇವೆಲ್ಲವೂ ವ್ಯಾಪಿಸಲ್ಪಟ್ಟಿವೆ ನಾನು ಹೇಗೆ ಎಲ್ಲಾದಕ್ಕೂ ನಿಯಾಮಕನಾಗಿ ಈಶ್ವರನೋ, ಹಾಗೆಯೇ ಅವಳೂ ನಿಯಾಮಕಳಾಗಿ ಈಶ್ವರಳು, ಹೀಗೆ ಇಬ್ಬರೂ ಸಮರು ಎಂದು ಹೇಳಲ್ಪಟ್ಟಿತು. ಹಾಗಾದರೆ ಏನೊಂದೂ ವೈಲಕ್ಷಣ್ಯವಿಲ್ಲವೋ ? ಹಾಗಾದರೆ ನಿತ್ಯಮುಕ್ತರುಗಳು ನಿಮ್ಮಿಬ್ಬರನ್ನು ಭಾವಿಸಿ ಪರಿಪೂರ್ಣಾನುಭವವನ್ನು ಮಾಡುವದು ಹೇಗೆ ಎಂದರೆ, ಸ್ವಲ್ಪ ವೈಲಕ್ಷಣ್ಯವುಂಟೆಂದು ಮುಂದೆ ಅದೇ ಪ್ರಮಾಣವೇ ತಿಳಿಸುತ್ತದೆ :—

ಮಚ್ಛೇಷಭೂತಾ ಸರ್ವೇಷಾ ಮೀಶ್ವರೀ ವಲ್ಲಭಾ ಮಮ
ತಸ್ಮಾಚ್ಚ ಜಗತಶ್ಚಾಹ ಮೀಶ್ವರೋ ವೇದವಿಶ್ರುತಃ
ಅಸ್ಯಾ ಮಮಚ ಶೇಷಂಹಿ ವಿಭೂತಿ ರುಭಯಾತ್ಮಿಕಾ ॥

ಎಲ್ಲಾದಕ್ಕೂ ನಿಯಂತ್ರಾಮಾಗಿ ಈಶ್ವರೀ ಎನ್ನಿಸಿಕೊಂಡಿರುವ ನನ್ನ ವಲ್ಲಭೆಯು ನನಗೆ ಶೇಷಭೂತಳು, ಆದುದರಿಂದ ಆಕೆಗೂ ಜಗತ್ತಿಗೂ ಕೂಡ ನಾನು ಈಶ್ವರನೆಂಬುದು ವೇದಪ್ರಸಿದ್ಧವಾದುದು ಈ ಎರಡು ವಿಭೂತಿಗಳು ಆಕೆಗೂ ನನಗೂ ಸಹ ಶೇಷಭೂತವಾದುದು. ಹೀಗೆ ಲಕ್ಷ್ಮಿಯು ಸರ್ವೇಶ್ವರನಿಗೆ ಸಮನಾದ

ನಿತ್ಯಪತಿ ಸಾರಾಥ್ರ್ಯತ್ತಾಲೆ ಯಾಗಕರ್ಮತ್ತಿಲ್ಪೋಲೆ ಪತಿಪ್ರಧಾನಮಾಗ ಶಾಸ್ತ್ರಙ್ಗಳಿಲ್ ವ್ಯ (ಉ) ಪದೇಶಙ್ಗಳುಕ್ಕುಮ್ ಏಕ ಯಜಮಾನ ನೆನ್ರುಮಾಪ್ಪೋಲೆ ಏಕವ್ಯಪದೇಶತ್ತುಕ್ಕುಮ್ ಕುರೈ ಇಲ್ಲೈ.

ಸ್ವರೂಪಾದಿಗಳನ್ನು ಮಹರ್ಷಿವಾಕ್ಯವಾದ "**ತುಲ್ಯಶೀಲ ವಯೋವೃತ್ತಾಂ ತುಲ್ಯಾಭಿ ಜನಲಕ್ಷಣಾಂ । ರಾಘವೋರ್ಹತಿವೈದೇಹೀಂ ತಂಚೇಯ ಮಸಿ ತೇಕ್ಷಣಾ**" (ರಾಮಾ. ಸುಂ.) ಎಂಬುದರಲ್ಲಿ ಉಪಪಾದಿಸಿರುವ ಹಾಗೆ ಹೊಂದಿದ್ದರೂ, ಪತಿಪಾರಾರ್ಥ್ಯ ಉಳ್ಳವಳಾಗಿ ಪತಿಗೆ ತನ್ನಿಷ್ಟಾನುಸಾರ ಶೇಷಭೂತಳೆಂದು ತಿಳಿಸುವುದಕ್ಕಾಗಿ ಈ ಯುವತ್ವಾದೌ - ಎಂಬ ಶ್ಲೋಕವನ್ನು ಇಲ್ಲಿ ಉದಾಹರಿಸಿರುತ್ತಾರೆ" ಎಙ್ಗರಪಡಿಯೇ - ಎಂದು ಹೇಳಿರುವ ಹಾಗೆ, **ಪತ್ನಿಕ್ಕು** - ಹೆಂಡತಿಯಾದ ಲಕ್ಷ್ಮಿಗೆ, **ಪತಿಸಾರಾರ್ಥ್ಯತ್ತಾಲೆ** - ಪತಿಗೆ ಶೇಷಭೂತಳಾಗಿರುವದರಿಂದ, **ಯಾಗಕರ್ಮತ್ತಿಲ್ಪೋಲೆ** - **ಯಜೇತಸ್ವರ್ಗ ಕಾಮಃ** - ಸ್ವರ್ಗಾಪೇಕ್ಷೆಯುಳ್ಳವನು ಯಜ್ಞ ಮಾಡತಕ್ಕದ್ದೆಂದು ಯಾಗ ಕರ್ಮಗಳಲ್ಲಿ ಹೇಳಿರುವ ಹಾಗೆ, **ಪತಿಪ್ರಧಾನಮಾಗ** - ಗಂಡನೇ ಮುಖ್ಯವಾದವನಾಗಿ, **ಶಾಸ್ತ್ರಙ್ಗಳಿಲ್ ವ್ಯಪದೇಶತ್ತುಕ್ಕು** - ಶ್ರುತಿ ಮೊದಲಾದ ಶಾಸ್ತ್ರಗಳಲ್ಲಿ ಹೇಳಿರುವದಕ್ಕೂ, **ಏಕ ಯಜಮಾನನೆನ್ರಾಪ್ಪೋಲೆ** - ಒಬ್ಬನೇ ಯಜಮಾನನೆಂದು ಹೇಳುವಹಾಗೆ, **ಏಕವ್ಯಪದೇಶತ್ತುಕ್ಕುಮ್** - ಇಲ್ಲಿಯೂ ಒಬ್ಬನಾದ ಯಜಮಾನನಾದ ನಾರಾಯಣನೇ ಶೇಷಿಯು ಎಂಬ ಹೇಳಿಕೆಗೆ, **ಕುರೈಯಿಲ್ಲೈ** - ನ್ಯೂನತೆ ಏನೂ ಇಲ್ಲವು. ವಿರೋಧವೇನೂ ಇಲ್ಲವೆಂಬ ಭಾವವು. "**ಪತ್ಯುರ್ನೋ ಯಜ್ಞಸಂಯೋಗೇ**" ಎಂದರೆ ಪತ್ನೀಶಬ್ದವು, ಯಜ್ಞಸಂಬಂಧ ಉಂಟಾದಾಗ ನಕಾರದಿಂದ ಕೂಡಿದ ಪತಿಶಬ್ದದಿಂದ ನಿಷ್ಪನ್ನವಾಗುವದರಿಂದ ಹೆಂಡತಿಗೆ ಯಜ್ಞದಲ್ಲಿ ಸಮಾನಾಧಿಕಾರವಿದ್ದರೂ, ಯಾಗಮಂತ್ರಗಳಲ್ಲಿ ಯಜಮಾನನೊಬ್ಬನನ್ನು ಹೇಳಿ ಹೆಂಡತಿಯನ್ನು ಹೇಳದಿದ್ದರೂ, ಹೇಗೆ ಆಕೆಗೂ ಸಹ ಅನ್ವಯಿಸುತ್ತದೋ ಹಾಗೆಯೇ ಇಲ್ಲಿಯೂ ನಾರಾಯಣನೊಬ್ಬನನ್ನೇ ಶ್ರುತಿಗಳೂ ಇತರ ಶಾಸ್ತ್ರಗಳೂ ಹೇಳಿದರೂ, ಇಬ್ಬರೂ ಹೇಳಲ್ಪಟ್ಟರೆಂದು ಭಾವಿಸತಕ್ಕದ್ದೆಂಬ ಭಾವವು. ಯಜೇತಸ್ವರ್ಗಕಾಮಃ ಸ್ವರ್ಗಕಾಮನೆಯುಳ್ಳವನು ಯಾಗ ಮಾಡತಕ್ಕದ್ದೆಂದು ವಿಧಿಸಿದರೂ, ಪತ್ನಿಗೆ ಸ್ವರ್ಗಕಾಮನೆ ಇಲ್ಲವೇ? ಹಾಗೆ ಯಜಮಾನನಿಗೆ ಇಷ್ಟವಾದರೆ ಆಕೆಯು ಬೇರೆ ಯಜ್ಞ ಮಾಡಬೇಕೇ? ಎಂಬ ಸಂದೇಹವಿಲ್ಲ. ಪತಿಯೊಂದಿಗೇನೆ ಆಕೆಗೂ ಯಜ್ಞಾಧಿಕಾರವೇ ವಿನಾ ಪ್ರತ್ಯೇಕವಿಲ್ಲವೆಂಬುದು

ಸಿದ್ಧವು ಯಜಮಾನನು ಸ್ನಾನಮಾಡತಕ್ಕದ್ದೆಂದು ವಿಧಿ ಇದ್ದರೆ, ಹೆಂಡತಿಗೆ ಸ್ನಾನ ಬೇಡವೇ ? ಆಕೆಗೂ ಸ್ನಾನ ವಿಧಿ ಹೇಗೆ ಅನ್ವಯಿಸುತ್ತದೋ ಹಾಗೆ. ಆದುದರಿಂದ, ಪತ್ನಿ ಇಲ್ಲವಿದ್ದ ಪಕ್ಷದಲ್ಲಿ ಯಜಮಾನನಿಗೆ ಯಾವ ಯಜ್ಞ ರೂಪ ವಿಧಿಗೂ ಅಧಿಕಾರವೇ ಇಲ್ಲವು ದ್ವಿಜನ ಹೆಂಡತಿಗೆ ಯಜ್ಞದಲ್ಲಿ ಸಮಾನಾಧಿ ಕಾರವಿರುವವರಿಂದಲೇ ಪತ್ನೀ ಎಂಬ ಶಬ್ದವು. ಶೂದ್ರನ ಹೆಂಡತಿಗೆ ಶೂದ್ರ ಪತ್ನೀ ಎಂಬ ವ್ಯವಹಾರವಿಲ್ಲವು, ಶೂದ್ರ ಭಾರ್ಯಾ ಎಂದು ಹೇಳತಕ್ಕದ್ದು. ಹಾಗೆಯೇ ಹೆಂಡತಿ ಇಲ್ಲದವನಿಗೆ ಔಪಾಸನ, ಬ್ರಹ್ಮಯಜ್ಞ, ವೈಶ್ವದೇವಾದಿ ಗಳಿಗೆ ಅಧಿಕಾರವಿಲ್ಲವು. ಹೀಗೆ ಯಾಗ ವಿಧಿಗಳೆಲ್ಲಾ ಯಜಮಾನನೊಬ್ಬನನ್ನು ದ್ದೇಶಿಸಿ ಹೇಳಿದರೂ ಪತ್ನಿಗೂ ಹೇಗೆ ಅನ್ವಯಿಸುತ್ತವೋ ಹಾಗೆಯೇ ಯಜ್ಞರೂಪ ವಾದ ಜಗತ್ತಿನ ಸೃಷ್ಟಿಸ್ಥಿತಿ ನಿಯಮನಾದಿಗಳಲ್ಲೆಲ್ಲಾ ಅಧಿಕಾರವು ನಾರಾಯಣ ನೊಬ್ಬನಿಗೇ ಎಂದು ಹೇಳಿದ್ದರೂ ಲಕ್ಷ್ಮಿಗೂ ಅನ್ವಯಿಸುತ್ತದೆ. ಹಾಗೆಯೇ ಉಪಾಯೋಪೇಯತ್ವಗಳಲ್ಲೂ ಇಬ್ಬರಿಗೂ ಅಧಿಕಾರವುಂಟು. ಆದುದರಿಂದ ಶೇಷಿತ್ವಕ್ಕೆ ಇಬ್ಬರಿಗೂ ಅಧಿಕಾರವಿದ್ದರೂ, ಲಕ್ಷ್ಮಿಯೂ ನಾರಾಯಣನಿಗೆ ಶೇಷ ಳಾದ ಪ್ರಯುಕ್ತ ವಿಶೇಷ್ಯನಾದ ನಾರಾಯಣನಿಗೆ ಸರ್ವ ಶೇಷಿತ್ವದಿಂದ ಪ್ರಾಧಾನ್ಯ ಭಾವನೆ ಇರುವದರಿಂದ ನಾರಾಯಣನೊಬ್ಬನನ್ನೇ ಕುರಿತೇ ಶಾಸ್ತ್ರಗಳಲ್ಲಿ ವ್ಯಪ ದೇಶವೆಂಬ ತಾತ್ಪರ್ಯವು. ವಿಶೇಷಣವಾದ ಲಕ್ಷ್ಮಿಯನ್ನು ಹೇಳಬೇಕಾದು ದಿಲ್ಲವು. ಇಬ್ಬರಿಗೂ ಶೇಷಿತ್ವ ಉಂಟೆಂದೂ, ಇಬ್ಬರಿಗೂ ಈಶಿತೃತ್ವ ಉಂಟೆಂದೂ "ತಥಾಪ್ಯನನ್ಯ ಸಾಧಾರಣ ಮಾಶಿತೃತ್ವಂ ಶ್ರೀಶ್ರೀಶಯೋರ್ದ್ವಯ ಚ ಸದೈಕ ಶೇಷೀ" ಎಂಬ ಅಹಿರ್ಬುಧ್ನ್ಯ ಸಂಹಿತಾವಾಕ್ಯವು ವ್ಯಕ್ತವಾಗಿ ಹೇಳಿರು ತ್ತದೆ.

ಮುಂದೆ ಆಳ್ವಾರುಗಳೂ ಕೂಡ ಈ ಪ್ರಾಧಾನ್ಯಾಭಿಪ್ರಾಯದಿಂದ ಏಕವೆಂಬ ಪದಪ್ರಯೋಗವನ್ನೇ ಮಾಡಿರುತ್ತಾರೆಂದು ಪೊಯ್ಗೈಯಾಳ್ವಾರ್ ಸೂಕ್ತಿಯನ್ನು ಉದಾಹರಿಸುತ್ತಾರೆ.

ಪೆಯುರುಮ್ ಕೆರುಙ್ಗಡಲೇ ನೋಕ್ಕುಮಾರು, ಓಙ್ಪೂ
ವುಯುರುಮ್ ಕದಿರವನೇ ನೋಕ್ಕುಮ್ - ಉಯುರುಮ್
ತರುಮನೈಯೇ ನೋಕ್ಕುಮ್, ಒಣ್ತಾಮರೈಯಾಳ್ ಕೇಳ್ವ
ಒರುವನೈಯೇ ನೋಕ್ಕು ಉಣರ್ವು. ಎಂಬುವದು ಪೂರಾ ಪಾಶುರವು.

ಇದರರ್ಥವು—ಆರು - ನದಿಯು ಪೆಯುರುಮ್ - ತುಂಬಿ ತುಳುಕುತ್ತಿರುವ, ಕೆರುಮ್ - ವಿಶಾಲವಾದ, ಕಡಲೇ - ಸಮುದ್ರವನ್ನೇ ನೋಕ್ಕುಮ್ - ಎದುರು ನೋಡುತ್ತದೆ. ಏಕೆಂದರೆ ಅದನ್ನು ಸೇರಿವಲ್ಲದೆ ತನಗೆ ಗತಿ ಇಲ್ಲವೆಂಬ

(೧) "ತಾಮರೈಯಾಳ್ ಕೇಳ್ವನ್ ಒರುವನೈಯೇ ನೋಕ್ಕುಮುಣರ್ವು" ಎಙ್ಗಿರದರ್ಥ್ಯಮ್ ಇದುವೇ ತಾತ್ಪರ್ಯಮ್.

ಭಾವವು. ಕೆರೆ ಕುಂಟೆಗಳು ಪ್ರಯೋಜನವಿಲ್ಲವು. ಒಣ್ - ಸುಂದರವಾದ, ಪೂ - ತಾವರೇ ಪುಷ್ಪವು, ಪುಯುರುಮ್ - ದೂರದಲ್ಲಿ, ಉದಯಿಸಿ ಮೇಲೆ ಬರುವ, ಕದಿರವನೇ - ಸೂರ್ಯನನ್ನೇ, ನೋಕ್ಕುಮ್ - ಎದುರುನೋಡುತ್ತದೆ ಅದಕ್ಕೆ ಅಗ್ನಿ ಮೊದಲಾದವುಗಳು ಪ್ರಯೋಜನವಿಲ್ಲವು, ಅವುಗಳಿಂದ ತಾವರೆ ಪುಷ್ಪವು ಅರಳುವದಿಲ್ಲವು. ಉಯಿರುಮ್ - ಜೀವಾತ್ಮರೂ, ತಿರುಮಙ್ಗೈಯೋ-ಯುಮನನ್ನೇ, ನೋಕ್ಕುಮ್ - ನಿರೀಕ್ಷಿಸುವರು, ಉತ್ಕೃಷ್ಟ ಜನ್ಮ - ಉತ್ಕೃಷ್ಟ ಪದವಿ ಬೇಕಾದವರು ಮರಣವಿಲ್ಲದೆ ಹೊಂದಲಾರರೆಂಬ ಭಾವವು, ಹಾಗೆಯೇ ಉಣರ್ವು - ಜ್ಞಾನವು, ಒಣ್ - ಸುಂದರವಾದ, ತಾಮರೈಯಾಳ್ - ಕಮಲ ವಾಸಿನಿಯಾದ ಲಕ್ಷ್ಮಿಯು, ಕೇಳ್ವನ್ - ವಲ್ಲಭನಾದ ನಾರಾಯಣನು, ಒರುವನೈಯೇ - ಒಬ್ಬನನ್ನೇ, ನೋಕ್ಕುಮ್ - ಹೊಂದಲು ಆಶೆ ಪಡುತ್ತದೆ. ಇಂತಹ ಜ್ಞಾನವೇ ಜ್ಞಾನವು, ಮಿಕ್ಕ ಜ್ಞಾನವೆಲ್ಲಾ ಅಜ್ಞಾನ ಸಮಾನವೆಂದು ವಿಷ್ಣು ಪುರಾಣದ ಈ ಅಮೋಘ ಶ್ಲೋಕದಲ್ಲಿ ಹೇಳಲ್ಪಟ್ಟಿರುತ್ತದೆ. (೨) "ಸಂಜ್ಞಾಯತೇ ಯೇನ ತದಸ್ತ ದೋಷಂ ಶುದ್ಧಂ ಪರಂ ನಿರ್ಮಲ ಮೇಕರೂಪಂ। ಸಂದೃಶ್ಯತೇ ವಾಪ್ಯಧಿಗಮ್ಯತೇ ವಾ ತಜ್ಞಾನ ಮಜ್ಞಾನ ಮತೋನ್ಯದುಕ್ತಂ" ಯೇನ - ಯಾವ ಆಗಮೋಕ್ತ ಜ್ಞಾನದಿಂದ, ತತ್ - ಆ ಹೇಳಲ್ಪಟ್ಟ ಲಕ್ಷಣಗಳುಳ್ಳ ಪುರುಷೋತ್ತಮನು, ಸಂಜ್ಞಾಯತೇ - ಚೆನ್ನಾಗಿ ತಿಳಿಯಲ್ಪಡುತ್ತಾನೋ, ಆ ಪರಬ್ರಹ್ಮನು ಎಂತಹವನೆಂದರೆ, ಅಸ್ತ ದೋಷಂ - ಅಚಿತ್ತಿಗಿಂತಲೂ, ವಿಲಕ್ಷಣನಾಗಿ ಹೇಯಗಂಧವಿಲ್ಲದವನು, ಶುದ್ಧಂ - ಬದ್ಧಾತ್ಮರಿಗಿಂತಲೂ, ವಿಲಕ್ಷಣನಾಗಿ ಕರ್ಮವಶ್ಯತಾ ಇಲ್ಲದೆ ಪರಿಶುದ್ಧನು, ಪರಂ ನಿರ್ಮಲಂ - ಮುಕ್ತಾತ್ಮರಿಗಿಂತಲೂ ಒಂದು ಕಾಲದಲ್ಲೂ ಜ್ಞಾನಸಂಕೋಚವಿಲ್ಲದವನು, ಏಕರೂಪಂ - ನಿತ್ಯರಿಗಿಂತಲೂ ವಿಲಕ್ಷಣನಾಗಿ ಒಂದೇ ರೂಪದಲ್ಲಿರುವವನು, ಮತ್ತು, ಯೇನ - ಯಾವ ವಿವೇಕಿ ಜ್ಞಾನದಿಂದ, ಸಂದೃಶ್ಯತೇ - ಭಕ್ತಿಯೋಗಾದಿಗಳಿಂದ ಆ ಪರಬ್ರಹ್ಮನು ಸಾಕ್ಷಾತ್ಕರಿಸಲ್ಪಡುವನೋ, ಅಧಿಗಮ್ಯತೇ ವಾ - ಯಾವ ಪರಮಾತ್ಮನು ಹೊಂದಲ್ಪಡುವನೋ, ತತ್ - ಅದೇ, ಜ್ಞಾನಂ ಜ್ಞಾನವೆನ್ನಲ್ಪಡುತ್ತದೆ, ವಾ ಎಂಬುವದರಿಂದ ಮೂರನೇ ಜ್ಞಾನದ ಸಮುಚ್ಚಯವು ಹೇಳಲ್ಪಟ್ಟಿತು,

---

(೧) ಮುದಿಲ್ ತಿರುವಂದಾದಿ ೬೭. (೨) ವಿ. ಪು ೬. ೫. ೮೭.

ಶ್ರುತ್ಯಾದೌ ಲಕ್ಷ್ಮ್ಯಾಃ ಪೃಥಗನಭಿಧಾನಸ್ಯ ಕಾರಣಮ್.

(೧) "ತದಂತರ್ಭಾವಾತ್ತ್ವಾಂ ನ ಪೃಥಗಭಿಧತ್ತೇ ಶ್ರುತಿರಪಿ" ಎಣ್ಣುರವಳಿಗಳುಮ್ ಕಣ್ಡುಕೊಳ್ವದು.

ವಿಕಲ್ಪವಲ್ಲವು, ಅತಃ - ಆ ಕಾರಣದಿಂದ, **ಅನ್ಯತ್** - ಮಿಕ್ಕ ಜ್ಞಾನವೆಲ್ಲಾ, **ಅಜ್ಞಾನ ಮುಕ್ತಮ್** - ಅಜ್ಞಾನವೆಂದೇ ಹೇಳಲ್ಪಟ್ಟಿತು. ಎಣ್ಣುರದರ್ಕುಮ್- ಎಂದು ಹೇಳಿರುವದಕ್ಕೂ, ಇದುವೇ **ತಾತ್ಪರ್ಯಮ್** - ಇದೇ **ತಾತ್ಪರ್ಯವು**. ಎಂದರೆ ಲಕ್ಷ್ಮೀವಿಶಿಷ್ಟನಾಗಿ ನಾರಾಯಣನು, ಏಕಃ - ಒಬ್ಬನು ಎಂಬುದು ತಾತ್ಪರ್ಯವು. ಇಲ್ಲಿಯೂ **ತಾನುರ್ಕೈಯಾಳ್** ಎಂಬುದರಿಂದ ಲಕ್ಷ್ಮಿಯನ್ನೂ ಹೇಳಿ, ಆಕೆಯ **ಕೇಳ್ವನೊರುವನ್ನೈ** - ಆಕೆಯ ವಲ್ಲಭನೆಂದು **ಒರುವನ್ನೈ** - ಒಬ್ಬನೇ ಎಂದು ಹೇಳಿರುವದು, ಲಕ್ಷ್ಮಿಗೂ ಶೇಷಿಯಾದುದರಿಂದ ಪ್ರಾಧಾನ್ಯೇನ ಒಬ್ಬನೆಂದು ಹೇಳಲ್ಪಟ್ಟಿತು ವಿಶೇಷಣದೊಂದಿಗೆ ವಿಶೇಷ್ಯ ಒಂದು ಎಂದು ಹೇಳಿದ ನಂತರ ವಿಶೇಷ್ಯದ ಪ್ರಾಧಾನ್ಯವೂ ವಿಶೇಷಣದ ಆವಶ್ಯಕತೆಯೂ ಹೇಳಲ್ಪಟ್ಟವೆಂಬ ಭಾವವು. ಹೀಗೆಯೇ ಶ್ರುತಿಯಲ್ಲೂ **"ಸ್ವಧಯಾತದೇಕಂ"** ಲಕ್ಷ್ಮಿಯೊಂದಿಗೆ ಪರಬ್ರಹ್ಮವೊಂದು ಎಂದು ಹೇಳಲ್ಪಟ್ಟಿರುತ್ತದೆ. ಹಾಗೆಯೇ ಶ್ರೀ ವ್ಯಾಸಮಹರ್ಷಿಯೂ ಮೋಕ್ಷಧರ್ಮದಲ್ಲಿ **"ಏಕಾಕೀ ವಿದ್ಯಯಾ ಸಾರ್ಧಂ ವಿಹರಿಷ್ಯೇ ದ್ವಿಜೋತ್ತಮ"** ಎಂದು ಸರ್ವೇಶ್ವರನೇ ಶ್ರೀ ನಾರದಭಗವಾನರವರಿಗೆ ಹೇಳಿದರೆಂದು ಪ್ರಯೋಗಿಸಿರುತ್ತಾರೆ. ವಿಶೇಷಣದೊಂದಿಗೆ ವಿಶೇಷ್ಯಕ್ಕೆ ಏಕತ್ವವು ಸಿದ್ಧಿಸುತ್ತದೆಂಬ ತಾತ್ಪರ್ಯವು.

ಶ್ರುತಿ, ಗೀತಾ ಮೊದಲಾದವುಗಳಲ್ಲಿ ಲಕ್ಷ್ಮಿಯನ್ನು ಬೇರೆ ಉದ್ದೇಶಿಸಿ ಹೇಳದಿರುವದಕ್ಕೆ ಕಾರಣವು.

ತದಂತರ್ಭಾವಾತ್ - ಭಗವಂತನಿಗೆ ವಿಶೇಷಣವಾಗಿ ಆತನಲ್ಲೇ ಯಾವಾಗಲೂ ಸೇರಿರುವದರಿಂದ, **ತ್ವಾಂ** - ಲಕ್ಷ್ಮಿಯಾದ ನಿನ್ನನ್ನು, **ಶ್ರುತಿರಪಿ** - ಶ್ರುತಿಯೂ ಕೂಡ, **ನ ಪೃಥಗಭಿಧತ್ತೇ** - ನಿನ್ನನ್ನು ಪ್ರತ್ಯೇಕಿಸಿ ಎಂದರೆ ನಿನ್ನನ್ನೇ ಬೇರೆಯಾಗಿ ಉದ್ದೇಶಿಸಿ ಹೇಳಲಿಲ್ಲವು", **ಎಣ್ಣುರ** - ಎನ್ನುವ, **ವಳಿಗಳುಮ್** - ಮಾರ್ಗ ಅಥವಾ ರೀತಿಗಳನ್ನೂ, **ಕಣ್ಡುಕೊಳ್ವದು** - ತಿಳಿದುಕೊಳ್ಳುವದು. ಸನ್ನಿಯೋಗ ಶಿಷ್ಟನ್ಯಾಯದ ಪ್ರಕಾರ, ವಿಶೇಷಣಕ್ಕೆ ವಿಶೇಷ್ಯ

---

(೧) ಶ್ರೀ ಗುಣ.

"ಲಕ್ಷ್ಮ್ಯಾ ಸಹ ಏಕಃ ಇತಿ ಶ್ರೀ ಭಾಷ್ಯಕಾರಾಭಿಪ್ರಾಯಃ.

"ಎಮ್ಪೆರುಮಾನೈ ಚ್ಚೊನ್ನವಿಡ ಮೆಙ್ಗುಮ್ ಪಿರಾಟ್ಟಿಯೈಯುಮ್ ಶೊಲ್ಲಿತ್ತಾ"ನೆನ್ರು ತುಡಙ್ಗಿ ಉಡೈಯವರರುಳಿಚ್ಚೆಯ್ದ ವಾರ್‌ತ್ತೈಯೈ ಆಚ್ಚಾನ್ ಪಕ್ಕಲಿಲೇ ಕೇಟ್ಟು ನಞ್ಜೀಯರ್ ಸಙ್ಗ್ರಹಿತ್ತಾರ್.

ದೊಂದಿಗೆ, **ಸಹ ನಾ ಪ್ರವೃತ್ತಿಃ, ಸಹನಾ ನಿವೃತ್ತಿಃ**-ಎಂದು ಹೇಳಿರುವ ಹಾಗೆ ಪ್ರವೃತ್ತಿ ನಿವೃತ್ತಿಗಳು ಒಟ್ಟಿಗೆಯಾದುದರಿಂದ ಪತಿಪಾರಾರ್ಥ್ಯ ಮೂಲಕವಾದ ಪ್ರಾಧಾನ್ಯೇನ ವಿಶೇಷ್ಯವನ್ನು ಮಾತ್ರವೇ ಹೇಳುವ ವಾಡಿಕೆಯಾದುದರಿಂದ ವಿಶೇಷಣವಾದ ಲಕ್ಷ್ಮಿಯು ಶ್ರುತಿಗಳಲ್ಲಿ ಹೇಳಲ್ಪಡದೆ ವಿಶೇಷ್ಯನಾದ ಭಗವಂತನೊಬ್ಬನೇ ಹೇಳಲ್ಪಟ್ಟಿರುತ್ತಾನೆಂಬ ಭಾವವು ಸೀತೆಯು **"ಅನನ್ಯಾ ರಾಘವೇಣಾಹಂ ಭಾಸ್ಕರೇಣ ಪ್ರಭಾಯಥಾ"** ಎಂಬದಾಗಿ ಶ್ರೀರಾಮನೊಂದಿಗೆ ತನಗೆ ನಿತ್ಯಯೋಗವನ್ನು ಹೇಳಿಕೊಂಡಿರುತ್ತಾಳೆ. ಲೋಕ ವ್ಯವಹಾರವು ಹಾಗೆಯೇ, ಸೂರ್ಯನೂ ಸೂರ್ಯ ಕಿರಣಗಳೂ ಉದಯಿಸಿದರೂ, ವಿಶೇಷಣಗಳಾದ ಸೂರ್ಯಕಿರಣಗಳನ್ನು ಬಿಟ್ಟು, ಸೂರ್ಯನು ಉದಿಯಿಸಿದನು ಎಂಬ ವ್ಯವಹಾರ ಉಂಟು. ಗರ್ಭಿಣೀ ಸ್ತ್ರೀಯಾದವಳು ಬಂದಳು ಎಂದು ಹೇಳುವಾಗ, ಗರ್ಭಸ್ಥ ಶಿಶುವೂ ಬಂತು ಎಂದು ಹೇಳಬೇಕಾದ ಆವಶ್ಯಕವಿಲ್ಲವು. ಹಾಗೆಯೇ ಶ್ರುತಿಗಳಲ್ಲೂ ಎಂಬ ಭಾವವು. ಪ್ರಾಧಾನ್ಯದಿಂದ ನಾರಾಯಣನನ್ನು ಮಾತ್ರ ಹೇಳಿದರೆ ಲಕ್ಷ್ಮಿಯನ್ನೂ ಹೇಳಿದಂತಾಯಿತು. ಈ ಶ್ರೀಗುಣರತ್ನಕೋಶದ ಪೂರಾ ಶ್ಲೋಕಕ್ಕೂ ಅದರರ್ಥಕ್ಕೂ ಹಿಂದೆ ಇದೇ ಅಧಿಕಾರದ ನೆಯ ಪುಟವನ್ನು ಪರಾಂಬರಿಸಿ.

ಈ ಅಭಿಪ್ರಾಯಕ್ಕೆ ಸಂಪ್ರದಾಯ ಬಲವುಂಟೋ? ಎಂದರೆ ನಮ್ಮ ಸಿದ್ಧಾಂತ ಸ್ಥಾಪಕರ ಅಭಿಪ್ರಾಯವೂ ಹಾಗೆಯೇ ಎಂದು ಹೇಳುವದಕ್ಕಾಗಿ ಒಂದು ನಡೆದ ವೃತ್ತಾಂತವನ್ನು ತಿಳಿಸುತ್ತಾರೆ.

"ಲಕ್ಷ್ಮ್ಯಾ ಸಹ ಏಕಂ" ಎಂಬುದೇ ಶ್ರೀ ಭಾಷ್ಯಕಾರರಭಿಪ್ರಾಯವು.

"ಎಮ್ಪೆರುಮಾನೈ ಚ್ಚೊನ್ನವಿಡಮ್ - ಭಗವಂತನನ್ನು ಬೋಧಿಸುವ ಸ್ಥಳವು, ಎಙ್ಗುಮ್ - ಎಲ್ಲಾ ಕಡೆಯಲ್ಲೂ, ಪಿರಾಟ್ಟಿಯೈಯುಮ್ ಶೊಲ್ಲಿತ್ತಾನ್ - ಲಕ್ಷ್ಮಿಯನ್ನು ಬೋಧಿಸುತ್ತದೆ," ಎನ್ರು - ಎಂಬದಾಗಿ, ತುಡಙ್ಗಿ - ಪ್ರಾರಂಭಿಸಿ, ಉಡೈಯವರರುಳಿಚ್ಚೆಯ್ದ - ಶ್ರೀ ಭಾಷ್ಯಕಾರರು ಅಪ್ಪಣೆ ಕೊಡಿಸಿದ, ವಾರ್‌ತ್ತೈಯೈ - ಉಪದೇಶವನ್ನು, ಆಚ್ಚಾನ್ ಪಕ್ಕಲಿಲೇ -

ಶ್ರೀ ಭಾಷ್ಯಕಾರರ ಮಹಾನಸ ಕೈಙ್ಕರ್ಯಪರರಾದ ಶ್ರೀ ಕಿಡಾಂಬಿ ಆಚ್ಚಾನ್ರವರ ಮೂಲಕ, ಕೇಟ್ಟು - ಕೇಳಿ ತಿಳಿದು, ನಂಜೀಯರ್ ಸಙ್ಗ್ರಹಿತ್ತಾರ್ - ಪರಾಶರ ಭಟ್ಟರ ಶಿಷ್ಯರಾದ ನಂಜೀಯರು ಸಙ್ಗ್ರಹಿಸಿ ಹೇಳಿರುತ್ತಾರೆ. ಕಿಡಾಂಬಿ ಆಚ್ಚಾನ್ರವರ ವಿಷಯದ ಇತಿಹಾಸಕ್ಕೆ ಗುರುಪರಂಪರಾಸಾರದ ಲ ನೆಯ ಪುಟವನ್ನು ಪರಾಂಬರಿಸಿ. ಶಾಸ್ತ್ರಗಳಲ್ಲಿ ಭಗವಂತನೊಬ್ಬನನ್ನು ಕುರಿತು ಹೇಳಿದ ಎಲ್ಲಾ ಸ್ಥಳಗಳಲ್ಲೂ ಲಕ್ಷ್ಮಿಯೂ ಕೂಡ ಹೇಳಲ್ಪಟ್ಟಳೆಂದು ಭಾವಿಸತಕ್ಕದ್ದೆಂಬುದೇ ಶ್ರೀ ಯತಿರಾಜರವರುಪದೇಶವಾದುದರಿಂದ ಅದನ್ನು ತುಂಬಾ ಉಪಾದೇಯವಾಗಿ ಭಾವಿಸತಕ್ಕದ್ದೆಂಬ ಭಾವವು. ಗೀತೋಪದೇಶದಲ್ಲಿ ಶ್ರೀ ಕೃಷ್ಣನೇ ಅರ್ಜುನನಿಗೆ ಉಪದೇಶಿಸಿದರೂ ಲಕ್ಷ್ಮೀಯುಕ್ತನಾದ ಭಗವಂತನೇ ಉಪದೇಶಿಸಿದನೆಂದೇ ಭಾವಿಸತಕ್ಕದ್ದೆಂದು ತಿಳಿಸುವದಕ್ಕಾಗಿ "ಶ್ರೀ ಭಗವಾನುವಾಚ" ಲಕ್ಷ್ಮೀಯುಕ್ತನಾದ ಭಗವಂತನು ಬೋಧಿಸಿದನೆಂದು ವ್ಯಾಸಮಹರ್ಷಿಯು ಪದೇ ಪದೇ ಪ್ರಯೋಗಿಸಿರುತ್ತಾರೆ. ಇದು ಶ್ರೀ ಭಾಷ್ಯಕಾರರಭಿಪ್ರಾಯವೆಂಬುದನ್ನು ಅವರೇ ಶ್ರೀ ಭಾಷ್ಯದ ಮಙ್ಗಳ ಶ್ಲೋಕದಲ್ಲಿ "ಬ್ರಹ್ಮಣಿ ಶ್ರೀನಿವಾಸೇ" ಎಂದು ಪ್ರಯೋಗಿಸಿರುವದರಿಂದ ಎಲ್ಲೆಲ್ಲಿ ಪರತತ್ತ್ವವು ಹೇಳಲ್ಪಟ್ಟಿತೋ ಅಲ್ಲೆಲ್ಲಾ ಶ್ರೀನಿವಾಸನೇ ಎಂದರೆ ಲಕ್ಷ್ಮಿಗೆ ನಿವಾಸನಾದ ನಾರಾಯಣನೇ ಹೇಳಲ್ಪಟ್ಟನೆಂದು ತಿಳಿಸಿರುತ್ತಾರೆ.

ಹೀಗೆ ಸರ್ವಾವಸ್ಥೆಗಳಲ್ಲೂ ಲಕ್ಷ್ಮಿಯು ನಾರಾಯಣನಿಗೆ ವಿಶೇಷಣವಾಗಿ ಅವಿನಾಭೂತೆಯಾಗಿಯೇ ಸದಾ ಇರುವದರಿಂದ ಭಗವದಾಲಯಗಳಲ್ಲಿ ಬೇರೆಯಾಗಿ ಅಮ್ಮನವರ ಸನ್ನಿಧಿಯನ್ನು ಏರ್ಪಡಿಸಿ, ಅಲ್ಲಿ ಪ್ರತಿಷ್ಠಾರ್ಚನಾದಿಗಳನ್ನು ನಡೆಸುವದು, ಶಾಸ್ತ್ರವಿರುದ್ಧವಲ್ಲವೋ ಎಂದರೆ, ದೇವಾಲಯದ ಏಳಿಗೆಗಾಗಿ ಕಾಮ್ಯವಾಗಿ ಭಗವಚ್ಛಾಸ್ತ್ರ ವಿಹಿತವಾದುದಾದುದರಿಂದ ಆಗಬಹುದು ಎಂದರೆ, ಪ್ರಪನ್ನನಾದ ಅನನ್ಯಪ್ರಯೋಜನನಾದ ಅಧಿಕಾರಿಗೆ ಅದು ಅನನುಷ್ಠೇಯವಾದುದರಿಂದ ಪ್ರಣಾಮ ನೈವೇದ್ಯಾದಿಗಳು ಲಕ್ಷ್ಮಿಗೆ ಯುಕ್ತವೋ, ಎಂದರೆ, ಲಕ್ಷ್ಮಿಯು ಅರ್ಚನೆಯು ಲಯಾರ್ಚನೆ, ಭೋಗಾರ್ಚನೆ, ಅಧಿಕಾರಾರ್ಚನೆ ಎಂದು ಮೂರು ವಿಧಗಳಾಗಿ ಅವುಗಳಲ್ಲಿ ಅಧಿಕಾರಾರ್ಚನೆ ಮಾತ್ರ ಕಾಮ್ಯವಾದುದರಿಂದ ಪ್ರಪನ್ನನಿಗೆ ನಿಷಿದ್ಧವಾದದೆಂದೂ, ಲಯಾರ್ಚನೆ ಭೋಗಾರ್ಚನೆಗಳು ಮಾತ್ರ ಉಪಾದೇಯವೆಂದೂ, ಭಗವಚ್ಛಾಸ್ತ್ರಗಳಲ್ಲಿ ಹೇಳಲ್ಪಟ್ಟಿದ್ದರೂ, ಕಾಮ್ಯಪ್ರಧಾನವಾದ ಈ ಲಕ್ಷ್ಮಿಯ ರೂಪದ ಪ್ರಣಾಮಾದಿ ಅರ್ಚನೆಗಳೂ ಪ್ರಪನ್ನನಿಗೂ ಕೂಡ ನಿಷಿದ್ಧವಲ್ಲವೆಂದು ಮುಂದಿನ ವಾಕ್ಯದಿಂದುಪದೇಶಿಸುತ್ತಾರೆ. ಆಕೆಗೂ, ಮೋಕ್ಷೋಪಾಯತ್ವ ಮೋಕ್ಷಪ್ರದತ್ವ ಶಕ್ತಿ ಇರುವದರಿಂದ ಅಂತಹ ಪ್ರಣಾಮಾದಿಗಳೇನೂ ಪ್ರಪನ್ನನಿಗೆ ವಿರುದ್ಧವಾದುವಲ್ಲವು.

ಆಗೈಯಾಲ್ ಕಾಮ್ಯಪ್ರಧಾನಮಾನ ಅಧಿಕಾರಾರ್ಚನ ರೂಪತ್ತಿಲುಮ್ ವಿಷ್ಣುಪತ್ನೀತ್ವಂ ಸುಪ್ರತಿಷ್ಠಿತ ಮಾಗೈಯಾಲೇ ಲಯಭೋಗಾರ್ಚನಙ್ಗಳಿಲೆ ಪ್ರವೃತ್ತರಾಯ್ ಅನನ್ಯಪ್ರಯೋಜನರಾನ ಮುಮುಕ್ಷುಕ್ಕಳುಕ್ಕುಮ್ ಕಾಮ್ಯಪ್ರಧಾನಮಾನ ಭಗವದ್ರೂಪತ್ತಿಲ್ಪೋಲೆ ಮಾತೃತ್ವಾದ್ಯುಪಾಧಿಕಮಾನ ಪ್ರಣಾಮಾದ್ಯಾಚಾರಙ್ಗಳುಕ್ಕುಮ್ ಕುರೈ ಯಿಲ್ಲೈ.

ಆಗೈಯಾಲ್ - ಹೀಗೆ ಸರ್ವಾವಸ್ಥೆಗಳಲ್ಲಿಯೂ ಲಕ್ಷ್ಮಿಯು ನಾರಾಯಣನಿಗೆ ವಿಶೇಷಣಭೂತೆಯಾಗಿ ಅವಿನಾಭೂತಳಾದುದರಿಂದ, **ಕಾಮ್ಯ ಪ್ರಧಾನಮಾನ** - ಭಕ್ತರ ಇಷ್ಟಾರ್ಥವನ್ನು ಅನುಗ್ರಹಿಸುವದೇ ಮುಖ್ಯವಾಗಿರುವ, **ಅಧಿಕಾರಾರ್ಚನ ರೂಪತ್ತಿಲುಮ್** - ದೇವಸ್ಥಾನದ ಅಮ್ಮನವರ ಸನ್ನಿಧಿಯಲ್ಲಿ ಪ್ರತಿಷ್ಠಿತವಾಗಿರುವ ರೂಪದಲ್ಲೂ, **ವಿಷ್ಣುಪತ್ನೀತ್ವಂ** - ವಿಷ್ಣುಪತ್ನಿಯಾಗಿರುವ ಭಾವವು, ಆದರಿಂದ ವಿಷ್ಣುಸಾನ್ನಿಧ್ಯವು, **ಸುಪ್ರತಿಷ್ಠಿತ ಮಾಗೈಯಾಲೇ** - ಆಗಮೋಕ್ತಪ್ರಕಾರ ಸುಪ್ರತಿಷ್ಠಿತವಾಗಿರುವದರಿಂದ, **ಲಯಭೋಗಾರ್ಚನಙ್ಗಳಿಲೆ** - ಲಯಾರ್ಚನೆಯು ವಕ್ಷಸ್ಥಳದಲ್ಲಿರುವ ಲಕ್ಷ್ಮೀರೂಪಾರ್ಚನೆಯು, **ಭೋಗಾರ್ಚನೆಯು** ಸ್ವಾಮಿಯ ಪಕ್ಕದಲ್ಲಿರುವ ಲಕ್ಷ್ಮೀರೂಪಾರ್ಚನೆಯು, ಇವುಗಳಲ್ಲಿ, **ಪ್ರವೃತ್ತರಾಯ್** - ಪ್ರವೃತ್ತಿಸಿರುವ, **ಅನನ್ಯ ಪ್ರಯೋಜನರಾನ** - ಮೋಕ್ಷವಲ್ಲದೆ ಬೇರೆ ಪುರುಷಾರ್ಥಗಳನ್ನಪೇಕ್ಷಿಸದ, **ಮುಮುಕ್ಷುಕ್ಕಳುಕ್ಕುಮ್** - ಮೋಕ್ಷಾರ್ಥಿಗಳಿಗೂ ಕೂಡ, **ಕಾಮ್ಯಪ್ರಧಾನಮಾನ ಭಗವದ್ರೂಪತ್ತಿಲ್ಪೋಲೆ** - ಕಾಮ್ಯ ಫಲಗಳನ್ನು ಕೊಡುವದೇ ಮುಖ್ಯವಾಗಿರುವ ಮದನಗೋಪಾಲಮೂರ್ತಿ ಮೊದಲಾದ ಭಗವದ್ರೂಪಗಳ ಹಾಗೆ ಎಂದರೆ ಈ ಭಗವದ್ರೂಪಗಳು ಮುಮುಕ್ಷುವಿಗೂ ಕೂಡ ಹೇಗೆ ಉಪಾದೇಯವೋ ಹಾಗೆ ಎಂಬ ಭಾವವೂ, **ಮಾತೃತ್ವಾದ್ಯುಪಾಧಿಕಮಾನ** - ಲೋಕಮಾತೆ ಎಂಬ ವ್ಯಾಜರೂಪದಿಂದ, **ಪ್ರಣಾಮಾದ್ಯಾಚಾರಙ್ಗಳುಕ್ಕುಮ್** - ನಮಸ್ಕಾರವೇ ಮೊದಲಾದ ಆಚಾರಗಳಿಗೂ, ಇಲ್ಲಿ ಆದಿಶಬ್ದದಿಂದ ಪ್ರದಕ್ಷಿಣ ಅರ್ಚನೆ ಕೈಂಕರ್ಯಾದಿಗಳು ಹೇಳಲ್ಪಟ್ಟವು. **ಕುರೈ ಯಿಲ್ಲೈ** - ನ್ಯೂನತೆ ಏನೂ ಇಲ್ಲವು ಮತ್ತೆ ವಿರೋಧವೇನೂ ಇಲ್ಲವೆಂಬ ತಾತ್ಪರ್ಯವು. ದೇವಾಲಯದ ಆನುಮಾನಾಚ್ಛಿಯಾರ್ರುಮ ರೂಪವು ಕಾಮ್ಯವಿಗ್ರಹವಾದರೂ, ವಿಷ್ಣುಪತ್ನಿಯಾಗಿ ವಿಷ್ಣುಸಾನ್ನಿಧ್ಯವುಳ್ಳರೂಪವಾದ್ದರಿಂದ ಮೋಕ್ಷಾರ್ಥಿಯು ಕೂಡ ಪ್ರದಕ್ಷಿಣ ನಮಸ್ಕಾರಾದಿಗಳನ್ನು ಮಾಡಬಹುದು. ಮುಕ್ತನಾಗುವದೇ ಎಂಬಭಕ್ತ್ಯಾನುವ, ಪತಿಸ ಇಂಗಿತವನ್ನರಿತು ಮೋಕ್ಷ

ಪ್ರಾಮಾಣಿಕಾರ್ಥಪ್ರತೀತೌ ಗೃಹೀತಗ್ರಾಹಿತ್ವಂ ನಿಂದಾವಹಂ.

ಇಪ್ಪಡಿ ಮಧ್ಯಸ್ಥ ದೃಷ್ಟಿಯಾಲೆ ಪ್ರಾಮಾಣಿಕಾರ್ಥಙ್ಗಳ್ ತೋತ್ತ

impartial

ಪ್ರದತ್ವ ಶಕ್ತಿಯೂ ಇರುವದರಿಂದ ಲಕ್ಷ್ಮಿಯನ್ನು ಆಶ್ರಯಿಸುವದರಲ್ಲಿ ಏನೂ ವಿರುದ್ಧವಾದುದಿಲ್ಲವು "ವಿಮುಕ್ತಿ ಫಲದಾಯಿನೀ" ಎಂಬ ಪರಾಶರೋಕ್ತಿಯೂ ಇದನ್ನನುಸರಿಸಿಯೇ ಶ್ರೀ ಆಳವಂದಾರ್ರವರು "ಶ್ರೇಯೋನಹ್ಯರವಿಂದಲೋಚನಮನಃಕಾಂತಾ ಪ್ರಸಾದಾದೃತೇ । ಸಂಸೃತ್ಯಕ್ಷರ ವೈಷ್ಣವಾಧ್ವಸು ನೃಣಾಂ ಸಂಭಾವ್ಯತೇ ಕರ್ಹಿಚಿತ್" ಲಕ್ಷ್ಮಿಗೆ ಮೋಕ್ಷಪ್ರದತ್ವ ಉಂಟೆಂಬದಾಗಿ ಉಪದೇಶಿಸಿರುತ್ತಾರೆ. ಹಾಗೆಯೇ ಶ್ರೀ ಪರಾಶರ ಭಟ್ಟರವರೂ "ಐಶ್ವರ್ಯಮಕ್ಷರ ಗತಿಂ ಪರಮಂ ಪದಂವಾ" ಎಂಬ ಶ್ಲೋಕದಲ್ಲಿ ಉಪಪಾದಿಸಿರುತ್ತಾರೆ. ಇವರುಗಳೆಲ್ಲಾ "ಶ್ರಿಯಂ ವಸಾನಾ ಅಮೃತತ್ವಮಾಯನ್" ಎಂಬ ಶ್ರುತಿಯಲ್ಲಿ ಹೇಳಿರುವ ಹಾಗೆ ಮೋಕ್ಷಪ್ರದಳೆಂಬ ಅರ್ಥವನ್ನೇ ವ್ಯಕ್ತಗೊಳಿಸಿರುತ್ತಾರೆ. ಆದುದರಿಂದ ಅಧಿಕಾರಾರ್ಚನೆಯೂ ಕೂಡ ಯುಕ್ತವಾದುದೇ. ಮೋಕ್ಷಾರ್ಥಿಯಾಗಲಿ ಪ್ರಪನ್ನನಾಗಲಿ, ಹಾಗೆ ಲಕ್ಷ್ಮಿಯನ್ನು ಸೇವಿಸುವಾಗ ತನಗೆ ದ್ರವ್ಯವನ್ನು ಕೊಡು, ಮಕ್ಕಳನ್ನು ಕೊಡು ಎಂದು ಎಂದಿಗೂ ಪ್ರಾರ್ಥಿಸುವದಿಲ್ಲವಷ್ಟೆ. ಆದುದರಿಂದ ಅಂತಹ ಸೇವೆಯೂ ಕೂಡ ಪ್ರಪನ್ನನ ಸ್ವರೂಪಕ್ಕೆ ಯುಕ್ತವಾದುದೇ ಎಂಬಭಿಪ್ರಾಯವು.

ಪ್ರಾಮಾಣಿಕಾರ್ಥ ತೋರಿದರೂ ಹಿಡಿದುದರ ಹಟವು ನಿಂದ್ಯವು.

ಹೀಗೆ ಇಷ್ಟು ವಿಶದವಾಗಿ ಸಪ್ರಮಾಣವಾಗಿ ಲಕ್ಷ್ಮಿಯು ವಿಶೇಷಣವೇ ಸರಿ, ಉಪಲಕ್ಷಣವಲ್ಲವೆಂದೂ, ಆದುದರಿಂದ ಆಕೆಗೆ ಜಗತ್ಸೃಷ್ಟಿ, ಸ್ಥಿತಿ ಲಯಾದಿಗಳಲ್ಲೂ, ಚೇತನನಿಗೆ ಮೋಕ್ಷೋಪಾಯದಲ್ಲೂ, ಪ್ರಾಪ್ತಿಯಲ್ಲೂ, ಅನ್ವಯ ಉಂಟೆಂದೂ ವಿಶದಗೊಳಿಸಿ, ಈ ಅಭಿಪ್ರಾಯವೇ ಆಳ್ವಾರ್ ಪೂರ್ವಾಚಾರ್ಯರುಗಳಿಗೆ ಸಾಂಪ್ರದಾಯಿಕವಾಗಿ ಬಂದುದು ಎಂದು ವ್ಯಕ್ತಗೊಳಿಸಿದರೂ, ನಮ್ಮಲ್ಲೇ ಒಬ್ಬ ಮಹನೀಯರು ಉಪಲಕ್ಷಣವೆಂದು ಭಾವಿಸಿದುದರಿಂದ ಮೊಂಡತನದಿಂದ ಉಪಲಕ್ಷಣವೆಂದೇ ನಾವೂ ಭಾವಿಸುವೆವು ಎಂದರೆ ಅದು ಸರಿಯಾದ ವಾದವಲ್ಲವೆಂದು ಸದೃಷ್ಟಾಂತವಾಗಿ ನಿಂದಿಸುತ್ತಾರೆ:—ಇಪ್ಪಡಿ - ಹೀಗೆ ಮೇಲೆ ಉಪಪಾದಿಸಿದ ರೀತಿಯಲ್ಲಿ, ಮಧ್ಯಸ್ಥದೃಷ್ಟಿಯಾಲೆ-ಎರಡಭಿಪ್ರಾಯಗಳಲ್ಲಿ ಯಾವುದು ಪ್ರಾಮಾಣಿಕವಾದುದೆಂದು ವಿಮರ್ಶಿಸಿ ನೋಡುವ ಸಂದರ್ಭದಲ್ಲಿ, ಎರಡಭಿಪ್ರಾಯಕ್ಕೂ ಸಂಬಂಧಪಟ್ಟವನೆಂದು ಭಾವಿಸದೆ, ಮಧ್ಯಸ್ಥದೃಷ್ಟಿಯಿಂದ ಪ್ರಾಮಾಣಿಕಾರ್ಥ

ಚ್ಚೆಯ್‌ದೆ ಪತ್ತಿನದು ವಿಡಾದೊಳಿಯಲ್ (೧) **"ದೃಢಪೂರ್ವಶ್ರುತೋ**

ಜ್ಗಳ್ ತೋತ್ತ ಚ್ಚೆಯ್‌ದೆ - ಶಾಸ್ತ್ರಾದಿಗಳಿಂದ ಯಥಾರ್ಥವಾದ ಅಭಿಪ್ರಾಯಗಳು ಚೆನ್ನಾಗಿ ವಿಶದವಾಗಿ ತೋರಿಬಂದರೂ ಕೂಡ, **ಪತ್ತಿನದು ವಿಡಾದೊಳಿಯಲ್** – ಹಿಂದೆ ಏನೋ ಒಂದು ಕಾರಣದಿಂದ ಮನಸ್ಸಿಗೆ ತೋರಿದ ಅಭಿಪ್ರಾಯವನ್ನು ತ್ಯಜಿಸದೇ ಇದ್ದರೆ, ನಿಂದ್ಯವಾದ ದೆಶೆಯನ್ನು ಹೊಂದುವನು ಎಂಬುದಾಗಿ ಭಾರತ ಕರ್ಣಪರ್ವದಲ್ಲಿ ಕರ್ಣನನ್ನು ಕೊಲ್ಲುವನೆಂಬ ಅರ್ಜುನನ ಸಙ್ಕಲ್ಪಕ್ಕೆ ವಿರೋಧವಾಗಿ ಯುಧಿಷ್ಠಿರನು ಎಷ್ಟು ಉಪದೇಶಿಸಿದರೂ ಕೇಳದೇ ಇದ್ದುದರಿಂದ ಕೋಪಿಸಿದುದಕ್ಕಾಗಿ, ತನ್ನ ಅಣ್ಣನನ್ನೇ ಕೊಂದುಬಿಡುವನೆಂದು ಉದ್ಯುಕ್ತನಾದ ಅರ್ಜುನನನ್ನು ಕಂಡು ಶ್ರೀ ಕೃಷ್ಣನು ಹೇಗೆ ಈ ಗೃಹೀತ ಗ್ರಾಹಿತ್ವವನ್ನು ನಿಂದಿಸಿದನೋ ಅಂತಹ ದುಸ್ಥಿತಿಯುಳ್ಳವನಾಗುವನೆಂದು ಹೇಳುತ್ತಾರೆ:—ವಾದದಲ್ಲಿ ಎರಡಭಿಪ್ರಾಯವಿರುವಾಗ ಯಾವ ಪಂಗಡವನ್ನೂ ವಹಿಸದೆ ಮಧ್ಯಸ್ಥದೃಷ್ಟಿಯಿಂದಿದ್ದುಕೊಂಡು, ಯಾವ ಅಭಿಪ್ರಾಯವು ಪ್ರಮಾಣಗಳಿಂದ ಸಮಂಜಸವೆಂದು ಜಿಜ್ಞಾಸಮಾಡಿ ತಿಳಿದು ಪ್ರಾಮಾಣಿಕಾಭಿಪ್ರಾಯವು ತನ್ನ ಪೂರ್ವಾಭಿಪ್ರಾಯಕ್ಕೆ ವಿರೋಧವಾದರೂ ಆ ಪೂರ್ವಾಭಿಪ್ರಾಯವನ್ನು ತ್ಯಜಿಸಿ ಪ್ರಾಮಾಣಿಕಾರ್ಥವನ್ನು ಗ್ರಹಿಸತಕ್ಕದ್ದು. ಹಿಡಿದಿದ್ದ ವಿಷಯದಲ್ಲಿ ಹಠಮಾಡಕೂಡದೆಂಬ ಭಾವವು. ಒಂದೇ ಆತ್ಮವೇ ಇರುವದೆಂದೂ, ಮಿಕ್ಕಿದ್ದೆಲ್ಲಾ ಪರಿದೃಶ್ಯಮಾನವಾದುದೆಲ್ಲಾ ಮಿಥ್ಯಾ ಎಂದೂ, ಆ ಆತ್ಮವು ನಿರ್ಗುಣನೆಂದೂ, ಅವಿದ್ಯಾಗೃಹೀತನಾಗಿ ಸಂಸಾರ ಬಂಧವನ್ನನುಭವಿಸುವನೆಂದೂ ಇತ್ಯಾದ್ಯಭಿಪ್ರಾಯಗಳು ಪ್ರಾಮಾಣಿಕವೇ, ಅಥವಾ ಪರಮಾತ್ಮನು ಕಲ್ಯಾಣಗುಣಾಕರನೆಂದೂ, ಹೇಯಗಂಧವೇ ಇಲ್ಲದವನೆಂದೂ, ಜಗತ್ತಿನ ಚಿದಚಿತ್ತುಗಳನ್ನೆಲ್ಲಾ ವ್ಯಾಪಿಸಿ ಅವುಗಳಿಗೆ ಆತ್ಮಾವಾಗಿರುವದರಿಂದ ಜಗತ್ತು ಮಿಥ್ಯೆಯಲ್ಲವೆಂದೂ, ಆದರೆ ನಶ್ವರವೆಂದೂ, ಜೀವಾತ್ಮರುಗಳು ಅನೇಕರೆಂದೂ ಸರ್ವೇಶ್ವರನಿಗೆ ಶೇಷಭೂತರೆಂದೂ ಹೇಳುವ ವಿಶಿಷ್ಟಾದ್ವೈತಾಭಿಪ್ರಾಯಗಳು ಪ್ರಾಮಾಣಿಕವೇ ಎಂದು ಶಾಸ್ತ್ರಜ್ಞಾನಬಲದಿಂದ ಪರ್ಯಾಲೋಚಿಸಿ, ಯಾವುದು ಪ್ರಾಮಾಣಿಕವಾಗಿ ತೋರುತ್ತದೋ ಅದನ್ನು ನಿರ್ಭಯವಾಗಿ ಅವಲಂಬಿಸತಕ್ಕದ್ದೂ ಸಹ ಯುಕ್ತವೆಂದು ಹೇಳಿದಂತಾಯಿತು.

(೧) ಇದು ಶ್ರೀ ಕೃಷ್ಣನು ಅರ್ಜುನನಿಗೆ ಹೇಳುವ ವಾಕ್ಯವು. **ದೃಢಪೂರ್ವಶ್ರುತಃ** – ಹಿಂದೆ ಶ್ರುತವಾದುದು ಎಷ್ಟೋ ಅಷ್ಟರಲ್ಲೇ ದೃಢಮನಸ್ಕನಾಗಿರುವ, ಆದುದರಿಂದ, ಮೂರ್ಖಃ-ಮೂಢನಾಗಿರುವವನಾಗಿ, **ಧರ್ಮಾಣಾಂ-**

(೧) ಭಾರ. ಕರ್ಣ. ೭೨. ೫೪.

ಮೂರ್ಖೋ ಧರ್ಮಾಣಾ ಮವಿಶಾರದಃ । ವೃದ್ಧಾನ ಪೃಚ್ಛನ್ ಸಂದೇಹಾನಂಧ ಶ್ವಭ್ರ ವಿನಿವರ್ತತಿ" ॥

(೧) ಅನ್ಯಥಾ ಮಂದ ಬುದ್ಧೀನಾಂ ಪ್ರತಿಭಾತಿ ದುರಾತ್ಮನಾಂ ।

ಶಾಸ್ತ್ರಗಳಲ್ಲಿ ವಿಧಿಸಿರುವವಕ್ಕೂ ನಿಷೇಧಿಸಿರುವವಕ್ಕೂ ಧರ್ಮಗಳೆಂದು ಹೆಸರು, ಅವುಗಳಲ್ಲಿ, **ಅವಿಶಾರದಃ** - ಪಾಂಡಿತ್ಯವಿಲ್ಲದಿರುವವನಾಗಿ, **ಸಂದೇಹಾನ್** - ಸಂದೇಹಗಳನ್ನು ಕುರಿತು, **ವೃದ್ಧಾನ್** - ವಯೋವೃದ್ಧತೆ ಜ್ಞಾನವೃದ್ಧತೆ, ಇರುವವರನ್ನು, ಇಲ್ಲಿ ವೃದ್ಧ ಶಬ್ದವು ಜ್ಞಾನವಿರುವ ವೃದ್ಧರನ್ನೇ ಹೇಳುತ್ತದೆ, **ಅಪೃಚ್ಛನ್** - ಕೇಳಿ ತಿಳಿಯದೆ, **ಅಂಧಃ** - ಕುರುಡನಾದವನು, **ಶ್ವಭ್ರವಿನಿವ**-ಹಳ್ಳವನ್ನೋಪಾದಿಯಲ್ಲಿ, ದುರವಸ್ಥೆಯನ್ನು, **ಋಚ್ಛತಿ** - ಹೊಂದುವನು. ಈಗ ಧರ್ಮರಾಜನು ಅರ್ಜುನನ ಸಜ್ಜುಲಿಕ್ಕೆ ಪ್ರತಿಯಾಗಿ ಹೇಳಿದನು, ನೀನು ಕರ್ಣನನ್ನು ವಧಿಸಲಾರೆ, ಗಾಂಡೀವವನ್ನು ಕೃಷ್ಣನಿಗೆ ಕೊಟ್ಟುಬಿಡು ಎಂದನು. ತನ್ನಭಿಪ್ರಾಯದಲ್ಲೇ ಹಟಹಿಡಿದು, ವಿರುದ್ಧವಾಗಿ ಹೇಳಿದನಲ್ಲಾ ಎಂಬ ಕೋಪದಿಂದ ಅಣ್ಣನನ್ನು ಕೊಂದುಬಿಡುತ್ತೇನೆಂದು ಉದ್ಯೋಗಿಸಿ ಭ್ರಾತೃವಧ ರೂಪದೋಷ ಹೇಗೆ ಪ್ರಾಪ್ತವಾಗುತ್ತಿತ್ತೋ ಹಾಗೆ ಎಂಬ ಭಾವವು. ಆದುದರಿಂದ ಜ್ಞಾನಿಯು ಆಗಮೋತ್ಥಜ್ಞಾನವನ್ನು ಜ್ಞಾನಿಗಳ ಉಪದೇಶಮೂಲಕ ಸಂಪಾದಿಸಿ, ವಿವೇಕೋತ್ಥಜ್ಞಾನಮೂಲಕ ಸರ್ವಸಮಂಜಸಾರ್ಥಗಳನ್ನು ಗ್ರಹಿಸತಕ್ಕದ್ದು ಯುಕ್ತವೇ ವಿನಾ ಮೊಂಡತನ ಕೂಡದೆಂದು ಪರಮ ಹಿತೋಪದೇಶವನ್ನು ಮಾಡಿರುತ್ತಾರೆ. **ಧರ್ಮಾಣಾಂ ಅವಿಶಾರದಃ** ಎಂದು ನಿಂದಿಸಿದುದರಿಂದ ಧರ್ಮಗಳಲ್ಲಿ ವಿಶಾರದತೆಯು ಆವಶ್ಯಕವೆಂದು ಆಗಮೋತ್ಥಜ್ಞಾನದಾವಶ್ಯಕತೆಯು ಹೇಳಲ್ಪಟ್ಟಿತು. **ವೃದ್ಧಾನ ಪೃಚ್ಛನ್ ಸಂದೇಹಾನ್** ಎಂದು ಹೇಳಿರುವುದರಿಂದ ವಿವೇಕೋತ್ಥಜ್ಞಾನದ ಆವಶ್ಯಕತೆಯು ಹೇಳಿದಂತಾಯಿತು. ಹೀಗೆ ನಡೆಸದಿದ್ದರೆ ಕುರುಡನು ಹಳ್ಳದಲ್ಲಿ ಬಿದ್ದು ಅನರ್ಥವನ್ನು ಹೊಂದಿದಹಾಗೂ, ಭ್ರಾತೃವಧೆಯಲ್ಲಿ ಉದ್ಯುಕ್ತನಾದ ಅರ್ಜುನನ ಹಾಗೂ, ಮಹಾ ದೋಷಯುಕ್ತನು ಆಗುವನೆಂಬ ಭಾವವು. ಹೀಗೆ ಪರಮ ಹಿತವನ್ನು ಬೋಧಿಸಿದ್ದರೂ, ಲಕ್ಷ್ಮಿಯು ಉಪಲಕ್ಷಣವೆಂದು ಭಾವಿಸುವವರು ತಮ್ಮ ತಪ್ಪನ್ನು ತಿದ್ದಿಕೊಳ್ಳುವದಿಲ್ಲವೇ ಎಂದು ಪರಿತಾಪ ಪಡುತ್ತಾರೆ.

ಪ್ರಾಮಾಣಿಕಾರ್ಥ ಬೋಧೆ ಇದ್ದರೂ ಹಟದಿಂದ ಹಿಡಿದುದನ್ನು ಬಿಡದೇ ಇರುವದು ಏತಕ್ಕೆ ಎಂಬುದಕ್ಕೆ ಕಾರಣವನ್ನು ಇತಿಹಾಸ ಸಮುಚ್ಚಯ ವಾಕ್ಯದಿಂದ

---

(೧) ಇತಿಹಾಸ ಸಮುಚ್ಚಯ. ೩೩. ೧೦೮.

ಕುತರ್ಕ (ವ್ಯಾಳದಷ್ಟಾನಾಂ) ಜ್ಞಾನದುಷ್ಟಾನಾಂ ವಿಭ್ರಾಂತೇಂದ್ರಿಯ (ವಾಜಿನಾಂ) ವಾದಿನಾಂ'। ” ಎಜ್ಞರ ದಶೈಯಾನ್.

ಅತಶ್ಶ್ರೀಮಚ್ಛಬ್ದೋ ಸಿದ್ಧೋಪಾಯ ಸೂಚಕ ವಿಶೇಷಣ
ಮೇವೇತಿ ನಿಗಮಯತಿ.

ಆಗೈಯಾಲ್ ಸಿದ್ಧೋಪಾಯ ಶಬ್ದಮಾತ್ರ ವಿಮರ್ಶತ್ತಿಲ್

ಉದಾಹರಿಸುತ್ತಾರೆ:—ಮಂದಬುದ್ಧೀನಾಂ - ಅಲ್ಪವಾದ ಬುದ್ಧಿಯುಳ್ಳವರಿಗೂ ದುರಾತ್ಮನಾಂ - ರಾಜಸ ತಾಮಸಸ್ವಭಾವಯುಕ್ತರಿಗೂ ಕುತರ್ಕ ವ್ಯಾಳದಷ್ಟಾನಾಂ - ಕುತರ್ಕವೆಂಬ ಸರ್ಪದಿಂದ ಕಚ್ಚಲ್ಪಟ್ಟವರಿಗೂ, ಕುತರ್ಕ ಜ್ಞಾನ ದುಷ್ಟಾನಾಂ ಎಂಬ ಪಾಠವಾದರೆ, ಕುತರ್ಕದ ಜ್ಞಾನದಿಂದ ದುಷ್ಟರಾದವರಿಗೆ ಎಂಬರ್ಥವು, ವಿಭ್ರಾಂತೇಂದ್ರಿಯ ವಾಜಿನಾಂ - ವಿಷಯೋಪಭೋಗಗಳಿಂದ ಭ್ರಾಂತಿ ಹೊಂದಿದ ಎಂದರೆ ಸಿಕ್ಕಿದ ಹಾಗೆ ಸಂಚರಿಸುತ್ತಿರುವ, ಇಂದ್ರಿಯಗಳೆಂಬ ತುಂಟ ಕುದುರೆಗಳುಳ್ಳವರಿಗೂ, ವಾದಿನಾಂ ಎಂಬ ಪಾಠವಾದರೆ, ಭ್ರಾಂತಿ ಹೊಂದಿದ ಇಂದ್ರಿಯಗಳಿಂದ ವಾದಿಸುವವರಿಗೂ, ಅನ್ಯಥಾ - ಪ್ರಾಮಾಣಿಕ ವಲ್ಲದೆ ಬೇರೆಯಾಗಿ ಅಭಿಪ್ರಾಯವು, ಪ್ರತಿಭಾತಿ - ತೋರಿಬರುತ್ತದೆ. ಸಮುಜ್ಜ್ವಲಗಳಾದ ಪ್ರಮಾಣ ಸಂಪ್ರದಾಯಗಳನ್ನೆಲ್ಲಾ ಬೋಧಿಸಿದರೂ ತಿದ್ದಿಕೊಳ್ಳದಿರುವುದು ಕರ್ಮಬಲಿಷ್ಠವಾದುದಾಗಿ ಮಂದಬುದ್ಧಿಗಳಾಗಿ ರಾಜಸ ತಾಮಸ ಸ್ವಭಾವ ಯುಕ್ತರಾಗಿ, ಕುತರ್ಕಗಳಿಗೆ ವಶರಾಗಿ, ದುಷ್ಟೇಂದ್ರಿಯಗಳಿಂದ ವಂಚಿತರಾಗಿರುವವರಿಗೆ ವಿರುದ್ಧಾರ್ಥಗಳನ್ನು ಗ್ರಹಿಸುವರು (ಎಂದು ಇತಿಹಾಸ ಸಮುಚ್ಚಯ ವಾಕ್ಯದಲ್ಲಿ) ಎಜ್ಞರ ದಶೈಯಾನ್ ಎಂದು ಹೇಳಿರುವ ಅವಸ್ಥೆಯಾಗುತ್ತದೆ, ಎಂದರೆ ಅಂತಹ ಅನರ್ಥಗಳಿಗೆ ಗುರಿಯಾಗುವನೆಂಬ ಭಾವವು.

ಆದುದರಿಂದ ಶ್ರೀಮಚ್ಛಬ್ದವು ಸಿದ್ಧೋಪಾಯವನ್ನು ಸೂಚಿಸುವ
ವಿಶೇಷಣವೆಂದು ಪೂರ್ಣಮಾಡುತ್ತಾರೆ.

ಆಗೈಯಾಲ್ - ಆದುದರಿಂದ, ಸಿದ್ಧೋಪಾಯೇತ್ಯಾದಿ-ಸಿದ್ಧೋಪಾಯ ಶಬ್ದದಿಂದ ಹೇಳಲ್ಪಟ್ಟವನು ಯಾರು ? "ಯಮೇವೈಷ ವೃಣುತೇ ತೇನ ಲಭ್ಯಃ" ಎಂದು ಹೇಳಿರುವ ಹಾಗೆ ನಾರಾಯಣನೊಬ್ಬನೆಯೋ ? ಅಥವಾ "ಶ್ರದ್ಧಯಾ ದೇವೋ ದೇವತ್ವಮಶ್ನುತೇ" ಎಂದೂ, "ಲಕ್ಷ್ಮ್ಯಾ ಸಹ ಹೃಷೀಕೇಶೋ ದೇವ್ಯಾ ಕಾರುಣ್ಯರೂಪಯಾ । ರಕ್ಷಕಸ್ಸರ್ವಸಿದ್ಧಾನ್ತೇ ವೇದಾಂ

(೧) “**ನಾನಯೋರ್ವಿದ್ಯತೇ ಪರಂ,**” (೨) “**ಯಥಾಸರ್ವಗತೋ ವಿಷ್ಣು ಸ್ತಥೈವೇಯಂ ದ್ವಿಜೋತ್ತಮ**”

ತೇಷು ಚ ಗೀಯತೇ” ಎಂದೂ ಹೇಳಿರುವ ಹಾಗೆ ಲಕ್ಷ್ಮೀ ವಿಶಿಷ್ಟನಾದ ನಾರಾಯಣನೇ ಸಿದ್ಧೋಪಾಯನೇ ? ಎಂಬ ವಿಮರ್ಶೆಯಲ್ಲಿ (೧)“ **ಅನಯೋಃ**-ಈ ಲಕ್ಷ್ಮೀ ನಾರಾಯಣರಿಗಿಂತ, **ಪರಂ**-ಬೇರೆಯಾಗಿ ಶ್ರೇಷ್ಠವಾದುದು, **ನವಿದ್ಯತೇ**-ಇರುವದಿಲ್ಲವು. ಈ ಲೀಲಾವಿಭೂತಿಯಲ್ಲಿ ಎಲ್ಲವೂ ಇಬ್ಬರ ನಿಯಾಮ್ಯ ವರ್ಗಕ್ಕೆ ಸೇರಿದವಾದರೂ, ಕೆಲವುಗಳಲ್ಲಿ ನಾರಾಯಣನಿಗೆ ಅಭಿಮಾನವನ್ನೂ, ಇನ್ನು ಕೆಲವುಗಳಲ್ಲಿ ಲಕ್ಷ್ಮಿಗೆ ಅಭಿಮಾನವನ್ನೂ ಮೈತ್ರೇಯರಿಗೆ ಶ್ರೀ ಪರಾಶರರು ಉಪದೇಶಿಸಿದವರಾಗಿ ಹೇಳುತ್ತಾರೆ:—“**ದೇವ ತಿರ್ಯಙ್ಮನುಷ್ಯೇಷು ಪುನ್ನಾಮಾ ಭಗವಾನ್ ಹರಿಃ । ಸ್ತ್ರೀನಾಮ್ನೀ ಶ್ರೀಶ್ಚ ವಿಜ್ಞೇಯಾ ನಾನಯೋ ರ್ವಿದ್ಯತೇ ಪರಂ**” ದೇವತೆ, ಮನುಷ್ಯ, ಇತರ ಪ್ರಾಣಿಗಳು, ಇವುಗಳಲ್ಲಿ ಪುರುಷ ವಾಚಕವಾದವುಗಳೆಲ್ಲಾ ಹರಿಯೆಂದೂ, ಸ್ತ್ರೀ ವಾಚಕವಾದುದೆಲ್ಲಾ ಲಕ್ಷ್ಮೀ ಎಂದೂ, ಹೀಗೆ ಇವರಿಬ್ಬರಿಲ್ಲದೆ ಬೇರೆ ಯಾವುದೂ ಇಲ್ಲವೆಂದೂ ಹೇಳಲ್ಪಟ್ಟಿತು. ಮನೆಯಲ್ಲಿರುವ ಪದಾರ್ಥಗಳ ವಿಷಯದಲ್ಲಿ ಸ್ವಾಮಿತ್ವವು ದಂಪತಿಗಳಿಬ್ಬರಿಗೂ ಸೇರಿದುದಾದರೂ, ಸೀರೆ, ಕುಂಕುಮ ಆಭರಣಾದಿಗಳಲ್ಲಿ ಮನೆಯ ಹೆಂಗಸಿಗೆ ಹೇಗೆ ಅಭಿಮಾನವೋ ಹಾಗೆಯೇ ಧೋತ್ರ, ಅಂಗಿಗಳು, ದೇವರ ಪೂಜಾ ಸಾಮಗ್ರಿಗಳು ಮೊದಲಾದವುಗಳಲ್ಲಿ ಮನೆಯ ಯಜಮಾನನಿಗೆ ಹೇಗೆ ಅಭಿಮಾನವೋ ಹಾಗೆ ಎಂಬ ಭಾವವು. ಇದರಿಂದ ಇಬ್ಬರೂ ಸೇರಿ ಏಕಶೇಷಿತ್ವವುಂಟೆಂದು ಉಪಪಾದಿಸಲ್ಪಟ್ಟಿತು.

(೨) “ವಿಷ್ಣುವು, **ಯಥಾ**-ಹೇಗೆ, **ಸರ್ವಗತಃ**-ಸಮಸ್ತ ಚಿದಚಿತ್ತುಗಳನ್ನೂ ವ್ಯಾಪಿಸಿರುವನೋ, ಹೇ **ದ್ವಿಜೋತ್ತಮ** - ಓ ಬ್ರಾಹ್ಮಣಶ್ರೇಷ್ಠರಾದ ಮೈತ್ರೇಯರೇ, **ತಥೈವ** - ಹಾಗೆಯೇ, **ಅಯಂ** - ಈ ಲಕ್ಷ್ಮಿಯೂ.” ಹೀಗೆ ಎಲ್ಲಾ ಚಿದಚಿತ್ತುಗಳಿಗೂ ಲಕ್ಷ್ಮೀ ನಾರಾಯಣರೂ ಅವಿನಾಭೂತರಾಗಿ ಆತ್ಮರು; ಆದುದರಿಂದ ಸಮಸ್ತಕ್ಕೂ ಸ್ವಾಮಿತ್ವವುಂಟಾಗಿ, ಇಬ್ಬರೂ ಲೋಕಗಳಿಗೆಲ್ಲಾ ಈಶ್ವರೇಶ್ವರಿಗಳು ಎಂದು ಹೇಳಲ್ಪಟ್ಟಿರುವದರಿಂದ ಸರ್ವ ಶೇಷಿತ್ವವೂ ಇಬ್ಬರಿಗೂ ಉಂಟೆಂದು ಹೇಳಲ್ಪಟ್ಟಿತು. ಹಾಗೆಯೇ ಇನ್ನೊಂದು ಕಡೆಯಲ್ಲೂ “**ತ್ವಯೈತ ದ್ವಿಷ್ಣುನಾಚಾಂಬ ಜಗದ್ವ್ಯಾಪ್ತಂಚರಾಚರಮ್**” ಓ ಲಕ್ಷ್ಮಿಯೇ ನಿನ್ನಿಂದಲೂ ವಿಷ್ಣುವಿನಿಂದಲೂ ಈ ಚರಾಚರದಿಂದ ಕೂಡಿದ ಜಗತ್ತೆಲ್ಲವೂ ವ್ಯಾಪಿ

---

(೧) ವಿ. ಪು. ೧. ೮. ೩೫. (೨, ವಿ. ಪು. ೧. ೮. ೧೭.

(೩) "ಅಸ್ಯಾ ದೇವ್ಯಾ ಮನಸ್ತಸ್ಮಿನ್ ತಸ್ಯ ಚಾಸ್ಯಾಂ ಪ್ರತಿಷ್ಠಿತಂ। ತೇನೇಯಂ ಸ ಚ ಧರ್ಮಾತ್ಮಾ ಮುಹೂರ್ತಮಪಿ ಜೀವತಿ" (೪) "ವ್ಯಾಪಕಾವತಿ ಸಂಶ್ಲೇಷಾ ದೇಕ ತತ್ವಮಿವೋದಿತಂ"

ಸಲ್ಪಟ್ಟಿರುತ್ತದೆ ಎಂದು ಹೇಳಲ್ಪಟ್ಟಿರುತ್ತದೆ. ಹಾಗೆಯೇ ವಿಷ್ವಕ್ಸೇನ ಸಂಹಿತೆಯಲ್ಲೂ, "ಯಥಾಮಯಾ ಜಗದ್ವ್ಯಾಪ್ತಂ ಸ್ವರೂಪೇಣ ಸ್ವಭಾವತಃ। ತಥಾವ್ಯಾಪ್ತಂ ತಯಾಸರ್ವಂ ನಿಯನ್ತ್ರೀಚ ತಥೇಶ್ವರೀ ॥" ಸರ್ವೇಶ್ವರನಾದ ನನ್ನಿಂದ ಜಗತ್ತು ಹೇಗೆ ವ್ಯಾಪಿಸಲ್ಪಟ್ಟಿರುತ್ತದೋ, ಹಾಗೆಯೇ ಸಮಸ್ತವೂ ನನ್ನ ಪತ್ನಿಯಾದ ಲಕ್ಷ್ಮಿಯಿಂದ ವ್ಯಾಪಿಸಲ್ಪಟ್ಟಿರುತ್ತದೆ. ನಾನು ಹೇಗೆ ಸಮಸ್ತಕ್ಕೂ ನಿಯನ್ತಾವಾಗಿ ಈಶ್ವರನೋ ಹಾಗೆಯೇ ಆಕೆಯೂ ಸಮಸ್ತಕ್ಕೂ ನಿಯಾಮಕಳು ಮತ್ತು ಈಶ್ವರಿಯು. ಹೀಗೆಲ್ಲಾ ಪ್ರಮಾಣಗಳಿರುವದರಿಂದ ಸರ್ವ ಶೇಷಿತ್ವವು ಇಬ್ಬರಿಗೂ ಏರ್ಪಟ್ಟಿತು.

(೩) ಅಸ್ಯಾಃ ದೇವ್ಯಾಃ-ಇದು ಆಂಜನೇಯನ ಸೀತಾರಾಮರ ಪ್ರಶಂಸಾರೂಪವಾಕ್ಯವು, ಈ ದೇವಿಯಾದ ಸೀತೆಯ, ಮನಸ್ಸು, ತಸ್ಮಿನ್-ಆ ಶ್ರೀರಾಮನಲ್ಲಿ, ಪ್ರತಿಷ್ಠಿತಂ - ಸ್ಥಿರವಾಗಿ ಇಡಲ್ಪಟ್ಟಿರುತ್ತದೆ. ತೇನ - ಆ ಕಾರಣದಿಂದ ಇಯಂ - ಈಕೆಯು, ಮುಹೂರ್ತಮಪಿಜೀವತಿ - ಒಂದು ಮುಹೂರ್ತವಾದರೂ ಜೀವಿಸಿರುವಳು. ತಸ್ಯಚ - ಆ ಶ್ರೀರಾಮನ, ಮನಸ್ಸು, ಅಸ್ಯಾಂ - ಈಕೆಯಲ್ಲಿ ಪ್ರತಿಷ್ಠಿತಂ - ಸ್ಥಿರವಾಗಿ ನೆಲಗೊಂಡಿರುತ್ತದೆ. ತೇನ - ಆ ಕಾರಣದಿಂದ, ಸಚ ಧರ್ಮಾತ್ಮಾ - ಆ ಧರ್ಮಿಷ್ಠನಾದ ಶ್ರೀರಾಮನೂ ಕೂಡ, ಮುಹೂರ್ತಮಪಿ ಜೀವತಿ - ಒಂದು ಮುಹೂರ್ತವಾದರೂ ಜೀವಿಸಿರುತ್ತಾನೆ. ಹೀಗೆ ಪರಸ್ಪರಾನುರಾಗದಿಂದ ಒಬ್ಬರ ಮನಸ್ಸನ್ನು ಇನ್ನೊಬ್ಬರಲ್ಲಿ ಇಟ್ಟಿರುವದರಿಂದಲೇ ಇಬ್ಬರೂ ಬದುಕಿರುವದು, ಎಂಬ ಭಾವವು. ಇದರಿಂದ ಇಬ್ಬರೂ ಪ್ರಾವಣ್ಯಾತಿಶಯವುಳ್ಳವರೆಂದು ಹೇಳಲ್ಪಟ್ಟಿತು.

(೪) ವ್ಯಾಪಕೌ-ಲಕ್ಷ್ಮೀನಾರಾಯಣರಿಬ್ಬರೂ ಸರ್ವವನ್ನೂ ವ್ಯಾಪಿಸಿರುವವರು, ಅತಿಸಂಶ್ಲೇಷಾತ್ - ಒಬ್ಬರನ್ನೊಬ್ಬರನ್ನು ಎಂದಿಗೂ ಬಿಡದಿರುವ ವಿಶೇಷ ಸಂಶ್ಲೇಷವಿರುವದರಿಂದ, ಏಕತತ್ತ್ವಮಿವ-ಇಬ್ಬರೂ ಸೇರಿ ಒಂದೇ ತತ್ತ್ವವೋ ಎಂದು, ಉದಿತೌ - ಹೇಳಲ್ಪಟ್ಟಿರುತ್ತಾರೆ. ಇದರಿಂದ "ಶಿರಿವತ್ತ" ಅನ್ವಯ ವಿಶೇಷವು ಹೇಳಲ್ಪಟ್ಟಿತು.

---

(೩) ರಾಮಾ. ಸುಂ ೧೫ ೫೨. (೪) ಅಹಿ. ೪. ೭೮.

ಎಙ್ಗಳ ಪಡಿಯೇ ಏಕ ಶೇಷಿತ್ವತ್ತಾಲುಮ್, ಏಕಾಭಿಪ್ರಾಯ ತೈಯಾಲುಮ್, ಪರಸ್ಪರ ಪ್ರಾವಣ್ಯಾತಿಶಯತ್ತಾಲುಮ್, ಸ್ವರೂಪರೂಪಾದಿಗಳಿಲ್ ಪಿರಿವತ್ತ ಅನ್ವಯ ವಿಶೇಷತ್ತಾಲುಮ್, (೧) ಗಾಢೋಪಗೂಢಾನಿತೇ" ಎನ್ರುಮ್ಪಡಿ ಸುಶ್ಲಿಷ್ಟಮಾನ ವಿಶಿಷ್ಟ ತತ್ತ್ವಮ್ ನಿಱ್ಕಿರ ನಿಲೈ ಕುಲೈಯಾದಪಡಿ ಸವಿಶೇಷಣಮಾನ ನಾರಾಯಣ ಶಬ್ದಮ್, ಪ್ರತಿಪಾದಿಕ್ಕಿರ ಪಡಿಯೈ ಅನುಸಂಧಿಕ್ಕೈ, ಸತ್ವಸ್ಥರ್ಕ್ಕು ಪ್ರಾಪ್ತಮ್.

ಎಙ್ಗಳಪಡಿಯೇ - ಎಂದು ಹೇಳಿರುವ ಹಾಗೆ, ಮೇಲೆ ಉದಾಹರಿಸಿರುವ ಪ್ರಮಾಣಗಳು ಕ್ರಮವಾಗಿ ಏನು ಬೋಧಿಸುತ್ತವೆ ಎಂದರೆ ತಿಳಿಸುತ್ತಾರೆ:— ಏಕ ಶೇಷಿತ್ವತ್ತಾಲುಮ್ - ಇಬ್ಬರೂ ಸಮಸ್ತ ಜಗತ್ತಿಗೂ ಈಶ್ವರೇಶ್ವರಿಗಳಾಗಿ ಶೇಷಿಯಾಗಿರುವದರಿಂದಲೂ, ಏಕಾಭಿಪ್ರಾಯತ್ತಾಲುಮ್ - ಇಬ್ಬರಿಗೂ ಅಭಿಪ್ರಾಯಗಳು ಎಂದಿಗೂ ಪರಸ್ಪರ ವಿರೋಧವಾಗದೆ ಒಂದೇ ಅಭಿಪ್ರಾಯದಿಂದಲೂ, ಪರಸ್ಪರ ಪ್ರಾವಣ್ಯಾತಿಶಯತ್ತಾಲುಮ್-ಪರಸ್ಪರಾನುರಾಗದ ಅತಿಶಯದಿಂದಲೂ, ಸ್ವರೂಪರೂಪಾದಿಗಳಲ್ಲಿ, ಪಿರಿವತ್ತ-ವಿಶ್ಲೇಷೆಯೇ ಇಲ್ಲದಿರುವ, ಅನ್ವಯ ವಿಶೇಷತ್ತಾಲುಮ್ - ಸಂಬಂಧ ವಿಶೇಷದಲ್ಲಿರುವದರಿಂದಲೂ, ಇಲ್ಲಿ ಆದಿ ಪದದಿಂದ ಗುಣವಿಭವೈಶ್ವರ್ಯಗಳು ಹೇಳಲ್ಪಟ್ಟವು. "ಗಾಢೋಪಗೂಢಾನಿ ತೇ" ತೇ - ನಿನ್ನ, ಹಿಂದೆ ಅನುರೂಪ ರೂಪ ವಿಭವೈಃ ಎಂದು ಇದೆ, ಅನುಗುಣವಾದ ಸ್ವರೂಪರೂಪ ವಿಭವಗಳಿಂದ ದೃಢವಾದ ಸಂಶ್ಲೇಷವುಳ್ಳವುಗಳು ಎಂದರೆ ನಿತ್ಯಯೋಗವುಳ್ಳವುಗಳು. ಎನ್ರುಮ್ ಪಡಿ - ಎಂದು ಶ್ರೀ ಯಾಮುನೇಯರು ಚತುಶ್ಲೋಕಿಯಲ್ಲಿ ಉಪಪಾದಿಸಿರುವ ಹಾಗೆ. ಸುಶ್ಲಿಷ್ಟಮಾನ - ಚೆನ್ನಾಗಿ ನಿತ್ಯಯೋಗವನ್ನು ಹೊಂದಿರುವ ವಿಶಿಷ್ಟ ತತ್ತ್ವಮ್ - ವಿಶೇಷಣವಾದ ಲಕ್ಷ್ಮಿಯಿಂದ ಕೂಡಿದ ವಿಶೇಷ್ಯವಾದ ನಾರಾಯಣನೆಂಬ ತತ್ತ್ವವು. ನಿಱ್ಕಿರ ನಿಲೈ - ಇರುವ ಸ್ಥಿತಿಯು, ಕುಲೈಯಾದಪಡಿ - ವಿರೋಧವಾಗದಹಾಗೆ, ಸವಿಶೇಷಣಮಾನ ನಾರಾಯಣ ಶಬ್ದಮ್-ಶ್ರೀಮತ್ ಎಂಬ ವಿಶೇಷಣದಿಂದ ಕೂಡಿದ ನಾರಾಯಣ ಶಬ್ದವನ್ನು, ಪ್ರತಿಪಾದಿಕ್ಕಿರ ಪಡಿಯೈ - ದ್ವಯಪೂರ್ವಖಂಡದಲ್ಲಿ ಪ್ರತಿಪಾದಿಸುವ ರೀತಿಯನ್ನು, ಅನುಸಂಧಿಕ್ಕೈ - ಅನುಸಂಧಾನ ಮಾಡೋಣವು ಎಂದರೆ ಹಾಗೆ ಭಾವಿಸೋಣವು. ಸತ್ವಸ್ಥರುಕ್ಕು - ಸತ್ವಗುಣಾವಿಷ್ಟರಿಗೆ, ಪ್ರಾಪ್ತಮ್ - ಉಚಿತವು. ಇಷ್ಟು ದೂರ ಅನೇಕ ಶ್ರುತಿ ಸ್ಮೃತಿ ಇತಿಹಾಸ ಪುರಾಣಪ್ರಮಾಣ

---

(೧) ಚತುಶ್ಲೋಕೀ. ೪.

ಗಳು, ಸಾಂಪ್ರದಾಯಿಕವಾದ ಆಳ್ವಾರಾಚಾರ್ಯರುಗಳ ಅಭಿಪ್ರಾಯವೂ, ತದನು
ಗುಣವಾಗಿ ಮಾಡಿದ ಸತ್ತರ್ಕವೂ ಇಷ್ಟು ಪ್ರಯೋಜನಕಾರಿಯಾಗಿ ಸಮಂಜಸ
ವಾದ ಅಭಿಪ್ರಾಯವನ್ನು ಗ್ರಹಿಸಬೇಕಾದರೆ ಅವರುಗಳು ಸತ್ತ್ವಸ್ಥರಾಗಿರಬೇಕೆಂಬ
ಭಾವವು; ಮೇಲೆ ಉದಾಹರಿಸಿದ ನಾಲ್ಕು ಪ್ರಮಾಣಗಳೂ ನಾಲ್ಕು ಅಭಿಪ್ರಾಯ
ಗಳನ್ನು ಸಮರ್ಥಿಸುತ್ತವೆ. ಅವುಗಳಿಂದ ಕ್ರಮವಾಗಿ ಇಬ್ಬರೂ ಸೇರಿ ಏಕಶೇಷಿ
ಯೆಂದೂ, ಇಬ್ಬರಿಗೂ ಭಿನ್ನಾಭಿಪ್ರಾಯವಿಲ್ಲದೆ ಸರ್ವಜ್ಞರಾದುದರಿಂದ ಏಕಾಭಿಪ್ರಾಯ
ಉಳ್ಳವರೆಂದೂ, ಪರಸ್ಪರಾನುರಾಗದಿಂದ ಯಾವಾಗಲೂ ಒಟ್ಟಿಗೇ ಇರುವವರೆಂದೂ,
ಸ್ವರೂಪರೂಪಗುಣ ವಿಭವೈಶ್ವರ್ಯಗಳಲ್ಲೂ ನಿತ್ಯಯೋಗವುಳ್ಳವರೆಂದೂ, ಹೇಳಲ್ಪ
ಟ್ಟವು. ಇವುಗಳನ್ನೆಲ್ಲಾ ಗರ್ಭೀಕರಿಸಿ ಶ್ರೀ ಯಾಮುನೇಯರವರು ಚತುಶ್ಶ್ಲೋಕಿ
ಯ ನಾಲ್ಕನೆಯ ಶ್ಲೋಕವಾದ "ಶಾನ್ತಾನಂತ" ವೆಂಬ ಶ್ಲೋಕ ಮೂಲಕ
ಉಪಪಾದಿಸಿ, ಗಾಢೋಪಗೂಢಾನಿತ್ಯೇ ಎಂದು ನಿಗಮನಮಾಡಿ ಹೇಳಿರುತ್ತಾರೆ.
ದಾಸನು ಬರೆದಿರುವ ಚತುಶ್ಶ್ಲೋಕಿಯ ವ್ಯಾಖ್ಯಾನದ ೭೨-೯೫ ಪುಟಗಳಲ್ಲಿ ಈ
ಶ್ಲೋಕದ ಅರ್ಥವು ವಿವರಿಸಲ್ಪಟ್ಟಿರುತ್ತದೆ. ಅದನ್ನು ಪರಾಂಬರಿಸಬಹುದು.

ಜಗತ್ತೆಲ್ಲವೂ ಇಬ್ಬರಿಗೂ ಶೇಷಿಯಾದರೆ, ಇಬ್ಬರೂ ಈಶ್ವರೇಶ್ವರಿಗಳು
ಎಂದು ಏರ್ಪಟ್ಟವು. ಹಾಗಾದ ಪಕ್ಷದಲ್ಲಿ (೧) ಪರಸ್ಪರ ವೈಮನಸ್ಯದಿಂದ
ವ್ಯಾಘಾತ ಉಂಟಾಗಲಾರದೋ ಎಂದರೆ ಅದಕ್ಕೇನೂ ಕಾರಣವಿಲ್ಲವು. ಮಹಾ
ಸತ್ತ್ವಗುಣಾವಿಷ್ಟರಾಗಿ, ವೈಮನಸ್ಯಕ್ಕೆ ಬೇಕಾದ ರಜಸ್ತಮೋಗುಣಗಳ ಗಂಧವೇ
ಇಲ್ಲದೆ, ಪರಸ್ಪರ ಇಂಗಿತಗಳನ್ನು ಚನ್ನಾಗಿ ತಿಳಿದವರಾಗಿ ಏಕಾಭಿಪ್ರಾಯವುಳ್ಳವ
ರಾಗಿ, ಪರಸ್ಪರಾನುರಾಗವುಳ್ಳವರಾಗಿರುವದರಿಂದ, ಪರಸ್ಪರ ವೈಮನಸ್ಯ ಮೂಲಕ
ವ್ಯಾಘಾತಕ್ಕೆ ಕಾರಣವೇ ಇಲ್ಲವು. "ಮದ್ಧರ್ಮಧರ್ಮಿಣೀ ನಿತ್ಯಂ" ಎಂದು
ಸರ್ವೇಶ್ವರನೇ ಹೇಳಿಕೊಂಡಿರುವದರಿಂದ ಏನೊಂದೂ ತೊಂದರೆ ಇಲ್ಲವು.

(೨) ಇಬ್ಬರೂ ಈಶ್ವರೇಶ್ವರಿಗಳು ಎಂದರೆ "ನತತ್ಸಮಶ್ಚಾಭ್ಯಧಿಕಶ್ಚ
ದೃಶ್ಯತೇ" ಎಂದರೆ ಸರ್ವೇಶ್ವರನಿಗೆ ಸಮರಾಗಲಿ ಅಧಿಕರಾಗಲಿ ಇಲ್ಲವೆಂದು
ಹೇಳುವ ಶ್ರುತಿಗೆ ವಿರೋಧವಾಗಿ ಇಬ್ಬರೂ ಸಮರೆಂದು ಹೇಳಬೇಕಾಗುತ್ತದೆಯೋ
ಮವರಿಂದ ಸರಿಸಮಾನವೆಂದರೆ, ಇದು ಸರಿಯಾದ ಆಕ್ಷೇಪವಲ್ಲವು. ಏಕೆಂದರೆ
ತಾನು ಪತಿಗೆ ಶೇಷಭೂತಳೆಂದು ಅಸಂದೇಶಾತ್ತು ರಾಮಸ್ಯ ತಪಸಶ್ಚಾನುಪಾಲ
ನಾತ್ । ನತ್ವಾಂ ಕುರ್ಮಿ ದಶಗ್ರೀವ ಭಸ್ಮ ಭಸ್ಮಾರ್ಹ ತೇಜಸಾ" (ರಾಮಾ.
ಸುಂ ೨೨. ೨೦) ಎಂಬಲ್ಲಿ ಹೇಳಿಕೊಂಡಿರುವದರಿಂದಲೂ, "ಮಚ್ಛೇಷಭೂತಾ
ಸರ್ವೇಷಾಂ ಈಶ್ವರೀ ವಲ್ಲಭಾಮಮ" ಎಂಬ ಸರ್ವೇಶ್ವರೋಕ್ತಿಯಿಂದಲೂ,
ಪತಿಪಾರಾರ್ಥ್ಯವುಳ್ಳವಳೆಂಬುದು ತೋರಿಬರುವದರಿಂದ ಆಕ್ಷೇಪಕ್ಕೆ ಕಾರಣವೇ

ಇಲ್ಲವು. ಹೀಗೆಯೇ ಐಕಾಂತ್ಯಕ್ಕೆ ಕುಂದಕವೆಂಬ ಮತ್ತು ಲಕ್ಷ್ಮಿಗೆ ವಿಭುತ್ವ ಕೂಡುವದಿಲ್ಲವೆಂಬಿವೇ ಮೊದಲಾದ ಆಕ್ಷೇಪಗಳಿಗೂ ಸಮಾಧಾನಗಳನ್ನು ದಾಸನು ಬರೆದಿರುವ ಶ್ರೀ ಸ್ತುತಿ ಚತುಶ್ಶ್ಲೋಕಿ ವ್ಯಾಖ್ಯಾನಗಳಲ್ಲಿ ಕಾಣಬಹುದು

ಗಾಢೋಪ ಗೂಢಾನಿತೇ ಎಂಬಲ್ಲಿ ನಿತ್ಯಯೋಗವು ಲಕ್ಷ್ಮೀನಾರಾಯಣರಿಗೆ ಹೇಳಲ್ಪಟ್ಟಿತು. ನಮ್ಮಲ್ಲೇ ಕೆಲವರು ಈ ನಿತ್ಯಯೋಗವು ದಿವ್ಯಮಙ್ಗಳ ವಿಗ್ರಹದಲ್ಲಿ ಮಾತ್ರವೇ ಎಂದೂ, ಸ್ವರೂಪವಿಭವಾದಿಗಳಲ್ಲಿ ಇಬ್ಬರಿಗೂ ನಿತ್ಯಯೋಗವಿಲ್ಲವೆಂದೂ ಹೇಳುವರು. ನಿತ್ಯಯೋಗ ವಿಷಯವು ಪುರಾಣರತ್ನವಾದ ವಿಷ್ಣುಪುರಾಣದಲ್ಲಿ ಬಹು ಸ್ವಾರಸ್ಯವಾಗಿ ಉಪಪಾದಿತವಾಗಿರುತ್ತದೆ. ಮೈತ್ರೇಯರ ಪ್ರಶ್ನೆಯು ದಿವ್ಯಮಙ್ಗಳವಿಗ್ರಹ ವಿಷಯವಾಗಿದ್ದರೂ, **ರಾಘವತ್ವೇ ಭವೇತ್ಸೀತಾ ರುಕ್ಮಿಣೀ ಕೃಷ್ಣಜನ್ಮನಿ** ಎಂದು ಇಷ್ಟು ಮಾತ್ರ ನಿತ್ಯಯೋಗವನ್ನು ಹೇಳಿಬಿಟ್ಟರೆ, ಎಲ್ಲಿ ತಪ್ಪು ಅಭಿಪ್ರಾಯವುಳ್ಳವರಾಗುತ್ತಾರೋ ಎಂಬ ಸಂದೇಹದಿಂದ, ಶ್ರೀ ಪರಾಶರರು **“ನಿತ್ಯೈವೈಷಾ ಜಗನ್ಮಾತಾ ವಿಷ್ಣೋಶ್ಶ್ರೀ ರನಪಾಯಿನೀ”** ಎಂದು ನಿತ್ಯಯೋಗ ಪ್ರತಿಜ್ಞಾವಾಕ್ಯವನ್ನು ಹೇಳಿ, ಒಡನೆಯೇ ಉತ್ತರಾರ್ಧದಿಂದ, **“ಯಥಾ ಸರ್ವಗತೋ ವಿಷ್ಣುಸ್ತಥೈವೇಯಂ ದ್ವಿಜೋತ್ತಮ”** ಎಂದು ಸ್ವರೂಪತಃ ನಿತ್ಯಯೋಗವನ್ನೂ, ವಿಭುತ್ವವನ್ನೂ, ಉಪದೇಶಿಸಿರುತ್ತಾರೆ. ಅದಕ್ಕೆ ಮುಂದಿನ ಶ್ಲೋಕಗಳಿಂದ ಅಧ್ಯಾಯ ಸಮಾಪ್ತಿಯವರೆಗೂ ವಿಭವದಲ್ಲಿ ನಿತ್ಯಯೋಗವನ್ನು ಹೇಳಿ, ಸ್ವರೂಪತಃ ನಿತ್ಯಯೋಗ ಹೇಳಿದುದನ್ನು ಇಂದ್ರಸ್ತುತಿಯಲ್ಲಿ ಪುನಃ **“ತ್ವಯೈತದ್ವಿಷ್ಣುನಾಚಾಂಬ ಜಗದ್ವ್ಯಾಪ್ತಂ ಚರಾಚರಂ”** ಎಂದು ಜ್ಞಾಪಿಸಿ, ಹೀಗೆ ಸ್ವರೂಪ ರೂಪ ವಿಭವೈಶ್ವರ್ಯಗಳಲ್ಲಿಯೂ ಉಂಟೆಂದು ಸ್ಥಾಪಿಸಿರುತ್ತಾರೆ. ಹೀಗಿದ್ದರೂ ಕೆಲವರು ಯಾವ ಕಾರಣದಿಂದ ವಿಭುತ್ವವಿಲ್ಲವೆಂದೂ, ಅದರಿಂದ ಸ್ವರೂಪತಃ ನಿತ್ಯಯೋಗವಿಲ್ಲವೆಂದೂ ಹೇಳುವರೋ ತಿಳಿಯದು. ಕೆಲವು ಮಹನೀಯರು ಲಕ್ಷ್ಮಿಗೆ ಅಂತರ್ಯಾಮಿತ್ವವನ್ನೂ ಜಗತ್ಕಾರಣವನ್ನೂ ವಿಭುತ್ವವನ್ನೂ ಅಙ್ಗೀಕರಿಸುವದು ಕೇವಲ ಕುತರ್ಕಗಳೆಂದೂ ಕಲ್ಪಿತಗಳೆಂದೂ, ಹೇಳುವರು. ಜಗತ್ಕಾರಣತ್ವವನ್ನು **“ಆನೀತವಾದಗ್ಂ ಸ್ವಧಯಾತದೇಕಂ”** ಎಂಬ, **ಶ್ರದ್ಧಯಾದೇವೋ ದೇವತ್ವ ಮಶ್ನುತೇ** ಎಂಬ ಶ್ರುತಿ ಮತ್ತು ವ್ಯಾಸೋಕ್ತಿಗಳೂ, ಶ್ರೀ ಪರಾಶರಭಟ್ಟರ ದಿವ್ಯ ಸೂಕ್ತಿಗಳೂ ಎಲ್ಲಾ ಬೋಧಿಸುತ್ತವೆ. ಇವೆಲ್ಲಾ ಕುತರ್ಕಗಳೇ? ಲಕ್ಷ್ಮಿಗೆ ವಿಭುತ್ವವನ್ನು ಶ್ರೀ ಪರಾಶರರು ಬೋಧಿಸುತ್ತಾರೆ; ಇದು ಕುತರ್ಕವೇ, ಕಲ್ಪಿತವೇ? ಭಗವಚ್ಛಾಸ್ತ್ರವೂ ವಿಭುತ್ವವನ್ನು ಬೋಧಿಸುತ್ತದೆ, ಅದೂ ಕುತರ್ಕವೇ? ಕಲ್ಪಿತವೇ? ಇಂತಹ ಅಭಿಪ್ರಾಯಗಳು

ಸಿದ್ಧೋಪಾಯ ಸಾಧ್ಯೋಪಾಯ ಶಬ್ದಯೋರರ್ಥ ನಿರ್ಧಾರಣಂ.

ಸಮಸ್ತ ಪುರುಷಾರ್ಥಾನಾಂ ಸಾಧಕಸ್ಯ ದಯಾನಿಧೇಃ ।
ಶ್ರೀಮತಃ ಪೂರ್ವಸಿದ್ಧತ್ವಾತ್ಸಿದ್ಧೋಪಾಯ ಮಿಮಂ ವಿದುಃ ॥೨೭॥

ಸತ್ವಸ್ಥರಿಗೆ ಉಂಟಾಗಲಾರದೆಂಬುದು ಶ್ರೀ ದೇಶಿಕರವರಭಿಪ್ರಾಯವು.

ಹಿಂದೆ ಅನುಗ್ರಹಿಸಿದ "**ಇತ್ಥಂ ಪ್ರಪತ್ತಿ ವಿದ್ಯಾಯಾಂ**" ಎಂಬ ಕಾರಿಕೆಯಲ್ಲಿ ಶ್ರೀ ದೇಶಿಕರವರು ವಿಶೇಷಣಗಳಾದ ಕಲ್ಯಾಣಗುಣಗಳೂ, ದಿವ್ಯ ಮಙ್ಗಳ ವಿಗ್ರಹ, ಅನುಗ್ರಹಮಯಳಾದ ಪ್ರಿಯಪತ್ನೀ ಇವರುಗಳಿಂದ ವಿಶಿಷ್ಟ ನಾದ ನಾರಾಯಣನೇ ಸಿದ್ಧೋಪಾಯನೇ ವಿನಾ ಈ ವಿಶೇಷಣಗಳಿಂದ ಪೃಥಕ್ಕಾದ ನಾರಾಯಣನು ಸಿದ್ಧೋಪಾಯನಲ್ಲವೆಂದು ಸ್ಥಾಪಿಸಿದರು. ಹಾಗಾದರೆ ಸಿದ್ಧೋ ಪಾಯನೆಂದರೇನು? ಫಲಸಿದ್ಧಿಗೆ ಪೂರ್ವಭಾವಿಯಾಗಿ ಸಿದ್ಧವಾಗಿರುವ ಉಪಾಯ ವೆಂದಾದರೆ ಆಗ ಸಾಧ್ಯೋಪಾಯಗಳಾದ ಭಕ್ತಿ ಪ್ರಪತ್ತಿಗಳೂ ಕೂಡ ಸಿದ್ಧೋ ಪಾಯಗಳೆಂದಾಗುತ್ತದೆ. ಆದುದರಿಂದ ಸಿದ್ಧೋಪಾಯನು ಶ್ರೀಮನ್ನಾರಾಯಣ ನೆಂದೂ, ಈ ಭಕ್ತಿ ಪ್ರಪತ್ತಿಗಳು ಸಿದ್ಧೋಪಾಯಗಳಲ್ಲವು, ಸಾಧ್ಯೋಪಾಯಗಳೆಂದೂ ತಿಳಿಸುತ್ತಾರೆ: ಹೀಗೆ ಕೆಲವು ಪೂರ್ವ ಪಕ್ಷಗಳು ಉಂಟಾಗಬಹುದು. ಅವುಗಳಿಗೆಲ್ಲಾ ನಿಷ್ಕರ್ಷಾಭಿಪ್ರಾಯಗಳನ್ನೂ ಸಮಾಧಾನಗಳನ್ನೂ ಕಾರಿಕೆಗಳ ಮೂಲಕ ದಯ ಪಾಲಿಸುತ್ತಾರೆ:—

ಸಿದ್ಧೋಪಾಯ ಸಾಧ್ಯೋಪಾಯ ಶಬ್ದಗಳ ಅರ್ಥ ವ್ಯವಸ್ಥೆಯು.

ಸಮಸ್ತ ಪುರುಷಾರ್ಥಗಳಾದ ಎಂದರೆ ಧರ್ಮಾರ್ಥಕಾಮ ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು, **ಸಾಧಕಸ್ಯ**-ಸಾಧಿಸಿಕೊಡುವ, ಇದರಿಂದ ಸರ್ವೇ ಶ್ವರನು ಸಿದ್ಧೋಪಾಯನಾಗಿರುವದರ ಪ್ರಯೋಜನವು ಹೇಳಲ್ಪಟ್ಟಿತು. ಹೀಗೆ ಬೇಡಿದ ಪುರುಷಾರ್ಥಗಳನ್ನು ಸಾಧಿಸಿಕೊಡಬೇಕಾದರೆ, ಎರಡು ಗುಣಗಳು ಸರ್ವೇ ಶ್ವರನಲ್ಲಿರಬೇಕು:—(೧) ಅಘಟಿತ ಘಟನಾರೂಪ ಸಾಮರ್ಥ್ಯವು (೨) ದಯೆ ಯು; ಸಾಧಕಸ್ಯ ಎಂಬುದರಿಂದ ಸಾಮರ್ಥ್ಯವುಂಟೆಂದು ಹೇಳಲ್ಪಟ್ಟಿತು. ದಯೆ ಯುಂಟೆಂದು **ದಯಾನಿಧೇಃ** - ಕರುಣಾಸಾಗರನಾದ ಎಂಬುದರಿಂದ ಹೇಳಲ್ಪ ಟ್ಟಿತು. ಎರಡೂ ಅವಶ್ಯಕವು. ದಯೆ ಇಲ್ಲದ ಸಾಮರ್ಥ್ಯವೂ, ಸಾಮರ್ಥ್ಯ ವಿಲ್ಲದ ಬರೀ ದಯೆಯೂ ಕಾರ್ಯಕಾರಿಯಲ್ಲವು. ಹೀಗೆ ಸಾಮರ್ಥ್ಯವನ್ನೂ ದಯೆ ಯನ್ನೂ ಹೊಂದಿದ, **ಶ್ರೀಮತಃ** - ಲಕ್ಷ್ಮಿಯಿಂದ ಯುಕ್ತನಾದ ನಾರಾಯಣನ

ಭಕ್ತಿ ಪ್ರಪತ್ತಿ ಪ್ರಮುಖಂ ತದ್ವಶೀಕಾರ ಕಾರಣಮ್ ।
ತತ್ತತ್ಫಲಾರ್ಥಿ ಸಾಧ್ಯತ್ವಾತ್ಸಾಧ್ಯೋಪಾಯಂ ವಿದುರ್ಬುಧಾಃ ॥೨೮॥

(ನು), **ಪೂರ್ವಸಿದ್ಧತ್ವಾತ್** - ಎಲ್ಲಾದಕ್ಕಿಂತ ಮುಂದೆಯೇ, ಅನುಷ್ಠಿಸಿದ
ಸಾಧ್ಯೋಪಾಯಗಳಿಗಿಂತ ಪ್ರಾಂಚಿತವಾಗಿರುವದರಿಂದ **ಇಮಂ** - ಈ ಶ್ರಿಯಃಪತಿ
ಯನ್ನು, ಸಿದ್ಧೋಪಾಯನೆಂದು, **ವಿದುಃ** - ತಿಳಿಯುತ್ತಾರೆ. ಇದರಿಂದ
ಸಿದ್ಧೋಪಾಯ ವೆಂದರೆ ಫಲಪೂರ್ವಭಾವಿಯಾಗಿ ಸಿದ್ಧವಾದ ಉಪಾಯವೆಂಬರ್ಥ
ವಲ್ಲವು. ಎಲ್ಲಾದಕ್ಕೂ ಪೂರ್ವಭಾವಿಯಾಗಿ ಸನಾತನನಾಗಿ ಇರುವವನೇ ಉಪಾಯ
ವೆಂಬರ್ಥವು ಆದುದರಿಂದ ಶ್ರಿಯಃಪತಿಯೇ ವಿನಾ, ಭಕ್ತಿಪ್ರಪತ್ತಿಗಳಲ್ಲವು.
ಭಕ್ತಿಪ್ರಪತ್ತಿಗಳು ಅಚೇತನರೂಪಕರ್ಮಗಳು, ಜ್ಞಾನರೂಪವಾದವು ಅವುಗಳೇ
ಸ್ವತಂತ್ರಿಸಿ ಪುರುಷಾರ್ಥಗಳನ್ನು ಕೊಡಲಾರವು. ಅವುಗಳ ಪ್ರಯೋಜನವೇ
ನೆಂದರೆ, ನಮ್ಮಗಳ ಸಹಸ್ರಾಪರಾಧಗಳಿಂದ ನಿಗ್ರಹಿಸಬೇಕೆಂದುದ್ಯುಕ್ತನಾದ ಶ್ರೀ
ಮನ್ನಾರಾಯಣನ ಕೋಪವನ್ನು ಶಾಂತಿಗೊಳಿಸಿ, ಆತನ ಅನುಗ್ರಹವನ್ನು ಸಂಪಾ
ದಿಸಿ ಕೊಡುವುವು; ಪುರುಷಾರ್ಥಗಳನ್ನು ಕೊಡುವವನೂ, ಸಾಧ್ಯೋಪಾಯಗಳನ್ನ
ವಲಂಬಿಸುವಹಾಗೆ ಮಾಡುವವನೂ, ಶ್ರೀ ವಿಶಿಷ್ಟನಾದ ನಾರಾಯಣನೇ. ತಾನೇ
ದಯಾನಿಧಿಯಾಗಿದ್ದರೂ, ಅನುಗ್ರಹಮಯಳಾಗಿ, ವಾಲ್ಲಭ್ಯಾತಿಶಯವನ್ನು ಹೊಂದಿ
ದವಳಾಗಿರುವ ಪ್ರಿಯಪತ್ನಿಯ ಸಾನ್ನಿಧ್ಯವೂ ಇರುವುದರಿಂದ, ದಯಾನಿಧಿ ಎಂಬ
ಬಿರುದು ತನ್ನ ಪತಿಗೆ ಸಲ್ಲುವ ಹಾಗೆ ಮಾಡುವಳಾದುದರಿಂದ **ಶ್ರೀಮತಃ**-ಎಂದು
ಪ್ರಯೋಗಿಸಿರುತ್ತಾರೆ. ಆದುದರಿಂದ ಲಕ್ಷ್ಮೀ ವಿಶಿಷ್ಟನಾರಾಯಣನೇ ಸನಾತನ
ನಾಗಿ ಪೂರ್ವಸಿದ್ಧನಾದುದರಿಂದ ಸಿದ್ಧೋಪಾಯನು, ಭಕ್ತಿಪ್ರಪತ್ತಿಗಳು ಅಲ್ಲವು
ಎಂಬಭಿಪ್ರಾಯವು. ಇಲ್ಲಿ ವಿದುಃ - ತಿಳಿದರು ಎಂದು ಹೇಳಿರುತ್ತದೆ, ಯಾರೆಂದು
ಹೇಳಲಿಲ್ಲವು, ಸತ್ವಸ್ಥರಾದ ಜ್ಞಾನಿಗಳು ಎಂದು ಇಟ್ಟುಕೊಳ್ಳತಕ್ಕದ್ದು, ಬುಧಾಃ-
ಎಂದು ಮುಂದಿನಶ್ಲೋಕದಲ್ಲಿದೆ. ಇದರಲ್ಲಿ ಆಳ್ವಾರಾಚಾರ್ಯರುಗಳೂ ಸೇರಿದರು.

ಮುಂದೆ ಭಕ್ತಿ ಪ್ರಪತ್ತಿಗಳು ಹೇಗೆ ಸಾಧ್ಯೋಪಾಯಗಳೆಂಬುದನ್ನು ತಿಳಿಸು
ತ್ತಾರೆ. ಭಕ್ತಿ ಪ್ರಪತ್ತಿಗಳಿಗೆ ಪೂರ್ವಸಿದ್ಧತ್ವವಿಲ್ಲದೆ ಪುರುಷನ ಕೃತಿಯಿಂದ ಸಾಧ್ಯ
ವಾದವುಗಳಾದುದರಿಂದ ಸಿದ್ಧೋಪಾಯವಾಗಲಾರದೆಂದೂ ಅವುಗಳು ಸಾಧ್ಯೋ
ಪಾಯಗಳೆನಿಸುವುವೆಂದೂ ಹೇಳುತ್ತಾರೆ.

ಭಕ್ತಿ ಪ್ರಪತ್ತಿ ಪ್ರಮುಖಂ - ಭಕ್ತಿಯೋಗ ಮತ್ತು ಪ್ರಪತ್ತಿ, **ಪ್ರಮು
ಖಂ** - ಮೊದಲಾದವನ್ನೂ, ಈ ಪ್ರಮುಖ ಶಬ್ದದಿಂದ ಉಪಾಸನದ ಮತ್ತು

ಪ್ರಪತ್ತಿಯ ಭೇದಗಳು ಹೇಳಲ್ಪಟ್ಟವು. **ತದ್ವಶೀಕಾರ ಕಾರಣಮ್** - ಆ ಭಗವಂತನನ್ನು ವಶಮಾಡಿಕೊಳ್ಳಲು ನಿಮಿತ್ತಭೂತವಾದುದು, **ತತ್ಫಲಾರ್ಥಿ ಸಾಧ್ಯತ್ವಾತ್** - ಆಯಾಯಾ ಫಲಗಳನ್ನು ಅಪೇಕ್ಷಿಸುವರುಗಳ ವ್ಯಾಪಾರಮೂಲಕ ಸಾಧಿಸಲು ಯೋಗ್ಯವಾದವುಗಳಾದುದರಿಂದ, **ಬುಧಾಃ** - ಪಂಡಿತರು, **ಸಾಧ್ಯೋಪಾಯಂ ವಿದುಃ** ಸಾಧ್ಯೋಪಾಯವೆಂದು ತಿಳಿದರು, ಇಲ್ಲಿ ಪ್ರಮುಖ ಶಬ್ದದಿಂದ ೩೨ ವಿಧ ಉಪಾಸನಾ ಭೇದಗಳೂ,ಉಕ್ತಿನಿಷ್ಠೆ ಆಚಾರ್ಯ ನಿಷ್ಠೆ ಎಂಬ ಪ್ರಪತ್ತಿಭೇದಗಳೂ ಹೇಳಲ್ಪಟ್ಟವು, **ತದ್ವಶೀಕಾರಕಾರಣಂ** ಎಂದು ಹೇಳಿರುವದರಿಂದ ಈ ಸಾಧ್ಯೋಪಾಯಗಳೇ ಸ್ವತಃ ಫಲದಾಯಕಗಳಲ್ಲವು. ಅವು ಭಗವಂತನನ್ನು ವಶಮಾಡಿಕೊಳ್ಳಲು ಸಹಾಯಭೂತವಾದುವು, ಫಲಪ್ರದನು ಶ್ರೀ ಲಕ್ಷ್ಮೀನಾರಾಯಣನೇ ವಿನಾ ಇವುಗಳಲ್ಲವು. ಆದುದರಿಂದ **ತದ್ವಶೀಕಾರಕಾರಣಂ** ಎಂದು ಹೇಳಲ್ಪಟ್ಟವು. ವಶೀಕಾರ ಪರಂಪರೆಯನ್ನು ಉಪಪಾದಿಸುವ ಸಂದರ್ಭದಲ್ಲಿ ಶ್ರೀ ಭಾಷ್ಯಕಾರರು **ತಸ್ಯ ಚ ವಶೀಕರಣಂ ತಚ್ಛರಣಾಗತಿರೇವ** ಎಂದು ಹೇಳಿರುವದರಿಂದ ಸಾಧ್ಯೋಪಾಯದ ಪ್ರಯೋಜನವು ಭಗವಂತನನ್ನು ಫಲಪ್ರದೋನ್ಮುಖನಾಗಿ ವಶಮಾಡಿಕೊಳ್ಳಲು ಸಹಕಾರಿಯಾಗಿರೋಣವು. ಇವು ನಿಮಿತ್ತ ಭೂತವು, ವ್ಯಾಜರೂಪವಾದುವು. ಹಾಗಾದರೆ ಅವುಗಳ ಆವಶ್ಯಕತೆಯೇನು? ಕೃಪಾಸಾಗರನಾದ ಸಿದ್ಧೋಪಾಯನೇ ಇರುವಾಗ ಇವುಗಳು ನಿರರ್ಥಕವಲ್ಲವೋ ? ಎಂದರೆ, ಅವುಗಳೂ ಭಗವತ್ಕೃಪೋತ್ತಂಭಕಗಳಾಗಿ ಆವಶ್ಯಕವೆಂದು ಹೇಳುವದಕ್ಕಾಗಿಯೂ, ಅವುಗಳು ಬೇಕಾಗಿಲ್ಲವೆಂದು ಹೇಳುವ ವಾದದ ಖಂಡನಕ್ಕಾಗಿಯೂ **ತತ್ತತ್ಫಲಾರ್ಥಿ ಸಾಧ್ಯತ್ವಾತ್** ಎಂಬ ಹೇತುವು ಪ್ರಯೋಗಿಸಲ್ಪಟ್ಟಿರುತ್ತದೆ. ಫಲಾಪೇಕ್ಷೆಯುಳ್ಳವರ ಕೃತಿಯಿಂದ ಸಾಧ್ಯವಾದುದರಿಂದ ಸಿದ್ಧೋಪಾಯುವಲ್ಲವೆಂದೂ ಹೇಳಲ್ಪಟ್ಟಿತು. ಸಾಧ್ಯೋಪಾಯ ಬೇಡವೆಂದರೆ ಸರ್ವೇಶ್ವರನಿಗೆ ವೈಷಮ್ಯವೂ ಏರ್ಪಟ್ಟಿತು.

ಹೀಗೆ ಹೇಳಿದುದರಿಂದ ಎರಡು ಶಙ್ಕಗಳು ಉತ್ಪನ್ನವಾಗುತ್ತವೆ. ಹೇಗೆಂದರೆ:—(೧) ಭಕ್ತಿಪ್ರಪತ್ತಿ ಮೊದಲಾದ ಸಾಧ್ಯೋಪಾಯಗಳೇನೋ ಭಗವಂತನನ್ನು ವಶೀಕಾರಮಾಡಿಕೊಳ್ಳಲು ಸಾಧನಗಳೆಂದು ಹೇಳಲ್ಪಟ್ಟವು. ಆದರೆ ಲೀಲಾವಿಭೂತಿಯೂ ಆತನಿಗೆ ತುಂಬಾ ಇಷ್ಟವಾದುದಾಗಿರುವಾಗ ಭಕ್ತಿಪ್ರಪತ್ತಿಗಳು ಭಗವಂತನ ಲೀಲಾರಸವನ್ನು ಹೇಗೆ ನಿರೋಧಮಾಡೀತು ? (೨) ಸ್ವತಂತ್ರನಾಗಿ ಸತ್ಯಸಙ್ಕಲ್ಪನಾಗಿರುವ ಭಗವಂತನಿಗೆ ಲೀಲಾ ವಿಭೂತಿಯಲ್ಲಿ ಚೇತನರಿರುವದೂ ಇಷ್ಟವಾಗಿರುವಾಗ ಈ ಲೀಲಾವಿಭೂತಿಯ ಶೃಙ್ಖಲವು ಹೇಗೆ ಭಕ್ತಿಪ್ರಪತ್ತಿಗಳಿಂದ ಭಗ್ನವಾಗುತ್ತದೆ? ಈ ಎರಡು ಶಙ್ಕಗಳನ್ನು ಮುಂದಿನ ಎರಡು ಕಾರಿಕೆ

ಸಾಧ್ಯೋಪಾಯೋತ್ತರಂಗೇಣ ಸಿದ್ಧೋಪಾಯಸ್ಯ ಶೇಷಿಣಃ ।
ಲೀಲಾಪ್ರವಾಹಃಕಾರುಣ್ಯ ಪ್ರವಾಹೇಣ ನಿರುಧ್ಯತೇ ॥ ೨೯ ॥
ತೇನೈವ ಸರ್ವೇ ಲೀಯಂತೇ ಸಿಕತಾ ಸೇತು ಬಂಧವತ್ ।
ಸ್ವತಂತ್ರಸ್ಯಾಪಿ ಸಙ್ಕಲ್ಪಾ ಸ್ಸ್ವಕೈಙ್ಕರ್ಯ ನಿರೋಧಕಾಃ ॥ ೩೦ ॥

ಗಳಿಂದ ಪರಿಹರಿಸುತ್ತಾರೆ :—

ಅರ್ಥ—**ಸಿದ್ಧೋಪಾಯಸ್ಯ ಶೇಷಿಣಃ** - ಶೇಷಿಯಾದ ಸಿದ್ಧೋಪಾಯನಾದ ಭಗವಂತನ, **ಲೀಲಾಪ್ರವಾಹಃ** - ಲೀಲಾಪ್ರವಾಹವು, **ಸಾಧ್ಯೋಪಾಯೋತ್ತರಂಗೇಣ** - ಭಕ್ತಿಪ್ರಪತ್ತ್ಯಾದಿ ಸಾಧ್ಯೋಪಾಯಾನುಷ್ಠಾನದಿಂದ ಉತ್ಪನ್ನವಾದ ಪ್ರಬಲ ತರಂಗಗಳುಳ್ಳ, **ಕಾರುಣ್ಯ ಪ್ರವಾಹೇಣ** - ಕಾರುಣ್ಯಸಮುದ್ರದ ಪ್ರವಾಹದಿಂದ, **ನಿರುಧ್ಯತೇ** - ತಡೆಯಲ್ಪಡುತ್ತದೆ, ಪೌರ್ಣಮಿಯಲ್ಲಿ ಪೂರ್ಣಚಂದ್ರನಿಂದ ಸಮುದ್ರ ತರಂಗಗಳು ಹೆಚ್ಚಿ ಸಮುದ್ರಪ್ರವಾಹವು ನದೀಪ್ರವಾಹವನ್ನು ಹೇಗೆ ತಡೆಯುತ್ತದೋ, ಹಾಗೆ ಸಾಧ್ಯೋಪಾಯಾನುಷ್ಠಾನದಿಂದ ಉತ್ಪನ್ನಗಳಾದ ತರಂಗಗಳುಳ್ಳ ಭಗವಂತನ ಕರುಣಾಸಮುದ್ರದ ಪ್ರವಾಹವು ಲೀಲಾರಸ ರೂಪ ನದಿಯ ಪ್ರವಾಹವನ್ನು ತಡೆಯುತ್ತದೆ ಎಂಬ ಭಾವವು.

ಎರಡನೆಯ ಶಙ್ಕೆಗೆ ಸಮಾಧಾನವನ್ನು ಹೇಳುತ್ತಾರೆ :— **ತೇನೈವ** - ಆ ಕರುಣಾ ಪ್ರವಾಹದಿಂದಲೇನೆ, **ಸ್ವಕೈಙ್ಕರ್ಯ ನಿರೋಧಕಾಃ**, **ಸ್ವ** - ಭಗವಂತನಾದ ತನ್ನ, **ಕೈಂಕರ್ಯ** – ನಿತ್ಯವಿಭೂತಿಯಲ್ಲಿ ಮಾಡತಕ್ಕ ಕೈಙ್ಕರ್ಯಗಳಿಗೆ, **ನಿರೋಧಕಾಃ** - ಪ್ರತಿಬಂಧಕಗಳಾದ, ಎಂದರೆ, ಮೋಕ್ಷವನ್ನು ಹೊಂದುವದಕ್ಕೆ ಅಡ್ಡಿಯಾಗಿರುವ, **ಸ್ವತಂತ್ರಸ್ಯ** - ಯದ್ಯಪಿ ಭಗವಂತನು ಸ್ವತಂತ್ರನಾಗಿದ್ದರೂ, ಅಂತಹ ಸ್ವತಂತ್ರನ, **ಸಙ್ಕಲ್ಪಾಃ ಅಪಿ** – ಸಙ್ಕಲ್ಪಗಳೂ ಕೂಡ, **ಲೀಯಂತೇ**- ನಷ್ಟವಾಗುತ್ತವೆ. ಹೇಗೆ ಎಂದರೆ ಒಂದು ದೃಷ್ಟಾಂತವನ್ನು ಕೊಟ್ಟಿರುತ್ತಾರೆ, **ಸಿಕತಾ ಸೇತುಬಂಧವತ್** - ಮರಳಿನಲ್ಲಿ ಕಟ್ಟಿದ ಸೇತುಬಂಧವಹಾಗೆ, ನಷ್ಟವಾಗುತ್ತವೆ. ಇದರಭಿಪ್ರಾಯವು ಇಷ್ಟೇ. ಸರ್ವೇಶ್ವರನು ಉಭಯವಿಭೂತಿನಾಯಕನು. ಇಷ್ಟು ದಿವಸವೂ ಒಬ್ಬ ಚೇತನನನ್ನು ಲೀಲಾವಿಭೂತಿಯಲ್ಲಿರುವ ಹಾಗೆ ಸಙ್ಕಲ್ಪಿಸಿದ್ದನು. ಚೇತನನು ಸಾಧ್ಯೋಪಾಯವನ್ನನುಷ್ಠಿಸಿದರೆ ನಿತ್ಯವಿಭೂತಿಗೆ ಸೇರಿಸುವನಾಗಿಯೂ ಸಙ್ಕಲ್ಪಿಸಿದ್ದನು. ಅಂತಹ ಭಗವಂತನ ಕರುಣೆಯ ಪ್ರವಾಹವು ಬಲವತ್ತರವಾಗಿ ಆತನು ಸ್ವತಂತ್ರನಾಗಿದ್ದರೂ ತನ್ನ ಹಿಂದಿನ ಸಙ್ಕಲ್ಪವನ್ನು ತ್ಯಜಿಸಿ, ಮೋಕ್ಷಪ್ರಾಪ್ತಿಯಿಂದ ಆತನ ಕೈಙ್ಕರ್ಯ ದೊರೆಯುವಹಾಗೆ ಮಾಡು

ಪ್ರಸಾದನಸ್ಯೋಪಾಯತ್ವೇ ಶಾಸ್ತ್ರೀಯೇಪಿ ಫಲಂ ಪ್ರತಿ ।
ಕರ್ತೃತ್ವಾವ್ಯವಧಾನಾದ್ಯೈಸ್ಸಿದ್ಧೋಪಾಯ ಪ್ರಧಾನತಾ ॥ ೩೧ ॥

ತ್ತವೆ. ಹೇಗೆಂದರೆ ಒಬ್ಬ ಬಾಲನು ಸಮುದ್ರದ ದಡದಲ್ಲಿ ಒಂದು ಮರಳು ಸೇತುವೆಯನ್ನು ಲೀಲೆಗೋಸ್ಕರ ಕಟ್ಟಿದರೆ, ಸಮುದ್ರವು ಉಕ್ಕಿಬಂದು ಆ ಮರಳು ಸೇತುಬಂಧನ್ನು ಹೇಗೆ ನಾಶಮಾಡುತ್ತದೋ, ಹಾಗೆಯೇ ಈ ಕೃಪಾಸಾಗರನ ಕೃಪಾಪ್ರವಾಹವೇ ಆ ಲೀಲಾರಸರೂಪ ಸಙ್ಕಲ್ಪಗಳಿಗೆ ಪ್ರತಿಬಂಧಕವಾಗಿ ಅವುಗಳನ್ನು ಹೋಗಲಾಡಿಸಿ, ಮೋಕ್ಷಪ್ರಾಪ್ತಿಯನ್ನುಂಟುಮಾಡುತ್ತದೆಂಬ ಭಾವವು. ಇದೂ ಲೀಲೆಯೇ ಸಙ್ಕಲ್ಪ ಸೂರ್ಯೋದಯದಲ್ಲಿ "ಮಿಥಃ ಕಲಹ ಕಲ್ಪನಾ ವಿಷಮವೃತ್ತಿ ಲೀಲಾದಯಾ" ಎಂಬ ಶ್ಲೋಕದಲ್ಲಿ ಭಗವಂತನ ಲೀಲೆಗೂ ದಯೆಗೂ ಪರಸ್ಪರ ಕಲಹವೆಂದೂ, ಕೊನೆಗೆ ಸ್ವಾಮಿದಯೆಯೇ ಜಯವನ್ನು ಹೊಂದುತ್ತದೆಂದೂ, ವರ್ಣಿಸಿರುತ್ತಾರೆ.

ಇನ್ನೊಂದು ಶಙ್ಕೆಯು ತೋರಿಬರುತ್ತದೆ, ಏನೆಂದರೆ-ಭಗವಂತನು ಸಿದ್ಧೋಪಾಯನೆಂದು ಸ್ಥಾಪಿಸಲ್ಪಟ್ಟಿತ, ಆತನು ಭಕ್ತಿ, ಪ್ರಪತ್ತಿರೂಪಸಾಧ್ಯೋಪಾಯಗಳಿಲ್ಲದೆ, ಚೇತನನಿಗೆ ತನ್ನ ಕೃಪಾಪ್ರವಾಹವು ಈ ಲೀಲಾವಿಭೂತಿಯನ್ನು ತಪ್ಪಿಸಿ ನಿತ್ಯವಿಭೂತಿಯನ್ನು ಸೇರಿಸದು ಎಂದೂ ಸ್ಥಾಪಿಸಲ್ಪಟ್ಟಿತು ಹೀಗೆ ಸಾಧ್ಯೋಪಾಯವು ಅವಶ್ಯಕವೆಂದಾದನಂತರ, ಸಾಧ್ಯೋಪಾಯವೇ ಪ್ರಧಾನೋಪಾಯವಾಯಿತು, ಸಿದ್ಧೋಪಾಯನಾದ ಭಗವಂತನು ಸಾಮಾನ್ಯೋಪಾಯನು ಎಂದು ಹೇಳಬೇಕಾಗುತ್ತದೆ, ಎಂದರೆ ಹಾಗಲ್ಲವೆಂದೂ, ಸಿದ್ಧೋಪಾಯಕ್ಕೇ ಪ್ರಧಾನತೆ ಎಂದೂ ಉಪದೇಶಿಸುತ್ತಾರೆ

ಅರ್ಥ—ಫಲಂಪ್ರತಿ - ಮೋಕ್ಷವೇ ಮೊದಲಾದ ಫಲವನ್ನು ಕುರಿತು, ಪ್ರಸಾದನಸ್ಯ - ಭಗವದನುಗ್ರಹವನ್ನುಂಟುಮಾಡುವ ಭಕ್ತಿ ಪ್ರಪತ್ತಿಯ, ಉಪಾಯತ್ವೇ - ಉಪಾಯ ಭಾವವು, ಶಾಸ್ತ್ರೀಯೇಪಿ - ಶಾಸ್ತ್ರದಲ್ಲಿ ಹೇಳಲ್ಪಟ್ಟಿದ್ದರೂ ಕೂಡ, ಎಂದರೆ ಮೋಕ್ಷ ಮೊದಲಾದ ಪುರುಷಾರ್ಥ ಪ್ರಾಪ್ತಿಗೆ, ಭಗವದನುಗ್ರಹವನ್ನು ಸಂಪಾದಿಸಿಕೊಡುವ ಉಪಾಯಗಳು ಭಕ್ತಿಪ್ರಪತ್ತಿಗಳೆಂದೂ, ಹೀಗೆ ಉಪಾಯಾನುಷ್ಠಾನ ಮಾಡದವರಿಗೆ ಫಲಸಿದ್ಧಿ ಇಲ್ಲವೆಂದೂ ಶಾಸ್ತ್ರದಲ್ಲಿ ವಿಹಿತವಾಗಿದ್ದರೂ, ಸಿದ್ಧೋಪಾಯನಾದ ಭಗವಂತನೇ ಪ್ರಧಾನೋಪಾಯನೆಂದು ಉತ್ತರಾರ್ಧದಿಂದ ಸಕಾರಣವಾಗಿ ಹೇಳುತ್ತಾರೆ. ಕರ್ತೃತ್ವಾವ್ಯವಧಾನಾದ್ಯೈಃ - ಈ ಚೇತನನು ಸಾಧ್ಯೋಪಾಯವನ್ನನುಷ್ಠಿಸುವ

ಹಾಗೆ ತಾನೇ ಸಙ್ಕಲ್ಪಿಸಿ ಮಾಡುವ ಕರ್ತೃತ್ವದಿಂದಲೂ, ಮತ್ತ ಅವ್ಯವಧಾನ - ಸಾಧ್ಯೋಪಾಯಾನುಷ್ಠಾನ ಹಿಡಿದು ಫಲಪ್ರಾಪ್ತಿಯ ವರೆಗೂ ವ್ಯವಧಾನವಿಲ್ಲದಹಾಗೆ ಕಾರಣನಾಗಿರುವದರಿಂದಲೂ, ಆದ್ಯೈಃ - ಇವೇ ಮೊದಲಾದವುಗಳಿಂದಲೂ, ಇಲ್ಲಿ ಆದಿ ಶಬ್ದದಿಂದ, ಉಪಾಯಾನುಷ್ಠಾನ ಕಾಲದಲ್ಲೂ ಸಹ ನಿರ್ವಿಘ್ನವಾಗಿ ನೆರವೇರುವ ಹಾಗೆ ಮಾಡುವಿಕೆಯೇ ಮೊದಲಾದವು ಹೇಳಲ್ಪಟ್ಟವು, ಈ ಕಾರಣಗಳಿಂದ, ಸಿದ್ಧೋಪಾಯ ಪ್ರಧಾನತಾ - ಸಿದ್ಧೋಪಾಯಕ್ಕೇ ಪ್ರಧಾನತೆಯು, ಎಂದರೆ ಅದರ ಪ್ರಧಾನತೆಯು ಸಿದ್ಧವು ಎಂಬ ತಾತ್ಪರ್ಯವು. ಸಾಧ್ಯೋಪಾಯವೇನೋ ಆವಶ್ಯಕವೆಂದು ಶಾಸ್ತ್ರದಲ್ಲಿ ಹೇಳಿರುವದರಿಂದಲೇ, ಪ್ರಪನ್ನಾದನ್ಯೇಷಾಂ ನದಿಶತಿಮುಕುಂದೋ ನಿಜಪದಂ ಎಂದೂ, ಪ್ರಪನ್ನಶ್ಚ ದ್ವೇಧಾ ಎಂದೂ ಹಿಂದೆ ಅಧಿಕಾರಿವಿಭಾಗಾಧಿಕಾರದಲ್ಲಿ ಹೇಳಿರುತ್ತಾರೆ. (೮೪೮ನೆಯ ಪುಟವನ್ನು ನೋಡಿ). ಈ ಸಾಧ್ಯೋಪಾಯಗಳೇ ತಾವೇ ಅಚೇತನವಾದುದರಿಂದ ಫಲವನ್ನು ಕೊಡಲಾರವು. ಶ್ರೀ ಯತಿವರ್ಯರು, "ನಹ್ಯಚೇತನಂ ಕರ್ಮ ಕ್ಷಣಧ್ವಂಸಿ ಕಾಲಾನ್ತರ ಭಾವಿ ಫಲಸಾಧನಂ ಭವಿತುಮರ್ಹತಿ" ಈ ಅಚೇತನ ಕರ್ಮವು ಅಲ್ಪ ಕಾಲದಲ್ಲೇ ನಾಶವಾಗಿ, ಕಾಲಾಂತರದಲ್ಲುಂಟಾಗುವ ಫಲವನ್ನು ತಾನೇ ಸಾಧಿಸಿಕೊಡಲಾರದೆಂದು ಹೇಳಿರುತ್ತಾರೆ. ಇವು ಭಗವಂತನ ಅನುಗ್ರಹವನ್ನುಂಟುಮಾಡುತ್ತವೆ. ಭಗವಂತನು ಫಲ ಕೊಡುತ್ತಾನೆ. ಇಷ್ಟುಮಾತ್ರದಿಂದ ಸಾಧ್ಯೋಪಾಯಕ್ಕೆ ಪ್ರಧಾನತಾ ಸಲ್ಲುವದಿಲ್ಲವು. ಅವು ವ್ಯಾಜಮಾತ್ರವು. ಸಿದ್ಧೋಪಾಯನಾದ ಭಗವಂತನೇ ಪ್ರಧಾನೋಪಾಯವು. ಈತನು ಜನಿಸುವಾಗಲೇ ಈತನನ್ನು ತನ್ನ ದಿವ್ಯ ಕಟಾಕ್ಷದಿಂದ ಈಕ್ಷಿಸುವದೂ, ಸಾತ್ವಿಕ ಸಂಭಾಷಣೆಯನ್ನುಂಟುಮಾಡುವದೂ, ತನ್ಮೂಲಕವಾಗಿ ಗುರೂಪಸದನವನ್ನುಂಟುಮಾಡುವದೂ, ದಿವ್ಯಜ್ಞಾನಚಕ್ಷುಸ್ಸನ್ನು ಕೊಟ್ಟು ಅವರನ್ನಾಶ್ರಯಿಸಿ ಅವರ ಉಪದೇಶವನ್ನು ಹೊಂದುವ ಹಾಗೆ ಮಾಡುವದೂ, ಅವರ ಮೂಲಕವಾಗಿ ಉಪಾಯಾನುಷ್ಠಾನವನ್ನು ಮಾಡುವ ಹಾಗೆ ಪ್ರೇರಿಸುವದೂ, ಅದು ನಿರ್ವಿಘ್ನವಾಗಿ ನಡೆಯುವ ಹಾಗೆ ಮಾಡುವದೂ, ಅರ್ಚಿರಾದಿ ಮಾರ್ಗವನ್ನು ತೋರಿಸುವದೂ, ಹೀಗೆ ನಾನಾ ವಿಧವಾದ ಸಾಧ್ಯೋಪಾಯ ವಿಷಯದಲ್ಲಿ ಸಾಧನರೂಪ ಕರ್ತೃತ್ವವು ಭಗವಂತನಿಗೆ ಇರುವದರಿಂದಲೂ ಅದು ಸಾಂಗವಾಗಿ ನಡೆದು ಫಲಪ್ರಾಪ್ತಿಯವರೆಗೂ ಅವ್ಯವಧಾನದಿಂದ ಸಾಧ್ಯವಾಗುವ ಹಾಗೆ ಮಾಡುವದರಿಂದಲೂ, ಸಿದ್ಧೋಪಾಯನಾದ ಭಗವಂತನೇ ಪ್ರಧಾನೋಪಾಯವು ಎಂಬ ಭಾವವು.

ಭಕ್ತ್ಯುಪಾಯನಿಷ್ಠರಿಗೆ ಸಿದ್ಧೋಪಾಯನ ಆಶ್ರಯಣವು ಪ್ರಧಾನವೆಂದೇನೋ ಒಪ್ಪಬಹುದು. ಭರನ್ಯಾಸ ನಿಷ್ಠರ ವ್ಯಾಪಾರವು ಒಂದು ಕ್ಷಣಕಾಲ

ಸ್ವತಂತ್ರನ್ಯಾಸ ನಿಷ್ಠಾನಾಂ ಸಿದ್ಧೋಪಾಯೇ ವಿಭೌ ಸ್ಥಿತಿಃ ।
ಕ್ಷಣಾತ್ಸ್ವಯತ್ನ ವಿರತಿ ವ್ಯಕ್ತ್ಯೈ ಪ್ರೋಕ್ತಾ ವಿಶೇಷತಃ ॥ ೩೨ ॥
ಅತೋ ಯದರ್ಥಂ ಸ್ವಭರ ಸ್ಸಿದ್ಧೋಪಾಯೇ ನಿವೇಶಿತಃ ।
ತದರ್ಥ ಶಾಂತಯತ್ನೋ ಸೌ ಸಿದ್ಧೋಪಾಯಂ ಪ್ರತೀಕ್ಷತೇ ॥ ೩೩ ॥

ಮಾತ್ರ ಅನುಷ್ಠಿಸತಕ್ಕದ್ದು. ಸರ್ವ ಭರವನ್ನೂ ಅವನಲ್ಲಿ ಸಮರ್ಪಿಸಿಬಿಟ್ಟ ಅನಂತರ ಸ್ವಯತ್ನವೇನೂ ಬೇಕಾಗದಿರುವಾಗ, ಸಿದ್ಧೋಪಾಯತ್ವದ ಆವಶ್ಯಕತೇ ಏನಿದೆ? ಆಳ್ವಾರಾಚಾರ್ಯರುಗಳು ಭರನ್ಯಾಸನಿಷ್ಠರಿಗೂ ಭಗವದೇಕನಿಷ್ಠತ್ವವನ್ನು ವಿಶೇಷಿಸಿ ಹೇಳಿರುವದಕ್ಕೆ ಕಾರಣವೇನು ? ಎಂದರೆ ಹೇಳುತ್ತಾರೆ.

ಸ್ವತಂತ್ರ ನ್ಯಾಸನಿಷ್ಠಾನಾಂ - ಭರನ್ಯಾಸನಿಷ್ಠರಿಗೆ, ಇವರಿಗೆ ಸ್ವತಂತ್ರ ನ್ಯಾಸನಿಷ್ಠರೆಂದು ಹೇಳಲು ಕಾರಣವು ಹಿಂದೆಯೇ ಹೇಳಿರುತ್ತದೆ. ಭಕ್ತ್ಯುಪಾಯಕ್ಕೆ ನ್ಯಾಸವು ಎಂದರೆ ಶರಣಾಗತಿಯು ಅಜ್ಗವು, ಭರನ್ಯಾಸದಲ್ಲಾದರೋ ಅಜ್ಗತ್ವೇನವಿಲ್ಲದೆ ಸ್ವತಂತ್ರವಾದುದಾಗಿರುತ್ತದೆ, ಆದುದರಿಂದ **ಸ್ವತಂತ್ರನ್ಯಾಸ ನಿಷ್ಠಾನಾಂ** ಎಂದರೆ ಭಕ್ತ್ಯುಪಾಯುವಲ್ಲದೆ ಪ್ರಪತ್ತ್ಯುಪಾಯನಿಷ್ಠರಿಗೆ ಎಂಬರ್ಥವು, **ಸಿದ್ಧೋಪಾಯೇ** - ಸಿದ್ಧೋಪಾಯನಾದ, **ವಿಭೌ** - ಸ್ವಾಮಿಯಾಗಿ ಸರ್ವಶೇಷಿಯಾದ ಭಗವಂತನಲ್ಲಿ, **ಸ್ಥಿತಿಃ** - ನಿಷ್ಠೆಯು, **ಕ್ಷಣಾತ್** - ಭರನ್ಯಾಸ ಮಾಡಿದ ಒಂದು ಕ್ಷಣ ಮೊದಲುಗೊಂಡು, **ಸ್ವಯತ್ನ ವಿರತಿವ್ಯಕ್ತ್ಯೈ** - ಪ್ರಪನ್ನನಾದ ತನ್ನ ಯಾವ ಪ್ರಯತ್ನದ ಅನಾವಶ್ಯಕತೆಯನ್ನು ಪ್ರಕಟಿಸುವದಕ್ಕಾಗಿ, **ವಿಶೇಷತಃ ಪ್ರೋಕ್ತಾ** - ವಿಶೇಷಿಸಿ ಆಳ್ವಾರು ಆಚಾರ್ಯರುಗಳಿಂದ ಹೇಳಲ್ಪಟ್ಟಿತು ಸರ್ವಭರವನ್ನು ಸರ್ವೇಶ್ವರನಲ್ಲಿರಿಸಿ ಅನಂತರ ಪ್ರಪನ್ನನ ಯಾವ ಯತ್ನವು ಬೇಕಾಗಿಲ್ಲದೆ, ಎಲ್ಲವನ್ನೂ ಭಗವಂತನೇ ವಹಿಸುವದರಿಂದಲೂ, ಸಿದ್ಧೋಪಾಯ ನಿಷ್ಠತ್ವವನ್ನು ಪ್ರಪನ್ನನಿಗೂ ಅತ್ಯಾವಶ್ಯಕವೆಂದು ವಿಶೇಷಿಸಿ ಹೇಳಿರುತ್ತಾರೆಂಬ ಭಾವವು.

ಮೇಲಿನ ಶ್ಲೋಕದಲ್ಲಿ ಸ್ವತಂತ್ರ ಪ್ರಪತ್ತಿನಿಷ್ಠನಿಗೆ. **ಸ್ವಯತ್ನವಿರತಿಯು** ಎಂದರೆ ಆತನು ಮಾಡತಕ್ಕ ವ್ಯಾಪಾರವು ಯಾವುದೂ ಇಲ್ಲವೆಂದು ಹೇಳಲ್ಪಟ್ಟಿತು. ಹಾಗಾದರೆ ಭಗವದಾರಾಧನ ಗುರುಶುಶ್ರೂಷಾ ಇವೇ ಮೊದಲಾದ ವ್ಯಾಪಾರಗಳಿಂದಲೂ ನಿತ್ಯನೈಮಿತ್ತಿಕಾನುಷ್ಠಾನಗಳಿಂದಲೂ ಮತ್ತು ಇವರ ಕೈಂಕರ್ಯಾದಿಗಳಿಂದಲೂ ಏಕೆ ವಿರಾಮವನ್ನು ಹೊಂದಕೂಡದು ಎಂದರೆ ಹೇಳುತ್ತಾರೆ— **ಅತಃ** - ಪ್ರಪತ್ತಿನಿಷ್ಠನಿಗೂ ಕೂಡ ವಿಶೇಷವಾಗಿ ಭಗವದೇಕನಿಷ್ಠತ್ವವು ಆವಶ್ಯಕ

ಪ್ರಪತ್ತೇರ್ಲಕ್ಷಣೇ ಮಂತ್ರೇ ದ್ವಿಧಾ ವಾಕ್ಯಾಂತರೇಷು ಚ ।
ಭಾಷ್ಯಾದೌ ಸಂಪ್ರದಾಯೇ ಚೋಪಾಯತ್ವಂ ಬ್ರಹ್ಮಣಿ ಸ್ಥಿತಂ ॥೨೪॥

ವೆಂದು ಪೂರ್ವಾಚಾರ್ಯರುಗಳು ಹೇಳಿರುವದರಿಂದ, **ಯದರ್ಥಂ** - ಯಾವ ಮೋಕ್ಷಪ್ರಾಪ್ತಿಗಾಗಿ, **ಸ್ವಭರಃ** - ತನ್ನ **ರಕ್ಷಾ**ಭರವು, **ಸಿದ್ಧೋಪಾಯೇ** - ಸಿದ್ಧೋಪಾಯನಾದ ಭಗವಂತನಲ್ಲಿ **ನಿವೇಶಿತಃ** - ಇಡಲ್ಪಟ್ಟಿತೋ, **ತದರ್ಥಂ** - ಅಂತಹ ಮೋಕ್ಷಪ್ರಾಪ್ತಿಗೋಸ್ಕರ, **ಶಾಂತಯತ್ನಃ** - ಅದಕ್ಕಾಗಿ ಮಾಡತಕ್ಕ ಪ್ರಯತ್ನವು ಇನ್ನು ಯಾವುದೂ ಇಲ್ಲದವನಾಗಿ, **ಅಸೌ** - ಈ ಮೋಕ್ಷಾರ್ಥಿಯಾದ ಪ್ರಪನ್ನನು **ಸಿದ್ಧೋಪಾಯಂ ಪ್ರತೀಕ್ಷತೇ** - ಸಿದ್ಧೋಪಾಯನಾದ ಭಗವಂತನನ್ನು ನಿರೀಕ್ಷಿಸುತ್ತಾನೆ, ಎಂದರೆ, ಆತನು ರಕ್ಷಿಸುವ ಸಮಯವನ್ನು ನಿರೀಕ್ಷಿಸುತ್ತಿರುವನು. ಇದರಿಂದ ಆತನು ಆಜ್ಞಾನುಜ್ಞಾ ಕೈಂಕರ್ಯಗಳನ್ನು ಮಾಡುವ ಅನುಕೂಲ ಪ್ರಯತ್ನದಿಂದಲೂ ಪರಾಙ್ಮುಖನಾಗಿರುವನೆಂದು ಹೇಳಲಿಲ್ಲವು. ಸರ್ವೇಶ್ವರನಿಂದ ರಕ್ಷಣೆಯನ್ನು ಎದುರುನೋಡುತ್ತಿರುವವನು ಆತನ ಆಜ್ಞಾನುಜ್ಞಾಕೈಂಕರ್ಯಗಳನ್ನು ತ್ಯಜಿಸಿ ಆತನ ಕೋಪಕ್ಕೆ ಪಾತ್ರನಾಗಬಹುದೋ? ಅದು ತನ್ನ ಸ್ವರೂಪಕ್ಕೆ ವಿರುದ್ಧವಾದುದೆಂಬ ಭಾವವು.

ಆಗಲಿ ಭಗವಂತನಿಗೆ ಪ್ರಧಾನೋಪಾಯತ್ವವಿದ್ದುದಾದರೆ, ಪ್ರಪನ್ನನು ಭಗವದೇಕನಿಷ್ಠನಾಗಿದ್ದುಕೊಂಡು, ಮೋಕ್ಷಪ್ರಾಪ್ತಿಯನ್ನು ನಿರೀಕ್ಷಿಸಿಕೊಂಡೇನೋ ಇರತಕ್ಕದ್ದು ನ್ಯಾಯವು. ಹಾಗೆ ಭಗವಂತನು ಪ್ರಧಾನೋಪಾಯನೆಂಬುದಕ್ಕೆ ಏನಾದರೂ ಪ್ರಮಾಣಗಳುಂಟೋ? ಎಂದರೆ ಉಂಟೆಂದು ತಿಳಿಸುತ್ತಾರೆ—ಎಲ್ಲೆಲ್ಲಿ ಭಗವಂತನು ಸಿದ್ಧೋಪಾಯನೆಂದು ಹೇಳಲ್ಪಟ್ಟಿದೆ ಎಂದರೆ- ಈ ಶ್ಲೋಕದಲ್ಲಿ **ಪ್ರಪತ್ತೇಃ**-ಎಂಬ ಪದವು. ಲಕ್ಷಣೇ. ಮಂತ್ರೇ, ದ್ವಿಧಾ ವಾಕ್ಯಾಂತರೇಷು ಚ ಎಂಬುದಕ್ಕೆಲ್ಲಾ ಅನ್ವಯಿಸುತ್ತದೆ **ಪ್ರಪತ್ತೇರ್ಲಕ್ಷಣೇ**-ಪ್ರಪತ್ತಿಯ ಲಕ್ಷಣ ವಾಕ್ಯದಲ್ಲಿ ಹೇಳಲ್ಪಟ್ಟಿರುತ್ತದೆ, ಇದು ಯಾವುದೆಂದರೆ "ಅನನ್ಯಸಾಧ್ಯೇ ಸ್ವಾಭೀಷ್ಟೇ ಮಹಾವಿಶ್ವಾಸ ಪೂರ್ವಕಂ । ತದೇಕೋಪಾಯತಾ ಯಾಚ್ಞಾ ಪ್ರಪತ್ತಿಶ್ಶರಣಾಗತಿಃ" ಎಂಬ ಭರತ ಮುನಿಯ ವಾಕ್ಯವು ಇದರರ್ಥಕ್ಕೆ ೧೨೫ನೆಯ ಪುಟ ನೋಡಿ. (೨) **ಪ್ರಪತ್ತೇಃ ಮಂತ್ರೇ** - ದ್ವಯಮಂತ್ರದಲ್ಲೂ, ಈ ಮಂತ್ರದ ಪೂರ್ವಖಂಡವು ಉಪಾಯವನ್ನು ಬೋಧಿಸುತ್ತದೆ ಅದರಲ್ಲಿರುವ ಶರಣ ಶಬ್ದವು ಉಪಾಯವನ್ನೇ ಬೋಧಿಸುತ್ತದೆಂದು ಹಿಂದೆಯೇ ಶ್ರೀ ದೇಶಿಕರವರು ಸ್ಥಾಪಿಸಿರುತ್ತಾರೆ. ೧೦೩೫-೬ನೆಯ ಪುಟಗಳನ್ನು ನೋಡಿ. (೩) **ಪ್ರಪತ್ತೇರ್ದ್ವಿಧಾ** - ಪ್ರಪತ್ತಿ

ವಿಧಿಸುವ ವಾಕ್ಯವಾದ ಚರಮ ಶ್ಲೋಕದಲ್ಲೂ, "ಮಾಮೇಕಂ ಶರಣಂ ವ್ರಜ" ಎಂಬ ವಾಕ್ಯದಲ್ಲಿ, ಶರಣ ಶಬ್ದವು ಉಪಾಯವನ್ನು ಬೋಧಿಸುತ್ತದೆ. "ಏಕಂ" ಎಂಬುದರಿಂದ ಪ್ರಾಧಾನ್ಯವೂ ತೋರಿಬರುತ್ತದೆ. (೪) ಪ್ರಪತ್ತೇಃ ವಾಕ್ಯಾಂತರೇಷು ಚ - ಪ್ರಪತ್ತಿಯನ್ನು ಬೋಧಿಸುವ ಇತರ ವಾಕ್ಯಗಳಲ್ಲೂ, ಇವುಗಳು ಯಾವುವೆಂದರೆ ಸರ್ವಸ್ಯ ಶರಣಂ ಸುಹೃತ್," "ಶರಣ್ಯಂ ಶರಣಂ ಚ ತ್ವಾಮಾಹು ರ್ದಿವ್ಯಾ ಮಹರ್ಷಯಃ" "ತಂಗಚ್ಛ ಶರಣಂಹರಿಂ", "ಶರಣಂ ತ್ವಾಂ ಪ್ರಪನ್ನಾಯೇಧ್ಯಾನಯೋಗ ವಿವರ್ಜಿತಾಃ। ತೇಪಿ ಮೃತ್ಯು ಮತಿಕ್ರಮ್ಯ ಯಾನ್ತಿ ತದ್ವೈಷ್ಣವಂ ಪದಂ", "ಗಚ್ಛಧ್ವ ಮೇನಂ ಶರಣಂ" "ಕೃಷ್ಣಂ ಧರ್ಮಂ ಸನಾತನಂ" ಇತ್ಯಾದ್ಯನೇಕ ವಾಕ್ಯಗಳಲ್ಲೂ ಸಿದ್ಧೋಪಾಯನೆಂಬುದು ತೋರಿಬರುತ್ತದೆ, (೫) ಭಾಷ್ಯಾದೌ - ಭಾಷ್ಯದಲ್ಲೂ ಉಪಪಾದಿಸಲ್ಪಟ್ಟಿರುತ್ತದೆ:— "ಪ್ರಾಪ್ಯಸ್ಯ ಪರಮಪುರುಷಸ್ಯ ಸ್ವಪ್ರಾಪ್ತಯೇಸ್ವಸ್ಯೈವೋಪಾಯತ್ವೋಪ ಪತ್ತೇಃ, "ನಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ ನಬಹುನಾಶ್ರುತೇನ। ಯಮೇವೈಷ ವೃಣುತೇ ತೇನ ಲಭ್ಯಸ್ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಂ", ಎಂದು ೩ ೨-೩೪ನೇ ಸೂತ್ರವಾದ "ಉಪಪತ್ತೇಃ" ಎಂಬುದರ ವ್ಯಾಖ್ಯಾನದಲ್ಲಿ ಹೇಳಲ್ಪಟ್ಟಿರುತ್ತದೆ. ಪ್ರಾಪ್ಯನಾದ ಪರಮಪುರುಷನಿಗೇನೇ ತನ್ನ ಪ್ರಾಪ್ತಿಯ ವಿಷಯದಲ್ಲಿ ಉಪಾಯತ್ವ ಉಂಟೆಂದು ನಾಯಮಾತ್ಮಾ ಎಂಬ ಕಠಶ್ರುತಿ ವಾಕ್ಯದಿಂದ (೧ ೨ ೨೩. ಮುಂ. ೩. ೨. ೩) ತೋರಿಬರುತ್ತದೆಂದು ಹೇಳಲ್ಪಟ್ಟಿರುತ್ತದೆ. ಈ ಶ್ರುತ್ಯರ್ಥವೇನೆಂದರೆ— "ಈ ಪರಮಾತ್ಮನು ಮನನ ನಿಧಿಧ್ಯಾಸನ ಶ್ರವಣಾದಿಗಳಿಂದ ಮಾತ್ರವೇ ಲಭ್ಯನಲ್ಲನು. ಈ ಪರಮಾತ್ಮನ ಇಂತಹ ಉಪಾಸಕರಲ್ಲಿ ಯಾವನನ್ನು ಯೋಗ್ಯನೆಂದು ಭಾವಿಸಿ ವರಿಸುವನೋ, ಅಂತವನಿಗೆ ಮಾತ್ರವೇ ಲಭ್ಯನು, ಅಂತಹ ಉಪಾಸಕನು ಈತನಲ್ಲಿ ನಿರತಿಶಯ ಭಕ್ತಿಯುಳ್ಳವನಾದುದರಿಂದ, ಆತನಲ್ಲಿ ಪರಮಾತ್ಮನಿಗೆ ಅನುಗ್ರಹ ಉಂಟಾಗಿ ಆತನಿಗೆ ಸ್ವಸ್ವರೂಪವನ್ನು ದಯಪಾಲಿಸುವನು." ಎಂಬರ್ಥವು. ಇದರಿಂದ ಮುಂಡಕ ಕಠಶ್ರುತಿಗಳು ಭಗವಂತನೇ ಸಿದ್ಧೋಪಾಯನೆಂದೂ ಇನ್ನು ಯಾರೂ ಸಿದ್ಧೋಪಾಯನಾಗಲಾರರೆಂದೂ ಹೇಳುತ್ತವೆಂಬುದು ವ್ಯಕ್ತವು. ಈ ಶ್ಲೋಕದಲ್ಲಿ ಭಾಷ್ಯಾದೌ ಎಂದು ಆದಿ ಶಬ್ದವನ್ನುಪಯೋಗಿಸಿರುವದರಿಂದ "ತ್ವತ್ಪಾದಾರವಿಂದ ಯುಗಳಂ ಶರಣ ಮಹಂ ಪ್ರಪದ್ಯೇ" ಎಂಬ ಶರಣಾಗತ್ಯನುಷ್ಠಾನವನ್ನು ಪ್ರಕಾಶಿಸುವ ಶ್ರೀ ಭಾಷ್ಯಕಾರರ ಶರಣಾಗತಿಗದ್ಯವಾಕ್ಯವೂ ಸೂಚಿತವು (೬) ಸಂಪ್ರದಾಯೇ ಚ - ಆಳ್ವಾರಾಚಾರ್ಯರುಗಳ ಸಂಪ್ರದಾಯ ಪರಂಪರೆಯ ಬೋಧಕವಾದ ದಿವ್ಯಸೂಕ್ತಿಗಳಿಂದಲೂ, ಅಗಿಲಿಗಿಲ್ಲೇನ್ ಇತ್ಯಾದಿ

ಪೂರ್ವಸಿದ್ಧಸ್ಯ ದೇಶಾದೇರ್ಧರ್ಮತ್ವಂ ಯದ್ವದಿಷ್ಯತೇ ।
ಏವಂ ತತ್ತ್ವವಿದಃ ಪ್ರಾಹುಃ ಕೃಷ್ಣಂ ಧರ್ಮಂ ಸನಾತನಂ ॥ ೩೫ ॥

ನಮ್ಮಾಳ್ವಾರ್ ಪಾಶುರದಲ್ಲೂ ಮತ್ತು ಉಪಾಯೋಪೇಯತ್ವೇ ತದಿಹ ತವ ತತ್ತ್ವಂ ನತುಗುಣೌ" ಎಂಬ ಶ್ರೀಪರಾಶರಭಟ್ಟರ ದಿವ್ಯಸೂಕ್ತಿಯಲ್ಲೂ (೨೪೭ ನೆಯ ಪುಟನೋಡಿ.) "ತವ ಭರೋಹ ಮಕಾರಿಷಿ ಧಾರ್ಮಿಕೈ ಶರಣ ಮಿತ್ಯಪಿ ವಾಚಮುದೈರಿರಂ" (ಅಧಿಕಾರಿ ವಿಭಾಗಾಧಿಕಾರದ ೮೦೯ ನೆಯ ಪುಟ ನೋಡಿ) ಬ್ರಹ್ಮಣಿ - ಪರಬ್ರಹ್ಮನಲ್ಲಿ, ಶ್ರೀಮನ್ನಾರಾಯಣನಾದ ಪರತತ್ತ್ವದಲ್ಲಿ, ಉಪಾಯತ್ವಂ ಸ್ಥಿತಂ ಸಿದ್ಧೋಪಾಯತ್ವವು ಸ್ಥಾಪಿತವಾದುದು. ಇಲ್ಲಿ ಬ್ರಹ್ಮಣಿ ಎಂದು ಬ್ರಹ್ಮಶಬ್ದವನ್ನುಪಯೋಗಿಸಿರುವದರಿಂದ ಕಲ್ಯಾಣಗುಣಾಕರತ್ವ ಮೊದಲಾದ ಸರ್ವೋತ್ಕರ್ಷವನ್ನು ಹೊಂದಿರುವ ಪರಬ್ರಹ್ಮವೇ ಉಪಾಯುವೇ ವಿನಾ ಇತರ ಚೇತನಾಚೇತನದಲ್ಲಿ ಉಪಾಯತ್ವವನ್ನಾರೋಪಿಸುವದು ನಿಂದಾವಹವಾದ ಅಪಚಾರಪ್ರಾಪ್ತಿಗೆ ಹೇತುವೆಂದು ಹೇಳಿದಂತಾಯಿತು. ಆ ಸಿದ್ಧೋಪಾಯನಾದ ಪರಬ್ರಹ್ಮವು ಯಾವುದೆಂದರೆ ಶ್ರೀ ಭಾಷ್ಯಕಾರರು ಬ್ರಹ್ಮಣಿ ಶ್ರೀನಿವಾಸೇ (ಶ್ರೀ ಭಾಷ್ಯಮಙ್ಗಳ ಶ್ಲೋಕವು) ಎಂಬುದರಿಂದ ಶ್ರೀಮನ್ನಾರಾಯಣನೆಂದುಪದೇಶಿಸಿದರು.

ಇದರಮೇಲೆ ಒಂದು ಪ್ರಬಲವಾದ ಪೂರ್ವಪಕ್ಷ ಉಂಟಾಗಬಹುದು, ಹೇಗೆಂದರೆ—ಧರ್ಮಕ್ಕೇನೇ ಈ ಪಾರಲೌಕಿಕ ಫಲವನ್ನು ಕುರಿತು ಉಪಾಯತ್ವವು ಸಲ್ಲುತ್ತದೆ. "ಚೋದನಾ ಲಕ್ಷಣಾರ್ಥೋ ಧರ್ಮಃ" ಎಂದು ಹೇಳಿರುವ ಪ್ರಕಾರ ಧರ್ಮ ಶಬ್ದವು ಶ್ರುತಿಯಲ್ಲಿ ಹೀಗೆ ಮಾಡು ಎಂದು ವಿಧಿಸಿರುವ ಲಕ್ಷಣವುಳ್ಳ ಅರ್ಥವುಳ್ಳದ್ದು. ಈ ಧರ್ಮವು ಕೃತಿಸಾಧ್ಯವಾದುದು. ಇದಕ್ಕೆ ಉಪಾಯತ್ವವು ಕೂಡುತ್ತದೇ ವಿನಾ, ಸಿದ್ಧರೂಪನಾದ ಭಗವಂತನಿಗೆ ಕೃತಿಸಾಧ್ಯತ್ವವು ಸಲ್ಲುವದಿಲ್ಲವಾದುದರಿಂದ, ಭಗವಂತನನ್ನು ಸಿದ್ಧೋಪಾಯನೆಂದು ಹೇಳುವದು ಕೇವಲ ಔಪಚಾರಿಕವು ಎಂಬುದು ಪೂರ್ವಪಕ್ಷವು. ಪೂರ್ವಮೀಮಾಂಸಕರು ಧರ್ಮವೇ ಫಲವನ್ನು ಕೊಡುತ್ತದೆಂದು ಹೇಳುವರು; ಧರ್ಮಾನುಷ್ಠಾನದಿಂದ ಅಪೂರ್ವವೆಂಬುದುತ್ಪನ್ನವಾಗಿ ಇದ್ದುಕೊಂಡು, ಕೊನೆಗೆ ಫಲವನ್ನು ಕೊಡುತ್ತದೆಂದು ಹೇಳುವರು. ಆ ಅಭಿಪ್ರಾಯವನ್ನು ಖಂಡಿಸುತ್ತಾರೆ. ಇದಕ್ಕೆ ಸಮಾಧಾನ ಹೇಗೆಂದರೆ—ಪಾರಲೌಕಿಕ ಶ್ರೇಯಸ್ಸಿನ ಸಾಧನತ್ವವೇ ಧರ್ಮತ್ವವಾದುದರಿಂದ, "ದ್ರವ್ಯಕ್ರಿಯಾ ಗುಣಾದೀನಾಂ ಧರ್ಮತ್ವಂ ಸ್ಥಾಪಯಿಷ್ಯತೇ" ಎಂಬ

ಇಸ್ಸಿದ್ಧೋಪಾಯವಮ್ ರಹಸ್ಯತ್ರಯತ್ತಿಲ್ ಪ್ರಥಮಾಕ್ಷರಾದಿ ಸ್ಥಾನಙ್ಗಳಿಲೇ ಅನುಸಂಧೇಯಮ್.

ಶ್ರೀ ಭಟ್ಟಾಚಾರ್ಯರವರ ದಿವ್ಯ ಸೂಕ್ತಿಗೆ ಅನುಸಾರವಾಗಿ, ದ್ರವ್ಯಕ್ರಿಯಾಗಣಗಳಿಗೆ ಹೇಗೆ ಧರ್ಮತ್ವವುಂಟೋ ಹಾಗೆಯೇ ಸಿದ್ಧಸ್ವರೂಪನಾದ ಭಗವಂತನಿಗೆ ಧರ್ಮತ್ವವೂ ಮುಖ್ಯವೇ, ಆದುದರಿಂದ ಉಪಾಯತ್ವವು ಔಪಚಾರಿಕವಲ್ಲವೆಂದು ತಿಳಿಸುತ್ತಾರೆ. "ಸಮೇ ಯಜೇತ" ಸಮಪ್ರದೇಶದಲ್ಲಿ ಯಜ್ಞಮಾಡತಕ್ಕದ್ದು, "ಸಾಯಂ ಜುಹೋತಿ" "ಸಾಯಂಕಾಲದಲ್ಲಿ ಹೋಮ ಮಾಡುತ್ತಾನೆ" ಇತ್ಯಾದಿ ವಾಕ್ಯಗಳಿಂದ ಪೂರ್ವಸಿದ್ಧವಾದ ದೇಶಕಾಲ ಗುಣಾದಿಗಳಿಗೆ ಧರ್ಮತ್ವವು ಹೇಗೆ ಏರ್ಪಟ್ಟಿತೋ, ಹಾಗೆ ಅನಾದಿಸಿದ್ಧನಾದ ಶ್ರೀ ಕೃಷ್ಣನಿಗೆ ಧರ್ಮತ್ವವೂ, ತನ್ಮೂಲಕ ಸಿದ್ಧೋಪಾಯತ್ವವೂ ಸ್ಥಾಪಿತವಾಮುದೆಂದು ತಿಳಿಸುತ್ತಾರೆ. **ಪೂರ್ವಸಿದ್ಧಸ್ಯ**-ಯಜ್ಞವೆಂಬ ಕೃತಿಗೆ ಮೊದಲೇ ಸಿದ್ಧವಾಗಿ ಕೃತಿ ಸಾಧ್ಯವಲ್ಲದ, **ದೇಶಾದೇಃ** - ದೇಶ ಕಾಲಗುಣ ಮೊದಲಾದವುಗಳಿಗೆ, **ಯದ್ವತ್** - ಹೇಗೆ, **ಧರ್ಮತ್ವಂ** - ಕೇವಲ ಅಲೌಕಿಕ ಶ್ರೇಯಸ್ಸಾಧನರೂಪವಾದ ಮತ್ತು ಕೃತಿ ಸಾಧ್ಯವಲ್ಲದ ಧರ್ಮತ್ವವು, **ಇಷ್ಯತೇ** - ಅಪೇಕ್ಷಿಸಲ್ಪಟ್ಟಿರುತ್ತದೆಯೋ, **ಏವಂ**-ಮೇಲೆ ಹೇಳಿದ ರೀತಿಯಲ್ಲಿ ಎಂದರೆ, ಅಲೌಕಿಕವಾದ ಇಷ್ಟಸಾಧನರೂಪಧರ್ಮಲಕ್ಷಣವು ಇರುವದರಿಂದ, **ತತ್ತ್ವವಿದಃ** - ಕರ್ಮಮೀಮಾಂಸಕರಿಗೆ ವ್ಯತಿರಿಕ್ತರಾಗಿ, "**ಅಥಾತೋ ಧರ್ಮಜಿಜ್ಞಾಸಾ**" ಎಂಬ ಸೂತ್ರ ಮೊದಲುಗೊಂಡು "**ನ ಚ ಪುನರಾವರ್ತತೇ ನ ಚ ಪುನರಾವರ್ತತೇ**" ಎಂಬ ಬ್ರಹ್ಮಸೂತ್ರಾಂತ್ಯದವರೆಗೂ ಒಂದೇ ಶಾಸ್ತ್ರವೆಂದು ಭಾವಿಸಿರುವ ತತ್ತ್ವವನ್ನು ಯಥಾರ್ಥವಾಗಿ ತಿಳಿದವರು, **ಸನಾತನಂ** - ಅನಾದಿ ಸಿದ್ಧನಾದ, **ಕೃಷ್ಣಂ**-ಶ್ರೀ ಕೃಷ್ಣನನ್ನು, **ಧರ್ಮಂ** - ಅಲೌಕಿಕ ಇಷ್ಟಸಾಧನರೂಪ ಧರ್ಮವನ್ನಾಗಿ, **ವಿದುಃ**-ತಿಳಿಯುತ್ತಾರೆ. ಆದುದರಿಂದ ಇಷ್ಟಾಪೂರ್ತಾದಿಯು ಸಾಧ್ಯಧರ್ಮವು, ಸಾಧ್ಯೋಪಾಯವಲ್ಲವು. (ಇದು ಪೂರ್ವಮೀಮಾಂಸೆಯಲ್ಲಿ ಚರ್ಚಿಸಲ್ಪಟ್ಟಿತು. ಉತ್ತರ ಮೀಮಾಂಸೆಯಲ್ಲಿ ಶ್ರೀ ಕೃಷ್ಣನಾದ ಪರಬ್ರಹ್ಮವು ಸಾಧ್ಯೋಪಾಯಗಳಿಂದ ವಶೀಕೃತನಾದ ಸಿದ್ಧರೂಪಧರ್ಮವು ಎಂದು ಸ್ಥಾಪಿಸಲ್ಪಟ್ಟಿತು. ಹೀಗೆ ಸಿದ್ಧೋಪಾಯನಾದ ಶ್ರಿಯಃಪತಿಯು ಸಾಧ್ಯೋಪಾಯಗಳಿಂದ ವಶೀಕೃತನಾಗಿ ಪರಮ ಶ್ರೇಯಸ್ಸಾದ ಮೋಕ್ಷಫಲವನ್ನೀಯುವನೆಂದು ಸ್ಥಾಪಿತವಾಯಿತು. "**ಕೃಷ್ಣಂ ಧರ್ಮಂ ಸನಾತನಂ**" ಎಂಬ ಪ್ರಮಾಣಕ್ಕೆ ೨೦೪೩ನೆಯ ಪುಟವನ್ನು ನೋಡಿ. ಈಗ ಸ್ಥಾಪಿಸಿದಭಿಪ್ರಾಯವು ಇಷ್ಟೇ. ಧರ್ಮಶಬ್ದಕ್ಕೆ ಲಕ್ಷಣವು ಅಲೌಕಿಕ ಶ್ರೇಯಸ್ಸಾಧನತ್ವವು.

ಮುನ್ನಮನ್ನೈತ್ತುರವಾಯ್ ಮರುಣ್ ಮಾತ್ತರುಳಾಳಿಯುಮಾಯ್ ।
ತ್ತನ್ನಿನ್ನೈ ವಾಲನ್ನೈತ್ತನ್ ತರಿತ್ತೊಙ್ಗನ್ ತನಿಯಿರೈಯಾಯ್ ।
ಇನ್ನಮುತ್ತತ್ತಮುತಾಲಿರುಙ್ಗಮ್ ತಿರುನಾರಣನೇ
ಮನ್ನಿಯವನ್ ಶರಣ್ ಮತ್ತೋರ್ ಪತ್ತಿನ್ರಿವರಿಪ್ಪವರ್ಕ್ಕೇ ॥ ೩೦ ॥

ಭಗವಂತನಿಗೇನೇ ಇದು ಮುಖ್ಯವಾಗಿರುವದರಿಂದ, ಆತನೇ ಸಿದ್ಧೋಪಾಯನಾಗಿ ಮುಖ್ಯೋಪಾಯವೆಂಬ ಭಾವವು. ಆದುದರಿಂದಲೇ "ಕೃಷ್ಣಂ ಧರ್ಮಂ ಸನಾತನಂ" ಎಂಬ ಪ್ರಯೋಗವು.

ಮುಂದೆ ಈ ಸಿದ್ಧೋಪಾಯತ್ವವು ರಹಸ್ಯತ್ರಯದಲ್ಲಿ ಎಲ್ಲಿ ತೋರಿಬರುತ್ತದೆಂಬುದನ್ನು ತಿಳಿಸುತ್ತಾರೆ. ಇಸ್ಸಿದ್ಧೋಪಾಯಂ-ಶ್ರಿಯಃಪತಿಯು ಸಿದ್ಧೋಪಾಯನೆಂಬುದು ರಹಸ್ಯತ್ರಯದಲ್ಲೂ, ಪ್ರಥಮಾಕ್ಷರಾದಿ ಸ್ಥಾನಙ್ಗಳಿಲೇ-ಮೂಲಮಂತ್ರದ ಅಕಾರದಲ್ಲೂ, ಆದಿಶಬ್ದದಿಂದ, ಮೂಲಮಂತ್ರದ್ವಯಗಳ ನಾರಾಯಣಶಬ್ದದಲ್ಲೂ ಮತ್ತು ಚರಮಶ್ಲೋಕದ ಅಸ್ಮಚ್ಛಬ್ದಗಳಲ್ಲೂ, ಅನುಸಂಧೇಯವು.

ಅವತಾರಿಕೆ—ಈ ಅಧಿಕಾರದಲ್ಲಿ ಸ್ಥಾಪಿಸಲ್ಪಟ್ಟ ಅಭಿಪ್ರಾಯವು, ಶ್ರೀವಿಶಿಷ್ಟನಾದ ನಾರಾಯಣನೇ ಸಿದ್ಧೋಪಾಯನೆಂಬುದು, ಇದನ್ನೇ ಈ ಪಾಶುರದಲ್ಲಿ ಸಿದ್ಧಾಂತರೂಪದಲ್ಲಿ ಸ್ಥಾಪಿಸಿ ಅಧಿಕಾರ ಸಮಾಪ್ತಿಯನ್ನು ಮಾಡುತ್ತಾರೆ.

ಅರ್ಥ—ಮುನ್ನಮ್-ದೃಢವಾದ, ಅನ್ನೈತ್ತುರುವಾಯ್-ಸರ್ವವಿಧ ಬಂಧುವಾಗಿ, ಮರುಳ್‌ಮಾತ್ತು - ಅಜ್ಞಾನನಾಶಕವಾದ, ಅರುಳಾಳಿಯುಮಾಯ್-ಕೃಪಾಸಮುದ್ರವಾಗಿ, ತನ್ನಿನ್ನೈವಾಲ್ - ತನ್ನ ಸಙ್ಕಲ್ಪದಿಂದ, ಅನ್ನೈತ್ತುಮ್-ಸಮಸ್ತ ಚಿದಚಿತ್ತುಗಳನ್ನೂ, ತರಿತ್ತು - ಧರಿಸಿ, ಓಙ್ಗುಮ್ - ಆಧಿಕ್ಯವನ್ನು ಹೊಂದಿರುವ ತನಿ - ಅದ್ವಿತೀಯನಾದ, ಇರೈಯಾಯ್-ಸ್ವಾಮಿಯಾಗಿ, ಎಂದರೆ ನಿರತಿಶಯನಾಗಿ, ನಿಸ್ಸಮಾಭ್ಯಧಿಕನಾದ, ಇನ್ - ಭೋಗ್ಯವಾದ, ಅಮುದತ್ತು - ಅಮೃತದಲ್ಲಿ ಹುಟ್ಟಿದ, ಕ್ಷೀರಾಬ್ಧಿಯಲ್ಲಿ ಹುಟ್ಟಿದ, ಅಮುದಾಲ್-ಲಕ್ಷ್ಮಿಯ ಮೂಲಕವಾಗಿ, ಇರಙ್ಗುಮ್ - ದಯೆಯನ್ನು ತೋರಿಸುವ, ತಿರುನಾರಣನೇ - ಲಕ್ಷ್ಮೀ ವಿಶಿಷ್ಟನಾರಾಯಣನೇ, ಮತ್ತೋರ್ ಪತ್ತಿನ್ರಿ - ಬೇರೆ ಇನ್ನು ಯಾವ ಅವಲಂಬನವೂ ಇಲ್ಲದ, ಭಕ್ತಿಯೋಗಾದಿಗಳವಲಂಬನವಿಲ್ಲದೆ ಅಕಿಂಚನರಾದ, ವರಿಪ್ಪವರ್ಕ್ಕು - ಆಶ್ರಯಿಸಿದವರಿಗೆ ಎಂದರೆ ಶರಣಾಗತಿಯನ್ನು ಮಾಡಿದವರಿಗೆ, ಮನ್ನಿಯ - ಪೂರ್ವಸಿದ್ಧವಾದ, ವನ್ ಶರಣ್ - ಸುದೃಢವಾದ ಉಪಾಯನು ಎಂದರೆ ನಮಗೆ ಸಿದ್ಧೋಪಾಯನೆಂಬರ್ಥವು.

ತಾತ್ಪರ್ಯ—ಸರ್ವೇಶ್ವರನು ನಮಗೆ ಸರ್ವವಿಧಬಂಧುವು, "**ಮಾತಾ ಪಿತಾ ಭ್ರಾತಾ ನಿವಾಸ ಶ್ಶರಣಂಸುಹೃದ್ಗತಿರ್ನಾರಾಯಣಃ**" ಎಂಬ ಶ್ರುತಿಯು ಈ ಅಭಿಪ್ರಾಯಕ್ಕೆ ಪ್ರಮಾಣವು, ಈ ಶ್ರುತಿಯೇ ಅನೇಕ ಕಡೆಯಲ್ಲಿ ಉಪಪಾದಿತವಾಗಿರುತ್ತದೆ. "**ಪಿತಾತ್ವಂ ಮಾತಾತ್ವಂ ದಯಿತ ತನಯಸ್ತ್ವಂ ಪ್ರಿಯ ಸುಹೃತ್ತ್ವಮೇವತ್ವಂ ಮಿತ್ರಂ ಗುರುರಸಿಗತಿಶ್ಚಾಸಿ ಜಗತಾಂ**" ಎಂದು ಶ್ರೀಯಾಮುನೇಯರೂ, "**ತ್ವಮೇವ ಮಾತಾಚ ಪಿತಾತ್ವಮೇವ ತ್ವಮೇವಬಂಧುಶ್ಚ ಗುರುಸ್ತ್ವಮೇವ । ತ್ವಮೇವ ವಿದ್ಯಾದ್ರವಿಣಂ ತ್ವಮೇವ ತ್ವಮೇವ ಸರ್ವಂ ಮಮ ದೇವದೇವ**" ಎಂದು ಯತಿರಾಜರವರೂ ಈ ಶ್ರುತ್ಯರ್ಥವನ್ನೇ ಉಪಬ್ರಹ್ಮಣಮಾಡಿರುತ್ತಾರೆ. ಐಹಿಕ ಪಿತಾ ಮೊದಲಾದವರೂ ಸರಿಯಾಗಿ ನೋಡಿದರೆ ಹಾಗೆ ಭಾವಿಸಲ್ಪಡಲು ಅರ್ಹರಲ್ಲವೆಂದೂ, ಲೋಕಕ್ಕೆಲ್ಲಾ ಪಿತಾ ಮಾತಾವಾಗಿರುವವನೇ ಸರಿಯಾದ ಸರ್ವವಿಧ ಬಂಧುವೆಂದೂ ಲಕ್ಷ್ಮಣನು ಹೇಳಿಕೊಂಡಿರುತ್ತಾನೆ :—"**ಅಹಂ ತಾವನ್ಮಹಾರಾಜೇ ಪಿತೃತ್ವಂ ನೋಪಲಕ್ಷಯೇ । ಭ್ರಾತಾ ಭರ್ತಾ ಚ ಬಂಧುಶ್ಚ ಪಿತಾ ಚ ಮಮರಾಘವಃ**" ಉಪಾಧಿಯಿಂದ ತಂದೆಯಾದ ದಶರಥನು ಮಹಾರಾಜನು ಮಾತ್ರವೇ ಎಂದು ಹೇಳಿ ನಿರುಪಾಧಿಕವಾದ ಸರ್ವವಿಧ ಬಂಧುವೂ ತನಗೆ ಶ್ರೀರಾಮನೇ ಎಂದು, ತನ್ನ ತಂದೆಯ ಎದುರಿಗೇನೇ ಹೇಳಿಕೊಂಡಿರುತ್ತಾನೆ.

ಶ್ರುತಿಗಳೂ ಸಮಸ್ತ ಪುರಾಣೇತಿಹಾಸಗಳೂ ನಮಗೂ ಶ್ರಿಯಃಪತಿಗೂ ನವವಿಧ ಸಂಬಂಧವನ್ನುಪಪಾದಿಸುತ್ತವೆ.

ಪಿತಾ ಚ ರಕ್ಷಕಶ್ಶೇಷೀ ಭರ್ತಾಜ್ಞೇಯೋ ರಮಾಪತಿಃ ।
ಸ್ವಾಮ್ಯಾಧಾರೋ ಮಮಾತ್ಮಾ ಚ ಭೋಕ್ತಾಚಾದ್ಯ ಮನೂದಿತಃ ॥

ಎಂಬಶ್ಲೋಕವು ಈ ನವವಿಧ ಸಂಬಂಧಗಳನ್ನು ತಿಳಿಸುತ್ತದೆ. (೧೩೩ನೆಯ ಪುಟವನ್ನು ನೋಡಿ ಉಪೋದ್ಘಾತಾಧಿಕಾರದಲ್ಲಿ) ಈ ನವವಿಧ ಸಂಬಂಧಗಳೂ ಮೂಲಮಂತ್ರದಲ್ಲೇ ಸುವ್ಯಕ್ತವು. ಕಾರಣತ್ವವನ್ನು ಬೋಧಿಸುವ ಅಕಾರದಿಂದ (೧) ಪಿತೃತ್ವವೂ, ಅವರಕ್ಷಣೇ ಎಂಬ ಧಾತ್ವರ್ಥಮೂಲಕ ಅಕಾರದಿಂದಲೇ (೨) ರಕ್ಷಕತ್ವವೂ, ಲುಪ್ತ ಚತುರ್ಥಿಯ ಮೂಲಕ ನಮ್ಮಲ್ಲಿ ಶೇಷತ್ವವೂ ಅವನಲ್ಲಿ (೩) ಶೇಷಿತ್ವವೂ, ಉಕಾರದ ಅವಧಾರಣಾರ್ಥದಿಂದ (೪) ಭರ್ತೃತ್ವವೂ, ಮಕಾರವಾಚ್ಯನು ಜ್ಞಾತಾವಾದುದರಿಂದ ಶ್ರಿಯಃಪತಿಯಲ್ಲಿ (೫) ಜ್ಞೇಯತ್ವವೂ, ನಾರಾಯಣ ಪದದಲ್ಲಿ (೬) ಸ್ವಾಮಿತ್ವವೂ (೭) ಆಧಾರತ್ವವೂ ತತ್ಪುರುಷಸಮಾಸದಲ್ಲಿಯೂ, ಶರೀರ ಭಾವವೂ ಬಹುವ್ರೀಹಿಸಮಾಸದಲ್ಲಿಯೂ, ನಾರಾಯಣ ಶಬ್ದದಲ್ಲಿರುವ ಚತುರ್ಥಿಯಿಂದ ತೋರುವ ಕೈಂಕರ್ಯಭಾವದಿಂದ (೯) ಭೋಕ್ತೃತ್ವವೂ, ತೋರಿ

ಬರುತ್ತವೆ. ಈ ಅಭಿಪ್ರಾಯಗಳನ್ನೆಲ್ಲಾ ಸಙ್ಗ್ರಹವಾಗಿ ಸೂಚಿಸುವದಕ್ಕಾಗಿ **ಮನ್ನುಮನ್ನೈತ್ತುರವಾಯ್** ಎಂಬ ಪ್ರಯೋಗವು.

ಮರುಳ್ ಮಾತ್ತರುಳಾಳಿಯುಮಾಯ್ – ಪ್ರಕೃತಿ ಸಂಬಂಧದಿಂದ ಈ ಚೇತನನ ಜ್ಞಾನವು ತಿರೋಹಿತವಾಗಿರುತ್ತದೆ ಶ್ರಿಯಃಪತಿಯು ತನ್ನನ್ನು ತಿಳಿಯಲು ತಾನೇ "**ಯೇನಾಶ್ರುತಂ ಶ್ರುತಂ ಭವತಿ**" ಎಂದು ಹೇಳಿರುವ ಪ್ರಕಾರ ತಾನೇ ದಯಪಾಲಿಸುವ ಸುಜ್ಞಾನದಿಂದ ಈ ಚೇತನನು ತನ್ನನ್ನು ಹೊಂದುವ ಮಾರ್ಗವನ್ನು ಕೇಳಿ ತಿಳಿದು ಅವಲಂಬಿಸಬೇಕಾಗಿರುತ್ತದೆ. "**ಅಜ್ಞಾನೇನಾಽವೃತಂಜ್ಞಾನಂ ತೇನ ಮುಹ್ಯಂತಿ ಜಂತವಃ**" (ಗೀ. ೫-೧೫) ಹೀಗೆ ಜ್ಞಾನವು ಅಜ್ಞಾನದಿಂದ ತಿರೋಹಿತವಾಗಿರುವದರಿಂದ ಭ್ರಮಾದಿಗಳಿಗೆ ಕಾರಣಭೂತವಾಗಿರುತ್ತದೆ. ಇಂತಹ ಅಜ್ಞಾನವು ತೊಲಗಬೇಕಾದರೆ ಸ್ವಾಮಿ ಕೃಪೆಯಿಂದಲೇ ಆಗತಕ್ಕದ್ದೇ ವಿನಾ ಅನ್ಯಥಾ ಇಲ್ಲವು; "**ಪ್ರೀತಿಪೂರ್ವಕಂ । ದದಾಮಿ ಬುದ್ಧಿಯೋಗಂತಂ ಯೇನ ಮಾ ಮುಪಯಾಂತಿತೇ**" (ಗೀ ೧೦. ೧೧) ಎಂದು ಹೇಳಿರುವ ಹಾಗೆ ಸರ್ವೇಶ್ವರನೇ ತನ್ನ ಕೃಪಾಪೂರ್ವಕವಾಗಿ ಬುದ್ಧಿಯೋಗವನ್ನುಂಟು ಮಾಡುವನು.

"**ತೇಷಾ ಮೇವಾನು ಕಂಪಾರ್ಥ ಮಹಮಜ್ಞಾನಜಂತಮಃ ।**
ನಾಶಯಾಮ್ಯಾತ್ಮಭಾವಸ್ಥೋ, ಜ್ಞಾನ ದೀಪೇನ ಭಾಸ್ವತಾ॥ (ಗೀ.೧೦ ೧೧)

ಯಾವಾಗಲೂ ಭಕ್ತಿಯೋಗದಲ್ಲಿದ್ದು ಆತನನ್ನು ಭಜಿಸುವವರಿಗೆ ಅನುಗ್ರಹ ಮಾಡುವದಕ್ಕಾಗಿ, ಅವರುಗಳ ಮನೋವೃತ್ತಿಗೆ ತಾನೇ ವಿಷಯಭೂತನಾಗಿ, ತನ್ನ ವಿಷಯವಾದ ಜ್ಞಾನವೆಂಬ ದೀಪದಿಂದ ಪ್ರಾಚೀನಕರ್ಮದಿಂದುಂಟಾದ ಅಜ್ಞಾನವೆಂಬ ಕತ್ತಲೆಯನ್ನು ನಾಶಗೊಳಿಸುವನೆಂದು ಶ್ರೀ ಕೃಷ್ಣನೇ ಹೇಳಿಕೊಂಡಿರುತ್ತಾನೆ. ಆದುದರಿಂದಲೇ **ಮರುಳ್ ಮಾತ್ತರುಳಾಳಿಯುಮಾಯ್** ಎಂದು ಪ್ರಯೋಗಿಸಿರುತ್ತಾರೆ. ಹೀಗೆ ಎರಡು ವಿಶೇಷಣಗಳಿಂದ ಆತನೇ ನಮಗೆ ಸ್ವಾಮಿಯೂ ಶೇಷಿಯೂ ರಕ್ಷಕನೂ, ಆದುದರಿಂದ ನಮ್ಮನ್ನು ತನ್ನ ಇಷ್ಟಬಂದಂತೆ ವಿನಿಯೋಗಿಸಲು ಸ್ವಾತಂತ್ರ್ಯ ಉಂಟೆಂದೂ, ನಮ್ಮ ಅಜ್ಞಾನವನ್ನು ಹೋಗಲಾಡಿಸಿ ತನ್ನನ್ನೇ ನಂಬುವಹಾಗೆ ಮಾಡಿಕೊಳ್ಳಲು ಕೃಪಾಜಲನಿಧಿಯೆಂದೂ ಹೇಳಿರುವದರಿಂದ ನಮಗೆ ಸಿದ್ಧೋಪಾಯನಾಗಿರಲು ಬೇಕಾದ ಕಲ್ಯಾಣಗುಣಗಳು ಆತನಲ್ಲಿವೆ ಎಂದು ಹೇಳಲ್ಪಟ್ಟವು. ಆದರೆ ಸರ್ವಶಕ್ತತ್ವವಿಲ್ಲದೆ ಆತನ ಕೃಪೆಯು ಕಾರ್ಯಕಾರಿಯಾಗದೆಂದು ಭಾವಿಸಿ "**ತನ್ನಿನ್ನೈವಾಲನ್ನೈತ್ತುಮ್**" ಇತ್ಯಾದಿ ವಿಶೇಷಣವನ್ನು ಕೊಟ್ಟಿರುತ್ತಾರೆ. ಸಙ್ಕಲ್ಪಮಾತ್ರದಿಂದಲೇ ಸರ್ವವನ್ನೂ ಧರಿಸುವ ಸರ್ವಶಕ್ತಿಯುಳ್ಳವನು ಸರ್ವೇಶ್ವರನು. "**ದ್ಯೌಸ್ಸಚಂದ್ರಾರ್ಕ ನಕ್ಷತ್ರಂ ಖಂದಿಶೋ**

ಭೂರ್ಮಹೋದಧಿಃ। ವಾಸುದೇವಸ್ಯ ವೀರ್ಯೇಣ ವಿಧೃತಾನಿ ಮಹಾತ್ಮನಃ" ಎಂದೂ, "ಭ್ರಾಮಯರ್ನ್ ಸರ್ವ ಭೂತಯಂತ್ರಾ, ರೂಢಾನಿ ಮಾಯಯಾ" (ಗೀ. ೧೮.೬೧) ಎಂದೂ ಹೇಳಿರುವಹಾಗೆ ಸರ್ವವನ್ನೂ ಸ್ವಸಙ್ಕಲ್ಪದಿಂದಲೇ ಧರಿಸಿ ರುವನು. ಹೀಗೆ ಸರ್ವಶಕ್ತಿಸ್ವಾತಂತ್ರ್ಯಕಾರುಣ್ಯಗಳನ್ನು ಹೊಂದಿರುವವನನ್ನು ಆಶ್ರಯಿಸಿದರೆ ನಮ್ಮ ಇಷ್ಟಾರ್ಥವು ಸಿದ್ಧಿಸುವದೇ.ವಿನಾ ಎಂದಿಗೂ ವಿಫಲವಾಗದು ಎಂಬ ಭಾವವು. ಓಙ್ಗುವಾ್ ತನಿಯಿರ್ಕೈಯೂಯ್ ಎಂದು ಹೇಳಿರುವದರಿಂದ "ಸೋಕಾಮಯತ ಬಹುಸ್ಯಾಂ ಪ್ರಜಾಯೇಯ" ಎಂಬ ಶ್ರುತ್ಯನುಸಾರ ವಾಗಿ ಎಲ್ಲಕ್ಕೂ ತನ್ನ ಸಙ್ಕಲ್ಪಮಾತ್ರದಿಂದಲೇ ಸತ್ತೆಯನ್ನುಂಟುಮಾಡುವದರ ಮೂಲಕ ಎಲ್ಲಿವೂ ಅಭಿವೃದ್ಧಿಯನ್ನು ಹೊಂದೋಣ ಹೇಗೋ ಹಾಗೆ ಮಾಡಿದ ಅದ್ವಿತೀಯ ಸ್ವಾಮಿಯು ಎಂದು ಹೇಳಲ್ಪಟ್ಟಿತು.

ಇವೆಲ್ಲಕ್ಕೂ ಮಹತ್ತಾದ ಇನ್ನೊಂದು ಕಾರಣವೂ ಉಂಟು. ಇನ್ನಮುದ ತ್ತಮುದಾಲಿರುಙ್ಗುವ್ ತಿರುನಾರಣ್, ಆತನಿಗೆ ಪ್ರಿಯವಲ್ಲಭಳು ಅಮೃತ ಕ್ಷೀರಸಮುದ್ರದ ಕನ್ಯಕೆಯಾಗಿ,ಅಮುದು ಎಂದರೆ ಅಮೃತವೆಂಬ ಹೆಸರುಳ್ಳ ಅನು ಗ್ರಹಮಯಳಾಗಿ ಅಜ್ಞಾತನಿಗ್ರಹಳಾಗಿರುವ ಲಕ್ಷ್ಮಿಯು ; ಆಕೆಯು ಯಾವಾಗಲೂ ಅನಪಾಯಿನಿಯಾಗಿ ವಿಲಕ್ಷಣ ವಿಶೇಷಣವಾಗಿರುವದರಿಂದ ಆಕೆಯ ಸಾನ್ನಿಧ್ಯದಲ್ಲಿ ಮಾಡಿದ ಶರಣಾಗತಿಯು ಮಹಿಮೆಯು ಎಂತಹ ಕ್ರೂರವಾದ ಪ್ರಾರಬ್ಧಕರ್ಮ ಮೂಲಕ ಸರ್ವಶಾಸ್ತ್ರಾವಿನ ಕೋಪಕ್ಕೆ ಗುರಿಯಾಗಿರುವವನನ್ನೂ ಅನುಗ್ರಹಕ್ಕೆ ಪಾತ್ರನನ್ನಾಗಿ ಮಾಡುವದರಿಂದ, ಆಕೆಯು ಸಿದ್ಧೋಪಾಯಳೆಂಬುವವರಲ್ಲಿ ಸಂದೇಹ ವಿಲ್ಲವು. ಎಲ್ಲಕ್ಕೂ ಆಕೆಯೇ ಮೂಲೋಪಾಯಭೂತಳೆಂಬುವದನ್ನು ರಾಮಾವ ತಾರದಲ್ಲಿ ಮಾಯಾ ಮೃಗವನ್ನಪೇಕ್ಷಿಸಿ, ರಾವಣನಿಂದ ಪಹೃತಳಾಗಿ ಸರ್ವರಾಕ್ಷಸ ನಾಶಕ್ಕೂ ಸರ್ವಋಷಿಸಂಘದ ರಕ್ಷಣೆಗೂ ಕಾರಣಭೂತಳೆಂಬುವದು ಸುವ್ಯಕ್ತವು. ಹಾಗೆಯೇ ಕೃಷ್ಣಾವತಾರದಲ್ಲಿ ಶಿಶುಪಾಲನಿಂದ ವರಿಸಲ್ಪಡುವ ಹಾಗೆ ಮಾಡಿ ಕೊಂಡು, ಕೊನೆಗೆ ಆತನನ್ನು ವರ್ಜಿಸಿ, ಶ್ರೀ ಕೃಷ್ಣನಿಗೆ ಪತ್ರ ಬರೆದು ಗುಪ್ತವಾಗಿ ಬರಮಾಡಿಕೊಂಡು ವಿವಾಹಿತಳಾದುದರಿಂದ ಪ್ರಬಲದ್ವೇಷಗಳಿಗೆ ಕಾರಣಭೂತ ಳಾಗಿ ಶಿಶುಪಾಲ ಜರಾಸಂಧಾದಿಗಳೆಲ್ಲಾ ಹತರಾಗಲು ಕಾರಣವಾದಳೆಂಬುದೂ ಸುವ್ಯಕ್ತವು. ಆದದರಿಂದ ದ್ವಯಮಂತ್ರದ ಶ್ರೀಮಚ್ಛಬ್ಧವು ವಿಶೇಷಣವೇ ವಿನಾ ಉಪಲಕ್ಷಣವಲ್ಲವೆಂದು ತಿಳಿಸುವದಕ್ಕಾಗಿ ಅಮುದಾಲ್ .ಇರುಙ್ಗುವ್ ಎಂಬ ಪ್ರಯೋಗವು, "ಲಕ್ಷ್ಮ್ಯಾ ಸಹಹೃಷೀಕೇಶೋ" ಎಂಬ ಲಕ್ಷ್ಮೀತಂತ್ರ ಪ್ರಮಾಣಾರ್ಥವೂ ಸೂಚಿಸಲ್ಪಟ್ಟಿತು. ಅಮುದತ್ತಮುದಾಲ್ ಎಂಬ ಪ್ರಯೋ ಗವಿಂದ ಲಕ್ಷ್ಮಿಯೂ ಅಮೃತತ್ವವನ್ನುಂಟುಮಾಡುವ ಸಾಮರ್ಥ್ಯವುಳ್ಳವಳೆಂದೂ

**ವಿಶ್ರಾಮ್ಯದ್ಭಿರುಪರ್ಯುಪರ್ಯಪಿ ದಿವಾನಕ್ತಂ ಬಹಿರ್ದರ್ಶನೈ
ರಸ್ಮದ್ದೇಶಿಕ ಸಂಪ್ರದಾಯ ರಹಿತೈ ರದ್ಯಾಪಿ ನಾಲಕ್ಷಿತಃ।**

“ ವಿಮುಕ್ತಿ ಫಲದಾಯಿನೀ ” (ವಿ. ಪು) ಇತ್ಯಾದಿ ಪ್ರಮಾಣಗಳಲ್ಲಿಯೂ ಸೂಚಿಸಲ್ಪಟ್ಟಿತು.. ಆದುದರಿಂದ ಇಂತಹ ಲಕ್ಷ್ಮೀಯುಕ್ತನಾದ ನಾರಾಯಣನೇ ಲಕ್ಷ್ಮಿಯಲ್ಲೂ ನಾರಾಯಣನಲ್ಲೂ ಶರಣಾಗತಿಯನ್ನನುಷ್ಠಿಸಿರುವ ಪ್ರಪನ್ನರಾದ ನಮಗೆ ಸಿದ್ಧೋಪಾಯನು. ಹೀಗೆ ಸಿದ್ಧೋಪಾಯನಾದರೂ ಅವ್ಯವಸ್ಥನಾದ ಸಿದ್ಧೋಪಾಯನಲ್ಲವು, ಸಾಧ್ಯೋಪಾಯರೂಪವ್ಯಾಜಸಾಪೇಕ್ಷನಾಗಿ ಅನುಗ್ರಹಿಸುವದರಿಂದ, ಸರ್ವಮುಕ್ತಿಪ್ರಸಙ್ಗಕ್ಕೆ ಕಾರಣವಿಲ್ಲವು. ಈ ಅಭಿಪ್ರಾಯವು **ಮತ್ತೋರ್‍ಪತ್ತಿನ್ರಿ ವರಿಪ್ಪವರ್ಕ್ಕೇ** ಶ್ರಿಯಃಪತಿಯಲ್ಲದೆ ಇನ್ನ್ಯಾರನ್ನೂ ಆಶ್ರಯಿಸದೇ ಇರುವವರಿಗೆ, ಎಂಬುವದರಿಂದ ತೋರಿಬರುತ್ತದೆ.

ಅವತಾರಿಕೆ- ಈ ಶ್ಲೋಕದ ಮೂಲಕ ಹೀಗೆ ಸಿದ್ಧೋಪಾಯನು ಶ್ರಿಯಃಪತಿಯೆಂದೂ ಕೆಲವರು ಭಾವಿಸದೆ, ಇತರರು ಮಾತ್ರ ಭಾವಿಸಲು ಕಾರಣವೇನೆಂಬುದನ್ನು ತಿಳಿಸಲುದ್ಯುಕ್ತರಾಗಿ, “ ತದ್ಯಥಾ ಹಿರಣ್ಯನಿಧಿಂ ” ಎಂಬ ಶ್ರುತ್ಯರ್ಥವನ್ನುಪಪಾದಿಸಿ ತಿಳಿಸುತ್ತಾರೆ.

ಅರ್ಥ—ದಿವಾನಕ್ತಂ-ಹಗಲೂ ರಾತ್ರಿ ಸಹ ಎಂದರೆ ಯಾವಾಗಲೂ, **ಉಪರ್ಯುಪರಿ** - ಹಿರಣ್ಯನಿಧಿಯ ರೂಪನಾದ ಸರ್ವೇಶ್ವರನ ಮೇಲೆ ಮೇಲೆಯೇ, **ವಿಶ್ರಾಮ್ಯದ್ಭಿರಪಿ**- ವಿಶ್ರಮಿಸಿಕ್ಕೊಂಡಿರುತ್ತಿದ್ದರೂ ಕೂಡ, **ಅಸ್ಮದ್ದೇಶಿಕ ಸಂಪ್ರದಾಯ ರಹಿತೈಃ** - ನಮ್ಮ ಆಚಾರ್ಯರುಗಳಾದ ನಾಥಮುನಿ, ಯಾಮುನ ಮುನಿ, ಶ್ರೀರಾಮಾನುಜಮುನಿ, ಆಪ್ಪಿಳ್ಳಾರ್ ಮೊದಲಾದವರುಗಳ ಸಂಪ್ರದಾಯ ಸಂಬಂಧವಿಲ್ಲದ, **ಬಹಿರ್ದರ್ಶನೈಃ** - ಹೊರಗಿನ ಪದಾರ್ಥಗಳನ್ನು ಮಾತ್ರ ನೋಡಲು ಶಕ್ತಿಯುಳ್ಳವರುಗಳಿಂದ, ಅಥವಾ ಶಾಸ್ತ್ರಗಳ ರಹಸ್ಯಾರ್ಥಗಳನ್ನು ಗ್ರಹಿಸದೆ ಮೇಲೆ ಮೇಲೆ ತೋರುವ ಅರ್ಥಗಳನ್ನು ಮಾತ್ರ ಗ್ರಹಿಸುವರುಗಳಿಂದ, ಅಥವಾ ವೇದಬಾಹ್ಯರಾದ ಇತರ ಸಿದ್ಧಾಂತಿಗಳಿಂದ, **ಅದ್ಯಾಪಿ** - ಈಗಲೂಕೂಡ, **ನಾಲಕ್ಷಿತಃ** - ಕಾಣದೇ ಇರುವಂಥಾದ್ದು, ಇದು ಶೇವಧಿಃ ಎಂಬುವದಕ್ಕೆ ವಿಶೇಷಣವು. ಇಂತಹ ನಮ್ಮ ಗುರು ಪರಂಪರೆಯ ಸಂಪ್ರದಾಯ ನಿಷ್ಠೆಯಿಲ್ಲದವರಿಂದ ಈ ಸಿದ್ಧೋಪಾಯನಾದ ಶ್ರಿಯಃಪತಿಯು ಕಣ್ಣಿಗೆ ಬೀಳುವದಿಲ್ಲವೆಂದು ಹೇಳಿದರು; ಇನ್ನು ಯಾರಿಗೆ ಗೋಚರನು ಎಂದರೆ ಸತ್ವಸ್ಥರಿಗೆ ಎಂದು ಉತ್ತರಾರ್ಧದಿಂದ ಹೇಳುತ್ತಾರೆ. **ಸ್ವಪ್ರಾಪ್ತೇಃ**-ತನ್ನನ್ನು ಹೊಂದುವದಕ್ಕೆ, **ಸ್ವಯಮೇವ**-ತಾನೆಯೇ **ಸಾಧನ**

ಸ್ವಪ್ರಾಪ್ತೌ ಸ್ವಯಮೇವ ಸಾಧನತಯಾ ಜೋಘುಷ್ಯಮಾಣಃ ಶ್ರುತೌ।
ಸತ್ವಸ್ಥೇಷು ಭಜೇತ ಸನ್ನಿಧಿ ಮಸೌ ಶಾಂತಾವಧಿ ಶ್ಶೇವಧಿಃ ॥ ೫೨ ॥

ಇತಿ ಕವಿತಾರ್ಕಿಕಸಿಂಹಸ್ಯ ಸರ್ವತಂತ್ರಸ್ವತಂತ್ರಸ್ಯ ಶ್ರೀಮದ್ವೇಙ್ಕಟ ನಾಥಸ್ಯ ವೇದಾಂತಾಚಾರ್ಯಸ್ಯ ಕೃತಿಷು, ಶ್ರೀಮದ್ರಹಸ್ಯತ್ರಯಸಾರೇ ಸಿದ್ಧೋಪಾಯ ಶೋಧನಾಧಿಕಾರಸ್ತ್ರಯೋವಿಂಶಃ.

ಶ್ರೀಮತೇ ನಿಗಮಾನ್ತ ಮಹಾದೇಶಿಕಾಯ ನಮಃ

ತಯಾ-ಸಾಧನವೆಂಬ ಭಾವದಿಂದ, ಶ್ರುತೌ- ಶ್ರುತಿಗಳಲ್ಲಿ (ಜಾತ್ಯೇಕವಚನವು). **ಜೋಘುಷ್ಯಮಾಣಃ** - ಉದ್ಘೋಷಿಸಲ್ಪಟ್ಟಿರುವ, **ಅಸೌ** – ಈ ಸಿದ್ಧೋಪಾಯ ನಾದ, **ಶಾಂತಾವಧಿಃ** – ದೇಶಕಾಲವಸ್ತು ಪರಿಚ್ಛೇದರಹಿತನಾದ, **ಶೇವಧಿಃ** – ಹಿರಣ್ಯನಿಧಿ ಎಂದು ಶ್ರುತಿಯಲ್ಲಿ ಹೇಳಲ್ಪಟ್ಟ ಪರಮಾತ್ಮನು, **ಸತ್ವಸ್ಥೇಷು** – **ಸತ್ಸಂ** ಪ್ರದಾಯನಿಷ್ಠರಾದ ಸಾತ್ವಿಕ ಜನಗಳಲ್ಲಿ, **ಸನ್ನಿಧಿಂ**-ಸಾನ್ನಿಧ್ಯವನ್ನು, **ಭಜೇತ**- ಹೊಂದುವನು, ಎಂದರೆ ಅಂತವರಿಗೆ ಗೋಚರನಾಗುವನೆಂಬ ಭಾವವು.

ತಾತ್ಪರ್ಯ—ತಮ್ಮಲ್ಲೇ ಕೆಲವರು ಈ ಸಿದ್ಧೋಪಾಯ ಸ್ವರೂಪವನ್ನು, ಶ್ರುತ್ಯಾದಿ ಶಾಸ್ತ್ರಪ್ರಮಾಣಗಳ ಸರಿಯಾದ ಪರಿಶೀಲನವಿಲ್ಲದಿರುವದರಿಂದಲೂ, ತಮ್ಮ ಗುರುಪರಂಪರೆಯ ಸಂಪ್ರದಾಯಕ್ಕೂ ಬಾಹಿರರಾದುವರಿಂದಲೂ, ತಿಳಿಯದೆ ಹೋದರೆಂದು ತಿಳಿಸುತ್ತಾರೆ, ಶಾಸ್ತ್ರಪ್ರಮಾಣಗಳ ರಹಸ್ಯಾರ್ಥಗಳನ್ನೂ ಕೂಡ ಚನ್ನಾಗಿ ಪರಿಶೀಲಿಸಿ ಉಪದೇಶಹೊಂದಿದವರಾದ ಮತ್ತು ಅಂತವರುಗಳ ಸಂಪ್ರದಾಯವನ್ನರಿತ ಸತ್ಸಂಪ್ರದಾಯನಿರತರಿಗಾದರೋ ಈ ಸಿದ್ಧೋಪಾಯನು ಶ್ರಿಯಃ ಪತಿ ಎಂಬುದು ಸುವ್ಯಕ್ತವೆಂದು ತಿಳಿಸುತ್ತಾರೆ.

ಹೀಗೆ ಶಾಸ್ತ್ರಪ್ರಮಾಣಗಳ ಮತ್ತು ಸತ್ಸಂಪ್ರದಾಯಗಳ ಸಹಾಯವಿದ್ದರೂ ಏತಕ್ಕೆ ಇವರುಗಳಿಗೆ ಗೋಚರವಾಗಲಿಲ್ಲವು ಎಂಬುದನ್ನು ಒಂದು ಶ್ರುತಿಯ ಮೂಲಕ ಉಪಪಾದಿಸುತ್ತಾರೆ. ಅದು ಯಾವುದೆಂದರೆ:—"**ತದ್ಯಥಾ ಹಿರಣ್ಯನಿಧಿಂ ನಿಹಿತ ಮಕ್ಷೇತ್ರಜ್ಞಾ ಉಪರ್ಯುಪರಿ ಸಂಚರಂತೋ ನವಿಂದೇಯುಃ, ಏವ ಮೇ ವೇಮಾಃ ಪ್ರಜಾ ಅಹರಹರ್ಗಚ್ಛಂತ್ಯ ಏತಂ ಬ್ರಹ್ಮಲೋಕಂ ನ್ನವಿಂದಂತಿ, ಅನ್ಯತೇ ನಹಿ ಪ್ರತ್ಯೂಢಾಃ**" (ಛಾಂ ೮. ೩ ೨.) ಹೇಗೆ ಕೆಳಗೆ ಗುಪ್ತವಾಗಿರುವ ಹಿರಣ್ಯನಿಧಿಯನ್ನೂ, ಆ ನಿಧಿಯಿರುವ ಕ್ಷೇತ್ರದ ಮಹಿಮೆಯನ್ನೂ ತಿಳಿಯದವರು, ಆ ನಿಧಿಯಮೇಲೆ ಮೇಲೆಯೇ ಸಂಚರಿಸುತ್ತಾ, ಆ ನಿಧಿಯನ್ನು ತಿಳಿಯದೆ ಹೋದಲಾಪರೋ, ಹಾಗೆಯೇ ಈ ಪಮುಷ್ಯರೂ ಸುಷುಪ್ತಿಯಲ್ಲಿ(ನಿದ್ರೆ) ಪ್ರತಿ

ದಿನವೂ ಪರಮಾತ್ಮನೊಂದಿಗೆ ಸೇರಿಯಿದ್ದರೂ, ಅಥವಾ ಅಂತರಾತ್ಮಾವಾಗಿ ಇವರಲ್ಲಿ ಯಾವಾಗಲೂ ಇರುವ ದಹರಾಕಾಶನಾದ ಹಿರಣ್ಯನಿಧಿಯಹಾಗೆ ಪರಮಪುರುಷಾರ್ಥ ದಾಯಕನಾದ ಪರಬ್ರಹ್ಮನೊಂದಿಗೆ ಇದ್ದರೂ, ದಹರಾಕಾಶಾಖ್ಯನಾದ ಪರಬ್ರಹ್ಮ ವನ್ನು ಹೊಂದಲಾರರು ಏಕೆಂದರೆ, ಅವಿದ್ಯೆಯಿಂದ ಇವರುಗಳ ಸ್ವಭಾವವು ಆಛ್ಛಾ ದಿತವಾಗಿ ಬದಲಾಯಿಸಿರುವದರಿಂದ" ಎಂಬುದು ಈ ಶ್ರುತ್ಯರ್ಥವು. ಅವಿದ್ಯಾಗೃಹೀತ ರಾದವರು ಹೇಗೆ ಹೊರಗೆ ಮಾತ್ರ ನೋಡುವರೋ, ಮತ್ತು ಗೂಢವಾಗಿರುವ ಹಿರಣ್ಯನಿಧಿಯನ್ನು ಕಾಣಲಾರರೋ, ಹಾಗೆಯೇ ನಮ್ಮಲ್ಲೀ ಕೆಲವರು ಶಾಸ್ತ್ರಗಳ ಒಳಹೊಕ್ಕು, ಅದರಲ್ಲಿ ಕಾಣಬರುವ ಶ್ರಿಯಃಪತಿತ್ವರೂಪ ಸಿದ್ಧೋಪಾಯತ್ವ ವನ್ನು ಅರಿಯಲಾರರು. ಅಂತವರು ಯಾರೆಂದರೆ, ಇತರ ಬಾಹ್ಯಕುದೃಷ್ಟಿ ಸಿದ್ಧಾಂತಿಗಳೂ ಎಂದು ಬಹಿರ್ದರ್ಶನೈಃ ಎಂಬುದರಿಂದ ತಿಳಿಸುತ್ತಾರೆ. ಇನ್ನೂ ತಮ್ಮಲ್ಲೀ ಕೆಲವರು ಸಿದ್ಧೋಪಾಯತ್ವವನ್ನು ಅಙ್ಗೀಕರಿಸಿದರೂ, ತನಗೆ ವಿಶೇ ಷಣಳಾದ ಲಕ್ಷ್ಮಿಯಿಂದ ಸದಾ ಯುಕ್ತನಾಗಿರುವ ಶ್ರಿಯಃಪತಿಯನ್ನು ಸಿದ್ಧೋ ಪಾಯವೆಂದು ಅಙ್ಗೀಕರಿಸದೇ ಇರುವದರಿಂದ, **ಅಸ್ಮದ್ದೇಶಿಕ ಸಂಪ್ರದಾಯ ರಹಿತೈಃ** ಎಂಬುದರಿಂದ ಅವರನ್ನೂ ಸೇರಿಸಿ ಹೇಳಿರುತ್ತಾರೆ. ಈ ಪ್ರಯೋಗ ದಿಂದ ಶ್ರೀ ದೇಶಿಕರು ಭಿನ್ನಾಭಿಪ್ರಾಯವುಳ್ಳ ಶ್ರೀ ವೈಷ್ಣವರನ್ನು ನಿಂದಿಸಿದ ರೆಂದು ಹೇಳುವರು; ಇದು ಉದಾರಾಭಿಪ್ರಾಯವಲ್ಲವು. ಇಲ್ಲಿ ಅಪಿ ಶಬ್ದವು ಅದ್ಯ ಎಂಬುದಕ್ಕೆ ಸೇರಿಸಿ, ಅದ್ಯಾಪಿ ಎಂದರ್ಥಮಾಡುವದರಿಂದ, ಇಷ್ಟು ಶಾಸ್ತ್ರ ಪ್ರಮಾಣವೂ, ಮುಖ್ಯ ದೇಶಿಕರುಗಳಾದ ನಾಥ ಯಾಮುನ ಭಾಷ್ಯಕಾರ ಸಂಪ್ರ ದಾಯವೂ ಕೂಡ **ಅದ್ಯಾಪಿ ನಾಲಕ್ಷಿತಃ**-ಇನ್ನೂ ಕೂಡ ಗೋಚರವಾಗಲಿಲ್ಲವೆಂಬ ಪರಿತಾಪ ತೋರುತ್ತದೇ ವಿನಾ ಸರ್ವಾತ್ಮನಾ ನಿಂದೆಯಾಗುವದಿಲ್ಲವು. ಶ್ರೀ ವೈಷ್ಣವ ರೊಂದಿಗೆ ವಾದಮಾಡಿದರೆ ಭಾಗವತಾಪಚಾರ ಎಲ್ಲಿಯುಂಟಾಗುತ್ತದೋ ಎಂದು ಭೀತರಾಗಿರುವವರು, ಮತ್ತು ಅವಮರ್ಯಾದೆಗಾಗಿ ಪಾದರಕ್ಷೆಗಳು ತಲೆಗೆ ತಾಕುವ ಹಾಗೆ ಮಾಡಿದುದರಿಂದ ಭಾಗವತಪಾದರಜಸ್ಸಿನಿಂದ ತಾವು ಪವಿತ್ರರಾದರೆಂದೂ ಭಾವಿಸಿದವರು, ಎಲ್ಲಿಯಾದರೂ ಶ್ರೀವೈಷ್ಣವರುಗಳನ್ನು ನಿಂದಿಸುವರೇ ? ಪರಿ ತಾಪರೂಪದಲ್ಲೂ, ಉಪದೇಶರೀತಿಯಲ್ಲೂ, ಹೇಳಿ ಅವರುಗಳು ತಮ್ಮ ಅಭಿಪ್ರಾ ಯವನ್ನು ಅವಲಂಬಿಸಲಿ ಎಂದು ಮಾಡಿದ ಹಿತೋಕ್ತಿಯೆಂದು ಅವರುಗಳು ಭಾವಿಸತಕ್ಕದ್ದು.

ಹಾಗೆ ಹಿತೋಪದೇಶವೆಂಬುದು ಉತ್ತರಾರ್ಧದಿಂದ ಸುವ್ಯಕ್ತವು. ಪೂರ್ವಾ ರ್ಧದಲ್ಲಿ ತಾವು ಸ್ಥಾಪಿಸಿರುವ ಅಭಿಪ್ರಾಯಕ್ಕೆ **"ಅಸ್ಮದ್ದೇಶಿಕ ಸಂಪ್ರದಾಯ"** ದ ಬಲವೂ ಮಹಾತ್ಮ್ಯೆಯೂ ಉಂಟೆಂದು ಹೇಳಿದರು. ಅವು ಎಲ್ಲಿ ತೋರಿಬರು

ತ್ರದೆ ಎಂದರೆ ಶ್ರೀ ಯಾಮುನೇಯರು ತನ್ನ ಸ್ತೋತ್ರದಲ್ಲಿ "ಶ್ರೇಯೋನಹ್ಯರವಿಂದ ಲೋಚನ ಮನಃಕಾಂತಾ ಪ್ರಸಾದಾದೃತೇ ಸಂಸೃತ್ಯಕ್ಷರವೈಷ್ಣವಾಧ್ವಸುನೃಣಾಂ ಸಂಭಾವ್ಯತೇ ಕರ್ಹಿಚಿತ್" (ದಾಸನ ಚತುಶ್ಲೋಕೀ ವ್ಯಾಖ್ಯಾನವನ್ನು ನೋಡಿ) ಎಂಬಲ್ಲಿ ಲಕ್ಷ್ಮಿಗೆ ಉಪಾಯತ್ವವನ್ನೂ ಸ್ಪಷ್ಟವಾಗಿ ಬೋಧಿಸಿರುತ್ತಾರೆ. ಹಾಗೆಯೇ ಶ್ರೀ ಭಾಷ್ಯಕಾರರೂ ಶ್ರೀ ಪರಾಶರ ಭಟ್ಟರೂ ಸಹ ಉಪದೇಶಿಸಿರುತ್ತಾರೆ. ಇವೆಲ್ಲಾ ದಾಸನ ಶ್ರೀ ಸ್ತುತಿ ವ್ಯಾಖ್ಯಾನದಲ್ಲಿ ವಿದಿತವು. ಉತ್ತರಾರ್ಧದಿಂದ ಬಹು ಶ್ರುತಿ ಪ್ರಮಾಣಗಳ ಬಲವೂ ಉಂಟೆಂದು ಉಪಪಾದಿಸುತ್ತಾರೆ. ಸ್ವಪ್ರಾಪ್ತಿಗೆ ಸ್ವಯಮೇವಸಾಧನವೆಂದು ಶ್ರುತಿಗಳು ಉದ್ಘೋಷಿಸುತ್ತವೆ ಎಂದು ಹೇಳುತ್ತಾರೆ. ಆ ಶ್ರುತಿಗಳು ಯಾವುವೆಂದರೆ:— "ಅಮೃತಸ್ಯೈಷ ಸೇತುಃ। (ಮುಂ. ೨ ೨. ೫) ಸಂಸಾರ ಸಮುದ್ರದ ಆಚೇ ದಡದಲ್ಲಿರುವ ಮೋಕ್ಷವನ್ನು ಹೊಂದಿಸುವ ಸೇತುವೆಯು ಈತನು, (೨) "ನಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ ನ ಬಹುನಾಶ್ರುತೇನ। ಯಮೇವೈಷ ವೃಣುತೇ ತೇನಲಭ್ಯಸ್ತಸ್ಯೈಷ ಆತ್ಮಾ ವಿವೃಣತೇ ತನೂಂ ಸ್ವಾಂ" (ಮುಂ. ೩. ೨. ೩.) ಪರಮಾತ್ಮನು ಕೇವಲ ಶ್ರವಣ ಮನನ ನಿಧಿಧ್ಯಾಸನಗಳಿಂದಲೇ ಲಭ್ಯನಲ್ಲವು, ಈ ಪರಮಾತ್ಮನು ಯಾವ ಉಪಾಸಕನನ್ನು ತನ್ನನ್ನು ಹೊಂದಲು ಯೋಗ್ಯನೆಂದು ಸಾಧ್ಯೋಪಾಯಕ್ಕೆ ವರಿಸುವನೋ, ಆತನಿಗೆ ಲಭ್ಯನು ಎಂದರೆ ಯಾರನ್ನು ಪರಮಾತ್ಮನು ವಿಶೇಷವಾಗಿ ಪ್ರೀತಿಸುವನೋ ಆತನಿಗೇನೇ ಲಭ್ಯನು. ಅಂತಹ ಉಪಾಸಕನಿಗೆ ಈ ಪರಮಾತ್ಮನು ತನ್ನನ್ನು ಪ್ರಕಾಶಗೊಳಿಸಿಕೊಳ್ಳುವನು ಎಂದರೆ ತನ್ನನುಭವವನ್ನುಂಟುಮಾಡುವನು. ಹಾಗೆಯೇ ಶ್ವೇತಾಶ್ವತರದಲ್ಲಿ (೩) "ಅಮೃತಸ್ಯಪರಂ ಸೇತುಮ್ ದಗ್ಧೇನ್ಧನಮಿವಾನಲಂ" ಎಂದಿರುತ್ತದೆ. (೪) "ತಮಕ್ರತುಂ ಪಶ್ಯತಿ ವೀತಶೋಕೋ ಧಾತುಃ ಪ್ರಸಾದಾ ನ್ಮಹಿಮಾನ ಮೀಶಂ" (ಅಂಭಸಿ ತೈ. ೪.೨.೧.) ಇತ್ಯಾದಿಗಳು ಪರಮಾತ್ಮನ ಸಾಕ್ಷಾತ್ಕಾರವು ಗುಣವಿಭವೈಶ್ವರ್ಯಾದಿಗಳ ಮಾಹಾತ್ಮ್ಯೆಯುಳ್ಳ ಸರ್ವ ನಿಯಾಮಕನ ಅನುಗ್ರಹದಿಂದಲೇ ಉಂಟಾಗುತ್ತದೆಂದು ಹೇಳಲ್ಪಟ್ಟಿರುತ್ತದೆ.

ಇಂತಹ ಸಿದ್ಧೋಪಾಯನಾಗಿ ಕೃಪಾಮಹೋದಧಿಯಾದ ಹಿರಣ್ಯನಿಧಿಯು, ಸಾತ್ವಿಕ ಸ್ವಭಾವ ಉಳ್ಳವರು ತನ್ನ ಕೃಪಾವಿಗೆ ವಶರಾಗುವದರಿಂದ, ತಾನೇ ಉಪಾಯಾನುಷ್ಠಾನವನ್ನು ಮಾಡಿಸಿ, ಅವರಿಗೆ ಪ್ರಾಪ್ಯನಾಗುವನೆಂಬ ತಾತ್ಪರ್ಯವು.

ಇಂತು ಶ್ರೀಮದ್ರಹಸ್ಯತ್ರಯಸಾರದ
ಸಿದ್ಧೋಪಾಯ ಶೋಧನಾಧಿಕಾರವೆಂಬ ಇಪ್ಪತ್ತುಮೂರನೆಯ ಅಧಿಕಾರಕ್ಕೆ
ತಿರುನಾರಾಯಣಪುರಂ ವಿಜಯರಾಘವ ಶರ್ಮನ
ಆಚಾರ್ಯಹೃದಯಾನ್ವೇಷಿಣೀ
ಎಂಬ ಪ್ರತಿಪದ ಕನ್ನಡ ಟೀಕಾತಾತ್ಪರ್ಯಗಳು ಸಂಪೂರ್ಣವಾದವು.

ನಮ್ಮಲ್ಲಿ ದೊರೆಯುವ ಗ್ರಂಥಗಳು

ಆಚಾರ್ಯಹೃದಯಾನ್ವೇಷಿಣೀ
ಎಂಬ ಕನ್ನಡ ಪ್ರತಿಪದಾರ್ಥ ತಾತ್ಪರ್ಯಗಳೊಡನೆ
ಶ್ರೀಮನ್ನಿಗಮಾನ್ತ ಮಹಾದೇಶಿಕರವರ

೧. ಅಭೀತಿಸ್ತವವೆಂಬ ಶ್ರೀರಂಗನಾಥಸ್ತೋತ್ರವು	೦	೧೨	೦
೨. ಶ್ರೀಸ್ತುತಿ ಎಂಬ ಶ್ರೀ ರಂಗನಾಯಕೀಸ್ತೋತ್ರವು	೦	೧೨	೦
೩. ಶ್ರೀಮದ್ರಹಸ್ಯತ್ರಯಸಾರವು:—			
(೧) ಗುರುಪರಂಪರಾಸಾರವು	೦	೧೨	೦
(೨) ಉಪೋದ್ಘಾತಾಧಿಕಾರವು ಮತ್ತು ಸಾರನಿಷ್ಕರ್ಷಾಧಿಕಾರವು	೦	೯	೦
(೩) ಪ್ರಧಾನ ಪ್ರತಿತಂತ್ರಾಧಿಕಾರವು ಮತ್ತು ಅರ್ಥಪಞ್ಚಕಾಧಿಕಾರವು	೦	೧೨	೦
(೪) ತತ್ತ್ವತ್ರಯಾಧಿಕಾರವು	೦	೧೨	೦
(೫) ಪರದೇವತಾ ಪಾರಮಾರ್ಥ್ಯಾಧಿಕಾರವು ಮತ್ತು ಮುಮುಕ್ಷುತ್ವಾಧಿಕಾರವು	೦	೧೦	೦
(೬) ಅಧಿಕಾರಿವಿಭಾಗಾಧಿಕಾರವು ಉಪಾಯವಿಭಾಗಾಧಿಕಾರವು ಮತ್ತು ಪ್ರಪತ್ತಿಯೋಗ್ಯಾಧಿಕಾರವು	೦	೯	೦
(೭) ಪರಿಕರವಿಭಾಗಾಧಿಕಾರವು ಮತ್ತು ಸಾಙ್ಗಪ್ರಪದನಾಧಿಕಾರವು	೦	೧೧	೦
(೮) ಕೃತಕೃತ್ಯಾಧಿಕಾರವು, ಸ್ವನಿಷ್ಠಾಭಿಜ್ಞಾನಾಧಿಕಾರವು ಮತ್ತು ಉತ್ತರಕೃತ್ಯಾಧಿಕಾರವು	೦	೧೨	೦
(೯) ಪುರುಷಾರ್ಥಕಾಷ್ಠಾಧಿಕಾರವು, ಶಾಸ್ತ್ರೀಯನಿಯಮನಾಧಿಕಾರವು ಮತ್ತು ಅಪರಾಧಪರಿಹಾರಾಧಿಕಾರವು	೧	೦	೦
(೧೦) ಸ್ಥಾನವಿಶೇಷಾಧಿಕಾರವು, ನಿರ್ಯಾಣಾಧಿಕಾರವು	೦	೧೦	೦
(೧೧) ಗತಿಚಿಂತನಾಧಿಕಾರವು ಪರಿಪೂರ್ಣಬ್ರಹ್ಮಾನುಭವಾಧಿಕಾರವು	೦	೧೨	೦
(೧೨) ಸಿದ್ಧೋಪಾಯ ಶೋಧನಾಧಿಕಾರವು	೦	೧೪	೦
(೧೩) ಸಾಧ್ಯೋಪಾಯ ಶೋಧನಾಧಿಕಾರವು	ಅಚ್ಚಾಗುತ್ತಲಿದೆ.		
೪. ಶ್ರೀ ಯಾಮುನೇಯರವರ ಚತುಶ್ಶ್ಲೋಕೀ	೦	೮	೦
೫. ಶ್ರೀ ವಿಷ್ಣುಸಹಸ್ರನಾಮಾವಳಿ (ಅರ್ಥ ಸಹಿತ)	೦	೧೪	೦

ಸಿ. ಯಂ. ವಿಜಯರಾಘವಾಚಾರ್,
ವಿದ್ಯಾಭ್ಯಾಸದ ಇಲಾಖಾ ರಿಟೈರ್ಡ್ ಸರ್ಕಲ್ ಇನ್ಸ್ಪೆಕ್ಟರ್,
ಬಸವನಗುಡಿ, ಬೆಂಗಳೂರು ಸಿಟಿ.

ಬೆಂಗಳೂರು ಸಿಟಿ ಅವೆನ್ಯೂರೋಡಿನಲ್ಲಿರುವ ಗಿರಿಜಾವಿಲಾಸ ಪ್ರೆಸ್ಸಿನಲ್ಲಿ ಪ್ರೊಪ್ರೈಟರಾದ ಹೆಚ್. ವೆಂಕಟರಮಣಯ್ಯನವರಿಂದ ಮುದ್ರಿಸಲ್ಪಟ್ಟಿತು.

ಶ್ರೀಮದ್ವಿಶಿಷ್ಟಾದ್ವೈತ ಸಿದ್ಧಾನ್ತರತ್ನಮಾಲಾ

ದ್ವಿತೀಯ ರತ್ನವು—ಹದಿಮೂರನೆಯ ಸಂಚಿಕೆಯು

ಶ್ರೀಮನ್ನಿಗಮಾನ್ತ ಮಹಾದೇಶಿಕಪ್ರಣೀತ

ಶ್ರೀಮದ್ರಹಸ್ಯತ್ರಯಸಾರೇ

ಸಾಧ್ಯೋಪಾಯ ಶೋಧನಾಧಿಕಾರಶ್ಚತುರ್ವಿಂಶಃ

ವಿದ್ಯಾಭ್ಯಾಸದ ಇಲಾಖಾ ರಿಟೈರ್ಡ್ ಸರ್ಕಲ್ ಇನ್ಸ್‌ಪೆಕ್ಟರು

ಸಿ. ಯಂ. ವಿಜಯರಾಘವಾಚಾರ್ಯರಿಂದ

ರಚಿಸಲ್ಪಟ್ಟ

ಆಚಾರ್ಯಹೃದಯಾನ್ವೇಷಿಣೀ

ಎಂಬ ಕನ್ನಡ ಅರ್ಥ ತಾತ್ಪರ್ಯಗಳೊಂದಿಗೆ ಮುದ್ರಿಸಲ್ಪಟ್ಟಿರುತ್ತದೆ.

ಬೆಂಗಳೂರು ಸಿಟಿ

ಕ್ರಯ ೧ ರೂಪಾಯಿ

15. 11. 02

ಶ್ರಿಯೈ ನಮಃ

ಶ್ರೀಮತೇ ರಾಮಾನುಜಾಯ ನಮಃ

ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ



ಸಾಧ್ಯೋಪಾಯ ಶೋಧನಾಧಿಕಾರಃ ೨೪

ಯಥಾಧಿಕರಣಂ ಪ್ರಭುರ್ಯಜನ ದಾನ ಹೋಮಾರ್ಚನಾ ।
ಭರನ್ಯಸನ ಭಾವನಾ ಪ್ರಭೃತಿಭಿಸ್ಸಮಾರಾಧಿತಃ ।

ಹಿಂದಿನ ಅಧಿಕಾರದಲ್ಲಿ ಸಿದ್ಧೋಪಾಯ ವಿಷಯದಲ್ಲಿ ಆತನ ಗುಣ ಸಂಬಂಧಾದಿಗಳ ಮೂಲಕವಾಗಿ ಪ್ರಾಪ್ತನಾಗಬಹುದಾದ ಶಂಕಾಗಳಿಗೆಲ್ಲಾ ಪ್ರಮಾಣಗಳೊಂದಿಗೆ ಸರಿಯಾದ ಸಮಾಧಾನಗಳನ್ನು ತಿಳಿಸಿದವರಾಗಿ ಈ ಅಧಿಕಾರದಲ್ಲಿ ಸಾಧ್ಯೋಪಾಯ ವಿಷಯದಲ್ಲಿ ಊಹಿಸಬಹುದಾದ ಶಂಕಾಗಳಿಗೆ ಸಮಾಧಾನವನ್ನು ಹೇಳುತ್ತಾರೆ.

ಅವರೆ 'ತನ್ನ ಪ್ರಾಪ್ತಿಗೆ ತನಗೇನೇ ಸಾಧನತ್ವವು ಸರಿಯೆಂದು ತೋರಿಬರುವದಿಲ್ಲವು; ಯಾಗ ದಾನ ಹೋಮಾದಿಗಳೆಲ್ಲಾ ಅಪೂರ್ವ ದ್ವಾರಾ ಫಲವನ್ನು ಕೊಡುತ್ತವೆಂದು ಮೀಮಾಂಸಕರು ಹೇಳುವ ಪ್ರಕಾರ, ಭಕ್ತಿಮಾರ್ಗಕ್ಕೂ ಕೂಡ ಆ ಅಪೂರ್ವ ಮೂಲಕವಾಗಿಯೇ ಮೋಕ್ಷಪ್ರಾಪ್ತಿಯುಂಟಾಗುವದರಿಂದ ಸಿದ್ಧೋಪಾಯದ ಆವಶ್ಯಕತೆಗೆ ಕಾರಣವಿಲ್ಲವೆಂದು ಕೆಲವರು ಹೇಳುವರು; ಭರನ್ಯಾಸವಲ್ಲಾದರೋ ಭಗವಂತನನ್ನೇ ಸಿದ್ಧೋಪಾಯನೆಂದೇ ವರಿಸತಕ್ಕದ್ದೆಂದು ಹೇಳುವದರಿಂದ ಭರನ್ಯಾಸವೇ ಸಾಧ್ಯೋಪಾಯವಲ್ಲವೆಂದು ಅಭಿಪ್ರಾಯವಿರುವಾಗ, ಆ ಭರನ್ಯಾಸವೆಂಬ ಸಾಧ್ಯೋಪಾಯದ ಶೋಧನದ ಮಾತೇ ಉಂಟಾಗಲು ಕಾರಣವಿಲ್ಲವೆ.' ಇಂತಹ ಪೂರ್ವಪಕ್ಷಕ್ಕೆ, ಸಮಾಧಾನರೂಪದಲ್ಲಿ ಶ್ರಿಯಃಪತಿಯು ಸಿದ್ಧೋಪಾಯನೆಂಬುದನ್ನು ಶ್ರುತಿ ಪ್ರಮಾಣಗಳಿಂದಲೂ, ಸ್ಮೃತಿ ಪ್ರಮಾಣಗಳಿಂದಲೂ,

ಫಲಂದಿಶತಿ ದೇಹಿನಾ ಮಿ್ತಿಹಿ ಸಂಪ್ರದಾಯ ಸ್ಥಿತಿ।
ಶ್ರುತಿ ಸ್ಮೃತಿ ಗುರೂಕ್ತಿಭಿರ್ನಯವತೀಭಿ ರಾಭಾತಿ ನಃ ॥೫೩॥

ಸತ್ತರ್ಕಗಳಿಂದಲೂ, ಬ್ರಹ್ಮಸೂತ್ರಗಳಿಂದಲೂ, ಪರಮಾಚಾರ್ಯರುಗಳ ದಿವ್ಯಸೂಕ್ತಿ ಸಂಪ್ರದಾಯಗಳಿಂದಲೂ, ಸ್ಥಾಪಿಸಿ, ಅಂತಹ ಸಿದ್ಧೋಪಾಯನು ಸುಮ್ಮನೆ ತನ್ನಿಷ್ಟ ಬಂದಂತೆ ಫಲ ಕೊಡುವುದಿಲ್ಲವೆಂದೂ, ಸಾಧ್ಯೋಪಾಯಗಳಿಂದ ಆರಾಧಿತನಾಗಿ ಸಂತಪ್ತನಾದರೇನೇ ಫಲವನ್ನು ಕೊಡುವನೇ ವಿನಾ ಅನ್ಯಥಾ ಇಲ್ಲವೆಂದುಪದೇಶಿಸುತ್ತಾರೆ. ಆದುದರಿಂದ ಶ್ರಿಯಃಪತಿಯನ್ನು ಉಪಾಯಭಾವದಿಂದ ವರಿಸುವ ಸಾಧ್ಯೋಪಾಯವಾದ ಭರನ್ಯಾಸಾನುಷ್ಠಾನವೂ ಆವಶ್ಯಕವು. ಅದರ ಶೋಧನವೂ ಸಹ ಆವಶ್ಯಕವು. ಈ ಅಭಿಪ್ರಾಯವನ್ನೇ ಸಂಗ್ರಹಿಸಿ ಈ ಶ್ಲೋಕದಲ್ಲಿ ಉಪದೇಶಿಸುತ್ತಾರೆ—

ಅರ್ಥ—ಪ್ರಭುಃ - ಸರ್ವಶಕ್ತಿ ಸ್ವಾತಂತ್ರ್ಯ ಕಾರುಣ್ಯ ಮೊದಲಾದವುಗಳಿಂದ ಸಮರ್ಥನಾಗಿರುವ ನಮ್ಮ ಸ್ವಾಮಿಯು, **ಯಥಾಧಿಕರಣಂ** - ವರ್ಣಾಶ್ರಮರೂಪ ಅಧಿಕಾರಕ್ಕನುಗುಣವಾಗಿ, ಎಂದರೆ ಹಾಗೆ ಅನುಷ್ಠಿಸಲ್ಪಟ್ಟ, **ಯಜನ ....ಪ್ರಭೃತಿಭಿಃ, ಯಜನ** - ಯಜ್ಞ, ದಾನ, ಹೋಮ, ಸಾಯಂಪ್ರಾತರ್ಹೋಮವೂ, **ಅರ್ಚನ** - ಪೂಜೆ, **ಭರನ್ಯಸನ** - ಭರನ್ಯಾಸಾನುಷ್ಠಾನ, **ಭಾವನಾ** - ಧ್ರುವಾನುಸ್ಮೃತಿಯು, ಎಂದರೆ ಭಕ್ತಿಯೋಗ, **ಪ್ರಭೃತಿಭಿಃ** - ಮೊದಲಾದವುಗಳಿಂದ, (ಈ ಪ್ರಭೃತಿ ಶಬ್ದದಿಂದ ಕೆಲವು ವ್ಯಾಖ್ಯಾತೃಗಳು ವ್ರತಾನಷ್ಠಾನ, ತೀರ್ಥಯಾತ್ರೆ, ಭಗವತ್ಸೇವೆ, ಭಾಗವತಸೇವೆಗಳು ಸಂಕಲ್ಪಿಸಲ್ಪಟ್ಟವೆಂದು ಹೇಳುವರು; ಇನ್ನು ಕೆಲವರು ಭಾವನಾಶಬ್ದದಿಂದ ಭಕ್ತಿಯೋಗವು ಹೇಳಲ್ಪಟ್ಟದುದರಿಂದ ಪ್ರಭೃತಿ ಶಬ್ದದಿಂದ ಕರ್ಮಜ್ಞಾನಯೋಗಗಳು ಸಂಗ್ರಹಿಸಲ್ಪಟ್ಟವೆಂದು ಅಭಿಪ್ರಾಯಪಡುವರು.) **ಸಮಾರಾಧಿತಃ** - ಚೆನ್ನಾಗಿ ಆರಾಧಿಸಲ್ಪಟ್ಟವನಾಗಿಯೇ, **ದೇಹಿನಾಂ** - ಚೇತನರಿಗೆ, **ಫಲಂ ದಿಶತಿ** - ಆಯಾಯಾ ಸಾಧ್ಯೋಪಾಯಗಳಿಗೆ ಅನುಗುಣವಾದ ಫಲವನ್ನು ಕೊಡುವನು, **ಇತಿ ಹಿ** - ಎಂಬದಾಗಿಯಲ್ಲವೇ, **ಸಂಪ್ರದಾಯ ಸ್ಥಿತಿಃ** - ಪೂರ್ವಾಚಾರ್ಯರುಗಳ ಉಪದೇಶಮೂಲಕ ಪರಂಪರೆಯಿಂದ ಬಂದ ಮರ್ಯಾದೆಯ ನೆಲೆಯು, **ನಃ**-ಶಾಸ್ತ್ರಗಳ ಮತ್ತು ಆಚಾರ್ಯರುಗಳ ಉಪದೇಶಗಳಲ್ಲಿ ತುಂಬಾ ಶ್ರದ್ಧೆಯುಳ್ಳ ನಮಗೆ, **ನಯವತೀಭಿಃ** - ಸತ್ತರ್ಕಗಳಿಂದ ಯುಕ್ತವಾದ, **ಶ್ರುತಿ ಸ್ಮೃತಿ ಗುರೂಕ್ತಿಭಿಃ**-ಶ್ರುತಿ ಸ್ಮೃತಿಗಳ ಮತ್ತು ಗುರುಗಳ ದಿವ್ಯಸೂಕ್ತಿಗಳಿಂದ, **ಆಭಾತಿ** - ಪ್ರಕಾಶಿಸುತ್ತದೆ. ಯಜನ

ದಾನ ಹೋಮಾದಿಗಳ ಮೂಲಕ ಹೇಗೆ ಸರ್ವೇಶ್ವರನು ಫಲವನ್ನು ಕೊಡುವನೆಂದು ನಾವು ನಂಬಿದ್ದೇವೋ, ಹಾಗೆಯೇ ಮೋಕ್ಷಾರ್ಥಿಗೂ ಕೂಡ ಭರನ್ಯಸನ ಭಾವನಗಳಾದ ಪ್ರಪತ್ತಿಭಕ್ತಿಗಳಾದ ಸಾಧ್ಯೋಪಾಯುಗಳ ಮೂಲಕ ಮೋಕ್ಷವನ್ನು ಕೊಡುವನೆಂಬುದು ಸಾರಾಭಿಪ್ರಾಯವು.

ತಾತ್ಪರ್ಯ—ಈ ಸಾಧ್ಯೋಪಾಯ ಸಹಕಾರಿಗಳಾದ ಯಜನ ದಾನ ಹೋಮಾದಿಗಳನ್ನು **ಯಥಾಧಿಕರಣಂ** - ಅಧಿಕಾರಾನುಗುಣವಾಗಿ ಅನುಷ್ಠಿಸತಕ್ಕದ್ದೆಂದು ಹೇಳಿದರು. ಯಜನ ದಾನ ಹೋಮಗಳಲ್ಲಿ ಎಲ್ಲರಿಗೂ ಅಧಿಕಾರವಿಲ್ಲವು ತ್ರೈವರ್ಣಿಕರಲ್ಲದವರಿಗೆ ಅಧಿಕಾರವಿಲ್ಲವು. ಅರ್ಚನ ಭರನ್ಯಸನಗಳಲ್ಲಿ ಸರ್ವರಿಗೂ ಅಧಿಕಾರವುಂಟು. ಭಾವನೆಯಲ್ಲಿ ಸ್ತ್ರೀ ಶೂದ್ರ ಚಂಡಾಲಾದಿಗಳಿಗೆ ಅಧಿಕಾರವಿಲ್ಲವು ; ಆದುದರಿಂದ **ಯಥಾಧಿಕರಣಂ** ಎಂಬ ಪ್ರಯೋಗವು

ಯಜನ ದಾನ ಹೋಮಾದಿಗಳಾದ ಇಲ್ಲಿ ಹೇಳಿರುವ ಉಪಾಯಗಳೆಲ್ಲಾ ಮುಮುಕ್ಷುವಿನ ಸಾಧ್ಯೋಪಾಯಗಳೆಂದು ಭಾವಿಸಕೂಡದು. ಚತುರ್ವಿಧಪುರುಷಾರ್ಥಗಳಿಗೂ ಇವು ಸಾಧ್ಯೋಪಾಯುಗಳೆಂಬು ಹೇಳಲ್ಪಟ್ಟವು. ಆದರೆ ಮೋಕ್ಷವನ್ನು ಸಾಧಿಸಿಕೊಡುವ ಸಾಧ್ಯೋಪಾಯುಗಳು ಎರಡೇ. ಇದನ್ನು ಹಿಂದೆಯೇ "**ಪ್ರಪನ್ನಸ್ಯ ದ್ವೇಧಾ ಸುಚರಿತ ಪರೀಪಾಕಭಿದಯಾ**" ಎಂಬ ಸ್ಥಳದಲ್ಲಿ ಉಪಪಾದಿಸಿರುತ್ತಾರೆ. ೮೪೮ನೆಯ ಪುಟವನ್ನು ನೋಡಿ. ಈ ಸಾಧ್ಯೋಪಾಯಗಳನ್ನು ಅನುಷ್ಠಿಸದೇ ಅವುಗಳ ನೈಜಫಲಗಳು ದೊರೆಯುವದಿಲ್ಲವು. ಹಾಗಾದರೆ ಅವುಗಳೇ ಫಲಗಳನ್ನು ಕೊಡುತ್ತವೆಯೋ, ಇಲ್ಲವೇ ಸರ್ವೇಶ್ವರನು ಫಲಗಳನ್ನು ಕೊಡುತ್ತಾನೆಯೋ ಎಂಬ ಪ್ರಶ್ನೆಯು ಉಂಟಾಗುತ್ತದೆ. ಮೀಮಾಂಸಕರು ಹೇಳುವದೇನೆಂದರೆ, ಈ ಸಾಧ್ಯೋಪಾಯುಗಳಿಂದ ಒಂದು ಅದೃಷ್ಟವು ಉತ್ಪನ್ನವಾಗುತ್ತದೆಂದೂ ಅದಕ್ಕೆ ಅಪೂರ್ವವೆಂಬ ಹೆಸರೆಂದೂ, ಈ ಅಪೂರ್ವವೇ ಫಲವನ್ನು ಕೊಡುತ್ತದೆಂದೂ ಹೇಳುವರು. ಈ ಅಭಿಪ್ರಾಯುವು ಶ್ರೀ ಭಾಷ್ಯದಲ್ಲಿ ಖಂಡಿಸಲ್ಪಟ್ಟಿರುತ್ತದೆ. ಈ ಸಾಧ್ಯೋಪಾಯುಗಳೆಲ್ಲಾ ಅಚೇತನಗಳು, ತಾನೇ ಸ್ವತಂತ್ರಿಸಿಯಾಗಲಿ, ಅದೃಷ್ಟದ್ವಾರಾವಾಗಲಿ ಫಲಗಳನ್ನು ಕೊಡಲಾರವು. ಫಲಕೊಡುವವನು ಸರ್ವೇಶ್ವರನು. ಆತನು ಈ ಸಾಧ್ಯೋಪಾಯುಗಳಿಂದ ಆರಾಧಿತನಾಗಿಯೇ ಫಲ ಕೊಡುವನೇ ವಿನಾ ತಾನಾಗಿಯೇ ಕೊಡನು. ಇದರಿಂದ ಸರ್ವಶಕ್ತನಾಗಿ, ಸ್ವತಂತ್ರನಾಗಿ, ಪರಮಕಾರುಣಿಕನಾಗಿರುವ ಮಹಾ ಪ್ರಭುವು ಈ ಅಜಾಗಳ ಸ್ತನದೂಪವಾದ ಸಾಧ್ಯೋಪಾಯುಗಳ ಆವಶ್ಯಕತೆಯನ್ನು ನಿರೀಕ್ಷಿಸುವನೇ ಎಂಬಾಕ್ಷೇಪಕ್ಕೆ ಸಮಾಧಾನವು ಇದರಿಂದ ಹೇಳಲ್ಪಟ್ಟಿತು ಇವುಗಳಿಂದ ಸಮಾರಾಧಿತನಾದರೇನೇ ಸಂತುಷ್ಟನಾಗಿ ಫಲವನ್ನು ಅನುಗ್ರಹಿಸುವನು. ಇಲ್ಲದಿದ್ದರೆ ಇಲ್ಲವು. ಈಸಾಧ್ಯೋ

ಪಾಯಗಳ ಆವಶ್ಯಕತೆಯು ಏಕೆಂದರೆ ತನಗೆ ವೈಷಮ್ಯ ನೈರ್ಘೃಣ್ಯಾದಿಗಳಿಲ್ಲವೆಂದು ತೋರಿಸಿಕೊಳ್ಳುವದಕ್ಕಾಗಿ ಎಂದು ಭಾವಿಸತಕ್ಕದ್ದು.

"ಫಲಂ ದಿಶತಿ ದೇಹಿನಾಂ" ಇಲ್ಲಿ ಚೇತನನನ್ನು ದೇಹೀ ಎಂದು ಹೇಳಿದುದು, ಆತನಿಗೆ ಪ್ರಭುವಾದ ಸ್ವಾಮಿಯು ಕರಣ ಕಳೇಬರಯೋಗವನ್ನು ಪರಮಕೃಪಯಾ ದಯಪಾಲಿಸಿರುವದು, ಆತನು ತನ್ನ ಸಙ್ಕಲ್ಪ ಪ್ರಯತ್ನಗಳ ಮೂಲಕ ಇಂತಹ ಸಾಧ್ಯೋಪಾಯಗಳನ್ನು ಅನುಷ್ಠಿಸಲಿ ಎಂಬ ಉದಾರ ಭಾವದಿಂದ ಎಂಬುದು ತೋರಿಬರುತ್ತದೆ.

ಹೀಗೆಲ್ಲಾ ಸಾಧ್ಯೋಪಾಯಗಳನ್ನು **ಪೂರ್ವಸುಕೃತ**ಗಳಿಗನುಸಾರವಾಗಿ ಅನುಷ್ಠಿಸುವಹಾಗೆ ಮಾಡುವವನು ಸಿದ್ಧೋಪಾಯನಾದ ಸರ್ವಶಕ್ತನಾದ ಸ್ವಾಮಿಯೆಂದು ತಿಳಿಸುವದಕ್ಕಾಗಿ **ಪ್ರಭು** ಶಬ್ದವನ್ನು ಪ್ರಯೋಗಿಸಿರುತ್ತಾರೆ, ಹಾಗೆ ಪ್ರೇರಿಸುವದಕ್ಕೆ ಸರ್ವೇಶ್ವರನಿಗೆ ಸರ್ವಶಕ್ತತೆಯೂ, ಕಲ್ಯಾಣ ಗುಣಗಣವೂ, ಪತ್ನೀ ಮೊದಲಾದ ವಿಶೇಷಣಗಳ ವಿಶಿಷ್ಟತೆಯೂ, ತತ್ತತ್ಫಲಪ್ರದಾನಕ್ಕೆ ಬೇಕಾದ ಸ್ವಾತಂತ್ರ್ಯ ಸಾಮರ್ಥ್ಯಾದಿಗಳೂ ಪ್ರಭು ಶಬ್ದದಿಂದ ಸಙ್ಗ್ರಹಿಸಲ್ಪಟ್ಟವು. ಈ ಪ್ರಭು ಶಬ್ದವನ್ನೇ ಶ್ರೀ ದೇಶಿಕರವರು ಮುಂದಿನ ವಾಕ್ಯದಲ್ಲಿ **"ಸರ್ವಜ್ಞನಾಯ್, ಸರ್ವಶಕ್ತಿಯಾಯ್, ಪರಮ ಕಾರುಣಿಕನಾಯ್, ಸರ್ವಶೇಷಿಯಾಯ್, ಸಪತ್ನೀಕನಾಯ್, ಸರ್ವಲೋಕ ಶರಣ್ಯ"** ಎಂದು ವಿಸ್ತರಿಸಿರುತ್ತಾರೆ. ಹೀಗೆ ಸಾಧ್ಯೋಪಾಯಗಳಿಂದಾರಾಧಿತನಾಗಿಯೇ ಸಿದ್ಧೋಪಾಯನು ಫಲವನ್ನು ಕೊಡುವನೆಂಬಭಿಪ್ರಾಯವು, ತಮಗೆ ಆಚಾರ್ಯ ಪರಂಪರಯಾ ಉಪದೇಶಮುಖೇನ ಬಂದುದು ಎಂದು ತಿಳಿಸುವದಕ್ಕಾಗಿ **ಸಂಪ್ರದಾಯಸ್ಥಿತಿಃ** ಎಂಬ ಪ್ರಯೋಗವು. ಪ್ರಕೃತ ಮೋಕ್ಷಪ್ರಾಪ್ತಿಗೆ ಭರನ್ಯಾಸನ ಭಾವನಗಳಿಲ್ಲದೆ ಪ್ರಭುವು ಮೋಕ್ಷವನ್ನು ಕೊಡುವದಿಲ್ಲವೆಂಬುದು ತಮ್ಮ ಅಭಿಪ್ರಾಯ ಮಾತ್ರವೇ ಅಲ್ಲವು. ನಾಥಮುನಿಗಳು ಮೊದಲುಗೊಂಡು ಸಂಪ್ರದಾಯ ರೀತ್ಯಾ ದೊರೆತ ಅಮೋಘಾಭಿಪ್ರಾಯವು. ಆದುದರಿಂದ ಸರ್ವೇಶ್ವರನು ಮಹಾಕೃಪಾನಿಧಿಯು, ಹೇಗೂ ಉದ್ಧರಿಸುವವನು, ಈ ಭರನ್ಯಾಸಾದಿಗಳಿಂದ ಪ್ರಯೋಜನವೇನು, ಇತ್ಯಾದಿ ಆಕ್ಷೇಪಗಳಿಗೆ ಸುತರಾಂ ಅವಕಾಶವಿಲ್ಲವೆಂಬ ಭಾವವು. ಇದು ಸಂಪ್ರದಾಯಸ್ಥಿತಿಯಾದುದರಿಂದ ಅದನ್ನು ಉಲ್ಲಙ್ಘಿಸಿ ನಡೆಸುವವ ಶ್ರೇಯಸ್ಸಾವಲ್ಲನೆಂಬ ಭಾವವೂ ತೋರಿಬರುತ್ತದೆ.

ಬರೀ ಸಂಪ್ರದಾಯಸ್ಥಿತಿಯೇ ಆದ ಪಕ್ಷದಲ್ಲಿ ಪ್ರತಿಕಕ್ಷಿಯವರು ಮನ ಬಂದಂತೆ ನಡೆಯಬಹುದು. ಆ ಸಂಪ್ರದಾಯಸ್ಥಿತಿಗೆ ಸಂಪೂರ್ಣ ಬಲವುಂಟೆಂದು ಹೇಳುತ್ತಾರೆ. **ಪ್ರಥಮತಃ** ಸತ್ತರ್ಕದ ಬಲವುಂಟೆಂದು, **ನಯಮತೀಭಿಃ** ಎಂಬುದರಿಂದ ಉಪದೇಶಿಸುತ್ತಾರೆ. **ಫಲಮತ ಉಪಪತ್ತೇಃ** ಎಂಬ (೩.೨.೩೭) ಶಾರೀರಕ

ಸೂತ್ರದಲ್ಲಿ ಶ್ರುತಿಯಲ್ಲಿ ಹೇಳಿರುವ ಭಗವಂತನ ಅನುಗ್ರಹವೇ ಫಲಪ್ರದವಲ್ಲದೆ ಶ್ರುತಿಯಲ್ಲಿ ಹೇಳದ ಅಪೂರ್ವವು ಫಲಪ್ರದವಲ್ಲವೆಂದು ತೋರಿಸಿರುವ ಸತ್ತರ್ಕಾನುಗೃಹೀತವಾದುವು ಶ್ರುತಿಸ್ಮೃತಿ ಗುರೂಕ್ತಿಗಳು ಎಂಬ ಭಾವವು. ಶ್ರೀ ದೇಶಿಕರ ವರ ಆಚಾರ್ಯರಾದ ವಾದಿಹಂಸಾಂಬುವಾಹರೆಂಬ ಅಪರನಾಮಧೇಯವುಳ್ಳ ಅಪ್ಪುಳ್ಳಾರ್ಯರು ವಾದಿಗಳಲ್ಲಿ ಪ್ರಥಮರು, ಅಂತಹ ಮಹನೀಯರು ಈ ಶ್ರುತಿ ಸ್ಮೃತಿ ಗುರೂಕ್ತಿಗಳನ್ನೆಲ್ಲಾ ವಾದಮೂಲಕ ಸ್ಥಿರಪಡಿಸಿ ತಮಗೆ ಉಪದೇಶಿಸಿದರು ಎಂಬರ್ಥವು **ನಯಪತೀಭಿರಾಭಾತಿ ನಃ** ಎಂಬುದರಿಂದ ತೋರಿಬರುತ್ತದೆ. ಹೀಗೆ ಶ್ರುತಿ ಸ್ಮೃತಿ ಗುರೂಕ್ತಿಗಳು ನ್ಯಾಯಾನುಗೃಹೀತಗಳಾದರೇನೇ ಶಾಸ್ತ್ರಾರ್ಥಗಳು, **ಆಭಾತಿ**-ಪ್ರಕಾಶಿಸುತ್ತವೆ. ಇಲ್ಲದಿದ್ದರೆ ಅವುಗಳಿಂದ ಅಪಾರ್ಥಗಳೇ ತೋರಿಬರುವದರಿಂದ ಪ್ರಕಾಶಿಸುವದಿಲ್ಲವೆಂದೂ, ಆ ಕಾರಣದಿಂದಲೇ ವಿಪಕ್ಷದವರಿಗೆ ಪ್ರಕಾಶಿಸಲಿಲ್ಲವೆಂಬ ಭಾವವು. ತಮಗಾದರೋ ಮಹಾವಾದಿಶ್ರೇಷ್ಠರುಗಳ ಉಪದೇಶವು ದೊರೆತು ಶ್ರುತಿ ಸ್ಮೃತಿ ಗುರೂಕ್ತಿಗಳಿಗೆ ನ್ಯಾಯಾನುಗೃಹೀತ ಸಮಂಜಸತ್ವವು ದೊರೆತಿರುವದರಿಂದ ತಾವು ಈ ಭಾಗದಲ್ಲಿ ತುಂಬಾ ಸುಕೃತಿಗಳೆಂದು ತಮ್ಮ ಎದೆಯನ್ನು ಮುಟ್ಟಿ **ನಃ** ಎಂದು ಹೇಳಿಕೊಳ್ಳುವಹಾಗೆ **ಆಭಾತಿನಃ** ಎಂದು ಹೇಳಿಕೊಂಡಿರುತ್ತಾರೆ.

ಸಾಧ್ಯೋಪಾಯಗಳಿಂದ ಪ್ರೀತನಾದ ಸಿದ್ಧೋಪಾಯನೇ ಸಕಲ ಫಲಪ್ರದನೆಂಬುದಕ್ಕೆ ಪ್ರಮಾಣಗಳು ಯಾವುವೆಂದರೆ:—

೧. **"ಸ ವಾ ಏಷ ಮಹಾನಜಃ ಆತ್ಮಾ ಅನ್ನಾದೋ ವಸುದಾನೋ ವಿನ್ದತೇ ವಸು"** (ಬ. ೬. ೪. ೨೪) ಯಾವನು ಈ ಮಹತ್ತಾಗಿ ನಿತ್ಯನಾಗಿ ಉತ್ಪತ್ತಿ ರಹಿತನಾದ ಪರಮಾತ್ಮನನ್ನು ಅನ್ನವನ್ನೂ ದ್ರವ್ಯವನ್ನೂ ಕೊಡುವ ಸಿದ್ಧೋಪಾಯನೆಂದು ತಿಳಿದು ಉಪಾಸಿಸುತ್ತಾನೋ, ಆತನು ಅನ್ನವನ್ನೂ ದ್ರವ್ಯವನ್ನೂ ಹೊಂದುವನು ಎಂಬರ್ಥವು. ಇದರಿಂದ ಸಾಧ್ಯೋಪಾಯಾನುಷ್ಠಾನದಿಂದ ಫಲವೆಂಬುದು ವ್ಯಕ್ತವು. ಆದರೂ ಫಲಕೊಡುವವನು ಸರ್ವೇಶ್ವರನು, ಸಾಧ್ಯೋಪಾಯವಲ್ಲವು. ಸಾಧ್ಯೋಪಾಯದಿಂದ ಆರಾಧಿತನಾಗಿ ಪ್ರೀತನಾಗಿ ಫಲವನ್ನು ಕೊಡುವನು.

೨. "ಸ ಏವೈನಂ ಭೂತಿಂ ಗಮಯತಿ" (ಯಜುಸ್ಸಂಹಿತೆ ೨೧೧) ಯಾವನು ವಾಯುದೇವತಾಕವಾದ ಯಾಗವನ್ನು ಮಾಡುವನೋ, ಅವನಿಗೆ ಆ ವಾಯುದೇವನೇ ಎಂದರೆ ತದಂತರ್ಯಾಮಿಯಾದ ಭಗವಂತನು, ಐಶ್ವರ್ಯವನ್ನು ಹೊಂದಿಸುವನು.

೩. "ತಮಕ್ರತುಃ ಪಶ್ಯತಿ ವೀತಶೋಕೋ ಧಾತುಃ ಪ್ರಸಾದಾನ್ಮಹಿಮಾನಮೀಶಂ" (ಶ್ವೇತಾಶ್ವತರ ೩-೨೦) ಅಂತಹ ಸರ್ವಕರ್ಮ ಬಾಧ [illegible]

ನಾದ ಅಪಹತ ಪಾಪ್ಮನಾದ ಮಹತ್ತಾದ ಮಹಿಮೆಯುಳ್ಳ ಸರ್ವ ನಿಯಾಮಕ ನಾದ ಪರಮಾತ್ಮನನ್ನು ಯಾವಾಗ ಸಾಕ್ಷಾತ್ಕರಿಸುವನೋ, ಆಗ ಸರ್ವ ಸ್ರಷ್ಟಾ ವಾದ ಪರಮಾತ್ಮನ ಅನುಗ್ರಹದಿಂದ ಶೋಕವಿಲ್ಲದವನಾಗುವನು ಎಂದರೆ ನಿರತಿ ಶಯ ಆನಂದವನ್ನು ಹೊಂದುವನು. (೪. ೨. ೧.)

೪. "ಯಂಯಮಂತತಮಭಿಕಾಮಾ ಭವಂತಿ, ತಂತಮೇವೋಪ ಜೀವಂತಿ"

೫. "ಯಮೇ ವೈಷ ವೃಣುತೇ ತೇನ ಲಭ್ಯಃ" (ಮುಂ. ೩.೨.೩) ಇದರರ್ಥವು ಹಿಂದೆಯೇ ಉಪಪಾದಿತವು.

ಸ್ಮೃತಿವಾಕ್ಯಗಳು.

೬. "ಅಹಂ ಹಿ ಸರ್ವ ಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ ।
ಭೋಕ್ತಾರಂ ಯಜ್ಞತಪಸಾಂ ಸರ್ವಲೋಕ ಮಹೇಶ್ವರಂ॥
ಯೇ ಯಜಂತಿ ಪಿತೄನ್ ದೇವಾನ್ ಬ್ರಾಹ್ಮಣಾನ್ ಸಹುತಾಶನಾನ್।
ಸರ್ವಭೂತಾಂತರಾತ್ಮಾನಂ ವಿಷ್ಣುಮೇವ ಯಜಂತಿತೇ ॥

ಎಂಬುದರಿಂದ ಸಾಧ್ಯೋಪಾಯಗಳಾದ ಸರ್ವ ಕರ್ಮಗಳಿಂದಲೂ ಶ್ರೀ ಮಹಾ ವಿಷ್ಣುವೇ ಆರಾಧಿಸಲ್ಪಡುವನೆಂದು ಹೇಳಲ್ಪಟ್ಟಿತು. ಮುಂದೆ ಆತನೇ ಪ್ರೀತನಾಗಿ ಅವುಗಳಿಗೆ ಉಚಿತವಾದ ಫಲಗಳನ್ನು ಕೊಡುವನೆಂದು ಹೇಳಲ್ಪಡು ತ್ತದೆ:—

"ಯೋ ಯೋ ಯಾಂ ಯಾಂ ತನುಂ ಭಕ್ತಃ ಶ್ರದ್ಧಯಾರ್ಚಿತು ಮಿಚ್ಛತಿ" ಎಂದು ಪ್ರಾರಂಭಿಸಿ ಕಡೆಗೆ,

"ಲಭತೇ ಚ ತತಃ ಕಾಮಾನ್ ಮಯೈವ ವಿಹಿತಾನ್ ಹಿತಾನ್"॥
ಎಂಬುದರಿಂದ ಸಾಧ್ಯೋಪಾಯಕ್ಕೆ ಉಚಿತವಾದ ಫಲವನ್ನು ಕೊಡುವವನೂ ತಾನೇ ಎಂದುಪದೇಶಿಸಲ್ಪಟ್ಟಿರುತ್ತದೆ. ಹಾಗೆಯೇ ಇನ್ನೊಂದು ಕಡೆಯಲ್ಲೂ,

ಅನನ್ಯೇನೈವ ಯೋಗೇನ ಮಾಂ ಧ್ಯಾಯನ್ತ ಉಪಾಸತೇ ।
ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರ ಸಾಗರಾತ್ ॥

ಇಲ್ಲಿಯೂ ಸಾಧ್ಯೋಪಾಯವಾದ ಯೋಗದಿಂದಲೇ ಬ್ರಹ್ಮಪ್ರಾಪ್ತಿಯು ಹೇಳ ಲ್ಪಟ್ಟಿರುತ್ತದೆ. (ಗೀ. ೧೬ ೨೪)

ವಾಲ್ಮೀಕಿ ಮಹರ್ಷಿಯೂ ಕೂಡ

೭. "ಕಥಂಚಿದುಪಕಾರೇಣ ಕೃತೇನೈಕೇನ ತುಷ್ಯತಿ" ಎಂಬುದರಿಂದ ಸಾಧ್ಯೋಪಾಯದಿಂದ ಶ್ರೀ ರಾಮನು ಸಂತುಷ್ಟನಾಗಿ, ಅನುಗ್ರಹೋನ್ಮುಖನಾಗು

ವನು ಎಂಬುದನ್ನು "ನಸ್ಮರತ್ಯಪಕಾರಾಣಾಂ ಶತಮಪ್ಯಾತ್ಮವತ್ತಯಾ" ಎಂಬುದರಿಂದ ತಿಳಿಸಿರುತ್ತಾರೆ.

೮. ಶ್ರೀ ಪರಾಶರರು ಪ್ರಾಚೀನ ಬರ್ಹಿವಾಕ್ಯದಿಂದ ಹೇಳುತ್ತಾರೆ:—

ಧರ್ಮಮರ್ಥಂ ಚ ಕಾಮಂ ಚ ಮೋಕ್ಷಂಚಾನ್ವಿಚ್ಛತಾಂ ತಥಾ ।
ಆರಾಧನೀಯೋ ಭಗವಾನನಾದಿಃ ಪುರುಷೋತ್ತಮಃ ॥

(ವಿ. ಪು. ೧. ೧೪. ೧೬) ಚತುರ್ವಿಧ ಪುರುಷಾರ್ಥಗಳನ್ನಪೇಕ್ಷಿಸುವವರು ಆಯಾ ಫಲಗಳಿಗನುಗುಣವಾದ ಸಾಧ್ಯೋಪಾಯಗಳಿಂದ ಪುರುಷೋತ್ತಮನನ್ನು ಆರಾಧಿಸತಕ್ಕದ್ದೆಂದು ಹೇಳಲ್ಪಟ್ಟಿರುತ್ತದೆ.

೯. "ಕರ್ಣಧಾರ ಇವಾಪಾರೇ ಭಗವಾನ್ ಪಾರದರ್ಶನಃ" ಸಂಸಾರ ಸಾಗರದಲ್ಲಿ ಮಗ್ನರಾದವರನ್ನು ಸರ್ವೇಶ್ವರನು ಹಡಗಿನಲ್ಲಿ ಕೂಡಿಸಿ ಆಚೆಯ ದಡವನ್ನು ಸೇರಿಸುವನೆಂಬುದರಿಂದ ಸಿದ್ಧೋಪಾಯನೆಂಬುದನ್ನೂ, ಹಾಗೆ ಸಿದ್ಧೋಪಾಯನಾಗಲು ಬೇಕಾದ ಭಗವತ್ಪ್ರೀತಿಯುಂಟಾಗಬೇಕಾದರೆ, "ಅತಃ ಪುಮ್ಭಿರ್ದ್ವಿಜ ಶ್ರೇಷ್ಠಾ ವರ್ಣಾಶ್ರಮ ವಿಭಾಗಶಃ । ಸ್ವನುಷ್ಠಿತಸ್ಯ ಧರ್ಮಸ್ಯ ಸಂಸಿದ್ಧಿರ್ಹರಿತೋಷಣಮ್॥ ತಸ್ಮಾದೇಕೇನ ಮನಸಾ ಭಗವಾನ್ ಸಾತ್ವತಾಂ ಪತಿಃ । ಶ್ರೋತವ್ಯಃ ಕೀರ್ತಿತವ್ಯಶ್ಚ ಧ್ಯೇಯಃ ಪೂಜ್ಯಶ್ಚ ನಿತ್ಯದಾ॥" (ಭಾ. ೧. ೨. ೧೩-೪) ಎಂಬುದರಿಂದ ಸಾಧ್ಯೋಪಾಯದ ಆವಶ್ಯಕತೆಯು ಹೇಳಲ್ಪಟ್ಟಿತು ಹಾಗೆಯೇ "ಶ್ರವಣಂ ಕೀರ್ತನಂ" ಎಂಬಲ್ಲಿಯೂ ಸಾಧ್ಯೋಪಾಯಗಳೂ ತತ್ಸಹಕಾರಿಗಳೂ ಹೇಳಲ್ಪಟ್ಟವು. ಮತ್ತು "ಭಗವದ್ಭಕ್ತಿಯೋಗೇನ ಪ್ರಾಪ್ತಾ ಭಾಗವತೀ ಗತಿಃ" ಭಾಗ. (೩. ೨೪. ೫೭) ಎಂಬಲ್ಲಿ ಭಕ್ತಿಯೋಗದಿಂದ ಮೋಕ್ಷಫಲವು ವಿಧಿಸಲ್ಪಟ್ಟಿರುತ್ತದೆ.

೧೦. ಸರ್ವೇಶ್ವರನೇ ಲೋಕಗುರುವಾಗಿ ಅನೇಕ ಸ್ಥಳಗಳಲ್ಲಿ ಸಾಧ್ಯೋಪಾಯಾವಶ್ಯಕತೆಯನ್ನುಪದೇಶಿಸಿರುತ್ತಾನೆ. "ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂವ್ರಜ" ವೆಂದೂ (ಗೀ. ೧೮ ೬೬) "ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ । ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ" (ರಾ. ಅಯೋಧ್ಯಾ ೧೮. ೩೩) ವೆಂದೂ ತನ್ನ ದಿವ್ಯಸಙ್ಕಲ್ಪವನ್ನು ವ್ಯಕ್ತಪಡಿಸಿರುತ್ತಾನೆ.

೧೧. ಶ್ರುತಿ ಸ್ಮೃತಿ ಗುರೂಕ್ತಿಭಿಃ ಎಂಬಲ್ಲಿ ಗುರೂಕ್ತಿಭಿಃ ಎಂಬುದರಿಂದ ಶ್ರೀ ಯತಿವರ್ಯರು "ಫಲಮತ ಉಪಪತ್ತೇಃ" ಎಂಬ ಸೂತ್ರವ್ಯಾಖ್ಯಾನದಲ್ಲಿ ಹೇಳಿರುವ "ಸ ಏವಹಿ ಸರ್ವಜ್ಞಃ ಸ್ಸರ್ವಶಕ್ತಿರ್ಮಹೋದಾರೋ ಯಾಗದಾನ ಹೋಮಾದಿಭಿ ರುಪಾಸನೇನಚಾರಾಧಿತಃ ಐಹಿಕಾಮುಷ್ಮಿಕ

ಸಾಧ್ಯೋಪಾಯಂ ವಿನಾ ಸಿದ್ಧೋಪಾಯಸ್ಯ ವಶೀಕರಣಂ ನ ಸಾಧ್ಯಂ.

ಇಪ್ಪಡಿ ಸರ್ವಜ್ಞನಾಯ್, ಸರ್ವಶಕ್ತಿಯಾಯ್, ಪರಮಕಾರುಣಿಕ

ಭೋಗಜಾತಂ ಸ್ವಸ್ವರೂಪಾವಾಪ್ತಿರೂಪಮಪವರ್ಗಂ ಚ ದಾತುಮಿಷ್ಟೇ.” ಮತ್ತು ಹಾಗೆಯೇ ಫಲಾಧಿಕರಣದ ಕೊನೆಯಲ್ಲಿ ಹೇಳಿರುವ “ತದಾರಾಧನ ರೂಪಾಣಿ ಚ ಯಾಗದಾನ ಹೋಮಾತ್ಮಕಾನಿ”, “ಸ್ತುತಿನಮಸ್ಕಾರ ಸಂಕೀರ್ತನಾರ್ಚನಧ್ಯಾನ ನ್ಯಾಸಾದಿಭಿರಾರಾಧಿತಾತ್ಪರಸ್ಮಾತ್ಪುರುಷಾದ್ಭೋಗಾಪವರ್ಗರೂಪ ಫಲಂಚ ವದಂತೀತಿಸರ್ವಂ ಸಮಂಜಸಂ” ಎಂಬೀ ವಾಕ್ಯಗಳೂ ಸಹ ಸಂಗ್ರಹಿಸಲ್ಪಟ್ಟವು. ಇವುಗಳ ಅರ್ಥವೇನೆಂದರೆ:— “ಆ ಪರಬ್ರಹ್ಮನು, ತಾನೇ ಸರ್ವಜ್ಞನು, ಸರ್ವಶಕ್ತಿಯುಳ್ಳವನು, ಮಹೋದಾರಿಯು, ಹೋಮ ಮೊದಲಾದವುಗಳಿಂದಲೂ, ಉಪಾಸನೆಯಿಂದಲೂ ಕೂಡ ಆರಾಧಿಸಲ್ಪಟ್ಟವನಾಗಿ ಐಹಿಕಾಮುಷ್ಮಿಕಭೋಗ ಸಮೂಹವನ್ನೂ, ಚೇತನನು ತನ್ನ ಸ್ವಂತ ಸ್ವರೂಪವನ್ನು ಹೊಂದುವ ಮೋಕ್ಷವನ್ನೂ, ಕೊಡಲು ಶಕ್ತನಾಗಿದ್ದಾನಷ್ಟೆ”. ಮುಂದೆ ಅಚೇತನವಾಗಿ ಅನಿತ್ಯವಾಗಿ ಕ್ಷಣಧ್ವಂಸಿಯಾಗಿರುವ ಕರ್ಮವು ಕಾಲಾಂತರದಲ್ಲಿ ಪ್ರಾಪ್ತವಾಗುವ ಫಲವನ್ನು ಕೊಡಲಾರದಷ್ಟೇ ಎಂದು ಇದೆ. “ಸ್ತುತಿ ನಮಸ್ಕಾರ ಕೀರ್ತನೆ ಅರ್ಚನೆ ಉಪಾಸನೆ ಭರಸಮರ್ಪಣೆ ಮೊದಲಾದವುಗಳಿಂದ ಆರಾಧಿಸಲ್ಪಟ್ಟ ಪರಮ ಪುರುಷನಿಂದಲೇ ಸರ್ವವಿಧ ಭೋಗಗಳೂ ಮೋಕ್ಷವೂ ಸಹ ಫಲವೆಂದು ವೇದಾಂತಗಳು ಹೇಳುತ್ತಿವೆಯಾದುದರಿಂದ ಸಮಸ್ತ ಶಾಸ್ತ್ರವೂ ನಮಗೆ ಸಮಂಜಸವು” ಎಂದು ಹೇಳಿ ಫಲಾಧಿಕರಣವನ್ನು ಮುಗಿಸಿರುತ್ತಾರೆ. ಹೀಗೆ ಸಾಧ್ಯೋಪಾಯಾವಶ್ಯಕತೆಯನ್ನು ಹೇಳುವ **ನಃ**-ತಮಗೆ, ಸರ್ವವೂ ಸಮಂಜಸವು ಎಂಬರ್ಥವನ್ನು ಸೂಚಿಸುವದಕ್ಕಾಗಿಯೇ, **ಆಭಾತಿನಃ** ಎಂದು ಪ್ರಯೋಗಿಸಿರುತ್ತಾರೆ. ಹೀಗೆ ಶ್ರೀ ದೇಶಿಕರವರು ಶ್ರೀ ಭಾಷ್ಯಾರ್ಥಗಳನ್ನು ಮನಸ್ಸಿನಲ್ಲಿಟ್ಟೇ ಪ್ರಯೋಗಗಳನ್ನು ಮಾಡಿರುತ್ತಾರೆ.

ಸಾಧ್ಯೋಪಾಯವಿಲ್ಲದೆ ಸಿದ್ಧೋಪಾಯನನ್ನು ವಶಮಾಡಿ ಕೊಳ್ಳುವದು ಸಾಧ್ಯವಿಲ್ಲವು

ಸಿದ್ಧೋಪಾಯನ ಸ್ವರೂಪ ಮಾಹಾತ್ಮ್ಯೆಯನ್ನು ಚನ್ನಾಗಿ ಅರಿತವನಾಗಿದ್ದರೂ, ಆತನಲ್ಲಿ ತುಂಬಾ ಭಕ್ತಿಯೂ ಸಂಸಾರದಲ್ಲಿ ಸಂಪೂರ್ಣವಾದ ವೈರಾಗ್ಯವೂ, ಪ್ರಾಪ್ತವಾಗಿದ್ದರೂ, ಪ್ರಾಪ್ಯವನ್ನು ಹೊಂದಬೇಕೆಂಬ ರುಚಿ, ತ್ವರೆ ಸಹ ತಲೆತೋರಿ

ಮಾಯ್, ಸರ್ವಶೇಷಿಯಾಯ್, ಸಪತ್ನೀಕನಾಯ್, ಸರ್ವಲೋಕ ಶರಣ್ಯನಾನ ಸಿದ್ಧೋಪಾಯ ವಿಶೇಷಮ್ ತೆಳಿನ್ದಾಲುಮ್, (೧) "ಆರೋಗ್ಯ

ದ್ದರೂ, ಹೀಗೆ ಜ್ಞಾನ ಭಕ್ತಿ ವೈರಾಗ್ಯಗಳು ಈ ಮೋಕ್ಷಾರ್ಥಿಗೆ ಉಂಟಾಗಿದ್ದರೂ, ಸಾಧ್ಯೋಪಾಯವನ್ನು ಅನುಷ್ಠಿಸುವಹಾಗೆ ಮಾಡುವ ತನ್ನ ಸುಕೃತವೂ ಅದನ್ನು ಚನ್ನಾಗಿ ತಿಳಿಯುವ ಭಗವಂತನ ಅನುಗ್ರಹವೂ, ಇಲ್ಲದ ಪಕ್ಷದಲ್ಲಿ ಈ ಸಿದ್ಧೋಪಾಯನಾದ ಮುಕುಂದನು " **ನದಿಶತಿ ಮುಕುಂದೋ ನಿಜಪದಂ** " ಎಂದು ಹೇಳಿರುವಹಾಗೆ, ಮೋಕ್ಷವನ್ನು ಕೊಡುವದಿಲ್ಲವು ಎಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.

ಸರ್ವೇಶ್ವರನು ಸಿದ್ಧೋಪಾಯನಾಗಲು ಬೇಕಾದ ಕಲ್ಯಾಣಗುಣಗಳು ಆತನಲ್ಲಿವೆ ಎಂದು ಪ್ರಥಮತಃ ಹೇಳುತ್ತಾರೆ. **ಇಪ್ಪಡಿ**-ಸಿದ್ಧೋಪಾಯ ಶೋಧನಾಧಿಕಾರದಲ್ಲಿ ಸ್ಥಾಪಿಸಿದ ರೀತಿಯಲ್ಲಿ, **ಸರ್ವಜ್ಞನಾಯ್**-ಸರ್ವಜ್ಞನಾಗಿ, ಸದಾ ಏಕಕಾಲದಲ್ಲೇ ಎಲ್ಲವನ್ನೂ ಸಾಕ್ಷಾತ್ಕರಿಸುವವನಾಗಿ, ಇದರಿಂದ ಚೇತನನು ಮಾಡಿದ್ದನ್ನರಿತು ಆತನು ಹೇಗೆ ಅನುಗ್ರಹಕ್ಕೆ ಅರ್ಹನೆಂದು ತಿಳಿಯಲು ಬೇಕಾದಗುಣವು, **ಸರ್ವಶಕ್ತಿಯಾಯ್** - ಈತನುಮಾಡುವ ಸಾಧ್ಯೋಪಾಯಗಳಿಂದ, ಪ್ರಾಪ್ಯಪ್ರಾಪಕಗಳಿಗೆ ವಿರೋಧಗಳನ್ನು ನಿವಾರಣೆಮಾಡುವ ಶಕ್ತಿಯು, ಐಹಿಕಗಳಿಗಾಗಿ ಸಾಧ್ಯೋಪಾಯಾನುಷ್ಠಾನವಾದರೂ, ತತ್ಫಲಪ್ರಾಪ್ತಿ ವಿರೋಧಿಗಳನ್ನೂ ಹೋಗಲಾಡಿಸುವ ಶಕ್ತಿಯು, **ಪರಮಕಾರುಣಿಕನಾಯ್**-ಕೃಪಾಸಾಗರನಾಗಿ, ಸಾಮರ್ಥ್ಯವಿದ್ದರೂ ಕೃಪೆಯಿಲ್ಲದಿದ್ದರೆ ಅನುಗ್ರಹ ಉಂಟಾಗುವದಿಲ್ಲವೆಂದು ಉಪಪಾದಿಸಿರುವಹಾಗೆ, ಅನುಗ್ರಹಕ್ಕೆ ಕೃಪೆಯೂ ಆವಶ್ಯಕವು, **ಸರ್ವಶೇಷಿಯಾಯ್**- ಎಲ್ಲವೂ ತನ್ನ ಪ್ರಯೋಜನಕ್ಕಾಗಿರುವದರಿಂದ ಸಮಸ್ತಕ್ಕೂ ಶೇಷಿಯಾಗಿ, ಇದರಿಂದ ಚೇತನಾನುಗ್ರಹವೂ ಆತನನ್ನು ಪ್ರೀತಿಸುವ ಸ್ವಭಾವವೂ ಹೇಳಲ್ಪಟ್ಟವು, **ಸಪತ್ನೀಕನಾಯ್**-ಅನುಗ್ರಹರುಚಿಯುಳಾಗಿ ಚೇತನ ಸಂರಕ್ಷಣೆಯಲ್ಲಿ ಬದ್ಧಾದರವುಳ್ಳ ಪತ್ನಿಯಾದ ಲಕ್ಷ್ಮಿಯಿಂದ ಯುಕ್ತನಾಗಿ, ಈ ವಿಶೇಷಣವೂ ಅನುಗ್ರಹಕ್ಕೆ ಆವಶ್ಯಕವು, **ಸರ್ವಲೋಕಶರಣ್ಯನಾನ** - ಸಮಸ್ತ ಚೇತನರಿಗೂ "**ಸಮೋಹಂಸರ್ವಭೂತೇಷು**" ಎಂದು ಹೇಳಿರುವಹಾಗೆ ಏನೊಂದೂ ಪಕ್ಷಪಾತವಿಲ್ಲದೆ ತನ್ನನ್ನಾಶ್ರಯಿಸಿದವರನ್ನೆಲ್ಲಾ ಉದ್ಧಾರ ಮಾಡುವವನಾದ, **ಸಿದ್ಧೋಪಾಯ ವಿಶೇಷಮ್ ತೆಳಿನ್ದಾಲುಮ್** - ಸರ್ವೇಶ್ವರನೇ ಸಿದ್ಧೋಪಾಯನೆಂಬ ಜ್ಞಾನ ಉಂಟಾಗಿದ್ದರೂ, **ಮತ್ತು** (೨)

---

(೧)

ಮಿಂದ್ರಿಯೌಪ್ಪಲ್ಯ ಮೈಶ್ವರ್ಯಂ ಶತ್ರು ಶಾಲಿತಾ । ವಿಯೋಗೋ ಬಾಂಧ
ವೈರಾಯುಃ ಕಿಂತದ್ಯೇನಾತ್ರ ತುಷ್ಯತಿ”. ಎಙ್ಗರಪಡಿಯೇ ವಿವೇಕಮಿಲ್ಲಾ
ದಾರ್ಕ್ಕು ಗುಣಮಾಯ್ ತೋತ್ತಿನ ವೈಯುಮ್ ದೋಷಮಾನಪಡಿ ಕಂಡು
(ಸಂಸಾರ) ವೈರಾಗ್ಯಮ್ ಪೂರ್ಣಮಾನಾಲುಮ್ (೨) “ಪರಮಾತ್ಮನಿ

“ಆರೋಗ್ಯಮಿಂದ್ರಿಯೌಪ್ಪಲ್ಯಂ - ಆರೋಗ್ಯವು ವಿಷಯೋಪಭೋಗಿಗೆ ಬಹಳ ಬೇಕಾದುದಾದರೂ, ವಿವೇಕಿಗೆ ಇಂದ್ರಿಯಗಳ ಹಾವಳಿಗೆ ಕಾರಣಭೂತವಾಗಿ ದೋಷಯುಕ್ತವಾದುದು, ಐಶ್ವರ್ಯಂ ಶತ್ರುಶಾಲಿತಾ-ಐಶ್ವರ್ಯವೇನೋ ಐಹಿಕ ಭೋಗಗಳಿಗೆ ಸಾಧಕವಾಗಿದ್ದರೂ ವಿವೇಕಿಗೆ ಇತರರಲ್ಲಿ ಅಸೂಯೆಯನ್ನುಂಟು ಮಾಡುವದರಮೂಲಕ ಶತ್ರುಗಳನ್ನುಂಟುಮಾಡುವ ದೋಷವುಳ್ಳದು, ಅಥವಾ ಕಾಮಕ್ರೋಧಾದಿಗಳನ್ನುಂಟುಮಾಡುವ ದೋಷವುಳ್ಳದು, ವಿಯೋಗೋ ಬಾಂಧವೈರಾಯುಃ - ಆಯಸ್ಸು ಬಹುಕಾಲ ಈ ಲೋಕದ ಉಪಭೋಗಗಳಿಗೆ ಸಾಧಕವಾಗಿದ್ದರೂ, ಬಹುಕಾಲ ಬದುಕಿದವನಿಗೆ ಪುತ್ರ ಕಳತ್ರ ಸಹೋದರಾದಿಗಳಾದ ಅನೇಕ ಬಂಧುವಿಯೋಗಮೂಲಕ ದುಃಖವನ್ನುಂಟುಮಾಡುವ ದೋಷವುಳ್ಳದು, ಹೀಗಿರುವಾಗ, ಯೇನ - ಯಾವುದರಿಂದ, ಅತ್ರ – ಈ ದೋಷ ಸಪ್ತಕಗಳಿಂದ ಕೂಡಿದ ಲೋಕದಲ್ಲಿ, ತುಷ್ಯತಿ – ಸಂತೋಷಪಡುವನೋ, ತತ್-ಅದು, ಕಿಂ - ಯಾವುದು ? ಎಂದರೆ ಯಾವುದೂ ವಿವೇಕಿಗೆ ಸಂತೋಷಕರವಾದುದಿಲ್ಲವು ಎಂಬ ಭಾವವು. ಸರ್ವವೂ (೩) “ಭಯನಿದಾನವೇ” ಭಯಕ್ಕೆ ಕಾರಣಭೂತವಾದುದೇ ಎಂಬ ತಾತ್ಪರ್ಯವು. ಎಙ್ಗರಪಡಿಯೇ - ಎಂದು ಹೇಳಿರುವಹಾಗೆ, ವಿವೇಕಮಿಲ್ಲಾದಾರ್ಕ್ಕು - ವಿವೇಕವಿಲ್ಲದವರಿಗೆ, ಗುಣಮಾಯ್ ತೋತ್ತಿನ ವೈಯುಮ್ - ಒಳ್ಳೇದೆಂಬದಾಗಿ ತೋರಿಬಂದ, ಆಯುರಾರೋಗ್ಯೈಶ್ವರ್ಯವೆಲ್ಲವೂ, ದೋಷಮಾನಪಡಿ ಕಂಡು - ದೋಷಯುಕ್ತವಾದುದು ಎಂದು ಚನ್ನಾಗಿ ಅರಿತು, ವೈರಾಗ್ಯಮ್ ಪೂರ್ಣಮಾನಾಲುಮ್ - ಸಂಸಾರದಲ್ಲಿ ವೈರಾಗ್ಯವು ಸಂಪೂರ್ಣವಾಗಿ ಉಂಟಾಗಿದ್ದರೂ

“ಸಂಪದಸ್ಸ್ವಪ್ನ ಸಂಕಾಶಾ ಯೌವನಂ ಕುಸುಮೋಪಮಂ ।
ತಟಿಚ್ಚಂಚಲ ಮಾಯುಶ್ಚ ಕಸ್ಯಸ್ಯಾಜ್ಜಾನತೋ ಧೃತಿಃ ॥”

ಎಂದರೆ “ಸಂಪತ್ತುಗಳು ಕನಸಿನಲ್ಲಿ ಕಂಡ ಗಂಟಿನ ಹಾಗೂ, ಯೌವನವು ಬಾಡಿ ಹೋಗುವ ಮೃದುವಾದ ಪುಷ್ಪದಹಾಗೂ, ಆಯುಸ್ಸು ಚಂಚಲವಾದ ಮಿಂಚಿನ

---

(೨) ನಾರದ ಪರಿವ್ರಾಜಕೋಪನಿಷತ್ತು. (೩) ಅಭೀತಿಸ್ತುತಿಃ.

ಯೋ ರಕ್ತಃ" ಎಜ್ಞ್ಗರಪಡಿಯೇ ಪ್ರಾಪ್ಯರುಚಿಯುಂಡ್ಡಾನಾಲ್ಲುಮ್ (೪) "ಮಹತಾ ಪುಣ್ಯಪಣ್ಯೇನ ಕ್ರೀತೇಯಂ ಕಾಯನೌ ಸ್ತ್ವಯಾ। ಪ್ರಾಪ್ತುಂ ದುಃಖೋದಧೇಃ ಪಾರಂ ತ್ವರ ಯಾವನ್ನಭಿದ್ಯತೇ"॥ ಎಜ್ಞ್ಗರಪಡಿಯೇ ತ್ವರೈ ಪಿರಿನ್ದಾಲುಮ್, ಅನಾದಿಯಾಗ ಅನುವೃತ್ತಮಾನ

ಹಾಗೂ ವಿರಕ್ತನಿಗೆ ತೋರಿಬರುವದರಿಂದ, ಇಂತಹ ಸರಿಯಾದ ಜ್ಞಾನವುಳ್ಳ ಯಾವ ವಿವೇಕಿಗೆ ಇವುಗಳಲ್ಲಿ ಸ್ಥಿರಬುದ್ಧಿಯುಂಟಾಗುತ್ತದೆ" ಎಂಬುದು ಇಲ್ಲಿ ಅನುಸಂಧೇಯವು. (೩) "**ಪರಮಾತ್ಮನಿಯೋರಕ್ತಃ**" ಪರಮಾತ್ಮನಲ್ಲಿ ಯಾವನು ಭಕ್ತಿಯುಳ್ಳವನೋ, ಮುಂದಕ್ಕೆ "**ವಿರಕ್ತೋಽಪರಮಾತ್ಮನಿ**" ಪರಮಾತ್ಮ ವ್ಯತಿರಿಕ್ತಗಳಾದ ಐಹಿಕಗಳಲ್ಲಿ ವೈರಾಗ್ಯವುಳ್ಳವನಾಗುತ್ತಾನೆ ಎಂದು ಇದೆ, **ಎಜ್ಞ್ಗರಪಡಿಯೇ** – ಎಂದು ಹೇಳಿರುವ ಹಾಗೆ, **ಪ್ರಾಪ್ಯರುಚಿ ಯುಂಡಾನಾಲುಮ್** – ಪ್ರಾಪ್ಯನಾದ ಶ್ರಿಯಃಪತಿಯನ್ನು ಹೊಂದಬೇಕೆಂಬ ಆಶೆಯನ್ನು ಹೊಂದಿದ್ದರೂ, (೪) ಇದು ಶಿಷ್ಯನಿಗೆ ಗುರುವು ಹೇಳುವ ಸಂದರ್ಭವು. "**ಮಹತಾ** – ಮಹತ್ತಾದ, **ಪುಣ್ಯಪಣ್ಯೇನ** – ಪುಣ್ಯವೆಂಬ ದ್ರವ್ಯದಿಂದ, **ತ್ವಯಾ** – ನಿನ್ನಿಂದ, **ಇಯಂ** – ಈ, **ಕಾಯನೌಃ** – ಶರೀರವೆಂಬ ಹಡಗು, **ಕ್ರೀತಾ** – ಕೊಂಡುಕೊಳ್ಳಲ್ಪಟ್ಟಿತು, ಎಂದರೆ ತುಂಬಾ ಪುಣ್ಯವಿಶೇಷವಿದ್ದುದರಿಂದಲೇ ಇಂತಹ ಮಾನುಷ ಜನ್ಮವು ನಿನಗೆ ಲಭಿಸಿರುತ್ತದೆ ಎಂದು ಹೇಳಿರುತ್ತದೆ. ಈ ಶರೀರವನ್ನೇ ಒಂದು ಹಡಗಿಗೆ ಹೋಲಿಸಿರುತ್ತಾರೆ; ಏತಕ್ಕೆಂದರೆ ಉತ್ತರಾರ್ಧದಿಂದ ಹೇಳುತ್ತಾರೆ. **ಯಾವತ್** – ಎಷ್ಟರಲ್ಲಿ ಈ ದೇಹವೆಂಬ ಹಡಗು, **ನ ಭಿದ್ಯತೇ** – ಒಡೆದುಹೋಗುವದಿಲ್ಲವೋ ಅಷ್ಟರಲ್ಲೇ ಎಂದರೆ ದೇಹಾವಸಾನವು ಪ್ರಾಪ್ತವಾಗುವದರೊಳಗೇನೇ, **ದುಃಖೋದಧೇಃ** – ಸಂಸಾರವೆಂಬ ದುಃಖರೂಪ ಸಮುದ್ರದ, **ಪಾರಂ**- ಆಚೆಯ ದಡವನ್ನು, **ಪ್ರಾಪ್ತುಮ್** - ಹೊಂದುವದಕ್ಕೆ, **ತ್ವರ** - ಶೀಘ್ರಪಡಿಸು, ಎಂದರೆ ಈ ಜ್ಞಾನವಿವೇಕಗಳಿರುವ ಈ ಮಾನುಷಜನ್ಮವು ತುಂಬಾ ಪುಣ್ಯಶೇಷದಿಂದುಂಟಾದುದು, ಈ ಜನ್ಮವು ಕಳೆಯುವದರಲ್ಲೇ ಜ್ಞಾನ ಸಂಪಾದಿಸಿಕೊಂಡು ಸಾಧ್ಯೋಪಾಯನಾದ ಪ್ರಾಪ್ಯನನ್ನು ಮಾಡಿ, ಆತನನ್ನು ಹೊಂದು," **ಎಜ್ಞ್ಗರಪಡಿಯೇ** - ಎಂದು ಹೇಳಿರುವ ಹಾಗೆ, **ತ್ವರೈ ಪಿರನ್ದಾಲುಮ್** - ಪ್ರಾಪ್ಯವನ್ನು ಹೊಂದಬೇಕೆಂಬ ತ್ವರಾತಿಶಯವು ಉಂಟಾಗಿದ್ದರೂ, ಹೀಗೆ ಸರ್ವೇಶ್ವರನನ್ನು ಹೊಂದಲು ಬೇಕಾದ ವೈರಾಗ್ಯ, ಪ್ರಾಪ್ಯರುಚಿ, ಪ್ರಾಪ್ಯತ್ವರೆ ಇವೆಲ್ಲವೂ ಇದ್ದರೂ, ಮುಂದಿನ ವಾಕ್ಯ

---

(೪) ವರಾಹ ಪುರಾಣ.

ಆಜ್ಞಾತಿಲಂಘನ ಮಡಿಯಾಗ ಪ್ಪಿರಿನ್ದ ನಿರ್ಕ್ಕಿರ ಬಂಧಕಮಾನ ಭಗವ ನ್ನಿಗ್ರಹತ್ತುಕ್ಕು ಪ್ರಶಮನಮಾಗ, "ಮಾಮೇಕಂ ಶರಣಂ ವ್ರಜ" ಎನ್ರು ವಿಧಿವಾಕ್ಯ (ತ್ತಿ) ತ್ತಾಲುಮ್, "ಪ್ರಪದ್ಯೇ" ಎನ್ರು ಅನುಷ್ಠಾನ ವಾಕ್ಯ (ತ್ತಿ) ತ್ತಾಲುಮ್ ಶೊಲ್ಲಪ್ಪಟ್ಟ ಸಾಧ್ಯೋಪಾಯ ವಿಶೇಷಂ ತೆಳಿಯಾದ ಪೋದು ಸಿದ್ಧೋಪಾಯ ಭೂತನಾನ ಸರ್ವೇಶ್ವರನೈ ವಶೀಕರಿಕ್ಕವಿರಗಿಲ್ಲೈ.

ಶೇಷದಿಂದ ಸಾಧ್ಯೋಪಾಯಾನುಷ್ಠಾನವು ಪರಮಾತ್ಮ ಕೃಪಯಾ ಉಂಟಾಗದಿದ್ದ ಪಕ್ಷದಲ್ಲಿ ಭಗವದನುಗ್ರಹವು ಅಂತವನಿಗಿಲ್ಲವೆಂದು ಹೇಳುತ್ತಾರೆ, ಏಕೆಂದರೆ "ತಸ್ಯ ಚ ವಶೀಕರಣಂ ತಚ್ಛರಣಾಗತಿರೇವ" ಎಂದು ಶ್ರೀ ಭಾಷ್ಯದಲ್ಲಿ ಯತಿವರ್ಯರು ಹೇಳಿರುವ ಹಾಗೆ ಸಾಧ್ಯೋಪಾಯಾನುಷ್ಠಾನವಿಲ್ಲದುದರಿಂದ ಶ್ರಿಯಃಪತಿಯನ್ನು ವಶೀಕರಣ ಮಾಡಲಸಾಧ್ಯವೆಂಬಭಿಪ್ರಾಯವು. **ಅನಾದಿಯಾಗ ಅನುವೃತ್ತಮಾನ** - ಈ ದುಷ್ಕರ್ಮಗಳು ಯಾವಾಗಲಿಂದ ಅನುಸರಿಸಿ ಬಂದಿವೆ ಎಂದು ಹೇಳಲು ಸಾಧ್ಯವಿಲ್ಲದುದರಿಂದ, ಅನಾದಿಯಾಗಿ ಅನುಸರಿಸಿ ಬಂದ ಎಂದು ಹೇಳಲ್ಪಟ್ಟಿರುತ್ತದೆ. **ಆಜ್ಞಾತಿಲಂಘನಂ** – ಸರ್ವೇಶ್ವರನ ಆಜ್ಞೆಗಳಾದ ವಿಧಿ ನಿಷೇದ ವಾಕ್ಯಗಳನ್ನು ಅತಿಕ್ರಮಿಸಿ ನಡೆದ ಅಕೃತ್ಯಕರಣ ಕೃತ್ಯಾಕರಣ ರೂಪ ಅಪರಾಧಗಳ, **ಅಡಿಯಾಗ** – ಮೂಲಕವಾಗಿ, **ಪಿರಿನ್ದು ನಿರ್ಕ್ಕಿರ** – ಉತ್ಪನ್ನವಾಗಿರುವ, **ಭಗವನ್ನಿಗ್ರಹಕ್ಕೆ, ಪ್ರಶಮನಮಾಗ** - ಶಾಂತಿಯ ರೂಪದಲ್ಲಿ, **ಮಾಮೇಕಂ ಶರಣಂ ವ್ರಜ** – ನನ್ನೊಬ್ಬನನ್ನು ಉಪಾಯವಾಗಿ ಹೊಂದು, **ಎನ್ರು ವಿಧಿವಾಕ್ಯ ತ್ತಾಲುಮ್** - ಎಂಬ ವಿಧಿವಾಕ್ಯದಿಂದಲೂ, **"ಪ್ರಪದ್ಯೇ" ಎನ್ರು ಅನುಷ್ಠಾನ ವಾಕ್ಯತ್ತಾಲುಮ್** – **ಚರಣೌ ಶರಣ ಮಹಂ ಪ್ರಪದ್ಯೇ** ಎಂದು ಅನುಷ್ಠಾನ ಮಂತ್ರವಾದ ದ್ವಯ ಪೂರ್ವ ಖಂಡದಿಂದಲೂ, **ಶೊಲ್ಲಪ್ಪಟ್ಟ** – ಹೇಳಲ್ಪಟ್ಟ, **ಸಾಧ್ಯೋಪಾಯ ವಿಶೇಷಂ**-ಸಾಧ್ಯೋಪಾಯ ವಿಶೇಷವು, **ತೆಳಿಯಾದಪೋದು** - ಅದನ್ನು ಅನುಷ್ಠಿಸುವದು ಅತ್ಯಾವಶ್ಯಕವೆಂಬ ಜ್ಞಾನ ಉಂಟಾಗದೇ ಇರುವಾಗ, ಸಿದ್ಧೋಪಾಯ ಭೂತನಾದ ಸರ್ವೇಶ್ವರನನ್ನು, **ವಶೀಕರಿಕ್ಕ ವಿರಗಿಲ್ಲೈ** - ವಶಮಾಡಿಕೊಳ್ಳುವ ಮಾರ್ಗವು ಇನ್ನು ಯಾವುದೂ ಇರುವದಿಲ್ಲವು. ಸಾಧ್ಯೋಪಾಯವನ್ನವಲಂಬಿಸದೇ ಸಿದ್ಧೋಪಾಯನು ಅನುಗ್ರಹಿಸುವದಿಲ್ಲವೆಂದು ಇಲ್ಲಿ ಹೇಳಲ್ಪಟ್ಟಿತು. ಹಿಂದೆ " **ಪ್ರಪನ್ನಾದನ್ಯೇಷಾಂ** " ಎಂಬ ಶ್ಲೋಕಮೂಲಕ ಸಾಧ್ಯೋಪಾಯಗಳು ಭಕ್ತಿಪ್ರಪತ್ತಿಗಳೆರಡೇ ಎಂದೂ, ಇವುಗಳಲ್ಲಿ ಯಾವುದಾದರೂ ಒಂದನ್ನು ಅವಲಂಬಿಸದೆ ಮುಕ್ತಿದಾಯಕನು ಮುಕ್ತಿಯನ್ನು ಕೊಡ

ಆಗೈಯಾಲ್ ಅರ್ದಿ ಅಧಿಕಾರತ್ತಿಲುಮ್ ಸ್ವರೂಪತ್ತಿಲುಮ್, ಪರಿಕರ ಙ್ಗಳಿಲುಮ್, ವರುಮ್ ಕಲಕ್ಕಙ್ಗಳೈ ಶಮಿಪ್ಪಿಕ್ಕಿರೋಮ್ :—

ನೆಂದು ಹೇಳಲ್ಪಟ್ಟಿರುತ್ತದೆ. **ಮಾಮೇಕಂ ಶರಣಂ** ವ್ರಜ ಎಂಬುವದರಿಂದ ಭಕ್ತಿರೂಪ ಉಪಾಯವೂ, **ಪ್ರಪದ್ಯೇ** ಎಂಬುವದರಿಂದ ಭರನ್ಯಾಸವೂ ಹೇಳಲ್ಪಟ್ಟಿತೆಂದೂ, ಅಥವಾ ಎರಡರಿಂದಲೂ ಭರನ್ಯಾಸವು ಬೋಧಿಸಲ್ಪಟ್ಟಿತೆಂದೂ, ಭರನ್ಯಾಸವು ಪ್ರಕರಣಾನುಗುಣ್ಯವಾಗಿ ಹೇಳಲ್ಪಟ್ಟರೂ ಭಕ್ತಿಮಾರ್ಗವೂ ಉಪಲಕ್ಷಣ ರೀತ್ಯಾ ಉಪದೇಶಿಸಲ್ಪಟ್ಟಿತೆಂದೂ ಭಾವಿಸಬಹುದು. ಶ್ರುತಿಯೂ ಕೂಡ "ನಾನ್ಯಃಪನ್ಥಾ ಅಯನಾಯ ವಿದ್ಯತೇ" (ಪು. ಸೂ.) ಎಂದು ಸಾಧ್ಯೋಪಾಯಾನುಷ್ಠಾನವಿಲ್ಲದೆ ಆತನನ್ನು ಹೊಂದಲು ಸಾಧ್ಯವಿಲ್ಲವೆಂದು ಹೇಳುತ್ತದೆ. ಮತ್ತು

"ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ ।
ಮಾಮೇವ ಯೇ ಪ್ರಪದ್ಯಂತೇ ಮಾಯಾ ಮೇತಾಂ ತರಂತಿತೇ"

ಈ ಜೀವಾತ್ಮನಿಗೆ ಕರ್ಮಕೃತವಿಚಿತ್ರ ಗುಣಮಯವಾದ ಪ್ರಕೃತಿ ಸಂಸರ್ಗರೂಪವಾದ ಸಂಸಾರದಿಂದ ಬಿಡುಗಡೆಯು ಪ್ರಪದನವನ್ನನುಷ್ಠಿಸದೆ ಎಂದಿಗೂ ಉಂಟಾಗುವದಿಲ್ಲವೆಂದೂ ಹೇಳಲ್ಪಟ್ಟಿರುತ್ತದೆ. ಮತ್ತು ಧ್ಯಾನ ಶ್ಲೋಕದಲ್ಲಿ

"ಯತ್ಪ್ರಪತ್ತಿಂ ವಿನಾ ಸರ್ವೈ ಯಸ್ಯಮಾಯಾ ದುರತ್ಯಯಾ ।
ಧನಂಜಯ ರಥಸ್ಥಂ ತತ್ ಪ್ರಪದ್ಯೇ ಪರಮಂ ಮಹಃ"

ಯಾವ ಸರ್ವೇಶ್ವರನಲ್ಲಿ ಶರಣಾಗತಿಯನ್ನನುಷ್ಠಿಸದೆ ಸಂಸಾರವನ್ನು ದಾಟಲಸಾಧ್ಯವೋ, ಅಂತಹ ಅರ್ಜುನಲೀಲಾ ಸಾರಥಿಯಾದ ಸರ್ವೋತ್ಕೃಷ್ಟ ತೇಜಸ್ಸನ್ನು ಶರಣು ಹೊಂದುವೆನು. ಆಗೈಯಾಲ್ - ಹೀಗೆ ಸಾಧ್ಯೋಪಾಯಾನುಷ್ಠಾನವಿಲ್ಲದೆ ಮೋಕ್ಷವಿಲ್ಲವೆಂಬುದು ಸ್ಥಾಪಿತವಾದನಂತರ, (೧) ಅಧಿಕಾರತ್ತಿಲುಮ್ - ಯಾರಿಗೆ ಈ ಸಾಧ್ಯೋಪಾಯವಾದ ಭರನ್ಯಾಸದಲ್ಲಿ ಅಧಿಕಾರವೆಂಬುವದರಲ್ಲೂ, (೨) ಸ್ವರೂಪತ್ತಿಲುಮ್ - ಅದರ ಸ್ವರೂಪದಲ್ಲೂ, (೩) ಪರಿಕರಙ್ಗಳಿಲುಮ್ - ಅದರ ಅಂಗಗಳಲ್ಲೂ, ವರುಮ್ ಕಲಕ್ಕಙ್ಗಳೈ - ಬರುವ ಶಙ್ಕಾರೂಪ ಆಕ್ಷೇಪಗಳನ್ನು, ಶಮಿಪ್ಪಿಕ್ಕಿರೋಮ್ - ಶಮನಮಾಡುತ್ತೇವೆ, ಎಂಬದಾಗಿ ಈ ಅಧಿಕಾರದಲ್ಲಿ ಉಪದೇಶಿಸುವದನ್ನು ಪ್ರತಿಜ್ಞಾವಾಕ್ಯರೂಪದಲ್ಲಿ ಹೇಳಿರುತ್ತಾರೆ. ಈ ಅಧಿಕಾರದಲ್ಲಿ ಮೂರು ವಿಧವಾದ ಆಕ್ಷೇಪಗಳಿಗೆ ಸಮಾಧಾನವು ಹೇಳಲ್ಪಡುತ್ತದೆ:—(೧) ಅಧಿಕಾರ ವಿಷಯದಲ್ಲಿ (೨) ಸ್ವರೂಪ ವಿಷಯದಲ್ಲಿ (೩) ಪರಿಕರಗಳ ವಿಷಯದಲ್ಲಿ ಉಂಟಾಗಬಹುದಾದ ಶಙ್ಕೆಗಳನ್ನು ಪೂರ್ವಪಕ್ಷ

ಪ್ರಪತ್ತೇಃ ಸ್ಸರ್ವಾಧಿಕಾರತ್ವ ಸಮರ್ಥನಮ್

ಇಪ್ಪ್ರಪತ್ತಿಯು ವೊರು ವೈದಿಕ ಧರ್ಮಮನ್ರೋ? ಇದುವು ವೊರು ಯಾಗ ವಿಶೇಷ ಮಾಗವನ್ರೋ ನ್ಯಾಸವಿದ್ಯೈ ಯಿಲೆಯೋದಪ್ಪಡು

ಮಾಡಿ ಅನುವದಿಸಿ ಅವುಗಳಿಗೆ ಸಮಾಧಾನವನ್ನೂ ಹೇಳುತ್ತಾರೆ. ಹೀಗೆ ಸಾಧ್ಯೋಪಾಯ ವಿಷಯವಾದ ಶಙ್ಕಾಗಳು ಶೋಧಿಸಲ್ಪಡುವದರಿಂದ ಇದಕ್ಕೆ ಸಾಧ್ಯೋಪಾಯ ಶೋಧನಾಧಿಕಾರವೆಂಬ ಹೆಸರು.

(೧) ಪ್ರಪತ್ತಿಯಲ್ಲಿ ಸರ್ವರಿಗೂ ಅಧಿಕಾರ ಉಂಟೆಂಬುದರ ಸಮರ್ಥನೆಯು.

ಪ್ರಥಮತಃ ಅಧಿಕಾರ ವಿಷಯದಲ್ಲುಂಟಾಗುವ ಪೂರ್ವಪಕ್ಷವನ್ನುಪಪಾದಿಸಿ ಅದನ್ನು ನಿರಸನ ಮಾಡುತ್ತಾರೆ. **ಇಪ್ಪ್ರಪತ್ತಿಯು**-ಈ ಭರನ್ಯಾಸವು, **ಒರು ವೈದಿಕ ಧರ್ಮಮನ್ರೋ**-ವೇದದಲ್ಲಿ ಹೇಳಿರುವ ಒಂದು ಕರ್ಮಾನುಷ್ಠಾನವಲ್ಲವೋ? **ಇದುವುಮ್** - ಈ ಪ್ರಪದನವು, **ಒರು ಯಾಗವಿಶೇಷಮಾಗಮನ್ರೋ** - ಒಂದು ಯಾಗವಿಶೇಷವೆಂದಲ್ಲವೇ **ನ್ಯಾಸವಿದ್ಯೆಯಲ್ಲಿ, ಓದಪ್ಪಡುಗಿರದು** - ಪಠಿತವಾಗಿರುತ್ತದೆ ಎಂದರೆ ಹೇಳಲ್ಪಟ್ಟಿರುತ್ತದೆ. **ಆಗೈಯಾಲ್** - ಆದುದರಿಂದ, **ಇದು ಸರ್ವಾಧಿಕಾರಮಾಗಕ್ಕೂಡಮೋ** – ಈ ಪ್ರಪತ್ತ್ಯನುಷ್ಠಾನದಲ್ಲಿ ಶೂದ್ರ ಚಂಡಾಲ ಮೊದಲುಗೊಂಡು ಎಲ್ಲರಿಗೂ ಅಧಿಕಾರ ಉಂಟೆಂದು ಅಧಿಕಾರಿ ವಿಭಾಗಾಧಿಕಾರದಲ್ಲಿ ಹೇಳಿರುವದು ಸರಿಯೋ, ಎನ್ರು – ಎಂಬದಾಗಿ, ಶಿಲರ್-ಕೆಲವರು, ಅವರು ಯಾರೆಂದರೆ, ಶ್ರೀ ಸೋಮೇಶಿಯಾಂಡಾನ್ ಪ್ರಭೃತಿಗಳು, **ವಿಚಾರಿಪ್ಪಾರ್‌ಗಳ್** – ಪೂರ್ವಪಕ್ಷವನ್ನು ಹೇಳುವರು. ಭರನ್ಯಾಸವೂ ಒಂದು ವೇದವಿಹಿತ ಧರ್ಮವು. ನ್ಯಾಸವಿದ್ಯೆಯಲ್ಲಿ ಒಂದು ಯಾಗ ವಿಶೇಷವೆಂದೇ ರೂಪಕ ಮಾಡಿ ಹೇಳಿರುತ್ತದೆ. ಅದು ಯಾವುದೆಂದರೆ, ನಾವುಗಳು ಅದನ್ನು ಪ್ರತಿದಿನವೂ ದೇವತಾರ್ಚನೆಯ ಶಾತ್ತುಮುರೆಯಲ್ಲಿ ಪಠಿಸುತ್ತೇವೆಯಾದುದರಿಂದ, ಓದಪ್ಪಡುಗಿರದು - ಎಂಬ ಪ್ರಯೋಗವು (೧) "ತಸ್ಯೈವಂ ವಿದುಷೋ ಯಜ್ಞಸ್ಯಾತ್ಮಾ ಯಜಮಾನಃ" ಎಂದಾರಂಭಿಸಿ, "ತಸ್ಮಾದ್ಬ್ರಹ್ಮಣೋ ಮಹಿಮಾನ ಮಿತ್ಯುಪನಿಷತ್" ಎಂದು ಮುಗಿಸುವ ವಾಕ್ಯವಾಗಿರುತ್ತದೆ. ಇದರರ್ಥವೇನೆಂದರೆ:— ನ್ಯಾಸವಿದ್ಯಾನಿಷ್ಠನ ಸ್ವರೂಪಸ್ಥಿತಿ ಪ್ರವೃತ್ತಿಗಳೆಲ್ಲಾ ಒಂದು ಯಾಗರೂಪವಾದುದೆಂದು ಇಲ್ಲಿ ಹೇಳಲ್ಪಡುತ್ತದೆ. ಈ ನ್ಯಾಸವಿದ್ಯೆ ಎಂಬ ಯಾಗಕ್ಕೆ ಜೀವಾತ್ಮನೇ ಯಜಮಾನನು, ಯಜ್ಞ ಯಜಮಾನನು ಸಪತ್ನೀಕನಾಗಿರಬೇಕು, ಶ್ರದ್ಧೆಯೇ

ಗಿರದು. ಆಗ್ಗೈಯೊಲ್ ಇದು ಸರ್ವಾಧಿಕಾರವಾಗ ಕ್ಕೊಡುವೋ ವೆನ್ರು ಶಿಲರ್ ವಿಚಾರಿಪ್ಪರ್ಗಳ್.

ಪತ್ನಿಯು, ಆ ಪ್ರಪನ್ನನ ಶರೀರವೇ ಇಧ್ಮವು ಕಟ್ಟಿಗೆಯು, ವಕ್ಷಸ್ಥಳವೇ ವೇದಿಕೆಯು, ವಕ್ಷಸ್ಥಳದ ಕೂದಲುಗಳೇ ಪರಿಸ್ತರಣ ದರ್ಭೆಗಳು, ಶಿಖೆಯೇ ವೇದವು, ಇಲ್ಲಿ ವೇದ ಶಬ್ದವು ಯಾಗದಲ್ಲಿ ಬೇಕಾದ ದರ್ಭವಿಶೇಷವನ್ನು ಸೂಚಿಸುತ್ತದೆ. (ಈಗಿನವರಿಗೆ ವೇದವೇ ಬೇಕಾಗಿಲ್ಲವಾದುದರಿಂದ ಶಿಖೆಯಿಲ್ಲದವರಾಗಿರುತ್ತಾರೆ.) ಹೃದಯವೇ ಕೋಪವೆಂಬ ಪಶುವನ್ನು ಕಟ್ಟುವ ಯೂಪಸ್ತಂಭವು, ಕಾಮವೇ ಎಂದರೆ ಭಗವದನುಭವದ ಆಶೆಯೇ ಹೋಮಕ್ಕೆ ಬೇಕಾದ ತುಪ್ಪವು, ಕೋಪವೇ ವಧಿಸತಕ್ಕ ಪಶುವು, ಶಾಂತಿಯೇ ಬ್ರಾಹ್ಮಣರಿಗೆ ಕೊಡುವ ದಕ್ಷಿಣೆಯು, ವಾಕ್ಕೇ ಎಂದರೆ ಪ್ರಪನ್ನನ ಭಗವದ್ಗುಣಪ್ರಶಂಸಾರೂಪ ವಾಕ್ಕೇ ಋತ್ವಿಕ್ಕು ಹೇಳತಕ್ಕ ಮಂತ್ರಗಳು, ಪ್ರಾಣವೇ ಎಂದರೆ ವಾಯು ಸಂಚಾರಗಳೇ ಉದ್ಗಾತೃವಿನ ಸಾಮಗಾನವು, ಚಕ್ಷುಸ್ಸೇ ಎಂದರೆ ಜ್ಞಾನ ಚಕ್ಷುಸ್ಸೇ ಅಧ್ವರ್ಯುವಿನ ಯಜುರ್ವೇದಾಮ್ನಾನವು, ಮನಸ್ಸೇ ಬಹ್ಮಾ, ಕಿವಿಗಳೇ ಅಗ್ನಿಧ್ರುವು, ದೇಹಾವಸನದವರಿವಿಗೂ ಯಾಗದೀಕ್ಷೆಯು, ಇವನು ಊಟಮಾಡುವದೂ ಪಾನಮಾಡುವದೂ ಸೋಮಪಾನವು, ಹೀಗೆಯೇ ರೂಪಕಮಾಡಿ ಹೇಳಿ ಕೊನೆಗೆ ಯಾಗಕ್ಕೆ ಅವಭೃಥವೇ ಮರಣವೆಂದು ಹೇಳಿ, ಈತನ ಜೀವಮಾನದಲ್ಲೆಲ್ಲಾ ನಡೆಯತಕ್ಕ ಒಂದು ದೊಡ್ಡ ಅಗ್ನಿಹೋತ್ರವೆಂದು ತಿಳಿಸಿ, ಹೀಗೆ ತಿಳಿದ ಜ್ಞಾನಿಯಾದ ಪ್ರಪನ್ನನಿಗೆ ಉಂಟಾಗಬಹುದಾದ ಅರ್ಚಿರಾದಿಗತಿಯನ್ನು ಬೋಧಿಸಿ ಪರಬ್ರಹ್ಮಪ್ರಾಪ್ತಿಯನ್ನು ಫಲವಾಗಿ ಉಪದೇಶಿಸಿರುತ್ತದೆ. ಹಾಗೆಯೇ ಪುರುಷಸೂಕ್ತದ ಬಲನೆಯ ಋಕ್ಕಿನಲ್ಲಿ ಹೇಳಲ್ಪಟ್ಟಿರುತ್ತದೆ:— (೨) "ಯಜ್ಞೇನ ಯಜ್ಞ ಮಯಜಂತ ದೇವಾಃ। ತಾನಿ ಧರ್ಮಾಣಿ ಪ್ರಥಮಾನ್ಯಾಸನ್ । ತೇಹನಾಕಂ ಮಹಿಮಾನ ಸ್ಸಚಂತೇ। ಯತ್ರ ಪೂರ್ವೇ ಸಾಧ್ಯಾಸ್ಸಂತಿ ದೇವಾಃ" ॥ ಮುಕ್ತರಾಗಬೇಕೆಂಬುವರು ಭರನ್ಯಾಸರೂಪಯಜ್ಞದಿಂದ, ಯಜ್ಞೋವೈವಿಷ್ಣುಃ ಎಂದು ಹೇಳಿರುವ ಹಾಗೆ ಸರ್ವಜ್ಞಾರಾಧ್ಯನಾದ ಶ್ರೀ ಮಹಾವಿಷ್ಣುವನ್ನು ಆರಾಧಿಸುತ್ತಾರೆ. ಅಂತವರು ನಿತ್ಯವಿಭೂತಿಯಲ್ಲಿರುವ ಅನಂತ ಗರುಡ ವಿಷ್ವಕ್ಸೇನಾದಿ ನಿತ್ಯಸೂರಿಗಳೊಂದಿಗೆ ಸೇರುವದಕ್ಕಾಗಿ ಅರ್ಚಿರಾದಿಗಳಿಂದ ಸನ್ಮಾನಿಸಲ್ಪಟ್ಟು ದಿವ್ಯ ವೈಕುಂಠವನ್ನು ಹೋಗಿ ಸೇರುವರು ಎಂದು ಹೇಳಲ್ಪಟ್ಟಿರುತ್ತದೆ. (೩) "ಯ ಸ್ಸನಿಧಾಯ ಆಹುತೀರ್ಯೋ

ವೇದೇನ ದಾಶಮರ್ತ್ಯೋರ್ಗೇ ಅಗ್ನಯೇ ಯೋ ನಮಸಾ ಸಸ್ವಧ್ವರಃ" (೪) "ಹವಿ ಗೃಹೀತ್ವಾತ್ಮರೂಪಂ ವಸುರಣ್ಯೇತಿ ಮಂತ್ರತಃ ಜುಹುಯಾತ್ಪ್ರಣವೇನಾಗ್ನಾವಚ್ಯುತಾಖ್ಯೇ ಸನಾತನೇ" ಜೀವಾತ್ಮರೂಪದ ಹವಿಸ್ಸನ್ನು ತೆಗೆದುಕೊಂಡು ಓಂ ಎಂಬ ಪ್ರಣವವನ್ನು ಉಚ್ಚರಿಸಿ, ಅನಾದಿಯಾದ ಅಚ್ಯುತನೆಂಬ ಅಗ್ನಿಯಲ್ಲಿ "ವಸುರಣ್ಯೋವಿಭೂರಸಿ ಎಂಬ ಮಂತ್ರವನ್ನು ಹೇಳಿ ಹೋಮ ಮಾಡತಕ್ಕದ್ದು ಎಂದರೆ ಆತನ ಪಾದದಲ್ಲಿ ಸಮರ್ಪಿಸತಕ್ಕದ್ದೆಂಬ ಭಾವವು. ಮಂತ್ರವು ಯಾವುದೆಂದರೆ :—"ವಸುರಣ್ಯೋ ವಿಭೂರಸಿ, ಪ್ರಾಣೇತ್ವಮಸಿ ಸಂಧಾತಾ, ಬ್ರಹ್ಮ್ರತ್ವಮಸಿ ವಿಶ್ವಸೃಕ್ ತೇಜೋದಾಃ ತ್ವಮಸ್ಯಗ್ನೇಃ ವರ್ಚೋದಾಃ ತ್ವಮಸಿ ಸೂರ್ಯಸ್ಯ ದ್ಯುಮ್ನೋದಾಃ ತ್ವಮಸಿ ಚಂದ್ರಮಸ ಉಪಯಾಮ ಗೃಹೀತೋಸಿ, ಬ್ರಹ್ಮಣೇತ್ವಾ ಮಹಸ ಓಮಿತ್ಯಾತ್ಮಾನಂ ಯುಞ್ಜೀತ" (ತೈ. ಅಂಭಸಿ) ಇದರರ್ಥವೇನೆಂದರೆ :— ಇದು, ನ್ಯಾಸಶಬ್ದದಿಂದ ಹೇಳಲ್ಪಡುವ ಪ್ರಪದನ ಕರಣಮಂತ್ರವು. ವಸುರಣ್ಯಃ ಎಂದರೆ ವಸುಗಳಿಂದ ಪ್ರಾಪ್ಯನು, ಎಂಬುದರಿಂದ ಸರ್ವ ದೇವತೆಗಳಿಗೂ ಉಪಾಸ್ಯನು. ಎಲ್ಲಕ್ಕೂ ಆತ್ಮಾವಾಗಿ ವ್ಯಾಪಿಸಿರುವದರಿಂದ ಸರ್ವಕ್ಕೂ ನಿಯನ್ತಾವಾಗಿ ವಿಭುವು. ಪ್ರಾಣೇತ್ವಮಸಿಸಂಧಾತಾ - ಪ್ರಾಣ ಶಬ್ದದಿಂದ ಹೇಳಲ್ಪಡುವ ಕಾರ್ಯಕಾರಣಗಳ ಸಂಯೋಜಕನು; ವಿಶ್ವಸೃಕ್ - ವಿಶ್ವವನ್ನು ಸೃಷ್ಟಿಸುವವನು; ತ್ವಮಸಿ ತೇಜೋದಾಃ - ತೇಜಸ್ಸನ್ನು ಕೊಡುವನೂ ನೀನೇ, ಕಾಂತಿಯನ್ನು ಕೊಡುವನೂ ನೀನೇ, ಸೂರ್ಯಚಂದ್ರರಿಗೂ ಕಾಂತಿಯನ್ನು ಕೊಡುವನು ನೀನೇ. ನೀನು ಬಹು ಕಾಲಕ್ಕೆ ಸಿಕ್ಕಿರುವಿ, ನಿನ್ನನ್ನು ಶರಣು ಹೊಂದೋಣ; ನಿನ್ನ ಪ್ರಯೋಜನಕ್ಕಾಗಿಯೇ ಭಗವಚ್ಛೇಷತ್ವವನ್ನು ಉಪಪಾದಿಸುವ ಪ್ರಣವೋಚ್ಚಾರಣೆ ಮೂಲಕವಾಗಿ ಆತ್ಮಸಮರ್ಪಣೆಯನ್ನು ಮಾಡತಕ್ಕದ್ದೆಂಬುದು, ಈ ಶ್ರುತ್ಯರ್ಥವು. (೫) "ಸಮಿತ್ಸಾಧನಕಾದೀನಾಂ ಯಜ್ಞಾನಾಂ ನ್ಯಾಸ ಮಾತ್ಮನಃ। ನಮಸಾ ಯೋಕರೋ ದ್ದೇವೇ ಸಸ್ವಧ್ವರ ಇತೀರಿತಃ" ಇದು ಮೂರನೆಯ ಪ್ರಮಾಣದ ಉಪಬ್ರಹ್ಮಣವು. ಸಮಿತ್ತೇ ಸಾಧನವಾಗಿ ವುಳ್ಳೋಣ ಮೊದಲಾದವುಗಳಿಂದ ಕೂಡಿದ ಯಜ್ಞಗಳ ಮಧ್ಯೆ ಆತ್ಮಾವನ್ನು ನ್ಯಾಸಮಾಡುವ ಭರನ್ಯಾಸವನ್ನು ಯಾವನು ಅಖಂಡ ನಮಸ್ಸಿನ ಮೂಲಕ ಸರ್ವೇಶ್ವರನಲ್ಲಿ ಮಾಡುತ್ತಾನೋ ಅವನು ಸಮೀಚೀನವಾದ ಯಜ್ಞವನ್ನು ಮಾಡಿದವನೆಂದು ತಿಳಿಯತಕ್ಕದ್ದು.

ಹೀಗೆ ಭರನ್ಯಾಸವೂ ಒಂದು ಯಾಗರೂಪಧರ್ಮವೆಂದು ಹೇಳಿರುವದರಿಂದಲೂ ಶ್ರುತಿಯಲ್ಲಿ ತ್ರೈವರ್ಣಿಕರಲ್ಲದೆ ಇತರರಾದ ಶೂದ್ರಾದಿಗಳಿಗೆ ಇಂತಹ ವೈದಿಕ

ಇದು ಸರ್ವೇಶ್ವರನೈ ಸರ್ವರುಕ್ಕುಮ್ ಶರಣಮೆನ್ರೋದುಗಿರ ಶ್ವೇತಾಶ್ವತರ ಶ್ರುತಿಬಲತ್ತಾಲೇ ಪರಿಹೃತಮ್. ಇವ್ವರ್ಥಮ್ (೧) "ಸರ್ವಲೋಕ

ಧರ್ಮಗಳಲ್ಲಿ ಅಧಿಕಾರವಿಲ್ಲವೆಂದೂ ಅಪಶೂದ್ರಾಧಿಕರಣದಲ್ಲಿ ಹೇಳಿರುವದರಿಂದಲೂ ಈ ಪ್ರಪತ್ತಿಯಲ್ಲಿ ಸರ್ವರಿಗೂ ಅಧಿಕಾರ ಉಂಟೆಂದು ಹೇಳಿದುದು ಸರಿಯೋ ಎಂದಾಕ್ಷೇಪವು. ಈ ಆಕ್ಷೇಪಕ್ಕೆ ಸಮಾಧಾನವನ್ನು ಮುಂದಿನ ವಾಕ್ಯದಿಂದ ಹೇಳುತ್ತಾರೆ.

ಇದು - ಈ ಆಕ್ಷೇಪವು, **ಸರ್ವೇಶ್ವರನೈ** - ಸರ್ವೇಶ್ವರನನ್ನು, **ಸರ್ವರುಕ್ಕುಮ್** - ಸಮಸ್ತರಿಗೂ, **ಶರಣಮ್** - ಉಪಾಯನು, **ಎನ್ರುಮ್ ಓದುಗಿರ** - ಎಂದು ಪಠಿಸುವ ಶ್ವೇತಾಶ್ವತರ ಶ್ರುತಿಯ, **ಬಲತ್ತಾಲೇ** - ಪ್ರಮಾಣವಾಗಿರುವ ಬಲದಿಂದ, **ಪರಿಹೃತಮ್**-ಪರಿಹಾರವನ್ನು ಹೊಂದಿತು. ಈ ಅಭಿಪ್ರಾಯವನ್ನು ಶ್ರೀಮದಾಚಾರ್ಯರವರು **"ಶ್ರೌತೀಸರ್ವಶರಣ್ಯತಾ ಭಗವತಸ್ಸ್ಮೃತ್ಯಾಪಿ ಸತ್ಯಾಪಿತಾ"** ಎಂಬ ಪ್ರಪತ್ತಿಯೋಗ್ಯಾಧಿಕಾರದ ಸಂಗ್ರಹ ಶ್ಲೋಕದಲ್ಲಿ ಸ್ಥಾಪಿಸಿರುತ್ತಾರೆ. ಇಲ್ಲಿ **ಸರ್ವರುಕ್ಕುಮ್** ಎಂದು ಹೇಳುವಾಗ ಏನೊಂದೂ ಸಂಕೋಚವಿಲ್ಲದೆ ಶೂದ್ರ ಪಂಚಮರಿಗೂ ಕೂಡ ಅನ್ವಯಿಸುವದರಿಂದ ಏನೊಂದೂ ವ್ಯತ್ಯಾಸವಿಲ್ಲದೆ ಸರ್ವರಿಗೂ ಈ ಉಪಾಯಾನುಷ್ಠಾನದಲ್ಲಿ ಅಧಿಕಾರವುಂಟೆಂಬ ಭಾವವು. ಉಪನಿಷತ್ತುಗಳಲ್ಲಿ ತೈತ್ತರೀಯ ಮತ್ತು ಶ್ವೇತಾಶ್ವತರಗಳುಬಹು ವ್ಯಕ್ತವಾಗಿಯೂ ಬಹುಸ್ಫುಟವಾಗಿಯೂ ಉಪದೇಶಿಸುವದರಿಂದ ಅಂತಹ ಪ್ರಮಾಣಕ್ಕೆ ವ್ಯತ್ಯಸ್ತವಾಗಿ ಅರ್ಥಮಾಡುವದೇ ಸಾಧ್ಯವಲ್ಲದುದರಿಂದ **ಶ್ವೇತಾಶ್ವತರ ಶ್ರುತಿ ಬಲತ್ತಾಲೆ** ಎಂದು ಹೇಳಿರುತ್ತಾರೆ. **"ಸರ್ವಸ್ಯ ಶರಣಂ ಸುಹೃತ್"** ಎಂಬುದು ಆ ಶ್ರುತಿವಾಕ್ಯವು. **"ಪ್ರಪತ್ತಿಕ್ಕು ಜಾತ್ಯಾದಿ ನಿಯಮ ಮಿಲ್ಲಾಮೈಯಾಲೇ ಸರ್ವಾಧಿಕಾರತ್ವಂಸಿದ್ಧಮ್"** ಎಂದು ಅಲ್ಲಿ ಸ್ಥಾಪಿಸಿರುತ್ತಾರೆ. ಹಾಗೆಯೇ

ನ ಜಾತಿಭೇದಂ ನ ಕುಲಂ ನ ಲಿಙ್ಗಂ ನ ಗುಣಕ್ರಿಯಾಃ ।
ನ ದೇಶಕಾಲೌ ನಾವಸ್ಥಾಂ ಯೋಗೋಹ್ಯಯಮಪೇಕ್ಷತೇ ॥

ಭರನ್ಯಾಸರೂಪವಾದ ಈ ಯೋಗವಾದರೋ, ಬ್ರಾಹ್ಮಣ ಕ್ಷತ್ರಿಯ ಶೂದ್ರಾದಿ ಜಾತಿ ಭೇದವನ್ನಾಗಲಿ ಉತ್ಕೃಷ್ಟ ನಿಕೃಷ್ಟ ಕುಲಗಳ ವ್ಯತ್ಯಾಸವನ್ನಾಗಲಿ ಸ್ತ್ರೀ ಪುರುಷ ಭೇದವನ್ನಾಗಲಿ, ಗುಣಕ್ರಿಯೆಗಳ ಉತ್ತಮಾಧಮ ಸ್ಥಿತಿಯನ್ನಾಗಲಿ

---

(೧) ರಾಮಾ. ಯುದ್ಧ. ೧೭ ೧೫.

ಶರಣ್ಯಾಯ" (೨) ಸರ್ವಯೋಗ್ಯ ಮನಾಯಾಸ ಮಪ್ರಮಾದ ಮನೂಪ ಮಮ್ । ಪ್ರಪನ್ನಾರ್ತಿ ಹರಂ ವಿಷ್ಣುಂ ಶರಣಂ ಗಂತು ಮರ್ಹಸಿ " ಇತ್ಯಾ

ದೇಶಕಾಲಗಳ ವಿವೇಚನೆಯನ್ನಾಗಲಿ, ಅವಸ್ಥೆಯ ಸಮಾಚೀನತ್ವವನ್ನಾಗಲಿ **ಅಪೇಕ್ಷಿಸುವದಿಲ್ಲವು.**

ಮುಂದೆ ಕೆಲವು ಶ್ರುತ್ಯುಪಬ್ರಹ್ಮಣಗಳನ್ನು ಮೇಲಿನಭಿಪ್ರಾಯದ ಸಮರ್ಥನೆಗಾಗಿ ಉದಾಹರಿಸುತ್ತಾರೆ:—

ಸರ್ವಲೋಕಶರಣ್ಯಾಯ ರಾಘವಾಯ ಮಹಾತ್ಮನೇ । ನಿವೇದಯತ ಮಾಂ ಕ್ಷಿಪ್ರಂ ವಿಭೀಷಣಮುಪಸ್ಥಿತಂ ॥ ಎಂಬುದು ಪೂರಾ ಶ್ಲೋಕವು, **ಸರ್ವಲೋಕ ಶರಣ್ಯಾಯ** - ಅಧಿಕಾರ ಭೇದವೇನೂ ಇಲ್ಲದೆ ದೇವ ಮನುಷ್ಯ ತಿರ್ಯಕ್‌ಸ್ಥಾವರಾದಿ ಸಮಸ್ತಕ್ಕೂ ಮತ್ತು **"ನಿಷಾದಾನಾಂ ನೇತಾ"**ಎಂಬ ದಯಾಶತಕ ಶ್ಲೋಕ ೬೫ರಲ್ಲಿ ಹೇಳಿರುವಹಾಗೆ ನಿಮ್ನೋನ್ನತಿ ಭೇದವಿಲ್ಲದೆ ಸಮಸ್ತರಿಗೂ ಆಶ್ರಯಿಸಲು ಯೋಗ್ಯನಾದ, **ರಾಘವಾಯ** - ಶರಣಾಗತರನ್ನು ರಕ್ಷಿಸುವದರಲ್ಲಿಯೂ ಬೇಡಿದುದನ್ನು ಕೊಡುವದರಲ್ಲೂ ಅತ್ಯಂತ ಪ್ರಸಿದ್ಧಿಯನ್ನು ಹೊಂದಿದ ರಘುವಂಶದಲ್ಲಿ ಅವತರಿಸಿದವನಾದ, **ಮಹಾತ್ಮನೇ** - ಮಹತ್ತಾದ ಕೃಪೆಯಿಂದ ಕೂಡಿದ ಮನಸ್ಸುಳ್ಳವನಾದ, ಅಥವಾ ಮನುಷ್ಯಾವತಾರಿಯಾಗಿರುವ ಪರಮಾತ್ಮನಾದ ಶ್ರೀರಾಮನಿಗೆ, **ವಿಭೀಷಣಂ ಮಾಂ** - ಶ್ರೀರಾಮನನ್ನು ಸಕಲವಿಧ ಬಂಧುತ್ವೇನ ಭಾವಿಸಿದ ವಿಭೀಷಣನಾದ ತನ್ನನ್ನು, ಒಂದು ಮುಹೂರ್ತ ಕೂಡ ಆತನನ್ನು ಬಿಟ್ಟಿರಲಾರೆನಾದುದರಿಂದ ತುಂಬಾ ದಾಹಪೀಡಿತನು ನೀರನ್ನು ಹೇಗೆ ಪಾನ ಮಾಡದಿರಲಾರನೋ ಹಾಗೆ ಇರುವ ತನ್ನನ್ನು, ಅಥವಾ ಧರ್ಮದಲ್ಲೇ ಬುದ್ಧಿ ಇರಬೇಕೆಂದು ಬ್ರಹ್ಮನನ್ನು ಪ್ರಾರ್ಥಿಸಿ ಅಂತಹ ವರವನ್ನು ಪಡೆದವನಾದುದರಿಂದ, ಇದುವರೆಗಿನ ಸ್ಥಿತಿಯು ಅಗ್ನಿಯಲ್ಲಿ ಬಿದ್ದು ತಪಿಸುವಂತಿರುವದರಿಂದ, ಅಂತಹ **ವಿಭೀಷಣಮುಪಸ್ಥಿತಂ** - ವಿಭೀಷಣನಾದ ತನ್ನನ್ನು, ಅಥವಾ ಆ ವರಪ್ರಸಾದದಿಂದುಂಟಾದ ಜ್ಞಾನದಿಂದ ಶ್ರೀರಾಮನು ಸರ್ವಲೋಕ ಶರಣ್ಯನೆಂದು ನಂಬಿರುವ ವಿಭೀಷಣನಾದ ತನ್ನನ್ನು, **ನಿವೇದಯತ** - ಆತನ ಪಾದದಲ್ಲಿ ನೀವುಗಳು ಪುರುಷಕಾರಭೂತರಾಗಿ ಸಮರ್ಪಿಸತಕ್ಕದ್ದು.

(೨) **"ಸರ್ವಯೋಗ್ಯಂ** - ಸಮಸ್ತರಿಗೂ ಶರಣ್ಯನಾಗಿರಲು ಯೋಗ್ಯನು, ದಯಾದಿ ಕಲ್ಯಾಣಗುಣಗಳಿಂದಲೂ, ಸರ್ವಶೇಷಿಯಾಗಿರುವದರಿಂದಲೂ, ಶರಣಾ

---

(೨)

ದ್ಯುಪಬ್ರಹ್ಮಣಙ್ಗಳಾಲುಮ್ (೩) "ತ್ರಯಾಣಾಂ ಕ್ಷತ್ರಿಯಾದೀನಾಂ" ಎನ್ರು ತುಡಙ್ಗಿ ಶೂದ್ರ ಪರ್ಯಂತಙ್ಗಳಾನ ವರ್ಣಂಗಳೈ ಯೆಡುತ್ತು "ಪ್ರಪನ್ನಾನಾಂಚ ತತ್ವತಃ" ಎನ್ರು ಶೊಲ್ಲುಗಿರ ಶ್ರೀ ಸಾತ್ವತ ವಚನತ್ತಾಲುಮ್, "ಕುಯೋನಿಷ್ವಪಿ ಸಂಜಾತೋ ಯಸ್ಸಕೃಚ್ಛರಣಂಗತಃ । ತಂ

ಗತ ಪರಿಪಾಲನಾದಿ ವ್ರತದಿಂದಲೂ ಯೋಗ್ಯನು, ಸರ್ವಯೋಗ್ಯನಾಗಿದ್ದರೂ, ತುಂಬಾ ಕಷ್ಟಸಾಧ್ಯನೋ ಎಂದರೆ, **ಅನಾಯಾಸಂ** - ಏನೊಂದೂ ಆಯಾಸ ವಿಲ್ಲದೆ ಸಿದ್ಧೋಪಾಯನು, ಹಾಗೆ ಸುಲಭನಾದರೂ ಪ್ರಮಾದವೇನಾದರೂ ಉಂಟೋ ಎಂದರೆ, **ಅಪ್ರಮಾದಂ** - ಏನೊಂದೂ ಪ್ರಮಾದವಿಲ್ಲದಿರುವವನು, **ಅನೂಪಮಂ** - ತನಗೆ ಸಮರು ಯಾರೂ ಇಲ್ಲದವನು, ಅಸದೃಶನು, **ಪ್ರಪನ್ನಾರ್ತಿಹರಂ** - ಪ್ರಪನ್ನನ ಕ್ಲೇಶಗಳನ್ನೆಲ್ಲಾ ಅಪಹರಿಸುವವನು ಎಂದರೆ ಹೋಗಲಾಡಿಸುವವನು ಇಂತಹ, **ವಿಷ್ಣುಂ** - ವಿಷ್ಣುವನ್ನು, **ಶರಣಂ ಗಂತುಮರ್ಹಸಿ**- ಶರಣು ಹೊಂದಲು ಯೋಗ್ಯನು, ಇಲ್ಲಿಯೂ **ಸರ್ವಯೋಗ್ಯಂ** ಎಂದಿರುವದರಿಂದ, **ಸರ್ವಸ್ಯಶರಣಂ** ಎಂಬ ಶ್ರುತ್ಯರ್ಥವು ಉಪಬ್ರಹ್ಮಣ ಮಾಡಲ್ಪಟ್ಟಿತು." ಇಲ್ಲಿ **ಅನಾಯಾಸಂ, ಅಪ್ರಮಾದಂ, ಅನೂಪಮಂ** ಎಂಬ ವಿಶೇಷಣಗಳು ವಿಷ್ಣುವಿಗೆ ಸಂಬಂಧಿಸಿದವಾದರೂ, ಅಂತಹ ವಿಷ್ಣುವನ್ನು **ಶರಣಂ ಗಂತುಂ** ಎಂದು ಹೇಳಿರುವದರಿಂದ, ಶರಣಶಬ್ದಕ್ಕೂ ವಿಶೇಷಣಗಳೆಂದು ಭಾವಿಸಿ, ಆ ವಿಷ್ಣುವಿನಲ್ಲಿ ಪ್ರಪದನವೂ ಕೂಡ ಅನಾಯಾಸ, ಅಪ್ರಮಾದ ಅನೂಪಮಂ ಎಂದು ಭಾವಿಸಬಹುದು ; **ಇತ್ಯಾದ್ಯುಪಬ್ರಹ್ಮಣಙ್ಗಳಾಲುಮ್**-ಇವೇ ಮೊದಲಾದ ಉಪಬ್ರಹ್ಮಣಗಳಿಂದಲೂ, **ತ್ರಯಾಣಾಂ ಕ್ಷತ್ರಿಯಾದೀನಾಂ** - ತ್ರಯಾಣಾಂ ಎಂದರೆ ಬ್ರಾಹ್ಮಣ ಕ್ಷತ್ರಿಯ ವೈಶ್ಯರೆಂದು ಎಲ್ಲಿ ಅರ್ಥ ಉಂಟಾಗುತ್ತದೋ ಎಂಬ ಶಂಕಾದಿಂದ, ಕ್ಷತ್ರಿಯಾದೀನಾಂ ಎಂದು ಇಲ್ಲಿ ಹೇಳಲ್ಪಟ್ಟಿರುತ್ತದೆ, ಕ್ಷತ್ರಿಯ ವೈಶ್ಯ ಶೂದ್ರರುಗಳ, **ಎನ್ರು, ತುಡಙ್ಗಿ** - ಎಂದು ಆರಂಭಿಸಿ, ಶೂದ್ರ ಪರ್ಯಂತಗಳಾದ ವರ್ಣಗಳನ್ನು, **ಯೆಡುತ್ತು** - ಸ್ಪಷ್ಟವಾಗಿ ತೋರುವಹಾಗೆ ಮಾಡಿ, **"ಪ್ರಪನ್ನಾನಾಂಚ ತತ್ವತಃ"** "ಯಥಾರ್ಥವಾಗಿಯೂ ಪ್ರಪನ್ನರಾದ," **ಎನ್ರು** - ಎಂಬದಾಗಿ, **ಶೊಲ್ಲುಗಿರ ಶ್ರೀ ಸಾತ್ವತ ವಚನತ್ತಾಲುಮ್** - ಹೇಳುವ ಶ್ರೀ ಸಾತ್ವತ ಸಂಹಿತಾ ವಾಕ್ಯದಿಂದಲೂ, ಇಲ್ಲಿ **ಪ್ರಪನ್ನಾನಾಂ** ಎಂಬುದು ತ್ರಯಾಣಾ ಕ್ಷತ್ರಿಯಾದೀನಾಂ ಎಂಬುವದರೊಂದಿಗೆ ಅನ್ವಯವಾದುದರಿಂದ ಶೂದ್ರರಲ್ಲೂ

(೩) ಶ್ರೀ ಸಾತ್. ೨. ೯.

ಮಾತಾ ಪಿತೃಹಂತಾರ ಮಪಿಪಾತಿಭವಾರ್ತಿಹಾ” ಎನ್ರು ಶೊಲ್ಲುಗಿರ ಸನತ್ಕುಮಾರ ಸಂಹಿತಾ ವಚನತ್ತಾಲುಮ್, ದೃಢೀಕೃತಮ್.

ಪ್ರಪನ್ನತೆಗೆ ಅರ್ಹತೆಯುಂಟೆಂಬುದು ತೋರಿಬರುತ್ತದೆ. ಇದರಿಂದ ಪ್ರಪತ್ತಿಗೆ ಸರ್ವಾಧಿಕಾರತ್ವವು ಸಿದ್ಧವು. **“ಕುಯೋನಿಷ್ವಪಿ** - ಕುತ್ಸಿತ ಯೋನಿಗಳಾದ ಶೂದ್ರ, ನಿಷಾದ, ಪಂಚಮ ಜಾತಿಯಲ್ಲೂ ಕೂಡ, **ಸಂಜಾತಃ** - ಹುಟ್ಟಿದರೂ, **ಸಕೃಚ್ಛರಣಂ ಗತಃ**-ಮುಕ್ತಿದಾಯಕನನ್ನು ಒಂದು ಸಲ ಶರಣು ಹೊಂದುವನಾಗುತ್ತಾನೋ, **ತಂ** - ಅಂತಹ ಪ್ರಪನ್ನನನ್ನು, **ಮಾತಾಪಿತೃ ಹಂತಾರಮಪಿ** - ತಾಯಿತಂದೆಯನ್ನು ಕೊಂದವನಾಗಿದ್ದರೂ, **ಭವಾರ್ತಿಹಾ** - ಸಂಸಾರ ಬಂಧದಿಂದುಂಟಾಗುವ ಕ್ಲೇಶಗಳನ್ನು ಹೋಗಲಾಡಿಸುವ ಭಗವಂತನು, **ಪಾತಿ**-ಸಂರಕ್ಷಿಸುತ್ತಾನೆ” **ಎನ್ರು** - ಎಂಬದಾಗಿ, **ಶೊಲ್ಲುಗಿರ** - ಹೇಳುವ ಸನತ್ಕುಮಾರಸಂಹಿತಾ ವಾಕ್ಯದಿಂದಲೂ, **ದೃಢೀಕೃತಮ್** - ಸಮರ್ಥನೆ ಮಾಡಲ್ಪಟ್ಟಿತು. ಪ್ರಪದನದಲ್ಲಿ ಅಧಿಕಾರವು ಬ್ರಾಹ್ಮಣಾದಿ ತ್ರಿವರ್ಣದವರಿಗೆ ಮಾತ್ರವೇ ಅಲ್ಲದೆ ಶೂದ್ರ ಪಂಚಮರಿಗೂ ಕೂಡ ಉಂಟು. ಇದಕ್ಕೆ ಸರ್ವರಿಗೂ ಅಧಿಕಾರ ಉಂಟೆಂಬುದಕ್ಕೆ ಶ್ರುತಿ ಪ್ರಮಾಣವನ್ನು ಉದಾಹರಿಸಿ, ಅನಂತರ ಶ್ರುತಿಯು ಸರ್ವಾಧಿಕಾರತ್ವವನ್ನೇ ವಿಧಿಸಿತು ಎಂಬುದನ್ನು ಸಮರ್ಥನೆ ಮಾಡಿ ಹೇಳುವದಕ್ಕಾಗಿ ಸಾತ್ವತ ಸನತ್ಕುಮಾರವಾಕ್ಯಗಳನ್ನೂ ಕೂಡ ಉದಾಹರಿಸಿದರು. ಕುಯೋನಿಷು ಎಂದು ಹೇಳಿರುವದರಿಂದ ಇದಕ್ಕೆ ಜಾತ್ಯಾದಿ ಭೇದವೂ ಇಲ್ಲವೆಂದು ಹೇಳಿದುದಲ್ಲದೆ, ಅಧಿಕಾರಿಯು ಎಷ್ಟು ಪಾಪಿಷ್ಠನಾಗಿ ತಾಯಿತಂದೆಗಳನ್ನು ಕೊಂದವನಾದರೂ ರಕ್ಷಿಸಲ್ಪಡುವನೆಂದು ಹೇಳಲ್ಪಟ್ಟಿತು. **ಮಿತ್ರಭಾವೇನ ಸಂಪ್ರಾಪ್ತಂ ನ ತ್ಯಜೇಯಂ ಕಥಂಚನ । ದೋಷೋ ಯದ್ಯಪಿ ತಸ್ಯ ಸ್ಯಾತ್ಸತಾಮೇತದಗರ್ಹಿತಂ** ದೋಷಿಯೂ ಕೂಡ ಶರಣಾಗತನಾದರೆ ರಕ್ಷಿಸಲ್ಪಡುವನೆಂದು ಶ್ರೀ ರಾಮನು ಹೇಳಿರುತ್ತಾನೆ. ಮಹಾ ಪಾಪಿಯಾದ ರಾವಣನೇ ಶರಣಾಗತನಾದರೂ ರಕ್ಷಿಸಲ್ಪಡುವನು ಎಂದು **“ಯದಿವಾ ರಾವಣಸ್ಸ್ವಯಂ”** ಎಂಬುದರ ಮೂಲಕ ತಿಳಿಯಪಡಿಸುತ್ತಾರೆ. ಕುಯೋನಿಯಲ್ಲಿ ಜನಿಸಿದ ಮಹಾಪಾಪಿಯಾದ ಕಾಕನೂ ಕೂಡ ರಕ್ಷಿಸಬೇಕೆಂದು ಪ್ರಪದನ ಮಾಡಿದುದರಿಂದ ರಕ್ಷಿಸಲ್ಪಟ್ಟನು. ಹೀಗೆ ಶರಣಾಗತಿಗೆ ಸರ್ವಾಧಿಕಾರತ್ವ ಉಂಟೆಂಬುದು ಸಿದ್ಧವು. ಆದರೆ ಪ್ರಪನ್ನನು ಭವಾರ್ತಿಪರಿಹಾರಕ್ಕಾಗಿ ಶರಣಾಗತಿಯನ್ನು ಮಾಡುವದರಿಂದ ಆತನು ಯಾರೇ ಆಗಲಿ ಭವಾರ್ತಿಹಾ ಆದ ಶ್ರೀಹರಿಯು ಭವಾರ್ತಿಯಿಂದ ರಕ್ಷಿಸುವನೆಂಬ ಭಾವವು.

ಶೂದ್ರಾದೀನಾಂ ಉಪಾಸನೇಽನಧಿಕಾರಃ ನ ತು ಪ್ರಪತ್ತೌ.

ಆಗೈಯಾಲ್ ಉಪಾಸನಮ್ ತ್ರೈವರ್ಣಿಕಾಧಿಕಾರಮಾಗ ಅಪ ಶೂದ್ರಾಧಿ ಕರಣತ್ತಿಲೇ ಸಮರ್ಥಿತಮಾನಾಲುಮ್, ವೈದಿಕಜ್ಗಳಾನ ಸತ್ಯ ವಚನಾದಿಗಳ್ ಪೋಲೆ, ಪ್ರಪತ್ತಿಯುಮ್ ಸಾಮಾನ್ಯಧರ್ಮ ಮಾಗೈ

ಶೂದ್ರಾದಿಗಳಿಗೆ ಉಪಾಸನದಲ್ಲಿ ಅಧಿಕಾರವಿಲ್ಲವು ಪ್ರಪತ್ತಿಯಲ್ಲಾದರೋ ಹಾಗಲ್ಲವು.

ಈ ಅಧಿಕರಣದಲ್ಲಿ ಶೂದ್ರನಿಗೆ ಬ್ರಾಹ್ಮಣ ಕ್ಷತ್ರಿಯ ವೈಶ್ಯರಹಾಗೆ ಉಪಾಸನದಲ್ಲಿ ಅಧಿಕಾರ ಉಂಟೇ ಇಲ್ಲವೇ ಎಂಬ ವಿಚಾರದಲ್ಲಿ ಶೂದ್ರನಿಗೂ ಅರ್ಥಿತ್ವವೂ ಉಪಾಸನೆಯಲ್ಲಿ ಸಾಮರ್ಥ್ಯವೂ ಇರುವದರಿಂದಲೂ, ಪುರಾಣಾದಿಗಳಿಂದ ಬ್ರಹ್ಮಸ್ವರೂಪಜ್ಞಾನವೂ ಉಂಟಾಗುವದರಿಂದಲೂ, ಉಪನಿಷತ್ತಿನಲ್ಲಿ ಜಾನಶ್ರುತಿರಾಜನನ್ನು, ಓ ಶೂದ್ರನೇ ಎಂದು ಸಂಬೋಧಿಸಿ ರೈಕ್ವರು ಬ್ರಹ್ಮವಿದ್ಯೆಯನ್ನು ಉಪದೇಶಿಸಿರುವದರಿಂದಲೂ, ಶೂದ್ರನಿಗೂ ಅಧಿಕಾರ ಉಂಟೆಂದು ಪೂರ್ವಪಕ್ಷಮಾಡಿ, ಉಪನಯನಮಾಡಿ ಬಂದ ವೇದಾಂತಾಧ್ಯಯನ ಜ್ಞಾನದಿಂದ ಉಪಾಸನಕ್ಕೆ ಅಧಿಕಾರ ಉಂಟಾಗುವದರಿಂದ, ಅಂತಹ ಉಪನಯನವು ಶೂದ್ರನಿಗಿಲ್ಲವಾದುದರಿಂದಲೂ, ಉಪನಿಷತ್ತಿನಲ್ಲಿ ಜಾನಶ್ರುತಿಯನ್ನು ಸಂಬೋಧಿಸಿದುದು ಬ್ರಹ್ಮಜ್ಞಾನವಿಲ್ಲವೇ ಎಂಬ ಶೋಕದ ಮೂಲಕ ಶೂದ್ರನೆಂದಾದುದರಿಂದಲೂ, ಜಾನಶ್ರುತಿರಾಜನು ಶೂದ್ರನಲ್ಲದೆ ಕ್ಷತ್ರಿಯನಾದುದರಿಂದಲೂ, ಶೂದ್ರನಿಗೆ ಬ್ರಹ್ಮವಿದ್ಯೆಯಲ್ಲಿ ಅಧಿಕಾರವಿಲ್ಲವು. ಉಪಾಸನವು ಬ್ರಹ್ಮವಿದ್ಯಾರೂಪವಾದ ಉಪಾಯವಾದುದರಿಂದ ಬ್ರಾಹ್ಮಣ ಕ್ಷತ್ರಿಯ ವೈಶ್ಯರು ಮಾತ್ರವೇ ವೇದಾಧಿಕಾರಿಗಳಾದುದರಿಂದ ಅವರಲ್ಲಿ ಅಧಿಕಾರ ಉಂಟೆಂದೂ, ಶೂದ್ರ ಪಂಚಮರುಗಳಿಗೆ ಇಲ್ಲವೆಂದೂ, ವ್ಯಾಸಸೂತ್ರಗಳ ಅಪಶೂದ್ರಾಧಿಕರಣದಲ್ಲಿ ಹೇಳಿಲ್ಪಟ್ಟಿರುವಾಗ, ಈ ಪ್ರಪದನವೂ ಉಪಾಸನದ ಹಾಗೆ ಮೋಕ್ಷೋಪಾಯವೆಂದು ಶ್ರುತಿಯಲ್ಲಿ ಹೇಳಿರುವದರಿಂದಲೂ. ಅದೂ ಒಂದು ವೈದಿಕ ಕರ್ಮವಾದುದರಿಂದಲೂ ಉಪಾಸನದಹಾಗೆ ತ್ರೈವರ್ಣಿಕರಿಗೆ ಮಾತ್ರವೇ ಇದರಲ್ಲಿ ಅಧಿಕಾರವೆಂದು ಭಾವಿಸುವದು ನ್ಯಾಯವಲ್ಲವೇ ಎಂಬಾಕ್ಷೇಪಕ್ಕೆ ಸಮಾಧಾನವನ್ನು ಹೇಳುತ್ತಾರೆ :-ಆಗೈಯಾಲ್-ಶ್ರುತಿವಾಕ್ಯಬಲದಿಂದಲೂ, ಅದನ್ನು ಸಮರ್ಥಿಸಿ ಹೇಳಿರುವ ಸಂಹಿತಾವಾಕ್ಯಪ್ರಮಾಣಗಳಿಂದಲೂ. ಪ್ರಪ

ಯಾಲೇ ಯಥಾಧಿಕಾರಮ್ ವೈದಿಕ ಮಂತ್ರತ್ತಾಲೆಯಾದಲ್, ತಾಂತ್ರಿಕ ಮಂತ್ರಾದಿಗಳಾಲೆ ಯಾದಲ್ ಸರ್ವರುಕ್ಕುಮ್ ಪ್ರಪತ್ತ್ಯನುಷ್ಠಾನತ್ತುಕ್ಕು ವಿರೋಧಮಿಲ್ಲೈ.

ತ್ತಿಗೆ ಸರ್ವಾಧಿಕಾರತ್ವವು ತೋರಿಬರುವದರಿಂದ, ಉಪಾಸನವು, ತ್ರೈವರ್ಣಿಕಾಧಿಕಾರವಾಗ-ಬ್ರಾಹ್ಮಣ ಕ್ಷತ್ರಿಯ ವೈಶ್ಯ ಮೂರು ವರ್ಣದವರಿಗೆ ಮಾತ್ರವೇ ಅಧಿಕಾರವಿರುವಹಾಗೆ, ವ್ಯಾಸಸೂತ್ರಗಳ ಅಪಶೂದ್ರಾಧಿಕರಣದಲ್ಲಿ ಸಮರ್ಥಿತಮಾನಾಲುಮ್-ಸಾಧಿಸಲ್ಪಟ್ಟಿದ್ದರೂ, ವೈದಿಕಙ್ಗಳಾನ - ವೇದದಲ್ಲಿ ಹೇಳಿರುವ, ಸತ್ಯವಚನಾದಿಗಳ್ ಪೋಲೇ-"ಸತ್ಯಂವದ ಧರ್ಮಂಚರ" (ತೈ. ಶೀಕ್ಷಾವಲ್ಲಿ) ಇತ್ಯಾದಿ ವಾಕ್ಯಗಳಹಾಗೆ, ಪ್ರಪತ್ತಿಯೂ ಕೂಡ, ಸಾಮಾನ್ಯ ಧರ್ಮಮಾಗೈಯಾಲೆ-ಎಲ್ಲಾ ವರ್ಣದವರಿಗೂ ಅನ್ವಯಿಸುವ ಧರ್ಮವಾದುದರಿಂದ, ಯಥಾಧಿಕಾರಮ್-ಅಧಿಕಾರಿಯು ಬ್ರಾಹ್ಮಣಾದಿಯಲ್ಲೊಬ್ಬನೋ ಅಥವಾ ಶೂದ್ರಪಂಚಮನೋ ಅದಕ್ಕನುಗುಣವಾಗಿ, ವೈದಿಕ ಮಂತ್ರತ್ತಾಲೆಯಾದಲ್-ಕಠಶ್ರುತಿಯಲ್ಲಿ ವೇದಪ್ರತಿಪಾದ್ಯವಾದ ದ್ವಯಮಂತ್ರದಿಂದಲೇಯಾಗಲಿ, ತಾಂತ್ರಿಕ ಮಂತ್ರಾದಿಗಳಾಲೇಯಾದಲ್ - ತಾಂತ್ರಿಕ ಮೂಲಕವಾಗಲಿ ಎಂದರೆ ತ್ರಿವರ್ಣದವರಿಗೆ ದ್ವಯಮಂತ್ರಮೂಲಕವಾಗಿ ಶೂದ್ರಾದಿಗಳಿಗೆ "ಶ್ರೀಮನ್ನಾರಾಯಣಸ್ವಾಮಿನ್" ಎಂಬ ತಾಂತ್ರಿಕಾದಿ ಮಂತ್ರದ ಮೂಲಕವಾಗಿ ಎಂಬ ಭಾವವು, ಸರ್ವರಿಗೂ, ಪ್ರಪತ್ತ್ಯನುಷ್ಠಾನತ್ತುಕ್ಕು - ಪ್ರಪದನಾನುಷ್ಠಾನವುಂಟೆಂಬುದರಲ್ಲಿ, ವಿರೋಧಮಿಲ್ಲೈ - ವಿರೋಧವೇನೂ ಇಲ್ಲವು. ಭಕ್ತಿಯೋಗವು ಪ್ರಪದನದಹಾಗೆ ವೇದಪ್ರೋಕ್ತವಾದ ಉಪಾಯವಾಗಿ ತ್ರೈವರ್ಣಿಕರಿಗೆ ಮಾತ್ರವೇ ಅದರಲ್ಲಿ ಅಧಿಕಾರವುಂಟೆಂಬುದು ಶಾರೀಕಮೀಮಾಂಸಾ ಅಪಶೂದ್ರಾಧಿಕರಣದಲ್ಲಿ (೧ ೩ ೯) ವ್ಯಕ್ತವು. ಉಪಾಸನ ಪ್ರಪತ್ತಿಗಳೆರಡೂ ಮೋಕ್ಷೋಪಾಯಗಳು. ಹೀಗಿರುವಾಗ ಉಪಾಸನದಲ್ಲಿ ತ್ರೈವರ್ಣಿಕರಿಗೆ ಮಾತ್ರ ವಧಿಕಾರವೆಂದು ಶ್ರೀವ್ಯಾಸರು ಅಪಶೂದ್ರಾಧಿಕರಣದಲ್ಲಿ ವೇದಪ್ರೋಕ್ತವೆಂದು ಸ್ಥಾಪಿಸಿರುವಾಗ ಪ್ರಪತ್ತಿಗೆ ಮಾತ್ರ ಸರ್ವಾಧಿಕಾರತ್ವವು ಹೇಗೆ? ಎಂದರೆ ಶ್ರುತಿ ಸ್ಮೃತಿ ಪ್ರಮಾಣಗಳ ಬಲದಿಂದ ಸರ್ವಾಧಿಕಾರತ್ವವು ಸಿದ್ಧವೆಂದು ಹಿಂದಿನ ವಾಕ್ಯಗಳಿಂದ ಸ್ಥಾಪಿಸಿದರು. ಹೀಗೆ ಪ್ರಪತ್ತಿಗೆ ಸರ್ವಾಧಿಕಾರತ್ವವನ್ನು ಒಪ್ಪಿಕೊಂಡರೆ ಅನುಷ್ಠಾನವೇನು ಶೂದ್ರಾದಿಗಳ ವಿಷಯದಲ್ಲೂ ಸಮವೇ ಇಲ್ಲವೇ ವ್ಯತ್ಯಸ್ತವೇ ಎಂದರೆ ತ್ರೈವರ್ಣಿಕರಿಗೆ ಮಂತ್ರವು ಯಥಾವತ್ತಾಗಿಯೂ ಇತರರಿಗೆ ತಾಂತ್ರಿಕವಾಗಿಯೂ

ಸ್ವಾಶ್ರಯಣಂ ಸರ್ವ ಸಾಧಾರಣಮಿತಿ ಭಗವದುಕ್ತಿಃ.

ಕಾಕಾದಿಗಳುಮ್ ಪ್ರಪನ್ನರಾಗ ಶಾಸ್ತ್ರಜ್ಞಳಿಲೇ ಕೇಳಾ ನಿನ್ರೋಮ್
(೧) "ಮಾಂಹಿ ಪಾರ್ಥವ್ಯಪಾಶ್ರಿತ್ಯ ಯೇ ಪಿಸ್ಯುಃ ಪಾಪಯೋನಯಃ ।

ಉಪದೇಶ್ಯವೆಂಬ ಭಾವವು. ತಾಂತ್ರಿಕ ಮಂತ್ರಗಳು ಯಾವುವೆಂಬುದು ದ್ವಯಾಧಿಕಾರದಲ್ಲಿ ಪ್ರತಿಪಾದಿಸಲ್ಪಟ್ಟವೆ:—"ಶ್ರೀಮನ್ನಾರಾಯಣಸ್ವಾಮಿನ್ನನನ್ಯ ಶರಣಸ್ತ್ವವ। ಚರಣೌ ಶರಣಂ ಯಾತಸ್ತವೈವಾಸ್ಮ್ಯಹಮುಚ್ಯುತ॥" ಎಂಬ ಪಂಚರಾತ್ರತಂತ್ರದಲ್ಲಿ ಹೇಳಲ್ಪಟ್ಟ ಮಂತ್ರವನ್ನು ದ್ವಯಕ್ಕೆ ಬದಲಾಗಿ ಉಪಯೋಗಿಸಬಹುದು, ಅಥವಾ ಶ್ರೀಮನ್ನಾರಾಯಣಸ್ವಾಮಿರ್ದಾಸೋಹಂ ತವ ತಸ್ಯವೈ। ಪರಮಿಾಪ್ಪುಸ್ತಮೇವಾರ್ಥಮನುಕೂಲೋ ವಿವರ್ಜಯೇ॥ ಪ್ರಾತಿಕೂಲ್ಯಂ ಸುವಿಸ್ರಬ್ಧ ಸ್ಸಂಪ್ರಾರ್ಥ್ಯ ಶರಣಂ ಗತಃ । ವ್ರಜಾಮಿ ಯುಷ್ಮಚ್ಚರಣಂ ತತ್ರೈವಾಹಂ ಮಯಾರ್ಪಿತಂ॥" ಈ ಎರಡು ಶ್ಲೋಕಕ್ಕೂ ದ್ವಯವೆಂದೇ ಹೆಸರು. ತಾಂತ್ರಿಕ ಮಂತ್ರಾದಿ ಎಂಬಲ್ಲಿ ಆದಿ ಪದದಿಂದ "ಮಂತ್ರೈ ರನುಶ್ರವ ಮುಖೇಷ್ವಧಿಗಮ್ಯಮಾನೈ ಸ್ಸ್ವಾಧಿಕ್ರಿಯಾ ಸಮುಚಿತೈ ಯದಿವಾನ್ಯವಾಕ್ಯೈಃ" ಎಂಬ ಶ್ಲೋಕದಲ್ಲಿ ಅನ್ಯವಾಕ್ಯೈಃ ಎಂಬುದರಿಂದ ತೋರಿಬರುವ ಅದೇ ಅರ್ಥಗರ್ಭಿತವಾದ ಇತರ ವಾಕ್ಯಗಳು ಸೂಚಿಸಲ್ಪಟ್ಟವು. ದ್ವಯದಲ್ಲಿ ಹೇಗೋ ಹಾಗೆಯೇ ಮೂಲಮಂತ್ರದ ವಿಷಯದಲ್ಲೂ ಸ್ತ್ರೀ ಶೂದ್ರಾದಿಗಳ ವಿಷಯದಲ್ಲಿ ಸ್ವಲ್ಪ ವ್ಯತ್ಯಾಸದಿಂದ ಉಪದಿಶ್ಯವು

ತನ್ನ ಆಶ್ರಯದಲ್ಲಿ ಸರ್ವರಿಗೂ ಅಧಿಕಾರ ಉಂಟೆಂದು ಭಗವಂತನ ಉಕ್ತಿಯು.

ಮುಂದೆ ತಿರ್ಯಜ್ಜಂತುಗಳಿಗೂ ಅಧಿಕಾರ ಉಂಟೆಂದು ಭಗವದುಕ್ತಿಯನ್ನೇ ಪ್ರಮಾಣವಾಗಿ ಉದಾಹರಿಸಿ ಕೈಮುತಿಕನ್ಯಾಯಪ್ರಕಾರ ಶೂದ್ರರಿಗೆ ಅಧಿಕಾರ ಉಂಟೇಉಂಟೆಂದು ಸ್ಥಾಪಿಸುತ್ತಾರೆ. **ಕಾಕಾದಿಗಳುಮ್**-ಇಂದ್ರನ ಮಗನಾದ ಕಾಕಾಸುರನೇ ಮೊದಲಾದವರೂಕೂಡ, ಇಲ್ಲಿ ಆದಿಶಬ್ದದಿಂದ, ಕಪೋತ ಗಜೇಂದ್ರಾದಿಗಳು ಹೇಳಲ್ಪಟ್ಟರು, **ಪ್ರಪನ್ನರಾಗ**-ಪ್ರಪದನವನ್ನನುಷ್ಠಿಸಿ ಭಗವತ್ಪಾದಾಶ್ರಯವನ್ನು ಮಾಡಿದವರೆಂದು, **ಶಾಸ್ತ್ರಗಳಲ್ಲಿ, ಕೇಳಾನಿನ್ರೋಮ್**-ಗುರುಮುಖೇನ ಕೇಳಿರುತ್ತೇವೆ, (೧) **"ಹೇ ಪಾರ್ಥ**-ಓ ರಾಜರ್ಷಿಯಾದ ಅರ್ಜುನನೇ, **ಸ್ತ್ರಿಯಃ**-

---

(೧) ಗೀ. ೯. ೩೨

ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಽಪಿ ಯಾಂತಿ ಪರಾಂಗತಿಮ್" ಎನ್ರು ಭಗವದಾಶ್ರಯಣ ಮಾತ್ರಮ್ ಸರ್ವಸಾಧಾರಣ ಮಾಗ ಶರಣ್ಯನ್ ತಾನುಮ್ ಅರುಳಿಚ್ಚೆಯ್‌ದಾನ್ ಉಪಾಸನತ್ತುಕ್ಕುಮ್ ಪ್ರಾರಂಭಂ ತ್ರೈವರ್ಣಿಕ ಶರೀರತ್ತಿಲೇಯಾನಾಲುಮ್, ಅವಸಾನಮ್ ಸರ್ವಶರೀರತ್ತಿಲುಮ್

ಸ್ತ್ರೀಗಳಾಗಲಿ, **ವೈಶ್ಯಾಃ** - ಧರ್ಮಾಧರ್ಮಗಳ ವಿವೇಕವಿಲ್ಲದೆ ಯಾವಾಗಲೂ, ವಾಣಿಜ್ಯದಲ್ಲಿ ಮುಳುಗಿದ ವೈಶ್ಯರೂ, **ತಥಾ** - ಹಾಗೆಯೇ, **ಶೂದ್ರಾಃ** - ಆಚಾರ ಶೂನ್ಯರಾದ ಶೂದ್ರರೂ ಸಹ, **ಪಾಪಯೋನಯೋಽಪಿ** - ಪಾಪಜನ್ಮವನ್ನೆತ್ತಿದವರಾದರೂ ಕೂಡ, **ಯೇಸ್ಯುಃ** - ಯಾರು ಆಗುತ್ತಾರೋ, **ತೇಽಪಿ** - ಅವರುಗಳೂ ಕೂಡ, **ಮಾಂ ಹಿ ವ್ಯಪಾಶ್ರಿತ್ಯ** - ನನ್ನನ್ನು ಚನ್ನಾಗಿ ಆಶ್ರಯಿಸಿಯಲ್ಲವೇ **ಪರಾಂಗತಿಂ ಯಾಂತಿ** - ಅತ್ಯುತ್ಕೃಷ್ಟವಾದ ಗತಿಯನ್ನು ಹೊಂದುವರು. ಹೀಗಿರುವಲ್ಲಿ ಬ್ರಾಹ್ಮಣರಾಗಿ ಪುಣ್ಯವಂತರಾಗಿರುವವರು ಸದ್ಗತಿಯನ್ನು ಹೊಂದುವರು ಎಂದು ಹೇಳತಕ್ಕದ್ದೇನಿದೆ, ಕೈಮುತಿಕನ್ಯಾಯಸಿದ್ಧವೆಂದು ಹೇಳಲ್ಪಡುತ್ತದೆ." **ಎನ್ರು** - ಎಂಬದಾಗಿ, **ಭಗವದಾಶ್ರಯಣ ಮಾತ್ರಮ್** ಭಗವಂತನನ್ನು ಆಶ್ರಯಿಸೋಣ ಮಾತ್ರವು, **ಸರ್ವ ಸಾಧಾರಣಮಾಗ** - ಸಮಸ್ತರಿಗೂ ಸಾಧಾರಣವಾದುದೆಂದು ಎಂದರೆ ಸಮಸ್ತ ಅಧಿಕಾರಿಗಳಿಗೂ ಉಂಟೆಂಬುದು, ಇಲ್ಲಿ ಮಾತ್ರ ಶಬ್ದದಿಂದ ಉಪಾಸನವು ಹಾಗಲ್ಲವೆಂಬುದು ಸೂಚಿತವು, ಸ್ತ್ರೀ ಶೂದ್ರಾದಿಗಳಿಗೆ ಉಪಾಸನದಲ್ಲಿ ಅಧಿಕಾರವಿಲ್ಲವು, **ಶರಣ್ಯನ್ ತಾನುಮ್** - ಸಮಸ್ತರಿಗೂ ಉಪಾಯಭೂತನಾಗಿ ರಕ್ಷಕನಾದ ಸರ್ವೇಶ್ವರನು ತಾನೇ, **ಅರುಳಿಚ್ಚೆಯ್‌ದಾನ್** - ದಯಮಾಡಿ ಉಪದೇಶಿಸಿರುತ್ತಾನೆ, ಕಾಕಾದಿ ವೃತಾಂತಗಳು ಶ್ರೀಮದ್ರಾಮಾಯಣದಲ್ಲಿ ಸುಪ್ರಸಿದ್ಧವು. ಸ್ತ್ರೀ ಶೂದ್ರಾದಿಗಳಿಗೆ ಉಪಾಸನ ಪ್ರಾರಂಭದಲ್ಲಿ ಅಧಿಕಾರವಿಲ್ಲವೆಂದೂ ತ್ರೈವರ್ಣಿಕರಿಗೆ ಮಾತ್ರ ಉಂಟೆಂದೂ ಅಪಶೂದ್ರಾಧಿಕರಣದಲ್ಲಿ ಹೇಳಲ್ಪಟ್ಟಿದ್ದರೂ, ಉಪಾಸನವು ಸಿದ್ಧಿಸದೆ ಸ್ತ್ರೀ ಶೂದ್ರಾದಿ ಜನ್ಮಗಳು ಅನಂತರ ಪ್ರಾಪ್ತವಾದರೆ ಅಂತಹ ನೀಚ ಜನ್ಮದಲ್ಲೂ ಪೂರೈಸಿ ಫಲವನ್ನು ಪಡೆದಿರುತ್ತಾರೆ. ಹೀಗೆ ನೀಚ ಜಾತೀಯರೂ ಕೂಡ ಹಿಂದೆ ಭಕ್ತಿಮಾರ್ಗವನ್ನವಲಂಬಿಸಿದವರು, ಅಂತಹ ನೀಚಜಾತಿಯಲ್ಲೂ ಉಪಾಯ ಪೂರ್ತಿಯನ್ನು ಮಾಡಿ ಫಲವನ್ನು ಹೊಂದಿರುತ್ತಾರೆಂಬುದಕ್ಕೆ ಪ್ರಮಾಣವನ್ನು ಮುಂದಿನ ವಾಕ್ಯದಿಂದ ಉದಾಹರಿಸಿ, ಹೀಗಿರುವಾಗ ಅಂತಹ ನೀಚ ಜಾತೀಯರಿಗೆ ಪ್ರಪದನದಲ್ಲಿ ಅಧಿಕಾರವಿಲ್ಲವೆಂದು ಹೇಳುವದು ಸರ್ವಥಾ ಸಾಧ್ಯವಿಲ್ಲವೆಂದು ಹೇಳುತ್ತಾರೆ. **ಉಪಾಸನತ್ತುಕ್ಕುಮ್**

ಕೊಡುಮೆನ್ನುಮಿಡವ್, (೧) ಧರ್ಮವ್ಯಾಧಾದಯೋಪ್ಯನ್ಯೇ ಪೂರ್ವಾಭ್ಯಾಸಾಜ್ಜುಗುಪ್ಸಿತೇ । ವರ್ಣಾವರತ್ವೇ ಸಂಪ್ರಾಪ್ತಾ ಸ್ಸಂಸಿದ್ಧಿಂ ಶ್ರಮಣೀ ಯಥಾ" ಎನ್ರು ಶ್ರೀವಿಷ್ಣುಧರ್ಮತ್ತಿಲೇ ಶೊಲ್ಲಪ್ಪಟ್ಟದು.

ಪ್ರಾರಂಭವ್-ಉಪಾಸನಕ್ಕೆ ಪ್ರಾರಂಭವು, ತ್ರೈವರ್ಣಿಕ ಶರೀರತ್ತಿಲೇಯೂ ನಾಲುವ್ - ಬ್ರಾಹ್ಮಣ ಕ್ಷತ್ರಿಯ ವೈಶ್ಯಜನ್ಮವನ್ನೆತ್ತಿದ ಶರೀರದಿಂದ ಮಾತ್ರವೇ ಆದರೂ, ಅವಸಾನವ್-ಆ ಉಪಾಸನಕ್ಕೆ ಅಂತ್ಯವು, ಸರ್ವಶರೀರತ್ತಾಲುವ್ ಕೊಡುವ್ - ಸ್ತ್ರೀ ಶೂದ್ರಾದಿ ಯಾವ ಜನ್ಮವನ್ನೆತ್ತಿದ ಶರೀರದಿಂದಲೇಯಾಗಲಿ ಸಮಸ್ತರಿಗೂ ಆಗಬಹುದು, ಎನ್ನುಮಿಡವ್ - ಎನ್ನುವ ಸಂದರ್ಭದಲ್ಲಿ ಅದಕ್ಕೆ ಪ್ರಮಾಣವನ್ನು ಉದಾಹರಿಸುತ್ತಾರೆ:—(೧)"ಅನ್ಯೇ-ಇತರರಾದ, ಧರ್ಮವ್ಯಾಧಾದಯೋಪಿ-ಧರ್ಮವ್ಯಾಧನೇ ಮೊದಲಾದವರೂಕೂಡ, ಜುಗುಪ್ಸಿತೇ ತುಂಬಾ ಹೇಯವಾದ, ವರ್ಣಾವರತ್ವೇ - ಕೀಳು ವರ್ಣದ ಜನ್ಮವನ್ನು ಹೊಂದಿದರೂ, ಪೂರ್ವಾಭ್ಯಾಸಾತ್ - ಹಿಂದಿನ ಜನ್ಮದಲ್ಲಿ ಅನುಷ್ಠಿಸಿದ ಭಕ್ತಿಯೋಗದ ಮಹಿಮೆಯಿಂದ, ಸಂಸಿದ್ಧಿಂ - ಮೋಕ್ಷವನ್ನು, ಶ್ರಮಣೀಯಥಾ - ಸನ್ಯಾಸಿನಿಯಾದ ಶಬರಿಯು ಹೇಗೆ ಹೊಂದಿದಳೋ ಹಾಗೆ, ಸಂಪ್ರಾಪ್ತಾಃ - ಹೊಂದಿದವರಾದರು" ಎನ್ರು-ಎಂಬದಾಗಿ ವಿಷ್ಣು ಧರ್ಮದಲ್ಲಿ, ಶೊಲ್ಲಪಟ್ಟದು - ಹೇಳಲ್ಪಟ್ಟಿತು, ಡಬೇಳಾದ ಶಬರಿಯೂ,ವ್ಯಾಧನಾದ ಧರ್ಮವ್ಯಾಧನೂ ಸಹ ಇಂತಹ ಕೀಳುಜನ್ಮವನ್ನು ಕಾರಣಾಂತರದಿಂದ ಹೊಂದಿದ್ದರೂ, ಹಿಂದಿನ ಉತ್ಕೃಷ್ಟಜನ್ಮದಲ್ಲಿ ಪ್ರಾರಂಭಿಸಿದ ಉಪಾಸನೆಯ ಮಹಿಮೆಯಿಂದ ಸರ್ವೇಶ್ವರನ ಧ್ಯಾನದಲ್ಲೇ ನಿರತರಾಗಿ ಮೋಕ್ಷವನ್ನು ಹೊಂದಿದರೆಂಬ ಇತಿಹಾಸಗಳುಂಟೆಂಬ ತಾತ್ಪರ್ಯವು. ಹಿಂದೆ ಉಪಾಸನವನ್ನು ಉತ್ಕೃಷ್ಟಜನ್ಮದಲ್ಲಿ ಆರಂಭಿಸಿದುದರಿಂದ ಅನಂತರ ನಿಕೃಷ್ಟಜನ್ಮ ಬಂದರೂ ಭಗವದಾಶ್ರಯಣವು ಮೋಕ್ಷದಾಯಕವಾಗಿರುವಾಗ, ಪ್ರಪದನಾನುಷ್ಠಾನಮೂಲಕ ಭಗವದಾಶ್ರಯಣವು ಸರ್ವಾಧಿಕಾರವಾಗುವದರಲ್ಲಿ ಸಂದೇಹವಿಲ್ಲವೆಂಬ ತಾತ್ಪರ್ಯವು. ಉಪಾಸನಕ್ಕೆ ತ್ರೈವರ್ಣಿಕರಿಗಲ್ಲದೆ ಶೂದ್ರಾದಿಗಳಿಗೆ ಅಧಿಕಾರವಿಲ್ಲವು; ಆದುದರಿಂದ ಉಪಾಸನಾರಂಭಕ್ಕಾದರೂ ಉತ್ತಮವರ್ಣದಲ್ಲಿ ಜನ್ಮವು ಆವಶ್ಯಕವು; ಪ್ರಪತ್ತಿಗಾದರೋ ಅಂತಹ ನಿಯಮವಿಲ್ಲವು. ಕೀಳು ಜನ್ಮದವರೂ ಅನುಷ್ಠಿಸಿ ಅದೇ ಜನ್ಮದಲ್ಲೇ ಮುಕ್ತಿಯನ್ನು ಹೊಂದಬಹುದು. ಶಬರಿಯು ಸನ್ಯಾಸಿನಿಯೆಂದು

---

(೧) ವಿ. ಧ. ೧೦೨. ೨೯ ಹಿಂದೆ ಪರಿಪೂರ್ಣ ಬ್ರಹ್ಮಾನುಭವಾಧಿಕಾರದ ೧೮೬೩ನೆಯ ಪುಟ ನೋಡಿ.

18.11.02

ಪ್ರಪತ್ತೇಃ ಸರ್ವಾಧಿಕಾರತ್ವಂ, ಆಕಿಂಚಿನ್ಯ ಮೇವ ಸರ್ವತ್ರಾಧಿಕಾರಃ

ಇಪ್ಪಡಿ ಉಪಾಸನಮ್ ತ್ರೈವರ್ಣಿಕರ್ಕ್ಕೇ ಆರಂಭಣೀಯಮಾನಾ ರ್ಪ್ಪೋಲೆ ಪ್ರಪತ್ತಿಯಿಲೊರು ನಿಯಾಮಕತ್ತಾಲೆ ಸಾಮಾನ್ಯ ವಚನ

ಹೇಳಲ್ಪಟ್ಟಿತಲ್ಲಾ ಸನ್ಯಾಸಾಶ್ರಮವು ಸ್ತ್ರೀಯರಿಗುಂಟೋ ಎಂದರೆ ಸನ್ಯಾಸವೃತ್ತಿ ಯಲ್ಲಿದ್ದಳೆಂಬ ಅಭಿಪ್ರಾಯವೇ ವಿನಾ ಸನ್ಯಾಸಾಶ್ರಮವನ್ನು ವಹಿಸಿದಳೆಂಬ ಭಾವ ವಲ್ಲವು. ಉತ್ತಮವರ್ಣದಲ್ಲಿ ಉಪಾಸನವನ್ನಾರಂಭಿಸಿ, ಉಪಾಸನ ನಿಷ್ಪತ್ತಿ ಯಿಲ್ಲದೇ ಹೋಗಿ, ಇನ್ನೊಂದು ನಿಕೃಷ್ಟಜನ್ಮಪ್ರಾಪ್ತವಾದರೆ ಆಗ ಉಪಾಸನ ವನ್ನು ಪೂರ್ತಿಮಾಡಲು ಅಧಿಕಾರ ಉಂಟೋ ಎಂದರೆ ವಿದುರಾದಿಗಳಹಾಗೆ ಯೋಗಾಧಿಕಾರವು ಶಬರಿಗೆ ಇತ್ತೆಂದು ವ್ಯಾಖ್ಯಾತೃಗಳು ಅಭಿಪ್ರಾಯಪಟ್ಟಿರು ತ್ತಾರೆ. ಶ್ರೀ ವಾಲ್ಮೀಕಿ ಮಹರ್ಷಿಯೂ ೭೪ ನೆಯ ಸರ್ಗಾಂತ್ಯ ಶ್ಲೋಕದಲ್ಲಿ "ತತ್ಪುಣ್ಯಂ ಶಬರೀ ಸ್ಥಾನಂ ಜಗಾಮಾತ್ಮಸಮಾಧಿನಾ" ಎಂದು ಆತ್ಮ ಸಮಾಧಿ ಶಬ್ದವನ್ನು ಪ್ರಯೋಗಿಸಿರುತ್ತಾರೆ. ಸಮಾಧಿ ಶಬ್ದದಿಂದ ಅಷ್ಟಾಂಗ ಯೋಗವು ಹೇಳಲ್ಪಟ್ಟಿಲ್ಲವು; ಆಸನಾದಿಗಳಿಲ್ಲದೆ ತದೇಕಧ್ಯಾನವು ಹೇಳಲ್ಪಟ್ಟಿತು. ಆದರೆ ಅದಕ್ಕೆ ಅಂಗವಾಗಿ ಯಜ್ಞಾದಿ ಕರ್ಮಗಳ ಸ್ಥಾನದಲ್ಲಿ ತಮ್ಮ ಗುರುವಾದ ಮತಂಗಮಹರ್ಷಿಯ ಶುಶ್ರೂಷೆಯನ್ನಿಟ್ಟುಕೊಂಡಿದ್ದಳು. ಇಲ್ಲಿ ಹೇಳಿರುವ ಪುಣ್ಯಸ್ಥಾನವು ಪುನರಾವೃತ್ತಿ ರಹಿತವಾದ ಅಕ್ಷಯಲೋಕವಾದ ಪರಮಪದವೇ. ಶಬರೀ ವಿದುರಾದಿಗಳಿಗೆ ನಿರತಿಶಯವಾದ ಜ್ಞಾನದೀಪ್ತಿ ಇದ್ದುದರಿಂದ ಆತ್ಮ ಜ್ಞಾನ ಮೂಲಕ ಪರಮಾತ್ಮ ಧ್ಯಾನದಿಂದ ಮೋಕ್ಷವು ಲಭಿಸಿತು ಎಂಬ ತಾತ್ಪರ್ಯವು.

ಪ್ರಪತ್ತಿಗೆ ಸರ್ವಾಧಿಕಾರತ್ವವುಂಟು ; ಅದಕ್ಕೆ ಬೇಕಾದ ಅಂಗವು ಆಕಿಂಚನ್ಯ ಮಾತ್ರವೇ.

ಇಪ್ಪಡಿ - ಮೇಲೆಹೇಳಿದ ರೀತಿಯಲ್ಲಿ, ಉಪಾಸನವು, ತ್ರೈವರ್ಣಿಕರ್ಕ್ಕೇ - ಬ್ರಾಹ್ಮಣ ಕ್ಷತ್ರಿಯ ವೈಶ್ಯರಿಗೇನೇ, ಆರಂಭಣೀಯ ಮಾನಾರ್ಪ್ಪೋಲೇ ಆರಂಭಿಸಲು ಯೋಗ್ಯವಾದ ಹಾಗೆ, ಪ್ರಪತ್ತಿಯಲ್ಲಿ ಒರು ನಿಯಾಮಕತ್ತಾಲೆ- ಒಂದು ನಿಬಂಧನೆಯ ಪ್ರಕಾರ, ಸಾಮಾನ್ಯ ವಚನತ್ತುಕ್ಕು - ಸಾಮಾನ್ಯ ಪ್ರಮಾಣವಾದ, "ಸರ್ವಸ್ಯ ಶರಣಂ ಸುಹೃತ್" ಎಂಬ ವಾಕ್ಯಕ್ಕೆ, ಸಂಕೋಚ ಮಿಲ್ಲಾಮೈಯಾಲುಮ್ - ಸಂಕೋಚವಿಲ್ಲದೇ ಇರುವದರಿಂದಲೂ, ವಿಶೇಷ

ತ್ತುಕ್ಕು ಸಂಕೋಚಮಿಲ್ಲಾನ್ಮೈಯಾಲುಮ್, ವಿಶೇಷ ವಚನ ಪ್ರಾಬಲ್ಯತ್ತಾಲುಮ್, ಪ್ರಪದನಂ ಸರ್ವರ್ಕ್ಕುಮ್ ಯೋಗ್ಯಮ್. ಅನ ಪಿನ್ಪು ಇದು ತನಕ್ಕು ವಿಶೇಷಿತ್ತು ವೇಣ್ಡುಮಧಿಕಾರಾಂಶಮುಮ್ ಮುನ್ಬೇ ಶೊನ್ನೋಮ್.

ವಚನ ಬಲತ್ತಾಲುಮ್-ಸರ್ವರಿಗೂ ಅಧಿಕಾರ ಉಂಟೆಂದು ವಿಶೇಷಿಸಿ ಹೇಳಿರುವ ಪ್ರಮಾಣಗಳ ಬಲದಿಂದಲೂ, **ಪ್ರಪದನಂ ಸರ್ವರಕ್ಕು ಯೋಗ್ಯಮ್** - ಪ್ರಪದನವು ಎಲ್ಲರಿಗೂ ಯೋಗ್ಯವಾದುದು, ಎಂದರೆ ಪ್ರಪದನದಲ್ಲಿ ಸರ್ವರಿಗೂ ಅಧಿಕಾರ ಉಂಟೆಂಬ ಭಾವವು. ಭಕ್ತಿಮಾರ್ಗದಲ್ಲಿ ಎಂದರೆ ಉಪಾಸನದಲ್ಲಿ ಮಾತ್ರ ಸರ್ವರಿಗೂ ಅಧಿಕಾರವಿಲ್ಲವು. ತ್ರೈವರ್ಣಿಕರಿಗೆ ಮಾತ್ರ ಆರಂಭಮಾಡುವ ಅಧಿಕಾರವು; ಉಪಾಸನ ನಿಷ್ಪತ್ತಿಯು ನಿಕೃಷ್ಟಜನ್ಮದಲ್ಲೂ ಆಗಬಹುದು ಎಂಬ ತಾತ್ಪರ್ಯವು. ಹೀಗೆ ಪ್ರಪದನಕ್ಕೆ ಇಂತಹ ನಿರ್ಬಂಧವು ಯಾವುದೂ ಇಲ್ಲವು. ತ್ರೈವರ್ಣಿಕರಿಗೆ ಮಾತ್ರವೇ ಎಂದಾಗಲಿ, ಶೂದ್ರಾದಿಗಳಿಗೆ ಮಾತ್ರವೇ ಎಂದಾಗಲಿ, ಯಾವ ನಿರ್ಬಂಧವೂ ಇಲ್ಲವೆಂಬ ಭಾವವು. **ಅನಪಿನ್ಪು** - ಪ್ರಪದನವು ಸರ್ವಾಧಿಕಾರವುಳ್ಳದ್ದೆಂದಾದ ನಂತರ, **ಇದು ತನಕ್ಕು** - ಈ ಪ್ರಪದನಕ್ಕೆ, **ವಿಶೇಷಿತ್ತು ವೇಣ್ಡುಮ್ ಅಧಿಕಾರಾಂಶಮ್**-ಮುಖ್ಯವಾಗಿ ಬೇಕಾದ ಅಧಿಕಾರವನ್ನು ಎಂದರೆ ಅಜ್ಞವನ್ನು, **ಮುನ್ಬೇ ಶೊನ್ನೋಮ್**-ಹಿಂದೆ ಪ್ರಪತ್ತಿಯೋಗ್ಯಾಧಿಕಾರದಲ್ಲಿ ಆಕಿಂಚನ್ಯವೇ ಮುಖ್ಯಾಧಿಕಾರವೆಂದು ಹೇಳಿದೆವು. ಹಿಂದೆ ಪ್ರಪತ್ತಿಯೋಗ್ಯಾಧಿಕಾರದಲ್ಲಿ ಹೇಳಿರುವದು ಉಪಾಸನಕ್ಕೆ ಅರ್ಹತೆಯಿಲ್ಲದವರಿಗೆ ಪ್ರಪತ್ತ್ಯಧಿಕಾರವೆಂದು ತೋರಿಬರುವದರಿಂದಲೂ, ತ್ರೈವರ್ಣಿಕತ್ವವು ಉಪಾಸನಕ್ಕೆ ಅಧಿಕಾರವೆಂದು ಹೇಳಿರುವದರಿಂದಲೂ, ತ್ರೈವರ್ಣಿಕರಿಗೆ ಪ್ರಪತ್ತಿಯಲ್ಲಿ ಅಧಿಕಾರವಿಲ್ಲವೆಂದಾಗುತ್ತದೋ ಎಂಬ ಸಂದೇಹ ಉಂಟಾಗಬಹುದು. ಆಕಿಂಚನ್ಯವೂ ಮುಖ್ಯವೆಂದು ಹೇಳುವದರಿಂದ ಆಕಿಂಚನ್ಯವೂ ತ್ರೈವರ್ಣಿಕತ್ವವೂ ಇದ್ದುದಾದರೆ ಅಧಿಕಾರವೆಂದು ಊಹಿಸಿದರೆ, ಆಗ ಶೂದ್ರಾದಿಗಳಿಗೆ ಅಧಿಕಾರವಿಲ್ಲವಾಗುತ್ತದೆ. ಇದೂ ಅಲ್ಲದೆ ಸರ್ವರಿಗೂ ಅಧಿಕಾರ ಉಂಟೆಂದು ಹೇಳಿಬಿಟ್ಟರೆ, ಉಪಾಸನಾದಿಗಳಿಗೆ ಸಾಮರ್ಥ್ಯವೂ ವಿಳಂಬಾಸಹತ್ವಾದಿಗಳೂ ಇರುವ ಮೋಕ್ಷಾರ್ಥಿಗೂ ಅಧಿಕಾರ ಉಂಟೆಂದಾಗುತ್ತದೆ. ಇತ್ಯಾದಿ ಎಲ್ಲಾ ಶಂಕಾಗಳಿಗೂ ಸಮಾಧಾನಾರ್ಥವಾಗಿ ಒಂದು ಕಾರಿಕೆಯನ್ನು ಮುಂದೆ ಅನುಗ್ರಹಿಸುತ್ತಾರೆ—ತ್ರೈವರ್ಣಿಕನಾಗಲಿ ತ್ರೈವರ್ಣಿಕನಲ್ಲದೇ ಇರಲಿ, ಸರ್ವರಿಗೂ ಪ್ರಪತ್ತಿಯಲ್ಲಿ ಅಧಿಕಾರ ಉಂಟು;

ಕಾ. ಅತಸ್ತ್ರೈವರ್ಣಿಕತ್ವಾದೇ ರ್ಭಾವೋऽಭಾವೋಽಪಿ ಕಸ್ಯಚಿತ್ ।
ನಾಧಿಕಾರಃ ಪ್ರಪತ್ತೇಸ್ಸ್ಯಾದಾಕಿಂಚನ್ಯ ಮನಾಶ್ರಿತಃ ॥೩೬॥

ಹಾಗೆ ಅಧಿಕಾರವಿರಲು ಮುಖ್ಯವಾದ ಅಂಗವು, ಆಕಿಂಚನ್ಯವು; ಸಾಮರ್ಥ್ಯ ವಿಳಂಬಾ ಸಹತ್ವಾದಿಗಳಿರುವ ಭಕ್ತಿಯೋಗನಿಷ್ಠನು ಸಕಿಂಚನನಾಗಿ ಆಕಿಂಚನ್ಯ ವಿಲ್ಲದವನಾದುದರಿಂದ, ಆತನು ಪ್ರಪತ್ತಿಗೆ ಅಧಿಕಾರಿಯಲ್ಲವು, ಎಂಬೀ ಅರ್ಥ ಗರ್ಭಿತವಾದ ಕಾರಿಕೆಯನ್ನನುಗ್ರಹಿಸುತ್ತಾರೆ.

ಕಾ. ಅರ್ಥವು– **ಅತಃ**-ಹೀಗೆ ಮೇಲೆ ಉಪಪಾದಿಸಿದ ರೀತಿಯಲ್ಲಿ ಪ್ರಪತ್ತಿಗೆ ಸರ್ವಾಧಿಕಾರತ್ವವು ನಿರ್ಣಯಿಸಲ್ಪಟ್ಟಿರುವದರಿಂದ, ಅಥವಾ ಅಧಿಕಾರಕ್ಕೆ ಯಾವ ವಿಧ ಸಂಕೋಚವೂ ಇಲ್ಲದಿರುವದರಿಂದ, **ತ್ರೈವರ್ಣಿಕತ್ವಾದೇಃ** - ಬ್ರಹ್ಮ ಕ್ಷತ್ರಿಯ ವೈಶ್ಯಜಾತಿಯೇನು, ಆದಿಶಬ್ದದಿಂದ ಬ್ರಹ್ಮಚರ್ಯ ಗೃಹಸ್ಥವಾನಪ್ರಸ್ಥಸನ್ಯಾಸಾಶ್ರಮವೇನು, ಮತ್ತು ಸ್ತ್ರೀ ಪುರುಷನಾಗಿರುವದೇನು ಇವುಗಳ, **ಭಾವಃ**-ಸದ್ಭಾವಃ, ಇರೋಣವೂ, **ಅಭಾವೋಽಪಿ** – ಇಲ್ಲದಿರೋಣವೂ ಕೂಡ, **ಕಸ್ಯಚಿತ್** - ಯಾವ ಚೇತನಿಗೇ ಆಗಲಿ, **ಆಕಿಂಚನ್ಯ ಮನಾಶ್ರಿತಃ**-ಆಕಿಂಚನ್ಯವನ್ನು ಅವಲಂಬಿಸದೇ ಇರುವನಾಗಿ,ಎಂದರೆ ಆಕಿಂಚನ್ಯವಿಲ್ಲದುದಾದರೆ, ಆ ಕಾರಣದಿಂದ, **ಪ್ರಪತ್ತೇಃ** - ಪ್ರಪದನಕ್ಕೆ, **ಅಧಿಕಾರಃ ನಸ್ಯಾತ್**–ಅಧಿಕಾರವಾಗುವದಿಲ್ಲವು. ಬ್ರಾಹ್ಮಣಾದಿ ಯಾವಜಾತಿಯವನೇ ಆಗಲಿ, ಬ್ರಹ್ಮಚರ್ಯಾದಿ ಯಾವ ಆಶ್ರಮುವನ್ನು ವಹಿಸಿದವನೇ ಆಗಲಿ, ಈ ಜಾತಿಯವನಾಗದೆ ಶೂದ್ರ ಪಂಚಮ ಯಾವ ಜಾತಿಯವನೇ ಆಗಲಿ, ಪುರುಷನೇ ಆಗಲಿ, ಸ್ತ್ರೀಯೇ ಆಗಲಿ, ಆಕಿಂಚನ್ಯವಿಲ್ಲದೇ ಹೋದರೆ ಆತನು ಪ್ರಪತ್ತಿಗೆ ಅಧಿಕಾರಿಯಾಗುವದಿಲ್ಲ ಎಂಬುದು ಈ ಶ್ಲೋಕಾರ್ಥವು. ಇದರಿಂದ ಆಕಿಂಚನ್ಯವಿದ್ದುದಾದರೆ ಸರ್ವರೂ ಅಧಿಕಾರಿಗಳೇ ಎಂಬ ಭಾವವು. ಭಕ್ತಿಯೋಗ ನಿಷ್ಠನು ಆಕಿಂಚನನಲ್ಲವಾದುದರಿಂದ ಪ್ರಪತ್ತಿಗೆ ಅಧಿಕಾರಿಯಲ್ಲವು. ಈ ಸಂದರ್ಭದಲ್ಲಿ,

ನ ಜಾತಿಭೇದಂ ನ ಕುಲಂ ನ ಲಿಙ್ಗಂ ನ ಗುಣ ಕ್ರಿಯಾಃ ।
ನ ದೇಶಕಾಲೌ ನಾವಸ್ಥಾಂ ಯೋಗೋಹ್ಯಯ ಮಪೇಕ್ಷತೇ॥

ಎಂಬ ಶ್ಲೋಕವನುಸಂಧೇಯವು. ಪ್ರಪದನರೂಪವಾದ ಈ ಯೋಗವು ಜಾತಿ ಕುಲಗಳ ಉತ್ಕೃಷ್ಟತೆ ನಿಕೃಷ್ಟತೆಯನ್ನಾಗಲಿ ಸ್ತ್ರೀಪುರುಷ ಭೇದವನ್ನಾಗಲಿ ಗುಣಕ್ರಿಯೆಗಳ ಉತ್ತಮಾಧಮ ಸ್ಥಿತಿಯನ್ನಾಗಲಿ, ದೇಶಕಾಲಾವಸ್ಥೆಗಳ ಯೋಗ್ಯಾಯೋಗ್ಯತೆಗಳನ್ನಾಗಲಿ ಅಪೇಕ್ಷಿಸುವದಿಲ್ಲವು. ಇನ್ನು ಯಾವುದನ್ನು ಅಪೇಕ್ಷಿಸುತ್ತದೆ ಎಂದರೆ ಆಕಿಂಚನ್ಯವನ್ನು ಮಾತ್ರವೇ ಅಪೇಕ್ಷಿಸುತ್ತದೆ.

ಇವ್ವರ್ಥತ್ತೈ (೧) "ಕುಲಙ್ಗಳಾಯ ಈರಿರಂಡಿ ಲೊನ್ರಿಲುಮ್ ಪಿರನ್ದಿಲೇನ್" ಎನ್ಗಿರ ಪಾಟ್ಟಿಲುಮ್,(೨) "ಜನಿತ್ವಾಹಂ ವಂಶೇ" ಎನ್ಗಿರ ಶ್ಲೋಕತ್ತಿಲುಮ್, ಕಣ್ಡುಕೊಳ್ವದು.

ಇವ್ವರ್ಥತ್ತೈ - ಈ ಅಭಿಪ್ರಾಯವನ್ನು ತಿರುಮಳಿಶೈಯಾಳ್ವಾರವರು ರಚಿಸಿದ ತಿರುಚ್ಚಂದವಿರುತ್ತದ (೧) "ಕುಲಙ್ಗಳಾಯ" ಎಂಬುವ ಪಾಶುರದಲ್ಲೂ (೨) " ಜನಿತ್ವಾಹಂ ವಂಶೇ " ಎನ್ನುವ ಯಾಮುನೇಯರ ಸ್ತೋತ್ರರತ್ನದ ಶ್ಲೋಕದಲ್ಲೂ, ಕಣ್ಡುಕೊಳ್ವದು - ತಿಳಿದುಕೊಳ್ಳತಕ್ಕದ್ದು. " ಕುಲಙ್ಗಳಾಯ" ಎಂಬ ಪೂರಾ ಪಾಶುರಕ್ಕೂ ಅದರ ಅರ್ಥಕ್ಕೂ ಉತ್ತರಕೃತ್ಯಾಧಿಕಾರದ ೧೨೭೧ನೆಯ ಪುಟವನ್ನು ನೋಡಿ. ಅಲ್ಲಿ ಆಕಿಂಚನ್ಯವು ಪ್ರದರ್ಶಿಸಿಸಲ್ಪಟ್ಟಿರುತ್ತದೆ. ಶ್ರೀ ಯಾಮುನೇಯರ ಶ್ಲೋಕವು ಯಾವುದೆಂದರೆ—

ಜನಿತ್ವಾಹಂ ವಂಶೇ ಮಹತಿ ಜಗತಿ ಖ್ಯಾತ ಯಶಸಾಂ ।
ಶುಚೀನಾಂ ಯುಕ್ತಾನಾಂ ಗುಣ ಪುರುಷ ತತ್ತ್ವ ಸ್ಥಿತಿವಿದಾಂ ॥
ನಿಸರ್ಗಾದೇವ ತ್ವಚ್ಚರಣ ಕಮಲೈಕಾಂತ ಮನಸಾಂ ।
ಅಧೋಧಃ ಪಾಪಾತ್ಮಾ ಶರಣದ ನಿಮಜ್ಜಾಮಿ ತಮಸಿ ॥೬೧॥

ಇದು ವಿಶೇಷವಾದ ಆಕಿಂಚನ್ಯವನ್ನು ಪ್ರದರ್ಶಿಸುವ ಶ್ಲೋಕವು. **ಹೇ ಶರಣದ** - ಅನನ್ಯಗತಿಕರಾಗಿಯೂ ಸಕಿಂಚನರಾಗಿರುವವರಿಗೆ ಅವರವರ ಅಧಿಕಾರಾನುಗುಣವಾಗಿ ಮೋಕ್ಷೋಪಾಯವನ್ನು ದಯಪಾಲಿಸುವವನೇ, **ಜಗತಿ**-ಈ ಲೋಕದಲ್ಲಿ, **ಖ್ಯಾತ ಯಶಸಾಂ**-ಆಗಮೋತ್ಥಜ್ಞಾನವುಳ್ಳವರೆಂದು ಪ್ರಸಿದ್ಧಿಯನ್ನು ಹೊಂದಿದ, **ಶುಚೀನಾಂ** - ಅಂತರಿಂದ್ರಿಯ ಬಾಹ್ಯೇಂದ್ರಿಯಗಳ ಪಾರಿಶುದ್ಧ್ಯವನ್ನು ಹೊಂದಿದ, ಬರೀ ಜಲದಿಂದ ಶುದ್ಧಿ ಹೊಂದಿದವರೆಂಬರ್ಥವಲ್ಲವು, ಅಥವಾ ಕರ್ಮಯೋಗದಿಂದ ಪಾಪಗಳನ್ನು ಕಳೆದುಕೊಂಡು ಪರಿಶುದ್ಧರಾದ, **ಯುಕ್ತಾನಾಮ್**-ಆತ್ಮಾವಲೋಕನಕ್ಕೆ ಯೋಗ್ಯರಾದ, ಎಂದರೆ ಜ್ಞಾನಯೋಗನಿರತರಾದ ಅಥವಾ ನಿನ್ನ ಅನುಭವದ ವಿಶ್ಲೇಷವಿಲ್ಲದಿರುವ, **ಗುಣಪುರುಷ ತತ್ತ್ವಸ್ಥಿತಿವಿದಾಂ** - ಪ್ರಕೃತಿಪುರುಷ ಇವುಗಳ ಸ್ವರೂಪ ಯಾಥಾತ್ಮ್ಯವನ್ನು ಚೆನ್ನಾಗಿ ತಿಳಿದಿರುವ, **ನಿಸರ್ಗಾದೇವ** - ಸ್ವಾಭಾವಿಕವಾಗಿಯೇ, **ತ್ವಚ್ಚರಣ ಕಮಲೈಕಾಂತ ಮನಸಾಂ**-ನಿನ್ನ (ಸರ್ವೇಶ್ವರನ) ಚರಣಕಮಲದಲ್ಲೊಂದರಲ್ಲೇ ಸಕ್ತವಾದ ಮನಸ್ಸುಳ್ಳ, ಹೀಗೆ ಭಕ್ತಿಯೋಗ ನಿಷ್ಠರ, **ಮಹತಿ ವಂಶೇ** – ಘನವಾದ ವಂಶದಲ್ಲಿ

(೧) ತಿರುಚ್ಚಂದವಿರುತ್ತಂ. ೯೦. (೨) ಆಳ. ಸ್ತೋ. ೬೧,

ಆಗೈಯಾಲ್ ಶರಣ್ಯ ಶರಣಾಗತಿ ಜ್ಞಾನಮುಮ್, ಆಕಿಂಚನ್ಯಾದಿಗಳು ಮುಡೈಯ ಸರ್ವಜಾತಿಯರ್ಕ್ಕುಮ್ ಪ್ರಪತ್ತ್ಯಧಿಕಾರಮ್ ಸಿದ್ಧಮ್.

ಅಹಂ - ದುರ್ಭಗನಾದ ನಾನೊಬ್ಬ ಮಾತ್ರ, ಜನಿತ್ವಾ - ಹುಟ್ಟಿ, ಪಾಪಾತ್ಮಾ- ಪಾಪಗಳಲ್ಲೇ ಬುದ್ಧಿಯುಳ್ಳವನಾಗಿ, ಅಥವಾ ಪಾಪವೇ ಸ್ವರೂಪ ಸ್ವಭಾವಗಳಾಗಿ ಉಳ್ಳವನಾಗಿ, ತಮಸಿ - ಅಜ್ಞಾನ ವಿಪರೀತಜ್ಞಾನರೂಪ ಸಮುದ್ರದಲ್ಲಿ, ಅಧೋಧಃ - ಕೆಳಕೆಳಗೆ ಹೋಗುತ್ತಾ, ನಿಮಜ್ಜಾಮಿ - ಮುಳುಗಿರುವೆನು, ಇಂತಹ ಮಹಾಜ್ಞಾನನಿಧಿಗಳ ವಂಶದಲ್ಲಿ ಹುಟ್ಟಿರುವಾಗಲೇ ಉಪಾಯಾವಲಂಬನವನ್ನುಮಾಡಿ ಈ ಜ್ಞಾನ ಸಾಗರವನ್ನು ದಾಟದೇ ಆ ಸಮುದ್ರದಲ್ಲೇ ಮುಳುಗಿರುತ್ತೇನೆ; ಹೀಗೆ ಯಾವುದೊಂದೂ ಗತಿಯಿಲ್ಲದೆ ಆಕಿಂಚನನಾದ ನನಗೆ, ಹೇ ಶರಣದ ನೀನೇ ಪರಮಕೃಪಯಾ ಒಂದುಪಾಯವನ್ನು ತೋರಿ ಸಿದ್ಧೋಪಾಯನಾಗಿ ಈ ಸಮುದ್ರದಲ್ಲಿ ಮುಳುಗಿರುವ ನನ್ನನ್ನು ಕೃಪಯಾ ಕೈಹಿಡಿದು ಎತ್ತತಕ್ಕದ್ದೆಂದು ತಮ್ಮ ಆಕಿಂಚನ್ಯವನ್ನು ಪ್ರದರ್ಶಿಸಿರುತ್ತಾರೆ. ಮುಂದಿನ ಶ್ಲೋಕವಾದ "ಅಮರ್ಯಾದಃ" ಎಂಬಲ್ಲೂ ಕೂಡ ಆಕಿಂಚನ್ಯವೇ ಹೇಳಲ್ಪಟ್ಟಿರುತ್ತದೆ. "ಶರಣದ" ಎಂದು ಸಂಬೋಧನೆಯಿರುವದರಿಂದ ಸರ್ವಾಧಿಕಾರತ್ವವೂ ಸೂಚಿತವು. ಆಕಿಂಚನ್ಯಮಾತ್ರ ಆವಶ್ಯಕವೆಂಬ ಭಾವವು. ಮಹಾಕುಲ ಪ್ರಸೂತತ್ವವೂ ಕೂಡ ಕಾರ್ಯಕಾರಿಯಾಗುವದಿಲ್ಲವೆಂಬ ಭಾವವು. ಉಪಾಸನಾದಿಗಳಿಗೆ ತಾನು ಅಶಕ್ತನೆಂಬ ಆಕಿಂಚನ್ಯಮಾತ್ರವೇ ಅಧಿಕಾರವೆಂದು ತಾವು ಇಷ್ಟುದೂರ ಉಪಪಾದಿಸಿದ ಅಭಿಪ್ರಾಯವನ್ನೇ ನಿಗಮನಮಾಡಿ ಹೇಳುತ್ತಾರೆ—

ಆಗೈಯಾಲ್ - ಹೀಗೆ ತ್ರೈವರ್ಣಿಕತ್ವ ಅತ್ರೈವರ್ಣಿಕತ್ವಾದಿಗಳು ಯಾವುದೂ ಪ್ರಪತ್ತಿಗೆ ಅಧಿಕಾರವಿಲ್ಲದುದರಿಂದ, ಶರಣ್ಯ ಶರಣಾಗತಿ ಜ್ಞಾನಮುಮ್ - ಸರ್ವರಿಗೂ ಉಪಾಯಭೂತನಾಗಿರುವ ಸರ್ವೇಶ್ವರನಲ್ಲಿ ಮಾಡುವ ಶರಣಾಗತಿಯ ಜ್ಞಾನವನ್ನೂ, ಆಕಿಂಚನ್ಯಾದಿಗಳುಮ್ - ಆಕಿಂಚನ್ಯವೇ ಮೊದಲಾದವುಗಳನ್ನೂ, ಉಡೈಯ - ಹೊಂದಿರುವ, ಸರ್ವಜಾತಿಯರ್ಕ್ಕುಮ್-ಪಂಚಮಾದಿ ಸಮಸ್ತ ಜಾತಿಯುವರಿಗೂ, ಪ್ರಪತ್ತಿಯಲ್ಲಿ ಅಧಿಕಾರವು, ಸಿದ್ಧಮ್ - ಸ್ಥಾಪಿತವು. ಈ ನಿಗಮನ ವಾಕ್ಯದಲ್ಲಿ ಸಮಸ್ತಜಾತಿಯವರಿಗೂ ಅಧಿಕಾರವೆಂದು ಸರ್ವಾಧಿಕಾರವನ್ನು ಸ್ಥಾಪಿಸಿದರೂ, ಅಂಗಾಂಗಿ ಸಮೇತ ಶರಣಾಗತಿಯನ್ನು ಶರಣ್ಯನಲ್ಲಿ ಅನುಷ್ಠಿಸಿದರೇನೇ ಪ್ರಪತ್ತಿ ಪೂರ್ಣವಾಗುತ್ತೆಯೇ ವಿನಾ, ಪ್ರಧಾನಾಜ್ಗವಾದ ಆಕಿಂಚನ್ಯ ಒಂದು ಮಾತ್ರವಿದ್ದುಬಿಟ್ಟರೆ ಶರಣಾಗತಿಯಾಗುವದಿಲ್ಲ

ಅಥ ಪ್ರಪತ್ತಿ ಸ್ವರೂಪ ಶಙ್ಕಾ ಪರಿಹಾರಃ

ಇವ್ವುಪಾಯ ಸ್ವರೂಪತ್ತೈ ಪತ್ತ "ನಾರಾಯಣಂ ಸಲಕ್ಷ್ಮೀಕಂ ಪ್ರಾಪ್ತುಂ ತಚ್ಚರಣದ್ವಯಮ್। ಉಪಾಯ ಇತಿ ವಿಶ್ವಾಸೋ ದ್ವಯಾರ್ಥ ಶ್ಶರಣಾಗತಿಃ" ॥ ಎಙ್ಗರಭಿಯುಕ್ತರ್ ಪಾಶುರಮುಮ್, ಅಧಿಕಾರ ಕೋಟಿಯಿಲುಮ್ ಅಙ್ಗ ಕೋಟಿಯಿಲುಮ್ ನಿರ್ಕಿರ ವಿಶ್ವಾಸತ್ತಿನುಡೈಯ ಪ್ರಾಧಾನ್ಯಮ್ ಶೊಲ್ಲುಗೈಕ್ಕಾಗವತ್ತನೈ.

ವೆಂಬಭಿಪ್ರಾಯವನ್ನು ಸೂಚಿಸುವದಕ್ಕಾಗಿ "ಶರಣ್ಯ ಶರಣಾಗತಿ ಜ್ಞಾನಮುಮ್" ಎಂಬ ಪ್ರಯೋಗವು.

ಹೀಗೆ ಪ್ರಪತ್ತ್ಯಧಿಕಾರದ ಸ್ವರೂಪವ್ಯವಸ್ಥೆಯನ್ನು ಮಾಡಿ, ಮುಂದೆ ಪ್ರಪತ್ತಿಸ್ವರೂಪವಾದ ಅಂಗಿಯಲ್ಲುಂಟಾಗುವ ಶಂಕಾಗಳನ್ನು ಪರಿಹರಿಸುತ್ತಾರೆ

ಪ್ರಪತ್ತಿ ಸ್ವರೂಪದಲ್ಲಿ ಉಂಟಾಗುವ ಶಙ್ಕಾಗಳನ್ನು ಪರಿಹರಿಸುತ್ತಾರೆ.

ಸರ್ವೇಶ್ವರನು ನಮ್ಮನ್ನು ರಕ್ಷಿಸಿಯೇ ರಕ್ಷಿಸುವನೆಂಬ ಮಹಾ ವಿಶ್ವಾಸವೇ, ಶರಣಾಗತಿಯೇ, ಅಥವಾ ಆತನ ಚರಣದ್ವಂದವೇ ನಮಗೆ ಸರ್ವವಿಧದಲ್ಲೂ ತಾರಕವೆಂಬ ಮಹಾ ವಿಶ್ವಾಸವೇ ಶರಣಾಗತಿಯೇ ಎಂಬ ಅಭಿಪ್ರಾಯವನ್ನು ಸರಿಯಾಗಿ ತಿಳಿದುಕೊಳ್ಳದೇ ಮಹಾ ವಿಶ್ವಾಸವಾದ ಅಙ್ಗವನ್ನು ಅಙ್ಗಿಯಾದ ಶರಣಾಗತಿಯೆಂದು ಕೆಲವರು ಭಾವಿಸುವರು. ಇದು ಸರಿಯಾದ ಅಭಿಪ್ರಾಯವಲ್ಲವೆಂದೂ, ಮಹಾ ವಿಶ್ವಾಸವೇ ಶರಣಾಗತಿಯೆಂದು ಹೇಳಿದುದರ ಸರಿಯಾದಭಿಪ್ರಾಯವೇನೆಂಬುದನ್ನೂ ತಿಳಿಸುತ್ತಾರೆ.

ಇವ್ವುಪಾಯಸ್ವರೂಪತ್ತೈ - ಈ ಪ್ರಪದನವೆಂಬ ಉಪಾಯದ ಸ್ವರೂಪವನ್ನು ಕುರಿತ, ಇದು ಅಭಿಯುಕ್ತರ್ ಪಾಶುರಮುಮ್ ಎಂಬುದರೊಂದಿಗೆ ಅನ್ವಯವು, (೧) "ಸಲಕ್ಷ್ಮೀಕಂ-ಲಕ್ಷ್ಮಿಯೊಂದಿಗೆ ಸದಾ ಇರುವ, ನಾರಾಯಣನನ್ನು. ಪ್ರಾಪ್ತುಂ-ಹೊಂದಲು, ತಚ್ಚರಣದ್ವಯಮ್- ಆ ಲಕ್ಷ್ಮೀನಾರಾಯಣರ ಪಾದದ್ವಂದವು, ಉಪಾಯ ಇತಿ ವಿಶ್ವಾಸಃ- ಉಪಾಯವೆಂಬದಾಗಿ ಆದರಲ್ಲಿ ಮಹಾ ವಿಶ್ವಾಸವು, ಎಂಬುದು ದ್ವಯಾರ್ಥಶ್ಶರಣಾಗತಿಃ-ದ್ವಯಮಂತ್ರದ ಅರ್ಥವಾದ "ಶರಣಾಗತಿಯು", ಎನ್ರು - ಎಂಬದಾಗಿ, ಅಭಿಯುಕ್ತರ್ ಪಾಶುರಮುಮ್- ಮಹಾಪೂಜ್ಯರ ಶ್ಲೋಕವು, ಅಧಿಕಾರ ಕೋಟಿಯಲ್ಲೂ, ಅಙ್ಗ ಕೋಟಿಯಲ್ಲೂ,

ವಿಶ್ವಾಸಪ್ರಾರ್ಥನೇ ಅಙ್ಗೇ, ನತು ಅಙ್ಗಿನೀ

ಅಪ್ಪಡಿಯೇ (೧) "ಪ್ರಪತ್ತಿ ರ್ವಿಶ್ವಾಸ ಸ್ಸಕೃತ್ಪ್ರಾರ್ಥನಾ ಮಾತ್ರೇಣಾ ಪೇಕ್ಷಿತಂ ದಾಸ್ಯತೀತಿ ವಿಶ್ವಾಸಪೂರ್ವಕಂ ಪ್ರಾರ್ಥನ ಮಿತಿಯಾವತ್" ಎಙ್ಗಿರವಾಕ್ಯಮುಮ್ ಪ್ರಾಧಾನ್ಯವಿವಕ್ಷೈಯಾಲೇ ಮುದಲ್ ವಿಶ್ವಾಸ

ನಿರ್ಭರ - ಇರುವ, ಮಹಾ ವಿಶ್ವಾಸದ, ಪ್ರಾಧಾನ್ಯಮ್ - ಪ್ರಾಮುಖ್ಯತೆಯನ್ನು, ಶೊಲ್ಲುಗೈಕ್ಕಾಕ ವತ್ತನ್ನೈ - ಹೇಳುವದಕ್ಕಾಗಿ ಮಾತ್ರವೇ. ಮಹಾ ವಿಶ್ವಾಸವೇ ದ್ವಯಾರ್ಥವಾದ ಶರಣಾಗತಿಯೆಂದರೆ ಮಹಾವಿಶ್ವಾಸವೇ ಅಙ್ಗಿಯಾದ ಶರಣಾ ಗತಿಯೆಂದು ಹೇಳಿದಂತಾಯಿತು. ಮಹಾವಿಶ್ವಾಸವು ಶರಣಾಗತಿಗೆ ಒಂದು ಮುಖ್ಯವಾದ ಅಙ್ಗವೆಂದು ಹಿಂದೆ ಪರಿಕರವಿಭಾಗಾಧಿಕಾರದಲ್ಲಿ ಹೇಳಲ್ಪಟ್ಟಿರು ತ್ತದೆ. ಈ ಮಹಾ ವಿಶ್ವಾಸವು ಅಧಿಕಾರಿ ಎಂದೆನಿಸಿಕೊಳ್ಳುವದಕ್ಕೂ ಬೇಕು, ಮತ್ತು ಅಙ್ಗಗಳಲ್ಲಿ ಒಂದು ಪ್ರಧಾನವಾದ ಅಙ್ಗವಾಗಿಯೂ ಬೇಕು, ಹೀಗಿರು ವದರಿಂದ ಅದರ ಪ್ರಾಮುಖ್ಯತೆಯನ್ನು ಮನಸ್ಸಿನಲ್ಲಿಟ್ಟು ವಿಶ್ವಾಸವೇ ಶರಣಾಗತಿ ಎಂದು ಹೇಳಿಬಿಟ್ಟರೇ ವಿನಾ, ಪ್ರಪದನಕ್ಕೆ ಅಙ್ಗವಾದ ಮಹಾ ವಿಶ್ವಾಸವನ್ನೇ, ಅಙ್ಗಿಯೆಂಬಭಿಪ್ರಾಯದಿಂದಲ್ಲವೆಂಬ ತಾತ್ಪರ್ಯವು. ತಮ್ಮ ಅಭಿಪ್ರಾಯ ಸಮ ರ್ಥನೆಗಾಗಿ ಶ್ರೀ ಭಾಷ್ಯಕಾರರೂ, ಪ್ರಪತ್ತಿಯೇ ಮಹಾವಿಶ್ವಾಸವೆಂದು ಹೇಳಿ, ಅದರ ತಾತ್ಪರ್ಯವು ವಿಶ್ವಾಸಪೂರ್ವಕಪ್ರಾರ್ಥನಾ ಎಂದು ವಿವರಿಸಿ, ಇದೇ ಪ್ರಪದನ ವೆಂದು ಉಪದೇಶಿಸಿರುತ್ತಾರೆ. ಶ್ರೀ ಭಾಷ್ಯಕಾರರ ಶಿಷ್ಯರು ಒಂದಾನೊಂದುಕಾಲ ದಲ್ಲಿ ಪ್ರಪತ್ತಿಯ ಸ್ವರೂಪವೆಂತಾದ್ದೆಂದು ಪ್ರಶ್ನಿಸಲು, ಆಗ ಅವರು ಅಪ್ಪಣೆ ಕೊಡಿ ಸಿದ ಮುಕ್ತಕ ವಾಕ್ಯವನ್ನು ಉದಾಹರಿಸುತ್ತಾರೆ—

ವಿಶ್ವಾಸ ಪ್ರಾರ್ಥನೆಗಳು ಅಂಗಗಳು, ಅಙ್ಗಿಯಾಗಲಾರವು.

ಅಪ್ಪಡಿಯೇ - ಮೇಲೆ ಉಪಪಾದಿಸಿದ ಹಾಗೆಯೇ "ಪ್ರಪತ್ತಿಃ - ಪ್ರಪತ್ತಿ ಎಂಬುದು, ವಿಶ್ವಾಸಃ - ವಿಶ್ವಾಸವು, ಸಕೃತ್ಪ್ರಾರ್ಥನಾ ಮಾತ್ರೇಣ - ಒಂದು ಸಲ ಪ್ರಾರ್ಥಿಸುವ ಮಾತ್ರದಿಂದ, ಅಪೇಕ್ಷಿತಂ – ಕೋರಿದ ಫಲವನ್ನು, ದಾಸ್ಯ ತೀತಿ - ಸರ್ವೇಶ್ವರನು ಕೊಡುವನೆಂದು ವಿಶ್ವಾಸ ಪೂರ್ವಕವಾಗಿ, ಪ್ರಾರ್ಥನ ಮಿತಿ ಯಾವತ್ - ಪ್ರಾರ್ಥಿಸೋಣ ಯಾವುದೋ ಅದು," ಎಙ್ಗಿರ ವಾಕ್ಯ ಮುಮ್ - ಎನ್ನುವ ವಾಕ್ಯವೂ, ಪ್ರಾಧಾನ್ಯ ವಿವಕ್ಷೈಯಾಲೇ - ಪ್ರಾಮು ಖ್ಯತೆಯನ್ನು ಹೇಳಬೇಕೆಂಬ ಇಚ್ಛೆಯಿಂದ, ಮುದಲ್ ವಿಶ್ವಾಸತ್ತೈ ಚ್ಚೊಲ್ಲಿ

---

(೧) ಶ್ರೀ ಭಾಷ್ಯಕಾರರ ಸೂಕ್ತಿ.

ಶ್ರೀ. ಟೀಕೈಯಿಲ್, "ಅನನ್ಯ ಸಾಧ್ಯೇ" ಎಙ್ಗಿರ ಭರತಮುನಿ ಪ್ರಣೀತ ಲಕ್ಷಣ ವಾಕ್ಯತ್ತಿನ್ಪಡಿಯೇ ವಿಶ್ವಾಸಪೂರ್ವಕಂ ಪ್ರಾರ್ಥನಮೆನ್ನು ನಿಷ್ಕರ್ಷಿತ್ತದು.

ಮೊದಲು ಪ್ರಪದನವೇ ವಿಶ್ವಾಸವೆಂದು ಹೇಳಿ, "ಅನನ್ಯ ಸಾಧ್ಯೇ" ಎಙ್ಗಿರ ಭರತಮುನಿ ಪ್ರಣೀತ - ಎಂಬ ಭರತಮುನಿಯಿಂದ ರಚಿಸಲ್ಪಟ್ಟ, ಲಕ್ಷಣ ವಾಕ್ಯತ್ತಿನ್ ಪಡಿಯೇ - ಪ್ರಪತ್ತಿಗೆ ಹೇಳಿದ ಲಕ್ಷಣ ವಾಕ್ಯದಹಾಗೆ, ವಿಶ್ವಾಸ ಪೂರ್ವಕಮಾನ, ಪ್ರಾರ್ಥನ ಮೆನ್ನು - ಪ್ರಾರ್ಥನೆಯೆಂದು, ನಿಷ್ಕರ್ಷಿತ್ತದು - ನಿಷ್ಕರ್ಷಿಸಲ್ಪಟ್ಟಿದೆ. ಪ್ರಪತ್ತಿ ಎಂಥಾದ್ದು ಎಂದರೆ ಶ್ರೀ ಭಾಷ್ಯಕಾರರೂ ಮಹಾ ವಿಶ್ವಾಸವೇ ಎಂದು ಪ್ರಥಮತಃ ಹೇಳಿ, ವಿಶ್ವಾಸವು ಪ್ರಪತ್ತಿಗೆ ಅಂಗವಾಗಿ ಹೀಗಾಗ ಇದೇ ಅಂಗಿಯಾದ ಶರಣಾಗತಿಯಾದೀತೆಂಬ ಪೂರ್ವಪಕ್ಷ ಬಂದೀತೆಂದು, ಮಹಾವಿಶ್ವಾಸದಿಂದ ತನ್ನ ಪುರುಷಾರ್ಥವು ಯಾವುದೋ ಅದನ್ನು ಪ್ರಾರ್ಥಿಸುವದು ಎಂದು ತಮ್ಮ ವಾಕ್ಯಾಭಿಪ್ರಾಯವನ್ನು ಭರತಮುನಿಯು ಲಕ್ಷಣ ವಾಕ್ಯಾನುಸಾರವಾಗಿ ಹೇಳಿದರು. ಹಾಗೆ ಹೇಳಲು ಕಾರಣವೇನೆಂದರೆ ಆ ಮಹಾ ವಿಶ್ವಾಸಾಂಗದ ಪ್ರಾಧಾನ್ಯತೆಯನ್ನು ಸಮರ್ಥಿಸಿ ಹೇಳುವದಕ್ಕಾಗಿ ಎಂಬ ಭಾವವು. ಭರತ ಮುನಿಯ ವಾಕ್ಯವು ಯಾವುದೆಂದರೆ:—

ಅನನ್ಯ ಸಾಧ್ಯೇ ಸ್ವಾಭೀಷ್ಟೇ ಮಹಾ ವಿಶ್ವಾಸಪೂರ್ವಕಂ ।
ತದೇಕೋಪಾಯತಾ ಯಾಚ್ಞಾ ಪ್ರಪತ್ತಿಶ್ಶರಣಾಗತಿಃ ॥

ಇದರರ್ಥಕ್ಕೆ ಸಾಂಗಪ್ರಪದನಾಧಿಕಾರದ [illegible]ನೇ ಪುಟವನ್ನು ಪರಾಂಬರಿಸಿ. ಭರತ ಮುನಿಗಳು ವಿಶ್ವಾಸಪೂರ್ವಕವಾಗಿ ಭಗವಂತನೇ ಮುಖ್ಯ ಸಿದ್ಧೋಪಾಯನೆಂದು ತಿಳಿದು ಸ್ವಾಭೀಷ್ಟವನ್ನು ಸಕೃತ್ ತಿಳಿಸಿ ರಕ್ಷಾಪೇಕ್ಷೆಯನ್ನು ಪ್ರಾರ್ಥಿಸುವದೇ ಪ್ರಪತ್ತಿ ಎಂದು ಹೇಳಿರುವ ಹಾಗೆ ಶ್ರೀ ಭಾಷ್ಯಕಾರರೂ "ಪ್ರಾರ್ಥನಮತಿಯಾಚತ್" ಎಂದು ಹೇಳಿದರು. ಇಲ್ಲಿ ಪ್ರಾರ್ಥನೆಯು ಕೂಡ ಗೋಪ್ತೃತ್ವ ವರಣಾತ್ಮಕವಾದ ಪ್ರಶ್ನವು. ಅದು ತಾನೇ ಪ್ರಪತ್ತಿ ಹೇಗಾದೀತು ಎಂಬುದಕ್ಕೆ ಸಮಾಧಾನವಾಗಿ, ಯಾಚ್ಞಾ ಪ್ರಪತ್ತಿಃ - ಎಂಬುದರಭಿಪ್ರಾಯವು, "ಭರನ್ಯಾಸಂ ಯಾಚ್ಞಾನ್ವಿತ ಮುಖವದನ್ತಿ ಪ್ರಪದನಂ" ತನಗೆ ಅಪೇಕ್ಷಿತವಾದುದರ ಸರ್ವ ಭಾರವನ್ನು ಸರ್ವೇಶ್ವರನಲ್ಲಿಡುವದೇ ಪ್ರಪದನವೆಂದು ಹೇಳುತ್ತಾರೆ ಎಂಬುದೆಂದು ಶ್ರೀ ದೇಶಿಕರವರೇ ಸಾಂಗಪ್ರಪದನಾಧಿಕಾರದಲ್ಲಿ ವ್ಯಾಖ್ಯಾನಮಾಡಿರುತ್ತಾರೆ. ಈ ಅಭಿಪ್ರಾಯವನ್ನೇ ಮುಂದಿನ ವಾಕ್ಯದ ಮೂಲಕ ತಿಳಿಸುತ್ತಾರೆ.

ಇವ್ವಾಕ್ಯತ್ತಾನುಮ್, ಆತ್ಮನಿಕ್ಷೇಪ ಮುಖ್ಯ, ಇತರಙ್ಗಳ್ ಅಙ್ಗಙ್ಗಳೆನ್ರು ಶೊಲ್ಲುಗಿರ (೧) "ನ್ಯಾಸಃ ಪಂಚಾಂಗ ಸಂಯುತಃ" ಇತ್ಯಾದಿ ವಚನಙ್ಗಳಾಲೆ ಪ್ರಾರ್ಥನೈಯುಮ್ ಅಙ್ಗಮಾಗೈಯಾಲ್ (೨) "ರಕ್ಷಾಪೇಕ್ಷಾಂ ಪ್ರತೀಕ್ಷತೇ" ಎಙ್ಗಿರಪಡಿಯೇ ಈಶ್ವರರ್ ಅಪೇಕ್ಷಾಮಾತ್ರಸಾಪೇಕ್ಷನೆನ್ರಿನ್ವಙ್ಗತ್ತಿಲ್ ಪ್ರಾಧಾನ್ಯತ್ತೈ ವಿವಕ್ಷಿತ್ತು ಚೊನ್ನಪಡಿ.

ಮಹಾ ವಿಶ್ವಾಸವೂ ಅಙ್ಗವು, ಮತ್ತು ಯಾಚನೆಯೂ ಗೋಪ್ತೃತ್ವವರಣರೂಪ ಅಙ್ಗವು; ಇವೆರಡೂ ಅಙ್ಗವಾದ ಪ್ರಪತ್ತಿಯಾಗಲಾರವು. ಭರತಮುನಿ ಮತ್ತು ಶ್ರೀ ಭಾಷ್ಯಕಾರರುಗಳು ವಿಶ್ವಾಸ ಪೂರ್ವಕ ಯಾಚನೆಯೇ ಪ್ರಪತ್ತಿ ಎಂದು ಹೇಳಿದುವರಭಿಪ್ರಾಯವು, ಮಹಾ ವಿಶ್ವಾಸವೂ ಗೋಪ್ತೃತ್ವವರಣವೂ ಎರಡೂ ಮುಖ್ಯವಾದ ಅಙ್ಗಗಳೆಂದು ತಿಳಿಸುವದರಲ್ಲಿ ತಾತ್ಪರ್ಯವು. ಹಾಗಾದರೆ ಶ್ರೀ ಭಾಷ್ಯಕಾರರು "ವಿಶ್ವಾಸಪೂರ್ವಕಂ ಪ್ರಾರ್ಥನಮಿತಿ ಯಾವತ್" ಎಂದು ಪ್ರಪತ್ತಿಗೆ ಹೇಗೆ ಲಕ್ಷಣವನ್ನು ಹೇಳಿದರು ಎಂಬಾಕ್ಷೇಪಕ್ಕೆ ಮುಂದೆ ಸಮಾಧಾನವನ್ನೂ ಹೇಳುತ್ತಾರೆ.

ಇವ್ವಾಕ್ಯತ್ತಾನುಮ್-"ಪ್ರಪತ್ತಿರ್ವಿಶ್ವಾಸಃ" ಎಂದಾರಂಭಿಸಿ "ಪ್ರಾರ್ಥನಮಿತಿ ಯಾವತ್" ಎಂದು ಮುಗಿಸಿ ಹೇಳಿರುವ ಶ್ರೀ ಭಾಷ್ಯಕಾರರ ವಾಕ್ಯವೂ ಕೂಡ ಆತ್ಮನಿಕ್ಷೇಪವು ಅಙ್ಗಿ, ಇತರಂಗಳ್ - ಎಂದರೆ ವಿಶ್ವಾಸ ಪ್ರಾರ್ಥನಾ ಮೊದಲಾದವು, ಅಙ್ಗಙ್ಗಳೆನ್ರು ಶೊಲ್ಲುಗಿರ ಅಙ್ಗಗಳೆಂದು ಹೇಳುವ, "ನ್ಯಾಸಃ ಪಂಚಾಂಗ ಸಂಯುತಃ ಎಂದರೆ ಆತ್ಮನಿಕ್ಷೇಪವೆಂದು ಹೇಳಿಸಿಕೊಳ್ಳುವ ಭರನ್ಯಾಸವೆಂಬ ಅಙ್ಗಿಯು ಐದು ಅಂಗಗಳಿಂದ ಕೂಡಿರುವುದು" ಇತ್ಯಾದಿ ವಚನಙ್ಗಳಾಲೇ - ಇವೇ ಮೊದಲಾದ ಪ್ರಮಾಣಗಳಿಂದ, ಪ್ರಾರ್ಥನೆಯುಮ್ ಅಙ್ಗಮಾಗಿಲ್-ಪ್ರಾರ್ಥನೆಯೂ ಗೋಪ್ತೃತ್ವ ವರಣರೂಪ ಅಙ್ಗವಾದುದರಿಂದ. "ರಕ್ಷಾಪೇಕ್ಷಾಂ ಪ್ರತೀಕ್ಷತೇ" - "ಪ್ರಪತ್ತಿಯು ಭಗವಂತನ ರಕ್ಷೆಯ ಅಪೇಕ್ಷೆಯನ್ನು ಎದುರು ನೋಡುತ್ತದೆ" ಎಙ್ಗಿರಪಡಿಯೇ-ಎಂದು ಹೇಳಿರುವಹಾಗೆ. ಈಶ್ವರರ್-ಸರ್ವೇಶ್ವರನು, ಅಪೇಕ್ಷಾಮಾತ್ರ ಸಾಪೇಕ್ಷರ್ - ತನ್ನ ಮನೋರಥವು ಯಾವುದೆಂದು ಮಾತ್ರ ತಿಳಿಯಲು ಅಪೇಕ್ಷೆಯುಳ್ಳವನು, ಎನ್ರಿನ್ವಙ್ಗತ್ತಿಲ್ - ಎಂಬದಾಗಿ ಈ ಗೋಪ್ತೃತ್ವ ವರಣರೂಪ ಅಙ್ಗದ, ಪ್ರಾಧಾನ್ಯವನ್ನು, ವಿವಕ್ಷಿತ್ತು ಚೊನ್ನಪಡಿ - ಚನ್ನಾಗಿ ತಿಳಿಸಬೇಕೆಂಬಭಿಲಾಷೆಯಿಂದ ಹೇಳಲ್ಪಟ್ಟಿತೆಂದು.

---

(೧) ಲಕ್ಷ್ಮೀ ತಂತ್ರ. ೧೭ ೭೪. (೨) ಲಕ್ಷ್ಮೀತಂತ್ರ, ೧೭. ೭೮.

ಶ್ರೀ ಭಾಷ್ಯಕಾರಾಭಿಪ್ರಾಯೇಽಪಿ ನಿಕ್ಷೇಪ ಏವಾಙ್ಗೀ

ಶಿರಿಯ ಗದ್ಯತ್ತಿಲುಮ್ ವಿಶ್ವಾಸಪೂರ್ವಕ ಪ್ರಾರ್ಥನೈಯೈಪ್ಪಣ್ಣಿ “ಶರಣೋಽಸ್ಮಿ ತೇ” ಎನ್ರು ಮುಡಿಕ್ಕೈಯಾಲುಮ್, ಉಪಾಯ ವರಣಶಬ್ದ ಸಾಮರ್ಥ್ಯತ್ತಾಲುಮ್ ನಿಕ್ಷೇಪಮುಮ್ ಸಿದ್ಧಮ್.

ಭಾವಿಸತಕ್ಕದ್ದು. “ಪ್ರಪತ್ತಿರ್ವಿಶ್ವಾಸಃ” ಎಂದು ಹೇಳುವಾಗ ಹೇಗೆ ಪ್ರಪತ್ತಿಗೆ ವಿಶ್ವಾಸರೂಪ ಅಙ್ಗದ ಪ್ರಾಧಾನ್ಯವನ್ನು ತಿಳಿಸುವದಕ್ಕಾಗಿ ಹಾಗೆ ಪ್ರಯೋಗವೋ, ಹಾಗೆಯೇ ಪ್ರಾರ್ಥನಮತಿಶರಣಾಗತ್ ಎಂದು ಹೇಳುವಾಗಲೂ, ಗೋಪ್ತೃತ್ವವರಣ ಪ್ರಾಧಾನ್ಯವನ್ನು ತಿಳಿಸುವದಕ್ಕಾಗಿ ಎಂದು ಭಾವಿಸತಕ್ಕದ್ದೆಂಬ ತಾತ್ಪರ್ಯವು. “ನ್ಯಾಸಃ ಪಂಚಾಂಗ ಸಂಯುತಃ” ಎಂಬ ಶ್ಲೋಕವನ್ನು ಸ್ವಾಮಿ ದೇಶಿಕರವರೇ ಉದಾಹರಿಸಿರುತ್ತಾರೆ. [illegible]ನೆಯ ಪುಟವನ್ನೂ ೧೦೦೦ ಪುಟವನ್ನೂ ನೋಡಿ.

ಹಾಗೆಯೇ “ರಕ್ಷ್ಯಾಪೇಕ್ಷಾಂ” ಎಂಬ ಶ್ಲೋಕವನ್ನೂ ಪರಿಕರ ವಿಭಾಗಾಧಿಕಾರದಲ್ಲೇ ಉದಾಹರಿಸಿರುತ್ತಾರೆ. [illegible]ನೆಯ ಪುಟ ನೋಡಿ.

ಹೀಗೆ ಮಹಾವಿಶ್ವಾಸವೂ ಯಾಚನೆಯೂ ಸಹ ಪ್ರಪತ್ತಿಗೆ ಅಙ್ಗಗಳಾದರೆ, ಅಙ್ಗಿ ಯಾವುದು ಎಂದು ತೋರ್ಪಡಿಸಿದ್ದಾರೆಯೋ ಎಂದರೆ ಬಹುಕಡೆಯಲ್ಲಿ ನಿಕ್ಷೇಪವೇ ಅಙ್ಗಿ ಎಂದು ತೋರ್ಪಡಿಸಿರುತ್ತಾರೆಂದು ಹೇಳುತ್ತಾರೆ.—

ಶ್ರೀ ಭಾಷ್ಯಕಾರರ ಅಭಿಪ್ರಾಯಾನುಸಾರವಾಗಿಯೂ ನಿಕ್ಷೇಪವೇ ಅಙ್ಗಿಯು.

ಮತ್ತೆ, ಇತರರು ಹೇಳುವಹಾಗೆ ಪ್ರಾರ್ಥನೆಯೇ ಪ್ರಪತ್ತಿಯಲ್ಲ, ಪ್ರಪತ್ತಿಯು ಆತ್ಮನಿಕ್ಷೇಪವೆಂಬುದೇ ಶ್ರೀ ಭಾಷ್ಯಕಾರರ ಅಭಿಪ್ರಾಯವೆಂದು [illegible]ಗದ್ಯ ಮತ್ತು ವೈಕುಂಠ ಗದ್ಯವಾಕ್ಯಗಳಿಂದ ವ್ಯಕ್ತಪಡಿಸುತ್ತಾರೆ. ಅದರಿಂದ “ವಿಶ್ವಾಸಪೂರ್ವಕಂ ಪ್ರಾರ್ಥನಾ” ಎಂಬ ಶ್ರೀ ಭಾಷ್ಯಕಾರರ ವಾಕ್ಯವೂ, “ಯಾಚ್ಞಾ ಪ್ರಪತ್ತಿಃ” ಎಂಬ ಭರತಮುನಿಯ ವಾಕ್ಯವೂ ಔಪಚಾರಿಕವು ಎಂಬ ಭಾವವು. ಶಿರಿಯ ಗದ್ಯತ್ತಿಲುಮ್ - ಚಿಕ್ಕ ಗದ್ಯವಾದ ಶ್ರೀರಂಗ ಗದ್ಯದಲ್ಲಿ, ವಿಶ್ವಾಸಪೂರ್ವಕ ಪ್ರಾರ್ಥನೈಯೈಪ್ಪಣ್ಣಿ - “ನಿತ್ಯದಾಸ್ಯಂ ದಾಸ್ಯತೀತಿ ಮಹಾ ವಿಶ್ವಾಸ ಪೂರ್ವಕಂ ನಿತ್ಯ ಕಿಙ್ಕರತಾಂ ಪ್ರಾರ್ಥಯೇ” ಎಂದು “ವಿಶ್ವಾಸಪೂರ್ವಕವಾಗಿ [illegible], ನಿನಗೆ ಸದಾ ಕೈಂಕರ್ಯವನ್ನು ಮಾಡುವವನನ್ನಾಗಿ ಮಾಡೆಂದು” ಪ್ರಾರ್ಥಿಸಿ

ನಮಶ್ಶಬ್ದ ಆತ್ಮನಿವೇದನ ಪರಃ

ನಮಸ್ಸಾತ್ಮ ನಿಕ್ಷೇಪ ಪರಮೆನ್ನು ಮಿಡಪರ್ (೧) "ನಮಸ್ಕಾರಾ

"ನಮೋಽಸ್ತುತೇ" ನಿನಗೆ ನಮಸ್ಕಾರವನ್ನು ಮಾಡುವೆನೆಂದು ಹೇಗಿರುವುದರಿಂದಲೂ, ಉಪಾಯವರಣ ಶಬ್ದಸಾಮರ್ಥ್ಯತ್ತಾಲುಮ್ - ಇಲ್ಲಿ ಇರುವದೇನೆಂದರೆ "ತತ್ತ್ವನಾ ನಂತಕಾಲ ಸಮೀಕ್ಷಯಾಪ್ಯದೃಷ್ಟ ಸಂತಾರೋಪಾಯೇ ನಿಖಿಲ ಜನ್ತು ಜಾತ ಶರಣ್ಯಂ ಶ್ರೀಮನ್ನಾರಾಯಣ ತವ ಚರಣಾರವಿಂದ ಯುಗಳಂ ಶರಣಮಹಂ ಪ್ರಪದ್ಯೇ" ಎಂಬಲ್ಲಿ "ಶರಣಮಹಂ ಪ್ರಪದ್ಯೇ" ಎಂದಿರುವದರಿಂದ ಉಪಾಯ ವಾಗಬೇಕೆಂಬ ಶಬ್ದಸಾಮರ್ಥ್ಯದಿಂದಲೂ, ನಿಕ್ಷೇಪ ಮುಮ್ - ಎಂದರೆ ಆತ್ಮ ನಿಕ್ಷೇಪವು, ಸಿದ್ಧಮ್ - ಸ್ಥಾಪಿತವು, ಎರಡು ಕಾರಣಗಳಿಂದ ಪ್ರಪತ್ತಿ ಎಂಬುದು ಪ್ರಾರ್ಥನೆ ಮಾತ್ರವೇ ಅಲ್ಲವು, ಪ್ರಾರ್ಥನೆ ಯೊಂದಿಗೆ ಆತ್ಮನಿಕ್ಷೇಪವೇ ಎಂದು ಹೇಳುತ್ತಾರೆ (೧) "ನಮೋಽಸ್ತುತೇ" ಎಂದು ಕೊನೆಯಲ್ಲಿ ಹೇಳಿರುವದರಿಂದ, ನಮಶ್ಶಬ್ದಕ್ಕೆ ಆತ್ಮನಿಕ್ಷೇಪಾರ್ಥವು ಹೇಗೆ ಎಂದರೆ ಹಾಗೆ ಉಪಯೋಗಿಸಿರುವದಕ್ಕೆ ಮುಂದಿನ ವಾಕ್ಯದಿಂದ ಪ್ರಮಾಣವನ್ನು ತೋರಿಸುತ್ತಾರೆ. (೨) ಶರಣಮಹಂ ಪ್ರಪದ್ಯೇ ಎಂದು ಇರುವದರಿಂದ; ಶರಣ ಶಬ್ದವು ಉಪಾಯಾರ್ಥವಾಗಿ ಉಪಾಯ ಭರವನ್ನು ಅವನಲ್ಲಿಡುವದರಿಂದ ಆತ್ಮನಿಕ್ಷೇಪವು ಸಿದ್ಧವು ಎಂಬ ತಾತ್ಪರ್ಯವು ಇದು ಹೇಗೆಂದರೆ- ಶರಣಂ ಪ್ರಪದ್ಯೇ ಎಂಬುದು ಸರ್ವೇಶ್ವರನೇ ಉಪಾಯಭೂತನೆಂಬ ನಿಶ್ಚಯಜ್ಞಾನವನ್ನು ಬೋಧಿಸುವದರಿಂದ ಉಪಾಸನ ಸ್ಥಾನದಲ್ಲಿ ಸರ್ವೇಶ್ವರನೇ ನಿಂತು ಉಪಾಯ ಪೂರ್ಣಯನ್ನುಂಟುಮಾಡಿ ಫಲವನ್ನು ಕೊಡುವನೆಂದು ನಂಬಿ ಸರ್ವ ಭರವನ್ನು ಅವನಲ್ಲಿಡುವದೇ ಪ್ರಾಮಾದರಿಂದ ಶರಣಂ ಪ್ರಪದ್ಯೇ ಎಂಬುದರಿಂದ ಆತ್ಮನಿಕ್ಷೇಪ ಸಿದ್ಧಿಯೆಂಬ ತಾತ್ಪರ್ಯವು.

ನಮಸ್ಸು ಆತ್ಮನಿವೇದನ ಪರವೆಂದು ಹಿಂದೆ ಹೇಳಲ್ಪಟ್ಟಿತು ಅದಕ್ಕೆ ಪ್ರಮಾಣವನ್ನು ತೋರಿಸುತ್ತಾರೆ—

ನಮಃ ಎಂಬ ಶಬ್ದವು ಆತ್ಮನಿವೇದನ ಪರವು

ನಮಸ್ಸು - ನಮಶ್ಶಬ್ದವು. ಆತ್ಮನಿಕ್ಷೇಪ ಪರಮೆನ್ನು ಮಿಡಪರ್ - ಆತ್ಮನಿಕ್ಷೇಪವನ್ನು ಬೋಧಿಸುತ್ತದೆಂಬುದಕ್ಕೆ ಪ್ರಮಾಣವಾಗಿ "ನಮಸ್ಕಾರಾತ್ಮಕಃ- ನಮಸ್ಕಾರ ರೂಪವಾದ, ಆತ್ಮನಿವೇದನಂ - ಆತ್ಮನಿಕ್ಷೇಪವನ್ನು, ಯಸ್ಮೈ -

(೧) ಮನ್ತ್ರ-ಪದ.

ತ್ರಿಕಂ ಯಸ್ಸ್ಮೃತ್ವಾ ವಿಧಾಯಾತ್ಮ ನಿವೇದನಮ್‌ ಇತ್ಯಾದಿಗಳಲ್ಲಿಯೇ ಪ್ರಸಿದ್ಧವು.

ಯಾವ ಭಗವಂತನಿಗಾಗಿ, ವಿಧಾಯ ಮಾಡಿ, ಮುಂದೆ "ತ್ಯಕ್ತದುಃಖೋಽಖಿಲಾನ್ ಕಾಮಾನಶ್ನುತೇ ತಂ ನಮಾಮ್ಯಹಂ" ಎಂದು ಇರುತ್ತದೆ; ಸಮಸ್ತ ದುಃಖಗಳಿಂದಲೂ ಬಿಡಲ್ಪಟ್ಟವನಾಗಿ, ಸಮಸ್ತ ಇಷ್ಟಾರ್ಥಗಳನ್ನೂ ಯಾವನಿಂದ ಹೊಂದುವನೋ, ಅಂತಹ ಲಕ್ಷ್ಮೀನೃಸಿಂಹನನ್ನು ನಾವು ನಮಿಸುತ್ತೇನೆ ಎಂದರೆ ಶರಣು ಹೊಂದುತ್ತೇವೆಂಬುದು ತಾತ್ಪರ್ಯವು" ಇತ್ಯಾದಿಗಳಲ್ಲಿಯೇ-ಇವೇ ಮೊದಲಾದ ಪ್ರಮಾಣಗಳಲ್ಲಿ, ಪ್ರಸಿದ್ಧಂ-ಪ್ರಸಿದ್ಧವಾದುದು. ತನ್ನ ಇಷ್ಟಾರ್ಥಸಿದ್ಧಿಗೆ ಮುಖ್ಯಸಾಧನವಾದ ಉಪಾಯಕ್ಕೆ ಅನುಕೂಲಿಸುವ ರಕ್ಷಾಭರವನ್ನೆಲ್ಲಾ ಸಮರ್ಪಿಸುವುದೇ ಆತ್ಮನಿಕ್ಷೇಪವು. ಇದು ಪ್ರಣಾಮರೂಪವಾದುದು. ಹಾಗೆಯೇ ನಮಸ್ಸು ಆತ್ಮನಿಕ್ಷೇಪ ಪರವೆಂದು ಭಾರತ ವನಪರ್ವದಲ್ಲಿ (೯೨ ೫೭) ಹೇಳಲ್ಪಟ್ಟಿರುತ್ತದೆ ಮಾರ್ಕಂಡೇಯ ಮಹರ್ಷಿಯು ಯುಧಿಷ್ಠಿರಾದಿಗಳನ್ನು ಕುರಿತು ಶ್ರೀಕೃಷ್ಣನು ಸಾಮಾನ್ಯನಲ್ಲವು ಆತನೇ ಪರತತ್ತ್ವವು, "ಸರ್ವೇಷಾಮೇವ ಲೋಕಾನಾಂ ಪಿತಾ ಮಾತಾ ಚ ಮಾಧವಃ । ಗಚ್ಛಧ್ವಮೇನಂ ಶರಣಂ ಶರಣ್ಯಂ ಪುರುಷರ್ಷಭಾಃ" ॥ ಆತನನ್ನೇ ಶರಣು ಹೊಂದಿರಿ ನಿಮ್ಮ ಇಷ್ಟಾರ್ಥವು ಕೈಗೂಡುತ್ತದೆಂದು ಹೇಳಿದಮೇಲೆ ಅವರು, ನಮಿಸಲು, ಅದಕ್ಕೆ "ಏವಮುಕ್ತಾಸ್ತತಸ್ತೇ ಪಾರ್ಥಾ ಯಮೌ ಚ ಪುರುಷರ್ಷಭೌ । ದ್ರೌಪದ್ಯಾ ಸಹಿತಾಸ್ಸರ್ವೇ ನಮಶ್ಚಕ್ರುರ್ಜನಾರ್ದನಮ್"॥ ಆ ಪಂಚಪಾಂಡವರೂ ದ್ರೌಪದಿಯೊಂದಿಗೆ ಶ್ರೀಕೃಷ್ಣನಿಗೆ ಪ್ರಣಾಮವನ್ನು ಮಾಡಿದರು ಎಂದು ಹೇಳಲ್ಪಟ್ಟಿರುತ್ತದೆ. ಆದುದರಿಂದ ನಮಸ್ಸು ಆತ್ಮನಿಕ್ಷೇಪ ಪರವಾದುದು. ನಮಸ್ಸಿಗೆ ಪರ್ಯಾಯ ಪದವಾದ ಪ್ರಣಿಪಾತ ಶಬ್ದವೂ ಆತ್ಮನಿಕ್ಷೇಪ ಪರವೆಂದು ಹಾಗೆಯೇ "ಪ್ರಣಿಪಾತ ಪ್ರಸನ್ನಾಹಿ ಮೈಥಿಲೀ ಜನಕಾತ್ಮಜಾ" ಎಂಬಲ್ಲಿ ಹೇಳಲ್ಪಟ್ಟಿರುತ್ತದೆ. ೧೮೭ನೆಯ ಪುಟ ಮೂರನೆಯ ಪಂಕ್ತಿಯನ್ನು ನೋಡಿ

ಇದಕ್ಕೆ ಸ್ವರೂಪವಾದ ನಮಸ್ಸು ಷಡ್ವಿಧ ಶರಣಾಗತಿಯೊಳಗೆ ಅಂಗ ಬರುವುದರಿಂದ, ಶಾಸ್ತ್ರಾರ್ಥವು ಬರುವ ಆತ್ಮನಿಕ್ಷೇಪವೆಂಬುದು ಅಂಗಿಯನ್ನು ಹೇಗೆ ಹೊಂದುತ್ತದೆ ಎಂಬ ಶಂಕೆಗೆ ಸಮಾಧಾನರೂಪವಾಗಿ, ಈ ಶ್ಲೋಕಾರ್ಧದಲ್ಲಿ ಆತ್ಮ ನಿಕ್ಷೇಪವು ಪ್ರಣಾಮರೂಪವಾದುದೆಂಬ ಅಭಿಪ್ರಾಯ ಒಳಗೊಂಡಿರುವಂತೆ ತೋರಿಸಿರುತ್ತಾರೆಂದು ಹೇಳುತ್ತಾರೆ ಇದು

ರಿಂದ "ಶ್ರೀ ಭಾಷ್ಯಕಾರರ ಅಭಿಪ್ರಾಯದ ಪ್ರಕಾರ, ಪ್ರಪತ್ತಿಯು ವಿಶ್ವಾಸಮಾತ್ರವೇ ಅಲ್ಲವು; ಮತ್ತು ವಿಶ್ವಾಸ ಪೂರ್ವಕ ಪ್ರಾರ್ಥನೆಯೂ ಅಲ್ಲವು; ವಿಶ್ವಾಸ ಪೂರ್ವಕ ಯಾಚ್ಞೆಯೊಂದಿಗೆ ಪ್ರಣಾಮಪರಾದಿ ಆತ್ಮಹವಿಸ್ಸನ್ನು ಶ್ರೀ ಲಕ್ಷ್ಮೀಪತಿಯ ಪಾದಾರವಿಂದದಲ್ಲಿ ಸಮರ್ಪಿಸೋಣವೇ ಪ್ರಪತ್ತಿ" ಎಂದು, ಮುಂದಿನ ವಾಕ್ಯದಿಂದ ತಿಳಿಸುತ್ತಾರೆ

ಶ್ರೀ ಭಾಷ್ಯಕಾರರು ರಚಿಸಿದ ಶ್ರೀ ವೈಕುಂಠ ಗದ್ಯದಲ್ಲಿ ಪ್ರಪತ್ತಿಯ ಸ್ವರೂಪವು ಪ್ರಾರ್ಥನಾ ಪೂರ್ವಕಾತ್ಮ ನಿಕ್ಷೇಪವು - ಪ್ರಾರ್ಥನಾ ಪೂರ್ವಕವಾದ ಆತ್ಮನಿವೇದನವೆಂದು, ಕಂಠೋಕ್ತ್ಯವಾಯಿತ್ತು - ಅನುಮಾನ, ಊಹೆ ಮೊದಲಾದವುಗಳ ಆವಶ್ಯಕತೆ ಇಲ್ಲದೇನೇ ಸಾಕ್ಷಾತ್ತಾಗಿಯೇ ಹೇಳಲ್ಪಟ್ಟಿರುತ್ತದೆ ಎಂಬ ಭಾವವು. ಎಲ್ಲಿ ಹೇಳಿದೆ ಎಂದರೆ "ಮಾಮೈಕಾಂತಿಕಾತ್ಯಂತಿಕ ಪರಿಚರ್ಯಾ ಕರಣಾಯ ಪರಿಗೃಹ್ಣೀಷ್ವೇತಿ ಯಾಚಮಾನಃ ಪ್ರಣಮ್ಯಾತ್ಮಾನಂ ಭಗವತೇ ನಿವೇದಯೇತ್" ಎಂದು ಕಂಠೋಕ್ತವಾಗಿ ಹೇಳಲ್ಪಟ್ಟಿರುತ್ತದೆ. "ನನ್ನನ್ನು ನಿನಗೇನೇ ಪ್ರಯೋಜನವಾಗಿಯೂ ಯಾವಾಗಲೂ ನಿರಂತರವಾಗಿ ಕೈಂಕರ್ಯಕ್ಕಾಗಿ ಅಂಗೀಕರಿಸು ಎಂದು ಪ್ರಾರ್ಥಿಸುವವನಾಗಿ ನಮಸ್ಕರಿಸಿ ಆತ್ಮವನ್ನು ಭಗವಂತನಲ್ಲಿ ನಿವೇದನಮಾಡತಕ್ಕದ್ದು ಎಂಬುದಾಗಿ ಈ ವಾಕ್ಯದ ಅರ್ಥವು, ಆದ್ದರಿಂದ ಆತ್ಮನಿಕ್ಷೇಪವೇ ಅಙ್ಗಿ ಎಂದು ಕಂಠೋಕ್ತವಾಗಿ ಹೇಳಲ್ಪಟ್ಟಿರುವದರಿಂದ, ಇತರ ಸ್ಥಳಗಳಲ್ಲಿ "ಪ್ರಪತ್ತಿರ್ವಿಶ್ವಾಸಃ" ಎಂದೂ "ನಿತ್ಯಕಿಙ್ಕರತಾಂ ಪ್ರಾರ್ಥಯೇ" ಎಂದೂ ಹೇಳಲ್ಪಟ್ಟಿದ್ದರೂ, ಈ ಕಂಠೋಕ್ತವಾದ ಭರನ್ಯಾಸ ಸ್ವರೂಪವನ್ನು ಮನಸ್ಸಿನಲ್ಲಿಟ್ಟು ಈ ವಾಕ್ಯಗಳನ್ನು ಅನ್ವಯಿಸತಕ್ಕದ್ದು. ವಿಶ್ವಾಸಪೂರ್ವಕ ಯಾಚ್ಞೆ ಇದ್ದರೇನೇ ಪ್ರಪತ್ತಿಗೆ ಸ್ವರೂಪಪ್ರಾಪ್ತಿಯು ಎಂದು ತಿಳಿಸುವದಕ್ಕಾಗಿಯೇ ಹಾಗೆ ಹೇಳಲ್ಪಟ್ಟಿತೆಂಬ ಭಾವವು. ಆದುದರಿಂದ ಪ್ರಪತ್ತಿಯು ವಿಶ್ವಾಸವೆಂದೂ ಯಾಚ್ಞೆ ಎಂದೂ ಹೇಳುವದು ಔಪಚಾರಿಕವು.

ಆತ್ಮನಿಕ್ಷೇಪವೇ ಅಙ್ಗಿ ಎಂಬುದೇ ಶ್ರೀ ಭಾಷ್ಯಕಾರರಭಿಪ್ರಾಯವೆಂಬುದಕ್ಕೆ ಏನು ಪ್ರಮಾಣವು?

ಹೀಗೆ ಶ್ರೀ ಭಾಷ್ಯಕಾರರು ಅಙ್ಗಿ ಸ್ವರೂಪವನ್ನು ನಿಷ್ಕರ್ಷಿಸಿರುವದಕ್ಕೆ ಪ್ರಮಾಣಗಳೇನಾದರೂ ಉಂಟೋ ಎಂದರೆ ಎರಡು ಪ್ರಮಾಣಗಳನ್ನು ಉದಾಹರಿಸುತ್ತಾರೆ:—ಆಗ್ಗೈಯಾಲ್ - ಶ್ರೀ ವೈಕುಂಠ ಗದ್ಯದಲ್ಲಿ "ಯಾಚಮಾನಃ" ಎಂದು ವಿಶ್ವಾಸಪೂರ್ವಕವಾಗಿ ಪ್ರಾರ್ಥನೆಯನ್ನು ತಿಳಿಸಿ. ಅದಕ್ಕಿಂತಲೂ ಬೇರೆ

ಆತ್ಮನಿಕ್ಷೇಪ ಏವಾಙ್ಗೀತಿ ಶ್ರೀಭಾಷ್ಯಕಾರಾಭಿಪ್ರಾಯೇ ಕಿಂ ಪ್ರಮಾಣಂ ?

ಶ್ರೀ ವೈಕುಂಠ ಗದ್ಯತ್ತಿಲೇ ಪ್ರಾರ್ಥನಾಪೂರ್ವಕಾತ್ಮನಿಕ್ಷೇಪವನ್ ಕಂಠೋಕ್ತ[illegible]. ಆಗೈಯಾಲ್ (೧) "ಅನೇನೈವ ತು ಮನ್ತ್ರೇಣ ಸ್ವಾತ್ಮಾನಂ ಮಯಿ ನಿಕ್ಷಿಪೇತ್" (೨) "ಆತ್ಮಾತ್ಮೀಯ ಭರನ್ಯಾಸಃ" ಇತ್ಯಾದಿಗಳಿಲೇ ಅಙ್ಗವಿಧಾನಮ್ ಇಪ್ಪಡಿಯಲ್ಲಾದಪೋದು, (೩) ಷಡ್ವಿಧಾ

ಮಾಗ ಆತ್ಮನಿವೇದನರೂಪ ನಿಕ್ಷೇಪವೂ ಸಿದ್ಧವಾದುದರಿಂದ (೧) "ಈ ಮಂತ್ರದ ಮೂಲಕವಾಗಿಯೇ ಆತ್ಮವನ್ನು ನನ್ನಲ್ಲಿಡತಕ್ಕದ್ದು" ಎಂಬ ಸಾತ್ಯಕಿ ತಂತ್ರ ಪ್ರಮಾಣ ಮತ್ತು (೨) "ಆತ್ಮಾತ್ಮೀಯ ಭರನ್ಯಾಸೋ ಹ್ಯಾತ್ಮನಿಕ್ಷೇಪ ಉಚ್ಯತೇ" "ತನ್ನ ಮತ್ತು ತನ್ನವರ ರಕ್ಷಣೆಯ ಭರವನ್ನು ಪರಮಾತ್ಮನಲ್ಲಿಡುವುದೇ ಆತ್ಮನಿಕ್ಷೇಪವು" ಎಂಬ ಸಾತ್ವತ ಪ್ರಮಾಣ, ಇತ್ಯಾದಿಗಳಿಲೆ - ಇವೇ ಮೊದಲಾದವುಗಳಲ್ಲಿ, ಇಲ್ಲಿ ಆದಿ ಶಬ್ದದಿಂದ "ಆತ್ಮಾತ್ಮೀಯಭರಂ ಸರ್ವಂ ನಿಕ್ಷಿಪ್ಯ ಶ್ರೀಪತೇಃ ಪದೇ" ಇವೇ ಮೊದಲಾದ ಇನ್ನೂ ಪ್ರಮಾಣಗಳಿವೆ ಎಂಬ ಭಾವವು ಸೂಚಿಸಲ್ಪಟ್ಟಿತು. ಅಙ್ಗವಿಧಾನಮ್ - ಅಂಗಿ ಯಾವುದೆಂದು ವಿಧಿಸೂಚನವು, [illegible] ಎಂದು ಇಟ್ಟುಕೊಳ್ಳತಕ್ಕದ್ದು. ನಿರ್ಣಯಿಸಲ್ಪಟ್ಟಿತು. ಈ ಪ್ರಮಾಣಗಳ ಮೂಲಕ ಪ್ರಪತ್ತಿಯ ಅಂಗವು ಆತ್ಮನಿಕ್ಷೇಪವೆಂಬುದು ಸಿದ್ಧವೆಂದು ಹೇಳಲ್ಪಟ್ಟಿತು.

ಆದರೆ "ಪ್ರಪತ್ತಿರ್ವಿಶಿಷ್ಯತೇ" ಎಂಬ ಮುನಿರಾಜರ ವಾಕ್ಯದಲ್ಲೂ, "ತದೇಕೋಪಾಯತಾ ಯಾಚ್ಞಾ ಪ್ರಪತ್ತಿಶ್ಶರಣಾಗತಿಃ" ಎಂಬ ಭಗವನ್ಮುನಿಯ ವಾಕ್ಯದಲ್ಲೂ, ಉಪಾಯಪ್ರಾರ್ಥನಾ [illegible] ನ್ಯಾಸವೋ ? ಮಹಾವಿಶ್ವಾಸವೂ, ಪ್ರಾರ್ಥನೆಯೂ, ಆತ್ಮನಿಕ್ಷೇಪವೂ ಈ ಮೂರರಲ್ಲಿ ಅಙ್ಗಿಯಾಗಿಯೇ ಏಕೆ ಭಾವಿಸಬಾರದು ? ಎಂದು ಪ್ರಶ್ನಿಸಿದರೆ, ಆಗ ಉಂಟಾಗುವ ದೋಷವನ್ನು ಸೂಚಿಸುತ್ತಾರೆ. ಇಪ್ಪಡಿಯಲ್ಲಾದಪೋದು ವಿಶ್ವಾಸ ಪ್ರಾರ್ಥನೆಗಳು ಅಙ್ಗಗಳೆಂದೂ, ಆತ್ಮನಿಕ್ಷೇಪವೇ ಅಙ್ಗಿಯೆಂದೂ ಒಪ್ಪಿಕೊಳ್ಳದಿದ್ದರೆ. ಷಡ್ವಿಧಾ ಶರಣಾಗತಿಃ ಎನ್ಗಿರ ವಾಕ್ಯತ್ತಿಲ್ - ಎಂಬ ವಾಕ್ಯದಲ್ಲಿ, ಆಪಾತಪ್ರತೀತಿಯೈ ಕೊಂಡು.

(೧) ಮಂತ್ರರಾಜಪದ ಸ್ತೋತ್ರಂ (೨) ಶ್ರೀ ಸಾತ್ವತ [illegible]
(೩) ಅಹಿ. ೩೭.೨೭,

ಶರಣಾಗತಿಃ" ಎಙ್ಗರ ವಾಕ್ಯತ್ತಿಲ್ ಅಸಾತಪ್ರತೀತಿಯೈಕ್ಕೊಂಡು, (೨) "ಸ್ನಾನಂ ಸಪ್ತವಿಧಂ ಸ್ಮೃತಂ" ಇತ್ಯಾದಿಗಳಿಲ್ ಶೊನ್ನ ಸ್ನಾನಾದಿ ಭೇದ

ಮೇಲೆ ತೋರುವ ಅರ್ಥವನ್ನು ಸ್ವೀಕರಿಸಿ, ಮೇಲಕ್ಕೆ ತೋರುವರ್ಥವು ಯಾವು ದೆಂದರೆ ಶರಣಾಗತಿಯು ಆರು ವಿಧವಾದದ್ದು ಎಂಬುದು, "ಸ್ನಾನಂ ಸಪ್ತವಿಧಂ ಸ್ಮೃತಮ್" ಇತ್ಯಾದಿಗಳಿಲ್ - ಸ್ನಾನವು ಶಾಸ್ತ್ರದಲ್ಲಿ ಹೇಳಲ್ಪಟ್ಟಿರುವದು ಏಳುವಿಧವು ಎಂಬದೇ ಮೊದಲಾದವುಗಳಲ್ಲಿ, ಶೊನ್ನ ಸ್ನಾನಾದಿ ಭೇದಙ್ಗಳ್ ಪೋಲೇ-ಹೇಳಲ್ಪಟ್ಟ ಸ್ನಾನವೇ ಮೊದಲಾದ ಭೇದಗಳ ಹಾಗೆ, ತನಿತ್ತನಿಯೇ-ಬೇರೆ ಬೇರೆಯಾಗಿ, ಪ್ರಪತ್ತಿ ವಿಶೇಷಙ್ಗಳಾಗ - ಪ್ರಪತ್ತಿ ಭೇದಗಳಾಗಿ, ಪ್ರಸಙ್ಗಿಕ್ಕುಮ್ - ಉಂಟಾಗಬಹುದು ಸ್ನಾನಗಳು ಏಳು ವಿಧವೆಂದು ಹೇಳಿರುವ ಹಾಗೆ, ಷಡ್ವಿಧಾ ಶರಣಾಗತಿಃ ಎಂದರೆ ಪ್ರಪತ್ತಿಯು ಆರು ವಿಧಗಳೆಂದು ಈ ವಾಕ್ಯಕ್ಕೆ ಮೇಲೆ ಮೇಲೆ ತೋರುವ ಅರ್ಥವನ್ನು ಹೇಳಿಬಿಟ್ಟು ಪ್ರಪತ್ತಿಯು ವಿಶ್ವಾಸವೆಂದೂ ಪ್ರಾರ್ಥನೆಯೆಂದೂ, ಆತ್ಮ ನಿಕ್ಷೇಪವೆಂದೂ ಹೀಗೆ ಪ್ರಪತ್ತಿ ಭೇದಗಳೆಂದು ಅರ್ಥಮಾಡಿಬಿಟ್ಟರೆ,

"ಆನುಕೂಲ್ಯಸ್ಯ ಸಙ್ಕಲ್ಪಃ ಪ್ರಾತಿಕೂಲ್ಯಸ್ಯ ವರ್ಜನಂ।
ರಕ್ಷಿಷ್ಯತೀತಿ ವಿಶ್ವಾಸೋ ಗೋಪ್ತೃತ್ವವರಣಂ ತಥಾ।
ಆತ್ಮನಿಕ್ಷೇಪ ಕಾರ್ಪಣ್ಯೇ ಷಡ್ವಿಧಾ ಶರಣಾಗತಿಃ"

ಎಂದು ಹೇಳಿರುವದರಿಂದ ಆನುಕೂಲ್ಯಸ್ಯ ಸಂಕಲ್ಪವೇ ಒಂದು ವಿಧ ಶರಣಾಗತಿಯೆಂದೂ, ಪ್ರಾತಿಕೂಲ್ಯಸ್ಯ ವರ್ಜನವೇ ಇನ್ನೊಂದು ವಿಧವೆಂದೂ ಹೀಗೆಲ್ಲಾ ಅರ್ಥಮಾಡಬೇಕಾಗಿ ಬರುವದರಿಂದಲೂ, ಮತ್ತು ನ್ಯಾಸಃಪಂಚಾಂಗ ಸಂಯುತಃ ಇತ್ಯಾದಿ ಅನೇಕ ಪ್ರಮಾಣಗಳಿಗೆ ವಿರುದ್ಧವಾಗುವದರಿಂದಲೂ ಅಪಾರ್ಥವು; ಆದುದರಿಂದ ಷಡ್ವಿಧಾ ಶರಣಾಗತಿಃ ಎಂದರೆ ಶರಣಾಗತಿಯು, ಐದು ಅಂಗಗಳು ಒಂದು ಅಂಗಿಯು ಹೀಗೆ ಆರು ಅಂಶಗಳುಳ್ಳದು ಎಂದು, ಬಹುವ್ರೀಹಿ ಅರ್ಥವನ್ನು ಹೇಳುವದೇ ಸರ್ವಸಮಂಜಸವೆಂಬ ಭಾವವು, ಇದರ ಉಪಪಾದನೆಗೆ ೯೫೨-೪ನೆಯ ಪುಟಗಳನ್ನು ಪರಾಂಬರಿಸಿ ಆದುದರಿಂದ ಪ್ರಾರ್ಥನೆಯೇ ಪ್ರಪತ್ತಿಯು ಎಂಬ ಕೆಲವರಭಿಪ್ರಾಯವು ಇದರಿಂದ ಸಮಂಜಸವಾದುದಲ್ಲವೆಂದು ಸ್ಥಾಪಿಸಲ್ಪಟ್ಟಿತು.

"ಷಡ್ವಿಧಾ ಶರಣಾಗತಿಃ" ಎಂಬಲ್ಲಿ ಪ್ರಪತ್ತಿಯು ಆರುವಿಧಗಳೆಂದರೆ ಆನುಕೂಲ್ಯಸ್ಯ ಸಂಕಲ್ಪಾದಿಗಳೂ ಪ್ರಪತ್ತಿಗಳೆಂದು ಹೇಳಬೇಕಾಗುತ್ತದೆಂದು

ಙ್ಗಳ್ ಪೋಲೆ ತನಿತ್ತನಿಯೇ ಪ್ರಪತ್ತಿ ವಿಶೇಷಙ್ಗಳಾಗ ಪ್ರಸಙ್ಗಿಕ್ಕೈಯುಮ್ (೧) "ಪ್ರಪತ್ತಿಂ ತಾಂ ಪ್ರಯುಞ್ಜೀತ ಸ್ವಾಙ್ಗೈಃ ಪಞ್ಚಭಿ ರಾವೃತಾಮ್" ಇತ್ಯಾದಿ ವಚನಾನ್ತರ ಬಲತ್ತಾಲೆ ನಿಯಮಿಕ್ಕ ಪಾರ್ಕಿಲ್, ಅಪ್ಪಡಿಯೇ ಪ್ರಾರ್ಥನಾ ವಿಶ್ವಾಸಾದಿಗಳೈ ಪ್ರಪತ್ತಿಯೆನ್ರು ಶೊಲ್ಲುಗಿರ ವಚನಙ್ಗಳೈಯುಮ್ ನಿಯಮಿತ್ತು (೨) "ನ್ಯಾಸಃ ಪಞ್ಚಾಙ್ಗ ಸಂಯುತಃ" ಇತ್ಯಾದಿಗಳಿಲ್ ಪಡಿಯೇ ನಿಕ್ಷೇಪಮೊನ್ರುಮೇ ಅಙ್ಗಿ, ಇತರಙ್ಗಳ್ ಅಙ್ಗಗಳೆನ್ಗೈಯುಚಿತಮ್.

ದೋಷ ಉಂಟಾಗುತ್ತದೆ, ಆದುದರಿಂದ ಪ್ರಾರ್ಥನೆಯು ಪ್ರಪತ್ತಿಯಲ್ಲವೆಂದು ಹೇಳಲ್ಪಟ್ಟಿತು. ಈ ವಾದಕ್ಕೆ ಪ್ರತಿಕಕ್ಷಿಯವರು ಸಮಾಧಾನ ಹೇಳುವರು: ಏನಂದರೆ, "ಪ್ರಪತ್ತಿಂ ತಾಂ ಪ್ರಯುಞ್ಜೀತ ಸ್ವಾಙ್ಗೈಃ ಪಞ್ಚಭಿರಾವೃತಾಮ್" ಎಂಬ ಲಕ್ಷ್ಮೀತಂತ್ರ ಪ್ರಮಾಣಾನುಸಾರವಾಗಿ ಐದು ಅಙ್ಗಗಳು ಒಂದು ಅಙ್ಗೀ ಎಂದು ಭಾವಿಸುವದೇ ಯುಕ್ತವು; ಆದುದರಿಂದ ಪ್ರಾರ್ಥನೆಯೇ ಅಂಗೀ, ಮಿಕ್ಕವುಗಳೆಲ್ಲಾ ಆತ್ಮನಿಕ್ಷೇಪದೊಂದಿಗೆ ಅಂಗಗಳೆಂದು ಹೇಳುವೆವು ಎಂದರೆ ಆದಕ್ಕೆ ಸಮಾಧಾನವನ್ನು ಮುಂದಿನವಾಕ್ಯವಾದ "ಪ್ರಪತ್ತಿಂ ತಾಂ ಪ್ರಯುಞ್ಜೀತ" ಎಂಬುದರಿಂದ ಹೇಳುತ್ತಾರೆ.

"ಪಞ್ಚಭಿಃ - ಐದಾದ, ಸ್ವಾಙ್ಗೈಃ - ತನ್ನ ಅಙ್ಗಗಳಿಂದ, ಆವೃತಾಂ - ಕೂಡಿದ, ತಾಂ ಪ್ರಪತ್ತಿಂ - ಆ ಪ್ರಪದನವನ್ನು, ಪ್ರಯುಞ್ಜೀತ - ಪ್ರಯೋಗಿಸತಕ್ಕದ್ದು," ಇತ್ಯಾದಿ ವಚನಾಂತರ ಬಲತ್ತಾಲೇ - ಇವೇ ಮೊದಲಾದ ಬೇರೇ ಪ್ರಮಾಣಗಳ ಬಲದಿಂದ, ನಿಯಮಿಕ್ಕ ಪಾರ್ಕಿಲ್ - ಷಡ್ವಿಧಾ ಶರಣಾಗತಿ ಎಂಬಲ್ಲಿ ಆರು ವಿಧಗಳೆಂಬ ಅರ್ಥ ಹೇಳದೆ ಆರು ಅಂಶಗಳುಳ್ಳದ್ದೆಂದೇ ಹೇಳುವದು ವಿಧಾಯಕವಾಗಿ ಕಂಡರೆ, ಅಪ್ಪಡಿಯೇ - ಅದರ ಹಾಗೆಯೇ, ಪ್ರಾರ್ಥನೆ ವಿಶ್ವಾಸ ಮೊದಲಾದವುಗಳನ್ನೂ ಪ್ರಪತ್ತಿ ಎಂದು ಹೇಳುವ ಪ್ರಮಾಣವಚನಗಳನ್ನೂ ಸಹ, ನಿಯಮಿತ್ತು - ಅವುಗಳು ಅಙ್ಗಗಳೆಂದು ಹೇಳುವ ಇತರ ಪ್ರಮಾಣ ಬಲದಿಂದ ಖಂಡಿಸಿ "ನ್ಯಾಸಃ ಪಞ್ಚಾಙ್ಗಸಂಯುತಃ - ನಿಕ್ಷೇಪರೂಪವಾದ ಪ್ರಪತ್ತಿಯು ಐದು ಅಂಗಗಳಿಂದ ಕೂಡಿದುದು" ಇತ್ಯಾದಿಗಳಿಲ್ ಪಡಿಯೇ - ಇವೇ ಮೊದಲಾದ ಪ್ರಮಾಣಗಳಲ್ಲಿ ಹೇಳಿರುವ ಹಾಗೆ, ನಿಕ್ಷೇಪ. ಮೊನ್ರುಮೇ ಅಙ್ಗಿ - ನಿಕ್ಷೇಪ ಒಂದೇ ಅಙ್ಗಿಯು, ಒಂದೇ ಎಂದು ಹೇಳಿದುದರಿಂದ ವಿಶ್ವಾಸ

---

(೧) ಲಕ್ಷ್ಮೀ ತಂತ್ರ. ೨೮. ೧೧ ೬. (೨) ಅಹಿ. ೧೭. ೭೪.

ಪ್ರಾರ್ಥನೆಗಳು ಅಙ್ಗಿಗಳಾಗಲಾರವೆಂಬ ಭಾವವು. ಇತರಙ್ಗಾಳ್ - ಆರರಲ್ಲಿ ಮಿಕ್ಕ ಐದೂ ಅಙ್ಗಗಳು, ಎನ್ಗೈ ಯುಚಿತವ್ - ಎಂದು ಹೇಳುವದೇ ಸಮಂಜಸವು. ಇಲ್ಲಿ ವಾಕ್ಯಗಳಿಗೆ ನಿಯಮನ ಹೇಗೆ ಎಂದರೆ, ಅಙ್ಗಿಯಾದ ಪ್ರಪತ್ತಿಯು ಮಹಾ ವಿಶ್ವಾಸ ಪೂರ್ವಕವಾದ ಪ್ರಾರ್ಥನೆಯಿಂದ ವಿಶಿಷ್ಟವಾದುದು ಎಂದು ಕೆಲವು ವಾಕ್ಯ ಗಳು ಹೇಳುತ್ತವೆ ಎಂದೂ, ಇನ್ನು ಕೆಲವು ಮಹಾವಿಶ್ವಾಸವು ಪ್ರಧಾನವಾದ ಅಙ್ಗವಾಗಿ, ಅದರಿಂದ ವಿಶಿಷ್ಟವಾಗಿರಬೇಕೆಂದೂ ನಿಯಮನವೆಂಬ ಭಾವವು. "**ಪ್ರಪತ್ತಿಂ ತಾಂ ಪ್ರಯುಂಜೀತ ಸ್ವಾಙ್ಗೈಃ ಪಂಚಭಿರಾವೃತಾಂ**" ಎಂಬ ಬೇರೇ ಪ್ರಮಾಣಾನುಸಾರವಾಗಿ "**ಷಡ್ವಿಧಾ ಶರಣಾಗತಿಃ**" ಎಂಬ ವಾಕ್ಯ ವನ್ನು ಅನ್ವಯಿಸತಕ್ಕದ್ದು ನ್ಯಾಯವಾದುದರಿಂದ, ಒಂದೇ ಅಙ್ಗಿಯು, ಐದು ಅಙ್ಗಗಳೆಂದು ಅರ್ಥ ಮಾಡುವದೇ ಯುಕ್ತವೆಂದು ಒಪ್ಪಿ, ಪ್ರಾರ್ಥನೆಯೇ ಅಙ್ಗಿಯು, ಇನ್ನು ಮಿಕ್ಕ ಐದೂ ಅಙ್ಗಗಳೆಂದು ಹೇಳುತ್ತೇವೆ. "**ಸ್ನಾನಂ ಸಪ್ತವಿಧಂ**" ಎಂಬ ಪ್ರಮಾಣದಲ್ಲಾದರೋ ಏಳುವಿಧವಲ್ಲವೆಂದು ತೋರುವ ಪ್ರಮಾಣಬಲವ್ಯಾವುದೂ ಇಲ್ಲವಾದುದರಿಂದ, ಸ್ನಾನವು ಏಳುವಿಧವೆಂದೇ ಅರ್ಥ ಮಾಡತಕ್ಕದ್ದು. "**ಷಡ್ವಿಧಾ ಶರಣಾಗತಿಃ**" ಎಂಬುವ ವಾಕ್ಯಾರ್ಥಕ್ಕಾದರೋ **ಪ್ರಪತ್ತಿಂ ತಾಂ ಪ್ರಯುಂಜೀತ** ಇತ್ಯಾದಿ ಇತರ ಪ್ರಮಾಣ ಬಲವಿರುವದರಿಂದ ಐದು ಅಙ್ಗಗಳು, ಒಂದು ಅಙ್ಗಿ ಎಂದೇನೋ ನೀವು ಹೇಳುವಹಾಗೆ ಹೇಳುವೆವು. ಆದರೆ ಪ್ರಾರ್ಥನೆಯು ಅಙ್ಗಿ, ಇತರಗಳು ಅಙ್ಗಗಳೆಂದು ಹೇಳುವೆವು ಎಂಬುದು ಇಲ್ಲಿ ಪೂರ್ವ ಪಕ್ಷವು. ಇದಕ್ಕೆ ಸಮಾಧಾನವು ಹೇಗೆಂದರೆ—ಐದು ಅಙ್ಗಗಳು ಒಂದು ಅಙ್ಗಿ ಎಂದು ಇತರ ಪ್ರಬಲಪ್ರಮಾಣದಿಂದ ಒಪ್ಪಿಕೊಂಡನಂತರ, ಹಾಗೆಯೇ "**ನ್ಯಾಸಃ ಪಂಚಾಂಗ ಸಂಯುತಃ**" ಎಂಬ ಪ್ರಬಲಪ್ರಮಾಣವಾದ ಅಹಿರ್ಬುಧ್ನ್ಯ ಸಂಹಿತಾವಾಕ್ಯ ಸಾಮರ್ಥ್ಯದಿಂದ ನ್ಯಾಸವೆಂದರೆ ಆತ್ಮನಿಕ್ಷೇಪ ವೆಂಬ ಪ್ರಪತ್ತಿಯು ಐದು ಅಙ್ಗಗಳುಳ್ಳದ್ದೆಂದು ತೋರಿ ಬರುವದರಿಂದ ಆತ್ಮನಿಕ್ಷೇ ಪವೇ ಅಙ್ಗಿಯೆಂದೂ, ಇತರಗಳು ಅಙ್ಗಗಳೆಂದೂ ಒಪ್ಪಿಕೊಳ್ಳಲು ಅಭ್ಯಂತರ ವೇನು? ಎಂಬ ಭಾವವು.

ಇದರಮೇಲೆ ಇನ್ನೊಂದು ಪೂರ್ವಪಕ್ಷವೇನೆಂದರೆ:—"**ಭೂಯಸಾಂ ಸ್ಯಾದ್ಬಲೀಯಸ್ತ್ವಂ**" ಎಂಬ ಭೂಯಸಾಂ ನ್ಯಾಯದ ಪ್ರಕಾರ, ಒಂದು ವಿಷಯ ದಲ್ಲಿ ಅನೇಕ ಪ್ರಮಾಣಗಳಿದ್ದರೆ, ಅದು ಒಂದೆರಡು ಶಾಸ್ತ್ರವಾಕ್ಯಗಳಿಗೆ ವಿರೋಧ ವಾಗಿ ತೋರಿಬಂದರೂ ಇವುಗಳನ್ನು ಬೇರೇ ವಿಧವಾಗಿ ಅನ್ವಯಿಸಿಬಿಟ್ಟು ಆ ವಿಷ ಯವೇ ಉಪಾದೇಯವೆಂದು ಭಾವಿಸತಕ್ಕದ್ದು. ಹೀಗೆ ಪ್ರಾರ್ಥನೆಯೇ ಪ್ರಪತ್ತಿ ಯೆಂಬುದಕ್ಕೆ ಅನೇಕ ಪ್ರಮಾಣಗಳಿರುವಾಗ, ಅವುಗಳನ್ನೆಲ್ಲಾ ತಿರಸ್ಕರಿಸಿ, ಆತ್ಮ

ಭೂಯಸಾಂ ನ್ಯಾಯರೀತ್ಯಾ ನಿಕ್ಷೇಪ ಏವ ಅಙ್ಗೀ ನ ತು ಪ್ರಾರ್ಥನಾ.

ಭೂಯಸಾಂ ನ್ಯಾಯತ್ತಾಲ್ ಸ್ವಾರಸ್ಯತ್ತಾಲುಮ್ ಸಾತ್ಯಕಿತನ್ತ್ರ ಲಕ್ಷ್ಮೀತನ್ತ್ರಾಹಿರ್ಬುಧ್ನ್ಯ ಸಂಹಿತಾದಿಗಳಿಲ್ ಪ್ರಪತ್ತ್ಯಧ್ಯಾಯಙ್ಗಳಿಲೇ ನಿಕ್ಷೇಪಮಙ್ಗಿಯೆನ್ರೇ ಪ್ರಸಿದ್ಧಮ್.

ನಿಕ್ಷೇಪವೇ ಅಙ್ಗಿ ಎಂದು ಭಾವಿಸುವದು ಹೇಗೆ? ಪ್ರಾರ್ಥನೆಯೇ ಪ್ರಪತ್ತಿ ಎಂದು ಹೇಳುವ ಪ್ರಮಾಣಗಳು ಯಾವುವೆಂದರೆ—

೧. ತ್ವಮೇವೋಪಾಯಭೂತೋ ಮೇ ಭವೇತಿ ಪ್ರಾರ್ಥನಾಮತಿಃ ।
ಶರಣಾಗತಿರಿತ್ಯುಕ್ತಾ ಸಾ ದೇವೇಸ್ಮಿನ್ ಪ್ರಯುಜ್ಯತಾಂ ॥ ಅಹಿ.

೨. ಅನನ್ಯಸಾಧ್ಯೇ ಸ್ವಾಭೀಷ್ಟೇ ಮಹಾವಿಶ್ವಾಸಪೂರ್ವಕಂ ।
ತದೇಕೋಪಾಯತಾ ಯಾಚ್ಞಾ ಪ್ರಪತ್ತಿಶ್ಶರಣಾಗತಿಃ ॥ ಭರತಮುನಿ ವಾಕ್ಯವು.

೩. ಉಪಾಯಂ ವೃಣುಲಕ್ಷ್ಮೀಶಂ ತಮುಪೇಯಂ ವಿಚಿಂತ್ಯಚ । ಇತ್ಯಾದಿ.

ಈ ಪೂರ್ವಪಕ್ಷಕ್ಕೆ ಸಮಾಧಾನವಾಗಿ ಹೇಳುತ್ತಾರೇನೆಂದರೆ :—ಸ್ವಪ್ರ ಹೇಳುವ ಭೂಯಸಾಂ ನ್ಯಾಯಪ್ರಕಾರವಾಗಿಯೇ ಆತ್ಮನಿಕ್ಷೇಪವೇ ಪ್ರಪತ್ತಿಯು ಅಙ್ಗಿ ಎಂದು ಹೇಳುವದರಿಂದ ಆತ್ಮನಿಕ್ಷೇಪವೇ ಅಙ್ಗಿಯೇ ವಿನಾ ಪ್ರಾರ್ಥನೆಯಲ್ಲವೆಂದು ಹೇಳುತ್ತಾರೆ.

ಭೂಯಸಾಂ ನ್ಯಾಯಪ್ರಕಾರ ನಿಕ್ಷೇಪವೇ ಅಙ್ಗಿಯು, ಪ್ರಾರ್ಥನೆಯಲ್ಲವು

ಭೂಯಸಾಂ ನ್ಯಾಯತ್ತಾಲ್, ಸ್ವಾರಸ್ಯತ್ತಾಲುಮ್ - "ಭೂಯಸಾಂ ಸ್ಯಾದ್ಬಲೀಯಸ್ತ್ವಂ" ಬಹು ಪ್ರಮಾಣಗಳಿರುವದಕ್ಕೇನೇ ಪ್ರಬಲಸಾಮರ್ಥ್ಯವು ಎಂಬ ನ್ಯಾಯದ ಪ್ರಕಾರ ಗೊಂಡಿದರೂ, ಸಾತ್ಯಕಿ ತಂತ್ರ, ಲಕ್ಷ್ಮೀತಂತ್ರ, ಅಹಿರ್ಬುಧ್ನ್ಯ ಸಂಹಿತೆಗಳಲ್ಲಿರುವ ಪ್ರಪತ್ತ್ಯಧ್ಯಾಯಗಳಲ್ಲಿ ನಿಕ್ಷೇಪವೇ, ಅಙ್ಗಿಯೆನ್ರೇ ಪ್ರಸಿದ್ಧಮ್ - ಅಙ್ಗಿಯೆಂಬುದೇ ಪ್ರಸಿದ್ಧವಾದ ವಿಷಯವು ಆ ಪ್ರಮಾಣಗಳು ಯಾವುವೆಂದರೆ—

೧ "ಸ್ವಾತ್ಮಾನಂ ಮಯಿ ನಿಕ್ಷಿಪೇತ್" ಸಾತ್ಯಕಿ ತಂತ್ರವಾಕ್ಯವು ೧೦೬ನೆಯ ಪುಟವನ್ನು ನೋಡಿ. ೨. "ಆತ್ಮಾತ್ಮೀಯ ಭರನ್ಯಾಸೋ ಹ್ಯಾತ್ಮ

ಅಙ್ಗಸ್ಯ ಪ್ರಾಧಾನ್ಯಾತ್ ಅಙ್ಗಾಙ್ಗಿನೋರಭೇದಃ, ಏಷಃ ಲೋಕಸಿದ್ಧಃ

"ತ್ವಮೇವೋಪಾಯ ಭೂತೋ ಮೇ ಭವೇತಿ ಪ್ರಾರ್ಥನಾಮತಿಃ । ಶರಣಾಗತಿರಿತ್ಯುಕ್ತಾ" ಎಙ್ಗಿರದುವುಮ್ ತತ್ಪ್ರಕರಣತ್ತಿಲೆ ಪ್ರಧಾನವಾಗ

ನಿಕ್ಷೇಪ ಉಚ್ಯತೇ" ಲಕ್ಷ್ಮೀತಂತ್ರ ವಾಕ್ಯವು. ೩. ತೇನ ಸಂರಕ್ಷ್ಯಮಾಣಸ್ಯ ಫಲೇ ಸ್ವಾಮ್ಯ ವಿಯುಕ್ತತಾ । ಕೇಶವಾರ್ಪಣ ಪರ್ಯಂತಾ ಹ್ಯಾತ್ಮನಿಕ್ಷೇಪ ಉಚ್ಯತೇ " ॥ ಲಕ್ಷ್ಮೀತಂತ್ರವಾಕ್ಯವು. ೧೮೬೩-೪ನೆಯ ಪುಟಗಳನ್ನು ನೋಡಿ. ೪. "ನ್ಯಾಸಃ ಪಂಚಾಂಗ ಸಂಯುತಃ" ಅಹಿರ್ಬುಧ್ನ್ಯ ಸಂಹಿತಾವಾಕ್ಯವು. ೫. "ಅನೇನೈವತು ಮನ್ತ್ರೇಣ ಸ್ವಾತ್ಮಾನಂ ಮಯಿ ನಿಕ್ಷಿಪೇತ್" ಮಯಿ ನಿಕ್ಷಿಪ್ತ ಕರ್ತವ್ಯಃ ಕೃತಕೃತ್ಯೋ ಭವಿಷ್ಯತಿ " ॥ ಸಾತ್ತ್ವಕಿ ತಂತ್ರವಾಕ್ಯವು. ೧೧೦೨ನೆಯ ಪುಟವನ್ನು ನೋಡಿ. ೬ "ಯದ್ಯೇನ ಕಾಮ ಕಾಮೇನ ನ ಸಾಧ್ಯಂ ಸಾಧನಾಂತರೈಃ । ತೇನ ತೇನಾಪ್ಯತೇ ತತ್ತನ್ನ್ಯಾಸೇನೈವ ಮಹಾಮುನೇ"॥ ೭. "ಓಮಿತ್ಯಾತ್ಮಾನಂ ಯುಂಜೀತ" ೮. "ಆತ್ಮಾತ್ಮೀಯ ಭರಂ ಸರ್ವಂ ನಿಕ್ಷಿಪ್ಯ ಶ್ರೀಪತೇಃ ಪದೇ" ೯. "ವಿಧಾಯಾತ್ಮ ನಿವೇದನಂ" ೧೦ "ನಿವೇದಯತ ಮಾಂ ಕ್ಷಿಪ್ರಂ ವಿಭೀಷಣ ಮುಪಸ್ಥಿತಮ್"

ಹೀಗೆ ಪ್ರಾರ್ಥನಾವ್ಯತಿರಿಕ್ತಾತ್ಮನಿಕ್ಷೇಪಕ್ಕೆ ಅನೇಕ ಪ್ರಮಾಣಗಳಿರುವುದರಿಂದ ಆತ್ಮನಿಕ್ಷೇಪವೇ ಅಙ್ಗಿಯು. ಹೀಗೆ ಆತ್ಮ ನಿಕ್ಷೇಪವೇ ಅಙ್ಗಿ ಎಂದು ಹೇಳುವದಾದರೆ, "ತ್ವಮೇವೋಪಾಯ ಭೂತೋ ಮೇ" ಎಂಬ ವಾಕ್ಯದಲ್ಲಿ ಭವೇತಿ ಪ್ರಾರ್ಥನಾಮತಿಃ ಎಂಬ ಪ್ರಾರ್ಥನಾ ಬುದ್ಧಿಯುಳ್ಳದೇ ಶರಣಾಗತಿ ಎಂದು ಹೇಳುವದಕ್ಕೆ ನಿರ್ವಾಹವು ಹೇಗೆ? ಆ ವಾಕ್ಯದ ಅಭಿಪ್ರಾಯವೇನು? ಎಂದು ಕೇಳಿದರೆ ಅವರ ತಾತ್ಪರ್ಯವನ್ನು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.

ತ್ವಂ - ನೀನು, ಮೇ - ಅನನ್ಯಗತಿಕನಾದ ನನಗೆ, **ಉಪಾಯ ಭೂತ ಏವ** - ಉಪಾಯ ರೂಪನೇ ಎಂದರೆ ಉಪಾಯಾನ್ತರವಾದ ಉಪಾಸನಸ್ಥಾನದಲ್ಲಿ ನೀನೇ ನಿಲ್ಲುವನು ಭವ - ಆಗು, ಇತಿ - ಎಂಬುದಾಗಿ **ಪ್ರಾರ್ಥನಾಮತಿಃ** - ಪ್ರಾರ್ಥಿಸುವ ಜ್ಞಾನವುಳ್ಳದೇ, **ಶರಣಾಗತಿರಿತ್ಯುಕ್ತಾ**-ಶರಣಾಗತಿ ಎಂದು ಹೇಳಲ್ಪಟ್ಟದು, **ಸಾದೇವೇಸ್ಮಿನ್ ಪ್ರಯುಜ್ಯತಾಂ** - ಎಂದು ಶ್ಲೋಕ ಪೂರಣವು

ಚೋದ್ಯನ್ನ ಭರನ್ಯಾಸ ಪರ್ಯಂತ ಮೆನ್ನು ಮಿಡಮ್ ಅವಧಾರಣ ಸಹ ಕೃತೋಪಾಯ ಶಬ್ದತ್ತಾಲೇ ವ್ಯಂಜಿತಮ್. ಒರೋರು ವಿವಕ್ಷೈಗಳಾಲೇ ಅಙ್ಗಿಯೈ ಪ್ರಧಾನಮಾಗ ಚೊಲ್ಲುಗೈ ಲೋಕತ್ತಿಲುಮುಂಡು.

ಸಾ - ಅಂತಹ ಶರಣಾಗತಿಯು, **ಅಸ್ಮಿನ್ ದೇವೇ** - ಈ ಕ್ರೀಡಾಪರನಾದ ಸರ್ವೇಶ್ವರನಲ್ಲಿ, **ಪ್ರಯುಜ್ಯತಾಂ** - ಪ್ರಯೋಗಿಸಲ್ಪಡಲಿ, ಎಙ್ಗಿರದುವುಮ್ - ಎಂದು ಹೇಳಿರುವದೂ, **ತತ್ಪ್ರಕರಣತ್ತಿಲೆ** - ಆ ಸಂದರ್ಭದಲ್ಲಿ, **ಪ್ರಧಾನಮಾಗ ಚೋದ್ಯನ್ನ** - ಮುಖ್ಯವಾಗಿ ಹೇಳಲ್ಪಟ್ಟ, **ಭರನ್ಯಾಸಪರ್ಯಂತಮೆನ್ನುಮಿಡಮ್** - ಭರನ್ಯಾಸ ಪರ್ಯಂತವಾದುದು ಎನ್ನುವ ಸಂದರ್ಭವು, **ಅವಧಾರಣ ಸಹಕೃತ** - ಏವ ಎಂಬ ಅವಧಾರಣದಿಂದ ಸೇರಿದ, **ಉಪಾಯ ಶಬ್ದತ್ತಾಲೇ** - ಉಪಾಯ ಭೂತ ಎಂಬ ಶಬ್ದದಿಂದ, **ವ್ಯಂಜಿತಮ್** - ವ್ಯಕ್ತವು, ಸರ್ವೇಶ್ವರನೇ ಉಪಾಯವಾಗಬೇಕೇ ವಿನಾ ಅನ್ಯಥಾ ಇಲ್ಲವು ಎಂಬ ಜ್ಞಾನವುಳ್ಳದ್ದು ಎಂದು ಹೇಳಿರುವದರಿಂದ ಈ ಪ್ರಾರ್ಥನಾರೂಪವಾದ ಶರಣಾಗತಿಯು ಭರನ್ಯಾಸ ಪರ್ಯಂತವೆಂದು ಭಾವಿಸುವದೇ ನ್ಯಾಯವೆಂದು ತೋರಿಬರುತ್ತದೆ. ಇಲ್ಲಿ ಏವ ಎಂಬ ಅವಧಾರಣವನ್ನು ಉಪಾಯಭೂತನೆಂಬುದರೊಂದಿಗೆ ಅನ್ವಯಿಸತಕ್ಕದ್ದು. ಹೀಗೆ ಉಪಾಯವಾಗು ಎಂದು ಪ್ರಾರ್ಥಿಸಿ ಶರಣಾಗತಿಯನ್ನನುಷ್ಠಿಸತಕ್ಕದ್ದೆಂಬ ಭಾವವು; **ಸಾದೇವೇಸ್ಮಿನ್ ಪ್ರಯುಜ್ಯತಾಂ** - ಎಂದು ಉತ್ತರಾರ್ಧಾಂತ್ಯದಲ್ಲಿ ಹೇಳಿರುವದರಿಂದ ಉಪಾಯರೂಪ ಪ್ರಾರ್ಥನೆಗಿಂತ ಪ್ರಯೋಗವು, ಬೇರೆಯಾದುದೆಂಬುದೂ ತೋರಿಬರುತ್ತದೆ.

ಇನ್ನು ಕೆಲವು ಪ್ರಮಾಣಗಳಲ್ಲಿ, "ತ್ವಮೇವೋಪಾಯ ಭೂತೋ ಮೇ" ಎಂಬ ಪ್ರಮಾಣದಲ್ಲಿರುವ ಹಾಗೆ ಅವಧಾರಣ ಸಹಕೃತ ಉಪಾಯಶಬ್ದರೂಪ ಸಹಾಯವಿಲ್ಲದಿರುವ ಸಂದರ್ಭದಲ್ಲಿ ಅಙ್ಗವನ್ನೇ ಸಾಕ್ಷಾತ್ತಾಗಿ ಅಙ್ಗಿಯಾಗಿ ಹೇಳಲ್ಪಟ್ಟ ಪಕ್ಷದಲ್ಲಿ ಹೇಗೆ ಎಂದರೆ ಲೋಕ ವಾಡಿಕೆಯಲ್ಲೂ ಮುಖ್ಯವಾದ ಅಙ್ಗದ ಪ್ರಾಧಾನ್ಯವನ್ನು ವಿವಕ್ಷಿಸುವದಕ್ಕಾಗಿ ಅಙ್ಗಿತ್ವೇನ ಭಾವನೆಯುಂಟೆಂದು ತಿಳಿಸುತ್ತಾರೆ.

ಅಜ್ಞಾನಾದಥವಾ ಜ್ಞಾನಾದಪರಾಧೇಷು ಸತ್ಸ್ವಪಿ ।
ಪ್ರಾಯಶ್ಚಿತ್ತಂ ಕ್ಷಮಸ್ವೇತಿ ಪ್ರಾರ್ಥನೈಕೈವ ಕೇವಲಮ್॥

ಇಲ್ಲಿ ಕ್ಷಮಿಸ್ವೆನ್ನು ಎಂಬ ಪ್ರಾರ್ಥನೆಯೇ ಮುಖ್ಯವಾದ ಪ್ರಾಯಶ್ಚಿತ್ತವೆಂದು ಹೇಳಿರುವದು, ಈ ಪ್ರಾರ್ಥನಾರೂಪವಾದ ಅಙ್ಗದ ಮಾಹಾತ್ಮ್ಯವನ್ನು ತಿಳಿಸುವ

"ಶರಣಂವ್ರಜ" ಇತ್ಯಾದಿ ವಿಶ್ವಾಸಾಙ್ಗಪರವಾಕ್ಯೇಽಪಿ ಆತ್ಮ ಸಮರ್ಪಣ ಪರ್ಯನ್ತತ್ವ ಸಿದ್ಧಿಃ

ಆಲಂಭ ಶಬ್ದವತ್ ಯಾಗಪರ್ಯನ್ತ ಮಾನಾರ್ಥ್ಯೇಲೆ, "ಶರಣಂ

ದರ್ಶ್ವಾಗಿ ಅಙ್ಗಿಯೊಂದಿಗೆ ಅಭೇದವು ಹೇಳಲ್ಪಟ್ಟಿರುತ್ತದೆ. ಓರೋದು ವಿವಕ್ಷೈ ಗಳಾಲೇ - ಒಂದೊಂದು ವಿಷಯವನ್ನು ಮುಖ್ಯವಾಗಿ ತಿಳಿಸುವ ಅಪೇಕ್ಷೆಯಿಂದ, ಅಙ್ಗಙ್ಗಳ್ಕೆ - ಅಙ್ಗಗಳನ್ನು. ಪ್ರಧಾನವಾಗ ಚೊಲ್ಲುಗೈ - ಮುಖ್ಯವಾಗಿ ಹೇಳೋಣವು, ಲೋಕತ್ತಿಲು ಮುಂಡು-ಲೋಕವಾದಿಕೆಯಾಗಿಯೂ ಉಂಟು. ಶಾಸ್ತ್ರಸಹಾಯಕನಾದ ರಾಜಭಟನನ್ನೇ "ಇವನೇ ರಾಜನು" ಎಂದು ಉಪಚಾರ ರೂಪವಾಗಿ ಪ್ರಯೋಗವು ಉಂಟು. ಹಾಗೆಯೇ ಕ್ಷಮಸ್ವ ಎಂಬ ಪ್ರಾರ್ಥನೆಯು ಅಙ್ಗವು; ಈ ಪ್ರಾರ್ಥನೆಯು ಪ್ರಧಾನರೂಪ ಅಙ್ಗವಾದುದರಿಂದ ಇದಕ್ಕೂ ಪ್ರಪದನಕ್ಕೂ ಅಭೇದವು ಹೇಳಲ್ಪಟ್ಟಿರುತ್ತದೆಂಬ ಭಾವವು

ಶರಣಂ ವ್ರಜ ಇವೇ ಮೊದಲಾದ ವಿಶ್ವಾಸದ್ಯೋತಕ ವಾಕ್ಯ ದಲ್ಲೂ ಆತ್ಮಸಮರ್ಪಣ ರೂಪಾಙ್ಗಿಯ ಸಿದ್ಧಿಯು.

ಹಿಂದೆ ಲೋಕದೃಷ್ಟಾಂತದಿಂದ ಪ್ರಧಾನಾಙ್ಗಕ್ಕೆ ಅಙ್ಗಿತ್ವೇನ ನಿರ್ದೇಶ ಉಂಟೆಂದು ಹೇಳಿದರು. ಈ ಮುಂದಿನ ವಾಕ್ಯದಿಂದ **"ಲೋಕೇ ವೇದೇಚ"** ಎಂದು ಹೇಳಿರುವಹಾಗೆ ವೇದಗಳಲ್ಲಿ ವಿಧಿಸಲ್ಪಟ್ಟಿರುವದೇ ಲೋಕಸಂಮತವಾದುದರಿಂದ ವೈದಿಕ ಮರ್ಯಾದೆಯೂ ಹಾಗೆ ಉಂಟೆಂಬುದಕ್ಕೆ ಒಂದು ದೃಷ್ಟಾಂತವನ್ನು ದಯಪಾಲಿಸುತ್ತಾರೆ. **"ಮಾಮೇಕಂ ಶರಣಂ ವ್ರಜ", "ತಮೇವ ಶರಣಂ ಗಚ್ಛ"** ಇತ್ಯಾದಿ ವಾಕ್ಯಗಳಲ್ಲಿ ಮಹಾವಿಶ್ವಾಸಮಾತ್ರವೇ ತೋರುಬರುತ್ತದೇ ವಿನಾ, ಆತ್ಮನಿಕ್ಷೇಪರೂಪ ಅಙ್ಗಿಯು ತೋರಬರುವದಿಲ್ಲವಲ್ಲಾ ಎಂದರೆ ವ್ರಜ, ಗಚ್ಛ, ಎಂಬವುಗಳಲ್ಲಿರುವ ಧಾತುಗಳಿಂದ ತೋರಿಬರುವ ಅರ್ಥ ಪ್ರಕರಣಗಳಿಂದ ಆತ್ಮನಿಕ್ಷೇಪವೂ ಹೇಳಲ್ಪಟ್ಟಿತೆಂದು ಉಪದೇಶಿಸುತ್ತಾರೆ.

ಆಲಂಭ ಶಬ್ದವತ್ - **"ವಾಯವ್ಯಗ್ಂ ಶ್ವೇತಮಾಲಭೇತ", ಅಗ್ನೀಷೋಮೀಯಂ ಪಶುಮಾಲಭೇತ"**, ಇತ್ಯಾದಿ ಸಂದರ್ಭಗಳಲ್ಲಿ ಪ್ರಯೋಗಿಸಲ್ಪಟ್ಟ ಆ ಪಶುಹಿಂಸೆಯನ್ನು ಬೋಧಿಸುವ ಆಲಂಭಶಬ್ದವು, **ಯಾಗ ಪರ್ಯಂತ ಮಾನಾರ್ಥ್ಯೇಲೆ** - ಪಶುಹಿಂಸೆ ಮಾತ್ರವನ್ನೇ ಬೋಧಿಸದೇ, ಪೂರಾ ಅಗ್ನೀಷೋಮೀಯ ಯಾಗವನ್ನೆಲ್ಲಾ ಹ್ಯಾಗೆ ಬೋಧಿಸುತ್ತದೋ ಹಾಗೆ, **"ಶರಣಂ ವ್ರಜ"**

ವ್ರಜ" ಇತ್ಯಾದಿಗಳಿಲ್ ಧಾತುಕ್ಕಳ್ ನ್ಯಾಸ ನಿಕ್ಷೇಪತ್ಯಾಗಾದಿ ಶಬ್ದಙ್ಗಳಾಲೇ ಶೊಲ್ಲಪ್ಪಟ್ಟ ಆತ್ಮಯಾಗತ್ತೈ ಚೊಲ್ಲುಗೈ ವೈದಿಕ ಮರ್ಯಾದೈಕ್ಕುಮ್ ಅನುಗುಣಮ್.

ಇತ್ಯಾದಿಗಳಿಲ್, ಶರಣವನ್ನು ಹೊಂದು ಎನೇ ಮೊದಲಾದವುಗಳಲ್ಲಿ, ಇಲ್ಲಿ ಆದಿಪದದಿಂದ "ತಮೇವ ಶರಣಂ ಗಚ್ಛ" ಇತ್ಯಾದಿಗಳು ಬೋಧಿಸಲ್ಪಟ್ಟವು **ಧಾತುಗಳ್** - ವ್ರಜ, ಗಚ್ಛ, ವೃಣ, ಎಂಬಿವೇ ಧಾತುಗಳ, ನ್ಯಾಸ, ನಿಕ್ಷೇಪ, ತ್ಯಾಗ ಮೊದಲಾದ ಶಬ್ದಗಳಿಂದ, **ಶೊಲ್ಲಪ್ಪಟ್ಟ ಆತ್ಮಯಾಗತ್ತೈ** - ಹೇಳಲ್ಪಟ್ಟ ಆತ್ಮಹವಿಸ್ಸಮರ್ಪಣ ರೂಪವಾಗವನ್ನು, **ಶೊಲ್ಲುಗೈ** - ಹೇಳೋಣವು, **ವೈದಿಕ ಮರ್ಯಾದೈಕ್ಕುಮ್** - ಶಾಸ್ತ್ರಮರ್ಯಾದೆಗೂ, **ಅನುಗುಣಮ್** - ಅನುರೂಪವಾದದು. ಅಗ್ನೀಷೋಮೀಯಂ ಪಶುಮಾಲಭೇತ ಎಂಬ ವಾಕ್ಯದಿಂದ ಪಶುಹನನ ಮಾತ್ರವೇ ಹೇಳಲ್ಪಡದೆ ಆ ಯಾಗವೇ ಹೇಗೆ ಹೇಳಲ್ಪಡುತ್ತದೋ, ಹಾಗೆಯೇ ಶರಣಂ ವ್ರಜ ಇತ್ಯಾದಿ ವಾಕ್ಯದಿಂದ ಶರಣಾಗತಿಯಾದ ಆತ್ಮನಿಕ್ಷೇಪವೇ ಹೇಳಲ್ಪಟ್ಟಿತೆಂಬ ಭಾವವು. ಏಕೆಂದರೆ ಪಶುವಿನ ಆಲಂಭವು ಯಾಗದ ಏಕದೇಶವು ಹೇಗೋ, ಹಾಗೆ ಶರಣವನ್ನು ಹೊಂದುವದೂ ಸಹ, ಆತ್ಮಯಾಗದ ಏಕದೇಶವು. ಈ ಆತ್ಮ ನಿಕ್ಷೇಪವೂ ಆತ್ಮಯಾಗದಹಾಗೆ ಎಲ್ಲಿ ಹೇಳಲ್ಪಟ್ಟಿರುತ್ತದೆ? ಎಂದರೆ

೧. "ನಮಸಾ ಯೋ ಕರೋದ್ವೇವೇ ಸಸ್ವಧ್ವರ ಇತೀರಿತಃ" ಇಲ್ಲಿ ಭರನ್ಯಾಸಾನುಷ್ಠಾನವು ಸನಿಾಚೀನವಾದ ಅಧ್ವರವೆಂದರೆ ಯಾಗಾನುಷ್ಠಾನವೆಂದು ಹೇಳಲ್ಪಟ್ಟಿರುತ್ತದೆ.

೨. "ಬ್ರಹ್ಮಣೇತ್ವಾ ಮಹಸ ಓಮಿತ್ಯಾತ್ಮಾನಂ ಯುಂಜೀತ" ಮಹಾತೇಜೋರೂಪನಾದ ಪರಬ್ರಹ್ಮನಾದ ನಿನಗೆ ಈ ಆತ್ಮಹವಿಸ್ಸನ್ನು ಸಮರ್ಪಿಸುವೆನು ಎಂಬದಾಗಿ, ಆತ್ಮಾವನ್ನು ಸ್ವಾಮಿಸಾದರವಿಂದದಲ್ಲಿಡತಕ್ಕದ್ದು.

೩. "ಹವಿಗೃಹೀತ್ವಾತ್ಮರೂಪಂ ವಸುರಣ್ಯೇತಿ ಮಂತ್ರತಃ।
ಜುಹುಯಾತ್ಪ್ರಣವೇನಾಗ್ನಾವಚ್ಯುತಾಖ್ಯೇ ಸನಾತನೇ"॥

ವಸುರಣ್ಯೋವಿಭೂರಸಿ ಎಂಬ ಮಂತ್ರಮೂಲಕವಾಗಿ, ಆತ್ಮರೂಪವಾದ ಹವಿಸ್ಸನ್ನು ತೆಗೆದುಕೊಂಡು ಅನಾದಿಯಾದ ಅಚ್ಯುತನೆಂಬ ಅಗ್ನಿಯಲ್ಲಿ, ಓಂ ಎಂಬ ಪ್ರಣವವನ್ನು ಉಚ್ಚರಿಸುತ್ತಾ ಹೋಮ ಮಾಡತಕ್ಕದ್ದು. ಆ "ವಸುರಣ್ಯೋ" ಎಂಬ ಪ್ರಸಿದ್ಧನ ಕರಣಮಂತ್ರವು ಯಾವುದೆಂದರೆ —

"ವಸುರಣ್ವೋ ವಿಭೂರಸಿ । ಪ್ರಾಣೇ ತ್ವಮಸಿ ಸಂಧಾತಾ । ಬ್ರಹ್ಮನ್ ತ್ವಮಸಿ ವಿಶ್ವಸೃಕ್ । ತೇಜೋದಾ ಸ್ತ್ವಮಸ್ಯಗ್ನೇಃ, ವರ್ಚೋದಾ ಸ್ತ್ವಮಸಿ ಸೂರ್ಯಸ್ಯ, ದ್ಯುಮ್ನೋದಾ ಸ್ತ್ವಮಸಿ ಚಂದ್ರಮಸಃ । ಉಪಯಾಮ ಗೃಹೀತೋಽಸಿ । ಬ್ರಹ್ಮಣೇ ತ್ವಾ ಮಹಸ ಓಮಿತ್ಯಾತ್ಮಾನಮ್ ಯುಂಜೀತ । ಏತದ್ವೈ ಮಹೋಪನಿಷದಂ ದೇವಾನಾಂ ಗುಹ್ಯಂ, ಯ ಏವಂ ವೇದ ಬ್ರಹ್ಮಣೋ ಮಹಿಮಾನಮಾಪ್ನೋತಿ ತಸ್ಮಾ ದ್ಬ್ರಹ್ಮಣೋ ಮಹಿಮಾನಮಿತ್ಯುಪನಿಷತ್" ತೈ ನಾ. ೪. ೫೧

ವಸುರಣ್ವಃ - ವಸುಗಳಿಂದ ಪ್ರಾಪ್ಯನು ಎಂದರೆ ವಸು ಶಬ್ದದಿಂದ ಉಪಲಕ್ಷಿತರಾದ ಸಮಸ್ತ ದೇವತೆಗಳಿಗೂ ಉಪಾಸ್ಯನು, **ವಿಭೂರಸಿ** - ಸರ್ವವ್ಯಾಪಕನಾಗಿದ್ದೀ, **ಪ್ರಾಣೇ** - ಪ್ರಾಣಶಬ್ದದಿಂದ ಹೇಳಲ್ಪಟ್ಟ ಕಾರ್ಯಕಾರಣದಲ್ಲಿ, **ತ್ವಮಸಿ ಸಂಧಾತಾ** - ನೀನು ಸಂಯೋಜಕನಾಗಿದ್ದೀ, **ಬ್ರಹ್ಮನ್ ತ್ವಮಸಿ ವಿಶ್ವಸೃಕ್** - ಓ ಪರಬ್ರಹ್ಮನೇ ನೀನೇ ಸಮಸ್ತ ವಿಶ್ವಕ್ಕೂ ಸೃಷ್ಟಿಕರ್ತಾರ, **ತೇಜೋದಾಸ್ತ್ವಮಸ್ಯಗ್ನೇಃ** - ಅಗ್ನಿಗೆ ನೀನೇ ತೇಜಸ್ಸನ್ನು ಕೊಟ್ಟವನು, **ವರ್ಚೋದಾಸ್ತ್ವಮಸಿ ಸೂರ್ಯಸ್ಯ** - ಸೂರ್ಯನಿಗೆ ತೇಜಸ್ಸನ್ನು ಕೊಟ್ಟವನೂ ನೀನೇ **ದ್ಯುಮ್ನೋದಾ ಸ್ತ್ವಮಸಿ ಚಂದ್ರಮಸಃ** - ಚಂದ್ರನಿಗೆ ಕಾಂತಿಯನ್ನು ಕೊಟ್ಟವನೂ ನೀನೇ, **ಉಪಯಾಮ** - ನಿನ್ನನ್ನು ಶರಣು ಹೊಂದೋಣ, **ಗೃಹೀತೋಽಸಿ** - ಬಹುಕಾಲಕ್ಕೆ ಕಣ್ಣಿಗೆ ಬಿದ್ದಿರುವೆ. ಯಾವ ಪ್ರಯೋಜನಕ್ಕಾಗಿ ಎಂದರೆ ಹೇಳಲ್ಪಡುತ್ತದೆ, **ಬ್ರಹ್ಮಣೇತ್ವಾಮಹಸೇ** - ಮಹತ್ತಾದ ಮಹಿಮೆಯುಳ್ಳ ಪರಬ್ರಹ್ಮನಾದ ನಿನಗೆ ಎಂದರೆ ನಿನ್ನ ಪ್ರಾಪ್ತಿಗಾಗಿ, ಓಂ ಎಂಬ ಪ್ರಣವಮಂತ್ರವನ್ನುಚ್ಚರಿಸುವದು ಮಾತ್ರವೇ ಅಲ್ಲದೆ **ಆತ್ಮಾನಂ ಯುಂಜೀತ** - ಆತ್ಮಸಮರ್ಪಣರೂಪ ಶರಣಾಗತಿಯನ್ನು ಅನುಷ್ಠಿಸತಕ್ಕದ್ದು. ಈ ಸಂದರ್ಭದ ಭಾಷ್ಯದಲ್ಲಿ ಶ್ರೀ ರಂಗರಾಮಾನುಜಸ್ವಾಮಿಗಳು "**ಓಮಿತಿ ಮಂತ್ರೇಣಾಪಿ ಭಗವಚ್ಛೇಷತ್ವ ಪ್ರತಿಪಾದಕೇನ ಪುನರಾತ್ಮಸಮರ್ಪಣಂ ಕರ್ತವ್ಯ ಮೇವೇತ್ಯರ್ಥಃ**" ಎಂದು ಬರೆದಿರುತ್ತಾರೆ ಇದರಿಂದ ಬರೀ ಪ್ರಾರ್ಥನಾ ಸಾಲದು, ಶರಣಾಗತಿಯು ಅನುಷ್ಠಾನವೂ ಆವಶ್ಯಕವೆಂಬುದು ಸಿದ್ಧವು.

೪. ತೈತ್ತಿರೀಯ ನಾರಾಯಣೀಯದ ಮುಂದಿನ ಅನುವಾಕವಾದ "**ತಸ್ಯೈವಂ ವಿದುಷೋ ಯಜ್ಞಸ್ಯಾತ್ಮಾ ಯಜಮಾನಃ**" ಎಂದಾರಂಭಿಸಿ ಇದು ವಿದ್ವಾಂಸನಿಂದ ಮಾಡಲ್ಪಡುವ ಆತ್ಮಹವಿಸ್ಸಮರ್ಪಣರೂಪವಾದ ಯಜ್ಞವು, ಇತರ ಪ್ರಸಿದ್ಧವಾದ ಯಜ್ಞಗಳಿಗಿಂತಲೂ ವಿಶೇಷ ಮಹಿಮೆಯುಳ್ಳದ್ದೆಂದು ರೂಪಕಮಾಡಿ ಅದರ ಪ್ರಾಶಸ್ತ್ಯವು ತೋರಿಸಲ್ಪಡುತ್ತದೆ.

ಆತ್ಮ ಸಮರ್ಪಣಂ ಆತ್ಮಯಾಗಃ.

ಯಾಗವಾವದು ? ಇನ್ನ ದೇವತೈಕ್ಕಿನ್ನ ಹವಿಸ್ಸೆನ್ರಿಜ್ಞನೇ ಯೊರು ಬುದ್ಧಿವಿಶೇಷಮ್. ಇಪ್ಪಡಿಯೆನ್ನಾತ್ಮಾವಾಗಿರ ಸ್ವಾದುತಮಮಾನ ಹವಿಸ್ಸು ಶ್ರೀ ಮಾನಾನ ನಾರಾಯಣರ್ ಪೊರುಟ್ಟೆನ್ರಿಜ್ಞನೇ ಯಿರುಪ್ಪ ದೊರು ಬುದ್ಧಿವಿಶೇಷಮ್ ಇನ್ವಿಡತ್ತಿಲ್ ಆತ್ಮಯಾಗಮ್.

ಹೀಗೆ ಆತ್ಮ ಹವಿಸ್ಸಮರ್ಪಣವೂ ಕೂಡ ಒಂದು ಯಾಗವೆಂದೇ, ಆತ್ಮ ಯಾಗವೆಂದೇ ಹೇಳಲ್ಪಟ್ಟಿರುತ್ತದೆ. ವ್ರಜ, ಗಚ್ಛ ಇತ್ಯಾದಿಗಳೂ ಕೂಡ ಆತ್ಮ ಯಾಗವನ್ನೇ ಅನುಷ್ಠಿಸತಕ್ಕದ್ದೆಂದು ಬೋಧಿಸುತ್ತವೆ ಎಂಬುದು ಮುಖ್ಯ ತಾತ್ಪರ್ಯವು.

ಆಗಲಿ, ಆತ್ಮಯಾಗವೆಂದು ಇಲ್ಲಿ ಯಾಗಶಬ್ದವು ಕೂಡುತ್ತದೋ ? ಮುಖ್ಯವಾಗಿ ಯಾಗವೋ ? ಇಲ್ಲವೇ ಬರೀ ಭಾವನೆಯೋ ? ಎಂದರೆ ಭಾವನೆ ಮಾತ್ರವೇ ಅಲ್ಲವು; ಇದೂ ಒಂದು ವಿಲಕ್ಷಣ ಯಾಗವೇ ಎಂದು ಹೇಳಲು ಹೊರಟು ಯಾಗ ಶಬ್ದಾರ್ಥವನ್ನು ಉಪದೇಶಿಸುತ್ತಾರೆ. ಏತಕ್ಕಾಗಿ ಎಂದರೆ ಭರನ್ಯಾಸವು ಬರೀ ಪ್ರಾರ್ಥನೆ ಮಾತ್ರವೇ ಅಲ್ಲವು. ವಿಷದ ಹಾವು ಕಚ್ಚಿರುವವನಿಗೆ ಗರುಡಧ್ಯಾನಮಾತ್ರದಿಂದಲೇ ಅಲ್ಲದೆ ಅದರೊಂದಿಗೆ ವಿಷಾಪಹಾರಿ ಚಿಕಿತ್ಸೆಯೂ ಹೇಗೆ ಆವಶ್ಯಕವೋ, ಹಾಗೆ ಪಾಪಗಳಿಂದ ಪೀಡಿತನಾದ ಈ ಬದ್ಧಚೇತನನಿಗೆ ಪರಮಾತ್ಮನ ಸನ್ನಿಧಿಯಲ್ಲಿ ವಿಶ್ವಾಸಪೂರ್ವಕ ಪ್ರಾರ್ಥನೆಯೊಂದಿಗೆ ಪಾಪಗಳನ್ನೆಲ್ಲಾ ಹೋಗಲಾಡಿಸುವ ಶರಣಾಗತಿಯೂ ಆವಶ್ಯಕವೆಂಬ ಭಾವವು

ಆತ್ಮಸಮರ್ಪಣವು ಆತ್ಮಯಾಗವು.

ಯಾಗಮಾವದು - ಯಾಗವೆಂಬುದು ಯಾವುದು ? **ಇನ್ನ ದೇವತೈಕ್ಕಿನ್ನ ಹವಿಸ್ಸೆನ್ರು** - ಈ ದೇವತೆಗೆ ಉದ್ದಿಶ್ಯವಾದುದು ಈ ಹವಿಸ್ಸು ಎಂದು. **ಇಜ್ಞನೆ ಯೊರು ಬುದ್ಧಿ ವಿಶೇಷಮ್** - ಇರುವ ಒಂದು ಬುದ್ಧಿ ವಿಶೇಷವು, **ಇಪ್ಪಡಿ** - ಈ ಪ್ರಕಾರವಾಗಿಯೇ, **ಎನ್ನಾತ್ಮಾವಾಗಿರ** - ನನ್ನ ಆತ್ಮಾವಾಗಿರುವ, **ಸ್ವಾದುತಮಮಾನ** - ಅಪಹತ ಪಾಪ್ಮತ್ವಾದಿ ಗುಣಾಷ್ಟಕಗಳಿಂದಲೂ, ಆನಂದಾದಿ ಗುಣಗಳಿಂದಲೂ ಪರಿಶುದ್ಧನಾಗಿ ಶ್ರುತಿಯಲ್ಲಿ **"ಅಹಮನ್ನಂ ಅಹಮನ್ನಂ"** ಎಂದು ಹೇಳಿರುವ ಹಾಗೆ, ಬಹು ಭೋಗ್ಯಭೂತನಾದ, **ಹವಿಸ್ಸು ಶ್ರೀಮಾನಾನ** - ಲಕ್ಷ್ಮೀಯುಕ್ತನಾದ, **ನಾರಾಯಣಸ್ ಪೊರುಟ್ಟೇ** - ನಾರಾ

ಯಣಾಗಾಗಿಯೇ, ಎನ್ರು - ಎಂಬದಾಗಿ, ಇಜ್ಞನೇ - ಈ ಸಂದರ್ಭದಲ್ಲಿ, ಇರುಪ್ಪದು - ಇರುವಂತಹ, ಒರುಬುದ್ಧಿ ವಿಶೇಶಮ್ - ಒಂದು ಜ್ಞಾನವಿಶೇಷವು, ಇಪ್ಪಿಡತ್ತಿಲ್ - ಈ ಪ್ರಕರಣದಲ್ಲಿ, ಆತ್ಮಯಾಗಮ್ - ಆತ್ಮಯಾಗವೆಂದು ಹೇಳಿಸಿಕೊಳ್ಳುವಂತಹದ್ದು; ಸಾಧಾರಣವಾಗಿ ಯಾಗಗಳಲ್ಲಿ ಒಂದು ದೇವತೆಯ ಉದ್ದಿಶ್ಯವಾಗಿ ಒಂದು ವಿಧವಾದ ಹವಿಸ್ಸಿನ ಸಮರ್ಪಣವು, ಇದನ್ನು ಅಗ್ನಿಮುಖದಲ್ಲಿ ದ್ರವ್ಯತ್ಯಾಗಮೂಲಕ ಸಮರ್ಪಿಸತಕ್ಕದ್ದು; ಈ ಸಂದರ್ಭದಲ್ಲಾದರೋ ಆತ್ಮಯಾಗವು ತುಂಬಾ ವಿಲಕ್ಷಣವಾದುದು: -(೧) ಯಜಮಾನನು ಹವಿಸ್ಸನ್ನು ಇತರ ಯಾಗಗಳಲ್ಲಿ ಸಮರ್ಪಿಸುವನು, ಇಲ್ಲಾದರೋ "ಯಜ್ಞಸ್ಯಾತ್ಮಾ ಯಜಮಾನಃ" ಎಂದು ಹೇಳಿರುವಹಾಗೆ ಸಮರ್ಪಿಸುವ ಯಜಮಾನನೂ ತಾನೇ, ಹವಿಸ್ಸೂ ತಾನೇ; ತಾನೇ ತನ್ನನ್ನೇ ಸಮರ್ಪಿಸಿಕೊಳ್ಳುವದು. (೨) ಸಾಧಾರಣವಾಗಿ ಒಂದು ಹವಿಸ್ಸು ಒಂದು ದೇವತೆಗೆ ಮಾತ್ರವೇ ಸಮರ್ಪಿಸಲ್ಪಡುತ್ತದೆ. ಇಲ್ಲಿಯಾದರೋ ಈ ಆತ್ಮಹವಿಸ್ಸು ಲಕ್ಷ್ಮೀನಾರಾಯಣರಿಬ್ಬರಿಗೂ ಉದ್ದೇಶಿಸಿ ಸಮರ್ಪಿಸಲ್ಪಡುತ್ತದೆ. ನಿಗಮಾಂತ ದೇಶಿಕರು ಇದನ್ನು ಶ್ರೀಸ್ತುತಿಯಲ್ಲಿ "ಉದ್ದೇಶ್ಯತ್ವಂ ಜನನಿ ಭಜತೋರುಜ್ಝಿತೋಪಾಧಿ ಗಂಧಂ ಪ್ರತ್ಯಗ್ರೂಪೇ ಹವಿಷಿ ಯುವಯೋರೇಕಶೇಷಿತ್ವಯೋಗಾತ್" ಎಂಬ ಶ್ಲೋಕದಲ್ಲಿ ಉಪಪಾದಿಸಿರುತ್ತಾರೆ (ದಾಸನು ಬರೆದಿರುವ ಶ್ರೀಸ್ತುತಿಯ ೬ನೆಯ ಶ್ಲೋಕವನ್ನು ನೋಡಿ.) ಆದರೆ ಒಂದು ಹವಿಸ್ಸಿಗೆ ಇಬ್ಬರು ದೇವತೆಗಳು ಉದ್ದೇಶವಾಗಿರಬಹುದೋ ಎಂದರೆ ಅನೇಕ ಸಂದರ್ಭಗಳಲ್ಲಿ ಹಾಗೆ ಉಂಟು. "ತ್ವನ್ನೋ ಅಗ್ನೇ" ಎಂದಾರಂಭಿಸಿ ಆಜ್ಯಾಹುತಿಯನ್ನು "ಅಗ್ನೀವರುಣಾಭ್ಯಾಂ ಇದಂ ನಮಮ" ಎಂದು ಕೊಡುವದುಂಟು. (೩) ಯಾಗದಲ್ಲಿ ಹವಿಸ್ಸಮರ್ಪಣೆಯು ಮುಖ್ಯವಾಗಿ ಕಾರ್ಯರೂಪವಾದುದು. ಈ ಯಾಗವಲ್ಲಾದರೋ ಕರ್ಮವಿದ್ದರೂ ಮುಖ್ಯವಾಗಿ ಜ್ಞಾನರೂಪವಾದುದು. ಹೀಗೆ ಆತ್ಮಯಾಗವು ವಿಲಕ್ಷಣವಾದುದು ಎಂಬ ಭಾವವು.

ಮುಮುಕ್ಷುವು ಮಾಡುವ ಆತ್ಮಹವಿಸ್ಸಮರ್ಪಣವೇನೋ ಆಜ್ಞೆ ಎಂದು ಒಪ್ಪಿಕೊಳ್ಳಬಹುದು. ಇತರ ಪುರುಷಾರ್ಥಗಳಿಗಾಗಿ ಮಾಡುವ ಪ್ರಪತ್ತಿಯಲ್ಲಿ ಆಜ್ಞೆಯು ಆತ್ಮಹವಿಸ್ಸಮರ್ಪಣವಲ್ಲವಷ್ಟೇ. ಆ ಸಂದರ್ಭದಲ್ಲಿ ಹೇಗೆ ಎಂದು ಪ್ರಶ್ನಿಸಬಹುದೆಂದು ಭಾವಿಸಿ ತಾವೇ ಸಮಾಧಾನವನ್ನು ಹೇಳುತ್ತಾರೆ. ಸರ್ವಫಲಾರ್ಥಿಗಳಿಗೂ ಸಾಧಾರಣವಾದ ಆತ್ಮನಿಕ್ಷೇಪರೂಪವಾದ ಆಜ್ಞೆಯು ರಕ್ಷಾಭರನ್ಯಾಸವೆಂದು ಹಿಂದೆಯೇ "ಆತ್ರ ರಕ್ಷಾ ಭರನ್ಯಾಸ" ವೆಂಬ ಕಾರಿಕೆಯ ಮೂಲಕ ಸಾಙ್ಗಪ್ರಪದನಾಧಿಕಾರದಲ್ಲಿ ಹೇಳಿರುತ್ತೇವೆ ಎಂದು ಹೇಳುತ್ತಾರೆ ೧೦೩೮ನೆಯ ಪುಟ ನೋಡಿ. ಅಲ್ಲಿ ಆತ್ಮನಿಕ್ಷೇಪವು ಮೂರು ಅಂಶಗಳುಳ್ಳದು,

ಇವ್ವಾತ್ತ ನಿಕ್ಷೇಪತ್ತಿಲ್ ಸರ್ವಫಲಾರ್ಥಿಗಳುಕ್ಕುಮ್ ಸಾಧಾರಣಮಾನ ಕರ್ತವ್ಯಸ್ವರೂಪಮ್ ರಕ್ಷಾಭರನ್ಯಾಸಮೆನ್ನುಮಿದನೈ ಮುನ್ಬೇ ಶೊನ್ನೋಮ್.

ಸ್ವರೂಪ ಫಲ, ರಕ್ಷಾಭರಸಮರ್ಪಣವುಳ್ಳದು. ಮೋಕ್ಷಾರ್ಥಿಯಾಗಿದ್ದರೆ ಇವು ಮೂರೂ ಆತ್ಮನಿಕ್ಷೇಪದಲ್ಲಿವೆಯುಂಟು, ಮೋಕ್ಷಾರ್ಥಿಯಲ್ಲದಿದ್ದರೆ ರಕ್ಷಾಭರ ಸಮರ್ಪಣಮಾತ್ರವೇ, ಆದುದರಿಂದ ರಕ್ಷಾಭರಸಮರ್ಪಣವು, ಎಲ್ಲಾ ಪ್ರಪತ್ತಿಗಳಿಗೆ ಸಾಧಾರಣವಾದುದು ಎಂದು ಹಿಂದೆ ಹೇಳಿರುತ್ತದೆಂದು ತಿಳಿಸುತ್ತಾರೆ—ಇವ್ವಾತ್ಮನಿಕ್ಷೇಪತ್ತಿಲ್ - ಈ ಪ್ರಪತ್ತಿಯ ಅಜ್ಞಿಯಲ್ಲಿ, ಸರ್ವ ಫಲಾರ್ಥಿಗಳುಕ್ಕುಮ್ - ಚತುರ್ವಿಧ ಪುರುಷಾರ್ಥಗಳನ್ನು ಪ್ರಾರ್ಥಿಸುವವರಿಗೂ, ಸಾಧಾರಣಮಾನ - ಸಾಧಾರಣವಾದ, ಕರ್ತವ್ಯಸ್ವರೂಪಂ - ಅನುಷ್ಠಾನವು, ರಕ್ಷಾಭರನ್ಯಾಸಮ್ ಎನ್ನುಮಿದನೈ - ಎಂಬ ಸಂದರ್ಭವನ್ನು, ಮುನ್ಬೇಶೊನ್ನೋಮ್ - ಹಿಂದೆ ಸಾಂಗಪ್ರಪದನಾಧಿಕಾರದಲ್ಲಿ, ಶೊನ್ನೋಮ್ - "ಅತ್ರರಕ್ಷಾಭರನ್ಯಾಸ" ವೆಂಬ ಕಾರಿಕೆಯ ಮೂಲಕ ಹೇಳಿದೆವು. ಮೋಕ್ಷಾರ್ಥ ನಿಕ್ಷೇಪವು, ಸ್ವರೂಪ ಫಲ ರಕ್ಷಾಭರನ್ಯಾಸವು ಈ ಮೂರನ್ನೂ ಒಳಗೊಂಡುದೆಂದೂ, ಮೋಕ್ಷ ಫಲಾಂತರಕ್ಕಾಗಿ ಮಾಡಿದ ನಿಕ್ಷೇಪವು ರಕ್ಷಾಭರನ್ಯಾಸಮಾತ್ರವುಳ್ಳದೆಂದು ಹಿಂದೆ ಹೇಳಲ್ಪಟ್ಟಿತೆಂಬ ತಾತ್ಪರ್ಯವು. ಆದುದರಿಂದ ರಕ್ಷಾಭರನ್ಯಾಸರೂಪನಿಕ್ಷೇಪವು ಸರ್ವಫಲಾರ್ಥಿಗಳ ಪ್ರಪತ್ತಿಗಳಲ್ಲೂ ಅಜ್ಞಿಯಾದುದರಿಂದ ಸರ್ವಫಲಾರ್ಥಿಗಳುಕ್ಕುಮ್ ಸಾಧಾರಣಮ್ ಎಂದು ಹೇಳಲ್ಪಟ್ಟಿರುತ್ತದೆ.

ಪ್ರಪತ್ತಿಯ ಅಜ್ಞಿ ಸ್ವರೂಪ ವಿಷಯದಲ್ಲಿ ಈಗ ಉಪಪಾದಿಸಲ್ಪಟ್ಟಿದುದು ಏನೆಂದರೆ—

ಇನ್ನು ಕೆಲವರು ಉಪಾಯತ್ವ ಪ್ರಾರ್ಥನೆಯೇ ಶರಣಾಗತಿಯೆಂದು ಹೇಳುತ್ತಾರೆ. ಇವರಿಗೆ ಪ್ರಮಾಣಗಳು :—

"ತ್ವಮೇವೋಪಾಯಭೂತೋ ಮೇ ಭವೇತಿ ಪ್ರಾರ್ಥನಾಮತಿಃ ।
ಶರಣಾಗತಿರಿತ್ಯುಕ್ತಾ ಸಾ ದೇವೇಽಸ್ಮಿನ್ ಪ್ರಯುಜ್ಯತಾಮ್" ॥
"ಅನನ್ಯಸಾಧ್ಯೇ ಸ್ವಾಭೀಷ್ಟೇ ಮಹಾವಿಶ್ವಾಸಪೂರ್ವಕಮ್ ।
ತದೇಕೋಪಾಯತಾ ಯಾಚ್ಞಾ ಪ್ರಪತ್ತಿಶ್ಶರಣಾಗತಿಃ" ॥

ಯಾಚ್ಞಾಂಶದ ಅಂಗದ ಪ್ರಾಧಾನ್ಯವನ್ನು ಸ್ಪಷ್ಟಪಡಿಸುವುದಕ್ಕಾಗಿ ಈ ಪ್ರಮಾಣಗಳು ಅದನ್ನು ಅಜ್ಞಿಯಾಗಿ ಹೇಳುವವೆಂಬ ಸಮಾಧಾನವು.

ಹವಿಸ್ಸಮರ್ಪಣಾದತ್ರ ಪ್ರಯೋಗ ವಿಧಿ ಶಕ್ತಿತಃ ।
ಆತ್ಮರಕ್ಷಾ ಭರನ್ಯಾಸೋಽಕಿಂಚನಸ್ಯಾತಿರಿಚ್ಯತೇ ॥೩೭॥

೨. ಇನ್ನು ಕೆಲವರು, ಅಜ್ಞವಾದ ಮಹಾ ವಿಶ್ವಾಸವನ್ನೇ ಅಜ್ಗಿ ಎಂದು ಹೇಳುತ್ತಾರೆ. ಇವರಿಗೆ ಪ್ರಮಾಣವು—

ನಾರಾಯಣಂ ಸಲಕ್ಷ್ಮೀಕಂ ಪ್ರಾಪ್ತುಂ ತಚ್ಚರಣದ್ವಯಂ ।
ಉಪಾಯ ಇತಿ ವಿಶ್ವಾಸೋ ದ್ವಯಾರ್ಥ ಶ್ಶರಣಾಗತಿಃ ॥

ಇಲ್ಲಿಯೂ ಸಮಾಧಾನ ಹೇಗೆಂದರೆ—ಮಹಾ ವಿಶ್ವಾಸದ ಪ್ರಾಮುಖ್ಯತೆಯನ್ನು ಹೇಳುವವಕ್ಕೋಸ್ಕರ ಹಾಗೆ ಪ್ರಯೋಗವು.

ಆದುದರಿಂದ ಆತ್ಮನಿಕ್ಷೇಪವೇ ಅಜ್ಗಿಯೇವಿನಾ ಅನ್ಯಥಾ ಇಲ್ಲವೆಂದು ಹಿಂದೆ ಅನೇಕ ಪ್ರಮಾಣಗಳು (ಹತ್ತು) ಉದಾಹರಿಸಲ್ಪಟ್ಟವು ಮೋಕ್ಷಾರ್ಥಿಯು ಮಾಡುವಪ್ರಪತ್ತಿಯಲ್ಲಿ ಆತ್ಮರಕ್ಷಾಭರಸಮರ್ಪಣವೇ ಅಜ್ಗಿ ಎಂದೂ ಅದೂ ಒಂದು ಆತ್ಮಹವಿಸ್ಸಮರ್ಪಣರೂಪಯಾಗವೆಂದೂ, ಈ ಹವಿಸ್ಸಿಗೆ ಲಕ್ಷ್ಮೀನಾರಾಯಣರಿಬ್ಬರೂ ಉದ್ದೇಶ್ಯರೆಂದೂ ಹೇಳಲ್ಪಟ್ಟಿತು

ಸ್ವತಂತ್ರಪ್ರಪತ್ತಿನಿಷ್ಠನಲ್ಲದ ಭಕ್ತ್ಯುಪಾಯನಿಷ್ಠನಿಗೂ ಆತ್ಮಸ್ವರೂಪ ಸಮರ್ಪಣವಿಲ್ಲವು. ಮತ್ತು ಮುಮುಕ್ಷುವಲ್ಲದ ಇತರರು ಮಾಡುವ ಶರಣಾಗತಿಯಲ್ಲೂ ಇಲ್ಲವು. ಆದುದರಿಂದ ಎಲ್ಲಾ ಪ್ರಪತ್ತಿಗಳಿಗೂ ಸಾಧಾರಣವಾದ ಅಜ್ಗಿಯು ರಕ್ಷಾಭರ ಸಮರ್ಪಣವೆಂದು ಹೇಳಲ್ಪಟ್ಟಿತು

ಇದರಮೇಲೆ ಇನ್ನೊಂದು ಆಕ್ಷೇಪವು ತೋರಿಬರುತ್ತದೆ. ಜ್ಯೋತಿಷ್ಟೋಮಾದಿಗಳಲ್ಲಿ ಹವಿಸ್ಸಮರ್ಪಣೆಯಿದ್ದರೂ ರಕ್ಷಾಭರಸಮರ್ಪಣೆಯಿಲ್ಲವು. ಹೀಗಿರುವಾಗ ಈ ಪ್ರಪತ್ತಿಯಲ್ಲೂ ರಕ್ಷಾಭರಸಮರ್ಪಣೆಯನ್ನು ಏತಕ್ಕೆ ಅಜ್ಗಿಯಾಗಿ ಅಜ್ಗೀಕರಿಸತಕ್ಕದ್ದು ಎಂಬಾಕ್ಷೇಪಣೆಗೆ ಒಂದು ಕಾರಿಕೆಯ ಮೂಲಕ ಸಮಾಧಾನವನ್ನು ಹೇಳುತ್ತಾರೆ.

ಅರ್ಥ—ಅತ್ರ - ಈ ಪ್ರಪತ್ತಿ ಪ್ರಕರಣವಲ್ಲಿ. ಆತ್ಮರಕ್ಷಾಭರನ್ಯಾಸಃ - ಆತ್ಮರಕ್ಷಣ ಭರವನ್ನು ಸಮರ್ಪಿಸೋಣವು, ಅಕಿಂಚನಸ್ಯ - ಅಕಿಂಚನನಾಗಿ ಮೋಕ್ಷಾರ್ಥಿಯಾಗಿ ಪ್ರಪತ್ತಿಮಾಡಿದವನಿಗೆ, ಹವಿಸ್ಸಮರ್ಪಣಾತ್ - ಹವಿಸ್ಸಮರ್ಪಣವಾದ ಆತ್ಮಯಾಗಕ್ಕಿಂತಲೂ ಅಥವಾ ಎಲ್ಲಾವಿಧ ಹವಿಸ್ಸಮರ್ಪಣವಿರುವ ಯಾಗಕ್ಕಿಂತಲೂ, ಅತಿರಿಚ್ಯತೇ - ಅಧಿಕವಾದುದು, ಶ್ರೇಷ್ಠವಾದುದು, ಏಕೆಂದರೆ ಹೇಳುತ್ತಾರೆ. ಪ್ರಯೋಗವಿಧಿಶಕ್ತಿತಃ - ಪ್ರಯೋಗವಿಧಿ ಸಾಮ

ರ್ಥ್ಯದಿಂದ, ಪ್ರಯೋಗಪ್ರಕಾರವನ್ನು ವಿಧಿಸುವ ವಿಧಿಯು ಪ್ರಯೋಗವಿಧಿಯು; ಪ್ರಪದನಾನುಷ್ಠಾನಪ್ರಕಾರವನ್ನು ಬೋಧಿಸುವ ವಿಧಿಯು ಯಾವುದೆಂದರೆ:—

(೧) "ಆತ್ಮಾತ್ಮೀಯಭರಂ ಸರ್ವಂ ನಿಕ್ಷಿಪ್ಯ ಶ್ರೀಪತೇಃ ಪದೇ।
ಉಪಾಯಂ ವೃಣು ಲಕ್ಷ್ಮೀಶಂ ತಮುಪೇಯಂ ವಿಚಿಂತ್ಯ ಚ"॥

ಆತ್ಮಾತ್ಮೀಯ ಉಪಾಯ ಫಲಾದಿಗಳ ಸಮಸ್ತಭರವನ್ನೂ ಲಕ್ಷ್ಮೀಪತಿಯ ಪಾದಾರವಿಂದದಲ್ಲಿ ಸಮರ್ಪಿಸಿ ಆತನನ್ನೇ ಪ್ರಾಪ್ಯನೆಂದು ನಂಬಿ, ಆ ಲಕ್ಷ್ಮೀಪತಿಯನ್ನೇ ಉಪಾಯವಾಗಿ ವರಿಸು ಎಂಬುದು ಇದರರ್ಥವು.

(೨) ಇನ್ನೊಂದು ಪ್ರಯೋಗವನ್ನು ವಿಧಿಸುವ ಪ್ರಮಾಣವೂ ಉಂಟು

"ಹವಿರ್ಗೃಹೀತ್ವಾತ್ಮರೂಪಂ ವಸುರಣ್ಯೇತಿ ಮಂತ್ರತಃ।
ಜುಹುಯಾತ್ಪ್ರಣವೇನಾಗ್ನಾವಚ್ಯುತಾಖ್ಯೇ ಸನಾತನೇ"॥

ಆತ್ಮರೂಪವಾದ ಹವಿಸ್ಸನ್ನು ತೆಗೆದುಕೊಂಡು "ವಸುರಣ್ಯೋ ವಿಭೂರಸಿ" ಎಂಬ ಮಂತ್ರಮೂಲಕವಾಗಿ ಸನಾತನನಾದ ಅಚ್ಯುತನೆಂಬ ಅಗ್ನಿಯಲ್ಲಿ ಓಂ ಎಂದು ಪ್ರಣವವನ್ನುಚ್ಚರಿಸುತ್ತಾ ಹೋಮಮಾಡತಕ್ಕದ್ದು.

ಈ ಎರಡರಲ್ಲಿ ಒಂದನೆಯ ಪ್ರಯೋಗವಿಧಿಯಲ್ಲಿ "ಭರಂ ನಿಕ್ಷಿಪ್ಯ" ಎಂದು ಕಂಠೋಕ್ತವಾಗಿರುತ್ತದೆ ಎರಡನೆಯದರಲ್ಲಿ ಪ್ರಕರಣವನ್ನು ಪರ್ಯಾಲೋಚಿಸಿದರೆ "ಓಮಿತ್ಯಾತ್ಮಾನಂ ಯುಂಜೀತ" ಎಂದು ಅಕಿಂಚನಾಧಿಕಾರಿಯ ವಿಷಯವಾದುದರಿಂದ, ರಕ್ಷಾಭರಸಮರ್ಪಣವಿಲ್ಲದೆ ಉಪಾಯತ್ವವೇ ಸಿದ್ಧಿಸುವದಿಲ್ಲವಾದುದರಿಂದ ಈ ಪ್ರಯೋಗವಿಧಿಯಲ್ಲಿಯೂ ರಕ್ಷಾಭರನ್ಯಾಸವು ಹೇಳಲ್ಪಟ್ಟಿತೆಂದು ಗ್ರಹಿಸಬಹುದು. ಹೇಗೆಂದರೆ:—"ಓಂ ಇತ್ಯಾತ್ಮಾನಂ ಯುಂಜೀತ" ಎಂದಿರುವದರಿಂದ ಓಂ ಎಂಬ ಪ್ರಣವ ಮಂತ್ರವು ಹವಿಸ್ಸಮರ್ಪಣಕ್ಕೆ ಕರಣಮಂತ್ರವಾಯಿತು. ಆ ಪ್ರಣವದಲ್ಲಿ ಅಕಾರವಾಚ್ಯನಾದ ಲಕ್ಷ್ಮೀವಿಶಿಷ್ಟ ಶ್ರೀಮಹಾವಿಷ್ಣುವಿನಲ್ಲಿ ಮಕಾರವಾಚ್ಯನಾದ ಜೀವನ ಸಮರ್ಪಣವು ತೋರಿಬರುತ್ತದೆ. ಅಕಾರದಲ್ಲಿ ತೋರುವ ಅವರಕ್ಷಣೆ ಎಂಬ ಧಾತು ವ್ಯುತ್ಪತ್ತಿಯಮೂಲಕ ರಕ್ಷಣೆಯಲ್ಲಿ ಸರ್ವಸಮರ್ಥನಾದವನಲ್ಲಿ ರಕ್ಷ್ಯವಸ್ತುವಾದ ಆತ್ಮನನ್ನು ಸಮರ್ಪಿಸುವೆನೆಂಬ ಅನುಸಂಧಾನದಿಂದ, ರಕ್ಷಾಭರನ್ಯಾಸವು ಕಂಠೋಕ್ತವಾಗಿ ಇಲ್ಲದಿದ್ದರೂ ಅರ್ಥವಾಗಿ ಭಾವಿಸಬಹುದು. ಇನ್ನೊಂದು ಪ್ರಯೋಗ ವಿಧಿಯು ಕಠವಲ್ಲಿಯಲ್ಲಿ "ಸತ್ಯಂ ತದ್ದ್ವಯಂ ಸಕೃದುಚ್ಚಾರಿತೋ ಭವತಿ" ಎಂದು ಹೇಳಿರುವ ಹಾಗೆ ದ್ವಯೋಚ್ಚಾರಣೆಯು ಮಾನಸಿಕ ಶರಣಾಗತಿಯು; ದ್ವಯದ ಉತ್ತರ ಖಂಡದಲ್ಲಿ ಆತ್ಮನಿಕ್ಷೇಪವು ಸೂಚಿತವು.

ಹೀಗೆ ಈ ಪ್ರಯೋಗವಿಧಿಗಳ ಆತ್ಮಾತ್ಮೀಯ ಭರನ್ಯಾಸವು ಹೇಳಲ್ಪ

ಸ್ವಪ್ರವೃತ್ತಿನಿವೃತ್ತಿರೇವ ಪ್ರಪತ್ತಿರಿತಿ ವಾಕ್ಯಸ್ಯ ತಾತ್ಪರ್ಯಂ

ಅತಃ ಶ್ರೀ ರಾಮಮಿಶ್ರಾದ್ಯೈಃ ಭರನ್ಯಾಸ ವಿವಕ್ಷಯಾ
ಸ್ವಪ್ರವೃತ್ತಿನಿವೃತ್ತ್ಯಂಶಃ ಪ್ರಪತ್ತಿರಿತಿ ಲಕ್ಷಿತಃ ॥೩೮॥

ಟ್ಟಿತೆಂದು ಭಾವಿಸಬಹುದು. ಇತರ ಯಾಗಗಳಲ್ಲಿ ಹವಿಸ್ಸಮರ್ಪಣವಿದ್ದರೂ ಈ ರಕ್ಷಾಭರನ್ಯಾಸವು ಇಲ್ಲವು. ಆದುದರಿಂದ ಇತರ ಯಾಗಗಳಿಗಿಂತ ಈ ಆತ್ಮ ಯಾಗದಲ್ಲಾದರೋ ಆತ್ಮರಕ್ಷಾಭರಸಮರ್ಪಣವು ಅಧಿಕವೆಂದು ಪ್ರಯೋಗವಿಧಿ ಪ್ರಮಾಣಗಳ ಸಾಮರ್ಥ್ಯದಿಂದ ಗ್ರಹಿಸಬಹುದೆಂಬುದು ತಾತ್ಪರ್ಯವು.

ಅವತಾರಿಕೆ. ಆತ್ಮರಕ್ಷಾಭರನ್ಯಾಸವೇ ಪ್ರಪತ್ತಿಯ ಸ್ವರೂಪವು; ಅದೇ ಅಙ್ಗಿ ಎಂದು ಸ್ಥಾಪಿಸಲ್ಪಟ್ಟಿತು. ಆದರೆ ಶ್ರೀರಾಮಮಿಶ್ರರೇ ಮೊದಲಾದ ಪೂರ್ವಾಚಾರ್ಯರುಗಳು, ಸ್ವಪ್ರವೃತ್ತಿನಿವೃತ್ತಿಯೇ ಪ್ರಪತ್ತಿ ಎಂದು ಹೇಳಿದರಲ್ಲಾ ಅದು ಹೇಗೆ? ಅವರುಗಳ ಅಭಿಪ್ರಾಯವು ಈ ಅಭಿಪ್ರಾಯಕ್ಕೆ ವಿರೋಧವೇ ಹೇಗೆ ಎಂಬ ಶಙ್ಕೆಗೆ ಈ ಕಾರಿಕೆಯು ಸಮಾಧಾನವನ್ನು ಹೇಳುತ್ತದೆ. ಅವರುಗಳ ಅಭಿಪ್ರಾಯವೂ ಸಹ ಈ ರಕ್ಷಾಭರನ್ಯಾಸವೇ ಪ್ರಪತ್ತಿ ಎಂಬುದನ್ನೇ ಸಮರ್ಥಿಸುತ್ತದೆ ಎಂದು ತಿಳಿಸುತ್ತಾರೆ.

ಸ್ವಪ್ರವೃತ್ತಿಯನಿವೃತ್ತಿಯೇ ಪ್ರಪತ್ತಿ ಎಂಬ ವಾಕ್ಯದತಾತ್ಪರ್ಯವು.

ಅತಃ-ಆ ಕಾರಣದಿಂದಲೇ ಎಂದರೆ ಹಿಂದೆ ಉದಾಹರಿಸಲ್ಪಟ್ಟ ಅನೇಕ ಪ್ರಮಾಣಗಳಿಂದಲೂ, ಈ ಪ್ರಯೋಗವಿಧಿ ಸಾಮರ್ಥ್ಯದಿಂದಲೂ ಆತ್ಮರಕ್ಷಾಭರನ್ಯಾಸವೇ ಆಕಿಂಚನನ ಪ್ರಪತ್ತಿಯಲ್ಲಿ ಅಙ್ಗಿಯಾದುದರಿಂದಲೇ ಶ್ರೀರಾಮಮಿಶ್ರಾದ್ಯೈಃ - ಶ್ರೀರಾಮಮಿಶ್ರರೇ ಮೊದಲಾದ ಪೂರ್ವಾಚಾರ್ಯರುಗಳಿಂದ, ಭರನ್ಯಾಸ ವಿವಕ್ಷಯಾ - ಆತ್ಮರಕ್ಷಾಭರನ್ಯಾಸವೇ ಪ್ರಪತ್ತಿಯು ಎಂದು ಹೇಳಬೇಕೆಂಬ ತಾತ್ಪರ್ಯದಿಂದ, ಸ್ವಪ್ರವೃತ್ತಿ ನಿವೃತ್ತ್ಯಂಶಃ ಪ್ರಪತ್ತಿರಿತಿ - ಭರನ್ಯಾಸ ಮಾಡಿದನಂತರ ಉತ್ತರಕಾಲದಲ್ಲಿ ಬೇರೆ ಉಪಾಯಾನುಷ್ಠಾನರೂಪ ಪ್ರವೃತ್ತಿಯಿಂದ ನಿವೃತ್ತಿ ಎಂಬ ವಿಷಯವೇ ಪ್ರಪತ್ತಿಯೆಂದೂ ಅಥವಾ ಉಪಾಯಾಂತರ ಪ್ರವೃತ್ತಿಗೆ ಸಾಮರ್ಥ್ಯವಿಲ್ಲವುದರಿಂದ ಅದರಿಂದ ನಿವೃತ್ತಿರೂಪವಾದ ಆಕಿಂಚನ್ಯವೇ ಪ್ರಪತ್ತಿ ಎಂದೂ, ಲಕ್ಷಿತಃ - ಲಕ್ಷಣವಾಗಿ ಹೇಳಲ್ಪಟ್ಟಿತು. ಇದರಭಿಪ್ರಾಯವು ಇಷ್ಟೇ. ದೇಹವನ್ನು ಧರಿಸಿರುವ ಆತ್ಮನಿಗೆ ಎಲ್ಲಾ ಪ್ರವೃತ್ತಿಯಿಂದ ನಿವೃತ್ತಿ ಎಂಬುದು ಸಾಧ್ಯವೇ ಇಲ್ಲವು. ನಿತ್ಯನೈಮಿತ್ತಿಕ ಕರ್ಮತ್ಯಾಗವು

ಸ್ವಪ್ರವೃತ್ತಿ ನಿವೃತ್ತಿ ಎಂಬ ದರಿಂದ ಎಂದಿಗೂ ಸರಿಯಾದುದಿಲ್ಲವಷ್ಟೇ. ಆದುದರಿಂದ ಸ್ವಪ್ರವೃತ್ತಿ ನಿವೃತ್ತಿ ಶಬ್ದದಿಂದ ಭಗವದ್ವ್ಯತಿರಿಕ್ತಗಳಾದ, ಮತ್ತು ಉಪಾಯಾಂತರಗಳಾದ ಪ್ರವೃತ್ತಿಗಳಿಂದ ನಿವೃತ್ತಿ ಎಂದು ಅರ್ಥಮಾಡತಕ್ಕದ್ದು. ಇಂತಹ ಪ್ರವೃತ್ತಿ ನಿವೃತ್ತಿಯು, ಭಗವಂತನೇ ಉಪಾಯವೇ ವಿನಾ ಇತರರಲ್ಲವೆಂದು ನಂಬಿ, ಅವನಲ್ಲೇ ಸಮಸ್ತ ಭರವನ್ನು ಸಮರ್ಪಿಸಿದುದಲ್ಲದೇ ಉಂಟಾಗಲಾರದು. ಎಲ್ಲೆಲ್ಲಿ ಸ್ವವ್ಯಾಪಾರತ್ಯಾಗವಿರಬೇಕೋ ಅಲ್ಲಲ್ಲಿ ರಕ್ಷಾಭರನ್ಯಾಸವಿದ್ದೇ ಇರಬೇಕು ಎಂದು ವ್ಯಾಪ್ತಿಯನ್ನೂ ಹೇಳಬಹುದು. ಆದುದರಿಂದ ಶ್ರೀರಾಮ ಮಿಶ್ರಾದಿಗಳು ಪ್ರಪತ್ತಿಲಕ್ಷಣವನ್ನುಪದೇಶಿಸಿದುದು ಆತ್ಮರಕ್ಷಾಭರನ್ಯಾಸಾಭಿಪ್ರಾಯಕ್ಕೆ ವಿರೋಧವಿಲ್ಲವೆ ಆ ಅಭಿಪ್ರಾಯವನ್ನೇ ಚೆನ್ನಾಗಿ ಸಮರ್ಥಿಸಿ ಹೇಳಿದರೆಂಬ ಭಾವವು. ಭರನ್ಯಾಸವನ್ನು ಮಾಡದೆ ರಕ್ಷಾಪೇಕ್ಷೆಯನ್ನು ಮಾಡಿದರೆ ಸ್ವಪ್ರವೃತ್ತಿ ನಿವೃತ್ತಿಯು ಎಂದಿಗೂ ಸಿದ್ಧಿಸದು. ಒಂದು ಅಮೋಘಾಭರಣವನ್ನು ರಕ್ಷಿಸುವ ಶಕ್ತಿಯಿಲ್ಲದವನು ಆಭರಣವನ್ನು ತನ್ನಲ್ಲಿಯೇ ಇಟ್ಟುಕೊಂಡು ಇನ್ನೊಬ್ಬ ಶಕ್ತನನ್ನು ಕಾಪಾಡು ಎಂದು ಪ್ರಾರ್ಥಿಸುವವರಿಂದ ತನ್ನ ಮನೋರಥವೂ ಸಿದ್ಧಿಸದು, ಮತ್ತು ಆಭರಣವು ತನ್ನಲ್ಲಿಯೇ ಇರುವದರಿಂದ ಸ್ವಪ್ರವೃತ್ತಿ ನಿವೃತ್ತಿಯೂ ಸಿದ್ಧಿಸದು. ಶಕ್ತನು ಅದನ್ನು ಕಾಪಾಡಬೇಕಾದರೆ ಆಭರಣವನ್ನು ಅವನಲ್ಲಿ ಸಮರ್ಪಿಸಿಬಿಟ್ಟು ರಕ್ಷಾಭರವನ್ನೂ ಅವನಲ್ಲಿಡತಕ್ಕದ್ದು. ಶ್ರೀರಾಮ ಮಿಶ್ರಾದಿಗಳು ಹೇಳಿದುದು ಸ್ವಪ್ರವೃತ್ತಿ ನಿವೃತ್ತಿಯೇ ಪ್ರಪತ್ತಿ ಎಂದು; ಇಲ್ಲಿ ಕಾರಿಕೆಯಲ್ಲಾದರೋ ಸ್ವಪ್ರವೃತ್ತಿ ನಿವೃತ್ತ್ಯಂಶಃ ಪ್ರಪತ್ತಿಃ ಎಂದು; ಹೀಗೆ ಹೇಳುವದಭಿಪ್ರಾಯವು, ಪ್ರಪತ್ತ್ಯುತ್ತರಕಾಲದಲ್ಲಿ ಯಾವದೊಂದು ತದ್ವಿಷಯಿಕ ಪ್ರವೃತ್ತಿಯೂ ಬೇಡವೆಂದು ಸೂಚಿಸುತ್ತದೆ. ಆದೀಗ ಅವರುಗಳ ತಾತ್ಪರ್ಯವೆಂಬ ಭಾವವು. ಈ ಶ್ಲೋಕದಲ್ಲಿ ಹೇಳಿರುವ ಶ್ರೀ ರಾಮಮಿಶ್ರರು ಯಾರು ಎಂಬುದರಲ್ಲಿ ಶ್ರೀ ಶೆಟ್ಟಿಲೂರು ನರಸಿಂಹಾಚಾರ್ಯರವರು ಉಯ್ಯಕೊಂಡಾರರು ಎಂದು ಬರೆದಿರುತ್ತಾರೆ. ಉಯ್ಯಕೊಂಡಾರರು ನಾಥಮುನಿಗಳ ಶಿಷ್ಯರು. ಇವರಿಗೆ ಪುಂಡರೀಕಾಕ್ಷರೆಂಬ ಹೆಸರುಂಟು. ಶ್ರೀ ರಾಮ ಮಿಶ್ರರೆಂಬ ಹೆಸರುಂಟೆಂಬುದು ತಿಳಿಯದು. ಸಾರದೀಪಿಕೆ ವ್ಯಾಖ್ಯಾತೃಪು ಶ್ರೀನಾಥಯಾಮಂಡಾರ್ ಎಂದು ಬರೆದಿರುತ್ತಾರೆ. ಇದೀಗ ಸರಿಯಾದ ಅಭಿಪ್ರಾಯವಾಗಿ ತೋರುತ್ತದೆ. ಯಾಮುನೇಯರ ಗುರುವಾದ ಮಣಕ್ಕಾಲ್ ನಂಬಿಗೂ ಶ್ರೀರಾಮ ಮಿಶ್ರರೆಂಬ ಹೆಸರುಂಟು.

ಈ ಅಭಿಪ್ರಾಯಗಳು ಮುಂದಿನ ಕಾರಿಕೆಯಲ್ಲಿ ಸ್ಫುಟವಾಗಿ ಉಪಪಾದಿಸಲ್ಪಡುತ್ತವೆ. ರಕ್ಷಾಪೇಕ್ಷೆಯೇ ಸಾಲದೇ! ಭರನ್ಯಾಸವು ಹೇಗೆ ಆವಶ್ಯಕವು? ಎಂಬುದು ಕೆಲವರ ಆಕ್ಷೇಪವು. ರಕ್ಷಾಪೇಕ್ಷೆಯನ್ನು ಯಾಚಿಸಿದನಂತರ, ಸ್ವಪ್ರ

ಭರನ್ಯಾಸಸ್ಯ ಆವಶ್ಯಕತ್ವಂ

ಅಕೃತೇತು ಭರನ್ಯಾಸೇ ರಕ್ಷಾಪೇಕ್ಷಣ ಮಾತ್ರತಃ ।
ಪಶ್ಚಾತ್ಸ್ವಯತ್ನ ವಿರತಿರ್ನಪ್ರಸಿಧ್ಯತಿ ಲೋಕವತ್ ॥೬೯॥

ವೃತ್ತಿ ನಿವೃತ್ತಿಯುಂಟಾಗಬೇಕೆಂದೂ ಅದೇ ಪ್ರಪತ್ತಿಎಂದೂ ಪೂರ್ವಾಚಾರ್ಯರುಗಳು ಹೇಳಿದರು. ಇದು ಆತ್ಮಾತ್ಮೀಯ ಭರನ್ಯಾಸವಿಲ್ಲದೆ ಉಂಟಾಗದೆಂದು ಮುಂದಿನ ಕಾರಿಕೆಯಿಂದ ಉಪದೇಶಿಸುತ್ತಾರೆ.

ಭರನ್ಯಾಸದ ಆವಶ್ಯಕತೆಯು.

ಅರ್ಥ:—ಭರನ್ಯಾಸೇ - ಭರನ್ಯಾಸವು, ಅಕೃತೇತು - ಮಾಡಲ್ಪಡದೇ ಇರಲಾಗಿ, ಇಲ್ಲಿ ತು ಶಬ್ದವು ಶಙ್ಕೆಯನ್ನು ವ್ಯಾವರ್ತಿಸುತ್ತದೆ; ಇಲ್ಲಿ ಶಙ್ಕೆ ಯಾವುದೆಂದರೆ ಭರನ್ಯಾಸವಿಲ್ಲದೆ ಸ್ವಪ್ರಯತ್ನ ನಿವೃತ್ತಿರೂಪವಾದ ನಿರ್ಭರತ್ವವು ಉಂಟಾಗುವದಿಲ್ಲವೆಂದು ಹೇಳಲ್ಪಟ್ಟಿತು; ಹಾಗಾದರೆ ಹೇಗೆ ಭರನ್ಯಾಸವಿಲ್ಲದೆ ಬರೀ ರಕ್ಷಾಪೇಕ್ಷಣಮಾತ್ರದಿಂದ ಸ್ವಪ್ರಯತ್ನ ನಿವೃತ್ತಿಯುಂಟಾಗುತ್ತದೆ? ಎಂಬುದು ಶಙ್ಕೆ; ಈ ಶಙ್ಕಾವ್ಯಾವೃತ್ತಿಯು ಇಲ್ಲಿ ಹೇಳಲ್ಪಡುತ್ತದೆ, ಭರನ್ಯಾಸವು ಮಾಡಲ್ಪಡದೇ ಹೋದರೆ, **ರಕ್ಷಾಪೇಕ್ಷಣ ಮಾತ್ರತಃ** ರಕ್ಷಾಪೇಕ್ಷೆಯನ್ನು ಮಾಡುವದರ ಮಾತ್ರದಿಂದಲೇ, **ಸ್ವಯತ್ನವಿರತಿಃ** - ಸ್ವಪ್ರಯತ್ನದಿಂದ ನಿವೃತ್ತಿಯು, **ನ ಪ್ರಸಿಧ್ಯತಿ** - ಸಿದ್ಧಿಸುವದಿಲ್ಲವು; ಹೇಗೆಂದರೆ ಹೇಳುತ್ತಾರೆ, **ಲೋಕವತ್** - ಲೋಕದೃಷ್ಟಾಂತದಲ್ಲಿ ಹೇಗೋ ಹಾಗೆಯೇ ಈ ಸಂದರ್ಭದಲ್ಲೂ ಎಂಬ ಭಾವವು. ಒಬ್ಬನು ತನ್ನ ಧನವನ್ನು ಈ ಆಪತ್ಕಾಲದಲ್ಲಿ ತನ್ನ ಅಪೇಕ್ಷೆಯಿಲ್ಲದೇನೆ ನೀನೇ ರಕ್ಷಿಸತಕ್ಕದ್ದೆಂದು ಪ್ರಾರ್ಥಿಸಿ ತನ್ನ ಧನವನ್ನು ಒಬ್ಬ ಸಮರ್ಥನಲ್ಲಿಟ್ಟು ಬಿಟ್ಟರೆ ತಾನು ನಿರ್ಭರನಾಗಿ ಆ ಧನದ ರಕ್ಷಣೆಯಲ್ಲಿ ಏನೊಂದೂ ಪ್ರವರ್ತಿಸದೆ ನಿಶ್ಚಿಂತೆಯಿಂದ ಇರಬಹುದು. ಆದರೆ ಹಾಗೆಮಾಡದೆ ಧನವನ್ನು ತನ್ನಲ್ಲಿಯೇ ಇಟ್ಟುಕೊಂಡು ಅದನ್ನು ರಕ್ಷಿಸು ಎಂಬ ಪ್ರಾರ್ಥನೆಮಾತ್ರದಿಂದ, ಸ್ವಪ್ರವೃತ್ತಿ ನಿವೃತ್ತಿರೂಪ ನಿರ್ಭರತ್ವವುಂಟಾಗಲಾರದು. ಯಾವಾಗ ಕಳ್ಳರು ಬಂದು ಕದ್ದೊಯ್ವರೋ ಎಂಬ ಭೀತಿಯೂ ಚಿಂತೆಯೂ, ಅದಕ್ಕಾಗಿ ಪ್ರವೃತ್ತಿಯೂ ತಪ್ಪಿದ್ದಲ್ಲವು,

೧ ಆದುದರಿಂದ ಶ್ರೀ ರಾಮಮಿಶ್ರರ ಸ್ವಪ್ರವೃತ್ತಿ ನಿವೃತ್ತಿಯೇ ಪ್ರಪತ್ತಿಯು, ಎಂದು ಹೇಳಿದ ಲಕ್ಷಣವಾಕ್ಯದ ತಾತ್ಪರ್ಯವೇನೆಂದರೆ :—ಆತ್ಮರಕ್ಷಾ

ಭರವು. ಓ ಕೃಪಾಸಾಗರನೇ! ನಿನ್ನದೇ ವಿನಾ ನನಗೆ ಅದರಲ್ಲಿ ಸ್ವಲ್ಪವೂ ಸಂಬಂಧ ವಿಲ್ಲವು ಎಂದು ಹೇಳಿ ಭರನ್ಯಾಸವನ್ನು ಮಾಡಿದರೆ, ಅನಂತರ ಅದರಿಂದ ಸ್ವಪ್ರವೃತ್ತಿಯ ನಿವೃತ್ತಿಯುಂಟಾಗಿ ತನಗೆ ಆಕಿಂಚನ್ಯವು ಪ್ರಾಪ್ತವಾಗುತ್ತದೆಂಬ ತಾತ್ಪರ್ಯವು.

೨. ಹಾಗೆಯೇ ಭರತಮುನಿಗಳ ಲಕ್ಷಣವಾಕ್ಯವಾದ

ಅನನ್ಯಸಾಧ್ಯೇ ಸ್ವಾಭೀಷ್ಟೇ ಮಹಾವಿಶ್ವಾಸಪೂರ್ವಕಂ।

ತದೇಕೋಪಾಯತಾ ಯಾಚ್ಞಾ ಪ್ರಪತ್ತಿಶ್ಶರಣಾಗತಿಃ॥ ಎಂಬುದರ ತಾತ್ಪರ್ಯವೇನೆಂದರೆ, ಗೋಪ್ತೃತ್ವ ವರಣರೂಪವಾದ ಅಜ್ಗವಿಲ್ಲದೆ ಸಮರ್ಪಿಸಿದ ಭರನ್ಯಾಸವನ್ನು ಅಜ್ಗೀಕರಿಸುವುದಿಲ್ಲವಾದುದರಿಂದ, ಈ ಆವಶ್ಯಕವಾದ ಅಜ್ಗವಾಗಿರುವ ಉಪಾಯತ್ವ ಪ್ರಾರ್ಥನೆಯಿಂದ ಭರಸ್ವೀಕಾರ ಸಿದ್ಧಿಯುಂಟಾಗುತ್ತದೆ ಎಂಬುದು (೧೦೫ನೆಯ ಪುಟನೋಡಿ)

೩. ಹಾಗೆಯೇ ಲಕ್ಷ್ಮೀತಂತ್ರದ ಲಕ್ಷಣವಾಕ್ಯವಾದ "**ಆತ್ಮಾತ್ಮೀಯ ಭರನ್ಯಾಸೋ ಹ್ಯಾತ್ಮನಿಕ್ಷೇಪ ಉಚ್ಯತೇ**" ಆತ್ಮ ಭರನ್ಯಾಸವೂ ಮತ್ತು ಉಪಾಯ ಫಲಾದಿಗಳ ಭರನ್ಯಾಸವೂ, ಆತ್ಮ ನಿಕ್ಷೇಪರೂಪ ಅಜ್ಗ ಎಂದು ಹೇಳಿಸಿಕೊಳ್ಳುತ್ತದೆ. ಹೀಗೆಯೇ ಅಹಿರ್ಬುಧ್ನ್ಯ ಸಂಹಿತೆ ಸಾತ್ವಕಿತಂತ್ರ ಮೊದಲಾದ ಬಹು ಪ್ರಮಾಣಗಳು ಭರನ್ಯಾಸವೇ ಲಕ್ಷಣವಾಗಿ ಹೇಳುತ್ತವೆ. ಆದುದರಿಂದ ಇದೇ ಅಜ್ಗಿ ಎಂದು ಭಾವಿಸಿ, ಇದಕ್ಕೆ ವಿರೋಧವಿಲ್ಲದೆ ಇತರ ಲಕ್ಷಣ ವಾಕ್ಯಗಳನ್ನು ಅನ್ವಯಿಸತಕ್ಕದ್ದು ನ್ಯಾಯವೆಂಬ ಭಾವವು. ಈ "ಆತ್ಮಾತ್ಮೀಯ ಭರನ್ಯಾಸಃ" ಎಂಬುದಕ್ಕೆ ತನ್ನ ಮತ್ತು ತನಗೆ ಸೇರಿದವರ ರಕ್ಷಾಭರವೆಂದು ೧೦೬೩ನೆಯ ಪುಟದಲ್ಲಿ ಬರೆದಿರುತ್ತದೆ. ಸ್ವಾಮಿ ನಿಗಮಾಂತ ದೇಶಿಕರ ನ್ಯಾಸವಿಂಶತಿಯ ೧೫ನೆಯ ಶ್ಲೋಕ ವ್ಯಾಖ್ಯಾನದಲ್ಲಿ ಆತ್ಮೀಯ ಎಂಬುದಕ್ಕೆ ಉಪಾಯಫಲಾದಿ ಎಂದು ವ್ಯಾಖ್ಯಾನ ಮಾಡಿರುವದರಿಂದ ಆತ್ಮಭರವೇನು, ಆತ್ಮೀಯವಾದ ಉಪಾಯ ಫಲಗಳೇನು ಇವುಗಳ ಭರನ್ಯಾಸವೆಂದು ಅರ್ಥವಾದುದೂ ಸರಿಯಾದುದರಿಂದ ಇವೂ ಕೂಡ ಅಲ್ಲಿಯೂ ಅಂತರ್ಗತವು. ಇದು ಯಥಾಶ್ರುತ ಭರನ್ಯಾಸ ಪರವಾದ ವಾಕ್ಯವು. ಈ ಮೂರು ಲಕ್ಷಣವಾಕ್ಯಗಳಿಗೂ ಅರ್ಥಕ್ಕೇ ಸಮನ್ವಯಮಾಡಿ ಪರಸ್ಪರ ವಿರೋಧವಿಲ್ಲವೆಂದು ತೋರಿಸುವದೇ ಮುಖ್ಯವು. ಮೂರನೆಯದರಲ್ಲಿ ಅಜ್ಗಿಯು ಸಾಕ್ಷಾತ್ತಾಗಿ ಹೇಳಲ್ಪಟ್ಟಿತು. ಮೊದಲನೆಯದರಲ್ಲಿ ಸ್ವಪ್ರವೃತ್ತಿ ನಿವೃತ್ತಿಗೂ ಭರನ್ಯಾಸಕ್ಕೂ ವ್ಯಾಪ್ಯ ವ್ಯಾಪಕ ಭಾವವಿರುವದರಲ್ಲಿ ಅಜ್ಗಾಜ್ಗಿಭಾವವಿರುವದರಿಂದ ಅಭೇದವು ಹೇಳಲ್ಪಟ್ಟಿತೆಂದು ಭಾವಿಸತಕ್ಕದ್ದು. ಎಲ್ಲಿ ಭರನ್ಯಾಸವಿದೆಯೋ ಅಲ್ಲಿ ಸ್ವಪ್ರವೃತ್ತಿ ನಿವೃತ್ತಿಯುಂಟು ಎಲ್ಲಿ ಭರನ್ಯಾಸವಿಲ್ಲವೋ, ಅಲ್ಲಿ ಸ್ವಪ್ರವೃತ್ತಿ ನಿವೃತ್ತಿ

ಪ್ರಪತ್ತಿ ಲಕ್ಷಣ ವಾಕ್ಯಾನಾಂ ಐಕಕಂಠ್ಯಂ ಸಿದ್ಧಮ್

ಆಕಿಂಚನ್ಯ ಭರನ್ಯಾಸೋಪಾಯತ್ವ ಪ್ರಾರ್ಥನಾತ್ಮನಾಂ।
ತ್ರಯಾಣಾಂ ಸೌಹೃದಂ ಸೂಕ್ಷ್ಮಂ ಯಃ ಪಶ್ಯತಿ ಸ ಪಶ್ಯತಿ॥೪೦॥

ಯಿರುವದಿಲ್ಲವೆಂದು ಎರಡಕ್ಕೂ ಸಾಮಂಜಸ್ಯವನ್ನು ಹೇಳತಕ್ಕದ್ದು. ಮತ್ತು ಎರಡನೆಯದರಲ್ಲಿ ಉಪಾಯತ್ವ ಪ್ರಾರ್ಥನೆಗೂ ಭರನ್ಯಾಸಕ್ಕೂ ಜನ್ಯ ಜನಕಭಾವವಿರುವದರಿಂದ ಅಙ್ಗಾಙ್ಗಿ ಭಾವದಿಂದ ಎರಡಕ್ಕು ಅಭೇದ ಹೇಳಲ್ಪಟ್ಟಿತೆಂದು ಭಾವಿಸುವದರಿಂದ ಸಾಮಂಜಸ್ಯವುಂಟಾಗುತ್ತದೆ.

ಹೀಗೆ ಈ ಮೂರು ಲಕ್ಷಣವಾಕ್ಯಗಳು ಪರಸ್ಪರ ವಿರುದ್ಧವಾದವಲ್ಲವು, ಮೂರೂ ಐಕಕಂಠ್ಯದಿಂದ ಭರನ್ಯಾಸನೇ ಅಙ್ಗಿ ಎಂದು ಸ್ಥಾಪಿಸುತ್ತವೆಂದು ತಿಳಿಸುವದಕ್ಕಾಗಿ, ಮುಂದಿನ ಕಾರಿಕೆಯನ್ನು ಅನುಗ್ರಹಿಸುತ್ತಾರೆ. ಹೀಗೆ ಮೂರು ವಾಕ್ಯಗಳ ತಾತ್ಪರ್ಯಗಳನ್ನು ಚನ್ನಾಗಿ ವಿಮರ್ಶಿಸಿ ತಿಳಿದು ಐಕಕಂಠ್ಯವನ್ನು ಸ್ಥಾಪಿಸುವನೇ ಜ್ಞಾತಾ ಎಂದು ಹೇಳುತ್ತಾರೆ.

ಈ ಮೂರುವಿಧ ಪ್ರಪತ್ತಿ ಲಕ್ಷಣವಾಕ್ಯಗಳಿಗೂ ಐಕಕಂಠ್ಯವು ಸಿದ್ಧವು.

ಆಕಿಂಚನ್ಯಭರನ್ಯಾಸೋಪಾಯತ್ವ ಪ್ರಾರ್ಥನಾತ್ಮನಾಂ - ಶ್ರೀರಾಮಮಿಶ್ರರ ವಾಕ್ಯದಲ್ಲಿ ತೋರುವ ಆಕಿಂಚನ್ಯವೇನು, ಲಕ್ಷ್ಮೀತಂತ್ರವಾಕ್ಯದಲ್ಲಿ ಹೇಳಲ್ಪಟ್ಟ ಭರನ್ಯಾಸವೇನು, ಭರತಮುನಿಯ ವಾಕ್ಯದಲ್ಲಿ ತೋರುವ ಉಪಾಯ. ಪ್ರಾರ್ಥನೆ ಏನು, ಈ ರೂಪಗಳಾಗಿರುವ, **ತ್ರಯಾಣಾಂ** - ಮೂರಕ್ಕೂ ಸಹ, **ಸೂಕ್ಷ್ಮಂ** - ಮಂದಮತಿಗಳಿಗೆ ತೋರಲು ಅಸಾಧ್ಯವಾದ, **ಸೌಹೃದಂ** - ಪರಸ್ಪರ ಐಕಕಂಠ್ಯರೂಪ ಮೈತ್ರಿಯನ್ನು, **ಯಃ** - ಯಾವನು, **ಪಶ್ಯತಿ** – ತಿಳಿಯುತ್ತಾನೋ, **ಸಃ** - ಆವನೇ, **ಪಶ್ಯತಿ** - ಸರಿಯಾದರ್ಥವನ್ನು ಗ್ರಹಿಸಿದ ಬುದ್ಧಿವಂತನು **ಆಕಿಂಚನ್ಯ** ವೆಂದರೆ ಸ್ವರಕ್ಷಣಾರ್ಥವಾಗಿ ಉಪಾಯಾಂತರದಲ್ಲಿ ಪ್ರವೃತ್ತಿಯಿಲ್ಲವೇ ಎಂಬದಾಗಿ ತನ್ನ ಅಶಕ್ತಿ ಪ್ರದರ್ಶನವು; **ಭರನ್ಯಾಸ**ವೆಂದರೆ ಸ್ವರಕ್ಷಣಾರ್ಥವಾಗಿ ಉಪಾಯಾಂತರದಲ್ಲಿ ಪ್ರವೃತ್ತಿಗೆ ತಾನು ಅಶಕ್ತನಾದೆನೇ ಎಂದು ಸ್ವರಕ್ಷಾಭರವನ್ನು ಶಕ್ತನಲ್ಲಿ ಸಮರ್ಪಿಸುವದು; **ಉಪಾಯತ್ವ ಪ್ರಾರ್ಥನೆ** ಎಂದರೆ ಸ್ವರಕ್ಷಣಾರ್ಥವಾಗಿ ಉಪಾಯಾಂತರದಲ್ಲಿ ಪ್ರವೃತ್ತಿಗೆ ತಾನು ಅಶಕ್ತನಾಗಿದ್ದೇನೆಯಾದುದರಿಂದ ಆ ಉಪಾಯಾಂತರ ಸ್ಥಾನದಲ್ಲಿ ನೀನೇ ನಿಂತು ರಕ್ಷಿಸಬೇಕೆಂಬ ಪ್ರಾರ್ಥನೆಯು; ಹೀಗೆ ಮೂರೂ ಒಂದೇ ಅಭಿಪ್ರಾಯ ಉಳ್ಳವೇ

ವಿನಾ ಬೇರೆ ಬೇರೆಯಲ್ಲವು ; ಆಕಿಂಚನ್ಯ ಪ್ರದರ್ಶನದಲ್ಲೂ ಉಪಾಯ ಪ್ರಾರ್ಥನೆಯಲ್ಲೂ ಅಭಿಪ್ರಾಯಗಳು ಒಂದೇಯಾಗಿ ಇನ್ನೂ ಭರವನ್ನು ಸಮರ್ಪಿಸದೇ ಇರುವ ಸ್ಥಿತಿಯು, ಇಷ್ಟೇ ವ್ಯತ್ಯಾಸವೇ ಬೇರೆ ಯಿಲ್ಲವಾವುದರಿಂದ ಮೂರಕ್ಕೂ ಅಭಿಪ್ರಾಯದಲ್ಲಿ ವ್ಯತ್ಯಾಸವೇನೂ ಇಲ್ಲವು. ಇವೆರಡರೊಂದಿಗೂ ಭರಸಮರ್ಪಣ ವಾವಶ್ಯಕವಾಗಿ ಅವುಗಳ ಪ್ರಾಧಾನ್ಯವನ್ನು ತಿಳಿಸುವದಕ್ಕಾಗಿ ಹಾಗೆ ಶ್ರೀ ರಾಮಮಿಶ್ರರೂ ಭರತಮುನಿಗಳೂ ಹೇಳಿದರೇ ವಿನಾ ಅನ್ಯಥಾ ಇಲ್ಲವು. ಎಲ್ಲಾ ಒಂದೇ ಅಭಿಪ್ರಾಯಗಳುಳ್ಳವೆಂಬ ಭಾವವು. ಆಕಿಂಚನ್ಯವಿದ್ದರೇನೆ ಭರನ್ಯಾಸವು. ಎಲ್ಲಿ ಆಕಿಂಚನ್ಯವಿದೆಯೋ ಅಲ್ಲಿ ಭರನ್ಯಾಸವು, ಆಕಿಂಚನ್ಯವಿಲ್ಲದಿದ್ದರೆ ಭರನ್ಯಾಸವಿಲ್ಲವೆಂದು ತೋರಿಸುವದಕ್ಕಾಗಿ ಹಾಗೆ ಹೇಳಿದರು ಎಂಬ ಭಾವವು. ಭರನ್ಯಾಸ ಪೂರ್ವಕಾಲಿಕ ಸ್ವಪ್ರವೃತ್ತಿ ನಿವೃತ್ತಿ ಎಂದರೆ ಉಪಾಯಾಂತರ ಪ್ರವೃತ್ತಿಗೆ ಅಶಕ್ತನೇ, ಆದುದರಿಂದ ಅವರಿಂದ ತಾನು ನಿವೃತ್ತಿಯನ್ನು ಹೊಂದಿದ್ದೇನೆಂದು ಆಕಿಂಚನ್ಯವನ್ನು ಪ್ರದರ್ಶಿಸಿ, ನೀನೇ ಆ ಸ್ಥಾನದಲ್ಲಿ ನಿಂತು ಅದರ ಫಲವನ್ನುಂಟುಮಾಡತಕ್ಕದ್ದು ಎಂಬ ಭಾವವುಂಟಾಗುತ್ತದೆ. ಸ್ವಪ್ರವೃತ್ತಿ ನಿವೃತ್ತಿಯು ಭರನ್ಯಾಸ ಉತ್ತರಕಾಲಿಕವೆಂದರೆ, ಭರನ್ಯಾಸವನ್ನು ಅಙ್ಗೀಕರಿಸಿದಂತಾಯಿತು; ಆಗ ಸ್ವಪ್ರವೃತ್ತಿ ನಿವೃತ್ತಿ ಎಂದರೆ ಉಪಾಯಾನುಷ್ಠಾನಮಾಡಿ ತಾನು ಕೃತಕೃತ್ಯನಾದುದರಿಂದ ಅದಕ್ಕಾಗಿ ಮುಂದಕ್ಕೆ ಯಾವ ಪ್ರವೃತ್ತಿಯೂ ಯಿಲ್ಲದ ಅವಸ್ಥೆಯೇ ಪ್ರಪತ್ತಿ ನಿವೃತ್ತಿ ಎಂಬುದರ ಅರ್ಥವು.

ಭರತಮುನಿಯ ವಾಕ್ಯದಲ್ಲಾದರೋ ಉಪಾಯತ್ವ ಪ್ರಾರ್ಥನೆಯಿಂದಲೇ ಭರನ್ಯಾಸಕಾರ್ಯ ಉಂಟಾಗುವದರಿಂದ ಹಾಗೆ ಹೇಳಲ್ಪಟ್ಟಿತೇ ವಿನಾ, ಗೋಪ್ತೃತ್ವ ವರಣರೂಪ ಅಙ್ಗಕ್ಕಿಂತಲೂ ಇದು ಬೇರೆಯಾದುದಲ್ಲವು. ಹೀಗೆ ಈ ವಾಕ್ಯಗಳಲ್ಲಡಗಿರುವ ಸೂಕ್ಷ್ಮಾರ್ಥವನ್ನು ಗ್ರಹಿಸಿದವನೇ ಕುಶಲಿಯೇ ವಿನಾ, ಅಙ್ಗಗಳಾದ ಇವುಗಳನ್ನು ಅಙ್ಗಿ ಎಂದು ಭಾವಿಸುವವನು ಕುಶಲಿಯಲ್ಲವೆಂಬ ಭಾವವು.

ಆದುದರಿಂದ ಶ್ರೀ ರಾಮಮಿಶ್ರರ ವಾಕ್ಯಕ್ಕೂ, ಭರತಮುನಿಗಳ ವಾಕ್ಯಕ್ಕೂ ಮತ್ತು ಲಕ್ಷ್ಮೀತಂತ್ರ, ಅಹಿರ್ಬುಧ್ನ್ಯ ಸಂಹಿತಾ ಮೊದಲಾದ ವಾಕ್ಯಗಳಿಗೂ ಅತ್ಯಂತ ಸಾಮಂಜಸ್ಯ ಉಂಟೇ ವಿನಾ ಪರಸ್ಪರವಿರೋಧವಿಲ್ಲವು. ಈ ಸೂಕ್ಷ್ಮವನ್ನು ಎಲ್ಲರೂ ಗ್ರಹಿಸಲಾರರೆಂಬ ಭಾವವು. ಅಂತಹ ಸೂಕ್ಷ್ಮವನ್ನು ಗ್ರಹಿಸಿದವನೇ ಬಲ್ಲವನು ಎಂದು ಯಃ ಪಶ್ಯತಿ ಸ ಪಶ್ಯತಿ ಎಂದು ಹೇಳುತ್ತಾರೆ.

ಈ ಮೂರು ಲಕ್ಷಣವಾಕ್ಯಗಳಿಗೂ ಐಕಕಂಠ್ಯವು ಸಾಙ್ಗ ಪ್ರಪದನಾಧಿಕಾರದ ಆದಿ ಶ್ಲೋಕದಲ್ಲಿ ಸಹ ವ್ಯಕ್ತವು ಹೇಗೆಂದರೆ ಭರನ್ಯಾಸಂ ಯಾಚ್ಞಾನ್ವಿತ ಮಭಿವದನ್ತಿ ಪ್ರಪದನಂ ಎಂದು ಯಾಚ್ಞಾಯೊಂದಿಗೆ ಭರನ್ಯಾಸವು ಸೇರಿರುವದರಿಂದ

ಅಥ ಪ್ರಪತ್ತಿ ಸ್ವರೂಪಂ ನಿಗಮಯತಿ

ಇಪ್ಪಡಿ ಅಜ್ಗ ಪಞ್ಚಕ ಸಂಪನ್ನಮಾನ ಆತ್ಮರಕ್ಷಾ ಭರನ್ಯಾಸಮೇ ಪ್ರಪತ್ತಿಶಾಸ್ತ್ರಮೆಲ್ಲಾತ್ತಿಲುಮ್ ಪ್ರಧಾನವಿಧೇಯಮೆನ್ರು ಶ್ರೀ ವಿಷ್ಣುಚಿತ್ತ ವಾದಿಹಂಸಾಂಬುವಾಹ ವರದಾಚಾರ್ಯಾದಿಗಳ್ ಸಜ್ಗ್ರಹಿತ್ತಾರ್‌ಗಳ್.

ಭರತಮುನಿಗಳ "ತದೇಕೋಪಾಯತಾ ಯಾಚ್ಞಾ ಪ್ರಪತ್ತಿಶ್ಶರಣಾಗತಿಃ" ಎಂಬ ವಾಕ್ಯಕ್ಕೂ ಲಕ್ಷ್ಮೀತಂತ್ರವಾಕ್ಯಕ್ಕೂ ಅಭೇದವು ಏರ್ಪಟ್ಟಿತು. ಇತಃ ಪಶ್ಚಾದಸ್ಮದ್ಯತನ ನಿರಪೇಕ್ಷಣ ಭವತಾ ಸಮರ್ಥ್ಯಃ ಎಂಬ ಮಾತ್ರ ವಿಶೇಷವು ಇರುವದರಿಂದ ಶ್ರೀ ರಾಮಮಿಶ್ರರ ವಾಕ್ಯದಲ್ಲಿರುವ ಸ್ವಪ್ರವೃತ್ತಿ ನಿವೃತ್ತಿಗೂ ಲಕ್ಷ್ಮೀತಂತ್ರವಾಕ್ಯಕ್ಕೂ ಅಭೇದವು ಏರ್ಪಟ್ಟಿತು.

ಪ್ರಪತ್ತಿ ಸ್ವರೂಪವನ್ನು ನಿಗಮನಮಾಡಿ ಹೇಳುತ್ತಾರೆ

ಇಪ್ಪಡಿ- ಈ ಮೇಲೆ ಉಪಪಾದಿಸಿದ ರೀತಿಯಲ್ಲಿ, **ಅಜ್ಗಪಂಚಕ ಸಂಪನ್ನಮಾನ**- ಅಜ್ಗ ಪಞ್ಚಕಗಳಿಂದ ಕೂಡಿದ, **ಆತ್ಮರಕ್ಷಾ ಭರನ್ಯಾಸಮೇ, ಪ್ರಪತ್ತಿ ಶಾಸ್ತ್ರಮೆಲ್ಲಾತ್ತಿಲುಮ್** - ಪ್ರಪತ್ತಿ ಶಾಸ್ತ್ರಗಳೆಲ್ಲಾದರಲ್ಲೂ, **ಪ್ರಧಾನ ವಿಧೇಯ ಮೆನ್ರು** - ಮುಖ್ಯವಾಗಿ ವಿಧಿಸಿರುವದು ಎಂದು ಶ್ರೀವಿಷ್ಣು ಚಿತ್ತರು, ವಾದಿಹಂಸಾಂಬುವಾಹರು, ವರದಾಚಾರ್ಯರೇ ಮೊದಲಾದವರು, **ಸಜ್ಗ್ರಹಿತ್ತಾರ್‌ಗಳ್** - ಪ್ರಪನ್ನ ಪಾರಿಜಾತ ಮೊದಲಾದ ಗ್ರಂಥಗಳಲ್ಲಿ ಸಜ್ಗ್ರಹಿಸಿ ಹೇಳಿದರು. ಇಲ್ಲಿ ಇಪ್ಪಡಿ ಎಂದು ಹೇಳಿದುದರಿಂದ ಶಾಸ್ತ್ರ ಮತ್ತು ಸತ್ಸಂಪ್ರದಾಯ ಸಮ್ಮತವಾದುದು ಈಗ ತಾವು ಮಾಡಿರುವ ಪ್ರಪತ್ತಿಸ್ವರೂಪ ನಿರೂಪಣವೆಂಬ ಭಾವವು. ಅಜ್ಗ ಪಞ್ಚಕ ಸಂಪನ್ನಮಾನ ಆತ್ಮರಕ್ಷಾಭರನ್ಯಾಸವೆಂದು ಹೇಳಿರುವದರಿಂದ ಭರನ್ಯಾಸಕಾಲದಲ್ಲಿ ಅಜ್ಗ ಪಞ್ಚಕಗಳೂ ಇದ್ದರೇನೇ ಭರನ್ಯಾಸ ಸಿದ್ಧಿಯು ಎಂಬದು ತಿಳಿಸಲ್ಪಟ್ಟಿತು. ಎಲ್ಲಿಯೋ ಒಂದು ಪ್ರಮಾಣವನ್ನು ಮನಸ್ಸಿನಲ್ಲಿಟ್ಟು ಹೇಳಿದಭಿಪ್ರಾಯವಲ್ಲವು. ಎಲ್ಲಾ ಪ್ರಪತ್ತಿ ಶಾಸ್ತ್ರಗಳಲ್ಲಿಯೂ ಇಂತಹ ಅಜ್ಗ ಪಞ್ಚಕಯುಕ್ತವಾದ ರಕ್ಷಾಭರನ್ಯಾಸವೇ ಅಜ್ಗಿ ಎಂದು ಹೇಳಲ್ಪಟ್ಟಿರುತ್ತದೆಂದು ಉಪದೇಶಿಸಿರುತ್ತಾರೆ. ಆಗಲಿ ಸತ್ಸಂಪ್ರದಾಯ ಸಮ್ಮತಿ ಈ ಅಭಿಪ್ರಾಯಕ್ಕೆ ಉಂಟೋ ಎಂದರೆ ಉಂಟು ಎಂದು ಮೂವರು ಮಹನೀಯರುಗಳಾದ ಪೂರ್ವಾಚಾರ್ಯರು ಹಾಗೆಯೇ ಅಪ್ಪಣೆ ಕೊಡಿಸಿರುತ್ತಾರೆಂದು ತಿಳಿಸುತ್ತಾರೆ.

ಅಥ ಕರ್ತವ್ಯತ್ವ ಶಙ್ಕಾ ಪರಿಹಾರಃ ಶೇಷತ್ವ ಜ್ಞಾನಮಾತ್ರಂ ನಾಲಮ್.

ಇನ್ನಿಡತ್ತಿಲ್ ಶಿಲರ್ ಶಾಸ್ತ್ರಾರ್ಥ ತತ್ತ್ವಮ್ ತೆಳಿನ್ದ ಪೋದೇ ಶೇಷತ್ವಾನುಸಂಧಾನಮ್ ಪಣ್ಣಿನಾನನ್ರೋ? (೧) "ಸ್ವೋಜ್ಜೀವನೇಚ್ಛಾ

ಶ್ರೀ ವಿಷ್ಣುಚಿತ್ತ ರೆಂಬುವರು ಶ್ರೀ ಭಾಷ್ಯಕಾರರ ಪ್ರಶಿಷ್ಯರು, ಶ್ರೀ ವರದಾಚಾರ್ಯರಿಗೆ (ನಡಾದೂರ್ ಅಮ್ಮಾಳ್‌ರವರಿಗೆ) ಆಚಾರ್ಯರು. ಇದರಿಂದ ಈ ಅಭಿಪ್ರಾಯವು ಶ್ರೀ ಭಾಷ್ಯಕಾರರಿಗೂ ಸಮ್ಮತವಾಗಿ ಪರಂಪರಯಾ ಬಂದುದೆಂದೂ ಊಹಿಸಬಹುದು. ಶ್ರೀವಾದಿ ಹಂಸಾಂಬುವಾಹರು ಶ್ರೀ ನಿಗಮಾಂತ ದೇಶಿಕರಿಗೆ ಸೋದರಮಾವಂದಿರು ಮತ್ತು ಆಚಾರ್ಯರು, ಇವರು ನಡದೂರ್ ಅಮ್ಮಾಳ್‌ರವರ ಶಿಷ್ಯರು. ವರದಾಚಾರ್ಯರಿಗೆ ನಡದೂರ್ ಅಮ್ಮಾಳ್ ಎಂದು ಅಪರನಾಮಧೇಯವು. ಶ್ರೀ ನಿಗಮಾಂತದೇಶಿಕರಿಗೆ ಪ್ರಾಚಾರ್ಯರು. ಇಲ್ಲಿ ಆದಿ ಪದದಿಂದ ಪರಾಶರ ಭಟ್ಟರು ಸುದರ್ಶನಾಚಾರ್ಯರು ಮೊದಲಾದವರು ಹೇಳಲ್ಪಟ್ಟರು. ಅಜ್ಞಾಯಾವುದು, ಅದರ ಸಮರ್ಪಣವನ್ನು ಹೇಗೆ ಮಾಡತಕ್ಕದೆಂಬುದನ್ನು ಸ್ವಾಮಿ ದೇಶಿಕರವರು ನ್ಯಾಸದಶಕದಲ್ಲಿ ಸ್ಫುಟವಾಗಿ ತಿಳಿಸಿರುತ್ತಾರೆ.

ಮುಂದೆ ಕರ್ತವ್ಯಾಂಶದಲ್ಲಿನ ಶಙ್ಕಾ ಪರಿಹಾರವು, ಶೇಷತ್ವ ಜ್ಞಾನಮಾತ್ರ ಪ್ರಪತ್ತಿಯಲ್ಲವು.

ಮುಂದೆ ಶೇಷತ್ವಜ್ಞಾನ ಮಾತ್ರವೇ ಪ್ರಪತ್ತಿಯು, ಇಷ್ಟುಮಾತ್ರವಿದ್ದರೆ ಸಾಕು, ಬೇರೆ ಯಾವ ಅನುಷ್ಠಾನವೂ ಬೇಕಾಗಿಲ್ಲವೆಂಬ ಕೆಲವರ ಮತವನ್ನು ಪೂರ್ವಪಕ್ಷರೂಪದಲ್ಲಿ ಅನುವಾದಮಾಡಿ ಹೇಳಿ ಆ ಅಭಿಪ್ರಾಯವು ಸರಿಯಲ್ಲವೆಂದು ಉಪದೇಶಿಸುತ್ತಾರೆ. ಇನ್ನಿಡತ್ತಿಲ್ - ಪ್ರಪತ್ತಿ ಸ್ವರೂಪವನ್ನು ನಿರ್ಧರಿಸುವ ಸಂದರ್ಭದಲ್ಲಿ, ಶಿಲರ್ - ಕೆಲವರು. ಇದಕ್ಕೆ ಕ್ರಿಯಾಪದವು ಶೊಲ್ಲುವರ್‌ಗಳ್ ಎಂದು ಮುಂದೆ ಇದೆ. ಏನನ್ನು ಹೇಳುತ್ತಾರೆ ಎಂದರೆ ತಿಳಿಸುತ್ತಾರೆ:— "ಶಾಸ್ತ್ರಾರ್ಥ ತತ್ತ್ವಮ್ ತೆಳಿನ್ದಪೋದೆ - ಶಾಸ್ತ್ರಾರ್ಥದ ಯಾಥಾತ್ಮ್ಯವು ತಿಳಿದಾಗಲೇ, ಶೇಷತ್ವಾನುಸಂಧಾನಂ - ಪರಮಾತ್ಮನು ಶೇಷಿಯು ತಾನು ಅವನಿಗೆ ಶೇಷನು ಎಂದು ಅನುಸಂಧಾನವನ್ನು, ಪಣ್ಣಿನಾನನ್ರೋ - ಮಾಡಿದನಲ್ಲವೋ ಎಂದರೆ ಮಾಡಿದರೆ ಸಾಲದೋ? ಮುಂದೆ ಪೂರ್ವಪಕ್ಷಿಯು ಉದಾ

---

(೧) ವಿಷ್ಣು ತತ್ತ್ವ.

ಯದಿ ತೇ ಸ್ವಸತ್ತಾಯಾಂ ಸ್ಪೃಹಾಯದಿ। ಆತ್ಮದಾಸ್ಯಂ ಹರೇ ಸ್ವಾಮ್ಯಂ ಸ್ವಭಾವಂ ಚ ಸದಾ ಸ್ಮರ" ಎನ್ರದುವುಮ್ ಪರಮ ಪುರುಷಾರ್ಥ ತದುಪಾಯಙ್ಗಳೈ ವೇಣ್ಡಿಯಿರುನ್ದಾಯಾಗಿಲ್ ನೀ ದಾಸನಾಯ್ ಈಶ್ವರನ್ ಸ್ವಾಮಿಯಾಯ್ ಇರುಕ್ಕಿರದು ಸ್ವಭಾವ ಸಿದ್ಧಮೆನ್ರು ತತ್ವತ್ತಿಲ್ ತೆಳಿವೋಡೆ ವರ್ತಿ ಯೆನ್ರು ಪಡಿಯನ್ರೋ? ಆನಾಲಿಪ್ಪೋದು ಆತ್ಮ ಸಮರ್ಪಣ ಮೆನ್ರೊರು ವಿಧೇಯ ಮುಂಡೋ ವೆನ್ರು ಶೊಲ್ಲುವರ್ಗಳ್.

ಹಿಸಬಹುದಾದ ಪ್ರಮಾಣವನ್ನು ಹೇಳಿ ಅದಕ್ಕೆ ಅವರುಗಳು ಹೇಳಬಹುದಾದ ಅರ್ಥವನ್ನು ಅನುವದಿಸುತ್ತಾರೆ. ತೇ - ನಿನಗೆ, ಸ್ವೋಜ್ಜೀವನೇಚ್ಛಾ ಯದಿ ಚೆನ್ನಾಗಿ ಉತ್ಕೃಷ್ಟ ದೆಶೆಯಲ್ಲಿ ಬಾಳಬೇಕೆಂಬ ಅಪೇಕ್ಷೆಯಿದ್ದುದಾದರೆ, ಪರಮ ಪುರುಷಾರ್ಥವನ್ನು ಹೊಂದಬೇಕೆಂಬ ಅಪೇಕ್ಷೆ ಇದ್ದುದಾದರೆ ಅದಕ್ಕಾಗಿ, ಸ್ವಸತ್ತಾಯಾಂ ಸ್ಪೃಹಾ ಯದಿ - ಬ್ರಹ್ಮಜ್ಞಾನದಿಂದ ನೀನು ಸತ್ತೆಯನ್ನು ಹೊಂದಬೇಕೆಂಬ ಆಶೆಯಿದ್ದರೆ, ಅದನ್ನು ಹೊಂದಲು ಮಾಡಬೇಕಾದ ಉಪಾಯದಲ್ಲಿ ಆಶೆಯಿದ್ದರೆ ಎಂಬರ್ಥವು, ಆತ್ಮದಾಸ್ಯಂ - ನೀನು ಪರಮಾತ್ಮನಿಗೆ ದಾಸನಾಗಿರುವದನ್ನೂ, ಹರೇಸ್ಸ್ವಾಮ್ಯಂ ಚ - ಶ್ರೀಹರಿಯು ಸ್ವಾಮಿಯಾಗಿರವನು ಎಂಬ ಭಾವವನ್ನೂ, ಸಹ, ಸ್ವಭಾವಂ - ಇದು ಸ್ವಭಾವಸಿದ್ಧವಾದುದೆಂಬುದನ್ನು ಸದಾ ಸ್ಮರ - ಯಾವಾಗಲೂ ಸ್ಮರಿಸು. ಈ ಶ್ಲೋಕಾರ್ಥವನ್ನು ಸ್ವಾಮಿ ದೇಶಿಕರೇ ಮುಂದೆ ಅನುವಾದಮಾಡಿ ಹೇಳುತ್ತಾರೆ, ಎನ್ರದುವುಮ್ - ಎಂದು ಹೇಳಿರುವದೂ, ಪರಮ ಪುರುಷಾರ್ಥವೇನು, ತದುಪಾಯಙ್ಗಳೈ ಅದನ್ನು ಹೊಂದುವ ಉಪಾಯವೇನು, ಇವುಗಳನ್ನು, ವೇಣ್ಡಿಯಿರುನ್ದಾಯಾಗಿಲ್ - ನೀನು ಅಪೇಕ್ಷಿಸಿದುದಾದರೆ, ನೀ ದಾಸನಾಯ್ - ನೀನು ದಾಸನಾಗಿ, ಈಶ್ವರನ್ ಸ್ವಾಮಿಯಾಯ್ - ಈಶ್ವರನು ಸ್ವಾಮಿಯಾಗಿ, ಇರುಕ್ಕಿರದು - ಇರುವದು ಸ್ವಭಾವ ಸಿದ್ಧವಾದುದೆಂದು ತತ್ವತ್ತಿಲ್ ತೆಳಿವೋಡೆ - ಯಥಾರ್ಥಜ್ಞಾನದೊಂದಿಗೆ ವರ್ತಿ - ಸದಾ ಇರು, ಯೆನ್ರುಪಡಿಯನ್ರೋ - ಎಂದು ಹೇಳಿದಹಾಗಲ್ಲವೋ ಆನಾಲ್ - ಹೀಗಾದನಂತರ, ಇಪ್ಪೋತು - ಈ ಸಂದರ್ಭದಲ್ಲಿ, ಆತ್ಮಸಮರ್ಪಣವೆಂದ, ಒರುವಿಧೇಯಮು ಮುಣ್ಡೋ - ಒಂದು ಅನುಷ್ಠಾನಕ್ರಮ ಉಂಟೋ? ಎನ್ರು - ಎಂಬದಾಗಿ ಶೊಲ್ಲುವರ್ಗಳ್ - ಹೇಳುವರು, ಎಂದರೆ ಆಕ್ಷೇಪಿಸುವರು ಎಂಬರ್ಥವು. ಈ ಮೇಲಿನ ಪ್ರಮಾಣಪ್ರಕಾರ ಮುಖ್ಯತತ್ವವೇನು ಎಂದರೆ ಶ್ರೀ ಹರಿಯು ಸಹಜ ಸ್ವಾಮಿಯು, ನಾವು ಆತನಿಗೆ ಸಹಜ ದಾಸ

ಇದುವುಮ್ ವಾಕ್ಯಜನ್ಯಜ್ಞಾನ ಮಾತ್ರತ್ತಾಲೇ ಮೋಕ್ಷಮೆನ್ಗೈಪ್ಪೋಲೆ ಅನಾದರಣೀಯುಮ್

ಭೂತವು, ಈ ಜ್ಞಾನವು ಪರಮ ಪುರುಷಾರ್ಥ ಪ್ರಾಪ್ತಿಗೂ ತದುಪಾಯಕ್ಕೂ ಅತ್ಯಾವಶ್ಯಕವು, ಇದರ ಅನುಸಂಧಾನವು ಯಾವಾಗಲೂ ಇರತಕ್ಕದ್ದು. ಇಷ್ಟು ಮಾತ್ರ ಈ ಪ್ರಮಾಣಾನುಸಾರ ಸಾಲದೇ, ಇನ್ನು ಬೇರೇ ಭರನ್ಯಾಸಾನುಷ್ಠಾನವೆಂಬುದು ಯಾವುದು? ಎಂದು ಆಕ್ಷೇಪವು. ಇದಕ್ಕೆ ಮುಂದಿನ ವಾಕ್ಯದಿಂದ ಸಮಾಧಾನವನ್ನು ಹೇಳುತ್ತಾರೆ:—**ಇದುವುಮ್** - ಈ ಅಭಿಪ್ರಾಯರೂಪಾಕ್ಷೇಪವೂ ಸಹ, ಇದುವುಮ್ ಎಂದಿರುವದರಿಂದ ಮೇಲೆಅನುವದಿಸಿದ ಇತರ ಆಕ್ಷೇಪಗಳಹಾಗೆ, ಎಂಬ ಭಾವವು; **ವಾಕ್ಯಜನ್ಯ ಜ್ಞಾನಮಾತ್ರತ್ತಾಲೆಮೋಕ್ಷಮ್**- ತತ್ತ್ವಮಸಿ" ಇತ್ಯಾದಿ ಉಪನಿಷದ್ವಾಕ್ಯದಿಂದುತ್ಪನ್ನವಾದ ಜ್ಞಾನಮಾತ್ರದಿಂದಲೇ ಮೋಕ್ಷವು, **ಎನ್ಗೈಪ್ಪೋಲೆ** - ಎಂದು ಶಾಂಕರರು ಹೇಳುವಹಾಗೆ, **ಅನಾದರಣೀಯುಮ್**-ಗಮನಿಸಲು ಅರ್ಹವಾದುದಲ್ಲವು. ಸರ್ವೇಶ್ವರನು ಸ್ವಾಮಿ ನಾವು ಅವನಿಗೆ ದಾಸರು ಎಂಬ ಶಾಸ್ತ್ರದಿಂದುಂಟಾಗುವ ಜ್ಞಾನವೇ ಮೋಕ್ಷಸಾಧಕವು. ಬೇರೆ ಪ್ರಪತ್ತ್ಯನುಷ್ಠಾನದ ಆವಶ್ಯಕತೆ ಏನು? ಎಂದರೆ ಅದ್ವೈತಿಯ ಸಿದ್ಧಾಂತಕ್ಕೂ ಈ ಅಭಿಪ್ರಾಯಕ್ಕೂ ಏನೂ ವ್ಯತ್ಯಾಸವಿಲ್ಲವೆಂದು ಹೇಳುತ್ತಾರೆ. ಅದ್ವೈತಿಗಳು ತತ್ತ್ವಮಸಿ ಎಂಬ ವಾಕ್ಯಾರ್ಥಜ್ಞಾನದಿಂದಲೇ ಮೋಕ್ಷವೆಂದು ಹೇಳುತ್ತಾರೆ. ಅವರ ಹಾಗೆ, ಶಾಸ್ತ್ರಜನ್ಯವಾದ ಶೇಷತ್ವಜ್ಞಾನದಿಂದಲೇ ಮೋಕ್ಷವೆಂದು ಹೇಳಿದಂತಾಗುತ್ತದೆ. ವಾಕ್ಯಜನ್ಯ ಜ್ಞಾನದಿಂದ ಮೋಕ್ಷವೆಂದಿಗೂ ಉಂಟಾಗಲಾರದೆಂದೂ, ಉಪಾಯಾನುಷ್ಠಾನದಿಂದಮಾತ್ರವೇ ಮೋಕ್ಷವೆಂದೂ ಶ್ರೀ ಭಾಷ್ಯಕಾರರು ತೋರಿಸಿರುತ್ತಾರೆ ವಾಕ್ಯಜನ್ಯಜ್ಞಾನದಿಂದಲೇ ಮೋಕ್ಷವೆಂದರೆ ಉಪಾಸನ ವಿಧಿಗೆ ವೈಯರ್ಥ್ಯವುಂಟಾಗುತ್ತದೆ; ಹಾಗೆಯೇ ಇಲ್ಲಿಯೂ ಪ್ರಪತ್ತಿಯನ್ನು ವಿಧಿಸುವ ಬಹು ಪ್ರಮಾಣಗಳಿಗೆ ವೈಯರ್ಥ್ಯವುಂಟಾಗುತ್ತದೆ ಎಂಬ ಭಾವವು; ಶೇಷತ್ವಜ್ಞಾನವೇ ಸಾಕು, ಭರನ್ಯಾಸವು ಆವಶ್ಯಕವಲ್ಲವು ಎಂಬ ಅಭಿಪ್ರಾಯವು ಅನಾದರಣೀಯವೆಂದು ಹೇಳಿದರು. ಏತಕ್ಕಾಗಿ ಅನಾದರಣೀಯವೆಂದರೆ ತಿಳಿಸುತ್ತಾರೆ:—ಇದೂ ಅಲ್ಲದೆ ಆತ್ಮನಿಕ್ಷೇಪವಲ್ಲೂ ಶೇಷತ್ವಜ್ಞಾನವೂ ಆವಶ್ಯಕವಾದುದರಿಂದ, ಅವರಕ್ಕೂ ಶೇಷತ್ವಜ್ಞಾನಕ್ಕೂ ಏನೂ ವ್ಯತ್ಯಾಸವಿಲ್ಲವೆಂಬಾಕ್ಷೇಪಕ್ಕೂ ಕೂಡ ಸಮಾಧಾನವನ್ನು ಹೇಳುತ್ತಾರೆ.

ಪ್ರಪತ್ತಿಃ ಪ್ರಾಯಶ್ಚಿತ್ತರೂಪೇತಿ ವಿಧೇಯಾ

ಜಿತ ಕೌಸ್ತುಭಚೌರ್ಯಸ್ಯ ಸಮ್ರಾಜಸ್ಸರ್ವಪಾಪ್ಮನಾಂ ।
ಶಿಷ್ಟಂ ಹ್ಯಾತ್ಮಾಪಹಾರಸ್ಯ ನಿಷ್ಕೃತಿಸ್ಸ್ವಭರಾರ್ಪಣಮ್ ॥೪೧॥

ಪ್ರಪತ್ತಿಯು ಪ್ರಾಯಶ್ಚಿತ್ತರೂಪವೆಂದು ಶಾಸ್ತ್ರದಲ್ಲಿ ವಿಧಿಸಿರುವದು.

ಜಿತಕೌಸ್ತುಭಚೌರ್ಯಸ್ಯ - ಕೌಸ್ತುಭರತ್ನದ ಚೌರ್ಯವು ಯಾವುದಕ್ಕೆ ಜಿತವೋ ಅದು ಎಂದರೆ ಕೌಸ್ತುಭರತ್ನಚೌರ್ಯವು ಆತ್ಮಚೌರ್ಯದಿಂದ ಜಿತವು ಕೌಸ್ತುಭರತ್ನವು ಭಗವಂತನ ಆಭರಣವು ಅಚೇತನವು; ತತ್ಸ್ಥಾನೀಯನಾಗಿರುವವನು ಚೇತನನಾದ ಜೀವಾತ್ಮನು, ಯಾವಾಗ ಆತ್ಮಚೌರ್ಯಮಾಡಿ ಸ್ವತಂತ್ರಾತ್ಮಭ್ರಾಂತಿಯುಂಟಾಯಿತೋ ಆಗ ಸರ್ವೇಶ್ವರನ ದಿವ್ಯಾಭರಣವಾದ ಕೌಸ್ತುಭರತ್ನಚೌರ್ಯಮಾಡಿದಂತಾಯಿತೆಂಬ ಭಾವವು. ಇಂತಹ ಅತಿಶಯವಾದ ಚೌರ್ಯವೆಂಬ ಭಾವವು, ಜಿತಕೌಸ್ತುಭ ಚೌರ್ಯಸ್ಯ ಎಂಬುದು ಆತ್ಮಾಪಹಾರಸ್ಯವೆಂಬುದಕ್ಕೆ ವಿಶೇಷಣವು, ಆತ್ಮಾಪಹಾರಚೌರ್ಯವು ಇನ್ನೂ ಎಂತಾದ್ದೆಂದರೆ **ಸರ್ವಪಾಪ್ಮನಾಂ ಸಮ್ರಾಜಃ** - ಸರ್ವಪಾಪಗಳಿಗೂ ಈ ಆತ್ಮಾಪಹಾರ ಚೌರ್ಯವು ಮೂಲಕಾರಣವಾದುದರಿಂದ ಸಮಸ್ತ ಪಾಪಗಳಿಗೂ ರಾಜನಾದ, **ಆತ್ಮಾಪಹಾರಸ್ಯ**-ಅಹಂ ಮೇ ಎಂಬ ತಿಳುವಳಿಕೆಯಿಂದ ಮಾಡಿದ ಆತ್ಮಾಪಹಾರಕ್ಕೆ **ನಿಷ್ಕೃತಿಃ**-ಪ್ರಾಯಶ್ಚಿತ್ತವು, **ಸ್ವಭರಾರ್ಪಣಮ್**-ಸ್ವರೂಪ ಫಲಸಮರ್ಪಣಗಳಿಂದ ಸೇರಿದಆತ್ಮರಕ್ಷಾಭರಸಮರ್ಪಣವು ಎಂದು, **ಶಿಷ್ಟಂ ಹಿ**-ಶಾಸ್ತ್ರದಲ್ಲಿ ವಿಧಿಸಿರುತ್ತದೆ ಯಷ್ಟೇ? **"ಯೋಽನ್ಯಥಾ ಸಂತಮಾತ್ಮಾನಮನ್ಯಥಾ ಪ್ರತಿಪದ್ಯತೇ । ಕಿಂ ತೇನ ನಕೃತಂ ಪಾಪಂ ಚೋರೇಣಾತ್ಮಾಪಹಾರಿಣಾ"** ಎಂದು ಹೇಳಿರುವದರಿಂದ ಪಾಪಗಳಲ್ಲೆಲ್ಲಾ ತುಂಬಾ ಅತಿಶಯವಾದ ಪಾಪವು. **"ಮಾಮೇಕಂ ಶರಣಂ ವ್ರಜ । ಅಹಂತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ"** ಇತ್ಯಾದಿ ಅನೇಕ ಪ್ರಮಾಣಗಳಿಂದ ಪ್ರಾಯಶ್ಚಿತ್ತವಾಗಿ ವಿಧಿಸಿರುತ್ತದೆ.

ಅಥವಾ, **ಜಿತಕೌಸ್ತುಭ ಚೌರ್ಯಸ್ಯ** - ಕೌಸ್ತುಭ ಚೌರ್ಯವು ಯಾವ ಪುರುಷನಿಂದ ಜಯಿಸಲ್ಪಟ್ಟಿತೋ ಎಂದರೆ ಕೌಸ್ತುಭಚೌರ್ಯಕ್ಕಿಂತ ಹೆಚ್ಚಾದ ಚೌರ್ಯ ಕೃತ್ಯವನ್ನು ಮಾಡಿದವನಿಗೆ, ಆ ಆತ್ಮಾಪಹಾರಿಗೆ ನಿಷ್ಕೃತಿಯು ಸ್ವಭರಾರ್ಪಣವು ಎಂದೂ ಅರ್ಥಮಾಡಬಹುದು.

ಕೌಸ್ತುಭವೂ ಭಗವಂತನ ಸ್ವತ್ತು. ತತ್ಸ್ಥಾನೀಯನಾದ ಆತ್ಮನೂ ಅವನ ಸ್ವತ್ತು. ಆತ್ಮನು ಪರಮಾತ್ಮನಿಗೆ ಸದಾ ಕೈಂಕರ್ಯಮಾಡಿ ಆನಂದವನ್ನು ಹೊಂದು ವನು. ಅಂತವನು ಸ್ವತಂತ್ರನೆಂದು ಭಾವಿಸಿ ಅಹಂ ಮಮ ಎಂದು ಆತ್ಮಾಪ ಹಾರ ಮಾಡುವವನು, ಕೌಸ್ತುಭ ಚೋರನಿಗಿಂತ ಹೆಚ್ಚು ಪಾತಕಿಯು ಎಂಬರ್ಥವು. ಅಂತವನಿಗೆ, ನಿಷ್ಕೃತಿಃ-ಪ್ರಾಯಶ್ಚಿತ್ತವು, ಸ್ವಭರಾರ್ಪಣವೆಂದೂ ಅರ್ಥಮಾಡ ಬಹುದು. ಒಬ್ಬ ರಾಜನ ಆಭರಣವನ್ನು ಅಪಹರಿಸಿ ವೇಶ್ಯಾಸ್ತ್ರೀಗೆ ಕೊಡುವದ ರಿಂದ ಉಂಟಾದ ನಿಗ್ರಹವು, ಅದನ್ನು ಪುನಃ ಪಡೆದು ರಾಜನಿಗೇನೇ ಸಮರ್ಪಿಸು ನವರಿಂದ ನಿಗ್ರಹವು ಹೇಗೆ ತಪ್ಪುತ್ತದೋ, ಮತ್ತು ಅದರೊಂದಿಗೆ ತನ್ನ ರಕ್ಷಾರೂಪ ಸರ್ವ ಭರವನ್ನು ಆತನಲ್ಲೇ ಇಟ್ಟುಬಿಟ್ಟರೆ, ಅಂತಹ ದಾಸನನ್ನು ರಾಜನು ಹೇಗೆ ಕೈಬಿಡದೆ ರಕ್ಷಿಸುವನೋ, ಹಾಗೆಯೇ ಆತ್ಮಸಮರ್ಪಣೆ ಆತ್ಮೀಯ ಸಮರ್ಪಣೆ ಗಳಿಂದ ಸರ್ವೇಶ್ವರನು ಆತ್ಮಾಪಹಾರಚೌರ್ಯವನ್ನು ಮನ್ನಿಸಿ, ಅಂತಹ ಪ್ರಪನ್ನ ನನ್ನು ಕೈಬಿಡದೆ ರಕ್ಷಿಸುವನೆಂಬ ಭಾವವು. ಸರ್ವೇಶ್ವರನಿಗೆ ತಾನು ದಾಸನು ಎಂಬ ಜ್ಞಾನ ಉಂಟಾದುದರಿಂದಲೇ ಆತನು ತನ್ನನ್ನು ರಕ್ಷಿಸಲಾರನು. ಆತ್ಮಾ ಪಹಾರ ಚೌರ್ಯಕ್ಕೆ ಇದೀಗ ಪ್ರಾಯಶ್ಚಿತ್ತವೆಂದು ವಿಧಿಸಿರುವದರಿಂದ ಆ ವಿಧಿಗನು ಸಾರವಾಗಿ ನಡೆದರೇನೇ ಮನ್ನಿಸುವನು ಮತ್ತು ಅನುಗ್ರಹಿಸುವನು. ಸರ್ವೇಶ್ವರನು ಮಹಾ ಕೃಪಾಶಾಲಿಯಾಯಿತಲ್ಲಾ, ಈ ಪ್ರಾಯಶ್ಚಿತ್ತವನ್ನು ತಾನೇ ಏಕೆ ಎದುರು ನೋಡುವದು? ಏಕೆ ಮನ್ನಿಸಕೂಡದು? ಎಂದರೆ ತನಗೆ ವೈಷಮ್ಯಾದಿಗಳ ಸಂಭವ ವಿಲ್ಲದೆ ಇರುವದಕ್ಕಾಗಿ ವ್ಯಾಜಗಳು ಅವಶ್ಯಕವು ; ತನ್ನ ಕಾನೂನಿಗಳಿಗನುಸಾರ ವಾಗಿಯಲ್ಲವೇ ರಾಜನೂ ಕೂಡ ಪ್ರವರ್ತಿಸುವನು.

ಹೀಗೆ ಈ ಪ್ರಾಯಶ್ಚಿತ್ತದಿಂದಲೇ ಸರ್ವವೂ ಸಿದ್ಧಿಸುವ ಪಕ್ಷದಲ್ಲಿ, ಶೇಷತ್ವ ಜ್ಞಾನದಿಂದೇನೂ ಪ್ರಯೋಜನವಿಲ್ಲವೋ? ಶಾಸ್ತ್ರದಲ್ಲೂ ಮೂಲ ಮಂತ್ರಾದಿಗ ಳಲ್ಲೂ ಶೇಷತ್ವಜ್ಞಾನಕ್ಕೆ ತುಂಬಾ ಪ್ರಾಧಾನ್ಯವು ತೋರಿಬರುತ್ತದೆಯಲ್ಲಾ! ಎಂದರೆ ಆ ಶೇಷತ್ವಜ್ಞಾನವು ಭರನ್ಯಾಸಕ್ಕೆ ಪೂರ್ವಭಾವಿಯಾಗಿಯೂ ಅನಂತ ರವೂ, ಹೇಗೆ ಪ್ರಯೋಜಕವೆಂಬುದನ್ನು ಮುಂದಿನ ಕಾರಿಕೆಯಿಂದ ತಿಳಿಸುತ್ತಾರೆ.

ಶೇಷತ್ವ ಜ್ಞಾನದ ಪ್ರಯೋಜನವು ಹೇಳಲ್ಪಡುತ್ತದೆ

ಪರಶೇಷತ್ವ ಧೀಮಾತ್ರಮ್- ತಾನು ಭಗವಂತನಿಗೆ ಶೇಷಭೂತನು ಎಂಬ ಶಾಸ್ತ್ರದಿಂದುಂಟಾಗುವ ಜ್ಞಾನಮಾತ್ರವು, ತಾನು ಭಗವಂತನ ಸ್ವತ್ತಾಗಿ, ಆತನಿಗೆ ದಾಸನಾಗಿ, ಆತನ ಪ್ರಯೋಜನಕ್ಕಾಗಿಯೇ ಎಂಬ, ಭರನ್ಯಾಸವಿಲ್ಲದೆ ಬರೀ ಶಾಸ್ತ್ರಜ್ಞಾ ನವು, ಅಧಿಕಾರವಿಶೇಷಣ(ಕ)ಮ್-ಭರನ್ಯಾಸಕ್ಕೆ ಅಧಿಕಾರವನ್ನುಂಟುಮಾಡುವಂ ಥಾದ್ದು. ಮಾತ್ರಮ್ ಎಂಬ ಪದದಿಂದ ಭರನ್ಯಾಸವಿಲ್ಲದೆ ಬರೀ ಜ್ಞಾನ ಮಾತ್ರ

ಶೇಷತ್ವ ಜ್ಞಾನಸ್ಯ ಪ್ರಯೋಜನಮಾಹ

ಪರಶೇಷತ್ವಧೀಮಾತ್ರಮಧಿಕಾರ ವಿಶೇಷಣ(ಕ)ಮ್ ।
ಪಶ್ಚಾದಾತ್ಮಾಪಹಾರಸ್ಯ ನಿರೋಧಾಯ ಚ ಕಲ್ಪತೇ ॥೪೨॥

ಶೇಷತ್ವಾದಿ ವಿಶಿಷ್ಟಮಾನ ಆತ್ಮ ತತ್ವತ್ತೈ ಶಾಸ್ತ್ರತ್ತಾಲೆ ತೆಳಿನ್ದವನುಕ್ಕು ಅಧಿಕಾರ ವಿಶೇಷತ್ತೋಡುಮ್, ಪರಿಕರ ವಿಶೇಷತ್ತೋಡುಮ್

ಎಂಬರ್ಥವು ತೋರಿಬರುತ್ತದೆ. ಇದುವರೆಗೂ ತಾನು ಆತನ ಸ್ವತ್ತು, ತಾನು ಆತನಿಗಾಗಿಯೇ ಎಂದು ತಿಳಿಯದೆ ಆತ್ಮಾಪಹಾರ ಚೌರ್ಯವು ಮಾಡಲ್ಪಟ್ಟಿತು, ಈಗ ತಿಳಿದುದರಿಂದ, ಆಕಿಂಚನ್ಯ ಅನನ್ಯಗತಿತ್ವಗಳುಂಟಾಗಿ, ಅಧಿಕಾರಿಯಾಗಲು ಅರ್ಹತೆಯುಂಟಾಯಿತೆಂಬ ಭಾವವು. ಹೀಗೆ ಶೇಷತ್ವಜ್ಞಾನವು ಭರನ್ಯಾಸಕ್ಕೆ ಉಪಕಾರಕವು. ಉತ್ತರಾರ್ಧದಿಂದ ಆ ಶೇಷತ್ವಜ್ಞಾನವು ಭರನ್ಯಾಸಾನಂತರವೂ ಹೇಗೆ ಉಪಕಾರಕವೆಂಬುದನ್ನು ತಿಳಿಯಪಡಿಸುತ್ತಾರೆ. ಪಶ್ಚಾತ್-ಆತ್ಮಾತ್ಮೀಯ ಭರಸಮರ್ಪಣವಾದನಂತರ, ಆತ್ಮಾಪಹಾರಸ್ಯ - ಆತ್ಮಾಪಹಾರರೂಪಚೌರ್ಯದ ಎಂದರೆ ತಾನು ಸ್ವತಂತ್ರನು ಎಂಬಜ್ಞಾನದ, ನಿರೋಧಾಯ - ಪ್ರತಿಬಂಧಕವಾಗಿ, ಕಲ್ಪತೇ ಉಪಯುಕ್ತವಾಗುತ್ತದೆ. ಹೀಗೆ ಶೇಷತ್ವಜ್ಞಾನವು ಭರನ್ಯಾಸಪೂರ್ವಕಾಲಿಕವಾಗಿಯೂ ಉತ್ತರ ಕಾಲಿಕವಾಗಿಯೂ ಪ್ರಯೋಜನವುಳ್ಳದು. ಮುಂದಿನ ವಾಕ್ಯದಲ್ಲಿ ಭರನ್ಯಾಸ ಪ್ರಕಾರವನ್ನು ಅನುವದಿಸುವರಾಗಿ ಭರನ್ಯಾಸಕಾಲದಲ್ಲೂ ಸಹ ಶೇಷತ್ವಜ್ಞಾನವು ಆವಶ್ಯಕವೆಂದು ಹೇಳುತ್ತಾರೆ ಹೀಗೆ ಮೋಕ್ಷಾರ್ಥಿಗೆ ಶೇಷತ್ವಜ್ಞಾನವು ಬಹಳ ಉಪಯುಕ್ತವಾಗಿದ್ದರೂ ಶೇಷತ್ವಜ್ಞಾನವೇ ಸಾಕು, ಭರನ್ಯಾಸವು ಬೇಕಾಗಿಲ್ಲ ಎಂದುಹೇಳಲು ಸಾಧ್ಯವಿಲ್ಲವು, ಎಂದುಹೇಳಿ ಭರನ್ಯಾಸಕ್ರಮವನ್ನು ಸಙ್ಗ್ರಹಿಸುತ್ತಿರುವದರಮೂಲಕ, ಮೇಲಿನ ಎರಡು ಕಾರಿಕೆಗಳ ಅರ್ಥವನ್ನು ತಿಳಿಸುತ್ತಾರೆ; ಶೇಷತ್ವಾದಿ ವಿಶಿಷ್ಟಮಾನ ಆತ್ಮತತ್ತ್ವತ್ತೈ "ದಾಸಭೂತಾಸ್ಸ್ವತಸ್ಸರ್ವೇ ಹ್ಯಾತ್ಮಾನಃ ಪರಮಾತ್ಮನಃ" ಎಂಬಲ್ಲಿಯ, ಪ್ರಣವದಲ್ಲೂ ತೋರಿಬರುವ ಶೇಷತ್ವವೇ ಮೊದಲಾದ ವಿಶೇಷಣಗಳಿಂದ ಕೂಡಿದ ಜೀವಾತ್ಮ ತತ್ವವನ್ನು, ಶಾಸ್ತ್ರತ್ತಾಲೆ ತೆಳಿನ್ದವನುಕ್ಕು - ಇತರಗಳು ಪ್ರತ್ಯಕ್ಷಾದಿ ಪ್ರಮಾಣಗಳಿಂದ ತಿಳಿಯುವದು ಸಾಧ್ಯವಲ್ಲವುದರಿಂದ ಶಾಸ್ತ್ರಮೂಲಕವಾಗಿಯೇ ತಿಳಿದವನಿಗೆ, ಅಧಿಕಾರ ವಿಶೇಷತ್ತೋಡುಂ - ಅಧಿಕಾರವಿಶೇಷಣಗಳಾದ ಆಕಿಂಚನ್ಯಾನನ್ಯಗತಿತ್ವಗಳೊಂದಿಗೆ, ಪರಿಕರವಿಶೇಷತ್ತೋಡು- ಆನುಕೂಲ್ಯಾದಿ ಅಙ್ಗಪಞ್ಚಕಗಳೊಂದಿಗೆ, ಫಲ

ಫಲಸಙ್ಕಲ್ಪ ವಿಶೇಷತ್ತೋಡೇಡುಮ್ ಕೂಡಿನ ಶೇಷತ್ವ ಪ್ರತಿಸಂಧಾನ ಗರ್ಭಮಾನ ಸ್ವಾತ್ಮರಕ್ಷಾಭರನ್ಯಾಸಮುಂ, ಅನಾದ್ಯಪರಾಧ ಮೂಲ ನಿಗ್ರಹ ನಿವೃತ್ತಿಕ್ಕು ಉಪಾಯಮಾಗ ವಿಧಿಕ್ಕಪ್ಪಡುಗಿರ ಆತ್ಮ ಸಮರ್ಪಣಮ್.

ಸಙ್ಕಲ್ಪವಿಶೇಷತ್ತೋಡೇಡು - ಅದರಿಂದುಂಟಾಗುವ ಮೋಕ್ಷಫಲಪ್ರಾಪ್ತಿಯೂ ಕೂಡ ಭಗವಂತನಿಗೇ ಎಂದು ಫಲತ್ಯಾಗ ಸಙ್ಕಲ್ಪದೊಂದಿಗೆ, ಇವುಗಳಿಂದೆಲ್ಲಾ **ಕೂಡಿನ** - ಸೇರಿದ, ಶೇಷತ್ವಪ್ರತಿಸಂಧಾನ ಗರ್ಭಮಾನ - ತಾನು ಭಗವಂತನಿಗೆ ಶೇಷಭೂತನು ಎಂಬ ಅನುಸಂಧಾನವನ್ನು ಒಳಗೊಂಡಿರುವ, **ಸ್ವರಕ್ಷಾಭರನ್ಯಾಸಮುಂ** - ತನ್ನ ಆತ್ಮಫಲ ರಕ್ಷಣಗಳ ಭರಸಮರ್ಪಣೆ ಈಗ, **ಅನಾದ್ಯಪರಾಧಮೂಲ ನಿಗ್ರಹ ನಿವೃತ್ತಿಕ್ಕು** - ಅನೇಕಾಪರಾಧಗಳ ಮೂಲಕ ಪ್ರಾಪ್ತವಾದ ಭಗವನ್ನಿಗ್ರಹಕ್ಕೆ ಉಪಾಯವಾಗಿ, **ವಿಧಿಕ್ಕಪ್ಪಡುಗಿರ** - "ಮುಮುಕ್ಷುರ್ವೈ ಶರಣ ಮಹಂ ಪ್ರಪದ್ಯೇ", "ಓಮಿತ್ಯಾತ್ಮಾನಂ ಯುಂಜೀತ" "ಬ್ರಹ್ಮಣೋ ಮಹಿಮಾನ ಮಾಪ್ನೋತಿ," "ಮಾಮೇಕಂ ಶರಣಂವ್ರಜ ಅಹಂತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ" ಎಂಬಿವೇ ಮೊದಲಾದ ವಾಕ್ಯಗಳಲ್ಲಿ ವಿಧಿಸಲ್ಪಟ್ಟಿರುವ ಆತ್ಮ ಸಮರ್ಪಣವು ಶೇಷತ್ವಜ್ಞಾನದ ಅನುಸಂಧಾನವು ಭರಸಮರ್ಪಣಕಾಲದಲ್ಲೂ ಬೇಕು, ಅದಕ್ಕೆ ಪೂರ್ವಭಾವಿಯಾಗಿಯೂ ಬೇಕು, ಉತ್ತರ ಕಾಲದಲ್ಲೂ ಬೇಕು; ಹೀಗಿದ್ದರೂ ಅನು ಭರನ್ಯಾಸದ ಸ್ಥಾನವನ್ನು ವಹಿಸಲಾರದು ಶೇಷತ್ವಾದಿ ವಿಶಿಷ್ಟನಾನ ಆತ್ಮ ತತ್ವತ್ತೈ ತೆಳಿನ್ದು ಎಂಬುದರಿಂದ ಪೂರ್ವಭಾವಿಯಾಗಿ ಶೇಷತ್ವಜ್ಞಾನವು ಆವಶ್ಯಕವೆಂದುಹೇಳಲ್ಪಟ್ಟಿತು. ಶೇಷತ್ವ ಪ್ರತಿಸಂಧಾನ ಗರ್ಭಮಾನ ಎಂಬುದರಿಂದ ತತ್ಕಾಲದಲ್ಲೂ ಅನುಸಂಧಾನವಿರಬೇಕೆಂದು ಹೇಳಿದಂತಾಯಿತು. ಅದರೂ ಭರನ್ಯಾಸವು ವಿಧೇಯವಾದುದರಿಂದ ಅನುಷ್ಠಿಸುವುದು ಆವಶ್ಯಕವು. ಅದೇ ಆತ್ಮ ಸಮರ್ಪಣರೂಪ ಅಙ್ಗಿಯು ಎಂಬ ತಾತ್ಪರ್ಯವು

ಆದರೆ ಭರಸಮರ್ಪಣವೂ ಜ್ಞಾನವಿಶೇಷವೇ ಆಗಿರುವಾಗ ಶೇಷತ್ವಜ್ಞಾನವೇ ಸಾಲದೇನೋ? "ತತ್ತ್ವಜ್ಞಾನಾನ್ಮೋಕ್ಷಃ" ಎಂದು ಶಾಸ್ತ್ರಗಳಲ್ಲಿ ಉಪಪಾದಿಸಲ್ಪಟ್ಟಿರುವುದರಿಂದ ಶೇಷತ್ವಜ್ಞಾನವು ತುಂಬಾ ಆವಶ್ಯಕವಾಗಿರುವಾಗ ಶಾಸ್ತ್ರಜನ್ಯ ಶೇಷತ್ವ ಜ್ಞಾನದಿಂದಲೇ ಮೋಕ್ಷವೆಂದು ಹೇಳುವುದು ಯುಕ್ತವಲ್ಲವೋ? ತತ್ತ್ವಜ್ಞಾನದಿಂದ ಮೋಕ್ಷವೆಂಬುದಕ್ಕೆ ಅನೇಕ ಪ್ರಮಾಣಗಳನ್ನು ಉದಾಹರಿಸಬಹುದು:— "ಜ್ಞಾತ್ವಾ ದೇವಂ ಮುಚ್ಯತೇ ಸರ್ವಪಾಶೈಃ", "ಬ್ರಹ್ಮವೇದ

"ತತ್ವಜ್ಞಾನಾನ್ಮೋಕ್ಷ" ಇತಿ ವಾಕ್ಯಸ್ಯಾಭಿಪ್ರಾಯಃ

"ತತ್ವಜ್ಞಾನತ್ತಾಲೇಮೋಕ್ಷ" ಮೆಙ್ಗಿರ ವಿದುವುಮ್ ಒರು ಉಪಾಯಾನುಷ್ಠಾನತ್ತೈ ಮುನ್ನಿಟ್ಟನ್ನು ವಿಡಮ್ (೧) "ಭಜಸ್ವಮಾಂ" (೨) "ಮಾಮೇಕಂ ಶರಣಂ ವ್ರಜ" ಇತ್ಯಾದಿ ವಿಧಿಬಲ ಪ್ರಾಪ್ತಮ್.

ಬ್ರಹ್ಮೈವ ಭವತಿ", "ಪೃಥಗಾತ್ಮಾನಂ ಪ್ರೇರಿತಾರಂ ಚ ಮತ್ವಾ" "ಭೋಕ್ತಾ ಭೋಗ್ಯಂ ಪ್ರೇರಿತಾರಂಚ ಮತ್ವಾಜುಷ್ಟಸ್ತತಸ್ತೇನಾ ಮೃತತ್ವಮೇತಿ" ಈ ಪೂರ್ವ ಪಕ್ಷಕ್ಕೆ ಸಮಾಧಾನವನ್ನು "ತತ್ವಜ್ಞಾನತ್ತಾಲೆ" ಎಂದಾರಂಭಿಸಿ ಹೇಳುತ್ತಾರೆ.

ತತ್ವ ಜ್ಞಾನದಿಂದ ಮೋಕ್ಷವೆಂಬ ವಾಕ್ಯದ ತಾತ್ಪರ್ಯವು

ತತ್ವಜ್ಞಾನವು ಆವಶ್ಯಕವೆಂಬುದನ್ನೇನೋ ಅಙ್ಗೀಕರಿಸುವೆವು, ಆದರೆ ಅದು ಉಪಾಯಾನುಷ್ಠಾನಕ್ಕೆ ಉಪಕಾರಕವಾಗಿ ಉಪಾಯಾನುಷ್ಠಾನದ್ವಾರಾ ಮೋಕ್ಷಪ್ರಾಪ್ತಿಗೆ ಹೇತುವಾಗುತ್ತದೆಂದು ಉಪದೇಶಿಸುತ್ತಾರೆ. ತತ್ವಜ್ಞಾನದಿಂದ ಮೋಕ್ಷವು, ಎಙ್ಗಿರ ವಿದುವುಮ್ - ಎಂದು ಹೇಳುವದೂ ಕೂಡ, ಒರು ಉಪಾಯಾನುಷ್ಠಾನತ್ತೈ ಮುನ್ನಿಟ್ಟನ್ನು ವಿಡಮ್ - ಭಕ್ತಿ ಪ್ರಪತ್ತಿಗಳಲ್ಲಿ ಯಾವುದಾದರೂ ಒಂದು ಉಪಾಯಾನುಷ್ಠಾನಮೂಲಕವಾಗಿ ಎಂದು ಹೇಳುವ ಸಂದರ್ಭವು (೧) "ಭಜಸ್ವ" (೨) "ಮಾಮೇಕಂ ಶರಣಂ ವ್ರಜ" ಎಂಬಿವೇ ಮೊದಲಾದ, ವಿಧಿ ಬಲಪ್ರಾಪ್ತಮ್ - ವಿಧಿವಾಕ್ಯಗಳ ಸಾಮರ್ಥ್ಯದಿಂದುಂಟಾದುದು, ಹಾಗೆ ಹೇಳದೇ ಹೋದರೆ ಉಪಾಯಾನುಷ್ಠಾನವನ್ನು ವಿಧಿಸುವ ವಾಕ್ಯಗಳು ನಿರರ್ಥಕಗಳಾಗುತ್ತವೆ; ಭಕ್ತಿ ಪ್ರಪತ್ತಿ ಶಾಸ್ತ್ರಗಳಿಗೆ ವೈಯರ್ಥ್ಯವುಂಟಾಗುತ ದೆಂಬ ತಾತ್ಪರ್ಯವು "ಜ್ಞಾತ್ವಾದೇವಂ ಮುಚ್ಯತೇ" ಸರ್ವೇಶ್ವರನನ್ನು ಹೀಗೆ ತಿಳಿದು (ಉಪಾಸನ ಮೂಲಕ) ಮೋಕ್ಷವನ್ನು ಹೊಂದುವನು. "ಸರ್ವ ಪಾಪೈಸ್ತಮೇವಂ ವಿದಿತ್ವಾತಿ ಮೃತ್ಯುಮೇತಿ" ಆತನನ್ನು ಹೀಗೆ(ಉಪಾಸನೆ ಮೂಲಕ) ತಿಳಿದು ಸರ್ವಪಾಪಗಳಿಂದಲೂ ಬಿಡಲ್ಪಟ್ಟವನಾಗಿ ಮೃತ್ಯು ಎಂದರೆ ಸಂಸಾರವನ್ನು ದಾಟುವನು. "ಅನುವಿದ್ಯ ವಿಜಾನಾತಿ" "ವಿಜ್ಞಾಯ ಪ್ರಜ್ಞಾಂ ಕುರ್ವೀತ" ಎಂಬ ವಿಶೇಷ ವಿಧಿಗಳಿರುವದರಿಂದ ಶೇಷ ಶೇಷಿತ್ವ ಸಂಬಂಧಜ್ಞಾನ

---

(೧) ಗೀ. ೯ ೩೩. (೨) ಗೀ ೧೮. ೬೬.

ಜ್ಞಾನಾನ್ಮೋಕ್ಷೋಪದೇಶೇ(ಶೋ)ಹಿ ತತ್ಪೂರ್ವೋಪಾಸನಾದಿನಾ।
ಉಪಾಸನಾದಿ ರೂಪಾದ್ವಾ ಜ್ಞಾನಾನ್ಮೋಕ್ಷೋ ವಿವಕ್ಷಿತಃ॥ ॥೯೩॥

ಮಾತ್ರವೇ ಸಾಕ್ಷಾತ್ತಾಗಿ ಮೋಕ್ಷಹೇತುವಾಗಲಾರದು. ಆದುದರಿಂದ "**ಭಜಸ್ವ**" ಇತ್ಯಾದಿ ವಿಧಿಗಳಲ್ಲಿ **ತೋರಿ**ಬರುವ ಉಪಾಯಾನುಷ್ಠಾನದ್ವಾರಾ ಮೋಕ್ಷವೇವಿನಾ ಅನ್ಯಥಾ ಅಲ್ಲನೆಂಬ ಭಾವವು. "**ಕಿಂಪುನ ರ್ಬ್ರಾಹ್ಮಣಾಃ ಪುಣ್ಯಾ ಭಕ್ತಾ ರಾಜರ್ಷಯಸ್ತಥಾ । ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವಮಾಂ**" ॥ ಎಂಬುದು ಪೂರಾ ಶ್ಲೋಕವು ಅರ್ಜುನನಿಗೆ ಉಪದೇಶಿಸುತ್ತಾರೆ; ನೀನು ಇರುವ ಲೋಕವು ಅನಿತ್ಯವಾಗಿ ಸುಖವಿಲ್ಲದುದಾಗಿ ತಾಪತ್ರಯಗಳಿಂದ ಕೂಡಿರುವುದಾದುದರಿಂದ ನನ್ನನ್ನು ಭಜಿಸು ಎಂದು ಹಿತೋಪದೇಶಮಾಡಿದರು. ಆ ಭಜನವು ಯದ್ರೂಪವು ಎಂಬುದಕ್ಕೆ "**ಮನ್ಮನಾಭವ**" ಎಂದು ವಿವರಿಸಿ, ಮಾಮೇವೈಷ್ಯಸಿ ಎಂದು ಹೇಳಿರುತ್ತಾರೆ. ಇದಕ್ಕೆ **ವ್ಯಾಖ್ಯಾನ**ದಲ್ಲಿ **ಶ್ರೀ** ಯತಿರಾಜರು, "**ಉಕ್ತಲಕ್ಷಣ ಮಿದ ಮುಪಾಸನ ಮುಪಾದದಾನೋ ಮಾಮೇವ ಪ್ರಾಪ್ಸ್ಯಸಿ**" ಎಂದು ಮುಗಿಸಿರುವದರಿಂದ ಪರಿಪೂರ್ಣ ಶೇಷತ್ವಜ್ಞಾನವೇ ಸಾಲದು, ಅದರೊಂದಿಗೆ ಉಪಾಯಾನುಷ್ಠಾನವೂ ಆವಶ್ಯಕವೆಂಬುದು ಶ್ರೀ ಯತಿರಾಜರ ದಿವ್ಯಸೂಕ್ತಿಯ ಮೂಲಕ ಸಿದ್ಧಾಂತಿತವು.

ಹೀಗೆ ತತ್ತ್ವಜ್ಞಾನಾನ್ಮೋಕ್ಷಃ ಎಂಬುದಕ್ಕೆ ಎರಡುವಿಧವಾಗಿ ಉಪಪತ್ತಿಯನ್ನು ಕಲ್ಪಿಸಬಹುದು:— (೧) ಶೇಷತ್ವಜ್ಞಾನಪೂರ್ವಕೋಪಾಸನಾದಿಗಳಿಂದ ಯುಕ್ತವಾದ ಜ್ಞಾನದಿಂದಲಾಗಲಿ ಅಥವಾ (೨) ಉಪಾಸನಾದಿರೂಪಜ್ಞಾನದಿಂದಲಾಗಲಿ ಮೋಕ್ಷಪ್ರಾಪ್ತಿಯುಂಟಾಗುತ್ತದೆಂದು ತಾತ್ಪರ್ಯವನ್ನು ಕಲ್ಪಿಸುವದರಲ್ಲಿ ಏನೊಂದೂ ಬಾಧಕವಿಲ್ಲವೆಂದು ಒಂದು ಕಾರಿಕೆಯ ಮೂಲಕ ತಿಳಿಸುತ್ತಾರೆ.

ಜ್ಞಾನಾನ್ಮೋಕ್ಷೋಪದೇಶೇ - ಜ್ಞಾನದಿಂದ ಈ ಸಂದರ್ಭದಲ್ಲಿ ಶೇಷತ್ವಜ್ಞಾನದಿಂದ ಮೋಕ್ಷವುಂಟಾಗುತ್ತದೆಂದು ಉಪದೇಶಿಸುವದರಲ್ಲಿ, **ತತ್ಪೂರ್ವೋಪಾಸನಾದಿನಾ** - ಶಾಸ್ತ್ರಜನ್ಯ ಜ್ಞಾನ ಪೂರ್ವಕವಾಗಿ ಪ್ರಾಪ್ತವಾದ ಉಪಾಸನವೇ ಮೊದಲಾದ ಉಪಾಯದಿಂದಲಾಗಲಿ, ಇಲ್ಲಿ ಮೊದಲಾದ ಎಂದು ಹೇಳಿದುದರಿಂದ ಧರನ್ಯಾಸವೂ ಹೇಳಲ್ಪಟ್ಟಿತು, ಅಥವಾ **ಉಪಾಸನಾದಿ ರೂಪಾದ್ವಾ**- ಉಪಾಸನ ಭರನ್ಯಾಸರೂಪವಾದ ಜ್ಞಾನದಿಂದಲಾಗಲಿ, ಜ್ಞಾನದಿಂದ ಮೋಕ್ಷವೆಂಬುದು, **ವಿವಕ್ಷಿತಃ** - ಹೇಳಲ್ಪಟ್ಟಿತು. **ಜ್ಞಾನಾನ್ಮೋಕ್ಷಃ** ಎಂಬುದನ್ನೇನೋ ಒಪ್ಪಿಕೊಳ್ಳತಕ್ಕದ್ದೇ, ಆದರೆ ವಿಧಿಸಿರುವ ಉಪಾಯಗಳಿಂದ ಭಕ್ತಿ ಪ್ರಪತ್ತಿಗಳಿಗೆ

ಶಾಸ್ತ್ರಜನ್ಯಮಾನ ಶೇಷತ್ವಜ್ಞಾನ ಮಾತ್ರಂ ನಿವೃತ್ತಿ ಧರ್ಮಙ್ಗಳಾನ ನ್ಯಾಸೋಪಾಸನಾದಿಗಳೆಲ್ಲಾಮುಕ್ಕುಮ್ ಪೊದುವಾಯಿರುಕ್ಕುಮ್ ; ಶೇಷ

ವೈಯರ್ಥ್ಯವುಂಟಾಗದ ಹಾಗೆ ಅವರಭಿಪ್ರಾಯವನ್ನು ಗ್ರಹಿಸತಕ್ಕದ್ದು. ಶಾಸ್ತ್ರಜನ್ಯಜ್ಞಾನಪೂರ್ವಕವಾದ ಉಪಾಸನ ಭರನ್ಯಾಸಗಳಿಂದ ಮೋಕ್ಷವು ಎಂದಾದರೂ ಅರ್ಥಹೇಳತಕ್ಕದ್ದು; ಅಥವಾ, ಉಪಾಸನ ಭರನ್ಯಾಸರೂಪ ಜ್ಞಾನದಿಂದ ಮೋಕ್ಷವೆಂದಾದರೂ ಅರ್ಥಹೇಳತಕ್ಕದ್ದು, ಎಂಬುದು ಈ ಶ್ಲೋಕತಾತ್ಪರ್ಯವು. ಹಾಗಲ್ಲದೆ, ಅದ್ವೈತಿಗಳು ವಾಕ್ಯಜನ್ಯ ಜ್ಞಾನದಿಂದ ಮೋಕ್ಷವೆಂದು ಹೇಳುವ ಹಾಗೆ, ಸಾಕ್ಷಾತ್ ಶಾಸ್ತ್ರಜನ್ಯ ಶೇಷತ್ವ ಜ್ಞಾನದಿಂದಲೇ ಮೋಕ್ಷವೆಂಬ ವಾದವನ್ನು ತಂದರೆ, ಶ್ರೀ ಭಾಷ್ಯ, ಗೀತಾಭಾಷ್ಯಗಳ ಉಪದೇಶಕ್ಕೂ, ಉಪಾಸನ ಶರಣಾಗತಿ ರೂಪೋಪಾಯಗಳನ್ನು ಪ್ರತಿಪಾದಿಸುವ ಇತಿಹಾಸ ಪುರಾಣಗಳಿಗೂ, ಪ್ರತ್ಯುತ ವಿರುದ್ಧವಾಗುವದರಿಂದ, ಶೇಷತ್ವಜ್ಞಾನವು ಎಂದಿಗೂ ಅಙ್ಗಿಯಲ್ಲವು, ಇನ್ನು ಯಾವುದು ಎಂದರೆ, ಅಂತಹ ಜ್ಞಾನದಿಂದ ಕೂಡಿದ ಆತ್ಮರಕ್ಷಾ ಭರಸಮರ್ಪಣವೇ ಅಙ್ಗಿಯು ಎಂಬುದೇ ಸಿದ್ಧಾಂತವು.

"ಸ್ವೋಜ್ಜೀವನೇಚ್ಛಾಯದಿ ತೇ" ಎಂಬ ಶ್ಲೋಕದಲ್ಲಿ ಶೇಷತ್ವಜ್ಞಾನವು ಮೋಕ್ಷ ಹೇತುವೆಂದು ಅದಕ್ಕೆ ಪ್ರಾಶಸ್ತ್ಯವನ್ನು ಹೇಳುವದರಿಂದ ಅದು ಮೋಕ್ಷಕ್ಕೆ ಸಾಕ್ಷಾತ್ ಹೇತುವಲ್ಲದಿದ್ದರೂ, ಹೇಗೆ ಉಪಕಾರಕವೆಂಬುದನ್ನು ಜ್ಞಾನಾನ್ಮೋಕ್ಷೋಪದೇಶೇ ಎಂಬ ಶಂಕೆಯ ಮೂಲಕ ವಿಕಲ್ಪಿಸಿ ತಿಳಿಸುವದನ್ನೂ, ಮುಂದಿನ ಎರಡು ವಾಕ್ಯಗಳ ಮೂಲಕ ಉಪದೇಶಿಸುತ್ತಾರೆ **ಶಾಸ್ತ್ರಜನ್ಯಮಾನ ಶೇಷತ್ವ ಜ್ಞಾನಮಾತ್ರಂ**-ಶಾಸ್ತ್ರಗಳಿಂದುಂಟಾದ ಶೇಷತ್ವ ಜ್ಞಾನವಾದರೋ, **ನಿವೃತ್ತಿಧರ್ಮಙ್ಗಳಾನ** - ಫಲಾಭಿಸಂಧಿಯಿಲ್ಲದೆ ಅಂತ್ಯದಲ್ಲಿ ಸಾತ್ವಿಕ ತ್ಯಾಗವನ್ನು ಹೇಳಿ ಅನುಷ್ಠಿಸಿದ ಧರ್ಮಗಳೆಂದ, **ಭರನ್ಯಾಸ ಉಪಾಸನ** ಮೊದಲಾದ ಎಲ್ಲಾ ವಿಧಿವಾಕ್ಯಾನುಸಾರ ನಡೆಸಿದ ಕರ್ಮಾನುಷ್ಠಾನಗಳಿಗೂ, **ಪೊದುವಾ ಯಿರುಕ್ಕುಮ್** - ಸಾಧಾರಣವಾಗಿರುತ್ತದೆ. ಶಾಸ್ತ್ರದ ವಿಧಿ ವಾಕ್ಯಗಳಿಗನುಸಾರವಾಗಿ ನಡೆಸಿದ ಕರ್ಮಗಳಿಗೆ ಧರ್ಮವೆಂಬ ಹೆಸರು. ಫಲಾಭಿಸಂಧಿಪೂರ್ವಕವಾಗಿ ಅನುಷ್ಠಿಸಿದ ಧರ್ಮಕ್ಕೆ ಪ್ರವೃತ್ತಿ ಧರ್ಮವೆಂದೂ ಫಲಾಭಿಸಂಧಿಯನ್ನು ತೊರೆದು ತ್ಯಾಗಪೂರ್ವಕವಾಗಿ ಅನುಷ್ಠಿಸಿದ ಧರ್ಮಕ್ಕೆ ನಿವೃತ್ತಿ ಧರ್ಮವೆಂದೂ, ಹೆಸರು. ಪ್ರವೃತ್ತಿಧರ್ಮವು ಬಂಧಕವು, ನಿವೃತ್ತಿಧರ್ಮವು ಮೋಕ್ಷಕ್ಕೆ ಉಪಕಾರಕವು; ಆದದರಿಂದಲೇ ಮೋಕ್ಷಧರ್ಮದಲ್ಲಿ 'ಪ್ರವೃತ್ತಿಃ ಪುನರಾ

ವೃತ್ತಿರೂಪಮಾನ ಕೈಙ್ಕರ್ಯಮೇ ಮುಮುಕ್ಷುವುಕ್ಕು ಪುರುಷಾರ್ಥಕಾಷ್ಠೈಯಾಗೈಯಾಲೇ ಶೇಷತ್ವ ಮರಿಯಾದ ಮೋಕ್ಷೋಪಾಯಂ ಅನುಷ್ಠಿಕ್ಕ ಘಟಿಯಾದಿರೆ.

ವೃತ್ತಿರ್ನಿವೃತ್ತಿಃ ಪರಮಾಗತಿಃ" ಎಂದು ಹೇಳಲ್ಪಟ್ಟಿರುತ್ತದೆ. ಇಂತಹ ನಿವೃತ್ತಿ ಧರ್ಮಗಳಾದ ನ್ಯಾಸೋಪಾಸನಾದಿಗಳಿಗೆಲ್ಲಾ ತುಂಬಾ ಉಪಕಾರಕವು ಈ ಶಾಸ್ತ್ರಜನ್ಯ ಶೇಷತ್ವಜ್ಞಾನವೆಂಬಭಿಪ್ರಾಯವು. ಉತ್ತರಾರ್ಧದ ಅರ್ಥವನ್ನು ವ್ಯಕ್ತಪಡಿಸುತ್ತಾರೆ. ಶೇಷವೃತ್ತಿ ರೂಪಮಾನ ಕೈಙ್ಕರ್ಯಮೇ - ಶೇಷವೃತ್ತಿಗೆ ಸ್ವರೂಪವಾದ ಕೈಙ್ಕರ್ಯವೇ, ಮುಮುಕ್ಷುವುಕ್ಕು - ಮೋಕ್ಷಾರ್ಥಿಗೆ, ಪುರುಷಾರ್ಥಕಾಷ್ಠೈಯಾಗೈಯಾಲೇ - ಪುರುಷಾರ್ಥವು ಮೋಕ್ಷವು, ಅದರ ಪರಾಕಾಷ್ಠೆಯು ಕೈಙ್ಕರ್ಯವು. ಮೋಕ್ಷವು ಏತಕ್ಕೆಂದರೆ ದಾಸಭೂತನಾದ ತಾನು ತನ್ನ ಸ್ವಾಮಿಯಾದ ಶ್ರೀವಾಸುದೇವನಿಗೆ ಕೈಙ್ಕರ್ಯವನ್ನು ಮಾಡುವದಕ್ಕಾಗಿ, ಆದುದರಿಂದ ಕೈಙ್ಕರ್ಯವು ಪುರುಷಾರ್ಥ ಕಾಷ್ಠೆಯೆಂದು ಹೇಳಲ್ಪಟ್ಟಿತು, ಶೇಷತ್ವ ಮರಿಯಾದ - ಶೇಷತ್ವಜ್ಞಾನವಿಲ್ಲದ, ಮೋಕ್ಷೋಪಾಯಂ - ಮೋಕ್ಷೋಪಾಯಗಳಾದ ನ್ಯಾಸೋಪಾಸನೆಗಳಲ್ಲಿ ಒಂದನ್ನು, ಅನುಷ್ಠಿಕ್ಕ - ಅನುಷ್ಠಿಸೋಣವು, ಘಟಿಯಾದಿರೇ - ಸಂಘಟಿಸಲಾರದಷ್ಟೇ; ಶೇಷತ್ವ ಜ್ಞಾನವಿಲ್ಲದವನಿಗೆ ಮೋಕ್ಷೋಪಾಯವನ್ನು ಅನುಷ್ಠಿಸಲು ಅಭಿರುಚಿಯು ಉಂಟಾಗುವದಿಲ್ಲವು. ಮೋಕ್ಷದಲ್ಲಿ ತನಗುಂಟಾಗುವ ನಿರತಿಶಯ ಸಂಪತ್ತು, ಯಾವುದೆಂದರೆ, ಕಿಂಕರತ್ವಾಧಿರಾಜ್ಯಂ ಎಂದು ಪ್ರಥಮ ಶ್ಲೋಕದಲ್ಲಿ ಹೇಳಲ್ಪಟ್ಟಿತು; ಆದುದರಿಂದ ಕೈಙ್ಕರ್ಯವೇ ತನಗೆ ಪುರುಷಾರ್ಥಕಾಷ್ಠೆ ಎಂಬ ಜ್ಞಾನ ಯುಕ್ತವಾದವು, ನ್ಯಾಸೋಪಾಸನೆಗಳು ಎಂಬ ಭಾವವು,

ಆದುದರಿಂದ ಶೇಷತ್ವಜ್ಞಾನವು ಸಾಕ್ಷಾತ್ತಾಗಿ ಮೋಕ್ಷದಾಯಕವಲ್ಲವು; ಮೋಕ್ಷಪ್ರಾಪ್ತಿಗೆ ಉಪಕಾರಕವೆಂದು ನಿಗಮನಮಾಡಿ ಮುಂದಿನ ವಾಕ್ಯವಾದ "ಶೇಷತ್ವಜ್ಞಾನ" ವೆಂಬುವ ವಾಕ್ಯದ್ವಯದಿಂದ ತಿಳಿಸುತ್ತಾರೆ- ಹಾಗೆ ಉಪಕಾರಕ ಮಾತ್ರವಾದರೆ. ಶೇಷತ್ವಜ್ಞಾನವಿಲ್ಲದೆ ಉಪಾಯಾನುಷ್ಠಾನದಲ್ಲಿ ಪ್ರವೃತ್ತಿಯುಂಟೋ ಎಂದರೆ ಉಂಟು ಎಂದು ಹೇಳಿ, ಆಗ ಶೇಷತ್ವಜ್ಞಾನವಿಲ್ಲದಿದ್ದರೂ ಅಂತಹ ಧರ್ಮಾನುಷ್ಠಾನಬಲದಿಂದ ಶೇಷತ್ವಜ್ಞಾನ ಉಂಟಾಗಿ, ಉಪಾಯಾನುಷ್ಠಾನ ಪೂರ್ತಿಯಿಂದ ಮೋಕ್ಷಪ್ರಾಪ್ತಿಯುಂಟಾಗುತ್ತದೆಂದು ಹೇಳುತ್ತಾರೆ.

ಅತಃ ಶೇಷತ್ವಜ್ಞಾನಮಾತ್ರಂ ನಾಲಮಿತಿ ನಿಗಮನಂ.

ಶೇಷತ್ವಜ್ಞಾನಮನ್ರಿಕ್ಕೇ ಮೋಕ್ಷಾರ್ಥಮಾಗ ವಿಧಿತ್ತ ಧರ್ಮಙ್ಗಳೈ ಅನುಷ್ಠಿತ್ತಾನಾಗಿಲುಮ್ ಇವ್ವರ್ಮಙ್ಗಳ್ ತಾನೇ, ಶೇಷತ್ವಜ್ಞಾನತ್ತೈಯುಮ್ ಉಣ್ಡಾಕ್ಕಿ, ಪೂರ್ಣಾನುಷ್ಠಾನಮುಖತ್ತಾಲೇಯಿರೆ ಮೋಕ್ಷಹೇತುವಾವದು.

ಆದುದರಿಂದ ಶೇಷತ್ವಜ್ಞಾನಮಾತ್ರವೇ ಸಾಲದು ಭರನ್ಯಾಸವೂ ಆವಶ್ಯಕವೆಂದು ನಿಗಮನವು.

ಶೇಷತ್ವಜ್ಞಾನ ಮನ್ರಿಕ್ಕೇ - ಶೇಷತ್ವಜ್ಞಾನವಿಲ್ಲದೇನೇ, ಮೋಕ್ಷಾರ್ಥಮಾಗವಿಧಿತ್ತಧರ್ಮಂಗಳೈ - ಮೋಕ್ಷಕ್ಕೆ ಸಾಧ್ಯೋಪಾಯಗಳೆಂದು ವಿಧಿಸಿದ ನ್ಯಾಸೋಪಾಸನೆಗಳನ್ನು, ಅನುಷ್ಠಿತ್ತಾನಾಗಿಲುಮ್ - ಅನುಷ್ಠಿಸಿದರೂ ಕೂಡ, ಇದ್ಧರ್ಮಙ್ಗಳ್ ತಾನೇ - ಈ ಭರನ್ಯಾಸ ಮತ್ತು ಕರ್ಮಯೋಗಾದಿ ಧರ್ಮಗಳೇ, ಶೇಷತ್ವಜ್ಞಾನವನ್ನು, ಉಂಡಾಕ್ಕಿ - ಉಂಟುಮಾಡಿ, ಪೂರ್ಣಾನುಷ್ಠಾನ ಮುಖತ್ತಾಲೇಯಿರೆ - ಅನುಷ್ಠಾನಪೂರ್ತಿದ್ವಾರಾವಾಗಿ ತಾನೇ, ಮೋಕ್ಷಹೇತುವಾವದು - ಮೋಕ್ಷಹೇತುವಾಗುತ್ತವೆ. ಇದರಿಂದ ಮೋಕ್ಷಕ್ಕೆ ಸಾಕ್ಷಾತ್ತಾಗಿ ಹೇತುವು ನ್ಯಾಸೋಪಾಸನರೂಪ ಉಪಾಯಾನುಷ್ಠಾನವೇವಿನಾ ಅನ್ಯಥಾ ಯಿಲ್ಲವೆಂಬ ಭಾವವು. ಶೇಷತ್ವ ಜ್ಞಾನವಾದರೋ ಉಪಾಯಾನುಷ್ಠಾನಕ್ಕೆ ಪೂರ್ವಭಾವಿಯಾಗಿ ಇಲ್ಲದಿದ್ದರೂ ಪರಂಪರಯಾ ಉತ್ಪನ್ನವಾಗಿ, ಉಪಾಯಾನುಷ್ಠಾನಪೂರ್ತಿಯನ್ನುಂಟುಮಾಡಿ, ಮೋಕ್ಷಹೇತುವಾಗುತ್ತದೆಂಬ ಭಾವವು ಸುಕೃತ ಪರಿಪಾಕಮೂಲಕವಾಗಿ, "ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋಭಯಾತ್" ಎಂದು ಹೇಳಿರುವ ಪ್ರಕಾರ ಭಕ್ತಿಮಾರ್ಗದಲ್ಲೇನೋ ಕರ್ಮಯೋಗಾರಂಭ ಉಂಟಾದನಂತರ, ತನ್ಮೂಲಕವಾಗಿ ಈತನಿಗೆ ಪರಂಪರಯಾ ಶೇಷತ್ವಜ್ಞಾನವೂ, ಉಪಾಸನ ನಿಷ್ಪತ್ತಿಮೂಲಕ ಉಪಾಯಾನುಷ್ಠಾನಪೂರ್ತಿಯೂ ಉಂಟಾಗಬಹುದು. ಆದರೆ ಭರನ್ಯಾಸವು ಸಕೃದನುಷ್ಠೇಯವಾಗಿರುವಾಗ, "ಶೇಷತ್ವ ಜ್ಞಾನತ್ತೈಯುಮ್ ಉಣ್ಡಾಕ್ಕಿ ಪೂರ್ಣಾನುಷ್ಠಾನ ಮುಖತ್ತಾಲೆ" ಎಂಬುದು, ಹೇಗೆ ಪ್ರಪತ್ತಿ ಧರ್ಮಕ್ಕೆ ಅನ್ವಯಿಸುತ್ತದೆ ಎಂದು ಪ್ರಶ್ನಿಸಬಹುದು. ಭರನ್ಯಾಸವೂ ಆಚಾರ್ಯಮುಖೇನ ನಡೆಯುವದರಿಂದ ಅವರುಗಳ ಮೂಲಕ ಶೇಷತ್ವಜ್ಞಾನೋಪದೇಶ ಉಂಟಾಗಿ

ಆಗೈಯಾಲ್ ಇಙ್ಗ ವಿಧೇಯಮಾನ ಸಮರ್ಪಣಂ ಶೇಷತ್ವಜ್ಞಾನ ಮಾತ್ರಮನ್ರು ; ಮಱ್ರೆದೆನ್ನಿಲ್, ಶೇಷತ್ವಜ್ಞಾನಾದಿ ಯುಕ್ತಮಾನ ಸ್ವರಕ್ಷಾ ಭರನ್ಯಾಸಮ್.

ಉಪಾಯಪೂರ್ತಿಯಾಗುತ್ತದೆಂಬ ಭಾವವು. ಅನುಷ್ಠಾನ ಕರಣಮಂತ್ರವೇ ಈ ಜ್ಞಾನವನ್ನು ಉಂಟುಮಾಡುತ್ತದೆ.

ಆಗೈಯಾಲ್ - ಆ ಕಾರಣದಿಂದ ಎಂದರೆ ಶೇಷತ್ವಜ್ಞಾನವು ಅಧಿಕಾರಿ ವಿಶೇಷಣವಾದುದರಿಂದಲೂ, ಆಕಿಂಚನ್ಯದಿಂದ ಕೂಡಿದ ಉಪಾಯಾನುಷ್ಠಾನವು ವಿಧಿಸಲ್ಪಟ್ಟಿರುವವರಿಂದಲೂ, **ಇಙ್ಗ** - ಈ ಸಂದರ್ಭದಲ್ಲಿ ಎಂದರೆ ಪ್ರಪದನಕ್ಕೆ ಅಙ್ಗಿಯಾವುದೆಂದು ನಿರ್ಧರಿಸುವ ಪ್ರಕರಣದಲ್ಲಿ, **ವಿಧೇಯಮಾನ ಸಮರ್ಪಣವು** - **"ಆತ್ಮಾನಂ ಮಯಿನಿಕ್ಷಿಪೇತ್"** ಇತ್ಯಾದಿಗಳಲ್ಲಿ ವಿಧಿಸಲ್ಪಟ್ಟ ಸಮರ್ಪಣವು, **ಶೇಷತ್ವಜ್ಞಾನಮನ್ರು** - ಬರೀ ಶೇಷತ್ವ ಜ್ಞಾನವಲ್ಲವು; **ಮಱ್ರೆದೆನ್ನಿಲ್** - ಇನ್ನು ಯಾವುದು ಎಂದರೆ, **ಶೇಷತ್ವ ಜ್ಞಾನಾದಿಯುಕ್ತಮಾನ** - ಶೇಷತ್ವಜ್ಞಾನವೇ ಮೊದಲಾದುದರಿಂದ ಕೂಡಿದ, **ಸ್ವರಕ್ಷಾ ಭರನ್ಯಾಸಮ್** - ತನ್ನ ರಕ್ಷಾ ಭರನ್ಯಾಸವು ; ಇದರಲ್ಲಿ ಉಪಾಯ ಫಲಗಳ ಭರನ್ಯಾಸವೂ ಅಂತರ್ಗತವು. ಇದೀಗ ಅಙ್ಗಿಯು ಎಂಬ ಭಾವವು.

ಭಗವಂತನಲ್ಲಿ ಉಪಾಯತ್ವಜ್ಞಾನಮಾತ್ರವೇ ಪ್ರಪತ್ತಿಯು ಎಂಬ ವಾದದ ಖಂಡನವು

ಈ ಶ್ಲೋಕಕ್ಕೆ ಎರಡು ವಿಧವಾಗಿ ತಾತ್ಪರ್ಯವನ್ನು ಹೇಳುತ್ತಾರೆ.

(೧) ಹೀಗೆ ಶೇಷತ್ವ ಜ್ಞಾನವೇ ಪ್ರಪತ್ತಿಯು ಎಂಬ ಕೆಲವರ ಅಭಿಪ್ರಾಯವನ್ನು ಖಂಡಿಸಿ, ಭಗವಂತನೇ ನಮಗೆ ಸಿದ್ಧೋಪಾಯನೆಂಬ ಜ್ಞಾನವೇ ಪ್ರಪತ್ತಿಯು ಎಂಬ ಪಕ್ಷವನ್ನು ಮುಂದಿನ ಕಾರಿಕೆಯಿಂದ ನಿರಾಕರಿಸುತ್ತಾರೆ. ಈ ಕಾರಿಕೆಯಲ್ಲಿ ಪೂರ್ವಪಕ್ಷವನ್ನು ಅನುವಾದಮಾಡಿ, ನಾಲ್ಕನೆಯ ಪಾದದಿಂದ ಸಮಾಧಾನವನ್ನು ಹೇಳುತ್ತಾರೆ:—

ವಾಕ್ಯಮಾತ್ರೇಣ ಸಿದ್ಧತ್ವಾತ್ - ಚರಮಶ್ಲೋಕದ ವಾಕ್ಯವಾದ **"ಶರಣಂ ವ್ರಜ"** ಎಂಬುದರಿಂದ ಮಾತ್ರ ಎಂದರೆ ಯಾವ ಅನುಷ್ಠಾನದ ಆವಶ್ಯಕತೆಯೂ ಇಲ್ಲದೆ ಸಿದ್ಧಿಸುವದರಿಂದ ಎಂದು ಸಾರದೀಪಿಕೆ ಸಾರವಿವರಣೆಯವರು ಅರ್ಥಮಾಡಿರುತ್ತಾರೆ, ಸಾರಸಂಗ್ರಹದವರು "ನ್ಯಾಸ ಇತಿ ಬ್ರಹ್ಮ" ಎಂದು ಸಮಾನಾಧಿಕರಣ್ಯವು ಶಾಸ್ತ್ರದಲ್ಲಿ ಹೇಳಿರುವದರಿಂದ ಪರಬ್ರಹ್ಮನು ಹೇಗೆ ಸಿದ್ಧೋಪಾಯನೋ ಹಾಗೆಯೇ

ಭಗವತ್ಸ್ವರೂಪಾಯತ್ತ ಜ್ಞಾನಮಾತ್ರಮೇವ ಪ್ರಪತ್ತಿರಿತಿಪಕ್ಷಸ್ಯ ನಿರಸನಂ

ವಾಕ್ಯಮಾತ್ರೇಣ ಸಿದ್ಧತ್ವಾತ್ಸಿದ್ಧೋಪಾಯ ಇಹೋಚ್ಯತೇ (ತಾಂ) ।
ಪ್ರಪತ್ತಿರಿತಿ ವಾದೋಽಪಿ ವಿಧಿನಾತ್ರ ವಿಹನ್ಯತೇ ॥೪೪॥

"ಶರಣಂ ವ್ರಜ" ಎಂಬುದರಿಂದು "ಇಮು ಮರ್ಥಂ ಜಾನೀಹಿ"

ವಿಧಿವಾಕ್ಯ - ಹೊಂದು,

ಪ್ರಪತ್ತಿಯು ಸಿದ್ಧೋಪಾಯವೆಂಬುದು ವಾಕ್ಯದಿಂದ ಸಿದ್ಧಿಸುವದರಿಂದ, ಅಥವಾ ಪ್ರಪತ್ತಿಯೆಂಬ ಶಾಸ್ತ್ರದಲ್ಲಿ ತೋರಿಬರುವ ವಾಕ್ಯಮಾತ್ರದಿಂದಲೇ ಸಿದ್ಧಿಸುವದರಿಂದ, ಪ್ರಪತ್ತಿಃ - ಪ್ರಪತ್ತಿಯು, ಇಹ - ಈ ಪ್ರಪತ್ತಿ ಶಾಸ್ತ್ರದಲ್ಲಿ, ಸಿದ್ಧೋಪಾಯ ಇತಿ - ಸಿದ್ಧೋಪಾಯವೆಂದು, ಉಚ್ಯತೇ - ಹೇಳಲ್ಪಡುತ್ತದೆ, ಇತಿ ವಾದೋಽಪಿ - ಎಂಬ ವಾದವೂ ಕೂಡ, ಅತ್ರ - ಈ ಸಂದರ್ಭದಲ್ಲಿ, ವಿಧಿನಾ - ವ್ರಜ ಎಂಬ ಧಾತುವಿನಲ್ಲಿರುವ ವಿಧಿ ಪ್ರತ್ಯಯದಿಂದ, ವಿಹನ್ಯತೇ - ಹೊಡೆಯಲ್ಪಡುತ್ತದೆ, ನಿರಸನ ಮಾಡಲ್ಪಡುತ್ತದೆ. ಮಾಮೇಕಂ ಶರಣಂ ವ್ರಜ - ಶರಣವನ್ನು ಹೊಂದು ಎಂಬ ವಿಧಿಪೂರ್ವಕವಾಗಿ ಕೃತಿಯಿಂದ ಸಾಧ್ಯವಾದ ಒಂದು ಸಾಧ್ಯೋಪಾಯವು ಬೋಧಿತವಾಗುವದರಿಂದ "ಅನುಷ್ಠಾನ ಬೇಕಿಲ್ಲವು, ವಾಕ್ಯ ಜ್ಞಾನಮಾತ್ರವೇ ಪ್ರಪತ್ತಿ" ಎಂಬ ವಾದವು ನಿರಸನ ಮಾಡಲ್ಪಟ್ಟಿತು.

(೨) ಕಾರಿಕಾ ದರ್ಪಣದಲ್ಲಿ ಬೇರೆ ವಿಧವಾಗಿ ಅನ್ವಯಿಸಿರುತ್ತಾರೆ

ವಾಕ್ಯಮಾತ್ರೇಣ ಸಿದ್ಧತ್ವಾತ್ - ಯಾವುದು ವಾಕ್ಯಮಾತ್ರದಿಂದ ಸಿದ್ಧಿಸಲ್ಪಟ್ಟಿದೆಯೋ ಎಂದರೆ, ಪ್ರಪತ್ತಿಃ - ಎಂದು ಉತ್ತರಾರ್ಧದಲ್ಲಿರುವದಕ್ಕೆ ಇತರರು ಅನ್ವಯಿಸಿದರು, ಇವರು ಶೇಷತ್ವಜ್ಞಾನಂ ಎಂದು ಅಧ್ಯಾಹಾರ ಮಾಡಿಕೊಂಡು ಶೇಷತ್ವಜ್ಞಾನವು ಶಾಸ್ತ್ರಜನ್ಯಜ್ಞಾನದಿಂದ ಸಿದ್ಧಿಸುವದರಿಂದ ಈ ಶೇಷತ್ವಜ್ಞಾನವು ಭಗವಂತನಹಾಗೆ ಸಿದ್ಧೋಪಾಯವೆಂದೇ, ಉಚ್ಯತೇ ಅಥವಾ ಉಚ್ಯತಾಂ - ಹೇಳಲ್ಪಡಲಿ, ಆ ಸಿದ್ಧೋಪಾಯವಾದ ಶೇಷತ್ವಜ್ಞಾನವೇ, ಪ್ರಪತ್ತಿಃ - ಪ್ರಪತ್ತಿಯು, ಇತಿ ವಾದಃ - ಎಂಬವಾದವು, ವಿಧಿನಾ - ಕೃತಿಸಾಧ್ಯವಾದ ವಿಧಿವಾಕ್ಯವಾದ ಶರಣಂವ್ರಜ ಎಂಬುದರಿಂದ, ವಿಹನ್ಯತೇ ಹೊಡೆಯಲ್ಪಡುತ್ತದೆ.

ಈ ಕಾರಿಕಾ ವ್ಯಾಖ್ಯಾಕ್ರಮದ ಅಭಿಪ್ರಾಯಪ್ರಕಾರ ಜ್ಞಾನರೂಪವಾದ ಸಿದ್ಧೋಪಾಯವೇ ಸಾಲದು, ಶರಣಂ ವ್ರಜ ಎಂಬ ವಿಧಿವಾಕ್ಯವಿರುವದರಿಂದ, ಕೃತಿಸಾಧ್ಯವಾದ ಒಂದು ಸಾಧ್ಯೋಪಾಯವಾದ ಭರಸಮರ್ಪಣವು ಆವಶ್ಯಕವೆಂದು ಸಾಧಿಸಲ್ಪಟ್ಟಿತು. ಇದರಮೇಲೆ ಪುನಃ ಇನ್ನೊಂದು ಪೂರ್ವಪಕ್ಷವೇನೆಂದರೆ, ವ್ರಜ ಶಬ್ದವು ಗತ್ಯರ್ಥ

ಸಾಧ್ಯವಾದ ಕೆಲಸವನ್ನು ನೀನು ಮಾಡು ಎನ್ನುವುದೇ 'ವ್ರಜ' ಎಂದು ಹೇಳಿದರೆ ಹೇಳುವುದು.

ಎಙ್ಗಿರ ಮಾತ್ರಮಾಯ್ ಒರು ಕರ್ತವ್ಯೋಪಾಯ ವಿಧಿ ಪರಮನ್ರಿಕ್ಕೇ ಯೊಳಿನ್ದಾಲೋ ವೆನ್ನಿಲ್ ? ಇದು ಶಬ್ದಸ್ವಾರಸ್ಯ ವಿರುದ್ಧಮ್.

ವಾದುದು, ಗತ್ಯರ್ಥವುಳ್ಳವುಗಳೆಲ್ಲ ಬುದ್ಧ್ಯರ್ಥದಲ್ಲೂ ಪ್ರಯೋಗವುಳ್ಳವುಗಳಾದುದರಿಂದ, ಶರಣಂವ್ರಜ ಎಂಬಲ್ಲಿ ಕೃತಿಸಾಧ್ಯವಾದುದು ಯಾವುದೂ ಇಲ್ಲವು, ಶರಣಂ ವ್ರಜ ಎಂದರೆ ಶರಣಮಿತಿ ಜಾನೀಹಿ, ಶರಣವೆಂದು ತಿಳಿಯತಕ್ಕದ್ದೆಂಬರ್ಥವು. ಆದುದರಿಂದ ಪ್ರಪತ್ತಿಗೆ ಅನುಷ್ಠಾನ ಬೇಕಿಲ್ಲವು, ಬರೀ ಜ್ಞಾನಮಾತ್ರವೇ ಎಂಬದಾಗಿ ಪೂರ್ವಪಕ್ಷವು, ಇದಕ್ಕೆ ಸಮಾಧಾನವನ್ನು ಹೇಳುತ್ತಾರೆ. ಶರಣಂ ವ್ರಜ ಎಙ್ಗಿರುವದು - ಶರಣಂವ್ರಜ ಎಂದು ಹೇಳಿರುವುದು, "ಇನುಮರ್ಥಂಜಾನೀಹಿ" - "ಶ್ರೀಕೃಷ್ಣನಾದ ನಾನು ಶರಣವೆಂಬಭಿಪ್ರಾಯವನ್ನು ಅರ್ಜುನನಾದ ನೀನು ತಿಳಿಯುತಕ್ಕದ್ದು." ಎಙ್ಗಿರನ್ಮಾತ್ರಮಾಯ್ - ಇಷ್ಟುಮಾತ್ರ ಅಭಿಪ್ರಾಯವುಳ್ಳದಾಗಿ, ಮಾತ್ರಶಬ್ದದಿಂದ ಅನುಷ್ಠಾನ ಪರವಲ್ಲವೆಂಬ ಭಾವವು ಇದನ್ನೇ ಮುಂದೆ ವಿವರಿಸುತ್ತಾರೆ, ಒರುಕರ್ತವ್ಯೋಪಾಯ ವಿಧಿ ಪರಮನ್ರಿಕ್ಕೇ - ಒಂದು ಮಾಡಬೇಕಾಗಿರುವ ಉಪಾಯವನ್ನು ವಿಧಿಸುವದಿಲ್ಲವಾಗಿ ಒಳಿನ್ದಾಲೋ ವೆನ್ನಿಲ್ - ಪ್ರಾಪ್ತವಾದುದು ಎಂದರೋ, ಹೀಗೆ ಪೂರ್ವಪಕ್ಷ ತಂದರೆ ಎಂಬ ಭಾವವು, ಮಾಮೇಕಂ ಶರಣಂ - ನಾನೊಬ್ಬನೇ ನಿನಗೆ ಉಪಾಯವು ಎಂದು ವ್ರಜ - ತಿಳಿ ಎಂಬುದೀಗ ಅರ್ಥವಾಗಿ, ಆ ಕಾರಣದಿಂದ ಅನುಷ್ಠಿಸಬೇಕಾದ ಯಾವ ಸಾಧ್ಯೋಪಾಯವೂ ಬೇಕಿಲ್ಲವೆಂದು ಅರ್ಥಮಾಡಿದರೆ ಎಂಬರ್ಥವು, ಹೀಗೆ ಅರ್ಥಮಾಡಿದರೆ ಇದು, ಶಬ್ದಸ್ವಾರಸ್ಯ ವಿರುದ್ಧಮ್ - ವ್ರಜ ಎಂಬುದು ಲೋಟ್, ಅದಕ್ಕೆ ಕೃತಿಸಾಧ್ಯವಾದ ವಿಧಿಯಲ್ಲೇ ಅರ್ಥಸ್ವಾರಸ್ಯವಿರುವದರಿಂದ, ಅದಕ್ಕೆ ವಿರುದ್ಧವಾಯಿತು ಎಂಬ ಭಾವವು. ಶರಣಂ ವ್ರಜವೆಂಬುವದಕ್ಕೆ ಶರಣಾಗತ್ಯನುಷ್ಠಾನದಲ್ಲಿ ಅರ್ಥಸ್ವಾರಸ್ಯವೇ ವಿನಾ, ಜ್ಞಾನಮಾತ್ರೋಪದೇಶದಲ್ಲಿ ಸ್ವಾರಸ್ಯವಿಲ್ಲವೆಂಬ ಭಾವವು. ಇಷ್ಟುಮಾತ್ರವೇ ಅಲ್ಲವು, ಇನ್ನೂ ಒಂದು ದೋಷವುಂಟು, ಅದೇನೆಂದರೆ ಪ್ರಪತ್ತಿಯನ್ನು ಸ್ಫುಟತರವಾಗಿ ವಿಧಿಸುವ ಅನೇಕ ಪ್ರಮಾಣಗಳಿಗೆ ವಿರುದ್ಧವಾಗುವದು ಆಗುತ್ತದೆಂದು ಮುಂದೆ ಹೇಳುತ್ತಾರೆ.

"ತಾಂ ಪ್ರಪತ್ತಿಂ - ಅಂತಹ ಪರಿಕರಗಳುಳ್ಳ ಪ್ರಪತ್ತಿಯನ್ನು, ಪ್ರಯುಂಜೀತ - ಅನುಷ್ಠಿಸತಕ್ಕದ್ದು" ಇತ್ಯಾದಿಗಳಾನ - ಇವೇ ಮೊದಲಾದ, ಸಪರಿಕರ ಸ್ಫುಟತರ ಪ್ರಪತ್ತಿ ವಿಧಿಗಳೋಡುಮ್ - ಇದು ಅಂಗಗಳಿಂದ ಕೂಡಿ

(೧)"ಪ್ರಪತ್ತಿಂ ತಾಂ ಪ್ರಯುಂಜೀತ ಸ್ವಾಙ್ಗೈಃ ಪಂಚಭಿರಾವೃತಾಂ" ಇತ್ಯಾದಿಗಳಾನ ಸಪರಿಕರ ಸ್ಫುಟತರ ಪ್ರಪತ್ತಿ ವಿಧಿಗಳೋಡುಮ್ ವಿರೋಧಿಕ್ಕುಮ್. ಈಶ್ವರನ್ ಮೋಕ್ಷೋಪಾಯ ಮೆನ್ಱು ಇವ್ವಳವೇ ಇಙ್ಗು ವಕ್ತವ್ಯಮಾಯ್, ಮೋಕ್ಷಾಧಿಕಾರಿಕ್ಕು ವಿಧೇಯಾಂತರ ಮನ್ಱಿಕ್ಕೇ ಯೊಳಿಂದಾಲ್, ಇನ್ನಿಡಮ್ ಪ್ರಸ್ತುತಮಾನ ಭಕ್ತಿಯೋಗತ್ತುಕ್ಕಪೇಕ್ಷಿತಮಾನ ತತ್ತ್ವೋಪದೇಶ ಮಾತ್ರಮಾಮ್.

ಬಹು ವ್ಯಕ್ತವಾಗಿ ತೋರುವ ಪ್ರಪತ್ತಿ ವಿಧಿಗಳಿಗೂ ಸಹ, ವಿರೋಧಿಕ್ಕುಮ್ - ವಿರುದ್ಧವಾದುದಾಗುತ್ತದೆ. ಯಾವುದು ಎಂದರೆ "ಶರಣಂ ವ್ರಜ ಎಂಬಲ್ಲಿ ವ್ರಜ ಎಂಬ ವಿಧಿಗೆ ಬುದ್ಧ್ಯರ್ಥವನ್ನು ಕಲ್ಪಿಸೋಣವು" ಎಂದು ಇಟ್ಟುಕೊಳ್ಳತಕ್ಕದ್ದು ಲಕ್ಷ್ಮೀತಂತ್ರದಲ್ಲಿರುವ ಪೂರಾವಾಕ್ಯವು, "ಪ್ರಪತ್ತಿಂ ತಾಂ ಪ್ರಯುಂಜೀತ ಸ್ವಾಂಗೈರ್ಪಂಚಭಿ ರಾವೃತಾಂ" ಎಂದಿರುವದರಿಂದ ಸಪರಿಕರ ಸ್ಫುಟತರ ಪ್ರಪತ್ತಿ ಎಂದು ಹೇಳಿರುತ್ತಾರೆ. ಇಲ್ಲಿ ಇತ್ಯಾದಿ ಎಂದು ಆದಿ ಪದದಿಂದ ಪ್ರಪತ್ತಿಯನ್ನು ಬೋಧಿಸುವ ಇತರ ವಿಧಿವಾಕ್ಯಗಳೆಲ್ಲಾ ಸೂಚಿಸಲ್ಪಟ್ಟವು (ನೆಯ ಪುಟವನ್ನು ನೋಡಿ) ಶರಣಂ ವ್ರಜ ಎಂಬಲ್ಲಿ ಕಷ್ಟಪಟ್ಟು ವ್ರಜ ಶಬ್ದಕ್ಕೆ ಜಾನೀಹಿ ಎಂದು ಅರ್ಥಮಾಡಿದಿರಿ ; ಪ್ರಯುಂಜೀತ ಎಂಬ ವಿಧಿಗೆ ಹಾಗೆ ಅರ್ಥ ಕಲ್ಪಿಸೋಣವು ಸಾಧ್ಯವಿಲ್ಲವಷ್ಟೇ ಎಂಬಭಿಪ್ರಾಯವು. ಪ್ರಾಪ್ತವಾಗುವ ಪೂರ ನೆಯ ದೋಷವನ್ನು ಹೇಳುತ್ತಾರೆ, ಈಶ್ವರನ್ - ಸರ್ವೇಶ್ವರನು, ಮೋಕ್ಷೋಪಾಯವು, ಎನ್ಱು - ಎಂದು ಹೇಳುವ, ಇವ್ವಳವೇ - ಇಷ್ಟುಮಾತ್ರವೇ, ವಕ್ತವ್ಯಮಾಯ್-ಹೇಳತಕ್ಕದ್ದಾಗಿ, ಮೋಕ್ಷಾಧಿಕಾರಿಗೆ, ವಿಧೇಯಾಂತರ ಮನ್ಱಿಕ್ಕೇ- ಬೇರೆ ವಿಧಿರೂಪವಲ್ಲಿ ವಿಧಿಸತಕ್ಕದ್ದು ಯಾವುದೂ ಇಲ್ಲದಿರೋಣ ಹೇಗೋಹಾಗೆ, ಒಳಿಂದಾಲ್ - ಬಿಟ್ಟು ಬಿಟ್ಟರೆ, ಇನ್ನಿಡಮ್ - ಈ ಸಂದರ್ಭವು ಎಂದರೆ ಶರಣಂ ವ್ರಜ ಎಂಬ ಪ್ರಕರಣವು, ಪ್ರಸ್ತುತಮಾನ ಭಕ್ತಿಯೋಗತ್ತುಕ್ಕು - ಈಗ ಉದ್ದಿಷ್ಟವಾದ ಭಕ್ತಿಯೋಗಕ್ಕೆ 'ಅಪೇಕ್ಷಿತಮಾನ - ಬೇಕಾಗಿರುವ, ತತ್ತ್ವೋಪದೇಶಮಾಮ್ - ಪ್ರಪತ್ತಿರೂಪ ಸಾಧ್ಯೋಪಾಯ ವಿಧಿಯನ್ನು ಬೋಧಿಸುವದಕ್ಕೆ ಬದಲಾಗಿ ಸುಮ್ಮನೆ ತತ್ತ್ವೋಪದೇಶವನ್ನು ಮಾತ್ರ ಮಾಡಿದಹಾಗಾಗುತ್ತದೆ. ಶ್ರೀ ಭಾಷ್ಯಕಾರರು ಇದನ್ನು ಮೋಕ್ಷೋಪಾಯ ವಿಧಿಯೆಂಬದಾಗಿ ವ್ಯಾಖ್ಯಾನ ಮಾಡಿರುತ್ತಾರೆ. ಅದಕ್ಕೆ ವಿರೋಧಿಸುತ್ತದೆ ಎಂಬ ಭಾವವು.

---

(೧) ಲಕ್ಷ್ಮೀ ತಂತ್ರ ೨೮. ೧೧. ೭

ಸ್ವಯತ್ನ ನಿವೃತ್ತಿರೇವ ಪ್ರಪತ್ತಿರಿತಿ ಪಕ್ಷಸ್ಯ ಪ್ರತಿಕ್ಷೇಪಃ.

ಇಜ್ಞ ತತ್ವಜ್ಞಾನ ಮುಡೈಯವನುಕ್ಕು ಸ್ವರಕ್ಷಣಾರ್ಥ ಸ್ವವ್ಯಾಪಾರ ನಿವೃತ್ತಿಯೇ ಪ್ರಪತ್ತಿಯಾಯ್, ಸರ್ವಧರ್ಮ ಸ್ವರೂಪತ್ಯಾಗ ಮಾತ್ರಮ್ ಸಾಧ್ಯಮಾಗ ವಿಧಿಕ್ಕ ಪಡುಗಿರದೆನ್ಬಾರುಕ್ಕು, ನಿವೃತ್ತಿರೂಪ ಮೇಯಾಗಿಲುಮ್, ಸಾಧ್ಯಮಾಗ ವಿಧಿಕ್ಕಪ್ಪಟ್ಟ ಸರ್ವಧರ್ಮತ್ಯಾಗಮ್ ತಾನ್, ಸ್ವರಕ್ಷಣಾರ್ಥ ಸ್ವವ್ಯಾಪಾರ ಮಾಗೈಯಾಲೇ, ಸ್ವವಚನ ವಿರೋಧ ಮುಮ್, ಸಾಙ್ಗಪ್ರಪತ್ತಿ ವಿಧಾಯಕಮಾನ ವಾಕ್ಯ ವಿರೋಧಮುಮ್, ವರುಮ್.

ಸ್ವಯತ್ನ ನಿವೃತ್ತಿಯೇ ಪ್ರಪತ್ತಿಯು ಎಂಬ ಅಭಿಪ್ರಾಯದ ಖಂಡನವು

ಇಜ್ಞ - ಈ ಸಂದರ್ಭದಲ್ಲಿ, ತತ್ವಜ್ಞಾನವಿರುವ ಮೋಕ್ಷಾರ್ಥಿಗೆ, **ಸ್ವರಕ್ಷಣಾರ್ಥ**-ಸ್ವರಕ್ಷಣವೇ ಪ್ರಯೋಜನವಾಗಿ ವುಳ್ಳ, **ಸ್ವವ್ಯಾಪಾರ ನಿವೃತ್ತಿಯೇ**-ತನ್ನ ವ್ಯಾಪಾರಗಳನ್ನು ತ್ಯಜಿಸುವದೇ, **ಪ್ರಪತ್ತಿಯಾಯ್** - ಪ್ರಪತ್ತಿ ಎಂದು ಹೇಳಿಸಿಕೊಂಡು, **ಸರ್ವಧರ್ಮ ಸ್ವರೂಪತ್ಯಾಗ ಮಾತ್ರಮ್** - ಸರ್ವಧರ್ಮಾನ್ ಪರಿತ್ಯಜ್ಯ ಎಂಬ ವಿಧಿಯ ಮೂಲಕ ಸಮಸ್ತ ಧರ್ಮಗಳ ಸ್ವರೂಪತ್ಯಾಗ ಮಾತ್ರವೇ, **ಸಾಧ್ಯಮಾಗ** - ಸಾಧ್ಯವಾದುದಾಗಿ, **ವಿಧಿಕ್ಕಪಡುಗಿರದು** - ವಿಧಿಸಲ್ಪಡುವದು, **ಎನ್ಬಾರ್ಕ್ಕು** - ಎಂದು ಹೇಳುವವರಿಗೆ, **ನಿವೃತ್ತಿ ರೂಪಮೇಯಾಗಿಲುಮ್** - ಪ್ರವೃತ್ತಿ ರೂಪವಿಲ್ಲದೆ ಬರೀ ತ್ಯಾಗರೂಪವಾದುದಾದರೂ, **ಸಾಧ್ಯಮಾಗ ವಿಧಿಕ್ಕಪ್ಪಟ್ಟ**-ಸಾಧ್ಯವಾದುದೆಂದು ವಿಧಿಸಿರುವ, ಸರ್ವಧರ್ಮಗಳ ತ್ಯಾಗವೂ ಕೂಡ, **ಸ್ವರಕ್ಷಣಾರ್ಥ ಸ್ವವ್ಯಾಪಾರ ಮಾಗೈಯಾಲೇ** - ಸ್ವರಕ್ಷಣಕ್ಕಾಗಿ ಮಾಡಿದ ನಿವೃತ್ತಿರೂಪ ವ್ಯಾಪಾರವಾದುದರಿಂದ, **ಸ್ವವಚನ ವಿರೋಧಮುಮ್** - ತ್ಯಾಗ ಮಾಡಿದೆ ಎಂಬ ವಚನಕ್ಕೆ ವಿರೋಧವೂ, **ಸಾಙ್ಗಪ್ರಪತ್ತಿ ವಿಧಾಯಕಮಾನ ವಾಕ್ಯ ವಿರೋಧಮುಮ್ ವರುಮ್** - ಐದು ಅಙ್ಗಗಳಿಂದ ಕೂಡಿದ ಅಙ್ಗಿಯಾದ ಆತ್ಮನಿಕ್ಷೇಪವನ್ನು ವಿಧಿಸುವ ಪ್ರಮಾಣ ವಾಕ್ಯಗಳಿಗೂ ವಿರೋಧ ಉಂಟಾಗುತ್ತದೆ. **ಸರ್ವಧರ್ಮಾನ್ ಪರಿತ್ಯಜ್ಯ** ಎಂದು ವಿಧಿಸುವದರಿಂದ, ಸ್ವರಕ್ಷಣಕ್ಕಾಗಿ ಎಲ್ಲಾ ಪ್ರವೃತ್ತಿಗಳನ್ನೂ ಬಿಡತಕ್ಕದ್ದು ಎಂದ ನಿರ್ಣಯಿತು : ಇದೇ ಪ್ರಪತ್ತಿಯೆಂದೇ ಭಾವಿಸತಕ್ಕದ್ದೇ ವಿನಾ, ಬೇರೆ ಇನ್ನು

ಪ್ರಪತ್ತಿಕ್ಕು ಸಾಧನತ್ವಮಾದಲ್ ಸಿದ್ಧಸಾಧನ ಸಹಕಾರಿತ್ವಮಾದಲ್ ಕೊಳ್ಳಿಲ್, ಸಿದ್ಧೋಪಾಯಮಾನ ಈಶ್ವರನುಡೈಯ ಏಕತ್ವಂ, ಸಿದ್ಧತ್ವಂ, ಪರಮಚೇತನತ್ವಂ, ಪರಮ ಕಾರುಣಿಕತ್ವಂ, ಸರ್ವಶಕ್ತಿತ್ವಂ, ನಿರಪೇಕ್ಷತ್ವಂ, ಮುದಲಾನ ಸ್ವಭಾವ ವಿಶೇಷಙ್ಗಳುಕ್ಕು ವಿರುದ್ಧಮಾಮೆನ್ನುಮ್ ಪ್ರಸಙ್ಗಗಳ್, ಶ್ರುತಿ ಸ್ಮೃತಿ ವಿರೋಧ, ವ್ಯಾಪ್ತಿಶೂನ್ಯತ್ವಾದಿ ದೋಷಙ್ಗಳಾಲೇ ತರ್ಕಾಭಾಸಙ್ಗಳ್.

ಯಾವ ಪ್ರವೃತ್ತಿರೂಪವಾದ ಪ್ರಪತ್ತ್ಯನುಷ್ಠಾನವೂ ಸರಿಯಲ್ಲವೆಂದು ಕೆಲವರ ಮತವು. ಈ ಅಭಿಪ್ರಾಯ ಸರಿಯಲ್ಲವೆಂದು ಎರಡು ಕಾರಣಗಳಿಂದ ತಿಳಿಸುತ್ತಾರೆ. (೧) ಸ್ವರಕ್ಷಣಪರವಾಗಿ ಸ್ವಧರ್ಮಸ್ವರೂಪ ತ್ಯಾಗವೂ ಕೂಡ ಸ್ವರಕ್ಷಣಾರ್ಥವಾಗಿ ಮಾಡಿದ ಒಂದು ಉಪಾಯವಾಗಲಿಲ್ಲವೋ? ಆಗ ಸ್ವರಕ್ಷಣಾರ್ಥ ಸ್ವವ್ಯಾಪಾರ ನಿವೃತ್ತಿಯಾಗಲಿಲ್ಲವೇ? ಸ್ವವಚನ ವಿರೋಧ ಉಂಟಾಯಿತಲ್ಲವೇ ಎಂಬ ಭಾವವು. (೨) ಸಾಙ್ಗಪ್ರಪದನವನ್ನು ವಿಧಿಸುವ ಅನೇಕ ಪ್ರಮಾಣಗಳಿವೆ, ಅವುಗಳಿಗೆಲ್ಲಾ ವಿರೋಧವಾಗುವುದೂ ಆಗುತ್ತದೆ

ಹೀಗೆ ಎರಡು ಕಾರಣಗಳಿಂದ ಸ್ವರಕ್ಷಣಾರ್ಥ ಸ್ವವ್ಯಾಪಾರ ನಿವೃತ್ತಿಯೇ ಪ್ರಪತ್ತಿಯೆಂಬ ಅಭಿಪ್ರಾಯವು ಸರಿಯಲ್ಲವೆಂದು ತೋರಿಸಿ, ಈ ಪಕ್ಷದವರು ತಮ್ಮ ಅಭಿಪ್ರಾಯದ ಮೇಲೆ ಆಪಾದಿಸುವ ದೋಷಗಳಿಗೆ ಸಮಾಧಾನಗಳನ್ನು "ಪ್ರಪತ್ತಿಕ್ಕು" ಎಂಬ ಮುಂದಿನ ವಾಕ್ಯದಿಂದ ಹೇಳುತ್ತಾರೆ.

ಪ್ರಪತ್ತಿಕ್ಕು - ಪ್ರಪದನಕ್ಕೆ, **ಸಾಧನತ್ವ ಮಾದಲ್** - ಸಾಧ್ಯೋಪಾಯರೂಪದಲ್ಲಿ ಸಾಧನತ್ವವನ್ನಾಗಲಿ, ಅಥವಾ, **ಸಿದ್ಧಸಾಧನ ಸಹಕಾರಿತ್ವ ಮಾದಲ್** - ಸಿದ್ಧೋಪಾಯಕ್ಕೆ ಸಹಕಾರಿಯಾಗಿರುವದನ್ನಾಗಲಿ **ಕೊಳ್ಳಿಲ್** - ಅಙ್ಗೀಕರಿಸಿದರೆ, ಸಿದ್ಧೋಪಾಯವಾದ ಸರ್ವೇಶ್ವರನ, **ಏಕತ್ವ** - ಒಬ್ಬನೇ ಎನ್ನುವದಕ್ಕೂ, **ಸಿದ್ಧತ್ವಂ** - ಸಿದ್ಧೋಪಾಯನೆಂಬ ಭಾವಕ್ಕೂ, **ಪರಮಚೇತನತ್ವಂ**- ಆತನ ಸರ್ವೋತ್ಕೃಷ್ಟ ಚೇತನ ಭಾವಕ್ಕೂ, **ಪರಮ ಕಾರುಣಿಕತ್ವಂ** - ಪರಮ ಕಾರುಣಿಕನೆಂಬ ಭಾವಕ್ಕೂ, **ಸರ್ವಶಕ್ತಿತ್ವಂ** - ಸರ್ವಶಕ್ತಿಯುಳ್ಳ ಭಾವಕ್ಕೂ, **ನಿರಪೇಕ್ಷತ್ವಂ** - ಆತನು ಯಾವುದನ್ನೂ ಅಪೇಕ್ಷಿಸದೇ ಇರುವ ಭಾವಕ್ಕೂ, **ಮುದಲಾನ ಸ್ವಭಾವ ವಿಶೇಷಙ್ಗಳುಕ್ಕು** - ಇವೇ ಮೊದಲಾದ ಗುಣವಿಶೇಷಗಳಿಗೆ ಇವೇ ಮೊದಲಾದ ಎಂಬುದರಿಂದ ಪೂರ್ಣತ್ವಕ್ಕೂ ವಿರೋಧವು, ಸಾಧ್ಯೋಪಾಯ ಸಾಪೇಕ್ಷತ್ವವಿರುವದರಿಂದ ಈಶ್ವರನ ಪರಿಪೂರ್ಣತ್ವಕ್ಕೆ ವಿರೋಧವೆಂಬ ಭಾವವೂ,

ವಿರುದ್ಧವಮಾನ್ - ವಿರುದ್ಧವಾಗುತ್ತದೆ, ಎನ್ನುವನ್ ಪ್ರಸಜ್ಞಗಳ್ - ಎನ್ನುವ ಆಕ್ಷೇಪಗಳು, ಶ್ರುತಿ ಸ್ಮೃತಿಗಳಿಗೆ ವಿರೋಧವೇನು, ವ್ಯಾಪ್ತಿ ಶೂನ್ಯತ್ವ- ಪಕ್ಷದಲ್ಲಿ ಹೇತುವಿಲ್ಲದಿರುವ ವ್ಯಾಪ್ತಿಯಿಲ್ಲದಿರೋಣವೇನು, ಆದಿ - ಇವೇ ಮೊದಲಾದ, ದೋಷಜ್ಞಳಾಲೇ-ದೋಷಗಳ ಮೂಲಕವಾಗಿ, ತರ್ಕಾಭಾಸಜ್ಞಳ್ - ಕುತರ್ಕಗಳು, ಪ್ರಪತ್ತಿ ಬೇರೆ ಬೇಕಾದುದಿಲ್ಲವು, ಸ್ವರಕ್ಷಣ ಪ್ರವೃತ್ತಿ ನಿವೃತ್ತಿಯೇ ಪ್ರಪತ್ತಿ ಎಂದು ಕೆಲವರು ಅಭಿಪ್ರಾಯಪಡುವರು, ಇದು ಸ್ವವಚನ ವಿರೋಧವಾದುದೆಂದೂ ಅನೇಕ ವಿಧಿಪ್ರಮಾಣಗಳಿಗೂ ವಿರೋಧವಾದುದೆಂದೂ ಹೇಳಿದರು. ಅವರುಗಳು ಪ್ರಪತ್ತಿಯನ್ನು ನಿರಾಕರಿಸಲು ಕಾರಣವನ್ನು ಹೇಳುತ್ತಾರೇನೆಂದರೆ— ಪ್ರಪತ್ತಿಯನ್ನು ಅಂಗೀಕರಿಸುವದರಿಂದ ಆತನ ಅನೇಕ ಮಹತ್ವಗಳಿಗೆ ಕುಂದಕವಾಗುತ್ತದೆ ಹೇಗೆಂದರೆ :—

(೧) ಸಾಧ್ಯೋಪಾಯವೂ ಒಂದು ಬೇಕು ಎಂಬುದರಿಂದ ಸಿದ್ಧೋಪಾಯನಾಗಿ ಒಬ್ಬನೇ ಎಂಬುದಕ್ಕೆ ಕುಂದಕವು. (೨) ಸಾಧ್ಯೋಪಾಯವೂ ಒಂದು ಬೇಕು ಎಂದರೆ, ಸಿದ್ಧತ್ವಕ್ಕೆ ಹಾನಿಯು. (೩) ಗೋಪ್ತೃತ್ವವರಣದ ಮೂಲಕ ಸ್ವಾಭಿಪ್ರಾಯವನ್ನು ತಿಳಿಸಬೇಕು ಎಂದರೆ ಸರ್ವೋತ್ಕೃಷ್ಟ ಚೇತನತ್ವಕ್ಕೆ ಕುಂದಕವು, ಸರ್ವಜ್ಞನಾದುದರಿಂದ ತಾನೇ ತಿಳಿಯತಕ್ಕದ್ದು. (೪) ಸಾಧ್ಯೋಪಾಯದಿಂದ ಆತನನ್ನು ವಶಮಾಡಿಕೊಳ್ಳಬೇಕು ಎಂದರೆ, ಆತನ ಪರಮಕಾರುಣಿಕತ್ವಕ್ಕೆ ಭಂಗವು. (೫) ಪ್ರಪತ್ತಿಯ ಸಹಕಾರಿತ್ವವಿಲ್ಲದೆ ರಕ್ಷಿಸುವನಲ್ಲವು ಎಂದರೆ ಪ್ರಪತ್ತಿಯಿಲ್ಲದೆ ಆತನಿಗೆ ರಕ್ಷಿಸಲು ಶಕ್ತಿಯಿಲ್ಲವೆಂದಾಗಿ ಸರ್ವಶಕ್ತಿತ್ವಕ್ಕೆ ವಿರೋಧವು. (೬) ಶಕ್ತನಾಗಿದ್ದರೂ ಪ್ರಪತ್ತಿಯ ಸಹಕಾರಿತ್ವವನ್ನು ಅಪೇಕ್ಷಿಸುವನೆಂದರೆ ಆತನ ನಿರಪೇಕ್ಷತ್ವಕ್ಕೆ ಕುಂದಕವು, ಹೀಗೆ ಅವರ ಆಕ್ಷೇಪಗಳು. ಇವುಗಳೆಲ್ಲಾ ಶ್ರುತಿ ಸ್ಮೃತಿ ವಿರೋಧವೇನು, ವ್ಯಾಪ್ತಿಶೂನ್ಯತೆ ಏನು, ಇಂತಹ ದೋಷಯುಕ್ತಗಳಾದುದರಿಂದ ಸತ್ತರ್ಕಗಳಲ್ಲವೆಂದು ಹೇಳುತ್ತಾರೆ. ಹೇಗೆಂದರೆ—

(೧) "ಬ್ರಹ್ಮಣೇತ್ವಾಮಹಸ ಓಮಿತ್ಯಾತ್ಮಾನಂ ಯುಂಜೀತ" ತೈ. ನಾರಾ
(ಹಿಂದೆ ನೆಯ ಪುಟ ನೋಡಿ) ಎಂಬ ಶ್ರುತಿಗೆ ವಿರೋಧವು.

(೨) "ಹನಿರ್ಗೃಹಿತ್ವಾತ್ಮರೂಪಂ ನಸುರಣ್ಯೇತಿ ಮಂತ್ರತಃ ।
ಜುಹುಯಾತ್ಪ್ರಣವೇನಾಗ್ನಾವಚ್ಯುತಾಖ್ಯೇ ಸನಾತನೇ ॥

(೩) ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ" ಇದಕ್ಕೂ ವಿರೋಧವು

(೪) "ಭಕ್ತ್ಯಾ ಪರಮಯಾವಾಪಿ ಪ್ರಪತ್ತ್ಯಾ ವಾ ಮಹಾಮತೇ"
ಪ್ರಾಪ್ಯೋಹಂ ನಾನ್ಯಥಾ ಪ್ರಾಪ್ಯೋ ಮಮ ಕೈಂಕರ್ಯಲಿಪ್ಸುಭಿಃ

ಎಂಬ ಸ್ಮೃತಿಗೆ ವಿರೋಧವು.

ವಿಭೀಷಣ, ಗಜೇಂದ್ರ, ಕಾಕ, ಕಾಳೀಯನು ಪ್ರಪದನವನ್ನು ಅನುಷ್ಠಿಸಿದರೆಂದು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ. ಭಗವಂತನ ಏಕತ್ವ, ಸಿದ್ಧತ್ವ, ಪರಮ ಚೇತನತ್ವ, ಪರಮ ಕಾರುಣಿಕತ್ವ, ಸರ್ವ ಶಕ್ತಿತ್ವ, ನಿರಪೇಕ್ಷತ್ವಗಳಿಗೆ ಏನೊಂದೂ ವಿರೋಧವಿಲ್ಲವು. ಹಾಗೆ ವಿರುದ್ಧವಾಗಿದ್ದರೆ ಮಹರ್ಷಿಗಳು ಉಪಪಾದಿಸುವರೇ? ಹಾಗೆಯೇ ಸರ್ವೇಶ್ವರನು ಸರ್ವಜ್ಞನಾಗಿ, ಪರಮಕಾರುಣಿಕನಾಗಿ ಯಿದ್ದರೂ ಧ್ರುವನು ತಪಸ್ಸನ್ನು ಮಾಡಿದನಂತರವೇ, ಅದನ್ನು ಸಾಧನವೆಂದು ಭಾವಿಸಿ ಆತನ ಅಭೀಷ್ಟವನ್ನು ನಡೆಸಿಕೊಟ್ಟನು.

೧. ಎಲ್ಲಿ ಸಹಕಾರಿ ಸಾಪೇಕ್ಷತ್ವವಿದೆಯೋ ಅಲ್ಲಿ ಏಕತ್ವವಿರುವದಿಲ್ಲವೆಂದು ಹೇಳಬೇಕಾಗುತ್ತದೆ. ಸಹಕಾರಿಸಾಪೇಕ್ಷತ್ವವಿದ್ದರೂ ಏಕತ್ವವಿರುವದುಂಟು. ಭಗವಂತನು ಒಬ್ಬನಾಗಿಯೇ ಅನೇಕ ನಿತ್ಯಸೂರಿಗಳ ಸಹಕಾರಿತ್ವವನ್ನು ಹೊಂದಿರುವನು.

೨. ಎಲ್ಲಿ ಸಹಕಾರಿ ಸಾಪೇಕ್ಷತ್ವವಿದೆಯೋ ಅಲ್ಲಿ ಸಿದ್ಧತ್ವವಿಲ್ಲವೆಂದು ಹೇಳಬೇಕಾಗುತ್ತದೆ. ಆದರೆ ಸಿದ್ಧತ್ವವಿದ್ದೂ ಸಹಕಾರಿ ಸಾಪೇಕ್ಷತ್ವವುಂಟು. ರಾಜರುಗಳು ಸಿದ್ಧರಾಗಿದ್ದರೂ ವಿಶೇಷಸಹಕಾರಿ ಸಾಪೇಕ್ಷತ್ವವುಳ್ಳವರಾಗಿರುತ್ತಾರೆ.

೩. ಹಾಗೆಯೇ ಎಲ್ಲಿ ಸಹಕಾರಿ ಸಾಪೇಕ್ಷತ್ವವಿದೆಯೋ, ಅಲ್ಲಿ ಪರಮ ಚೇತನತ್ವವಿಲ್ಲವು, ಅಲ್ಲಿ ಪರಮ ಕಾರುಣಿಕತ್ವವಿಲ್ಲವು, ಅಲ್ಲಿ ಸರ್ವಶಕ್ತಿತ್ವವಿಲ್ಲವು, ಹೀಗೆಲ್ಲಾ ಹೇಳಬೇಕಾಗುತ್ತದೆ. ಪರಮ ಚೇತನನಾದ, ಪರಮ ಕಾರುಣಿಕನಾದ, ಸರ್ವಶಕ್ತನಾದ ಶ್ರೀರಾಮನು, ಸುಗ್ರೀವಾದಿಗಳ ಸಹಕಾರಿತ್ವವನ್ನು ಬಯಸಿದನು. **ಪಿಶಾಚಾನ್ ದಾನವಾನ್ ಯಕ್ಷಾನ್ ಅಂಗುಳ್ಯಗ್ರೇಣತಾನ್ ಹನ್ಯಾಮಿಚ್ಛನ್ ಹರಿಗಣೇಶ್ವರ** । ಎಂದು ಶ್ರೀರಾಮನು ಹೇಳಿಯೂ ಕೂಡ, **ಲೋಕನಾಥಃ ಪುರಾಭೂತ್ವಾ ಸುಗ್ರೀವಂ ನಾಥಮಿಚ್ಛತಿ** । ಎಂದು ಹೇಳಿರುವಹಾಗೆ ಸುಗ್ರೀವಾದಿಗಳ ಸಹಾಯವನ್ನು ಬಯಸಿದನು. ಹೀಗೆ ವ್ಯಾಪ್ತಿ ಶೂನ್ಯತೆ ಎಂಬ ದೋಷವೂ ಉಂಟಾಗುವದರಿಂದ ತರ್ಕಾಭಾಸವೆಂಬ ಭಾವವು.

ಇದೂ ಅಲ್ಲದೆ, ಸಹಕಾರಿ ಸಾಪೇಕ್ಷತ್ವವೂ ಏಕತ್ವಾದಿ ಅಗು ಧರ್ಮಗಳೂ ಪರಸ್ಪರ ವಿರೋಧವಾದುವು ಎಂದು ಹೇಳಿದರೆ, ಶಾಸ್ತ್ರಗಳಲ್ಲೂ ಸರ್ವೇಶ್ವರನಿಗೆ ಪರಸ್ಪರ ವಿರುದ್ಧಭಾವಗಳು ಹೇಳಲ್ಪಟ್ಟಿವೆ. ಹೇಗೆಂದರೆ:—ಒಂದು ಕಡೆಯಲ್ಲಿ **ಅರಸಂ ಅರೂಪಂ ಗಂಧವರ್ಜಿತಂ** ಎಂದೂ, ಇನ್ನೊಂದು ಕಡೆಯಲ್ಲಿ **ಸ್ವರ ಗಂಧಸ್ಸರ್ವರಸಃ** ಎಂದೂ, ಹೇಳಲ್ಪಟ್ಟಿದೆ; ಹಾಗೆಯೇ ಒಂದು ಕಡೆಯಲ್ಲಿ ಸಗುಣನೆಂದೂ ಇನ್ನೊಂದು ಕಡೆಯಲ್ಲಿ ನಿರ್ಗುಣನೆಂದೂ ಹೇಳಲ್ಪಟ್ಟಿದೆ. ಇವುಗಳಿಗೆ ಸಾಮಂಜಸ್ಯ ಉಂಟಾಗುವಹಾಗೆ, ಹೇಗೆ ಅರ್ಥಗಳನ್ನು ಹೇಳುತ್ತೇವೋ, ಹಾಗೆಯೇ

ಇಲ್ಲಿಯೂ ಭಾವಿಸತಕ್ಕದ್ದು. ಕಲ್ಯಾಣಗುಣಾಕರನಾಗಿ ಸಗುಣನು, ಪ್ರಾಕೃತ ಹೇಯಗುಣ ರಹಿತನಾಗಿ ನಿರ್ಗುಣನು ಎಂದು ಹೇಗೆ ಹೇಳುತ್ತೇವೋ, ಹಾಗೆಯೇ ಇಲ್ಲಿಯೂ ತನಗೆ ಸ್ವಾಧೀನವಾದ ಸಹಕಾರಿಯನ್ನು ಅಪೇಕ್ಷಿಸಿದರೂ, ಅಂತಾದ್ದನ್ನು ಅಪೇಕ್ಷಿಸದೆಯೂ ಇರಬಹುದಾದುದರಿಂದ ನಿರಪೇಕ್ಷತ್ವ, ಏಕತ್ವ, ಸಿದ್ಧತ್ವ ಯಾವುದಕ್ಕೂ ಕುಂದಕವಿಲ್ಲವು. ತನಗೆ ಸ್ವಾಧೀನವಾದ ವಿಶೇಷ ಸಹಕಾರಿಯನ್ನು ಹೊಂದಿದ್ದರೂ ಸರ್ವಶಕ್ತತೆಗೆ ಕುಂದಕವಿಲ್ಲವು, ಹಾಗೆ ನೋಡಿದರೆ ಸರ್ವಶಕ್ತತೆಯಿಲ್ಲದಿದ್ದರೇನೇ ಸ್ವಾಧೀನವಾದ ಸಹಕಾರಿತ್ವವನ್ನು ಹೊಂದಲು ಸಾಧ್ಯವಿಲ್ಲವು ತನ್ನ ಕರುಣೆಯು ಅನೇಕರಿಗೆ ಉಪಯೋಗವಾಗಲೆಂದು ಅನೇಕ ಸಾಧನಗಳನ್ನು ಏರ್ಪಡಿಸಿಕೊಂಡಿರೋಣವೇ ಪರಮ ಕಾರುಣಿಕ ಲಕ್ಷಣವು, ಹಾಗೆಯೇ ಈ ಪ್ರಪತ್ತಿ ಎಂಬ ಸುಲಭೋಪಾಯವನ್ನವಲಂಬಿಸಿದವರನ್ನೆಲ್ಲಾ ರಕ್ಷಿಸಿ ಬಿಡುವೆನೆಂದು ಏರ್ಪಡಿಸಿರುವದೇ ಪರಮಕಾರುಣಿಕತ್ವದ ಮಾಹಾತ್ಮ್ಯೆಯು, ಸರ್ವಜ್ಞನಾಗಿ ಶರಣಾಗತನ ಅಭಿಲಾಷೆ ಏನಿರಬಹುದು ಎಂದು ತಿಳಿದಿದ್ದರೂ, ಫಲವು ಪುರುಷಾರ್ಥವೆಂದು ತಿಳಿಯುವದಕ್ಕಾಗಿಯೂ, ಲೋಕದಲ್ಲಿ ಭಕ್ತಾಭೀಷ್ಟವನ್ನು ಭಗವಂತನು ಸಲ್ಲಿಸಿದನೆಂಬ ಪ್ರತೀತಿಯುಂಟಾಗುವದಕ್ಕಾಗಿಯೂ, ಗೋಪ್ತೃತ್ವವರಣವು ; ಇದರಿಂದ ಸರ್ವಜ್ಞತ್ವವುಳ್ಳ ಪರಮಚೇತನತ್ವಕ್ಕೇನೂ ಕುಂದಕವಿಲ್ಲವು. ವ್ಯಾಪ್ತಿ ಶೂನ್ಯತ್ವಾದಿ ದೋಷಙ್ಗಳ್ ಎಂಬಲ್ಲಿ ಆದಿಪದದಿಂದ ವೈಷಮ್ಯ ನೈರ್ಘೃಣ್ಯದೋಷವೂ ಕೂಡ ಸರ್ವೇಶ್ವರನಿಗೆ ಆರೋಪಿಸದಂತಾಗುತ್ತದೆ. ಉಪಾಯಾನುಷ್ಠಾನಮಾಡಿದ ಪರಮಭಕ್ತನನ್ನೂ, ಮಹಾ ಪಾಪಿಯಾದವನನ್ನೂ, ಉಪಾಯದ ಅವಶ್ಯಕತೆಯಿಲ್ಲದೆ ರಕ್ಷಿಸಿಬಿಟ್ಟರೆ, ಸರ್ವೇಶ್ವರನು ಪಕ್ಷಪಾತಿಯೆಂದೆನಿಸಲ್ಪಡುವನು. ಇಂತಹ ದೋಷಗಳೆಲ್ಲಾ ಪ್ರಾಪ್ತವಾಗುವದರಿಂದ ತರ್ಕಾಭಾಸಗಳು.

ಹೀಗೆ ಮೇಲೆ ಹೇಳಿದ ಪೂರ್ವಪಕ್ಷಗಳೆಲ್ಲಾ ದೋಷಯುಕ್ತಗಳೆಂದು ತೋರಿಸಿದರು ಶ್ರುತಿ ಸ್ಮೃತಿಗಳಿಗೆ ವಿರೋಧವೂ, ತರ್ಕಗಳಲ್ಲಿ ಆಭಾಸವೂ, ಸರ್ವೇಶ್ವರನು ಪಕ್ಷಪಾತಿಯೂ, ಇತ್ಯಾದಿ ದೋಷಗಳು ಪ್ರಾಪ್ತವಾಗುತ್ತವೆ ಎಂದು ಹೇಳಿದರು. ಅವರುಗಳು ಹೇಳಿರುವ ತರ್ಕಗಳಲ್ಲಿ ಏನೊಂದೂ ದೋಷವಿಲ್ಲವೆಂದೂ ಅವುಗಳು ಆ ಕಾರಣದಿಂದ ಸತ್ತರ್ಕಗಳೆಂದೂ ಒಪ್ಪಿಕೊಂಡರೂ ಆಗಲೂ ಉಂಟಾಗುವ ಬಾಧಕಗಳನ್ನು ತಿಳಿಸುತ್ತಾರೆ.

ಇವತ್ತೈ - ಮೇಲೆ ಹೇಳಿದ ಆಕ್ಷೇಪಣೆಗಳನ್ನು, ಸತ್ತರ್ಕಙ್ಗಳಾಗ - ನ್ಯಾಯವಾದವುಗಳೆಂದು, ನಿನ್ರೈಕ್ಕಿಲ್ - ಒಪ್ಪಿಕೊಂಡರೂ, ಎಂದರೆ ಉಪಾಯದ ಅವಶ್ಯಕತೆಯನ್ನು ಒಪ್ಪಿಕೊಂಡರೆ, ಸರ್ವೇಶ್ವರನ ಏಕತ್ವ, ಸಿದ್ಧತ್ವ, ಪರ

ಇವತ್ತೈ ಸತ್ತರ್ಕಙ್ಗಳಾಗ ನಿನೈಕ್ಕಿಲ್ ಉಪಾಸನತ್ತುಕ್ಕೈನ್ನ ಸಾಧನಭಾವಾದಿಗಳಿಲುಮ್ ಇಪ್ಪ್ರಸಙ್ಗಙ್ಗಳ್ ವರುಮ್.

ಉಪಾಸನಂ ತಾನುಮ್ ಸಾಧನ ಮನ್ರೆನ್ನಿಲ್, "ಸರ್ವಧರ್ಮಾನ್ ಪರಿತ್ಯಜ್ಯ" ಎನ್ಗಿರ ವಿಡತ್ತಿಲ್ ಉಪಾಸನತ್ತೈಯುಮ್ ಧರ್ಮಶಬ್ದಾರ್ಥಮಾಗ ವ್ಯಾಖ್ಯಾನಮ್ ಪಣ್ಣುಗೈಯಾಲೇ ಸ್ವವಚನ ವಿರೋಧ ಮುಣ್ಡಾಮ್.

ಮಹಾಕಾರುಣಿಕತ್ವಾದಿಗಳಿಗೆ ವಿರೋಧವಾಗುತ್ತದೆ ಎಂಬ ವಾದವು ಸಮಂಜಸವಾದುದೆಂದು ಒಪ್ಪಿದರೂ, ಉಪಾಸನತ್ತುಕ್ಕು - ಉಪಾಸನಕ್ಕೆ, ಇತ್ಯೈನ್ನ - ಪ್ರತಿ ಶಕ್ತಿಗಳಪೇಕ್ಷಿಸುವ, ಸಾಧನ ಭಾವಾದಿಗಳಿಲುಮ್ - ಸಾಧನ ಭಾವವೇ ಮೊದಲಾದುವುಗಳಲ್ಲೂ, ಇಪ್ಪ್ರಸಙ್ಗಙ್ಗಳ್ - ಈ ಆಕ್ಷೇಪಗಳು, ವರುಮ್ - ಪ್ರಾಪ್ತವಾಗುತ್ತವೆ ಪ್ರಪತ್ತಿಗೆ ಸಾಧನತ್ವವನ್ನು ಅಙ್ಗೀಕರಿಸದವರು ಉಪಾಸನಕ್ಕೆ ಮಾತ್ರ ಸಾಧನತ್ವವನ್ನು ಅಙ್ಗೀಕರಿಸುತ್ತೀರಲ್ಲಾ, ಆಗಲೂ ಏಕತ್ವ, ಸಿದ್ಧತ್ವ, ಪರಮಚೇತನತ್ವ, ಪರಮ ಕಾರುಣಿಕತ್ವ, ಸರ್ವಶಕ್ತಿತ್ವ, ನಿರಪೇಕ್ಷತ್ವ ಮೊದಲಾದ ಸ್ವಭಾವ ವಿಶೇಷಗಳಿಗೆ ವಿರುದ್ಧವಾಗುವದಿಲ್ಲವೇ? ಇಲ್ಲಿ ವಿರುದ್ಧವಲ್ಲವಾದರೆ, ಪ್ರಪತ್ತಿ ವಿಷಯದಲ್ಲೂ ವಿರುದ್ಧವಲ್ಲವೆಂದು ಹೇಳಲು ಅಭ್ಯಂತರವೇನೆಂಬ ಭಾವವು. ಈ ಆಕ್ಷೇಪಣೆಯಿಂದ ತಪ್ಪಿಸಿಕೊಳ್ಳುವದಕ್ಕಾಗಿ, ಉಪಾಸನವೂ ಸಾಧನವಲ್ಲವೆಂದೇ ಹೇಳುತ್ತೇವೆ ಎಂದರೆ ಆಗಲೂ ದೋಷ ತಪ್ಪಿದ್ದಲ್ಲವೆಂದು ತೋರಿಸುತ್ತಾರೆ.

ಉಪಾಸನಮ್ ತಾನುಮ್ - ಉಪಾಸನವೂ ಕೂಡ ಪ್ರಪತ್ತಿಯ ಹಾಗೆ ಸಾಧನ ಮನ್ರೆನ್ನಿಲ್ - ಸಾಧನವಲ್ಲವೆಂದು ನೀವು ಒಂದು ವೇಳೆ ಹೇಳಿದರೆ, ಸರ್ವಧರ್ಮಾನ್ ಪರಿತ್ಯಜ್ಯ ಎನ್ಗಿರ ವಿಡತ್ತಿಲ್ - ಎಂದು ಹೇಳುವ ಸ್ಥಳದಲ್ಲಿ ಉಪಾಸನತ್ತೈಯುಮ್ - ಉಪಾಸನವನ್ನೂ ಕೂಡ, ಧರ್ಮಶಬ್ದಾರ್ಥಮಾಗ- ಧರ್ಮಶಬ್ದಕ್ಕೆ ಅರ್ಥವಾಗಿ, ಎಂದರೆ ಅಲೌಕಿಕ ಶ್ರೇಯಸ್ಸಾದ ಮೋಕ್ಷವನ್ನು ಸಾಧಿಸುವದು ಎಂಬ ಅರ್ಥವಾಗಿ, ವ್ಯಾಖ್ಯಾನಮ್ ಪಣ್ಣುಗೈಯಾಲೇ - ನೀವೇ ವ್ಯಾಖ್ಯಾನ ಮಾಡಿರುವದರಿಂದ, ಸ್ವವಚನ ವಿರೋಧಮುಣ್ಡಾಮ್ - ನಿಮ್ಮ ಅಭಿಪ್ರಾಯವೇ ನಿಮಗೆ ವಿರುದ್ಧವಾದುದು ಆಗುತ್ತದೆ ಹೇಗೆಂದರೆ, ಉಪಾಸನವು ಸಾಧ್ಯೋಪಾಯವೆಂದು ಒಪ್ಪಿಕೊಂಡಿರುತ್ತೀರಿ, ಯಾವ ಸಂದರ್ಭದಲ್ಲಿ ಎಂದರೆ ಸರ್ವಧರ್ಮಾನ್ ಎಂಬುದಕ್ಕೆ ವ್ಯಾಖ್ಯಾನ ಮಾಡುವಾಗ ಧರ್ಮಶಬ್ದವು ಅಲೌಕಿಕ ಶ್ರೇಯಸ್ಸಾಧನ ಉಪಾಸನವನ್ನು ಬೋಧಿಸುತ್ತದೆಂದು ವ್ಯಾಖ್ಯಾನ ಮಾಡಿರು

ಶಿರುಕ್ಕೈ ಡಕ್ಕೈಗ್ಗೈಕ್ಕಾಗ ವೇಣ್ಡಾಚ್ಚೊನ್ನವೈಗಳೈ ಯೆಡುಪ್ಪಿಕ್ಕೈಯಾಲೆ ಅನ್ಯಪರಮಾನ ಉಪದೇಶತ್ತಾಲೆ ಪಿರನ್ದ ಅರ್ಜುನ ಬುದ್ಧಿಯಾಲೆ ಧರ್ಮಮೆನ್ರು ತೋತ್ತಿನವತ್ತೈ "ಸರ್ವಧರ್ಮಾನ್" ಎನ್ರು ಅನುವದಿಕ್ಕಿರದೆನ್ನಿಲ್,

---

೩೪೦. ಹಾಗೆ ಮಾಡಿರುವವರು ಯಾರು ಎಂಬುದು ಇಲ್ಲಿ ಹೇಳಲ್ಪಡಲಿಲ್ಲವು ಶ್ರೀ ಪಿಳ್ಳೈಲೋಕಾಚಾರ್ಯರು ಪ್ರಭೃತಿಗಳು ಎಂಬಭಿಪ್ರಾಯವು; ಇವರು ಬರೆದಿರುವ ರಹಸ್ಯವಾದ ಶ್ರೀವಚನ ಭೂಷಣ ಮುಂತಾದವುಗಳಲ್ಲಿ, ಹಾಗೆ ವ್ಯಾಖ್ಯಾನ ಮಾಡಿರುತ್ತಾರೆಂಬ ತಾತ್ಪರ್ಯವು. ಅಲ್ಲಿ ಮೋಕ್ಷ ಸಾಧನವೆಂದು ಹೇಳಿ, ಈಗ ಸಾಧನವಲ್ಲವೆಂದರೆ ಸ್ವವಚನ ವಿರೋಧವೆಂಬ ಭಾವವು. ಸ್ವವಚನ ವಿರೋಧವನ್ನು ತಪ್ಪಿಸಿಕೊಳ್ಳುವದಕ್ಕಾಗಿ, ಧರ್ಮಶಬ್ದಕ್ಕೆ ಸಾಧನವಾದ ಉಪಾಯವೆಂಬರ್ಥವಲ್ಲವು; ಅರ್ಜುನನು ಅನುಪಾಯವಾದುದನ್ನು ಉಪಾಯವೆಂದು ಭ್ರಮಿಸಿದ ಧರ್ಮವೆಂದು ಅರ್ಥ ಹೇಳುತಿದ್ದ; ಅರ್ಜುನನು ಧರ್ಮವಲ್ಲದುದನ್ನು ಧರ್ಮವೆಂದು ಭ್ರಮಿಸಿದನಲ್ಲಾ ಅಂತಹ ಧರ್ಮವೀಗ "ಸರ್ವಧರ್ಮಾನ್ ಪರಿತ್ಯಜ್ಯ" ಎಂಬಲ್ಲಿ ಧರ್ಮಶಬ್ದದಿಂದ ಹೇಳಲ್ಪಟ್ಟಿತು, ಆ ಕಾರಣದಿಂದ ಸ್ವವಚನ ವಿರೋಧವೆಂದು ಹೇಳಲು ಸಾಧ್ಯವಲ್ಲವ, ಎಂದರೆ ಹೇಳುತ್ತಾರೆ. ಆಗಲೂ ದೋಷವು ತಪ್ಪಿದ್ದಲ್ಲವೆಂದು ತೋರಿಸುತ್ತಾರೆ: —

ಶಿರುಕ್ಕೈ - ಗರ್ವವನ್ನು, ಅಡಕ್ಕೈಗ್ಗೈಕ್ಕಾಗ - ಅಡಗಿಸುವದಕ್ಕಾಗಿ ಎಂದರೆ ಪರಿಹರಿಸುವದಕ್ಕಾಗಿ, ವೇಣ್ಡಾಚ್ಚೊನ್ನವೈಗಳೈ - ಬೇಡದ ಎಂದರೆ ನಿರರ್ಥಕಗಳಾದ ಹೊರೆಗಳನ್ನು, ಯೆಡುಪ್ಪಿಕ್ಕೈಯಾಲೆ - ಹೊರಿಸುವದರಿಂದ, ಇದು ಹೇಗೆಂದರೆ ಮದಿಸಿದ ಗೂಳಿಯ ಗರ್ವವನ್ನು ಮುರಿಯುವದಕ್ಕಾಗಿ ಅದರ ಮೇಲೆ ತುಂಬಾ ಭಾರವಾದ ಮರಳು ತುಂಬಿದ ಚೀಲಗಳನ್ನು ಹೊರಿಸುವ ಹಾಗೆ ಎಂಬ ತಾತ್ಪರ್ಯವು; ಅನ್ಯಪರಮಾನ ಉಪದೇಶತ್ತಾಲೆ ಪಿರನ್ದ ಅರ್ಜುನಬುದ್ಧಿಯಾಲೇ - ಹಾಗೆ ನಿರರ್ಥಕವಾದ ಉಪದೇಶದಿಂದ ಹುಟ್ಟಿದ ಅರ್ಜುನನ ಬುದ್ಧಿಯಿಂದ, ನಿರರ್ಥಕ ಹೇಗೆಂದರೆ, ಉಪಾಯಗಳಲ್ಲದ ಕರ್ಮಯೋಗಾದಿಗಳನ್ನು ಉಪಾಯವೆಂದು ಉಪದೇಶಮಾಡುವದರಿಂದ ಹುಟ್ಟಿದ ಅರ್ಜುನನ ಬುದ್ಧಿಯಿಂದ, ಧರ್ಮಮೆನ್ರು ತೋತ್ತಿನವತ್ತೈ - ಧರ್ಮವೆಂದು ತೋರಿದವನ್ನು, "ಸರ್ವಧರ್ಮಾನ್" - ಇಲ್ಲಿ ಸರ್ವ ಧರ್ಮದಿಂದ, ಅನುವದಿಕ್ಕಿರದು - ಅನುವಾದ ಮಾಡಿ ಹೇಳುತ್ತದೆ. ಸರ್ವಧರ್ಮಾನ್ ಎಂಬಲ್ಲಿರುವ ಧರ್ಮಶಬ್ದವು ನಿರರ್ಥಕವಾದ ಕರ್ಮಯೋಗ ಮೊದಲಾದ ಜ್ಞಾನದ ಭಾರವನ್ನು ಹೊರಿಸಿ, ಅರ್ಜುನ ಬುದ್ಧಿಗೆ ಧರ್ಮವಾಗಿ

(೧) "ಇಜ್ಯಾಚಾರ ದಮಾಹಿಂಸಾ ದಾನ ಸ್ವಾಧ್ಯಾಯ ಕರ್ಮಣಾಂ। ಅಯಂತು ಪರಮೋಧರ್ಮೋ ಯದ್ಯೋಗೇನಾತ್ಮದರ್ಶನಮ್" (೨) "ಸರ್ವೇಷಾ ಮೇವ ಧರ್ಮಾಣಾಂ ಮುತ್ತಮೋ ವೈಷ್ಣವೋ ವಿಧಿಃ"

ತೋರಿದುದನ್ನು ಬೋಧಿಸುತ್ತದೆ ಎಂದರೆ ಆಗ, ಶಾಸ್ತ್ರವು ಬೋಧಿಸುವ ಕರ್ಮ ಯೋಗಾದಿ ರೂಪವಾದ ನಿವೃತ್ತಿ ರೂಪಧರ್ಮವೇ ಧರ್ಮವಲ್ಲದಿರುವದರಿಂದ ಪ್ರವೃತ್ತಿ ರೂಪ ಧರ್ಮವೂ ಧರ್ಮವಲ್ಲದುದಾಗಿ, ಶಾಸ್ತ್ರವೇ ಪ್ರಮಾಣವಲ್ಲದೆ ನಿರರ್ಥಕವಾಗಿ ಬಾಹ್ಯಕುದೃಷ್ಟಿಗಳ ಅಭಿಪ್ರಾಯಕ್ಕೆ ಸಮಾನವಾಗುತ್ತದೆಂದು ಹೇಳುತ್ತಾರೆ. ಇಲ್ಲಿ ಪೂರ್ವಪಕ್ಷಿಗಳು ಕರ್ಮಯೋಗಾದಿ ಸಾಧನಗಳನ್ನು ಧರ್ಮವಲ್ಲವೆಂದು ಸಮಾಧಾನ ಹೇಳಿದರು. ಆದರೆ ಶಾಸ್ತ್ರಗಳಲ್ಲಿ ಈ ಕರ್ಮಯೋಗಾದಿ ಧರ್ಮಗಳು ಪರಮ ಧರ್ಮ ಗಳಾಗಿ ಹೇಳಲ್ಪಟ್ಟಿವೆ ಎಂದು ತೋರಿಸಲು ಮೂರು ಪ್ರಮಾಣಗಳನ್ನು ಉದಾಹರಿಸುತ್ತಾರೆ.

(೧) "ಇಜ್ಯಾ - ಭಗವದಾರಾಧನವೂ, ಆಚಾರ - ನಿತ್ಯ ನೈಮಿತ್ತಿಕ ಕರ್ಮಾ ನುಷ್ಠಾನವೂ, ದಮ - ಇಂದ್ರಿಯ ನಿಗ್ರಹವೂ ಅಹಿಂಸಾ - ಪ್ರಾಣಹಿಂಸೆ ಮಾಡ ದಿರೋಣವೂ, ದಾನ - ತನ್ನಲ್ಲಿರುವ ದ್ರವ್ಯ ಮೊದಲಾದವುಗಳನ್ನು ಸತ್ಪಾತ್ರದಲ್ಲಿ ಉಚಿತವಾಗಿ ಪ್ರತಿಫಲಾಪೇಕ್ಷೆಯಿಲ್ಲದೆ ಅರ್ಪಿಸೋಣವೂ, ಸ್ವಾಧ್ಯಾಯ - ವೇದಾ ಧ್ಯಯನ ಮಾಡೋಣವೂ ಕರ್ಮಣಾಂ - ಸಪ್ತಮ್ಯರ್ಥದಲ್ಲಿ ಷಷ್ಠಿಯು, ಕರ್ಮಗಳ ಮಧ್ಯದಲ್ಲಿ, ಯತ್ - ಯಾವುದು, ಯೋಗೇನ - ಕರ್ಮಯೋಗಾದಿ ಭಕ್ತಿಯೋಗ ಗಳ ಮೂಲಕ, ಆತ್ಮದರ್ಶನಮ್ - ಮೊದಲು ಆತ್ಮಾವಲೋಕನ ಉಂಟಾಗಿ ಅನಂತರ ಪರಮಾತ್ಮ ಸಾಕ್ಷಾತ್ಕಾರ ಉಂಟಾಗುತ್ತದೋ, ಅಯಂ - ಇದು, ಪರಮೋಧರ್ಮಃ - ಸರ್ವೋತ್ಕೃಷ್ಟವಾದ ನಿವೃತ್ತಿರೂಪಧರ್ಮವು. ಆದುದರಿಂದ ಅರ್ಜುನ ಬುದ್ಧಿಗೆ ತೋರಿದುದು ಪರಮಧರ್ಮವೇ ವಿನಾ ಅನ್ಯಥಾ ಅಲ್ಲವೆಂಬ ಭಾವವು.

(೨) ಸರ್ವೇಷಾಂ ಮೇವ ಧರ್ಮಾಣಾಂ - ಸಮಸ್ತವಾದ ಧರ್ಮಗಳಲ್ಲೆಲ್ಲಾ, ವೈಷ್ಣವೋ ವಿಧಿಃ - ಪರತತ್ವವಾದ ಶ್ರೀ ಮಹಾವಿಷ್ಣುವನ್ನು ಕುರಿತು ಮಾಡುವ ಧರ್ಮವು, ಉತ್ತಮಃ - ಸರ್ವೋತ್ಕೃಷ್ಟವಾದುದು. ಅದು ಯಾವುದೆಂದರೆ ಇಹ ಲೋಕದ ಸಂಸಾರವನ್ನು ಪುನಃ ಹೊಂದದಹಾಗೆ ಆತನನ್ನು ಹೊಂದುವ ಉಪಾಯ

---

(೧) ಯಾಜ್ಞವಲ್ಕ್ಯಸ್ಮೃತಿ. ೧.೮. (೨) ಭಾರತ. ಅನು. ೩೬.೨೪.

(೩) "ನವಿಷ್ಣ್ವಾರಾಧನಾತ್ಪುಣ್ಯಂ ವಿದ್ಯತೇ ಕರ್ಮವೈದಿಕಮ್" ಇತ್ಯಾದಿಗಳಾಲೇ ಪರಮ ಧರ್ಮಙ್ಗಳಾಗ ಪ್ರಸಿದ್ಧಙ್ಗಳಾನ ನಿವೃತ್ತಿ ಧರ್ಮಙ್ಗಳ್ ಧರ್ಮಙ್ಗಳನ್ರ್ರು ಸಾರಿಲ್ ಕೈಮುತಿಕ ನ್ಯಾಯತ್ತಾಲೆ ಪ್ರವೃತ್ತಿ ಧರ್ಮಙ್ಗಳುಮ್ ಧರ್ಮಙ್ಗಳನ್ರಿಕ್ಕೇ ಸರ್ವ ಶಾಸ್ತ್ರಙ್ಗಳುಕ್ಕುಮ್ ಪ್ರಾಮಾಣ್ಯಮಿಲ್ಲಾದ ಪಡಿಯಾಯ್ ಪರಬಾಹ್ಯ ಕುದೃಷ್ಟಿ ಪಕ್ಷಙ್ಗಳಿಲೇ ಪ್ರವೇಶಮಾಮ್.

ರೂಪವಾದ ಉಪಾಸನವು. ಇದರ **ಉತ್ತರಾರ್ಧವು**:—"**ರಕ್ಷತೇ ಭಗವಾನ್ ವಿಷ್ಣುರ್ಭಕ್ತಮಾತ್ಮ ಶರೀರವತ್**" ಭಗವಂತನಾದ ವಿಷ್ಣುವು ತನ್ನ ಶರೀರವನ್ನೋಪಾದಿಯಲ್ಲಿ ಭಕ್ತನನ್ನು ರಕ್ಷಿಸುವನು ಎಂಬರ್ಥವು. ಶ್ರುತಿಯ ಪ್ರಕಾರ ಎಲ್ಲಾ ಜೀವಾತ್ಮರೂ ಆತನಿಗೆ ಶರೀರವು, ಆದುದರಿಂದ ಸರ್ವರೂ ರಕ್ಷ್ಯ ವರ್ಗಕ್ಕೆ ಸೇರಿದವರೇ, ಆತನೇ ರಕ್ಷಕನೇ ಸರಿ. ಆದರೂ ಮುಕ್ತಿಯನ್ನು ಕೊಟ್ಟು ರಕ್ಷಿಸಬೇಕಾದರೆ ಉತ್ತಮ ವೈಷ್ಣವ ವಿಧಿರೂಪವಾದ ಧರ್ಮವನ್ನು ಅವಲಂಬಿಸಿದವರನ್ನು ರಕ್ಷಿಸುತ್ತಾನೆಯೇ ವಿನಾ, ಅನ್ಯಥಾ ಅಲ್ಲವು. ಹಾಗೆ ಮಾಡದೆ ಎಲ್ಲರನ್ನೂ ರಕ್ಷಿಸಿಬಿಟ್ಟರೆ, ವೈಷಮ್ಯಾದಿಗಳು ಪ್ರಾಪ್ತವಾಗುತ್ತವೆ ಎಂಬ ಭಾವವು.

(೩) **ವಿಷ್ಣ್ವಾರಾಧಾನಾತ್**-ದೈವಯಜ್ಞವಾದ ವಿಷ್ಣುವಿನ ಆರಾಧನೆಗಿಂತಲೂ, **ವೈದಿಕಮ್**-ವೇದೋದಿತವಾದ, **ಪುಣ್ಯಂ ಕರ್ಮ**-ಪವಿತ್ರಕರವಾದ ಶ್ರೇಯಸ್ಕರವಾದ ಕರ್ಮವು, **ನವಿದ್ಯತೆ** - ಇರುವದಿಲ್ಲವು. **ಇತ್ಯಾದಿಗಳಾಲೇ** ಇವೇ ಮೊದಲಾದ ಪ್ರಮಾಣಗಳ ಮೂಲಕವಾಗಿ, **ಪರಮಧರ್ಮಙ್ಗಳಾಗ** ಸರ್ವೋತ್ಕೃಷ್ಟ ಧರ್ಮಗಳೆಂದು, ಪ್ರಸಿದ್ಧಗಳಾದ ನಿವೃತ್ತಿ ಧರ್ಮಗಳನ್ನೇ, **ಧರ್ಮಙ್ಗಳನ್ರ್ರುಸಾರಿಲ್** - ಧರ್ಮಗಳಲ್ಲವೆಂದು ಹೇಳಿಬಿಟ್ಟರೆ, ಕೈಮುತಿಕ ನ್ಯಾಯದಿಂದ, **ಪ್ರವೃತ್ತಿ** ಧರ್ಮಗಳೂ ಕೂಡ, **ಧರ್ಮಙ್ಗಳನ್ರಿಕ್ಕೇ** - ಧರ್ಮಗಳಲ್ಲದವುಗಳಾಗಿ, **ಸರ್ವಶಾಸ್ತ್ರಙ್ಗಳುಕ್ಕುಮ್**- ಸಮಸ್ತ ಶಾಸ್ತ್ರಗಳಿಗೂ, **ಪ್ರಾಮಾಣ್ಯಮಿಲ್ಲಾದ ಪಡಿಯಾಯ್** - ಪ್ರಾಮಾಣ್ಯವಿಲ್ಲದಹಾಗಾಗಿ, ಎಂದರೆ ನಿವೃತ್ತಿ ಧರ್ಮಗಳೂ ಪ್ರವೃತ್ತಿ ಧರ್ಮಗಳೂ ಇವುಗಳ ವಿಷಯವೇ ಶಾಸ್ತ್ರಗಳಲ್ಲಿ ಹೇಳಿರುವದು, ಇವೆರಡೂ ಧರ್ಮಗಳಲ್ಲವೆ ಹೋದರೆ ಶಾಸ್ತ್ರದಿಂದ ಪ್ರಮಾಣರೂಪದಲ್ಲಿ ಗ್ರಹಿಸತಕ್ಕದ್ದು ಯಾವುದೂ ಇಲ್ಲವಾಗುತ್ತದೆ, ಆದುದರಿಂದ ಶಾಸ್ತ್ರವು ನಿರರ್ಥಕವಾದುದಾಗಿ, **ಪರಬಾಹ್ಯಕುದೃಷ್ಟಿಪಕ್ಷಙ್ಗಳಿಲೇ ಪ್ರವೇಶಮಾಯ್** - ಪ್ರತಿಕಕ್ಷಿಗಳಾದ ವೇದಬಾಹ್ಯರು ಮತ್ತು ವೇದಗಳಿಗೆ ಅಪಾರ್ಥ

---

(೩) ವ್ಯಾಸಸ್ಮೃತಿ.

ಪ್ರಪತ್ತೇಸ್ಸಾಧನತ್ವೇ ಸಿದ್ಧಸಾಧನ ಸಹಕಾರಿತ್ವೇವಾ ಚರಮಶ್ಲೋಕ ವಿರೋಧ ಇತಿ ಶಙ್ಕಾ ನಿರಾಸಃ

ಆನಾಲುಮ್ ಉಪಾಸನಾದಿಗಳ್ ಪೋಲೆ ಶರಣವರಣಂ ಧರ್ಮಶಬ್ದ ವಾಚ್ಯಮಾಗೈಯಾಲೇ ಇಙ್ಙು ಸರ್ವಶಬ್ದ ಸಙ್ಕೋಚಮುಂ ವಾರಾಮೈಕ್ಕಾಗ

ಗಳನ್ನು ಹೇಳುವವರು, ಇವರ ಅಭಿಪ್ರಾಯಗಳಲ್ಲಿ ಪ್ರವೇಶ ಉಂಟಾಗುತ್ತದೆ; ಎಂದರೆ ಇವರುಗಳಿಗೆ ಶಾಸ್ತ್ರಗಳು ಹೇಗೆ ನಿರರ್ಥಕವೋ ಹಾಗೆಯೇ ಪ್ರವೃತ್ತಿ ನಿವೃತ್ತಿ ಧರ್ಮಗಳೆಲ್ಲಾ ಧರ್ಮಗಳಲ್ಲವೆಂದು ಹೇಳುವವರಿಗೂ ಶಾಸ್ತ್ರಗಳು ನಿರರ್ಥಕವಾಗುತ್ತವೆಂಬ ಭಾವವು. ಶಾಸ್ತ್ರಗಳಲ್ಲಿ ಧರ್ಮಗಳೇ ಇಲ್ಲದುದರಿಂದ ವಿಧೇಯಾಂಶವೇ ಇಲ್ಲವಾಗಿ ನಾವು ಧರ್ಮೋಪದೇಶವನ್ನು ಹೊಂದಿ ಧರ್ಮಾನುಷ್ಠಾನವನ್ನು ಮಾಡತಕ್ಕದ್ದು ಯಾವುದೂ ಇರುವುದಿಲ್ಲವಾಗುತ್ತದೆಂಬ ಭಾವವು.

ಪ್ರಪತ್ತಿಗೆ ಸಾಧನತ್ವವನ್ನಾಗಲಿ ಸಿದ್ಧ ಸಾಧನ ಸಹಕಾರಿತ್ವವನ್ನಾಗಲಿ ಸ್ವೀಕರಿಸಿದರೆ ಚರಮಶ್ಲೋಕ ವಿರೋಧವೆಂಬ ಶಙ್ಕಾ ಪರಿಹಾರವು.

ಆದರೆ ಪ್ರಪತ್ತಿಗೆ ಸಾಧನತ್ವವನ್ನಾಗಲಿ, ಸಿದ್ಧ ಸಾಧನಕ್ಕೆ ಸಹಕಾರಿ ಎಂಬುದನ್ನಾಗಲಿ ಸ್ವೀಕರಿಸಿದರೆ, ಚರಮಶ್ಲೋಕದ "ಸರ್ವಧರ್ಮಾನ್ ಪರಿತ್ಯಜ್ಯ" ಎಂಬಲ್ಲಿ ಸರ್ವಶಬ್ದದಲ್ಲಿ ಸಂಕೋಚ ಬಾರದೇ ಇರಲು ಸಾಧ್ಯವಿಲ್ಲವೋ? ಇದು ಅಲ್ಲವು ಎಂದರೆ ಆಗ ಸರ್ವ ಶಬ್ದಕ್ಕೆ ಸಙ್ಕೋಚಾರ್ಥವನ್ನು ಹೇಳದಾಗಲಿಲ್ಲವೋ? ಇವೇ ಮೊದಲಾದ ಆಕ್ಷೇಪಣೆಗಳನ್ನು ಉಪಪಾದಿಸಿ ಅವುಗಳಿಗೆ ಸಮಾಧಾನವನ್ನು ಹೇಳುತ್ತಾರೆ.

ಆನಾಲುಮ್ - ಪ್ರಪತ್ತಿಗೆ ಸಾಧನತ್ವವನ್ನಾಗಲಿ ಸಿದ್ಧ ಸಾಧನ ಸಹಕಾರಿತ್ವವನ್ನಾಗಲಿ ಅಙ್ಗೀಕರಿಸದಿದ್ದರೆ ಮೇಲೆ ಹೇಳಿದ ದೋಷಗಳುಂಟಾಗುತ್ತವೆಂದು ಒಪ್ಪಿಕೊಂಡರೂ ಉಪಾಸನಾದಿಗಳ್ ಪೋಲೆ - ಉಪಾಸನಾದಿಗಳು ಧರ್ಮಗಳೆಂದು ಅಙ್ಗೀಕರಿಸಿರುವ ಹಾಗೆ, ಶರಣವರಣಂ - ಶರಣಾಗತಿಯ ಮೂಲಕ ಪ್ರಾರ್ಥನೆಯೂ ಕೂಡ ಎಂದರೆ ಪ್ರಪತ್ತಿಯೂ, ಧರ್ಮಶಬ್ದ ವಾಚ್ಯಮಾಗೈಯಾಲೇ - ಧರ್ಮಶಬ್ದದಿಂದ ಹೇಳಿಸಿಕೊಳ್ಳುವುದರಿಂದ, ಇಙ್ಙು - ಈ ಚರಮ ಶ್ಲೋಕದಲ್ಲಿ, ಸರ್ವಶಬ್ದ ಸಙ್ಕೋಚಮುಮ್ ವಾರಾಮೈಕ್ಕಾಗ - "ಸರ್ವಧರ್ಮಾನ್" ಎಂಬಲ್ಲಿರುವ ಸರ್ವಶಬ್ದಕ್ಕೆ ಸಙ್ಕೋಚವು ಬಾರದೆ ಇರುವದಕ್ಕಾಗಿ,

ಇದುವುಮ್ ಸಾಧನತ್ವ ವೇಷತ್ತಾಲೆ ತ್ಯಾಜ್ಯಮನ್ನೋ? ಆಗೈಯಾಲ್ ಪ್ರಪತ್ತಿಕ್ಕು ಸಾಧನತ್ವಮಾದಲ್ ಸಿದ್ಧಸಾಧನ ಸಹಕಾರಿತ್ವಮಾದಲ್ ಕೊಳ್ಳುಗೈ, ಇವ್ವಚನನ್ ತನಕ್ಕು ವಿರುದ್ಧಮನ್ನೋ ವೆನ್ನಿಲ್? ಇಜ್ಞ ಸಾಕ್ಷಾತ್ಸಾಧನತ್ವಬುದ್ಧಿಯೈ ವಿಡವೇಣು ಮೆನ್ನುಮ್ ಪೋದು, ಭಕ್ತಿಯೋಗಾದಿಗಳಿಲುಮ್ ತುಲ್ಯಮ್.

ಇದುವುಮ್ - ಈ ಪ್ರಪತ್ತಿಯೂ, **ಸಾಧನತ್ವ ವೇಷತ್ತಾಲೇ** - ಸಾಧನತ್ವ ರೂಪದಲ್ಲಿ **ತ್ಯಾಜ್ಯಮನ್ನೋ?** ಪರಿತ್ಯಜ್ಯ ಎಂದು ಹೇಳಿರುವದರಿಂದ ತ್ಯಾಜ್ಯವಲ್ಲವೋ? **ಆಗೈಯಾಲೇ** - ಹೀಗೆ ಸಾಧನತ್ವ ರೂಪದಲ್ಲಿ ತಾಜ್ಯವಾದುದರಿಂದ, **ಪ್ರಪತ್ತಿಕ್ಕುಮ್** - ಪ್ರಪತ್ತಿಗೂ ಕೂಡ ಉಪಾಸನದ ಹಾಗೆ, **ಸಾಧನತ್ವಮಾದಲ್** - ಸಾಧನತ್ವವನ್ನಾದರೂ, ಸಿದ್ಧಸಾಧನಕ್ಕೆ **ಸಹಕಾರಿತ್ವವನ್ನಾದರೂ, ಕೊಳ್ಳುಗೈ** - ಅಙ್ಗೀಕರಿಸೋಣವು, **ಇವ್ವಚನಮ್** - ಹೀಗೆ ಪ್ರಪತ್ತ್ಯನುಷ್ಠಾನವು ಆವಶ್ಯಕವೆಂದು ಹೇಳೋಣವು, **ತನಕ್ಕೇ ವಿರುದ್ಧಮನ್ನೋ** - ತನಗೇನೇ ವಿರುದ್ಧವಾದುದಲ್ಲವೋ, **ಎನ್ನಿಲ್** - ಎಂದು ಆಕ್ಷೇಪವನ್ನು ತಂದರೆ, **ಇಜ್ಞ** - ಈ ಪ್ರಪತ್ತಿಯ ಸಂದರ್ಭದಲ್ಲಿ, **ಸಾಕ್ಷಾತ್ಸಾಧನತ್ವ ಬುದ್ಧಿಯೈವಿಡವೇಣು ಮೆನ್ನುಮ್ ಪೋದು** - ಪ್ರಪತ್ತಿಯ ವಿಷಯದಲ್ಲಿ ಸಾಕ್ಷಾತ್ತಾಗಿ ಮೋಕ್ಷಕ್ಕೆ ಸಾಧನವೆಂಬ ಅಭಿಪ್ರಾಯವನ್ನು ಬಿಡಬೇಕೆಂದು ಹೇಳುವಾಗ, **ಭಕ್ತಿಯೋಗಾದಿಗಳಿಲುಮ್ ತುಲ್ಯಮ್** - ಭಕ್ತಿಯೋಗಾದಿಗಳಲ್ಲೂ ಅದು ಸಮಾನವಾದುದೇ; ಎಂದರೆ, ಪ್ರಪತ್ತಿಯ ವಿಷಯದಲ್ಲಿ ಸಾಧನತ್ವಬುದ್ಧಿಯನ್ನು ಬಿಡತಕ್ಕದ್ದೆಂದರೆ, ಭಕ್ತಿಯೋಗವೂ ಪ್ರಪತ್ತಿಯಹಾಗೆ ಉಪಾಯವಾದುದರಿಂದ ಭಕ್ತಿಯೋಗದಲ್ಲೂ ಸಾಧನತ್ವ ಬುದ್ಧಿಯನ್ನು ಬಿಡಬೇಕಾಗುತ್ತದೆ ಎಂಬ ಭಾವವು; ಭಕ್ತಿಯೋಗಕ್ಕೆ ಸಾಧನತ್ವವನ್ನು ಅಙ್ಗೀಕರಿಸುವದಾದರೆ ಪ್ರಪತ್ತಿಗೂ ಏಕೆ ಅಙ್ಗೀಕರಿಸಕೂಡದೆಂಬ ಅಭಿಪ್ರಾಯವು. ಪೂರ್ವಪಕ್ಷಿಗಳು ಪ್ರಪತ್ತಿಗೆ ಸಾಧನತ್ವವನ್ನಾಗಲಿ ಸಿದ್ಧಸಾಧನ ಸಹಕಾರಿತ್ವವನ್ನಾಗಲಿ ಅಙ್ಗೀಕರಿಸಿದರೆ ಚರಮಶ್ಲೋಕಾರ್ಥಕ್ಕೆ ವಿರೋಧವುಂಟಾಗುತ್ತದೆ; ಸರ್ವಧರ್ಮಾನ್ ಪರಿತ್ಯಜ್ಯ - ಎಂದು ಅಲ್ಲಿ ವಿಧಿಸಿರುವದರಿಂದ, ಪ್ರಪತ್ತಿಯೂ ಧರ್ಮವಾದುದರಿಂದ ಪ್ರಪತ್ತಿಗೆ ಸಾಧನತ್ವ ಬುದ್ಧಿಯನ್ನು ಅಙ್ಗೀಕರಿಸುವದು ಯುಕ್ತವಲ್ಲವೆಂದು ಆಕ್ಷೇಪಿಸುತ್ತಾರೆ. ಅದಕ್ಕೆ ಸಮಾಧಾನವಾಗಿ ಪ್ರಪತ್ತಿಗೆ ಸಾಧನತ್ವಬುದ್ಧಿಯು ಸರಿಯಿಲ್ಲವಾದರೆ ಉಪಾಸನೆಗೂ ಕೂಡ ಹೀಗೆಂದಾಗುತ್ತದೆ, ಎಂದು ಹೇಳುತ್ತಾರೆ.

ಪ್ರಸಾದನತ್ವವೇಷತ್ತಾಲುಮ್ ಧರ್ಮತ್ವಮಿದುಕ್ಕು ವಿಡುವೇಣು ಮೆನ್ನಿಲ್, ಸರ್ವ ಶಬ್ದ ಸಙ್ಕೋಚಂ ವಾರಾಮೈಕ್ಕಾಗ "ಕೃಷ್ಣಂ ಧರ್ಮಂ ಸನಾತನಂ" ಇತ್ಯಾದಿಗಳಿರ್ಪಡಿಯೇ ಧರ್ಮಮಾನ ಸಿದ್ಧೋಪಾಯತ್ತಿಲುಮ್ ಸಾಧನತ್ವ ಬುದ್ಧಿಯೈ ವಿಡಪ್ರಸಙ್ಗಿಕ್ಕುಮ್. ಇವ್ವಾಕ್ಯತ್ತಿಲ್

ಸರ್ವ ಧರ್ಮಾನ್ ಪರಿತ್ಯಜ್ಯ - ಎಂದಿರುವದರಿಂದ ಪ್ರಪತ್ತಿಯೂ ಒಂದು ಧರ್ಮವಾದುದರಿಂದ ಪರಿತ್ಯಾಗಮಾಡತಕ್ಕದ್ದೆಂದು ಪೂರ್ವಪಕ್ಷ ತಂದುದರಿಂದ, ಆ ಪೂರ್ವಪಕ್ಷವನ್ನು ಎರಡಾಗಿ ವಿಕಲ್ಪಿಸಿ ಕೇಳುತ್ತಾರೆ. ಪ್ರಪತ್ತಿಯೂ ಧರ್ಮವಾದುದರಿಂದ ಪರಿತ್ಯಾಗವೆಂದು ಹೇಳಲ್ಪಟ್ಟಿತಲ್ಲಾ, ಅದೇನು ಸಾಕ್ಷಾತ್ಸಾಧನತ್ವ ಬುದ್ಧಿಯ ತ್ಯಾಗವೇ ಇಲ್ಲವೇ ಪ್ರಸಾದನತ್ವವೇಷದಿಂದ ತ್ಯಾಗವೇ ಎಂದು ವಿಕಲ್ಪಿಸಿ, ಸಾಕ್ಷಾತ್ಸಾಧನತ್ವಬುದ್ಧಿಯು ಕೂಡದೆಂದು ಹೇಳಿದರೆ, ಆಗ ಉಪಾಸನವೂ ಸಾಧನವಲ್ಲವಾಗುತ್ತದೆಂದು ಹೇಳಿದರು. ಈಗ ಎರಡನೆಯ ವಿಕಲ್ಪವಾದ, ಪ್ರಸಾದನತ್ವವೇಷಧರ್ಮವಾಗುವದರಿಂದ ತ್ಯಾಜ್ಯವೆಂದು ಹೇಳಿದರೆ, ಸಿದ್ಧೋಪಾಯನೂ ಪ್ರಸಾದನತ್ವರೂಪಧರ್ಮವೆಂದು ಹೇಳಿರುವ ಪ್ರಮಾಣವಿರುವದರಿಂದ ಅದನ್ನೂ ಬಿಡಬೇಕೆಂದು ಆಗುವದರಿಂದ ಈ ವಾದಗಳು ಸರಿಯಲ್ಲವೆಂದು ಹೇಳುತ್ತಾರೆ.

ಪ್ರಸಾದನತ್ವವೇಷತ್ತಾಲುಮ್ - ಭಗವದನುಗ್ರಹ ಸಂಪಾದಕ ರೂಪದಿಂದಲೂ, ಧರ್ಮತ್ವವು, **ಇದುಕ್ಕು** - ಈ ಪ್ರಪತ್ತಿಗೆ, ಸಿದ್ಧಿಸುವದರಿಂದ **ವಿಡುವೇಣುಮೆನ್ನಿಲ್** - ಬಿಡತಕ್ಕದ್ದು ಎಂದರೂ, **ಸರ್ವಶಬ್ದ ಸಂಕೋಚಮ್ ವಾರಾಮೈಕ್ಕಾಗ** - "ಸರ್ವಧರ್ಮಾನ್ ಪರಿತ್ಯಜ್ಯ" ಎಂಬಲ್ಲಿರುವ ಸರ್ವ ಶಬ್ದಕ್ಕೆ ಸಂಕೋಚವು ಬಾರದೇ ಇರುವದಕ್ಕಾಗಿ, **"ಕೃಷ್ಣಂ ಧರ್ಮಂ ಸನಾತನಮ್"** ಶ್ರೀ ಕೃಷ್ಣನೂ ಅನಾದಿಯಾದ ಧರ್ಮವು" **ಇತ್ಯಾದಿಗಳಿರ್ಪಡಿಯೇ** - ಎಂಬಿವೇ ಮೊದಲಾದ ಪ್ರಮಾಣಗಳಲ್ಲಿ ಹೇಳಿರುವ ರೀತ್ಯಾ, **ಧರ್ಮಮಾನ ಸಿದ್ಧೋಪಾಯತ್ತಿಲುಮ್** ಧರ್ಮವಾಗಿರುವ ಸಿದ್ಧೋಪಾಯದಲ್ಲೂ, **ಸಾಧನತ್ವ ಬುದ್ಧಿಯೈ** ಉಪಾಯವೆಂಬ ಬುದ್ಧಿಯನ್ನು **ವಿಡಪ್ರಸಙ್ಗಿಕ್ಕುಮ್** - ಬಿಡಬೇಕಾಗಿ ಬರುವದು. ಸರ್ವಧರ್ಮಾನ್ ಪರಿತ್ಯಜ್ಯ ಎಂದು ಹೇಳಿರುವದರಿಂದ ಪ್ರಪತ್ತಿಯು ಭಗವತ್ಪ್ರಸಾದನರೂಪಧರ್ಮವಾದುದರಿಂದ ಅದನ್ನೂ ಪರಿತ್ಯಾಗಮಾಡಬೇಕೆಂಬ ವಾದ ತಂದರೆ, ಕೃಷ್ಣಂ ಧರ್ಮಂ ಸನಾತನಮ್ ಎಂದು ಸಿದ್ಧೋಪಾಯನೂ ಧರ್ಮವೆಂದು ಹೇಳಲ್ಪಟ್ಟಿರುವದರಿಂದ ಸಿದ್ಧೋಪಾಯನಲ್ಲೂ ಸಾಧನತ್ವಬುದ್ಧಿಯನ್ನು ಬಿಡಬೇಕೆಂದು ಹೇಳಬೇಕಾಗುತ್ತದೆ.

ಪ್ರತಿಪಾದ್ಯಮಾನ ಧರ್ಮತ್ತೈ ಯೊಳಿನ್ತು ಧರ್ಮಙ್ಗಳನ್ನೋ ತ್ಯಾಜ್ಯಙ್ಗಳಾವನ ವೆನ್ನಿಲ್, ಇಙ್ಗು ವಿಹಿತೈಯಾನ ಶರಣಾಗತಿಯಿಲುಮ್ ತುಲ್ಯಮ್.

ಈ ದೋಷದಿಂದ ತಪ್ಪಿಸಿಕೊಳ್ಳುವದಕ್ಕಾಗಿ, ಸರ್ವಧರ್ಮಾನ್ **ಪರಿತ್ಯಜ್ಯ** ಎಂಬ ವಾಕ್ಯದಲ್ಲಿ ಹೇಳಲ್ಪಟ್ಟ ಧರ್ಮವನ್ನು ಬಿಟ್ಟು ಇತರ ಧರ್ಮಗಳೆಲ್ಲಾ ತ್ಯಾಜ್ಯವೆಂದಲ್ಲವೇ ಅನ್ವಯಿಸತಕ್ಕದ್ದು; ಹಾಗೆ ಹೇಳುವದರಿಂದ ಸಿದ್ಧೋಪಾಯನೂ ಧರ್ಮವೆಂದಾದರೂ, ಸಿದ್ಧೋಪಾಯವೂ ತ್ಯಾಜ್ಯವಾಗುವದಿಲ್ಲವೆಂದು ಹೇಳುವೆವು; ಎಂದರೆ ಅದಕ್ಕೆ ಪುನಃ ಸಮಾಧಾನವನ್ನು ಹೇಳುತ್ತಾರೇನೆಂದರೆ— ಹಾಗಾದರೆ ಈ ಚರಮ ಶ್ಲೋಕದಲ್ಲಿ **ಮಾಮೇಕಂ ಶರಣಂವ್ರಜ** ಎಂದು ಶರಣಾಗತಿರೂಪ ಧರ್ಮವು ಹೇಳಲ್ಪಟ್ಟಿರುವದರಿಂದ ನಿಮ್ಮ ವಾದಕ್ಕೆ ಸಮಾನವಾಗಿ ಅದನ್ನು ಬಿಟ್ಟು ಮಿಕ್ಕ ಧರ್ಮಗಳೆಲ್ಲಾ ತ್ಯಾಜ್ಯಗಳೆಂದು ನಾವು ಹೇಳುವೆವು ಎಂಬುದಾಗಿ "ಇವ್ವಾಕ್ಯತ್ತಿಲ್" ಎಂಬ ವಾಕ್ಯದಿಂದ ತಿಳಿಸುತ್ತಾರೆ. **ಇವ್ವಾಕ್ಯತ್ತಿಲ್** - ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂವ್ರಜ ಎಂಬ ವಾಕ್ಯದಲ್ಲಿ, **ಪ್ರತಿಪಾದ್ಯಮಾನ ಧರ್ಮತ್ತೈ** - ಪ್ರತಿಪಾದಿಸಲ್ಪಟ್ಟ ಧರ್ಮವನ್ನು, **ಒಳಿನ್ತು** - ಬಿಟ್ಟು ಮಿಕ್ಕ, **ಧರ್ಮಙ್ಗಳನ್ನೋ** - ಕರ್ಮಾನುಷ್ಠಾನಗಳನ್ನಲ್ಲವೋ, **ತ್ಯಾಜ್ಯಙ್ಗಳಾವನ ವೆನ್ನಿಲ್** - ತ್ಯಾಜ್ಯಗಳಾಗಿ ಹೇಳಿರುವುವು ಎಂದು ಒಂದು ವೇಳೆ ಸಮಾಧಾನ ಹೇಳಿದರೆ, **ಇಙ್ಗು ವಿಹಿತೈಯಾನ** - ಈ ವಾಕ್ಯದಲ್ಲಿ ಶರಣಂ ವ್ರಜ ಎಂಬುದಾಗಿ ವಿಧಿಸಿರುವ, **ಶರಣಾಗತಿಯಿಲುಮ್** - ಪ್ರಪತ್ತ್ಯನುಷ್ಠಾನದಲ್ಲೂ, **ತುಲ್ಯಮ್** - ಸಮಾನವು; **ಸರ್ವಧರ್ಮಾನ್ ಪರಿತ್ಯಜ್ಯ** ಎಂಬಲ್ಲಿ ಸರ್ವಶಬ್ದಕ್ಕೆ ಸಂಕೋಚವಿಲ್ಲದೆ ಅನ್ವಯಿಸಿ, ಎಲ್ಲಾ ಧರ್ಮಗಳನ್ನೂ ಬಿಡತಕ್ಕದ್ದೆಂದು ಹೇಳುವದಾದರೆ, **ಕೃಷ್ಣಂ ಧರ್ಮಂ ಸನಾತನಂ** ಎಂಬಲ್ಲಿ ಸಿದ್ಧೋಪಾಯನಾದ ಸರ್ವೇಶ್ವರನೂ ಕೂಡ ಸಿದ್ಧೋಪಾಯ ಶೋಧನಾಧಿಕಾರದಲ್ಲಿ ಧರ್ಮವೆಂದು ಸ್ಥಾಪಿತನಾಗಿರುವದರಿಂದಲೂ, ಅಲ್ಲಿ ಧರ್ಮಶಬ್ದವು ಔಪಚಾರಿಕವಲ್ಲದೆ ಮುಖ್ಯಾರ್ಥವನ್ನೇ ಉಳ್ಳದೆಂದು ವ್ಯಕ್ತಪಡಿಸುವದರಿಂದಲೂ (ನೆಯ ಪುಟವನ್ನು ನೋಡಿ) ಉಪಾಸನಾದಿಗಳೈಪ್ಪೋಲೆ ಎಂಬಾರಂಭಿಸುವ ವಾಕ್ಯಮೂಲಕ ಸಿದ್ಧೋಪಾಯನನ್ನೂ ಬಿಡಬೇಕೆಂದಾಗುವದರಿಂದ, ಪ್ರತಿಕಕ್ಷಿಗಳ ಅಭಿಪ್ರಾಯವು ಸರಿಯಲ್ಲವೆಂದು ಹೇಳುವದಕ್ಕೆ ಸಮಾಧಾನವಾಗಿ ಎಲ್ಲಾ ಧರ್ಮವು ಎಂದು ಅರ್ಥ ಮಾಡತಕ್ಕದ್ದಲ್ಲದೆ, ಆ ವಾಕ್ಯದಲ್ಲಿ ಹೇಳಲ್ಪಟ್ಟ ಧರ್ಮವನ್ನು ಬಿಟ್ಟು ಇತರ ಎಲ್ಲಾ ಧರ್ಮಗಳನ್ನೂ ತ್ಯಜಿಸತಕ್ಕದ್ದೆಂದು ಅರ್ಥ ಹೇಳಬೇಕು; ಆಗ **ಕೃಷ್ಣಂ**

ಧರ್ಮಂ ಸನಾತನಂ ಎಂಬ ವಾಕ್ಯದಲ್ಲಿ ಹೇಳಲ್ಪಟ್ಟ ಸಿದ್ಧೋಪಾಯನು ತ್ಯಾಜ್ಯನಾಗುವದಿಲ್ಲವು **ಮಾಮೇಕಂ ಶರಣಂವ್ರಜ** ಎಂಬಲ್ಲಿ ಸಿದ್ಧೋಪಾಯನೇ ಹೇಳಲ್ಪಟ್ಟನೆಂದು ಪೂರ್ವಪಕ್ಷವನ್ನು ತಂದರೆ, ಇದಕ್ಕೆ ಸಮಾಧಾನವಾಗಿ **ಶರಣಂವ್ರಜ** ಎಂಬುದರಿಂದ ಸಾಧ್ಯೋಪಾಯವಾದ ಪ್ರಪತ್ತಿಯು ಹೇಳಲ್ಪಟ್ಟು **ಸರ್ವಧರ್ಮಾನ್ ಪರಿತ್ಯಜ್ಯ** ಎಂಬಲ್ಲಿ ಈ ಶರಣಾಗತಿಯನ್ನು ಬಿಟ್ಟು ಮಿಕ್ಕ ಎಲ್ಲಾ ಧರ್ಮವನ್ನೂ ಬಿಡತಕ್ಕದ್ದೆಂದು ನಿಮ್ಮ ಅಭಿಪ್ರಾಯಕ್ಕೆ ಸಮಾನವಾಗಿ ನಾವೂ ಹೇಳುವೆವು ಆದುದರಿಂದ ಪ್ರಪತ್ತಿಯು ಸಾಧನತ್ವರೂಪದಲ್ಲಿಯಾಗಲಿ, ಸಿದ್ಧಸಾಧನಕ್ಕೆ ಸಹಕಾರಿ ರೂಪದಲ್ಲಿಯಾಗಲಿ, ಧರ್ಮವಾಗುವದರಿಂದ ತ್ಯಾಜ್ಯವೆಂಬ ನಿಮ್ಮಗಳ ಅಭಿಪ್ರಾಯವು ಸಮಂಜಸವಲ್ಲವೆಂಬ ಭಾವವು.

ಸಿದ್ಧೋಪಾಯ ವಿಷಯದಲ್ಲಿ ಭಕ್ತಿ ಪ್ರಪತ್ತಿಗಳು ಹೇಗೆ ಉಪಕಾರಕಗಳು ?

ಇನ್ನೊಂದು ಪೂರ್ವಪಕ್ಷವೇನೆಂದರೆ:—ಸಿದ್ಧೋಪಾಯನು ನಿತ್ಯನು, ಹೀಗಿರುವಾಗ ಆ ಸಿದ್ಧೋಪಾಯನನ್ನೇನಾದರೂ ಈ ಸಾಧ್ಯೋಪಾಯಗಳು ಉಂಟುಮಾಡಬೇಕೇ? ಏನೂ ಇಲ್ಲವು; ಹೀಗಿರುವಾಗ ಸಾಧ್ಯೋಪಾಯಗಳ ಅಪೇಕ್ಷೆ ಏತಕ್ಕೆ ?

ಸಿದ್ಧೋಪಾಯನಿಗೆ ಉಪಚಯಾಪಚಯಗಳು ಎಂದರೆ ವೃದ್ಧಿ ಹ್ರಾಸಗಳು ಇಲ್ಲವು ಹೀಗಿರುವಾಗ ಈ ಸಾಧ್ಯೋಪಾಯಗಳೇನು ಸಿದ್ಧೋಪಾಯಕ್ಕೆ ವರ್ಧಕವೇ? ಹಾಗಲ್ಲದ ಪಕ್ಷದಲ್ಲಿ ಸಾಧ್ಯೋಪಾಯಗಳ ಅಪೇಕ್ಷೆ ಏತಕ್ಕೆ ?

ಸಿದ್ಧೋಪಾಯನು ಸರ್ವಜ್ಞ ಸಹಜಕಾರುಣ್ಯ ಪರಿಪೂರ್ಣನು, ಹೀಗಿರುವಾಗ ಅವನಿಗೆ ಯಾವ ಸಹಕಾರಿಯ ಆವಶ್ಯಕತೆಯೂ ಇಲ್ಲವು ಈ ಸಾಧ್ಯೋಪಾಯಗಳು ಸಹಕಾರಿಯಲ್ಲದ ಪಕ್ಷದಲ್ಲಿ ಅವುಗಳಪೇಕ್ಷೆ ಏತಕ್ಕೆ ?

ಸಿದ್ಧೋಪಾಯನು ಸತ್ಯಸಂಕಲ್ಪನು, ಯಾವುದರ ದ್ವಾರಾ ಇಲ್ಲದೆ ಸ್ವತಂತ್ರನಾಗಿ ಸಂಕಲ್ಪಿಸುವ ಶಕ್ತಿಯುಳ್ಳವನು. ಇಂತಹನು ಸಾಧ್ಯೋಪಾಯಗಳ ದ್ವಾರಾ ಸಿದ್ಧೋಪಾಯನಾಗಬೇಕೇ? ಹಾಗಿಲ್ಲದ ಪಕ್ಷದಲ್ಲಿ ಈ ಸಾಧ್ಯೋಪಾಯಗಳ ಆವಶ್ಯಕತೆ ಏನು ? ಇತ್ಯಾದಿ ಪೂರ್ವಪಕ್ಷಗಳನ್ನು ಮುಂದೆ ಅನುವಾದ ಮಾಡಿ ಇನ್ನ್ಯ **ಅನಾದಿಮಾನ** ಎಂಬ ವಾಕ್ಯಮೂಲಕ ಸಮಾಧಾನವನ್ನು ಹೇಳುತ್ತಾರೆ. ಹೇಗೆ ಉಪಕಾರಕವೆಂದರೆ, ಈ ಚೇತನನು ಮಾಡಿರುವ ಅನಂತಾಪರಾಧಗಳಿಂದ ಭಗವನ್ನಿಗ್ರಹಕ್ಕೆ ಗುರಿಯಾಗಿರುತ್ತಾನೆ ಈ ಸಾಧ್ಯೋಪಾಯಗಳು ಅಂತಹ ನಿಗ್ರಹವನ್ನು ಶಮನಮಾಡಿ, ಅನುಗ್ರಹ ಸಂಪಾದಕಗಳಾಗುತ್ತವೆ; ಆದುದರಿಂದ ಆವ

ಭಕ್ತೇಃ ಪ್ರಪತ್ತ್ಯೋಃ ಸಿದ್ಧೋಪಾಯೋಪಕಾರಕತ್ವಂ

ಉಪಾಸನಾದಿಗಳೈಪ್ಪೋಲೆ ತನಕ್ಕು ಉತ್ಪಾದಕ ಮಾಗವಾದಲ್, ವರ್ಧಕಮಾಗವಾದಲ್, ಸಹಕಾರಿಯಾಗವಾದಲ್, ದ್ವಾರಮಾಗವಾದಲ್, ಒನ್ರಾಲಪೇಕ್ಷೈ ಯರುಮ್ಪಡಿ, ನಿತ್ಯಮಾಯ್, ಉಪಚಯಾಪಚಯ ರಹಿತಮಾಯ್, ಸರ್ವದಾ ಪರಿಪೂರ್ಣಮಾನ ಸಹಜ ಕಾರುಣ್ಯಾದಿಗಳೈ ಯುಡೈತ್ತಾಯ್, ಸಙ್ಕಲ್ಪ ಮುಂಡಾನಪೋದುದ್ವಾರ ನಿರಪೇಕ್ಷಮಾಗ ಕಾರ್ಯಂ ಪಿರುಕ್ಕುಮ್ಪಡಿ ಸತ್ಯಸಙ್ಕಲ್ಪಮಾಯ್ ಇರುಕ್ಕಿರ ಸಿದ್ಧೋ-

---

ಶ್ಯಕವೆಂದು ಹೇಳುತ್ತಾರೆ. ಇವುಗಳು ಸಿದ್ಧೋಪಾಯಕ್ಕೆ ಉತ್ಪಾದಕಗಳಾಗಲಿ, ವರ್ಧಕಗಳಾಗಲಿ, ಸಹಕಾರಿಗಳಾಗಲಿ, ದ್ವಾರಗಳಾಗಲಿ ಅಲ್ಲವು. ಪುನಃಪುನಃ ಸಂಸಾರ ಬಂಧಕ್ಕೆ ಹೇತು ಭೂತವಾದ ಸರ್ವೇಶ್ವರನ ನಿಗ್ರಹವನ್ನು ತಪ್ಪಿಸಿ, ಅನುಗ್ರಹವನ್ನು ಸಂಪಾದಿಸಿ ಕೊಡುತ್ತವೆಂದು ಹೇಳುತ್ತಾರೆ.

ಉಪಾಸನಾದಿಗಳೈಪ್ಪೋಲೆ - ಉಪಾಸನಾದಿಗಳ ಹಾಗೆ. ಇದು ವ್ಯತಿರೇಕ ದೃಷ್ಟಾಂತವು. ಹೇಗೆ ವ್ಯತಿರೇಕವೆಂಬುದು ಮುಂದೆ ವ್ಯಕ್ತಪಡಿಸಲ್ಪಡುತ್ತದೆ, ತನುಕ್ಕು - ಸಿದ್ಧೋಪಾಯನಾದ ಸರ್ವೇಶ್ವರನಿಗೆ, ಉತ್ಪಾದಕ ಮಾಗವಾದಲ್ - ಉಂಟು ಮಾಡುವವನಾಗಿಯಾಗಲಿ ವರ್ಧಕಮಾಗಿಯಾದಲ್ - ಅಭಿವೃದ್ಧಿ ಮಾಡುವವನಾಗಿಯಾಗಲಿ, ಸಹಕಾರಿಯಾಗವಾದಲ್ - ಸಹಾಯ ಮಾಡುವ ದಾಗಿಯಾಗಲಿ, ದ್ವಾರಮಾಗವಾದಲ್ - ಈ ಉಪಾಯಗಳ ಮೂಲಕವಾಗಿ ಯಾಗಲಿ, ಒನ್ರಾಲಪೇಕ್ಷೈಯರುಂಬಡಿ - ಹೀಗೆ ಯಾವದೊಂದು ವಿಧವಲ್ಲೂ ಅಪೇಕ್ಷೆ ಇಲ್ಲದಿರುವ ಹಾಗೆ, ನಿತ್ಯಮಾಯ್ - ತಾನು ನಿತ್ಯನಾಗಿ ಆ ಕಾರಣದಿಂದ ಯಾವ ಉತ್ಪಾದಕದ ಅಪೇಕ್ಷೆಯೂ ಬೇಡದವನಾಗಿ. ಉಪಚಯಾಪಚಯ ರಹಿತಮಾಯ್ - ವೃದ್ಧಿ ಕ್ಷಯಗಳಿಲ್ಲದಿರುವದರಿಂದ ಯಾವುದರಿಂದಲೂ ವರ್ಧಕಾಪೇಕ್ಷೆಯಿಲ್ಲದವನಾಗಿ, ಸರ್ವದಾ ಪರಿಪೂರ್ಣಮಾನ ಸಹಜ ಕಾರುಣ್ಯಾದಿ ಗಳೈ ಯುಡೈತ್ತಾಯ್ - ಯಾವಾಗಲೂ ಸಹಜಕಾರುಣ್ಯಪರಿಪೂರ್ಣನಾಗಿ ಕರುಣಾದ್ಯಾಗಿರುವದರಿಂದ ಯಾವುದರ ಸಹಾಯಾಪೇಕ್ಷೆಯೂ ಇಲ್ಲದವನಾಗಿ, ಸಙ್ಕಲ್ಪಮುಂಡಾನಪೋದು ದ್ವಾರನಿರಪೇಕ್ಷಮಾಗ ಕಾರ್ಯಂ ಪಿರುಕ್ಕುಂಪಡಿ ಸತ್ಯಸಙ್ಕಲ್ಪಮಾಯ್ - ಯಾವಾಗ ತಾನು ಸಙ್ಕಲ್ಪಿಸುತ್ತಾನೋ ಆಗಲೇ ಯಾವುದರ ದ್ವಾರಾ ಇಲ್ಲದೆ ತನ್ನ ಸಙ್ಕಲ್ಪಾನುಸಾರವಾಗಿ ಕಾರ್ಯವು

ಪಾಯತ್ತುಕ್ಕು ಭಕ್ತಿಪ್ರಪತ್ತಿಗಳ್ ಎವ್ವಾಕಾರತ್ತಾಲೆ ಉಪಕಾರಕಙ್ಗಳಾಗಿರನ ವೆನ್ನಿಲ್, ಇನ್ನೈಯುನಾದಿಯಾನ ಅಪಚಾರ ಪರಂಪರೈಯಾಲೇ ಉತ್ಪನ್ನಮಾಯ್ ಸಂಸಾರ ಹೇತುವಾಯ್ಕ್ಕಿಡಕ್ಕಿರ ನಿಗ್ರಹತ್ತೈ ಶಮಿಪ್ಪಿತ್ತುಕೊಂಡು ಉಪಕರಿಕ್ಕಿರನ. ಇನ್ನೈ ಫಲಾಂತರತ್ತುಕ್ಕು ಉಪಾಯ

ನಡೆಯುವಹಾಗೆ ಸತ್ಯಸಙ್ಕಲ್ಪನಾಗಿ, ಇರುಕ್ಕಿರ ಸಿದ್ಧೋಪಾಯತ್ತುಕ್ಕು - ಇರುವ ಸಿದ್ಧೋಪಾಯನಿಗೆ, ಭಕ್ತಿ ಪ್ರಪತ್ತಿಗಳು, ಎವ್ವಾಕಾರತ್ತಾಲೇ ಉಪಕಾರಕಗಳಾಗಿರನ ಎನ್ನಿಲ್ - ಯಾವ ರೀತಿಯಲ್ಲಿ ಉಪಕಾರಗಳಾಗುತ್ತವೆ ಎಂದರೆ, ಇನ್ನೈ - ಈ ಸಾಧ್ಯೋಪಾಯಗಳಾದ, ಭಕ್ತಿಪ್ರಪತ್ತಿಗಳು, ಅಪಚಾರ ಪರಂಪರೈಯಾಲೆ - ಭಗವಂತನ ವಿಧಿ ನಿಷೇದವಾಕ್ಯಗಳಿಗೆ ವಿರೋಧನಾಗಿ ನಡೆದು ಮಾಡಿದ ಅಕೃತ್ಯಕರಣ ಕೃತ್ಯಾಕರಣ ರೂಪಗಳಾದ ಪಾಪಸಮೂಹಗಳಿಂದ, ಉತ್ಪನ್ನಮಾಯ್ - ಉಂಟಾದ, ಸಂಸಾರ ಹೇತುವಾಯ್ ಕಿಡಕ್ಕಿರ - ಪುನಃ ಪುನಃ ಬಂಧಕಗಳಾಗಿ ಜನ್ಮ ಪರಂಪರೆಗಳನ್ನು ಎತ್ತುವುದಕ್ಕೆ ಕಾರಣಭೂತವಾಗಿರುವ, ನಿಗ್ರಹತ್ತೈ - ಭಗವಂತನ ಕೋಪರೂಪವಾದ ನಿಗ್ರಹವನ್ನು, ಶಮಿಪ್ಪಿತ್ತುಕೊಂಡು - ಶಮನಮಾಡಿ, ಉಪಕರಿಕ್ಕಿರನ ಉಪಕಾರಕಗಳಾಗುತ್ತವೆ. ಉಪಾಸನಾದಿಗಳೈಪ್ಪೋಲೆ ಎಂಬುದು ವ್ಯತಿರೇಕ ದೃಷ್ಟಾಂತ ಹೇಗೆ ಎಂದರೆ, ಉಪಾಸನವು ಕರ್ಮಯೋಗಾದಿಗಳಿಂದ ಉತ್ಪಾದ್ಯವು, ಅಹರಹರನುಷ್ಠಿಸಲ್ಪಟ್ಟ ಅಭ್ಯಾಸದಿಂದ ವರ್ಧಿತವು, ನಿತ್ಯ ನೈಮಿತ್ತಿಕ ಕರ್ಮಗಳ ಸಹಕಾರಿಯನ್ನಪೇಕ್ಷಿಸುವಂತಾದ್ದು ಸರ್ವೇಶ್ವರದ್ವಾರಾ ಫಲಪ್ರದವು, ಅದು ಸಿದ್ಧೋಪಾಯನಿಗೆ ಉಪಾಸನೆಗೆ ಇರುವಹಾಗೆ ಉತ್ಪಾದಕವಿಲ್ಲವು ಇತ್ಯಾದಿ

ಮೋಕ್ಷಪ್ರಾಪ್ತಿಗಾಗಿ ಮುಮುಕ್ಷುವು ಮಾಡುವ ಉಪಾಯಾನುಷ್ಠಾನವು ಭಗವನ್ನಿಗ್ರಹವನ್ನೇನೋ ಶಮನ ಮಾಡುತ್ತದೆಂದು ಒಪ್ಪಿಕೊಳ್ಳೋಣ, ಮುಮುಕ್ಷುವಲ್ಲದೆ ಇತರರು ಸ್ವರ್ಗಾದಿ ಫಲಾಂತರಕ್ಕಾಗಿ ಮಾಡುವ ಉಪಾಯಾನುಷ್ಠಾನಗಳಲ್ಲಿ ಅಂತಹ ಭಗವನ್ನಿಗ್ರಹಕ್ಕೆ ಕಾರಣವಿಲ್ಲವಲ್ಲಾ, ಆಗ ಈ ಸಾಧ್ಯೋಪಾಯಗಳು ಹೇಗೆ ಉಪಕಾರಕಗಳು ಎಂದರೆ "ಇನ್ನೈ ಫಲಾಂತರತ್ತುಕ್ಕು" ಎಂದಾರಂಭಿಸಿದ ವಾಕ್ಯದಿಂದ ಹೇಳುತ್ತಾರೆ:—ನಿಗ್ರಹಕ್ಕೇನೋ ಕಾರಣವಿಲ್ಲವು, ಅನುಗ್ರಹಕ್ಕೆ ಕಾರಣವಾಗಕೂಡದೋ? ಆದುದರಿಂದ ಭಗವತ್ಪ್ರೀತಿಜನಕವಾಗಿ ಆ ಮೂಲಕ ಈ ಸಾಧ್ಯೋಪಾಯಗಳು ಉಪಕಾರಕಗಳಾಗಬಹುದು ಎಂದು ಹೇಳುತ್ತಾರೆ. ಇನ್ನೈ - ಈ ಉಪಾಯಗಳಾದ ಭಕ್ತಿ ಪ್ರಪತ್ತಿಗಳು, ಫಲಾಂತರ

ಮಾಂಸ್ತೋದು ಜ್ಯೋತಿಷ್ಟೋಮಾದಿಗಳ್ಕ್ಕು ಪ್ಪೋಲೆ ತತ್ತದನುಗುಣ ಪ್ರೀತಿ ವಿಶೇಷಙ್ಗಳ್ಕ್ಕು ಉತ್ಪಾದಿತ್ತು ಕ್ಕೊಂಡು ಅಮ್ಮುಖತ್ತಾಲೆ ಉಪಕಾರಕಙ್ಗಳಾಮ್.

ತ್ತುಕ್ಕು - ಮೋಕ್ಷೇತರವಾದ ಐಶ್ವರ್ಯ ಸ್ವರ್ಗಭೋಗಾದಿಗಳಿಗೆ, **ಉಪಾಯ ಮಾಂಸ್ತೋದು** - ಉಪಾಯಗಳಾಗುವಾಗ, ಜ್ಯೋತಿಷ್ಟೋಮಾದಿಗಳಹಾಗೆ, **ತತ್ತದನುಗುಣ ಪ್ರೀತಿ ವಿಶೇಷಙ್ಗಳ್ಕ್ಕು**-ಆಯಾ ಫಲಗಳಿಗೆ ಬೇಕಾದ ಪ್ರೀತಿ ವಿಶೇಷಗಳನ್ನು, **ಉತ್ಪಾದಿತ್ತುಕೊಂಡು** - ಉಂಟುಮಾಡಿಕ್ಕೊಂಡು, **ಅಮ್ಮುಖತ್ತಾಲೆ** - ಆ ಮೂಲಕವಾಗಿ, **ಉಪಕಾರಕಙ್ಗಳಾಮ್** - ಸಹಾಯಕಗಳಾಗಬಹುದು. ಸಾಧ್ಯೋಪಾಯಗಳಿಂದ ಆಗತಕ್ಕ ಉಪಕಾರಗಳು ಎರಡು ವಿಧವು (೧) ಅನಿಷ್ಟ ನಿವೃತ್ತಿಯು. (೨) ಇಷ್ಟಪ್ರಾಪ್ತಿಯು ; ಮುಮುಕ್ಷುವಿನ ವಿಷಯದಲ್ಲಿ ಇಷ್ಟಪ್ರಾಪ್ತಿಗೆ ಅನಿಷ್ಟ ನಿವೃತ್ತಿಯು ಎಂದರೆ ಭಗವನ್ನಿಗ್ರಹರೂಪ ಪ್ರತಿಬಂಧಕ ನಿವೃತ್ತಿಯು ಅತ್ಯಾವಶ್ಯಕವು ಈ ಸಾಧ್ಯೋಪಾಯಗಳು ಈ ಎರಡು ಫಲಗಳನ್ನೂ ಉಂಟುಮಾಡುತ್ತವೆ. ಆದರೆ ಮುಮುಕ್ಷುವಲ್ಲದೆ, ಸ್ವರ್ಗೈಶ್ವರ್ಯಾದಿ ಫಲಗಳನ್ನು ಅಪೇಕ್ಷಿಸುವವನಿಗೆ ಪ್ರತಿಬಂಧಕ ನಿವೃತ್ತಿಯು ಆವಶ್ಯಕವಿಲ್ಲದುದರಿಂದ, ಭಗವತ್ಪ್ರೀತಿ ಅನುಗ್ರಹಗಳಿಗೆ ಮಾತ್ರವೇ ಸಂಪಾದಕಗಳಾಗಿ ಈ ಸಾಧ್ಯೋಪಾಯಗಳು ಉಪಕಾರಕಗಳೆಂಬ ತಾತ್ಪರ್ಯವು. ಮೋಕ್ಷಕ್ಕಾಗಿ ಸಾಧ್ಯೋಪಾಯಗಳನ್ನನುಷ್ಠಿಸುವವನಿಗೂ ಕೂಡ ಈತನು ಅಪೇಕ್ಷಿಸದಿದ್ದರೂ ಐಹಿಕ ಭೋಗಗಳನ್ನೂ, ಪ್ರಿಯೋಹಿ ಜ್ಞಾನಿನೋಽತ್ಯರ್ಥಂ ಅಹಂ ಎಂದು ಹೇಳಿರುವ ಹಾಗೆ ತನ್ನ ಪ್ರಿಯಭಕ್ತನಿಗೆ ಕುಚೇಲಾದಿಗಳಿಗೆ ಕೊಟ್ಟ ಹಾಗೆ ಐಹಿಕ ಭೋಗಗಳನ್ನು ಸಹ ಕೊಡಬಹುದು. ದೇಹಾವಸಾನದಲ್ಲಿ ಮೋಕ್ಷವನ್ನು ಪ್ರಾರ್ಥಿಸಿರುವುದರಿಂದ ಸ್ವರ್ಗಾದಿ ಲೋಕಗಳ ಭೋಗಗಳನ್ನು ಕೊಡುವುದಿಲ್ಲವು. ಏಕೆಂದರೆ ಅವುಗಳು ಬಂಧಕಗಳಾದುದರಿಂದ ಕೊಡುವುದಿಲ್ಲವು. ಮೋಕ್ಷೇತರ ಫಲಾರ್ಥಿಗಳಾದರೋ ಈ ಸಾಧ್ಯೋಪಾಯಗಳನ್ನು ಮಾಡಿಕೊಂಡು ತತ್ತದಿಷ್ಟಾನುಸಾರ ಫಲಗಳನ್ನು ಅನುಗ್ರಹಿಸುವನು ಎಂಬ ತಾತ್ಪರ್ಯವು. ಅಂತೂ ಈ ಎಲ್ಲಾ ಸಂದರ್ಭಗಳಲ್ಲಿ ಸಾಧ್ಯೋಪಾಯಗಳ ಆವಶ್ಯಕತೆಯು ತಪ್ಪುವುದಿಲ್ಲವು. ಆದುದರಿಂದಲೇ ಗೀತೆಯಲ್ಲಿ (೧) **ಚತುರ್ವಿಧಾ ಭಜಂತೇಮಾಂ ಜನಾಸ್ಸುಕೃತಿನೋಽರ್ಜುನ । ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀಚ ಭರತರ್ಷಭ ॥** ಎಂದು (ಗೀ. ೭ ೧೬ನಲ್ಲಿ) ಸಾಧ್ಯೋಪಾಯಗಳ ಆವಶ್ಯಕತೆಯು ಹೇಳಲ್ಪಟ್ಟಿದೆ. ಇಲ್ಲಿ

ಈ ಭಕ್ತಿ ಪ್ರಪತ್ತಿಗಳಿಂದ (ಭಕ್ತಿ ನಿಷ್ಠೆಯಿಂದ)
ಮೋಕ್ಷಕ್ಕೋಸ್ಕರ ಅಲ್ಲ ಫಲಾಂತರಗಳಿಗೂ ಉಪಯೋಗಗಳಿಗೆ.

ಮೋಕ್ಷ ಫಲಪ್ರದತ್ವೇ ಸಿದ್ಧೋಪಾಯ ಸಾಧ್ಯೋಪಾಯಯೋಃ ಉಪಕಾರಃ.

ಮುಮುಕ್ಷುವುಕ್ಕು ಸಾಧ್ಯೋಪಾಯಙ್ಗಳಾಗಿರ ವ್ಯಾಜಮಾತ್ರತ್ತಾಲೆ ಶಾಂತ ನಿಗ್ರಹನಾನ ಸಿದ್ಧೋಪಾಯಮ್ ನಿಗ್ರಹಫಲಮಾನ ಜ್ಞಾನಸಙ್ಕೋಚಾದಿಗಳೈ ಕಳೈತ್ತು ಪರಿಪೂರ್ಣ ಕೈಙ್ಕರ್ಯ ಪರ್ಯಂತ ಫಲತ್ತೈ ಕೊಡುತ್ತು ಯಥಾಪದಾತ್ಮಭಾವಿನಾಗ ಉಪಕರಿಕ್ಕುಮ್.

ಜ್ಞಾನಿಯು ಮಾತ್ರ ಮುಮುಕ್ಷುವು. ಮಿಕ್ಕ ಮೂವರು ಫಲಾಂತರಾಪೇಕ್ಷಿಗಳು. ಸಾಧ್ಯೋಪಾಯವಾದ ಭಜನವು ಉಪಾಸನಾರೂಪವಾದುದು.

ಆದರೆ ಇಲ್ಲಿ ಸಾಧ್ಯೋಪಾಯವು ಫಲಪ್ರದವೇ? ಸಿದ್ಧೋಪಾಯವು ಫಲಪ್ರದವೇ? ಸಾಧ್ಯೋಪಾಯ ಸಿದ್ಧೋಪಾಯಗಳೆರಡೂ ಸೇರಿ ಫಲಪ್ರದವೇ? ಎಂದು ವಿಕಲ್ಪಿಸಿದರೆ, ಒಂದೊಂದೇ ಫಲಪ್ರದವೆಂದರೆ ಮತ್ತೊಂದು ನಿರರ್ಥಕವಾಗುತ್ತದೆ. ಆದರೆ ಈಗ ಸಾಧ್ಯೋಪಾಯವು ಅವಶ್ಯಕವೆಂದು ಹೇಳಿದನಂತರ ಸಿದ್ಧೋಪಾಯವು ನಿರರ್ಥಕವೆಂದಾಗುತ್ತದೆ. ಇವೆರಡರಲ್ಲಿ ಸಿದ್ಧೋಪಾಯವೇ ಪ್ರಧಾನವಾದುದಾಗಿ, ಸಿದ್ಧೋಪಾಯ ಶೋಧನಾಧಿಕಾರದಲ್ಲಿ ಅದರ ಅವಶ್ಯಕತೆಯು ಹಿಂದೆಯೇ ಉಪಪಾದಿತವಾಗಿರುತ್ತದೆ. ಆದುದರಿಂದ ಎರಡೂ ಅವಶ್ಯಕವೆಂದು ಹೇಳಿದಂತೇ ಆಯಿತು. ಹಾಗೆ ಎರಡೂ ಅವಶ್ಯಕವಾದರೆ ಈ ಫಲಪ್ರದತ್ವದಲ್ಲಿ ಸಾಧ್ಯೋಪಾಯ ಕೃತ್ಯವು ಎಷ್ಟರಮಟ್ಟಿಗೆ, ಸಿದ್ಧೋಪಾಯಕೃತ್ಯವು ಎಷ್ಟರಮಟ್ಟಿಗೆ ಎಂಬುದನ್ನು ವಿಮರ್ಶಿಸಿ ಉಪದೇಶಿಸುತ್ತಾರೆ.

ಮೋಕ್ಷಫಲಕ್ಕೆ ಸಿದ್ಧೋಪಾಯ ಸಾಧ್ಯೋಪಾಯಗಳು ಎಷ್ಟರಮಟ್ಟಿಗೆ ಉಪಕಾರಕಗಳು.

ಮುಮುಕ್ಷುವುಕ್ಕು-ಮೋಕ್ಷಾರ್ಥಿಗೆ, ಸಾಧ್ಯೋಪಾಯಙ್ಗಳಾಗಿರುವ, ವ್ಯಾಜಮಾತ್ರತ್ತಾಲೆ - ನೆಪಮಾತ್ರದಿಂದ, ಶಾಂತನಿಗ್ರಹನಾನ ಸಿದ್ಧೋಪಾಯಮ್- ಅನಂತಾಪರಾಧ ಮಾಡಿದುದರಿಂದ ಇದುವರೆಗೂ ಭಗವನ್ನಿಗ್ರಹಕ್ಕೆ ಗುರಿಯಾದುದು ತಪ್ಪಿ ನಿಗ್ರಹ ಮಾಡಬೇಕೆಂಬುದು ಶಮನವಾದ ಸಿದ್ಧೋಪಾಯನು, ಜ್ಞಾನಸಙ್ಕೋಚಾದಿಗಳೈ ಕಳೈತ್ತು - ಇವನಿಗೆ ಪ್ರಾಪ್ತವಾಗಿದ್ದ ಜ್ಞಾನಸಙ್ಕೋಚವು ತಪ್ಪಿ, ಪರಿಪೂರ್ಣ ಬ್ರಹ್ಮಾನುಭವವೇನು, ಸರ್ವೇಶ್ವರನಿಗ ಮಾಡುವ ವಿವಿಧ ಕೈಙ್ಕರ್ಯಗಳೇನು, ಅವುಗಳ ಪರ್ಯಂತವಾದ ಫಲವನ್ನು,

ಕೊಡುತ್ತಾ ಕೊಟ್ಟು, ಯಾವದಾತ್ಮಭಾವಿಯಾಗ - ಆತ್ಮನು ನಿತ್ಯನಾದುದರಿಂದ ಮುಂದೆ ಇರುವ ಕಾಲದಲ್ಲಿಯೂ, ಉಪಕರಿಕ್ಕುಮ್ - ಅನುಗ್ರಹಿಸುತ್ತಾನೆ; ಸಾಧ್ಯೋಪಾಯಗಳು ಜಡಗಳಾದುದರಿಂದ ಅವುಗಳು ಸಾಕ್ಷಾತ್ತಾಗಿ ಫಲಪ್ರದಗಳಲ್ಲವು. ಅವು ನಿಮಿತ್ತಮಾತ್ರವು; ಪರಮೇಶ್ವರನು ಈ ಭಕ್ತಿ ಪ್ರಪತ್ತಿ ರೂಪ ಉಪಾಯಾನುಷ್ಠಾನಮಾಡಿದವರಿಗೇನೆ ಮೋಕ್ಷಕೊಡುವದಾಗಿ ಸಙ್ಕಲ್ಪಿಸಿರುವದರಿಂದ, ಆ ಉಪಾಯಾನುಷ್ಠಾನಗಳು ವ್ಯಾಜಮಾತ್ರಗಳೆಂದು ಹೇಳಲ್ಪಟ್ಟಿವು. ವ್ಯಾಜಗಳಾದರೂ, ಪರಮೇಶ್ವರನು ಹಾಗೆ ವಿಧಿಸಿರುವದರಿಂದ ಅವುಗಳನ್ನು ಅನುಷ್ಠಿಸಲೇಬೇಕು. ಈ ಸಾಧ್ಯೋಪಾಯಾನುಷ್ಠಾನಗಳಿಂದ ಸುಪ್ರೀತನಾದ ಸರ್ವೇಶ್ವರನು ಇವನವರೆಗೂ ನಿಗ್ರಹಿಸಿ ಪುನಃಪುನಃ ಬಂಧನಕ್ಕೆ ಗುರಿಮಾಡಿದವನನ್ನು ಮನ್ನಿಸಿ, ಅನಾದಿಯಾಗುಂಟಾಗಿದ್ದ ಪ್ರಕೃತಿಸಂಬಂಧದಿಂದ ಪ್ರಾಪ್ತವಾದ ಜ್ಞಾನತಿರೋಧಾನವನ್ನು ಹೋಗಲಾಡಿಸಿ, ಪ್ರಕೃತಿ ಸಂಬಂಧವನ್ನು ತಪ್ಪಿಸಿ, **ಸ್ವೇನರೂಪೇಣಾಭಿನಿಷ್ಪದ್ಯತೇ** ಎಂದು ಶ್ರುತಿಯಲ್ಲೂ, **ಸಂಪದ್ಯಾವಿರ್ಭಾವಸ್ಸ್ವೇನಶಬ್ದಾತ್** ಎಂದು ಬ್ರಹ್ಮಸೂತ್ರದಲ್ಲೂ, ಹೇಳಿರುವಹಾಗೆ ಸರ್ವಜ್ಞತೆಯನ್ನು ಹೊಂದಿದವನಾಗಿ, ಭಗವತ್ಕೈಙ್ಕರ್ಯಪ್ರಾಪ್ತಿಯವರೆಗೂ ಹೇಳಿರುವ ಮೋಕ್ಷಫಲವನ್ನು ಹೊಂದಿಸುವನು. ಹೀಗೆ ಈ ಎರಡು ಉಪಾಯಗಳೂ ಆವಶ್ಯಕವು; ಎರಡೂ ಉಪಕಾರಕಗಳೂ ಎಂಬ ತಾತ್ಪರ್ಯವು. ಹೀಗೆ ಅಭಿಪ್ರಾಯಪಡುವದರಿಂದ ಸಾಧ್ಯೋಪಾಯದ ಆವಶ್ಯಕತೆಯೂ ಸಿದ್ಧೋಪಾಯದ ಪ್ರಾಧಾನ್ಯವೂ ಎರಡೂ ಸಾರ್ಥಕ್ಯವನ್ನು ಹೊಂದಿದವು

ಮುಂದೆ ಹೀಗೆ ಅಭಿಪ್ರಾಯಪಟ್ಟರೇನೇ ಶಾಸ್ತ್ರಗಳಲ್ಲಿ ಕೆಲವುಕಡೆ ಸಾಧ್ಯೋಪಾಯಗಳು ಮೋಕ್ಷಪ್ರಾಪ್ತಿಗೆ ಆವಶ್ಯಕವೆಂದೂ, ಇನ್ನು ಕೆಲವು ಕಡೆ ಸಿದ್ಧೋಪಾಯವು ಆವಶ್ಯಕವೆಂದೂ ಹೇಳುವ ಪ್ರಮಾಣಗಳೆರಡೂ ಸುಸಙ್ಗತಗಳೆಂದು ತಿಳಿಸುತ್ತಾರೆ.

ಸಿದ್ಧ ಸಾಧ್ಯೋಪಾಯಗಳನ್ನು ಬೋಧಿಸುವ ಎರಡು ವಿಧ ಪ್ರಮಾಣಗಳೂ ಸುಸಙ್ಗತಗಳು.

ಆಗೈಯಾಲ್ - ಹೀಗೆ ಸಾಧ್ಯೋಪಾಯ ಸಿದ್ಧೋಪಾಯಗಳೆರಡರಿಂದಲೂ ಮೋಕ್ಷಪ್ರಾಪ್ತಿಯೆಂದು ಹೇಳುವದರಿಂದ ಎಂದರೆ ಸಾಧ್ಯೋಪಾಯದಿಂದ ವಶೀಕೃತನಾದ ಸಿದ್ಧೋಪಾಯನಿಂದಲೇ ಮೋಕ್ಷವುಂಟಾಗುತ್ತದೆಂದು ಹೇಳುವದರಿಂದ. ಮುಮುಕ್ಷುವಾನವನ್ಕ್ಕು - ಮೋಕ್ಷಾರ್ಥಿಯು, ಸಮಸ್ತಾನಿಷ್ಟ ನಿವೃತ್ತಿಪೂರ್ವಕವಾಗಿ ಪರಿಪೂರ್ಣ ಬ್ರಹ್ಮಾನುಭವ ತತ್ಕೈಙ್ಕರ್ಯಪ್ರಾಪ್ತಿಯವರೆಗೂ

ಸಿದ್ಧ ಸಾಧ್ಯೋಪಾಯ ಪರೋಭಯ ಪ್ರಮಾಣಾನಿ ಸುಸಙ್ಗತಾನಿ.

ಆಗೈಯಾಲ್ ಮುಮುಕ್ಷುವಿನುಡೈಯ ಸರ್ವಾನಿಷ್ಟ ನಿವೃತ್ತಿ ಪೂರ್ವಕ ಮಾಯ್ ಪರಿಪೂರ್ಣಕೈಙ್ಕರ್ಯ ಪರ್ಯನ್ತಮಾನ ಫಲಪರಂಪರೈಯೆಲ್ಲಾಮ್ ಸಿದ್ಧೋಪಾಯ ಕಾರ್ಯಮೆನ್ನುಮ್, ಪ್ರಸಾದನಮಾನ ಸಾಧ್ಯೋಪಾಯ ಮಡಿಯಾಗ ವರುಗಿರದೆನ್ನುಮ್, ಪ್ರಮಾಣಗಳಿರಣ್ಡುಮ್ ಸುಸಙ್ಗತಙ್ಗಳ್.

ಉಂಟಾಗುವ ಫಲಪರಂಪರೆಗಳೆಲ್ಲಾ, ಸಿದ್ಧೋಪಾಯ ಕಾರ್ಯಮೆನ್ನುಮ್- ಸಿದ್ಧೋಪಾಯನ ಕಾರ್ಯವೆಂದೂ, ಪ್ರಸಾದನಮಾನ - ಭಗವನ್ನಿಗ್ರಹವನ್ನು ಹೋಗಲಾಡಿಸಿ, ಆತನ ಅನುಗ್ರಹವನ್ನು ಸಾಧಿಸಿಕೊಡುವ, ಸಾಧ್ಯೋಪಾಯ ಮಡಿಯಾಗ - ಸಾಧ್ಯೋಪಾಯದ ಮೂಲಕವಾಗಿ, ವರುಗಿರುದೆನ್ನುಮ್ - ಈ ಫಲಪರಂಪರೆಗಳೆಲ್ಲಾ ಬರುತ್ತವೆಂದೂ ಹೇಳುವ, ಪ್ರಮಾಣಗಳಿರಣ್ಡುಮ್ - ಎರಡುವಿಧ ಪ್ರಮಾಣಗಳೂ, ಸುಸಙ್ಗತಙ್ಗಳ್ - ಸಮಂಜಸವಾದವು ಪರಸ್ಪರ ವಿರುದ್ಧವೆಂದಿಗೂ ಅಲ್ಲವು ಎಂಬ ತಾತ್ಪರ್ಯವು.

ಅಂತಹ ಪ್ರಮಾಣಗಳು ಯಾವುವೆಂದರೆ:—

ಸಿದ್ಧೋಪಾಯನೇ ಮೋಕ್ಷಪ್ರದನೆಂಬುದಕ್ಕೆ :—

೧. ಅಮೃತಸ್ಯ ಪರಂ ಸೇತುಮ್. ೨. ಅಮೃತಸ್ಯೈಷಸೇತುಃ ೩. ಸಕಲ ಫಲ ಪ್ರದೋಹಿ ವಿಷ್ಣುಃ ೪ ಅಪವರ್ಗ ಪ್ರದೋಹರಿಃ ೫. ತೇಷಾಮಹಂ ಸಮುದ್ಧರ್ತಾ ಮೃತ್ಯು ಸಂಸಾರ ಸಾಗರಾತ್. ೬. ಯಮೇವೈಷವೃಣುತೇ ತೇನಲಭ್ಯಃ

ಸಾಧ್ಯೋಪಾಯಗಳು ಮುಕ್ತಿಪ್ರದಗಳೆಂಬುವಕ್ಕೆ :—

೧. ನಿಚಾಯ್ಯತಂ ಮೃತ್ಯು ಮುಖಾತ್ಪ್ರಮುಚ್ಯತೇ. ೨. ಜ್ಞಾತ್ವಾದೇವಂ ಮುಚ್ಯತೇ ಸರ್ವ ಪಾಪೈಃ. ೩. ತಮೇವಂ ವಿದ್ವಾನಮೃತ ಇಹ ಭವತಿ. ೪. ಮುಮುಕ್ಷುರ್ವೈ ಶರಣ ಮಹಂ ಪ್ರಪದ್ಯೇ. ೫ ತಂಗಚ್ಛ ಶರಣಂ ಹರಿಂ. ೬ ಮಾಮೇಕಂ ಶರಣಂ ವ್ರಜ ೭. ಮಾಂ ಪ್ರಪನ್ನೋ ವಿಮುಚ್ಯತೇ ೮ ಭಕ್ತ್ಯಾ ಪರಮಯಾ ವಾಪಿ ಪ್ರಪತ್ತ್ಯಾವಾ ಮಹಾಮತೇ । ಪ್ರಾಪ್ಯೋಹಂ ನಾನ್ಯಥಾ ಪ್ರಾಪ್ಯಃ ಮಮ ಕೈಙ್ಕರ್ಯ ಲಿಪ್ಸುಭಿಃ

ಚರಮಶ್ಲೋಕೋ ನವಿಧಿಃ, ಕಿಂತ್ವನುವಾದ ಇತಿ ವಾದಸ್ಯ ಖಂಡನಂ.

೪. ಆನಾಲುಮ್ ಇಪ್ಪ್ರಪತ್ತಿಯಾಗಿರ ಉಪಾಯ ವಿಶೇಷತ್ತೈ ಶಾಸ್ತ್ರಂ

ಹೀಗಿರುವ ಎರಡು ವಿಧ ಪ್ರಮಾಣಗಳೂ ನಮಗೆ ಸಮಂಜಸವೇ. ಸಿದ್ಧೋಪಾಯನೇ ಸರ್ವಫಲಗಳನ್ನೂ ಕೊಡುವವನು. ಆದುದರಿಂದ ಸಿದ್ಧೋಪಾಯನೇ ಸರ್ವ ಫಲಪ್ರದನೆಂಬ ಪ್ರಮಾಣಗಳೇನೋ ಸಮಂಜಸವಾದುವೇ. ಆದರೆ ಸಿದ್ಧೋಪಾಯನು ಸಾಧ್ಯೋಪಾಯಗಳಿಂದ ವಶೀಕೃತನಾಗಿ ಸುಪ್ರೀತನಾಗಿ ಫಲಪ್ರದೋನ್ಮುಖನಾಗುವದರಿಂದ ಸಾಧ್ಯೋಪಾಯಗಳೇ ಫಲಪ್ರದಗಳೆಂಬ ಪ್ರಮಾಣಗಳೂ ಕೂಡ ಸಮಂಜಸವಾದುವೇ ಎಂಬ ತಾತ್ಪರ್ಯವು. ಆದುದರಿಂದ ಪ್ರಪತ್ತಿಯೂ ಒಂದು ಸಾಧ್ಯೋಪಾಯವು ಸಾಧ್ಯೋಪಾಯವಲ್ಲವೆಂಬ ಪೂರ್ವಪಕ್ಷಿಗಳೆಲ್ಲಾ ನಿರಸ್ತವಾದವು.

ಆದಕ್ಕಾಗಿ ಚರಮಶ್ಲೋಕದಲ್ಲಿ **"ಮಾಮೇಕಂ ಶರಣಂ ವ್ರಜ"** ಎಂಬ ವಾಕ್ಯವೇನು ವಿಧಿಯೇ? ಅನುವಾದವೇ? ಎಂದು ವಿಕಲ್ಪಿಸಿ, ಕೆಲವರು ಇದನ್ನು ವಿಧಿವಾಕ್ಯವೆಂದು ಒಪ್ಪುವದಿಲ್ಲವೆಂದೂ ಅನುವಾದಮಾತ್ರವೆಂನೂ ಹೇಳುವರು. ಪ್ರಪತ್ತಿಯು ಅನುಷ್ಠಿಸತಕ್ಕದ್ದೆಂದು ಒಪ್ಪಿದರೂ, ಅಸಮರ್ಥನು ತನ್ನಿಷ್ಟವು ನೆರವೇರುವದಕ್ಕಾಗಿ ಸಮರ್ಥನನ್ನಾಶ್ರಯಿಸುವನೆಂಬುದು ಲೋಕಸಿದ್ಧವಾದುದನ್ನು ವಿಧಿಸಬೇಕೇ? ಯಾವಾಗ ವಿಧಿಯಲ್ಲವೋ ಅನುವಾದ ಮಾತ್ರವೇ ಆಯಿತೋ, ಆಗ ಭಕ್ತಿಸ್ಥಾನದಲ್ಲಿ ಪ್ರಪತ್ತಿಯು ಹೇಳಲ್ಪಟ್ಟಿತೆಂಬುದು ಸರಿಹೋಗುವದಿಲ್ಲವು; ಹೀಗೆ ಪೂರ್ವಪಕ್ಷವನ್ನು ಕೆಲವರು ಮಾಡುತ್ತಾರೆಂದು ಹೇಳಿ, ಅದನ್ನು ನಿರಸನ ಮಾಡುತ್ತಾನೆ. ಪ್ರಪತ್ತಿಯು ಚರಮ ಶ್ಲೋಕದಲ್ಲಿ ವಿಧೇಯವೆಂದು ಒಪ್ಪಿದರೆ ತಾನೇ, ಅದು ಸಾಧ್ಯೋಪಾಯವೆಂದು ಇಲ್ಲಿ ವಿಧಿಸಲ್ಪಟ್ಟಿದೆ ಎಂದು ಹೇಳಬಹುದು. ಹಾಗೆ ವಿಧಿವಾಕ್ಯವೇ ಅಲ್ಲವು ಎಂದು ಪೂರ್ವಪಕ್ಷವು.

ಚರಮಶ್ಲೋಕವು ವಿಧಿವಾಕ್ಯವಲ್ಲವು, ಅನುವಾದ ಮಾತ್ರವೇ ಎಂಬ ವಾದದ ಖಂಡನವು.

---

೪. ಆನಾಲುಮ್ - ಪ್ರಪತ್ತಿಯು ಅವಶ್ಯ ಕರ್ತವ್ಯವೆಂದು ಒಪ್ಪಿದರೂ, ಇಪ್ಪ್ರಪತ್ತಿಯಾಗಿರ ಉಪಾಯವಿಶೇಷತ್ತೈ - ಈ ಪ್ರಪತ್ತಿ ಎಂಬುವ ಉಪಾಯ ವಿಶೇಷವನ್ನು, ಶಾಸ್ತ್ರಂ ವಿಧಿಕ್ಕ ವೇಣಮೋ ? - ಅಧ್ಯಾತ್ಮ ಶಾಸ್ತ್ರವು ವಿಧಿಸಬೇಕೇ? ವಿಧಿಸಬೇಕಾದುದೇನೂ ಇಲ್ಲವೆಂಬ ತಾತ್ಪರ್ಯವು; ಲೋಕತ್ತಿಲ್-

ವಿಧಿಕ್ಕವೇಣುವೋ? ಲೋಕತ್ತಿಲ್ ತನ್ನೈ ರಕ್ಷಿತ್ತುಕ್ಕೊಳ್ಳ ವಿರಗಿಲ್ಲಾದೆ ಯಳುನ್ದುವಾ ನೊರುರ್ವ ಅಪ್ಪೋದು ಸನ್ನಿಹಿತನಾನ ರಕ್ಷಣಸಮರ್ಥನ್ನೈ ಪ್ಪತ್ತು ಮಾಪ್ಪೋಲೆ, ತನ್ನೈಯುಮ್ ಈಶ್ವರನ್ನೈಯುಮ್ ಸಿದ್ಧಪರಮಾನ ಶಾಸ್ತ್ರತ್ತಾಲೆ ತೆಳಿನ್ದಾಲ್, ತಾನೇ ಯವನ್ನೈ ಶರಣಮಾಗಪ್ಪತ್ತಾನೋ? ಆಕೈಯಾಲ್ ಅಕಿಂಚನನುಕ್ಕು ಭಕ್ತಿಸ್ಥಾನತ್ತಿಲೆ ಪ್ರಪತ್ತಿಯೈ ವಿಧಿಕ್ಕಿರದೆನ್ಗ್ಗೆ ಕೂಡಾದೇ? ಎನ್ರು ಶಿಲರ್ ಶೊಲ್ಲುವರ್ಗಳ್.

ಈ ಲೋಕದಲ್ಲಿ, **ತನ್ನೈ ರಕ್ಷಿತ್ತುಕ್ಕೊಳ್ಳ ವಿರಗಿಲ್ಲಾದೇ** - ತನ್ನ ರಕ್ಷಿಸಿಕೊಳ್ಳುವ ಮಾರ್ಗವು ಇಲ್ಲದೇ, **ಅಳುನ್ದುವಾರ್** - ಅಳುವವನು, ಶೋಕಿಸುವವನು, (ಮಾಶುಚಃ ಎಂಬ ವಾಕ್ಯ ತಾತ್ಪರ್ಯವನ್ನು ಮನಸ್ಸಿನಲ್ಲಿಟ್ಟು ಹೇಳಿದುದು), **ಒರುರ್ವ** - ಒಬ್ಬನು, **ಅಪ್ಪೋದು ಸನ್ನಿಹಿತನಾನ** - ಆಗಲೇ ಸಮೀಪಿಸಿ ಬಂದ, **ರಕ್ಷಣ ಸಮರ್ಥನ್ನೈಪ್ಪತ್ತುಮಾಪ್ಪೋಲೆ** - ರಕ್ಷಿಸಲು ಸಾಮರ್ಥ್ಯವಿರುವವನನ್ನು ಆಶ್ರಯಿಸುವ ಹಾಗೆ, **ತನ್ನೈಯುಮ್ ಈಶ್ವರನ್ನೈಯುಮ್** - ತನ್ನನ್ನೂ ಸರ್ವೇಶ್ವರನನ್ನೂ, **ಸಿದ್ಧಪರಮಾನಶಾಸ್ತ್ರತ್ತಾಲೇ** - ಸ್ವರೂಪಶೋಧಕವಾಕ್ಯಗಳುಳ್ಳ ಶಾಸ್ತ್ರದಿಂದ, **ತೆಳಿನ್ದಾಲ್**—"ಈಶ ೀಶಾ" ಎಂದು ಶ್ರುತಿಯಲ್ಲಿ ಹೇಳಿರುವಹಾಗೆ ತಾನು ಅಸಮರ್ಥನೆಂದೂ ಸರ್ವೇಶ್ವರನು ಸಮರ್ಥನೆಂದೂ ತಿಳಿದರೆ, **ತಾನೇ, ಅವನ್ನೈ** - ಅವನನ್ನು, **ಶರಣಮಾಗಪ್ಪತ್ತಾನೋ?** - ಉಪಾಯವಾಗಿ ಆಶ್ರಯಿಸಲಾರನೋ? ಅದಕ್ಕೆ ಶಾಸ್ತ್ರದ ವಿಧಿವಾಕ್ಯ ಬೇಕೆ? ಎಂಬ ತಾತ್ಪರ್ಯವು. ಅಸಮರ್ಥನು ಸಮರ್ಥನನ್ನು ಆಶ್ರಯಿಸುವದು ಲೋಕಾನುಭವವಾದ ವಿಷಯವು, ಇದಕ್ಕೆ ಶಾಸ್ತ್ರವಿಧಿಯು ಬೇಕಿಲ್ಲವೆಂಬ ಭಾವವು, **ಆಗೈಯಾಲ್** - ಆದುದರಿಂದ, **ಅಕಿಂಚನನುಕ್ಕು** - ಬೇರೇ ಗತಿಯಿಲ್ಲದ ಅಸಮರ್ಥನಿಗೆ, ಭಕ್ತಿಸ್ಥಾನದಲ್ಲಿ ಎಂದರೆ ಉಪಾಸನದ ಸ್ಥಳದಲ್ಲಿ, ಪ್ರಪತ್ತಿಯನ್ನು, **ವಿಧಿಕ್ಕಿರದೆನ್ಗ್ಗೆ ಕೂಡಾದು** - ವಿಧಿಸುತ್ತದೆ ಎಂದು ಹೇಳುವದು ಸರಿಯಲ್ಲವು, **ಎನ್ರು** - ಕೆಲವರು, **ಶೊಲ್ಲುವರ್ಗಳ್** - ಹೇಳುವರು, **ಪೂರ್ವಪಕ್ಷ** ತರುವರು ಎಂಬ ಭಾವವು. ಮುಂದೆ ಈ ವಾದವನ್ನು ಖಂಡಿಸುತ್ತಾರೆ. ಸಕ್ಕರೆ ಸಿಹಿಯಾಗಿದೆ ಎಂಬುದಕ್ಕೆ ಶಾಸ್ತ್ರವಿಧಿ ಬೇಕೇ ಎಂಬುದು ಅವರ ಆಕ್ಷೇಪವು.

ಲೋಕಸಿದ್ಧವಾದ ಪ್ರಪತ್ತಿಗೆ ಶಾಸ್ತ್ರ ವಿಧಿ ಬೇಕಿಲ್ಲವೆಂಬ ವಾದದ ಖಂಡನವು.

ಇದುವುಮ್ - ಹೀಗೆ ಸಮರ್ಥನನ್ನು ಅಸಮರ್ಥನು ತಾನಾಗಿಯೇ ವಿಧಿ

ಪ್ರಪತ್ತೇಃ ಲೋಕಸಿದ್ಧತ್ವಾತ್ ಅವಿಧೇಯತ್ವಮಿತಿ ವಾದಸ್ಯ ಖಂಡನಂ

ಇದುವು ಮೌಚಿತ್ಯ ಮೂಲಮಾನ ವತಿವಾದಮ್ :—ಎಙ್ಙನೇ ಯೆನ್ನಿಲ್ ಲೋಕತ್ತಿಲೆ ಒರುವನೈ ಒರುವರ್ ಆಶ್ರಯಿಕ್ಕುಮ್ ಪೋದು, ಇನ್ನಪಡಿಯೇ ಆಶ್ರಯಿತ್ತಾಲ್ ಇವನಿರಙ್ಗು ಮೆನ್ನು ಮಿಡತ್ತೈಯೊರು ಪ್ರಮಾಣತ್ತಾಲೆ ಯರಿನ್ದಾಶ್ರಯಿಕ್ಕು ಮಾಪ್ಪೋಲೆ, ಇಙ್ಗು ಮೀಶ್ವರನೈ ಯಿನ್ನ ಪ್ರಕಾರತ್ತಾಲೆ ಯಿನ್ನವಧಿಕಾರಿ ಪತ್ತಿನಾಲ್, ಇವನೈ ಈಶ್ವರನ್ ರಕ್ಷಿಕ್ಕುಮೆನ್ನುಮಿಡಮ್ ಅರಿಯುಮ್ಪೋದು ಕರ್ತವ್ಯ ಪರಮಾನ ಶಾಸ್ತ್ರ ಮೊಳಿಯ ವೇರು ಪ್ರಮಾಣಮಿಲ್ಲೈ.

ಬಲದ ಆವಶ್ಯಕತೆಯಿಲ್ಲದೆ ಆಶ್ರಯಿಸುವನೆಂದು ಹೇಳುವದೂ ಕೂಡ, ಔಚಿತ್ಯ ಮೂಲಮಾನ - ಸರ್ವೇಶ್ವರನು ಸರ್ವಶಕ್ತನೆಂದೂ, ಜೀವಾತ್ಮನು ಆತನಿಗೆ ಪರತಂತ್ರನೆಂದೂ, ಆ ಸಾಮರ್ಥ್ಯದೊಂದಿಗೆ ತನಗೆ ಪರತಂತ್ರನಾಗಿ ದೀನನಾದವನಲ್ಲಿ ಪೂರ್ಣದಯೆಯು ಸರ್ವೇಶ್ವರನಿಗೆ ಉಂಟೆಂದು ತೋರಿಸುವ ಔಚಿತ್ಯಮೂಲವಾದ, ಅತಿವಾದಮ್ - ಶಾಸ್ತ್ರವನ್ನು ಬಿಟ್ಟು ಮಾಡುವ ಯುಕ್ತಿವಾದವು. ಎಙ್ಙನೇ ಯೆನ್ನಿಲ್ - ಇದು ಹೇಗೆ ಎಂದರೆ, ಈ ಲೋಕದಲ್ಲಿ ಒಬ್ಬನನ್ನು ಒಬ್ಬನು ಆಶ್ರಯಿಸುವಾಗ, ಇನ್ನಪಡಿಯೇ ಆಶ್ರಯಿತ್ತಾಲ್ – ಈ ರೀತಿಯಲ್ಲಿ ಆಶ್ರಯಿಸಿದರೆ, ಇವನಿರಙ್ಗುಮೆನ್ನುಮಿಡತ್ತೈ - ಇವನು ರಕ್ಷಿಸುವನೆಂಬ ಸಂದರ್ಭದಲ್ಲಿ, ಒರು ಪ್ರಮಾಣತ್ತಾಲ್ ಅರಿನ್ದು - ಒಂದು ಪ್ರಮಾಣದಿಂದ ತಿಳಿದು, ಆಶ್ರಯಿಕ್ಕುಮಾಪ್ಪೋಲೆ - ಆಶ್ರಯಿಸುವಹಾಗೆ, ಇಙ್ಗುಮ್– ಈ ಸಂದರ್ಭದಲ್ಲೂ, ಎಂದರೆ ಪ್ರಪತ್ತ್ಯನುಷ್ಠಾನ ಸಂದರ್ಭದಲ್ಲೂ, ಈಶ್ವರನೈ- ಸರ್ವೇಶ್ವರನನ್ನು ಇನ್ನ ಪ್ರಕಾರತ್ತಾಲೇ - ಈ ಪ್ರಕಾರದಲ್ಲಿ ಎಂದರೆ ಗುರುಮುಖೇನ ಐದು ಅಙ್ಗಗಳಿಂದ ಕೂಡಿ, ಇನ್ನವಧಿಕಾರಿ- ಈ ಅಧಿಕಾರಿಯು ಎಂದರೆ, ಭಕ್ತ್ಯುಪಾಯಕ್ಕೆ ಅಸಮರ್ಥನಾದ ಅಧಿಕಾರಿಯು, ಪತ್ತಿನಾಲ್ - ಆಶ್ರಯಿಸಿದರೆ. ಇವನೈ - ಈ ಆಕಿಂಚನ್ಯ, ಅನನ್ಯಗತಿತ್ವಗಳಿಂದ ಯುಕ್ತನಾದ ಇವನನ್ನು ಸರ್ವೇಶ್ವರನು ರಕ್ಷಿಸುವನು. ಎನ್ನುಮಿಡಮ್ - ಹೇಳುವ ಸಂದರ್ಭವನ್ನು, ಅರಿಯುಮ್ ಪೋದು – ತಿಳಿಯುವಾಗ, ಕರ್ತವ್ಯ ಪರಮಾನ – ವಿಧಿಪರವಾದ, ಶಾಸ್ತ್ರ ಮೊಳಿಯ - ಶಾಸ್ತ್ರವನ್ನು ಬಿಟ್ಟರೆ, ವೇರು ಪ್ರಮಾಣಮಿಲ್ಲೈ - ಬೇರೆ

ನಾಮ್ ಆಶ್ರಯಿಕ್ಕ ರಕ್ಷಿಕ್ಕುಮ್ ಎನ್ರು ಅನುಮಾನತ್ತಾಲೆ ಯರುದಿ ಯಿಟ್ಟು ಆಶ್ರಯಿಕ್ಕಿಲ್ ಈಶ್ವರ ತತ್ತ್ವಜ್ಞಾನಮುಡೈಯಾರೆಲ್ಲಾ

ಪ್ರಮಾಣವಿಲ್ಲವು ಶಾಸ್ತ್ರಪ್ರಮಾಣ ವಿನಾ ಪ್ರತ್ಯಕ್ಷಾನುಮಾನಗಳು ಯಾವುವೂ ಇಲ್ಲವು. ಈ ಹಿಂದಿನ ವಾಕ್ಯದ ಮೂಲಕ,ಲೋಕದಲ್ಲಿ ಪರಮಕಾರುಣಿಕನಾದ ಸಮರ್ಥನು ತನಗೆ ಅಧೀನನಾಗಿ ದೀನನಾದವನನ್ನು ರಕ್ಷಿಸುವದನ್ನು ಲೋಕದಲ್ಲಿ ಕಂಡಿರುವದರಿಂದ, ಇದಕ್ಕೆ ವಿಧಿವಾಕ್ಯ ಪ್ರಮಾಣವೇನೂ ಬೇಕಿಲ್ಲವೆಂಬುದನ್ನು ಲೋಕದಲ್ಲಿ ಪ್ರತ್ಯಕ್ಷವಾಗಿ ಕಂಡಿರುವೆವು ಎಂದು ತಂದ ಆಕ್ಷೇಪಕ್ಕೆ ಆ ಲೋಕ ದೃಷ್ಟಾಂತ ಮೂಲಕವಾಗಿಯೇ ಆಶ್ರಯಿಸುವದಕ್ಕೆ ಪ್ರಮಾಣ ಬಲವು ಆವಶ್ಯಕವೆಂದು ತೋರ್ಪಡಿಸುತ್ತಾರೆ. ಲೋಕದಲ್ಲೂ ಕಾರುಣಿಕನಾದ ಸಮರ್ಥನು ರಕ್ಷಿಸುವನೆಂಬ ಆಶಯದಿಂದ ಆಶ್ರಯಿಸುವಾಗಲೂ ಆತನನ್ನು ಎಂತವನು ಯಾವರೀತಿಯಲ್ಲಿ ಆಶ್ರಯಿಸಿದರೆ ರಕ್ಷಿಸುವನೆಂಬುದನ್ನು ಪ್ರಮಾಣಮುಖೇನ ತಿಳಿದು ಹೇಗೆ ಆಶ್ರಯಿಸುವನೋ, ಹಾಗೆಯೇ ಈ ಸಂದರ್ಭದಲ್ಲೂ ಎಂತಹ ಅಧಿಕಾರಿಯು ಯಾವ ಅಙ್ಗಗಳಿಂದ ಕೂಡಿ ಹೇಗೆ ಆಶ್ರಯಿಸಿದರೆ ಸರ್ವೇಶ್ವರನು ರಕ್ಷಿಸುವನು ಎಂಬುದನ್ನು ಶಾಸ್ತ್ರಪ್ರಮಾಣದ ವಿಧಿವಾಕ್ಯದ ಮೂಲಕ ತಿಳಿದು ಹಾಗೆಯೇ ಅನುಷ್ಠಿಸಿದರೆ ಮೋಕ್ಷಪ್ರಾಪ್ತಿಯುಂಟಾಗುತ್ತದೆ, ಅನ್ಯಥಾ ಇಲ್ಲವು. ವಿಧಿವಾಕ್ಯಗಳಾದ "ಓಮಿತ್ಯಾತ್ಮಾನಂ ಯುಂಜೀತ ಏತದ್ವೈ ಮಹೋಪನಿಷದಂ ದೇವಾನಾಂ ಗುಹ್ಯಂ, ಯ ಏವಂ ವೇದ ಬ್ರಹ್ಮಣೋ ಮಹಿಮಾನ ಮಾಪ್ನೋತಿ" ಇತ್ಯಾದಿಗಳಲ್ಲಿ ಪ್ರಪತ್ತಿಯು ವಿಧಿಸಿರುವದರಿಂದ, ಅದನ್ನು ಪರಿಕರಗಳೊಂದಿಗೆ ಅನುಷ್ಠಿಸಲೇಬೇಕೆಂಬ ತಾತ್ಪರ್ಯವು. ಹೀಗೆ ಪ್ರತ್ಯಕ್ಷ ಸಿದ್ಧವಾದುವಕ್ಕೆ ಶಾಸ್ತ್ರವಿಧಿಬೇಕೇ ಎಂಬ ನ್ಯಾಯವನ್ನು ಆರೋಪಿಸಿ ಹೇಳಿದ ಪೂರ್ವಪಕ್ಷವು ನಿರಸನ ಮಾಡಲ್ಪಟ್ಟಿತು.

ಮುಂದೆ ಅನುಮಾನ ಪ್ರಮಾಣರೀತ್ಯಾ ನೋಡಿದರೂ ಸರ್ವೇಶ್ವರನು ಈ ಮೋಕ್ಷಾರ್ಥಿಯನ್ನು ರಕ್ಷಿಸುವನು, ಹೀಗಿರುವಾಗ ಇದಕ್ಕೆ ಶರಣಂ ವ್ರಜ ಎಂಬ ವಿಧಿವಾಕ್ಯ ಬೇಕೇ? ಆದುದರಿಂದ ಶರಣಂ ವ್ರಜ ಎಂಬುದು ಅನುವಾದವೇ ವಿನಾ ವಿಧಿಯಲ್ಲವು, ಎಂಬ ವಾದವು ನಿರಸನಮಾಡಲ್ಪಡುತ್ತದೆ. **ನಾಮ್ ಆಶ್ರಯಿಕ್ಕ ರಕ್ಷಿಕ್ಕುಮ್**-ನಾವು ಆಶ್ರಯಿಸಿದರೆ ರಕ್ಷಿಸುವನು, ಸಾಮರ್ಥ್ಯವೂ ಕರುಣೆಯೂ ಇರುವದರಿಂದ ಎಂಬದಾಗಿ, **ಅನುಮಾನತ್ತಾಲೆ** - ಅನುಮಾನ ಪ್ರಮಾಣದಿಂದ **ಅರುದಿಯಿಟ್ಟು** - ನಿಶ್ಚಯಿಸಿ, **ಆಶ್ರಯಿಕ್ಕಿಲ್** – ಸರ್ವೇಶ್ವರನನ್ನು ಆಶ್ರಯಿ

ರ್ಗಳ್ ಇಪ್ಪಡಿ ಅನುಷ್ಠಿಕ್ಕಲಾಮಾಗೈಯಾಲೇ ಉಪಾಸನ ವಿಧಾಯಕ ಶಾಸ್ತ್ರಙ್ಗಳ್ ನಿರರ್ಥಙ್ಗಳಾಮ್. ಸಮರ್ಥ ಉಪಾಸನಾದಿಗಳ್ೈ ಪ್ಪಣ್ಣ, ಅನತ್ತಿಲ್ ಸಮರ್ಥನಲ್ಲಾದರ್ ಪ್ರಪತ್ತಿಯೈಪ್ಪಣ್ಣವೆನ್ರು ವಿಶೇಷಿತ್ತು ನಿಯಮಕ್ಕೈ ಅನುಮಾನತ್ತಾಲ್ ಕಡಪ್ಪಡಾದು. ಮತ್ತುಳ್ಳ ಉಪಾ

ಸಿವತೆ, ಈಶ್ವರ ತತ್ತ್ವಜ್ಞಾನಮುಡೈಯಾರೆಲ್ಲಾರ್ಕ್ಕುಮ್ - ಸಮರ್ಥನಾದ ಸರ್ವೇಶ್ವರನೊಬ್ಬನಿದ್ದಾನೆಂಬ ಜ್ಞಾನವಿರುವರೆಲ್ಲರಿಗೂ, ಇಂತಹ ಜ್ಞಾನವು ನಾಸ್ತಿಕರಲ್ಲದೆ ಇತರರಿಗೆಲ್ಲರಿಗೂ ಉಂಟು, ಆದುದರಿಂದ ಉಪಾಯಾನುಷ್ಠಾನ ಮಾಡುವ ಎಲ್ಲರಿಗೂ, ಇಪ್ಪಡಿ ಅನುಷ್ಠಿಕ್ಕ ವತ್ತಾಗೈಯಾಲೆ-ಈ ರೀತಿಯಾಗಿ ನಡತೆಯುಂಟಾಗಬಹುದಾಗುದರಿಂದ, ಉಪಾಸನ ವಿಧಾಯಕ ಶಾಸ್ತ್ರಙ್ಗಳ್-ಉಪಾಸನವನ್ನು ಉಪಾಯವಾಗಿ ವಿಧಿಸಿರುವ ಶಾಸ್ತ್ರಗಳು ಎಂದರೆ ಬ್ರಹ್ಮ ವಿದ್ಯೆಗಳೆಲ್ಲಾ, ನಿರರ್ಥಙ್ಗಳಾಮ್ - ನಿರರ್ಥಕವಾದುವುಗಳಾಗುವುವು, ಆದುದರಿಂದ ಇಲ್ಲಿ ಪ್ರತ್ಯಕ್ಷಾನುಮಾನ ಪ್ರಮಾಣಗಳು ನಿಷ್ಪ್ರಯೋಜನಗಳು, ಶಾಸ್ತ್ರ ಪ್ರಮಾಣವೇ ಉಪಾದೇಯವಾಗಿ ಪ್ರಪತ್ತಿ ವಿಧಾಯಕ ಶಾಸ್ತ್ರಗಳಿರುವದರಿಂದ ಅವುಗಳನ್ನನುಸರಿಸಿದ ಅನುಷ್ಠಾನವೇ ಶಿಷ್ಟಸಮ್ಮತವಾಗುವದರಿಂದ, ಮಾಮೇಕಂ ಶರಣಂವ್ರಜ ಎಂಬ ಗೀತೋಪನಿಷತ್ತಿನ ವಾಕ್ಯವು ವಿಧಿಯೇ ವಿನಾ ಅನುವಾದವಲ್ಲವೆಂಬ ತಾತ್ಪರ್ಯವು

ಈ ದೂಷಣವನ್ನು ತಪ್ಪಿಸಿಕೊಳ್ಳುವದಕ್ಕಾಗಿ ಪೂರ್ವ ಪಕ್ಷಿಯು "ಉಪಾಸನ ವಿಧಿವೈಯರ್ಥ್ಯಕ್ಕೆ ಕಾರಣವಿಲ್ಲವು, ಸಮರ್ಥನಿಗೆ ಉಪಾಸನಾದಿಗಳನ್ನು ಶಾಸ್ತ್ರವು ವಿಧಿಸಿರುತ್ತದೆಂದು ಒಪ್ಪಿಕೊಳ್ಳುವೆವು; ಅಸಮರ್ಥನಾದರೋ ಅನುಮಾನಮೂಲಕವಾಗಿ ತನಗೆ ಪ್ರಪತ್ತಿ ಎಂಬವಾಗಿ ಊಹಿಸಬಹುದು; ಎಂದರೆ ಅಸಮರ್ಥನು ಸಮರ್ಥನನ್ನಾಶ್ರಯಿಸಿದರೆ ರಕ್ಷಿಸುವನು ಎಂಬುದನ್ನು ಅನುಮಾನ ಮೂಲಕ ಸಾಧಿಸಬಹುದು" ಎಂದು ಹೇಳಬಹುದೆಂದು ಭಾವಿಸಿ, ಅದನ್ನು ಅನುವಾದಮಾಡಿ ಖಂಡಿಸುತ್ತಾರೆ. ಸಮರ್ಥ ಉಪಾಸನಾದಿಗಳ್ೈಪ್ಪಣ್ಣ- ಸಮರ್ಥನಾದವನು ಉಪಾಸನಾದಿಗಳನ್ನು, ಪಣ್ಣ - ಶಾಸ್ತ್ರರೀತ್ಯಾ ವಿಧಿಯನ್ನನುಸರಿಸಿ ಮಾಡಬಹುದು, ಅನತ್ತಿಲ್ - ಆ ಉಪಾಸನಾದಿಗಳಲ್ಲಿ, ಸಮರ್ಥನಲ್ಲಾದರ್ - ಅಸಮರ್ಥನು, ಪ್ರಪತ್ತಿಯೈಪ್ಪಣ್ಣ - ಸಮರ್ಥನನ್ನು ಆಶ್ರಯಿಸಬಹುದು, ಎನ್ರು - ಎಂಬದಾಗಿ, ವಿಶೇಷಿತ್ತು ನಿಯಮಿಕ್ಕೈ - ಹೀಗೆ ವ್ಯತ್ಯಾಸವನ್ನು ಪ್ರದರ್ಶಿಸಿ ನಿಯಮಿಸೋಣವು. ಅನುಮಾನ ಪ್ರಮಾಣದಿಂದ ಸಾಧಿಸು

ಯಜ್ಞಳಿಲ್ ಸಮರ್ಥನನ್ರಿಕ್ಕೀ ಯೊಳಿನ್ದಾಲ್ ಅವತ್ತಿನುಡೈಯ ಸ್ಥಾನತ್ತಿಲೇ ಪ್ರಪತ್ತಿಯೈ ಪಣ್ಣುವದೆನ್ರು ಶಾಸ್ತ್ರಮ್ ವಿಧಿಯಾದಪ್ಪೋದು

ವದು, ಕಡಪ್ಪಡಾದು - ಸಾಧ್ಯವಲ್ಲವು, ಅನುಮಾನ ಪ್ರಮಾಣದಿಂದಲೇ ಹೇಳುತ್ತೇವೆ, ಶಾಸ್ತ್ರವಿಧಿಯು ಬೇಕಾಗಿಲ್ಲವು ಎಂದು ಹೀಗೆ ಹೇಳಿದರೆ, ಭಕ್ತ್ಯುಪಾಯ ವಿಧಿವಾಕ್ಯಕ್ಕೆ ನೈರರ್ಥ್ಯಕ್ಯವು ಉಂಟಾಗಲಾರದಷ್ಟೇ ಎಂದರೆ ಅದಕ್ಕೆ ಉತ್ತರವನ್ನು ಹೇಳುತ್ತಾರೆ. ಸಮರ್ಥನನ್ನು ಅಸಮರ್ಥನು ಆಶ್ರಯಿಸಿದರೆ ರಕ್ಷಿಸುವನೆಂಬುದನ್ನು ಊಹಿಸಿಯೇ ತಿಳಿಯಬಹುದು ; ಇದಕ್ಕೆ ಶಾಸ್ತ್ರವಿಧಿಯು ಬೇಕಿಲ್ಲವು, ಶಾಸ್ತ್ರವೀಗ ಅಪ್ರಾಪ್ತವಿಷಯದಲ್ಲೇ ವಿನಾ ಇಂತಹ ಸಿದ್ಧವಿಷಯದಲ್ಲಿ ಬೇಕಿಲ್ಲವು, ಎಂದು ಪೂರ್ವಪಕ್ಷಿಯು ಹೇಳಿದುದಕ್ಕೆ ಸಮರ್ಥನು ಅಸಮರ್ಥನನ್ನು ರಕ್ಷಿಸುವನೆಂಬುದು ಅನುಮಾನ ಪ್ರಮಾಣದಿಂದಲೇ ಯಾವಾಗ ಏರ್ಪಟ್ಟಿತೋ, ಆಗ ಎಲ್ಲರೂ, ಸಮರ್ಥನೇ ಆಗಲಿ ಅಸಮರ್ಥನೇ ಆಗಲಿ ಹೀಗೆ ಆಶ್ರಯಿಸಿಯೇ ರಕ್ಷಣವನ್ನು ಹೊಂದುವದರಿಂದ, ಕಷ್ಟತರವಾದ ಉಪಾಸನವು ಯಾರಿಗೂ ಬೇಕಾಗದೆ, ಉಪಾಸನ ವಿಧಿಗೆ ನೈರರ್ಥ್ಯಕ್ಯವು ಪ್ರಾಪ್ತವಾಗುತ್ತದೆ ಎಂದು ದೂಷಣವನ್ನು ಹೇಳಿದರು ಇದಕ್ಕೆ ಪೂರ್ವಪಕ್ಷಿಯು ಉಪಾಸನ ಶಾಸ್ತ್ರನೈರರ್ಥ್ಯಕ್ಕೇನೂ ಕಾರಣವಿಲ್ಲವು ; ಸಮರ್ಥನಿಗೆ ಉಪಾಸನರೂಪ ಶಾಸ್ತ್ರವಿಧಿಯು, ಅಸಮರ್ಥನಿಗಾದರೋ ಶಾಸ್ತ್ರವಿಧಿಯು ಬೇಕಿಲ್ಲವು, ಲೋಕದಲ್ಲಿ ಸಮರ್ಥನು ಅಸಮರ್ಥನನ್ನು ರಕ್ಷಿಸುವದು ವ್ಯಕ್ತವಾಗಿರುವದರಿಂದ, ಅನುಮಾನ ಪ್ರಮಾಣದಿಂದಲೇ ಸಿದ್ಧವು, ಹೀಗೀಗ ನಿಯಮವು ಎಂದರೆ ಸಮರ್ಥನಿಗೆ ಶಾಸ್ತ್ರವಿಧಿಯೂ ಅಸಮರ್ಥನಿಗೆ ಅದು ಬೇಕಿಲ್ಲವು ಎಂಬುದನ್ನು ಅನುಮಾನದಿಂದ ಸಾಧಿಸುವದು ಸಾಧ್ಯವಿಲ್ಲವೆಂಬ ಭಾವವು. ಅದೇಕೆಂದರೆ ತಿಳಿಸುತ್ತಾರೆ. ಮತ್ತುಳ್ಳ ಉಪಾಯಜ್ಞಳಿಲ್ - ಬೇರೇ ಉಪಾಯಗಳಲ್ಲಿ ಎಂದರೆ ಉಪಾಸನೆಯಲ್ಲಿ, ಸಮರ್ಥನನ್ರಿಕ್ಕೈಯೊಳಿಂದಾಲ್ - ಸಮರ್ಥನಲ್ಲದೇ ಹೋದರೆ, ಅವತ್ತಿನುಡೈಯ ಸ್ಥಾನತ್ತಿಲೆ - ಆ ಉಪಾಸನೆಯ ಸ್ಥಾನದಲ್ಲಿ, ಪ್ರಪತ್ತಿಯೈ ಪಣ್ಣುವದೆನ್ರು - ಪ್ರಪತ್ತಿಯನ್ನನುಷ್ಠಿಸತಕ್ಕದ್ದೆಂದು, ಶಾಸ್ತ್ರಮ್ ವಿಧಿಯಾದ ಪೋದು - ಶಾಸ್ತ್ರವು ವಿಧಿಸದೆ ಹೋದರೆ, ಮುನ್ಪು ವಿಧಿತ್ತ ಉಪಾಯತ್ತುಕ್ಕು - ಮೊದಲು ವಿಧಿಸಿದ ಉಪಾಯವಾದ ಉಪಾಸನೆಗೆ, ಅನರ್ಹನಾನಪಡಿಯಾಲೇ - ಸಮರ್ಥನಲ್ಲದೆ ಇರುವದರಿಂದ ಅನರ್ಹನಾದುದರಿಂದ. ಅದಿಲ್ ಫಲತ್ತೈ - ಅದರ ಫಲವು, ಯಿಳಕ್ಕುವಮ್ ಪಡಿಯಾಮ್ - ಸಿದ್ಧ

ಮುನ್ಪು ವಿಧಿತ್ತ ಉಪಾಯತ್ತುಕ್ಕನರ್ಹನಾನ ಪಡಿಯಾಲೇ ಯದಿನ್ ಫಲತ್ತೈಯಿಳಕ್ಕುಮ್ ಪಡಿಯಾವಾ.

ಸವೇ ಹೋಗಬೇಕಾಯಿತು. ಸಮರ್ಥನಿಗೆ ಉಪಾಸನೆಯನ್ನು ಹೇಳಿರುವ ಶಾಸ್ತ್ರವಿಧಿ ಎಂದು ಒಪ್ಪಿಕೊಳ್ಳುವದರಿಂದ, ಅತೀಂದ್ರಿಯ ವಿಷಯವಾದ ಮೋಕ್ಷಪ್ರಾಪ್ತಿಗೆ ವಿಧಿ ಬೇಕೆಂದು ಶಾಸ್ತ್ರ ಹೇಳಿದಂತಾಯಿತು. ಅಸಮರ್ಥನಿಗೆ ಶಾಸ್ತ್ರವಿಧಿ ಬೇಕಿಲ್ಲವೆಂದರೆ, ಅತೀಂದ್ರಿಯ ಮೋಕ್ಷಪ್ರಾಪ್ತಿಯೂ ಬೇಕಿಲ್ಲವೆಂದು ಹೇಳಿದಂತಾಯಿತು; ಆಗ ಅಸಮರ್ಥನಿಗೆ ಮೋಕ್ಷವೇ ಇಲ್ಲವೆಂಮೂ ಹೇಳಿದಂತಾಯಿತು. ಅತೀಂದ್ರಿಯ ವಿಷಯವಾದ ಮೋಕ್ಷವು ಅಸಮರ್ಥನಿಗೆ ಎಲ್ಲಿಯಾದರೂ ಇಲ್ಲದೇ ಇರಬಹುದೋ ಎಂದರೆ ಆಗ ಅಸಮರ್ಥನಿಗೆ ಉಪಾಸನಕ್ಕೆ ಬದಲಾಗಿ ಪ್ರಪತ್ತಿಯನ್ನನುಷ್ಠಿಸಬಹುದು ಎಂಬ ಅಪ್ರಾಪ್ತವಿಷಯದಲ್ಲಿ ಶಾಸ್ತ್ರವಿಧಿಯು ಆವಶ್ಯಕವು, ಈ ಶಾಸ್ತ್ರವಿಧಿಯನ್ನು ನಾವು ಅಙ್ಗೀಕರಿಸಿ ಅಶಕ್ತನು ಪ್ರಪದನವನ್ನನುಷ್ಠಿಸುವನು, ಅವರಿಂದ ಮೋಕ್ಷವನ್ನು ಹೊಂದುವನು ಎಂದು ಹೇಳುವೆವು. ನೀವು ಈ ಶಾಸ್ತ್ರವಿಧಿಯನ್ನು ಅಙ್ಗೀಕರಿಸದೇ ಇರುವದರಿಂದ ಅಸಮರ್ಥನಿಗೆ ಮೋಕ್ಷವೇ ಇಲ್ಲವೆಂದು ಒಪ್ಪಬೇಕಾಯಿತು. ಹಿಗೆಲ್ಲಾದರೂ ಉಂಟೋ? ಕೃಪಾಳುವಾದ ಸಮರ್ಥನಾದ ಸರ್ವೇಶ್ವರನು ಅಸಮರ್ಥನನ್ನು ರಕ್ಷಿಸಿಯೇ ರಕ್ಷಿಸುವನು ಎಂದರೆ ಆಗ ಈ ಮಾರ್ಗವನ್ನೇ ಎಲ್ಲರೂ ಅವಲಂಬಿಸುವದರಿಂದ ಉಪಾಸನಶಾಸ್ತ್ರ ನೈರರ್ಥ್ಯಕ್ಯವು ತಪ್ಪಿದ್ದಲ್ಲವೆಂಬ ಭಾವವು.

ಈಗ ಪೂರ್ವಪಕ್ಷಿಗಳು ಹೇಳಿದುದು ಹೇಗೆಂದರೆ, "ಉಪಾಸನ ವಿಧಿಯ ಬಲದಿಂದ ಸಮರ್ಥನಿಗೆ ಅದರಲ್ಲಿ ಪ್ರವೃತ್ತಿಯೂ, ಅಸಮರ್ಥನಿಗಾದರೋ ಲೋಕದೃಷ್ಟಿಯಿಂದ ಶಕ್ತನಾದವನನ್ನು ಆಶ್ರಯಿಸೋಣವೂ, ಎಂದು ಹೀಗೆ ಹೇಳಿದರೆ ಪ್ರಪತ್ತಿಯನ್ನು ಅನುಷ್ಠಿಸಲೇಬೇಕೆಂಬ ನಿರ್ಬಂಧವೂ ಇಲ್ಲವು, ಅಂತವನಿಗೆ ಮೋಕ್ಷದ ಸಿದ್ಧಿಯಿಲ್ಲವೆಂದು ಹೇಳಿದಂತೆಯೂ ಆಗಲಿಲ್ಲವು" ಎಂಬುದು. ಪ್ರಪತ್ತಿಗೆ ಶಾಸ್ತ್ರವಿಧಿ ಬೇಡವೆಂಬ ವಾದಕ್ಕೆ ಒಂದು ನಿವರ್ತನದ ಮೂಲಕ ಪ್ರತಿದ್ವಂದಿರೂಪದಲ್ಲಿ ಭಗವತ್ಸೇವಾರೂಪಕೈಙ್ಕರ್ಯಾದಿಗಳಿಗೂ ಕೂಡ ಆಗ ಶಾಸ್ತ್ರವಿಧಿಯು ಬೇಕಿಲ್ಲವೆಂಬ, ಪೂರ್ವಪಕ್ಷಿಗೆ ಅನಭಿಮತವಾದುದು ಪ್ರಾಪ್ತವಾಗುತ್ತದೆಂದು, ಎಙ್ಙನೇ ಯೆನ್ನಿಲ್ ಎಂದಾರಂಭಿಸಿ ಹೇಳುತ್ತಾರೆ.

ಎಙ್ಙನೇ ಎನ್ನಿಲ್-ಅಸಮರ್ಥನು ಉಪಾಸನದ ಸ್ಥಾನದಲ್ಲಿ ಪ್ರಪದನಾನುಷ್ಠಾನನಾದಬೇಕೆಂಬ ವಿಧಿಯು ಆವಶ್ಯಕವೆಂಬುದನ್ನು ಸದೃಷ್ಟಾಂತವಾಗಿ ತೋರಿ

ಎಙ್ಗನೇ ಯೆನ್ನಿಲ್-ಲೋಕತ್ತಿಲ್ ರಾಜಸೇವಾದಿಗಳುಮ್ ತತ್ಫಲಙ್ಗಳುಮ್ ಕಾಣಚ್ಚೆಯ್‌ದೇ, ಮಾಲಾಕರಣ ದೀಪಾರೋಪಣಸ್ತುತಿ ನಮಸ್ಕಾರಾದಿಗಳೈ ಶಾಸ್ತ್ರ ನಿರಪೇಕ್ಷವಾಗ ಅನುಷ್ಠಿತ್ತಾಲ್ ಅಪಚಾರಙ್ಗಳ್ ವರುಮ್ಪಡಿಯಾ ಯಿರುಕ್ಕೈಯಾಲೇ, ಪರಿಕರ ನಿಯಮಙ್ಗಳೋಡು ಕೂಡಿನ ಭಗವತ್ಸೇವಾದಿ ಪ್ರಕಾರಙ್ಗಳುಮ್ ತತ್ಫಲಙ್ಗಳುಮ್ ನಿಯತಙ್ಗಳಾಗ ಶಾಸ್ತ್ರಮ್ ಕೊಂಡರಿಗಿರಾಪ್ಪೋಲೆ, ಇಙ್ಗುಮ್, ಲೋಕತ್ತಿಲ್ ಪ್ರಪತ್ತಿಯುಮ್ ತತ್ಫಲಂಗಳುಮ್ ಕಣ್ಡು ಪೋನ್ದಾಲುಮ್, ಸದಾಚಾರ್ಯೋಪದೇಶ ಸಾಪೇಕ್ಷ ಮಂತ್ರ ವಿಶೇಷಾದಿಗಳೋಡೇ ಕೂಡಿನ ಪ್ರಪತ್ತಿಕ್ಕುಮ್ ಫಲವಿಶೇಷಙ್ಗಳುಕ್ಕುಮ್ ಸಾಧ್ಯಸಾಧನ ಭಾವಮ್

ಸುವೆವು, ಹೇಗೆಂದರೆ ಹೇಳುತ್ತಾರೆ:—**ಲೋಕತ್ತಿಲ್** - ಲೋಕದಲ್ಲಿ, **ರಾಜಸೇವಾದಿಗಳುಮ್** - ರಾಜನಿಗೆ ಮಾಡುವ ಕೈಙ್ಕರ್ಯಗಳನ್ನೂ, **ತತ್ಫಲಙ್ಗಳುಮ್** - ಅದರಿಂದುಂಟಾಗುವ ಫಲಗಳನ್ನೂ ಸಹ, **ಕಾಣಚ್ಚೆಯ್‌ದೇ** - ನಾವು ಕಂಡೇ ಇದ್ದರೂ ಎಂದರೆ ಶಾಸ್ತ್ರ ನಿರಪೇಕ್ಷವಾಗಿರುವದನ್ನೂ ನಾವು ಕಂಡಿದ್ದರೂ ಕೂಡ, **ಮಾಲಾಕರಣ** - ಪುಷ್ಪಹಾರವನ್ನು ಮಾಡುವದು, **ದೀಪಾರೋಪಣ**-ದೀಪಗಳನ್ನು ಹಚ್ಚೋಣವು, **ಸ್ತುತಿ** - ಸ್ತೋತ್ರವು, ನಮಸ್ಕಾರ ಮೊದಲಾದವುಗಳ, ಇವುಗಳನ್ನು, **ಶಾಸ್ತ್ರನಿರಪೇಕ್ಷವಾಗ ಅನುಷ್ಠಿತ್ತಾಲ್** - ಶಾಸ್ತ್ರದ ಪೇಕ್ಷೆಯಿಲ್ಲದಹಾಗೆ ಅನುಷ್ಠಿಸಿದರೆ, **ಅಪಚಾರಙ್ಗಳ್ ವರುಮ್ಪಡಿಯಾ ಯಿರುಕ್ಕೈಯಾಲೇ** - ಭಗವದಪಚಾರಗಳು ಉಂಟಾಗಬಹುದಾಗಿರುವದರಿಂದ, **ಪರಿಕರನಿಯಮಙ್ಗಳೋಡೇ ಕೂಡಿನ** - ಆಯಾ ಸೇವೆಗಳಿಗೆ ಯಾವಯಾವ ಅಙ್ಗಗಳು ಬೇಕೋ ಆಯಾ ಅಙ್ಗಗಳಿಂದ ಸೇರಿದ, **ಭಗವತ್ಸೇವಾದಿ ಪ್ರಕಾರಙ್ಗಳುಮ್** - ಭಗವತ್ಸೇವೆ ಕೈಙ್ಕರ್ಯದ ಪ್ರಕಾರಗಳನ್ನೂ, **ತತ್ಫಲಗಳನ್ನೂ**, **ನಿಯತಙ್ಗಳಾಕ** -ಹೀಗೆಯೇ ಮಾಡಬೇಕೆಂಬ ನಿಯಮವಿರುವವನ್ನಾಗಿ, **ಶಾಸ್ತ್ರಮ್ ಕೊಂಡರಿಗಿರಾಪ್ಪೋಲೆ** - ಹೇಗೆ ಶಾಸ್ತ್ರದ ಮೂಲಕ ತಿಳಿಯುತ್ತೇವೋ ಹಾಗೆ, **ಇಙ್ಗುಮ್** – ಈ ಸಂದರ್ಭದಲ್ಲೂ, **ಲೋಕತ್ತಿಲ್ ಪ್ರಪತ್ತಿಯುಮ್ ತತ್ಫಲಙ್ಗಳುಮ್ ಕಂಡು ಪೋನ್ದಾಲುಮ್** - ಈ ಲೋಕದಲ್ಲೂ ಅಸಮರ್ಥನು ಸಮರ್ಥನನ್ನಾಶ್ರಯಿಸಿ ಅದಕ್ಕೆ ಫಲಗಳುಂಟಾಗಿರುವದನ್ನು ನಾವು ಕಂಡಿದ್ದರೂ, **ಸದಾಚಾರ್ಯೋಪದೇಶ ಸಾಪೇಕ್ಷ ಮಂತ್ರ ವಿಶೇಷಾದಿಗಳೋಡೆ ಕೂಡಿನ**-ಕರ್ಮನಿಷ್ಠೆ ಜ್ಞಾನನಿಷ್ಠೆಗಳಿರುವ ಆಚಾರ್ಯರ ಉಪದೇಶ ಬೇಕಾಗಿರುವ ದ್ವಯಾದಿ

ಶಾಸ್ತ್ರಮ್ ಕೊಣ್ಡರಿಯವೇಣ್ಡುಗೈಯಾಲ್ ಅವ್ವೋ ಫಲಙ್ಗಳುಕ್ಕಾಗ. ಸೇವಾ ವಿಶೇಷಙ್ಗಳೈ ವಿಧಿಕ್ಕಿರಾಪ್ಪೋಲೆ ಪ್ರಪತ್ತಿಯೈಯುಮ್ ವಿಧಿಕ್ಕಿರದು.

ಮಂತ್ರವಿಶೇಷಗಳಿಂದ ಸೇರಿದ, **ಪ್ರಪತ್ತಿಕ್ಕುಮ್ ಫಲವಿಶೇಷಙ್ಗಳುಕ್ಕುಮ್** - ಪ್ರಪತ್ತಿಗೂ ಅದರಿಂದ ಪ್ರಾರ್ಥಿಸಲ್ಪಟ್ಟ ಫಲವಿಶೇಷಗಳಿಗೂ, **ಸಾಧ್ಯ ಸಾಧನ** ಭಾವವನ್ನು, **ಶಾಸ್ತ್ರಮ್ ಕೊಂಡರಿಯವೇಣ್ಡುಗೈಯಾಲ್** - ಶಾಸ್ತ್ರಮೂಲಕವಾಗಿಯೇ ತಿಳಿಯಬೇಕಾಗಿರುವದರಿಂದ, **ಆಗೈಯಾಲ್** - ಆ ಕಾರಣದಿಂದ, **ಅವ್ವೋಫಲಙ್ಗಳುಕ್ಕಾಕ** - ಆಯಾ ಫಲಗಳಿಗಾಗಿ, **ಸೇವಾ ವಿಶೇಷಙ್ಗಳೈ** - ಭಗವತ್ಕೈಂಕರ್ಯ ವಿಶೇಷಗಳನ್ನು, **ವಿಧಿಕ್ಕಿರಾಪ್ಪೋಲೆ** - ಶಾಸ್ತ್ರವು ವಿಧಿಸುವಹಾಗೆ, **ಪ್ರಪತ್ತಿಯುಮ್ ವಿಧಿಕ್ಕಿರದು** - ಶಾಸ್ತ್ರವು ಪ್ರಪತ್ತಿಯನ್ನು ವಿಧಿಸಿರುತ್ತದೆ, ಯಾವ ಯಾವ ಪರಿಕರಗಳೊಂದಿಗೆ ಯಾವ ರೀತಿಯಲ್ಲಿ ಯಾವ ಫಲಗಳಿಗಾಗಿ ಅನುಷ್ಠಿಸತಕ್ಕದ್ದೆಂಬುದನ್ನು ಶಾಸ್ತ್ರವು ವಿಧಿಸಿರುತ್ತದೆ. ಈ ಮೇಲಿನ ವಾಕ್ಯದ ತಾತ್ಪರ್ಯವು ಇಷ್ಟೇ :—ಲೋಕದಲ್ಲಿ ರಾಜಸೇವೆಗಳು ನಡೆದಿರುವದನ್ನೂ ಅದರಿಂದ ರಾಜ ಕೈಂಕರ್ಯವನ್ನು ಮಾಡಿದವರು ಫಲಗಳನ್ನು ಪಡೆದಿರುವದನ್ನೇನೋ ನಾವು ಕಂಡಿರುತ್ತೇವೆ ಇದು ಲೌಕಿಕ ವಿಷಯವು. ಈ ಲೋಕನ್ಯಾಯವು ಪಾರಲೌಕಿಕ ವಿಷಯದಲ್ಲಿ ಸರಿಹೋಗುವದಿಲ್ಲವೆಂದು ಹೇಳುವದಕ್ಕಾಗಿ **ಲೋಕತ್ತಿಲ್ ಕಾಣಚ್ಚೆಯ್ದೇ** ಎಂಬ ಪ್ರಯೋಗವು. ಯದ್ಯಪಿ ಲೋಕದಲ್ಲಿ ಅಸಮರ್ಥನು ಸಮರ್ಥನನ್ನು ಆಶ್ರಯಿಸಿ ಇಹಲೋಕ ಫಲಗಳನ್ನು ಹೊಂದಿರುವದನ್ನೇನೋ ಕಂಡಿರುವೆವು. ಇವುಗಳಿಗೇನೋ ಶಾಸ್ತ್ರದ ಆವಶ್ಯಕತೆಯಿಲ್ಲವು. ಈಗ ಭಗವತ್ಕೈಂಕರ್ಯಗಳಾದ ಮಾಲಾಕರಣ ದೀಪಾರೋಪಣ, ಸ್ತುತಿ ನಮಸ್ಕಾರಾದಿಗಳಿವೆ. ಇವುಗಳನ್ನು ಶಾಸ್ತ್ರನಿರಪೇಕ್ಷವಾಗಿ ಮಾಡಬಹುದೋ ? ಹಾಗೆ ಶಾಸ್ತ್ರವಿರುದ್ಧವಾಗಿ ಈ ಕೈಂಕರ್ಯಗಳನ್ನು ಮಾಡಿದರೆ, ಭಗವತ್ಪ್ರೀತಿಯುಂಟಾಗಿ ಶುಭಫಲವುಂಟಾಗುವದಕ್ಕೆ ಬದಲಾಗಿ ಭಗವದಪ್ರೀತಿಯುಂಟಾಗಿ ಅಶುಭ ಫಲವು ಪ್ರಾಪ್ತವಾಗುತ್ತದೆಂಬುದು ಹಿಂದೆಯೇ ಹೇಳಲ್ಪಟ್ಟಿರುತ್ತದೆ. ಶಾಸ್ತ್ರವಿಹಿತವಾದ ಪುಷ್ಪಗಳನ್ನು ಸಂಪಾದಿಸಿ ಹಾರವನ್ನು ಮಾಡಬೇಕು. ತುಳಸಿಯನ್ನು ಶಾಸ್ತ್ರನಿಷಿದ್ಧವಲ್ಲದ ದಿನಗಳಲ್ಲಿ ಎತ್ತಿ ತಂದು ಮಾಲೆಯನ್ನು ರಚಿಸಬೇಕು ಇಲ್ಲವಾದರೆ ಪ್ರತ್ಯವಾಯ ಉಂಟು. ರುಚಿಪೂರ್ತನಾಗಿ ಸ್ತುತಿಸಬೇಕು. ಬಲಸ್ಕೃತಮಾಡಿ ಬಿಟ್ಟು ಸ್ತುತಿಸಬಾರದು ನಮಸ್ಕಾರವನ್ನು "ಯುಗಾನ್ನೇನತು ಕಾರಯೇತ್" ಎಂಬ ಪ್ರಮಾಣವಿರುವಾಗ ಒಂದು ಸಲವಾಗಲಿ ಮೂರು

ಸಲವಾಗಲಿ ನಮಸ್ಕಾರ ಮಾಡಕೂಡದು ; ಮತ್ತು ಒಂದು ಕೈಯಿಂದ ನಮಸ್ಕಾರ ಮಾಡಕೂಡದು. ನಮಸ್ಕಾರವು ಅಷ್ಟಾಂಗ ಸಂಯುತವಾಗಿರಬೇಕು. ಹೀಗೆ ಶಾಸ್ತ್ರದಲ್ಲಿ ಹೇಳಿರುವಹಾಗೆ ಭಗವತ್ಸೇವೆಗಳನ್ನು ಮಾಡತಕ್ಕದ್ದು. ಇಲ್ಲವಾದರೆ ಅಪಚಾರಕ್ಕೆ ಕಾರಣವಾಗುತ್ತದೆ ಎಂಬ ಭಾವವು. ಇಂತಹ ಭಗವತ್ಕೈಂಕರ್ಯಗಳನ್ನು ನಡೆಸತಕ್ಕದ್ದೆಂಬುದನ್ನು ಶಾಸ್ತ್ರಮೂಲಕ ತಿಳಿದು ಹೇಗೆ ನಡೆಸುತ್ತೇವೋ, ಹಾಗೆಯೇ ಈ ಪ್ರಪತ್ತಿಯ ಸಂದರ್ಭದಲ್ಲೂ ಎಂದು ಹೇಳುತ್ತಾರೆ; ಲೋಕದಲ್ಲೂ ಅಸಮರ್ಥನು ಸಮರ್ಥನನ್ನು ಶರಣುಹೊಂದಿ ಫಲಗಳನ್ನು ಹೊಂದಿರುವದನ್ನು ಕಾಣುವೆವು; ಆದರೂ ಅದೃಷ್ಟ ಫಲವನ್ನು ಕೊಡುವ ಪ್ರಪತ್ತಿಯು ಸದಾಚಾರ್ಯೋಪದೇಶ ಲಬ್ಧ ಶಾಸ್ತ್ರದಲ್ಲಿ ಹೇಳಿರುವ ಮಂತ್ರಾರ್ಥಜ್ಞಾನವೇನು, ಅನುಷ್ಠಾನವೇನು, ಇವುಗಳನ್ನು ಒಳಗೊಂಡಿರುತ್ತದೆ; ಆ ಪ್ರಪತ್ತಿಗೂ ಅದರ ಫಲಕ್ಕೂ ಸಾಧನ ಸಾಧ್ಯಭಾವಗಳು ಹೇಗೆ ಎಂಬುದನ್ನೂ ಶಾಸ್ತ್ರಮೂಲಕವಾಗಿಯೇ ತಿಳಿಯತಕ್ಕದ್ದು, ಆದುದರಿಂದ ಭಗವತ್ಸೇವಾರೂಪ ಕೈಂಕರ್ಯಗಳು ಹೇಗೆ ಶಾಸ್ತ್ರವಿಹಿತಗಳಾಗಿ ಶಾಸ್ತ್ರನಿಯತ ಕ್ರಮದಲ್ಲಿ ನಡೆಸತಕ್ಕವೋ, ಹಾಗೆಯೇ ಪ್ರಪತ್ತಿಯೂ ಕೂಡ ಶಾಸ್ತ್ರವಿಹಿತವಾದ ಉಪಾಯವಾದುದರಿಂದ ಶಾಸ್ತ್ರವು ವಿಧಿಸಿದ ರೀತಿಯಲ್ಲಿ ಸದಾಚಾರ್ಯರ ಮೂಲಕ ನಡೆಸತಕ್ಕದ್ದು.

ಹಾಗೆ ಪ್ರಪತ್ತಿಗೆ ಶಾಸ್ತ್ರವಿಧಿಯು ಬೇಕಿಲ್ಲವೆಂದರೆ, ರಾಜಸೇವೆಗೆ ಹೇಗೆ ಶಾಸ್ತ್ರವಿಧಿ ಬೇಕಾಗಿಲ್ಲವೋ ಹಾಗೆಯೇ ಭಗವತ್ಸೇವಾರೂಪ ಕೈಂಕರ್ಯಗಳಿಗೂ ಶಾಸ್ತ್ರವಿಧಿ ಬೇಕಾಗಿಲ್ಲವೆಂದು ಒಪ್ಪಬೇಕಾಗುತ್ತದೆ ಎಂದು ಪ್ರತಿದ್ವಂದಿರೂಪ ದೂಷಣವನ್ನು ಹೇಳುತ್ತಾರೆ. ರಾಜಸೇವೆಗೆ ಶಾಸ್ತ್ರವು ಬೇಕಿಲ್ಲವು, ಭಗವತ್ಸೇವೆಗೆ ಶಾಸ್ತ್ರವಿಧಿಯಾವಶ್ಯಕವು; ಹೇಗೆಂದರೆ ಅಶುಚಿಯಾದ ಪುಷ್ಪದಿಂದ ರಚಿಸಿದ ಪುಷ್ಪಮಾಲಿಕೆಯು ಶಾಸ್ತ್ರನಿಷಿದ್ಧವಾಗಿ ಭಗವತ್ಸೇವೆಗೆ ಅನರ್ಹವು; ನೋಡಲು ಚನ್ನಾಗಿದ್ದರೆ ರಾಜನಿಗೆ ಅರ್ಹವಾದುದು. ಹಾಗೆಯೇ ಮಿಕ್ಕ ಸೇವೆಗಳಲ್ಲೂ ಊಹಿಸಬಹುದು. ಈ ಅಭಿಪ್ರಾಯವು ಪ್ರತಿಕಕ್ಷಿಗಳಿಗೆ ಅನಭಿಮತವಾದ ವಿಷಯವು ಭಗವತ್ಕೈಂಕರ್ಯಗಳಿಗೆ ಅವರುಗಳು ತುಂಬಾ ಮಾಹಾತ್ಮ್ಯವನ್ನು ಹೇಳುವದರಿಂದ ಅವು ಶಾಸ್ತ್ರರೀತ್ಯಾ ನಡೆಯತಕ್ಕವುಗಳೆಂದು ಹೇಳುತ್ತಾರೆ **ಅಜ್ಞನಲ್ಲಾದಪ್ಪೋದು** - ಪ್ರಪತ್ತಿಗೆ ಶಾಸ್ತ್ರವಿಧಿಯು ಬೇಕಿಲ್ಲವು, ಅನುಮಾನವಿಂದಲೇ ವ್ಯಕ್ತವೆಂದು ಅಭಿಪ್ರಾಯಪಟ್ಟರೆ, **ರಾಜಸೇವೆಯೈಪ್ಪೋಲೆ** - ರಾಜಸೇವೆಗೆ ಹೇಗೆ ಶಾಸ್ತ್ರವಿಧಿ ಬೇಕಿಲ್ಲವೋ, ಹಾಗೆಯೇ, ಭಗವತ್ಸೇವೆಯೂ ಕೂಡ, **ವಿಧಿಕ್ಕವೇಂಡಾದೊಳಿಯುಮ್** - ಶಾಸ್ತ್ರ ವಿಧಿಮೂಲಕ ವಿಧಿಸಬೇಕಾದುದಿಲ್ಲವಾಗಿ ಹೋಗಬೇಕಾಗುತ್ತದೆ. ಭಗವತ್ಸೇವೆಗೆ

ಅಙ್ಗನಲ್ಲಾದಪೋದು ರಾಜಸೇವೈಯ್ಪೋಲೆ ಭಗವತ್ಸೇವೆಯುಮ್ ವಿಧಿಕ್ಕ ವೇಣ್ಡಾದೊಳಿಯುಮ್; ಪ್ರಪತ್ತಿಕ್ಕುಮ್ ಸದಾಚಾರ್ಯೋಪದೇಶಪೂರ್ವಕ ಮಂತ್ರ ಗ್ರಹಣಾದಿಗಳ್ ಅನಪೇಕ್ಷಿತಙ್ಗಳಾಗ ಪ್ರಸಙ್ಗಿಕ್ಕುಮ್.

ನೀವು ಹೇಗೆ ಶಾಸ್ತ್ರವಿಧಿಯು ಆವಶ್ಯಕವೆಂದು ಹೇಳುತ್ತೀರೋ ಹಾಗೆಯೇ ಪ್ರಪತ್ತಿಗೂ ಕೂಡ ಶಾಸ್ತ್ರವಿಧಿಯು ಆವಶ್ಯಕವು, ಆಸಮರ್ಥನ ವಿಷಯದಲ್ಲಿ ಅನುಮಾನ ಪ್ರಮಾಣದಿಂದಲೇ ವ್ಯಕ್ತವೆಂದು ಹೇಳುವ ವಾದವು ಅತೀಂದ್ರಿಯ ವಿಷಯದಲ್ಲಿ ನ್ಯಾಯವಲ್ಲವೆಂಬ ಭಾವವು.

ಹೀಗೆ ವಾದಿಸುವವರು ಪ್ರಪದನ ಮಂತ್ರವಾದ ದ್ವಯ ಮೊದಲಾದ ಮಂತ್ರಗಳ ಉಪದೇಶಮಾತ್ರ ಆಚಾರ್ಯ ಮೂಲಕವಾಗಿ ಶಾಸ್ತ್ರರೀತ್ಯಾ ನಡೆಸತಕ್ಕದ್ದೆಂದು ಹೇಳುವರು. ಪ್ರಪದನಾನುಷ್ಠಾನಕ್ಕೆ ಶಾಸ್ತ್ರವಿಧಿ ಬೇಕಾಗಿಲ್ಲವೆಂದು ಹೇಳುವವರಿಗೆ, ಈ ಮಂತ್ರೋಪದೇಶಮಾತ್ರ ಶಾಸ್ತ್ರ ವಿಧಿಪ್ರಕಾರ ನಡೆಯಬೇಕೆಂಬುದು ತಾನೇ ಏಕೆ? ಎಂದು ಕೇಳಬೇಕಾಗುತ್ತದೆ. ಇದೂ ಕೂಡ ಶಾಸ್ತ್ರನಿರಪೇಕ್ಷವಾಗಿಯೂ ಸದಾಚಾರ್ಯೋಪದೇಶ ನಿರಪೇಕ್ಷವಾಗಿಯೂ ನಡೆಯಬಹುದಾಗಿ ಬರುತ್ತದೆಂದು ಮುಂದೆ ಹೇಳುತ್ತಾರೆ:—**ಪ್ರಪತ್ತಿಕ್ಕುಮ್** - ಪ್ರಪತ್ತಿಗೂ ಕೂಡ **ಸದಾಚಾರ್ಯೋಪದೇಶ ಪೂರ್ವಕವಾದ, ಮಂತ್ರಗ್ರಹಣಾದಿಗಳ್**- ಮೂಲಮಂತ್ರದ್ವಯ ಚರಮಶ್ಲೋಕಾದಿಗಳ ಉಪದೇಶಗಳೂ ಕೂಡ, **ಅನಪೇಕ್ಷಿತಙ್ಗಳಾಗ**-ಬೇಕಾಗಿಲ್ಲದವುಗಳಾಗಿ, **ಪ್ರಸಙ್ಗಿಕ್ಕುಮ್** - ಉಂಟಾಗಬಹುದು. ಯಾವಾಗ ಮಂತ್ರೋಪದೇಶಕ್ಕೆ ಮಾತ್ರ ಆಚಾರ್ಯೋಪದೇಶರೂಪವಾದ ಶಾಸ್ತ್ರವಿಧಿಯು ಆವಶ್ಯಕವೆಂದಾಯಿತೋ, ಮಂತ್ರಾರ್ಥೋಪದೇಶ ಮೂಲಕವಾದ ಪ್ರಪದನಕ್ಕೂ ಶಾಸ್ತ್ರವಿಧಿಯು ಅತ್ಯಾವಶ್ಯಕವು ಎಂಬ ಭಾವವು.

ಇದರಮೇಲೆ ಪೂರ್ವಪಕ್ಷಿಗಳು ಇನ್ನೊಂದು ವಾದವನ್ನು ತರಬಹುದು, ಹೇಗೆಂದರೆ:– ಪ್ರಪದನಕ್ಕೆ ಸರ್ವಾಧಿಕಾರತ್ವವುಂಟು. ಗೀತೆಯಲ್ಲಿ (೯—೩೨)

"ಮಾಂಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿಸ್ಯುಃ ಪಾಪಯೋನಯಃ ।
ಸ್ತ್ರಿಯೋವೈಶ್ಯಾ ಸ್ತಥಾಶೂದ್ರಾಃ ತೇಽಪಿಯಾನ್ತಿ ಪರಾಂಗತಿಂ"॥

ಎಂದು ಹೇಳಿರುವದರಿಂದ ಸ್ತ್ರೀಯರೂ ವೈಶ್ಯರೂ ಶೂದ್ರರೂ ಚಂಡಾಲರೂ ಸಹ ಪ್ರಪದನಾಧಿಕಾರಿಗಳೆಂದು ಹಿಂದೆಯೇ ಪ್ರಪತ್ತಿ ಯೋಗ್ಯಾಧಿಕಾರದಲ್ಲಿ ಶಾಸ್ತ್ರರೀತ್ಯಾ ಸ್ಥಾಪಿಸಲ್ಪಟ್ಟಿರುವದು ಸರಿಯಷ್ಟೇ. ಇವರಿಗೆ ಮಂತ್ರಗಳ ಉಪದೇಶವಿಲ್ಲವು, ಭಾಷಾಮಂತ್ರಕ್ಕೆ ಮಾತ್ರ ಅರ್ಹರು ಎಂದು ಅಙ್ಗೀಕರಿಸಿರುವ

ಮಂತ್ರಾದ್ಯನರ್ಹೈರ್ಯ್ಕಮ್ . ಶರಣ್ಯವಿಶೇಷ ಫಲವಿಶೇಷಾನುಬಂಧಿ ಯಾನ ಅನ್ಯೂನಾನಧಿಕ ಕರ್ತವ್ಯ ವಿಶೇಷತ್ತಿನುದ್ಯೆಯು ಮಧ್ಯವಸಾಯ ತ್ತುತ್ಕ್ಕ ಅನನ್ಯಥಾ ಸಿದ್ಧಮಾನಮನುಮಾನಜ್ಯಕ್ಕಡ್ಯೆಯಾದು.

ರಿಂದ ಹಾಗೆಯೇ, ಎಲ್ಲರಿಗೂ ಎಂದರೆ ವೈದಿಕ ಮಂತ್ರಕ್ಕೆ ಅರ್ಹರಿಗೂ ಕೂಡ, ಏಕೆ ಕೂಡದು ? ಶೂದ್ರಾದಿಗಳ ವಿಷಯದಲ್ಲಿ ಶಾಸ್ತ್ರನಿರಪೇಕ್ಷತ್ವವನ್ನು ಒಪ್ಪುವದಾದರೆ, ಎಲ್ಲಾ ಸಂದರ್ಭಗಳಲ್ಲೂ ಒಪ್ಪಬಹುದಲ್ಲಾ ಎಂದು ಆಕ್ಷೇಪಿಸಬಹುದೆಂದು ಯೋಚಿಸಿ ಅವಕ್ಕೆ ಸಮಾಧಾನವನ್ನು ಹೇಳುತ್ತಾರೆ.

ಮಂತ್ರಾದ್ಯನರ್ಹೈರ್ಯ್ಕಮ್-ದ್ವಯಮೂಲ ಮೊದಲಾದ ವೈದಿಕ ಮಂತ್ರಾದಿಗಳಿಗೆ ಅನರ್ಹರಾದ ಶೂದ್ರ ಪಂಚಮರುಗಳಿಗೂ, ಶರಣ್ಯವಿಶೇಷ-ಸತ್ಯತ್ವಜ್ಞಾನತ್ವಾದಿಗಳಾದ ಸ್ವರೂಪ ನಿರೂಪಕಧರ್ಮವೇನು, ವಾತ್ಸಲ್ಯ ಕೃಪಾದಿಗಳಾಗಿ ಉಪಾಯನಾಗಿರುವವಕ್ಕೆ ಯೋಗ್ಯವಾದ ಗುಣಗಳುಳ್ಳ ಶರಣ್ಯ ವಿಶೇಷವು, ಫಲವಿಶೇಷ-ಮೋಕ್ಷೇತರ ಪ್ರಪನ್ನರಾಗಿ ಅಪೇಕ್ಷಿಸುವ ಫಲವಿಶೇಷವು ಮತ್ತು ಮೋಕ್ಷಾರ್ಥಿಗಳಿಗೆ ಬೇಕಾದುದು, ಇವುಗಳಿಗೆ, ಅನುಬಂಧಿಯಾನ - ಸಂಬಂಧಿಸಿಕೊಂಡಿರುವ, ಅನ್ಯೂನಾನಧಿಕ - ಕಮ್ಮಿಯೂ ಇಲ್ಲದೆ ಅಧಿಕವೂ ಇಲ್ಲದೆಯೂ, ಕರ್ತವ್ಯ ವಿಶೇಷತ್ತಿನುದ್ಯೆಯು - ಮಾಡತಕ್ಕ ಪ್ರಪತ್ತ್ಯನುಷ್ಠಾನದ, ಅಧ್ಯವಸಾಯತ್ತುಕ್ಕು - ನಿಶ್ಚಯಜ್ಞಾನಕ್ಕೆ, ಅನನ್ಯಥಾ ಸಿದ್ಧಮಾನ - ಶಾಸ್ತ್ರವಿಧಿ ಬೇಕಾಗದೇ ಸ್ವತಂತ್ರವಾಗಿ ಉಂಟಾಗುವ, ಅನುಮಾನಂ ಕಿಡೈಯಾದು - ಅನುಮಾನ ಪ್ರಮಾಣವು ಇಲ್ಲವು ವೈದಿಕ ಮಂತ್ರೋಪದೇಶಗಳಿಗೆ ಅನರ್ಹರಾದ ಶೂದ್ರ ಪಂಚಮಾದಿಗಳು, ಮೋಕ್ಷಕ್ಕಾಗಿಯೂ ಇತರ ಫಲಗಳಿಗಾಗಿಯೂ ಶರಣಾಗತಿಯನ್ನು ಮಾಡುತ್ತಾರೆ. ಆ ಶರಣಾಗತಿಯನ್ನು ಮಾಡುವಾಗ ಶರಣ್ಯನು ಎಂತಹನೆಂಬುದು ತಿಳಿದಿರಬೇಕು ಆತನ ಸ್ವರೂಪ ನಿರೂಪಕ ಧರ್ಮಗಳು ಯಾವುವು ? ಆತನು ನಿರ್ದೋಷನಾಯನಾಗಿರುವ ಉಪಯುಕ್ತ ಗುಣಗಳಾವುವು ? ಆತನು ಯಾವಾಗಲೂ ಲಕ್ಷ್ಮಿಯೊಂದಿಗೇನೇ ಇರುವುದರಿಂದಾಗುವ ಪ್ರಯೋಜನವೇನು ? ಇದೆಲ್ಲಾ ಅವಶ್ಯಕವಾಗಿ ತಿಳಿಯಬೇಕಾದ ವಿಷಯವು ಇದು ಶಾಸ್ತ್ರದಿಂದಲೇ ತಿಳಿಯಬೇಕಾದ ವಿಷಯವು. ಹಾಗೆಯೇ ಈ ಶರಣಾಗತಿಯಿಂದುಂಟಾಗುವ ಫಲಗಳು ಯಾವುವು ? ಮೋಕ್ಷಕ್ಕಾಗಿ ಮಾಡುವ ಶರಣಾಗತಿಗೂ ಇತರ ಫಲಗಳಿಗಾಗಿ ಮಾಡುವ ಶರಣಾಗತಿಗೂ, ಕ್ರಮದಲ್ಲಿ ವ್ಯತ್ಯಾಸವೇನು ? ಪರಿಕರಗಳು ಯಾವುವು ? ಅಜ್ಞ ಯಾವುದು ? ಇವೆಲ್ಲಾ ತಿಳಿಯತಕ್ಕ

ಏವಂ ಪ್ರಪತ್ತೇಃ ಕರ್ತವ್ಯತ್ವಂ ವಿಧೇಯತ್ವಂಚ ಸ್ಥಾಪಯಿತ್ವಾ ನಿಗಮಯತಿ

ಆಗೈಯಾಲ್ ಸಪರಿಕರ ಸೇವಾ ವಿಶೇಷಙ್ಗಳ್ ಪೋಲೆ ಸಪರಿಕರ ಭರಸಮರ್ಪಣಮುಂ ಇಙ್ಗು ವಿಧೇಯಮಾಗಕ್ಕುರೈಯಿಲ್ಲೈ.

ವಿಷಯಂಗಳಾಗಿನ ಇವೆಲ್ಲಾ ಶಾಸ್ತ್ರದಿಂದ ತಿಳಿಯತಕ್ಕವುಗಳೇ ವಿನಾ ಕೇವಲ ಅನುಮಾನ ಪ್ರಮಾಣದಿಂದ ಸಾಧಿಸಲು ಅಸಾಧ್ಯವು ಎಂಬ ತಾತ್ಪರ್ಯವು.

ಪ್ರಪತ್ತಿಯು ಶಾಸ್ತ್ರವಿಧಿ ಬಲಾತ್ ಅವಶ್ಯಕವಾಗಿ ಕರ್ತವ್ಯವೆಂದು ನಿಗಮನವು

ಅತೀಂದ್ರಿಯ ಗೋಚರನಾದ ಶರಣ್ಯನಲ್ಲಿ ಅತೀಂದ್ರಿಯ ಫಲವಾದ ಮೋಕ್ಷಾದಿಗಳಲ್ಲಿ ಪ್ರತ್ಯಕ್ಷಾನುಮಾನ ಪ್ರಮಾಣಗಳು ದುರ್ಬಲಗಳಾದುದರಿಂದ ಶಾಸ್ತ್ರಪ್ರಮಾಣವಿಧಿ ಬಲದಿಂದಲೇ ಪ್ರಪತ್ತಿಯು ಅವಶ್ಯಕವಾಗಿ ಕರ್ತವ್ಯವು. ಇದು ಗುರುಮುಖೇನ ವರ್ಣಾಶ್ರಮೋಚಿತ ಕ್ರಮದಲ್ಲಿ ಪರಿಕರಗಳೊಂದಿಗೆ ಅನುಷ್ಠಿಸತಕ್ಕದ್ದು. ಅಧಿಕಾರಿಯ ಗುಣವಾಗಿ ಯಾವ ಮಂತ್ರದಮೂಲಕ ಅನುಷ್ಠಿಸತಕ್ಕದ್ದೆಂಬುದನ್ನು ಶಾಸ್ತ್ರವಿಧಿಮೂಲಕ ತಿಳಿಯತಕ್ಕದ್ದು. ಆದುದರಿಂದ **ಶರಣಂವ್ರಜ** ಎಂಬುದು ವಿಧಿಯೇ ವಿನಾ ಅನುವಾದವಲ್ಲವು. **ಆಗೈಯಾಲ್**- ಹೀಗೆ ಪ್ರತ್ಯಕ್ಷಾನುಮಾನಗಳಿಂದ ಪ್ರಪತ್ತಿಯು ಸಿದ್ಧವಾದುದಲ್ಲದೆ ಶಾಸ್ತ್ರಮೂಲಕ ಕರ್ತವ್ಯತ್ವವೂ ವಿಧೇಯತ್ವವೂ ಅವಶ್ಯಕವಾಗಿರುವುದರಿಂದ, **ಸಪರಿಕರ ಸೇವಾ ವಿಶೇಷಙ್ಗಳ್ ಪೋಲೇ**-ಭಗವತ್ಕೈಂಕರ್ಯಗಳೆಲ್ಲಾ ಶಾಸ್ತ್ರವಿಧಿರೀತ್ಯಾ ಅಂಗಗಳೊಂದಿಗೆ ಹೇಗೆ ಅನುಷ್ಠಿಸತಕ್ಕವೋ ಹಾಗೆಯೇ, **ಇಙ್ಗು** ಈ ಪ್ರಪತ್ತಿಯ ಸಂದರ್ಭದಲ್ಲಿಯೂ ಅದು, **ವಿಧೇಯಮಾಗ** - ಶಾಸ್ತ್ರವಿಧಿರೀತ್ಯಾ ಅನುಷ್ಠಿಸತಕ್ಕದಾಗಲು, **ಕುರೈಯಿಲ್ಲೈ** - ಯಾವ ನ್ಯೂನತೆಯೂ ಇಲ್ಲವು. ಗುರುಮುಖೇನ ಭರಸಮರ್ಪಣವು ಅನಾವಶ್ಯಕವೆಂದು ಬಿಟ್ಟವರು ಪರಿತ್ಯಕ್ತರೆಂದು, ತಮ್ಮ ಹಿತದಲ್ಲಿ ತಮಗೇನೇ ಮಮತೆಯಿಲ್ಲದೆ ಈ ಆತ್ಮಸ್ವರೂಪವನ್ನು ಪರಿತ್ಯಜಿಸಿರುತ್ತಾರಲ್ಲಾ ಎಂಬ ಪರಿತಾಪದಿಂದ ಮಾಡಿದ ಒಕ್ಕೋಪದೇಶವಾಗಿರುತ್ತದೆ. ಈ ಶ್ಲೋಕ ವಿಧಿಯನ್ನರಿಯದೆ ತಮ್ಮ ನಾಶವನ್ನು ಖಂಡಿಸಿರುತ್ತಾರಲ್ಲಾ ಎಂದು ಶ್ರೀ ದೇಶಿಕರವರನ್ನು ಕೆಲವರು ನಿಂದಿಸುವರು. ಇದು ಸರಿಯಲ್ಲವು.

(೫) ಭಕ್ತ್ಯುಪಾಯಸ್ಸ್ವರೂಪ ವಿರುದ್ಧ ಇತಿವಾದಸ್ಯನಿರಾಸಃ

ಇಪ್ಪಡಿ ಯಥಾಧಿಕಾರಮ್ ಶಾಸ್ತ್ರಮ್ ವಿಧಿತ್ತವತ್ತಿಲುಮ್ ಉಪಾಸನಾದಿಗಳ್ ಸ್ವರೂಪ ವಿರುದ್ಧಙ್ಗಳೆನ್ರು ಶಿಲರ್ ಶೊಲ್ಲುವರ್‌ಗಳ್.

ಭಕ್ತ್ಯುಪಾಯವು ಸ್ವರೂಪ ವಿರುದ್ಧ ನೆಂಬ ವಾದದ ಖಂಡನವು.

ಇದುವರೆಗೂ ಸಾಧ್ಯೋಪಾಯವಾದ ಪ್ರಪತ್ತಿಯ ಸ್ವರೂಪ ವಿಷಯದಲ್ಲಿ ಮಾಡಿದ ಆಕ್ಷೇಪಗಳಿಗೆ ಪರಿಹಾರಗಳನ್ನು ಹೇಳಿದರು. ಪ್ರಾಸಙ್ಗಿಕವಾಗಿ ಸಾಧ್ಯೋಪಾಯವಾದ ಭಕ್ತಿಸ್ವರೂಪದಲ್ಲಿನ ಆಕ್ಷೇಪಗಳಿಗೆ ಸಮಾಧಾನವನ್ನು ಹೇಳುತ್ತಾರೆ. ಶಾಸ್ತ್ರವು ಉಪಾಯವಾಗಿ ವಿಧಿಸಿರುವುದರಲ್ಲಿ ಪ್ರಪತ್ತಿಯಾದರೂ ಸರ್ವೇಶ್ವರನ ನಿರ್ಹೇತುಕ ಕೃಪೆಗೆ ಅನುರೂಪವಾದುದೆಂದಾದರೂ ಒಪ್ಪಬಹುದು. ಪ್ರಪತ್ತಿಗೆ ಸರ್ವಾಧಿಕಾರತ್ವವೂ ಉಂಟು. ಹೀಗಿರುವಲ್ಲಿ ಸಮರ್ಥನಿಗೆ ಭಕ್ತಿರೂಪ ಸಾಧ್ಯೋಪಾಯವೂ, ಅಸಮರ್ಥನಿಗೆ ಪ್ರಪತ್ತಿಯೂ ಹೀಗೆಲ್ಲಾದರೂ ಉಂಟೋ? ಎಂಬುದು ಆಕ್ಷೇಪವು. ಶಾಸ್ತ್ರವು ಉಪಾಸನವನ್ನು ಒಂದು ಸಾಧ್ಯೋಪಾಯವೆಂದು ವಿಧಿಸಿದ್ದರೂ, ಅದು ಸ್ವರೂಪ ವಿರುದ್ಧವಾದುದೇ ಎಂದು ಕೆಲವರು ಹೇಳಬಹುದು.

ಇಪ್ಪಡಿ - ಹೀಗೆ ಎಂದರೆ ಹಿಂಪೆ ಪ್ರಪತ್ತಿಯನ್ನು ಯಥಾಧಿಕಾರವಾಗಿ ಶಾಸ್ತ್ರವು ವಿಧಿಸಿರುವಂಥಾದ್ದು ಎಂದು ಸ್ಥಾಪಿಸಿದ ಸಂದರ್ಭದಲ್ಲಿ, ಭಕ್ತಿ ಮಾರ್ಗವು ಸಮರ್ಥನಿಗೂ ಅಸಮರ್ಥನಾದ ಅಕಿಂಚನನಿಗೆ ಪ್ರಪದನವೂ ಎಂದು ಶಾಸ್ತ್ರವು ವಿಧಿಸಿರುವಾಗ ಎಂಬ ಭಾವವು, **ಯಥಾಧಿಕಾರಮ್** - ಬ್ರಾಹ್ಮಣ ಕ್ಷತ್ರಿಯ ವೈಶ್ಯರಾಗಿ ಸಮರ್ಥರಾಗಿರುವವರಿಗೆ ಭಕ್ತ್ಯುಪಾಯವೆಂದೂ, ಶೂದ್ರಾದಿಗಳೂ ಅಸಮರ್ಥರೂ ಇವರುಗಳಿಗೆ ಪ್ರಪತ್ತಿ ಎಂದೂ ಹೀಗೆ ಅಧಿಕಾರಾನುಗುಣವಾಗಿ, **ಶಾಸ್ತ್ರಮ್ ವಿಧಿತ್ತವತ್ತಿಲುಮ್** - ಶಾಸ್ತ್ರವು ವಿಧಿಸಿರುವದರಲ್ಲೂ, **ಉಪಾಸನಾದಿಗಳ್** - ಉಪಾಸನ ಮತ್ತು ಆದಿಪದದಿಂದ ಅದಕ್ಕೆ ಸಹಕಾರಿಯಾದ ಕರ್ಮಯೋಗ, **ಜ್ಞಾನಯೋಗ**, ಭಕ್ತಿಯೋಗಾದಿಗಳು, **ಸ್ವರೂಪ ವಿರುದ್ಧಙ್ಗಳೆನ್ರು** - ತನ್ನ ಪರತಂತ್ರವಾದ ಸ್ವರೂಪಕ್ಕೆ ವಿರುದ್ಧವಾದವುಗಳೆಂದು, **ಶಿಲರ್ ಶೊಲ್ಲುವರ್‌ಗಳ್** - ಕೆಲವರು ಹೇಳುವರು. ಶ್ರೀ ಪಿಳ್ಳೈ ಲೋಕಾಚಾರ್ಯರು ಅವರನುಗ್ರಹಿಸಿರುವ ಶ್ರೀ ವಚನ ಭೂಷಣದಲ್ಲಿ ಹಾಗೆ ಹೇಳಿರುತ್ತಾರೆ. ನಮಗೆ ಈ ಗ್ರಂಥವು ಹೇಗೋ, ಅವರಿಗೆ ಶ್ರೀವಚನ ಭೂಷಣವು

ಶ್ರೀಮದ್ರಹಸ್ಯತ್ರಯದ ಮಾಹಾತ್ಮ್ಯೆಯನ್ನು ಪ್ರದರ್ಶಿಸುವ ಉಪದೇಶ ಗ್ರಂಥವು. ಈ ಸಂದರ್ಭದಲ್ಲಿ ಅವರು ಹೇಳಿರುವದೇನೆಂದರೆ :—"ಪ್ರಾಪಕಾಂತರ ಪರಿತ್ಯಾಗತ್ತುಕ್ಕುಮ್ ಅಜ್ಞಾನಾಶಕ್ತಿಗಳನ್ರು; ಸ್ವರೂಪ ವಿರೋಧಮೇ ಪ್ರಧಾನಹೇತು. ಪ್ರಾಪಕಾಂತರಮ್ ಅಜ್ಞರ್ಕ್ಕುಪಾಯಮ್, ಜ್ಞಾನಿಗಳ್ಕ್ಕಪಾಯಮ್; ಅಪಾಯಮಾಯ್ ದುಸ್ವರೂಪನಾಶಕಮಾಗೈಯಾಲೆ ವರ್ತತೇಮೇ ಮಹದ್ಭಯಮ್ ಎನ್ಗೈಯಾಲೇ ಭಯಜನಕಮ್; ಮಾಶುಚಃ ಎನ್ಗೈಯಾಲೇ ಶೋಕಜನಕಮ್; ಮದಿರಾಬಿಂದುಮಿಶ್ರಮಾನ ಶಾತಕುಂಭಮಯ ಕುಂಭಗತ ತೀರ್ಥಸಲಿಲಮ್ಪೋಲೆ ಅಹಂಕಾರ ಮಿಶ್ರಂ; ರತ್ನತ್ತುಕ್ಕು ಪಲಕರೈಪ್ಪೋಲವುಮ್; ರಾಜ್ಯತ್ತುಕ್ಕು ಎಲುಮಿಚ್ಚಮ್ಪಳಮ್ ಪೋಲವುಮ್, ಫಲತ್ತುಕ್ಕು ಸದೃಶಮನ್ರು, ಔಷಧಸೇವೆ ಪಣ್ಣಾದವರ್ಗಳುಕ್ಕು ಅಭಿಮತವಸ್ತುಕ್ಕಳಿಲೆ ಅತ್ತೈ ಕಲಶಿಯಿಡುಮಾಪ್ಪೋಲೆ, ಈಶ್ವರನೈಕ್ಕಲನ್ನು ವಿಧಿಕ್ಕಿರ ವಿತ್ತೈ; ಇತ್ತೈ ಪ್ರವರ್ತಿಪ್ಪಿತ್ತದು ಪರಹಿಂಸೈಯೈ ನಿವರ್ತಿಪ್ಪಿಕ್ಕೈಕಾಕ. ಇದುತಾನ್ ಪೂರ್ವವಿಹಿತ ಹಿಂಸೈಪೋಲೆ ವಿಧಿನಿಷೇಧಙ್ಗಳಿರಂಡುಕ್ಕುಮ್ ಕುರೈಯಿಲ್ಲೈ. ಅತ್ತೈ ಶಾಸ್ತ್ರವಿಶ್ವಾಸತ್ತುಕ್ಕಾಗ ವಿಧಿತ್ತದು, ಇತ್ತೈ ಸ್ವರೂಪ ವಿಶ್ವಾಸತ್ತುಕ್ಕಾಗ ವಿಧಿತ್ತದು; ಅದು ತೇಲ್ ಪುರೈಯೈಪ್ಪೋಲೆ, ಇದು ಮರ್ಮಸ್ಪರ್ಶಿ. ಇದುತಾನ್ ಕರ್ಮಸಾಧ್ಯಮಾಗೈಯಾಲೇ ದುಷ್ಕರಮುಮಾಯಿರುಕ್ಕುಮ್" ಸಙ್ಗ್ರಹವಾಗಿ ಇದರ ತಾತ್ಪರ್ಯವೇನೆಂದರೆ (೧) ಪ್ರಾಪಕಾಂತರವಾದ ಭಕ್ತಿಮಾರ್ಗವನ್ನು ಈಗಿನವರು ತ್ಯಜಿಸಿರುವದಕ್ಕೆ ಅಜ್ಞಾನ ಮತ್ತು ಅಶಕ್ತಿಗಳೂ ಕಾರಣವೆಂದು ಹೇಳುವರು. ಹಾಗಲ್ಲವು. ಪ್ರಪನ್ನರ ಸ್ವರೂಪಕ್ಕೆ ವಿರುದ್ಧವಾಗಿರುವದೇ ಕಾರಣವು. (೨) ಅದನ್ನು ಅಜ್ಞರಿಗೆ ಉಪಾಯವೆಂದು ಇಟ್ಟುಕೊಳ್ಳಬಹುದು. ಜ್ಞಾನಿಗಳಿಗೆ ಇದು ಅಪಾಯವು. ಚೇತನರ ಸ್ವರೂಪವು ಸರ್ವೇಶ್ವರನಿಗೆ ಅತ್ಯಂತ ಪರತಂತ್ರನಾಗಿರುವದು, ಇದು ಸ್ವಯತ್ನರೂಪವಾದುದರಿಂದ ಸ್ವರೂಪನಾಶಕವು. (೩) "ವರ್ತತೇಮೇ ಮಹದ್ಭಯಂ" ಎಂದಿರುವದರಿಂದ ತುಂಬಾ ಭಯಾವಹವೆಂಬ ಭಾವವು. (೪) "ಮಾಶುಚಃ" ಎಂದು ಹೇಳಿರುವದರಿಂದ ಅದು ಶೋಕಜನಕವು. (೫) ಹಾಗೆ ಸ್ವರೂಪನಾಶಕವೆಂದು ಒಪ್ಪಿಕೊಳ್ಳದಿದ್ದರೆ, ಇದಕ್ಕೆ ಪ್ರಾಯಶ್ಚಿತ್ತವಿಧಿಯನ್ನು ಏಕೆ ವಿಧಿಸಿತು ಎಂದು ಕೇಳಬೇಕಾಗುತ್ತದೆ. (೬) ಶ್ರೀ ಭಾಷ್ಯಕಾರರ ಶಿಷ್ಯರಾದ ತಿರುಕ್ಕುರುಗೈಪ್ಪಿರಾನ್ ಎಂಬುವರು ಇದು ಸುವರ್ಣದ ಕುಂಭದಲ್ಲಿಟ್ಟ ಪವಿತ್ರವಾದ ಗಂಗಾತೀರ್ಥಕ್ಕೆ ಒಂದು ಬಿಂದು ಹೆಂಡವು ಸೇರಿಸಿದಹಾಗೆ ಅಹಂಕಾರ ಮಿಶ್ರವಾದುದು. ಹೇಗೆಂದರೆ ಈ ಚೇತನನು ಸ್ವತಃ ಮಹಾ ಪರಿಶುದ್ಧನು ಕುಂಭಗತ ಗಂಗಾಜಲದಹಾಗೆ ಭಗವಚ್ಛೇಷತ್ವ ಜ್ಞಾನದಿಂದಲೂ ಪರಿಶುದ್ಧನು.

ಭಕ್ತ್ಯುಪಾಯವನ್ನು ಸ್ವತಂತ್ರಿಸಿ ಅನುಷ್ಠಿಸುವದರಿಂದ, ಗಂಗಾಜಲಕ್ಕೆ ಹೆಂಡದ ಸಂಬಂಧ ಬಂದಹಾಗೆ ಅಹಂಕಾರ ಮಿಶ್ರವಾಯಿತು. (೭) ಎರಡು ಸಿಂಬೆಯ ಹಣ್ಣುಗಳನ್ನು ಕೊಟ್ಟು ಪ್ರತಿಯಾಗಿ ರಾಜ್ಯವನ್ನು ಕೊಡು ಎಂದು ಕೇಳಿದಹಾಗೆ, ಅಲ್ಪವಾದ ಭಕ್ತ್ಯುಪಾಯವನ್ನು ಮಾಡಿಬಿಟ್ಟು ಅಮೋಘಫಲವಾದ ಮೋಕ್ಷವನ್ನು ಪ್ರಾರ್ಥಿಸುವದು ಆ ಫಲಕ್ಕೆ ಸದೃಶವಾದ ಉಪಾಯವಲ್ಲದುದರಿಂದಲೂ ಸ್ವರೂಪ ವಿರುದ್ಧವಾದುದು. (೮) ಆತನಿಗೆ ಕೊಡಲು ಯಾವುದೂ ತನ್ನಲ್ಲಿಲ್ಲವು. ಹೀಗಿದ್ದರೂ ಆತ್ಮವನ್ನು ಅವನು ಕೊಟ್ಟದ್ದನ್ನೇ ಹಿಂತಿರುಗಿಕೊಟ್ಟರೂ ಅಥವಾ ಸುಮ್ಮನೇ ಅವನಿಗೆ ಸಮರ್ಪಿಸಿದರೂ ಅದು ಉಪಾಯವಾಗಲಾರದು (ಅಜ್ಞಶರಣಾಗತಿ) ಹಾಗಲ್ಲದೆ ತನ್ನ ಆತ್ಮಾವನ್ನು ಸಮರ್ಪಿಸುತ್ತೇನೆಂಬ ಬುದ್ಧಿಯಿಂದ ಸಮರ್ಪಿಸಿದರೂ ಚೋರಕೃತ್ಯವಾಯಿತು. (೯) ಅಥವಾ ಭರ್ತೃಭೋಗ್ಯವನ್ನುಂಡು ಹೊಟ್ಟೆಹೊರಕೊಳ್ಳುವ ಭಾರ್ಯೆಯ ಹಾಗೆ ಇಬ್ಬರ ಸ್ವರೂಪಕ್ಕೂ ಹಾನಿಯು. ಸತಿಯು ಭರ್ತಾವಿನ ಉಪಭೋಗಕ್ಕಾಗಿಯೇ ತಾನು ಮಾಡುವದೆಲ್ಲವು ಎಂದು ಭಾವಿಸದೇ ಇರುವದರಿಂದ ಸ್ವರೂಪ ಹಾನಿಯು ಅಂತವಳ ಸಂಬಂಧವಿರುವದರಿಂದ ಭರ್ತಾವಿಗೆ ಸ್ವರೂಪಹಾನಿಯು. ಹಾಗೆಯೇ ಇಲ್ಲಿಯೂ ಎಂಬ ಭಾವವು. (೧೦) ಆದರೆ ಶಾಸ್ತ್ರವಿಧಿ ಏತಕ್ಕೆಂದರೆ ಔಷಧವನ್ನು ತೆಗೆದುಕೊಳ್ಳದಿರುವವರಿಗೆ ಔಷಧವನ್ನು ಸಕ್ಕರೆಯಲ್ಲಿ ಕಲಿಸಿಕೊಡುವಹಾಗೆ ಈ ಭಕ್ತಿಯ ಈಶ್ವರನೊಂದಿಗೆ ಸೇರಿಸಲ್ಪಟ್ಟು ವಿಧಿಸಲ್ಪಟ್ಟಿರುತ್ತದೆ. (೧೧) ಇದು ಪಶ್ವಾಲಂಭನಾದಿಗಳಹಾಗೆ ಸುಕೃತ ಅಥವಾ ಪುಣ್ಯರೂಪವಾಗಿ ತೋರಿದರೂ, ಪುಣ್ಯಾಪೂಪಾಪವೇ ಹೇಗೋ, ಹಾಗೆ ಉಪಾಸನವು ಪಾಪರೂಪವಾದುದು. (೧೨) ಇದು ಪಶ್ವಾಲಂಭನಕ್ಕಿಂತಲೂ ಕ್ರೂರವು. ಅದು ದುಃಖಮಿಶ್ರವಾಗಬಹುದು: ಇದಾದರೋ ಆತ್ಮಜ್ಞಾನ ಉಂಟಾದವನಿಗೆ ಭಗವದೇಕ ಪಾರತಂತ್ರ್ಯ ಸ್ವರೂಪ ನಾಶವೆಂಬ ಭಾವವು". ಈ ಅಭಿಪ್ರಾಯಗಳನ್ನೆಲ್ಲಾ ಶ್ರೀ ನಿಗಮಾಂತ ದೇಶಿಕರವರು ಮುಂದೆ ಖಂಡಿಸುತ್ತಾರೆ. ಉಪಾಸನವು ಸ್ವರೂಪ ವಿರುದ್ಧವೆಂದು ಉಪಪಾದಿಸಿರುವುದು ಸ್ವಾಮಿದೇಶಿಕರವರಿಗೆ ಶಾಸ್ತ್ರಪಙ್ಕ್ತಿಗಳಿಗೆ ವಿರುದ್ಧಾಭಿಪ್ರಾಯವಾಗಿ ಸರ್ವಾತ್ಮನಾ ಹಿತವಲ್ಲವು. ಹೀಗೆ ಬ್ರಹ್ಮವಿದ್ಯೆಗಳೆಲ್ಲಾ ಉಪಾಸನೆಯರೂಪದಲ್ಲಿ ಬ್ರಹ್ಮಸೂತ್ರಗಳಲ್ಲೂ ಗೀತೆಯಲ್ಲೂ ಪುರಾಣೇತಿಹಾಸಗಳಲ್ಲೂ ಉಪಬೃಹ್ಮಣವಾಗಿದ್ದರೂ, ಮತ್ತೂ ಶ್ರುತಿಯಲ್ಲೂ ಉಪಾಸನ ವಿಧಿಯು ಕೊಂಡಾಡಲ್ಪಟ್ಟಿದ್ದರೂ, ಅದು ಸ್ವರೂಪ ವಿರುದ್ಧವೆಂದು ಹೇಳಿಬಿಟ್ಟರೆ, ಶಾಸ್ತ್ರ ಮರ್ಯಾದೆಯಲ್ಲಿ ವಿಶೇಷ ಮಮತೆಯುಳ್ಳವರು ಸುಮ್ಮನಿರುವದು ಸರಿಯಲ್ಲವೆಂದು ಭಾವಿಸಿ, ಈ ವಿಷಯವು ತಮ್ಮ ಉಪಪಾದನೆಯಾದ ಪ್ರಪದನ ಧರ್ಮಕ್ಕೆ ಅನುಪಯುಕ್ತವಾಗಿದ್ದರೂ

ಇವುವುಮ್ ಪ್ರಪತ್ತಿಯೈ ಸ್ತುತಿಕ್ಕೈಕ್ಕಾಗ ಅತಿವಾದಮ್ ಪಣ್ಣಿ ನಾರ್‌ಗಳ್, ಅದು ಎಙ್ಙನೇ ಎನ್ನಿಲ್—

(೧) ಭಕ್ತ್ಯುಪಾಯವು ಆತ್ಮನಾಶಕತಯಾ ಸ್ವರೂಪ ವಿರುದ್ಧತ್ವ ಮಿತಿವಾದ ನಿರಾಸಃ

ನಿತ್ಯಮಾನ ಆತ್ಮಸ್ವರೂಪತ್ತುಕ್ಕು ಇವೈ ನಾಶಕಙ್ಗಳಾಯ್‌ಕ್ಕೊಂಡು ಸ್ವರೂಪ ವಿರದ್ಧಙ್ಗಳೆನ್ನವೊಣ್ಣಾದು

"ಅತಿವಾದಮ್ ಪಣ್ಣಿ ನಾರಗಳ್" ಎಂದು ಖಂಡಿಸಿ ಅದು ಹೇಗೆ ಶಾಸ್ತ್ರ ವನ್ನು ತಿರಸ್ಕರಿಸಿದ ಅತಿವಾದವೆಂಬುದನ್ನು ತೋರಿಸಿ ಖಂಡಿಸುತ್ತಾರೆ.

ಇದುವುಮ್ - ಹೀಗೆ ಸ್ವರೂಪವಿರುದ್ಧವೆನ್ನುವ ದೋಷಾರೋಪಣವೂ ಕೂಡ, ಪ್ರಪತ್ತಿಯೈ ಸ್ತುತಿಕ್ಕೈಕ್ಕಾಗ - ಸುಲಭೋಪಾಯವಾದ ಪ್ರಪತ್ತಿ ಯನ್ನು ಸ್ತೋತ್ರಮಾಡುವದಕ್ಕಾಗಿ, ಎರಡು ಮಾರ್ಗವಿದ್ದು, ಒಂದು ಮಾರ್ಗವು ದೋಷಾವಹವಾದರೆ ಇನ್ನೊಂದು ಉತ್ತಮವಾದದೆಂದು ಏರ್ಪಡುತ್ತದೆ, ಆದು ದರಿಂದ ಇನ್ನೊಂದುಪಾಯವಾದ ಪ್ರಪತ್ತಿಯನ್ನು ಶ್ಲಾಘಿಸುವದಕ್ಕಾಗಿ, ಅತಿ ವಾದಮ್ ಪಣ್ಣಿನಾರ್‌ಗಳ್ - ಶಾಸ್ತ್ರಪ್ರಮಾಣವನ್ನು ದೂರೀಕರಿಸಿದ ವಾದ ವನ್ನು ಮಾಡಿದರು ಅದು ಹೇಗೆ ಎಂಬುದನ್ನು ಉಪಪಾದಿಸುತ್ತಾರೆ ಎಙ್ಙನೇ ಎನ್ನಿಲ್ - ಅದು ಹೇಗೆ ಎಂದರೆ:—

(೧) ಭಕ್ತ್ಯುಪಾಯವು ಆತ್ಮನಾಶಕವಾಗಿ ಸ್ವರೂಪ ವಿರುದ್ಧವೆಂಬ ವಾದದ ಖಂಡನವು

ಆತ್ಮಸ್ವರೂಪಕ್ಕೇ ಭಕ್ತ್ಯುಪಾಯಾದಿಗಳು ವಿರುದ್ಧವೆಂದು ಹೇಳುವ ದೇನು, (೧) ಆತ್ಮಸ್ವರೂಪದಲ್ಲೇ ನಾಶಕತ್ವವೇ ಅಥವಾ (೨) ಅಸಂಭಾವಿತ ತ್ವವೇ ಅಥವಾ (೩) ಅನರ್ಥಾವಹತ್ವವೇ ಎಂದು ಮೂರು ವಿಧವಾಗಿ ವಿಕ ಲ್ಪಿಸಿ ಮೊದಲನೆಯದನ್ನು ಮೊದಲು ಖಂಡಿಸುತ್ತಾರೆ ನಿತ್ಯಮಾನ ಆತ್ಮ ಸ್ವರೂಪತ್ತುಕ್ಕು - ನಿತ್ಯವಾದ ಆತ್ಮಸ್ವರೂಪಕ್ಕೆ, ಇವೈ - ಭಕ್ತ್ಯಾದಿ ಉಪಾ ಯಗಳು, ನಾಶಕಙ್ಗಳಾಯ್‌ಕ್ಕೊಂಡು - ನಾಶಕವಾದವುಗಳಾಗಿ, ಸ್ವರೂಪ ವಿರುದ್ಧವೆಂದು ಹೇಳಲು ಆಗುವದಿಲ್ಲವು ಆತ್ಮಸ್ವರೂಪವು ನಿತ್ಯವಾಗಿರುವಾಗ ಅದರ ಸ್ವರೂಪಕ್ಕೆ ನಾಶಕಗಳು ಹೇಗೆ ಆಗುತ್ತವೆ ಎಂಬ ತಾತ್ಪರ್ಯವು.

ಅಸಂಭಾವಿತತ್ವೇನ ಸ್ವರೂಪ ವಿರುದ್ಧಮಿತಿವಾದ ನಿರಾಸಃ

ಪ್ರಪತ್ತ್ಯನುಷ್ಠಾನತ್ತಿಲುಮ್ ಕೈಙ್ಕರ್ಯತ್ತಿಲುಮ್ ಪೋಲೆ ಭಕ್ತ್ಯಾದಿಗಳಿಲುಮ್ (೧) "ಕರ್ತಾ ಶಾಸ್ತ್ರಾರ್ಥವತ್ವಾತ್" (೨) "ಪರಾತ್ತು

ಮುಂದೆ **ಪ್ರಪತ್ತ್ಯನುಷ್ಠಾನತ್ತಿಲುಮ್** ಎಂದು ಆರಂಭಿಸಿದ ವಾಕ್ಯದಿಂದ ಎರಡನೆಯ ಪಕ್ಷವನ್ನು ದೂಷಿಸುತ್ತಾರೆ. ಆ **ಪೂರ್ವ**ಪಕ್ಷವು ಹೇಗೆಂದರೆ:—ಜೀವನು ಅಣು ಸ್ವರೂಪನು, ಅಂತಹವನಿಗೆ ಕರ್ತೃತ್ವವು ದೇಹಮೂಲಕವಾಗಿಯೇ ವಿನಾ ಸ್ವರೂಪ ಮೂಲಕವಲ್ಲವು. ಹಾಗೆಯೇ ಗೀತೆಯಲ್ಲೂ ಕರ್ಮ ಸನ್ನ್ಯಾಸವನ್ನು ಬೋಧಿಸುವ ಸಂದರ್ಭದಲ್ಲಿ **"ಬ್ರಹ್ಮಣ್ಯಾಧಾಯ ಕರ್ಮಾಣಿ"** (ಗೀ. ೫. ೧೦) ಕರ್ಮಗಳು ಜೀವಸ್ವರೂಪಕ್ಕೆ ಸೇರಿದವಲ್ಲವಾದುದರಿಂದ **ಬ್ರಹ್ಮಣಿ** ಎಂದರೆ ಪ್ರಕೃತಿಯಲ್ಲಿ ಸಮರ್ಪಿಸಿ ಎಂಬರ್ಥವು **ಹೇ**ಳಲ್ಪಟ್ಟಿರುತ್ತದೆ. ಹಾಗೆಯೇ **"ನಕರ್ತೃತ್ವಂ ನ ಕರ್ಮಾಣಿ ಲೋಕಸ್ಯ ಸೃಜತಿ ಪ್ರಭುಃ** (ಗೀ. ೫ ೧೦) ಈ ಜೀವಾತ್ಮ ಸ್ವರೂಪಕ್ಕೆ ಕರ್ತೃತ್ವವು ಸೇರಿದುದಲ್ಲವೆಂದು ಹೇಳಲ್ಪಟ್ಟಿರುತ್ತದೆ. ಇದೂ ಅಲ್ಲದೆ **"ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ। ಅಹಂಕಾರ ವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ"** ॥ (ಗೀ. ೩. ೨೭.) ದೇಹಸಂಬಂಧದಿಂದುಂಟಾಗತಕ್ಕ ಕರ್ಮಗಳಿಗೆ ಸ್ವರೂಪತಃ ಕರ್ತೃತ್ವವು ಸಾಧ್ಯವಲ್ಲದ ಆತ್ಮನು ತಾನು ಆ ಕರ್ಮಗಳನ್ನು ಮಾಡಿದೆನೆಂದು ತನ್ನ ಈ ಅವಿಜ್ಞತೆಯಿಂದ ತಿಳಿಯುವನೆಂದೂ ಹೇಳಲ್ಪಟ್ಟಿರುತ್ತದೆ. ಮತ್ತು **"ಗುಣಾ ಗುಣೇಷು ವರ್ತಂತೇ ಇತಿ ಮತ್ವಾ ನ ಸಜ್ಜತೇ"** ಸತ್ವರಜಸ್ತಮೋಗುಣಗಳಿಂದ ಯುಕ್ತವಾದ ದೇಹವು ಸತ್ವರಜಸ್ತಮೋಗುಣರೂಪವಾದ ಕಾರ್ಯಗಳಲ್ಲಿ ಪ್ರವರ್ತಿಸುತ್ತದೆ ಎಂದು ತಿಳಿದು ಅವುಗಳಲ್ಲಿ ತಾನು ಸಂಬಂಧವನ್ನು ಇಟ್ಟುಕೊಳ್ಳುವದಿಲ್ಲವು ಇತ್ಯಾದಿ ಬಹು ಪ್ರಮಾಣಗಳುಂಟು. ಆದುದರಿಂದ ಹೀಗೆ ಜೀವಸ್ವರೂಪಕ್ಕೆ ಕರ್ತೃತ್ವವಿಲ್ಲದುದರಿಂದ ಭಕ್ತ್ಯಾದಿ ಕರ್ಮಗಳು ಅಸಂಭಾವಿತಗಳಾಗಿ ಸ್ವರೂಪ ವಿರುದ್ಧವು ಎಂಬುದು ಪೂರ್ವ ಪಕ್ಷಿಗಳ ತಾತ್ಪರ್ಯವು ಇದನ್ನು **ಖಂಡಿಸುತ್ತಾರೆ:** **ಪ್ರಪತ್ತ್ಯನುಷ್ಠಾನತ್ತಿಲುಮ್** - ಪ್ರಪತ್ತಿಯನ್ನು ಅನುಷ್ಠಿಸುವವರಲ್ಲೂ ಸಹ, **ಕೈಙ್ಕರ್ಯತ್ತಿಲುಮ್ ಪೋಲೆ**-ಕೈಂಕರ್ಯ**ಮಾಡು**ವವರಲ್ಲಿ ಹೇಗೋ ಹಾಗೆ, ಭಕ್ತ್ಯಾದಿಗಳಲ್ಲೂ ಸಹ, **ಕರ್ತಾಶಾಸ್ತ್ರಾರ್ಥವತ್ವಾತ್** - ಎಂದರೆ ಶಾಸ್ತ್ರದಲ್ಲಿ **ಯಜೇತ ಉಪಾಸೀತ** - ಸ್ವರ್ಗಕಾಮನಾದರೆ ಯಜ್ಞವನ್ನು **ಮಾಡು**, ಮೋಕ್ಷಾರ್ಥಿಯಾದರೆ

(೧) ಬ್ರ. ಸೂ. ೨ ೩ ೩೩. (೨) ಬ್ರ. ಸೂ. ೨. ೩. ೪೦.

ತಚ್ಛ್ರುತೇಃ" ಎಙ್ಗಿರಪಡಿಯೇ ಭಗವದಧೀನ ಕರ್ತೃತ್ವ ಮುಂಡಾಗೈಯಾಲುಮ್,

ಉಪಾಸನೆಯನ್ನು ಮಾಡು ಎಂಬ ಶಾಸ್ತ್ರಗಳಿಗೆ ಸಾರ್ಥಕ್ಯ ಉಂಟಾಗಬೇಕಾದುದರಿಂದ ಆತ್ಮಾ ಕರ್ತಾವೆಂದು ಒಪ್ಪತಕ್ಕದ್ದು ಎಂದೂ, **ಪರಾತ್ತು ತಚ್ಛ್ರುತೇಃ** ಎಂದರೆ ಈ ಮೇಲೆ ಹೇಳಿದ ಕರ್ತೃತ್ವವು ಭಗವಂತನಿಗೆ ಅಧೀನವಾದುದೆಂದೂ, ಎಙ್ಗಿರಪಡಿಯೇ-ಎಂದು ಹೇಳಿರುವಹಾಗೆ ಭಗವದಧೀನವಾದ, **ಕರ್ತೃತ್ವ ಮುಂಡಾಗೈಯಾಲುಮ್** - ಜೀವನಿಗೆ ಕರ್ತೃತ್ವಉಂಟಾಗುವದರಿಂದಲೂ; ಪೂರ್ವಪಕ್ಷಿಗೆ ಏನು ಸಮಾಧಾನವೆಂದರೆ, ಜೀವನಿಗೆ ಸ್ವರೂಪತಃ ಕರ್ತೃತ್ವವೇ ಇಲ್ಲವೆಂಬ ವಾದವೇ ನಿಜವಾದುದಲ್ಲವು; ಆತನಿಗೆ ಪರಾಯತ್ತ ಕರ್ತೃತ್ವ ಉಂಟೆಂದು ಶಾಸ್ತ್ರವು ಹೇಳುತ್ತದೆಂಬುದು ಈ ಎರಡು ಬ್ರಹ್ಮಸೂತ್ರಗಳಿಂದಲೂ ವ್ಯಕ್ತವೆಂಬ ಭಾವವು; ಆದರೆ ಇನ್ನೊಂದು ಪೂರ್ವಪಕ್ಷವು ಬರಬಹುದು, ಏನೆಂದರೆ, ಹೀಗೆ ಜೀವನ ಕರ್ತೃತ್ವವು ಪರಮಾತ್ಮಾಧೀನವಾದರೆ, **ಯಜೇತ ಉಪಾಸೀತ** ಇತ್ಯಾದಿ ವಿಧಿಗಳೆಲ್ಲಾ ಪರಮಪುರುಷನಿಗೆ ನ್ಯಾಯವೇ ವಿನಾ ಜೀವಾತ್ಮನಿಗೆ ಹೇಗೆ ಎಂದರೆ "**ಕೃತ ಪ್ರಯತ್ನಾಪೇಕ್ಷಸ್ತು ವಿಹಿತ ಪ್ರತಿಷಿದ್ಧಾ ವೈಯರ್ಥ್ಯಾದಿಭ್ಯಃ**" ಎಂಬ ಬ್ರಹ್ಮಸೂತ್ರ (೨. ೩. ೪೧) ಪ್ರಕಾರ ಪ್ರಥಮ ಪ್ರವೃತ್ತಿಯಲ್ಲಿ ಸರ್ವೇಶ್ವರನು ಜೀವನನ್ನು ಸ್ವಲ್ಪಪ್ರಯತನಗಳಲ್ಲಿ ಸ್ವತಂತ್ರನಾಗಿಬಿಟ್ಟು ಬಿಡುವದರಿಂದ ಕರ್ತೃತ್ವವು ಜೀವಾತ್ಮನಿಗೆ ಕೂಡುತ್ತದೆ. ಆದುದರಿಂದ ಜೀವಾತ್ಮನಿಗೆ ಕರ್ತೃತ್ವವಿಲ್ಲವೆಂಬ ವಾದವು ಅಸಂಗತವು. ಆದರೆ ಗೀತೆಯಲ್ಲಿ ಹೇಳಿರುವ ಪ್ರಮಾಣಗಳಿಗೆಲ್ಲಾ ತಾತ್ಪರ್ಯವೇನೆಂದರೆ, ಈ ಕರ್ಮಗಳೆಲ್ಲಾ ಪೂರ್ವ ಕರ್ಮಾನುಸಾರವಾಗಿ ದೇಹಮೂಲಕವಾಗಿ ತನ್ನ ಕರ್ತೃತ್ವಮೂಲಕ ನಡೆದರೂ ದೇಹವೇ ನಡೆಸುತ್ತದೆ ಎಂಬ ಅನುಸಂಧಾನವಿರಬೇಕೆಂದೂ ಆ ಕರ್ಮಗಳಲ್ಲಿ ತನಗೆ ಸಂಬಂಧ ಉಂಟೆಂದು ಭಾವಿಸಬಾರದೆಂಬ ತಾತ್ಪರ್ಯವು. ಶ್ರುತಿಯೂ ಕೂಡ "**ಏಷಹಿ ದ್ರಷ್ಟಾ ಕರ್ತಾ ಭೋಕ್ತಾ ವಿಜ್ಞಾನಾತ್ಮಾಪುರುಷಃ**" ಆತ್ಮಾವಿಗೆ ಜ್ಞಾತೃತ್ವ, ಕರ್ತೃತ್ವ, ಭೋಕ್ತೃತ್ವಗಳುಂಟೆಂದು ಹೇಳುತ್ತದೆ, ಆದುದರಿಂದ ಅಸಂಭಾವಿತವಾದುದರಿಂದ ಸ್ವರೂಪ ವಿರುದ್ಧವೆಂಬ ವಾದವು ಕೂಡುವದಿಲ್ಲವೆಂಬ ತಾತ್ಪರ್ಯವು. ಈ ವಾಕ್ಯಾರಂಭದಲ್ಲಿ **ಶ್ರುಪಕ್ತ್ಯನುಷ್ಠಾನತ್ತಿಲುಮ್ ಕೈಂಕರ್ಯಂಪೋಲೆ**-ಭಗವದಧೀನ ಕರ್ತೃತ್ವ ಉಂಟು ಎಂದು ಏಕೆ ಹೇಳಲ್ಪಟ್ಟಿತೆಂದರೆ, ಈ ಪೂರ್ವ ಪಕ್ಷಿಗಳು ಭಗವದ್ಭಾಗವತ ಕೈಂಕರ್ಯಗಳು ಅವಶ್ಯಕವೆಂದು ಹೇಳುವರು. ಹಾಗಾದರೆ ಆತ್ಮನಿಗೆ ಕೈಂಕರ್ಯಕ್ಕೆ ಕರ್ತೃತ್ವ

ಆತ್ಮಸ್ವರೂಪ ಮತ್ಯಂತ ನಿರ್ವ್ಯಾಪಾರ ಮೆನ್ನುಮ್ಪೋದು ಸತ್ವಲಕ್ಷಣಮಾನ ಅರ್ಥಕ್ರಿಯಾಕಾರಿತ್ವ ಮಿಲ್ಲಾಮೈಯಾಲೇ ತುಚ್ಛತ್ವಂ ಪ್ರಸಙ್ಗಿಕ್ಕೈಯಾಲುಮ್,

---

ವಿದ್ದರೆ ಪ್ರಪತ್ತ್ಯನುಷ್ಠಾನಕ್ಕಾಗಲಿ ಭಕ್ತ್ಯುಪಾಯಾನುಷ್ಠಾನಕ್ಕಾಗಲಿ ಏಕೆ ಕರ್ತೃತ್ವವಿಲ್ಲವೆಂಬ ವಾದವು? ಎಂಬಭಿಪ್ರಾಯವು; ಅದಕ್ಕಾಗಿ ಹಾಗೆ ಪ್ರಯೋಗವು. ಮುಂದೆ ಇನ್ನೊಂದು ದೂಷಣವನ್ನು ಹೇಳುತ್ತಾರೆ.

(೨) **ಆತ್ಮಸ್ವರೂಪವು, ಅತ್ಯಂತ ನಿರ್ವ್ಯಾಪಾರನೆನ್ನುಮ್ಪೋದು**-ಅಣುವಾಗಿರುವದರಿಂದ ಸರ್ವವ್ಯಾಪಾರಗಳಿಂದಲೂ ಶೂನ್ಯವಾದುದು ಎಂದು ಹೇಳುವಾಗ, **ಸತ್ವಲಕ್ಷಣಮಾನ** - ವಸ್ತುವಿನ ಸತ್ತೆಗೆ ಲಕ್ಷಣವಾದ, **ಅರ್ಥಕ್ರಿಯಾಕಾರಿತ್ವಂ** - ಪ್ರಯೋಜನ ರೂಪವಾದ ಒಂದು ವ್ಯಾಪಾರವನ್ನು ಮಾಡೋಣವು, **ಇಲ್ಲಾಮೈಯಾಲೇ** ಈ ಆತ್ಮಾವಿಗೆ ಇಲ್ಲವೆಂದು ಪೂರ್ವಪಕ್ಷಿಯ ಅಭಿಪ್ರಾಯವಾಗುವದರಿಂದ, **ತುಚ್ಛತ್ವಂ ಪ್ರಸಙ್ಗಿಕ್ಕೈಯಾಲುಮ್**-ಗಗನಾರವಿಂದ ಶಶಶೃಂಗ ಇವುಗಳಹಾಗೆ ಸ್ವರೂಪವೇ ಇಲ್ಲದಹಾಗೆ ಆಗುವದರಿಂದಲೂ; ಇದು ಎರಡನೆಯ ದೋಷವು; ಆತ್ಮನು ಅಣುವಾಗಿರುವದರಿಂದ ಯಾವದೊಂದು ವ್ಯಾಪಾರವು ಆತನಿಗಿಲ್ಲವೆಂದು ಹೇಳಿಬಿಟ್ಟರೆ, ಆಗ ಆತ್ಮಾವಿಗೆ ಸತ್ತೆಯೇ ಇಲ್ಲವೆಂದು ಹೇಳಬೇಕಾಗುತ್ತದೆ. ಸತ್ತೆಗೆ ಲಕ್ಷಣವೇನೆಂದರೆ, ಅರ್ಥ ಕ್ರಿಯಾಕಾರಿತ್ವವು. ಪ್ರಯೋಜನರೂಪ ವ್ಯಾಪಾರವು, ಇದು ಆತ್ಮಾವಿಗೂ ಉಂಟು. ಮೇಲಿನ ಶ್ರುತಿವಾಕ್ಯಾನುಸಾರವಾಗಿ ಜ್ಞಾತೃತ್ವವೂ, ಇಚ್ಛೆಯೂ, ಪ್ರಯತ್ನವೂ ಇವೆಲ್ಲಾ ಉಂಟು ಕರ್ತೃತ್ವಕ್ಕೆ ಇವುಗಳಿರಬೇಕು. ಇವು ಯಾವುದೂ ಇಲ್ಲವೆಂದರೆ ಗಗನ ಪುಷ್ಪದಹಾಗೂ ಮೊಲದ ಕೋಡಿನಹಾಗೂ ಸ್ವರೂಪಶೂನ್ಯವಾದ ತುಚ್ಛತ್ವವು ಪ್ರಾಪ್ತವಾಗುತ್ತದೆಂಬ ಭಾವವು ಹೀಗೆ ತುಚ್ಛತ್ವವಾದವನ್ನು ತಾದರೆ ಕಾಲವು ವಿಭುವಾದುದು, ಅಚೇತನವು. ಆದುದರಿಂದ ನಿರ್ವ್ಯಾಪಾರವಾದುದು. ಎಂದು ಹೇಳಿ ಅದಕ್ಕೆ ತುಚ್ಛತ್ವವನ್ನು ಹೇಳುತ್ತೀರಾ ಎಂದರೆ, ಅದಕ್ಕೆ ಕ್ಷಣ ಪರಿಣಾಮಾದಿರೂಪವ್ಯಾಪಾರವೂ ಉತ್ಪತ್ತಿ ವಿನಾಶರೂಪವ್ಯಾಪಾರವೂ ತಸ್ಮಾತ್ಕ ಉಂಟಾಗುವದರಿಂದ ತುಚ್ಛತ್ವ ಪ್ರಸಙ್ಗಕ್ಕೆ ಕಾರಣವಿಲ್ಲವು ಅರ್ಥಕ್ರಿಯಾಕಾರಿತ್ವವೂ ಇಲ್ಲಿಯೂ ಉಂಟು.

(೩) **ಜ್ಞಾನ ಚಿಕೀರ್ಷಾ ಪ್ರಯತ್ನಾಶ್ರಯತ್ವರೂಪಮಾನ** - ಜ್ಞಾತೃತ್ವ, ಇಚ್ಛಾರೂಪ ಸಙ್ಕಲ್ಪ, ಪ್ರಯತ್ನ ಇವುಗಳಿಗೆ ಆತ್ಮಾ ಆಶ್ರಯವಾಗಿ

ಜ್ಞಾನ ಚಿಕೀರ್ಷಾ ಪ್ರಯತ್ನಾಶ್ರಯತ್ವ ರೂಪಮಾನ ಕರ್ತೃತ್ವಮಿಲ್ಲೈಯಾಕ್ಕೆ ಆತ್ಮಾವುಕ್ಕು ಸನ್ನಿಧಿ ಮಾತ್ರಮೇ ವ್ಯಾಪಾರಮೆನ್ನಿಲ್, ಭೋಕ್ತೃತ್ವಾದಿಗಳು ಮನ್ರಿಕ್ಕೇ ಇವನುಕ್ಕು ಸಂಸಾರಮುಮ್ ಮಿಥ್ಯಾನಾಯ್ ಮೋಕ್ಷೋಪಾಯ ನೈರಪೇಕ್ಷ್ಯಾದಿ ಪ್ರಸಙ್ಗಮ್ ವರುಗೈಯಾಲುಮ್,

---

ರುವದರಿಂದ ಅಂತಹ. **ಕರ್ತೃತ್ವಮಿಲ್ಲೈಯಾಕ್ಕೆ** - ಹೀಗೆ ಆತ್ಮಾವಿಗೆ ಇರುವ ಕರ್ತೃತ್ವವು ಇಲ್ಲವೆಂದು ಹೇಳಿ, **ಆತ್ಮಾವುಕ್ಕು** - ಆತ್ಮಾವಿಗೆ, **ಸನ್ನಿಧಿ ಮಾತ್ರಮೇ** - ಪ್ರಕೃತಿಯ ಹತ್ತಿರವಿರುವದೇ, **ವ್ಯಾಪಾರಮೆನ್ನಿಲ್** - ವ್ಯಾಪಾರವು ಎಂದು ಪೂರ್ವಪಕ್ಷಿಗಳು ಭಾವಿಸಿದರೆ ಭೋಕ್ತೃತ್ವಾದಿಗಳೂ, **ಅನ್ರಿಕ್ಕೇ**- ಇಲ್ಲದವುಗಳಾಗಿ, **ಇವನುಕ್ಕು** - ಈ ಚೇತನನಿಗೆ, **ಸಂಸಾರವು ಮಿಥ್ಯೆಯಾಗಿ ಮೋಕ್ಷೋಪಾಯ ನೈರಪೇಕ್ಷ್ಯಾದಿ ಪ್ರಸಙ್ಗಮ್** - ಮೋಕ್ಷೋಪಾಯದ ಅನಾವಶ್ಯಕತೆ ಮೊದಲಾದವುಗಳ ಪ್ರಸಙ್ಗವು, **ವರುಗೈಯಾಲುಮ್** - ಉಂಟಾಗುವದರಿಂದಲೂ; ಇಲ್ಲಿ ಆದಿ ಪದದಿಂದ ನಿರರ್ಥಕವೆಂಬ ಭಾವವೂ ಸೂಚಿಸಲ್ಪಟ್ಟಿತು. ಯಾವಾಗ ಸಂಸಾರವೇ ಸುಳ್ಳೋ ಆಗ ಪ್ರಯತ್ನವೂ ನಿರರ್ಥಕವೆಂಬ ಭಾವವೂ ತೋರುತ್ತದೆ. ಇದು ಮೂರನೆಯ ದೂಷಣವು. ಆತ್ಮಸ್ವರೂಪದ ಗುಣಗಳು ಜ್ಞಾನ ಚಿಕೀರ್ಷಾಪ್ರಯತ್ನಗಳು, ಇವುಗಳಿಂದಲೇ ಆತ್ಮಾವಿಗೆ ಕರ್ತೃತ್ವವು ಉಪಾಧಿಯಾದ ಶರೀರ ಮೂಲಕವೂ ಅಲ್ಲದೆ, ಸ್ವರೂಪತಃ ಕೂಡ ಉಂಟು. ಈ ಕರ್ತೃತ್ವವು ಮುಕ್ತದೆಶೆಯಲ್ಲಿಯೂ ಉಂಟು. ಮುಕ್ತದೆಶೆಯಲ್ಲಿ ಈ ಆತ್ಮಾವಿಗೆ ದಿವ್ಯಮಙ್ಗಳ ವಿಗ್ರಹವು ಉಂಟಾದರೆ, ತನ್ಮೂಲಕವಾಗಿಯೂ ಕರ್ತೃತ್ವವುಂಟು. ಆದರೂ ಇವ ಇಲ್ಲವೆಂದೂ, ಪ್ರಕೃತಿಯ ಸನ್ನಿಧಿಯಲ್ಲಿ ನಿರ್ವ್ಯಾಪಾರವಾಗಿ ಸುಮ್ಮನೆ ಇದ್ದಾನೆ ಎಂದೂ, ಪ್ರಕೃತಿಯಾದ ದೇಹವೇ ಸರ್ವವ್ಯಾಪಾರಗಳನ್ನು ನಡೆಸುತ್ತದೆ ಎಂದೂ ಸಾಂಖ್ಯನು ಹೇಳುವಹಾಗೆ ವಾದಿಸಿದರೆ, ಆಗ ಆತ್ಮಾವಿಗೆ ಭೋಕ್ತೃತ್ವವೂ ಇಲ್ಲವೆಂದಾಗಿ, ಸಂಸಾರವೆಂಬುದು ಸುಳ್ಳಾಗಿ, ಮೋಕ್ಷಕ್ಕಾಗಿ ಮಾಡುವ ಉಪಾಯವೂ ಬೇಕಿಲ್ಲವೆಂಬುದಾಗಿ ಆಗುತ್ತದೆ ಎಂದು ಆ ವಾದವನ್ನು ಖಂಡಿಸುತ್ತಾರೆ.

ಹೀಗೆ ಆತ್ಮಾವಿಗೆ ಕರ್ತೃತ್ವವು ಸ್ವಾಭಾವಿಕವು. ಆದುದರಿಂದ ಆತ್ಮಸ್ವರೂಪಕ್ಕೆ ವಿರುದ್ಧವೆಂದು ತಂದ ಆಕ್ಷೇಪವನ್ನು ಮೂರು ದೂಷಣಗಳಿಂದ ನಿರಸನ ಮಾಡುತ್ತಾರೆ. ಹೇಗೆಂದರೆ:—

೧. ಕರ್ತೃತ್ವವೇ ಆತ್ಮನಿಗೆ ಇಲ್ಲವೆಂದರೆ, ಕೈಂಕರ್ಯಾದಿಗಳಿಗೆ ಮಾತ್ರ

ಸಾಂಖ್ಯಾದಿಗಳ್ ಶೊಲ್ಲುಮಾಪ್ಪೋಲೆ ಸ್ವರೂಪತ್ತಿಲ್ ಕರ್ತೃತ್ವ ಮಿಲ್ಲಾಮೈಯಾಲೇ ಉಪಾಸನಾದಿಗಳ್ ಸ್ವರೂಪ ವಿರುದ್ಧಙ್ಗಳೆನ್ರು ಶೊಲ್ಲುವು ವೊಣ್ಣಾದು.

ಕರ್ತೃತ್ವವು ಹೇಗೆ? ಶ್ರುತಿಯಲ್ಲಿ ಕರ್ತೃತ್ವ, ಜ್ಞಾತೃತ್ವ, ಭೋಕ್ತೃತ್ವಾದಿಗಳುಂಟೆಂದು ಹೇಳುತ್ತದೆಯಲ್ಲಾ? ಬ್ರಹ್ಮಸೂತ್ರಗಳು ಈಶ್ವರಾಯತ್ತ ಕರ್ತೃತ್ವ ಉಂಟೆಂದು ಹೇಳುತ್ತದೆಯಲ್ಲಾ? ೨. ಆತ್ಮಾವಿಗೆ ಕರ್ತೃತ್ವವಿಲ್ಲವೆಂದರೆ, ಅದು ಸತ್ತಾಯುಕ್ತವಾದುದಲ್ಲವೆಂದು ಹೇಳಿದಂತಾಯಿತು. ಸತ್ತಾಯುಕ್ತ ವಸ್ತುವಿನ ಲಕ್ಷಣವು ಅರ್ಥಕ್ರಿಯಾಕಾರಿತ್ವವ. ಇದೇ ಇಲ್ಲವೆಂದು ಹೇಳಿದಂತಾಗುವದರಿಂದ ಆತ್ಮಾವಿಗೆ ತುಚ್ಛತ್ವವು ಏರ್ಪಟ್ಟಿತು. ೩. ಆತ್ಮಾವಿಗೆ ಕರ್ತೃತ್ವವಿಲ್ಲವು, ಪ್ರಕೃತಿಯು ಹತ್ತಿರವಿರುತ್ತದೆ, ಪ್ರಕೃತಿಯೇ ಕೆಲಸ ಮಾಡುತ್ತದೆ ಎಂದು ಹೇಳಿದಂತಾಯಿತು; ಆಗ ಆತ್ಮಾವಿಗೆ ಭೋಕ್ತೃತ್ವವಿಲ್ಲವೆಂದು ಹೇಳಬೇಕಾಗುತ್ತದೆ. ಈ ಸಂಸಾರವೆಲ್ಲಾ ಏನು ಎಂದರೆ ಮಿಥ್ಯೆ ಎಂದು ಅದ್ವೈತಿಯು ಹೇಳಿದಂತೆ ಹೇಳಬೇಕಾಗುತ್ತದೆ. ಸಂಸಾರ ಸುಳ್ಳಾದರೆ ಮೋಕ್ಷಕ್ಕಾಗಿ ಏಕೆ ಪ್ರಯತ್ನವು? ಮೋಕ್ಷಶಾಸ್ತ್ರವೆಲ್ಲಾ ಆಗ ಬೇಕಾಗಿಲ್ಲವು. ಇಂತಹ ದೂಷಣಗಳುಂಟಾಗುತ್ತವೆ ಎಂಬ ತಾತ್ಪರ್ಯವು.

ಹೀಗೆ ದೂಷಣೆಗಳನ್ನು ಹೇಳಿ, ನಿಗಮನ ರೂಪದಲ್ಲಿ ವಾಕ್ಯ ಪೂರಣ ಮಾಡಿ ಹೇಳುತ್ತಾರೆ. ಹೀಗೆ ದೂಷಣೆಗಳುಂಟಾಗುವದರಿಂದ, **ಸಾಂಖ್ಯಾದಿಗಳ್ ಶೊಲ್ಲುಮಾಪ್ಪೋಲೆ** - ಸಾಂಖ್ಯಾದಿಗಳು ಹೇಳುವಹಾಗೆ, ಅವರುಗಳು ಹೇಳುವದೇನೆಂದರೆ ಆತ್ಮಾ ಪ್ರಕೃತಿಯ ಹತ್ತಿರ ಸುಮ್ಮನೆ ಕಲ್ಲಿನ ಹಾಗೆ ನಿರ್ವ್ಯಾಪಾರ ಉಳ್ಳದ್ದಾಗಿರುತ್ತದೆ, ಕಾರ್ಯ ಮಾಡುವದೆಲ್ಲಾ ಪ್ರಕೃತಿಯೇ, ದೇಹವೇ ಎಂಬದಾಗಿ, **ಸ್ವರೂಪತ್ತಿಲ್** - ಆತ್ಮನ ಸ್ವರೂಪದಲ್ಲಿ ಕರ್ತೃತ್ವವಿಲ್ಲದಿರುವದರಿಂದ, **ಉಪಾಸನಾದಿಗಳು** ಸ್ವರೂಪ ವಿರುದ್ಧಗಳೆಂದು, **ಶೊಲ್ಲುವುಮ್ ವೊಣ್ಣಾದು**- ಹೇಳಲು ಸಾಧ್ಯವಿಲ್ಲವು.

ಹೀಗೆ ಆತ್ಮನಿಗೆ ಕರ್ತೃತ್ವವಿರುವದರಿಂದ ಕರ್ತೃತ್ವವಿಲ್ಲವೆಂಬ ಪೂರ್ವಪಕ್ಷವನ್ನು ಖಂಡಿಸಿ ಉಪಾಯಾನುಷ್ಠಾನವು ಆತ್ಮಸ್ವರೂಪಕ್ಕೆ ಅಸಂಭಾವಿತವಾಗಿ ವಿರುದ್ಧವಲ್ಲವೆಂದು ಸ್ಥಾಪಿಸಿದರು. ಆದರೆ ಪೂರ್ವ ಪಕ್ಷಿಯು ಭಾರತ ಶಾಂತಿಪರ್ವ ಶ್ಲೋಕವನ್ನು ಉದಾಹರಿಸಿ, ಅಲ್ಲಿ ಆತ್ಮಾ ಏನೊಂದೂ ಪ್ರಯತ್ನ ಮಾಡದಿದ್ದರೂ ಈತನಿಗೇ ಐಶ್ವರ್ಯವು ಪ್ರಾಪ್ತವಾಗಬಹುದೆಂದು ಹೇಳಿದೆಯಲ್ಲಾ ಅದಕ್ಕೆ ಸಮಾಧಾನ ಹೇಗೆ ಎಂದರೆ ಅದನ್ನು ತಿಳಿಸುತ್ತಾರೆ.

(೧) "ಅಚೇಷ್ಟಮಾನ ಮಾಸೀನಮ್ ಶ್ರೀಃ ಕಂಚಿದುಪತಿಷ್ಠತಿ। ಕರ್ಮೀ ಕರ್ಮಾನುಸೃತ್ಯಾನ್ಯೋ ನಪ್ರಾಪ್ಯಮಧಿಗಚ್ಛತಿ॥" ಎನ್ನದುಮ್, ಶಾಸ್ತ್ರಚೋದಿತೋಪಾಯಙ್ಗಳಿನುಡೈಯ ನೈರರ್ಥಕ್ಯಮ್ ಶೊನ್ನಪಡಿಯನ್ರು; ಪೂರ್ವಾನುಷ್ಠಿತ ಕರ್ಮವಿಶೇಷಙ್ಗಳಿನುಡೈಯ ಫಲವಿಶೇಷಮ್ ಶೊನ್ನಪಡಿಯತ್ತನೈ.

---

(೧) **ಅಚೇಷ್ಟಮಾನಂ** - ಏನೊಂದೂ ಪ್ರಯತ್ನ ಕ್ರಿಯೆ ಯಾವುದೂ ಇಲ್ಲದಿರುವ, **ಆಸೀನಂ** - ಸುಮ್ಮನೇ ಕುಳಿತಿರುವವನನ್ನು, **ಶ್ರೀಃ** - ಸಂಪತ್ತು, ಐಶ್ವರ್ಯವು, **ಕಂಚಿತ್** - ಜಾತಿ ಕುಲ ಗುಣ ಯಾವುದೂ ಇಲ್ಲದ ಯಾವನೋ ಒಬ್ಬನನ್ನು, **ಉಪತಿಷ್ಠತಿ** - ಬಂದು ಎದುರಿಗೆ ನಿಲ್ಲುತ್ತದೆ, ಅಭಿಮುಖವಾಗಿ ಬರುತ್ತದೆಂಬ ತಾತ್ಪರ್ಯವು; **ಕರ್ಮೀ** - ಕರ್ಮಗಳನ್ನು ಶ್ರದ್ಧೆಯಿಂದ ಶಾಸ್ತ್ರಚೋದಿತ ಮಾರ್ಗದಲ್ಲಿ ಮಾಡುತ್ತಿರುವ, **ಅನ್ಯಃ** - ಇನ್ನೊಬ್ಬ ಧಾರ್ಮಿಕನು, **ಕರ್ಮಾನುಸೃತ್ಯ** - ಆತನು ಮಾಡಿದ ಕರ್ಮಗಳಿಗೆ ಅನುಗುಣವಾಗಿ, **ಪ್ರಾಪ್ಯಂ** - ಅನುಭವಿಸುವ ಫಲವನ್ನು **ನಾಧಿಗಚ್ಛತಿ** - ಹೊಂದುವದಿಲ್ಲವು, ಹಿಂದೆ ಮಾಡಿದ ಸುಕೃತವಿಶೇಷ ಮಹಿಮೆಯಿಂದ ಒಬ್ಬನಿಗೆ ವಿಶೇಷ ಪ್ರಯತ್ನಗಳು ಯಾವುದೂ ಇಲ್ಲದೆ ಪಿತ್ರಾರ್ಜಿತ ಪಿತಾಮಹಾರ್ಜಿತ ಭ್ರಾತೃ ಸುಹೃತ್ತುಗಳು ಸಂಪಾದಿಸಿದ ಅಥವಾ ಇನ್ನು ಯಾವುದೋ ಕಾರಣಮೂಲಕ ಸರ್ವೇಶ್ವರ ಸಙ್ಕಲ್ಪರೀತ್ಯಾ ಧನವು ಲಭಿಸಬಹುದು. ಇನ್ನೊಬ್ಬನಿಗೆ ಅಂತಹ ಸುಕೃತವಿಶೇಷ ಸ್ವಾಮಿಸಙ್ಕಲ್ಪಾದಿಗಳಿಲ್ಲವಾದುದರಿಂದ ಎಷ್ಟು ಪ್ರಯತ್ನಪಟ್ಟರೂ ತನ್ನಿಷ್ಟವು ಲಭಿಸದೆ ಹೋಗುತ್ತದೆ ಎಂಬ ತಾತ್ಪರ್ಯವು; ಈಶ್ಲೋಕಕ್ಕೆ ಪೂರ್ವಪಕ್ಷಿಗಳು **ಅಚೇಷ್ಟಮಾನ ಮಾಸೀನಂ** ಎಂದಿರುವದರಿಂದ ನಿರ್ವ್ಯಾಪಾರತ್ವವು ಇಲ್ಲಿ ಹೇಳಲ್ಪಟ್ಟಿತು ; ಹಾಗೆಯೇ ಭಕ್ತ್ಯಾದಿ ಉಪಾಯಾನುಷ್ಠಾನಗಳಿಲ್ಲದೇ ಇದ್ದರೂ ಸರ್ವೇಶ್ವರನು ನಮ್ಮ ಕೋರಿಕೆಯನ್ನು ಸಫಲಮಾಡುವನು ಎಂದು ಅಭಿಪ್ರಾಯಪಡಬಹುದೆಂದು ಭಾವಿಸಿ, ಇದು ನಿರ್ವ್ಯಾಪಾರವನ್ನು ಬೋಧಿಸಲು ಹೊರಟ ಶ್ಲೋಕವಲ್ಲವು, ಹಿಂದೆ ಮಾಡಿದ ಸುಕೃತವಿಶೇಷದ ಫಲನಿರ್ದೇಶಕ್ಕಾಗಿ ಹೇಳಿದ ಶ್ಲೋಕವೆಂದು ಸಮಾಧಾನವನ್ನು ಹೇಳುತ್ತಾರೆ. **ಎನ್ನದುಮ್** - ಎಂಬ ಶ್ಲೋಕಾಭಿಪ್ರಾಯವು, **ಶಾಸ್ತ್ರಚೋದಿತೋಪಾಯಙ್ಗಳಿನುಡೈಯ** - ಶಾಸ್ತ್ರದಲ್ಲಿ ವಿಧಿಸಿದ ಉಪಾಯಗಳ, **ನೈರರ್ಥಕ್ಯಮ್** - ಅನುಪಯೋಗವನ್ನು **ಶೊನ್ನಪಡಿಯನ್ರು** - ಹೇಳಿದಹಾಗಲ್ಲವು;

---

(೧) ಭಾರತ. ಶಾಂತಿ ೩೩೯-೧೩

(೨) ಅನರ್ಥಾವಹತ್ವರೂಪೇಣ ಸ್ವರೂಪ ವಿರುದ್ಧಮಿತಿವಾದ ನಿರಾಸಃ

ಮೋಕ್ಷಪ್ರತಿಕೂಲಙ್ಗಳಾನ ರಾಗಾದ್ಯುಪಾಧಿಗಳಡಿಯಾಗ ವನ್ದ ಕಾಮ್ಯ ನಿಷಿದ್ಧಙ್ಗಳ್ ಪೋಲೆ ಬಂಧಕಙ್ಗಳಲ್ಲಾಮೈಯಾಲುಮ್, ಮೋಕ್ಷಾರ್ಥೀ ತನಕ್ಕೇ ವಿಧಿಕ್ಕೈಯಾಲುಮ್, ಉಪಾಸನಾದಿಗಳುಕ್ಕು ಶಾಸ್ತ್ರ ಮುಖತ್ತಾಲೆ ಅನರ್ಥಾವಹತ್ವ ರೂಪನಾನ ಸ್ವರೂಪ ವಿರೋಧಮ್ ಶೊಲ್ಲವೊಣ್ಣಾದು.

ಹಾಗಾದರೆ ಅವರ ಅಭಿಪ್ರಾಯವಾದರೋ, **ಪೂರ್ವಾನುಷ್ಠಿತ** - ಹಿಂದಿನ ಜನ್ಮಗಳಲ್ಲಿ ಮಾಡಿದ, **ಕರ್ಮವಿಶೇಷಙ್ಗಳನುಡೈಯ** - ಸುಕೃತ ವಿಶೇಷಗಳು ಈಗ ಪ್ರಾರಬ್ಧ ಕರ್ಮರೂಪದಲ್ಲಿರುವುದರ, **ಫಲವಿಶೇಷಮ್** - ಫಲವಿಶೇಷವನ್ನು, **ಶೊನ್ನಪಡಿಯತ್ತನೈ** - ಹೇಳಿದುದು, ಇಷ್ಟುಮಾತ್ರವೇ ಎಂಬ ಭಾವವು. ಒಂದು ಫಲಕ್ಕಾಗಿ ಶಾಸ್ತ್ರವಿಧ್ಯನುಸಾರವಾಗಿ ಅನುಷ್ಠಿಸದೆ ನಿರ್ವ್ಯಾಪಾರತ್ವವಿದ್ದರೂ ಫಲವು ದೈವ ಸಹಾಯದಿಂದ ಸಿದ್ಧಿಸುತ್ತದೆ ಎಂಬರ್ಥವಲ್ಲವು. ಪೂರ್ವಾರ್ಜಿತ ಸುಕೃತ ದುಷ್ಕೃತ ತಾರತಮ್ಯಾನುಸಾರವಾಗಿ ಒಬ್ಬನಿಗೆ ತುಂಬಾ ಶ್ರಮವಿಲ್ಲದೇನೆ ಲಭಿಸುತ್ತದೆ; ಇನ್ನೊಬ್ಬನಿಗೆ ಎಷ್ಟು ಶ್ರಮಪಟ್ಟರೂ ಲಭಿಸುವದಿಲ್ಲವೆಂಬುದು ತಾತ್ಪರ್ಯವು

(೨) ಅನರ್ಥಾವಹವಾಗಿ ಸ್ವರೂಪವಿರುದ್ಧವೆಂಬ ವಾದದ ನಿರಸನವು.

ಮುಂದೆ ಮೂರನೆಯ ವಿಕಲ್ಪವನ್ನು ಖಂಡಿಸುತ್ತಾರೆ. ಉಪಾಸನಾದಿಗಳು ಅನರ್ಥವನ್ನುಂಟುಮಾಡುವುವು; ಹೇಗೆಂದರೆ ಈ ಉಪಾಯಗಳ ಮೂಲಕ ಮೋಕ್ಷಪ್ರಾಪ್ತಿಯನ್ನು ಸಾಧಿಸಿಕೊಳ್ಳುವೆನು ಎಂಬ ಅಹಂಕಾರವನ್ನುಂಟುಮಾಡಿ ಈ ಉಪಾಸನಾದಿಗಳು ಅನರ್ಥವನ್ನುಂಟುಮಾಡುವುವು; ಆದುದರಿಂದ ಸ್ವರೂಪ ವಿರುದ್ಧವೆಂದು ಅವರುಗಳಭಿಪ್ರಾಯವು. ಮೂರು ಕಾರಣಗಳನ್ನು ಹೇಳಿ ಈ ಅಭಿಪ್ರಾಯವನ್ನು ಖಂಡಿಸುತ್ತಾರೆ

(೧) **ಮೋಕ್ಷಪ್ರತಿಕೂಲಙ್ಗಳಾನ** - ಮೋಕ್ಷವಿರುದ್ಧವಾದ, **ರಾಗಾದ್ಯುಪಾಧಿಗಳಾಲೇ ವನ್ದ ಕಾಮ್ಯ ನಿಷಿದ್ಧಙ್ಗಳ್ ಪೋಲೆ**-ಕಾಮನೆಯೇ ಮೊದಲಾದ ಉಪಾಧಿಗಳ ಮೂಲಕವಾಗಿ ಆಚರಿಸುವ ಕಾಮ್ಯಕರ್ಮಗಳ ಮತ್ತು ನಿಷಿದ್ಧ ಕರ್ಮಗಳಹಾಗೆ, **ಬಂಧಕಙ್ಗಳಲ್ಲಾಮೈಯಾಲುಮ್** - ಪುನಃಪುನಃ ಸಂಸಾರ ಬಂಧವನ್ನುಂಟುಮಾಡತಕ್ಕವು ಈ ಭಕ್ತ್ಯಾದಿ ಉಪಾಯಗಳಲ್ಲವಾದುದರಿಂದಲೂ,

(೨) ಮೋಕ್ಷಾರ್ಥಿತನಕ್ಕೇ - ಮೋಕ್ಷಾರ್ಥಿಗೇನೇ, ವಿಧಿಕ್ಕೈಯಾಲುಮ್- ಈ ಉಪಾಸನಾದಿ ಉಪಾಯಗಳನ್ನನುಸ್ಠಿಸಬೇಕೆಂದು ಶಾಸ್ತ್ರವು ವಿಧಿಸಿರುವದರಿಂದಲೂ, (೩) ಉಪಾಸನಾದಿಗಳಿಗೆ, ಶಾಸ್ತ್ರಮುಖತ್ತಾಲೆ-ಶಾಸ್ತ್ರಮೂಲಕವಾಗಿ, ಅನರ್ಥಾವಹತ್ವರೂಪಮಾನ-ಅನರ್ಥವನ್ನುಂಟುಮಾಡುತ್ತವೆ ಎಂದು ಕಂಠೋಕ್ತ ಪ್ರಮಾಣವಿಲ್ಲದುದರಿಂದ, ಅವು ಅನರ್ಥವನ್ನುಂಟುಮಾಡುವ ಸ್ವರೂಪವಿರೋಧವುಳ್ಳವು ಎಂಬ ದೋಷವನ್ನು, ಶೊಲ್ಲವೊಣ್ಣಾದು - ಹೇಳಲು ಸಾಧ್ಯವಿಲ್ಲವು. ಸ್ವಾಮಿಪಿಳ್ಳೈ ಲೋಕಾಚಾರ್ಯರವರು ಈ ಉಪಾಸನಾದಿಗಳು ಜ್ಞಾನಿಗಳಿಗೆ "ಅಪಾಯ"ವೆಂದೂ, "ಭಯಾವಹ"ವೆಂದೂ, "ಶೋಕ ಜನಕ"ವೆಂದೂ, "ಅಹಂಕಾರ ಮಿಶ್ರ"ವೆಂದೂ ಹೀಗೆ ಅನರ್ಥಗಳನ್ನುಂಟುಮಾಡುವವೆಂದ ಹೇಳಿದ್ದರು. ಅಂತಹ ಅನರ್ಥಗಳನ್ನೇನೂ ಈ ಉಪಾಯಗಳು ಉಂಟುಮಾಡಲಾರವೆಂದು ಹೇಳುತಾರೆ. ಏಕೆಂದರೆ (೧) ಐಹಿಕಾಭಿಲಾಷೆಗೋಸ್ಕರ ಮಾಡುವ ಕಾಮ್ಯ ನಿಷಿದ್ಧ ಕರ್ಮಗಳಹಾಗೆ ಇವು ಬಂಧಕಗಳಲ್ಲವು; ಬಂಧಕಗಳಾದರಲ್ಲವೇ ಅಪಾಯವೆಂದೂ ಭಯಾವಹನೆಂದೂ ಶೋಕ ಜನಕವೆಂದೂ ಅಹಂಕಾರ ಮಿಶ್ರವೆಂದೂ ಹೇಳಬಹುದು. ಹಾಗೆ ಬಂಧಕಗಳಲ್ಲವಲ್ಲಾ ಎಂಬ ಭಾವವು. (೨) ಇವುಗಳನ್ನು ಮೋಕ್ಷಾರ್ಥಿಯು ಉಪಾಸಿಸತಕ್ಕದ್ದೆಂದು ತಜ್ಜಲಾನಿತಿ ಶಾಂತಮುಪಾಸೀತ (ಛಾಂ. ೩. ೧೪. ೧) "ಬ್ರಹ್ಮವಿತ್ ಬ್ರಹ್ಮೈವ ಭವತಿ"( ) "ಬ್ರಹ್ಮವಿದಾಪ್ನೋತಿ ಪರಂ" (ತೈ ಆ ೧. ೨.) "ತಮೇವಂ ವಿದ್ವಾನ್ ಅಮೃತ ಇಹ ಭವತಿ" (ಪುರುಷಸೂಕ್ತ) "ತಂ ವಿದ್ಯಾಚ್ಛುಕ್ರಮಮೃತಂ" (ಕಠ. ೨. ೬ ೧೭) "ಯ ಏವಂ ವಿದು ರಮೃತಾಸ್ತೇ ಭವಂತಿ" (ತೈ. ಆರ) "ತದಾ ವಿದ್ವಾನ್ ಪುಣ್ಯಪಾಪೇ ವಿಧೂಯನಿರಂಜನಃ ಪರಮಂ ಸಾಮ್ಯಮುಪೈತಿ" (ಮುಂ.೩ ೧ ೩.) ಇಂತಹ ಅನೇಕ ಶ್ರುತಿಗಳಲ್ಲೆಲ್ಲಾ ಹೇಳಿರುವದರಿಂದಲೂ, ಉಪಾಸನವು ಉಪಾದೇಯವು. ಹಾಗೆಯೇ ಗೀತೆಯಲ್ಲೂ "ನಮಸ್ಯಂತಶ್ಚ ಮಾಂ ಭಕ್ತ್ಯಾ ನಿತ್ಯಯುಕ್ತಾ ಉಪಾಸತೇ" (ಗೀ ೯. ೧೪) "ಅನನ್ಯಾಶ್ಚಿಂತಯಂತೋ ಮಾಂ ಯೇಜನಾಃ ಪರ್ಯುಪಾಸತೇ । ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ" (ಗೀ. ೯ ೨೨) "ಯೇಮಾಂ ನಿತ್ಯಯುಕ್ತಾ ಉಪಾಸತೇ ತೇ ಪ್ರಾಪ್ನುವಂತಿ ಮಾಮೇವ" (ಗೀ. ೧೨. ೨, ೪) ಯೇಧ್ಯಾಯಂತ ಉಪಾಸತೇ ತೇಷಾಮಹಂ ಸಮುದ್ಧರ್ತಾ ಮೃತ್ಯು ಸಂಸಾರ ಸಾಗರಾತ್," (ಗೀ. ೧೨ ೭) ಹೀಗೆ ಅನೇಕ ಪ್ರಮಾಣಗಳಿರುವದರಿಂದ, ಉಪಾಸನಾದಿಗಳು ಅಪಾಯವೂ, ಅನರ್ಥಾವಹವೂ ಎಂದು ಹೇಳುವದು ಹೇಗೆ ಸಾಧ್ಯವೋ ತಿಳಿಯದು.

ಅಗ್ಗೈಯಾಲ್ ಆತ್ಮಸ್ವರೂಪತ್ತೈಪ್ಪತ್ತ ಉಪಾಸನಾದಿಗಳುಕ್ಕು ನಾಶ ಕತ್ವಾ ಸಂಭಾವಿತತ್ವಾ ನರ್ಥಾವಹತ್ವಙ್ಗಳಿಲ್ಲಾವೈಯಾಲೇ ಯೊರುಪಡಿ ಯಾಲುಮ್ ಸ್ವರೂಪ ವಿರೋಧ ಪ್ರಸಙ್ಗಮಿಲ್ಲೈ.

---

(೩) ಇದು ಅನರ್ಥಾವಹವೆಂದು ಶಾಸ್ತ್ರಗಳಲ್ಲಿ ಎಲ್ಲೂ ಹೇಳಿಲ್ಲವು ಆದರೆ ಹೇಳಿರುವದು "**ನಾನ್ಯಃಪಂಥಾ ವಿದ್ಯತೇ ಅಯನಾಯ**" ಇಂತಹ ಉಪಾಯಾ ನುಷ್ಠಾನವಿಲ್ಲದೆ ಪ್ರಾಪ್ಯವನ್ನು ಹೊಂದಲು ಬೇರೆ ಮಾರ್ಗವೇ ಇಲ್ಲವು. ಇದ ನ್ನೆಲ್ಲಾ ಮನಸ್ಸಿನಲ್ಲಿಟ್ಟೇ ಹಿಂದೆ "**ಪ್ರಪನ್ನಾದನ್ಯೇಷಾಂ ನದಿಶತಿ ಮು ಕುಂದೋ ನಿಜಪದಂ**" ಎಂದು ಸ್ವಾಮಿ ದೇಶಿಕರವರು ಉಪಾಯಾನುಷ್ಠಾನ ಮಾಡದವರಿಗೆ ಮುಕ್ತಿಯೇ ಇಲ್ಲವೆಂದು ಹಿಂದೆಯೇ ಉಪದೇಶಿಸಿರುತ್ತಾರೆ.

ಮುಂದಿನ ವಾಕ್ಯದಿಂದ ಮೇಲೆ ಉಪಪಾದಿಸಿದುದನ್ನೆಲ್ಲಾ ಸಙ್ಗ್ರಹಿಸಿ ನಿಗ ಮನಮಾಡಿ, **ಅಗ್ಗೈಯಾಲ್ ಆತ್ಮಸ್ವರೂಪತ್ತೈ** ಎಂಬ ವಾಕ್ಯಮೂಲಕ ಹೇಳು **ತ್ತಾರೆ ಅಗ್ಗೈಯಾಲ್** - ಅಕಾರಣದಿಂದ, ಯಾವಕಾರಣದಿಂದೆಂಬುದನ್ನು ತಾವೇ ಮುಂದೆ ವ್ಯಕ್ತಪಡಿಸುತ್ತಾರೆ; ಉಪಾಸನಾದಿಗಳಿಗೆ, **ಆತ್ಮಸ್ವರೂಪತ್ತೈ ಪತ್ತ** - ಜೀವಾತ್ಮ ಸ್ವರೂಪವನ್ನು ಕುರಿತು, **ನಾಶಕತ್ವವೇನು**, ಅಸಂಭಾವಿತತ್ವ ವೇನು, ಅನರ್ಥಾವಹತ್ವವೇನು, ಇತರರು ಹೇಳುವ ಈ ಮೂರು ದೋಷಗಳೂ, **ಇಲ್ಲಾವೈಯಾಲೇ** - ಇಲ್ಲವಾದುದರಿಂದ, **ಒರುಪಡಿಯಾಲುಮ್** - ಯಾವ ಕಾರಣದಿಂದಲೂ, **ಸ್ವರೂಪ ವಿರೋಧ ಪ್ರಸಙ್ಗಮಿಲ್ಲೈ** - ಆತ್ಮಸ್ವರೂಪಕ್ಕೆ ವಿರೋಧವಾದುವು ಉಪಾಸನಾದಿಗಳು ಎಂಬ ಮಾತಿಗೆ ಅವಕಾಶವೇ ಇಲ್ಲವು.

ಭಕ್ತ್ಯಾದಿಗಳು ವರ್ಣಾಶ್ರಮ ನಿಬಂಧನೆಯುಳ್ಳವಾದುದ ರಿಂದ ಅಹಂಕಾರ ಗರ್ಭವೆಂಬ ವಾದದ ನಿರಸನವು.

ಮೊದಲು ಪೂರ್ವ ಪಕ್ಷವನ್ನುಪಪಾದಿಸಿ, ಅದನ್ನು ಖಂಡಿಸುತ್ತಾರೆ **ಆನಾ ಲುಮ್** - ಒಂದುವೇಳೆ ನಾಶಕತ್ವ, ಅಸಂಭಾವಿತತ್ವ, ಅನರ್ಥಾವಹತ್ವ ದೋಷ ಗಳಿಂದ ಆತ್ಮಸ್ವರೂಪಕ್ಕೆ ವಿರುದ್ಧವಲ್ಲವೆಂದು ಈಗ ಉಪಪಾದಿಸಿದುದನ್ನು ಒಪ್ಪಿ ದರೂ ಕೂಡ, ಇನ್ನೊಂದು ಪೂರ್ವಪಕ್ಷವು ತಪ್ಪಿದ್ದಲ್ಲವೆಂಬುದು ಪೂರ್ವಪಕ್ಷಿಯ ಅಭಿಪ್ರಾಯವಾಗಿ, **ಆನಾಲುಮ್** ಎಂದು ಅರ್ಧಾಂಗೀಕಾರದಿಂದ ಹೇಳುವ ಮಾತಾಗಿರುತ್ತದೆ; **ಆತ್ಮಾ** - ಈ ಜೀವಾತ್ಮನು, **ದೇಹಾದಿವಿಲಕ್ಷಣ ನಾಗೈ ಯಾಲೇ** - ದೇಹನೇ ಮೊದಲಾದವುಗಳಿಂತಲೂ ವಿಲಕ್ಷಣನಾದುದರಿಂದ, ಇಲ್ಲಿ

(೩) ಭಕ್ತ್ಯಾದೇಃ ವರ್ಣಾಶ್ರಮ ನಿಬಂಧನತ್ವಾದಹಂಕಾರ ಮಿಶ್ರತ್ವ ಮಿತಿವಾದ ನಿರಾಸಃ

ಆನಾಲುಮ್ ಆತ್ಮಾ ದೇಹಾದಿವಿಲಕ್ಷಣನಾಗೈಯಾಲೇ ಸ್ವರೂಪತ್ತಿಲ್ ವರ್ಣಾಶ್ರಮಾದಿಗಳಿಲ್ಲೈಯೆನ್ರು ತೆಳಿನ್ದವನುಕ್ಕು "ಬ್ರಾಹ್ಮಣೋಹಂ ಕ್ಷತ್ರಿಯೋಹಂ" ಎನ್ರಾರ್ಪ್ಪೋಲೆ ವರುಮ್ ಅಭಿಮಾನಙ್ಗಳಡಿಯಾಗ ವರ್ಣಾಶ್ರಮಾದಿ ಧರ್ಮಙ್ಗಳುಮ್ ಅವತ್ತೋಡೆ ತುವಕ್ಕುಣ್ಡಾನ ಉಪಾಯಾನ್ತರಙ್ಗಳುಮ್ ಅನುಷ್ಠೇಯಙ್ಗಳಲ್ಲಾಮೈಯಾಲೇ ಇವ್ವರ್ಣಾಶ್ರಮಾದಿ ನಿಬಂಧನಙ್ಗಳಾನ ಧರ್ಮಙ್ಗಳ್ ಸ್ವರೂಪವಿರುದ್ಧಙ್ಗಳೆನ್ಗೈಕ್ಕುಕ್ಕುರೈ ಯೆನ್ನೆನ್ನಿಲ್, ಇದುವುಮ್ ಅನುಪಪನ್ನಮ್. ಎಙ್ಗನೇ ಎನ್ನಿಲ್,

---

ಆನಪದದಿಂದ "ದೇಹೇನ್ದ್ರಿಯಮನಃಪ್ರಾಣಧೀಭ್ಯೋऽನ್ಯೋऽನನ್ಯಸಾಧನಃ" ಎಂಬ ಶ್ರೀ ಯಾಮುನೇಯರ ಶ್ರೀಸೂಕ್ತಿಯನ್ನನುಸರಿಸಿ, ಇಂದ್ರಿಯ, ಮನಸ್ಸು, ಪ್ರಾಣ ಬುದ್ಧಿ. ಇವುಗಳಿಗಿಂತಲೂ ಆತ್ಮ ವಿಲಕ್ಷಣನು ಎಂಬ ಭಾವವು. ಸ್ವರೂಪತ್ತಿಲ್ - ಆತ್ಮನ ಸ್ವರೂಪದಲ್ಲಿ ಎಂದರೆ ಅಣುತ್ವಾದಿಗಳಲ್ಲಿ, ವರ್ಣಾಶ್ರಮಾದಿಗಳಿಲ್ಲೈಯೆನ್ರು - ವರ್ಣಾಶ್ರಮಾದಿ ಭೇದಗಳಿಲ್ಲ ಎಂದು, ತೆಳಿನ್ದವನುಕ್ಕು - ಜ್ಞಾನವನ್ನು ಹೊಂದಿದವನಿಗೆ, "ಬ್ರಾಹ್ಮಣೋಹಂ ಕ್ಷತ್ರಿಯೋಹಂ"- ನಾನು ಬ್ರಾಹ್ಮಣನು, ನಾನು ಕ್ಷತ್ರಿಯನು, ಎನ್ರಾರ್ಪ್ಪೋಲೇ ವರುಮ್ - ಎಂದು ಹೇಳುವಹಾಗೆ ಉಂಟಾಗುವ, ಅಭಿಮಾನಙ್ಗಳಡಿಯಾಗ - ಅಹಂಭಾವದನುಕೂಲಕವಾಗಿ, ವರ್ಣಾಶ್ರಮಾದಿ ಧರ್ಮಗಳೂ, ಅವತ್ತೋಡೆತುವಕ್ಕುಣ್ಡಾನ - ಅವುಗಳೊಂದಿಗೆ ಸಂಬಂಧಿಸಿಕೊಂಡಿರುವ, ಉಪಾಯಾಂತರಙ್ಗಳುಮ್ - ಭಕ್ತ್ಯಾದಿ ಉಪಾಸನಗಳೂ ಕೂಡ, ಅನುಷ್ಠೇಯಙ್ಗಳಲ್ಲಾಮೈಯಾಲೇ - ಅನುಷ್ಠಿಸತಕ್ಕವುಗಳಲ್ಲವಾದುದರಿಂದ, ಇವ್ವರ್ಣಾಶ್ರಮಾದಿ ನಿಬಂಧನಙ್ಗಳಾನ ಧರ್ಮಙ್ಗಳ್ - ಈ ವರ್ಣಾಶ್ರಮವೇ ಮೊದಲಾದವುಗಳನ್ನು ವಿಧಿಸುವ ಧರ್ಮಗಳು, ಸ್ವರೂಪವಿರುದ್ಧಙ್ಗಳ್ - ಆತ್ಮಸ್ವರೂಪಕ್ಕೆ ವಿರುದ್ಧವಾದವು, ಎನ್ಗೈಕ್ಕುಕ್ಕುರೈ ಯೆನ್ನೆನ್ನಿಲ್ - ಎಂದು ಹೇಳಲು ಏನೂ ಕೊರತೆಯಿಲ್ಲವು. ಎಂದರೆ ಧಾರಾಳವಾಗಿ ಹೇಳಬಹುದು ಎಂದು ಆಕ್ಷೇಪ ತಂದರೆ, ಇದುವುಮ್ ಅನುಪಪನ್ನಮ್ - ಇದೂ ಕೂಡ ಸಮಂಜಸವಲ್ಲವು ಏತಕ್ಕೆಂದರೆ ಮುಂದಿನ ವಾಕ್ಯದಿಂದ ತಿಳಿಸುತ್ತಾರೆ ಆಕ್ಷೇಪವೇನೆಂದರೆ ಈ ಆತ್ಮನು ದೇಹ, ಇಂದ್ರಿಯ,

ಸ್ವರೂಪತ್ತಿಲ್ ಬ್ರಾಹ್ಮಣತ್ವಾದಿಗಳಿಲ್ಲೈ ಯೆನ್ರು ತೆಳಿನ್ದಾನೇ ಯಾಗಿಲುಮ್ ಕರ್ಮವಿಶೇಷಜ್ಞಳಡಿಯಾಗ ಬ್ರಾಹ್ಮಣತ್ವಾದಿ ವಿಶಿಷ್ಟಮಾನ ಶರೀರತ್ತೋಡೆ ಸಂಬನ್ಧ ನಾಯಿರುಕ್ಕೈಯಾಲೇ ಅಶ್ಶರೀರ ಸಂಬಂಧ ಮಡಿಯಾಗ ವರುಗಿರ ಕ್ಷುತ್ಪಿಪಾಸಾದಿಗಳುಕ್ಕು ಪರಿಹಾರಮ್ ಪಣ್ಣ

ಮನಸ್ಸು, ಪ್ರಾಣ, ಬುದ್ಧಿಗಳಿಗಿಂತ ವಿಲಕ್ಷಣನು. ಅಣುಸ್ವರೂಪನು ಮತ್ತು ಜ್ಞಾನಸ್ವರೂಪನು. ವರ್ಣಾಶ್ರಮ ಧರ್ಮಗಳೆಲ್ಲಾ ದೇಹಕ್ಕೆ ಸೇರಿದವೇ ವಿನಾ ಆತ್ಮನಿಗಲ್ಲವು. ಈಗ ಬ್ರಾಹ್ಮಣ ಯೋನಿಯಲ್ಲಿ ಜನಿಸಿದ್ದರೆ ಬ್ರಾಹ್ಮಣ ವರ್ಣಾಶ್ರಮಕ್ಕೆ ಅಧಿಕಾರಿಯು. ಈ ದೇಹವು ನಾಶವಾಗಿಹೋಗಿ ಶೂದ್ರಜನ್ಮವು ಪ್ರಾಪ್ತವಾದರೆ, ಆಗ ಶೂದ್ರ ಧರ್ಮಗಳಿಗೆ ಈತನು ಅಧಿಕಾರಿಯಾಗುತ್ತಾನೆ ಪಶು ವೃಕ್ಷಗಳಾಗಿ ಹುಟ್ಟಿದರೆ ಆಗ ವರ್ಣಾಶ್ರಮ ಧರ್ಮಗಳಿಗೆ ಅಧಿಕಾರಿಯೇ ಆಗುವದಿಲ್ಲವು. ಆದುದರಿಂದ ವರ್ಣಾಶ್ರಮಧರ್ಮಗಳು ಆತ್ಮನ ಸ್ವರೂಪಕ್ಕೆ ಸಂಬಂಧಿಸಿದಲ್ಲವು. ದೇಹಕ್ಕೇ ಸಂಬಂಧಿಸಿದವು. ನಾನು ಬ್ರಾಹ್ಮಣ, ನಾನು ಕ್ಷತ್ರಿಯನೆಂದು ಹೇಳಿಕೊಳ್ಳುವದರಿಂದ ಅಹಂಕಾರವು ಉತ್ಪನ್ನವಾಗಿರುವದು ವ್ಯಕ್ತವು. ಇಂತಹ ಬ್ರಾಹ್ಮಣ ಕ್ಷತ್ರಿಯ ವೈಶ್ಯರು ಮಾತ್ರವೇ ಅನುಷ್ಠಿಸುವ ಉಪಾಯವಾಗಿರುವದರಿಂದ ಉಪಾಸನವೂ ಕೂಡ ಅಹಂಕಾರ ಗರ್ಭಿತವು. ಆದುದರಿಂದ ಬ್ರಾಹ್ಮಣಾದಿಗಳುಮಾತ್ರವೇ ಅನುಷ್ಠಿಸುವ ವರ್ಣಾಶ್ರಮ ಕರ್ಮಗಳೂ, ಉಪಾಸನಾದಿ ಉಪಾಯಗಳೂ ಸಹ ಅನುಪಾದೇಯಗಳು. ಇದೀಗ ಪೂರ್ವಪಕ್ಷವು. ಈ ಪೂರ್ವಪಕ್ಷವೂ ಅನುಪಪನ್ನವು, ಅಸಮಂಜಸವಾದುದು, ಶಾಸ್ತ್ರಸಮ್ಮತವಲ್ಲದ ಪೂರ್ವ ಪಕ್ಷವೆಂಬ ತಾತ್ಪರ್ಯವು ಎಜ್ಜನೇ ಯೆನ್ನಿಲ್ - ಹೇಗೆ ಎಂದರೆ, ಸ್ವರೂಪತ್ತಿಲ್ ಬ್ರಾಹ್ಮಣತ್ವಾದಿಗಳಿಲ್ಲೈ ಯೆನ್ರು ತೆಳಿನ್ದಾನೇ ಯಾಗಿಲುಮ್ - ಆತ್ಮಸ್ವರೂಪದಲ್ಲಿ ಬ್ರಾಹ್ಮಣತ್ವಾದಿಗಳಿಲ್ಲವೆಂದು ತಿಳಿದಿದ್ದರೂ ಕೂಡ, ಕರ್ಮವಿಶೇಷಜ್ಞಳಡಿಯಾಗ - ಪ್ರಾರಬ್ಧ ಕರ್ಮದ ಮೂಲಕವಾಗಿ, ಬ್ರಾಹ್ಮಣತ್ವಾದಿ ವಿಶಿಷ್ಟಮಾನ ಶರೀರತ್ತೋಡೆ ಸಂಬದ್ಧನಾಯಿರುಕ್ಕೈಯಾಲೇ - ಬ್ರಾಹ್ಮಣತ್ವಾದಿಗಳೊಂದಿಗೆ ಸೇರಿದ ಶರೀರದಿಂದ ಬದ್ಧನಾಗಿರುವದರಿಂದ ಎಂದರೆ ಬ್ರಾಹ್ಮಣ ಕ್ಷತ್ರಿಯಾದಿ ಯೋನಿಯಲ್ಲಿ ಜನಿಸಿರುವದರಿಂದ ಎಂಬ ಭಾವವು ಅಶ್ಶರೀರ ಮಡಿಯಾಗ - ಆ ಪ್ರಾಪ್ತವಾಗಿರುವ ಶರೀರ ಮೂಲಕವಾಗಿ, ವರುಗಿರ - ಉಂಟಾಗುವ, ಕ್ಷುತ್ಪಿಪಾಸಾದಿಗಳುಕ್ಕು - ಹಸಿವು, ಬಾಯಾರಿಕೆ, ಆದಿಶಬ್ದದಿಂದ ಉಚ್ಛ್ವಾಸ, ನಿಶ್ವಾಸ, ಸ್ನಾನ, ವಸ್ತ್ರ

ಗಿರ ಕಣಕ್ಕಿಲೇ, ಅಶರೀರನಾ್ ವಿಡುಮಳವುಮ್ ಅವ್ವೋ ವರ್ಣಾಶ್ರಮಾದಿಗಳುಕ್ಕುಮ್ ತಱಶಕ್ತಿಕ್ಕುಮ್ ಅನುರೂಪಮಾಗ ಅನಿಷ್ಟ ನಿವೃತ್ತೀಷ್ಟಪ್ರಾಪ್ತಿಗಳೈಪ್ಪತ್ತ ಶಾಸ್ತ್ರಙ್ಗಳ್ ವಿಧಿತ್ತ ಧರ್ಮಙ್ಗಳೈ ವಿಡವೊ

ಧಾರಣಾದಿಗಳು ಹೇಳಲ್ಪಟ್ಟವು. **ಪರಿಹಾರಮ್ ಪಣ್ಣುಗಿರ ಕಣಕ್ಕಿಲೇ**-ಪರಿಹಾರ ಮಾಡಿಕೊಳ್ಳುವ ನ್ಯಾಯರೀತ್ಯಾ ಭೋಜನ, ಉದಕಪಾನಾದಿಗಳಿಂದ, **ಅಶರೀರ ವಿಡುಮಳವುಮ್**-ಆ ಶರೀರವನ್ನು ಬಿಡುವವರೆಗೂ, **ಅವ್ವೋ ವರ್ಣಾಶ್ರಮಾದಿಗಳುಕ್ಕುಮ್**-ಆಯಾ ವರ್ಣಾಶ್ರಮಾದಿಗಳಿಗೂ, **ತಱಶಕ್ತಿಕ್ಕುಮ್**-ತನ್ನ ಶಕ್ತಿಗೂ, **ಅನುರೂಪಮಾಗ** - ಅನುರೂಪವಾಗಿ, **ಅನಿಷ್ಟನಿವೃತ್ತೀಷ್ಟಪ್ರಾಪ್ತಿಗಳೈಪ್ಪತ್ತ**-ಅಪರಾಧಗಳ ಪರಿಹಾರ ಮತ್ತು ಪುರುಷಾರ್ಥಗಳ ಪ್ರಾಪ್ತಿಗಳನ್ನು ಕುರಿತು, ಶಾಸ್ತ್ರಗಳು ವಿಧಿಸಿದ ಧರ್ಮಗಳನ್ನು, **ವಿಡವೊಣ್ಣಾದು** - ಬಿಡತಕ್ಕದ್ದಲ್ಲವು. ಪೂರ್ವ ಪಕ್ಷಿಗಳು ಹೇಳಿದಹಾಗೆ ಬ್ರಾಹ್ಮಣತ್ವಾದಿಗಳು ಶರೀರಕ್ಕೆ ಸಂಬಂಧಿಸಿದವೇ ವಿನಾ ಆತ್ಮಸ್ವರೂಪಕ್ಕೆ ಅಲ್ಲವೆಂಬುದೇನೋ ಎಲ್ಲರೂ ಅಂಗೀಕರಿಸತಕ್ಕದ್ದೇ ಸರಿ. ಆದರೆ ಆತ್ಮನಿಗೆ ಈ ಶರೀರ ಸಂಬಂಧ ಬಂದಿರುವದರಿಂದ ಆ ಶರೀರವು ಕಳೆದು ಹೋಗುವವರೆಗೂ ಬ್ರಾಹ್ಮಣತ್ವಾದಿ ವರ್ಣಾಶ್ರಮಗಳನ್ನು ಶಾಸ್ತ್ರದಲ್ಲಿ ಹೇಳಿರುವಹಾಗೆ ನಡಿಸಿಯೇ ತೀರಬೇಕು, ಬಿಟ್ಟದ್ದಲ್ಲವು ಎಲ್ಲಾ ಶಾಸ್ತ್ರವಿಹಿತವಾದ ಧರ್ಮಗಳನ್ನು ನಡೆಸಲು ಶಕ್ತಿಯಿಲ್ಲದಿದ್ದರೂ, ತನ್ನ ವರ್ಣಾಶ್ರಮೋಚಿತ ಕರ್ಮಗಳನ್ನು ಯಥಾಶಕ್ತ್ಯ ನಡೆಸಬೇಕೆಂಬ ತಾತ್ಪರ್ಯವು. ಸ್ವರೂಪದಲ್ಲಿ ಬ್ರಾಹ್ಮಣತ್ವಾದಿಗಳಿಲ್ಲವು; ಆದುದರಿಂದ ಆಯಾ ವರ್ಣಾಶ್ರಮಗಳು ಬೇಕಿಲ್ಲವು ಎಂಬ ವಾದವನ್ನು ತಂದರೆ, ಕ್ಷುತ್ಪಿಪಾಸೆಗಳು ಆತ್ಮಸ್ವರೂಪಕ್ಕೆ ಸಂಬಂಧಿಸದೇ ಇರವಾಗ, ಅವುಗಳ ಉಪಶಮನಕ್ಕಾಗಿ ಆಹಾರ ಸೇವನೆ ಜಲಪಾನಾದಿಗಳು ತಾನೇ ಏತಕ್ಕೆ? ವಸ್ತ್ರಧಾರಣೆತಾನೇ ಏತಕ್ಕೆ? ಇತ್ಯಾದಿ ಪ್ರತಿಬಂದಿ ತರ್ಕಗಳು ತಪ್ಪಿದಲ್ಲವು. ಆದುದರಿಂದ ಉಪಾಯಾನುಷ್ಠಾನವು ಬ್ರಾಹ್ಮಣಾದಿ ವರ್ಣಾಶ್ರಮಗಳಿಗೆ ಹೇಗೆ ಶಾಸ್ತ್ರವು ವಿಧಿಸಿರುತ್ತದೋ, ಆ ಪ್ರಕಾರವಾಗಿಯೇ ನಡೆಸಲೇಬೇಕೆಂಬ ತಾತ್ಪರ್ಯವು. ಪ್ರಮಾಣಾನುಸಾರ ನಡೆಯಬೇಕಾದ ಸಂದರ್ಭಗಳಲ್ಲಿ ಬರೀ ವಾದಗಳನ್ನು ತಂದು ಆ ಪ್ರಮಾಣಗಳನ್ನು ನಿರಾಕರಿಸೋಣವು ಯುಕ್ತವಲ್ಲವೆಂದು ಹಿಂದೆಯೇ ತಿಳಿಸಿದ್ದಾರೆ "ಶರೀರಮಾದ್ಯಂ ಖಲುಧರ್ಮಸಾಧನಂ" ಎಂದು ಹೇಳಿರುವ ಹಾಗೆ, ಆಯಾ ವರ್ಣಾಶ್ರಮಾದಿಗಳನುಗುಣವಾಗಿ ಪುರುಷಾರ್ಥಸಾಧನಕ್ಕಾಗಿ ಶಾಸ್ತ್ರವಿಹಿತೋಪಾಯಾನುಷ್ಠಾನವನ್ನು ಅಜ್ಞರೇ

ಣ್ಣಾದು. ಆಗೈಯಾಲ್ ಇದ್ಧರ್ಮಙ್ಗಳೈ ದೇಹಾತ್ಮ ವಿವೇಕ ಮಡಿಯಾಗ ಸ್ವರೂಪ ವಿರುದ್ಧಙ್ಗಳಾಕ್ಕಿ ಇವತ್ತುಕ್ಕು ತ್ಯಾಜ್ಯತ್ತೈ ಶೊಲ್ಲವೊಣ್ಣಾದು.

ದೇಹಾತ್ಮ ವಿವೇಕ ಮುಡೈಯವನುಕ್ಕೇ ಪಾರಲೌಕಿಕ ಭೋಗ ಸಾಧನಮಾನ ಧರ್ಮತ್ತಿಲ್ ಅಧಿಕಾರಮಾಗೈಯಾಲ್, ಇದ್ದರ್ಮಙ್ಗಳುಡೈಯ

ಬೇಕೆಂಬುದು ಸ್ಥಾಪಿತವು. ಇದನ್ನೇ ಮುಂದಿನ ವಾಕ್ಯಗಳಿಂದ ನಿಗಮನಮಾಡಿ ಹೇಳುತ್ತಾರೆ. **ಆಗೈಯಾಲ್** - ತನಗೆ ಪ್ರಾರಬ್ಧ ಕರ್ಮಾನುಗುಣವಾಗಿ ಪ್ರಾಪ್ತವಾದ ಶರೀರ ಸಂಬಂಧಕ್ಕೆ ಶಾಸ್ತ್ರದಲ್ಲಿ ವಿಹಿತವಾದ ಧರ್ಮಗಳು ಅವಶ್ಯಾನುಷ್ಠೇಯಗಳಾದುದರಿಂದ, **ಇದ್ಧರ್ಮಙ್ಗಳೈ** - ಈ ಬ್ರಾಹ್ಮಣ ಕ್ಷತ್ರಿಯಾದಿ ವರ್ಣಾಶ್ರಮಿಗಳಿಗೆ ವಿಧಿಸಿರುವ ಧರ್ಮಗಳನ್ನು. **ದೇಹಾತ್ಮ ವಿವೇಕ ಮಡಿಯಾಗ** - ಇವು ದೇಹಕ್ಕೆ ಸಂಬಂಧಿಸಿದವು, ತನ್ನ ಆತ್ಮಾವಿಗಲ್ಲವು, ಎಂಬ ತಿಳುವಳಿಕೆಯು ಮೂಲಕವಾಗಿ, **ಇವತ್ತುಕ್ಕು** - ಈ ಶಾಸ್ತ್ರದಲ್ಲಿ ವಿಧಿಸಿರುವ ಕರ್ಮಗಳಾದ ನಿತ್ಯ ನೈಮಿತ್ತಿಕ ವರ್ಣಾಶ್ರಮ ಧರ್ಮಗಳಿಗೂ ಅವುಗಳಿಗೆ ಸಂಬಂಧಿಸಿದ ಉಪಾಸನೆಗಳಿಗೂ, **ತ್ಯಾಜ್ಯತ್ತೈಶೊಲ್ಲವೊಣ್ಣಾದು** - ಪರಿತ್ಯಾಗವನ್ನು ಹೇಳುವುದು ಯುಕ್ತವಲ್ಲವು. ಆದರೆ ಶಾಸ್ತ್ರಗಳಲ್ಲಿ ತ್ರೈವರ್ಣಿಕರಿಗೆ ಉಪಾಸನವು ವಿಹಿತವಾಗಿದೆಯಲ್ಲಾ, ಆದಕ್ಕೆ ಹಾಗಾದರೆ ಅಧಿಕಾರಿಗಳು ಯಾರೆಂಬ ಪ್ರಶ್ನೆಗೆ ಪೂರ್ವಪಕ್ಷಿಗಳು ಹೇಳಿರುವವೇನೆಂದರೆ, ದೇಹಾತ್ಮಭ್ರಮೆಯಿಲ್ಲದೆ ದೇಹಾತ್ಮ ವಿವೇಕವನ್ನು ಚನ್ನಾಗಿ ತಿಳಿದವರಿಗೆ ಈ ಧರ್ಮಗಳು ಯಾವುವೂ ಬೇಕಾಗಿಲ್ಲವು; ಆತ್ಮಸ್ವರೂಪದಲ್ಲೇ ಬ್ರಾಹ್ಮಣ್ಯಾದಿ ಭ್ರಮೆ ಇರುವವರೀಗ ಈ ಭಕ್ತಿಮಾರ್ಗವು ಎಂದು ಹೇಳಿರುತ್ತಾರೆ. **"ಪ್ರಾಪಕಾನ್ತರಮ್ ಅಜ್ಞರ್ಕ್ಕು ಉಪಾಯಮ್, ಜ್ಞಾನಿಗಳುಕ್ಕು ಅಪಾಯಮ್"** ಎಂಬುದು ಅವರುಗಳ ಅಭಿಪ್ರಾಯವು ಇದು ಸರಿಯುಲ್ಲವೆಂದು ಮುಂದಿನ ವಾಕ್ಯಗಳಿಂದ ತೋರಿಸುತ್ತಾರೆ. ಉಪಾಸನದಲ್ಲಿಯಾರಿಗೆ ಅಧಿಕಾರವೆಂಬುದನ್ನು ಪ್ರಥಮತಃ ಚರ್ಚಿಸುತ್ತಾರೆ. ದೇಹಾತ್ಮ ವಿವೇಕವುಳ್ಳ ಜ್ಞಾನಿಗೇ ಅಧಿಕಾರವೇವಿನಾ, ಭ್ರಮವುಳ್ಳ ಅಜ್ಞಾನಿಗೆ ಅಧಿಕಾರವಿಲ್ಲವೆಂದು ಹೇಳುತ್ತಾರೆ.

ದೇಹಾತ್ಮವಿವೇಕ ಮುಡೈಯನನುಕ್ಕೇ - ಆತ್ಮಾದೇಹಕ್ಕಿಂತ ವಿಲಕ್ಷಣನೆಂಬ ಆತ್ಮನ ಯಥಾರ್ಥಸ್ವರೂಪವನ್ನು ಚನ್ನಾಗಿ ವಿವೇಕಿಸಿ ತಿಳಿದ ಜ್ಞಾನಿಗೇನೇ, (ಇಲ್ಲಿ ತ್ರೈವರ್ಣಿಕರೇ ಹೇಳಲ್ಪಟ್ಟರು, ಏಕೆಂದರೆ ಶೂದ್ರಾದಿಗಳಿಗೆ ಉಪಾಸನದಲ್ಲಿ ಅಧಿಕಾರವಿಲ್ಲವಾದುದರಿಂದ,) **ಪಾರಲೌಕಿಕ ಭೋಗಸಾಧನ**

ಅನುಷ್ಠಾನತ್ತುಕ್ಕು ಸ್ವರೂಪತ್ತಿಲ್ ಬ್ರಾಹ್ಮಣ್ಯಾದಿ ಭ್ರಮಮ್ ಅಧಿಕಾರಮನ್ರು; ಬ್ರಾಹ್ಮಣ್ಯಾದಿ ವಿಶಿಷ್ಟ ಶರೀರ ಸಂಬಂಧಮೇ ಅಧಿಕಾರಮ್. ಆಗೈಯಾಲ್ ಸರ್ವ ಧರ್ಮಾನುಷ್ಠಾನತ್ತುಕ್ಕುಮ್ ಉಪಯುಕ್ತಮಾನ ಪ್ರಕೃತ್ಯಾತ್ಮ ವಿವೇಕ ಮಡಿಯಾಗ ಉಪಾಸನಾದಿಗಳುಕ್ಕು ವಿರೋಧಮ್ ಕಣ್ಡಿಲೋಮ್

ಮಾನ ಧರ್ಮತ್ತಿಲ್ - ಸ್ವರ್ಗಾದಿ ಭೋಗಗಳೇನು ದಿವ್ಯ ವೈಕುಂಠಲೋಕದ ಪರಿಪೂರ್ಣ ಬ್ರಹ್ಮಾನುಭವರೂಪಭೋಗವೇನು, ಇವುಗಳಿಗೆ ಸಾಧನರೂಪವಾದ ನಿತ್ಯನೈಮಿತ್ತಿಕಗಳೊಂದಿಗೆ ಸೇರಿದ ಉಪಾಸನಧರ್ಮದಲ್ಲಿ, **ಅಧಿಕಾರ ಮಾಗೈಯಾಲ್** - ಅಧಿಕಾರವಾಗವದರಿಂದ, ಇದ್ದ **ಧರ್ಮಙ್ಗಳುಡೈಯ ಅನುಷ್ಠಾನತ್ತುಕ್ಕು** - ಈ ಧರ್ಮಗಳ ಅನುಷ್ಠಾನಕ್ಕೆ, **ಸ್ವರೂಪತ್ತಿಲ್ ಬ್ರಾಹ್ಮಣ್ಯಾದಿ ಭ್ರಮಮ್ ಅಧಿಕಾರಮನ್ರು** - ಆತ್ಮಸ್ವರೂಪಕ್ಕೇ ಬ್ರಾಹ್ಮಣ್ಯಾದಿ ಸೇರಿದವು ಎಂಬ ಭ್ರಮವೇ ಅಧಿಕಾರವನ್ನುಂಟುಮಾಡಲು ಕಾರಣವಲ್ಲವು; ಎಂದರೆ ತಾನು ಬ್ರಾಹ್ಮಣನು, ತಾನು ಕ್ಷತ್ರಿಯನು, ಈ ಬ್ರಾಹ್ಮಣ್ಯಾದಿಗಳು ತನ್ನ ಸ್ವರೂಪಕ್ಕೆಸೇರಿದವು ಎಂದು ಯಾರಿಗೆ ಭ್ರಮೆಯುಂಟೋ ಅವನೀಗ ಅಧಿಕಾರಿಯೆಂದುಹೇಳಲು ಸಾಧ್ಯವಿಲ್ಲವು. ಅಧಿಕಾರಿಯಾರು ಎಂದರೆ ದೇಹಾತ್ಮವಿವೇಕವಿದ್ದು ತಾನು ದೇಹಕ್ಕಿಂತ ವಿಲಕ್ಷಣನೆಂಬ ಜ್ಞಾನವಿದ್ದವನು ತಾನು ಪರಲೋಕಸಂಬಂಧವಾದ ಪುರುಷಾರ್ಥವನ್ನು ಹೊಂದಲು ತನಗೆ ಪ್ರಾರಬ್ಧಾನುಗುಣವಾಗಿ ಪ್ರಾಪ್ತವಾದ ಶರೀರವುಳ್ಳ ತನಗೆ ಶಾಸ್ತ್ರದಲ್ಲಿ ಏನು ವಿಧಿಸಲ್ಪಟ್ಟಿರುತ್ತದೆಂದು ತಿಳಿದು ಅನುಷ್ಠಿಸತಕ್ಕದ್ದಾಗಿರುತ್ತದೆ. ಆದ ದರಿಂದ ದೇಹಾತ್ಮ ವಿವೇಕಜ್ಞಾನಯುಕ್ತನೇ ಅಧಿಕಾರಿಯೇ ವಿನಾ, ಭ್ರಮೆಯುಳ್ಳ ಅಜ್ಞನಲ್ಲವೆಂಬ ಭಾವವು. ಈಗ ತಾವು ಸ್ಥಾಪಿಸಿದ ಅಭಿಪ್ರಾಯವನ್ನು ನಿಗಮನಮಾಡಿ **ಆಗೈಯಾಲ್** ಎಂಬ ಮುಂದಿನ ವಾಕ್ಯದಿಂದ ಹೇಳುತ್ತಾರೆ **ಆಗೈಯಾಲ್** - ಹೀಗೆ ದೇಹಾತ್ಮ ವಿವೇಕವುಳ್ಳವನೇ ಈ ಉಪಾಸನಕ್ಕೆ ಅಧಿಕಾರಿಯಾದುದರಿಂದ, **ಸರ್ವಧರ್ಮಾನುಷ್ಠಾನತ್ತುಕ್ಕುಮ್** - ನಿತ್ಯನೈಮಿತ್ತಿಕಾದಿಗಳಿಂದ ಕೂಡಿದ ಕರ್ಮಯೋಗಾದಿ ಅಂಗಗಳಿಂದ ಸೇರಿದ ಉಪಾಸನಾದಿ ಧರ್ಮಗಳ ಅನುಷ್ಠಾನಕ್ಕೂ, **ಉಪಯುಕ್ತಮಾನ** - ಬೇಕಾದ ಅಥವಾ ಉಪಯೋಗವಾದ, **ಪ್ರಕೃತ್ಯಾತ್ಮವಿವೇಕಂ** - ದೇಹಕ್ಕೂ ಆತ್ಮನಿಗೂ ಇರುವ ವೈಲಕ್ಷಣ್ಯದಜ್ಞಾನವು, ತನ್ಮೂಲಕವಾಗಿ, ಉಪಾಸನಾದಿಗಳುಕ್ಕು, **ವಿರೋಧಮ್** - ವಿರೋಧವನ್ನು ಹೇರುವನು, **ಕಣ್ಡಿಲೋಮ್** - ಎಲ್ಲಿಯೂ ಕಣ್ಡಿಲ್ಲವು. ಸ್ವಾಮಿ

(೪) ಭಕ್ತಿಯೋಗೋಽಹಂಕಾರ ಗರ್ಭತ್ವಾತ್ ಸ್ವರೂಪ ವಿರುದ್ಧ ಇತಿವಾದಸ್ಯ ನಿರಾಸಃ

ಉಪಾಸನಾದಿಗಳ್ ಅಹಂಕಾರಾದಿ ಗರ್ಭಙ್ಗಳೆನ್ರು ಮಿಡಾ ಶಾಸ್ತ್ರ ಮಿಶ್ರೈಯರಾದಿರುಕ್ಕಚ್ಚೆಯ್ದೇ ಆರೋಪಿತ್ತಾರ್ಗಳತ್ತನ್ನೈ-

---

ದೇಶಿಕರವರು ನೋಡದೇ ಇರುವ ಗ್ರಂಥವಿಲ್ಲವು, ೧೦೫ ವರುಷಗಳು ಜೀವಿಸಿದವರಾಗಿ, ಸದಾ ಗ್ರಂಥಾವಲೋಕನ ಮತ್ತು ಗ್ರಂಥರಚನಾ ಇವುಗಳಲ್ಲೇ ಕಾಲವನ್ನು ಕಳೆದವರು. ದೇಹಾತ್ಮ ಭ್ರಾಂತಿಯಿಲ್ಲದೆ ವಿವೇಕ ಜ್ಞಾನ ಉಂಟಾದವನಿಗೆ ಉಪಾಸನವು ಮೋಕ್ಷೋಪಾಯವಾಗ ಕೂಡದೆಂಬುದಕ್ಕೆ ಪ್ರಮಾಣವನ್ನು ತಾವು ಎಲ್ಲೂ ಕಾಣಲಿಲ್ಲವೆಂದು ಹೇಳುತ್ತಾರೆ.

ಭಕ್ತಿಯೋಗವು ಅಹಂಕಾರ ಗರ್ಭವಾದುದರಿಂದ ಸ್ವರೂಪ ವಿರುದ್ಧವೆಂಬ ವಾದದ ಖಂಡನವು

ಉಪಾಸನಾದಿಗಳ್ - ಉಪಾಸನವೇ ಮೊದಲಾದವುಗಳು, ಇಲ್ಲಿ ಆದಿಪದದಿಂದ ಭರನ್ಯಾಸವೂ, ಕರ್ಮಯೋಗಾದಿಗಳೂ ಹೇಳಲ್ಪಟ್ಟವು. **ಅಹಂಕಾರಾದಿಗರ್ಭಙ್ಗಳೆನ್ರು ಮಿಡಂ**-ಅಹಂಕಾರ ಮಮಕಾರಗಳಿಂದ ಕೂಡಿದವು ಎಂದು ಪೂರ್ವಪಕ್ಷವನ್ನು ತಂದಿರುವ ಸಂದರ್ಭದಲ್ಲಿ, **ಶಾಸ್ತ್ರಮಿಶ್ರೈಯರಾದಿರುಕ್ಕಚ್ಚೆಯ್ದೇ**-ಶಾಸ್ತ್ರವನ್ನಙ್ಗೀಕರಿಸದೇ ಇರುವವರಾಗಿ, **ಆರೋಪಿತ್ತಾರ್ಗಳತ್ತನ್ನೈ** - ಉಪಾಸನೆಗೆ ಅಹಂಕಾರ ಮಮಕಾರಗಳನ್ನು ಆರೋಪಿಸಿದವರು, ಇಷ್ಟೇ ವಿನಾ ಬೇರೆ ಇಲ್ಲವೆಂಬ ಭಾವವು. ನಿತ್ಯನೈಮಿತ್ತಿಕಾದಿ ಕರ್ಮಗಳಲ್ಲೂ ಉಪಾಸನಾದಿಕರ್ಮಗಳಲ್ಲೂ, ಸಙ್ಕಲ್ಪವನ್ನು ಹೇಳುವಾಗ, **ಅಹಂಕರಿಷ್ಯೇ** ಎಂದು ಹೇಳುವದರಿಂದಲೂ, ಸರ್ವೇಶ್ವರನ ಕೃಪೆಯು ತನಗೆ ಉತ್ತಾರಕವೆಂಬ ಜ್ಞಾನವಿಲ್ಲದೆ, ಮೋಕ್ಷಪ್ರಾಪ್ತಿಯನ್ನು ಈ ಉಪಾಯದ ಮೂಲಕ ಸಾಧಿಸುವನೆಂದು ಹೇಳಿಕೊಳ್ಳುವದರಿಂದಲೂ, ಮತ್ತು ಕರ್ಮಗಳ ಪ್ರಥಮಃ ಪ್ರಯತ್ನದಲ್ಲಿ ಸರ್ವೇಶ್ವರನು ಕೊಟ್ಟ ಸ್ವಾತಂತ್ರ್ಯವನ್ನು ದುರುಪಯೋಗ ಮಾಡುವದರಿಂದ ಅಹಂಕಾರ ಮಮಕಾರ ಗರ್ಭಿತವೆಂದು ಭಾವಿಸಿ, **"ಮದಿರಾಬಿಂದು ಮಿಶ್ರವಾನ ಶಾತಕುಂಭಮಯಕುಂಭಗತ ಸಲಿಲಂಪೋಲೆ ಅಹಂಕಾರ ಮಿಶ್ರಂ"** ಎಂದು ಶ್ರೀ ವಚನ ಭೂಷಣದಲ್ಲಿ ಹೇಳಿರುತ್ತಾರೆ. ಈ ಉಪನ್ಯಾಸದಲ್ಲಿ "ಉಪಾಸನವು ತ್ಯಾಜ್ಯವು, ಅಹಂಕಾರಗರ್ಭವಾಗಿರುವದರಿಂದ" ಎಂದು ಅನುಮಾನಮಾಡಿದರೆ, ಉಪಾಸನವೆಂಬ ಪಕ್ಷದಲ್ಲಿ ಅಹಂಕಾರ

ಗರ್ಭತ್ವವೆಂಬ ಹೇತುವೇ ಇಲ್ಲವು; ಆದುದರಿಂದ ಹೇತ್ವಸಿದ್ಧಿದೋಷವುಂಟಾಗುತ್ತವೆ. ಹೇಗೆಂದರೆ:.....**"ಸ್ವಶೇಷ ಭೂತೇನ ಮಯಾಸ್ವೀಯೈಸ್ಸರ್ವೈ ಪರಿಚ್ಛದೈಃ। ವಿಧಾತುಂ ಪ್ರೀತಮಾತ್ಮಾನಂ ಶ್ರೀಮಾನ್ ಪ್ರಕ್ರಮತೇ ಸ್ವಯಂ"** ಎಂದು ಅಹಂಕಾರ ಮಮಕಾರ ತ್ಯಾಗಪೂರ್ವಕವಾಗಿ ತನ್ನ ಸರ್ವವ್ಯಾಪಾರಗಳೂ ಭಗವದಧೀನವೆಂಬ ಅನುಸಂಧಾನ ಪೂರ್ವಕವಾಗಿಯೂ ಉಪಾಸನ ಪ್ರಾರಂಭ ಮಾಡಬೇಕೆಂಬದಾಗಿ ಶಾಸ್ತ್ರವು ವಿಧಿಸಿರುವದರಿಂದ, ಹೇತುವೇ ಪಕ್ಷದಲ್ಲಿಲ್ಲದ ವಾದವೆಂಬಭಿಪ್ರಾಯವು. ಶಾಸ್ತ್ರಜ್ಞಾನವಿರುವರಿಗಾದರೋ ಶೇಷತ್ವಜ್ಞಾನವೇನು, **"ಪರಾತ್ತು ತಚ್ಛ್ರುತೇಃ"** ಎಂದು ಬ್ರಹ್ಮಸೂತ್ರದಲ್ಲಿ ತೋರುವ ಪಾರತಂತ್ರ್ಯವೇನು, ಇವುಗಳ ಜ್ಞಾನವಿರುವದರಿಂದ, ಸ್ವತಂತ್ರಕರ್ತೃತ್ವರೂಪ ಅಹಂಕಾರ ಜ್ಞಾನವು ಸುತರಾಂ ಉಂಟಾಗುವದಿಲ್ಲವೆಂಬುದು ಮುಖ್ಯಾಭಿಪ್ರಾಯವು. **"ಉಪಾಸೀತ"** ಇತ್ಯಾದಿ ವಿಧಿಗಳು ಇರುವಾಗಲೂ, ಆ ಉಪಾಸನೆಗಳು ನಾನಾವಿಧ ಬ್ರಹ್ಮವಿದ್ಯೆಗಳಲ್ಲಿ ನಾನಾವಿಧವಾಗಿ ಶಾಸ್ತ್ರವಲ್ಲಿ ವಿಧಿಸಿರುವದರಿಂದಲೂ ಈ ವಿಧಿಗಳನ್ನೆಲ್ಲಾ ನಿರಾಕರಿಸಿ ಅಹಂಕಾರಗರ್ಭವೆಂದು ದೂಷಿಸುವದು, "ಶಾಸ್ತ್ರನಿಶ್ಚಯರಾದಿರುಕ್ಕ" ವಿಷಯವಾಗಿರುತ್ತದೆ. ಅನೇಕ ಮಹರ್ಷಿಗಳೇ ಮೊದಲಾದವರು ಈ ಉಪಾಸನೆಗೆ ತುಂಬಾ ಮಹಿಮೆಯನ್ನು ಹೇಳಿ, ತಾವೂ ಅನುಷ್ಠಿಸಿ, ತಮ್ಮ ಶಿಷ್ಯರುಗಳಿಗೂ ವಿಶದವಾಗಿ ಉಪದೇಶಿಸಿ ಇದ್ದರೂ, ಅದು ಅಹಂಕಾರ ಮಿಶ್ರವಾಗಿ ಸ್ವರೂಪ ವಿರುದ್ಧವೆಂಬುದು ಶಾಸ್ತ್ರವನ್ನಙ್ಗೀಕರಿಸದೇ ಹೇಳಿದಮಾತಾಗಿದೆ. ಶ್ರೀ ನಾರದ ಭಗವಾನರವರು ಪ್ರಹ್ಲಾದ ಧ್ರುವರುಗಳಿಗೂ, ಶ್ರೀ ಕಪಿಲಭಗವಾನರವರು ತಮ್ಮ ತಾಯಿ ದೇವಹೂತಿಗೂ ಸಹ ಅಹಂಕಾರ ಗರ್ಭವಾದ ವಿಷಯವನ್ನು, ವಿವೇಕವಿಲ್ಲದೆ ಉಪದೇಶಿಸಿದರೆಂದು ಹೇಳಲು ಸಾಧ್ಯವೇ ? ಆದುದರಿಂದ ಶಾಸ್ತ್ರಾನುಗುಣವಾದ ವಾದವು ಉಪಾದೇಯವೇ ವಿನಾ, ಶಾಸ್ತ್ರವನ್ನು ದೂರೀಕರಿಸಿದ ವಾದವು ಸರಿಯಾದುದಲ್ಲವೆಂಬುದೂ ಈ ವಾಕ್ಯದಿಂದ ಗ್ರಹಿಸಬಹುದು. ಶಾಸ್ತ್ರಸಮ್ಮತವಾದುದು ಎಂದಿಗೂ ಸ್ವರೂಪ ವಿರುದ್ಧವಾಗಲಾರದು ಸ್ವರೂಪ ವಿರುದ್ಧವಲ್ಲದೆ ತನ್ನ ಸ್ವರೂಪಕ್ಕೆ ಮಹಿಮೆಯನ್ನುಂಟುಮಾಡುವದರಲ್ಲಿ ದೋಷವುಂಟೆಂದು ಹೇಳಿದುದನ್ನು ತಿಳಿಸುವದಕ್ಕಾಗಿಯೇ ಇಲ್ಲಿ ಆರೋಪಿತಾರ್ಗಳಿತ್ತನ್ನೈ ಎಂಬ ಪ್ರಯೋಗವು.

ಭಕ್ತಿಯೋಗಕ್ಕೆ ಶರೀರೋಪಾಧಿಯ ಅಪೇಕ್ಷೆ ಇರುವದರಿಂದ ಸ್ವರೂಪ ವಿರುದ್ಧವೆಂಬ ವಾದದ ಖಂಡನವು.

ಕರ್ಮೋಪಾರ್ಜಿತಜ್ಞಳಾನ - ಪ್ರಾರಬ್ಧಕರ್ಮದಿಂದ ಸಂಪಾದಿಸಲ್ಪಟ್ಟ ಪ್ರಾರಬ್ಧಕರ್ಮಾನುಭವಕ್ಕಾಗಿ ಉಂಟಾದ, **ಕರಣ ಕಳೇಬರಜ್ಞಳಾಗಿರ**

ಭಕ್ತಿಯೋಗಃ ಔಪಾಧಿಕತ್ವೇನ ಸ್ವರೂಪವಿರುದ್ಧ ಇತಿವಾದಸ್ಯ ನಿರಾಸಃ.

ಕರ್ಮೋಪಾರ್ಜಿತಙ್ಗಳಾನ ಕರಣ ಕಳೇಬರಙ್ಗಳಾಗಿರ ಉಪಾಧಿಗಳೈಕ್ಕೊಂಡು ಅನುಷ್ಠಿಕ್ಕೈಯಾಲಿ ಕರ್ಮಯೋಗಾದಿಗಳ್ ನಿರುಪಾಧಿಕಸ್ವರೂಪವಿರುದ್ಧಙ್ಗಳೆನ್ನಾರ್ಕ್ಕು ಸ್ವರೂಪಜ್ಞಾನ ದ್ವಯಶ್ರವಣಾದಿಗಳುಮ್ ಮನಃಪ್ರಭೃತಿ ಸಾಪೇಕ್ಷಙ್ಗಳಾಗೈಯಾಲೇ ತುಲ್ಯದೋಷಙ್ಗಳಾಮ್.

ಉಪಾಧಿಗಳೈಕ್ಕೊಂಡು - ಇಂದ್ರಿಯಗಳೂ ಶರೀರವೂ ಆಗಿರುವ ಉಪಾಧಿಗಳ ಮೂಲಕವಾಗಿ, **ಅನುಷ್ಠಿಕ್ಕೈಯಾಲೇ** - ಉಪಾಸನವನ್ನು ಅನುಷ್ಠಿಸಬೇಕಾಗಿರುವದರಿಂದ, **ಕರ್ಮಯೋಗಾದಿಗಳ್** - ಕರ್ಮಯೋಗವೇ ಮೊದಲಾದವುಗಳು, ಆದಿ ಪದದಿಂದ ಜ್ಞಾನಯೋಗ ಭಕ್ತಿಯೋಗಗಳೂ ಹೇಳಲ್ಪಟ್ಟವು, ಇವುಗಳಿಗೂ ಮನಸ್ಸು ಶರೀರಗಳು ಅಪೇಕ್ಷಿತವು. **ನಿರುಪಾಧಿಕ ಸ್ವರೂಪ ವಿರುದ್ಧಙ್ಗಳ್** - ಉಪಾಧಿಗಳು ಯಾವವೂ ಇಲ್ಲದ ಆತ್ಮಸ್ವರೂಪಕ್ಕೆ ವಿರುದ್ಧವಾದವುಗಳು, **ಎನ್ನಾರ್ಕ್ಕು**-ಎಂದು ಪೂರ್ವಪಕ್ಷವಾದವನ್ನು ತರುವವರಿಗೆ, **ಸ್ವರೂಪ ಜ್ಞಾನ ದ್ವಯಶ್ರವಣಾದಿಗಳುಮ್** - ಆತ್ಮ ಸ್ವರೂಪದ ಯಥಾರ್ಥ ಜ್ಞಾನವೂ, ಗುರುಗಳ ಮೂಲಕ ಮಂತ್ರೋಪದೇಶ ರೂಪದಲ್ಲಿ ದ್ವಯಮಂತ್ರದ ಶ್ರವಣವೂ ಕೂಡ, **ಮನಃಪ್ರಭೃತಿ ಸಾಪೇಕ್ಷಙ್ಗಳಾಗೈಯಾಲೇ** - ಮನಸ್ಸೇ ಮೊದಲಾದ ಇಂದ್ರಿಯಗಳ ಅಪೇಕ್ಷೆ ಇರುವದರಿಂದ, ಗುರುಗಳಿಂದ ಉಪದೇಶಕ್ಕೆ ಶ್ರೋತ್ರಾದಿಗಳೂ ಬೇಕಾಗಿರುವದರಿಂದ ಎಂಬ ಭಾವವು. **ತುಲ್ಯದೋಷಙ್ಗಳಾಮ್** - ಪೂರ್ವಪಕ್ಷಿಗಳು ಆವಶ್ಯಕವೆಂದು ಹೇಳುವ ಉಪಾಯಗಳೂ ಕೂಡ ಸಮಾನ ದೋಷಯುಕ್ತವಾದವುಗಳೇ ಎಂದರೆ ಸೋಪಾಧಿಕ ಪ್ರವೃತ್ತಿಗಳೇ. ಪೂರ್ವಪಕ್ಷಿಯು ಮುಖ್ಯವಾಗಿ ಕರ್ಮಯೋಗವನ್ನು ಇಲ್ಲಿ ತಂದಿರುವುದು ಅದಕ್ಕೆ ವಿಶೇಷವಾಗಿ ಕರಣ ಕಳೇಬರ ಸಾಪೇಕ್ಷವೆಂದು ತಿಳಿದು ಸೋಪಾಧಿಕವೆಂದು ಆಕ್ಷೇಪಿಸಿದರು. ಶರೀರೇಂದ್ರಿಯಗಳ ಸಹಾಯವನ್ನು ಅಪೇಕ್ಷಿಸುವದರಿಂದ ಸ್ವರೂಪವಿರುದ್ಧವು ಏಕೆಂದರೆ ಆತ್ಮಸ್ವರೂಪವು ನಿರುಪಾಧಿಕವು ಎಂದು ಪೂರ್ವಪಕ್ಷವನ್ನು ತಂದರೆ, ನೀವು ಆವಶ್ಯಕವೆಂದು ಹೇಳುವ ಪ್ರವೃತ್ತಿರೂಪವಾದ ತತ್ವಜ್ಞಾನಕ್ಕೆ ಅತ್ಯಾವಶ್ಯಕವಾದ ಆತ್ಮಸ್ವರೂಪದ ಯಥಾರ್ಥಜ್ಞಾನ, ಮತ್ತು ದ್ವಯಮಂತ್ರೋಪದೇಶ ಇವುಗಳಿಗೆ ಕರಣ ಕಳೇಬರದ ಸಾಪೇಕ್ಷತ್ವ ವಿಲ್ಲೆಯೋ ? ಇವುಗಳಿಲ್ಲದೆ ಅವುಗಳೂ ನಡೆಯದ ಬಳಿಕ ನೀವು ಆರೋಪಿಸಿದ ದೋಷವೇ ನಿಮಗೆ ಅಭಿಮತವಾದ ಪ್ರವೃತ್ತಿಗಳಲ್ಲೂ ಉಂಟೇ ಉಂಟೆಂಬ ಭಾವವು ಯಾವ ಪ್ರವೃತ್ತಿಗಳಿಗೆಯಾಗಲಿ

(೬) ಭಕ್ತಿಯೋಗ ಶೇಷತ್ವ ಪಾರತಂತ್ರ್ಯರೂಪ ಸ್ವರೂಪ ವಿರುದ್ಧ ಇತಿವಾದಸ್ಯ ನಿರಾಸಃ

ಆನಾಲುಮ್ ಶೇಷಭೂತನಾಗೈಯಾಲೇ ತನ್ನೈ ತಾಱ ರಕ್ಷಿತ್ತುಕ್ಕೊಳ್ಳ ಪ್ರಾಪ್ತನು ಮನ್ರಿಕ್ಕೇ ಅತ್ಯನ್ತ ಪರತನ್ತ್ರ ನಾಗೈಯಾಲೇ ತನ್ನೈ ತಾಱ ರಕ್ಷಿತ್ತುಕ್ಕೊಳ್ಳ ಶಕ್ತನು ಮನ್ರಿಕ್ಕೇ ಇರುಕ್ಕಿರ ಇವನುಕ್ಕು ಸ್ವರಕ್ಷಣಾರ್ಥವಾಗ ಕರ್ತವ್ಯಮೆನ್ರೊರು ಉಪಾಯತ್ತೈ ವಿಧಿಕ್ಕೈಯುಮ್, ಅದಿನನಕ್ಕು ಸಾಧ್ಯಮಾಯ್ ಸಾಧ್ಯೋಪಾಯಮೆನ್ರು ಪೇರ್

ಕರಣ ಕಳೇಬರಗಳಿಲ್ಲದೆ ಸಾಧ್ಯವೇ ಇಲ್ಲವೆಂಬ ಭಾವವೂ ತೋರಿಬರುತ್ತದೆ, ಹೇಗೆಂದರೆ, ಸರ್ವೇಶ್ವರನು ನಿರ್ಹೇತುಕ ಕೃಪಾಳುವಾದುದರಿಂದ ಶೇಷತ್ವಾನುಸಂಧಾನಪೂರ್ವಕವಾದ ಸ್ವಯತ್ನ ನಿವೃತ್ತ್ಯುಪಾಯಾನುಸಂಧಾನದಿಂದಲೇ ರಕ್ಷಿಸುವನು ಎಂದು ಹೇಳುವಾಗ, ಇವುಗಳು ತಾನೇ ಕರಣ ಕಳೇಬರಗಳ ಸಹಾಯವಿಲ್ಲದೆ ನಡೆಯುತ್ತವೆಯೋ? ಆದುದರಿಂದ ಇವೆಲ್ಲಾ ತುಲ್ಯದೋಷಯುಕ್ತಗಳೆಂಬ ಭಾವವು.

ಭಕ್ತಿಯೋಗವು ತನ್ನ ಶೇಷತ್ವ ಪಾರತಂತ್ರ್ಯರೂಪ ಸ್ವರೂಪಕ್ಕೆ ವಿರುದ್ಧವೆಂಬ ವಾದದ ನಿರಾಕರಣವು.

ಆನಾಲುಮ್-ಎಂಬುದು ಅರ್ಧಾಂಗೀಕಾರವನ್ನು ತೋರಿಸುತ್ತದೆ, ನೀವು ಹಿಂದೆ ಹೇಳಿದುದನ್ನು ಅಙ್ಗೀಕರಿಸಿದರೂ, ಈ ಮುಂದೆ ಹೇಳುವ ಪೂರ್ವಪಕ್ಷಕ್ಕೆ ಏನು ಸಮಾಧಾನವನ್ನು ಹೇಳುವಿರಿ ಎಂಬ ಭಾವವು ತೋರಿಬರುತ್ತದೆ. ಪೂರ್ವಪಕ್ಷಿಗಳು ಪುನಃ ದೂಷಣೆಯನ್ನು ಉಪಪಾದಿಸುತ್ತಾರೆ:—ಆನಾಲುಮ್ - ಹಾಗೆ ಒಪ್ಪಿದರೂ, ಶೇಷಭೂತ ನಾಗೈಯಾಲೇ - ಈ ಆತ್ಮನು ಸರ್ವೇಶ್ವರನಿಗೆ ಶೇಷನಾದುದರಿಂದ ಎಂದರೆ, "ದಾಸಾಭೂತಾಸ್ಸ್ವತಸ್ಸರ್ವೇ" ಎಂದು ಹೇಳಿರುವ ಹಾಗೆ ದಾಸನಾದುದರಿಂದ, ತನ್ನೈ ತಾಱ ರಕ್ಷಿತ್ತುಕ್ಕೊಳ್ಳ ಪ್ರಾಪ್ತನು ಮನ್ರಿಕ್ಕೇ - ಮತ್ತು ತನ್ನನ್ನು ತಾನೇ ರಕ್ಷಿಸಿಕೊಳ್ಳುವದಕ್ಕೆ ಯೋಗ್ಯತೆಯೂ ಇಲ್ಲದೆಯೂ, ಮತ್ತು ಅತ್ಯನ್ತ ಪರತನ್ತ್ರ ನಾಗೈಯಾಲೇ - ಸರ್ವೇಶ್ವರನಿಗೆ ಸಂಪೂರ್ಣವಾಗಿ ಅಧೀನನಾಗಿರುವದರಿಂದ, ತನ್ನೈ ತಾಱ ರಕ್ಷಿತ್ತುಕ್ಕೊಳ್ಳ ಶಕ್ತನು ಮನ್ರಿಕ್ಕೇ - ತನ್ನನ್ನು ತಾನೇ ರಕ್ಷಿಸಿಕೊಳ್ಳಲು ಶಕ್ತಿಯೂ ಇಲ್ಲದೆಯೂ, ಇರುಕ್ಕಿರ ಇವನುಕ್ಕು - ಹೀಗಿರುವ ಈ ಚೇತನನಿಗೆ, ಸ್ವರಕ್ಷಣಾರ್ಥವಾಗ-ತನ್ನ ರಕ್ಷಣೆಗಾಗಿ, ಕರ್ತವ್ಯಮೆನ್ರು - ಮಾಡತಕ್ಕದ್ದೆಂದು, ಒರು ಉಪಾಯತ್ತೈ

ಪೆರುಗಿರದೆನ್ರು ಶೊಲ್ಲುಗೈ ಯುಪಪನ್ನವೋ? ಆನ ಪಿನ್ಪು ಭಕ್ತಿಯೋಗಾದಿಗಳ್ ಶೇಷತ್ವಾನುರೂಪಙ್ಗಳಲ್ಲಾ ವೈಯಾಲೇ ಸ್ವರೂಪತ್ತುಕ್ಕು ಅನಿಷ್ಟಾವಹಙ್ಗಳೆನ್ನುಮ್, ಆತ್ಯನ್ತ ಪಾರತನ್ತ್ರ್ಯ ವಿರುದ್ಧಙ್ಗಳಾಗೈಯಾಲೇ ಅಸಂಭಾವಿತಙ್ಗಳೆನ್ರುಮ್ ಶೊಲ್ಲವೊಣ್ಣಾದೋ? ಎನ್ನಿಲ್:—

ವಿಧಿಕ್ಕೈಯುಮ್ - ಉಪಾಸನಾದಿ ರೂಪವಾದ ಒಂದು ಉಪಾಯವನ್ನು ವಿಧಿಸೋಣವೂ, ಮತ್ತು **ಅದು** - ಆ ಕರ್ತವ್ಯವೆಂದು ಹೇಳುವ ಉಪಾಯವು, ಸಾಧ್ಯವಾಗಿ, ಸಾಧ್ಯೋಪಾಯವೆಂದು, **ಅದು ಪೇರ್ ಪೆರುಗಿರದೆನ್ರು** - ಅದು ಹೆಸರನ್ನು ಹೊಂದುತ್ತದೆ ಎಂದೂ, **ಶೊಲ್ಲುಗೈ** - ಹೇಳೋಣವು, **ಉಪಪನ್ನವೋ** - ಸಮಂಜಸವಾದುದೋ? ಇದು ಪೂರ್ವ ಪಕ್ಷಿಯ ಆಕ್ಷೇಪವು; ಈ ಚೇತನನು ಶೇಷಭೂತನು, ಅತ್ಯಂತ ಪರತಂತ್ರನು; ಶೇಷಭೂತನನ್ನು ಸರ್ವೇಶ್ವರನು ತನ್ನಿಷ್ಟಾನುಸಾರ ವಿನಿಯೋಗಿಸಿಕೊಳ್ಳಬಹುದು, ಆದುದರಿಂದ ಈ ಚೇತನನಿಗೆ ತನ್ನನ್ನು ತಾನೇ ರಕ್ಷಿಸಿಕೊಳ್ಳುವ ಯೋಗ್ಯತೆಯಿಲ್ಲವು; ಅತ್ಯಂತ ಪರತಂತ್ರನೆಂದರೆ ಸರ್ವೇಶ್ವರನು ಈತನನ್ನು ತನ್ನಿಷ್ಟಾನುಸಾರ ಆಜ್ಞಾಪಿಸಬಹುದು; ಹೀಗೆ ಚೇತನನು ಪರಾಧೀನನಾದುದರಿಂದ ಇಂತಹ ದೀನತ್ವ ಅಶಕ್ತಿಗಳಿರುವ ತನಗೆ ರಕ್ಷಣೋಪಯುಕ್ತವಾಗಿ ಈ ಅಸಮರ್ಥನಿಗೆ ಸಾಧ್ಯವಾಗಿ ಒಂದುಪಾಯವು ಉಂಟೆಂದೂ, ಯಾವುದೂ ತನಗೆ ಸಾಧ್ಯವಿಲ್ಲದೆ ದುಸ್ಥಿತಿಯಲ್ಲಿರುವವನಿಗೆ ಅದು ಸಾಧ್ಯೋಪಾಯವೆಂದು ನಾಮಕರಣಮಾಡುವುದೂ, ಹಾಸ್ಯಾಸ್ಪದವಲ್ಲವೋ ಎಂಬ ಭಾವವು. ಯಾವುದು ಸಮಂಜಸವಲ್ಲವೋ ಅದು ಹಾಸ್ಯಾಸ್ಪದವೇ, ಎಂಬ ತಾತ್ಪರ್ಯವು ಮುಂದಿನ ವಾಕ್ಯದಲ್ಲಿ ಈ ಪೂರ್ವಪಕ್ಷಿಯು ಮೇಲಿನ ಕಾರಣಗಳಿಂದ ಎರಡು ದೋಷಗಳನ್ನು ಆಪಾದಿಸುತ್ತಾರೆ; ಹೇಗೆಂದರೆ:—**ಆನಪಿನ್ಪು** - ಹೀಗೆ ಅನುಪಪನ್ನವಾದನಂತರ, **ಶೇಷತ್ವಾನುರೂಪಙ್ಗಳಲ್ಲಾ ವೈಯಾಲೇ** - ಈ ಉಪಾಸನಾದಿ ಉಪಾಯಾನುಷ್ಠಾನಗಳು ತನ್ನ ಶೇಷತ್ವಕ್ಕೆ ಯೋಗ್ಯವಾದವುಗಳಲ್ಲದುದರಿಂದ, **ಸ್ವರೂಪಕ್ಕೆ ಅನಿಷ್ಟಾವಹಙ್ಗಳೆನ್ನುಮ್** - ತನ್ನ ಶೇಷನಾಗಿರುವ ಸ್ವರೂಪಕ್ಕೆ ವಿರುದ್ಧವಾಗಿ, ಆತನು ಹೇಗೆ ಉಪಯೋಗಿಸಿಕೊಳ್ಳಬೇಕೋ ಹಾಗಲ್ಲದೆ ಸ್ವತಂತ್ರನಾಗಿ ನಡೆಯುವುದರಿಂದ ಭಗವನ್ನಿಗ್ರಹಕ್ಕೆ ಗುರಿಯಾಗಿ ಅನಿಷ್ಟವನ್ನುಂಟುಮಾಡುವುವೆಂದೂ, ಮತ್ತು **ಅತ್ಯನ್ತ ಪಾರತನ್ತ್ರ್ಯ ವಿರುದ್ಧಙ್ಗಳಾಗೈಯಾಲೇ** - ತಾನು ಅತ್ಯಂತ ಪರಾಧೀನವಾಗಿರುವ ಸ್ವರೂಪಕ್ಕೆ ಈ ಸಾಧ್ಯೋಪಾಯಾನುಷ್ಠಾನಗಳು ವಿರುದ್ಧಗಳಾದುದರಿಂದ, **ಅಸಂಭಾವಿತಙ್ಗಳೆನ್ರುಮ್** -

ಇದು ಸರ್ವಮೋಕ್ಷ ಪ್ರಸಙ್ಗಾದಿಗಳಾಲೇ ಮುನ್ಬೇ ಪರಿಹೃತಮ್.

ಸರ್ವೇಶ್ವರನು ತನ್ನ ದಾಸನಿಗೆ ಹೇಗೆ ಆಜ್ಞಾಪಿಸಬೇಕೋ ಅದನ್ನು ಬಿಟ್ಟು ವಿರುದ್ಧವಾಗಿ ಸ್ವತಂತ್ರ ಪ್ರವೃತ್ತಿಯು ಅಯೋಗ್ಯವಾದುದೆಂದೂ, ಶೊಲ್ಲವೊಣ್ಣಾದೋ-ಹೇಳಬೇಡವೋ? ಎನ್ನಿಲ್ - ಎಂದು ಆಕ್ಷೇಪಗಳನ್ನು ತಂದರೆ, ಮುಂದಿನ ವಾಕ್ಯಗಳಿಂದ ಈ ವಾದದಿಂದುಂಟಾಗುವ ದೋಷಗಳನ್ನು ಪ್ರದರ್ಶಿಸಿ, ಸ್ವಮತದಲ್ಲುಂಟಾಗುವ ಸಾಮಂಜಸ್ಯವನ್ನೂ ಹೇಳಿ, ಆ ಆಕ್ಷೇಪಗಳನ್ನು ಪರಿಹರಿಸುತ್ತಾರೆ. ಶೇಷಭೂತನಾಗಿ ಪರತಂತ್ರನಾಗಿರುವ ಈ ಚೇತನನು ತಾನೇ ಸ್ವತಂತ್ರಿಸಿ ಹೀಗೆ ಸಾಧ್ಯೋಪಾಯಗಳನ್ನವಲಂಬಿಸುವದರಿಂದ ತನ್ನ ಸ್ವರೂಪಕ್ಕೆ ೧) ಅನಿಷ್ಟಾವಹವೆಂಬ ಮತ್ತು (೨) ಅಸಂಭಾವಿತನೆಂಬ ಎರಡು ದೋಷಗಳಿಗೂ ಗುರಿಯಾಗುವನೆಂದು ಪೂರ್ವ ಪಕ್ಷಿಗಳು ಹೇಳುತ್ತಾರೆ. ಹೇಗೆಂದರೆ ಶೇಷಭೂತನಾದವನನ್ನು ಶೇಷಿಯು ತನ್ನ ಇಷ್ಟಾನುಸಾರ ವಿನಿಯೋಗಿಸಿಕೊಳ್ಳುವನು. ಅದಕ್ಕೆ ಬದಲಾಗಿ ಈತನು ತನ್ನಿಷ್ಟಾನುಸಾರ ಸ್ವತಂತ್ರಿಸಿ ಉಪಾಯಾನುಷ್ಠಾನಮಾಡಿದರೆ ಭಗವದನುಗ್ರಹಕ್ಕೆ ಬದಲಾಗಿ ನಿಗ್ರಹಕ್ಕೆ ಒಳಗಾಗುತ್ತಾನಾದುದರಿಂದ ಅದು ಅನಿಷ್ಟಾವಹವು. ಈತನು ಪರಾಧೀನನು, ಅಸ್ವತಂತ್ರನು; ಅಂತವನು ಸರ್ವೇಶ್ವರಾಜ್ಞಾನುಸಾರವಾಗಿಯೇ ವರ್ತಿಸುವದು ತನ್ನ ಸ್ವರೂಪಕ್ಕೆ ಯೋಗ್ಯವಾದುದು; ಅದಕ್ಕೆ ಬದಲಾಗಿ ತಾನೇ ಸ್ವತಂತ್ರಿಸಿ ಉಪಾಯಾನುಷ್ಠಾನ ಮಾಡುವದು ತನ್ನ ಯೋಗ್ಯತೆಗೆ ವಿರುದ್ಧವಾಗಿ ಅಸಂಭಾವಿತವಾದುದು ಎಂಬ ತಾತ್ಪರ್ಯವು.

ಈ ಮೇಲಿನ ಪೂರ್ವಪಕ್ಷಗಳಿಗೆ "ಇದು ಸರ್ವ ಮೋಕ್ಷ" ಮೆಂಬ ವಾಕ್ಯದಿಂದ ಪರಿಹಾರವನ್ನು ತಿಳಿಸುತ್ತಾರೆ. ಹೀಗೆ ವಾದ ತಂದರೆ ಸರ್ವರಿಗೂ ಸರ್ವೇಶ್ವರನು ಸ್ವಯಂ ಒಂದೇಸಲ ಮೋಕ್ಷಕೊಡಬೇಕಾಗಿ ಬರುತ್ತದೆ. ಹೇಗೆಂದರೆ ತಿಳಿಸುತ್ತಾರೆ ಇದು ಎಂದರೆ ಈ ಪೂರ್ವ ಪಕ್ಷವು. ಸರ್ವಮೋಕ್ಷ ಪ್ರಸಙ್ಗಾದಿಗಳಾಲೆ ಮುನ್ಬೇ ಪರಿಹೃತಮ್ - ಸರ್ವರಿಗೂ ಮೋಕ್ಷವು ಉಂಟಾಗಬೇಕಾಗುತ್ತದೆ ಎಂಬ ದೋಷಯುಕ್ತವಾಗಿ, ಮುನ್ಬೇ - ಹಿಂದೆ ಸಿದ್ಧೋಪಾಯ ಶೋಧನಾಧಿಕಾರದಲ್ಲೇ, ಪರಿಹೃತಮ್ - ಪರಿಹರಿಸಲ್ಪಟ್ಟಿತು ಸಾಧ್ಯೋಪಾಯದ ಅವಶ್ಯಕವಿಲ್ಲದೇನೇ ಸಿದ್ಧೋಪಾಯನು ರಕ್ಷಿಸಿಬಿಡುವನು, ಆದುದರಿಂದ ಸಿದ್ಧೋಪಾಯನೇ ಸಾಕು ಎಂದು ಮಾಡಿದ ವಾದವನ್ನು ನಿರಸನಮಾಡುವ ಸಂದರ್ಭದಲ್ಲಿ ಸರ್ವಮೋಕ್ಷ ಪ್ರಸಙ್ಗ ಉಂಟಾಗುತ್ತದೆಂದು ಸಮಾಧಾನವನ್ನು ಹೇಳಿದ್ದೇವೆ.

ಇರ್ವರ್ ಶೆಯ್‌ದದೊರು ವ್ಯಾಜಮ್ ಕೊಳ್ಳಾದೇ ಮುಕ್ತನಾಕ್ಕಿಲ್, ಅನಾದಿಯಾಗ ಮುಕ್ತನಾಕ್ಕ ಪ್ರಸಙ್ಗಿಕ್ಕುಮ್. ಈಶ್ವರನ್ ಕೇವಲ ಸ್ವಾತಂತ್ರ್ಯತ್ತಾಲೆ ನಿನೈತ್ತಪೋದು ಮುಕ್ತನಾಕ್ಕಿಲ್, ವೈಷಮ್ಯ ನೈರ್ಘೃಣ್ಯಾದಿ ದೋಷಙ್ಗಳುಮ್ ವರುಮ್. ಮೋಕ್ಷೋಪಾಯ ವಿಧಾಯಕಙ್ಗಳಾನ ಶಾಸ್ತ್ರಙ್ಗಳು ಮೆಲ್ಲಾಮ್ ನಿರರ್ಥಕಙ್ಗಳುಮಾಮ್

(ನೆಯ ಪುಟನೋಡಿ). ಆ ದೋಷವೇ ಇಲ್ಲಿಯೂ ತಪ್ಪಿದ್ದಲ್ಲವೆಂಬ ಭಾವವು. ಸರ್ವಮೋಕ್ಷ ಪ್ರಸಙ್ಗ ಹೇಗೆ ಎಂಬುದನ್ನು ಉಪಪಾದಿಸಿ ತಿಳಿಸುತ್ತಾರೆ ಇರ್ವರ್ ಶೆಯ್ದ ದೊರು ವ್ಯಾಜಮ್ ಕ್ಕೊಳ್ಳಾದೇ - ಈ ಮುಮುಕ್ಷುವು ಮಾಡಿದ ಒಂದು ಶಾಸ್ತ್ರಸಿದ್ಧವಾದ ವ್ಯಾಜರೂಪವಾದ ಭಕ್ತ್ಯುಪಾಯ ಅಥವಾ ಭರಸಮರ್ಪಣವನ್ನು ಅಙ್ಗೀಕರಿಸದೆ. ಮುಕ್ತನಾಕ್ಕಿಲ್ - ಆತನಿಗೆ ಮೋಕ್ಷವನ್ನು ಕೊಟ್ಟರೆ, ಅನಾದಿಯಾಗ ಮುಕ್ತನಾಕ್ಕ ಪ್ರಸಙ್ಗಿಕ್ಕುಮ್ - ಅನಾದಿಯಾಗಿ ಬಹುಕಾಲಕ್ಕೆ ಮೊದಲೇ ಮೋಕ್ಷವನ್ನು ಕೊಡಬೇಕಾಗಿತ್ತು ಎಂಬ ಆಕ್ಷೇಪವು ಉಂಟಾಗುತ್ತದೆಂಬ ಭಾವವು. ಹಿಂದೆಯೇ ಶೇಷತ್ವ ಪಾರತನ್ತ್ರ್ಯ ಜ್ಞಾನವಿತ್ತಲ್ಲಾ ಆಗಲೇ ಸರ್ವೇಶ್ವರನು ಏತಕ್ಕೆ ಮುಕ್ತಿಯನ್ನು ಕೊಡಲಿಲ್ಲವು? ಹೀಗೆ ಎಲ್ಲರಿಗೂ ಮೊದಲೇ ಜ್ಞಾನವಿದ್ದುದರಿಂದ ಎಲ್ಲರೂ ಮುಕ್ತರಾಗಿರಬೇಕೆಂಬ ತಾತ್ಪರ್ಯವು. ಈ ಆಕ್ಷೇಪಣೆಗೆ ಸಮಾಧಾನವಾಗಿ ಪೂರ್ವಪಕ್ಷಿಯು ಹೇಳಬಹುದು. ಏನೆಂದರೆ, ಸರ್ವೇಶ್ವರನು ಸರ್ವಸ್ವತಂತ್ರನು, ಚೇತನರು ಅವನಿಗೆ ಅಧೀನರು, ತನಗೆ ಯಾವಾಗ ಇಷ್ಟಬಂತೋ, ಆಗ ಮುಕ್ತರನ್ನಾಗಿ ಮಾಡುವನು, ಈ ಸಂದರ್ಭದಲ್ಲಿ ಆಕ್ಷೇಪಣೆ ಏನಿದೆ ಎಂದು ಹೇಳಬಹುದೆಂದು ಭಾವಿಸಿ, ಆಗಲೂ ದೋಷ ತಪ್ಪಿದ್ದಲ್ಲವೆಂದು ತಿಳಿಸುತ್ತಾರೆ. ಈಶ್ವರನ್, ಕೇವಲ ಸ್ವಾತಂತ್ರ್ಯದಿಂದ ನಿನೈತ್ತಪೋದು - ಇಷ್ಟಬಂದಾಗ, ಮುಕ್ತನಾಕ್ಕಿಲ್ – ಮುಕ್ತನನ್ನಾಗಿ ಮಾಡುವನು ಎಂದರೆ, ವೈಷಮ್ಯ ನೈರ್ಘೃಣ್ಯಾದಿಗಳುಮ್ ವರುಮ್ - ಸರ್ವೇಶ್ವರನು, ಮುಮುಕ್ಷುಗಳ ತಾರತಮ್ಯವನ್ನು ಪರಿಗಣಿಸದೇ ತನ್ನಿಷ್ಟಾನುಸಾರ ಅನುಗ್ರಹಿಸುವನು, ತನ್ನ ಶಾಸ್ತ್ರಾನುಸಾರ ವಿಹಿತ ಕರ್ತವ್ಯೋಪಾಯವನ್ನನುಷ್ಠಿಸಿದವನೂ ಅನುಷ್ಠಿಸದೇ ಇರುವನೂ, ಮಹಾಭಾಗವತನೂ ಮಹಾ ತಾಮಸನೂ ಎಲ್ಲರೂ ಒಂದೇಯಾಗುವದರಿಂದ ಪಕ್ಷಪಾತಾದಿ ದೋಷಗಳಿಗೆ ಗುರಿಯಾಗುವನು ಎಂಬ ಭಾವವು. ಅದೂ ಅಲ್ಲದೆ ಇನ್ನೊಂದು ದೋಷವೂ ತಪ್ಪದು ಎಂದು ಮುಂದಿನ ವಾಕ್ಯದಿಂದ ತೋರಿಸುತ್ತಾರೆ. ಮೋಕ್ಷೋಪಾಯ ವಿಧಾಯಕಙ್ಗ

ಆಗೈಯಾಲಿ ಶೇಷತ್ವಾತ್ ವಕುತ್ತ ವಿಷಯತ್ತೈಪ್ಪತ್ತು ಗೈಯಿಲ್

ಳಾನ - ಮೋಕ್ಷೋಪಾಯಗಳನ್ನು ವಿಧಿಸಿರುವ, **ಶಾಸ್ತ್ರಗಳೆಲ್ಲಾ, ನಿರರ್ಥಕ** ಜ್ಞಳುವರಾನ್ ವ್ಯರ್ಥಗಳೂ ಆಗುವುವು. ಸರ್ವೇಶ್ವರನೇ ಸ್ವತಂತ್ರಿಸಿ ತನಗೆ ಮನಸ್ಸು ಬಂದಹಾಗೆ ಮೋಕ್ಷವನ್ನು ಕೊಡುವನು ಎಂದರೆ ಆಗ ಮೋಕ್ಷೋಪಾಯಗಳನ್ನು ವಿಧಿಸುವ ಶಾಸ್ತ್ರಗಳೆಲ್ಲಾ ವ್ಯರ್ಥವಾದವು. ಉಪನಿಷತ್ತುಗಳೂ ಬ್ರಹ್ಮಸೂತ್ರಗಳೂ, ಗೀತೋಪನಿಷತ್ತು, ಮಹಾಭಾರತ ಭಾಗವತ, ರಾಮಾಯಣಾದಿಗಳೂ, ಆಳ್ವಾರಾಚಾರ್ಯರುಗಳ ದಿವ್ಯ ಪ್ರಬಂಧಗಳೂ, ಎಲ್ಲವೂ ಆಗ ನಿರರ್ಥಕಗಳಾಗುತ್ತದೆಂಬ ಭಾವವು.

ಸರ್ವೇಶ್ವರನೇ ಉಪಾಯಾನುಷ್ಠಾನದ ಅಪೇಕ್ಷೆಯಿಲ್ಲದೆ ಮುಮುಕ್ಷುವನ್ನು ರಕ್ಷಿಸಿಬಿಡುವನು ಎಂಬ ವಾದಕ್ಕೆ ಮೂರು ದೋಷಗಳು ತಪ್ಪಿದ್ದಲ್ಲವೆಂದು ಹೇಳಿದರು.

೧. ಅನಾದಿ ಕಾಲದಲ್ಲೇ ಸರ್ವಮುಕ್ತಿ ಪ್ರಸಜ್ಗವು. ಲೀಲಾ ವಿಭೂತಿಯೇ ಇಲ್ಲವಾಗಬೇಕು. ೨ ವೈಷಮ್ಯ ನೈರ್ಘೃಣ್ಯಾದಿ ದೋಷಗಳು ಸರ್ವೇಶ್ವರನಿಗೆ ಉಂಟಾಗಬೇಕು. ೩ ಮೋಕ್ಷಶಾಸ್ತ್ರಗಳೆಲ್ಲಾ ನಿರರ್ಥಕವಾಗಬೇಕು.

ಹೀಗೆ ದೋಷಗಳು ಪ್ರಾಪ್ತವಾದರೆ, ಈ ಚೇತನನ ಸ್ವರೂಪ ಯೋಗ್ಯವಾದ ಅಮೋಘ ಗುಣಗಳಾದ ಶೇಷತ್ವ ಪಾರತಂತ್ರ್ಯಗಳು ನಿರರ್ಥಕವಾದುವು ಆಗಲಿಲ್ಲವೋ ? ಅವುಗಳಿಂದೇನು ಪ್ರಯೋಜನವು ? ಎಂದು ಪೂರ್ವಪಕ್ಷಿಗಳು ಕೇಳಬಹುದೆಂದಾಶಙ್ಕಿಸಿ ಸಮಾಧಾನವನ್ನು ಹೇಳುತ್ತಾರೆ. ಹಾಗೆ ಹೇಳುವಾಗ (೧) ಉಪಾಯದೆಶೆಯಲ್ಲೂ (೨) ಫಲ ದೆಶೆಯಲ್ಲೂ ಆ ಶೇಷತ್ವ ಪಾರತಂತ್ರ್ಯಗಳ ಉಪಯೋಗವನ್ನು ಪ್ರದರ್ಶಿಸುತ್ತಾರೆ. ಶಾಸ್ತ್ರವು ವಿಧಿಸಿರುವ ಹಾಗೆ ಸಾಧ್ಯೋಪಾಯಗಳ ಅನುಷ್ಠಾನದಿಂದಲೇ ಈ ಶೇಷತ್ವ ಪಾರತಂತ್ರ್ಯಗಳಿಗೆ ಮಹಿಮೆ ಎಂದು ಆಗೈಯಾಲ್ ಎಂದಾರಂಭಿಸಿ ಉಪದೇಶಿಸುತ್ತಾರೆ :—

ಆಗೈಯಾಲ್ - ಸಾಧ್ಯೋಪಾಯವು ಶೇಷತ್ವ ಪಾರತಂತ್ರ್ಯಗಳ ಮೂಲಕವಾಗಿ ಅನಿಷ್ಟಪ್ರದವೆಂದೂ ಅಸಂಭಾವಿತವೆಂದೂ ಹೇಳುವ ವಾದಗಳು ದೋಷಯುಕ್ತಗಳಾಗಿ ಸರಿಯುಲ್ಲವಾದುದರಿಂದ, **ಇಶ್ಶೇಷತ್ವತ್ತಾಲ್** - ಹೀಗೆ ತಾನು ಶೇಷನಾದುದರಿಂದಲೇ, **ವಕುತ್ತ ವಿಷಯತ್ತೈ** - ಸರ್ವೇಶ್ವರನಿಗೆ ತುಂಬಾ ಇಷ್ಟವಾದ ವಿಷಯವನ್ನು ಎಂದರೆ ತಾನು ಶಾಸ್ತ್ರಗಳಲ್ಲಿ ಪರಮಾಕ್ಷ್ಯವಾಗಿ ವಿಧಿಸಿರುವ ಸಾಧ್ಯೋಪಾಯಗಳನ್ನು, **ಪತ್ತುಗೈಯಿಲ್** - ಆಶ್ರಯಿಸುವವರಲ್ಲಿ ಎಂದರೆ ಅನುಷ್ಠಿಸು

ಔಚಿತ್ಯಮುಮ್ ಉಡೈಯವರ್ ಉಡಮ್ಬೈಯೈ ರಕ್ಷಿಕ್ಕೈಯಿಲೌಚಿತ್ಯಮು ಮುಣ್ಡಾಮ್.

ವವರಲ್ಲಿ. **ಔಚಿತ್ಯಮುಮ್**-ಯೋಗ್ಯತೆಯೂ, **ಉಡೈಯವರ್**-ಆಭರಣಕ್ಕೆ ಯಜಮಾನನು, **ಉಡಮ್ಬೈಯೈ**-ತನ್ನ ಆಭರಣವನ್ನು, **ರಕ್ಷಿಕ್ಕೈಯಿಲ್** - ರಕ್ಷಿಸುವದರಲ್ಲಿ, **ಔಚಿತ್ಯಮುಂ** - ಯೋಗ್ಯತೆಯೂ, **ಉಣ್ಡಾಮ್** - ಉಂಟಾಗುತ್ತದೆ. ಹೀಗೆಶೇಷ ಶೇಷಿಗಳಿಬ್ಬರಿಗೂ ಈ ಉಪಾಯಾನುಷ್ಠಾನದಿಂದ ಔಚಿತ್ಯ ಉಂಟಾಗುತ್ತವೆಂದು ಹೇಳುತ್ತಾರೆ. ಶೇಷತ್ವ ಎಂದರೆ ಯಥೇಷ್ಟ ವಿನಿಯೋಗಾರ್ಹತ್ವವು ಆದುದರಿಂದ ಈ ಚೇತನನಿಗೆ ಕರಣ ಕಳೇಬರಾದಿಗಳನ್ನೂ, ಶಾಸ್ತ್ರವನ್ನೂ ಶಾಸ್ತ್ರ ಬೋಧಕರಾದ ಗುರುಗಳನ್ನೂ ಕೊಟ್ಟು, ಗುರುಮುಖೇನ ತಾನು ಶಾಸ್ತ್ರಗಳಲ್ಲಿ ಬೋಧಿಸಿರುವಹಾಗೆ ಉಪಾಯಾನುಷ್ಠಾನಮಾಡಿ ತನ್ನ ಪ್ರೀತಿಯನ್ನು ಸಂಪಾದಿಸಿಕೊಳ್ಳಲೆಂದು ಈತನನ್ನು ವಿನಿಯೋಗಿಸಿರುತ್ತಾನೆ; ಹಾಗೆ ಆತನನ್ನು ಆ ಸಾಧ್ಯೋಪಾಯ ಮುಖೇನ ಆಶ್ರಯಿಸಿದರೆ, ಸುಪುತ್ರನು ಸುಚರಿತದಿಂದ ತಂದೆಯನ್ನು ಪ್ರೀತಿಗೊಳಿಸುವಹಾಗೆ ಈ ಶೇಷನಾದ ಪುತ್ರನು ಲೋಕ ಪಿತಾವನ್ನು ಆತನ ಶಾಸ್ತ್ರವಿಧಿಯ ಮೂಲಕ ಅನುಸರಿಸಿ ನಡೆಸಿದ ಸಾಧ್ಯೋಪಾಯದಿಂದ ಸರ್ವಶೇಷಿಯು ಸಂತುಷ್ಟನಾಗುವನು. ಹೀಗೆ ಶೇಷನಿಗೆ ಔಚಿತ್ಯವು. ಶೇಷಿಗೆ ಹೇಗೆ ಔಚಿತ್ಯವೆಂದರೆ, ಈ ಚೇತನನು ತನ್ನ ಆಭರಣವು, ತುಂಬಾ ಹೃದ್ಯವು, ಇದು ಕಾರಣಾಂತರದಿಂದ ತನ್ನಲ್ಲಿರದೆ ಬೇರೆಕಡೆಯಿತ್ತುವು, ಅಸಂಖ್ಯೇಯವಾದ ಆಭರಣಗಳನ್ನು ಹೊಂದಿರುವ ಒಬ್ಬ ರಾಜನು ಒಂದು ಆಭರಣವನ್ನು ಪ್ರತ್ಯೇಕಿಸಿ ತಾನು ಧರಿಸಿದರೆ ಅದರಲ್ಲೇನೋ ಒಂದು ವಿಶೇಷವು ಹೇಗೆ ಗೋಚರವಾಗುತ್ತದೋ, ಹಾಗೆಯೇ ಅನೇಕ ಬದ್ಧಚೇತನರೆಲ್ಲಾ ಶೇಷಭೂತರಾದರೂ, ತಾನು ಅನುಗ್ರಹಿಸಲು ಯೋಗ್ಯವಾಗಿ ರಕ್ಷ್ಯವಸ್ತುವಾಗಿರುವವನು ತನ್ನಿಷ್ಟಾನುಸಾರ ನಡೆಸಿದ ಸಾಧ್ಯೋಪಾಯವನ್ನು ಅನುಷ್ಠಿಸಿದವನೆಂದು ಆತನನ್ನು ಮುಖ್ಯವಾಗಿ ವರಿಸುವದರಿಂದ ಶೇಷಿಯಾದ ತನಗೆ ಔಚಿತ್ಯವುಂಟಾಯಿತೆಂಬ ಭಾವವು ಸಾಧ್ಯೋಪಾಯದಿಂದ ಔಚಿತ್ಯ ಹೊಂದಿದವನನ್ನೇ ಶೇಷಿಯಾದ ತಾನು ರಕ್ಷಿಸಿದುದರಿಂದ ತನಗೂ ಔಚಿತ್ಯವೆಂಬ ಭಾವವು

ಸಾಧ್ಯೋಪಾಯಾನುಷ್ಠಾನದಲ್ಲಿ ಪಾರತಂತ್ರ್ಯಕ್ಕೆ ಹಾನಿಯಿಲ್ಲವು, ವಸ್ತುತಃ ಅದರಿಂದ ಪ್ರಯೋಜನ ವುಂಟೆಂದು ತಿಳಿಸುತ್ತಾರೆ:—**ಅತ್ಯನ್ತ ಪಾರತನ್ತ್ರ್ಯತ್ತಾಲ್**-ಸರ್ವೇಶ್ವರನಿಗೆ ಸಂಪೂರ್ಣವಾಗಿ ಅಧೀನನಾಗಿರುವದರಿಂದ, **ಅವು ಕೊಡು**

ಅತ್ಯನ್ತ ಪಾರತನ್ತ್ರ್ಯತ್ತಿಲ್ ಅವರ್ ಕೊಡುತ್ತ ಸ್ವಾತಂತ್ರ್ಯತ್ತೈ ಚ್ಚುಮನ್ದು ಅವನುಕ್ಕು ಅಭಿಮತಙ್ಗಳಾನ ಉಪಾಯಙ್ಗಳೈ ಅನುಷ್ಠಿಕ್ಕೈಯುಮ್, ಫಲಮ್ ಪೆರುಗೈಕ್ಕವರ್ ಕೃಪಾರ್ತ್ತಿರುಕ್ಕ ವೇಣ್ಡುಗೈಯುಮ್, ಸಿದ್ಧಿಕ್ಕುಮ್. ಇಶ್ಶೇಷತ್ವಪಾರತಂತ್ರ್ಯಙ್ಗಳ್ ಇರಣ್ಡುಮ್

ತ್ತ ಸ್ವಾತಂತ್ರ್ಯತ್ತೈ - ಆತನು ನಮಗೆ ಸರ್ವ ಕರ್ಮಗಳಲ್ಲೂ ಕೊಟ್ಟಿರುವ ಪ್ರಥಮ ಪ್ರವೃತ್ತಿಯಲ್ಲಿನ ಸ್ವಾತಂತ್ರ್ಯವನ್ನು, ಚುಮನ್ದು - ವಹಿಸಿ ಎಂದರೆ ಶಿರಸಾವಹಿಸಿ, ಅವನುಕ್ಕು ಅಭಿಮತಙ್ಗಳಾನ - ಸರ್ವೇಶ್ವರನಿಗೆ ತುಂಬಾ ಇಷ್ಟಗಳಾದ, ಉಪಾಯಙ್ಗಳೈ - ಸಾಧ್ಯೋಪಾಯಗಳಾದ ಭಕ್ತಿ ಪ್ರಪತ್ತಿಗಳನ್ನು, ಅನುಷ್ಠಿಕ್ಕೈಯುಮ್ - ಅನುಷ್ಠಿಸೋಣವೂ, ಫಲಮ್ ಪೆರುಗೈಕ್ಕು - ಅದರ ಫಲವನ್ನು ಹೊಂದುವದಕ್ಕೂ, ಅವರ್ ಕೃಪಾರ್ತ್ತಿರುಕ್ಕೈ ವೇಣ್ಡುಗೈಯುಮ್ - ಸರ್ವೇಶ್ವರನ ಅನುಗ್ರಹವನ್ನು ಎದುರು ನೋಡುತ್ತಿರಬೇಕಾದುದೂ, ಎರಡೂ, ಸಿದ್ಧಿಕ್ಕುಮ್ - ಸಿದ್ಧಿಸುತ್ತವೆ; ಅವನಿಗೆ ಅಭಿಮತವಾಗಿರುವದನ್ನನುಷ್ಠಿಸೋಣವು ಶೇಷತ್ವದ ಪ್ರಯೋಜನವೂ, ಮೋಕ್ಷಾದಿ ಫಲಪ್ರಾಪ್ತಿಯು ಅವನ ಅನುಗ್ರಹಾನುಸಾರವಾಗಿ ಉಂಟಾಗೋಣವೂ, ಪಾರತನ್ತ್ರ್ಯದ ಪ್ರಯೋಜನವೂ, ಎಂಬ ಭಾವವು ಸರ್ವೇಶ್ವರನು ಈ ಚೇತನನಿಗೆ ಕರಣ ಕಳೇಬರ ಯೋಗ, ಜ್ಞಾನ ವಿವೇಕ ದಾನ, ಶಾಸ್ತ್ರಪ್ರದಾನ ಮೊದಲಾದ ಸೌಕರ್ಯಗಳನ್ನುಂಟುಮಾಡಿ, ಪ್ರತಿಯೊಂದು ಕಾರ್ಯದಲ್ಲಿಯೂ "ಕೃತಪ್ರಯತ್ನಾಪೇಕ್ಷಸ್ತು" ಎಂಬ ಬ್ರಹ್ಮಸೂತ್ರದಲ್ಲಿ ಹೇಳಿದ ಹಾಗೆ, ಸ್ವಾತನ್ತ್ರ್ಯವನ್ನು ಕೊಟ್ಟು, ಸರ್ವೇಶ್ವರನು ತನಗೆ ಅಭಿಮತವಾದುದನ್ನು ಅವಲಂಬಿಸಿ, ಎಂದರೆ ಆ ಸ್ವಾಮಿದತ್ತ ಸ್ವಾತನ್ತ್ರ್ಯವನ್ನು ಶಿರಸಾವಹಿಸಿ ಆ ಅಭಿಮತಾನುಷ್ಠಾನವು ಶೇಷತ್ವದಿಂದುಂಟಾದ ಪ್ರಯೋಜನವಲ್ಲವೇ! ಎಂಬಭಿಪ್ರಾಯವು ಹಾಗೆ ಅನುಷ್ಠಿಸಿ ಬಿಟ್ಟ ಫಲ ಸಂಗದಲ್ಲಿ ಮಮತೆಯಿಲ್ಲದವನಿ ಇದ್ದು ಪೂರ್ಣಪರತನ್ತ್ರನಾಗಿ ಇದ್ದುಕೊಂಡು, ಆತನು ಅನುಗ್ರಹಿಸಿದ ಫಲವನ್ನು ಹೊಂದುವಿಕೆಯು ಪಾರತನ್ತ್ರ್ಯ ಪರಾಕಾಷ್ಠೆಯಲ್ಲವೇ ಎಂಬ ಭಾವವು ಈ ಸಾಧ್ಯೋಪಾಯಗಳನ್ನು ಶಾಸ್ತ್ರಚೋದಿತ ರೀತಿಯಲ್ಲಿ ಅನುಷ್ಠಿಸುವವನಾದ ಶೇಷತ್ವ ಪಾರತನ್ತ್ರ್ಯಗಳೆರಡೂ ಚೆನ್ನಾಗಿ ಪ್ರಕಾಶಪಡಿಸಲ್ಪಟ್ಟವೇ ವಿನಾ, ಪೂರ್ವಪಕ್ಷಿಯು ಹೇಳುವಹಾಗೆ ಇವುಗಳು ದೂರೀಕೃತಗಳಾಗಿ, ಅಹಂಕಾರ ಮಮಕಾರಗಳು ಪ್ರವರ್ತನವೆಂಬ ಭಾವವಲ್ಲವು ಮುಂದೆ ಪ್ರಾಸಂಗಿಕವಾಗಿ ಫಲಿಸಿರುವಲ್ಲಿ ಎಂದರೆ ಮೋಕ್ಷಾನುಭವವಲ್ಲಿ ಕೂಡ ಈ ಶೇಷತ್ವ ಪಾರತನ್ತ್ರ್ಯಗಳಿಗನುಗುಣವಾಗಿಯೇ ಈತನ ಪ್ರವೃತ್ತಿಯು ಎಂದು ತೋರುತ್ತಾರೆ.

ಫಲದಶೈಯಿಲ್ ಅವನುಗನ್ದ ಕೈಙ್ಕರ್ಯತ್ತೈ ಯುವನಿಟ್ಟ ವಳಕ್ಕಾಗ ನಡುತ್ತುಗೈಕ್ಕು ಮುರುಪ್ಪಾವದು. ಇವೈಯುಡಿಯಾಗ ಸ್ವರಕ್ಷಣಾರ್ಥ ಸ್ವವ್ಯಾಪಾರ ಮಾಗಾದೆನ್ಬಾರ್ಕ್ಕು, ತಾಙ್ಗಳ್ ಯಥಾಶಾಸ್ತ್ರಮ್ ಭಗವತ್ಪ್ರೀತ್ಯಾದಿ ಫಲತ್ತೈ ಕ್ಕೋಲಿ ಅನುಷ್ಠಿಕ್ಕಿರ ಕೈಙ್ಕರ್ಯತ್ತಿಲುಮ್, ಸಾಧ್ಯಮಾಗ ವಿಧಿಕ್ಕ ಪಡುಗಿರ ಪ್ರಪತ್ತಿ ತನ್ನಿಲುಮ್ ಸ್ವರೂಪ ವಿರೋಧಬುದ್ಧಿಯಾಲೇ ಅಧಿಕಾರಮಿಲ್ಲೈಯಾಮ್. ವಾಕ್ಯಜನ್ಯಮಾನ ಸಂಬಂಧಜ್ಞಾನಾದಿ

ಈ ಶೇಷತ್ವಪಾರತನ್ತ್ರ್ಯಗಳೆರಡೂ, ಫಲದಶೈಯಿಲ್ - ಮುಕ್ತನಾಗಿ ದಿವ್ಯ ವೈಕುಂಠದಲ್ಲಿರುವ ದೆಶೆಯಲ್ಲಿ, ಅವನುಗನ್ದ ಕೈಙ್ಕರ್ಯತ್ತೈ - ಶ್ರಿಯಃಪತಿಗೆ ಅಭಿಮತವಾದ ಕೈಙ್ಕರ್ಯವನ್ನು, (ಇದು ಶೇಷತ್ವದ ವೃತ್ತಿಯು.) ಅವನಿಟ್ಟವಳಕ್ಕಾಗ - ಅವನು ಆಜ್ಞಾಪಿಸಿದರೀತಿಯಲ್ಲಿ. ಇದು ಪಾರತನ್ತ್ರ್ಯ ವೃತ್ತಿಯು, ನಡುತ್ತುಗೈಕ್ಕುಮ್ - ನಡೆಸುವದಕ್ಕೆ, ಉರುಪ್ಪಾವದು - ಸಾಧನವಾಗುತ್ತವೆ. ಸರ್ವೇಶ್ವರನ ಅಭಿಮತಾನುಸಾರವಾಗಿಯೂ, ಆತನು ವಿಧಿಸಿರುವ ಮರ್ಯಾದೆಗಳಿಗೆ ಅಧೀನವಾಗಿಯೂ ಕೈಙ್ಕರ್ಯಗಳನ್ನೆಸಗುವವರಿಂದ ಶೇಷತ್ವ ಪಾರತನ್ತ್ರ್ಯಗಳ ಸ್ವರೂಪಕ್ಕೆ ಅನುಗುಣವಾಗಿಯೇ ಅನುಷ್ಠಿಸಿದಂತಾಯಿತೆಂಬಭಿಪ್ರಾಯವು.

ಈ ಸಂದರ್ಭದಲ್ಲಿ ಪೂರ್ವಪಕ್ಷಿಗಳು ಹೇಳಬಹುದೇನೆಂದರೆ, ಶೇಷತ್ವಪಾರತನ್ತ್ರ್ಯಗಳು ಸಾರ್ಥಕ್ಯವನ್ನು ಹೊಂದಬೇಕಾದರೆ ಸ್ವರಕ್ಷಣಾರ್ಥವಾಗಿ ಯಾವವಿಧವಾದ ವ್ಯಾಪಾರವು ಕೂಡದು ಎಂದು ಊಹಿಸಿ, ಆಸಂದರ್ಭದಲ್ಲಿ ಉಂಟಾಗುವ ದೋಷಗಳನ್ನು ತಿಳಿಸುತ್ತಾರೆ:-- ಇವೈಯುಡಿಯಾಗ-ಈ ಶೇಷತ್ವ ಪಾರತನ್ತ್ರ್ಯಗಳ ಮೂಲಕವಾಗಿ, ಸ್ವರಕ್ಷಣಾರ್ಥ ಸ್ವವ್ಯಾಪಾರ ಮಾಗಾದೆನ್ಬಾರ್ಕ್ಕುಮ್ - ತನ್ನ ರಕ್ಷಣೆಗಾಗಿ ತಾನು ಏನೊಂದೂ ವ್ಯಾಪಾರವನ್ನು ಸ್ವತಂತ್ರಿಸಿ ಮಾಡಕೂಡದೆಂದು ಹೇಳುವವರಿಗೂ (ಹೀಗೆ ಹೇಳುವವರು ಪೂರ್ವಪಕ್ಷಿಗಳು.), ತಾಙ್ಗಳ್ - ತಾವು ಎಂದರೆ ಅಂತಹ ಪೂರ್ವ ಪಕ್ಷಿಗಳೂ ಯಥಾಶಾಸ್ತ್ರಮ್ ಭಗವತ್ಪ್ರೀತ್ಯಾದಿ ಫಲತ್ತೈಕ್ಕೋಲಿ - ಶಾಸ್ತ್ರವು ವಿಧಿಸಿರುವ ರೀತಿಯಲ್ಲಿ ಸಙ್ಕಲ್ಪಿಸಿ, ಭಗವತ್ಪ್ರೀತ್ಯರ್ಥಮ್ ಭಗವತ್ಕೈಙ್ಕರ್ಯರೂಪಂ ಎಂದು ಹೇಳಿ ಫಲವನ್ನು ಕೋರಿ-ಅಪೇಕ್ಷಿಸಿ, ಅನುಷ್ಠಿಸುವ ಕೈಙ್ಕರ್ಯದಲ್ಲೂ, ಸಾಧ್ಯಮಾಗ ವಿಧಿಕ್ಕಪಡುಗಿರ ಪ್ರಪತ್ತಿ ತನ್ನಿಲುಮ್-ಸಾಧ್ಯೋಪಾಯವಾಗಿ ವಿಧಿಸಲ್ಪಟ್ಟಿರುವ ಪ್ರಪತ್ತಿಯಲ್ಲೂ ಸಹ ಸ್ವರೂಪ ವಿರೋಧಬುದ್ಧಿಯಾಲೇ - ಈ ಕೈಙ್ಕರ್ಯವೂ, ಈ ಪ್ರಪತ್ತಿಯೂಸಹ ಪ್ರವೃತ್ತಿರೂಪವಾಗಿ ಶೇಷತ್ವ ಪಾರತನ್ತ್ರ್ಯ ಸ್ವರೂಪಕ್ಕೆ ವಿರೋಧ

ವಾಮುವರಿಂದ, ಅಧಿಕಾರಮಿಲ್ಲೈಯಾಮ್ - ಅಧಿಕಾರವಿಲ್ಲವು ಎಂದಾಗುತ್ತದೆ. ಶೇಷತ್ವಪಾರತನ್ತ್ರ್ಯಗಳಿಗೆ ಸ್ವರಕ್ಷಣಾರ್ಥವಾಗಿ ಯಾವ ವ್ಯಾಪಾರವು ಕೂಡದು ಎಂದು ಪೂರ್ವಪಕ್ಷಿಗಳು ಹೇಳಿದರು. ಅವರೇ ಭಗವತ್ಕೈಂಕರ್ಯಗಳನ್ನು ಅನುಷ್ಠಿಸಬಹುದೂ ಎಂದೂ, ಸಾಧ್ಯೋಪಾಯವು ಪ್ರಪತ್ತಿಯೇವಿನಾ ಉಪಾಸನವಲ್ಲವೆಂದೂ, ಹೇಳುವರು. ಸ್ವರಕ್ಷಣಾರ್ಥವಾಗಿ ಯಾವ ವ್ಯಾಪಾರವೂ ಕೂಡದು ಎಂದರೆ, ಭಗವತ್ಪ್ರೀತ್ಯರ್ಥಂ ಭಗವತ್ಕೈಂಕರ್ಯರೂಪಂ ಎಂದು ಸಂಕಲ್ಪಿಸಿ ಕೈಂಕರ್ಯಗಳನ್ನು ಮಾಡುವದೂ, ಪ್ರಪತ್ತಿಯನ್ನು ಅನುಷ್ಠಿಸುವದೂ ಸಹ ಈ ಶೇಷತ್ವಪಾರತನ್ತ್ರ್ಯ ರೂಪಸ್ವರೂಪಕ್ಕೆ ವಿರೋಧವಾದುವು; ಆದುದರಿಂದ ಇವುಗಳಿಗೂ ಕೂಡ ಅಧಿಕಾರವಿಲ್ಲವೆಂದು ಒಪ್ಪಿಕೊಳ್ಳಬೇಕಾಯಿತು ಎಂದು ಆಕ್ಷೇಪಗಳನ್ನು ಹೇಳಿರುತ್ತಾರೆ; ಈ ಮೇಲಿನ ಆಕ್ಷೇಪಣೆಗಳಲ್ಲಿ ಶ್ರೀನಿಗಮಾಂತ ದೇಶಿಕರವರು "ಸಾಧ್ಯಮಾಗ ವಿಧಿಕ್ಕ ಪಡುಗಿರ ಪ್ರಪತ್ತಿ ತನ್ನಿಲುಮ್" ಎಂದು ಹೇಳಿದರು. ಶಾಸ್ತ್ರದಲ್ಲಿ ಪ್ರಪತ್ತಿಯು ಸಾಧ್ಯೋಪಾಯವೆಂದು ವಿಧಿಸಲ್ಪಟ್ಟಿರುತ್ತದೆಂಬುದನ್ನು ಒಪ್ಪಿಕೊಳ್ಳುವರೆಂದು ಹಾಗೆ ಹೇಳಿದರು. ಅದಕ್ಕೆ ಪೂರ್ವಪಕ್ಷಿಗಳು ಪ್ರತಿಯಾಗಿ ಹೇಳುವದೇನಂದರೆ, (೧) ತಾನು ಶೇಷನು ಶ್ರಿಯಃಪತಿಯು ಶೇಷೀ ಎಂಬ ಸಂಬಂಧ ಜ್ಞಾನವು ಗುರುವಿನ ಮೂಲಕ ಉಪದೇಶವನ್ನು ಹೊಂದಿದ ವೇಳೆಯಲ್ಲೇ ಸಿದ್ಧಿಸಿದುದರಿಂದಲೂ, (೨) ಸ್ವರಕ್ಷಣೆಯಲ್ಲಿ ತನಗೆ ಯಾವುದೊಂದು ವ್ಯಾಪಾರವು ಇಲ್ಲವೆಂಬುದು ಅಶಕ್ತನಾದುದರಿಂದಲೇ ಸಿದ್ಧವಾದುದರಿಂದಲೂ, (೩) ಶಾಸ್ತ್ರಪ್ರಮಾಣದಲ್ಲಿ ಶಕ್ತರಾಗಿರುವರಿಗೆ "ಅಮೃತಸ್ಯೈಷ ಸೇತುಃ" ಸಂಸಾರದಿಂದ ದಾಟಿಸಿ ಮೋಕ್ಷಕ್ಕೆ ಮಾರ್ಗ ತೋರಿಸುವವನು ಸರ್ವೇಶ್ವರನೇ, ಇವೇ ವೇದಲಾದ ಶಾಸ್ತ್ರವಾಕ್ಯ ಶ್ರವಣ ಕಾಲದಲ್ಲೇ ಸರ್ವೇಶ್ವರನ ಉಪಾಯತ್ವದಲ್ಲಿ ಸಂಪೂರ್ಣ ನಂಬಿಕೆ ಸಿದ್ಧಿಸುವದರಿಂದಲೂ, ಇವು ಮೂರರಲ್ಲಿ ಯಾವುದಾದರೂ ಒಂದು ಭಾವನೆಯೇ ಅಧಿಕಾರಿ ವಿಶೇಷಣವಾಗಿ ಪ್ರಪತ್ತಿಯಾಗುವದರಿಂದ, ಕೃತಿಸಾಧ್ಯ ಭಾವನೆಯಿಂದ ವಿಧೇಯವಾದುದೂ ಯಾವುದೂ ಇಲ್ಲವಾದುದಾಗಿ ಏನೊಂದು ಅನುಷ್ಠಾನವೂ ಇಲ್ಲವಾದುದಾಗಿ, ಸ್ವರೂಪ ವಿರೋಧವೇನೂ ಇಲ್ಲವು. ಆದುದರಿಂದ ಸ್ವರಕ್ಷಣಕ್ಕಾಗಿ ಇಲ್ಲಿ ಯಾವ ಪ್ರವೃತ್ತಿಯೂ ಇಲ್ಲವೆಂದು ಪೂರ್ವಪಕ್ಷಿಗಳು ಹೇಳಬಹುದಾಗಿ ಭಾವಿಸಿ, ಹಿಂದೆಯೇ ಈ ಆಕ್ಷೇಪಕ್ಕೆ ಸಮಾಧಾನವನ್ನು ವಿಶದವಾಗಿ ಹೇಳಿರುತ್ತದೆ. ಶರಣಂ ವ್ರಜ ಎಂಬ ವಾಕ್ಯವು ಅನುವಾದವಲ್ಲವು, ವಿಧಿವಾಕ್ಯವೇ ಎಂದು ಸ್ಥಾಪಿಸಿರುತ್ತೇವೆ ಎಂದು "ವಾಕ್ಯಜನ್ಯಮಾನ" ಎಂದಾರಂಭಿಸಿದ ವಾಕ್ಯದ ಮೂಲಕ ಹೇಳುತ್ತಾರೆ ವಾಕ್ಯಜನ್ಯಮಾನ "ಅಮೃತಸ್ಯ ಏಷಸೇತುಃ" ಓಮ್, ಎಂದರೆ "ಆಯ್ಸೈವ" ಇತ್ಯಾದಿ ವಾಕ್ಯದಿಂದುಂಟಾದ ಸಂಬಂಧ

ಮಾತ್ರತ್ತಿರ್ಕ್ಕಾಟ್ಟಿಲ್ ಅತಿರಿಕ್ತಮಾಗ “ಶರಣಂ ವ್ರಜ” ಎನ್ರು ವಿಧೇಯಮಾಗೈಯಾಲೇ ಸಾಧ್ಯಮಾಯಿರುಕ್ಕುಮ್ ಪ್ರಪತ್ತಿಸ್ವರೂಪ ಮೆನ್ನುಮಿಡಮ್ ಮುನ್ಬೇ ಶೊನ್ನೋಮ್. ಆಗೈಯಾಲ್ ಶೇಷಭೂತನುಮಾಯ್ ಪರತಂತ್ರನುಮಾನ ಇವನುಕ್ಕು ಯಥಾಧಿಕಾರಮ್ ಸ್ವರಕ್ಷಣಾರ್ಥ ವ್ಯಾಪಾರಂ ಪಣ್ಣುಕ್ಕೈ ಯಿಲ್ಲೈ.

೭. ಭಕ್ತಿಯೋಗಃ ಪಾರವಶ್ಯೈಕಾಂತ್ಯ ವಿರುದ್ಧತ್ವಾತ್ ಸ್ವರೂಪ ವಿರುದ್ಧ ಇತಿವಾದಸ್ಯ ನಿರಾಸಃ

ಆನಾಲುಮ್, ಅನನ್ಯಾರ್ಹ ಶೇಷಭೂತನಾಗತ್ತನ್ನೈತ್ತೆಳಿನ್ದು ಪರವ್ಯೈಕಾಂತಿಯಾ ಯಿರುಕ್ಕಿರ ಇವನುಕ್ಕು ದೇವತಾಂತರದ್ವಾರಕಜ್ಞಾನ

ಜ್ಞಾನಾದಿ ಮಾತ್ರತ್ತಿಲ್ ಕಾಟ್ಟಿಲ್ - ಶೇಷ ಶೇಷಿರೂಪಸಂಬಂಧ ಜ್ಞಾನವೇ ಮೊದಲಾದುದಕ್ಕಿಂತ. ಅತಿರಿಕ್ತಮಾಗ - ಬೇರೆಯಾಗಿ, “ಶರಣಂವ್ರಜ” ಶರಣ ಹೊಂದು, ಎನ್ರು - ಎಂಬುದಾಗಿ, ವಿಧೇಯ ಮಾಗೈಯಾಲೆ - ವಿಧಿವಾಕ್ಯದಿಂದ ಸಂಬಂಧಪಟ್ಟಿರುವುದರಿಂದ, ಶರಣಂವ್ರಜವೆಂಬುದು ಅನುವಾದವಲ್ಲದೆ ವಿಧಿ ವಾಕ್ಯವಾಗಿರುವದರಿಂದ, ಪ್ರಪತ್ತಿಯ ಸ್ವರೂಪವು, ಸಾಧ್ಯಮಾಯಿರುಕ್ಕುಮ್ - ಸಾಧ್ಯೋಪಾಯವಾಗಿರುತ್ತದೆ, ಎನ್ನುಮಿಡಮ್ - ಎಂಬುವ ಸಂದರ್ಭವನ್ನು, ಮುನ್ಬೇ - ಹಿಂದೆಯೇ. ಶೊನ್ನೋಮ್ - ಈ ಅಧಿಕಾರದಲ್ಲೇ ಹೇಳಿದೆವು. (೨೬೧ನೆಯ ಪುಟ ನೋಡಿ) ಶರಣಂವ್ರಜ ಎಂಬುದು ಯಾವಾಗ ವಿಧಿ ವಾಕ್ಯವಾಯಿತೋ, ಪ್ರಪತ್ತಿಯೂ ಕೃತಿಸಾಧ್ಯವಾದ ಸ್ವರಕ್ಷಣಾರ್ಥವಾದ ಪ್ರವೃತ್ತಿಯು ಪ್ರಪತ್ತಿಯು ಆಗಬಹುದಾದರೆ, ಉಪಾಸನೆಯು ಏಕೆ ಕೂಡದು ? ಶೇಷತ್ವ ಪಾರತಂತ್ರ್ಯಗಳಿಗೆ ಪ್ರಪತ್ತಿಯಿಂದ ಬಾಧಕವಿಲ್ಲದಿದ್ದರೆ, ಉಪಾಸನೆಯಿಂದಲೂ ಬಾಧಕವಿಲ್ಲವೆಂದೇ ಹೇಳಬೇಕಾಗುತ್ತದೆ

ಮುಂದಿನ ವಾಕ್ಯದಿಂದ ಈಗ ಸ್ಥಾಪಿಸಿದ ಅಭಿಪ್ರಾಯವನ್ನೇ ನಿಗಮನ ಮಾಡಿ ಹೇಳುತ್ತಾರೆ — ಆಗೈಯಾಲ್ - ಆ ಕಾರಣದಿಂದ ಶೇಷಭೂತನಾಗಿಯೂ ಪರತಂತ್ರನಾಗಿಯೂ ಇರುವ, ಇವನುಕ್ಕು - ಈ ಮುಮುಕ್ಷುವಿಗೆ, ಯಥಾಧಿಕಾರಮ್ - ಅಧಿಕಾರಿಗೆ ಅನುಗುಣವಾಗಿ ಎಂದರೆ ಶಕ್ತನಿಗೆ ಉಪಾಸನೆಯೂ, ಅಶಕ್ತನಿಗೆ ಭರನ್ಯಾಸವೂ, ಸ್ವರಕ್ಷಣಾರ್ಥ ವ್ಯಾಪಾರಂ - ತನ್ನ ರಕ್ಷಣಾರ್ಥವಾಗಿ ಸಾಧ್ಯೋಪಾಯಾನುಷ್ಠಾನವು, ಪಣ್ಣುಕ್ಕೈ ಯಿಲ್ಲೈ - ಮಾಡುವದರಿಂದೇನೂ ಬಾಧಕವಿಲ್ಲವು. ಸಾಧ್ಯೋಪಾಯಗಳಾದ ಭಕ್ತಿ ಪ್ರಪತ್ತಿಗಳಲ್ಲಿ ಯಾವುದಾದರೂ ಒಂದನ್ನು ಅನುಷ್ಠಿಸಬೇಕಾದುದೇ ಯುಕ್ತವು.

ವರ್ಣಾಶ್ರಮ ಧರ್ಮಙ್ಙಳುಮ್, ಅವತ್ತೈ ಇತಿ ಕರ್ತವ್ಯತೈಯಾಗ ಪ್ರವೃತ್ತಿತ್ತನ ಭಕ್ತಿಯೋಗಾದಿಗಳುಮ್ ಐಕಾಂತ್ಯ ವಿರುದ್ಧಙ್ಙಳನ್ರೋ? ಶುದ್ಧಯಾಜಿಗಳಕ್ಕನ್ರೋ ಪರಮೈಕಾಂತಿತ್ವಮ್ ಕೊಡುವದೆನ್ನಿಲ್? ಇದು ಭಾಷ್ಯಾದಿಗಳಿಲ್ ನಿಷ್ಕರ್ಷಂ ಶೆಯ್ಯಾನ್ನೈಯ ಡಿಂಡಾಗ ನ್ದಚೋದ್ಯಮ್.

೭ ಭಕ್ತಿಯೋಗವು ಪಾರಮೈಕಾಂತ್ಯಕ್ಕೆ ವಿರೋಧವಾದುದರಿಂದ ಸ್ವರೂಪ ವಿರುದ್ಧವೆಂಬ ವಾದದ ನಿರಾಸನವು.

ಅನಂತರಮ್ - ಭಕ್ತ್ಯುಪಾಯವು ಪಾರತಂತ್ರ್ಯಸ್ವರೂಪಕ್ಕೆ ವಿರುದ್ಧವಲ್ಲವೆಂದು ಒಪ್ಪಿದರೂ, ಇನ್ನೊಂದು ಪ್ರಬಲ ಪೂರ್ವಪಕ್ಷ ಉಂಟೆಂದು ಹೇಳುತ್ತಾರೆ. ಏನೆಂದರೆ:— ಅನನ್ಯಾರ್ಹ ಶೇಷಭೂತನಾಗ - ಪರಮಾತ್ಮನಲ್ಲದೆ ಇನ್ನು ಯಾವ ದೇವತೆಗೂ ಶೇಷಭೂತನಾಗಿರಲು ಅರ್ಹನಲ್ಲವೆಂದು, ತನ್ನೈತ್ತೆಳಿನ್ದು - ತನ್ನನ್ನು ತಿಳಿದು, ಪರಮೈಕಾಂತಿಯಾಗಿರುವ, ಇವನುಕ್ಕು - ಈ ಚೇತನನಿಗೆ, ದೇವತಾಂತರ ದ್ವಾರಙ್ಙಳಾನ - ಬೇರೆ ದೇವತೆಗಳಾದ ಸೂರ್ಯಾಗ್ನಿಗಳೇ ಮೊದಲಾದವರುಗಳ ಮೂಲಕವಾಗಿ ಆರಾಧ್ಯದೇವತೆಗಳಾಗಿ, ವಿಧಿಸಿರುವ, ವರ್ಣಾಶ್ರಮ ಧರ್ಮಙ್ಙಳುಮ್ - ತ್ರೈವರ್ಣಿಕರ ವಿಷಯದಲ್ಲಿ ಸ್ನಾನ ಸಂಧ್ಯಾವಂದನಾದಿ ನಿತ್ಯ ನೈಮಿತ್ತಿಕ ಕರ್ಮಗಳೂ, ಅವತ್ತೈ - ಆ ನಿತ್ಯನೈಮಿತ್ತಿಕ ಕರ್ಮಗಳನ್ನೇ ಇತಿ ಕರ್ತವ್ಯತೈಯಾಗ ಪ್ರವೃತ್ತಿತ್ತನ - ಅಂಗವಾಗಿ ಅವಶ್ಯಾನುಷ್ಠೇಯಗಳಾಗಿರುವ ಭಕ್ತಿಯೋಗವೇ ಮೊದಲಾದವುಗಳು, ಐಕಾನ್ತ್ಯ ವಿರುದ್ಧಙ್ಙಳನ್ರೋ - ಐಕಾಂತ್ಯಕ್ಕೆ ವಿರುದ್ಧವಲ್ಲವೋ? ಈ ಪೂರ್ವಪಕ್ಷದ ಅಭಿಪ್ರಾಯವೇನೆಂದರೆ;— ನಿತ್ಯನೈಮಿತ್ತಿಕಾನುಷ್ಠಾನಗಳು ಈ ಸಾಧ್ಯೋಪಾಯವೆಂದು ಹೇಳಲ್ಪಡುವ ಭಕ್ತಿಯೋಗಕ್ಕೆ ಅಂಗವು. ಪರಮಾತ್ಮಧ್ಯಾನಕ್ಕೆ ಐಕಾಂತ್ಯವು ಅವಶ್ಯಕವು. ನಿತ್ಯನೈಮಿತ್ತಿಕಗಳಲ್ಲಿ ಅನ್ಯದೇವತಾರಾಧನವು ವಿಹಿತವಾಗಿರುವದರಿಂದ ಇಂತಹ ಐಕಾಂತ್ಯಕ್ಕೆ ಹಾನಿಯು. ಅನ್ಯದೇವತಾ ಭಜನವೂ ಇರುವದರಿಂದ ಐಕಾಂತ್ಯಕ್ಕೆ ವಿರೋಧವು ಆದುದರಿಂದ ಸ್ವರೂಪವಿರುದ್ಧವು ಎಂಬುದು ಪೂರ್ವಪಕ್ಷವು. ಶುದ್ಧಯಾಜಿಗಳಕ್ಕನ್ರೋ - ಅನ್ಯದೇವತಾ ಸಂಬಂಧವಿಲ್ಲದೆ ಪರತತ್ತ್ವವನ್ನು ಮಾತ್ರ ಆರಾಧಿಸಿ ಧ್ಯಾನಮಾಡುವವರಿಗಲ್ಲವೋ, ಪರಮೈಕಾಂತಿತ್ವಮ್ ಕೊಡುವದು ಎನ್ನಿಲ್ - ಪರಮೈಕಾಂತಿತ್ವವು ಬರುತ್ತದೆ ಎಂದರೆ? ಇದೂ ಪೂರ್ವಪಕ್ಷಿಯ ಚೋದ್ಯವೇ. ಭಕ್ತಿಯೋಗದ ಉಪಾಸನೆಗೆ ಪರಮೈಕಾಂತಿ

ಎಜ್ಞನೇ ಎನ್ನಿಲ್ ? ಪ್ರತರ್ದನಾದಿ ವಿದ್ಯೈಗಳಿಲ್ ಪರಮಾತ್ಮಾ ಇಂದ್ರಾದಿ ಶರೀರಕನಾಗ ಮುಮುಕ್ಷುವುಕ್ಕು ಉಪಾಸ್ಯನೆನ್ರುರುದಿಯಿಟ್ಟಾರ್.

ತ್ವವು ಆವಶ್ಯಕವಾದುದರಿಂದ ನಿತ್ಯನೈಮಿತ್ತಿಕಗಳಲ್ಲಿನ ದೇವತಾಂತರ ಭಜನವನ್ನು ತ್ಯಜಿಸಿ, ಪರತತ್ತ್ವೋಪಾಸನೆ ಮಾಡಿದರಲ್ಲವೇ ಪರಮೈಕಾಂತಿತ್ವವು ಸಿದ್ಧಿಸುತ್ತದೇ ? ಎಂದು ಆಕ್ಷೇಪವು ಇದನ್ನು ಖಂಡಿಸುತ್ತಾರೆ. ಇದು ಶ್ರೀ ಭಾಷ್ಯದ ತಿಳುವಳಿಕೆ ಯಿಲ್ಲದ ಅಜ್ಞಾನದ ವಿಜೃಂಭಣೆಯೆಂದು ಹೇಳುತ್ತಾರೆ ಇದು-ಈ ಸ್ವರೂಪ ವಿರುದ್ಧವೆಂಬ ಆಕ್ಷೇಪವು, **ಭಾಷ್ಯಾದಿಗಳಿಲ್** - ಶ್ರೀ ಭಾಷ್ಯಕಾರರು ಬರೆದಿರುವ ಶಾರೀರಕ ಸೂತ್ರಗಳ ಭಾಷ್ಯದಲ್ಲಿರುವ, **ನಿಷ್ಕರ್ಷೆ ತೆಳಿಯಾಮೈ** - ಇದು ಹೀಗೆಯೇ ಸರಿ ಎಂಬ ನಿಷ್ಕರ್ಷೆಯುಳ್ಳ ಜ್ಞಾನವಿಲ್ಲದಿರೋಣದರ, **ಅಡಿಯಾಗ-ಮೂಲಕವಾಗಿ, ವನ್ದ ಚೋದ್ಯಮ್** - ಬಂದಾಕ್ಷೇಪವು. ಶ್ರೀ ಭಾಷ್ಯದಲ್ಲಿ ಶ್ರೀ ಭಾಷ್ಯಕಾರರ ಉಪದೇಶವನ್ನು ಚನ್ನಾಗಿ ತಿಳಿದಿದ್ದ ಪಕ್ಷದಲ್ಲಿ, ಇಂತಹ ಆಕ್ಷೇಪಕ್ಕೆ ಅವಕಾಶವಿರುತ್ತಿರಲಿಲ್ಲವೆಂಬ ಭಾವವು. **ಎಜ್ಞನೇ ಎನ್ನಿಲ್** - ಅದು ಹೇಗೆ ಎಂದರೆ, **ಪ್ರತರ್ದನಾದಿ ವಿದ್ಯೈಗಳಿಲೇ** - ಪ್ರತರ್ದನವೇ ಮೊದಲಾದ ಬ್ರಹ್ಮ ವಿದ್ಯೆಗಳಲ್ಲಿ, ಪರಮಾತ್ಮನು, **ಇಂದ್ರಾದಿ ಶರೀರಕನಾಗ**-ಇಂದ್ರನೇ ಮೊದಲಾದ ದೇವತೆಗಳ ಶರೀರವಾಗಿವುಳ್ಳವನಾಗಿ, **ಮುಮುಕ್ಷುವುಕ್ಕು** ಮೋಕ್ಷಾರ್ಥಿಗೆ, **ಉಪಾಸ್ಯನೆನ್ರು** - ಉಪಾಸ್ಯನೆಂದು, **ಅರುದಿಯಿಟ್ಟಾರ್**-ನಿರ್ಧರಿಸಿರುತ್ತಾರೆ, ಐಕಾಂತ್ಯ ಹಾನಿ ಎಂಬ ಪೂರ್ವಪಕ್ಷವನ್ನು ಎರಡು ವಿಧವಾಗಿ ವಿಕಲ್ಪಿಸಿ ಪರಿಹರಿಸುತ್ತಾರೆ. (೧) ದೇವತಾಂತರ ದ್ವಾರವಾಗಿ ಉಪಾಸನಾದಿಗಳನ್ನು ಮಾಡುವದರಿಂದ ಪಾರಮೈಕಾಂತ್ಯಕ್ಕೆ ವಿರೋಧವೇ (೨) ಇಲ್ಲವೇ ದೇವತಾಂತರ ದ್ವಾರಾ ಅನುಷ್ಠಿಸುವ ವರ್ಣಾಶ್ರಮಗಳು ಉಪಾಸನಕ್ಕೆ ಅಙ್ಗವಾಗಿರುವದರಿಂದ ವಿರೋಧವೇ ಎಂದು ವಿಕಲ್ಪಿಸಿ, ಮೊದಲಿನ ಪಕ್ಷವನ್ನು ಪರಿಹರಿಸುತ್ತಾರೆ. ಪ್ರತರ್ದನಾದಿ ವಿದ್ಯೆಗಳಲ್ಲಿ (ಆದಿ ಶಬ್ದದಿಂದ ಮಧು ವಿದ್ಯೆಯು ಹೇಳಲ್ಪಟ್ಟಿತು). ಈ ಪ್ರತರ್ದನ ವಿದ್ಯೆಯಲ್ಲಿ ಇಂದ್ರನು ನಾನು ಪ್ರಾಣ ಶಬ್ದಿತನು, ನನ್ನನ್ನು ಉಪಾಸನೆ ಮಾಡು ಎಂದು ಕೌಷೀತಕ್ಯುಪನಿಷತ್ತು ೩ ೧ ರಲ್ಲಿ "ತ್ವಮೇವ ಮೇವರಂ ವೃಣೀಷ್ವ ಪ್ರಾಣೋಸ್ಮಿ ಪ್ರಜ್ಞಾತ್ಮಾ, ಮಾ ಮಾಯುರಮೃತ ಮಿತ್ಯುಪಾಸ್ವ" ಯೆಂದು ಇಂದ್ರನು ಹೇಳುವ ವಾಕ್ಯವಾಗಿರುತ್ತದೆ, ಇಂದ್ರಪ್ರಾಣ ಶಬ್ದದಿಂದ ಹೇಳಲ್ಪಟ್ಟವನು ಯಾರು ಎಂಬ ಚರ್ಚೆಯಲ್ಲಿ ಆನಂದತ್ವ, ಅಜರತ್ವ ಅಮೃತತ್ವಾದಿಗಳು ಹೇಳಲ್ಪಟ್ಟಿರುವದರಿಂದ ಇಂದ್ರಪ್ರಾಣ ಶಬ್ದದಿಂದ ಹೇಳಲ್ಪಟ್ಟವನು ಜೀವ

ನಾದ ಇಂದ್ರನಲ್ಲವೆಂದೂ ತಚ್ಛರೀರಕನಾದ ಪರಮಾತ್ಮನೆಂದೂ ನಿರ್ಧರಿಸಲ್ಪಟ್ಟಿ ರುತ್ತದೆ. ಆದರೆ ಇಂದ್ರನೇ ಇದನ್ನು ಮಾಮುಪಾಸ್ವ ಎಂದು ಹೇಳಿರುವದರಿಂದ ಆತನ ಉಪಾಸನೆಯು ಹೇಗೆ ಮೋಕ್ಷದಾಯಕವಾದ ಪರಮಾತ್ಮೋಪಾಸನೆಯಾ ಗುತ್ತದೆ ಎಂಬ ಶಙ್ಕಾವಿನಲ್ಲಿ **ಜೀವ ಮುಖ್ಯಪ್ರಾಣ ಲಿಙ್ಗಾನ್ನೇತಿಚೇನ್ನ, ಉಪಾಸಾತ್ರೈವಿಧ್ಯಾತ್, ಆಶ್ರಿತತ್ವಾತ್, ಇಹತದ್ಯೋಗಾತ್"** ಎಂಬ ಸೂತ್ರದ ಮೂಲಕ ಸಮಾಧಾನವು ಹೇಳಲ್ಪಟ್ಟಿರುತ್ತದೆ. ಇಲ್ಲಿ ತ್ವಾಷ್ಟ್ರ ವಧೆ ಏನು, ಎಲ್ಲಿವರೆಗೂ ಪ್ರಾಣವಿರುತ್ತದೋ ಅಲ್ಲಿವರೆಗೂ ಆಯುಸ್ಸು ಎಂಬ್ಬ ದೇನು, ಹೀಗೆ ಜೀವನಾದ ಇಂದ್ರನೇ ಇಲ್ಲಿ ಉಪಾಸ್ಯನೆಂದು ಪೂರ್ವಪಕ್ಷ್ಸತಂದರೆ ಹಾಗಲ್ಲವು. ಏಕೆಂದರೆ ಪರಮಾತ್ಮೋಪಾಸನವು ಮೂರುವಿಧವೆಂದು ಹೇಳಲ್ಪ ಟ್ಟಿರುತ್ತದೆಯಾದುದರಿಂದ; ಹೇಗೆಂದರೆ:—(೧) **ಸತ್ಯತ್ವ ಜ್ಞಾನತ್ವ** ಆನಂದತ್ವ ದಿವ್ಯಮಙ್ಗಳವಿಗ್ರಹ ಇವುಗಳಿಂದ ಕೂಡಿದವನನ್ನೇ ಜಗತ್ಕಾರಣನಾದ ಪರಮಾತ್ಮ ನೆಂದು ಉಪಾಸನೆಯು ಒಂದು ವಿಧವು (೨) ಭೋಕ್ತಾವಾಗಿರುವ, ಪ್ರಕೃತದಲ್ಲಿ ಇಂದ್ರಾದಿ ಶರೀರಕನಾಗಿರುವವನನ್ನೇ ಪರಮಾತ್ಮಾವೆಂದು ಉಪಾಸನೆಯು ಎರಡ ನೆಯ ವಿಧವು. (೩) ಭೋಗ್ಯ ಭೋಗೋಪಕರಣ ಶರೀರಕನಾಗಿರುವವನ ಉಪಾ ಸನೆಯು ಮೂರನೆಯ ವಿಧವು. ಈ ಕೌಷೀತಕೀ ಉಪನಿಷತ್ತಿನಲ್ಲೂ ಈ ಮೂರು ವಿಧ ಪರಮಾತ್ಮೋಪಾಸನೆಯೂ ಹೇಳಲ್ಪಟ್ಟಿರುತ್ತದೆ. (೧) **ಆನನ್ದೋಽಜರೋಽಮೃತಃ** ಎಂಬುದರಲ್ಲಿ ಸ್ವರೂಪಾನುಸಂಧಾನವೂ (೨) **ಮಾಮುಪಾಸ್ವ** ಎಂದು ಇಂದ್ರನು ಹೇಳುವದರಿಂದ ಭೋಕ್ತೃ ಶರೀರಕನಾಗಿ ಉಪಾಸ ನವೂ, (೩) **ಪ್ರಾಣೋಽಸ್ಮಿ** ಎಂಬುವದರಿಂದ ಭೋಗ್ಯ ಭೋಗೋಪಕರಣ ಶರೀರಕತ್ವಾನುಸಂಧಾನವೂ ಉಪದೇಶಿಸಲ್ಪಟ್ಟಿರುತ್ತವೆ. ಇಂತಹ ಬ್ರಹ್ಮವಿದ್ಯೆ ಯಾದ ಪ್ರತರ್ದನ ವಿದ್ಯೆಯಲ್ಲಿ, ತಾನೇ ಪರಮಾತ್ಮ ಶರೀರನಾಗಿರುವದರಿಂದ ತನ್ನನ್ನೇ ಉಪಾಸನಮಾಡು ಎಂದು ಇಂದ್ರನು ಹೇಳಿರುವದು ಶಾಸ್ತ್ರೋಕ್ತವಾ ಗಿರುವದರಿಂದ ಇದರಲ್ಲಿ ಅನ್ಯದೇವತೋಪಾಸನರೂಪದೋಷಕ್ಕೆ ಕಾರಣವೇ ಇಲ್ಲವು. ಆದುದರಿಂದ, ಇಂದ್ರಾದಿ ಶರೀರಕನಾಗ ಮುಮುಕ್ಷುವುಕ್ಕು ಉ ಪಾಸ್ಯರ್ ಎಂದು ಹೇಳಿರುತ್ತಾರೆ. ಹಾಗೆಯೇ ಮಧುವಿದ್ಯೆಯಲ್ಲೂ ಸಹ ಆದಿ ತ್ಯನ ಪೂರ್ವಾದಿ ಅಂಶಗಳು ಕ್ರಮವಾಗಿ ವಸುರುದ್ರಾದಿತ್ಯ ಮರುತ್ಸಾಧ್ಯರಿಗೆ ಮಧುವಾಗಿ ಬಹು ಭೋಗ್ಯವೆಂದೂ ಉಪಾಸ್ಯವೆಂದೂ ಉಪದೇಶಿಸಲ್ಪಟ್ಟಿವೆ. ವಸ್ವಾದಿಗಳಿಗೆ ಸ್ವಶರೀರಕ ಪರಮಾತ್ಮನೇ ಉಪಾಸ್ಯವಾದುದರಿಂದ ಅಂತಹ ಉಪಾಸನೆಯಲ್ಲಿ ಏನೊಂದು ವಿರೋಧವಿಲ್ಲವೆಂದೂ ವಸ್ವಾದಿ ದೇವತಾವಿಶೇಷಗ ಳಿಗೂ ಮಧು ವಿದ್ಯೆಯಲ್ಲಿ ಅಧಿಕಾರ ಉಂಟೆಂದು ಶ್ರೀ ಬಾದರಾಯಣರು,

ವಿದ್ಯಾಙ್ಗಮಾನ ವರ್ಣಾಶ್ರಮಧರ್ಮಾಙ್ಗಳಿಲುಮ್ ಅನ್ಯ ದೇವತೈಗಳೈ ಶರೀರಮಾಗಕ್ಕೊಂಡು ನಿರ್ಕಿರ ಪರಮಾತ್ಮಾವೇ ಆರಾಧ್ಯನೆನ್ರು ನಿಷ್ಕರ್ಷಿತ್ತಾರ್.

"ಭಾವಮ್ತು ಬಾದರಾಯಣೋಽಸ್ತಿ ಹಿ" ಎಂಬ ಸೂತ್ರದಲ್ಲಿ (೧ ೩ ೩೦) ಸ್ಥಾಪಿಸಿರುತ್ತಾರೆ. ಇಲ್ಲಿಯೂ ದೇವತಾಂತರೋಪಾಸನೆ ಎಂಬ ವಿರೋಧವೇನೂ ಇಲ್ಲವು; ತಚ್ಛರೀರಕ ಪರಮಾತ್ಮನೇ ಉಪಾಸ್ಯನಾದುದರಿಂದ ಎಂಬ ಭಾವವು.

ಮುಂದೆ ಪೂರ್ವಪಕ್ಷದ ಎರಡನೆಯ ವಿಕಲ್ಪವಾದ ಉಪಾಸನೆಗೆ ಅಙ್ಗವಾದ ನಿತ್ಯನೈಮಿತ್ತಿಕಾನುಷ್ಠಾನದಲ್ಲಿ ಅನ್ಯದೇವತಾ ಭಜನವಿರುವದರಿಂದ, ಉಪಾಸನವು ಸ್ವರೂಪ ವಿರುದ್ಧವೆಂಬ ಆಕ್ಷೇಪವನ್ನು ಮುಂದಿನವಾಕ್ಯದಿಂದ ಖಂಡಿಸುತ್ತಾರೆ, **ವಿದ್ಯಾಙ್ಗಮಾನ** - ಬ್ರಹ್ಮವಿದ್ಯಾರೂಪ ಉಪಾಸನೆಗೆ ಅಙ್ಗವಾದ, **ವರ್ಣಾಶ್ರಮ ಧರ್ಮಾಙ್ಗಳಿಲುಮ್** - ವರ್ಣಾಶ್ರಮ ಧರ್ಮಗಳಾದ ನಿತ್ಯ ನೈಮಿತ್ತಿಕ ಕರ್ಮಾನುಷ್ಠಾನಗಳಲ್ಲಿ, **ಅನ್ಯ ದೇವತೈಗಳೈ ಶರೀರ ಮಾಗಕ್ಕೊಂಡು ನಿರ್ಕಿರ ಪರಮಾತ್ಮಾವೇ** - ಇಂದ್ರ ಸೂರ್ಯ ಅಗ್ನಿ ಮೊದಲಾದ ದೇವತೆಗಳನ್ನೇ ಶರೀರವಾಗಿ ಹೊಂದಿರುವ, ಸರ್ವೇಶ್ವರನೇ, **ಆರಾಧ್ಯನೆನ್ರು** - ಆರಾಧಿಸಲ್ಪಡುವನೆಂದು, **ನಿಷ್ಕರ್ಷಿತ್ತಾರ್** - ಶ್ರೀ ಭಾಷ್ಯಕಾರರು ಸ್ಥಾಪಿಸಿರುತ್ತಾರೆ. ನಿತ್ಯನೈಮಿತ್ತಿಕ ಕರ್ಮಗಳು ಕರ್ಮಯೋಗಕ್ಕೇ ಅಙ್ಗವೆಂದು ಗೀ. ೫. ೨೯ ನೆಯ ಶ್ಲೋಕದ ಅವತಾರಿಕೆಯಲ್ಲಿ "ನಿತ್ಯ ನೈಮಿತ್ತಿಕ ಕರ್ಮೇತಿಕರ್ತವ್ಯತಾಕಸ್ಯ ಕರ್ಮಯೋಗಸ್ಯ ಯೋಗಶಿರಸ್ಕಸ್ಯ" ಎಂಬದಾಗಿ ಹೇಳಿರುವದರಿಂದ ಭಕ್ತಿಯೋಗನಿಷ್ಠನು ಎಂದಿಗೂ ಬಿಡಲು ಸಾಧ್ಯವಿಲ್ಲವು. ಹಾಗೆಯೇ ಸ್ವತಂತ್ರ ಪ್ರಪತ್ತಿ ನಿಷ್ಠನಿಗೂ, ಪ್ರಪತ್ತಿಗೇನೂ ಅಙ್ಗವಲ್ಲದಿದ್ದರೂ ನಿತ್ಯನೈಮಿತ್ತಿಕಗಳು ಜನ್ಮಕ್ಕೆ ಅಂಟಿರುವದರಿಂದ ತ್ಯಜಿಸಲು ಸಾಧ್ಯವಿಲ್ಲವು. ಈ ನಿತ್ಯ ನೈಮಿತ್ತಿಕಾನುಷ್ಠಾನಗಳಲ್ಲಿ ಅನ್ಯದೇವತೆಗಳು ಆರಾಧಿಸಲ್ಪಡುವದಿಲ್ಲವು. ಅವರುಗಳನ್ನೇ ಶರೀರವಾಗಿ ಹೊಂದಿರುವ "ಭೋಕ್ತಾರಂ ಯಜ್ಞ ತಪಸಾಂ" ಎಂದು ಹೇಳಿರುವ ಪರಮಾತ್ಮನೇ ಆರಾಧಿಸಲ್ಪಡುವದರಿಂದ ಸ್ವರೂಪ ವಿರುದ್ಧತ್ವಕ್ಕೇ ಕಾರಣವೇ ಇಲ್ಲವು ಇನ್ನೊಂದು ಕಡೆಯಲ್ಲೂ ಶ್ರೀಕೃಷ್ಣಭಗವಾನನು "ಅಹಂ ಕ್ರತುರಹಂ ಯಜ್ಞಃ ಸ್ವಧಾಹಮಹಮೌಷಧಮ್ । ಮಂತ್ರೋಽಹಮಹಮೇವಾಜ್ಯ ಮಹ ಮಗ್ನಿ ರಹಂ ಹುತಮ್" ॥ (೯. ೧೬) ಸರ್ವೇಶ್ವರನು ವಿಶ್ವಶರೀರಕನಾದುದರಿಂದ ವಿಶ್ವದ ವಸ್ತುಗಳೊಂದಿಗೆ ಸಾಮಾನಾಧಿಕರಣ್ಯವು

ಇಲ್ಲಿ ಹೇಳಲ್ಪಟ್ಟಿದೆ. ನಿತ್ಯನೈಮಿತ್ತಿಕಗಳಲ್ಲೂ ಅನ್ಯದೇವತೆಗಳೇ ಶರೀರವಾಗಿವುಳ ಪರಮಾತ್ಮನೇ ಆರಾಧಿಸಲ್ಪಡುವವನೆಂಬ ಭಾವವು ಶ್ರೀ ಭಾಷ್ಯಕಾರರು ಹಾಗೆ ಎಲ್ಲಿ ಹೇಳಿರುತ್ತಾರೆ ಎಂದರೆ "ಚರಾಚರ ವ್ಯಪಾಶ್ರಯಸ್ತು ಸ್ಯಾತ್ತದ್ವ್ಯಪದೇಶೋಽಭಾಕ್ತಸ್ತದ್ಭಾವಭಾವಿತ್ವಾತ್" (ಬ್ರ. ಸೂ. ೨ ೩ ೧೭) ಎಂಬುವರ ಭಾಷ್ಯದಲ್ಲಿ, ಸ್ಥಾವರ ಜಙ್ಗಮವಸ್ತುವನ್ನು ಬೋಧಿಸುವ ಸಮಸ್ತ ಶಬ್ದವೂ ಪರಬ್ರಹ್ಮವನ್ನು ಬೋಧಿಸುತ್ತದೆಂಬುದು ಮುಖ್ಯವೃತ್ತಿಯಿಂದಲೇ ಎಂದೇ ಭಾವಿಸತಕ್ಕದ್ದು; ಏಕೆಂದರೆ ತೇಜಸ್ಸೇ ಮೊದಲಾದ ಸಮಸ್ತ ವಸ್ತುಗಳಿಗೆ ಆತ್ಮಾವಾಗಿರುವದರಿಂದ ಪರಬ್ರಹ್ಮಭಾವವು ಇರುವದರಿಂದ, "ಸರ್ವಸ್ಯ ವಸ್ತುನಃ ತಚ್ಛರೀರತಯಾ ತತ್ಪ್ರಕಾರತ್ವಾತ್ ತತ್ತದ್ವಾಚಿನಾಂ ಶಬ್ದಾನಾಂ ತತ್ರೈವಪರ್ಯವಸಾನಾತ್" ಎಂದರೆ "ಸಮಸ್ತ ವಸ್ತುಗಳೂ (ಇದರಿಂದ ಚೇತನಾಚೇತನವೆಲ್ಲಾ ಹೇಳಲ್ಪಟ್ಟಿತು) ಪರಮಾತ್ಮನಿಗೆ ಶರೀರವಾಗಿರುವದರಿಂದ, ಇವುಗಳೆಲ್ಲವೂ ಪ್ರಕಾರವು, ಪರಮಾತ್ಮನು ಪ್ರಕಾರಿಯು; ಆದುದರಿಂದ ಅವುಗಳನ್ನೆಲ್ಲಾ ಬೋಧಿಸುವ ಶಬ್ದಗಳಿಗೆ ಪರಮಾತ್ಮನಲ್ಲೇ ಅನ್ವಯವು" ಎಂದು ಶ್ರೀ ಭಾಷ್ಯದಲ್ಲಿ ಹೇಳಿರುತ್ತಾರೆಂಬ ಭಾವವು. ಆದುದರಿಂದ ಸೂರ್ಯ, ಅಗ್ನಿ ಮೊದಲಾದ ಶಬ್ದಗಳು ತತ್ತಚ್ಛರೀರಕ ಪರಮಾತ್ಮನನ್ನೇ ಬೋಧಿಸುತ್ತವೆ. ಈ ಅಭಿಪ್ರಾಯವನ್ನೇ ಸ್ವಾಮಿದೇಶಿಕರು ಶರಣಾಗತಿ ದೀಪಿಕೆಯಲ್ಲೂ ವ್ಯಕ್ತಪಡಿಸಿರುತ್ತಾರೆ.

"ವಿಶ್ವಂ ಶುಭಾಶ್ರಯವದೀಶ ವಪುಸ್ತ್ವದೀಯಂ ।
ಸರ್ವಾಗಿರಸ್ತ್ವಯಿ ಪತಂತಿ ತತೋಽಸಿ ಸರ್ವಃ ॥
ಸರ್ವೇ ಚ ವೇದವಿಧಯಸ್ತ್ವದನುಗ್ರಹಾರ್ಥಾಃ ।
ಸರ್ವಾಧಿಕಸ್ತ್ವಮಿತಿ ತತ್ತ್ವವಿದಸ್ತದಾಹುಃ ॥

ನಿನಗೆ ದಿವ್ಯ ಮಙ್ಗಳ ವಿಗ್ರಹವು ಹೇಗೆ ಶರೀರವೋ ಹಾಗೆಯೇ ಸಮಸ್ತ ವಿಶ್ವವೂ ನಿನ್ನ ಶರೀರವು. ಶರೀರವನ್ನು ಬೋಧಿಸುವ ಶಬ್ದಗಳು ಶರೀರಿಯನ್ನೂ ಸಹ ಬೋಧಿಸುವದರಿಂದ ಎಲ್ಲವುಗಳನ್ನು ವ್ಯವಹರಿಸುವ ಶಬ್ದಗಳು ನಿನ್ನನ್ನೂ ಬೋಧಿಸುತ್ತವೆ, ಆದುದರಿಂದ "ಜ್ಯೋತೀಂಷಿ ವಿಷ್ಣುರ್ಭುವನಾನಿ ವಿಷ್ಣುರ್ವನಾನಿ ವಿಷ್ಣುರ್ಗಿರಯೋ ದಿಶಶ್ಚ । ನದ್ಯಸ್ಸಮುದ್ರಾಶ್ಚ ಸ ಏವ ಸರ್ವಂ ಯದಸ್ತಿ ಯನ್ನಾಸ್ತಿ ಚ ವಿಪ್ರವರ್ಯ" (ವಿ. ಪು. ೨. ೧೨. ೩೮) ಎಂದು ಹೇಳಿರುವಹಾಗೆ ಸಮಸ್ತ ಚಿದಚಿದ್ವಸ್ತುಗಳೂ ವಿಷ್ಣುವಿಗೆ ಶರೀರವಾದುದರಿಂದ ಎಲ್ಲಾ ಶಬ್ದಗಳೂ ತತ್ತಚ್ಛರೀರಕ ಪರಮಾತ್ಮನನ್ನೇ ಬೋಧಿಸುವದರಿಂದ ಎಲ್ಲವೂ ವಿಷ್ಣುವೇ ಎಂಬ ಸಾಮಾನಾಧಿಕರಣ್ಯವು ನಿತ್ಯನೈಮಿತ್ತಿಕಾದಿ ವೇದವಿಧಿಗಳಿಗೆ ಅನುಸಾರವಾದ ಅನುಷ್ಠಾನಗಳೆಲ್ಲಾ ವಿಷ್ಣುವಿನ ಅನುಗ್ರಹ ಸಂಪಾದಕಗಳೆಂದು ಹೇಳಲ್ಪಟ್ಟಿರುತ್ತವೆ. ಆದು

ಆಗೈಯಾಲ್ ಸ್ವತಂತ್ರವಾಗ ಶಿಲದೇವತೈಗಳೈಪ್ಪತ್ತಿನಾಲುಮ್, ಫಲಾಂತರ ಕಾಮನೈಯಾಲೇ ತನ್ನುಡೈಯ ನಿತ್ಯನೈಮಿತ್ತಿಕಙ್ಗಳುಕ್ಕು ಪುರಮ್ಬಾನ ದೇವತಾಂತರಾನ್ವಯಮ್ ವರಿಲುಮ್ ಪರಮೈಕಾಂತಿತ್ವತ್ತುಕ್ಕು ವಿರುದ್ಧಮಾಮ್.

ದರಿಂದ ನಿತ್ಯ ನೈಮಿತ್ತಿಕಗಳಲ್ಲಿ ಸೂರ್ಯ, ಅಗ್ನಿ, ಇಂದ್ರ ಮೊದಲಾದ ದೇವತೆಗಳು ಆರಾಧಿಸಲ್ಪಟ್ಟರೂ, ತತ್ತಚ್ಛರೀರಕ ಪರಮಾತ್ಮನೇ ಆರಾಧಿಸಲ್ಪಡುವದರಿಂದ ಪ್ರಪನ್ನನಿಗೇನೂ ಬಾಧಕವೇನೂ ಇಲ್ಲವೆಂಬ ಭಾವವು; ಇದೂ ಅಲ್ಲದೆ ಸಾತ್ವಿಕ ತ್ಯಾಗವೂ ನಡೆಸುವದರಿಂದ ಈಷದಪಿ ವಿರೋಧವಿಲ್ಲವೆಂಬುದು ಏರ್ಪಟ್ಟಿತು. ಆದರೆ ಅನ್ಯದೇವತೆಯ ಹೆಸರಿನಲ್ಲಿ ನಡೆಸಿದ ಆರಾಧನೆಯು ಪರಮಾತ್ಮನಿಗೆ ಹೇಗೆ ಸಲ್ಲುತ್ತದೆ ಎಂಬ ಶಙ್ಕೆಯಿನಲ್ಲಿ ಹಿಂದೆ ಸ್ವಾಮಿ ದೇಶಿಕರವರು ಕೊಟ್ಟಿರುವ ದೃಷ್ಟಾಂತವನ್ನು ಇಲ್ಲಿ ಜ್ಞಾಪಕಕ್ಕೆ ತರಬಹುದು. ಒಬ್ಬ ರಾಜನು ಪೀತಾಂಬರ ಕವಚವನ್ನು ಧರಿಸಿದ್ದರೆ, ಅದರಮೇಲೆ ಒಂದು ಪುಷ್ಪಮಾಲೆಯನ್ನು ಹಾಕಿದರೆ, ಕವಚಕ್ಕೆ ಅನ್ವಯಿಸದೆ ಅದು ರಾಜನಿಗೆ ಹೇಗೆ ಅನ್ವಯಿಸುತ್ತದೋ ಹಾಗೆಯೇ ಸೂರ್ಯಾಗ್ನಿ ರುದ್ರೇಂದ್ರಾದಿ ವಿಶಿಷ್ಟ ಪರಮಾತ್ಮನನ್ನು ಆರಾಧಿಸಿದರೂ, ಪರಮಾತ್ಮನೇ ಆರಾಧಿಸಲ್ಪಡುವನು ಎಂಬ ತಾತ್ಪರ್ಯವು ಹೀಗೆ ನಿತ್ಯನೈಮಿತ್ತಿಕಙ್ಗಳ ಮೂಲಕ ಅನ್ಯದೇವತಾ ಹೆಸರಿನಲ್ಲಿ ನಡೆಸುವ ಪಂಚಮಹಾಯಜ್ಞಾದಿಗಳು ಪ್ರಪನ್ನನ ಪರಮೈಕಾಂತಿತ್ವಕ್ಕೆ ವಿರೋಧವಲ್ಲವೆಂದು ಹೇಳಲ್ಪಟ್ಟಿತು.

ನಿತ್ಯನೈಮಿತ್ತಿಕಾದಿಗಳೇ ಆಗಲಿ, ಅಥವ ಇತರ ಕಾಮ್ಯಕರ್ಮಗಳ ರೂಪದಲ್ಲಿ ಅನ್ಯದೇವತಾಭಜನವಾಗಲಿ ಪ್ರಪನ್ನನ ಪರಮೈಕಾಂತಿತ್ವಕ್ಕೆ ಯಾವಾಗ ವಿರೋಧವಾಗಬಹುದೆಂಬುವನ್ನು, **ಆಗೈಯಾಲ್** ಎಂಬ ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. ಎರಡು ಸಂದರ್ಭಗಳಲ್ಲಿ ಮಾತ್ರ ವಿರೋಧವಾಗಬಹುದು ಎಂದು ಹೇಳುತ್ತಾರೆ ಹೇಗೆಂದರೆ—**ಆಗೈಯಾಲ್** - ಹೀಗೆ ನಿತ್ಯನೈಮಿತ್ತಿಕಾನುಷ್ಠಾನಗಳಲ್ಲಿ ತತ್ತದ್ದೇವತಾಶರೀರಕನಾದ ಪರಮಾತ್ಮನೇ ಆರಾಧಿಸಲ್ಪಡುವದರಿಂದ, (೧) **ಸ್ವತಂತ್ರವಾಗ ಶಿಲದೇವತೆಗಳೈಪ್ಪತ್ತಿನಾಲುಮ್** - ತತ್ತತ್ಛರೀರಕನೆಂಬ ಭಾವನೆಯಿಲ್ಲದೆ ಆ ಕೆಲವು ದೇವತೆಗಳನ್ನೇ ನಿತ್ಯ ನೈಮಿತ್ತಿಕಗಳಲ್ಲೇ ಆರಾಧಿಸಿದರೂ, (೨) ಅಥವಾ **ಫಲಾಂತರ ಕಾಮನೈಯಾಲೇ** - **ಮೋಕ್ಷೇತರ** ಫಲಕಾಮನೆಯಿಂದ **ತನ್ನುಡೈಯ ನಿತ್ಯನೈಮಿತ್ತಙ್ಗಳುಕ್ಕು ಪುರಮ್ಬಾನ** - ತನ್ನ ನಿತ್ಯ ನೈಮಿತ್ತಿಕಗಳಿಗೆ ಹೊರಗಾದ ಎಂದರೆ ಸೇರದ, **ದೇವತಾನ್ತರಾನ್ವ**

ಯುಮ್ ವರಿಲುಮ್ – ದೇವತಾಂತರ ಸಂಬಂಧ ಬಂದರೂ ಸಹ ಈ ಎರಡು ಸಂದರ್ಭದಲ್ಲೂ, **ಪರಮೈಕಾಂತಿತ್ವಕ್ಕು ವಿರುದ್ಧಮಾಮ್ ಪ್ರಪನ್ನನ** ಪರಮೈಕಾಂತಿತ್ವಕ್ಕೆ ವಿರುದ್ಧವಾದುದಾಗುತ್ತದೆ. ನಿತ್ಯನೈಮಿತ್ತಿಕಗಳಲ್ಲೂ, ಅವುಗಳಲ್ಲಿ ಹೇಳಿರುವ ದೇವತೆಗಳನ್ನು ಕುರಿತು ಬೇರೆ ಫಲಗಳಿಗಾಗಿ ಸ್ವತಂತ್ರಿಸಿ ಆ ದೇವತೆಗಳನ್ನು ಆರಾಧಿಸಿದರೀಗ ಐಕಾಂತ್ಯಕ್ಕೆ ವಿರೋಧವು. ಇತರ ಕಾಮ್ಯ ಕರ್ಮಗಳನ್ನು ಆಯಾ ಫಲಗಳಿಗಾಗಿ ಆ ಕಾಮ್ಯ ಕರ್ಮಗಳಲ್ಲಿ ಹೇಳಿರುವ ದೇವತೆಗಳನ್ನು ಸ್ವತಂತ್ರಿಸಿಯೇ ಆಗಲಿ, ಅಥವಾ ಪರಮಾತ್ಮ ಶರೀರಕವೆಂಬ ಭಾವನೆಯಿಂದಾಗಲಿ ಆರಾಧಿಸಿದರೂ, ಮೋಕ್ಷೇತರ ಕಾಮ್ಯಫಲಕ್ಕಾಗಿ ಆರಾಧಿಸುವದರಿಂದ ಐಕಾಂತ್ಯಕ್ಕೆ ವಿರುದ್ಧವೂ ಆಗುತ್ತದೆ. ಹಾಗೆ ಅನುಷ್ಠಿಸದೆ ನಿತ್ಯನೈಮಿತ್ತಿಕಗಳು ತನಗೆ ಆಜ್ಞಾ ಕೈಂಕರ್ಯಗಳಾದುದರಿಂದ ಮಾಡಿಯೇ ತೀರಬೇಕು, ಇಲ್ಲದಿದ್ದರೆ ಪ್ರತ್ಯವಾಯವು ಎಂಬ ಜ್ಞಾನದಿಂದ ಫಲಾಭಿಸಂಧಿಯಿಲ್ಲದೆ, ಈ ಅನುಷ್ಠಾನಗಳಿಂದ ಆಯಾದೇವತಾ ಶರೀರಕನಾದ ಪರಮಾತ್ಮನೇ ಆರಾಧಿಸಲ್ಪಡುವನೆಂಬ ದೃಢ ನಂಬಿಕೆಯಿಂದ ಸಾತ್ವಿಕ ತ್ಯಾಗಪೂರ್ವಕವಾಗಿ ಪರಮಾತ್ಮನಲ್ಲಿ ಸಮರ್ಪಿಸಿಬಿಟ್ಟರೆ, ಪರಮೈಕಾಂತಿತ್ವಕ್ಕೂ ವಿರೋಧವಿಲ್ಲವು. ಸ್ವರೂಪ ವಿರೋಧವೂ ಇಲ್ಲವು.

ಆದರೆ ಪ್ರಪನ್ನನಿಗೆ ಅನ್ಯದೇವತಾ ಸಂಬಂಧವೇ ಕೂಡದೆಂದು ಸ್ಥಾಪಿಸಿ, **ನಾನ್ಯಂ ದೇವಂ ನಮಸ್ಕುರ್ಯಾತ್** ಎಂದೂ "**ನಯಷ್ಟವ್ಯಾ ಮಯಾ ಯೂಯಮ್ ಕದಾಚಿದಪಿ ದೇವತಾಃ**" ಎಂದೂ ವಿಧಿಸಿಬಿಟ್ಟು, **ಯಾವಜ್ಜೀವಂ ಅಗ್ನಿಹೋತ್ರಂ ಜುಹೋತಿ**", **ಅಹರಹಸ್ಸಂಧ್ಯಾಮುಪಾಸೀತ** ಇತ್ಯಾದಿ ವಿಧಿಗಳ ಮೂಲಕ ಅನ್ಯದೇವತಾ ಸಂಬಂಧವನ್ನೂ ವಿಧಿಸುವದು, ಪರಸ್ಪರ ವಿರೋಧವಲ್ಲವೇ? ಎಂಬ ಆಕ್ಷೇಪ ತಂದರೆ, ಶ್ರೀ ವ್ಯಾಸ ಮಹರ್ಷಿಯು ತಮ್ಮ ಪ್ರಿಯಶಿಷ್ಯರಾದ ಜೈಮಿನ್ಯಾಚಾರ್ಯರು ಹೇಳಿದ ಸಮಾಧಾನವನ್ನು ಮುಂದೆ ಉದಾಹರಿಸುತ್ತಾರೆ. ಈ ನಿತ್ಯನೈಮಿತ್ತಿಕಾನುಷ್ಠಾನಗಳಲ್ಲೂ ಸೂರ್ಯ, ಅಗ್ನಿ, ರುದ್ರ, ಇಂದ್ರಾದಿ ಶಬ್ದಗಳೆಲ್ಲಾ ವ್ಯುತ್ಪತ್ತಿಮೂಲಕವಾಗಿ ಪರಮಾತ್ಮನನ್ನೇ ಬೋಧಿಸುವದರಿಂದ ದೇವತಾಂತರ ಸಂಬಂಧ ಪ್ರಸಕ್ತಿಯೇ ಇಲ್ಲವಾದುದಾಗುತ್ತದೆ. ಈ ಭಾವನೆಯಿಂದಲಾದರೂ ನಿತ್ಯನೈಮಿತ್ತಿಕ ಕರ್ಮಾನುಷ್ಠಾನವನ್ನು ನಡೆಸಿ, ಭಗವನ್ನಿಗ್ರಹಕ್ಕೆ ಪಾತ್ರರಾಗದೇ ಇರಿ ಎಂದು ಪರಮ ಸುಹೃತ್ತ್ವೇನ ಉಪದೇಶಿಸುತ್ತಾರೆ.

ಫಲಾಂತರ ಸಙ್ಗಮುನ್ನಿಕ್ಕೇ – ಮೋಕ್ಷೇತರಗಳಾದ ಐಹಿಕ ಫಲಗಳ ಸಂಗವನ್ನು ತ್ಯಜಿಸಿ, ಪರಮಾತ್ಮನಿಗೆ, ದೇವತೆಗಳನ್ನು ವಿಶೇಷಣವಾಗಿ, ವೈತ್ತು – ಇಟ್ಟು ಎಂದರೆ ಭಾವಿಸಿ ಅಗ್ನ್ಯಾದಿ ದೇವ ವಿಶೇಷಣಕ್ಕೆ – ಅಗ್ನಿ, ಆದಿ ಶಬ್ದ

ಫಲಾಂತರ ಸಙ್ಗಮುಮನ್ರಿಕ್ಕೇ ಪರಮಾತ್ಮಾವುಕ್ಕು ವಿಶೇಷಙ್ಗಳೈ ದೇವತೆಗಳೈ ನೈತ್ತು ಅಗ್ನ್ಯಾದಿ ದೇವ ವಿಶೇಷಙ್ಗಳಿಲೇ ವಿಶೇಷ್ಯ ಪರ್ಯಂತಮಾಗ ಅನುಸಂಧಿತ್ತುಮ್, (೧) "ಸಾಕ್ಷಾದಪ್ಯವಿರೋಧಮ್ ಜೈಮಿನಿ" ಎಙ್ಗಿರ ನ್ಯಾಯತ್ತಾಲೆ ಅಗ್ನೀಂದ್ರಾದಿ ಶಬ್ದಙ್ಗಳೈ ಸಾಕ್ಷಾದ್ಭಗವದ್ವಾಚಕಙ್ಗಳಾಗ ಅನುಸಂಧಿತ್ತುಮ್, ಸ್ವಧರ್ಮಾನುಷ್ಠಾನ ಪಣ್ಣು ಮಿಡತ್ತಿಲ್, ವಿಧಿ ಬಲತ್ತಾಲೇ ಪರಮೈಕಾಂತಿತ್ವ ವಿರೋಧಮಿಲ್ಲೈ.

ದಿಂದ ಸೂರ್ಯ, ಇಂದ್ರಾದಿಗಳು ಹೇಳಲ್ಪಟ್ಟರು, ಅಗ್ನಿಯೇ ಮೊದಲಾದ ದೇವತಾ ವಿಶೇಷಗಳನ್ನು, ವಿಶೇಷ್ಯ ಪರ್ಯಂತಮಾಗ ಅನುಸಂಧಿತ್ತು - ವಿಶೇಷ್ಯನಾದ ಪರಮಾತ್ಮಪರ್ಯಂತವೆಂದು ಅನುಸಂಧಾನಮಾಡಿ, "ಸಾಕ್ಷಾದಪ್ಯವಿರೋಧಂ ಜೈಮಿನಿಃ" ಎಂದರೆ "ಈ ಸೂರ್ಯ, ಅಗ್ನಿ, ಬ್ರಹ್ಮ ರುದ್ರೇಂದ್ರಾದಿ ಶಬ್ದಗಳೆಲ್ಲಾ ವ್ಯುತ್ಪತ್ತಿಮೂಲಕ ಸಾಕ್ಷಾತ್ತಾಗಿ ಪರಮಾತ್ಮನನ್ನೇ ಬೋಧಿಸುತ್ತವೆ ಎಂದು ಭಾವಿಸಿದರೂ, ಜೈಮಿನ್ಯಾಚಾರ್ಯರು ಏನೊಂದೂ ವಿರೋಧವಿಲ್ಲವೆಂದು ತಿಳಿದರು" ಎಙ್ಗಿರನ್ಯಾಯತ್ತಾಲೆ - ಎಂಬುವ ನ್ಯಾಯದ ಪ್ರಕಾರ ಅಗ್ನಿ, ಇಂದ್ರ, ಸೂರ್ಯ, ರುದ್ರ ಶಬ್ದಗಳನ್ನು, ಸಾಕ್ಷಾದ್ಭಗವತ್ವಾಚಕಙ್ಗಳಾಕ - ಸಾಕ್ಷಾತ್ತಾಗಿ ಭಗವಂತನನ್ನೇ ಬೋಧಿಸುವುದಾಗಿ, ಅನುಸನ್ಧಿತ್ತು - ಅನುಸಂಧಾನಮಾಡಿ, ಸ್ವಧರ್ಮಾನುಷ್ಠಾನಮ್ - ತನಗೆ ವಿಹಿತವಾದ ವರ್ಣಾಶ್ರಮ ಧರ್ಮವನ್ನು, ಎಂದರೆ ನಿತ್ಯನೈಮಿತ್ತಿಕಗಳನ್ನು, ಪಣ್ಣು ಮಿಡತ್ತಿಲ್-ಅನುಷ್ಠಿಸುವ ಸಂದರ್ಭದಲ್ಲಿ, ವಿಧಿಬಲತ್ತಾಲೆ - ಶಾಸ್ತ್ರಪ್ರಮಾಣದ ಬಲದಿಂದ, ಪರಮೈಕಾಂತಿತ್ವಕ್ಕೆ, ವಿರೋಧಮಿಲ್ಲೈ - ವಿರೋಧವಿಲ್ಲವು. ಸಂಧ್ಯಾವಂದನಾದಿ ಭಾಷ್ಯಗಳಲ್ಲಿ ಈ ಜೈಮಿನ್ಯಾಚಾರ್ಯರ ಅಭಿಪ್ರಾಯವನ್ನೇ ಮನಸ್ಸಿನಲ್ಲಿಟ್ಟು, ಮಂತ್ರಗಳನ್ನೆಲ್ಲಾ ಆದಿತ್ಯಾಗ್ನಿ ದೇವತೆಗಳ ಪರವಾಗಿ ಅನ್ವಯಿಸದೆ ಸರ್ವೇಶ್ವರನ ಪರವಾಗಿಯೇ ಅನ್ವಯಿಸಿರುತ್ತಾರೆ, ಸಾಕ್ಷಾದಪ್ಯವಿರೋಧಂ ಜೈಮಿನಿಃ - ಎಂಬ ಸೂತ್ರಾಭಿಪ್ರಾಯವೇನೆಂದರೆ "ಸ ಏಷೋಗ್ನಿರ್ವೈಶ್ವಾನರಃ" ಎಂಬ ಪ್ರಮಾಣದಲ್ಲಿ ಅಗ್ನಿ ಶಬ್ದವು ಜಾಠರಾಗ್ನಿ ಶರೀರಕನಾದ ಪರಮಾತ್ಮನನ್ನು ವೈಶ್ವಾನರ ಶಬ್ದವು ಹೇಗೆ ಬೋಧಿಸುತ್ತದೋ, ಹಾಗೆಯೇ ಅಗ್ನಿ ಶಬ್ದವು ಉಪಾಸ್ಯವಾಗಿ ಹೇಳಿರುವದರಿಂದ ಅಗ್ನಿದೇವತೆಯಲ್ಲವು ಅಗ್ನಿಶರೀರಕನಾದ ಪರಮಾತ್ಮನೆಂದು ಶ್ರೀಬಾದರಾಯಣರು ಅಭಿಪ್ರಾಯಪಟ್ಟರು, ಅವರ ಶಿಷ್ಯ

---

(೧) ಬ್ರ. ಸೂ. ೧. ೨. ೨೮

ರಾದ ಜೈಮಿನ್ಯಾಚಾರ್ಯರಾದರೋ, ಸಾಕ್ಷಾತ್ - ವ್ಯುತ್ಪತ್ತಿಮೂಲಕ ಸಾಕ್ಷಾತ್ತಾಗಿ ಪರಮಾತ್ಮನನ್ನೇ ಈ ವೈಶ್ವಾನರ ಶಬ್ದಕ್ಕೆ ಸಾಮಾನಾಧಿಕರಣ್ಯದಿಂದ ಹೇಳಲ್ಪಟ್ಟ ಅಗ್ನಿಶಬ್ದವೂ ಬೋಧಿಸುತ್ತದೆಂದೂ ಹೇಳಿದರೂ, ಅವಿರೋಧಂ-ವಿರೋಧವೇನೂ ಇಲ್ಲವು, ವ್ಯುತ್ಪತ್ತಿಯು ಹೇಗೆಂದರೆ, ವಿಶ್ವೇಚ ನರಾಶ್ಚ-ವಿಶ್ವನರಾಃ, ವಿಶ್ವನರಾಣಾಂ ನೇತಾ ವೈಶ್ವಾನರಃ, ಸಮಸ್ತ ಚೇತನಾಚೇತನರಿಗೂ ಯಾರು ನಿಯಂತ್ರನೋ, ಆತನು ವೈಶ್ವಾನರನು, ಈ ದೃಷ್ಟಾಂತಾನುಸಾರವಾಗಿ, ಇದು ಹೇಗೆ ಭಗವದ್ವಾಚಕವೋ ಹಾಗೆಯೇ ಅಗ್ರಂ ನಯತೀತ್ಯಗ್ನಿಃ ಎಂದು ನಿರುಪಾಧಿಕನಾಗಿ ಮುಂದೆ ನಿಂತು ಉಪಾಯನಾಗಿ ಕರೆದುಕೊಂಡು ಹೋಗುವವನು ಅಗ್ನಿಯು", ಎಂಬುದು ಸೂತ್ರಾರ್ಥವು. ಹೀಗೆ ಭಾವಿಸಿದುದಾದರೆ ಅನ್ಯದೇವತಾ ಸಂಬಂಧವೇ ನಿತ್ಯನೈಮಿತ್ತಿಕಾನುಷ್ಠಾನಗಳಲ್ಲಿಲ್ಲದಿರುವದರಿಂದ ಆಜ್ಞಾಕೈಂಕರ್ಯಗಳಾಗಿ ಅವಶ್ಯಾನುಷ್ಠೇಯಗಳೇ ಎಂಬ ತಾತ್ಪರ್ಯವು. ಹಾಗೆಯೇ ಸೂರ್ಯ, ಆದಿತ್ಯ ಶಬ್ದಗಳಿಗೂ ಪರಮಾತ್ಮಪರವಾಗಿಯೇ ಜ್ಞಾನಿಗಳು ವ್ಯಾಖ್ಯಾನ ಮಾಡಿರುತ್ತಾರೆ. ಹಾಗೆಯೇ ಸಂಧ್ಯಾವಂದನೆಯಲ್ಲೂ "ಅಹಸ್ತದವಲುಂಪತು, ರಾತ್ರಿಸ್ತದವಲುಂಪತು" ಅಹಸ್ಸು ರಾತ್ರ್ಯಭಿಮಾನದೇವತೆಗಳು ಪಾಪವನ್ನು ನಾಶ ಮಾಡಲಿ ಎಂದರ್ಥಹೇಳಿವೆ, ಅವುಗಳಲ್ಲಿ ತೋರಿಬರುವ ಧಾತ್ವರ್ಥಗಳಿಗನುಸಾರವಾಗಿ ಪರಮಾತ್ಮನೆಂದೇ ವ್ಯಾಖ್ಯಾನಮಾಡಿರುತ್ತಾರೆ, ಆದುದರಿಂದ ಪರಮೈಕಾಂತಿತ್ವಕ್ಕೆ ವಿರೋಧವೇ ಮೊದಲಾದ ಯಾವ ವಿಧ ದೋಷಗಳನ್ನಾಗಲಿ ಆರೋಪಿಸಿ ಅವುಗಳನ್ನು ಪರಿತ್ಯಾಗಮಾಡುವದು ಪ್ರಬಲ ಭಗವನ್ನಿಗ್ರಹಕ್ಕೆ ಸಿಕ್ಕಿದಹಾಗೆ ಆಗುತ್ತದೆಂಬುದು ಮುಖ್ಯತಾತ್ಪರ್ಯವು.

ಈ ಸಂದರ್ಭದಲ್ಲಿ ಇನ್ನೊಂದು ಪೂರ್ವಪಕ್ಷವನ್ನು ತರಬಹುದು; ಸೂರ್ಯ, ಅಗ್ನಿ ಮೊದಲಾದ ಶಬ್ದಗಳು ಮುಖ್ಯವೃತ್ತಿಯಿಂದ ರೂಢಿಯಲ್ಲಿ ಸೂರ್ಯದೇವತೆ ಅಗ್ನಿದೇವತೆಯನ್ನು ಬೋಧಿಸುವಾಗ ಅದನ್ನು ಬಿಟ್ಟು ಅವುಗಳನ್ನು ಪರಮಾತ್ಮನಲ್ಲಿ ಅನ್ವಯಿಸಿದರೆ, ಶಾಸ್ತ್ರಗಳಲ್ಲಿ, ಅವು ಒಂದುಕಡೆ ಪರಮಾತ್ಮನನ್ನೂ, ಇನ್ನೊಂದುಕಡೆ ತತ್ತದ್ದೇವತೆಗಳನ್ನೂ ಬೋಧಿಸಿದರೆ ಅನ್ಯವಸ್ಥೆಯುಂಟಾಗುವದಿಲ್ಲವೇ? ಹಾಗೇನೂ ಇಲ್ಲವು. ಏಕೆಂದರೆ, ಪರಮಾತ್ಮನಲ್ಲಿ ಅನ್ವಯಿಸುವ ತತ್ತದ್ದೇವತೆಗಳೆಂದು ಅರ್ಥಹೇಳುವರೂ ಚಾರ್ವಾಕನು ದೇಹವೇ ಆತ್ಮ ಎಂದು ಹೇಳಿದು ಚಂದನ ಹಾರಾದಿಗಳನ್ನು ಧರಿಸಿದರೆ, ಅದರ ಭೋಗವು ಆತ್ಮನಿಗೇನೆ ಹೇಗೆ ಸಲ್ಲುತ್ತದೋ, ಹಾಗೆಯೇ ತತ್ತಚ್ಛರೀರಕ ದೇವತೆ ಎಂದು ಹೇಳಿದರೂ ಅದೂ ಪರಮಾತ್ಮನಲ್ಲೇ ಅನ್ವಯಿಸುವದರಿಂದ ಎರಡುವಿಧವಾದ ಅರ್ಥಗಳಿಂದಲೂ ಅವ್ಯವಸ್ಥೆ ಏನೂ ಇಲ್ಲವು.

೮ ಭಕ್ತಿ ವಿಧಿಃ ಅಭಿಚಾರಾದಿ ವಿಧಿವತ್ ಪ್ರಪತ್ತಿ ಪ್ರರೋಚನಾರ್ಥ ಇತಿ ಪಕ್ಷಂ ದೂಷಯತಿ

ಆನಾಲುಮ್ ಅಭಿಚಾರಾದಿಗಳೈ ವಿಧಿತ್ತ ಕಟ್ಟಳೈಯಿಲೆ ಶಾಸ್ತ್ರ ಪ್ರರೋಚನಾದಿಗಳಿಲ್ ಅಭಿಸಂಧಿಯಾಲೆ ಅಧಿಕಾರಿ ವಿಶೇಷಣತ್ತಾಲೆ

ಅನ್ಯದೇವತೆಯಲ್ಲಿ ಮಾಡಿದ ಆರಾಧನೆ ಎಲ್ಲವೂ ಪರಮಾತ್ಮನನ್ನೇ ಹೋಗಿ ಸೇರುತ್ತವೆ ಎಂಬುದಕ್ಕೆ ಅನೇಕ ಶಾಸ್ತ್ರಪ್ರಮಾಣಗಳುಂಟು. ಭಗವದ್ಗೀತೆಯಲ್ಲಿ

"ಯೇತ್ವನ್ಯ ದೇವತಾ ಭಕ್ತಾ ಯಜಂತೇ ಶ್ರದ್ಧಯಾನ್ವಿತಾಃ।
ತೇಪಿ ಮಾಮೇವ ಕೌಂತೇಯ ಯಜನ್ತ್ಯವಿಧಿಪೂರ್ವಕಂ॥(ಗೀ ೯.೨೩
ಯೋಯೋ ಯಾಂಯಾಂ ತನುಂಭಕ್ತ ಶ್ರದ್ಧಯಾರ್ಚಿತು ಮಿಚ್ಛತಿ।
ತಸ್ಯತಸ್ಯಾಚಲಾಂ ಶ್ರದ್ಧಾಂ ತಾಮೇವ ವಿದಧಾಮ್ಯಹಂ॥ (ಗೀ ೭.೨೧)
ಲಭತೇಚ ತತಃ ಕಾಮಾನ್ ಮಯೈವ ವಿಹಿತಾನ್ ಹಿತಾನ್"

"ಅನ್ಯದೇವತೆಗಳಲ್ಲಿ ಭಕ್ತಿಯನ್ನು ತೋರಿ ಆರಾಧಿಸುವವರೂ ಕೂಡ ನನ್ನನ್ನೇ ಆರಾಧಿಸುವರು, ಆದರೆ ಕ್ರಮತಪ್ಪಿ ಆರಾಧಿಸುವರು." ಎಂಬುದೂ "ಯಾರು ಶ್ರದ್ಧೆಯಿಂದ ನನ್ನ ಶರೀರಗಳಾದ ಅನ್ಯದೇವತೆಗಳನ್ನು ಭಕ್ತಿಯಿಂದ ಆರಾಧಿಸಲು ಅಪೇಕ್ಷಿಸುವರೋ, ಅವರಿಗೆ ನಿಶ್ಚಲವಾದ ಶ್ರದ್ಧೆಯನ್ನುಂಟುಮಾಡುವವನೂ ನಾನೇ, ಆ ಭಕ್ತರು ಕೋರಿದ ಫಲಗಳನ್ನು ಆ ದೇವತೆಗಳ ಮೂಲಕವಾಗಿ ಕೊಡುವವನೂ ನಾನೇ" ಎಂಬುದೂ, ಈ ಶ್ಲೋಕಗಳ ತಾತ್ಪರ್ಯವು. ಆದುದರಿಂದ ಶಾಸ್ತ್ರಾರ್ಥದ ಅವ್ಯವಸ್ಥೆಯೇನೂ ಇದರಿಂದ ಪ್ರಾಪ್ತವಾಗುವುದಿಲ್ಲವು.

ಭಕ್ತಿಯನ್ನು ವಿಧಿಸಿರುವುದು, ಅಭಿಚಾರಾದಿಗಳು ಶಾಸ್ತ್ರ ಪ್ರರೋಚನಾರ್ಥಕ್ಕಾಗಿ ಹೇಗೋ ಹಾಗೆ ಪ್ರಪತ್ತಿ ಪ್ರರೋಚನಾರ್ಥಕ್ಕಾಗಿ ಎಂಬ ವಾದದ ನಿರಾಸವು.

. ಮೊದಲು ಪೂರ್ವಪಕ್ಷವನ್ನು "ಆನಾಲುಮ್" ಎಂದಾರಂಭಿಸಿ "ನಿನ್ರಿತ್ತು ನಿಂದಿತ್ತದು" ಎನ್ನುವವರೆಗೂ ಅನುವಾದಮಾಡಿ "ಇದುವುಮ್ ಅತ್ಯಂತಾನುಪಪನ್ನಂ" ಎಂದಾರಂಭಿಸಿ ಖಂಡಿಸುತ್ತಾರೆ. ಆನಾಲುಮ್- ಹಿಂದಿನ ಏಕಾಂತ್ಯಪಕ್ಷರೂಪ ಸ್ವರೂಪ ವಿರುದ್ಧತ್ವವಿಲ್ಲವೆಂದು ಒಪ್ಪಿಕೊಂಡರೂ, ಅಭಿಚಾರಾದಿಗಳೈ ವಿಧಿತ್ತ ಕಟ್ಟಳೈಯಿಲೇ - ತನಗೆ ಶತ್ರುವಾಗಿರುವವರನ್ನು ವಧಿಸುವದಕ್ಕಾಗಿ, ವೇದದಲ್ಲಿ ವಿಧಿಸಿರುವ ಶ್ಯೇನಾದಿಗಳ ಮೂಲಕವಾಗಿ, ಶಾಸ್ತ್ರ ಪ್ರರೋಚನಾದಿಗಳಿಲ್ - ಶಾಸ್ತ್ರಗಳಲ್ಲಿ ವಿಶ್ವಾಸ ಮೊದಲಾದವುಗಳನ್ನು ಹುಟ್ಟಿಸುವ. ಅಭಿ

ಉಪಾಸನಾದಿಗಳೈ ವಿಧಿತ್ತದತ್ತನ್ಱೈಯನ್ಱೋ? ಮುಮುಕ್ಷು ವುಕ್ಕು ಪ್ರಾಪ್ಯ ಪ್ರಾಪಕಙ್ಗಳ್ ಏಕನಾಗೈಯಾಲೇ ಪ್ರಾಪ್ಯಾನುರೂಪಮಾಗ ಉಪಾಯಮಾವಾನ್ ಸರ್ವೇಶ್ವರನ್ ಒರುವನುಮೇ; ಆಗೈಯಾಲನ್ಱೋ, (೧) "ಅಥ ಪಾತಕ ಭೀತಸ್ತ್ವಂ ಸರ್ವಭಾವೇನ ಭಾರತ । ವಿಮುಕ್ತಾನ್ಯ ಸಮಾರಂಭೋ ನಾರಾಯಣ ಪರೋಭವ" ॥ ಎನ್ಱು ಧರ್ಮದೇವತೈತನ್ ಪುತ್ರನುಕ್ಕು ಉಪಾಸನಾದಿಗಳೈ ಪ್ರಾಪ್ಯ ವಿರೋಧಿಗಳೆನ್ಱು ನಿನೈತ್ತು ನಿನ್ದಿತ್ತದೆನ್ನಿಲ್, ಅದುವುಮ್ ಅತ್ಯನ್ತಾನುಪಪನ್ನಮ್;

ಸಾಧಿಯಾಲೇ - ನಿಶ್ಚಯ ಸಙ್ಕಲ್ಪಮೂಲಕ, ಅಧಿಕಾರಿ ವಿಶೇಷತ್ತಿಲೇ - ಪ್ರಪನ್ನಾಧಿಕಾರಿಯಾಗುವ ವಿಷಯದಲ್ಲಿ, ಉಪಾಸನಾದಿಗಳನ್ನು, ವಿಧಿತ್ತ ದತ್ತನ್ಱೈಯನ್ಱೋ - ವಿಧಿಸಿರುತ್ತದೆ ಇಷ್ಟು ವಾಕ್ಯವಲ್ಲವೋ? ಮುಮುಕ್ಷುವುಕ್ಕು - ಮೋಕ್ಷಾರ್ಥಿಗೆ, ಪ್ರಾಪ್ಯಪ್ರಾಪಕಙ್ಗಳ್ - ಉಪೇಯೋಪಾಯಗಳೆರಡೂ, ಏಕನಾಗೈಯಾಲೇ - ಸರ್ವೇಶ್ವರನೊಬ್ಬನೇಯಾಗಿರುವದರಿಂದ, ಪ್ರಾಪ್ಯನಾದ ಸರ್ವೇಶ್ವರನಿಗೆ, ಅನುರೂಪಮಾಗ - ಯೋಗ್ಯವಾದ, ಉಪಾಯವು, ಸರ್ವೇಶ್ವರನ್ ಒರುವನನೇ - ಸರ್ವೇಶ್ವರನೊಬ್ಬನೇ; ಆಗೈಯಾಲನ್ಱೋ - ಆದುದರಿಂದಲ್ಲವೋ, "ಅಥ - ಹಾಗೆ ಅಲ್ಲದಿದ್ದರೆ, ತ್ವಂ - ನೀನು, ಪಾತಕಭೀತಃ - ಪಾಪಭೀತನಾಗಿ, ಉಪಾಸನಾದಿಗಳಿಂದ ಪಾತಕವು ತೊಲಗದೆ ಅದರಿಂದ ಪಾಪಭೀತನಾಗಿ ಎಂಬ ತಾತ್ಪರ್ಯವು, ಹೇ ಭಾರತ - ಓ ಧರ್ಮರಾಜನೇ, ವಿಮುಕ್ತಾನ್ಯಸಮಾರಂಭಃ - ಬಿಟ್ಟುಬಿಟ್ಟ ಇತರ ಎಲ್ಲಾ ಕಾರ್ಯಕಲಾಪವುಳ್ಳವನಾಗಿ, ಸರ್ವಭಾವೇನ - ಸಮಸ್ತ ಭಾವನೆಯಿಂದಲೂ ಎಂದರೆ ಪ್ರಾಪ್ಯ ಪ್ರಾಪಕ, ತಂದೆ ತಾಯಿ ಬಂಧು ಬಳಗ ಮುಂತಾದ ಭಾವನೆಗಳಿಂದಲೂ, "ಪಿತಾ ತ್ವಂ ಮಾತಾತ್ವಂ ದಯಿತ ತನಯಸ್ತ್ವಂ" ಎಂಬ ಶ್ಲೋಕದಲ್ಲಿ ಹೇಳಿರುವ ಸರ್ವ ಭಾವನೆಗಳಿಂದಲೂ, ನಾರಾಯಣ ಪರೋಭವ - ಶ್ರೀಮನ್ನಾರಾಯಣನನ್ನು ಆಶ್ರಯಿಸುವನಾಗು" ಎನ್ಱು - ಎಂಬದಾಗಿ, ಧರ್ಮದೇವತೆಯು, ತನ್ ಪುತ್ರನುಕ್ಕು - ತನ್ನ ಮಗನಾದ ಧರ್ಮರಾಜನಿಗೆ, ಉಪಾಸನಾದಿಗಳೈ - ಉಪಾಸನೆ ಮೊದಲಾದವುಗಳನ್ನು, ಪ್ರಾಪ್ಯ ವಿರೋಧಿಗಳೆನ್ಱು ನಿನೈತ್ತು - ಪರಮಾತ್ಮಪ್ರಾಪ್ತಿಗೆ ವಿರೋಧವಾದವುಗಳೆಂದು ಭಾವಿಸಿ, ನಿಂದಿತ್ತದು - ಉಪಾಸನವನ್ನು ದೂಷಿಸಿದುದು ಎಂದರೆ ಉಪಾಸನವು ಎಂದಿಗೂ ಪರಮಾತ್ಮಪ್ರಾಪ್ತಿಗೆ ಹೇತುವಾಗಲಾರದೆಂದು ದೂಷಿಸಿರುತ್ತದೆ, ಎನ್ನಿಲ್ - ಎಂದು ಪೂರ್ವಪಕ್ಷವನ್ನು

(೧) ವಿ. ಧ. ೬೬-೭೨

ತುವರೆ, ಇದುವುಮ್ ಅತ್ಯಂತಾನುಪಪನ್ನಮ್ - ಈ ಅಭಿಪ್ರಾಯವೂ ಕೂಡ ತುಂಬಾ ಅಸಮಂಜಸವಾದುದು, ಪೂರ್ವಪಕ್ಷಾಭಿಪ್ರಾಯವೇನೆಂದರೆ ವೇದಗಳಲ್ಲಿ ಶತ್ರುಪಕ್ಷನಿರಸನಕ್ಕಾಗಿ ಯಾಗಗಳು ವಿಹಿತಗಳಾಗಿವೆ. ಇಂತಹ ಯಾಗಗಳನ್ನು ಮಾಡಿದರೆ ಶತ್ರುವು ಆ ಯಾಗದ ಫಲದಿಂದ ಸಾಯುವನು. ಇದು ಪ್ರತ್ಯಕ್ಷಸಿದ್ಧವು. ಇಂತಹ ಯಾಗಗಳಲ್ಲಿ ಒಂದಾದ ನಿಕುಂಭಿಳಾ ಯಾಗವನ್ನು ಇಂದ್ರಜಿತ್ತು ಮಾಡಲಾರಂಭಿಸಿದನು. ಈ ವಾರ್ತೆ ಹೋಮವನ್ನು ವಿಭೀಷಣನು ತಿಳಿದು, ಈ ಯಾಗಕ್ಕೆ ವಿಘ್ನವನ್ನುಂಟುಮಾಡಿಸಿ, ಲಕ್ಷ್ಮಣನಿಂದ ಹತನಾಗುವಹಾಗೆ ಮಾಡಿದನು. ಯಾವುದಾದರೂ ಒಂದು ವ್ಯಾಧಿಗೆ ಔಷಧ ಕೊಡುವದರಿಂದ ವ್ಯಾಧಿಯು ಗುಣವಾದರೆ ಆಯುರ್ವೇದದಲ್ಲಿ ಹೇಗೆ ನಂಬಿಕೆಯನ್ನು ಹುಟ್ಟಿಸುತ್ತದೋ, ಹಾಗೆಯೇ ಈ ಅಭಿಚಾರಾದಿಗಳೂ ಶಾಸ್ತ್ರಗಳಲ್ಲಿ ನಂಬಿಕೆಯನ್ನು ಹುಟ್ಟಿಸುತ್ತವೆ. ಆದರೆ ಹೀಗೆ ಯಾಗಗಳ ಮೂಲಕ ಶತ್ರುವನ್ನು ಕೊಲ್ಲುವದು ಕ್ಷತ್ರಿಯನ ಸ್ವರೂಪಕ್ಕೂ ಪರಾಕ್ರಮಕ್ಕೂ ಕುಂದಕವಾಗಿ ನಿಂದಿತವು. ಹಾಗೆಯೇ ಅಸಮರ್ಥನಾಗಿ ಪರಾಧೀನನಾಗಿ ಅಕಿಂಚನನಾಗಿರುವ ಈ ಪ್ರಪನ್ನನು ತನ್ನನ್ನು ಸಮರ್ಥನನ್ನಾಗಿಯೂ ಸ್ವತಂತ್ರನಾಗಿಯೂ ಸಕಿಂಚನಾಗಿಯೂ ಭಾವಿಸಿಕೊಂಡು ಉಪಾಸನದ ಮೂಲಕ ಪ್ರಾಪ್ಯವನ್ನು ಬಲಾತ್ಕರಿಸಿ ಸೇರುವನೆಂಬುದು ಸ್ವರೂಪ ವಿರುದ್ಧವೆಂಬ ತಾತ್ಪರ್ಯವು; ಹಾಗಾದರೆ ಉಪಾಸನವನ್ನು ಶಾಸ್ತ್ರದಲ್ಲಿ ವಿಧಿಸಿರುವನು ಏತಕ್ಕೆಂದರೆ, ಪ್ರವೃತ್ತಿಯಲ್ಲಿ ವಿಶ್ವಾಸವನ್ನುಂಟುಮಾಡುವದಕ್ಕಾಗಿ ಎಂದು ಭಾವಿಸತಕ್ಕದ್ದು. ವಸ್ತುತಃ ಅದು ಸ್ವರೂಪ ವಿರುದ್ಧವಾದುದಾಗಿ ಗುರೂಪಾಯವಾಗಿರುವದರಿಂದ ಅದಕ್ಕೆ ಬದಲಾಗಿ ಪ್ರಪತ್ತಿಯು ಲಘುವಾಗಿರುವದರಿಂದ, ಇದರಲ್ಲಿ ವಿಶ್ವಾಸವು ಹೆಚ್ಚುತ್ತದೆ ಎಂಬ ಭಾವವು. ಪೂರ್ವಪಕ್ಷಿಯು ತನ್ನ ಅಭಿಪ್ರಾಯವನ್ನು ಸಮರ್ಥನೆ ಮಾಡುವದಕ್ಕಾಗಿ ವಿಷ್ಣುಧರ್ಮ ಪ್ರಮಾಣವನ್ನು ಉದಾಹರಿಸಿರುತ್ತಾರೆ. ಆ ಶ್ಲೋಕಾಭಿಪ್ರಾಯವು ಪೂರ್ವಪಕ್ಷಿಯ ಅಭಿಪ್ರಾಯಾನುಗುಣವಾಗಿ ಹೇಗೆಂದರೆ. ಪಾತಕಭೀತಃ ಎಂದಿರುವದರಿಂದ ಉಪಾಸನಾದಿಗಳನುಷ್ಠಾನದಿಂದ ಪಾತಕವು ಪ್ರಾಪ್ತವಾಗುತ್ತದೆಂಬ ಭೀತನಾಗಿರುವವನಾಗಿ, ಅದರಿಂದಲೇ ವಿಮುಕ್ತಾನ್ಯಸಮಾರಂಭಃ - ಈ ಉಪಸನಾದಿ ಸಕಲ ಕಾರ್ಯ ಕಲಾಪಗಳಿಂದಲೂ ಬಿಡಲ್ಪಟ್ಟವನಾಗಿ, ನಾರಾಯಣ ಪರೋಭವ - ಶ್ರೀಮನ್ನಾರಾಯಣನನ್ನೇ ಪ್ರಾಪಕನನ್ನಾಗಿಯೂ ಪ್ರಾಪ್ಯನನ್ನಾಗಿಯೂ ಆಶ್ರಯಿಸು; ಎಂಬುದು. ಆದುದರಿಂದ ಉಪಾಸನೆಯೂ ಅಭಿಚಾರಾದಿಗಳಹಾಗೆ ಸ್ವರೂಪ ವಿರುದ್ಧವು ಎಂಬ ತಾತ್ಪರ್ಯವು. ಇದನ್ನು ನಾಲ್ಕು ವಿಧವಾಗಿ ವಿಕಲ್ಪಿಸಿ ಖಂಡಿಸುತ್ತಾರೆ:—

ಎಙ್ಗನೇ ಎನ್ನಿಲ್ :—(೧) ಅಭಿಚಾರಾದಿಗಳ್ ಫಲವಿಶೇಷ ಮಡಿಯಾಗವಿರೆ ಅನರ್ಥ ಹೇತುಕ್ಕಳಾಯಿಱ್ಱು; ಇಙ್ಗು ಫಲಂ ಮೋಕ್ಷಮಾನ ಪಡಿಯಾಲೇ ಅವ್ಮುಖತ್ತಾಲ್ ಅನರ್ಥ ಪ್ರಸಙ್ಗ ಮಿಲ್ಲೈ. (೨) ಏಕಾಧಿಕಾರಿ ವಿಷಯತ್ತಿಲೇ ಏಕಫಲತ್ತುಕ್ಕು ಗುರು ವಾಯಿರುಪ್ಪದೊನ್ಱು ಉಪಾಯಮಾಗ ಕ್ಕಾಟ್ಟಿಲಘುವಾಯಿರುಪ್ಪದೊನ್ರಿಲೇ ರುಚಿಯೈ

ಅಭಿಚಾರಾದಿಗಳ ಹಾಗೆ ಸ್ವರೂಪ ವಿರುದ್ಧವೆಂಬುದು, ಅಭಿಚಾರವು ಅನರ್ಥ ಫಲ ಸಾಧಕವಾಗಿರುವಹಾಗೆ ಈ ಉಪಾಸನವೂ ಅನರ್ಥಫಲವನ್ನು ಸಾಧಿಸುವದರಿಂದ ಸ್ವರೂಪವಿರುದ್ಧವೇ ? ೨. ಭಕ್ತಿ ವಿಧಿಯು ಪ್ರಪತ್ತಿಯಲ್ಲಿ ವಿಶ್ವಾಸ ಹುಟ್ಟಿಸುವದಕ್ಕಾಗಿ ಎಂದರೆ, ಭಕ್ತಿಮಾರ್ಗವು ಸಾಧನವೇ ಅಲ್ಲದೆ ವೃಥಾಯಾಸ ಜನಕವಾಗಿ ಸ್ವರೂಪವಿರುದ್ಧವೇ ? ೩ ಪ್ರಾಪ್ಯನಿಗೆ ಅನುರೂಪವಾದ ಉಪಾಯವಲ್ಲದಿರುವದರಿಂದ ಸ್ವರೂಪ ವಿರುದ್ಧವೇ ? ೪. ಶಾಸ್ತ್ರದಲ್ಲಿ ನಿಂದಿತವಾಗಿ ಸ್ವರೂಪ ವಿರುದ್ಧವೇ ? ಪ್ರಥಮತಃ ಮೊದಲನೆಯ ವಿಕಲ್ಪವನ್ನು ಖಂಡಿಸುತ್ತಾರೆ.

ಎಙ್ಗನೇ ಎನ್ನಿಲ್ - ಹೇಗೆಂದರೆ, **ಅಭಿಚಾರಾದಿಗಳ್** - ಶತ್ರುಕೊಲೆ ಮೊದಲಾದವುಗಳ, **ಅಡಿಯಾಗವಿರೆ** - ಮೂಲಕವಾಗಿ ತಾನೇ, **ಅನರ್ಥಹೇತುಕ್ಕಳಾಯಿಱ್ಱು** - ಅನರ್ಥಕ್ಕೆ ಕಾರಣವಾದುವಾಯಿತು, **ಇಙ್ಗ** - ಈ ಸಂದರ್ಭದಲ್ಲಾದರೋ, **ಮೋಕ್ಷಮಾನಪಡಿಯಾಲೆ**-ಮೋಕ್ಷವಾದುದರಿಂದ, **ಅವ್ಮುಖತ್ತಾಲ್** - ಆ ಮೂಲಕವಾಗಿ, ಅನರ್ಥ ಪ್ರಸಙ್ಗಕ್ಕೆ ಕಾರಣವಿಲ್ಲವು. ಅಭಿಚಾರಾದಿಗಳು ಕೊಲೆಯಾದ ದುಷ್ಟಫಲಗಳಿಗೆ ಹೇತುಗಳು, ಆದುದರಿಂದ ಸ್ವರೂಪ ವಿರುದ್ಧಗಳೆಂದು ಹೇಳಿಕೊಂಡರೂ ಹೇಳಬಹುದು. ಉಪಾಸನವು ಅನರ್ಥವನ್ನುಂಟುಮಾಡುವ ಫಲವನ್ನು ಕೊಡುವದಿಲ್ಲವು. ಮೋಕ್ಷಫಲದಾಯಕವೆಂದು ಪ್ರಮಾಣಪ್ರಸಿದ್ಧವು. ಹೀಗೆ ಅನರ್ಥಫಲವನ್ನು ಭಕ್ತ್ಯುಪಾಯವು ಕೊಡದೇ ಇರುವದರಿಂದ ಸ್ವರೂಪ ವಿರುದ್ಧವು ಹೇಗಾದೀತು ಎಂಬ ತಾತ್ಪರ್ಯವು.

೨. ಮುಂದೆ ಎರಡನೆಯ ವಿಕಲ್ಪವನ್ನು ದೂಷಿಸುತ್ತಾರೆ:—ಪ್ರಪತ್ತಿಯಲ್ಲಿ ಅಭಿರುಚಿಯನ್ನು ಹುಟ್ಟಿಸುವದಕ್ಕಾಗಿ ಏರ್ಪಟ್ಟ ಮಾರ್ಗವು ಅದು ಉಪಾಯವೇ ಅಲ್ಲವು, ವೃಥಾಯಾಸರೂಪವಾದುದು, ಆದುದರಿಂದ ಸ್ವರೂಪ ವಿರುದ್ಧವೆಂಬ ವಾದವನ್ನು ಖಂಡಿಸುತ್ತಾರೆ:—**ಏಕಾಧಿಕಾರಿ ವಿಷಯತ್ತಿಲೆ** - ಒಬ್ಬ ಅಧಿಕಾರಿಯ ವಿಷಯದಲ್ಲಿ, **ಏಕಫಲತ್ತುಕ್ಕು** - ಒಂದೇ ಫಲವಾದ ಮೋಕ್ಷಪ್ರಾಪ್ತಿಗೆ, **ಗುರುವಾಯಿರುಪ್ಪದೊನ್ಱು ಉಪಾಯಮಾಗಕ್ಕಾಟ್ಟಿ** - ಕಷ್ಟ

ಪ್ಪಿರಪ್ಪಿಕ್ಕಿರದೆನ್ಗ್ಗ ವಿವಕ್ಷಿತ ವಿಪರೀತಮ್. ಅಜ್ಗತ್ತಿಲೇ ಅಜ್ಗಿ ಫಲ ನಿರ್ದೇಶಮಾಯ್ ಸ್ತುತಿಮಾತ್ರ ಮಾಯಿರೇ ಅಪ್ಪೋದು ಫಲಿಪ್ಪದು ?

ತರವಾಗಿರುವದೊಂದನ್ನು ಉಪಾಯುವೆಂದು ತೋರಿಸಿ, **ಲಘುವಾಯಿರುಪ್ಪ ದೊನ್ರಿಲೇ** - ಸುಲಭವಾಗಿರುವ ಇನ್ನೊಂದು ಉಪಾಯದಲ್ಲಿ, **ರುಚಿಯೈ** - ವಿಶ್ವಾಸವನ್ನು, **ಪಿರಪ್ಪಿಕ್ಕಿರದು ಎನ್ಗೈ**-ಹುಟ್ಟಿಸುತ್ತದೆಂಬುದು, **ವಿವಕ್ಷಿತ ವಿಪರೀತಮ್** - ಪೂರ್ವಪಕ್ಷಿಯ ಅಭಿಪ್ರಾಯಕ್ಕೇನೆ ಪ್ರತ್ಯುತ ವಿರುದ್ಧವಾದುದನ್ನೇ ಉಪಪಾದಿಸುವಂತಾದ್ದಾಗುತ್ತದೆಂಬ ಭಾವವು. ಅದು ಹೇಗೆಂದರೆ:—ಪ್ರಪತ್ತಿ, ಭಕ್ತಿ ಉಪಾಯಗಳು ಪರಸ್ಪರ ಪ್ರತ್ಯೇಕವಾದನಂತರ, ಪ್ರಪತ್ತಿಯು ಲಘೂಪಾಯವಾಗಿ ಭಕ್ತಿಯು ಗುರೂಪಾಯವಾದರೆ ಲಘೂಪಾಯವನ್ನೇ ಮೋಕ್ಷಾಧಿಕಾರಿಯು ಸ್ವತಃ ಅವಲಂಬಿಸುವನು. ಗುರೂಪಾಯವನ್ನು ತೋರಿಸಿ ಲಘೂಪಾಯವನ್ನು ಅವಲಂಬಿಸುವದಕ್ಕಾಗಿ ಪ್ರಯೋಜನೆ ಏತಕ್ಕೆ? ಲಘೂಪಾಯಕ್ಕೂ ಗುರೂಪಾಯಕ್ಕೂ ಒಂದೇ ಫಲವಾದರೆ ಗುರೂಪಾಯದ ಮೂಲಕ ಪ್ರಯೋಜನೆಯು ಲಘೂಪಾಯಕ್ಕೆ ಬೇಕಾಗಿರುವದಿಲ್ಲವು. ಇನ್ನೂ ಹಾಗೆ ನೋಡಿದರೆ ಲಘೂಪಾಯವೂ ನಿಷ್ಕರ್ಷೆಯಿಲ್ಲದ ಉಪಾಯವಾಗಿದ್ದರೂ ಅದನ್ನು ಪ್ರದರ್ಶಿಸಿ, ತನ್ಮೂಲಕ ಪ್ರಯೋಜನದಿಂದ ಇನ್ನೂ ಗುರೂಪಾಯದಲ್ಲಿ ಪ್ರವೃತ್ತಿಯುನ್ನುಂಟು ಮಾಡಬಹುದೇ ವಿನಾ ಗುರೂಪಾಯಕ್ಕೆ ಎಂದಿಗೂ ಪ್ರಯೋಜನ ಭಾವವೂ ಕೂಡುವದೇ ಇಲ್ಲವೆಂಬ ಭಾವವು. ಆದುದರಿಂದ ಲಘೂಪಾಯವು ಗುರೂಪಾಯ ಪ್ರಯೋಜನಾರ್ಥವಾಗಿ ಪರಿಣಮಿಸಬಹುದೇ ವಿನಾ, ಪೂರ್ವಪಕ್ಷಿಗಳು ಹೇಳುವ ಹಾಗೆ ಗುರೂಪಾಯವು ಲಘೂಪಾಯ ಪ್ರಯೋಜನಾರ್ಥವಾಗಿ ಎಂದಿಗೂ ಆಗಲಾರದು. ಆ ಕಾರಣದಿಂದ **ವಿವಕ್ಷಿತವಿಪರೀತಂ** ಎಂದು ಪ್ರಯೋಗಿಸಿರುತ್ತಾರೆ. ಅದೂ ಅಲ್ಲದೆ ಅಭಿಚಾರಾದಿಗಳಲ್ಲಿ ದೃಷ್ಟಫಲವಿರುವದರಿಂದ ಶಾಸ್ತ್ರಪ್ರಯೋಜನವೆಂದರೆ ಶಾಸ್ತ್ರದಲ್ಲಿ ವಿಶ್ವಾಸವು ಉಂಟಾಗಬಹುದು. ಇಲ್ಲಿ ಪ್ರಪತ್ತಿಯಲ್ಲಿ ವಿಶ್ವಾಸ ಹುಟ್ಟುವದಕ್ಕೆ ಭಕ್ತಿಯಿಂದ ದೃಷ್ಟ ಫಲವೇನೂ ಇಲ್ಲವಲ್ಲಾ ಎಂಬುದೂ ತೋರಿಬರುತ್ತದೆ. ಇನ್ನೂ ವಿವಕ್ಷಿತ ವಿಪರೀತವು ಹೇಗೆ ಎಂಬುದನ್ನು ಇನ್ನೊಂದು ವಿಧವಾಗಿಯೂ **ಅಜ್ಗತ್ತಿಲೇ** ಎಂಬ ಮುಂದಿನ ವಾಕ್ಯದಿಂದಲೂ ಉಪಪಾದಿಸುತ್ತಾರೆ. **ಅಜ್ಗತ್ತಿಲೇ** - ಬ್ರಹ್ಮವಿದ್ಯೆಯ ಒಂದು ಅಜ್ಗದಲ್ಲಿ, **ಅಜ್ಗಿ ಫಲ ನಿರ್ದೇಶಮಾಯ್** - ಅಜ್ಗಿಯ ಫಲ ಹೇಳಲ್ಪಟ್ಟು ಆಗ **ಸ್ತುತಿಮಾತ್ರಮಾಯಿರೇ** - ಅಜ್ಗದ ಮಾಹಾತ್ಮ್ಯವನ್ನು ಹೇಳುವದಕ್ಕಾಗಿ ಮಾತ್ರವೇ ವಿನಾ

(೩) ಪ್ರಾಪ್ಯತ್ತುಕ್ಕಿನ್ನದು ಅನುರೂಪಮೆನ್ನುಮಿಡಮ್ ಶಾಸ್ತ್ರೈಕವೇದ್ಯ ಮಾರ್ಗೈಯಾಲೇ ಯುಕ್ತಿ ಮಾತ್ರತ್ತಾಲೇ ಪ್ರಾಪ್ಯ ವಿರೋಧಮ್ ಶೊಲ್ಲವೊಣ್ಣಾದು. ಆಗಮ ಸಿದ್ಧಙ್ಗಳಿಲೊನ್ರೈ ವಿರುದ್ಧ ತರ್ಕಙ್ಗಳಾಲೇ ಬಾಧಿಕ್ಕಿಲ್ ತುಲ್ಯ ನ್ಯಾಯತ್ತಾಲೇ ಸರ್ವಶಾಸ್ತ್ರಙ್ಗಳುಮ್ ಪ್ರಪತ್ತಿ ಶಾಸ್ತ್ರಮ್ ಪ್ರಮಾಣಮನ್ರಿಕ್ಕೇ ಯೊಳಿಯುಮ್.

ನಿಶ್ಚಯವಾಗಿಯೂ ಫಲದಾಯಕವಲ್ಲವೆಂಬುದಾಗಿ ಅಲ್ಲವೇ, ಅಪ್ಪೋದು ಫಲಿಪ್ಪದು - ಆಗಲೂ ಸಂಭವಿಸುವನು? ಇದರರ್ಥವೇನೆಂದರೆ ಭಕ್ತಿಮಾರ್ಗದಲ್ಲಿ ಪ್ರಪತ್ತಿಯು ಅಙ್ಗವು, ಉಪಾಸನವು ಅಙ್ಗಿಯು; ಸಾಧಾರಣವಾಗಿ ಬ್ರಹ್ಮವಿದ್ಯೆಗಳಲ್ಲಿ ಅಙ್ಗದ ಪ್ರಾಧಾನ್ಯವನ್ನು ಸೂಚಿಸುವದಕ್ಕಾಗಿ ಅಙ್ಗಿಗೆ ಯಾವ ಫಲವೋ, ಆ ಫಲವೇ ಅಙ್ಗಕ್ಕೂ ಹೇಳಿರುವದುಂಟು. ಇದರಿಂದ ಅಙ್ಗಿಯ ಫಲವನ್ನೇ ಅಙ್ಗವೂ ಸಾಧಿಸಿಕೊಡುತ್ತದೆಂಬಭಿಪ್ರಾಯವಲ್ಲವು. ಆ ಅಙ್ಗದ ಪ್ರಾಧಾನ್ಯರೂಪ ಸ್ತುತಿಯೆಂದು ಭಾವಿಸತಕ್ಕದ್ದು. ಹಾಗಲ್ಲದೆ ಆ ಅಙ್ಗವೂ ಅಙ್ಗಿ ಫಲವನ್ನೇ ಕೊಡುವದಾದರೆ ಅಙ್ಗಿಯನ್ನು ಯಾರೂ ಅವಲಂಬಿಸದೆ ಆ ಶಾಸ್ತ್ರದ ನೈರರ್ಥಕ್ಯವು ಪ್ರಾಪ್ತವಾಗುತ್ತದೆ. ಹಾಗೆಯೇ ಪ್ರಪತ್ತಿಯು ಅಙ್ಗವಾಗಿ, ಉಪಾಸನೆಯು ಅಙ್ಗಿಯಾಗಿ ಇರುವದರಿಂದ ಎರಡಕ್ಕೂ ಮೋಕ್ಷಪ್ರಾಪಕತ್ವವೆಂದು ಹೇಳಿದರೆ, ಮೇಲಿನ ನ್ಯಾಯದ ಪ್ರಕಾರ ಅಙ್ಗವಾದ ಪ್ರಪತ್ತಿಗೆ ಸ್ತುತಿರೂಪವಾದ ಪ್ರರೋಚನವೂ, ಭಕ್ತಿಯೇ ಮೋಕ್ಷದಾಯಕವೆಂಬುದೂ ಏರ್ಪಡುವದರಿಂದ ಪ್ರತಿಪಕ್ಷಿಯ ವಿವಕ್ಷಿತಕ್ಕೆ ವಿಪರೀತವೆಂಬ ಭಾವವು ಆ ಮುಮುಕ್ಷುರ್ವೈ ಶರಣ ಮಹಂ ಪ್ರಪದ್ಯೇ ಇತ್ಯಾದಿಗಳು ಅಙ್ಗಸ್ತುತಿಪರಾ ಅರ್ಥವಾದವಾಗಿ ಏರ್ಪಡುವದರಿಂದ ಪ್ರಪತ್ತಿಗೆ ಅನುಪಾಯತ್ವವು ಏರ್ಪಡುತ್ತದೆಂಬ ತಾತ್ಪರ್ಯವು

೩. ಮುಂದೆ ಮೂರನೆಯ ವಿಕಲ್ಪವಾದ ಪ್ರಾಪ್ಯಕ್ಕೆ ಅನುರೂಪವಾದುದು ಭಕ್ತ್ಯುಪಾಯವು ಅಲ್ಲವು. ಆದುದರಿಂದ ಅದು ಸ್ವರೂಪ ವಿರುದ್ಧವೆಂಬ ಪಕ್ಷವನ್ನು ಖಂಡಿಸುತ್ತಾರೆ. **ಪ್ರಾಪ್ಯತ್ತುಕ್ಕು**-ಪರಮೇಶ್ವರನನ್ನು ಹೊಂದುವದಕ್ಕೆ, **ಇನ್ನದು ಅನುರೂಪಮೆನ್ನುಮಿಡಮ್** - ಇದೀಗ ಅನುರೂಪವಾದ ಉಪಾಯವು ಎಂದು ತಿಳಿಯುವ ಸಂದರ್ಭವು. **ಶಾಸ್ತ್ರವೇದ್ಯಮಾರ್ಗೈಯಾಲೇ** - ಶಾಸ್ತ್ರದಿಂದಲೇ ತಿಳಿಯತಕ್ಕದಾದುದರಿಂದ, **ಯುಕ್ತಿಮಾತ್ರತ್ತಾಲೇ** - ಬರೀ ಯುಕ್ತಿ ನ್ಯಾಯದಿಂದ, **ಪ್ರಾಪ್ಯವಿರೋಧನೆಂದು**, **ಶೊಲ್ಲವೊಣ್ಣಾದು** - ಹೇಳಲಾಗುವದಿಲ್ಲವು. **ಆಗಮ ಸಿದ್ಧಙ್ಗಳಿಲ್** - ಶ್ರುತಿಯಲ್ಲಿ ವಿಧಿಸಿರುವದರಲ್ಲಿ, **ಒನ್ರೈ** - ಒಂದನ್ನು.

ವಿರುದ್ಧವಾದ ತರ್ಕಗಳಿಂದ ಬಾಧಿಸಿದರೆ, ತುಲ್ಯನ್ಯಾಯತ್ವಾತ್ತಲೇ - ಅದಕ್ಕೆ ಸಮಾನವಾದ ವಾದಗಳಿಂದಲೇ, ಸರ್ವ ಶಾಸ್ತ್ರಗಳೂ ಹಾಗೆಯೇ ಪ್ರಪತ್ತಿಶಾಸ್ತ್ರವೂ ಕೂಡ, ಪ್ರಮಾಣಮನ್ರಿಕ್ಕೇ - ಪ್ರಮಾಣವಲ್ಲದೇನೇ ಒಳಿಯುಮಾಮ್-ಹೋಗ ಬಹುದು. ಒಂದು ಉಪಾಯವು ಅನುರೂಪವೇ ಅಲ್ಲವೇ ಎಂದು ನಿರ್ಧರಿಸುವ ಸಂದರ್ಭದಲ್ಲಿ ಶಾಸ್ತ್ರವೇ ಪ್ರಮಾಣವು. ಬರೀ ವಾದದಿಂದ, "ತರ್ಕಾऽಪ್ರತಿಷ್ಠಾನಾದಪಿ ಎಂಬ ಬ್ರಹ್ಮಸೂತ್ರದಲ್ಲಿ ಹೇಳಿರುವಹಾಗೆ, ಉಪಯೋಗವಿಲ್ಲವು, ಶಾಸ್ತ್ರವೇ ಪ್ರಮಾಣವು. ಹೀಗಿರುವಾಗ ಭಕ್ತ್ಯುಪಾಯವು ಪ್ರಾಪ್ಯಕ್ಕೆ ಅನುರೂಪವಾದುದಲ್ಲವು ಎಂಬ ವಾದವು ಸರಿಯಾದುದಲ್ಲವು, ಶಾಸ್ತ್ರವು ಭಕ್ತ್ಯುಪಾಯವನ್ನು "ತಮೇವಂ ವಿದ್ವಾನಮೃತ ಇಹ ಭವತಿ, ನಾನ್ಯಃಪಂಥಾ ವಿದ್ಯತೇ ಅಯನಾಯ" ಎಂಬುದರಿಂದ ಅನುರೂಪವಾದ ಉಪಾಯವೆಂದೇ ಹೇಳುತ್ತಿರುವಾಗ, ವಾದದಿಂದ ಪ್ರಮಾಣವನ್ನು ದೂರೀಕೃತ ಮಾಡಿದರೆ ಹಾಗೆಯೇ ಎಲ್ಲಾ ಸಂದರ್ಭಗಳಲ್ಲೂ ಶಾಸ್ತ್ರ ಪ್ರಮಾಣಗಳನ್ನು ಯುಕ್ತಿಯಿಂದ ಬಾಧಿಸಿ ಬಿಡಬಹುದು. ಪ್ರಾಪ್ಯನೂ ಪ್ರಾಪಕನೂ ಸರ್ವೇಶ್ವರನೇ ಆಗಿರುವಾಗ ಅನುರೂಪವಲ್ಲದ ಭಕ್ತ್ಯುಪಾಯವೆಂಬ ಸಾಧ್ಯೋಪಾಯ ಬೇರೆ ಏತಕ್ಕೆ ? ಅನಾವಶ್ಯಕವಲ್ಲವೋ ? ಇತ್ಯಾದಿ ವಾದಗಳ ಮೂಲಕ ಶಾಸ್ತ್ರಪ್ರಮಾಣದಿಂದ ವಿಹಿತವಾದ ಈ ಸಾಧ್ಯೋಪಾಯವನ್ನು ಬಾಧಿಸಿದರೆ, ಪ್ರಪತ್ತಿಯ ವಿಷಯದಲ್ಲೂ ಕೂಡ ಆ ವಾದವನ್ನೇ ತಂದು ಅದನ್ನೂ ಕೂಡ ಬಾಧಿಸಿ ಬಿಡಬಹುದು ಎಂಬ ಭಾವವು. ಪ್ರಪತ್ತಿಯು ಮಾತ್ರ ಅನುರೂಪವು ಭಕ್ತ್ಯುಪಾಯವಲ್ಲವು ಎಂಬುದಕ್ಕೆ ತಾನೇ ಪ್ರಮಾಣವೆಲ್ಲಿರುತ್ತದೆ? ಹಾಗೆ ಲಘೂಪಾಯವಾದ ಪ್ರಪತ್ತಿಯೇ ಅನುರೂಪವಾದರೆ, ಭಕ್ತ್ಯುಪಾಯವೂ ಗುರೂಪಾಯವಾಗಿ ಕೈಮುತಿಕ ನ್ಯಾಯದಿಂದ ಅನುರೂಪವಾದುದೇ ಎಂದು ಹೇಳಬಹುದು. ಆದುದರಿಂದ ಈ ಕಾರಣದಿಂದಲೂ ಸ್ವರೂಪ ವಿರೋಧವೆಂದು ವಾದಿಸಲು ಸಾಧ್ಯವಲ್ಲವೆಂಬ ತಾತ್ಪರ್ಯವು.

೪ ನಾಲ್ಕನೆಯ ವಿಕಲ್ಪವಾದ ಶಾಸ್ತ್ರನಿಂದಿತವೆಂಬುದನ್ನು ಖಂಡಿಸುತ್ತಾರೆ. ಶಾಸ್ತ್ರಗಳಲ್ಲಿ ಭಕ್ತಿಮಾರ್ಗವು ವಿಧೇಯವಾಗಿದೆಯೇ ವಿನಾ, ನಿಂದಿತವಾಗಿಲ್ಲವು. ಬ್ರಹ್ಮವಿದ್ಯೆಗಳಲ್ಲೆಲ್ಲಾ ಉಪಾಸನವೇ ಸರ್ವೇಶ್ವರನನ್ನು ಹೊಂದುವ ನಿಶ್ಚಯ ಉಪಾಯವೆಂದು ಉಪನಿಷತ್ತುಗಳು ಉದ್ಘೋಷಿಸುತ್ತವೆ. ಸ್ವರೂಪ ವಿರುದ್ಧವಾದವುಗಳನ್ನು ಉಪನಿಷತ್ತುಗಳು ಪ್ರತಿಪಾದಿಸುತ್ತವೆಯೆ ? ಅವುಗಳಹಾಗೆ ಸ್ವರೂಪ ವಿರುದ್ಧಗಳಾದರೆ ಅವುಗಳ ಸರಿಯಾದ ಅರ್ಥಗ್ರಹಣಕ್ಕಾಗಿ, ಶ್ರೀ ಬಾದರಾಯಣರು ಸೂತ್ರಗಳನ್ನು ಅನುಗ್ರಹಿಸುತ್ತಿದ್ದರೇ ? ಹಾಗೆ ನಿರರ್ಥಕ ವಿಷಯಗಳಾದರೆ, ನಮ್ಮ ಸಿದ್ಧಾಂತಸ್ಥಾಪಕರು ಆ ಸೂತ್ರಾರ್ಥಗಳ ನಿರ್ಣಯಕ್ಕಾಗಿ ಶ್ರೀ

೪. "ಅಥ ಪಾತಕ ಭೀತಸ್ತ್ವಮ್" ಎಙ್ಗಿರ ವಿಡತ್ತಿಲುಮ್, "ಪಾತಕ" ಶಬ್ದತ್ತಾಲೆ ಉಪಾಸನಾದಿಗಳೈ ನಿಂದಿಕ್ಕಿರದೆನ್ಗೈಕ್ಕುಮ್

ಭಾಷ್ಯವನ್ನನುಗ್ರಹಿಸುವರೇ ? ಸ್ವರೂಪವಿರುದ್ಧವಾದಪಕ್ಷದಲ್ಲಿ ಕಪಿಲಮೂರ್ತಿಯು ತನ್ನ ತಾಯಿಯಾದ ದೇವಹೂತಿಗೆ ಉಪದೇಶಿಸುತ್ತಿದ್ದರೇ? ಶ್ರೀಕೃಷ್ಣಭಗವಾ ರವರು ಅರ್ಜುನನಿಗೆ ಅದನ್ನೇ ಬೋಧಿಸುತ್ತಿದ್ದರೇ ? ಶ್ರೀ ಭೀಷ್ಮರು ಯುಧಿಷ್ಠಿರ ನಿಗೆ ಅದನ್ನೇ ಉಪದೇಶಿಸುತ್ತಿದ್ದರೇ? ಆದುದರಿಂದ ಶಾಸ್ತ್ರವು ಭಕ್ತಿಮಾರ್ಗವನ್ನು ಉಪಾಯವೆಂದು ವಿಧಿಸಿದಿಯೋವಿನಾ ನಿಂದಿಸಲಿಲ್ಲವು. **ಅಥಪಾತಕ ಭೀತಸ್ತ್ವಮ್** ಎಂಬ ಶ್ಲೋಕದಲ್ಲಿ ನಿಂದಿಸಿದೆಯಲ್ಲಾ ಎಂದರೆ ಅಲ್ಲಿ ಉಪಾಸನೆಯು ನಿಂದಿತವಲ್ಲವು; ಅದರ ಸರಿಯಾದರ್ಥವನ್ನು ನೀವುಗಳು ಗ್ರಹಿಸಿಲ್ಲವೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. **ಅಥ ಪಾತಕ ಭೀತಸ್ತ್ವಮ್, ಎಙ್ಗಿರ ವಿಡತ್ತಿಲುಮ್** ಎಂದು ಹೇಳಿರುವ ಸಂದರ್ಭದಲ್ಲೂ, ಪಾತಕ ಶಬ್ದದಿಂದು ಉಪಾಸನಾದಿಗಳನ್ನು ಶಾಸ್ತ್ರವು, **ನಿಂದಿಕ್ಕಿರದೆನ್ಗೈಕ್ಕುಮ್** - ನಿಂದಿಸುತ್ತ ದೆಂಬುದಕ್ಕೂ, **ಪ್ರಮಾಣಮಿಲ್ಲೈ** - ಪ್ರಮಾಣವಿಲ್ಲವು. ಹಾಗಾದರೆ ಈ ವಿಷ್ಣು ಧರ್ಮಶ್ಲೋಕಾಭಿಪ್ರಾಯವೇನೆಂದರೆ:—**"ಧ್ಯಾಯಿನಾತ" "ನಿದಿಧ್ಯಾಸಿತವ್ಯಃ", "ತಜ್ಜಲಾನ್ ಇತಿ ಶಾಂತ ಉಪಾಸೀತ" "ಧ್ಯೇಯೋ ನಾರಾಯಣ ಸ್ಸದಾ" "ಹರಿರೇಕ ಸ್ಸದಾಧ್ಯೇಯಃ" "ಸ್ಮರ್ತವ್ಯ ಸ್ಸತತಂ ವಿಷ್ಣುಃ" "ಮನ್ಮನಾಭವ ಮದ್ಭಕ್ತೋ" "ಏನಿಷ್ಪನ್ನ ಸಮಾಧಿಸ್ತು ಮುಕ್ತಿಂ ತತ್ರೈವ ಜನ್ಮನಿ। ಪ್ರಾಪ್ನೋತಿ ಯೋಗೀ ಯೋಗಾಗ್ನಿ ದಗ್ಧಕರ್ಮಚಯೋಽಚಿರಾತ್",** ॥ (ವಿ. ಪು. ೬. ೭. ೩೫), ಇವೇ ಮೊದಲಾದ ಪ್ರಮಾಣಗಳಿಂದ ಭಕ್ತ್ಯುಪಾಯವು ಭಗವಂತನಿಗೆ ಪರಮಪ್ರಿಯವಾದ ಉಪಾಯವೆಂದು ಶ್ರುತಿ ಸ್ಮೃತಿ ಪುರಾಣೇತಿ ಹಾಸಗಳೆಲ್ಲಾ ಉದ್ಘೋಷಿಸುತ್ತವೆ. ಇಂತಹ ಉಪಾಯವನ್ನು ಧರ್ಮದೇವ ತೆಯು ತನ್ನ ಪುತ್ರನಾದ ಯುಧಿಷ್ಠಿರನಿಗೆ ನಿಂದಿಸಿ ಪಾತಕಕ್ಕೆ ಸಮಾನವೆಂದು ಹೇಳುವ ವಾದವು ಶುದ್ಧ ಅನ್ವೈದಿಕವಾದುವೆಂದು ಭಾವಿಸತಕ್ಕದ್ದು. ಹಾಗಾದರೆ ಆಶ್ಲೋಕಾರ್ಥವೇನು ಎಂದರೆ. "ಹಾಗಾದರೆ, **ತ್ವಂ** - ನೀನು, **ಪಾತಕ ಭೀತಸ್ಚೇತ್** - ಅನಾದಿ ಕಾಲದಿಂದ ಸಂಚಿತ ಪಾಪಗಳ ಆನಂತ್ಯದಿಂದ ಭಕ್ತ್ಯುಪಾಯವು ಕೊನೆಗಾಣಿಸುತ್ತದೋ ಇಲ್ಲವೋ ಎಂದು ಭಯಪಟ್ಟವನಾದರೆ, ವಿಮುಕ್ತ್ಯನ್ಯ **ಸಮಾರಂಭಃ** - ಅಂತಹ ಪಾತಕಗಳನ್ನು ಹೋಗಲಾಡಿಸುವ ಶಕ್ತಿಯುಳ್ಳ ಆದರೆ ಬಹು ಕಷ್ಟಸಾಧ್ಯವಾದ ಕೃಚ್ಛ್ರ, ಚಾಂದ್ರಾಯಣ, ಕೂಶ್ಮಾಂಡ, ವೈಶ್ವಾ

ಪ್ರಮಾಣಮಿಲ್ಲೈ. ಆಗೈಯಾಲ್ ಮುಮುಕ್ಷುವುಕ್ಕು ವಿಹಿತಙ್ಗಳಾಗೈಯಾಲೇ ಭಕ್ತಿಪ್ರಪತ್ತಿಗಳಿರಣ್ಡುಮ್ ಯಥಾಧಿಕಾರಂ ಪರಿಗ್ರಾಹ್ಯಙ್ಗಳ್.

ನರ, ವ್ರಾತಪತಿ, ಪವಿತ್ರೇಷ್ಟಿ, ತ್ರಿವೃದಗ್ನಿಷ್ಟೋಮ ಮೊದಲಾದ ಇತರ ಕರ್ಮಸಮಾರಂಭಗಳನ್ನೆಲ್ಲಾ ತ್ಯಜಿಸಿದವನಾಗಿ, ಸರ್ವಭಾವೇನ "ಪಿತಾತ್ವಂ" ಇತ್ಯಾದಿಗಳಲ್ಲಿ ಹೇಳಿರುವ ಸಮಸ್ತ ಭಾವದಿಂದಲೂ, ನಾರಾಯಣ ಪರೋಭವ- ಶ್ರೀಮನ್ನಾರಾಯಣನಲ್ಲಿ ಶರಣಾಗತಿಯನ್ನು ಮಾಡು" ಎಂಬುದೀಗ ಸಮಂಜಸವಾದ ಶ್ಲೋಕಾರ್ಥವು. ಆದುದರಿಂದ ಭಕ್ತ್ಯುಪಾಯವು ನಿಂದಿತವು ಎಂಬುದಕ್ಕೆ ಪೂರ್ವಪಕ್ಷಿಗಳಾದ ನಿಮಗೆ ಪ್ರಮಾಣವೇ ಇಲ್ಲವೆಂದು ಹೇಳುತ್ತಾರೆ

ಹೀಗೆ ಸರ್ವಾಕ್ಷೇಪಗಳಿಗೂ ಸಮಂಜಸಗಳಾದ ಪ್ರಮಾಣ ಪೂರ್ವಕ ಸಮಾಧಾನಗಳನ್ನು ಹೇಳಿ, ತಾವು ಸ್ಥಾಪಿಸಿದ ವಸ್ತು ನಿಗಮನಮಾಡಿ ಹೇಳುತ್ತಾರೆ. **ಆಗೈಯಾಲ್** - ಇಷ್ಟುದೂರ ನಾವು ಆಕ್ಷೇಪಗಳಿಗೆಲ್ಲಾ ಸಮಾಧಾನ ಹೇಳಿರುವದರಿಂದ, **ಮುಮುಕ್ಷುವುಕ್ಕು** - ಮೋಕ್ಷಾರ್ಥಿಗೆ. **ವಿಹಿತಙ್ಗಳಾಗೈಯಾಲೇ** - ಶಾಸ್ತ್ರಗಳಲ್ಲಿ ವಿಧಿಸಿರುವದರಿಂದ, ಇದು ಉಪಾಯ ವಿಭಾಗಾಧಿಕಾರದಲ್ಲಿ ವಿಸ್ತರವಾಗಿ ಉಪಪಾದಿಸಲ್ಪಟ್ಟಿರುತ್ತದೆ, **ಭಕ್ತಿ ಪ್ರಪತ್ತಿಗಳೆರಡು ಯಥಾಧಿಕಾರಂ**- ಶಕ್ತನಿಗೆ ಭಕ್ತ್ಯುಪಾಯವೂ, ಅಶಕ್ತನಿಗೆ ಪ್ರಪತ್ತಿಯೂ ಎಂದು ಅಧಿಕಾರಿ ವಿಭಾಗಾಧಿಕಾರದಲ್ಲಿ ಹೇಳಿರುವಹಾಗೆ, **ಪರಿಗ್ರಾಹ್ಯಙ್ಗಳ್** - ಉಪಾದೇಯಗಳು. ಎರಡರಲ್ಲಿ ಯಾವುದಾದರೂ ಒಂದನ್ನು ತನ್ನ ಶಕ್ತ್ಯನುಸಾರ ಅವಲಂಬಿಸಬಹುದೆಂಬ ಭಾವವು. "ವಿಕಲ್ಪೋಽವಿಶಿಷ್ಟಫಲತ್ವಾತ್" ಎಂಬ ಸೂತ್ರಾನುಸಾರ ಶಾಸ್ತ್ರಗಳಲ್ಲಿ ಎರಡರಲ್ಲಿ ಯಾವುದಾದರೂ ಒಂದು ಆಗಬಹುದೆಂದು ವಿಧಿಸಿರುವದರಿಂದ ಎರಡಕ್ಕೂ ಫಲ ಒಂದೇ ಎಂಬಂಶವೂ ಕೂಡ ಈ ವಾಕ್ಯದಲ್ಲಿ ಮುಮುಕ್ಷುವುಕ್ಕು - ಮೋಕ್ಷಾರ್ಥಿಗೆ ಎಂಬ ಪ್ರಯೋಗದಿಂದ ಸೂಚಿತವು.

ಮುಂದೆ ಪೂರ್ವಪಕ್ಷಿಯು ಇನ್ನೊಂದಾಕ್ಷೇಪವನ್ನು ತರಬಹುದೆಂದು ಅನುವದಿಸಿ ಅದಕ್ಕೆ ಸಮಾಧಾನ ಹೇಳುತ್ತಾರೆ.

ಭಕ್ತಿಯೋಗವು ಶಿಷ್ಟಪರಿಗ್ರಹವಲ್ಲದುದರಿಂದ ಸ್ವರೂಪ ವಿರುದ್ಧವೆಂಬ ವಾದದ ನಿರಸನವು.

---

೯. ಹಿಂದೆ ಭಕ್ತಿ ಪ್ರಪತ್ತಿಗಳೆರಡೂ ಶಾಸ್ತ್ರಗಳಲ್ಲಿ ವಿಧಿಸಲ್ಪಟ್ಟ ಸಾಧ್ಯೋಪಾಯಗಳೆಂದು ಸ್ಥಾಪಿಸಿದುದನ್ನು ಅಙ್ಗೀಕರಿಸಿ, ಪೂರ್ವಪಕ್ಷಿಯು ಪುನಃ ಬೇರೆ

೯. ಭಕ್ತೇಃ ಶಿಷ್ಟಪರಿಗ್ರಹಾಭಾವಾತ್ ಸ್ವರೂಪ ವಿರೋಧ ಇತಿವಾದಸ್ಯ ನಿರಾಸಃ

ವಿಹಿತಙ್ಗಳೇ ಯಾಗಿಲುಮ್ ಆಚಾರ್ಯರುಚಿ ಪರಿಗೃಹೀತಙ್ಗಳೇ ಆಚಾರ್ಯರುಚಿ ಪರಿಗೃಹೀತಙ್ಗಳಲ್ಲಾದಪಡಿಯಾಲೇ ಅತಿಥಿ ಸತ್ಕಾರಙ್ಗಳಿಲ್ ವಿಹಿತಙ್ಗಳಾನ ಗವಾಲಂಭನಾದಿಗಳ್ ಪೋಲೆ, ಉಪಾಸನಾದಿಗಳ್ ಶಿಷ್ಟ ಪರಿಗ್ರಹ ವಿರುದ್ಧಙ್ಗಳಾಗೈಯಾಲೇ ಅನಾದರಣೀಯಙ್ಗಳನ್ರೋ? ಎಙ್ಗಿ ಯುಮ್ ನಿರೂಪಕ ವಾಕ್ಯಮುಮ್. ಸರ್ವಾಚಾರ್ಯರ್ ಪರಿಗ್ರಹ ವಿಲ್ಲಾದ ಪೋದನ್ರೋ. (೧) "ಅಸ್ವರ್ಗ್ಯಂ ಲೋಕವಿದ್ವಿಷ್ಟಂ ಧರ್ಮಮಪ್ಯಾಚರೇನ್ನತು"

ಆಕ್ಷೇಪವನ್ನು ಉಪಪಾದಿಸಿ ಹೇಳುತ್ತಾರೇನೆಂದರೆ—ವಿಹಿತಙ್ಗಳೇಯಾಗಿಲುಮ್ - ಶಾಸ್ತ್ರದಲ್ಲಿ ಭಕ್ತ್ಯುಪಾಯವು ಮೋಕ್ಷದಾಯಕವೆಂದು ವಿಧಿಸಿದ್ದರೂ ಆಚಾರ್ಯರುಚಿ ಪರಿಗೃಹೀತಙ್ಗಳಲ್ಲಾದಪಡಿಯಾಲೆ - ಪೂರ್ವಾಚಾರ್ಯರುಗಳ ಅಭಿಮತಾನುಸಾರವಾಗಿ ಉಪಾದೇಯಗಳಲ್ಲವುದರಿಂದ, ಅತಿಥಿ ಸತ್ಕಾರಗಳಲ್ಲಿ, ವಿಹಿತಙ್ಗಳಾನ ಶಾಸ್ತ್ರಗಳಲ್ಲಿ ಹೇಳಲ್ಪಟ್ಟ, ಗವಾಲಂಭನಾದಿಗಳ್ ಪೋಲೇ - ಆಡಿನ ಮಾಂಸವನ್ನು ಸಮರ್ಪಿಸುವದಕ್ಕಾಗಿ ಪಶುವಾದ ಆಡನ್ನು ಛೇದಿಸುವದೇ ಮೊದಲಾದವುಗಳಹಾಗೆ, ಉಪಾಸನವೇ ಮೊದಲಾದವುಗಳು, ಶಿಷ್ಟ ಪರಿಗ್ರಹಕ್ಕೆ ವಿರುದ್ಧಗಳಾದುದರಿಂದ, ಅನಾದರಣೀಯಙ್ಗಳನ್ರೋ - ಅನುಪಾದೇಯಗಳಲ್ಲವೋ? ಎಙ್ಗಿಯುಮ್ - ಎಂದು ಹೇಳುವ ಆಕ್ಷೇಪವೂ ಕೂಡ, ನಿರೂಪಕ ವಾಕ್ಯವನ್ನು - ಜ್ಞಾನಿಗಳಾದ ಪಂಡಿತರು ಹೇಳತಕ್ಕ ಮಾತಲ್ಲವು, ಪ್ರಮಾಣವೆಂದು ಅಙ್ಗೀಕರಿಸತಕ್ಕ ಮಾತಲ್ಲವು. ಉಪಾಸನವು ನಾಥಮುನಿ ಮೊದಲಾದವರುಗಳ ಕಾಲಕ್ಕೆ ಮುಂಚೆ ಬಹಳವಾಗಿ ಆಚರಣೆಯಲ್ಲಿತ್ತು; ಹೀಗೆ ಹೇಳಿದುದರಿಂದ ಪ್ರಪದನವು ಆಗ ಇರಲಿಲ್ಲವೆಂಬ ಭಾವವಲ್ಲವು. ವಾಲ್ಮೀಕಿಮಹರ್ಷಿಯೇ ನಾನಾ ವಿಧವಾದ ಪ್ರಪದನಗಳನ್ನುಪಪಾದಿಸಿ ಗ್ರಂಥವನ್ನು ಬರೆದಿರುತ್ತಾರೆ. ಉಪಾಸನಾರೂಪ ಉಪಾಯಾನುಷ್ಠಾನವೂ ಹೆಚ್ಚಾಗಿಯೇ ಇತ್ತೆಂಬ ಭಾವವು. ಈಚೆಗೆ ಉಪಾಸನೆಯು ನಮ್ಮ ಆಚಾರ್ಯವರ್ಗದಲ್ಲಿ ಇಲ್ಲದುದರಿಂದ ಈ ಆಕ್ಷೇಪವನ್ನು ತಂದು ಸ್ವರೂಪ ವಿರುದ್ಧವೆಂದು ಪೂರ್ವಪಕ್ಷಿಗಳು ಹೇಳಿರುತ್ತಾರೆ. ಅದಕ್ಕೆ ಒಂದು ನಿದರ್ಶನವನ್ನು ಹೇಳಿ ಪೂರ್ವಪಕ್ಷಿಗಳು ದೂಷಿಸುತ್ತಾರೆ. ಅತಿಥಿ ಸತ್ಕಾರದಲ್ಲಿ ಆಡನ್ನು ಛೇದಿಸಿ ಆಡಿನಮಾಂಸವನ್ನು ಬಡಿಸತಕ್ಕದ್ದೆಂದು

---

(೧) ಯಾಜ್ಞ. ಸ್ಮೃ. ೧. ೧೫೬.

ಎನ್ರು ಕಳಿಕ್ಕಲಾನದು ಇಜ್ಯ (೨) "ತಸ್ಮೈ ನಮೋ ಮುನಿವರಾಯ ಪರಾಶರಾಯ" ಎನ್ನುಮ್ಪಡಿ ಶ್ಲಾಘ್ಯರಾನ ಶ್ರೀ ಪರಾಶರಾದಿ ಪೂರ್ವಾಚಾರ್ಯರ್ಗಳ್ ಅನುಷ್ಠಿಕ್ಕೈಯಾಲ್ ಸರ್ವಶಿಷ್ಟ ಬಹಿಷ್ಕಾರಮ್ ಶೊಲ್ಲವೊಣ್ಣಾದು.

ಶಾಸ್ತ್ರದಲ್ಲಿ ಹೇಳಿರುತ್ತದೆ. ಅದನ್ನು ಛೇದಿಸುವದು ಶಾಸ್ತ್ರವಿಹಿತವಾಗಿದ್ದರೂ ಹೇಗೆ ಸ್ವರೂಪವಿರುದ್ಧವೋ! ಹಾಗೆಯೇ ಉಪಾಸನ ಎಂಬುದು ಅವರ ತಾತ್ಪರ್ಯವು ಈ ಗವಾಲಂಬನವು ಸರಿಯಲ್ಲವೆಂದು ಯಾಜ್ಞವಲ್ಕ್ಯಸ್ಮೃತಿಯಲ್ಲಿ **"ಅಸ್ವರ್ಗ್ಯಂ ಲೋಕ ವಿದ್ವಿಷ್ಟಂ"** ಎಂಬ ಶ್ಲೋಕದಲ್ಲಿ ದೂಷಿಸಲ್ಪಟ್ಟಿರುತ್ತದೆ ಏಕೆಂದರೆ ಈ ಪಶ್ವಾಲಂಬನವು ಯುಗಾಂತರಗಳಲ್ಲಿ ಅನುಷ್ಠೇಯವು. ಕಲಿಯುಗದಲ್ಲಿ ಬ್ರಾಹ್ಮಣಾತಿಥಿ ಸತ್ಕಾರದಲ್ಲಿ ನಿಂದಿತವು. ಈ ನಿದರ್ಶನವನ್ನು ಮನಸ್ಸಿನಲ್ಲಿಟ್ಟು ಭಕ್ತಿಮಾರ್ಗವನ್ನು ನಿಂದಿಸುವದು ಉಚಿತವಲ್ಲವೆಂದು ತೋರಿಸುತ್ತಾರೆ ಸರ್ವಾಚಾರ್ಯರೂ ಈ ಭಕ್ತಿಮಾರ್ಗವನ್ನವಲಂಬಿಸದಿದ್ದರೀಗ ಅದು ತ್ಯಾಜ್ಯವೇ ಸರಿ; ಹಾಗಿಲ್ಲವಲ್ಲಾ, ಅನೇಕ ಮಹನೀಯರು ಆ ಮಾರ್ಗವನ್ನು ಅವಲಂಬಿಸಿರುತ್ತಾರಲ್ಲಾ ಎಂದು ಹೇಳುತ್ತಾರೆ, **ಸರ್ವಾಚಾರ್ಯ ಪರಿಗ್ರಹ ಮಿಲ್ಲಾದ ಪೋದನ್ನೋ** - ಸಮಸ್ತ ಆಚಾರ್ಯರೂ ಅವಲಂಬಿಸದೇ ಹೋದದ್ದಲ್ಲವೋ?, **"ಅಸ್ವರ್ಗ್ಯಂ** - ಸ್ವರ್ಗಭೋಗವನ್ನು ಕೊಡದೇ ಇರುವಂಥಾದ್ದಾಗಿಯೂ, **ಲೋಕವಿದ್ವಿಷ್ಟಂ** - ಲೋಕದ ಜನರಿಂದ ನಿಂದಿಸಲ್ಪಟ್ಟಂತಾದ್ದಾಗಿಯೂ, **ಧರ್ಮಮಪಿ** - ಇರುವ ಶಾಸ್ತ್ರವಿಹಿತವಾದ ಕರ್ಮವಾಗಿದ್ದರೂಕೂಡ, **ನಾಚರೇತ್** - ಆಚರಿಸತಕ್ಕದ್ದಲ್ಲವು," **ಎನ್ರು** - ಎಂದು ಹೇಳಿ, **ಕಳಿಕ್ಕಲಾವದು** - ತ್ಯಜಿಸಬಹುದು, **ಇಜ್ಯ** - ಈ ಉಪಾಸನಗಳ ವಿಷಯದಲ್ಲಾದರೋ, **"ತಸ್ಮೈ**-ಶಾಸ್ತ್ರವಿಷಯಗಳನ್ನೆಲ್ಲಾ ಬಹು ವಿಶದವಾಗಿ, ತಮ್ಮ ಶಿಷ್ಯರಾದ ಮೈತ್ರೇಯರಿಗೆ ಉಪದೇಶಿಸುವ ವ್ಯಾಜದಿಂದ, ಲೋಕಕ್ಕೆಲ್ಲಾ ತಿಳಿಯಪಡಿಸಿ ಮಹಾ ಪ್ರಸಿದ್ಧಿಯನ್ನು ಪಡೆದಿರುವ, **ಮುನಿವರಾಯ ಪರಾಶರಾಯ** - ಭಗವದುಪಾಸಕರಲ್ಲಿ ಶ್ರೇಷ್ಠರಾದ ಪರಾಶರ ಮಹರ್ಷಿಗೆ ನಮಸ್ಕಾರವು,"**ಎನ್ನುಮ್ಪಡಿ** - ಎಂದು ಶ್ರೀ ಯಾಮುನೇಯರು ತಮ್ಮ ಸ್ತೋತ್ರ ರತ್ನದಲ್ಲಿ ಸ್ತುತಿಸುವಹಾಗೆ, ಶ್ಲಾಘ್ಯರಾದ ಶ್ರೀ ಪರಾಶರರೇ ಮೊದಲಾದ ಪೂರ್ವಾಚಾರ್ಯರುಗಳು, **ಅನುಷ್ಠಿಕ್ಕೈಯಾಲ್**-ಅನುಷ್ಠಿಸಿದುದರಿಂದ, - **ಸರ್ವಶಿಷ್ಟ ಬಹಿಷ್ಕಾರಮ್** - ಸಮಸ್ತ ಶಿಷ್ಟರೂ ಈ

---

(೨) ಆಳ. ಸ್ತೋ. ೪.

ಭಕ್ತಿಯೋಗಕ್ಕೆ ಬಹಿಷ್ಕಾರವನ್ನು ಹಾಕಿದರು ಎಂದರೆ ಸಮಸ್ತ ಶಿಷ್ಟರೂ ತ್ಯಜಿಸಿದರು ಎಂದು, **ಶೊಲ್ಲವೊಣ್ಣಾದು** ಹೇಳಲು ಸಾಧ್ಯವಲ್ಲವು. ಶಿಷ್ಟ ಪರಿಗ್ರಹವಿಲ್ಲ, ಆದುದರಿಂದಲೇ ಸ್ವರೂಪ ವಿರುದ್ಧವೆಂದು ಪೂರ್ವಪಕ್ಷ ತಂದಿರುವದಕ್ಕೆ, ಕೆಲವು ಮಹನೀಯರೂ ಈ ಉಪಾಯವನ್ನು ಅವಲಂಬಿಸಿರುತ್ತಾರೆಂದು ಶ್ರೀ ಪರಾಶರಾದಿಗಳನ್ನು ಉದಾಹರಿಸಿದರು. ಈ ಪರಾಶರರನ್ನೇ ಪರಮಾಚಾರ್ಯರನ್ನಾಗಿ ಭಾವಿಸಿ, ಆಚಾರ್ಯವರ್ಗಪ್ರಧಾನರಾದ ನಾಥಮುನಿ ನಮ್ಮಾಳ್ವಾರ್ರವರ ಮಧ್ಯೆ **"ತಸ್ಮೈ ನಮೋ ಮುನಿವರಾಯ"** ಎಂದು ಯಾಮುನೇಯರು ಕೊಂಡಾಡಿ ನಮಸ್ಕರಿಸಿರುತ್ತಾರೆ. **ಪರಾಶರಾದಿ** ಎಂಬಲ್ಲಿರುವ ಆದಿಪದದಿಂದ ವ್ಯಾಸ ವಾಲ್ಮೀಕಿಯೇ ಮೊದಲಾದ ಮಹರ್ಷಿಗಳೂ ಹೇಳಲ್ಪಟ್ಟರು. ಹಾಗೆಯೇ ಈ ಯುಗದಲ್ಲೂ ಭಕ್ತಿಸಾರ, ಪರಾಂಕುಶನಾಥಾದಿಗಳೂ ಭಕ್ತಿಮಾರ್ಗವನ್ನೇ ಉಪಾಯವಾಗಿ ಎಣಿಸಿದರು. ಹೀಗೆ ಕೆಲವರು ಭಕ್ತ್ಯುಪಾಯವನ್ನು ಅವಲಂಬಿಸಿರುತ್ತಾರೆ. ಪಾಂಡವರು ಸರ್ವೇಶ್ವರನ ಆಜ್ಞಾನುಸಾರ ಇಹಲೋಕ ವ್ಯಾಪಾರಗಳನ್ನೆಲ್ಲಾ ನೆರವೇರಿಸಿದ ನಂತರ ನರನಾರಾಯಣಾಶ್ರಮಕ್ಕೆ ಉಪಾಸನಕ್ಕಾಗಿ ತೆರಳಿದರೆಂದು ತಿಳಿಯಬರುತ್ತದೆ, ಹಾಗೆಯೇ ಕೇಶಿಧ್ವಜರು ಯೋಗವೇ ಪರಮೋಪಾಯವೆಂದು ತಾವು ಅನುಷ್ಠಿಸಿದವರಾಗಿ ಖಾಂಡಿಕ್ಯರಿಗೂ ಭಗವಂತನ ಶುಭಾಶ್ರಯೋಪಾಸನೆಯೇ ಉಪಾಯವೆಂಬದಾಗಿ ಉಪದೇಶಿಸಿರುತ್ತಾರೆ. ಎಲ್ಲೋ ಅಲ್ಪಸ್ವಲ್ಪ ಜನವು ಇದನ್ನು ಅಭಿಮಾನಿಸಿರುವದರಿಂದ ಅದು ಉಪಾದೇಯವೆಂದು ಹೇಳಲು ಹೇಗಾಗುತ್ತದೆಂದರೆ, ಅಂತಹ ಆಕ್ಷೇಪವು ಪ್ರಪತ್ತಿಯ ವಿಷಯದಲ್ಲೂ ಸಮಾನವಾದುದಾಗುತ್ತದೆ, ಎಂಬ ತಾತ್ಪರ್ಯವೂ ಸೂಚಿತವು "ತಸ್ಮೈ ನಮೋ ಮುನಿವರಾಯ" ಎಂಬ ಶ್ಲೋಕಾಭಿಪ್ರಾಯಕ್ಕೆ ಪರದೇವತಾ ಪಾರಮಾರ್ಥ್ಯಾಧಿಕಾರದಲ್ಲಿ ೭೪೦ ನೆಯ ಪುಟವನ್ನು ನೋಡಿ.

ಕಲಿಯುಗದಲ್ಲಿ ಭಕ್ತ್ಯಧಿಕಾರಿಗಳೇ ಇಲ್ಲವಾದುದರಿಂದ
ಸ್ವರೂಪ ವಿರುದ್ಧವೆಂದಾಕ್ಷೇಪಿಸಿ, ಪರಿಹರಿಸುತ್ತಾರೆ.

ಮೊದಲು ಪೂರ್ವಪಕ್ಷವನ್ನು ಅನುವದಿಸುತ್ತಾರೆ:— **ಇಪ್ಪಡಿ** - ಮೇಲೆ ಸಿದ್ಧಾಂತಿಸಿ ಹೇಳಿದ ರೀತಿಯಲ್ಲಿ, **ಯುಗಾನ್ತರಙ್ಗಳಿಲ್** - ಇತರ ಯುಗಗಳಲ್ಲಿ, ಎಂದರೆ ಕೃತ, ತ್ರೇತಾ, ದ್ವಾಪರಗಳಲ್ಲಿ, ಇವೈ - ಈ ಉಪಾಸನಾದಿಗಳು, **ಧರ್ಮಙ್ಗಳಾನಾಲುಮ್** - ಶಾಸ್ತ್ರದಲ್ಲಿ ಮೋಕ್ಷೋಪಾಯಗಳಾಗಿ ವಿಧಿಸಿದವುಗಳಾದರೂ, ಕಲಿಯುಗದಲ್ಲಾದರೋ, **ಯಥೋಕ್ತಮಾನ ಪರಮಾತ್ಮೋಪಾಸನಾದಿಗಳುಕ್ಕು** - ಶಾಸ್ತ್ರದಲ್ಲಿ ಹೇಳಿರುವನೋರಿಗೆ ಪರ

೧೦ ಕಲೌ ಯುಗೇ ಭಕ್ತ್ಯಧಿಕಾರ್ಯಭಾವಾತ್ ಸ್ವರೂಪ ವಿರುದ್ಧತ್ವ ಮಾಕ್ಷಿಪ್ಯ ಪರಿಹರತಿ.

ಇಪ್ಪಡಿ ಯುಗಾಂತರಙ್ಗಳಿಲ್ ಇನ್ನ ಧರ್ಮಙ್ಗಳಾನಾಲುಮ್ ಕಲಿಯುಗತ್ತಿಲ್ ಯಥೋಕ್ತಮಾನ ಪರಮಾತ್ಮೋಪಾಸನಾದಿಗಳುಕ್ಕು ಅಧಿಕಾರಿಗಳ್ ದುರ್ಲಭರಾಗೈಯಾಲೇ ಇವೈಯಿಕ್ಕಾಲತ್ತುಕ್ಕು ಪೊರನ್ದುಮವೈ ಯನ್ರು, ಆಗೈಯಾಲೇ ಯನ್ರೋ, (೧) "ಕಲೌ ಸಂಕೀರ್ತ್ಯ ಕೇಶವಮ್" ಎನ್ನುಮ್ (೨) "ಕಲೇರ್ದೋಷನಿಧೇ ರಾಜನ್ನಸ್ತಿ ಹ್ಯೇಕೋ ಮಹಾನ್ ಗುಣಃ । ಕೀರ್ತನಾದೇವ ಕೃಷ್ಣಸ್ಯ ಮುಕ್ತಬಂಧಃ ಪರಂವ್ರಜೇತ್ ॥" ಎನ್ರುಮ್ ಶೊಲ್ಲುಗಿರದು ಎನ್ನುವುವೊಣ್ಣಾದು.

ಮಾತ್ಮೋಪಾಸನಾದಿಗಳಿಗೆ, ಅಧಿಕಾರಿಗಳು, ದುರ್ಲಭರಾಗೈಯಾಲೇ - ಸಿಕ್ಕದಿರುವದರಿಂದ, ಇವೈ - ಈ ಉಪಾಸನಾದಿಗಳು, ಇಕ್ಕಾಲತ್ತುಕ್ಕು - ಈ ಕಲಿಯುಗಕ್ಕೆ, ಪೊರನ್ದುಮವೈಯನ್ರು - ಉಚಿತವಾದವುಗಳಲ್ಲವು, ಆಗೈಯಾಲನ್ರೋ - ಆದುದರಿಂದಲ್ಲವೋ, "ಕಲೌಸಂಕೀರ್ತ್ಯ ಕೇಶವಂ" ಕಲಿಯುಗದಲ್ಲಿ ಕೇಶವನನ್ನು ಸ್ತೋತ್ರಮಾಡಿ ಎಂದೂ, ಎಂದರೆ ಕಲಿಯುಗದಲ್ಲಿ ಸರ್ವೇಶ್ವರನ ನಾಮ ಸಂಕೀರ್ತನವನ್ನೇ ಉಪಾಯವನ್ನಾಗಿ ಎಂಬ ಭಾವವು, "ಹೇ ರಾಜನ್ - ಓ ರಾಜನೇ, ದೋಷನಿಧೇಃ - ಅನೇಕ ದೋಷಗಳಿಗೆಲ್ಲಾ ಆಕರವಾಗಿರುವ, ಕಲೇಃ - ಕಲಿಯುಗಕ್ಕೆ, ಏಕಃ - ಒಂದಾದ, ಮಹಾನ್ ಗುಣಃ - ದೊಡ್ಡ ಗುಣವು, ಅಸ್ತಿ - ಉಂಟು, ಹಿ - ಯಾವಕಾರಣದಿಂದೆಂದರೆ, ಕೃಷ್ಣಸ್ಯ - ಕೃಷ್ಣ ಭಗವಾನನ, ಕೀರ್ತನಾದೇವ - ನಾಮಸಂಕೀರ್ತನಮಾತ್ರದಿಂದಲೇ, ಮುಕ್ತಬಂಧಃ - ಬಿಡಲ್ಪಟ್ಟ ಸಂಸಾರಬಂಧವುಳ್ಳವನಾಗಿ, ಪರಂ ವ್ರಜೇತ್ - ಪರತತ್ವವನ್ನು ಕುರಿತು ಹೋಗುವನು," ಎಂದರೆ ಕಲಿಯುಗವು ಅನೇಕ ದೋಷಗಳಿಗೆಲ್ಲಾ ಆಕರವೇನೋ ನಿಶ್ಚಯವು, ಆದರೂ ಕಲಿಯುಗಕ್ಕೆ ಒಂದು ದೊಡ್ಡ ಮಹಿಮೆಯುಂಟು; ಏನೆಂದರೆ ಹರಿಸಂಕೀರ್ತನದಿಂದಲೇ ಮನುಷ್ಯನು ಮೋಕ್ಷವನ್ನು ಈ ಕಲಿಯುಗದಲ್ಲಿ ಹೊಂದಬಹುದೆಂಬ ತಾತ್ಪರ್ಯವು. ಇಲ್ಲಿ ಕೀರ್ತನಾದೇವ ಎಂದು ಏವಕಾರವಿರುವದರಿಂದ ಕಲಿಯುಗದಲ್ಲಿ ಸಂಕೀರ್ತನವೇ ಉಪಾಯವೇ ವಿನಾ ಉಪಾಸನಾದಿಗಳಲ್ಲವೆಂಬುದು

(೧) ವಿ. ಪು. ೬ ೨. ೧೭ (೨) ಭಾಗ. ೧೧. ೩. ೫೧.

ಪೂರ್ವಪಕ್ಷಿಯ ತಾತ್ಪರ್ಯವು. ಎನ್ನುವುದು ಶೊಲ್ಲುಗಿರದು - ಎಂದು ಹೇಳುತ್ತದೆ. ಎನ್ನುವುದು ಮೊಣ್ಣಾದು - ಎಂದು ಹೇಳಲೂ ಸಾಧ್ಯವಿಲ್ಲವು. ಸರ್ವೇಶ್ವರನ ನಾಮ ಸಂಕೀರ್ತನವೇ ಈ ಕಾಲದಲ್ಲಿ ಮೋಕ್ಷೋಪಾಯವು; ಆದುದರಿಂದ ಪರಮಾತ್ಮೋಪಾಸನವು ಉಪಾಯವಾಗುವದಿಲ್ಲವೆಂಬುದು ಪೂರ್ವಪಕ್ಷವು ತಮ್ಮ ಪೂರ್ವಪಕ್ಷಕ್ಕನುಕೂಲವಾಗಿ ಎರಡು ಪ್ರಮಾಣಗಳನ್ನು ಉದಾಹರಿಸಿರುತ್ತಾರೆ. ವಿಷ್ಣುಪುರಾಣದ ಶ್ಲೋಕವು ಯಾವುದೆಂದರೆ:--

"ಧ್ಯಾಯನ್ ಕೃತೇ ಯಜನ್ ಯಜ್ಞೈಸ್ತ್ರೇತಾಯಾಂ ದ್ವಾಪರೇಽರ್ಚಯನ್।
ಯದಾಪ್ನೋತಿ ತದಾಪ್ನೋತಿ ಕಲೌ ಸಂಕೀರ್ತ್ಯ ಕೇಶವಂ"॥

ಕೃತಯುಗದಲ್ಲಿ ಉಪಾಸನ ಮಾಡುವವನಾಗಿ ಯಾವ ಪ್ರಾಪ್ಯವನ್ನು ಹೊಂದುವನೋ, ಹಾಗೆಯೇ ತ್ರೇತಾಯುಗದಲ್ಲಿ ಯಜ್ಞಗಳನ್ನನುಷ್ಠಿಸಿ ಯಾವುದನ್ನು ಹೊಂದುವನೋ? ಮತ್ತು ದ್ವಾಪರ ಯುಗದಲ್ಲಿ ಪರಮಾತ್ಮನನ್ನು ಅರ್ಚಿಸಿ ಯಾವುದನ್ನು ಹೊಂದುವನೋ, ಕಲಿಯುಗದಲ್ಲಿ ಅದನ್ನೇ ಕೇಶವನನ್ನು ಸ್ತೋತ್ರ ಮಾಡಿ ಹೊಂದುವನು ಎಂಬರ್ಥವು. ಎರಡನೆಯ ಪ್ರಮಾಣವೂ ಹಾಗೆಯೇ ಹೇಳುತ್ತದೆ. ಕಲಿಯುಗದಲ್ಲಿ ಅಧರ್ಮವೇ ಘನವಾದುದರಿಂದ ಅದು ಅನೇಕ ದೋಷಯುಕ್ತವಾಗಿರುತ್ತದೆ. ಆದರೆ ಅದರಲ್ಲಿ ಒಂದು ದೊಡ್ಡ ಗುಣವುಂಟು. ಅದೇನೆಂದರೆ, ಉಪಾಸನ ಯಜ್ಞಾದಿಗಳಾದ ಕಷ್ಟತರವಾದ ಉಪಾಯಗಳೊಂದೂ ಬೇಕಾಗದೆ ಬರೀನಾಮ ಸಂಕೀರ್ತನದಿಂದಲೇ ಪರಮ ಪದವನ್ನು ಹೊಂದಬಹುದು ಎಂಬುದು ಆ ಶ್ಲೋಕಾಭಿಪ್ರಾಯವು. ಶ್ರೀ ವಿಷ್ಣು ಪುರಾಣದಲ್ಲೂ ಹಾಗೆಯೇ ಹೇಳುತ್ತದೆ. "ಅತ್ಯಂತ ದುಷ್ಟಸ್ಯ ಕಲೇರಯಮೇಕೋ ಮಹಾನ್ ಗುಣಃ" (ವಿ. ಪು. ೬.೨.೩೯) "ಸ್ವಲ್ಪೇನ ಹಿ ಪ್ರಯತ್ನೇನ ಧರ್ಮಸ್ಸಿಧ್ಯತಿ ವೈ ಕಲೌ" (ವಿ. ಪು. ೬. ೨. ೩೪) ತುಂಬಾ ದುಷ್ಟವಾದ ಕಲಿಯುಗಕ್ಕೆ ಇದೊಂದು ದೊಡ್ಡ ಗುಣವುಂಟು, ನಾಮಸಂಕೀರ್ತನರೂಪ ಸ್ವಲ್ಪ ಪ್ರಯತ್ನದಿಂದ ಕಲಿಯುಗದಲ್ಲಿ ಧರ್ಮಸಿದ್ಧಿಯುಂಟು ಎಂದು ಹೇಳಲ್ಪಟ್ಟಿರುತ್ತದೆ.

ಪೂರ್ವಪಕ್ಷಿಯು ಕಲಿಯುಗದಲ್ಲಿ ನಾಮ ಸಂಕೀರ್ತನವೇ ಉಚಿತವಾದ ಉಪಾಯವೆಂದೂ ಪರಮಾತ್ಮೋಪಾಸನಕ್ಕೆ ಅಧಿಕಾರಿಗಳಿಲ್ಲವೆಂದೂ ಹೇಳಿದನು. ಈ ಪೂರ್ವಪಕ್ಷಕ್ಕೆ ಸಮಾಧಾನವನ್ನು ಹೇಳುವವರಾಗಿ ಅಂತಹ ಅಧಿಕಾರಿಗಳು ಈಗಲೂ ಇರುವರೆಂದು ಹೇಳುತ್ತಾರೆ. "ಯಸ್ಯ - ಯಾವ ಅಧಿಕಾರಿಗೆ, ಚೇತಸಿ ಗೋವಿಂದಃ - ಮನಸ್ಸಿನಲ್ಲಿ ಸದಾ ಗೋವಿಂದನಿರುವನೋ, ತಸ್ಯ - ಅವನಿಗೆ; ಕಲೌ - ಪಾಪ ಭೂಯಿಷ್ಠವಾದ ಕಲಿಯುಗದಲ್ಲೂ, ಕೃತಯುಗಂ - ಧರ್ಮವು

ನಾಶವು [illegible]

(೧) ಕಲೌ ಕೃತಯುಗಂ ತಸ್ಯ ಕಲಿಸ್ತಸ್ಯ ಕೃತೇ ಯುಗೇ ।
ಯಸ್ಯ ಚೇತಸಿ ಗೋವಿಂದೋ ಹೃದಯೇ ಯಸ್ಯ ನಾಚ್ಯುತಃ ॥

ಎಙ್ಗಿರಪಡಿಯೇ ಇಕ್ಕಾಲತ್ತಿಲುಮ್ ಉಪಾಸನಾದಿಗಳುಕ್ಕಧಿಕಾರಿಗಳ್ ಸ್ವಯಂ ಪ್ರಯೋಜನ ಯೋಗನಿಷ್ಠರಾನ ಪೂರ್ವಾಚಾರ್ಯರ್‌ಗಳ್ ಪೋಲೆ ಸಂಭಾವಿತರಿರೇ.

ಯಾವನ ಹೃದಯದಲ್ಲಿ, ನಾಚ್ಯುತಃ-ಅಚ್ಯುತನಿರುವದಿಲ್ಲವೋ ಎಂದರೆ ಯಾವನು ಪರಮಾತ್ಮನನ್ನು ಧ್ಯಾನಿಸುವದಿಲ್ಲವೋ, ತಸ್ಯ - ಅಂತವನಿಗೆ, ಕೃತಯುಗೇ - ಕೃತಯುಗದಲ್ಲೂ ಕೂಡ, ಕಲಿಃ-ಕಲಿಯುಗವೇ ಆಗುತ್ತದೆ," ಎಙ್ಗಿರಪಡಿಯೇ ಎಂದು ಹೇಳಿರುವ ಹಾಗೆ, ಇಕ್ಕಾಲತ್ತಿಲುಮ್-ಈ ಕಲಿಯುಗದ ಈಗಿನ ಕಾಲದಲ್ಲೂ, ಉಪಾಸನಾದಿಗಳುಕ್ಕು ಅಧಿಕಾರಿಗಳ್-ಉಪಾಸನ ಮೊದಲಾದವುಗಳಿಗೆ ಅಧಿಕಾರಿಗಳು, ಸ್ವಯಂ ಪ್ರಯೋಜನ ಯೋಗನಿಷ್ಠರಾನ ಪೂರ್ವಾಚಾರ್ಯರ್‌ಗಳ್‌ಪೋಲೇ-ಫಲಕಾಮನೆ ಇಲ್ಲದೇ ಭಗವತ್ಪ್ರೀತ್ಯರ್ಥವಾಗಿ ನಡೆಸಿದ ಅನುಷ್ಠಾನವೇ ಪ್ರಯೋಜನವಾಗಿವುಳ್ಳ, ಮತ್ತು ಭಗವಂತನ ಶುಭಾಶ್ರಯದ ಉಪಾಸನೆಯಲ್ಲಿ ನಿಷ್ಠರಾದ ಪೂರ್ವಾಚಾರ್ಯರುಗಳ ಹಾಗೆ ಎಂದರೆ ಶ್ರೀಮನ್ನಾಥಮುನಿ ಪುಂಡರೀಕಾಕ್ಷರ್ ಮೊದಲಾದವರುಗಳ ಹಾಗೆ, ಸಂಭಾವಿತರಿರೇ - ಸನ್ಮಾನಿಸಲು ಯೋಗ್ಯರೇ ಸರಿ. ಪೂರ್ವ ಪಕ್ಷಿಯನ್ನು ವಿಕಲ್ಪಿಸಿ ಕೇಳುತ್ತಾರೆ. ನೀವು ಕಲಿಯುಗದಲ್ಲಿ ಸಂಕೀರ್ತನವೇ ಉಪಾಯವು, ಅಧಿಕಾರಿ ದೌರ್ಲಭ್ಯದಿಂದ ಉಪಾಸನವಲ್ಲವೆಂದು ಹೇಳಿದಿರಲ್ಲಾ, (೧) ಈಗ ಭಕ್ತಿಯೋಗಾಧಿಕಾರಿಗಳಿಲ್ಲನೆಂಬುದರಿಂದಲೇ? (೨) ಇಲ್ಲವೇ ನೀವು ಉದಾಹರಿಸಿದ ಪ್ರಮಾಣ ಬಲದಿಂದಲೇ? (೩) ಅಥವಾ ಎರಡು ಕಾರಣಗಳಿಂದಲೋ ಎಂದು ಕೇಳಬೇಕಾಗುತ್ತದೆ. ಅಧಿಕಾರಿಗಳು ಕಲಿಯುಗದಲ್ಲಿಲ್ಲವೆಂದು ಹೇಳಿದರೆ, ನಿಮ್ಮ ಅಭಿಪ್ರಾಯವೇ ತಪ್ಪು. ಏಕೆಂದರೆ ಅಧಿಕಾರಿಗಳು ಸ್ವಲ್ಪ ವಿರಳರೆಂದು ಹೇಳಬಹುದೇವಿನಾ, ಇಲ್ಲವೇ ಇಲ್ಲವೆಂದು ಹೇಳಲಾಗುವದಿಲ್ಲವು. ಏಕೆಂದರೆ ಪೂರ್ವಾಚಾರ್ಯರುಗಳಲ್ಲಿ ಕೆಲವರೇ ಆ ಉಪಾಯವನ್ನು ಅನುಷ್ಠಿಸಿರುತ್ತಾರೆ. ಎರಡನೆಯ ವಿಕಲ್ಪವಾದ ಪ್ರಮಾಣ ಬಲದಿಂದ, ಸಂಕೀರ್ತನಾದೇವ ಎಂಬಲ್ಲಿ ಅವಧಾರಣವೂ ಇರುವದರಿಂದ ಕಲಿಯುಗಕ್ಕೆ ಸಂಕೀರ್ತನವೇ ಉಪಾಯವೂ ಉಪಾಸನವಲ್ಲವೆಂದರೆ ಪ್ರಪದನವನ್ನು ಕೂಡ ಉಪಾಯವಲ್ಲವೆಂದೂ ಹೇಳಬೇಕಾಗುತ್ತದೆಂದು "ಇಙ್ಗನಲ್ಲಾದ

---

(೧) ವಿ ಧ. ೧೦೯, ೫೭.

ಇ (ಅ) ಜ್ಞನಲ್ಲಾದ ಪೋದು ಸಂಕೀರ್ತನ ವ್ಯತಿರಿಕ್ತೈಯಾನ ಪ್ರಪತ್ತಿಕ್ಕುಮ್, (೧) "ಕಿಂನು ತಸ್ಯಚ ಮಂತ್ರಸ್ಯ ಕರ್ಮಣಃ ಕಮಲಾಸನ । ನಲಭ್ಯತೇಽಧಿಕಾರೀವಾ" ಶ್ರೋತುಕಾಮೋಪಿ ಮಾನರಃ" ಇತ್ಯಾದಿಗಳಿಲ್ ಪಡಿಯೇ ಮಹಾವಿಶ್ವಾಸಾದಿಯುಕ್ತರಾನ ವಧಿಕಾರಿಗಳ್ ತೇಟ್ಟಿವಮಾಗೆಯಾಲೇ ಅನ್ವಿಡತ್ತಿಲುಮ್ ಇಪ್ಪ್ರಸಜ್ಗಮ್ ವರುಮ್.

ಪೋದು" ಎಂದಾರಂಭಿಸಿದ ವಾಕ್ಯದಮೂಲಕ ತಿಳಿಸುತ್ತಾರೆ. **ಇಜ್ಞನಲ್ಲಾದ ಪೋದು** - ಉಪಾಸನಾಧಿಕಾರಿಗಳೂ ಸಂಭಾವಿತರೆಂದು ಒಪ್ಪಿಕೊಳ್ಳದೇ ಹೋದರೆ, **ಸಂಕೀರ್ತನ ವ್ಯತಿರಿಕ್ತೈಯಾನ** - ಸಂಕೀರ್ತನಕ್ಕೆ ಬೇರೇ ಉಪಾಯವಾದ, ಪ್ರಪದನಕ್ಕೂ ಸಹ, "**ಕಮಲಾಸನ**-ಓ ಚತುರ್ಮುಖ ಬ್ರಹ್ಮನೇ,**ತಸ್ಯಚ ಮಂತ್ರಸ್ಯ** - ಅಂತಹ ಮಹಿಮೆಯುಳ್ಳ ದ್ವಯ ಮಂತ್ರದ ವಿಷಯದಲ್ಲೂ, **ಕರ್ಮಣಃ** - ಅದರ ಅನುಷ್ಠಾನದ ವಿಷಯದಲ್ಲೂ, **ಕಿಂ ನು** ಏನು ಹೇಳಲಪ್ಪಾ, **ಅಧಿಕಾರೀವಾ** - ಅದನ್ನು ಅನುಷ್ಠಿಸುವ ಅಧಿಕಾರಿಯಾಗಲಿ, **ಶ್ರೋತುಕಾಮೋಪಿಮಾನರಃ** – ಅದರ ಮಾಹಾತ್ಮ್ಯೆಯನ್ನು ಕೇಳಿ ತಿಳಿಯಬೇಕೆಂಬ ಅಪೇಕ್ಷೆಯುಳ್ಳ ಮನುಷ್ಯನೂ ಕೂಡ, **ನಲಭ್ಯತೇ** - ಸಿಕ್ಕುವದು ಕಷ್ಟವೈಯ್ಯಾ," **ಇತ್ಯಾದಿಗಳಿಲ್ಪಡಿಯೇ** – ಇವೇ ಮೊದಲಾದ ಪ್ರಮಾಣಗಳಲ್ಲಿ ಹೇಳಿರುವಹಾಗೆ, ಮಹಾ ವಿಶ್ವಾಸ ಮೊದಲಾದವುಗಳಿಂದ ಯುಕ್ತರಾದ, ಅಧಿಕಾರಿಗಳು, **ತೇಟ್ಟಿವಮಾಗೈಯಾಲೇ** - ದುರ್ಲಭವಾದುದರಿಂದ, **ಅನ್ವಿಡತ್ತಿಲುಮ್** – ಆ ಪ್ರಪದನದ ವಿಷಯದಲ್ಲೂ, **ಇಪ್ಪ್ರಸಜ್ಗಮ್ ವರುಮ್** - ನೀವು ಹೇಳಿದಾಕ್ಷೇಪವೂ ಬರುತ್ತದೆ. ಪೂರ್ವಪಕ್ಷಿಗಳು ಹೇಳಿದ ಎರಡಾಕ್ಷೇಪಗಳೂ ದೋಷಯುಕ್ತವಾದವೆಂದು ಈ ವಾಕ್ಯದಿಂದ ತೋರಿಸಿರುತ್ತಾರೆ. ಹೇಗೆಂದರೆ, ಪ್ರಮಾಣದಲ್ಲಿ **ಕೀರ್ತನಾದೇನ** - ಎಂದಿರುವದರಿಂದ ಇತರೋಪಾಯಗಳನ್ನು ಇದು ವ್ಯಾವರ್ತಿಸಿ ಹೇಳುತ್ತದೆ, ಕೀರ್ತನ ಮಾತ್ರವೇ ಉಪಾಯವೆಂದರೆ ಪ್ರಪದನವೂ ಉಪಾಯವಲ್ಲವೆಂದು ಹೇಳಬೇಕಾಗುತ್ತದೆ. ಅಧಿಕಾರಿ ದೌರ್ಲಭ್ಯದಿಂದ ಎಂಬಾಕ್ಷೇಪ ತಂದರೆ, ಅಂತಹ ದೌರ್ಲಭ್ಯವೂ, ಪ್ರಪದನಾನುಷ್ಠಾನಕ್ಕೂ ಹೇಳಿರುತ್ತದೆಂದು ಪೌಷ್ಕರ ಸಂಹಿತಾ ಪ್ರಮಾಣವನ್ನು ಉದಾಹರಿಸಿರುತ್ತಾರೆ. ಆ ಶ್ಲೋಕ ತಾತ್ಪರ್ಯವೇನೆಂದರೆ ದ್ವಯ ಮಂತ್ರವು ಅತಿಶಯವಾದ ಮಹಿಮೆಯುಳ್ಳದ್ದು. ಹೀಗಿದ್ದರೂ ಆ ದ್ವಯಮಂತ್ರವನ್ನು ಅನುಷ್ಠಿಸುವ ಎಂದರೆ ಶರಣಾಗತಿಯನ್ನನುಷ್ಠಿಸುವ ಮೋಕ್ಷಾರ್ಥಿಯೂ

(೧) ಪೌ. ಸಂ.

ಆತುರ ರೋಗಿ.

ಅನಪಿನ್ಬ ಉಪಾಸನಾದಿಗಳುಕ್ಕು ವೇರೊರು ವಿರೋಧಮಿಲ್ಲಾಮೈಯಾಲ್ ಯಥಾಶಾಸ್ತ್ರಂ ಆತುರಾದಿಗಳುಕ್ಕು ಅವಗಾಹನಾದಿಗಳಿಲ್ ಪ್ಪೋಲೆ ಇವೈ, "ಅಕಿಞ್ಚನೋಽನನ್ಯಗತಿ ಎನ್ರಿರುಕ್ಕು ಮಧಿಕಾರಿಕ್ಕು ಸ್ವಾಧಿಕಾರ ವಿರುದ್ಧಙ್ಗಳೆನ್ನು ಪ್ರಾಪ್ತಮ್.

ದುರ್ಲಭವು, ಅವರ ಮಾಹಾತ್ಮ್ಯವನ್ನು ಕೇಳಿ ತಿಳಿಯಬೇಕೆಂಬಪೇಕ್ಷೆ ಇರುವವನೂ ದುರ್ಲಭವು ಎಂಬುದು. ಆದುದರಿಂದ ಆಕ್ಷೇಪವು ಸರಿಯಾದುದಲ್ಲವೆಂಬ ಭಾವವು. ಹಾಗಾದರೆ ಕೀರ್ತನಾದೇಃ ಎಂಬುದರ ತಾತ್ಪರ್ಯವೇನೆಂದು ಕೇಳಬಹುದು. ಕೀರ್ತನವು ಬಹು ಸುಲಭೋಪಾಯವೆಂದು ತೋರಿಸುವದಕ್ಕಾಗಿ ಏವಕಾರವು. ಮತ್ತು ಆ ಪ್ರಮಾಣದಲ್ಲಿ ಸಂಕೀರ್ತನವನ್ನೇನೂ ಸಾಕ್ಷಾತ್ತಾದ ಉಪಾಯವಾಗಿ ವಿಧಿಸಲಿಲ್ಲವು. ಅದು ಮುಕ್ತಬಂಧನಾಗುವದಕ್ಕೆ ಉಪಾಯಕ್ಕೆ ಸಹಕಾರಿಯಾಗುವದರಲ್ಲಿ ಸಂದೇಹವಿಲ್ಲವೆಂಬ ತಾತ್ಪರ್ಯವು.

ಹಾಗಾದರೆ ಕೆಲವು ಆಪ್ತರು ಭಕ್ತಿಯೋಗವು ಸ್ವರೂಪವಿರುದ್ಧವೆಂದು ಹೇಳಿದುದರ ತಾತ್ಪರ್ಯವೇನು? ಮತ್ತು ಈ ಕಲಿಯುಗದಲ್ಲಿ ಈಗ ಅನೇಕ ಪ್ರಪನ್ನರು ಉಪಾಸನವನ್ನು ಅವಲಂಬಿಸದೆ ಪ್ರಪದನವನ್ನು ಅಙ್ಗೀಕರಿಸಿರುವದರ ತಾತ್ಪರ್ಯವೇನು? ಎಂದು ಕೇಳಬಹುದಾಗಿ ಅದಕ್ಕೆ ಉತ್ತರವನ್ನು "ಅನಪಿನ್ಬ" ಎಂದಾರಂಭಿಸಿ ದಯಪಾಲಿಸುತ್ತಾರೆ. **ಅನಪಿನ್ಬ** - ಹಾಗಾದನಂತರ, ಹೇಗಾದನಂತರವೆಂದರೆ ಉಪಾಸನಾದಿಗಳು ಉಪಾಯವಾಗಲು ಏನೂ ವಿರೋಧವಿಲ್ಲದುದರಿಂದ, ಮುಂದೆ ಇದರರ್ಥವನ್ನು "**ಉಪಾಸನಾದಿಗಳುಕ್ಕು ವೇರೊರು ವಿರೋಧಮಿಲ್ಲಾಮೈಯಾಲೇ**" ಎಂದು ಅನುವಾದ ಮಾಡಿರುತ್ತಾರೆ. ಉಪಾಸನಾದಿಗಳಿಗೆ ಬೇರೆ ಏನೊಂದೂ ವಿರೋಧವಿಲ್ಲದುದರಿಂದ, **ಯಥಾಶಾಸ್ತ್ರಂ** - ಶಾಸ್ತ್ರದಲ್ಲಿ ಹೇಳಿರುವ ಮೇರೆಗೆ, **ಆತುರಾದಿಗಳುಕ್ಕು ಅವಗಾಹನಾದಿಗಳಿಲ್ ಪ್ಪೋಲೆ** - ರೋಗಿಷ್ಠರೇ ಮೊದಲಾದವರುಗಳಿಗೆ ಬಹು ಚಳಿಯ ಸಮಯದಲ್ಲಿ ನೀರಿನಲ್ಲಿ ಮುಳುಗಿ ಸ್ನಾನಮಾಡುವದು ಹೇಗೆ ಸ್ವಾಧಿಕಾರ ವಿರುದ್ಧವೋ, ಹಾಗೆಯೇ, **ಇವೈ** - ಈ ಉಪಾಸನಾದಿಗಳು, "**ಅಕಿಂಚನೋಽನ್ಯಗತಿಃ" ಎನ್ರಿರುಕ್ಕುಮ್** - ಯಾವ ಸಾಧನೆಯೂ ಇಲ್ಲದೆ ಯಾವ ರಕ್ಷಕರೂ ಇಲ್ಲದೆ ಹೀಗೆ ಅಸಮರ್ಥನಾಗಿರುವ, **ಅಧಿಕಾರಿಕ್ಕು** - ಅಧಿಕಾರಿಗೆ, **ಸ್ವಾಧಿಕಾರ ವಿರುದ್ಧಙ್ಗಳೆನ್ನು ಪ್ರಾಪ್ತಮ್** - ತನ್ನ ಅಧಿಕಾರವಾದ ಅಸಮರ್ಥತೆಗೆ ವಿರುದ್ಧವಾದವುಗಳು ಎಂಬ ಅಭಿಪ್ರಾಯವೆಂದು ಹೇಳುವದು ಉಚಿತವು. ಅನೇಕ ಪ್ರಪನ್ನರು ಅಸಮರ್ಥರಾದುದರಿಂದ ಉಪಾಸನೋಪಾಯ

ಅತಃ ಭಕ್ತಿಯೋಗಃ ಸ್ವರೂಪಾನುರೂಪ ಏವ.

ಇನ್ನಧಿಕಾರ ವಿರೋಧ ಮರಿಯಾದೆ ಉಪಾಸನಾದಿಗಳಿಲೇ ಪ್ರವ

ವನ್ನು ಅಂಗೀಕರಿಸಲು ಸಾಧ್ಯವಲ್ಲವಾದರಿಂದ ಅಂತವರು ಇಂತಹ ಉಪಾಸನೆಗಳನ್ನವಲಂಬಿಸುವದು ಅವರ ಅಧಿಕಾರಕ್ಕೆ ಉಚಿತವಲ್ಲವೆಂಬುದೀಗ ಅವರ ಅಭಿಪ್ರಾಯವೆಂದು ಹೇಳಿರುತ್ತಾರೆ. ಅಂತಹ ಅಸಮರ್ಥರು ಪ್ರಪದನೋಪಾಯವನ್ನು ಅಂಗೀಕರಿಸುವದೇ ಯುಕ್ತವೆಂಬ ತಾತ್ಪರ್ಯವು. ಇದಕ್ಕೆ ಒಂದು ದೃಷ್ಟಾಂತವನ್ನು ಕೊಟ್ಟಿರುತ್ತಾರೆ. ಸಾಧಾರಣವಾಗಿ ಸಮರ್ಥನು ನಿತ್ಯವೂ ಅವಗಾಹನ ಸ್ನಾನವನ್ನು ಮಾಡಬೇಕೆಂಬ ವಿಧಿ ಇರುತ್ತದೆ. ಹಾಗೆ ಸಮರ್ಥನಲ್ಲದವನಿಗೆ ಅವಗಾಹನ ಸ್ನಾನವನ್ನು ನಿಷೇಧಿಸಿ ಉಷ್ಣೋದಕ ಸ್ನಾನವು ವಿಧಿಸಲ್ಪಟ್ಟಿರುತ್ತದೆ. **"ಶೀತೋದಕಸ್ನಾನಾ ಸಮರ್ಥಸ್ಯ ಉಷ್ಣೋದಕ ಸ್ನಾನಂ"** ಎಂದರೆ ಶೀತೋದಕದಲ್ಲಿ ಅವಗಾಹನ ಸ್ನಾನಕ್ಕೆ ಸಾಮರ್ಥ್ಯವಿಲ್ಲದ ರೋಗಿಗೆ ಉಷ್ಣೋದಕ ಸ್ನಾನಮಾಡಬಹುದೆಂದು ಪಾಂಚರಾತ್ರ ರಕ್ಷೆಯಲ್ಲಿ ಶ್ರೀ ನಿಗಮಾಂತ ದೇಶಿಕರವರೇ ಹೇಳಿರುತ್ತಾರೆ. ರೋಗಿಗೆ ಹೇಗೆ ಅಸಮರ್ಥತೆಯಿಂದ ಅವಗಾಹನ ಸ್ನಾನಕ್ಕೆ ಅಧಿಕಾರವಿಲ್ಲವೋ, ಹಾಗೆಯೇ ಅಸಮರ್ಥನಾದ ಪ್ರಪನ್ನನಿಗೆ ಉಪಾಸನಕ್ಕೆ ಅಧಿಕಾರವಿಲ್ಲವು. ಇದೀಗ ಉಪಾಸನೋಪಾಯವನ್ನು ನಿಷೇಧಿಸಿದ ಮಹನೀಯರ ತಾತ್ಪರ್ಯವೆಂದುಪದೇಶಿಸಿರುತ್ತಾರೆ.

ಹೀಗೆ ಮಹನೀಯರ ಅಭಿಪ್ರಾಯವೆಂದು ಹೇಳಿದರೆ, ವಿಷ್ಣುಧರ್ಮ ಪ್ರಮಾಣದಲ್ಲಿ ಬುದ್ಧಿ ದೌರ್ಬಲ್ಯದಿಂದೀಗ ಉಪಾಯಾಂತರವಾದ ಉಪಾಸನೆಯನ್ನು ಅಪೇಕ್ಷಿಸುತ್ತಾನೆಂದು ಹೇಳಿದುವರ ಅಭಿಪ್ರಾಯವೇನೆಂದು ಪ್ರಶ್ನಿಸಬಹುದು. ಬುದ್ಧಿ ದೌರ್ಬಲ್ಯಶಬ್ದದಿಂದ ವಿವಕ್ಷಿತವಾದುದು ಅಜ್ಞಾನವೇ ವಿನಾ ಸ್ವರೂಪ ವಿರುದ್ಧವೆಂಬ ಭಾವವಲ್ಲವೆಂದು ಹೇಳುತ್ತಾರೆ. ಆದುದರಿಂದ ಸಾಮರ್ಥ್ಯವಿರುವ ಅಧಿಕಾರಾನುಗುಣವಾಗಿ ಭಕ್ತಿಮಾರ್ಗವೂ ಉಪಾದೇಯವೇ ಎಂದು ಸ್ಥಾಪಿಸುತ್ತಾರೆ.

ಭಕ್ತಿಯೋಗವು ಸ್ವರೂಪ ವಿರುದ್ಧವಲ್ಲವು ಸ್ವರೂಪಕ್ಕೆ ಅನುರೂಪವಾದುದೇ

ಇನ್ನಧಿಕಾರ ವಿರೋಧಮರಿಯಾದೆ - ಅಶಕ್ತನಾದವನು ತನ್ನ ಅಧಿಕಾರಕ್ಕೆ ಈ ಭಕ್ತಿಯೋಗವು ವಿರೋಧವೆಂಬುವನ್ನು ತಿಳಿಯದೆ ಉಪಾಸನಾದಿಗಳಲ್ಲಿ, **ಪ್ರವರ್ತಿಕ್ಕುಮವನೈಪ್ಪತ್ತ** - ಪ್ರವರ್ತಿಸುವವನನ್ನು ಕುರಿತು, **"ನರಸ್ಯ ಬುದ್ಧಿ**

ತಿರ್ಕ್ಕು ಮವನ್ನೈಪ್ಪತ್ತು (೧) "ನರಸ್ಯ ಬುದ್ಧಿ ದೌರ್ಬಲ್ಯಾದುಪಾಯಾಂತರ ಮಿಷ್ಯತೇ:" ಎನ್ರದು. ಆಗೈಯಾಲ್ ಇವ್ವುಪಾಸನಾದಿಗಳುಮ್ ಅಧಿಕಾರ್ಯಂತರತ್ತುಕ್ಕು ಯಥಾಧಿಕಾರಮನುಗುಣಙ್ಗಳ್.

ದೌರ್ಬಲ್ಯಾದುಪಾಯಾಂತರಮಿಷ್ಯತೇ" ಮನುಷ್ಯನ ಬುದ್ಧಿ ದೌರ್ಬಲ್ಯದಿಂದ ಎಂದರೆ ತಾನು ಅಧಿಕಾರಿಯಾಗಲು ಸಾಧ್ಯವಿಲ್ಲವೆಂಬ ಜ್ಞಾನವಿಲ್ಲದೆ ಉಪಾಯಾಂತರವಾದ ಭಕ್ತಿಯೋಗವನ್ನಪೇಕ್ಷಿಸುವನು." ಎನ್ನದು - ಎಂದು ಹೇಳಿರುವದು. ಇಲ್ಲಿ ಬುದ್ಧಿ ದೌರ್ಬಲ್ಯವನ್ನು ಹೇಳಿರುವದು ಪೂರ್ವಪಕ್ಷಿಯು ಪ್ರಕಾರ ಸ್ವರೂಪ ವಿರುದ್ಧಮೂಲಕವಲ್ಲವು. ತಾನು ಅಧಿಕಾರಿಯಲ್ಲ ಎಂಬ ಜ್ಞಾನಶೂನ್ಯತೆಯು ಎಂಬ ಭಾವವು. ವಿಷ್ಣುಧರ್ಮ ಶ್ಲೋಕಗಳು ಯಾವುವೆಂದರೆ:—

"ಸಕೃದೇವಂ ಪ್ರಪನ್ನಸ್ಯ ಕೃತ್ಯಂ ನೈವಾನ್ಯದಿಷ್ಯತೇ ।
ಉಪಾಯಾಪಾಯ ಮುಕ್ತಸ್ಯ ವರ್ತಮಾನಸ್ಯ ಮಧ್ಯತಃ ।
ನರಸ್ಯ ಬುದ್ಧಿ ದೌರ್ಬಲ್ಯಾದುಪಾಯಾಂತರ ಮಿಷ್ಯತೇ" ॥

ಹೀಗೆ ದ್ವಯೋಚ್ಚಾರಣೆ ಪೂರ್ವಕವಾಗಿ ಒಂದು ಸಲ ಮಾಡಿದ ಶರಣಾಗತಿಯು ಇನ್ನು ಯಾವುವನ್ನೂ ಅಪೇಕ್ಷಿಸುವದಿಲ್ಲವು ಈ ಭರನ್ಯಾಸಾನುಷ್ಠಾತೃವು ಅನುಷ್ಠಿಸಿದ ಉಪಾಯದಲ್ಲಿ ಅಪಾಯವೇನೂ ಇಲ್ಲದವನಾಗಿ **ಮಧ್ಯತಃ ವರ್ತಮಾನಸ್ಯ** - ಉಪಾಯಾನುಷ್ಠಾನಕ್ಕೂ ಫಲಪ್ರಾಪ್ತಿಗೂ ಮಧ್ಯದಲ್ಲಿರುವ ಮನುಷ್ಯನಿಗೆ ಪ್ರಪನ್ನನ ಅಜ್ಞಾನದಿಂದುಂಟಾದ ಬುದ್ಧಿ ದೌರ್ಬಲ್ಯದಿಂದ ಭಕ್ತಿಯೋಗವನ್ನು ಅಪೇಕ್ಷಿಸುತ್ತಾನೆಂಬುದು ಈ ಶ್ಲೋಕ ತಾತ್ಪರ್ಯವು. ಇಷ್ಟು ದೂರ ಉಪಪಾದಿಸಿದ ಅಭಿಪ್ರಾಯವನ್ನು ಸಿದ್ಧಾಂತಿ ನಿಗಮನರೂಪದಲ್ಲಿ ಹೇಳುತ್ತಾರೆ. **ಆಗೈಯಾಲ್** - ಹೀಗೆ ಇತರರು ಹೇಳುವ ಕಾರಣಗಳು ಯಾವುವರಿಂದಲೂ ಭಕ್ತ್ಯುಪಾಯವು ಪ್ರಪನ್ನನ ಸ್ವರೂಪಕ್ಕೆ ವಿರುದ್ಧವಲ್ಲವಾದುದರಿಂದ, **ಇವ್ವುಪಾಸನಾದಿಗಳುಮ್** - ಭಕ್ತ್ಯುಪಾಯದ ವಿದ್ಯೆಗಳಲ್ಲಿ ಹೇಳಿರುವ ಉಪಾಸನಾದಿಗಳೆಲ್ಲ. **ಅಧಿಕಾರ್ಯಂತರತ್ತುಕ್ಕು** - ಅಕಿಂಚನನಲ್ಲದೆ ಬೇರೆ ಅಧಿಕಾರಿಗೆ **ಯಥಾಧಿಕಾರಂ** - ಅಧಿಕಾರಾನುಗುಣಂ ಎಂದರೆ ಸಮರ್ಥನಾದ ಅಧಿಕಾರಿಗೆ, **ಅನುಗುಣಙ್ಗಳ್**-ಸ್ವರೂಪಕ್ಕೆ ವಿಹಿತವಾದವುಗಳೇ ಅವರು ಹೇಳಿದ ಹಾಗೆ ಸ್ವರೂಪವಿರುದ್ಧವಲ್ಲವು, ಸ್ವರೂಪಕ್ಕೆ ಅನುಗುಣವಾದುದೇ ಎಂದು ಉಪಪಾದಿಸಿದರು.

---

(೧) ವಿಷ್ಣುಧರ್ಮ. ೨೨. ೧೭.

ಸ್ವರೂಪಾವಿರುದ್ಧತ್ವೇ ಭಕ್ತಿಪ್ರಪತ್ತ್ಯೋಃ ತುಲ್ಯತ್ವೇಽಪಿ ಭಕ್ತ್ಯಪೇಕ್ಷಯಾ ಪ್ರಪತ್ತಿಶ್ರೈಷ್ಠ್ಯಮಪಿ.

ಅವ್ವಾಕ್ಕು ಸಾಮರ್ತ್ಥಮಿಲ್ಲಾದ್ಯಯಾಲಾದಲ್, ವಿಳಂಬಕ್ಷಮನಲ್ಲಾದ್ಯಯಾಲಾದಲ್, ಇಪ್ಪ್ರಪತ್ತಿಯೈ ಸ್ವತಂತ್ರೋಪಾಯಮಾಗ ಪಣ್ಣಿನವನೈ (೧) "ಶಯ್ದ ವೇಳ್ವಿಯರ್" ಎನ್ರುಮ್, (೨) "ಕೃತಕೃತ್ಯರ್" ಎನ್ರುಮ್, (೩) "ಅನುಷ್ಠಿತಕ್ರತು ಶತರ್" ಎನ್ರುಮ್, ಇನನುಕ್ಕು ಮರ

ಮೇಲೆ ಅವಗಾಹನ ಸ್ನಾನಕ್ಕೆ ಅನರ್ಹನಾಗಿ ರೋಗಪೀಡಿತನಾಗಿದ್ದರೆ ಮಂತ್ರಸ್ನಾನವು ಹೇಗೋ, ಹಾಗೆ ಭಕ್ತಿಮಾರ್ಗದ ಉಪಾಸನೆಗೆ ಅನರ್ಹನಾದವನಿಗೆ ಪ್ರಪತ್ತಿಯು ಎಂದು ಹೇಳಿದರೆ, ಸಮರ್ಥನಾದವನಿಗೆ ಭಕ್ತಿಮಾರ್ಗವೇ ಸರಿಯಾದ ಉಪಾಯವು, ಅದಕ್ಕೆ ಶಕ್ತಿಯಿಲ್ಲದ ಪ್ರಯುಕ್ತ ಪ್ರಪತ್ತಿ ಎಂದರೆ ಭಕ್ತಿಮಾರ್ಗಕ್ಕೇನೇ ಪ್ರಾಧಾನ್ಯವೂ, ಪ್ರಪತ್ತಿಗೆ ಗೌಣೋಪಾಯತ್ವವೂ ಹೇಳಿದಂತಾಗುತ್ತದೆ. ಈ ಎರಡು ಉಪಾಯಗಳೂ ಸ್ವರೂಪಕ್ಕೆ ವಿರುದ್ಧವಲ್ಲವುಗಳಾಗಿ ವಿಕಲ್ಪಿಸಿ ಹೇಳಿರುವದರಿಂದ ಫಲ ಒಂದೇಯಾದರೂ, ಪ್ರಪತ್ತಿಗೆ ಗೌಣಭಾವವು ತಪ್ಪಿಸಲ್ಲವೆಂದು ಪೂರ್ವಪಕ್ಷವುಂಟಾಗಬಹುದು. ಇದಕ್ಕೆ ಸಮಾಧಾನವನ್ನು ಹೇಳುವವರಾಗಿ, ಪ್ರಪತ್ತಿಗೇನೇ ಉತ್ಕರ್ಷವೂ ಪ್ರಾಶಸ್ತ್ಯವೂ ಉಂಟೆಂಬುದಕ್ಕೆ ಪ್ರಮಾಣಗಳನ್ನು ತೋರಿಸುತ್ತಾರೆ.

ಭಕ್ತಿಪ್ರಪತ್ತಿಗಳೆರಡೂ ಸ್ವರೂಪವಿರುದ್ಧವಲ್ಲದೆ ಸಮಾನವಾದರೂ ಭಕ್ತಿಗಿಂತಲೂ ಪ್ರಪತ್ತಿಯು ಶ್ರೇಷ್ಠವಾದುದು.

ಅವ್ವಾಕ್ಕು - ಆ ಭಕ್ತಿಮಾರ್ಗದ ಉಪಾಸನೆಗಳಿಗೆ, ಸಾಮರ್ತ್ಥಮಿಲ್ಲಾದ್ಯಯಾಲಾದಲ್ - ಸಾಮರ್ಥ್ಯವಿಲ್ಲದೆ ಇರುವದರಿಂದಲಾಗಲಿ, (ಇವರು ಯಾರು ಎಂಬುದು ಅಧಿಕಾರಿ ವಿಭಾಗಾಧಿಕಾರದ ಕೊನೆಯ ಶ್ಲೋಕದಲ್ಲಿ ಉಪಪಾದಿತವು) ಅಥವಾ, ವಿಳಂಬಾಕ್ಷಮನಲ್ಲಾದ್ಯಯಾಲಾದಲ್ - ಇನ್ನೊಂದು ಜನ್ಮವುಂಟಾದ ವಿಳಂಬವನ್ನು ಸಹಿಸದೆ ಇರುವವನಾದುದರಿಂದಲೇ ಯಾಗಲಿ, ಸ್ವತಂತ್ರೋಪಾಯವೆಂದು, ಪಣ್ಣಿನವನೈ - ಆಶ್ರಯಿಸಿದವನನ್ನು, (೧) "ಶಯ್ದ ವೇಳ್ವಿಯರ್ - ಮಾಡಿದ ಯಜ್ಞವುಳ್ಳವರು" ಎಂದರೆ ಉಪಾಯಾನುಷ್ಠಾನ ಮಾಡಿ ಕೃತಕೃತ್ಯರಾದ ಪ್ರಪನ್ನರು. (೨) "ಕೃತಕೃತ್ಯನೆನ್ರುಮ್ - ಉಪಾ

(೧) ತಿರು. ೫. ೭. ೫. (೨) ಸಾತ್ವ. ೩೮ (೩) ಅಹಿ. ೩೭.

ಣಾನ್ತಮಾಗ ನಡಕ್ಕಿರ ವ್ಯಾಪಾರಙ್ಗಳ್ಳೈ ಅವಭೃಥ ಪರ್ಯನ್ತ ಕರ್ತವ್ಯ ಕಲಾಪಙ್ಗಳಾಗ ಸ್ತುತಿತ್ತುಮ್, ಕ್ರತ್ವಂತರಾನುಷ್ಠಾನಮ್ ಪಣ್ಣಿನವನುಕ್ಕು ಮೇಲುಳ್ಳ ನಿತ್ಯ ನೈಮಿತ್ತಿಕಙ್ಗಳ್ ಪೋಲೆ ಇವನುಕ್ಕು ಸ್ವತಂತ್ರ ವಿಧಿಯಾಲೇ ವರ್ಣಾಶ್ರಮಾದಿ ಧರ್ಮಙ್ಗಳ್ ನಡವಾನಿರ್ಕಚ್ಚೆಯ್‌ದೇ

ಯಾನುಷ್ಠಾನಮಾಡಿದ ಕೃತಕೃತ್ಯನೆಂದೂ, (೩) ಅನುಷ್ಠಿತಕ್ರತುಶತರ್ಣ ಅನುಷ್ಠಿಸಿದ ನೂರು ಯಜ್ಞಗಳಿಗೆ ಸಮಾನನೆಂದೂ, **ಇವನುಕ್ಕು** - ಈ ಭರನ್ಯಾಸವನ್ನನುಷ್ಠಿಸಿದ ಪ್ರಪನ್ನನಿಗೆ, **ಮರಣಾಂತಮಾಗ ನಡಕ್ಕಿರ ವ್ಯಾಪಾರಙ್ಗಳ್ಳೈ** - ಮರಣವೇ ಕೊನೆಯಾಗಿ ನಡೆಯುವ ವ್ಯಾಪಾರಗಳನ್ನೆಲ್ಲಾ, **ಅವಭೃಥ ಪರ್ಯನ್ತ ಕರ್ತವ್ಯ ಕಲಾಪಙ್ಗಳಾಗ** - ತೈತ್ತಿರೀಯದಲ್ಲಿ, "**ಯನ್ಮರಣಂ ತದವಭೃಥಃ**" ಪ್ರಪದನಾನುಷ್ಠಾನವಾದನಂತರ ಮರಣದವರೆಗೂ ಎಂದು ನಡೆಯುವ ಪ್ರಪನ್ನನ ಸರ್ವ ಪ್ರವೃತ್ತಿನಿವೃತ್ತಿಗಳನ್ನೆಲ್ಲಾ ಒಂದು ಅಗ್ನಿಹೋತ್ರವಾಗಿ ರೂಪಕ ಮಾಡಿ "**ತಸ್ಯೈವಂ ವಿದುಷೋ**" ಎಂಬ ಶ್ರುತಿಯಲ್ಲಿ ಹೇಳಿರುವ ಪ್ರಕಾರ, ಒಂದು ಯಜ್ಞವಾದನಂತರ ಕೊನೆಯಲ್ಲಿ ತದಙ್ಗವಾಗಿ ಅವಭೃಥ ಸ್ನಾನದವರೆಗೂ, ನಡೆಯಬೇಕಾದ ಕಾರ್ಯಕಲಾಪಗಳಾಗಿ, **ಸ್ತುತಿತ್ತುಮ್** - ಪ್ರಶಂಸಿಸಿ, ಹೊಗಳಿ, **ಕ್ರತ್ವಂತರಾನುಷ್ಠಾನಮ್** - ಈ ಆತ್ಮಹವಿಸ್ಸನ್ನು ಸಮರ್ಪಿಸುವ ಕ್ರತುವಿಗಿಂತಲೂ ಬೇರೆ ಯಾಗದ ಅನುಷ್ಠಾನವನ್ನು, **ಪಣ್ಣಿನವನುಕ್ಕು** - ಮಾಡಿದ ಅಧಿಕಾರಿಗೆ, **ನಿತ್ಯನೈಮಿತ್ತಿಕಙ್ಗಳ್ ಪೋಲೇ** - ನಿತ್ಯ ನೈಮಿತ್ತಿಕ ಕರ್ಮಗಳು ಹೇಗೆ ಅಙ್ಗಗಳಾಗಿಯೂ, ಆಜ್ಞಾ ಕೈಙ್ಕರ್ಯಗಳಾಗಿ ಆವಶ್ಯಕವೋ, ಹಾಗೆಯೇ **ಇವನುಕ್ಕು** - ಈ ಭರನ್ಯಾಸವನ್ನನುಷ್ಠಿಸಿದ ಪ್ರಪನ್ನನಿಗೂ, **ಸ್ವತಂತ್ರ ವಿಧಿಯಾಲೇ** - ಬೇರೆ ವಿಧಿಯಿಂದ ಎಂದರೆ ಕರ್ಮಕ್ಕೆ ಅಙ್ಗಗಳಾಗಿಯಲ್ಲದೆ, ಪ್ರಪದನಕ್ಕೆ ಸಂಬಂಧವಿಲ್ಲದೆ ಸ್ವತಂತ್ರವಾದ ಆಜ್ಞಾ ಕೈಙ್ಕರ್ಯಗಳನ್ನು ಆವಶ್ಯಕವಾಗಿ ಮಾಡಬೇಕೆಂಬ ವಿಧಿಯಿಂದ, ವರ್ಣಾಶ್ರಮಾದಿ ಧರ್ಮಗಳು, **ನಡವಾನಿರ್ಕಚ್ಚೆಯ್‌ದೇಯುಮ್**, ಅನುಷ್ಠಿತಗಳಾಗಿರುವಾಗ, ಎಂದರೆ ಇತರಯಜ್ಞಾಧಿಕಾರಿಗೆ ನಿತ್ಯ ನೈಮಿತ್ತಿಕಗಳು ಆಜ್ಞಾ ಕೈಙ್ಕರ್ಯಗಳು ಮಾತ್ರವೇ ಅಲ್ಲದೆ ಕರ್ಮಾಙ್ಗಗಳು; ಈ ಭರನ್ಯಾಸವನ್ನನುಷ್ಠಿಸಿದ ಕೃತಕೃತ್ಯನಿಗಾದರೋ ಈ ನಿತ್ಯ ನೈಮಿತ್ತಿಕಗಳು ಈತನ ಭರನ್ಯಾಸರೂಪ ಯಾಗಕ್ಕೆ ಸಂಬಂಧಿಸಿದವೇ ಅಲ್ಲವು. ಆದರೆ ಈತನನುಷ್ಠಿಸಬೇಕೋ ಎಂದರೆ ಆವಶ್ಯಕವಾಗಿ ಅನುಷ್ಠಿಸಬೇಕು. ಆಜ್ಞಾಕೈಙ್ಕರ್ಯವಿಧಿಗನುಗುಣವಾಗಿ ಭಗವತ್ಪ್ರೀತ್ಯರ್ಥವಾಗಿ ಅನುಷ್ಠಿಸತಕ್ಕವು;

ಯುಮ್, ಅನುಷ್ಠಿತಾತ್ಮಯಾಗ ಫಲತ್ತೈಪ್ಪತ್ತ ಕರ್ತವ್ಯಾಂತರ ನಿರಪೇಕ್ಷನಾಗವುಮ್, ಆಳ್ವಾರ್‌ಗಳುಮ್, ಮಹರ್ಷಿಗಳುಮ್, ಭಗವಚ್ಛಾಸ್ತ್ರಜ್ಞಳುಮ್, ವೇದಜ್ಞಳುಮ್, ಘೋಷಿಯಾನಿನ್ರನ.

ಆದುದರಿಂದ ನಿತ್ಯನೈಮಿತ್ತಿಕ ಕರ್ಮಗಳು ಆಜ್ಞಾ ಕೈಂಕರ್ಯಗಳೆಂದು ಭಾವಿಸಿ ಅವುಗಳನ್ನನುಷ್ಠಿಸುತ್ತಾ, ಅನುಷ್ಠಿತಾತ್ಮ ಯಾಗ ಫಲತ್ತೈಪ್ಪತ್ತ - ಅನುಷ್ಠಿಸಲ್ಪಟ್ಟ, ಈ ತನ್ನ ಆತ್ಮವನ್ನು, "ಓಮಿತ್ಯಾತ್ಮಾನಂ ಯುಂಜೀತ" ಎಂದೂ, "ಪ್ರತ್ಯಗ್ರೂಪೇ ಹವಿಷಿ" ಎಂದೂ ಹೇಳಿರುವಹಾಗೆ ಲಕ್ಷ್ಮೀನಾರಾಯಣರಿಬ್ಬರಲ್ಲೂ ಸಮರ್ಪಿಸಿದ ಆತ್ಮಯಾಗದ ಫಲವಾದ ಪರಿಪೂರ್ಣ ಬ್ರಹ್ಮಾನುಭವವನ್ನು ಕುರಿತ ವಿಷಯದಲ್ಲಿ. ಕರ್ತವ್ಯಾಂತರ ನಿರಪೇಕ್ಷನಾಗವುಮ್ - ಬೇರೇ ಇನ್ನು ಯಾವ ಕರ್ತವ್ಯವ ಎಂದರೆ ಇನ್ನು ಯಾವ ಉಪಾಯಾನುಷ್ಠಾನವ ಅಪೇಕ್ಷೆಯಿಲ್ಲನೆಂದು. ಆಳ್ವಾರ್‌ಗಳೂ, ಮಹರ್ಷಿಗಳೂ, ಭಗವಚ್ಛಾಸ್ತ್ರಜ್ಞಳೂ, ವೇದಜ್ಞಳೂ, ಘೋಷಿಯಾನಿನ್ರನ - ಉದ್ಘೋಷಿಸುತ್ತಾ ಇವೆ, ವಿಳಂಬವನ್ನು ಸಹಿಸತಕ್ಕವನೂ ಮತ್ತು ಸಾಮರ್ಥ್ಯವಿರುವವನೂ ಉಪಾಸನವನ್ನು ಅನುಷ್ಠಿಸತಕ್ಕದ್ದು. ಇವರಲ್ಲೇನೂ ಸ್ವರೂಪವಿರುದ್ಧವಿಲ್ಲವು. ಸ್ವರೂಪಾನುಗುಣವಾದ ಉಪಾಯವೇ; ಆದರೆ ಅಸಮರ್ಥನಾಗಿಯೂ ಈ ಜನ್ಮಕ್ಕಿಂತ ಹೆಚ್ಚುಕಾಲ ವಿಳಂಬವನ್ನು ಸಹಿಸದವನಾಗಿಯೂ ಇದ್ದರೆ, ಅಂತವನಿಗೆ ಭರನ್ಯಾಸವೇ ಉಪಾಯವು. ಶಕ್ಯವನುಷ್ಠಾನ ... ಎಂದರೇ ಈತನು ಕೃತಕೃತ್ಯನ, ಈತನು ಮೋಕ್ಷಪ್ರಾಪ್ತಿಗಾಗಿ ಇನ್ನೇನನ್ನೂ ಮಾಡತಕ್ಕದ್ದಿಲ್ಲವು. ಆದರೆ ನಿತ್ಯನೈಮಿತ್ತಿಕಗಳಾದ ಆಜ್ಞಾ ಕೈಂಕರ್ಯಗಳನ್ನು ಮಾತ್ರ ಅನುಷ್ಠಿಸತಕ್ಕದ್ದು. ಈ ಭರನ್ಯಾಸ ಸಾಧನಕ್ಕಾಗಿ ಹಾಗೆ ಮಾಡತಕ್ಕದ್ದೇನೂ ಇಲ್ಲವು. ಭಗವತ್ಪ್ರೀತ್ಯರ್ಥನಾಗಿ ವರ್ಣಾಶ್ರಮ ಧರ್ಮಗಳನ್ನು ನಡೆಸುವನು ಆವಶ್ಯಕವೆಂದು ಬೇರೆ ವಿಧಿಯಿರುವದರಿಂದ ಅವುಗಳನ್ನು ಮಾತ್ರ ನಡೆಸಿಕೊಂಡು ಬರತಕ್ಕದ್ದು ಎಂಬುದು ತಾತ್ಪರ್ಯವು. ಈ ಭರನ್ಯಾಸವು ಹೀಗೆ ಶಕ್ಯದನುಷ್ಠೇಯವಾಗಿ ಸುಕರವಾಗಿ, ಪ್ರಮಾಣ ರಹಿತವಾಗಿ, ಕರ್ತವ್ಯಾಂತರ ನಿರಪೇಕ್ಷವಾದ ಉಪಾಯವೆಂದು ಆಳ್ವಾರ್‌ಗಳೂ, ಮಹರ್ಷಿಗಳೂ, ಭಗವಚ್ಛಾಸ್ತ್ರವೂ, ವೇದಗಳೂ, ಕೂಗಾಡುತ್ತವೆಂದು ಒಂದೊಂದು ದಿವ್ಯಸೂಕ್ತಿಯನ್ನು ಉದಾಹರಿಸುತ್ತಾರೆ.

ಆಳ್ವಾರ್ ಸೂಕ್ತಿಗೆ ಕಿಯಾದ ನೀಳ್‌ವಿಯಲ್ ಎಂಬ ಪಾಶುರವನ್ನು ಉದಾಹರಿಸುತ್ತಾರೆ ಆ ಪಾಶುರದ ಪಾಠವೇನೆಂದರೆ:—

ಎಯ್ದ ಕ್ಕೂವಿದ ಲಾವದೇ ಯೆನಕ್ಕೆವ್ವ ತೆವ್ವತ್ತುಳಾಯುಮಾಯ್ ನಿನ್ರು । ಕೈತವಙ್ಗಳ್ ಶೆಯ್ಯುಙ್ಗರುಮೇನಿಯಮ್ಮಾನೇ ॥ ಶೆಯ್ದ ವೇಳ್ ವಿಯರ್ ವೈಯತ್ತೇವರ ರಾಚ್ಚಿರೀವರ ಮಙ್ಗಳ ನಗರ್ । ಕೈ ತೊಳ ವಿರುನ್ದಾಯದು ನಾನುಙ್ಗಣ್ಡೇನೆ ॥

ಆಶ್ರಿತರಿಗೆ, ಪ್ರತಿಕೂಲರಾದ ದುರ್ಯೋಧನ, ರಾವಣ, ಕಂಸಾದಿಗಳಿಗಲ್ಲವೋ ಅವರುಗಳ ಮಧ್ಯೆಯೇ ಇದ್ದುಕೊಂಡು ಕೃತ್ರಿಮಗಳನ್ನು ಮಾಡತಕ್ಕದ್ದು. ನಿನ್ನನ್ನಾಶ್ರಯಿಸಿಕೊಂಡು ನೀನಲ್ಲದೆ ಬೇರೆ ರಕ್ಷಕರಿಲ್ಲವೆಂದಿರುವ ನಮ್ಮಗಳಿಗೆ ಪುರುಷಾರ್ಥಪ್ರಾಪ್ತಿಗೆ ಸಾಧನವಾಗಿ ಅನುರೂಪವಾದುದು ಯಾವದೂ ಇಲ್ಲದಿದ್ದರೂ ನೀನೇ ನನ್ನ ಅನುಗ್ರಹಕ್ಕಾಗಿ ಬೇಕಾದ ಉಪಾಯವನ್ನು ಸಾಧಿಸಿಕೊಡತಕ್ಕದ್ದು. ಪ್ರತಿಪಕ್ಷದ ಸಂಬಂಧ ಸ್ವಲ್ಪವೂ ಇಲ್ಲದೆ ಸಾಧನಾನುಷ್ಠಾನಮಾಡಿ ಕೃತಕೃತ್ಯರಾಗಿ, ಈ ಲೋಕದಲ್ಲಿ ಜ್ಞಾನ ಸಂಪತ್ತಿನಿಂದ ನಿತ್ಯಸೂರಿಗಳಿಗೆ ಸಮಾನರಾದ ಶ್ರೀವೈಷ್ಣವರು ನಿರಂತರ ವಾಸಮಾಡುವ ತಿರುವಣ್ಣ ಮಙ್ಗಲನಗರೆಂಬ ಹೆಸರನ್ನು ಧರಿಸಿರುವ ವಾನಮಾಮಲೆಯಲ್ಲಿ ಅವರುಗಳು ಆಶ್ರಯಿಸುವದಕ್ಕಾಗಿ ಬಿಜಮಾಡಿಸಿರುತ್ತೀಯೇ. ಅದನ್ನು ನಾನು ಕಂಡಿರುತ್ತೇನೆ. ಇಲ್ಲಿ ಶೆಯ್ದ ವೇಳ್ವಿಯರ್ ಎಂಬಲ್ಲಿ "ಸರ್ವೇವೇದಾಸ್ಸರ್ವವಿದ್ಯಾಸ್ಸಶಾಸ್ತ್ರಾಸ್ಸರ್ವೇ ಯಜ್ಞಾಸ್ಸರ್ವ ಇಜ್ಯಶ್ಚ ಕೃಷ್ಣಃ । ವಿದುಃ ಕೃಷ್ಣಂ ಬ್ರಾಹ್ಮಣಾಸ್ತತ್ತ್ವತೋ ಯೇ ತೇಷಾಂ ರಾಜನ್ ಸರ್ವಯಜ್ಞಾಸ್ಸಮಾಪ್ತಾಃ" ॥ (ಭಾರ) ಎಂಬ ಶ್ಲೋಕವು ಅನುಸಂಧೇಯವು. ಸಮಸ್ತ ವೇದಗಳೂ ವಿದ್ಯೆಗಳೂ ಶಾಸ್ತ್ರಗಳೂ ಯಜ್ಞಯಾಗಾದಿಗಳೂ ಹೀಗೆ ಸಮಸ್ತವಾದ ಉಪಾಯವೂ ಉಪಾಯ ಫಲಕರಣೆಗಳೂ ಎಲ್ಲವೂ ಶ್ರೀಕೃಷ್ಣನೇ. ಹೀಗೆ ಯಥಾರ್ಥವಾಗಿ ತಿಳಿದ ಬ್ರಹ್ಮವಿತ್ತುಗಳು ಯಾರೋ ಅವರಿಗೆ ಸಮಸ್ತಸಾಧನರೂಪ ಯಜ್ಞಗಳೂ ಸಮಾಪ್ತವಾದವೆಂದು ಭಾವಿಸತಕ್ಕದ್ದು. ಅವರು ಕೃತಕೃತ್ಯರು ಎಂಬ ಭಾವವು ಮಹರ್ಷಿ ಸೂಕ್ತಿಗೆ:—

"ಅನೇನೈವತು ಮನ್ತ್ರೇಣ ಸ್ವಾತ್ಮಾನಂ ಮಯಿನಿಕ್ಷಿಪೇತ್ ।
ಮಯಿನಿಕ್ಷಿಪ್ತ ಕರ್ತವ್ಯಃ ಕೃತಕೃತ್ಯೋ ಭವಿಷ್ಯತಿ" ॥

ಈ ದ್ವಯ ಮಂತ್ರೋಚ್ಚಾರಣೆ ಪೂರ್ವಕವಾಗಿ ಆತ್ಮಾವನ್ನು ನನ್ನಲ್ಲಿ (ನನ್ನ ಪಾದದಲ್ಲಿ) ಇಡತಕ್ಕದ್ದು. ಹೀಗೆ ಆತ್ಮ ನಿಕ್ಷೇಪರೂಪವಾದ ಉಪಾಯಾನುಷ್ಠಾನವನ್ನು ಮಾಡಿದರೆ ಕೃತಕೃತ್ಯನಾಗುತ್ತೀಯೆ. ಎಂಬುದು ಈ ಶ್ಲೋಕಾರ್ಥವು. ಇದು ಹಿಂದೆ ಸಾಙ್ಗಪ್ರಪದನಾಧಿಕಾರದಲ್ಲಿ ಉಪಪಾದಿತವು. ಭಗವಚ್ಛಾಸ್ತ್ರ ಪ್ರಮಾಣಕ್ಕೆ "ಅನುಷ್ಠಿತ ಕ್ರತುಶತೋ ಭವತ್ಯೇವ ನಸಂಶಯಃ" ಅಂತಹ ಕೃತಕೃತ್ಯನು ನೂರು ಕ್ರತುಗಳನ್ನು ಅನುಷ್ಠಿಸಿದವನಿಗೆ ಸಮಾನನು ಎಂದು

ಹೇಳಿರುತ್ತದೆ ಹಾಗೆ ನೋಡಿದರೆ ಅವನಿಗಿಂತ ಅಧಿಕನು ಎಂದೇ ಅಭಿಪ್ರಾಯವು. ಮಹರ್ಷಿ ವಾಕ್ಯಕ್ಕೆ :—"ಸರ್ವೇ ವೇದಾ ಸ್ಸರ್ವವಿದ್ಯಾ ಸ್ಸಶಾಸ್ತ್ರಾಃ ಎಂಬುದು ಅನುಸಂಧೇಯವು. ವೇದಪ್ರಮಾಣಕ್ಕೆ :—"ತಸ್ಯೈವಂ ವಿದುಷೋ ಯಜ್ಞಸ್ಯಾತ್ಮಾ ಯಜಮಾನ ಶ್ಶ್ರದ್ಧಾ ಪತ್ನೀ, ಶರೀರ ಮಿಧ್ಮ, ಮುರೋ ವೇದಿ, ರ್ಲೋಮಾನಿ ಬರ್ಹಿ, ರ್ವೇದಶ್ಶಿಖಾ, ಹೃದಯಂ ಯೂಪಃ, ಕಾಮ ಮಾಜ್ಯಂ, ಮನುಃ ಪಶು, ಸ್ತಪೋಽಗ್ನಿ, ಶ್ಶಮಯಿತಾ ದಕ್ಷಿಣಾ, ವಾಗ್ಘೋತಾ, ಪ್ರಾಣ ಉದ್ಗಾತಾ, ಚಕ್ಷುರಧ್ವರ್ಯು, ಮನೋ ಬ್ರಹ್ಮಾ, ಶ್ರೋತ್ರಮಗ್ನೀ ದ್ಯಾವದ್ಧ್ರಿಯತೇ ಸಾದೀಕ್ಷಾ, ಯದಶ್ನಾತಿ ಯತ್ಪಿಬತಿ ತದಸ್ಯ ಸೋಮಪಾನಂ, ಯದ್ರಮತೇ ತದುಪಸದೋ, ಯತ್ಸಂಚರತ್ಯುಪವಿಶತ್ಯುತ್ತಿಷ್ಠತೇ ಚ ಸಪ್ರವರ್ಗ್ಯೋ, ಯನ್ಮುಖಂ ತದಾಹನೀಯೋ, ಯದಸ್ಯ ವಿಜ್ಞಾನಂ ಯಜ್ಜುಹೋತಿ ಯತ್ಸಾಯಂ ಪ್ರಾತರತ್ತಿ ತತ್ಸಮಿಧೋ, ಯತ್ಸಾಯಂ ಪ್ರಾತರ್ಮಧ್ಯಂದಿನಂ ಚ ತಾನಿ ಸವನಾನಿ, ಯೇ ಅಹೋರಾತ್ರೇ ತೇ ದರ್ಶಪೂರ್ಣಮಾಸೌ, ಯೇಽರ್ಧಮಾಸಾಶ್ಚ ಮಾಸಾಶ್ಚ ತೇ ಚಾತುರ್ಮಾಸ್ಯಾನಿ, ಯಋತವಸ್ತೇ ಪಶುಬಂಧಾಃ, ಯೇ ಸಂವತ್ಸರಾಶ್ಚ ಪರಿವತ್ಸರಾಶ್ಚ ತೇ ಹರ್ಗಣಾಃ, ಸರ್ವವೇದಸಂವಾ ಏತತ್ಸತ್ರಂ ಯನ್ಮರಣಂ ತದವಭೃಥ ಏತದ್ವೈ ಜರಾಮರ್ಯಮಗ್ನಿಹೋತ್ರಂ ಸತ್ರಂ ಯಏವಂ ವಿದ್ವಾ ನುದಗಯನೇ ಪ್ರಮೀಯತೇ ದೇವಾನಾಮೇವ ಮಹಿಮಾನಂ ಗತ್ವಾ ದಿತ್ಯಸ್ಯ ಸಾಯುಜ್ಯಂ ಗಚ್ಛತ್ಯಥ ಯೋ ದಕ್ಷಿಣೇ ಪ್ರಮೀಯತೇ, ಪಿತೃಣಾ ಮೇವ ಮಹಿಮಾನಂ ಗತ್ವಾಚಂದ್ರಮಸಸ್ಸಾಯುಜ್ಯಂ ಗಚ್ಛತ್ಯೇತೌವೈ ಸೂರ್ಯಾಚಂದ್ರಮಸೋರ್ಮಹಿಮಾನೌ ಬ್ರಾಹ್ಮಣೋ ವಿದ್ವಾ ನಭಿಜಯತಿ ತಸ್ಮಾದ್ಬ್ರಹ್ಮಣೋ ಮಹಿಮಾನ ಮಾಪ್ನೋತಿ ತಸ್ಮಾದ್ಬ್ರಹ್ಮಣೋಮಹಿಮಾನ ಮಿತ್ಯುಪನಿಷತ್" ಇಲ್ಲಿ ನ್ಯಾಸವಿದ್ಯೆಯು ಪರಮಾತ್ಮನನ್ನು ಕುರಿತು ಮಾಡುವ ಒಂದು ಯಜ್ಞದ ಹಾಗೆ ರೂಪಕದಿಂದ ಹೇಳಲ್ಪಟ್ಟು ಅದನ್ನನುಷ್ಠಿಸಿರುವ ಒಬ್ಬ ಮಹಾನುಭಾವನ ಸ್ವರೂಪಸ್ಥಿತಿ ಪ್ರವೃತ್ತಿಗಳೆಲ್ಲಾ ಆ ಯಜ್ಞದ ಅಂಗಗಳೆಂದೂ ಆ ಮಹಾನುಭಾವನೂ ತತ್ಸಂಬಂಧಿಗಳೂ ಸಹ ಕೃತಕೃತ್ಯರೆಂದೂ ಉಪದೇಶಿಸಲ್ಪಟ್ಟಿರುತ್ತದೆ. ಈ ಯಜ್ಞದಲ್ಲಿ ಜೀವಾತ್ಮನೇ ಯಜಮಾನನು ಶ್ರದ್ಧೆಯೇ ಈ ಯಜಮಾನನ ಪತ್ನಿಯು, ಅಪತ್ನೀಕನು ಯಜ್ಞ ಮಾಡಲು ಸಾಧ್ಯವಿಲ್ಲವು; ಪತ್ನಿಯು ಬೇಕು, ಶ್ರದ್ಧೆಯೇ - ಪ್ರಾಪ್ತಿಯಲ್ಲಿ ತ್ವರೆಯೇ ಪತ್ನಿಯು, ಶರೀರ ಮಿಧ್ಮಂ - ಶರೀರವೇ ಕಟ್ಟಿಗೆಯು, ಉರೋವೇದಿಃ-ವಕ್ಷಸ್ಥಳವೇ ವೇದಿಕೆಯು.

ಲೋಮಾನಿ ಬರ್ಹಿಃ - ಕೂದಲುಗಳೇ ಆಸ್ತರಣ ದರ್ಭೆಗಳು, **ವೇದಶ್ಶಿಖಾ** - ಶಿಖೆಯೇ ವೇದವು, **ಹೃದಯಂ ಯೂಪಃ** - ಹೃದಯವೇ ಪಶುವನ್ನು ಕಟ್ಟುವ ಯೂಪಸ್ತಂಭವು, **ಕಾಮ ಆಜ್ಯಂ** - ಪರಮಪದದಲ್ಲಿ ಪರಿಪೂರ್ಣ ಬ್ರಹ್ಮಾನುಭವವೂ ತತ್ಕೈಂಕರ್ಯವೂ ಬೇಕೆಂಬ ಕಾಮನೆಯೇ ಆಜ್ಯಾಹುತಿಗೆ ಬೇಕಾದ ತುಪ್ಪವು, **ಮನ್ಯುಃ ಪಶುಃ** - ಪ್ರಪನ್ನನಿಗೆ ಸ್ವರೂಪ ವಿರುದ್ಧವಾಗಿ ಛೇದಿಸಲು ಅರ್ಹವಾದ ಕೋಪವೇ ಪಶುವು, **ಶಮಯಿತಾ ದಕ್ಷಿಣಾ** - ಪ್ರಪನ್ನನಿಗೆ ಸರ್ವಭೂತಗಳೂ ಅನುಕೂಲರಾದುದರಿಂದ ಶತ್ರುಮಿತ್ರವರ್ಗಗಳ ಭಾವನೆಯೇ ಇಲ್ಲದೆ ಶಾಂತತೆಯಿಂದಿರೋಣವೇ ಯಜ್ಞಕ್ಕೆ ಬೇಕಾದ ದ್ರವ್ಯಸಹಾಯವು, **ವಾಕ್ ಹೋತಾ** - ಆ ಪ್ರಪನ್ನನ ವಾಕ್ಕೇ, ಸರ್ವೇಶ್ವರನ ಗುಣಚೇಷ್ಟಿತಗಳ ವಿಷಯವಾದ ವಾಕ್ಕೇ, ಋಗ್ವೇದ ಪಠನ ಮಾಡುವ ಹೋತೃವು. **ಪ್ರಾಣ ಉದ್ಗಾತಾ**-ಅವನ ನಿಶ್ವಾಸೋಚ್ಛ್ವಾಸ ಪ್ರಾಣವಾಯುವು ಸಾಮಗಾನ ಮಾಡುವ ಉದ್ಗಾತೃವು, **ಚಕ್ಷುರಧ್ವರ್ಯುಃ** - ಆತನ ಜ್ಞಾನವೇ ಯಜುರ್ವೇದವನ್ನು ಪಠಿಸುವ ಅಧ್ವರ್ಯುವು, **ಮನೋ ಬ್ರಹ್ಮಾ** - ಆತನ ಮನಸ್ಸೇ ಈ ನ್ಯಾಸಯಜ್ಞನಿರ್ವಾಹಕನಾದ ಬ್ರಹ್ಮನು, **ಶ್ರೋತ್ರಮಗ್ನೀತ್** - ಭಗವತ್ಸ್ವರೂಪ ರೂಪ ಗುಣ ವಿಭವಾದಿಗಳನ್ನು ಶ್ರವಣಮಾಡುವ ಕಿವಿಯೇ ಆಗ್ನೀಧ್ರವು, **ಯಾವದ್ಧ್ರಿಯತೇ ಸಾದೀಕ್ಷಾ** - ಆತನು ಜೀವಿಸಿರುವವರೆಗೂ ಯಜ್ಞದೀಕ್ಷೆಯು, **ಯದಶ್ನಾತಿ ಯತ್ಪಿಬತಿ ತದಸ್ಯ ಸೋಮಪಾನಂ** - ಆತನು ಏನನ್ನು ಊಟಮಾಡುತ್ತಾನೋ ಏನನ್ನು ಕುಡಿಯುತ್ತಾನೋ ಅದೇ ಯಜ್ಞದಲ್ಲಿ ಮಾಡುವ ಸೋಮಪಾನವು, **ಯದ್ರಮತೇ ತದುಪಸದಃ** - ಆತನು ಭಗವಧ್ಯಾನರೂಪದಲ್ಲಿ ಆಸಕ್ತನಾಗಿ ರಮಿಸುವದೆಲ್ಲಾ ಆ ಯಜ್ಞದ ಉಪಸತ್ತುಗಳು, **ಯತ್ಸಂಚರತ್ಯುಪವಿಶತ್ಯುತ್ತಿಷ್ಠತೇ ಚ ಸಪ್ರವರ್ಗ್ಯಃ** - ತುಲಸೀ ಪುಷ್ಪಾದಿ ಹರಣಕ್ಕಾಗಿ ಮಾಡುವ ಸಂಚಾರವೂ ಮತ್ತು ಭಗವದಾರಾಧನರೂಪವಾಗಿ ಕೂಡುವದು ಏಳುವದು ಪ್ರದಕ್ಷಿಣ ನಮಸ್ಕಾರಾದಿಗಳೆಲ್ಲಾ ಈ ಯಜ್ಞದ ಪ್ರವರ್ಗ್ಯವು, **ಯನ್ಮುಖಂ ತದಾಹವನೀಯಃ** - ಆತನ ಮುಖವೇ ಆಹವನೀಯಾಗ್ನಿಯು, **ಯದಸ್ಯ ವಿಜ್ಞಾನಂ ತಜ್ಜುಹೋತಿ** - ಪರಮಾತ್ಮನು ನಿರ್ದೋಷನೆಂಬ ಜ್ಞಾನ ಯಾವುದೋ ಅದೇ ಹೋಮವು, **ಯತ್ಸಾಯಂ ಪ್ರಾತರತ್ತಿ ತತ್ಸಮಿಧಃ** - ಸಾಯಂಕಾಲ ಪ್ರಾತಃಕಾಲಗಳ ಊಟವೇ ಸಮಿತ್ತುಗಳು, **ಯತ್ಸಾಯಂ ಪ್ರಾತರ್ಮಧ್ಯಂದಿನಂ ಚ ತಾನಿ ಸವನಾನಿ** - ಸಾಯಂಕಾಲ ಪ್ರಾತಃಕಾಲ ಮಧ್ಯಾಹ್ನ ಹೀಗೆ ತ್ರಿಕಾಲದಲ್ಲೂ ಅನುಷ್ಠಿಸುವದೆಲ್ಲಾ ತ್ರಿಕಾಲ ಸವನಗಳು, **ಯೇ ಅಹೋರಾತ್ರೇ ತೇ ದರ್ಶಪೂರ್ಣಮಾಸೌ** - ಅಹಸ್ಸು ರಾತ್ರಿಗಳೇ ದರ್ಶ

ಪೂರ್ಣಮಾಸೆಗಳು, ಯೇ ಅರ್ಧಮಾಸಾಶ್ಚ ಮಾಸಾಶ್ಚ ತೇ ಚಾತುರ್ಮಾಸ್ಯಾನಿ- ಪಕ್ಷಪಕ್ಷಗಳಲ್ಲಿ ಅನುಷ್ಠಿಸುವದೆಲ್ಲಾ ಚಾತುರ್ಮಾಸ್ಯಗಳು, ಯ ಋತವಸ್ತೇ ಪಶುಬಂಧಾಃ - ಋತುಗಳಲ್ಲಿ ಅನುಷ್ಠಿಸುವದೆಲ್ಲಾ ಪಶುಬಂಧಗಳು, ಯೇ ಸಂವತ್ಸರಾಶ್ಚ ಪರಿವತ್ಸರಾಶ್ಚ ತೇ ಹರ್ಗಣಾಃ - ಸಂವತ್ಸರ ಪರಿವತ್ಸರಗಳೇ ಅಹರ್ಗಣಗಳು, ಸರ್ವವೇದ ಸಂವಾ ಏತತ್ಸತ್ರಂ - ಈ ಪ್ರಪನ್ನನ ಸಮಸ್ತವೂ ಸತ್ರಪರಿಕರಗಳು, ಯನ್ಮರಣಂ ತದವಭೃಥಃ - ಈ ಪ್ರಪನ್ನನ ದೇಹ ವಿಯೋಗವೇ ಯಜ್ಞಪೂರ್ತಿಯಾದನಂತರ ನಡೆಸುವ ಅವಭೃಥವು, ಆದುದರಿಂದ ಏತದ್ವೈ ಜರಾಮರ್ಯಮಗ್ನಿಹೋತ್ರಂ - ಈ ಪ್ರಪನ್ನನ ವಾರ್ಧಕಕ್ಕೆ ಅನಂತರ ಮರಣಾಂತದವರೆಗೂ ಒಂದು ಅಗ್ನಿಹೋತ್ರವು, ಯ ಏವಂ ವಿದ್ವಾನ್ - ಯಾವ ಪ್ರಪನ್ನನು ಈ ನ್ಯಾಸವನ್ನು ಒಂದು ಯಜ್ಞವೆಂದು ತಿಳಿಯುವನೋ, ಅವನು ಉದಗಯನೇ ಪ್ರಮೀಯತೇ - ಉತ್ತರಾಯಣದಲ್ಲಿ ಮೃತಿ ಹೊಂದಿದರೆ, ದೇವಾನಾ ...ಸಾಯುಜ್ಯಂಗಚ್ಛತಿ - ದೇವಲೋಕದ್ವಾರ ಪರಬ್ರಹ್ಮಪ್ರಾಪ್ತಿಯನ್ನು ಹೊಂದುವನು ; ಯೋ ದಕ್ಷಿಣೇ ...ಚಂದ್ರಮಸ ಸ್ಸಾಯುಜ್ಯಂ ಗಚ್ಛತಿ-ದಕ್ಷಿಣಾಯನದಲ್ಲಿ ಮೃತನಾದ ಪ್ರಪನ್ನನು ಪಿತೃಲೋಕ ಚಂದ್ರದ್ವಾರಾ ಗಮನವುಳ್ಳವನಾಗಿ ಪರಬ್ರಹ್ಮಪ್ರಾಪ್ತಿಯನ್ನು ಹೊಂದುವನು. ಏತಾನ್ವೈ......ಮಹಿಮಾನೌ ಹೀಗೆ ಭರನ್ಯಾಸವನ್ನು ಅನುಷ್ಠಿಸಿದವನು ಕರ್ತವ್ಯಾಂತರ ನಿರಪೇಕ್ಷನು ; ಇದಕ್ಕೆ ಸಕೃದೇವ ಪ್ರಪನ್ನಸ್ಯ ಕೃತ್ಯಂನೈವಾನ್ಯ ದಿಷ್ಯತೇ" ಎಂಬುದು ಅನುಸಂಧೇಯವು. ಈ ಪ್ರಕಾರವಾಗಿ ಸಕೃತ್ಪ್ರಪದನಾನುಷ್ಠಾನವನ್ನು ಮಾಡಿದ ಪ್ರಪನ್ನನ ಅನುಷ್ಠಾನವು, ಬೇರೆಬೇರೆ ಇನ್ನು ಯಾವ ಸಾಧನರೂಪ ಕೃತ್ಯವನ್ನೂ ಅಪೇಕ್ಷಿಸುವದಿಲ್ಲವು ಮತ್ತು ಅನೇನೈವತು ಮನ್ತ್ರೇಣ ಸ್ವಾತ್ಮಾನಂ ಮಯಿ ನಿಕ್ಷಿಪೇತ್ । ಮಯಿನಿಕ್ಷಿಪ್ತ ಕರ್ತವ್ಯಃ ಕೃತಕೃತ್ಯೋ ಭವಿಷ್ಯಸಿ॥ ಎಂಬ ಸಾತ್ವತ ಪ್ರಮಾಣವಾಕ್ಯವು ಕೃತಕೃತ್ಯನೆಂದು ಹೇಳುವದರಿಂದ ಅನುಸಂಧೇಯವು. ಹಿಂದಿನ ಪ್ರಮಾಣವು ಭಕ್ತಿಯೋಗ ನಿಷ್ಠನು ಕೃತಕೃತ್ಯನೆಂಬುದಕ್ಕೂ ಈ ಶ್ಲೋಕವು ಪ್ರಪತ್ತಿನಿಷ್ಠನು ಕೃತಕೃತ್ಯನೆಂಬುದಕ್ಕೂ ನಿದರ್ಶನಂಗಳಾಗಿ ಇಟ್ಟುಕೊಳ್ಳಬಹುದು. ಹೀಗೆ ಅನೇಕ ಶಾಸ್ತ್ರಪ್ರಮಾಣಗಳು ಉದ್ಘೋಷಿಸುತ್ತವೆ ಎಂಬ ಭಾವವು.

ಉಪಾಸನಕ್ಕಿಂತಲೂ ನ್ಯಾಸವು ಶ್ರೇಷ್ಠವಾದುದು.

ಆಗ್ನೆಯರಾಲ್ - ಹೀಗೆ ಮಹರ್ಷಿಗಳೂ ಭಗವಚ್ಛಾಸ್ತ್ರಗಳೂ ವೇದಗಳೂ ಕೂಡ ಪ್ರಪತ್ತಿಯನ್ನನುಷ್ಠಿಸಿದವನು ಕೃತಕೃತ್ಯನೆಂದು ಉದ್ಘೋಷಿಸುವದರಿಂದ

ಉಪಾಸನಾತ್ ನ್ಯಾಸಸ್ಯ ಮಾಹಾತ್ಮ್ಯಮ್.

ಆಗೈಯಾಲ್, (೧)"ತಪಸ್ವಿಭ್ಯೋಽಧಿಕೋಯೋಗೀ ಜ್ಞಾನಿಭ್ಯೋಪಿ ಮತೋಧಿಕಃ । ಕರ್ಮಿಭ್ಯಶ್ಚಾಧಿಕೋಯೋಗೀ ತಸ್ಮಾದ್ಯೋಗೀ ಭವ

(೧) "ತಪಸ್ವಿಭ್ಯಃ" ಇತ್ಯಾದಿಗಳಾಲೇ - ಇವೇ ಮೊದಲಾದವುಗಳಿಂದ, ಪ್ರವೃತ್ತಿಧರ್ಮಙ್ಗಳಿಲ್ ಕಾಟ್ಟಿಲ್, ನಿವೃತ್ತಿ ಧರ್ಮಙ್ಗಳ್ ಶ್ರೇಷ್ಠಙ್ಗಳಾನಾರ್ರ್ಪೋಲುವುಮ್ - ಪ್ರವೃತ್ತಿ ಧರ್ಮಗಳಿಗಿಂತಲೂ ನಿವೃತ್ತಿ ಧರ್ಮಗಳು ಶ್ರೇಷ್ಠಗಳಾದಹಾಗೆ, ಈ ಶ್ಲೋಕಾರ್ಥವೇನೆಂದರೆ "ತಪಸ್ವಿಭ್ಯಃ"-ಫಲಕಾಮನೆಯಿಂದ ಮಾಡುವ ಕೇವಲ ಕೃಚ್ಛ್ರಚಾಂದ್ರಾಯಣ, ಉಪವಾಸಾದಿಗಳನ್ನನುಷ್ಠಿಸುವವರಿಗಿಂತಲೂ, ಯೋಗೀ - ತನ್ನ ಆತ್ಮೋಪಾಸನೆಯನ್ನು ಮಾಡುವನು, ಅಧಿಕಃ - ಶ್ರೇಷ್ಠನು, ಜ್ಞಾನಿಭ್ಯೋಪಿ - ಶಾಸ್ತ್ರಜ್ಞಾನನಿಷ್ಠನಿಗಿಂತಲೂ, ಯೋಗಿಯು ಶ್ರೇಷ್ಠನೆಂಬುದು, ಮತಃ - ನನ್ನ ಅಭಿಪ್ರಾಯವು, ಕರ್ಮಿಭ್ಯಃ - ಫಲಕಾಮನೆಯಿಂದ ಮಾಡುವ ಕರ್ಮನಿಷ್ಠರುಗಳಿಗಿಂತಲೂ ಕೂಡ, ಯೋಗಿಯೇ ಶ್ರೇಷ್ಠನು, ಎಂದರೆ ಈ ತಪಸ್ವೀ ಜ್ಞಾನೀ ಕರ್ಮೀ ಎಲ್ಲರೂ ಫಲಕಾಮನೆಯುಳ್ಳವರಾದುದರಿಂದ ಪ್ರವೃತ್ತಿಧರ್ಮನಿಷ್ಠರು, ಯೋಗಿಯಾದರೋ ನಿವೃತ್ತಿಧರ್ಮನಿಷ್ಠನು, ಆದುದರಿಂದ ಪ್ರವೃತ್ತಿಧರ್ಮವೂ ತನ್ನಿಷ್ಠರೂ ಇವರುಗಳಿಗಿಂತ ನಿವೃತ್ತಿಧರ್ಮವೂ ತನ್ನಿಷ್ಠರೂ ಶ್ರೇಷ್ಠರೆಂಬ ಭಾವವು. ತಸ್ಮಾತ್ - ಆ ಕಾರಣದಿಂದ, ಹೇ ಅರ್ಜುನ - ಓ ಅರ್ಜುನನೇ, ಯೋಗೀಭವ - ಶ್ರುತಿಯಲ್ಲಿ ಪ್ರಜಾಪತಿವಾಕ್ಯದಿಂದ ಹೇಳಲ್ಪಟ್ಟ ಪ್ರತ್ಯಗಾತ್ಮೋಪಾಸಕನಾಗು'' ಎಂಬುದು ಈ ಶ್ಲೋಕಾರ್ಥವು; ಈ ಉಪಾಸನಕ್ಕೆ ಅಙ್ಗವಾದ ಕರ್ಮಯೋಗದ ಪ್ರಭೇದಗಳಲ್ಲೂ

"ದ್ರವ್ಯಯಜ್ಞಾ ಸ್ತಪೋಯಜ್ಞಾ ಯೋಗಯಜ್ಞಾಸ್ತಥಾಪರೇ ।
ಸ್ವಾಧ್ಯಾಯ ಜ್ಞಾನಯಜ್ಞಾಶ್ಚ ಯತಯಸ್ಸಂಶಿತವ್ರತಾಃ"॥ (ಗೀ.೪.೨೮),

ರಲ್ಲಿ ಹೇಳಿರುವಹಾಗೆ ತಪಸ್ವಿಗಳೂ, ಜ್ಞಾನಿಗಳೂ, ಕರ್ಮಿಗಳೂ ಉಂಟು. ಇವರುಗಳು "ತಪಸ್ವಿಭ್ಯೋಧಿಕೋಯೋಗೀ" ಎಂಬಲ್ಲಿ ಹೇಳಿರುವ ತಪಸ್ವಿಮೊದಲಾದವರುಗಳು ಸೇರಲಿಲ್ಲವು. ಗೀ. ೪. ೨೮. ರಲ್ಲಿ ತಪಸ್ವಿ ಮೊದಲಾದವರು ಫಲಾಪೇಕ್ಷೆಯಿಲ್ಲದೆ, ಭಗವತ್ಪ್ರೀತ್ಯರ್ಥವಾಗಿ ಮಾಡುವದರಿಂದ ನಿವೃತ್ತಿಧರ್ಮಪರರು; ತಪಸ್ವಿಭ್ಯೋಧಿಕೋಯೋಗೀ ಎಂಬ ಯೋಗಿಗಿಂತ ನಿಕೃಷ್ಟರಾಗಿ ಭಾವಿಸಲ್ಪಟ್ಟವರು ಪ್ರವೃತ್ತಿಧರ್ಮನಿಷ್ಠರು ಆದುದರಿಂದ ಈ ತಪಸ್ವಿಗಳ

(೧) ಗೀ. ೬. ೪೬.

ರ್ಮ್ಮನ ॥ ಇತ್ಯಾದಿಗಳಾಲೇ ಪ್ರವೃತ್ತಿ ಧರ್ಮಙ್ಗಳಿರ್ಕಾಟ್ಟಿಲ್ ನಿವೃತ್ತಿಧರ್ಮಙ್ಗಳ್ ಶ್ರೇಷ್ಠಙ್ಗಳಾನಾರ್ಪೋಲವುಮ್, ಅನ್ಯೆ ತನ್ನಿಲ್ ಆತ್ಮವಿಷಯಮಾನ ಯೋಗಮ್ ಶ್ರೇಷ್ಠಮಾನಾರ್ಪೋಲವುಮ್, ಆತ್ಮವಿಷಯ ಯೋಗಙ್ಗಳಿರ್ಕಾಟ್ಟಿಲ್ (೨) “ಯೋಗಿನಾಮಪಿ ಸರ್ವೇಷಾಂ” ಎಙ್ಗಿರ

ಗಿಂತ, ಕರ್ಮಯೋಗದ ಆ ತಪಸ್ವಿಗಳು ಶ್ರೇಷ್ಠರು. ಪ್ರವೃತ್ತಿ ಧರ್ಮಾನುಷ್ಠಾನದಲ್ಲಿ ಫಲಾಕಾಂಕ್ಷೆಯಿಂದ ಅಧಿಕಾರಿಯು ಕರ್ಮಾನುಷ್ಠಾನಮಾಡುತ್ತಾನೆ. ಫಲಾಕಾಂಕ್ಷೆಯಿಲ್ಲದೆ ಭಗವನ್ಮುಖೋಲ್ಲಾಸಕ್ಕಾಗಿ ಅನುಷ್ಠಿಸುವವನು ನಿವೃತ್ತಿ ಧರ್ಮಪರನು. “ನಿವೃತ್ತಿ ಲಕ್ಷಣಂ ಧರ್ಮ ಮೃಷಿರ್ನಾರಾಯಣೋಽಬ್ರವೀತ್ । ಪ್ರವೃತ್ತಿ ಲಕ್ಷಣಂ ಧರ್ಮಂ ಪ್ರಜಾಪತಿ ರಥಾಬ್ರವೀತ್। ಪ್ರವೃತ್ತಿಃ ಪುನರಾವೃತ್ತಿ ರ್ನಿವೃತ್ತಿಃ ಪರಮಾಗತಿಃ” ಎಂದು ಮೋಕ್ಷಧರ್ಮದಲ್ಲಿ ಹೇಳಿರುವಹಾಗೆ (೨೧೭. ೨ ೪.) ಪ್ರವೃತ್ತಿಧರ್ಮಗಳು ಸಂಸಾರಕ್ಕೆ ಹೇತುವು, ನಿವೃತ್ತಿಧರ್ಮಗಳು ಮೋಕ್ಷಕ್ಕೆ ಹೇತುವು. ಆದುದರಿಂದಲೇ ಪ್ರವೃತ್ತಿ ಧರ್ಮಗಳಿಗಿಂತಲೂ ನಿವೃತ್ತಿ ಧರ್ಮಗಳು ಶ್ರೇಷ್ಠವೆಂದು ಹೇಳಲ್ಪಟ್ಟಿತು, ಇದು ಹೇಗೋ ಹಾಗೆಯೇ ಪ್ರಪತ್ತಿಯು ಉಪಾಸನಕ್ಕಿಂತ ಶ್ರೇಷ್ಠವೆಂದು ಮುಂದೆ ಹೇಳುತ್ತಾರೆ. **ಅನ್ಯೆತನ್ನಿಲ್**-ಆ ನಿವೃತ್ತಿ ಧರ್ಮಗಳಿಗಿಂತಲೂ, **ಆತ್ಮವಿಷಯಮಾನ ಯೋಗಮ್ ಶ್ರೇಷ್ಠಮಾನಾರ್ಪೋಲವುಮ್** - ತನ್ನ ಜೀವಾತ್ಮವಿಷಯವಾದ ಉಪಾಸನೆಯು ಹೇಗೆ ಶ್ರೇಷ್ಠವೋ ಹಾಗೆ. ಈ ಶ್ರೇಷ್ಠತೆಯೇ, “**ತಪಸ್ವಿಭ್ಯೋಽಧಿಕೋ ಯೋಗೀ**” ಎಂಬ ಗೀತಾ ಶ್ಲೋಕದಲ್ಲಿ ಉಪಪಾದಿತವು, ನಿವೃತ್ತಿ ಧರ್ಮರೂಪದಲ್ಲಿ ಕೇವಲ ತಪಸ್ಸು ಮೊದಲಾದವುಗಳನ್ನು ಮಾತ್ರ ಅನುಷ್ಠಿಸಿಕೊಂಡಿರುವವನಿಗಿಂತಲೂ ಪ್ರತ್ಯಗಾತ್ಮವಿಷಯವಾದ ಉಪಾಸನಾನಿರತನು ಹೇಗೆ ಶ್ರೇಷ್ಠನೋ ಹಾಗೆ ಎಂಬ ಭಾವವು; ಈ ಅಙ್ಗವಾದ ಜೀವಾತ್ಮವಿಷಯವಾದ ಉಪಾಸನೆಗಿಂತಲೂ, ಅಙ್ಗಿಯಾದ ಮತ್ತು ಭಕ್ತಿಯೋಗದಲ್ಲಿ ವಿಧಿಸಲ್ಪಟ್ಟ ಪರಮಾತ್ಮವಿಷಯವಾದ ಉಪಾಸನೆಯು ಹೇಗೆ ಶ್ರೇಷ್ಠವೋ ಹಾಗೆ ಎಂದು ಮುಂದಿನ ವಾಕ್ಯಖಂಡದಿಂದ ಉಪದೇಶಿಸುತ್ತಾರೆ:—**ಆತ್ಮವಿಷಯ ಯೋಗಙ್ಗಳಿರ್ಕಾಟ್ಟಿಲ್** - ಈ ಜೀವಾತ್ಮ ವಿಷಯವಾದ ಯೋಗಾಭ್ಯಾಸಗಳಿಗಿಂತಲೂ, ಇಲ್ಲಿ ಬಹುವಚನವೇಕೆಂದರೆ, ಜ್ಞಾನಪರಿಪಾಕಕ್ಕೆ ಅನುಗುಣವಾಗಿ ಈ ಯೋಗಗಳು ಉತ್ತರೋತ್ತರಾಧಿಕ್ಯದಿಂದ ನಾಲ್ಕುವಿಧವೆಂದು ಹೇಳುತ್ತದೆ. (ಗೀ. ೬ ೨೯ರಿಂದ ನಾಲ್ಕು ಶ್ಲೋಕಗಳನ್ನು ನೋಡಬಹುದು) “**ಯೋಗಿನಾಮಪಿ ಸರ್ವೇಷಾಂ**”(ಗೀ. ೬. ೪೭)

ಪಡಿಯೇ ವಸುದೇವನಂದನ ವಿಷಯಮಾನ ಯೋಗಮ್ ಶ್ರೇಷ್ಠಮಾನಾರ್ಪ್ಪೋಲುಮ್ ಪರಮಾತ್ಮವಿದ್ಯಾ ವಿಶೇಷಙ್ಗಳೆಲ್ಲಾತ್ತಿಲುಮ್, ನ್ಯಾಸ ನಿಕ್ಷೇಪಾದಿ ಶಬ್ದಙ್ಗಳಾಲೇ ಶೊಲ್ಲಪ್ಪಟ್ಟ ವಿದ್ಯಾವಿಶೇಷಮೇ ಸುಕರತ್ವ, ಸಕೃತ್ಕರ್ತವ್ಯತ್ವ. ಶೀಘ್ರಫಲ ಪ್ರದತ್ವಾದಿಗಳಾಲೇ ಶ್ರೇಷ್ಠತಮಮ್.

ಎಙ್ಗರ ಶ್ಲೋಕತ್ತಿಲ್ ಪಡಿಯೇ - ಎಂದು ಹೇಳಿರುವ ಶ್ಲೋಕದಲ್ಲಿನ ಹಾಗೆ, **ವಸುದೇವನಂದನ ವಿಷಯಮಾನ ಯೋಗಮ್** - ಪರಮಾತ್ಮನಾದ ಶ್ರೀ ಕೃಷ್ಣ ಭಗವಾನ್ ಆಗಿ ವಸುದೇವನ ಕುಮಾರನಾಗಿ ಅವತರಿಸಿದವನನ್ನು ಕುರಿತ ಯೋಗಾ ಭ್ಯಾಸವು ಶ್ರೇಷ್ಠವಾದುದು ಹೇಗೋ ಹಾಗೆಯೇ; ಇದಕ್ಕಿಂತಲೂ ಸರ್ವೋತ್ಕೃಷ್ಟ ವಾಗಿ ಶ್ರೇಷ್ಠತಮವಾದುದುಂಟೆಂದು ಮುಂದೆ ಹೇಳುತ್ತಾರೆ. **ಪರಮಾತ್ಮ ವಿದ್ಯಾ ವಿಶೇಷಙ್ಗಳೆಲ್ಲಾತ್ತಿಲುಮ್** - ಪರಮಾತ್ಮನನ್ನು ಹೊಂದುವ ಮಾರ್ಗವನ್ನುಪ ದೇಶಿಸುವ ಎಲ್ಲಾ ಬ್ರಹ್ಮವಿದ್ಯೆಗಳಿಗಿಂತಲೂ, **ನ್ಯಾಸ** ಮತ್ತು **ನಿಕ್ಷೇಪವೇ** ಮೊದ ಲಾದ ಶಬ್ದಗಳಿಂದ **ಶೊಲ್ಲಪ್ಪಟ್ಟ** - ಹೇಳಲ್ಪಟ್ಟ, ಇಲ್ಲಿನ ಆದಿಪದದಿಂದ, ಭರ ನ್ಯಾಸ, ಪ್ರಪದನ, ಶರಣಾಗತಿ ಮೊದಲಾದ ಶಬ್ದಗಳು ಸೂಚಿಸಲ್ಪಟ್ಟವು. **ವಿದ್ಯಾ ವಿಶೇಷಮೇ** - ನ್ಯಾಸ ವಿದ್ಯೆಯೇ **ಶ್ರೇಷ್ಠತಮ್**-ಉಪಾಸನರೂಪ ಬ್ರಹ್ಮ ವಿದ್ಯೆಗಳಿಗಿಂತಲೂ ಶ್ರೇಷ್ಠವಾದುದೂ, ಅಲ್ಲದೆ ಎಲ್ಲಾ ಉಪಾಯಗಳಿಗಿಂತಲೂ **ಶ್ರೇಷ್ಠತಮ** ವಾದದು ತೈತ್ತಿರೀಯದಲ್ಲಿ **"ವಸುರಣ್ಯೋ"** ಮತ್ತು **"ತಸ್ಯೈವಂ ವಿದುಷೋ"** ಎಂಬ ಮಂತ್ರಗಳಲ್ಲಿ ಉಪಪಾದಿಸಲ್ಪಟ್ಟ ನ್ಯಾಸವಿದ್ಯೆಯೇ ಪರ ಬ್ರಹ್ಮಪ್ರಾಪ್ತಿಗೆ ಸಾಧನವಾದ ಬ್ರಹ್ಮವಿದ್ಯೆಗಳಲ್ಲೆಲ್ಲಾ ಶ್ರೇಷ್ಠತಮವಾದುದು. ಎಲ್ಲಾ ಬ್ರಹ್ಮವಿದ್ಯೆಗಳೂ **"ವಿಕಲ್ಪೋऽವಿಶಿಷ್ಟಫಲತ್ವಾತ್"** ಎಂಬ ಬ್ರಹ್ಮ ಸೂತ್ರದಲ್ಲಿ ಉಪಪಾದಿಸಿರುವಹಾಗೆ ಒಂದೇ ಫಲವಾದ ಮೋಕ್ಷವನ್ನು ಕೊಡುವಾಗ ತರತಮ ಭೇದಗಳು ಹೇಗೆ ಎಂದರೆ ಅದಕ್ಕೆ ಮೂರು ಕಾರಣಗಳನ್ನು ಹೇಳಿರು ತ್ತಾರೆ:—**ಸುಕರತ್ವ, ಸಕೃತ್ಕರ್ತವ್ಯತ್ವ, ಶೀಘ್ರಫಲತ್ವಾದಿಗಳಾಲೇ ಶ್ರೇಷ್ಠ ತಮಮ್, ಸುಕರತ್ವ**- ಪ್ರಪತ್ತಿಯು ತುಂಬಾ ಸುಲಭೋಪಾಯವು, ಇದಕ್ಕೆ ಅಙ್ಗ ಗಳೂ ಸುಲಭವಾದುವು; ಪರಮಾತ್ಮೋಪಾಸನೆಯಾದರೋ ದುಷ್ಕರವು, ಅಙ್ಗ ಳನ್ನು ಸಾಧಿಸುವುದೇ ಕಷ್ಟತರವಾದುದು; **ಸಕೃತ್ಕರ್ತ್ತವ್ಯತ್ವ** - ಪ್ರಪತ್ತಿಯು ಒಂದೇಸಲ ಅನುಷ್ಠಿಸತಕ್ಕದ್ದು, ಉಪಾಸನವಾದರೋ ಯಾವಜ್ಜೀವವೂ ಆವೃತ್ತಿ ಯಿಂದ ನಡೆಸತಕ್ಕದ್ದಾಗಿರುತ್ತದೆ, **ಶೀಘ್ರಫಲಪ್ರದತ್ವ** - ದೇಹಾವಸಾನದಲ್ಲಿ **ಮೋಕ್ಷವನ್ನು** ಕೊಡುವಂಥಾದ್ದು, ಆರ್ತನಿಗೆ ತಕ್ಷಣದಲ್ಲೇ ಫಲಪ್ರದವು, ಉಪಾ

ನ್ಯಾಸವಿದ್ಯಾಯಾಂ ಅತೇ ಕಂಠೋಕ್ತಮಾನ ಇನ್ವರ್ಥತ್ವ (೧) **"ತೇಷಾಂತು**

ಸನೆಯಾದರೋ ಉತ್ತರಜನ್ಮಉಂಟಾದರೂ ಉಂಟಾಗಬಹುದು, ಜಡಭರತಾದಿಗಳಿಗೆ ಪ್ರಾಪ್ತವಾದಹಾಗೆ ಶೀಘ್ರ ಫಲತ್ವಾದಿ ಎಂಬಲ್ಲಿರುವ ಆದಿ ಪದದಿಂದ ಅಧಿಕಾರಿ ವಿಭಾಗಾಧಿಕಾರದಲ್ಲಿ ಹೇಳಲ್ಪಟ್ಟ ಇತರ ಕಾರಣಗಳು (ಲಖಿಳ ನೆಯು ಪುಟವನ್ನು ನೋಡಿ) ಅನಭ್ಯುಗತ ಪ್ರಾರಬ್ಧವನ್ನು ಹೋಗಲಾಡಿಸುವ ಶಕ್ತಿಯೂ, ಆರ್ತನಾದರೆ ಅಭ್ಯುಪಗತ ಪ್ರಾರಬ್ಧ ಶೇಷವನ್ನು ಹೋಗಲಾಡಿಸುವಶಕ್ತಿಯೂ, ಸರ್ವಾಧಿಕಾರತ್ವವೂ, ಅನುಷ್ಠಾನಾನಂತರ ಪ್ರತಿಬಂಧಕಗಳಿಲ್ಲದಿರುವಿಕೆಯೂ ಹೇಳಲ್ಪಟ್ಟವು; ಇವು ಉಪಾಸನಕ್ಕೆ ಇಲ್ಲವು. ೧. ಪ್ರವೃತ್ತಿ ರೂಪ ಧರ್ಮಗಳಾದ ತಪೋನಿಷ್ಠೆ ಜ್ಞಾನನಿಷ್ಠೆ ಕರ್ಮನಿಷ್ಠೆಗಳಿಗಿಂತ ನಿವೃತ್ತಿರೂಪಧರ್ಮಗಳಾದ ತಪೋಜ್ಞಾನ ಕರ್ಮನಿಷ್ಠೆಗಳು ಶ್ರೇಷ್ಠಗಳು. ೨. ಈ ನಿವೃತ್ತಿರೂಪ ಧರ್ಮಗಳಾದ ಇವುಗಳಿಗಿಂತ ಆತ್ಮೋಪಾಸನವು ಶ್ರೇಷ್ಠವು. ೩. ಆತ್ಮೋಪಾಸನೆಗಳಿಗಿಂತ ಪರಮಾತ್ಮೋಪಾಸನವು ಶ್ರೇಷ್ಠವು. ೪. ಪರಮಾತ್ಮೋಪಾಸನೆಗಳಿಗಿಂತ ಭರನ್ಯಾಸವು ಶ್ರೇಷ್ಠವು ಆದುದರಿಂದ ಇದು ಶ್ರೇಷ್ಠತಮವೆಂಬ ಭಾವವು. **"ಚತುರ್ವಿಧಾ ಭಜಂತೇಮಾಂ ಜನಾಸ್ಸುಕೃತಿನೋಽರ್ಜುನ ಆರ್ತೋಜಿಜ್ಞಾಸುರರ್ಥಾರ್ಥೀ ಜ್ಞಾನೀಚ ಭರತರ್ಷಭ"** ಎಂಬ ಶ್ಲೋಕದಲ್ಲೂ ಪ್ರವೃತ್ತಿಧರ್ಮನಿಷ್ಠರಿಗಿಂತ ನಿವೃತ್ತಿಧರ್ಮನಿಷ್ಠರು ಶ್ರೇಷ್ಠರೆಂಬುದು ದ್ಯೋತಿತವು **ಆರ್ತನೂ ಅರ್ಥಾರ್ಥಿಯೂ** ಇಬ್ಬರೂ ಪ್ರವೃತ್ತಿ ಧರ್ಮನಿಷ್ಠರು, ಇವರಿಗಿಂತ **ಜಿಜ್ಞಾಸುಃ,** ಪ್ರತ್ಯಗಾತ್ಮೋಪಾಸಕನು ಶ್ರೇಷ್ಠನು, ಇವನಿಗಿಂತ **ಜ್ಞಾನಿಯು** ಪರಮಾತ್ಮೋಪಾಸಕನು ಶ್ರೇಷ್ಠನು. ಪ್ರಕರಣವು ಪರಮಾತ್ಮೋಪಾಸನೆಯಾದುದರಿಂದ ನ್ಯಾಸವಿದ್ಯಾನಿಷ್ಠನು ಹೇಳಲ್ಪಡಲಿಲ್ಲವು. ನ್ಯಾಸವಿದ್ಯಾನಿಷ್ಠನು ಉಪಾಸಕನಾದ ಬ್ರಹ್ಮವಿದ್ಯಾನಿಷ್ಠನಿಗಿಂತಲೂ ಶ್ರೇಷ್ಠನಾಗಿ ಶ್ರೇಷ್ಠತಮನು.

ಹೀಗೆ ಭರನ್ಯಾಸಕ್ಕೆ ಶ್ರೇಷ್ಠತಮತ್ವವನ್ನು ಹೇಳಲು ಪ್ರಮಾಣಗಳುಂಟೋ ಎಂದರೆ ಪ್ರಮಾಣಗಳನ್ನು ಉದಾಹರಿಸುತ್ತಾರೆ. ಶ್ರುತಿ ಸ್ಮೃತಿ ಭಗವಚ್ಛಾಸ್ತ್ರ ಪ್ರಮಾಣಗಳನ್ನು ಸೂಚಿಸುತ್ತಾರೆ **ನ್ಯಾಸವಿದ್ಯಾಯಾಂ** – ನ್ಯಾಸ ವಿದ್ಯೆಯಲ್ಲಿ, **ಕಂಠೋಕ್ತಮಾನ** - ಊಹೆ ಮೊದಲಾದವುಗಳ ಆವಶ್ಯಕತೆ ಯಿಲ್ಲದೆ ಕಂಠೋಕ್ತವಾಗಿ ಹೇಳುವ, **ಇನ್ವರ್ಥತ್ವ** - ಭರನ್ಯಾಸವು ಬ್ರಹ್ಮವಿದ್ಯೆಗಳಲ್ಲೆಲ್ಲಾ ಶ್ರೇಷ್ಠತಮವೆಂಬ ಈ ಅಭಿಪ್ರಾಯವನ್ನು, **"ತೇಷಾಂತು ತಪಸಾಂ"** ಎಂದು

(೧) ಅಹಿ. ೩೭. ೩೭.

ತಪಸಾಂ ನ್ಯಾಸಮತಿರಿಕ್ತಂ ತಪಶ್ಶ್ರುತಮ್," (೨) "ಸತ್ಕರ್ಮನಿರತಾಶ್ಶುದ್ಧಾಸ್ಸಾಂಖ್ಯಯೋಗವಿದಸ್ತಥಾ । ನಾರ್ಹಂತಿ ಶರಣಸ್ಥಸ್ಯ ಕಲಾಮ್ ಕೋಟಿತಮೀಮಪಿ" ಎನ್ರು ಭಗವಚ್ಛಾಸ್ತ್ರಮ್ ಉಪಬೃಂಹಿತ್ತದು.

ಅಹಿರ್ಬುಧ್ನ್ಯಸಂಹಿತೆಯೂ, "ಸತ್ಕರ್ಮನಿರತಾಶ್ಶುದ್ಧಾಃ" ಎಂದು ಭಗವಚ್ಛಾಸ್ತ್ರವೂ, **ಉಪಬೃಂಹಿತ್ತದು** - ಉಪಬೃಂಹಣಮಾಡಿ ಹೇಳಿತು ಶ್ರುತಿಯಲ್ಲಿ ಎಲ್ಲಿ ಕಂಠೋಕ್ತವಾಗಿ ಹೇಳಿದೆ ಎಂದರೆ "ತಸ್ಮಾನ್ನ್ಯಾಸ ಮೇಷಾಂ ತಪಸಾಮತಿರಿಕ್ತ ಮಾಹುಃ" ಎಂದೂ "ಇತ್ಯುಪನಿಷತ್" ಇತದ್ವೈ ಮಹೋಪನಿಷದಂ" ಎಂದೂ ತೈತ್ತಿರೀಯ ನಾರಾಯಣೀಯದಲ್ಲಿ ಹೇಳಿರುವದರಿಂದ ಕಂಠೋಕ್ತವು ಇದರ ರ್ಥವು. ತಸ್ಮಾತ್ - "ಜ್ಞಾತ್ವಾ ತಮೇವಂ ಮನಸಾ ಹೃದಾಚ ಭೂಯೋನಮೃತ್ಯುಮುಪಯಾಹಿ ವಿದ್ವಾನ್" ಎಂದು ಹಿಂದಿನ ವಾಕ್ಯದಲ್ಲಿ ಹೇಳಿರುವಮೇರೆಗೆ, ಈ ನ್ಯಾಸ ವಿದ್ಯೆಯ ಮೂಲಕ ಪಂಡಿತನಾದವನು ಪುನಸ್ಸಂಸಾರವನ್ನು ಹೊಂದುವದಿಲ್ಲವಾದುದರಿಂದ, ಏಷಾಂತಪಸಾಂ - ಈ ಮೇಲೆ ಹೇಳಿದ ಸತ್ಯ, ತಪಸ್ಸು, ದಮ, ಶಮ, ದಾನ, ಧರ್ಮ, ಪ್ರಜನನ, ಅಗ್ನಿಹೋತ್ರ, ಮಾನಸ, ಇವೆಲ್ಲಾ ತಪಸ್ಸುಗಳಿಗಿಂತಲೂ **ನ್ಯಾಸಂ**-ಭರನ್ಯಾಸವನ್ನು, **ಅತಿರಿಕ್ತಂ**-ಶ್ರೇಷ್ಠವಾದ ವಿದ್ಯೆ ಎಂಬುದನ್ನು, ಆಹುಃ - ಹೇಳುತ್ತವೆ, ಇದು ಪರಮ ರಹಸ್ಯವಾದ ಮಂತ್ರವು. ಈ ಶ್ರುತ್ಯರ್ಥವನ್ನೇ ಅಹಿರ್ಬುಧ್ನ್ಯ ಸಂಹಿತೆಯು ಉಪಬೃಂಹಣ ಮಾಡಿ ಹೇಳುತ್ತದೆ ಏನೆಂದರೆ, (೧) **ತೇಷಾಂ ತಪಸಾಂ** - ಪೂರ್ವಾನುವಾಕಗಳಲ್ಲಿ ಹೇಳಲ್ಪಟ್ಟ, **ಸತ್ಯಂ** – ತಪಸ್ಸು ದಮ ಮೊದಲಾದ ತಪಸ್ಸುಗಳಿಗಿಂತಲೂ, **ನ್ಯಾಸಂ** - ದ್ವಿತೀಯೆಯಾದರೂ ಪ್ರಥಮಾರ್ಥವನ್ನು ಹೇಳತಕ್ಕದ್ದು ನ್ಯಾಸವಿದ್ಯೆಯು, ಅಥವಾ ನ್ಯಾಸ ಶಬ್ದವು ಪುಲ್ಲಿಂಗವು ಅದಕ್ಕೆ ಬದಲಾಗಿ ನಪುಂಸಕಲಿಂಗವು ಆರ್ಷಪ್ರಯೋಗವೆಂದೂ ಭಾವಿಸಬಹುದು, ನಪುಂಸಕವಾದರೆ ಪ್ರಥಮಾಂತವಾಗಬಹುದು, **ಅತಿರಿಕ್ತಂ ತಪಃ** - ಸರ್ವೋತ್ಕೃಷ್ಟವಾದ ತಪಸ್ಸೆಂದು, **ಶ್ರುತಂ** - ತೈತ್ತಿರೀಯ ನಾರಾಯಣೀಯ ಶ್ರುತಿಯಲ್ಲಿ ಹೇಳಲ್ಪಟ್ಟಿರುತ್ತದೆ. (೨) **ಸತ್ಕರ್ಮನಿರತಾಃ** - ತಮ್ಮ ಆಶ್ರಮಕ್ಕೆ ಉಚಿತವಾದ ಕರ್ಮವಿದಃ ಎಂದು ನಿತ್ಯನೈಮಿತ್ತಿಕ ಕರ್ಮಾನುಷ್ಠಾನದಲ್ಲಿ ನಿರತರಾದ, ಶುದ್ಧಾಃ - ಎಂದರೆ ನಿವೃತ್ತಿರೂಪ ಧರ್ಮಾಚರಣೆಯನ್ನು ಮಾಡಿ, ಕಷಾಯೇ ಕರ್ಮಭಿಃ **ಪಕ್ವೇತತೋ ಜ್ಞಾನಂ ಪ್ರವರ್ತತೇ** ಎಂದೂ, **ಅವಿದ್ಯಯಾ ಮೃತ್ಯುಂ ತೀರ್ತ್ವಾ** ಎಂದೂ, ಹೇಳಿರುವ

---

(೨) ಲಕ್ಷ್ಮೀತಂತ್ರ ೧೭. ೬೨

ಭರನ್ಯಾಸಸ್ಯ ಅಧಿಕ ಪ್ರಭಾವಂ ದೃಷ್ಟಾಂತೇನದೃಢ ಯತಿ.

ಅನಗಾಹನಾದಿಗಳಿಲ್ ಸಮರ್ಥನಲ್ಲಾದವನುಕ್ಕು (೧) "ಮಾನಸಂ

ಹಾಗೂ ಪರಿಶುದ್ಧರಾದ, **ಸಾಂಖ್ಯಯೋಗವಿದಃ** - ಹಾಗೆಯೇ, **ಸಂಖ್ಯಾ** ಎಂದರೆ ಬುದ್ಧಿಯು, **ಸಾಂಖ್ಯವಿದಃ**-ಎಂದರೆ ಜ್ಞಾನಯೋಗ ನಿಷ್ಠರೂ, **ಯೋಗ** ವೆಂದರೆ ಕರ್ಮಯೋಗವು. **ಯೋಗವಿದಃ**-ಕರ್ಮಯೋಗ ನಿಷ್ಠರೂ **ತಥಾ** ಎಂಬುದರಿಂದ ಭಕ್ತಿಯೋಗ ನಿಷ್ಠರೂ ಅಥವಾ **ಸತ್ಕರ್ಮನಿರತಾಃ** ಎಂಬುದರಿಂದ ಕರ್ಮಯೋಗ ನಿಷ್ಠರೂ, **ಸಾಂಖ್ಯವಿದಃ** ಎಂಬುದರಿಂದ ಜ್ಞಾನಯೋಗ ನಿಷ್ಠರೂ, **ಯೋಗವಿದಸ್ತಥಾ** - ಎಂಬುದರಿಂದ ಭಕ್ತಿಯೋಗ ನಿಷ್ಠರೂ ಹೇಳಲ್ಪಟ್ಟರೆಂದು ಭಾವಿಸಬಹುದು, ಅಥವಾ **ಯೋಗವಿದಃ** ಎಂಬುದರಿಂದ ಕರ್ಮಯೋಗ ಭಕ್ತಿಯೋಗಗಳೆರಡೂ ಹೇಳಲ್ಪಟ್ಟವೆಂದು ಭಾವಿಸಬಹುದೆಂಬ ಸಾರಸಂಗ್ರಹ ವ್ಯಾಖ್ಯಾತೃವಿನ ಅಭಿಪ್ರಾಯವು; ಈ ಕರ್ಮಯೋಗ ಜ್ಞಾನಯೋಗ ಭಕ್ತಿಯೋಗ ನಿಷ್ಠರಾದ ಉಪಾಸಕರು, **ಶರಣಸ್ಥಸ್ಯ** - ನ್ಯಾಸವಿದ್ಯೆಯಲ್ಲಿರುವ ಎಂದರೆ ಭರನ್ಯಾಸವನ್ನನುಷ್ಠಿಸಿದವನಿಗೆ, **ಕಲಾಂಕೋಟಿತಮಾಮಪಿ** - ಕೋಟಿ ಅಂಶದಲ್ಲಿ ಒಂದಂಶವನ್ನೂ ಕೂಡ, **ನಾರ್ಹಂತಿ** - ಹೊಂದಲಾರರು," ಎನ್ನ - ಎಂದು ಭಗವಚ್ಛಾಸ್ತ್ರವು, **ಉಪಬೃಹ್ಮಿತ್ತದು** - ಉಪಬೃಹ್ಮಣಮಾಡಿ ಹೇಳಿತು, ಹೀಗೆ ಉಪಾಸನಕ್ಕಿಂತ ಭರನ್ಯಾಸವೇ ಉತ್ಕೃಷ್ಟವಿದ್ಯೆ ಎಂಬುದಕ್ಕೆ ಪ್ರಮಾಣಗಳನ್ನು ಉದಾಹರಿಸಿದರು.

ಆದರೆ ಇಲ್ಲಿ ಪ್ರಧಾನವಾದ ಉಪಾಯವು ಭಕ್ತಿಮಾರ್ಗವು, ಉಪಾಸನೆಯು; ಭರನ್ಯಾಸದಲ್ಲಿ ಉಪಾಸನೆಗೆ ತಾನು ಅನರ್ಹನಾದ ಪ್ರಯುಕ್ತ ಉಪಾಸನೆಯ ಸ್ಥಾನದಲ್ಲಿ ಸರ್ವೇಶ್ವರನನ್ನು ಇಟ್ಟು ಪ್ರಾರ್ಥಿಸುವ ವಿಷಯವು, ಆದುದರಿಂದ ಅದಕ್ಕೆ ಪ್ರತ್ಯಾಮ್ನಾಯವಾಗಿ ಅಪ್ರಧಾನವಿಷಯವು. ಹೀಗಿರುವಾಗ ಅಪ್ರಧಾನಕ್ಕೆ ಹೀಗೆ ಪ್ರಾಶಸ್ತ್ಯವನ್ನು ಹೇಳಬಹುದೋ? ಇದಕ್ಕೆ ಅಧಿಕ ಪ್ರಭಾವ ಹೇಗೆ? ಎಂಬ ಶಙ್ಕಾ ನಿವಾರಣಾರ್ಥವಾಗಿ ಸದೃಷ್ಟಾಂತವಾಗಿ ಸಮಾಧಾನವನ್ನು ದಯಪಾಲಿಸುತ್ತಾರೆ.

ಭರನ್ಯಾಸದ ಅಧಿಕ ಪ್ರಭಾವವನ್ನು ದೃಷ್ಟಾಂತಮೂಲಕ ದೃಢಪಡಿಸುತ್ತಾರೆ.

ಅನಗಾಹನಾದಿಗಳಿಲ್ ಸಮರ್ಥನಲ್ಲಾದವನುಕ್ಕು - ಜಲಾಶಯಗಳಲ್ಲಿ

(೧) ಗಾರ್ಗ್ಯ ಸ್ಮೃತಿ.

ವಿಷ್ಣುಚಿಂತನಂ" ಎನ್ರು ಭಗವಚ್ಚಿನ್ತನತ್ತೈ ಸ್ನಾನಮಾಗ ವಿಧಿತ್ತಾಲದು ಸ್ನಾನಾಂತರಙ್ಗಳ್ ಪಣ್ಣುಗಿರ ಶುದ್ಧಿಯೈಯುಮ್ ಪಣ್ಣಿ, ಪಾಪಾಂತರಂಗಳೈಯುಮ್ ಶಮಿಪ್ಪಿತ್ತು, ಅಪ್ಪೋದೇ ಭಗವದನುಭವ ರಸತ್ತೈಯುಮುಣ್ಡಾಕ್ಕುಮಾಪೋಲೆ, ಉಪಾಸನಾದಿಗಳಿಲ್ ಸಮರ್ಥನಲ್ಲಾದವನುಕ್ಕು ಪ್ರಪತ್ತಿಯೈ ವಿಧಿತ್ತಾಲುಮ್, ಇಪ್ಪ್ರಪತ್ತಿ ತಾನೇ ಅವೈ ಕೊಡುಕ್ಕುಮ್ ಫಲತ್ತೈಯುಮ್, ಅವೈ ತನ್ನೈಯುಮ್ ಕೊಡಕ್ಕುವತ್ತಾಯ್

ವಾಸಿಸುಗಿ, ರೋಗ ವಾರ್ಧಕ ಮೊದಲಾದವುಗಳಿಂದ ಸಮರ್ಥನಲ್ಲದಿರುವವನಿಗೆ "ಮಾನಸಂ ವಿಷ್ಣುಚಿಂತನಂ" "ವಿಷ್ಣುವಿನ ಧ್ಯಾನರೂಪವಾದ ಏಳುವಿಧ ಸ್ನಾನಗಳಲ್ಲೊಂದಾದ ಮಾನಸ ಸ್ನಾನವು" ಎಂದು ಹೇಳಿರುವಹಾಗೆ, **ಭಗವಚ್ಚಿಂತನತ್ತೈ** - ಭಗವದ್ಧ್ಯಾನವನ್ನು **ಸ್ನಾನಮಾಗ ವಿಧಿತ್ತಾಲ್**-ಅವಗಾಹನಸ್ನಾನಕ್ಕೆ ಸಮಾನವೆಂದು ವಿಧಿಸಿದರೆ, ಅದು **ಸ್ನಾನಾಂತರಙ್ಗಳ್** - ಅವಗಾಹನವೇ ಮೊದಲಾದ ಇತರ ಸ್ನಾನಗಳು, **ಪಣ್ಣುಗಿರ ಶುದ್ಧಿಯೈಯುಮ್ ಪಣ್ಣಿ** - ಮಾಡುವ ದೇಹಶುದ್ಧಿಯನ್ನೂ ಉಂಟುಮಾಡಿ, **ಪಾಪಾಂತರಙ್ಗಳೈಯುಮ್**, **ಶಮಿಪ್ಪಿತ್ತು** - ವಿರೋಧಿ ಪಾಪಗಳನ್ನೂ ನಾಶಮಾಡಿ, **ಅಪ್ಪೋದೇ** - ಕೂಡಲೇ, **ಭಗವದನುಭವ ರಸತ್ತೈಯುಮ್** - ಭಗವದ್ಧ್ಯಾನಮಾಡಿದುದರಿಂದ ಭಗವದನುಭವರೂಪ ಆನಂದವನ್ನೂ, **ಉಣ್ಡಾಕ್ಕುಮಾಪೋಲೇ** - ಹೇಗೆ ಉಂಟುಮಾಡುತ್ತದೋ ಹಾಗೆಯೇ, **ಉಪಾಸನಾದಿಗಳಿಲ್ ಸಮರ್ಥನಲ್ಲಾದವನುಕ್ಕು** - ಉಪಾಸನೆ ಮೊದಲಾದವುಗಳಲ್ಲಿ ಸಮರ್ಥನಲ್ಲದೇ ಇರುವವನಿಗೆ, ಇಲ್ಲಿ **ಆದಿ** ಪದದಿಂದ ಉಪಾಯ ವಿರೋಧಿಪಾಪನಿವರ್ತನವು ಹೇಳಲ್ಪಟ್ಟಿತು **ಪ್ರಪತ್ತಿಯೈ ವಿಧಿತ್ತಾಲುಮ್** - ಭರನ್ಯಾಸವನ್ನು ವಿಧಿಸಿದರೂ, **ಇಪ್ಪ್ರಪತ್ತಿತಾನೇ**- ಈ ಭರನ್ಯಾಸವೇ, **ಅವೈಕೊಡುಕ್ಕುಮ್ ಫಲತ್ತೈಯುಮ್**-ಆ ಉಪಾಸನಾದಿಗಳು ಕೊಡುವ ಫಲವನ್ನು, **ಅವೈತನ್ನೈಯುಮ್ ಕೊಡುಕ್ಕವತ್ತಾಯ್** ಅವೆಲ್ಲವನ್ನೂ ಕೊಡುವಂತಾದ್ದಾಗಿ, ಮುಂದಕ್ಕೆ ಈ ಭರನ್ಯಾಸದಲ್ಲಿರುವ ವೈಲಕ್ಷಣ್ಯವನ್ನು ತೋರಿಸುತ್ತಾರೆ, ಅವು ಕೊಡುವವನ್ನೂ ಕೊಟ್ಟು ಇನ್ನೂ ಹೆಚ್ಚುಪ್ರಭಾವವುಳ್ಳದ್ದೆಂದು ಪ್ರದರ್ಶಿಸುತ್ತಾರೆ; **ಅಕಿಂಚನನುಕ್ಕುತ್ತಾರಕಮಾಯ್**-ಇದು ಭಕ್ತಿಮಾರ್ಗದಹಾಗೆ ತ್ರೈವರ್ಣಿಕರಾದ ಸಕಿಂಚನರಿಗೆ ಮಾತ್ರವೇ ಅಲ್ಲದೆ ಅಕಿಂಚನರಾದ ಎಲ್ಲರಿಗೂ ರಕ್ಷಕವಾಗಿ, **ಅವರ್ ಅಪೇಕ್ಷಿತ್ತಕಾಲತ್ತಿಲೇ ಫಲಾವಿನಾಭಾವತ್ತೈಯುಡೈತ್ತಾಯ್**-ಭಕ್ತಿಮಾರ್ಗದಲ್ಲಿ ಉಪಾಸನೆಯು ವಿಪಾಕದೆಶೆಯು ಈ ಜನ್ಮದಲ್ಲಾಂಟಾದರೂ ಆಗಬಹುದು ಅಥವಾ ಮುಂದಿನ ಜನ್ಮದಲ್ಲಾದರೂ ಆಗ

ಅಕಿಂಚನನುಕ್ಕು ಉತ್ತಾರಕವಾಯ್ ಅರ್ನ ಅಪೇಕ್ಷಿತ್ತ ಕಾಲತ್ತಿಲೆ ಫಲಾವಿನಾ ಭಾವತ್ತೈಯುಮ್ ಉಡೈತ್ತಾಯ್, ಇರುಕ್ಕೈಯಾಲೆ ಅಧಿಕ ಪ್ರಭಾವ ಮಾಯಿರುಕ್ಕುಮ್.

ಒಹುದು, ಹಾಗೆ ವಿಳಂಬವಿಲ್ಲದೆ, **ಅರ್ನ** - ಆ ಭರನ್ಯಾಸ ನಿಷ್ಠನು, **ಅಪೇಕ್ಷಿತ್ತ ಕಾಲತ್ತಿಲೇ** - ಆರ್ತನಾಗಿ ಒಡನೆಯೇ ಬೇಕೆಂದಪೇಕ್ಷಿಸಿದರೆ ಹಾಗೂ, ಅಥವಾ ದೃಪ್ತನಾಗಿ ದೇಹಾವಸಾನವಾದ ಒಡನೆಯೇ ಎಂದರೆ ಆವಾಗಲೇ, **ಫಲಾವಿನಾ ಭಾವತ್ತೈಯುಡತ್ತಾಯ್** - ಫಲದೊಂದಿಗೇನೇ ಸೇರಿರುವದಾಗಿ, **ಇರುಕ್ಕೈಯಾಲೇ** - ಇರುವದರಿಂದ, **ಅಧಿಕಪ್ರಭಾವ ಮಾಯ್ ಇರುಕ್ಕುಮ್** - ಉಪಾಸನೆಗಿಂತ ಹೆಚ್ಚು ಪ್ರಭಾವವನ್ನು ಹೊಂದಿರುವದಾಗಿರುತ್ತದೆ. ಭಕ್ತ್ಯುಪಾಯವೂ ಒಂದು ಸಾಧನವೇ ಎಂದು ಹಿಂದೆ ಸ್ಥಾಪಿಸಿದರು. ಈಗ ಅದಕ್ಕಿಂತ ಭರನ್ಯಾಸಕ್ಕೆ ಶ್ರೈಷ್ಠ್ಯವು ಉಪಪನ್ನವು. ಯದ್ಯಪಿ ಭಕ್ತ್ಯುಪಾಯವೇ ಪ್ರಧಾನವಾಗಿದ್ದರೂ, ಅಸಮರ್ಥನಿಗೆ ಇದು ವಿಧಿಸಲ್ಪಟ್ಟು ಅಪ್ರಧಾನವಾದರೂ ಇದಕ್ಕೆ ಹೆಚ್ಚು ಮಹಿಮೆ ಉಂಟು ಸ್ನಾನವು ಪ್ರಧಾನವಾಗಿ ಅವಗಾಹನರೂಪವಾಗಿಯೇ ಇರತಕ್ಕದ್ದು; ಇದಕ್ಕೆ ವ್ಯಾಧಿ ಮೊದಲಾದವುಗಳಿಂದ ಅಸಮರ್ಥನಾದರೆ ಆಗ ಗೌಣವಾಗಿ ವಿಷ್ಣು ಚಿಂತನವನ್ನು ಅವಗಾಹನ ಸ್ನಾನಕ್ಕೆ ಬದಲಾಗಿ ಸ್ಮೃತಿಯು ವಿಧಿಸಿರುತ್ತದೆ. ಹಾಗೆಯೇ **ಅಪವಿತ್ರಃ ಪವಿತ್ರೋವಾ** ಎಂಬ ಶ್ಲೋಕದಲ್ಲೂ ಪುಂಡರೀಕಾಕ್ಷನ ಸ್ಮರಣೆಯು ಬಾಹ್ಯಾಂತರ ಪವಿತ್ರತೆಯನ್ನುಂಟುಮಾಡುತ್ತದೆಂದು ಹೇಳಲ್ಪಟ್ಟಿರುತ್ತದೆ. ಮತ್ತು **"ಮಾನಸಂ ಪ್ರವರಂ ಸ್ನಾನಂ ಸರ್ವೇ ಶಂಸಂತಿ ಸೂರಯಃ"** ಎಲ್ಲಾ ಜ್ಞಾನಿಗಳೂ ಮಾನಸವಾದ ಈ ವಿಷ್ಣುಚಿಂತನ ರೂಪಸ್ನಾನವು **ಪ್ರವರಂ** ತುಂಬಾ ಉತ್ಕೃಷ್ಟವಾದುದೆಂದು ಹೇಳುವರು. ಈ ಗೌಣಸ್ನಾನವು ಪ್ರಧಾನ ಸ್ನಾನಕ್ಕಿಂತ ಉತ್ಕೃಷ್ಟವಾದುದು ಹೇಗೆ ಎಂದರೆ, ಇದು ಅವಗಾಹನಸ್ನಾನ ಮಾಡುವ ಬಾಹ್ಯ ಪವಿತ್ರತೆಯನ್ನುಂಟುಮಾಡುವದೂ ಅಲ್ಲದೆ, ಈತನು ಮಾಡುವ ಕರ್ಮಾನುಷ್ಠಾನಗಳಿಗೆ ಪ್ರತಿಬಂಧಕಗಳಾದ ಪಾಪಗಳನ್ನೂ ಹೋಗಲಾಡಿಸಿ ಭಗದನುಭವ ಜನಿತಾನಂದವನ್ನೂ ಕೂಡ ಉಂಟುಮಾಡುತ್ತದೆ. ಆದುದರಿಂದ ಅವಗಾಹನ ಸ್ನಾನಕ್ಕಿಂತ ವಿಷ್ಣುಚಿಂತನವು ಹೇಗೆ ಹೆಚ್ಚು ಪ್ರಭಾವ ಉಳ್ಳದೋ ಹಾಗೆಯೇ ಈ ಗೌಣವಾದ ಭರನ್ಯಾಸವೂ ಕೂಡ ತ್ರೈವರ್ಣಿಕನಿಗೂ ಸಮರ್ಥನಿಗೂ ಮಾತ್ರ ಯೋಗ್ಯವಾದ ಪ್ರಧಾನವಾದ ಭಕ್ತಿಮಾರ್ಗಕ್ಕಿಂತ ವರ್ಣಾಶ್ರಮ ಅಭಿಜಾತ್ಯಾದಿ ವ್ಯತ್ಯಾಸಗಳಿಂದೂ ಬೇಕಿಲ್ಲದೆ ಸರ್ವಾಧಿಕಾರಿತ್ವವುಳ್ಳವಾ

ಇಪ್ಪಡಿ ಇವ್ವುಪಾಯತ್ತಿನ್ ಅಧಿಕಾರತ್ತಿಲುಮ್ ಸ್ವರೂಪತ್ತಿಲು ವರುಮ್ ಕಲಕ್ಕಙ್ಗಳ್ ಶಮಿಪ್ಪಿತ್ತೋಮ್, ಇನಿಮೇಲ್ ಪರಿಕರಙ್ಗಳಿಲ್ ಮ್ ವರುಮ್ ವ್ಯಾಮೋಹಂ ಶಮಿಪ್ಪಿಕ್ಕಿರೋಮ್—

ಅಥ ಪರಿಕರ ವಿಷಯ ಶಙ್ಕಾಃ ಪರಿಹರತಿ.

(೧) ಪ್ರಪತ್ತೇಃ ಆನುಕೂಲ್ಯಾದಿ ಪರಿಕರಾಣಾ ಮಾವಶ್ಯಕತ್ವಂ ನಾಸ್ತೀತಿ ವಾದ ನಿರಾಸಃ.

ಇವ್ವುಪಾಯತ್ತುಕ್ಕು ಆನುಕೂಲ್ಯ ಸಙ್ಕಲ್ಪಾದಿಗಳ್ ವೇಣುಮೋ ?

ಗಿಯೂ, ಭಕ್ತಿಮಾರ್ಗದಹಾಗೆ ವಿಳಂಬಕ್ಕೆ ಆಸ್ಪದವಿಲ್ಲದೆ ಅವಿಳಂಬಿತಫಲಪ್ರದ ವಾಗಿರುವದರಿಂದಲೂ ಪ್ರಾರಬ್ಧ ನಾಶಕತ್ವಾದಿಗಳಿರುವದರಿಂದಲೂ, ಅಧಿಕ ಪ್ರಭಾವ ಉಳ್ಳದ್ದೆಂಬ ತಾತ್ಪರ್ಯವು. ಭರನ್ಯಾಸಕ್ಕೆ ಇಂತಹ ಮಹಿಮೆ ಉಂಟೆಂ ಬುದನ್ನು "ಸುದುಷ್ಕರೇಣ ಶೋಚೇದ್ಯೋ ಯೇನ ಯೇನೇಷ್ಟಹೇತುನಾ । ಸಸತಸ್ಯಾಹ ಮೇವೇತಿ ಚರಮಶ್ಲೋಕ ಸಙ್ಗ್ರಹಃ॥" ಭರನ್ಯಾಸವನ್ನು ವಿಧಿ ಸುವ ಚರಮಶ್ಲೋಕದ ತಾತ್ಪರ್ಯವೇನೆಂದರೆ ಯಾವನು, ಆವನೆಂತವನೇಯಾಗಿ ರಲಿ, ಹೊಂದಲು ಕಷ್ಟತರವಾದ ಯಾವಯಾವ ಮನೋರಥಗಳನ್ನು ಮನಸ್ಸಿನ ಲ್ಲಿಟ್ಟು ಶೋಕಿಸಿ ದೈನ್ಯದಿಂದ ನನ್ನನ್ನು ಆಶ್ರಯಿಸುತ್ತಾನೋ ಅವನಿಗೆಲ್ಲಾ ಆಯಾಮನೋರಥ ಪ್ರಾಪ್ತಿಗೆ ನಾನೇ ಸಾಧನವೆಂಬುದು ಚರಮಶ್ಲೋಕಾರ್ಥವೆಂದು ಹೇಳಿರುವದರಿಂದ ಇದಕ್ಕೆ ಪ್ರಾಶಸ್ತ್ಯವು ಅಧಿಕವೆಂಬ ಭಾವವು.

ಮುಂದಿನ ವಾಕ್ಯದಿಂದ ಇಷ್ಟುದೂರ ಉಪದೇಶಿಸಿದುದು ಯಾವವಿಷಯವು ? ಮುಂದೆ ಉಪದೇಶಿಸಲ್ಪಡುವದು ಯಾವದು ? ಎಂದು ತಿಳಿಸುತ್ತಾರೆ. ಇಪ್ಪಡಿ - ಹೀಗೆ ಮೇಲೆ ಉಪಪಾದಿಸಿದ ರೀತಿಯಲ್ಲಿ, ಇವ್ವುಪಾಯತ್ತಿಲ್ - ಈ ಭರನ್ಯಾಸ ರೂಪವಾದ ಉಪಾಯದ, ಅಧಿಕಾರದಲ್ಲೂ ಸ್ವರೂಪದಲ್ಲೂ, ವರುಮ್ ಕಲಕ್ಕ ಙ್ಗಳ್ - ಬರುವ ಶಙ್ಕೆಗಳನ್ನು, ಶಮಿಪ್ಪಿತ್ತೋಮ್ - ಪರಿಹಾರ ಮಾಡಿದೆವು ; ಇನಿಮೇಲ್ - ಇನ್ನು ಮುಂದೆ, ಪರಿಕರಙ್ಗಳಿಲ್ - ಭರನ್ಯಾಸದ ಅಙ್ಗಗಳ ವಿಷಯದಲ್ಲಿ, ವರುಮ್ ವ್ಯಾಮೋಹಮ್ - ಉಂಟಾಗುವ ಭ್ರಮೆಗಳನ್ನು, ಶಮಿಪ್ಪಿಕ್ಕಿರೋಮ್ - ಪರಿಹಾರಮಾಡುತ್ತೇವೆ. ಹೀಗೆ ಪ್ರತಿಜ್ಞಾವಾಕ್ಯವನ್ನು ದಯಪಾಲಿಸಿರುತ್ತಾರೆ

(೧) "ಆರ್ತೋ ವಾ ಯದಿ ವಾ ದೃಪ್ತಃ" ಎನ್ನುವುದ್, (೨) "ಮಿತ್ರಭಾವೇನ ಸಂಪ್ರಾಪ್ತಂ ನ ತ್ಯಜೇಯಂ ಕಥಂಚನ । ದೋಷೋ ಯದ್ಯಪಿ ತಸ್ಯ

ಪರಕರ ವಿಷಯಗಳಲ್ಲುಂಟಾಗುವ ಶಙ್ಕೆಗಳನ್ನು ಪರಿಹರಿಸುತ್ತಾರೆ.
(೧) ಮೊದಲು ಆನುಕೂಲ್ಯಾದಿ ಪರಿಕರಗಳ ಆವಶ್ಯಕತೆಯು
ಬೇಕಿಲ್ಲವೆಂಬ ವಾದವನ್ನು ನಿರಸನ ಮಾಡುತ್ತಾರೆ.

ಇವ್ಯುಪಾಯತ್ಕುಕ್ಕ - ಈ ಭರನ್ಯಾಸಕ್ಕೆ, **ಆನುಕೂಲ್ಯ ಸಙ್ಕಲ್ಪಾದಿಗಳ್** - ಹಿಂದೆ ಪರಿಕರ ವಿಭಾಗಾಧಿಕಾರದಲ್ಲಿ ಹೇಳಲ್ಪಟ್ಟ ಆನುಕೂಲ್ಯ ಸಙ್ಕಲ್ಪವೇ ಮೊದಲಾದ ಐದು ಅಙ್ಗಗಳೂ **ವೇಣುವೋ?**—ಆವಶ್ಯಕವೋ? ಪೂರ್ವ ಪಕ್ಷರೀತ್ಯಾ ಆವಶ್ಯಕವಿಲ್ಲವೆಂಬುದನ್ನು ಅನುವಾದ ಮಾಡುವದಕ್ಕೋಸ್ಕರ ಮೂರು ಪ್ರಮಾಣಗಳನ್ನು ಉದಾಹರಿಸುತ್ತಾರೆ. (೧) **ಆರ್ತೋ ವಾ ಯದಿ ವಾ ದೃಪ್ತಃ ಪರೇಷಾಂ ಶರಣಾಗತಃ । ಅರಿಃ ಪ್ರಾಣಾನ್ ಪರಿತ್ಯಜ್ಯ ರಕ್ಷಿತವ್ಯಃ ಕೃತಾತ್ಮನಾ ॥** ಎಂಬುದು ಪೂರಾ ಶ್ಲೋಕವು; **ಪರೇಷಾಂ** - ಇತರ ಶತ್ರುಗಳ ಮಧ್ಯೇ, **ಅರಿಃ** - ಶತ್ರುವು, **ಶರಣಾಗತಃ** - ರಕ್ಷಿಸಬೇಕೆಂದು ಪ್ರಾರ್ಥಿಸಿ ಶರಣಾಗತನಾದವನು, **ಆರ್ತೋ ವಾ ಯದಿ ವಾ ದೃಪ್ತಃ** - ಬಹು ದೈನ್ಯವುಳ್ಳವನಾಗಿಯೇ ಆಗಲಿ ಅಥವಾ ಆ ಶರಣಾಗತಿ ಕಾಲದಲ್ಲೂ ಕೂಡ ಅಹಂಕಾರಯುಕ್ತನಾಗಿಯೇ ಆಗಲಿ ಇದ್ದರೂ ಸರಿಯೇ, ಅಥವಾ ಸಂಸಾರದಲ್ಲಿ ಜುಗುಪ್ಸೆಯಿಂದ ಶರಣಾಗತಿಯ ಉತ್ತರಕ್ಷಣದಲ್ಲಿಯೇ ಫಲಕಾಮನೆಯುಳ್ಳವನೇ ಆಗಲಿ ಅಥವಾ ವಿಳಂಬಾವಿಳಂಬಗಳಿಗೆ ಮನಗೊಡದೆ ದೇಹಾವಸಾನದಲ್ಲಿ ಫಲಾಪೇಕ್ಷೆಯುಳ್ಳ ಮೋಕ್ಷಾರ್ಥಿಯೇ ಆಗಲಿ, **ಪ್ರಾಣಾನ್ ಪರಿತ್ಯಜ್ಯ** - ತನ್ನ ಶಕ್ತಿಯನ್ನೆಲ್ಲಾ ವಿನಾರಿ, **ಕೃತಾತ್ಮನಾ** - ಶಾಸ್ತ್ರಮರ್ಯಾದೆಯಲ್ಲಿ ಮಾತಲ್ಪಟ್ಟ ಮನಸ್ಸುಳ್ಳವನಿಂದ ಶಾಸ್ತ್ರಧರ್ಮಸೂಕ್ಷ್ಮವನ್ನು ಗ್ರಹಿಸಿರುವವನಿಂದ, **ರಕ್ಷಿತವ್ಯಃ** - ರಕ್ಷಿಸಲ್ಪಡತಕ್ಕವನೆಂದು ಶ್ರೀರಾಮನು ಹೇಳುವದರಿಂದ, ಪ್ರತಿಕೂಲನಾದ ಶತ್ರುವೂ ಕೂಡ ಶರಣಾಗತನಾದರೆ, ಆಗ ಆನುಕೂಲ್ಯಸಙ್ಕಲ್ಪ ಪ್ರಾತಿಕೂಲ್ಯ ವರ್ಜನವೇ ಮೊದಲಾದ ಅಙ್ಗಗಳ ಆವಶ್ಯಕತೆ ಏನು? ಎಂಬ ಭಾವವು, (೨) **ಮಿತ್ರಭಾವೇನ ಸಂಪ್ರಾಪ್ತಂ** - "ಪ್ರಿಯೋ ಹಿ ಜ್ಞಾನಿನೋಽತ್ಯರ್ಥಮಹಂ" (ಗೀ. ೭ ೧೭.) ನಾನು ಜ್ಞಾನಿಗೆ ಅತ್ಯಂತ ಪ್ರಿಯಸಖನೆಂದು ಹೇಳಿದ ಪರಮ

---

(೧) ರಾಮಾ ಯುದ್ಧ. ೧೮.೨೮. (೨) ರಾ. ಯು. ೧೮, ೩.

ಪುರುಷಾರ್ಥವನ್ನು ಹೊಂದಬೇಕೆಂದು ಬಂದವನನ್ನು, ಅಥವಾ ಮಿತ್ರಶಬ್ದವು ಸರ್ವಲೋಕ ರಕ್ಷಕನನ್ನು "ಮಿತ್ರಸ್ಯ ಚರ್ಷಣೀಧೃತಃ" ಎಂಬ ಮಂತ್ರದಲ್ಲಿನ ಹಾಗೆ ಹೇಳುತ್ತದೆ, ಆದುದರಿಂದ ಸರ್ವಲೋಕ ರಕ್ಷಕನಾದ ಸರ್ವೇಶ್ವರನೆಂದು ಭಾವಿಸಿ. ಅಥವಾ, "ಸುಹೃದಂ ಸರ್ವಭೂತಾನಾಂ" ಎಂದು ಹೇಳಿರುವ ಮೇರೆಗೆ ಸಮಸ್ತ ಪ್ರಾಣಿವರ್ಗಕ್ಕೂ ಪರಮ ಸುಹೃತ್ತೆಂದು ಭಾವಿಸಿ, ಅಥವಾ ಮಿತ್ರಭಾವೇನ - ಆನುಕೂಲ್ಯ ಸಙ್ಕಲ್ಪಾದಿಗಳೊಂದಿಗೆ, "ತನ್ಮಿತ್ರಂ ಯತ್ರ ವಿಶ್ವಾಸಃ" ಎಂದು ಹೇಳಿರುವ ಹಾಗೆ ವಿಶ್ವಾಸಕ್ಕೆ ಯೋಗ್ಯವಾದ ಸ್ಥಳವೆಂಬ ಭಾವನೆಯಿಂದ ಅಥವಾ "ತೇನ ಮೈತ್ರೀ ಭವತು ತೇ ಯದಿ ಜೀವಿತುಮಿಚ್ಛಸಿ" ನೀನು ಬದುಕಬೇಕೆಂಬ ಆಸೆಯಿದ್ದರೆ ಅವನೊಂದಿಗೆ ಶರಣಾಗತಿ ರೂಪ ಸಂಬಂಧವನ್ನು ಬೆಳೆಸು ಎಂದು ಸೀತೆಯು ರಾವಣನಿಗೆ ಉಪದೇಶಮಾಡಿದ ಹಾಗೆ ಮಿತ್ರಭಾವೇನವೆಂದರೆ ಶರಣಾಗತ ಭಾವದಿಂದ, **ಸಂಪ್ರಾಪ್ತಂ** - ಚೆನ್ನಾಗಿ ಶರಣಾಗತಿಯ ಮೂಲಕ ಆಶ್ರಯಿಸುವುದಕ್ಕಾಗಿ ಬಂದವನನ್ನು, ಅಥವಾ **ಸಂಪ್ರಾಪ್ತಮ್** - ಚೆನ್ನಾಗಿ ಬಂದವನನ್ನು ಎಂದರೆ ಇಲ್ಲಿಗೇನೇ ಬಂದವನನ್ನು ಅಥವಾ ಸಂಪ್ರಾಪ್ತಂ - ಧರಿಸಿದ್ದ ಪಾದುಕೆಗಳನ್ನು ಬಾಗಿಲಲ್ಲಿ ಬಿಟ್ಟು ಕಾಲನ್ನು ತೊಳೆದುಕೊಂಡು ದೇವಾಲಯವನ್ನು ಪ್ರವೇಶಿಸುವ ಹಾಗೆ, "**ಪರಿತ್ಯಕ್ತಾ ಮಯಾ ಲಂಕಾ ಮಿತ್ರಾಣಿ ಚ ಧನಾನಿ ಚ**" ಎಂದು ಹೇಳಿಕೊಂಡು ವಿರೋಧಿರೂಪ ಪ್ರಾತಿಕೂಲ್ಯ ವರ್ಜನದೊಂದಿಗೆ ಬಂದಿರುವವನನ್ನು, ಅಥವಾ **ಸಂಪ್ರಾಪ್ತಂ** - "**ಮಾತಾ ಪಿತಾ ಭ್ರಾತಾ ನಿವಾಸಶ್ಶರಣಂ ಸುಹೃತ್**" ಎಂದು ಹೇಳಿರುವ ಹಾಗೆ ಸರ್ವವಿಧ ಬಂಧುವೂ ನಾನೇ ಎಂದು ತಿಳಿದು ಚೆನ್ನಾಗಿ ಬಂದವನನ್ನು ಅಥವಾ ಲಂಕೆಯಲ್ಲೇ ಇದ್ದುಕೊಂಡು "**ರಾಘವಂ ಶರಣಾಗತಃ**" ಎಂದು ಕೂಗಿಕೊಂಡಿದ್ದರೆ ಅಲ್ಲಿಗೇನೇ ನಾನೇ ಹೋಗಬೇಕಾಗುತ್ತಿತ್ತು. ಅದನ್ನು ತಪ್ಪಿಸಿ ನನಗೆ ಉಪಕಾರವನ್ನು ಮಾಡಿ ಇಲ್ಲಿಗೆ ಬಂದು ಶರಣಾಗತಿಯನ್ನು ಮಾಡಿರುವುದರಿಂದ "**ಸಂಪ್ರಾಪ್ತಂ**" ಸರಿಯಾಗಿ ಬಂದವನನ್ನು, ಅಥವಾ **ಸಂಪ್ರಾಪ್ತಂ** - ನನಗೆ ಸ್ತೋತ್ರ, ಅರ್ಚನ, ಪ್ರಣಾಮಾದಿಗಳು ಅಷ್ಟು ಮುಖ್ಯವಲ್ಲವು. ನನ್ನ ಪ್ರಾಪ್ತಿಗೆ ಶರಣಾಗತಿರೂಪ ಉಪಾಯಾನುಷ್ಠಾನವೇ ಮುಖ್ಯವಾದುದರಿಂದ ಅದನ್ನು ಈತನು ಸರಿಯಾಗಿ **ಸವರಿಕರವಾಗಿ** ನಡೆಸಿರುವುದರಿಂದ "ಸಂಪ್ರಾಪ್ತಂ" ಅಥವಾ, ಯಾರಾದರೂ ರಕ್ಷಿಸು ಎಂದು ಹೇಗೆ ಪ್ರಾರ್ಥಿಸಬೇಕೆಂಬ ಹಾಗೆ ಪ್ರಾರ್ಥಿಸಿದರೆ ಸಾಕು ಎಂದು ರಕ್ಷಾಪೇಕ್ಷೆಯುಳ್ಳವನಾಗಿ ಅವಸರ ಪ್ರತೀಕ್ಷೆ ಮಾಡುವ ನನಗೆ "**ಸಂಪ್ರಾಪ್ತಂ**", ಹೀಗೆ ನನ್ನಿಷ್ಟಾನುಸಾರವಾಗಿ ಸರಿಯಾಗಿ ಬಂದವನನ್ನು, **ನ ತ್ಯಜೇಯಂ ಕಥಂಚನ** - ನಾನು ಎಂದಿಗೂ ಯಾವ ಕಾರಣದಿಂದಲೂ ಬಿಡಲಾರೆನು; **ನ ತ್ಯಜೇಯಂ** ಬಂದರೆ ಸಾಕು

ಎಂದಿರುವ ನಾನು ಎಂದಿಗಾದರೂ ಪರಿತ್ಯಾಗ ಮಾಡುವೆನೋ ಎಂಬ ಭಾವವು; ಆತನ ಮಾತು ಹಾಗಿರಲಿ, ಅವನು ತನ್ನ ಕಡೆಯವರನ್ನೂ ರಕ್ಷಿಸು ಎಂದು ಕೇಳಿದ್ದರೆ, ಈಗ ಆತನೊಂದಿಗೆ ಬಂದಿರುವ ನಾಲ್ವರನ್ನೂ ಹೇಗೆ ಬಿಡಲು ಸಾಧ್ಯವಿಲ್ಲವೋ, ಹಾಗೆಯೇ ಅವರನ್ನೂ ಬಿಡಲು ಸಾಧ್ಯವಿಲ್ಲವು, ಹೀಗಿರುವಾಗ ಈತನನ್ನು ಬಿಡಲು ಸಾಧ್ಯವೋ ಎಂಬ ಭಾವವು; ಕಥಂಚನ-ಆತನನ್ನು ಬಿಡುವದು ತನಗೆ ಎಂದಿಗೂ ಸಾಧ್ಯವೇ ಇಲ್ಲವು, ಯದ್ಯಪಿ ನಾನು ಸರ್ವಶಕ್ತನೇ ಸರಿ; ಈವಿಷಯದಲ್ಲಿ ಮಾತ್ರ ತಾನು ಅಶಕ್ತನು ಎಂಬ ಭಾವವು. ಆತನು ಪರಮನೀಚನಾಗಿದ್ದರೂ ಬಿಡುವದಿಲ್ಲವೋ ? ಎಂದರೆ ಹೇಗಿದ್ದರೂ ಶರಣಾಗತನಾದ ನಂತರ ಬಿಡುವದಿಲ್ಲವು. **ದೋಷೋಯದ್ಯಪಿ ತಸ್ಯಸ್ಯಾತ್**-ಆ ಶರಣಾಗತನಲ್ಲಿ ದೋಷವಿದ್ದರೂ, ಅದೂ ಇರಲಿ ವಿಭೀಷಣ: ಅಂಥವನನ್ನೂ ಕೂಡ ರಕ್ಷಿಸುವದುಂಟೆ "**ಸತಾಮೇತದಗರ್ಹಿತಂ**" ಎಂದು ನಾಲ್ಕನೆಯ ಪಾದವಿರುತ್ತದೆ. ಸತ್ಪುರುಷರಿಗೆ ಇದೂಕೂಡ ಎಂದರೆ, ಹೀಗೆ ಶರಣಾಗತನಾದವನ ಒಂದುವೇಳೆ ದೋಷಯುಕ್ತನಾಗಿದ್ದರೂ ಅದನ್ನು ಪರಿಗಣಿಸದೆ, ರಕ್ಷಿಸುವದು ನಿಂದ್ಯವಾದುದಲ್ಲವು. ಅಥವಾ **ದೋಷೋಯದ್ಯಪಿ ತಸ್ಯಸ್ಯಾತ್**-ಹಿಂದೆ ಮಾಡಿದ ದೋಷಗಳನ್ನು ಮನಸ್ಸಿನಲ್ಲಿಟ್ಟಿಲ್ಲವೇ ನೀವು ಅವನಲ್ಲಿ ದೋಷವಿದೆ ಎಂದು ಹೇಳುವಿರಿ, ನಮ್ಮ ಅಭಿಪ್ರಾಯಾನುಸಾರ ಶರಣಾಗತನಲ್ಲಿ ದೋಷವೆಲ್ಲಿದೆ? ಯಾವಾಗ ಶರಣಾಗತನಾದನೋ ಆಗ "**ಪ್ರಾರಬ್ಧೇತರ ಪೂರ್ವಪಾಪಮಖಿಲಂ**" ಎಂಬ ರೀತ್ಯಾ ಎಲ್ಲವೂ ನಾಶವಾಗುವದರಿಂದ ಅವನೂ ದೋಷಿಯೂ ಅಲ್ಲವು; ಅಂತವನು ಮಹಾ ಪರಿಶುದ್ಧನು ; ಅಂತವನು ಎಂದಿಗೂ ಪಾಪಕೂಪದಲ್ಲಿ ಬಿದ್ದು ಪಾಪಲಿಪ್ತನಾಗನು ; ಹಿಂದೆ ದೋಷಿಯಾಗಿದ್ದನೆಂದು ಬಿಟ್ಟರೇನೇ ಗರ್ಹಿತನೆಂಬುದು, ಅಗರ್ಹಿತಂ ಎಂಬ ಪ್ರಯೋಗದಿಂದ ಸೂಚಿತವು ಅಥವಾ **ದೋಷೋ ಯದ್ಯಪಿ ತಸ್ಯಸ್ಯಾತ್**-ಒಂದುವೇಳೆ ಹಿಂದೆ ತುಂಬಾ ದೋಷಿಯಾಗಿದ್ದನು, ಅಪರಾಧ ಸಾರ್ವಭೌಮನಾಗಿದ್ದನು; ಅಂತವನನ್ನು ರಕ್ಷಿಸಬಹುದೋ, ಹಾಗೆ ಅಂತವನನ್ನೇ ರಕ್ಷಿಸುವದೇ ಸರಿ ಅದ ತನಗೆ ಯಶಸ್ಕರವಾದುದು, ಪುಣ್ಯಮಾಡಿದವನನ್ನು ರಕ್ಷಿಸುವದೇನೂ ಅಷ್ಟು ಶ್ಲಾಘ್ಯವಲ್ಲವು, ಮಹಾಪಾಪಿಯನ್ನು ರಕ್ಷಿಸಿದ ರೀತೀ ಶ್ಲಾಘ್ಯವಾದುದು. ಅಥವಾ, "**ದೋಷೋ ಯದ್ಯಪಿ ತಸ್ಯಸ್ಯಾತ್**" ಹಿತೈಷಿಗಳಾದ ನೀವು ಅದರಿಂದ ನನಗೆಲ್ಲಿ ತೊಂದರೆಯಾಗುತ್ತದೋ ಎಂದು ಶಂಕಿಸುತ್ತಿರಲ್ಲವೇ, ಹಾಗೆ ಒಂದುವೇಳೆ ನನಗೆ ತೊಂದರೆಯೇ ಆಗಲೇನು ಸತಾಂ-ಕಪೋತಾದಿ ಶರಣಾಗತರಕ್ಷಕರಾದ ಮಹಾತ್ಮರಿಗೆ, ಇದು ಅಗರ್ಹಿತಂ ಉಪಾದೇಯವಾದುದೇ; ಭಯಂಕರತ್ವ ಮೊದಲಾದವುಗಳಿಂದ ಭೀತರಾದ ನಿಮಗೆ ನಿಂದ್ಯವಾಗಿ ತೋರಿದರೂ, ಇತರ ಮಹಾನುಭಾವರೂ, ಕಪೋತಾದಿಗಳೂ, ಅನುಮೋ

ದಿಸುವರೇ ವಿನಾ ಸಿಂಡಿಸುವರಲ್ಲವು; ಅಥವಾ ದುಷ್ಟ ನಿಗ್ರಹ ಶಿಷ್ಟಪರಿಪಾಲನಾದಿಗಳಿಗಾಗಿಯೇ ಅವತಾರಮಾಡುವ ನೀನು, ಹೀಗೆ ಶರಣಾಗತನೆಂಬ ವ್ಯಾಜದಿಂದ ದುಷ್ಟ ಪರಿಪಾಲನ ಮಾಡಬಹುದೋ ಎಂದರೆ, ಇದು ಸಾಮಾನ್ಯ ಧರ್ಮ ಪ್ರಕರಣವನ್ನು ಕುರಿತ ಆಕ್ಷೇಪವು; ವಿಶೇಷ ಧರ್ಮವಾದ ಶರಣಾಗತ ಪರಿಪಾಲನರೀತ್ಯಾ, ಅಂತಹ ಸಾಮಾನ್ಯ ವಿಶೇಷಧರ್ಮವನ್ನು ಶಾಸ್ತ್ರಮುಖೇನ ಚನ್ನಾಗಿ ತಿಳಿದ, **ಸತಾಂ ಅಗರ್ಹಿತಂ** - ಉಪಾದೇಯವೇ; ಗರ್ಹಿತವಲ್ಲದುದು ಪೂಜನೀಯವೆಂಬ ಭಾವವು; ಆದುದರಿಂದ ಸರ್ವಶಕ್ತನಾದ ನನಗೆ ಶರಣಾಗತನ ವಿಷಯದಲ್ಲಿ, “ನತ್ಯಜೇಯಂ” ಎಂದು ಹೇಳಬೇಕಾಗಿರುವ ಒಂದು ಅಶಕ್ತತೆಯೂ, ಸರ್ವಜ್ಞನಾದ ನನಗೆ ಆತನ ವಿಷಯದಲ್ಲಿ ದೋಷವು ಕಣ್ಣಿಗೆ ಕಾಣದಿರುವ ಒಂದು ಅವಿಜ್ಞತೆಯೂ ಉಂಟೆಂದು ಈ ಶ್ಲೋಕದಲ್ಲಿ ಸರ್ವೇಶ್ವರನು ಹೇಳಿಕೊಂಡಿರುತ್ತಾನೆ.

(೩) “ಯದಿವಾ ರಾವಣಸ್ಸ್ವಯಮ್” “ಆನಯೈನಂ ಹರಿಶ್ರೇಷ್ಠ ದತ್ತ ಮಸ್ಯಾಭಯಂಮಯಾ । ವಿಭೀಷಣೋ ವಾ ಸುಗ್ರೀವ ಯದಿವಾ ರಾವಣಸ್ಸ್ವಯಂ” ಎಂಬುದು ಪೂರಾ ಶ್ಲೋಕವು, **ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂಮಮ** ಎಂಬ ತನ್ನ ಸ್ಥಿರಸಙ್ಕಲ್ಪವನ್ನು ಶ್ರೀ ರಾಮಚಂದ್ರ ಪ್ರಭುವು ತಿಳಿಸಿದ ನಂತರ ಹೇಳುವ ಮಾತು. **ಹೇ ಹರಿಶ್ರೇಷ್ಠ** - ಓ ವಾನರ ರಾಜನಾದ ಸುಗ್ರೀವನೇ, **ಏನಂ** - ಶರಣಾಗತನಾಗಿ ಇಲ್ಲಿಗೇನೇ ಬಂದಿರುವ ವಿಭೀಷಣನನ್ನು, **ಆನಯ** - ಕರೆದುಕೊಂಡುಬಾ; ವಾನರ ರಾಜನೇ ಬಂದು ಕರೆದುಕೊಂಡು ಹೋದನು, ಎಂಬುದರಿಂದ ರಾಮಗೋಷ್ಠಿಗೆ ಸೇರಿದ ನಿನಗೂ ಮಹಾ ಖ್ಯಾತಿಯೂ ತನ್ಮೂಲಕ ನನಗೂ ಖ್ಯಾತಿಯೂ ಉಂಟಾಗುವದು; ನನಗೆ ಖ್ಯಾತಿ ಹೇಗೆಂದರೆ, ಇಂತಹ ಘನವಾದ ಪತಿತನನ್ನು ಪುರುಷಕಾರರೂಪದಲ್ಲಿ ಮಧ್ಯದಲ್ಲಿ ನಿಲ್ಲಿಸಿರುತ್ತಾನೆಂಬದಾಗಿ ಯಶಸ್ಸು. ನಿನ್ನನ್ನು ಇಲ್ಲವೇ ಪುರುಷಕಾರರೂಪದಲ್ಲಿ ಯಾಚಿಸಿದನು? ಆದುದರಿಂದ ನೀನೇ ಕರೆದುಕೊಂಡು ಬರತಕ್ಕದ್ದೆಂಬ ಭಾವವು. “ಮಹಾ ಪ್ರಾಜ್ಞ”ನಾದ ವಿಭೀಷಣನು ಪರಮ ಭಾಗವತೋತ್ತಮನು, ಅಂತವನಲ್ಲಿ ದೋಷಗಳನ್ನಾರೋಪಿಸಿ ದೋಷಕೃತ್ಯಗಳನ್ನು ನಡೆಸುವನೆಂದು ಭಾಗವತಾಪಚಾರವನ್ನು ಸಂಪಾದಿಸಿಕೊಂಡದ್ದರಿಂದ ತನ್ನಿವೃತ್ತಿಗಾಗಿ ನೀನೇ ಹೋಗಿ ಕರೆತರುವದೆಂಬುದಾ ಸೂಚಿತವು ಅಥವಾ ಓ ಸುಗ್ರೀವನೇ

(೩) ರಾ. ಯು ೧೮. ೩೬.

ಶೊಲ್ಲುಗಿರ "ರಿಪೂಣಾಮಪಿ ವತ್ಸಲ"ನಾನ ಶರಣ್ಯನ ಶರಣಾಗತರಕ್ಷೈಯು

ನನಗೇನೋ ಪರಿಗ್ರಹಿಸಲೇ ಬೇಕೆಂಬ ಭಾವವು; ನನ್ನ ಸತ್ಯಸಙ್ಕಲ್ಪವೂ ಹಾಗೆಯೇ; ನಿಮಗೆ ಇಷ್ಟವಿಲ್ಲದಿದ್ದರೆ ನನಗೆ ಮನಸ್ಸಮಾಧಾನವಿಲ್ಲವು; ಆದುದರಿಂದ ನನಗೆ ಸಚಿವರಾಗಿರುವವರಲ್ಲಿ ಅಗ್ರೇಸರನಾದ ನೀನೇ ಹೋಗಿ ಕರತಂದರೆ ನನಗೆ ಮನಸ್ಸಮಾಧಾನವೆಂಬ ಭಾವವಾಗಲಿ ತೋರುತ್ತದೆ. ನಾನು ಈಗ ಉಪಪಾದಿಸಿದ ಶರಣಾಗತ ಶಾಸ್ತ್ರರೀತ್ಯಾ, ಮಯಾ - ಅಭಯವನ್ನು ಸರ್ವ ಪ್ರಪನ್ನರಿಗೂ ಏನೊಂದೂ ವ್ಯತ್ಯಾಸವಿಲ್ಲದೆ ಕೊಡುವದೇ ವ್ರತವಾಗಿರುವ ನನ್ನಿಂದ, ಅಸ್ಯ - ಈ ಶರಣಾಗತನಿಗೆ ಅಭಯವು, ದತ್ತಮ್ - ಶರಣಾಗತಿ ಮಾಡಿದ ತತ್ಕ್ಷಣವೇ, ದತ್ತಮ್ - ಕೊಡಲ್ಪಟ್ಟಿತು, ಈಗ ಬಂದಿರುವವನು, ವಿಭೀಷಣೋವಾ-ವಿಭೀಷಣೋವಾ ಧರ್ಮಾತ್ಮಾ ಎಂದೂ, ವಿಭೀಷಣೋ ಮಹಾಪ್ರಾಜ್ಞಃ ಎಂದೂ, ಹೇಳಿರುವ ಮೇರಿಗೆ ಕರ್ಮನಿಷ್ಠೆ ಜ್ಞಾನನಿಷ್ಠೆಗಳಿಂದ ಯುಕ್ತನಾಗಿ ಸತ್ವಗುಣಾಧಿಕ್ಯವುಳ್ಳ ವಿಭೀಷಣನೇಯಾಗಿರಲಿ ಅಥವಾ ಯದಿ ವಾ ರಾವಣಸ್ಸ್ವಯಂ - ಮಾಯಾವಿಯಾಗಿ ನೃಶಂಸನಾಗಿ ದುರುಳನಾಗಿ ಮಹಾಪಾಪಿಯಾಗಿರುವ ರಾವಣನೇ ಈ ವೇಷದಲ್ಲಿ ದುಷ್ಟಾಭಿಪ್ರಾಯಯುಕ್ತನಾಗಿ ತಾನೇ ಬಂದಿರಲಿ, ಗ್ರಾಹ್ಯನೇ ಸರಿ; ಅಥವಾ ಹಾಗೆ ರಾವಣನೇ ಬಂದು ಒಂದುವೇಳೆ ಶರಣಾಗತನಾದರೆ ಇನ್ನೂ ಉತ್ತಮವೇ. ಏಕೆಂದರೆ ಈ ವಿಭೀಷಣನು ತನ್ನವರೆಂದು ನಾಲ್ಕು ಜನರನ್ನು ಮಾತ್ರ ಕರೆದುಕೊಂಡು ಬಂದಿರುವದರಿಂದ ಈ ಐದು ಜನಮಾತ್ರ ರಕ್ಷಿಸಲ್ಪಡುವರು, ರಾವಣನೇ ಬಂದು ಶರಣಾಗತನಾದರೆ ತನ್ನ ಲಂಕಾರಾಜ್ಯದ ಎಲ್ಲಾ ಜನರ ರಕ್ಷಣೆಗಾಗಿ ಪ್ರಾರ್ಥಿಸಬಹುದಾದುದರಿಂದ ನನ್ನ ಉದಾರಭಾವವು ಅತ್ಯಂತವಾಗಿ ಶೋಭಿಸುವದೆಂಬ ಭಾವವೂ ದ್ಯೋತಿತವು; ಅಥವಾ ಸತ್ವಗುಣನಿಧಿಯಾಗಿರುವ ವಿಭೀಷಣ ರಕ್ಷಣೆಗಿಂತ ಮಹಾಪರಾಧಿಯಾದ ರಾವಣನ ರಕ್ಷಣೆಯು ತನ್ನ ಉದಾರಭಾವಕ್ಕೆ ವಿಶೇಷ ಭಾಸಮಾನತ್ವವನ್ನುಂಟು ಮಾಡುವದೆಂಬ ತಾತ್ಪರ್ಯವೂ ಸೂಚಿತವು; ಅಂತೂ ಹೇಗಾದರೂ ಆಗಲಿ ನನ್ನ ವ್ರತಾನುಸಾರ ಕರೆದುಕೊಂಡು ಬಾರೈಯ್ಯ ಎಂದು ಹೇಳಿದನು.

ಹೀಗೆ ಈ ಮೂರು ಪ್ರಮಾಣಗಳಿಂದಲೂ ತೋರುವದು ಏನೆಂದರೆ ಕರುಣಾಕರನಾದ ಸರ್ವೇಶ್ವರನಲ್ಲಿ ಪ್ರಣತನಾಗಿ ಶರಣಾಗತಿಮಾತ್ರ ಮಾಡಿದರೆ ಸಾಕು; ಈ ಶರಣಾಗತನು ಎಂತವನೇ ಆಗಲಿ ಆತನನ್ನು ರಕ್ಷಿಸಿಬಿಡುತ್ತೇನೆಂದು ದೃಢಸಙ್ಕಲ್ಪಯುಕ್ತನಾಗಿರುವವನು; ಆತನು ಎಷ್ಟೇ ಅಪರಾಧಿಯಾಗಿ ಮಹಾ ಪಾಪಿಯಾಗಿ

ದೋಷಙ್ಗಳೈಪ್ಪಾರ್ಕ್ಕುಮೋ?“ಅನಾಲೋಚಿತವಿಶೇಷಾಶೇಷಲೋಕಶರಣ್ಯ” ಎನ್ರನ್ರೋ ಪೂರ್ವರುಗಳ್ ಪಾಶುರಮ್ ? ಆಗೈಯಾಲ್ ಇವೈ ಸಂಭಾವಿತ ಸ್ವಭಾವಙ್ಗಳಾ ಮಿತ್ತನ್ನೈಯುನ್ರೋ ? ಎನ್ರುಶಿಲರ್ಶೊಲ್ಲುವರ್ಗಳ್.

ದ್ದರೂ ಚಿಂತೆಯಿಲ್ಲವು ; ರಕ್ಷಿಸಿಬಿಡುವೆನೆಂಬ ದೀಕ್ಷಾವ್ರತದಲ್ಲಿರುವಾಗ, ಆನುಕೂಲ್ಯಾದಿ ಪರಿಕರಗಳನ್ನು ಅಪೇಕ್ಷಿಸುವನೋ ಎಂದು ಪೂರ್ವಪಕ್ಷವನ್ನು ಉಪಪಾದಿಸಿ, ಅದಕ್ಕೆ ಸಮಾಧಾನವನ್ನು ಅನುಗ್ರಹಿಸುತ್ತಾರೆ. ಎನ್ರುಮ್ ಶೊಲ್ಲುಗಿರ - ಎಂದು ಹೇಳಿದ ನಾಲ್ಕು ಪ್ರಮಾಣಗಳಲ್ಲಿ ತೋರಿಬರುವ, ರಿಪೂಣಾಮಪಿವತ್ಸಲನಾನ - ಶತ್ರುಗಳಲ್ಲೂ ವಾತ್ಸಲ್ಯವನ್ನು ತೋರಿಸುವ, ಆದರೆ ಸ್ವಾಮಿಗೆ ಯಾರೂ ಶತ್ರುಗಳು ಇಲ್ಲವೇ ಇಲ್ಲವು. ಮಹರ್ಷಿಗಳಲ್ಲಿ ಮಾಡಿದ ಅಕ್ರಮಕ್ಕಾಗಿ ಶಾಪಮೂಲಕ ರಿಪುಗಳಾಗಿ ಜನಿಸಿದರೇವಿನಾ ಅತನಿಗೆ ವಾಸ್ತವವಾಗಿಯೂ ಯಾರೂ ಶತ್ರುಗಳಿಲ್ಲವು ; ಇದೂ ಅಲ್ಲದೆ ಈತನಿಗೆ ಶತ್ರುಗಳು ಯಾರೆಂದರೆ, ತನ್ನ ಆಜ್ಞೆಗಳನ್ನು ಮೀರಿದ ಕೃತ್ಯಾಕರಣಾಕೃತ್ಯಕರಣರೂಪದೋಷವುಳ್ಳವರು ತನ್ನ ಆಜ್ಞೆಗಳನ್ನು ಲಂಘಿಸಿ ಅಕ್ರಮಿಸಿದ ಶಿಷ್ಟರಿಗೆ ಶತ್ರುಗಳಾದ ದುಷ್ಕರ್ಮಿಗಳು ; ಅಂತವರ ವಿಷಯದಲ್ಲೂ ಕೂಡ ವಾತ್ಸಲ್ಯಯುಕ್ತನು. ಶ್ರೀರಾಮನು ತನ್ನ ಶತ್ರುವಾದ ರಾವಣನು ಶರಣಾಗತನಾದರೂ ರಕ್ಷಿಸಿ ಬಿಡುವದಾಗಿ“ಯದಿವಾ ರಾವಣಸ್ಸ್ವಯಂ”ಎಂದು ಹೇಳಿದನು. ಮತ್ತು, ದುರ್ಯೋಧನನು ಪಾಂಡವರಿಗೆ ರಾಜ್ಯವನ್ನು ಕೊಟ್ಟುಬಿಟ್ಟು ಸಂಧಿಮಾಡಿಕೊಂಡರೆ ಮನ್ನಿಸಿಬಿಡುವದಾಗಿ ಮೊದಲು ಹೇಳಿಕಳುಹಿಸಿ,ಅನಂತರ ತಾನೇ ಹೋಗಿ ನಾಶವನ್ನು ತಪ್ಪಿಸಬೇಕೆಂದು ಪ್ರಯತ್ನಮಾಡಿದುದರಿಂದ ರಿಪೂಣಾಮಪಿವತ್ಸಲನು; ಇಂತಹ ಶರಣ್ಯನ್-ಶರಣಾಗತನಾದರೆಸಾಕು ರಕ್ಷಿಸಿಬಿಡುವನೆಂದಿರುವವನು, ಶರಣಾಗತನ ಡೈಯ ದೋಷಙ್ಗಳೈಪ್ಪಾರ್ಕ್ಕುಮೋ- ಶರಣಾಗತನಲ್ಲಿ ಆನುಕೂಲ್ಯ ಸಙ್ಕಲ್ಪ, ಪ್ರಾತಿಕೂಲ್ಯವರ್ಜನಾದಿಪರಿಕರಗಳಿಲ್ಲವೆಂಬ ದೋಷಗಳನ್ನು ಪರಿಗಣಿಸುವನೋ?“ಅನಾಲೋಚಿತ ವಿಶೇಷಾಶೇಷಲೋಕಶರಣ್ಯ”-“ಶರಣಾಗತನಲ್ಲಿ ಯಾವವಿಧವಾದ ವಿಶೇಷಗಳನ್ನೂ ನೋಡದವನಾಗಿರುವ ಎಲ್ಲಾ ಲೋಕಕ್ಕೂ ರಕ್ಷಕನು”, ಎನ್ನನ್ರೋ-ಎಂದಲ್ಲವೇ, ಪೂರ್ವರುಗಳ್ ಪಾಶುರಮ್-ಪೂರ್ವಾಚಾರ್ಯರುಗಳಾದ ಶ್ರೀ ಭಾಷ್ಯಕಾರಪ್ರಭೃತಿಗಳ ದಿವ್ಯಸೂಕ್ತಿಯು ? ಆಗೈಯಾಲ್- ಈಮೇಲಿನ ಕಾರಣಗಳಿಂದ ಎಂದರೆಶತ್ರುಗಳಿಗೂ ವಾತ್ಸಲ್ಯಯುಕ್ತನಾಗಿ, ಶರಣಾಗತರೆಲ್ಲಾ ಸಮರಾಗಿ ಅವರಲ್ಲಿ ಏನೊಂದು ವಿಶೇಷವನ್ನೂ ಆ ಕರುಣಾಸಾಗರನು ನೋಡುವದಿಲ್ಲವಾದುದರಿಂದ, ಇವೈ - ಈ ಆನುಕೂಲ್ಯಸಙ್ಕ

ಇದುಕ್ಕು ಪ್ರಪತ್ತ್ಯುತ್ತರಕಾಲತ್ತಿಲ್ ಆನುಕೂಲ್ಯಾದಿಗಳ್ ಅನುವರ್ತ್ತಿಯಾದೊಳಿಯಿಲುನ್ ಪ್ರತಿಸಮಾಧಾನಂ ಪಿರನ್ನು ಪ್ರಪತ್ತಿ ಫಲ

ಲ್ಬಾದಿ ಪರಿಕರಗಳು, ಸಂಭಾವಿತ ಸ್ವಭಾವಙ್ಗಳಾಮ್ - ಆ ಶರಣಾಗತನಾದ ಪ್ರಸನ್ನನಲ್ಲಿ ಆ ಕಾಲದಲ್ಲಿ ತಾನಾಗಿಯೇ ಪ್ರಾಪ್ತವಾಗುವ ಸ್ವಭಾವಗಳಾಗುವುವು; ಅವುಗಳೇನೂ ಶರಣಾಗತಿಗೆ ಅಙ್ಗವಾಗಿ ಬೇಕಿಲ್ಲವು, ಆ ಕಾಲದಲ್ಲಿ ಅಂತವನು ಅಂತಹ ಆನುಕೂಲ್ಯಾದ್ಯವಸ್ಥೆಯುಳ್ಳವನಾಗಿ ಆಗುವನು; ಇತ್ತನೆಯನ್ನೋ - ಇಷ್ಟುಮಾತ್ರವೇ ಇಲ್ಲವೋ? ಎನ್ರು - ಎಂಬದಾಗಿ, ಶಿಲರ್ - ಕೆಲವು ಪೂರ್ವ ಪಕ್ಷಿಗಳು, ಶೊಲ್ಲುವರ್‌ಗಳ್ - ಹೇಳುವರು ; ಎಂದರೆ ಈ ಪರಿಕರಗಳು ಆವಶ್ಯಕವಾಗಿ ಆ ಕಾಲದಲ್ಲಿ ಶರಣಾಗತನಲ್ಲಿ ಇರಬೇಕೆಂದು ನೀವು ಪರಿಕರ ವಿಭಾಗಾಧಿಕಾರದಲ್ಲೂ ಸಾಙ್ಗಪ್ರಪದನಾಧಿಕಾರದಲ್ಲೂ ಉಪಪಾದಿಸಿದ ಹಾಗಲ್ಲವೆಂಬುದು ಪೂರ್ವ ಪಕ್ಷಿಯ ಅಭಿಪ್ರಾಯವು.

ಇದಕ್ಕೆ ಮುಂದಿನ ವಾಕ್ಯದಿಂದ ಸಮಾಧಾನವನ್ನು ಹೇಳುತ್ತಾರೆ. ಮೇಲೆ ಉದಾಹರಿಸಿದ ಮೂರು ಪ್ರಮಾಣಗಳಲ್ಲೂ ಈ ಪರಿಕರಗಳು ಬೇಡವೆಂದು ಅವುಗಳಲ್ಲೇನೂ ಹೇಳಿಲ್ಲವು. ಶರಣಾಗತಿಯೇ ಸಾಙ್ಗಪ್ರಪದನವಾದುದರಿಂದ ಯಾವಾಗ ಶರಣಾಗತಿಯು ಮಾಡಲ್ಪಟ್ಟಿತೋ, ಆಗ ಸಾಙ್ಗವಾಗಿಯೇ ಅನುಷ್ಠಿಸಲ್ಪಟ್ಟಿತೆಂಬ ಭಾವವು. ಲೋಕದಲ್ಲೂ ಕೂಡ ಶರಣಾಗತನಾಗುವವನಿಗೆ ಅನುಕೂಲ್ಯಾದಿ ಪರಿಕರಗಳಿಂದ ಯುಕ್ತವಾದ ಭಾವವನ್ನೇ ಕಂಡಿರುವದರಿಂದ, ಅಂತಹ ಪರಿಕರಗಳಿಲ್ಲದೆ ಶರಣಾಗತಿಯಾಗುವದೇ ಇಲ್ಲವು. ಆದುದರಿಂದ ಕೆಲವು ಮಹನೀಯರೂ ಕೂಡ ಇಂತಹ ಪೂರ್ವಪಕ್ಷವನ್ನು ಮಾಡುವದರಿಂದ ಅದಕ್ಕೇನಾದರೂ ಒಂದು ವಿಧವಾಗಿ ಸಮಾಧಾನವನ್ನು ಹೇಳಬೇಕೆಂಬಭಿಪ್ರಾಯದಿಂದ ಅಂತಹ ಪರಿಕರಗಳು ಪ್ರಪತ್ತ್ಯುತ್ತರಕಾಲದಲ್ಲೂ ಇರಬೇಕು; ಆದರೆ ಅವುಗಳು ಇದ್ದೇ ತೀರಬೇಕೆಂಬ ಆವಶ್ಯಕತೆಯು ಇಲ್ಲವು; ಒಂದುವೇಳೆ ಇಲ್ಲದಿದ್ದರೂ ಕಡೆಗೆ ಪರಿತಾಪಾದಿಗಳುಂಟಾಗಿ ಅವುಗಳನ್ನವಲಂಬಿಸಿದವನಾಗುತ್ತಾನೆ, ಅಂತೂ ಮೋಕ್ಷಪ್ರಾಪ್ತಿಯುಂಟಾಗುವದಕ್ಕೇನೂ ಅಭ್ಯಂತರವಿಲ್ಲವೆಂದು ಸಮಾಧಾನವನ್ನು ಹೇಳುತ್ತಾರೆ. ಇದುಕ್ಕು - ಈ ಅಭಿಪ್ರಾಯಕ್ಕೆ ಎಂದರೆ ಆನುಕೂಲ್ಯಾದಿ ಪರಿಕರಗಳಪೇಕ್ಷೆಯು ಶರಣಾಗತಿಗೆ ಬೇಕಿಲ್ಲವೆಂಬಭಿಪ್ರಾಯಕ್ಕೆ. ಪ್ರಪತ್ತ್ಯುತ್ತರ ಕಾಲತ್ತಿಲ್ ಶರಣಾಗತಿ ಮಾಡಿದ ಉತ್ತರಕಾಲದಲ್ಲಿ ಆನುಕೂಲ್ಯ ಸಙ್ಕಲ್ಪಾದಿ ಪರಿಕರಗಳು, ಅನುವರ್ತ್ತಿಯಾದೊಳಿಯಿಲುನ್ - ಶರಣಾಗತಿಕಾಲದಲ್ಲಂತು ಆವ

ಮುಮ್ ಕುರೈವತ್ತಿರುಕ್ಕು ಮೆನ್ಗ್ಯಿಲೇ ತಾತ್ಪರ್ಯಂ ಕೊಳ್ಳಲಾಮ್. ಇಙ್ಗನಲ್ಲಾದಪೋದು (೧) "ಷಡ್ವಿಧಾ ಶರಣಾಗತಿಃ" ಎನ್ರುಮ್, (೨) "ನ್ಯಾಸಃ ಪಂಚಾಂಗ ಸಂಯುತಃ" ಎನ್ರುಮ್ (೩) "ಸ್ವಾಙ್ಗೈಃ

ಶ್ಯಕವಾಗಿ ಇದ್ದುದು ಅನಂತರವೂ ಅನುವರ್ತಿಸಿಕೊಂಡ. ಒಂದುವೇಳೆ ಬಾರದೇ ಇದ್ದರೆ, ಇದರಿಂದ ಪ್ರಪನ್ನನಿಗೆ ಅವು ಸಾಧಾರಣವಾಗಿ ಅನುವರ್ತಿಸಿ ಬಂದೇ ಬರುತ್ತವೆಂಬ ಭಾವವು; ಹಾಗೆ ಒಂದುವೇಳೆ ಬಾರದಪಕ್ಷದಲ್ಲಿ, **ಪ್ರತಿಸಮಾಧಾನಂಪಿರನ್ದು** - ಅನುತಾಪ, ಪ್ರಾಯಶ್ಚಿತ್ತ ಉಪರಮಗಳು ಉಂಟಾಗಿ, **ಪ್ರಪತ್ತಿ ಫಲನ್ಮುಮ್ ಕುರೈ ವತ್ತಿರುಕ್ಕುಮ್** - ಶರಣಾಗತಿ ಮಾಡಿದುದರಫಲವು ಏನೊಂದೂ ನ್ಯೂನತೆಯನ್ನು ಹೊಂದುವದಿಲ್ಲವು, **ಎನ್ಗೈಯಿಲೇ**- ಎಂದು ಹೇಳುವದರಲ್ಲಿ, **ತಾತ್ಪರ್ಯಂ ಕೊಳ್ಳಲಾಮ್** - ಅಭಿಪ್ರಾಯವನ್ನಾಗಿ ಅಙ್ಗೀಕರಿಸಬಹುದು,ಪ್ರಪತ್ತ್ಯುತ್ತರಕಾಲದಲ್ಲೂ ಈ ಪರಿಕರಗಳು ಇರಬೇಕೆಂಬುದು ಹಿಂದೆಯೇ ಉಪದೇಶಿಸಲ್ಪಟ್ಟಿತು. (೧,೧೧೬) ನೆಯ ಪುಟವನ್ನು ಪರಾಂಬರಿಸಿ. ಅವುಗಳಿಲ್ಲದೆ ಈತನು ಅಪರಾಧಗಳಿಗೆ ಗುರಿಯಾದರೆ ಪರಿತಾಪಾದಿಗಳುಂಟಾಗಿ, ಕಡೆಗೆ ಈ ಪರಿಕರಗಳುಂಟಾಗಿ, ಮುಂದೆ ಅಪರಾಧಗಳಿಂದ ಉಪರಮವನ್ನು ಹೊಂದಿದವನಾಗಿ, ಕಡೆಗೆ ಹೇಗಿದ್ದರೂ ಶರಣ್ಯನ ವಾಗ್ದಾನಕ್ಕೆ ಏನೊಂದೂ ನ್ಯೂನತೆಯಿಲ್ಲದೆ ಮೋಕ್ಷವನ್ನು ದೇಹಾವಸಾನದಲ್ಲೇ ಹೊಂದುವನೆಂಬ ಭಾವವು. ಅದುದರಿಂದ ಮಹನೀಯರ ಆಕ್ಷೇಪಕ್ಕೆ ಪ್ರಪದನೋತ್ತರಕಾಲದಲ್ಲಿ ಯಾವಾಗಲೂ ಅವು ಇರಬೇಕೆಂಬ ನಿಯಮವಿಲ್ಲನೆಂದೂ, ಅದರಿಂದ ಮೋಕ್ಷಕ್ಕೇನೂ ಅಭ್ಯಂತರವಿಲ್ಲವೆಂದೂ ಭಾವಿಸತಕ್ಕದ್ದೆಂಬ ತಾತ್ಪರ್ಯವೆಂದು ಉಪದೇಶಿಸಿದರು;ಆದರೆ ಶರಣಾಗತ್ಯನುಷ್ಠಾನಕಾಲದಲ್ಲಾದರೋ ಆನುಕೂಲ್ಯಾದಿ ಪರಿಕರಗಳು ಅವಶ್ಯಕವಾಗಿರತಕ್ಕದ್ದೆಂಬುದು ಸ್ಥಾಪಿತವು.

ಆದರೆ ಹಾಗೆ ಆಕ್ಷೇಪಿಸುವರ ಅಭಿಪ್ರಾಯವನ್ನೇ ಅಙ್ಗೀಕರಿಸಿದರೆ ತೊಂದರೆಯೇನು? ಎಂದರೆ, ಅದರಿಂದು ಬಾಗುವ ಮುಂದೆ ಉದಾಹರಿಸುವ ಅಹಿರ್ಬುಧ್ನ್ಯಸಂಹಿತೆ ಮತ್ತು ಲಕ್ಷ್ಮೀತಂತ್ರಾದಿಗಳಿಗೆ ವಿರುದ್ಧವಾಗುತ್ತದೆಂಬ ಅನುಪಪತ್ತಿಯನ್ನು ಮುಂದೆ ಪ್ರದರ್ಶಿಸುತ್ತಾರೆ:—**ಇಙ್ಗನಲ್ಲಾದಪೋದು** – ಈಗ ನಾವು ಹೇಳಿದಹಾಗೆ ಸಮಾಧಾನವನ್ನು ಕಲ್ಪಿಸದಿದ್ದರೆ "**ಷಡ್ವಿಧಾಶರಣಾಗತಿಃ ಎಂದೂ**" ಮತ್ತು "**ನ್ಯಾಸಃಪಂಚಾಂಗಸಂಯುತಃ**" ಎಂದೂ "**ಸ್ವಾಂಗೈಃ ಪಂಚಭಿರಾ**

(೧) ಅಹಿ. ೩೭. ೨೮ (೨) ಲ. ತ. ೧೭. ೭೪. (೩) ಲ ತ. ೨೮.೭.

ಪಂಚಭಿರಾವೃತಾಮ್" ಎನ್ರುಮ್ ಅಙ್ಗಾಙ್ಗಿಗಳೈ ವಿಭಜಿತ್ತು ಚೊಲ್ಲು ಗಿರ ಪಲಪ್ರಮಾಣಙ್ಗಳುಕ್ಕುಮ್ ವಿರುದ್ಧಮ್. ಲೋಕತ್ತಿಲ್ ರಕ್ಷ್ಯದ್ರವ್ಯ ಸಮರ್ಪಣ ಮರ್ಯಾದೈಕ್ಕುಮ್ ಪೊರುನ್ದಾದೆನ್ರುಮ್ ಇವ್ವಙ್ಗಙ್ಗಳು ಡೈಯ ಸಕೃತ್ಕರಣಾದಿ ಪ್ರಕಾರಙ್ಗಳುಮ್ ಮುನ್ಬೇ ಶೊನ್ನೋಮ್.

ವೃತಾಂ" ಎಂದೂ, ಅಙ್ಗಾಙ್ಗಿಗಳೈ ವಿಭಜಿತ್ತು - ಅಙ್ಗಗಳನ್ನೂ ಅಙ್ಗಿಯನ್ನೂ ವಿಭಾಗಿಸಿ, ಶೊಲ್ಲುಗಿರ - ಹೇಳುವ **ಪಲಪ್ರಮಾಣಙ್ಗಳುಕ್ಕುಮ್** - ಹಲವು ಪ್ರಮಾಣಗಳಿಗೂ, **ವಿರುದ್ಧಮ್** - ವಿರುದ್ಧವಾದುದು ಆಗುತ್ತದೆ. ಈ ಮೂರು ಪ್ರಮಾಣಗಳಲ್ಲಿ (೨) ಮತ್ತು (೩) ನೆಯದರಲ್ಲಿ ಐದು ಅಙ್ಗಗಳು. **ನ್ಯಾಸ** ಅಥವಾ **ಪ್ರಪತ್ತಿಯು** "ಅಙ್ಗಿಯೆಂದೂ ಅಙ್ಗಾಙ್ಗಿಗಳೈ ವಿಭಜಿತ್ತು" ಅಙ್ಗಾಙ್ಗಿಗಳನ್ನು ಪ್ರತ್ಯೇಕಿಸಿ ಹೇಳಿರುತ್ತದೆ. **ಷಡ್ವಿಧಾ ಶರಣಾಗತಿಃ** ಎಂಬಲ್ಲಿ ಹಾಗೆ ಎಲ್ಲಿ ವಿಭಾಗಿಸಿದೆ ಎಂದಾಕ್ಷೇಪಿಸಿದರೆ, ಅವಿನಾಭೂತವಾಗಿ ಅಙ್ಗಾಙ್ಗಿಗಳ ಸಮುಚ್ಚಯವು ಬಹುವ್ರೀಹಿಯಿಂದ ಏರ್ಪಟ್ಟು ಅವುಗಳು ಯಾವುವು ಎಂಬುದನ್ನು ತಿಳಿಸಿ ಅಙ್ಗಯುಕ್ತ ಆತ್ಮನಿಕ್ಷೇಪವೇ ಶರಣಾಗತಿ ಎಂದು ಹೇಳಿರುವದರಿಂದ ಅಙ್ಗಾಙ್ಗಿಗಳ ವಿಭಜನವು ವ್ಯಕ್ತವೆಂದು ಹೇಳಬಹುದು. ಆ ಕಾಲದಲ್ಲಿ ಎಂದರೆ ಭರನ್ಯಾಸದ ಸಕೃದನುಷ್ಠಾನದ ಕಾಲದಲ್ಲಿ ಅವಿನಾಭೂತತ್ವವು ಉಂಟು. ಏಕೆಂದರೆ ಇಲ್ಲವಾದರೆ ಅದು ಶರಣಾಗತಿಯೇ ಆಗುವದಿಲ್ಲವೆಂಬ ಭಾವವು. ಆದರೆ ಭರನ್ಯಾಸೋತ್ತರಕಾಲದಲ್ಲೂ ಅನುವರ್ತಿಸಬೇಕೇ? ಎಂದರೆ ಅನುವರ್ತಿಸತಕ್ಕದ್ದೇನೋ ಯುಕ್ತವು. ಆದರೆ ಆಗ ಮಾಡಿದ ಭರನ್ಯಾಸಕ್ಕೆ ಅಂಗತ್ವೇನ ಅಲ್ಲವು, ಏಕೆಂದರೆ ಅವು ಯಾವುದಾದರೂ ಇಲ್ಲವಾದರೆ ಮೋಕ್ಷಪ್ರಾಪ್ತಿಗೆ ಪ್ರತಿಬಂಧಕವಾಗುವದಿಲ್ಲವು. ಸರ್ವೇಶ್ವರನು ಆ ಅಙ್ಗವು ಪುನಃ ಉದಿಸುವಹಾಗೆ ಮಾಡಿ ದೇಹಾವಸಾನದಲ್ಲಿ ಮುಕ್ತಿಯನ್ನೀಯುವನೆಂಬುದು ತಾತ್ಪರ್ಯವು. ಈ ಮೇಲಿನ ಅಹಿರ್ಬುಧ್ನ್ಯ ವಾಕ್ಯ ಲಕ್ಷ್ಮೀತಂತ್ರವಾಕ್ಯಗಳ ಅರ್ಥಗಳು ವಿಶದವಾಗಿ ಹಿಂದೆ ಪರಿಕರವಿಭಾಗಾಧಿಕಾರದಲ್ಲಿ ಉಪಪಾದಿಸಲ್ಪಟ್ಟಿವೆ. ೯೫-೬ ಪುಟಗಳನ್ನು ನೋಡಿ. "ಸ್ವಾಂಗೈಃ **ಪಂಚಭಿ** ರಾವೃತಾಂ" ಎಂಬುದೂ ಲಕ್ಷ್ಮೀತಂತ್ರವಾಕ್ಯವು, ಸಾಧ್ಯೋಪಾಯ ಶೋಧನಾಧಿಕಾರದಲ್ಲಿ ವ್ಯಾಖ್ಯಾನ ಮಾಡಲ್ಪಟ್ಟಿರುತ್ತದೆ. **ಲೋಕತ್ತಿಲ್** – ಲೋಕದಲ್ಲೂ, ರಕ್ಷ್ಯದ್ರವ್ಯ ಸಮರ್ಪಣಮರ್ಯಾದೈಕ್ಕುಂ-ರಕ್ಷಿಸಲು ಯೋಗ್ಯವಾದ ದ್ರವ್ಯವನ್ನು ಸಮರ್ಪಿಸುವ ಮರ್ಯಾದೆಗೂ ಸಹ, ಪೊರುನ್ದಾದು-ಹೊಂದಿಕೆಯಾದುದಾಗುವದಿಲ್ಲ ವೆಂದೂ, ಇವ್ವಙ್ಗಙ್ಗಳುಡೈಯ ಸಕೃತ್ಕರಣಾದಿಪ್ರಕಾರಙ್ಗಳುಮ್ - ಈ ಐದು

ಪ್ರಪತ್ತಿಃ ಬ್ರಹ್ಮಾಸ್ತ್ರತುಲ್ಯಾ ಯದಿ ಕಥಮ್ ಪರಾಪೇಕ್ಷ ರೂಪಾಙ್ಗ ಸಾಪೇಕ್ಷಾ ?

ಬ್ರಹ್ಮಾಸ್ತ್ರಮುಮ್ ಸ್ವಾಙ್ಗ ಸಾಪೇಕ್ಷಮಾಯಿರೇ ಯಿರುಪ್ಪದು ;

ಅಂಗಗಳೂ ಒಂದೇ ಸಲ ಭರನ್ಯಾಸಾನುಷ್ಠಾನ ಕಾಲದಲ್ಲಿ ಮಾತ್ರ ಆವಶ್ಯಕವೆಂಬಿವೇ ಮೊದಲಾದ ಪ್ರಕಾರಗಳನ್ನೆಲ್ಲಾ, ಇಲ್ಲಿ "ಆದಿ" ಶಬ್ದದಿಂದ ಪ್ರಯೋಜನವು ಹೇಳಲ್ಪಟ್ಟಿತು, **ಮುನ್ಬೇ** - ಹಿಂದೆ, ಪರಿಕರ ವಿಭಾಗ ಸಾಙ್ಗಪ್ರಪದನಾಧಿಕಾರಗಳಲ್ಲಿ, **ಶೊನ್ನೋಮ್** - ಹೇಳಿದೆವು. ರಕ್ಷ್ಯವಾದ ದ್ರವ್ಯವನ್ನು ಶಕ್ತನಲ್ಲಿ ಸಮರ್ಪಿಸುವ ಕಾಲದಲ್ಲಿ ಆನುಕೂಲ್ಯಸಙ್ಕಲ್ಪವೂ, ಪ್ರಾತಿಕೂಲ್ಯವನ್ನು ಬಿಡೋಣವೂ ರಕ್ಷಿಸುತ್ತಾನೆಂಬ ಪೂರ್ಣನಂಬಿಕೆ ಮೊದಲಾದವುಗಳು ಹೇಗೆ ಆವಶ್ಯಕವೋ, ಹಾಗೆಯೇ ಈ ಆತ್ಮಸಮರ್ಪಣ ಕಾಲದಲ್ಲಿ ಮಾತ್ರ ಅವು ಆವಶ್ಯಕವೆಂದು ಭಾವಿಸತಕ್ಕದ್ದೆಂದು ಹಿಂದೆ ೯೭೪ನೆಯ ಪುಟದಲ್ಲಿ ಹೇಳಲ್ಪಟ್ಟಿತು. ಉತ್ತರಕಾಲದಲ್ಲಿ ಅವುಗಳೇನೋ ಇರತಕ್ಕದ್ದು, ಆದರೆ ಅಙ್ಗಗಳ ಹಾಗೆ ಆವಶ್ಯಕವಲ್ಲವೆಂದೂ ಹಿಂದೆ ಸಾಙ್ಗಪ್ರಪದನಾಧಿಕಾರದಲ್ಲಿ ಹೇಳಲ್ಪಟ್ಟಿತು. (೧೧೧೬ನೆಯ ಪುಟವನ್ನು ನೋಡಿ.)

ಪ್ರಪತ್ತಿಯು ಬ್ರಹ್ಮಾಸ್ತ್ರ ಸಮಾನವಾಗಿರುವಾಗ, ಅನ್ಯಾಪೇಕ್ಷೆ ರೂಪವಾದ ಅಙ್ಗಸಾಪೇಕ್ಷತೆಯು ಹೇಗೆ ?

ಹಿಂದೆ ಶರಣಾಗತಿಯ ಕಾಲದಲ್ಲಿ ಪ್ರಪತ್ತಿಗೆ ಅನುಷ್ಠಾನಕಾಲದಲ್ಲಿ ಅಙ್ಗಗಳ ಅಪೇಕ್ಷೆಯುಂಟೆಂದು ಸ್ಥಾಪಿಸಲ್ಪಟ್ಟಿತು. ಆದರೆ ಸನತ್ಕುಮಾರ ಸಂಹಿತಾವಾಕ್ಯದಲ್ಲಿ, ಪ್ರಪತ್ತಿಗೆ ಪರಾಪೇಕ್ಷೆಯಿಲ್ಲವೆಂದು ಹೇಳಿದೆಯಲ್ಲಾ ಎಂದರೆ, ಅಙ್ಗಗಳಪೇಕ್ಷೆಯಿಲ್ಲವೆಂದು ಆ ಪ್ರಮಾಣವು ಹೇಳುವದಿಲ್ಲವು. ಆದುದರಿಂದ ಅದರ ಸರಿಯಾದ ಅಭಿಪ್ರಾಯವೇನೆಂಬುದನ್ನು ಉಪದೇಶಿಸುತ್ತಾರೆ. ಬ್ರಹ್ಮಾಸ್ತ್ರಕ್ಕೆ ಅಙ್ಗಗಳ ಅಪೇಕ್ಷೆ ಹೇಗೆ ಇಲ್ಲವೋ ಹಾಗೆ ಪ್ರಪತ್ತಿಗೂ ಅಙ್ಗಗಳ ಅಪೇಕ್ಷೆಯು ಬೇಕಿಲ್ಲವೆಂಬುದು ಪೂರ್ವಪಕ್ಷವು, ಅದನ್ನು ಖಂಡಿಸುತ್ತಾರೆ :—**ಬ್ರಹ್ಮಾಸ್ತ್ರಮುಮ್**- ಬ್ರಹ್ಮಾಸ್ತ್ರವೂ ಕೂಡ, **ಸ್ವಾಙ್ಗಸಾಪೇಕ್ಷಮಾಯಿರೇ** – ತನಗೆ ಬೇಕಾದ ಅಙ್ಗಗಳ ಸಾಪೇಕ್ಷವಾಗಿಯೇ, **ಯಿರುಪ್ಪದು** – ಇರುತ್ತದೆ. ಬ್ರಹ್ಮಾಸ್ತ್ರಬಂಧನವು ಇತರವಿಧ ಬಂಧನವನ್ನು ಸಹಿಸುವದಿಲ್ಲವೆಂದೂ, ಇತರ ಬಂಧನ

ಉಂಟಾದರೆ ತನಗೆ ಅವಮರ್ಯಾದೆಯಾಯಿತೆಂದು ತಿಳಿದು ಬಿಟ್ಟುಬಿಡುತ್ತದೆಂದು "ಅಸ್ತ್ರಬಂಧಸ್ಸಚಾನ್ಯಂಹಿ ನಬಂಧ ಮನುವರ್ತತೇ" (ರಾಮಾ. ಸುಂ. ೪೮. ೪೯) ಎಂದು ಹೇಳಲ್ಪಟ್ಟಿರುವದೇನೋ ಸತ್ಯವು. ಹಾಗೆಯೇ ಇದಕ್ಕೆ ಉಪಪಾದನೆಯು ಉಂಟು. ಹೇಗೆಂದರೆ:—

ರಾಕ್ಷಸಾನಾ ಮವಿಸ್ರಂಭಾ ದಾಂಜನೇಯಸ್ಯ ಬಂಧನೇ ।
ಯಥಾ ವಿಗಳಿತಾ ಸದ್ಯ ಸ್ತ್ವನೋಘಾಸ್ತ್ರ ಪ್ರಬಂಧನಾ ।
ತಥಾಪುಂಸಾ ಮವಿಸ್ರಂಭಾತ್ಪ್ರಪತ್ತಿಃ ಪ್ರಚ್ಯುತಾ ಭವೇತ್ ॥

ರಾಕ್ಷಸರ ಅವಿಶ್ವಾಸದಿಂದ ಆಂಜನೇಯನು ಬ್ರಹ್ಮಾಸ್ತ್ರದಿಂದ ಬಂಧಿಸಲ್ಪಟ್ಟಿರುವದು ಹೇಗೆ ಬಿಟ್ಟುಹೋಗಿ ಆ ಅಸ್ತ್ರಬಂಧನವು ವ್ಯರ್ಥವಾದುದು ಆಯಿತೋ, ಹಾಗೆಯೇ ಪ್ರಪನ್ನರ ಅವಿಶ್ವಾಸದಿಂದ ಪ್ರಪದನವೂ ಕೂಡ ಜಾರಿಹೋದುದೂ ಎಂದರೆ ವ್ಯರ್ಥವಾದುದೂ ಆಗಬಹುದೆಂದೂ ಹೇಳಲ್ಪಟ್ಟಿರುತ್ತದೆ. ಆದುದರಿಂದ ಈ ಪ್ರಪತ್ತಿ ಪರಿಕರಗಳ ಅಪೇಕ್ಷೆಯು ಬೇಕಾಗಿಲ್ಲವು ಎಂದು ಪೂರ್ವಪಕ್ಷವು. ಇದಕ್ಕೆ ಸಮಾಧಾನವನ್ನು ಶ್ರೀ ದೇಶಿಕರು ಉಪದೇಶಿಸಿರುವದೇನೆಂದರೆ, ಬ್ರಹ್ಮಾಸ್ತ್ರಕ್ಕೆ ಅಭಿಮಂತ್ರಣ ಧ್ಯಾನಾದಿಗಳು ಅಙ್ಗಗಳಾಗಿವೆ. ಆದರೆ ಇತರ ಸಹಾಯಗಳು ಯಾವುದೂ ಕೂಡದು ಎಂಬಭಿಪ್ರಾಯವು; ಅದು ಬಂಧಿಸಿರುವಾಗಲೇ ಇನ್ನೊಂದು ತುಚ್ಛವಾದುದನ್ನು ತಂದು ಬಂಧಿಸಕೂಡದೆಂಬ ಭಾವವು, ಆಂಜನೇಯನ ನಿಗ್ರಹವು ಇನ್ನು ಯಾವುದರಿಂದಲೂ ಸಾಧ್ಯವಿಲ್ಲದಿರಲು, ಇಂದ್ರಜಿತುವು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ ಆತನನ್ನು ಬಂಧಿಸಿದನು, ಅದು ಬಂಧಿಸಿರುವಾಗಲೇ, ಅಜ್ಞರಾದ ರಾಕ್ಷಸರು "ಶಣ ವಲ್ಕೈಃ" ಆ ಶಣಬು ಹಗ್ಗದಿಂದ ಆತನನ್ನು ಬಂಧಿಸಿದರು; ಆಗ ಬ್ರಹ್ಮಾಸ್ತ್ರಕ್ಕೆ ಅವಮರ್ಯಾದೆಯಾದುದರಿಂದ ಅದು ಬಂಧನವನ್ನು ಬಿಟ್ಟುಬಿಟ್ಟಿತು. ಆದರೆ ಬ್ರಹ್ಮಾಸ್ತ್ರಪ್ರಯೋಗಕ್ಕೆ ಬೇಕಾದ "ತತಸ್ಸ್ವಾಯಂಭುವೈರ್ಮಂತ್ರೈ ರ್ಬ್ರಹ್ಮಾಸ್ತ್ರ ಮಭಿಮಂತ್ರಿತಂ" (ರಾ. ಸುಂ. ೪೮. ೪೧.) ಎಂದು, ಹೇಳುವಹಾಗೆ ಅಙ್ಗಗಳು ಬೇಕೇಬೇಕು, ಅವು ಇಲ್ಲದಿದ್ದರೆ ಬ್ರಹ್ಮಾಸ್ತ್ರಪ್ರಯೋಗವು ಕಾರ್ಯಕಾರಿಯಾಗದೆಂಬ ಭಾವವು. ಬ್ರಹ್ಮಾಸ್ತ್ರಕ್ಕೆ ಹೇಗೆ ಅಙ್ಗಗಳ ಆವಶ್ಯಕತೆಯುಂಟೋ, ಹಾಗೆಯೇ ಪ್ರಪತ್ತಿಗೂ ಸಹ ಅಙ್ಗಗಳು ಆವಶ್ಯಕವೆಂಬ ಭಾವವು. ಬ್ರಹ್ಮಾಸ್ತ್ರದ ಬಂಧನವು ಹೇಗೆ ಇತರಾಸ್ತ್ರಬಂಧವನ್ನಾಗಲಿ ಶಣವಲ್ಕ ಬಂಧನವನ್ನಾಗಲಿ ಸಹಿಸದೋ, ಅಂತಹ ತುಚ್ಛವಾದ ಬಂಧನದಿಂದ ಬ್ರಹ್ಮಾಸ್ತ್ರವು ಹೇಗೆ ವ್ಯರ್ಥವಾಗುತ್ತದೋ, ಹಾಗೆಯೇ ಪ್ರಪತ್ತಿಯೂ ಅನ್ಯದೇವತಾಶ್ರಯಣ ಮೊದಲಾದವುಗಳಿಂದ ವ್ಯರ್ಥವಾಗುತ್ತದೆಂಬ ಭಾವವೂ ತೋರಿಬರುತ್ತದೆ. ಧರ್ಮ ಪ್ರಾಪ್ತ ಶಕ್ತಿಯು ಸನತ್ಕುಮಾರ ಸಂಹಿತಾ ವಾಕ್ಯವನ್ನುದಾ

ಅಗ್ಯೆಯೊಲ್ "ಪ್ರಪತ್ತೇಃ ಕ್ವಚಿದಪ್ಯೇವಂ ಪರಾಪೇಕ್ಷಾ ನವಿದ್ಯತೇ। ಸಾಹಿ ಸರ್ವತ್ರ ಸರ್ವೇಷಾಂ ಸರ್ವಕಾಮಫಲಪ್ರದಾ" ಎನ್ರುದುವುಮ್ ಧರ್ಮಾಂತರ ನೈರಪೇಕ್ಷ್ಯಮ್ ಶೊನ್ನಪಡಿ. ಇಪ್ಪಡಿಯಲ್ಲಾದಪೋದು

ಹರಿಸಿ ಅದರಲ್ಲಿ ಪ್ರಪತ್ತಿಗೆ ಯಾವುದರ ಅಪೇಕ್ಷೆಯೂ ಇಲ್ಲವೆಂದು ಹೇಳಿದೆಯಲ್ಲಾ ಎಂದು ಮೂದಲಿಸಬಹುದೆಂದು ಭಾವಿಸಿ, ಅದರ ತಾತ್ಪರ್ಯವು, ಅಙ್ಗಗಳು ಬೇಡವೆಂದಲ್ಲವು; ಇತರ ಉತ್ಕೃಷ್ಟಧರ್ಮಗಳು ಅಧಿಕಾರಿಯಲ್ಲಿರಬೇಕೆಂಬ ನಿಯಮ ವೇನೂ ಇಲ್ಲವೆಂಬೂ, ಅಧಿಕಾರಿಯ ಜಾತಿ, ಕುಲ, ಲಿಂಗ, ಗುಣ, ಕ್ರಿಯ, ದೇಶ,ಕಾಲ, ಅವಸ್ಥೆ ಮೊದಲಾದ ತಾರತಮ್ಯಗಳೊಂದನ್ನೂ ಇದು ಅಪೇಕ್ಷಿಸುವದಿಲ್ಲ ವೆಂಬುದೇ ಅಭಿಪ್ರಾಯವೆಂದು ಮುಂದೆ ತಿಳಿಸುತ್ತಾರೆ:—**ಪ್ರಪತ್ತೇಃ** - ಭರನ್ಯಾಸ ರೂಪವಾದ ಉಪಾಯಕ್ಕೆ, **ಏವಂ** - ಈ ಭಕ್ತ್ಯುಪಾಯದಲ್ಲಿ ಅಧಿಕಾರಿಯು ತ್ರೈವ ರ್ಣಿಕನೇ ಆಗಿರಬೇಕು ಎಂಬ ನಿಯಮವಿರುವಹಾಗೆ, ಅಲ್ಲದೆ, **ಕ್ವಚಿದಪಿ**-ಒಂದು ಸ್ಥಳದಲ್ಲಾಗಲಿ, **"ಪರಾಪೇಕ್ಷೆಯು"** ಎಂದರೆ ಅಙ್ಗಗಳಲ್ಲದೆ ಅಧಿಕಾರಿಯಲ್ಲಿ ಇತರ ಧರ್ಮಗಳ ಅಪೇಕ್ಷೆಯು, **ನವಿದ್ಯತೇ** - ಇರುವದಿಲ್ಲವು; ಈ ಅಭಿಪ್ರಾಯವನ್ನೇ ಉತ್ತರಾರ್ಧದಿಂದ ವಿಶದೀಕರಿಸುತ್ತಾರೆ, **ಸಾಹಿ**-ಆ ಪ್ರಪತ್ತಿಯಾದರೋ, **ಸರ್ವತ್ರ**-ಎಲ್ಲಾ ಪ್ರದೇಶದಲ್ಲೂ, **ಸರ್ವೇಷಾಂ** - ತ್ರೈವರ್ಣಿಕರು ಮೊದಲುಗೊಂಡು ಶೂದ್ರ ಚಂಡಾಲರು, ಸ್ತ್ರೀಪುರುಷರು, ಹೀಗೆ ಎಲ್ಲರಿಗೂ, **ಸರ್ವಕಾಮ ಫಲಪ್ರದಾ** - ಧರ್ಮಾರ್ಥಕಾಮಮೋಕ್ಷ ರೂಪ ಚತುರ್ವಿಧ ಪುರುಷಾರ್ಥಗಳನ್ನೂ ಕೊಡತಕ್ಕದ್ದು. **ಸರ್ವತ್ರ** ಎಂದು ಹೇಳಿರುವದರಿಂದ ಯೋಗಾಭ್ಯಾಸಕ್ಕೆ ಬೇಕಾದ ಹಾಗೆ ದಿವ್ಯಕ್ಷೇತ್ರಗಳಾದ ನೈಮಿಶಾರಣ್ಯ ಕುರುಕ್ಷೇತ್ರಾದಿಗಳಾಗಬೇಕೆಂಬ ನಿಯಮ ವಿಲ್ಲವೆಂಬ ಭಾವವು. ಆದುದರಿಂದ **"ಕ್ವಚಿದಪಿ ಪರಾಪೇಕ್ಷಾ ನವಿದ್ಯತೇ"** ಎಂಬುದರ ಅಭಿಪ್ರಾಯವೇನೆಂಬುದನ್ನು ತಿಳಿಸುತ್ತಾರೆ:—**ಎನ್ರುದುವುಮ್** - ಎಂದು ಸಂಹಿತೆಯಲ್ಲಿ ಹೇಳಿರುವುದು, **ಧರ್ಮಾಂತರ ನೈರಪೇಕ್ಷ್ಯಂ ಶೊನ್ನಪಡಿ**- ಅಧಿಕಾರಿಯಲ್ಲಿ ಪರಿಕರರೂಪ ವಿಶೇಷಣಗಳಲ್ಲದೆ ಇತರ ವಿಶೇಷಣಗಳು ಯಾವುವೂ ಬೇಕಿಲ್ಲವೆಂದು ಹೇಳಿದಂತೆ ಭಾವಿಸತಕ್ಕದ್ದು; ಆ ಧರ್ಮಾಂತರಗಳು ಯಾವುವು ಎಂದರೆ **"ನಜಾತಿ ಭೇದಂ ನಕುಲಂ ನಲಿಙ್ಗಂ ನಗುಣಕ್ರಿಯಾಃ । ನ ದೇಶಕಾಲೌ ನಾವಸ್ಥಾಂ ಯೋಗೋಹ್ಯಯಮಪೇಕ್ಷತೇ"** ಎಂಬ ಶ್ಲೋಕ ದಲ್ಲಿ ಹೇಳಿರುವ ಧರ್ಮಗಳು ಯಾವುವೂ ಬೇಕಿಲ್ಲವು, ಭಕ್ತಿಯೋಗಕ್ಕಾದರೋ ಪರಾಪೇಕ್ಷೆಗಳುಂಟು; ನಿತ್ಯನೈಮಿತ್ತಿಕ ಕರ್ಮಾನುಷ್ಠಾನದಿಂದ ಸೇರಿದ ಕರ್ಮ

ಯೋಗದ, ತ್ರೈವರ್ಣಿಕಾಧಿಕಾರತ್ವವೂ, ಪರಿಶುದ್ಧಸ್ಥಳದಲ್ಲಿ ಸಾಙ್ಗಯೋಗಾಭ್ಯಾಸವೂ, ಮೊದಲಾದವುಗಳ ಅಪೇಕ್ಷೆಯುಂಟು, ಈ ಪ್ರಪತ್ತಿಗಾದರೋ ತಾತ್ಕಾಲಿಕ ಅಙ್ಗಗಳವಿನಾ ಬೇರೆ ಇನ್ನು ಯಾವ ವಿಶೇಷಣಗಳ ಅಪೇಕ್ಷೆಯೂ ಅದಕ್ಕಿಲ್ಲವೆಂಬ ಭಾವವು. ಈ ಪ್ರಮಾಣವು, ಪರಾಪೇಕ್ಷೆಯು ಈ ಪ್ರಪತ್ತಿಗಿಲ್ಲವೆಂದು ಹೇಳಿರುವ ಸಂದರ್ಭದಲ್ಲಿ, ಪರಾಪೇಕ್ಷೆಯು ಯಾವುದು ಎಂದು ನಿರ್ಧರಿಸಬೇಕಾಗಿರುತ್ತದೆ. "ಏವಂ" ಎಂದಿರುವದರಿಂದಲೂ, ಉತ್ತರಾರ್ಧವು ಪೂರ್ವಾರ್ಧದ ಅರ್ಥವನ್ನೇ ಸಮರ್ಥನೆ ಮಾಡುವದರಿಂದಲೂ ನಿರ್ಧರಿಸಬಹುದು. ಭಕ್ತಿಮಾರ್ಗಕ್ಕೆ ಪರಾಪೇಕ್ಷೆ ಇರುವಹಾಗೆ ಇದಕ್ಕೆ ಬೇಕಿಲ್ಲವೆಂದರ್ಥಮಾಡಿದರೆ ಪರಿಕರಗಳ ಆವಶ್ಯಕತೆಯು ಬೇಡವೆಂದಾಗಲಿಲ್ಲವು. ಈ ವಿಷಯವನ್ನು ಸಾರಪ್ರಕಾಶಿಕಾಯವರು ಒಂದು ನಿದರ್ಶನಮೂಲಕ ಬಹು ಚನ್ನಾಗಿ ಉಪಪಾದಿಸಿ ಹೇಳಿರುತ್ತಾರೆ. ಹೇಗೆಂದರೆ :—"ನಿಷಿದ್ಧಭಕ್ಷಣಂಜೈಹ್ಮ ಮುತ್ಕರ್ಷೇಚ ವಚೋಽನೃತಂ। ರಜಸ್ವಲಾ ಮುಖಾಸ್ವಾದ ಸ್ಸುರಾಪಾನ ಸಮಾನಿತು" ಎಂಬಲ್ಲಿ "ನಿಷಿದ್ಧಭಕ್ಷಣಂ'' ಕೂಡದೆಂದು ನಿಷೇಧಿಸಲ್ಪಟ್ಟಿದ್ದರೆ, ಆ ನಿಷಿದ್ಧವಸ್ತುಗಳು ಯಾವುವು ಎಂಬ ಸಂದರ್ಭದಲ್ಲಿ, ಛತ್ರಾಕಂವಿಡ್ವರಾಹಂಚಲಶುನಂಗ್ರಾಮಕುಕ್ಕುಟಂ। ಪಲಾಂಡುಂ ಗೃಂಜನಂಚೈವ ಮತ್ಯಾಜಗ್ಧ್ವಾಪತೇದ್ದ್ವಿಜಃ॥ ಎಂಬ ಬೇರೆ ಪ್ರಮಾಣದ ಮೂಲಕ ಹೇಗೆ ಸಮನ್ವಯಮಾಡಿಕೊಳ್ಳಬೇಕೋ, ಹಾಗೆಯೇ ಈ ಸಂದರ್ಭದಲ್ಲೂ ಪ್ರಪತ್ತಿಗೆ "ಪರಾಪೇಕ್ಷಾ ನವಿದ್ಯತೇ" ಎಂದು ಹೇಳಿದರೆ, ಆ ಪರಾಪೇಕ್ಷಾ ಎಂತಾದ್ದೆಂಬ ವಿಮರ್ಶೆಯಲ್ಲೂ, "ಪ್ರಪತ್ತಿಂ ಸರ್ವಫಲದಾಂ ಸರ್ವೋಪಾಯಾನಪೇಕ್ಷಿಣೀಂ" "ನರಸ್ಯ ಬುದ್ಧಿದೌರ್ಬಲ್ಯಾ ದುಪಾಯಾಂತರಮಿಷ್ಯತೇ" ಎಂಬ ಬೇರೇ ಪ್ರಮಾಣಗಳ ಬಲದಿಂದ, ಉಪಾಯಾಂತರಗಳು ಯಾವುದನ್ನೂ ಈ ಪ್ರಪತ್ತಿಯು ಅಪೇಕ್ಷಿಸುವದಿಲ್ಲವೆಂದು ಅರ್ಥಮಾಡುವದು ಸಮಂಜಸವಾದುದೆಂದು ಹೇಳಿರುತ್ತಾರೆ. "ಪ್ರಪತ್ತಿಯು ಸಮಸ್ತ ಫಲಗಳನ್ನೂ ಕೊಡುವಂತಾದ್ದು ಇತರ ಸಮಸ್ತ ಉಪಾಯಗಳನ್ನೂ ಅಪೇಕ್ಷಿಸುವದಿಲ್ಲವು; ಆದರೆ ಮನುಷ್ಯನ ಅವಿಶ್ವಾಸರೂಪ ಬುದ್ಧಿಯ ದೌರ್ಬಲ್ಯದಿಂದ, ಉಪಾಸನಾದಿ ಬೇರೆ ಉಪಾಯವು ಅಪೇಕ್ಷಿಸಲ್ಪಡುತ್ತದೆ" ಎಂಬುದು ಈ ಮೇಲಿನ ಪ್ರಮಾಣಗಳ ತಾತ್ಪರ್ಯವು.

ಇದೀಗ ಸರಿಯಾದ ಸಮಾಧಾನವು. ಹೀಗೆ ಅಭಿಪ್ರಾಯವೆಂದು ಭಾವಿಸದೆ ಹೋದರೆ ಪೂರ್ವಪಕ್ಷಿಗಳ ಇಷ್ಟಾಪತ್ತಿಗೂ ಕುಂದಕವೆಂದು ಹೇಳುತ್ತಾರೆ ಪೂರ್ವಪಕ್ಷಿಗಳು ಮಹಾವಿಶ್ವಾಸಮಾತ್ರ ಪ್ರಪತ್ತಿಗೆ ಆವಶ್ಯಕವೆಂದು ಹೇಳುವರು. ಈ ಪ್ರಮಾಣಕ್ಕೆ ನೀವು ಹೇಳುವ ಹಾಗೆ ಅರ್ಥಮಾಡಿಕೊಂಡು ಆನುಕೂಲ್ಯ ಸಙ್ಕಲ್ಪ

ಇವರ್‍ಗಳಿಶೈನ್ದ ಮಹಾವಿಶ್ವಾಸತ್ತೈಯುಮ್ ಇಕ್ಕಟ್ಟಳೈಯಿಲೆ ಸಂಭಾವಿತ ಸ್ವಭಾವಮಾಕ್ಕಲಾಮ್.

ಮಹಾ ವಿಶ್ವಾಸೋಽಪಿನಾಙ್ಗಮಿತಿವಾದಸ್ಯ ನಿರಾಸಃ

ಮಹಾವಿಶ್ವಾಸದ ವಿಷಯಕ್ಕೆ

ಇನ್ನವಕಾಶತ್ತಿಲೇ ವೇರೇ ಶಿಲರ್, ಆಸ್ತಿಕನುಕ್ಕು ಶಾಸ್ತ್ರಾರ್ಥ ವಿಶ್ವಾಸಮ್ ಪಿರಕ್ಕುಮದುಕ್ಕು ಮೇರ್ಪಟ್ಟ ಮಹಾವಿಶ್ವಾಸ ಮೆನ್ರೊನ್ರುಣ್ಡೋ?

ಪ್ರಾತಿಕೂಲ್ಯ ವರ್ಜನ, ಇವುಗಳು ಬೇಕಾಗಿಲ್ಲವೆಂದು ಅಭಿಪ್ರಾಯಪಟ್ಟರೆ, ಮಹಾವಿಶ್ವಾಸವೂ ಬೇಡವೆಂದಾಗಿ, ಅದು ಪ್ರಪನ್ನನಲ್ಲಿ ತೋರಿಬಂದರೆ ಅದೂ ಕೂಡ ನಿಮ್ಮ ಅಭಿಪ್ರಾಯದಹಾಗೆ ಸಂಭಾವಿತ ಸ್ವಭಾವವೆಂದರೆ ಪ್ರಾಪ್ತವಾದ ಧರ್ಮವೆಂದು ಹೇಳಬೇಕಾಗುತ್ತದೆಂದು ತಿಳಿಸುತ್ತಾರೆ. ಇಪ್ಪಡಿಯಲ್ಲಾದಪೋದು- ಹೀಗೆ ಆನುಕೂಲ್ಯಾದಿ ಅಙ್ಗಗಳು ಆವಶ್ಯಕವೆಂದೂ, ಪರಾಪೇಕ್ಷೆ ಬೇಡವೆಂದರೆ ಉಪಾಯಾಂತರಾದಿಗಳು ಬೇಡವೆಂದೂ, ಅರ್ಥಮಾಡದಿದ್ದರೆ, **ಇವರ್‍ಗಳಿಶೈನ್ದ** – ಈ ಪೂರ್ವ ಪಕ್ಷಿಗಳು ಅಪೇಕ್ಷಿಸುವ, ಎಂದರೆ ಆವಶ್ಯಕವೆಂದು ಹೇಳುವ, **ಮಹಾವಿಶ್ವಾಸತ್ತೈಯುಮ್** - ಮಹಾವಿಶ್ವಾಸವೆಂಬ ಅಙ್ಗವನ್ನೂ, **ಇಕ್ಕಟ್ಟಳೈಯಿಲೇ** - ಈ ನ್ಯಾಯದಪ್ರಕಾರವೇ, ಎಂದರೆ ಆನುಕೂಲ್ಯಾದಿಗಳು ನೀವು ಹೇಳುವಹಾಗೆ ಸಂಭಾವಿತ ಸ್ವಭಾವಗಳಾದರೆ, ಅದೇ ನ್ಯಾಯದಪ್ರಕಾರ, **ಸಂಭಾವಿತ ಸ್ವಭಾವಮಾಕ್ಕಲಾಮ್** - ಸಂಭಾವಿತ ಸ್ವಭಾವವೆಂದೇ ಹೇಳಿಬಿಡಬಹುದು. ಮಹಾವಿಶ್ವಾಸವು ಆವಶ್ಯಕವು, ಪ್ರಾಪ್ತವಾದ ಧರ್ಮವಲ್ಲವು ಎಂದು ಹೇಳುವದಾದರೆ, ಆನುಕೂಲ್ಯಾದಿಗಳೂ ಕೂಡ ಸಂಭಾವಿತ ಸ್ವಭಾವವಲ್ಲವು, ಆವಶ್ಯಕವಾದ ಅಙ್ಗಗಳೇ ಎಂಬ ಭಾವವು.

ಮಹಾವಿಶ್ವಾಸವೂ ಅಙ್ಗವಲ್ಲವೆಂಬ ವಾದದ ನಿರಸನವು.

ಮೊದಲು ಮಹಾವಿಶ್ವಾಸವು ಅಙ್ಗವಾಗಲಾರದೆಂದು ಹೇಳುವವರ ಪಕ್ಷವನ್ನು ಅನುವಾದ ಮಾಡುತ್ತಾರೆ. **ಇನ್ನವಕಾಶತ್ತಿಲೇ** - ಇದೇ ಸಂದರ್ಭದಲ್ಲೇ, **ವೇರೇ ಶಿಲರ್** - ಇನ್ನು ಕೆಲವರು, ಮೇಲೆ ಆಕ್ಷೇಪಿಸಿದವರಲ್ಲದೆ ಬೇರೇ ಕೆಲವರು, **ಆಸ್ತಿಕನುಕ್ಕು** - ವೇದ, ಇತರ ಶಾಸ್ತ್ರ, ಪರಬ್ರಹ್ಮ ಮೊದಲಾದವುಗಳಲ್ಲಿ ಆಸ್ತಿಕ್ಯ ಬುದ್ಧಿಯುಳ್ಳವನಿಗೆ, **ಶಾಸ್ತ್ರಾರ್ಥವಿಶ್ವಾಸಮ್ ಪಿರಕ್ಕುಮ್** - ಶಾಸ್ತ್ರವು ಹೇಳುವದರಲ್ಲಿ ವಿಶ್ವಾಸವು ಹುಟ್ಟಿಯೇ ಹುಟ್ಟುತ್ತದೆ, **ಅದಕ್ಕು ಮೇರ್ಪಟ್ಟ** -

ಆಗೈಯಾಲ್ ಇದುವುಮ್ ಸರ್ವಶಾಸ್ತ್ರಾರ್ಥ ಸಾಧಾರಣಮಾ ಮತ್ತನ್ರೈ ಪ್ರೋಕ್ಕ, ಪ್ರಪತ್ತಿಕ್ಕು ವಿಶೇಷಿತ್ತು ಅಙ್ಗಮಾಗ ವತ್ತೋವೆನ್ರು ನಿನ್ರೈಪ್ಪಾರ್‌ಗಳ್. ಅದುವುಮ್, (೧) “ನವಿಶ್ವಸೇದವಿಶ್ವಸ್ತೇ ವಿಶ್ವಸ್ತೇ ನಾತಿ ವಿಶ್ವಸೇತ್” ಇತ್ಯಾದಿಗಳಿಲೇ ವಿಶ್ವಾಸ ತಾರತಮ್ಯಮ್ ಪ್ರಸಿದ್ಧಮಾಗೈಯಾಲುಮ್, ಇನ್ವಿಡತ್ತಿಲ್ ಅತಿಶಯಿತ ವಿಶ್ವಾಸಮುಙ್ಗಮೆನ್ಗಿರ ವಚನತ್ತಾಲುಮ್ ಪರಿಹೃತಮ್.

ಆ ಶಾಸ್ತ್ರಾರ್ಥ ವಿಶ್ವಾಸಕ್ಕೂ ಉತ್ಕೃಷ್ಟವಾದ, ಮಹಾವಿಶ್ವಾಸಂ ಎನ್ರು-ಎಂಬದಾಗಿ, ಒನ್ರುಂಡೋ-ಒಂದುಂಟೋ? **ಆಗೈಯಾಲ್**-ಆ ಕಾರಣದಿಂದ ಎಂದರೆ ಶಾಸ್ತ್ರಾರ್ಥ ವಿಶ್ವಾಸವಲ್ಲದೆ ಬೇರೇ ಅಧಿಕವಿಶ್ವಾಸವೆಂಬುದು ಇಲ್ಲವಾದುದರಿಂದ, **ಇದುವುಮ್** - ಪ್ರಪತ್ತಿಗೆ ಅಙ್ಗವೆಂದು ಹೇಳುವ ಈ ಮಹಾ ವಿಶ್ವಾಸವೂ ಕೂಡ, **ಸರ್ವಶಾಸ್ತ್ರಾರ್ಥ ಸಾಧಾರಣಮಾಮ್** - ಸರ್ವ ಶಾಸ್ತ್ರಾರ್ಥದಲ್ಲೂ ವಿಶ್ವಾಸ ಹೇಗೋ, ಹಾಗೆಯೇ ಸಾಧಾರಣವಾದುದೇಯಾಗುತ್ತದೆ, **ಅತ್ತನ್ರೈ ಪ್ರೋಕ್ಕಿ**-ಅಷ್ಟಲ್ಲದೆ, **ಪ್ರಪತ್ತಿಕ್ಕು ವಿಶೇಷಿತ್ತು** - ಪ್ರಪತ್ತಿಗೆ ವಿಶೇಷಿಸಿ ಎಂದರೆ ಮಹಾವಿಶ್ವಾಸವೆಂದು ಪ್ರಪತ್ತಿಗೆ ಬೇರೆ ಎಂದು ವಿಶೇಷಿಸಿ: **ಅಙ್ಗಮಾಗವತ್ತೋ** - ಅಙ್ಗವು ಹೇಗಾಗುತ್ತದೋ? ಎನ್ರು **ನಿನ್ರೈಪ್ಪಾರ್‌ಗಳ್** - ಎಂದು ಯೋಚಿಸುವರು, ಎಂದು ಶಙ್ಕಿಸುವರು ಎಂಬ ಭಾವವು. ಈ ಶಙ್ಕೆಯನ್ನು ಮುಂದಿನ ವಾಕ್ಯದಿಂದ ಖಂಡಿಸುತ್ತಾರೆ:—ಶಾಸ್ತ್ರದಲ್ಲಿ ಯಾವಾಗ ಪ್ರಪನ್ನನಿಗೆ ವಿಶ್ವಾಸ ಉಂಟಾಯಿತೋ ಅದೇ ಸಾಕು. ಇನ್ನು ಬೇರೇ ಮಹಾವಿಶ್ವಾಸ ಒಂದು ಅಙ್ಗವಾಗಿ ಪ್ರಪತ್ತಿಗೆ ಅವಶ್ಯಕವೆಂಬುದು ಹೇಗೆ? ಶಾಸ್ತ್ರದಲ್ಲಿ ಇರುವ ವಿಶ್ವಾಸವೇ ಸಾಕಾಗಿರುತ್ತದೆಂಬುದು ಪೂರ್ವಪಕ್ಷವು. **ಅದುವುಮ್** - ಆ ಪೂರ್ವಪಕ್ಷವೂ ಸಹ, (೧) “**ಅವಿಶ್ವಸ್ತೇ** - ವಿಶ್ವಾಸವಿಡಲು ಯೋಗ್ಯನಲ್ಲದವನಲ್ಲಿ, **ನವಿಶ್ವಸೇತ್** - ವಿಶ್ವಾಸವನ್ನಿಡಬಾರದು, **ವಿಶ್ವಸ್ತೇ** - ವಿಶ್ವಾಸವಿಡಬಹುದಾದವನಲ್ಲಿ, **ನಾತಿವಿಶ್ವಸೇತ್** - ಹೆಚ್ಚು ವಿಶ್ವಾಸವನ್ನಿಡಬಾರದು”, **ಇತ್ಯಾದಿಗಳಿಲೇ** - ಇವೇ ಮೊದಲಾದ ಪ್ರಮಾಣಗಳಲ್ಲಿ, ವಿಶ್ವಾಸ ತಾರತಮ್ಯವು ಪ್ರಸಿದ್ಧವಾದುದರಿಂದಲೂ, **ಇನ್ವಿಡತ್ತಿಲ್** - ಈ ಸಂದರ್ಭದಲ್ಲೂ, **ಅತಿಶಯಿತ ವಿಶ್ವಾಸಮುಙ್ಗಮ್** - ಮಹಾ ವಿಶ್ವಾಸವು ಅಙ್ಗವು, ಎಙ್ಗಿರ **ವಚನತ್ತಾಲುಮ್** - ಎಂದು

---

(೧) ಭಾರ. ಉ. ೩೮. ೯.

ಹೇಳುವ ಪ್ರಮಾಣ ಬಲದಿಂದಲೂ, ಪರಿಹೃತವ್-ಪರಿಹಾರವನ್ನು ಹೊಂದಿತು. ಆ ಪೂರ್ವಪಕ್ಷ ಪರಿಹಾರಕ್ಕೆ ಎರಡು ಕಾರಣಗಳನ್ನು ಹೇಳಿದರು :—

(೧) ವಿಶ್ವಾಸದಲ್ಲಿ ತಾರತಮ್ಯ ಉಂಟು. ಪೂರ್ವಪಕ್ಷಿಯು ಹೇಳಿದಹಾಗೆ ವಿಶ್ವಾಸವು ಶಾಸ್ತ್ರಾರ್ಥದಲ್ಲಿನ ಹಾಗೆ ಸಾಧಾರಣವಾದುದೇ ಎಲ್ಲಾ ಸಂದರ್ಭದಲ್ಲೂ ಎಂದು ಹೇಳಿದುದು ಸರಿಯಲ್ಲವು. ಇದಕ್ಕೆ ಉದ್ಯೋಗ ಪರ್ವವಾಕ್ಯವನ್ನು ಪ್ರಮಾಣವಾಗಿ ಉದಾಹರಿಸಿದರು. ಆದರಿಂದ ವಿಶ್ವಾಸ ತಾರತಮ್ಯವು ಉಂಟೆಂಬುದು ಸಿದ್ಧವು. ವಿಶ್ವಾಸ ತಾರತಮ್ಯವೇ ಇಲ್ಲವೆಂಬ ಪಕ್ಷವು ಇಲ್ಲಿ ಖಂಡಿಸಲ್ಪಟ್ಟಿತು.

(೨) ಪ್ರಪತ್ತಿಗೆ ಮಹಾವಿಶ್ವಾಸವು ಅಜ್ಗವೆಂಬುದಕ್ಕೆ ಪ್ರಮಾಣವೇ ಇದೆ. ಪ್ರಮಾಣ ಶರಣರಾದ ನಮಗೆ ಇಂತಹ ಶಜ್ಕಾವಿಗೆ ಕಾರಣವೇ ಇಲ್ಲವೆಂಬ ಭಾವವೂ ದ್ಯೋತಿತವು "**ರಕ್ಷಿಷ್ಯತೀತಿ ವಿಶ್ವಾಸಃ**"ಎಂಬುದು ಸಾಧಾರಣವಿಶ್ವಾಸವಾಗುವದಿಲ್ಲವು, ಅದು ಮಹಾವಿಶ್ವಾಸವೆಂಬ ಭಾವವು. ಭಗವಚ್ಛಾಸ್ತ್ರದಲ್ಲಿ "**ಸೌಲಭ್ಯವೇದೀ ಭಜತೇ ಕಶ್ಚಿತ್ತಂ ಪರಮಾಸ್ತಿಕಃ**" ಎಂದು ಹೇಳಿರುವದರಿಂದ ಮಹಾವಿಶ್ವಾಸಯುಕ್ತನೇ ಪ್ರಪನ್ನನಾಗಿ ಶರಣಾಗತನಾಗುವನೆಂದು ಹೇಳಲ್ಪಟ್ಟಿರುತ್ತದೆ. ಮತ್ತು "**ರಕ್ಷಿಷ್ಯತ್ಯನುಕೂಲಾನ್ನ ಇತಿ ಯಾ ಸುದೃಢಾಮತಿಃ । ಅನನ್ಯಸಾಧ್ಯೇ ಸ್ವಾಭೀಷ್ಟೇ ಮಹಾವಿಶ್ವಾಸ ಪೂರ್ವಕಂ । ತದೇಕೋಪಾಯತಾಯಾಚ್ಞಾ ಪ್ರಪತ್ತಿಶ್ಶರಣಾಗತಿಃ**" ಎಂಬ ಭರತಮುನಿಯ ವಾಕ್ಯವು ಮುಖ್ಯ ಪ್ರಮಾಣವು (೧೦೫೩ ನೆಯ ಪುಟವನ್ನು ನೋಡಿ). ಇಲ್ಲಿ ಮಹಾವಿಶ್ವಾಸ ಪ್ರಯೋಗವನ್ನು ಕಾಣಬಹುದು. ವಿಶ್ವಾಸ ತಾರತಮ್ಯ ಉಂಟೆಂದು ಒಂದುವೇಳೆ ಒಪ್ಪಿದರೂ, ಈ ಮಹಾ ವಿಶ್ವಾಸವು ಒಂದು ಅಜ್ಗವೆಂದು ಹೇಳುವ ಪ್ರಮಾಣವಿಲ್ಲದಿದ್ದರೆ ಒಪ್ಪದಿರಬಹುದಾಗಿತ್ತು. ಆದರೆ, ಪ್ರಬಲ ಪ್ರಮಾಣಗಳಿದ್ದರೆ ಪೂರ್ವ ಪಕ್ಷವು ನಿಲ್ಲದು ಎಂಬ ಭಾವವು.

ಆದರೆ ಪೂರ್ವಪಕ್ಷಿಯು ವಿದುರವಾಕ್ಯವಾದ "**ನವಿಶ್ವಸೇ ದವಿಶ್ವಸ್ತೇ**" ಎಂಬ ವಾಕ್ಯದಿಂದ ಲೋಕಮರ್ಯಾದೆಯಲ್ಲಿ ವಿಶ್ವಾಸ ತಾರತಮ್ಯ ಉಂಟೆಂದೇನೋ ಅಜ್ಗೀಕರಿಸುವೆವು; ಬ್ರಹ್ಮವಿದ್ಯಾವಿಷಯದಲ್ಲಿ ಪರಬ್ರಹ್ಮಪ್ರಾಪ್ತಿಗೆ ಬೇಕಾದ ವಿಶ್ವಾಸದಲ್ಲಿ ತಾರತಮ್ಯವೆಂದರೇನು ಎಂದು ಆಕ್ಷೇಪಿಸಬಹುದೆಂದು, ಆ ಸಂದರ್ಭದಲ್ಲೂ ವಿಶ್ವಾಸ ತಾರತಮ್ಯ ಉಂಟೆಂಬುದಕ್ಕೂ ಅದರಿಂದ ಫಲದಲ್ಲಿ ವ್ಯತ್ಯಾಸ ಉಂಟೆಂಬುದಕ್ಕೂ ಶ್ರೀನಾರದ ಭಗವಾನರ ವಾಕ್ಯವನ್ನು "**ಇಷ್ಟಪಡಿ**" ಎಂದಾರಂಭಿಸಿ ಉದಾಹರಿಸುತ್ತಾರೆ.

ಇಪ್ಪಡಿ ಪುರುಷ ವಿಶೇಷಙ್ಗಳಿಲೇ ವಿಶ್ವಾಸ ತಾರತಮ್ಯ ಮುಂಡೆನ್ರು ಮಿಡತ್ತೈ, ಶ್ರೀಮದಷ್ಟಾಕ್ಷರ ಬ್ರಹ್ಮವಿದ್ಯೈಯಿಲೇ (೧) "ಯಸ್ಯ ಯಾವಾಂಶ್ಚ ವಿಶ್ವಾಸ ಸ್ತಸ್ಯ ಸಿದ್ಧಿಶ್ಚ ತಾವತೀ । ಏತಾವಾನಿತಿ ನೈತಸ್ಯ ಪ್ರಭಾವಃ ಪರಿಮೀಯತೇ" ॥ ಎನ್ರು ಶ್ರೀ ನಾರದ ಭಗವಾನರುಳಿಚ್ಚೆಯ್ದಾರ್.

ಇಪ್ಪಡಿ - ಈ ರೀತಿಯಲ್ಲಿ ಎಂದರೆ ಮೇಲೆ ಉಪಪಾದಿಸಲ್ಪಟ್ಟ ರೀತಿಯಲ್ಲಿ, ಪುರುಷ ವಿಶೇಷಙ್ಗಳಿಲೇ - ಪ್ರಪನ್ನರಾದ ಪುರುಷವಿಶೇಷರಲ್ಲೂ, ವಿಶ್ವಾಸ ತಾರತಮ್ಯವು - ಉಂಟು, ಎನ್ರುಮಿಡತ್ತೈ - ಎನ್ನುವ ಸಂದರ್ಭದಲ್ಲಿ, ಶ್ರೀಮದಷ್ಟಾಕ್ಷರಬ್ರಹ್ಮವಿದ್ಯೆಯಲ್ಲಿ, "ಯಸ್ಯ - ಯಾವ ಈ ಅಷ್ಟಾಕ್ಷರ ಬ್ರಹ್ಮ ವಿದ್ಯಾಧಿಕಾರಿಗೆ, ಯಾವಾಂಶ್ಚ ವಿಶ್ವಾಸಃ - ಎಷ್ಟರಮಟ್ಟಿಗೆ ವಿಶ್ವಾಸ ಉಂಟೋ, ತಸ್ಯ - ಆ ಅಧಿಕಾರಿಗೆ, ಸಿದ್ಧಿಶ್ಚ - ಫಲವೂ ಕೂಡ, ತಾವತೀ - ಅಷ್ಟೇ ಎಂದರೆ ಅದಕ್ಕನುಗುಣವಾಗಿರುತ್ತದೆ." ಮಹಾ ವಿಶ್ವಾಸರೂಪದಲ್ಲಿ ವಿಶ್ವಾಸವು ಸಂಪೂರ್ಣವಾಗಿದ್ದರೆ ಮೋಕ್ಷಫಲವು; ಮಂದವಿಶ್ವಾಸವಾದರೆ ಮೋಕ್ಷಫಲವು ಒಡನೆಯೇ ಇಲ್ಲವೆಂಬ ತಾತ್ಪರ್ಯವೂ ತೋರಿ ಬರುತ್ತದೆ; ಇದರಿಂದ, ಏತಸ್ಯ ಪ್ರಭಾವಃ - ಈ ಅಷ್ಟಾಕ್ಷರ ಬ್ರಹ್ಮವಿದ್ಯೆಯ ಪ್ರಭಾವವು, ಏತಾವಾನ್ ಇತಿ - ಇಷ್ಟೇ ಎಂದು ಹೇಳಲು, ನ ಪರಿಮೀಯತೇ - ಪರಿಮಿತಿಯನ್ನು ಹೊಂದಿರುವುದಲ್ಲವು. ಅದು ಅಪರಿಮಿತಪ್ರಭಾವ ಉಳ್ಳದೆಂಬ ಭಾವವು; ಏಕೆಂದರೆ ಪೂರ್ಣವಿಶ್ವಾಸವಿದ್ದುದಾದರೆ ನಿರತಿಶಯ ಪರಬ್ರಹ್ಮ ಪ್ರಾಪ್ತಿಯನ್ನೇ ಉಂಟುಮಾಡುವುದರಿಂದ ಎಂಬ ಭಾವವು, ಎನ್ರು - ಎಂಬುದಾಗಿ, ಶ್ರೀ ನಾರದ ಭಗವಾನರು, ಅರುಳಿಚ್ಚೆಯ್ದಾರ್ - ಕೃಪಯಾ ಉಪದೇಶಿಸಿರುತ್ತಾರೆ.

ಹೀಗೆ ಹೇಳುವುದರಿಂದ ತಿಳಿಯತಕ್ಕ ಅಂಶವೇನಾಯಿತು ಎಂದರೆ ಮಹಾ ವಿಶ್ವಾಸ ಯುಕ್ತರಿಗೆನೋ ಮೋಕ್ಷವು, ಮಹಾ ವಿಶ್ವಾಸದಲ್ಲಿ ನ್ಯೂನತೆಯಿರುವ ಮಂದವಿಶ್ವಾಸಿಗಳಿಗೆಲ್ಲಾ ಮೋಕ್ಷವಿಲ್ಲವೆಂದು ಹೇಳಿದಂತಾಯಿತು ಎಂದು ಪೂರ್ವಪಕ್ಷಿಯು [illegible] ಭಾವಿಸಿ ಹಾಗೆ [illegible]? ಹಾಗೆ ಹೇಳುವುದು ನಮಗೆ ಇಷ್ಟವೇ ಎಂದು ಕೇಳುವಿರೇ, ಆಗ "ಮಿತ್ರಭಾವೇನ ಸಂಪ್ರಾಪ್ತಂ ನ ತ್ಯಜೇಯಂ ಕಥಂಚನ" ಎಂಬ [illegible] ಲ್ಪಕ್ಕೆ ವಿರೋಧ ಬರುವುದಿಲ್ಲವೇ ಎಂದರೆ ಅದಕ್ಕೆ ಸಮಾಧಾನವಾಗಿ, ಈ ಮಂದ ವಿಶ್ವಾಸಯುಕ್ತರಿಗೂ ಕೂಡ ಕೊನೆಯಲ್ಲಿ ಮೋಕ್ಷ ಉಂಟೆಂದು ಉಪದೇಶಿಸುತ್ತಾರೆ. ಇದರ ಸಮರ್ಥನೆಗಾಗಿ [illegible] ಸೂತ್ರ

(೧) ನಾರ-ಕಲ್ಪ ೧. ೧೪.

ಮಂದ ವಿಶ್ವಾಸರಾನ ಪ್ರಪನ್ನಾಭಾಸರ್ಗೈಯುಮ್ ಮುಡಿವಿಲೇ ಸರ್ವೇಶ್ವರರ್ ರಕ್ಷಿಕ್ಕುಮ್. ಎಙ್ಙನೇ ಎನ್ನಿಲ್ (೧) ಸಕೃದುಚ್ಚಾರಿತಂ ಯೇನ ಹರಿರಿತ್ಯಕ್ಷರದ್ವಯಂ। ಬದ್ಧಃ ಪರಿಕರಿಸ್ತೇನ ಮೋಕ್ಷಾಯ ಗಮ

ರತ್ನದಿಂದ ಎರಡು ಶ್ಲೋಕಗಳನ್ನೂ ಆಳ್ವಾರ್ರುವರ ತಿರುನಾಲೆಯಿಂದ ಒಂದು ಪಾಶುರವನ್ನೂ, ಉದಾಹರಿಸುತ್ತಾರೆ.

ಮಂದವಿಶ್ವಾಸರಾನ – ವಿಶ್ವಾಸದಲ್ಲಿ ನ್ಯೂನತೆ ಯಿರುವ, ಆಕಾರಣದಿಂದ **ಪ್ರಪನ್ನಾಭಾಸರ್ಗೈಯುಮ್ – ಪ್ರಪನ್ನವತ್ ಈಷದ್ಭಾಸಂತೇ** - ಪ್ರಪನ್ನರ ಹಾಗೆ ಸ್ವಲ್ಪವಾಗಿ ತೋರುವಂತವರು ಎಂದರೆ ಪೂರ್ಣಪ್ರಪನ್ನರಲ್ಲದವರನ್ನೂ, **ಮುಡಿವಿಲೇ**-ಕೊನೆಯಲ್ಲಿ, ಸರ್ವೇಶ್ವರನು ರಕ್ಷಿಸಿಬಿಡುವನು, "**ನೇಹಾಭಿ ಕ್ರಮ ನಾಶೋಸ್ತಿ ಪ್ರತ್ಯವಾಯೋ ನವಿದ್ಯತೇ**" ಎಂಬ ಗೀತಾ ಶ್ಲೋಕದಲ್ಲಿ (೨–೪೦) ಕರ್ಮಯೋಗದ ವಿಷಯದಲ್ಲಿ ಪ್ರಾರಂಭಿಸಿ ಪೂರೈಸದೇ ಹೋಗಿ ಸ್ವಲ್ಪವಾಗಿ ಅನುಷ್ಠಿಸಿದ ಧರ್ಮವೂ ಕೂಡ,ಸಂಸಾರ ಭಯದಿಂದ ತಪ್ಪಿಸಬಹುದೆಂದು ಹೇಳಿದ ಹಾಗೆ, ಕೊನೆಗೆ ವಿಶ್ವಾಸ ಪೂರ್ತಿಯನ್ನುಂಟುಮಾಡಿ ಸಂಪೂರ್ಣ ಪ್ರಪನ್ನರನ್ನಾಗಿ ಮಾಡಿ ಸರ್ವೇಶ್ವರನು ಸಂರಕ್ಷಿಸುವನೆಂದು ಹೇಳಿದರು. ಹಾಗೆಯೇ ಇನ್ನೊಂದು ಸಂದರ್ಭದಲ್ಲೂ, ಗೀತೆಯಲ್ಲಿ "**ನಹಿ ಕಲ್ಯಾಣಕೃತ್ಕಶ್ಚಿತ್ ದುರ್ಗತಿಂ ತಾತ ಗಚ್ಛತಿ**" ಸುಕೃತವನ್ನು ಸ್ವಲ್ಪಮಟ್ಟಿಗೆ ಮಾಡಿರುವವನಿಗೂ ಎಂದಿಗೂ ದುರ್ಗತಿ ಎಂಬುವದಿಲ್ಲವೆಂದೂ, ಶ್ರೀಕೃಷ್ಣ ಭಗವಾನರವರು ಹೇಳಿರುತ್ತಾರೆ. ಹಾಗೆಯೇ ಇಲ್ಲಿಯೂ ಶರಣಾಗತಿಯನ್ನೇನೋ ಅನುಷ್ಠಿಸಿರುತ್ತಾನೆ. ಪೂರ್ಣವಿಶ್ವಾಸವಿಲ್ಲದುದರಿಂದ ಆಜ್ಞಾಲೋಪಮೂಲಕ ಶರಣಾಗತಿಯು ಸಿದ್ಧಿಸಲಿಲ್ಲವು. ಹೀಗೆ ಪ್ರಾರಂಭಿಸಿದ ಸುಕೃತವು ವ್ಯರ್ಥವಾಗುವದಿಲ್ಲವು. ಕೊನೆಗೆ ಮಹಾ ವಿಶ್ವಾಸವು ಉಂಟಾಗಿ ಶರಣಾಗತಿಯು ಪೂರ್ಣವಾಗಿ ಮೋಕ್ಷಪ್ರಾಪ್ತಿಯುಂಟಾಗುವದೆಂದು ಹೇಳಿರುತ್ತಾರೆ. ಮುಂದೆ **ಎಙ್ಙನೇ ಯೆನ್ನಿಲ್** – ಎಲ್ಲಿ ಹಾಗೆ ಹೇಳಿದೆ? ಎಂದಾರಂಭಿಸಿ ಪ್ರಮಾಣಗಳನ್ನು ಉದಾಹರಿಸುತ್ತಾರೆ. (೧) **ಯೇನ** - ಯಾವ ಪುಣ್ಯಶಾಲಿಯಿಂದ, **ಹರಿರಿತ್ಯಕ್ಷರದ್ವಯಂ**-ಹರಿಃ ಎಂಬ ಎರಡಕ್ಷರವು, **ಸಕೃದುಚ್ಚಾರಿತಂ**-ಒಂದೇಸಲವಾಗಲಿ ಉಚ್ಚರಿಸಲ್ಪಟ್ಟುದುದಾದರೆ, **ತೇನ** - ಅಂತವನಿಂದ **ಮೋಕ್ಷಾಯ ಗಮನಂ ಪ್ರತಿ** - ಮೋಕ್ಷವನ್ನು ಕುರಿತು ಹೋಗುವದಕ್ಕಾಗಿ, **ಪರಿಕರಃ** - ಸೊಂಟಕ್ಕೆ ದಟ್ಟಿಯನ್ನು ಬಿಗಿಯೋಣವು ಎಂದರೆ ಸಾಧನವು, **ಬದ್ಧಃ** - ಕಟ್ಟಲ್ಪಟ್ಟಿತು,

---

(೧) ವಿ. ಧ. ೭೦. ೮೪.

ನಮ್ ಪ್ರತಿ" ಇತ್ಯಾದಿಗಳಿಲುಮ್, ಇವತ್ತೈಯಡಿಯೊತ್ತಿನ(೨) "ತ್ವದಂಘ್ರಿಮುದ್ದಿಶ್ಯ,"(೩)"ಉದೀರ್ಣ ಸಂಸಾರ" ಎಙ್ಗಿರ ಶ್ಲೋಕಙ್ಗಳಿಲುಮ್,

---

ಹರಿಶಬ್ದದ ಸಕೃದುಚ್ಚಾರಣೆಯಿಂದ ಮೋಕ್ಷವನ್ನುಹತ್ತಲು ಪ್ರಥಮ ಸೋಪಾನವನ್ನು ಕಟ್ಟಿದಹಾಗೆ; ಎಂದರೆ ಯಾವತ್ತಾದರೂ ಒಂದುದಿನ ಅದು ಉಪಾಯಾನುಷ್ಠಾನಕ್ಕೆ ಸಹಕಾರಿಯಾಗಿ ಪರಿಣಮಿಸಿ, ಕೊನೆಗೆಮೋಕ್ಷಪ್ರಾಪ್ತಿಯನ್ನುಂಟುಮಾಡುತ್ತದೆಂಬ ಭಾವವು", **ಇತ್ಯಾದಿಗಳಿಲುಮ್** - ಇವೇ ಮೊದಲಾದವುಗಳಲ್ಲೂ; ಇಲ್ಲಿ ಆದಿಪದದಿಂದ, ಮೇಲೆ ಹೇಳಲ್ಪಟ್ಟ ಎರಡುಗೀತಾ ಶ್ಲೋಕಗಳೂ ಮತ್ತು **"ಅವಶೇನಾಪಿ ಯನ್ನಾಮ್ನಿ ಕೀರ್ತಿತೇ ಸರ್ವಪಾತಕೈಃ। ಪುಮಾನ್ವಿಮುಚ್ಯತೇ ದ್ಯಃ"** ಇಲ್ಲಿ ಭಗವನ್ನಾಮೋಚ್ಚಾರಣೆಯು, ಸ್ಮರಣ, ಜಪ, ಪ್ರದಕ್ಷಿಣ ಮೊದಲಾದವುಗಳಿಗೂ ಉಪಲಕ್ಷಣವಾಗಿ ಭಾವಿಸತಕ್ಕದ್ದೆಂದು ಆದಿಶಬ್ದಪ್ರಯೋಗವು, **"ಸಕೃತ್ಸ್ಮೃತೋಽಪಿ ಗೋವಿಂದೋ ನೃಣಾಂ ಜನ್ಮಶತೈಶ್ಚಿತಂ। ಪಾಪರಾಶಿಂದಹತ್ಯಾಶು ತೂಲರಾಶಿ ಮಿವಾನಲಃ", "ಋಚೋ ಯಜೂಂಷಿ ಸಾಮಾನಿ ಯೋಽಧೀತೇಽಸಕೃದಂಜಸಾ। ಸಕೃದಷ್ಟಾಕ್ಷರಂ ಜಪ್ತ್ವಾ ಫಲಂತಸ್ಯ ಸಮಶ್ನುತೇ", "ವಿಷ್ಣೋರಾಯತನಂ ನಿತ್ಯಂ ಸಾಯಂಪ್ರಾತರ್ದಿನೇ ದಿನೇ। ಪ್ರದಕ್ಷಿಣ ದ್ವಯಂಕುರ್ಯಾದಶ್ವಮೇಧಫಲಂ ಲಭೇತ್", "ಯಾನಿ ಯಾನಿಚ ಪಾಪಾನಿ ಜನ್ಮಾಂತರ ಕೃತಾನಿಚ। ತಾನಿತಾನಿ ಪ್ರಣಶ್ಯಂತಿ ಪ್ರದಕ್ಷಿಣಪದೇಪದೇ"** ಇತ್ಯಾದಿಗಳು ಅನುಸಂಧೇಯಗಳು. ಇವೇ ಮೊದಲಾದವು ಹೇಳಲ್ಪಟ್ಟವು; **ಇವತ್ತೈ ಅಡಿಯೊತ್ತಿನ**-ಇವುಗಳನ್ನು ಅನುಸರಿಸುವ, **ತ್ವದಂಘ್ರಿಮುದ್ದಿಶ್ಯ**......**ಶ್ಲೋಕಙ್ಗಳಿಲುಮ್**-ಎಂಬೀ ಎರಡು ಶ್ಲೋಕಗಳಲ್ಲೂ; ಈ ಶ್ಲೋಕಗಳು ಯಾವುವು ಎಂದರೆ

(೨) **ತ್ವದಂಘ್ರಿಮುದ್ದಿಶ್ಯ! ಕದಾಪಿ ಕೇನಚಿದ್ಯಥಾತಥಾವಾಪಿಸಕೃತ್ಕೃತೋಽಂಜಲಿಃ। ತದೈವ ಮುಷ್ಣಾತ್ಯಶುಭಾ ನ್ಯಶೇಷತಶ್ಶುಭಾನಿ ಪುಷ್ಣಾತಿನಜಾತು ಹೀಯತೇ ॥ ೨೮ ॥** ಗುರುತರ ಉಪಾಯವಾದ ಭಕ್ತಿಯೋಗದಿಂದ ತುಂಬಾ ಕಷ್ಟದಿಂದ ಸಾಧ್ಯವಾದ ಈ ಪುರುಷಾರ್ಥವನ್ನು ತುಂಬಾ ಲಘುವಾದ ಪ್ರವೃತ್ತಿಮೂಲಕ ಹೇಗೆ ಹೊಂದುವಿ ಎಂದರೆ ಅದಕ್ಕೂ ಲಘುತರವಾದ ಅಂಜಲೀ ಬಂಧನವೇ ಮೊದಲಾದ ಕಾಯಿಕ ವ್ಯಾಪಾರವೇ ಸಹಕಾರಿಯಾಗಿರುವಾಗ ಪ್ರವೃತ್ತಿಯು ಸಾಧಿಸಲಾರದೇ

---

(೨) ಆಳ. ಸ್ತೋ. ೨೮ (೩) ಆಳ. ಸ್ತೋ. ೨೯.

ಎಂದು, ಸಾಭಿಪ್ರಾಯವಾಗಿ ಅಂಜಲಿಯ ಪ್ರಭಾವವನ್ನು ಈ ಶ್ಲೋಕದಲ್ಲಿ ಹೇಳುತ್ತಾರೆ. ತ್ವದಂಘ್ರಿಮುದ್ದಿಶ್ಯ - ಸರ್ವಲೋಕ ಶರಣ್ಯನೆಂದು ವಿಖ್ಯಾತನಾದ ನಿನ್ನ ಪಾದಕಮಲವನ್ನು ಕುರಿತು, ಬ್ರಹ್ಮರುದ್ರೇಂದ್ರಾದಿಗಳ ಪಾದಕ್ಕೆ ಮೋಕ್ಷದಾಯಕ ಪ್ರಭಾವವಿಲ್ಲವಾದುದರಿಂದ, ಅವರುಗಳ ಪಾದವಲ್ಲದೆ, ಮೋಕ್ಷದಾಯಕನಾಗಿ ಮುಕುಂದನಾದ ನಿನ್ನ ಪಾದಕಮಲವನ್ನು ಕುರಿತು, ಇಲ್ಲಿ ಶುಭಾಶ್ರಯವೆಲ್ಲಾ ಇರುವಾಗ ಅಂಘ್ರಿಯನ್ನು ಮುಖ್ಯವಾಗಿ ಹೇಳಿದುದರಭಿಪ್ರಾಯವು, ಸರ್ವಶರಣ್ಯನ ಪಾದಗ್ರಹಣದಲ್ಲಿ ಅದು "ಮಕರಂದ ನಿರ್ಭರ"ವಾದುದರಿಂದ ನೈರರ್ಥಕ್ಯದ ಮಾತೇ ಇಲ್ಲವೆಂಬುದು ಸೂಚಿತವು; "ಸಭ್ರಾತುಶ್ಚರಣೌಗಾಢಂ ನಿಪೀಡ್ಯ ರಘುನಂದನಃ" (ರಾ. ಅಯೋ. ೩೧.೨) ಎಂಬಲ್ಲಿ ವಿಫಲತ್ವವಿಲ್ಲವೆಂಬುದು ವ್ಯಕ್ತವು, ಕದಾಪಿ - ಯಾವಾಗಲೇಯಾಗಲಿ ಇದರಿಂದ ದೇಶ ಕಾಲಾವಸ್ಥಾ ನಿಯಮಗಳು ಯಾವುವೂ ಬೇಕಿಲ್ಲವೆಂಬ ಭಾವವು; ಯಜ್ಞಯಾಗಾದಿಗಳಿಗೆ ದೇಶಕಾಲಾವಸ್ಥಾದಿ ನಿಯಮಗಳುಂಟು, ಅಂಜಲಿ ಮಾಡುವ ದಕ್ಕೆ ಮುಹೂರ್ತ ವಿಡಕೆಲಸವಿಲ್ಲವು, ಕೇನಚಿತ್ - ಯಾರಿಂದಲೇಯಾಗಲಿ, ಬ್ರಾಹ್ಮಣಾದಿಗಳೇ ಅಂಜಲಿ ಮಾಡಬೇಕು, "ಶೂದ್ರಶ್ವಪಾಕರು"ಮಾಡಕೂಡದೆಂಬ ನಿಯಮವೇನೂ ಇಲ್ಲವು, ಸರ್ವಲೋಕ ಶರಣ್ಯನಿಗೆ ಅಂಜಲಿ ಬಂಧನ ಮಾಡಲು ಎಲ್ಲರಿಗೂ ಸಾಧ್ಯವು, ಯಥಾತಥಾವಾಪಿ - ಹೇಗೆಯಾಗಲಿ, ಇದರಿಂದ ಚನ್ನಾಗಿ ಅಂಜಲಿಮಾಡುವದೂ ಕೂಡ ತಿಳಿಯದೇ ಎರಡೂ ಕೈಗಳನ್ನೂ ಸುಮ್ಮನೆ ಜೋಡಿಸಿದರೂ ಸರಿಯೇ; ಪ್ರಣಾಮಾದಿಗಳಿಗಾದರೋ ಸ್ವಲ್ಪನಿಯಮಾದಿಗಳುಂಟು, ಸಾಷ್ಟಾಂಗವಾಗಿರಬೇಕು, ಒಂದು ಕೈಯಿಂದ ಪ್ರಣಾಮ ಮಾಡಕೂಡದು ಇತ್ಯಾದಿ ನಿಯಮಗಳುಂಟು; ಅಂಜಲಿಗೆ ಅಂತಹ ನಿಯಮಗಳು ಯಾವುದೂ ಇಲ್ಲದುದರಿಂದ "ಯಥಾತಥಾವಾಪಿ" ಎಂದು ಪ್ರಯೋಗವು; ಸಕೃತ್ಕೃತೋಂಜಲಿಃ - ಒಂದು ಸಲ ಮಾಡಿದ ಅಂಜಲಿಯು, ಈ ಅಂಜಲಿಯನ್ನು "ವಸಂತೇ ವಸಂತೇ ಜ್ಯೋತಿಷಾ ಯಜೇತ" ಪ್ರತಿ ವಸಂತ ಋತುವಿನಲ್ಲೂ ಮಾಡಬೇಕಾಗಿ ವಿಧಿಸಿರುವ ಹದೇಪದೇ ಕರ್ತವ್ಯತೆಯ ಆವಶ್ಯಕತೆ ಯಿಲ್ಲದೆ, ಒಂದು ಸಲ ಮಾಡಿದರೆ ಸಾಕು, ಫಲಸಿದ್ಧಿಯನ್ನುಂಟುಮಾಡುವ ಪ್ರಭಾವ ಉಳ್ಳದೆಂಬ ಭಾವವು, ಸರ್ವೇಶ್ವರನ ಕೃಪಾಪ್ರಾಪ್ತಿಗೆ ಸಕೃತ್ಕೃತವಾದರೇನೋ ಸಾಕು, ಒಂದು ಸಲ ಅಂಜಲಿ ಮಾಡಿರುತ್ತೇನೆ, ಮುಂದಕ್ಕೆ ಏಕೆ ಎಂಬ ಔದಾಸೀನ್ಯವು ಸರಿಯಲ್ಲವು; ಈ ಅಧಿಕಾರಿಯ ಮನದ ತೃಪ್ತ್ಯರ್ಥವಾಗಿ ಆವೃತ್ತಿಯೂ ಆವಶ್ಯಕವು; ಹೀಗೆ ಅಭಿಪ್ರಾಯವಲ್ಲದಿದ್ದರೆ, ಒಬ್ಬ ಮಹನೀಯನನ್ನು ಒಂದು ಸಲ ನೋಡಿದುದರಿಂದಲೇ ಫಲಸಿದ್ಧಿಯುಂಟಾದರೆ ಮುಂದಕ್ಕೆ ಆತನನ್ನು ಕೃತಜ್ಞತಾಭಾವದಿಂದ ನೋಡಬೇಕಾದ ಆವಶ್ಯಕತೆ ಯಿಲ್ಲವೆಂ

ದಾಗುತ್ತದೆ. ಇಂತಹ ಅಂಜಲಿಯು, ತದೈವ - ಆಗಲೇನೆ, ಉತ್ತರಜನ್ಮಾದಿ ಕಾಲವಿಳಂಬಗಳು ಬೇಕಿಲ್ಲದೆ, ಅಶುಭಾನಿ ಅಶೇಷತಃ ಮುಷ್ಣಾತಿ ಅಮಙ್ಗಳಗಳನ್ನು ನಿಶ್ಶೇಷವಾಗಿ ಅಪಹರಿಸುತ್ತದೆ. ಇಲ್ಲಿ ಅಂಜಲಿಯು ಅಶುಭಗಳನ್ನು ಅಪಹರಿಸುವ ಚೋರಕೃತ್ಯವನ್ನು ಮಾಡುತ್ತದೆಂದು ಹೇಳಿದುದರ ಅಭಿಪ್ರಾಯವೇನೆಂದರೆ, ಈ ಸಂಸಾರಿಯಾದ ಚೇತನನಿಗೆ ಯಾವುದು ಹಿತವೆಂದು ತಿಳಿಯದೆ, ಅಶುಭ ಫಲಗಳನ್ನುಂಟುಮಾಡುವ ಭೋಗಗಳನ್ನು ಬಹು ಹಿತವಾದುವೆಂದು ಭಾವಿಸಿ, ಅವುಗಳನ್ನು ಅನುಭವಿಸುತ್ತಿರುವನು. ಅಂಜಲಿಯಿಂದ ಪ್ರಸನ್ನನಾದ ದೇವನು ಬಲಾತ್ಕಾರದಿಂದ ಅಂತಹ ಅಮಙ್ಗಳಗಳನ್ನೆಲ್ಲಾ ಅಪಹರಿಸಿ ಬಿಡುವನೆಂಬ ಭಾವವು. ಹಿತವಲ್ಲದನ್ನು ತಿನ್ನುತ್ತಿರುವ ಮಗುವಿನಿಂದ ತಾಯಿಯು ಹೇಗೆ ಮಗುವು ತಿಳಿಯದಹಾಗೆ ಅದನ್ನು ಅಪಹರಿಸಿ ಬಿಡುವಳೋ ಹಾಗೆ ಎಂಬ ತಾತ್ಪರ್ಯವು, ("ಮುಷಸ್ತೇಯೇ") ; ಶುಭಾನಿ ಮಙ್ಗಳಗಳನ್ನು, ಪುಷ್ಣಾತಿ- ಪುಷ್ಟೀಕರಿಸುತ್ತದೆ, ಕದಾಪಿ - ಯಾವಾಗಲೇಯಾಗಲಿ, ಮುಂದಕ್ಕೆಲ್ಲಾ ಕಾಲದಲ್ಲೂ, ನಜಾತುಹೀಯತೇ - ವ್ಯರ್ಥವಾದುದು ಆಗುವದೇ ಇಲ್ಲವು. ಅಂಜಲಿಯು ಅನಿಷ್ಟ ನಿವೃತ್ತಿಯನ್ನೂ ಇಷ್ಟಪ್ರಾಪ್ತಿಯನ್ನೂ ಸಹ ಉಂಟುಮಾಡುತ್ತದೆ; ಆದುದರಿಂದ "ಅಂಜಲಿಃ ಪರಮಾಮುದ್ರಾ ಕ್ಷಿಪ್ರಂದೇವ ಪ್ರಸಾದಿನೀ" ಎಂದು ಹೇಳಲ್ಪಟ್ಟಿರುತ್ತದೆ. ಶ್ರೀಮದ್ರಾಮಾಯಣ ಕಿಷ್ಕಿಂಧಾಕಾಂಡದಲ್ಲಿ ಸೀತಾನ್ವೇಷಣದಲ್ಲಿ ಸಹಾಯ ಮಾಡುತ್ತೇನೆಂದು ವಾಗ್ದಾನಮಾಡಿ ಮರೆತು ಕೃತಾಪರಾಧನಾದ ಸುಗ್ರೀವನಿಗೆ ಮಹಾ ಪ್ರಾಜ್ಞನಾದ ಆಂಜನೇಯನು ಉಪದೇಶಿಸುತ್ತಾನೇನೆಂದರೆ :—"ಕೃತಾಪರಾಧಸ್ಯ ಹಿ ತೇ ನಾನ್ಯತ್ಪಶ್ಯಾಮ್ಯಹಂ ಕ್ಷಮಂ । ಅಂತರೇಣಾಂಜಲಿಂಬಧ್ವಾ ಲಕ್ಷ್ಮಣಸ್ಯ ಪ್ರಸಾದನಾತ್"॥ ಈಗ ಮಹಾ ಕೋಪದಿಂದ ಬಂದಿರುವ ಲಕ್ಷ್ಮಣನಲ್ಲಿ ಮಹಾಪರಾಧವನ್ನು ಮಾಡಿದ ನಿನಗೆ, ಅಂಜಲಿಯನ್ನು ಮಾಡಿ ಆತನ ಪ್ರಸನ್ನತೆಯನ್ನು ಪ್ರಾರ್ಥಿಸುವವಕ್ಕಿಂತ ಉಚಿತನಾದ ಉಪಾಯವನ್ನು ನಾನು ಕಾಣೆನು." ಎಂದು ಅಂಜಲಿಯ ಪ್ರಭಾವವನ್ನು ವ್ಯಕ್ತಪಡಿಸಿರುತ್ತಾರೆ. ಸರ್ವೇಶ್ವರನ ಪ್ರಸನ್ನತೆಗಾಗಿ ಸಂಮಾರ್ಜನ, ಮಾಲಾಕರಣ, ದೀಪಾರೋಪಣ, ಅಭಿಷೇಕ, ಉತ್ಸವ, ಕೈಂಕರ್ಯಾದಿಗಳು ಹೇಳಲ್ಪಟ್ಟವೆ. ಇವುಗಳಲ್ಲೆಲ್ಲಾ ಕಷ್ಟತರವಾದ ದೇಹಶ್ರಮ, ವಿತ್ತ ಸಹಾಯ ಮೊದಲಾದವುಗಳು ಬೇಕು; ಅಂಜಲಿಯಾದರೋ ಹಾಗಲ್ಲದೆ ತುಂಬಾ ಸುಕರವಾಗಿ ದೇವದೇವನ ಕ್ಷಿಪ್ರ ಪ್ರಸನ್ನತೆಯನ್ನು ಸಂಪಾದಿಸಿಕೊಡುವ ಸ್ವಭಾವವುಳ್ಳದು ಎಂಬ ತಾತ್ಪರ್ಯವು. ಈ ಅಂಜಲಿಯು ಈ ಮುಮುಕ್ಷುವಿಗೆ ಮೋಕ್ಷಪ್ರಾಪ್ತಿಯನ್ನೂ ಉಂಟುಮಾಡುತ್ತದೆಂದು ಹೇಳಿದರೆ, ಮೋಕ್ಷಕ್ಕೆ ಸಾಧನ

ಗಳು ನ್ಯಾಸವೂ ಉಪಾಸನೆಯೂ ಇವೆರಡೇ ಎಂಬ ಹೇಳಿಕೆಗೆ ವಿರುದ್ಧವಾಗುವದಿಲ್ಲವೇ ಎಂದರೆ ಈ ಕೇವಲ ಅಂಜಲಿಯೇ ಸಾಕ್ಷಾತ್ತಾಗಿ ಸಾಧನವಾಗುವದಿಲ್ಲವು. ಈ ಸಾಧನಗಳಲ್ಲಿ ಯಾವುದಾದರೂ ಒಂದನ್ನುಂಟುಮಾಡಲು ಸಹಕಾರಿಯೆಂದು ಭಾವಿಸತಕ್ಕದ್ದು. ಇದು ಅಶುಭಗಳಾದ ಪಾಪಗಳ ನಿವೃತ್ತಿಗೂ, ಸತ್ತ್ವೋನ್ಮೇಷಕ್ಕೂ ಜ್ಞಾನ ಭಕ್ತಿ ವೈರಾಗ್ಯಗಳನ್ನುಂಟುಮಾಡುವದಕ್ಕೂ, ಹೀಗೆ ಮೋಕ್ಷಪ್ರಾಪ್ತಿಗೆ ಸಹಾಯಕರವಾದುದು; ಅಥವಾ ಗುರೂಪಸದನ ಭರನ್ಯಾಸಾದಿಗಳಿಗೂ ಸಹಾಯಕರವಾಗಬಹುದೆಂಬ ತಾತ್ಪರ್ಯವು. ಆದರೆ "**ಧ್ಯಾಯನ್ ಕೃತೇಯಜನ್ ಯಜ್ಞೈಸ್ತ್ರೇತಾಯಾಂ ದ್ವಾಪರೇಽರ್ಚಯನ್ । ಯದಾಪ್ನೋತಿ ತದಾಪ್ನೋತಿ ಕಲೌ ಸಂಕೀರ್ತ್ಯ ಕೇಶವಂ**" ಕೃತಯುಗದಲ್ಲಿ ಉಪಾಸನೆಯಿಂದಲೂ, ತ್ರೇತಾಯುಗದಲ್ಲಿ ಯಜ್ಞಾನುಷ್ಠಾನಗಳಿಂದಲೂ, ದ್ವಾಪರದಲ್ಲಿ ಅರ್ಚಿಸುವದರಿಂದಲೂ ಯಾವ ಫಲಗಳನ್ನು ಸಾಧಿಸಬಹುದೋ, ಆ ಫಲಗಳನ್ನೇ ಕಲಿಯುಗದಲ್ಲಿ ಕೇಶವನ ಸ್ತೋತ್ರಮಾತ್ರದಿಂದಲೇ ಹೊಂದಬಹುದೆಂದು ಹೇಳಿದೆಯಲ್ಲಾ, ಹಾಗೆ ಅಂಜಲಿಯೂ ಕೂಡ ಮೋಕ್ಷಪರ್ಯಂತ ಸರ್ವಾರ್ಥದಾಯಕವೆಂದು ನಂಬಲು ಅಡ್ಡಿ ಏನು ಎಂದರೆ, ಇಲ್ಲಿಯೂ ಕೂಡ ಕೇವಲ ಕೇಶವ ಸಂಕೀರ್ತನೆಯೇ ಮೋಕ್ಷದಾಯಕವೆಂಬರ್ಥವಲ್ಲವು; ಆ ಕೇಶವ ಸಂಕೀರ್ತನೆಯೇ ಸಾಕ್ಷಾತ್ತಾದ ಮೋಕ್ಷೋಪಾಯಕ್ಕೆ ನಿಷ್ಪಾದಕವೆಂದು ತಿಳಿಯತಕ್ಕದ್ದು. ಆದುದರಿಂದ ಈ ಅಂಜಲಿಯು ಪ್ರಯೋಜನಾಂತರಪರರಿಗೆ ಅದನ್ನು ಸಾಧಿಸುವ ಉಪಾಯ ನಿಷ್ಪತ್ತಿಗೂ, ಅನನ್ಯಪ್ರಯೋಜನರಿಗೆ ಮೋಕ್ಷವನ್ನು ಸಾಧಿಸುವ ಉಪಾಯ ನಿಷ್ಪತ್ತಿಗೂ, ಸಾಕ್ಷಾತ್ತಾಗಿ ಹೇತುವೆಂಬ ಭಾವವು ಅಂಜಲಿ ಮಾಡಿದವನಿಗೆ "**ನೇಹಾಭಿಕ್ರಮ ನಾಶೋಽಸ್ತಿ**" ಎಂಬಲ್ಲಿ ಹೇಳಿರುವಹಾಗೆ ಎಂದಾದರೂ ಒಂದು ದಿನ ಮೋಕ್ಷಪ್ರಾಪ್ತಿಯುಂಟು ಎಂಬುದು ಚರಿತಾರ್ಥವು. ಆದರೆ ಅದು ಭರನ್ಯಾಸದೊಂದಿಗೆ ಸೇರಿದ್ದರೆ ಮೋಕ್ಷಪ್ರದವು.

(೨) **ಉದೀರ್ಣ ಸಂಸಾರದವಾಶುಶುಕ್ಷಣಿಂ ಕ್ಷಣೇನ ನಿರ್ವಾಪ್ಯ ಪರಾಂಚ ನಿರ್ವೃತಿಮ್ । ಪ್ರಯಚ್ಛತಿ ತ್ವಚ್ಚರಣಾರುಣಾಂಬುಜ ದ್ವಯಾನುರಾಗಾಮೃತಸಿಂಧು ಶೀಕರಃ ॥೨೯॥** ಈ ಶ್ಲೋಕದ ಮೂಲಕ ಮೇಲೆ ಹೇಳಿದ ರೀತಿಯಲ್ಲಿ ಅಂಜಲಿ ಮಾಡಲು ಕೂಡ ಅಶಕ್ತರಾಗಿರುವವರು "**ವಿಷಯೇ ತೇ ಮಹಾರಾಜ ರಾಮವ್ಯಸನ ಕರ್ಶಿತಾಃ । ಅಪಿ ವೃಕ್ಷಾಃ ಪರಿಮ್ಲಾನಾಃ ಸಪುಷ್ಪಾಂಕುರ ಕೋರಕಾಃ**" ॥ ಎಂದರೆ "ಓ ದಶರಥನೇ ನಿನ್ನ ದೇಶದಲ್ಲಿ ಶ್ರೀರಾಮನು ವನಕ್ಕೆ ತೆರಳಿದ ದುಃಖದಿಂದ, ಮನುಷ್ಯರು ಮಾತ್ರವೇ ಕ್ಲೇಶಪಡುತ್ತಿದ್ದಾರೆಂದು ಭಾವಿಸಬೇಡ, ಪುಷ್ಪ, ಚಿಗುರು, ಮೊಗ್ಗುಗಳಿಂದ ಪೂರ್ಣಗಳಾಗಿದ್ದ

ಮರಗಳೂ ಕೂಡ ಬಾಡಿಹೋದವು. ಎಂಬ ಈ ಮಂತ್ರವಾಕ್ಯದಲ್ಲಿ ಹೇಳಿರುವ ಹಾಗೆ, ಅನುರಾಗ ಲೇಶಮಾತ್ರದಿಂದಲೂ ಕೂಡ ಶ್ರೇಷ್ಠಸುಖವಾದ ಮೋಕ್ಷವನ್ನೂ ಸಹ ಪ್ರಾಪ್ತಕಾಲದಲ್ಲಿ ಹೊಂದಬಹುದೆಂದು ಹೇಳುತ್ತಾರೆ, ಇಲ್ಲಿಯೂ ಅನಿಷ್ಟ ನಿವೃತ್ತಿಯೂ, ಇಷ್ಟಪ್ರಾಪ್ತಿಯೂ ಹೇಳಲ್ಪಟ್ಟಿವೆ. "ತ್ವಚ್ಚರಣಾ.......ಶೀಕರಃ" **ತ್ವತ್** - ಸ್ವಯಂ ಆನಂದ ಸಾಗರನಾಗಿ ಆನಂದವನ್ನುಂಟುಮಾಡುವ ಕೃಪಾಕರನಾದ ನಿನ್ನ, **ಚರಣಾರುಣಾಂಬುಜದ್ವಯ** - ಕೆಂಪಗಿರುವ ಚರಣಾರವಿಂದ ಯುಗ್ಮದಲ್ಲಿ, **ಅನುರಾಗ** – ವಿಶೇಷ ಪ್ರೀತಿಯೆಂಬ, **ಅಮೃತಸಿಂಧು** - ಅಮೃತ ಸಮುದ್ರದ, **ಶೀಕರಃ** - ಒಂದು ಕಣವು, **ಉದೀರ್ಣ ಸಂಸಾರ ದವಾಶುಶುಕ್ಷಣಿಂ** - ಈ ಆತ್ಮನನ್ನು ನಾಶಮಾಡುವಹಾಗೆ ಜಾಜ್ವಲ್ಯಮಾನವಾದ ಸಂಸಾರವೆಂಬ ಕಾಡ್ಗಿಚ್ಚನ್ನು, **ಕ್ಷಣೇನ** – ಒಂದು ಕ್ಷಣದಲ್ಲಿ ಎಂದರೆ ಅಲ್ಪಕಾಲದಲ್ಲೇ, ಕಾಡ್ಗಿಚ್ಚನ್ನು ಆರಿಸುವದು ಸಾಧ್ಯವಲ್ಲವು, ನಾಲ್ಕು ಕಡೆಯಲ್ಲೂ ಜ್ವಲಿಸುತ್ತಾ ಬರುವವರಿಂದ ಶಮನಮಾಡುವದು ಕಷ್ಟವು; ಸ್ವಾಮಿಯ ಚರಣಾರವಿಂದದಲ್ಲಿ ಮಾಡಿದ ಪ್ರೇಮವೆಂಬ ಅಮೃತದ ಒಂದು ತುಂತುರು ಬಹು ಶೀಘ್ರದಲ್ಲೇ **"ಸಂಸಾರ ತಾಪತಾಪಿತರಿಗೆ"** ಶಮನವನ್ನುಂಟುಮಾಡುತ್ತದೆಂಬ ಭಾವವು, **ನಿರ್ವಾಪ್ಯ** – ಆರಿಸಿ, ತಾಪತ್ರಯ ಯುಕ್ತವಾದುದು ಈ ಸಂಸಾರವು; ಆದುದರಿಂದ ಮೋಕ್ಷಾರ್ಥಿಗಳಿಗೆ ಈ ತಾಪವು ಕಾಡ್ಗಿಚ್ಚಿನ ತಾಪಕ್ಕೆ ಸಮಾನವಾದುದಾಗಿ ಅನೇಕಸ್ಥಳದಲ್ಲಿ ಅದಕ್ಕೆ ಹೋಲಿಸುತ್ತಾರೆ, **ಪರಾಂನಿರ್ವೃತಿಂಚ**-ಸರ್ವಶ್ರೇಷ್ಠ ಸುಖವಾದ ಮೋಕ್ಷವನ್ನೂ ಸಹ, **ಪ್ರಯುಙ್ಕ್ತೇ**-ಉಪಾಯ ನಿವೃತ್ತಿಯ ಮೂಲಕ **ಕೊಡುತ್ತದೆ.** ಈ ಪ್ರೀತಿಯು ಉಪಾಯಾನುಷ್ಠಾನಕ್ಕೆ ಸಹಾಯವಾಗಿ ಉಪಾಯ ನಿವೃತ್ತಿಯ ಮೂಲಕ ಮೋಕ್ಷರೂಪವಾದ ಪರಿಪೂರ್ಣ ಬ್ರಹ್ಮಾನುಭವ, ನಿತ್ಯ ಕೈಙ್ಕರ್ಯಗಳ ಪ್ರಾಪ್ತಿಯನ್ನುಂಟುಮಾಡುತ್ತದೆಂಬಭಾವವು

(೪) ಮೊಯ್ತ್ತವಲ್ವಿನೈಯುಳ್ ನಿನ್ರು ಮೂನ್ರೆಳುತ್ತುಡೈಯ ಪೇರಾಲ್।
ಕತ್ತಿರಬಂಧು ಮನ್ರೇ ಪರಾಙ್ಗದಿ ಕಣ್ಡು ಕೊಣ್ಡಾನ್ ।
ಇತ್ತನೈ ಯಡಿಯರಾನಾರ್ಕ್ಕಿರುಙ್ಗುಮ್ ನಮ್ಮರಙ್ಗನಾಯ ।
ಪಿತ್ತನೈ ಪೆಱ್ಱುಮನ್ದೋ ಪಿರವಿಯುಳ್ ಪಿಣಙ್ಗುಮಾರೇ ॥೪॥

ಮೊಯ್ತ್ತ-ಜೇನು ಗೂಡಿನಲ್ಲಿ ಹುಳುಗಳು ಮುತ್ತಿರುವಹಾಗೆ ಮುತ್ತಿಕೊಂಡಿರುವ, **ವಲ್**-ಕಾಲತತ್ತ್ವವಿರುವವರೆಗೂ ಅನುಭವಿಸಿದರೂ ತೀರದಷ್ಟು ಬಲಿಷ್ಠವಾದ, **ವಿನೈಯುಳ್ ನಿನ್ರು**-ಪಾಪರೂಪವಾದ ಸಮುದ್ರದೊಳಗೆ ನಿಂತು, **ಮೂನ್ರೆಳುತ್ತುಡೈಯಪೇರಾಲ್**-ಮೂರು ಅಕ್ಷರಗಳುಳ್ಳ ಗೋವಿಂದಾ ಎಂಬ ದಿವ್ಯನಾಮದಿಂದ, **ಕತ್ತಿರಬಂಧುಮ್** ಅನ್ರೇ-"ಬ್ರಹ್ಮಬಂಧು" ಶಬ್ದವು ನೀಚ ಬ್ರಾಹ್ಮಣನನ್ನು ಹೇಗೆ

(೪) "ಮೊಯ್‌ತ್ತ ವಲ್ಪಿನೈಯುಳ್ ನಿನ್ರು" ಇತ್ಯಾದಿಗಳಿಲುಮ್ ಅಭಿಪ್ರೇತಮಾನ ಪಡಿಯೇ ಇವರ್ಗ ಫಲಸಿದ್ಧಿಕ್ಕು ಕೋಲಿನ ಕಾಲತ್ತುಕ್ಕುಳ್ಳೇ ಉಪಾಯ ಪೂರ್ತಿಯೈ ಯುಣ್ಡಾಕ್ಕಿ ರಕ್ಷಿಕ್ಕು ಮೆನ್ನುವಿಡತ್ತೈ

ಹೇಳುತ್ತದೋ ಹಾಗೆ ತುಂಬಾ ನೀಚಕೃತ್ಯಗಳನ್ನು ಮಾಡುತ್ತಿದ್ದುದರಿಂದ ನೀಚಕ್ಷತ್ರಿಯನಾದ ಕ್ಷತ್ರಬಂಧು ನಲ್ಲವೇ, ಪರಾಂಗತಿಂ-ಸರ್ವೋತ್ಕೃಷ್ಟಗತಿಯಾದ ಪರಮಪದವನ್ನು, ಕಣ್ಡು ಕೊಣ್ಡಾರ್-ನೋಡಿಕೊಂಡನು, ಎಂದರೆ ಹೊಂದಿ ಅನುಭವಿಸಿದನು; ಇತ್ತನೈ ಯುಡಿಯಾರಾನಾರ್ಕ್ಕು – ಮನಸ್ಸಿನಿಂದ ಚಿನ್ತಿಸಿ ಉಪಾಸನಾದಿಗಳನ್ನು ಮಾಡದೆ ಬರೀ ಗೋವಿಂದಾ ಎಂದು ಇಷ್ಟುಮಾತ್ರ ನಾಮೋಚ್ಚಾರಣೆ ಮಾಡುವ ದಾಸಭೂತರಿಗೆ, ಇರಙ್ಗುಮ್ - ಕೃಪೆಮಾಡಿ ಅನುಗ್ರಹಿಸುವ, ನಮ್ ಅರಙ್ಗರ್ ಆಯ - ನಮಗೆ ಸ್ವಾಮಿಯಾಗಿ ಮಹೋಪಕಾರಗಳನ್ನು ಮಾಡಬೇಕೆಂದು ಸಿದ್ಧವಾಗಿರುವ ಶ್ರೀರಂಗನಾಥನಾಗಿರುವ, ಪಿತ್ತನೈ - ಸೌಶೀಲ್ಯ ಗುಣಯುಕ್ತನಾದ ಭಗವಂತನನ್ನು, ಪೆಱ್ಱುಮ್ - ಆತನನ್ನು ಆಶ್ರಯಿಸಿ, ಇಲ್ಲೂ ಪರಮ ಪದದಲ್ಲೂ ಸಹ ಅನುಭವಿಸುವ ಅವಕಾಶವಿದ್ದರೂ, ಪಿರಿವಿಯುಳ್ – ಪುನಃಪುನಃ ಜನ್ಮಗಳಿಗೆ ಸಿಲುಕಿ, ಪಿಣಙ್ಗುಮ್ ಆರ್ - ನರಳುವ ವಿಧಾನವೇ, ಅನ್ತೋ - ಅಯ್ಯೋ ದುರ್ಗತಿಯೇ ಎಂಬ ಭಾವವು. ಈ ಶ್ಲೋಕದಲ್ಲಿ ಮಹಾಪಾಪಿಷ್ಠನಾದ ಕ್ಷತ್ರಬಂಧುವೂ ಕೂಡ ಗೋವಿಂದನಾಮ ಸಂಕೀರ್ತನದಿಂದ ಮುಕ್ತಿಯನ್ನು ಹೊಂದಿದನೆಂದು ಹೇಳಲ್ಪಟ್ಟಿರುತ್ತದೆ. ಕ್ಷತ್ರಬಂಧುವಿನ ವೃತ್ತಾಂತಕ್ಕೆ ಇದೇ ಗ್ರಂಥದ ಗುರುಪರಂಪರಾಸಾರದ ೫೦ ನೆಯ ಪುಟವನ್ನು ನೋಡಿ. ಈತನಿಗೆ ಸದ್ಗುರು ಪ್ರಾಪ್ತಿಯು ಶ್ರೀ ನಾರದರ ರೂಪದಲ್ಲಿ ಲಭಿಸಿ, ಮೂಲಮಂತ್ರ ಮೊದಲಾದ ಉಪದೇಶಗಳ ಮೂಲಕ ದೊರೆತು, ಮೋಕ್ಷಪ್ರಾಪ್ತಿಯುಂಟಾಯಿತೆಂಬ ವೃತ್ತಾಂತವಿರುವುದರಿಂದ ಭರನ್ಯಾಸರೂಪೋಪಾಯಾನುಷ್ಠಾನ ಮೂಲಕವೇ ಲಭಿಸಿರಬಹುದೆಂದು ನಂಬತಕ್ಕದ್ದಾಗಿರುತ್ತದೆ. ಇತ್ಯಾದಿಗಳಿಲುಮ್ - ಇವೇ ಮೊದಲಾದ ಪ್ರಮಾಣಗಳಲ್ಲೂ, ಅಭಿಪ್ರೇತ ಮಾನಪಡಿಯೇ - ತೋರಿ ಬರುವಹಾಗೆ, ಇವರ್ಗ - ಈ ಮಂದ ವಿಶ್ವಾಸಯುಕ್ತನಾಗಿ ಭರನ್ಯಾಸವನ್ನನುಷ್ಠಿಸಿದವನು, ಕೋಲಿನ ಕಾಲತ್ತುಕ್ಕುಳ್ಳೇ – ಪ್ರಾರ್ಥಿಸಿದ ಕಾಲದೊಳಗೇ, ಉಪಾಯ ಪೂರ್ತಿಯುಣ್ಡಾಕ್ಕಿ - ಮಹಾ ವಿಶ್ವಾಸದೊಂದಿಗೆ, ಉಪಾಯ ಪೂರ್ತಿಯುಂಟಾಗುವಹಾಗೆ ಮಾಡಿ, ರಕ್ಷಿಕ್ಕುಮ್ - ರಕ್ಷಿಸುವದು. ಇದಕ್ಕೆ ಕರ್ತೃಪದವು ಅಪೂರ್ಣ ಶರಣಾಗತಿಯು ಎಂದು ತಾತ್ಪರ್ಯಮೂಲಕ

(೪) ತಿರುಮಾಲೈ.

ನಿನ್ನೈತ್ತು (೫)"ವೃಥೈವ ಭವತೋ ಯಾತಾ ಭೂಯಸೀ ಜನ್ಮ ಸಂತತಿಃ। ತಸ್ಯಾಮನ್ಯತಮಂ ಜನ್ಮ ಸಂಚಿಂತ್ಯ ಶರಣಂ ವ್ರಜ" ಎನ್ರು ದೇವಲನೈ ಕುರಿತ್ತು ಶ್ರೀ ಶಾಣ್ಡಿಲ್ಯ ಭಗವಾನರುಳಿಚೆಯ್‌ದಾನಿರೆ (೬) "ಶರಣ್ಯಂ ಶರಣಂಚ ತ್ವಾ ಮಾಹುರ್ದಿವ್ಯಾ ಮಹರ್ಷಯಃ" । ಎನ್ರುದು

ಇಟ್ಟುಕೊಳ್ಳಬೇಕಾಗುತ್ತದೆ, ಹೀಗೆ ರಕ್ಷಿಸುತ್ತದೆ, ಎನ್ರುಮಿಡತ್ತೈನಿನ್ನೈತ್ತು - ಎಂಬ ಸಂದರ್ಭವನ್ನೇ ಪರ್ಯಾಲೋಚಿಸಿ, "ಭವತಃ-ನಿನಗೆ, ಭೂಯಸೀ ಜನ್ಮ ಸಂತತಿಃ - ಬಹುವಾದ ಜನ್ಮ ಪರಂಪರೆಯು, ವೃಥೈವ - ನಿನಗೆ ವಿಶ್ವಾಸವು ಮಂದವಾದುದರಿಂದಲಾಗಲಿ, ಇಲ್ಲದುದರಿಂದಲಾಗಲಿ ವ್ಯರ್ಥವಾಗಿಯೇ, ಯಾತಾ- ಕಳೆದು ಹೋಯಿತು, ತಸ್ಯಾಂ - ಆ ಜನ್ಮಸಂತತಿಯಲ್ಲಿ, ಅನ್ಯತಮಂ ಜನ್ಮ - ಈ ಒಂದು ಜನ್ಮವೆಂದು, ಸಂಚಿಂತ್ಯ - ಆಲೋಚಿಸಿ, ಶರಣಂವ್ರಜ - ಶರಣಾ ಗತಿಯನ್ನು ಹೊಂದು ಎಂದರೆ ಅನುಷ್ಠಿಸು,'' ಎನ್ರು - ಎಂದು, ದೇವಲನೈಕು ರಿತ್ತು - ದೇವಲನನ್ನು ಕುರಿತು, ಶ್ರೀ ಶಾಂಡಿಲ್ಯ ಭಗವಾನ್, ಅರುಳಿಚ್ಚೆಯ್ ದಾನಿರೆ - ಕೃಪಯಾ ಉಪದೇಶಿಸಿದರಷ್ಟೇ. ಹಿಂದೆ ಅನೇಕ ಜನ್ಮಸಂತತಿಕಳೆ ದರೂ ನೀನು ಶರಣಾಗತಿಯನ್ನನುಷ್ಠಿಸದೇ ಇದ್ದುದರಿಂದ ವ್ಯರ್ಥವಾದವು. ಈಗ ಲಾದರೂ ಆ ವ್ಯರ್ಥವಾದ ಜನ್ಮಗಳಲ್ಲಿ ಇದೂ ಒಂದೂ ವ್ಯರ್ಥವೆಂದಾದರೂ ಮಹಾ ವಿಶ್ವಾಸವಿರಲಿ, ಇಲ್ಲವಿರಲಿ ನೀನು ಶರಣಾಗತಿ ಮಾಡು ಹಾಗೆ ಮಾಡುವುದರಿಂದ, ಮುಂದಕ್ಕೆ ಮಹಾ ವಿಶ್ವಾಸಮೂಲಕ ಶರಣಾಗತಿಯನ್ನು ಮಾಡಿ ಕೊನೆಗೆ ಫಲ ವನ್ನು ಹೊಂದುವಿ ಎಂಬ ತಾತ್ಪರ್ಯವು. ಆದರೆ ಮಹಾ ವಿಶ್ವಾಸವುಂಟಾಗು ವದು ಬಹಳ ದುಷ್ಕರವು, ಮಹರ್ಷಿಗಳಿಗೆ ಒಂದುವೇಳೆ ಉಂಟಾಗಬಹುದು. ಹೀಗಿ ರುವಾಗ ಪ್ರಪತ್ತಿಗೆ ಅಙ್ಗವೆಂಬುದು ಹೇಗೆ ? ಎಂದರೆ "ಶರಣ್ಯಂ" ಎಂದಾರಂಭಿಸಿ ಸಮಾಧಾನ ಹೇಳಿ, ಪ್ರಪತ್ತಿಗೆ ಮಹಾ ವಿಶ್ವಾಸವು ಒಂದು ಅಙ್ಗವಾಗುವದರಲ್ಲಿ ನಿಸ್ಸಂದೇಹವೆಂದು ಈ ಮಹಾ ವಿಶ್ವಾಸಾಙ್ಗ ವಿಷಯವನ್ನು ನಿಗಮನಮಾಡಿ ಹೇಳು ತ್ತಾರೆ:—(೬) ಶರಣ್ಯಂ - ಜ್ಞಾನಶಕ್ತಿ ದಯಾದಿ ಕಲ್ಯಾಣ ಗುಣಾಕರ ನಾಗಿ ಪ್ರಾಪ್ಯವೆಂದೂ, ಶರಣಂಚ - ಆಶ್ರಯಿಸಲು ಯೋಗ್ಯವಾದ ಗುಣಗಳಿಂ ಸಿದ್ಧೋಪಾಯನೆಂದೂ, ದಿವ್ಯಾ ಮಹರ್ಷಯಃ - ತತ್ತ್ವಹಿತ ಪುರುಷಾರ್ಥ ಗಳ ಜ್ಞಾನವುಳ್ಳ ಮಹರ್ಷಿಗಳು, ಶ್ರೀ ಪರಾಶರ ವ್ಯಾಸ ಶೌನಕ ವಾಲ್ಮೀಕ್ಯಾದಿ ಗಳು ಅಥವಾ ನಿತ್ಯ ಸೂರಿಗಳ ಅವತಾರವಾದ ಮಹರ್ಷಿಗಳು, ಆಹುಃ - ಹೇಳು

---

(೫) ಶಾಂಡಿಲ್ಯಸ್ಮೃತಿ. (೬) ರಾ. ಯುದ್ಧ. ೧೨೦. ೧೮.

ವುಮ್, ಮಹರ್ಷಿಗಳುಕ್ಕೇ ವಿಶ್ವಾಸಮ್ ಕೂಡುವದು, ಇವರ್‌ಗಳ್ ವಾಕ್ಯತ್ತೈ ಯಿಟ್ಟು ಮಂದ ವಿಶ್ವಾಸರೈ ತೆಳಿವಿಕ್ಕ ವೇಣು ಮೆನ್ರ ಪಡಿ. (ಇಪ್ಪಡಿ) ವಿಶ್ವಾಸತಾರತಮ್ಯ ಮುಣ್ಡಾಗೈಯಾಲೇ ಯಥಾಶಾಸ್ತ್ರಮ್ ಮಹಾ ವಿಶ್ವಾಸಮ್ ಪ್ರಪತ್ತ್ಯಙ್ಗಮಾಗ ಕ್ಕುರೈ ಯಿಲ್ಲೈ.

ತ್ತಾರೆ. ಇದು ಚತುರ್ಮುಖನು ಶ್ರೀರಾಮನನ್ನು ಕುರಿತು ಹೇಳುವ ವಾಕ್ಯವು" ಎನ್ರದುವುಮ್ - ಎಂಬಸ್ಮೃತಿಯು ಅಭಿಪ್ರಾಯವೇನೆಂದರೆ ತಿಳಿಸುತ್ತಾರೆ:— **ಮಹರ್ಷಿಗಳುಕ್ಕೇ ವಿಶ್ವಾಸಮ್ ಕೂಡುವದು** - ಮಹರ್ಷಿಗಳಿಗೇ ಮಹಾ ವಿಶ್ವಾಸವು ಸಲ್ಲುತ್ತದೆಂಬುವ ಹೇಳಿಕೆಯಭಿಪ್ರಾಯವು, **ಇವರ್‌ಗಳ್ ವಾಕ್ಯತ್ತೈ ಯಿಟ್ಟು** - ಇವರುಗಳ ವಾಕ್ಯವನ್ನು ಮುಂದುಮಾಡಿ, **ಮಂದ ವಿಶ್ವಾಸರೈ** - ವಿಶ್ವಾಸದಲ್ಲಿ ನ್ಯೂನತೆ ಯಿರುವವರಿಗೆ, **ತೆಳಿವಿಕ್ಕವೇಣುಮ್**-ಸರಿಯಾದ ಜ್ಞಾನ ವನ್ನುಂಟುಮಾಡತಕ್ಕದ್ದೆಂದು, **ಎನ್ರಪಡಿ** - ಎಂದು ಉಪದೇಶಿಸಿದಹಾಗೆಂದು ಭಾವಿಸತಕ್ಕದ್ದು, **ಶರಣ್ಯಂ ಶರಣಂಚ** - ಎಂದು ಭಾವಿಸಬೇಕಾದರೆ, ಆತನೇ ಉಪೇಯನೂ ಉಪಾಯವೂ, ಆತನಲ್ಲದೆ ನಮಗೆ ಬೇರೆ ಗತಿಯಿಲ್ಲವಾದುದರಿಂದ ಆತನೇ ಖಂಡಿತವಾಗಿಯೂ ರಕ್ಷಿಸುವವನೆಂಬ ಮಹಾ ವಿಶ್ವಾಸದಿಂದ ಮಹರ್ಷಿ ಗಳೇನೋ ಹೇಳಿರುತ್ತಾರೆ; ಈ ಹೇಳಿಕೆಯಿಂದ ಮಂದ ವಿಶ್ವಾಸರೂಕೂಡ ಮುಂದಕ್ಕೆ ಪೂರ್ಣವಿಶ್ವಾಸಯುಕ್ತರಾಗಿ ಉಪಾಯ ನಿಷ್ಪತ್ತಿಯುಳ್ಳವರಾಗುತ್ತಾ ರೆಂಬ ಭಾವವು. ಆದುದರಿಂದ **ವಿಶ್ವಾಸ ತಾರತಮ್ಯ ಮುಣ್ಡಾಗೈಯಾಲೇ**- ವಿಶ್ವಾಸ ತಾರತಮ್ಯ ಉಂಟೆಂಬುದು ಶಾಸ್ತ್ರಮುಖೇನ ತೋರಿಬರುವದರಿಂದ, **ಯಥಾಶಾಸ್ತ್ರಮ್** - ಈ ಪ್ರಪತ್ತಿ ಶಾಸ್ತ್ರದಲ್ಲಿ ಹೇಳಿರುವಹಾಗೆ, **ಮಹಾ ವಿಶ್ವಾಸವು, ಪ್ರಪತ್ತ್ಯಙ್ಗಮಾಗಕ್ಕುರೈಯಿಲ್ಲೈ**-ಪ್ರಪತ್ತಿಗೆ ಅಙ್ಗವಾಗುವದಕ್ಕೇನೂ ಅಭ್ಯಂತರ ಅಥವಾ ನ್ಯೂನತೆ ಯಿಲ್ಲವು, ಪೂರ್ವ ಪಕ್ಷಿಗಳ ಎರಡು ಶಙ್ಕಾಗಳಿಗೂ ಸಮಾಧಾನ ಹೇಳಿರುತ್ತಾರೆ. (೧) ವಿಶ್ವಾಸದಲ್ಲಿ ತಾರತಮ್ಯವೆಂದರೇನು? ಎಂದು ಕೇಳಿದ್ದರು. ಇದಕ್ಕೆ ತಾರತಮ್ಯ ಉಂಟೆಂದು ಸ್ಥಾಪಿಸಿದರು. (೨) ಮಹಾವಿಶ್ವಾ ಸವು ಪ್ರಪತ್ತಿಗೆ ಅಙ್ಗವಲ್ಲವೆಂದು ಪೂರ್ವಪಕ್ಷಮಾಡಿದ್ದರು; ಮಹಾ ವಿಶ್ವಾಸವು ಅಙ್ಗವೆಂದು ಈಗ ಸ್ಥಾಪಿಸಿದರು

ಮುಂದೆ ಭಕ್ತಿ ಪ್ರಪತ್ತಿಗಳಲ್ಲಿ ವಿಶ್ವಾಸವು ನಷ್ಟವಾಗಲು ಕಾರಣಗಳನ್ನು ತಿಳಿಸಿ, ಅವುಗಳಿಗೆ ಪರಿಹಾರವನ್ನು ಹೇಳುತ್ತಾರೆ.

ಹಿಂದೆ ಮಹಾ ವಿಶ್ವಾಸವು ಪ್ರಪತ್ತ್ಯಙ್ಗವಾಗಲಾರದೆಂಬ ವಾದವನ್ನು ನಿರಾ

ಅಥ ಭಕ್ತಿ ಪ್ರಪತ್ತ್ಯೋಃ ವಿಶ್ವಾಸ ಶೈಥಿಲ್ಯಹೇತೂನ್
ಅನೂದ್ಯ, ಪರಿಹರತಿ.

ಶಿಲರ್ಕ್ಕಿವತ್ತಿಲ್ ವಿಶ್ವಾಸಙ್ಕುಲೈಯುಮ್ ಪಡಿಯುಮ್, ಅದಕ್ಕು ಪರಿಹಾರಮುಮ್ ಶೊಲ್ಲುಗಿರೋಮ್.—ಭಕ್ತಿ ಪ್ರಪತ್ತಿಗಳ್ ಬುದ್ಧಿ ಭೇದತ್ತಾಲೆ ಐಶ್ವರ್ಯಮೋಕ್ಷಙ್ಗಳಾಗಿರ ವಿರುದ್ಧ ಫಲಙ್ಗಳೈ ಕೊಡುಕ್ಕಕ್ಕೂಡುಮೋ? ನಿರೈಕ್ಕರವನುಡೈಯ ಅಭಿಸಂಧಿ ಭೇದತ್ತಾಲೆ ಒರುವಿರೈ

ಕರಿಸಿ ಅದು ಪ್ರಪತ್ತಿಯ ಅಙ್ಗವೇ ಎಂದು ಸ್ಥಾಪಿಸಿದರು. ಪ್ರಾಸಙ್ಗಿಕವಾಗಿ, ಈ ಸಾಧ್ಯೋಪಾಯಗಳಾದ ಭಕ್ತಿ ಪ್ರಪತ್ತಿಗಳಲ್ಲಿ ವಿಶ್ವಾಸವು ಕಮ್ಮಿಯಾಗುವದಕ್ಕೆ ಹೇತುವಾಗಿ ಕೆಲವು ಶಙ್ಕೆಗಳುಂಟೆಂದು ಹೇಳಿ ಅವುಗಳಿಗೆ ಪರಿಹಾರವನ್ನು ಹೇಳುತ್ತಾರೆ. **ಶಿಲರ್ಕ್ಕು**-ಕೆಲವರಿಗೆ, **ಇವತ್ತಿಲ್**-ಈ ಸಾಧ್ಯೋಪಾಯಗಳಲ್ಲಿ, **ವಿಶ್ವಾಸವು ಕುಲೈಯುಮ್ ಪಡಿಯುಮ್**-ನಷ್ಟವಾಗುವ ಪ್ರಕಾರವನ್ನೂ, ಅದಕ್ಕೆ ಪರಿಹಾರವನ್ನೂ, **ಶೊಲ್ಲುಗಿರೋಮ್**-ಮುಂದೆ ಹೇಳುವೆವು. ಇದು **ಪ್ರತಿಜ್ಞಾವಾಕ್ಯವು.**

ಮೊದಲು ವಿಶ್ವಾಸ ಶೈಥಿಲ್ಯ ಉಂಟಾಗುವಹಾಗೆ ಮಾಡುವ ಪೂರ್ವಪಕ್ಷವನ್ನು ಅನುವಾದ ಮಾಡುತ್ತಾರೆ, **ಭಕ್ತಿಪ್ರಪತ್ತಿಗಳು, ಬುದ್ಧಿಭೇದತ್ತಾಲೆ** - ಸಙ್ಕಲ್ಪ ಅಥವಾ ಉದ್ದೇಶ್ಯದ ಭೇದದಿಂದ, **ಐಶ್ವರ್ಯ ಮೋಕ್ಷಙ್ಗಳಾಗಿರ** - ಅಧಿಕಾರಿಯು ಐಶ್ವರ್ಯವನ್ನಪೇಕ್ಷಿಸಿದರೆ ಅದನ್ನೂ, ಅಥವಾ ಮೋಕ್ಷವನ್ನಪೇಕ್ಷಿಸಿದರೆ ಅದನ್ನೂ, ಹೀಗೆ ಬೇರೆಬೇರೆಯಾದ, **ವಿರುದ್ಧಫಲಙ್ಗಳೈ** - ವ್ಯತ್ಯಸ್ತಗಳಾದ ಫಲಗಳನ್ನು, ಹೇಗೆ ವ್ಯತ್ಯಸ್ತವೆಂದರೆ ಐಶ್ವರ್ಯವೆಲ್ಲಾ ಅಲ್ಪಾಸ್ಥಿರ ಫಲಗಳುಳ್ಳವು. ಮೋಕ್ಷವಾದರೋ ನಿತ್ಯವಾಗಿ ನಿರತಿಶಯವಾಗಿ ಮಹತ್ತಾಗಿರುವದು, ಹೀಗೆ ಭಿನ್ನ ಫಲಗಳನ್ನು, **ಕೊಡುಕ್ಕಕ್ಕೂಡುಮೋ** - ಕೊಡಲು ಸಾಧ್ಯವೋ? ಒಂದು ಕರ್ಮಕ್ಕೆ ಒಂದು ನಿಯತವಾದ ಫಲವಿರಬೇಕು. ಶರಣಾಗತಿಯೇ ಯಾಗಲಿ ಉಪಾಸನವೇ ಆಗಲಿ ಅಧಿಕಾರಿಯು ಐಹಿಕಾದಿ ಸಂಪತ್ತನ್ನಪೇಕ್ಷಿಸಿದರೆ ಆ ಫಲವನ್ನೂ, ಅಥವಾ ಮೋಕ್ಷವನ್ನಪೇಕ್ಷಿಸಿದರೆ ಅದನ್ನೂ, ಹೀಗೆ ಎರಡು ಭಿನ್ನ ಫಲವನ್ನು, **ಒಂದೇ** ಕರ್ಮವು ಹೇಗೆ ಕೊಟ್ಟೀತು? ಎಂದಾಕ್ಷೇಪವು. ಈ ಆಕ್ಷೇಪವು ಒಂದು ಲೋಕದೃಷ್ಟಾಂತಮೂಲಕ ವ್ಯಕ್ತಗೊಳಿಸಲ್ಪಡುತ್ತದೆ, ಹೇಗೆಂದರೆ **ನಿರೈಕ್ಕಿರವನುಡೈಯ ಅಭಿಸಂಧಿಭೇದತ್ತಾಲೆ** - ಬೀಜಬಿತ್ತುವನ ಸಙ್ಕಲ್ಪದ ಭೇದದಿಂದ, **ಒರುವಿರೈ**-ಒಂದು ಬೀಜವು. **ವೇರೊರು ಫಲತ್ತೈ ಕೊಡುಕ್ಕ**

ವೇರೊರು ಫಲತ್ತೈಕ್ಕೊಡುಕ್ಕಕ್ಕೂಡನೋ? ಎನ್ರು ಶಿಲರ್ ಪಾರ್ಪ್ಪರ್‌ಗಳ್. ಇದುಕ್ಕು ಪರಿಹಾರಮ್:–ನ್ಯಾಯಙ್ಗಳಾಲ್ ಬಾಧಿಕ್ಕವೊಣ್ಣಾದ ಪಡಿ ಪ್ರತ್ಯಕ್ಷಾದಿಗಳ್ಳೈ ಪ್ಪೋಲೆ ಸ್ವವಿಷಯತ್ತಿಲ್ ಪ್ರಮಾಣಮಾನ ಶಾಸ್ತ್ರಮ್ ಕಾಟ್ಟುಗೈಯಾಲ್ ಇಪ್ಪಡಿ ಕೂಡುಮ್. ಲೋಕತ್ತಿಲುಮ್

ಕೂಡನೋ - ಭಿನ್ನ ಫಲಗಳನ್ನು ಕೊಡಲು ಸಾಧ್ಯವೋ? **ಎನ್ರು ಶಿಲರ್ ಪಾರ್ಪ್ಪರ್‌ಗಳ್** - ಎಂದು ಕೆಲವರು ಆಲೋಚಿಸುವರು. ಛತ್ರವನ್ನು ಬಿತ್ತಿ ಒಬ್ಬನು ರಾಗಿ ಪೈರನ್ನೂ, ಇನ್ನೊಬ್ಬನು ಗೋಧಿ ಪೈರನ್ನೂ, ತನ್ನ ಇಷ್ಟಾನುಸಾರ ಪಡೆಯುವದು ಹೇಗೆ ಅಸಾಧ್ಯವೋ ಹಾಗೆ ಭಕ್ತಿಯಾಗಲಿ, ಪ್ರಪತ್ತಿಯಾಗಲಿ ಒಬ್ಬನಿಗೆ ಐಶ್ವರ್ಯವನ್ನೂ ಇನ್ನೊಬ್ಬನಿಗೆ ಮೋಕ್ಷವನ್ನೂ ಅವರುಗಳ ಪ್ರಾರ್ಥನಾನುಗುಣವಾಗಿ ಕೊಡಲು ಸಾಧ್ಯವಲ್ಲವೆಂಬುದುಆಕ್ಷೇಪವು. ಇದಕ್ಕೆ ಪರಿಹಾರ ವನ್ನು ಎರಡು ವಿಧವಾಗಿ ಅನುಗ್ರಹಿಸುತ್ತಾರೆ.

ಶಾಸ್ತ್ರಮರ್ಯಾದೆಯಲ್ಲಿ ಪ್ರತ್ಯಕ್ಷಾನುಮಾನಗಳ ನ್ಯಾಯವು ಕೂಡುವ ದಿಲ್ಲವು, ಎಂದು ತಿಳಿಸುತ್ತಾರೆ. ಆದರೆ ಅನೇಕ ಕಡೆಗಳಲ್ಲಿ ಶಾಸ್ತ್ರ ಪಙ್ಕ್ತಿಗಳು ಲೋಕದೃಷ್ಟಾಂತದಿಂದ ಸಮರ್ಥಿಸಲ್ಪಟ್ಟಿರುತ್ತದೆಯಲ್ಲಾ ಎಂದರೆ, ಸಮರ್ಥನೆಯನ್ನು ಮಾಡಬಹುದು. ಆದರೆ ಶಾಸ್ತ್ರಪಙ್ಕ್ತಿಗಳನ್ನು ಲೋಕ ನ್ಯಾಯದಿಂದ ಹೊಡೆದು ಹಾಕುವದು ಸರಿಯಲ್ಲವೆಂದು ತಿಳಿಸುತ್ತಾರೆ. **ಇದುಕ್ಕು ಪರಿಹಾರಮ್** - ಇದಕ್ಕೆ ಪರಿಹಾರವು. ಕ್ರಿಯಾಪದವಿಲ್ಲ ದುದರಿಂದ ಹಿಂದಿನ "ಶೊಲ್ಲು ಗಿರೋಮ್" ಎಂದು ಇಟ್ಟುಕೊಳ್ಳತಕ್ಕದ್ದು; ಅಥವಾ ಪರಿಹಾರವು ಏನೆಂದರೆ ಎಂದು ಇಟ್ಟುಕೊಳ್ಳತಕ್ಕದ್ದು. **ನ್ಯಾಯಙ್ಗಳಾಲ್ ಬಾಧಿಕ್ಕವೊಣ್ಣಾದ** - ಪ್ರತ್ಯಕ್ಷಾನುಮಾನ ಪ್ರಮಾಣಗಳಿಗೆ ಸಂಬಂಧಿಸಿದ ನ್ಯಾಯಗಳಿಂದ ಬಾಧಿಸಕೂಡದ, ಎಂದರೆ ಹೊಡೆದು ಹಾಕಕೂಡದ, ತಿರಸ್ಕರಿಸ ಬಾರದ ಎಂಬರ್ಥವು, **ಪ್ರತ್ಯಕ್ಷಾದಿಗಳ್ಳೈಪ್ಪೋಲೆ ಸ್ವವಿಷಯತ್ತಿಲ್ ಪ್ರಮಾಣಮಾನ ಶಾಸ್ತ್ರಮ್** - ಲೋಕ ವಿಷಯಗಳಲ್ಲಿ ಪ್ರತ್ಯಕ್ಷವೂ, ಆದಿಶಬ್ದದಿಂದ ಅನುಮಾನವೂ ಹೇಗೆ ಪ್ರಮಾಣಗಳೋ, ಹಾಗೆಯೇ "ಸ್ವವಿಷಯತ್ತಿಲ್" ಎಂದರೆ ಪ್ರತ್ಯಕ್ಷಾನುಮಾನಗಳಿಂದಲ್ಲದೆ "ಶಾಸ್ತ್ರೈಕಸಮಧಿಗಮ್ಯ"ಶಾಸ್ತ್ರದಿಂದ ಮಾತ್ರವೇ ತಿಳಿಯತಕ್ಕ ವಿಷಯದಲ್ಲಿ. ಅಥವಾ ಭಕ್ತಿಪ್ರಪತ್ತಿರೂಪಸಾಧ್ಯೋಪಾಯಾನುಷ್ಠಾನದಲ್ಲಿ, **ಪ್ರಮಾಣಮಾನ** - ಪ್ರಮಾಣವಾಗಿರುವ, **ಶಾಸ್ತ್ರಮ್** - ಶಾಸ್ತ್ರವು **ಕಾಟ್ಟುಗೈಯಾಲ್** - ತೋರಿಸುವದರಿಂದ, **ಇಪ್ಪಡಿ** - ಹೀಗೆ ಎಂದರೆ ಒಂದೇ ಅನುಷ್ಠಾನವು ಅಧಿಕಾರಿಯ ಪ್ರಾರ್ಥನಾನುಗುಣವಾಗಿ ಭಿನ್ನ ಫಲದಾಯಕವಾಗು

ವದು, ಕೂಡುವರ್ - ಉಪಪನ್ನವಾದುದು ಅಥವಾ ಸಮಂಜಸವಾದುದು. ಲೌಕಿಕ ವಿಷಯದಲ್ಲಿ ಪ್ರತ್ಯಕ್ಷಾನುಮಾನಗಳು ನ್ಯಾಯವು. ಅತೀಂದ್ರಿಯವಾದ ವಿಷಯದಲ್ಲಿ ಪ್ರತ್ಯಕ್ಷಾನುಮಾನಗಳು ಪ್ರಯೋಜನವಾದವಲ್ಲವು. ಸರ್ವೇಶ್ವರನು ಒಬ್ಬನುಂಟು, ಆತನ ಸ್ವರೂಪವಿಂತಾದುದು, ಸರ್ವೇಶ್ವರನನ್ನು ಹೊಂದುವ ಉಪಾಯಗಳು ಇವು, ಇಂತಹ ನಮ್ಮ ಇಂದ್ರಿಯಗಳಿಗೆ ಗೋಚರವಲ್ಲದ ವಿಷಯದಲ್ಲಿ ಶಾಸ್ತ್ರವೇ ಪ್ರಮಾಣವು, ಲೌಕಿಕ ತರ್ಕವಾದಗಳು ಅವುಗಳ ವಿಷಯದಲ್ಲಿ ಉಪಯೋಗವಾದವುಗಳಲ್ಲವು. ಶಾಸ್ತ್ರ ಮರ್ಯಾದೆಯನ್ನು ಒಪ್ಪಿಕೊಂಡು ಅವುಗಳನ್ನು ಬೇಕಾದರೆ ಲೋಕತರ್ಕದಿಂದ ಸಮರ್ಥಿಸಬಹುದು. ಇಂತಹ ತರ್ಕವನ್ನು ವೇದವೂ ಕೂಡ ಅನುಮೋದಿಸುತ್ತದೆ; ಹೇಗೆಂದರೆ, ಸರ್ವೇಶ್ವರನು, ಜಗತ್ತಿಗೆ ಸರ್ವವಿಧಕಾರಣನು ಎಂದು ಸಮರ್ಥಿಸಲು **ಯಥೋರ್ಣನಾಭಿ ಸ್ಸೃಜತೇ ಗೃಹ್ಣತೇಚ** - ಜೇಡರ ಹುಳವು ತಂತು ನಿರ್ಮಾಣದಲ್ಲಿ ಹೇಗೆ ನಿಮಿತ್ತ ಉಪಾದಾನಾದಿ ಕಾರಣವೋ ಹಾಗೆ ಎಂದು ಲೋಕ ನ್ಯಾಯವನ್ನು ತರಬಹುದು. ಆದರೆ, "**ನಹಿ ವಚನ ವಿರೋಧೇ ನ್ಯಾಯಃ ಪ್ರವರ್ತತೇ**" ಎಂಬ ನ್ಯಾಯಾನುಸಾರ ಅತೀಂದ್ರಿಯ ವಿಷಯದಲ್ಲಿ ಲೋಕನ್ಯಾಯವನ್ನನುಸರಿಸಿ, ಶಾಸ್ತ್ರವಚನವನ್ನು ಹೊಡೆದು ಹಾಕಕೂಡದೆಂಬ ಭಾವವು. ಆದುದರಿಂದ ಸಾಧ್ಯೋಪಾಯಾನುಷ್ಠಾನವು ಅಧಿಕಾರಾನುಗುಣವಾಗಿ ತನ್ನ ಇಷ್ಟಾರ್ಥಪ್ರಾಪ್ತಿಗಾಗಿ ಶಾಸ್ತ್ರಗಳಲ್ಲಿ ವಿಧಿಸಿರುವದರಿಂದ ಭಿನ್ನ ಫಲಗಳನ್ನು ಕೊಡುವದರಲ್ಲಿ ಸಂದೇಹವಿಲ್ಲವು. ಸ್ವರ್ಗ ಅಥವಾ ಐಹಿಕ ಫಲಗಳನ್ನು ಕೋರಿದರೆ ಅವುಗಳೂ, ಮೋಕ್ಷವನ್ನು ಪ್ರಾರ್ಥಿಸಿದರೆ ಅದೂ, ದೊರೆಯುತ್ತವೆಂಬ ಭಾವವು. ಆದರೆ ಶಾಸ್ತ್ರವೆಂಬುದು ಯಾವುದು ಎಂದು ಕೇಳಬಹುದು. ಕೆಲವು ಮಹನೀಯರೆಂದು ಭಾವಿಸಲ್ಪಟ್ಟಿರುವವರ ಹೇಳಿಕೆಗಳಾದ ಪ್ರಜಾಪತಿ ಸ್ಮೃತಿ, ಕಾಪಿಲ ಸ್ಮೃತಿ, ಇತ್ಯಾದಿ ವಾಕ್ಯಗಳೆಲ್ಲಾ ಶಾಸ್ತ್ರಗಳೇ? ಅವುಗಳು ಇತರ ಶ್ರುತ್ಯರ್ಥಗಳಿಗೆ ವಿರೋಧವಾದವುಗಳಾಗಿವೆಯಲ್ಲಾ? ಹಾಗಾದರೆ ಯಾವವುಗಳನ್ನು ಶಾಸ್ತ್ರವಾಗಿ ಇಟ್ಟುಕೊಳ್ಳತಕ್ಕದ್ದೆಂಬ ವಿಷಯದಲ್ಲಿ, "ಅಙ್ಗಾನಿ ವೇದಾಶ್ಚತ್ವಾರೋ ಮೀಮಾಂಸಾ ನ್ಯಾಯ ವಿಸ್ತರಃ। ಪುರಾಣಂ ಧರ್ಮಶಾಸ್ತ್ರಂ ಚ ವಿದ್ಯಾಹ್ಯೇತಾ **ಚತುರ್ದಶ**" ಎಂಬ ಮನುವಾಕ್ಯಾನುಸಾರ ಈ ಹದಿನಾಲ್ಕು ಪ್ರಮಾಣಗಳು. ಇವುಗಳನ್ನನುಸರಿಸಿರುವ ಪಾಂಚರಾತ್ರವೆಂಬ ಭಗವಚ್ಛಾಸ್ತ್ರವೂ, ಇವುಗಳನ್ನನುಸರಿಸಿರುವ ಆಳ್ವಾರಾಚಾರ್ಯ ಸೂಕ್ತಿಗಳೂ ನಮಗೆ ಪ್ರಮಾಣ ಗಳೆ ಇವುಗಳೆಲ್ಲಾ ಪ್ರಮಾಣವಾಗಿಟ್ಟುಕೊಂಡು, ಲೋಕದೃಷ್ಟಾಂತ, ನ್ಯಾಯಗಳಿಂದ ಸಮರ್ಥಿಸಿದರೆ ಸತ್ತರ್ಕವು, ಹಾಗಲ್ಲದೆ ಲೋಕದೃಷ್ಟಾಂತ

ಧರ್ಮಶೀಲನಾಯ್ ಉದಾರನಾನ ರಾಜಾವುಕ್ಕು ವಿಲೈಯಾಗ ಏದೇನು ಮೊನ್ರೈ ಕ್ಕೊಡುತ್ತಾಲ್ ಪೆರುಮ್ ವಿಲೈಕಿಡೈಕ್ಕವುಮ್; ಅದು ತನ್ನೈಯೇ ಉಪಹಾರ ಬುದ್ಧಿಯಾಲ್ ಕೊಡುತ್ತಾಲ್, ವೇಣ್ಡುವದೆಲ್ಲಾಮ್ ಕ್ಕಿಡೈಕ್ಕುವುಮ್ ಕಾಣಾನಿನ್ರೋಮ್. ಇಬ್ಭಕ್ತಿ ಪ್ರಪತ್ತಿಗಳ್ ಪ್ರಯೋಜ

ನ್ಯಾಯಗಳನ್ನು ತಂದು ಶಾಸ್ತ್ರಪ್ರಮಾಣಗಳನ್ನು ದೂರೀಕೃತಮಾಡಿದರೆ ಅಸಮಂಜಸವಾದ ಕುತರ್ಕಗಳಾಗುತ್ತವೆಂಬ ತಾತ್ಪರ್ಯವು. ಇಂತಹ ಶಾಸ್ತ್ರವನ್ನು ದೂರೀಕೃತಮಾಡಿದ ತರ್ಕವು "ತರ್ಕಾಽಪ್ರತಿಷ್ಠಾನಾತ್" ಎಂಬ ಬ್ರಹ್ಮಸೂತ್ರದಲ್ಲಿ (ಶಾ. ೨ ೧. ೧೧.) ನಿಂದಿಸಲ್ಪಟ್ಟಿರುತ್ತದೆ. ಹಾಗೆಯೇ ಸಿದ್ಧೋಪಾಯಶೋಧನಾಧಿಕಾರದಲ್ಲೂ "ಕುತರ್ಕವ್ಯಾಳದಷ್ಟಾನಾಂ ವಿಭ್ರಾಂತೇಂದ್ರಿಯವಾಜಿನಾಂ। ಅನ್ಯಥಾ ಪ್ರತಿಭಾತಿ" ಎಂದು ಇತಿಹಾಸ ಸಮುಚ್ಚಯದಲ್ಲೂ ನಿಂದಿಸಲ್ಪಟ್ಟಿರುತ್ತದೆ.

೨. ಮುಂದೆ ಇನ್ನೊಂದು ವಿಧವಾಗಿಯೂ ಸಮಾಧಾನವನ್ನು ಹೇಳುತ್ತಾರೆ. ಬೀಜದೃಷ್ಟಾಂತದಿಂದ ಭಿನ್ನಫಲ ಲೋಕದಲ್ಲಿ ಕಂಡಿಲ್ಲವೆಂದಲ್ಲವೇ ಪೂರ್ವಪಕ್ಷವು ಹೇಳಲ್ಪಟ್ಟಿತು. ಆದುದರಿಂದ ಲೋಕದೃಷ್ಟಾಂತದಿಂದಲೇ ಸಮಾಧಾನವು ಯುಕ್ತವೆಂದು ಭಾವಿಸಿ ಭಿನ್ನಫಲವುಂಟೆಂದು ಬೇರೆ ದೃಷ್ಟಾಂತಗಳ ಮೂಲಕ ವ್ಯಕ್ತಪಡಿಸುತ್ತಾರೆ:—**ಲೋಕತ್ತಿಲುಮ್** - ಲೋಕದಲ್ಲೂ, ಧರ್ಮಶೀಲನಾದ, ಉದಾರ ಸ್ವಭಾವವುಳ್ಳ ರಾಜನಿಗೆ, **ವಿಲೈಯಾಗ** - ಕ್ರಯವಾಗಿ, **ಏದೋನು ಮೊನ್ನು** - ಯಾವುದಾದರೂ ಒಂದನ್ನು (ಒಂದೆರಡು ನಿಂಬೇ ಹಣ್ಣನ್ನೇಯಾಗಲಿ) **ಕೊಡುತ್ತಾಲ್** - ಕೊಟ್ಟರೆ, ಅದು **ಪೆರುಮ್ ವಿಲೈಕ್ಕಿಡೈಕ್ಕುಂ**- ಅದು ಬಾಳುವ ಬೆಲೆಯು ಲಭಿಸುವದು; **ಅದು ತನ್ನೈಯೇ**-ಅದನ್ನೇ, **ಉಪಹಾರ ಬುದ್ಧಿಯಾಲೇ**-ರಾಜನುಯಾಗಿ ಎಂಬ ಬುದ್ಧಿಯಿಂದ, **ಕೊಡುತ್ತಾಲ್**-ಕೊಟ್ಟರೆ, **ವೇಣ್ಡುವದೆಲ್ಲಾಮ್ ಕಿಡೈಕ್ಕುಮ್**-ಈತನು ಪ್ರಾರ್ಥಿಸುವದೆಲ್ಲಾ ಲಭಿಸುತ್ತದೆ ಎಂಬುದನ್ನು, **ಕಾಣಾನಿನ್ರೋಮ್** - ನಾವು ಪ್ರತ್ಯಕ್ಷದಲ್ಲೇ ಕಂಡಿರುವೆವು; ಪ್ರತ್ಯಕ್ಷ ಪ್ರಮಾಣದಿಂದಲೇ ವೇದ್ಯವೆಂಬ ಭಾವವು; ಒಬ್ಬ ಕವಿಯು ಒಂದು ಅಸದೃಶ ಗ್ರಂಥವನ್ನು ಬರೆದು ರಾಜನಿಗೆ ಸಮರ್ಪಿಸಿದರೆ, ಅದರ ಕ್ರಯದಲ್ಲಿ ದೃಷ್ಟಿ ಇಟ್ಟು ಕೊಟ್ಟರೆ ಅದರ ಬೆಲೆಯಾದ ಒಂದೆರಡು ರೂಪಾಯಿಗಳು ಮಾತ್ರ ಈತನಿಗೆ ಲಭಿಸುತ್ತವೆ. ಹಾಗಲ್ಲದೆ ರಾಜನಿಗೆ ಮರ್ಯಾದಾರ್ಥವಾಗಿ ಸಮರ್ಪಿಸಿದರೆ, ಆತನು ಅದರಿಂದ ಸುಪ್ರೀತನಾದರೆ ಈತನು ಕೇಳುವ ಅತಿಶಯವಾದ ಇಷ್ಟಾರ್ಥಗಳು ಲಭಿಸುತ್ತವೆ. ಹೀಗೆ ನಡೆದಿರುವದು ನಾವು ಪ್ರತ್ಯಕ್ಷದಲ್ಲೇ ಕಂಡಿರುತ್ತೇವೆ

ನಾಂತರ ಪರನುಕ್ಕು ಪ್ರವೃತ್ತಿಧರ್ಮ ಕೋಟಿಯಿಲೇ ನಿಱ್ಕುಮ್ ; ಭಗವಚ್ಚರಣಾರ್ಥಿಗಳುಕ್ಕು ನಿವೃತ್ತಿ ಧರ್ಮಙ್ಗಳಾಮ್. ಇವ್ವರ್ಥಮ್ ನಿತ್ಯನೈಮಿತ್ತಿಕಾದಿಗಳಿಲುಮೊಕ್ಕುಮ್.

ಎಂಬ ಭಾವವು. ಆದುದರಿಂದ ಹಾಗೆಯೇ ಭಕ್ತಿ ಪ್ರಪತ್ತಿಗಳು ಅಧಿಕಾರಿಯ ಇಷ್ಟಾನುಸಾರ ಭಿನ್ನ ಫಲದಾಯಕಗಳಾಗುವದರಲ್ಲಿ ಸಂದೇಹವಿಲ್ಲವೆಂಬ ತಾತ್ಪರ್ಯವು. ಪ್ರತ್ಯಕ್ಷದಲ್ಲೇ ಒಂದೇ ಕಾರಣವು ಭಿನ್ನ ಫಲಗಳನ್ನು ಕೊಟ್ಟಿರುವದನ್ನು ಇತರ ಲೋಕದೃಷ್ಟಾಂತಗಳಿಂದ ವ್ಯಾಖ್ಯಾತೃಗಳು ವ್ಯಕ್ತಪಡಿಸಿರುತ್ತಾರೆ. ಚಿತ್ರದ ಬೀಜಕ್ಕೆ ಅಗ್ನಿಸಂಯೋಗ ಉಂಟಾದರೆ ವಿಜಾತೀಯವಾದ ಕದಳಿಯು (ಬಾಳೇಗಿಡ) ಉಂಟಾಗುವದನ್ನೂ ಹಾಗೆಯೇ ದ್ರವ್ಯಾರ್ಜನೆಗೆ ಸಾಧನವಾದ ರತ್ನ ಮೊದಲಾದವುಗಳಲ್ಲಿ ಪುರುಷಭೇದದಿಂದ ನ್ಯೂನಾಧಿಕ ಫಲವುಂಟಾಗುವದನ್ನೂ ಕಂಡಿರುವೆವು. ಹಾಗೆಯೇ ಭಕ್ತಿಪ್ರಪತ್ತಿಗಳೂ ಸರ್ವಫಲಗಳನ್ನೂ ಕೊಡುವುವು ಎಂಬ ತಾತ್ಪರ್ಯವು. ಆದುದರಿಂದ ಭಕ್ತಿಪ್ರಪತ್ತಿಗಳೂ ಪ್ರವೃತ್ತಿಧರ್ಮರೂಪವಾದ ಕಾಮ್ಯಕರ್ಮಗಳಾಗಿ ಪರಿಣಮಿಸಿ, ಐಶ್ವರ್ಯಾದಿಗಳನ್ನು ಸಾಧಿಸಿಕೊಡಬಹುದು ; ನಿವೃತ್ತಿ ಧರ್ಮರೂಪವಾದ ಫಲಾಭಿಸಂಧಿರಹಿತವಾದವುಗಳಾಗಿ ಮೋಕ್ಷವನ್ನು ಸಾಧಿಸಿಕೊಡಬಹುದು, ಎಂದು ಮುಂದಿನ ವಾಕ್ಯದಿಂದ ಸ್ಥಾಪಿಸುತ್ತಾರೆ:— **ಇಬ್ಭಕ್ತಿಪ್ರಪತ್ತಿಗಳ್**-ಈ ಭಕ್ತಿಪ್ರಪತ್ತಿರೂಪ ಸಾಧ್ಯೋಪಾಯಗಳು, **ಪ್ರಯೋಜನಾಂತರ ಪರನುಕ್ಕು** - ಮೋಕ್ಷವಲ್ಲದೆ ಇತರ ಪ್ರಯೋಜನಗಳನ್ನಪೇಕ್ಷಿಸುವವನಿಗೆ, **ಪ್ರವೃತ್ತಿಧರ್ಮಕೋಟಿಯಿಲೇ** - ಪ್ರವೃತ್ತಿ ಧರ್ಮಗಳೆಂಬ ತರಗತಿಯಲ್ಲಿ **ನಿಱ್ಕುಮ್** - ನಿಲ್ಲುವುವು ; ಎಂದರೆ ಕಾಮ್ಯಕರ್ಮಗಳ ಹಾಗೆ ಫಲಗಳನ್ನು ಕೊಡುವುವು. **ಭಗವಚ್ಚರಣಾರ್ಥಿಗಳುಕ್ಕು** - ಭಗವಂತನ ಪಾದಕಮಲಗಳನ್ನೇ ಪ್ರಾಪ್ಯವಾಗಿ ಅಪೇಕ್ಷಿಸುವವರಿಗೆ, ಪರಮ ಪದದಲ್ಲಿ ಆತನ ಪಾದ ಪ್ರಾಂತದಲ್ಲಿ ಕೈಂಕರ್ಯಪರರಿಗೆ ಎಂಬ ಭಾವವು. ಅವು, **ನಿವೃತ್ತಿಧರ್ಮಙ್ಗಳಾಮ್**- ನಿವೃತ್ತಿ ಧರ್ಮಗಳಾಗುವುವು. ಅಧಿಕಾರಿಗಳ ಅಭಿಸಂಧಿಯ ವ್ಯತ್ಯಾಸದಿಂದ ಒಂದೇ ಅನುಷ್ಠಾನವು ಭಿನ್ನಫಲಗಳನ್ನು ಕೊಡುತ್ತದೆ ಎಂಬುದು ತಾತ್ಪರ್ಯವು. ಜಾತೇಷ್ಟ್ಯಾದಿಗಳೂ ಕೂಡ ಫಲಾಭಿಸಂಧಿಯಿಲ್ಲದೆ ಅನುಷ್ಠಿಸಲ್ಪಟ್ಟರೆ ನೈಮಿತ್ತಿಕಗಳಾಗಿ ಪರಿಣಮಿಸಿ ವಿಶೇಷ ಭಗವತ್ಪ್ರೀಣನ ಮೂಲಕ ಅತಿಶಯಿತ ಫಲವನ್ನುಂಟುಮಾಡಬಹುದು. ಅವೇ ಫಲಕಾಮನೆಯಿಂದ ಮಾಡಲ್ಪಟ್ಟರೆ ಕಾಮ್ಯವಾಗಿ ಪರಿಣಮಿಸಿ ಅನಿತ್ಯಫಲವನ್ನುಂಟುಮಾಡುತ್ತವೆ. ಹಾಗೆಯೇ ಇವುಗಳೂ ಎಂದು ಅಙ್ಗೀಕರಿಸಬಹುದೆಂಬ ತಾತ್ಪರ್ಯವು. ಅವರೆ ಕಾಮ್ಯವಾಗಿ ಪ್ರವೃತ್ತಿ

ಯಥಾಽಭಿಸಂಧಿ ಭೇದಾತ್ ಏತಯೋಃ ಭಿನ್ನ ಫಲತ್ವಂ,
ತಥಾ ಭಿನ್ನಾಧಿಕಾರಾದಪಿ ಏಕಫಲಸಾಧನತ್ವಮ್,

ಇಪ್ಪಡಿಯೇ ಆವೃತ್ತ್ಯನಾವೃತ್ತ್ಯಾದಿಗಳಾಲೇ ವಿಷಮಸ್ವಭಾವಙ್ಗಳಾನ

ಧರ್ಮವಾಗಿ ಅನುಷ್ಠಿಸಿ, ಅನಿತ್ಯ ಫಲಕಾಮನೆಯಿಂದ ಮಾಡಿದರೂಕೂಡ, ಭಗವತ್ಪಾದಾರವಿಂದದಲ್ಲಿ ಮಾಡಿದ ಶರಣಾಗತಿಯಾದುದರಿಂದ, ಸುಕೃತವಾಗಿ ಪರಿಣಮಿಸಿ ಕಾಲಕ್ರಮದಿಂದ ಸದ್ಗುರೂಪದೇಶಾದಿಗಳು ಲಭಿಸಿ, ಮೋಕ್ಷಾರ್ಥವಾಗಿ ಪ್ರಪದನವನ್ನು ಅನುಷ್ಠಿಸಿ, ದಿವ್ಯ ವೈಕುಂಠವನ್ನು **"ನಹಿಕಲ್ಯಾಣಕೃತ್ಕಶ್ಚಿದ್ದುರ್ಗತಿಂ ತಾತಗಚ್ಛತಿ"** ಎಂಬ ವಾಕ್ಯಾನುಸಾರ ಪಡೆಯಬಹುದು. ಹೀಗೆ ಪ್ರವೃತ್ತಿಧರ್ಮಾನುಷ್ಠಾನವು ಉತ್ತರೋತ್ತರ ನಿವೃತ್ತಿಧರ್ಮಾನುಷ್ಠಾನಕ್ಕೆ ಹೇತುವಾಗಬಹುದು. ಹೀಗೆ ಒಂದೇ ಧರ್ಮವು ಅಭಿಸಂಧಿ ಭೇದದಿಂದ ಪ್ರವೃತ್ತಿ ಧರ್ಮವಾಗಲಿ ನಿವೃತ್ತಿಧರ್ಮವಾಗಲಿ ಆಗಿ, ಫಲ ಭೇದವನ್ನು, **"ಪ್ರವೃತ್ತಿಃ ಪುನರಾವೃತ್ತಿಃ ನಿವೃತ್ತಿಃ ಪರಮಾಗತಿಃ"** ಎಂದು ಮೋಕ್ಷಧರ್ಮದಲ್ಲಿ ಹೇಳಿರುವಹಾಗೆ ಕೊಟ್ಟು, **ಪುನಸ್ಸಂಸಾರಕ್ಕಾಗಲಿ** ಮೋಕ್ಷಕ್ಕಾಗಲಿ ಸಹಕಾರಿಯಾಗಬಹುದು. **ಇವ್ವರ್ಥಮ್** – ಈ ಅಭಿಪ್ರಾಯವು ಎಂದರೆ ಒಂದೇ ಧರ್ಮಾನುಷ್ಠಾನವು ಭಿನ್ನಫಲಗಳನ್ನುಂಟುಮಾಡುವದೆಂಬುದು, **ನಿತ್ಯನೈಮಿತ್ತಿಕಾದಿಗಳಿಲುಮ್ ಒಕ್ಕುಮ್**– ನಿತ್ಯ ನೈಮಿತ್ತಿಕಙ್ಗಳಲ್ಲೂ ತುಲ್ಯವಾದುದು, ಸಮಾನವಾದುದು. ನಿತ್ಯಕ್ಕೆ ಉದಾಹರಣೆಯಾಗಿ, ಸಂಧ್ಯೋಪಾಸನಾದಿಗಳು ಕೆಲವರಿಗೆ ಪ್ರತ್ಯವಾಯ ಪರಿಹಾರಾರ್ಥವಾದುದು ಮಾತ್ರವೇಯಾಗಿ, ಇನ್ನು ಕೆಲವರಿಗೆ ಮೋಕ್ಷಪ್ರಾಪ್ತಿಗೆ ಸಹಕಾರಿಯಾಗಿಯೂ ಆಗಬಹುದು. ನೈಮಿತ್ತಿಕಕ್ಕೆ ಹಿಂದೆ ಜಾತ್ಯೇಷ್ಟಿಯ ನಿದರ್ಶನವು ಹೇಳಲ್ಪಟ್ಟಿತು. ಹೀಗೆ ಅಧಿಕಾರಿಯ ಅಭಿಸಂಧಿ ಭೇದದಿಂದ ಫಲಭೇದ ಉಂಟೆಂಬುದನ್ನು ಶಾಸ್ತ್ರವೂ ಹೇಳುವದರಿಂದಲೂ, ಲೋಕನ್ಯಾಯದಿಂದಲೂ, ಸಮಂಜಸವೇ; ಆದುದರಿಂದಲೂ ಸ್ಥಾಪಿತವು ಎಂಬ ಭಾವವು.

ಇವುಗಳಿಗೆ ಅಭಿಸಂಧಿ ಭೇದದಿಂದ ಭಿನ್ನಫಲತ್ವವು ಹೇಗೋ, ಹಾಗೆ ಅಧಿಕಾರಿ ಭೇದದಿಂದ ಏಕಫಲತ್ವವೂ ಕೂಡುತ್ತದೆ.

ಪ್ರಾಸಙ್ಗಿಕವಾಗಿ ಇನ್ನೊಂದು ಪೂರ್ವಪಕ್ಷಕ್ಕೂ ಸಮಾಧಾನವನ್ನು ಹೇಳುತ್ತಾರೆ. **ಪೂರ್ವಪಕ್ಷವು** ಹೇಗೆಂದರೆ, **ಉಪಾಸನವು** ಚಿರಕಾಲ ಸಾಧ್ಯವಾದುದು, **ಯಾವಜ್ಜೀವವೂ ನಡೆಸತಕ್ಕದ್ದು,** ಮಹಾತ್ಮ್ಯಯತ್ನಸಾಧ್ಯವು, ಈ ದೇಹಾವಸಾನದಲ್ಲೇ

ಉಪಾಸನ ಪ್ರಪದನಙ್ಗಳ್ ಏಕಫಲಸಾಧನಮಾಗ ಕ್ಕೂಡುಮೋ ವೆನ್ನಿಲ್ ? ಇದುಕ್ಕುತ್ತರಮ್ ಅಧಿಕಾರಿ ವಿಶೇಷತ್ತಾಲೆ ಲೋಕವೇದಙ್ಗಳಿಲ್ಪಡಿಯೇ ಸಿದ್ಧಮ್.

ಮೋಕ್ಷಪ್ರಾಪ್ತಿ ಆದರೂ ಆಗಬಹುದು, ಅಥವಾ ವಿಳಂಬಿಸಬಹುದು; ಹೀಗೆ ತುಂಬಾ ಗುರುತರವಾದುದು; ಪ್ರಪದನವಾದರೋ ಕ್ಷಣಕಾಲ ಸಾಧ್ಯವಾದುದು, ಅತಿ ಸುಲಭವಾಗಿ ಸಕೃದನುಷ್ಠೇಯವು, ದೇಹಾವಸಾನದಲ್ಲೇ ಮೋಕ್ಷದಾಯಕವು; ಇಂತಹ ಗುರು ಲಘುಗಳಾದ ಉಪಾಯಗಳೆರಡಕ್ಕೂ ಮುಮುಕ್ಷುಗಳಿಗೆ ತುಲ್ಯಫಲವೆಂದರೆ ಒಪ್ಪತಕ್ಕದ್ದೇ ಎಂಬಾಕ್ಷೇಪವು; ಇದಕ್ಕೆ ಮುಂದಿನ ವಾಕ್ಯದಿಂದ ಸಮಾಧಾನವನ್ನು ಹೇಳುತ್ತಾರೆ:—**ಇಪ್ಪಡಿಯೇ** - ಹೀಗೆ ಎಂದರೆ ಹೇಗೆ ಅಧಿಕಾರಿಯು ಇಷ್ಟಾರ್ಥಾನುಗುಣವಾಗಿ ಅನಿತ್ಯ ಫಲವಾಗಲಿ ನಿರತಿಶಯ ನಿತ್ಯ ಫಲವಾಗಲಿ ಒಂದೇ ಅನುಷ್ಠಾನದಿಂದ ಲಭಿಸುತ್ತದೋ, ಹಾಗೆಯೇ ಅದೇ ನ್ಯಾಯದಿಂದಲೇ, **ಅನ್ವೃತ್ತ್ಯನಾವೃತ್ತಿ ವಿಷಮಸ್ವಭಾವಙ್ಗಳಾನ** - ಭಕ್ತಿಮಾರ್ಗದಲ್ಲಿ ಪ್ರಾರಬ್ಧವೆಲ್ಲಾ ಕಳೆದನಂತರವೇ ಮೋಕ್ಷವಾದುದರಿಂದ ಅನಭ್ಯುಪಗತ ಪ್ರಾರಬ್ಧವೂ ಕಳೆಯುವವರೆಗಾಗಿ ಒಂದುವೇಳೆ ಅನ್ವೃತ್ತಿ ಇದ್ದರೂ ಇರಬಹುದು, ಆದರೆ ಪ್ರಪತ್ತಿಗೆ ಅನಾವೃತ್ತಿಯೇ ವಿನಾ ಆವೃತ್ತಿಯಿಲ್ಲವು, ಹೀಗೆ ವ್ಯತ್ಯಸ್ತವಾದ ಸ್ವಭಾವವುಳ್ಳ, **ಉಪಾಸನ ಪ್ರಪದನಗಳು, ಏಕಫಲ ಸಾಧನಮಾಗಕ್ಕೂಡುಮೋ** - ಒಂದೇ ಫಲವಾದ ಮೋಕ್ಷವನ್ನು ಸಾಧಿಸಿಕೊಡುತ್ತವೆಂದು ಹೇಳುವದು ಸಮಂಜಸವೋ? **ಇದಕ್ಕು ಉತ್ತರಮ್** - ಇದಕ್ಕೂ ಕೂಡ ಸಮಾಧಾನರೂಪವಾದ ಉತ್ತರವು, ಏನೆಂದರೆ:—**ಅಧಿಕಾರಿ ವಿಶೇಷದಿಂದ, ಲೋಕವೇದಙ್ಗಳಿಲ್ಪಡಿಯೇ** - ಲೋಕದೃಷ್ಟಾಂತದಿಂದಲೂ ವೇದಗಳಲ್ಲಿ ಪಠಿತವಾಗಿರುವುದರಿಂದಲೂ ತೋರಿಬರುವದು ಹೇಗೋ ಹಾಗೆ, **ಸಿದ್ಧಮ್** - ಸ್ಥಾಪಿತವು. ಒಂದೇ ಅನುಷ್ಠಾನಕ್ಕೆ ಅಭಿಸಂಧಿ ಭೇದದಿಂದ ಭಿನ್ನಫಲವು ಹೇಗೆ ಸಮಂಜಸವೋ, ಹಾಗೆಯೇ ಭಿನ್ನಾನುಷ್ಠಾನಗಳಿಗೂ ಏಕಫಲವೂ ಸಮಂಜಸವು ಇದು ಲೋಕ ಮತ್ತು ವೇದಸಿದ್ಧವೆಂದು ಸಙ್ಗ್ರಹವಾಗಿ ಹೇಳಿದರು. ಆದುದರಿಂದ ಮೋಕ್ಷಾರ್ಥಿಯಾಗಿರುವವರು, ಉಪಾಸನಕ್ಕೆ ಅಧಿಕಾರಿಯಾಗಿ ಭಕ್ತ್ಯುಪಾಯವನ್ನು ಕೈಕೊಂಡರೂ, ಅಥವಾ ಪ್ರಪದನಕ್ಕೆ ಅಧಿಕಾರಿಯಾಗಿ ಭರನ್ಯಾಸವನ್ನು ಕೈಕೊಂಡರೂ, ಒಂದೇ ಫಲವಾದ ಮೋಕ್ಷಪ್ರಾಪ್ತಿ ಉಂಟಾಗುವದೂ ಬಹು ಸಮಂಜಸವೇ, ಇದಕ್ಕೆ ಲೋಕದೃಷ್ಟಾಂತ ಶಾಸ್ತ್ರ ಪ್ರಮಾಣ ರೀತಿಗಳನ್ನು ಮುಂದೆ ಹೇಳುತ್ತಾರೆ, ಲೋಕದೃಷ್ಟಾಂತಕ್ಕೆ ಒಬ್ಬ ಕೃಷೀವಲನ ಫಲಾಭಿಲಾಷೆಯನ್ನು ಇನ್ನೊಬ್ಬನು

ದೃಪ್ತಪ್ರಪತ್ತಿ - ಯಾವಾಗಲೋ ಹಾಗೆ. ಇದು ವಿಳಂಬ
ಆರ್ತಪ್ರಪತ್ತಿ - ಕೂಡಲೇ ಬೇಕು - ಇದು ಅವಿಳಂಬ

ಆರ್ತದೃಪ್ತಾನಾಂ ಫಲ ನಿಷ್ಪತ್ತೌ ವಿಳಂಬಾವಿಳಂಬ ಶಙ್ಕಾಪರಿಹಾರಃ

ಮುಮುಕ್ಷುಕ್ಕಳಾಯ್ ಸ್ವತಂತ್ರ ಪ್ರಪತ್ತಿ ಪಣ್ಣಿನವರ್ಗಳುಕ್ಕು ಉಪಾಯಮುಮ್ ಮೋಕ್ಷಮುಮ್ ಏಕರೂಪಮಾಯಿರುಕ್ಕ ಚ್ಚೆಯ್ದೇಯುಮ್ ಸಂಸಾರತ್ತಿಲ್ ಅಡಿಚ್ಚೂಟ್ಟಾಲ್ ವರುಮ್ ತ್ವರೈಯಿನ್

ವಾಣಿಜ್ಯದಿಂದ ಸಾವಿರ ರೂಪಾಯಿಯನ್ನು ಕ್ಲಿಪ್ತಕಾಲದಲ್ಲಿ ಸಂಪಾದಿಸಬಹುದು. ಇಲ್ಲಿ ಭಿನ್ನಾಧಿಕಾರಿಗಳು ಒಂದೇ ಫಲವನ್ನೇ ಹೊಂದಿರುತ್ತಾರೆ. ಹಾಗೆಯೇ ವೇದದಲ್ಲೂ ಮಾನಸ ಮಂತ್ರಸ್ನಾನಕ್ಕೂ ಜಲಾಶಯದಲ್ಲಿ ವಾರುಣಸ್ನಾನಕ್ಕೂ ಒಂದೇ ಫಲವೆಂದು ಹೇಳಲ್ಪಟ್ಟಿರುತ್ತದೆ, ಹಾಗೆಯೇ ತ್ರಿವರ್ಣದವರಿಗೂ ಶೂದ್ರರಿಗೂ ನಿತ್ಯ ನೈಮಿತ್ತಿಕಗಳು ಭಿನ್ನವಾದವುಗಳಾಗಿದ್ದರೂ ಅವುಗಳಿಗೆಲ್ಲಾ ಫಲದಲ್ಲಿ ಸಮಭಾವವೇ ಉಂಟು. ಇವನ್ನು ತಿಳಿಯದೆ ಶೂದ್ರಾದಿಗಳಿಗೆ ಶೂದ್ರಸ್ಸ್ವಾರ್ಥಃ ಎಂದು ಹೇಳಿರುವಹಾಗೆ ಅವುಗಳು ಅತಿ ಸುಲಭವಾಗಿದ್ದರೂ ಕಷ್ಟತರಗಳಾದ ಅನುಷ್ಠಾನಪರರಾದ ಬ್ರಾಹ್ಮಣರಲ್ಲಿ ಅಸೂಯೆಯು ತಪ್ಪಲಿಲ್ಲವು. ಇಂತಹ ದೃಷ್ಟಾಂತಗಳು ಲೋಕಾನುಭವವಿರುವವರಿಗೂ, ಶಾಸ್ತ್ರಮರ್ಯಾದೆಯನ್ನರಿತವರಿಗೂ, ವ್ಯಕ್ತವಾದುವರಿಂದ ಅವುಗಳನ್ನು ಉದಾಹರಿಸದೆ, ಸಿದ್ಧಮ್ ಎಂದು ಇಷ್ಟುಮಾತ್ರವೇ ಹೇಳಿದರು. ಲೋಕವೇದಙ್ಗಳಿಲ್ ಎಂಬ ಪ್ರಯೋಗದಲ್ಲಿ ಲೋಕಶಬ್ದಕ್ಕೆ ಲೋಕ್ಯತೇ ಅನೇನ ಎಂಬ ವ್ಯುತ್ಪತ್ತಿ ಮೂಲಕ ಪ್ರಮಾಣವೆಂದು ಶ್ರೀ ನಿಗಮಾಂತದೇಶಿಕರೇ ಅರ್ಥಮಾಡಿರುತ್ತಾರೆ. ಇಲ್ಲಿ ಪ್ರಮಾಣವು ಶಾಸ್ತ್ರಪ್ರಮಾಣವಾದುದರಿಂದ, ವೇದವು ಹೇಳಲ್ಪಟ್ಟಿರುವದರಿಂದ ಗೋಬಲೀವರ್ದನ್ಯಾಯರೀತ್ಯಾ ಲೋಕವೆಂದರೆ ಸ್ಮೃತಿ ಎಂದು ಅರ್ಥಮಾಡಿರುತ್ತಾರೆ. ಸ್ಮೃತಿಶ್ರುತಿಗಳಲ್ಲಿ ಸಿದ್ಧವೆಂದು ಅರ್ಥಮಾಡಬಹುದು.

ಆರ್ತ ದೃಪ್ತರಿಗೆ ಫಲಪ್ರಾಪ್ತಿಯಲ್ಲಿ ವಿಳಂಬಾವಿಳಂಬಗಳು ಯುಕ್ತವೋ ಎಂಬ ಶಙ್ಕಾ ಪರಿಹಾರವು.

ಒಂದೇ ಉಪಾಯವಾದ ಭರನ್ಯಾಸವನ್ನೇ ಇಬ್ಬರು ಮುಮುಕ್ಷುಗಳು ಅನುಷ್ಠಿಸಿದ್ದರೂ, ಇಬ್ಬರಿಗೂ ಮೋಕ್ಷಫಲವು ಒಂದೇಯಾಗಿ ಇದ್ದರೂ, ಆರ್ತನಾದ ಒಬ್ಬನಿಗೆ ವಿಳಂಬವಿಲ್ಲದೆ ದೇಹಾವಸಾನದಿಂದ ಮೋಕ್ಷವೆಂದೂ, ದೃಪ್ತನಾದ ಮತ್ತೊಬ್ಬನಿಗೆ ವಿಳಂಬದಿಂದ ದೇಹಾವಸಾನ ಉಂಟಾಗಿ ಮೋಕ್ಷವೆಂದೂ, ಹೀಗೆ ಹೇಳುವದು ಉಚಿತವೋ ಎಂಬ ಆಕ್ಷೇಪತಂದರೆ ಅದಕ್ಕೂ ಸಮಾಧಾನವನ್ನು

ತಾರತಮ್ಯತ್ತುಕ್ಕೇಡಾಗ ತಮ್ ತಾಮಿಚ್ಚೈಯಾಲೇಕಾಲಮ್‌ಕುರುಕ್ಕಿರದಿಲ್ ವಿತ್ತ್ಯಾಸಮುಂಡಾಗಕ್ಕೂಡುಮಿತ್ತಾಲೇ ಫಲತ್ತಿಲ್ ವಿಳಂಬಾವಿಳಂಬಗಳ್ ಕೂಡುಮ್. ಆಳ್ವಾರ್ (ಗಳ್) ನಾಥಮುನಿಗಳ್ಳ್ಳಿಟ್ಟ್ವಾರ್ಕ್ಕು ಭಗವತ್ಸಾಕ್ಷಾ

ಹೇಳುತ್ತಾರೆ:—ಮುಮುಕ್ಷುಕ್ಕಳಾಯ್ - ಮೋಕ್ಷಾರ್ಥಿಗಳಾಗಿ, ಸ್ವತಂತ್ರ ಪ್ರಪತ್ತಿ ಪಣ್ಣಿನವರ್‌ಗಳುಕ್ಕು - ಭರನ್ಯಾಸವನ್ನು ಅನುಷ್ಠಿಸಿದವರಿಗೆ, ಉಪಾಯಮುಮ್ - ಉಪಾಯಾನುಷ್ಠಾನವೂ, ಮೋಕ್ಷಮುಮ್ - ಅದರ ಫಲವಾದ ಮೋಕ್ಷವೂ ಕೂಡ, ಏಕರೂಪಮಾಯಿರುಕ್ಕಚ್ಚೆಯ್‌ದೇಯುಮ್ - ಸಮಾನವಾಗಿ ಒಂದೇಯಾಗಿದ್ದರೂ ಕೂಡ, ಸಂಸಾರತ್ತಿಲ್ - ಸಂಸಾರದಲ್ಲಿ, ಅದಿಜ್ಜೂಟ್ಟಾಲ್ - ಸಂಸಾರತಾಪದಿಂದ ಕಾಲು ಬೆಂದು ಹೋಗುವದರಿಂದ ವರುಮ್ - ಪ್ರಾಪ್ತವಾಗುವ. ತ್ವರೈಯಿನ್ ತಾರತಮ್ಯತ್ತುಕ್ಕೇಡಾಗ - ತ್ವರೆಯಲ್ಲಿರುವ ವ್ಯತ್ಯಾಸಕ್ಕನುಗುಣವಾಗಿ, ತಮ್ ತಾಮಿಚ್ಚೈಯಾಲೇ-ಆಯಾ ಅಧಿಕಾರಗಳ ಇಷ್ಟದಿಂದ, ಕಾಲಮ್ ಕುರುಕ್ಕಿರದಿಲ್ - ತನಗೆ ದೇಹಾವಸಾನವೂ ಮೋಕ್ಷವೂ ಉಂಟಾಗಬೇಕಾದ ಕಾಲವನ್ನು ಕೋರುವದರಲ್ಲಿರುವ, ವಿತ್ತ್ಯಾಸಮುಂಡಾಗಕ್ಕೂಡುಮಿತ್ತಾಲೇ-ಹೆಚ್ಚುಕಡಮೆಯಿಂದ, ಫಲತ್ತಿಲ್ - ಫಲವುಂಟಾಗುವದರಲ್ಲಿ. ವಿಳಂಬಾವಿಳಂಬಗಳು, ಕೂಡುಮ್ - ಸಲ್ಲುತ್ತವೆ. ಈ ಸಂದರ್ಭದಲ್ಲಿ ಇಬ್ಬರಿಗೂ ಪ್ರಪದನಾನುಷ್ಠಾನವೂ ಒಂದೇ, ಫಲವೂ ಒಂದೇ, ಹೀಗಿರುವಾಗ ಕೆಲವರಿಗೆ ಮೋಕ್ಷಪ್ರಾಪ್ತಿಯಲ್ಲಿ ವಿಳಂಬವು, ಇನ್ನು ಕೆಲವರಿಗೆ ವಿಳಂಬವಿಲ್ಲದಿರೋಣವೂ, ಹೀಗೆ ಎಲ್ಲಾದರೂ ಉಂಟೇ ಎಂಬುದು ಆಕ್ಷೇಪವು. ಕೆಲವರು ಸಂಸಾರದಲ್ಲಿರುವದು ಬೆಂಕಿಯ ಮಧ್ಯದಲ್ಲಿರುವಹಾಗೆ ಭಾವಿಸುವರು. ಅಂತಹ ಆರ್ತರು ಒಡನೇ ದೇಹಾವಸಾನಮೂಲಕ ಮೋಕ್ಷವನ್ನಪೇಕ್ಷಿಸುವದರಿಂದ, ಶರಣಾಗತರ ಅಭೀಷ್ಟವನ್ನು ದಯಪಾಲಿಸಲೇಬೇಕೆಂಬ ಕಂಕಣಬದ್ಧನಾಗಿರುವ ಸರ್ವೇಶ್ವರನು ಒಡನೆ ಅನುಗ್ರಹಿಸುವನು. ಇನ್ನೂ ಕೆಲವು ಕಾಲ ಇಲ್ಲೇ ಇದ್ದು ಭೋಗಗಳನ್ನನುಭವಿಸಿ ದೇಹಾವಸಾನಾನಂತರ ಮೋಕ್ಷಬೇಕೆಂದು ಸಂಕಲ್ಪಿಸಿದವನಿಗೆ ಹಾಗೆಯೇ ದಯಪಾಲಿಸಬೇಕಾಗುತ್ತದೆ. ಹೀಗೆ ಶರಣಾಗತಿಯನ್ನನುಷ್ಠಿಸುವಾಗ ಮಾಡಿದ ಸಂಕಲ್ಪಕ್ಕನುಗುಣವಾಗಿ ವಿಳಂಬವಾಗಿಯೂ ವಿಳಂಬವಿಲ್ಲದೆಯೂ ಫಲಪ್ರಾಪ್ತಿಯುಂಟಾಗುವದರಲ್ಲಿ ಏನೊಂದೂ ಅಸಮಂಜಸವಾದುದಿಲ್ಲವೆಂಬ ಭಾವವು. ಹೀಗೆ ಪ್ರಪದನಕಾಲದಲ್ಲಿ ಮಾಡಿದ ಸಂಕಲ್ಪ ಭೇದದಿಂದ ವಿಳಂಬಾವಿಳಂಬಗಳು ಪ್ರಾಪ್ತವಾಗುತ್ತವೆಂಬುದು ಸಿದ್ಧವು. ಹೀಗೆ (೧) ಒಂದು ಅನುಷ್ಠಾನವು ಸಂಕಲ್ಪ ಭೇದದಿಂದ ಭಿನ್ನಫಲವನ್ನು ಕೊಡಲಾರದೆಂಬ, (೨) ಎರಡು ಭಿನ್ನಧರ್ಮಗಳು

ದಾದಿಗಳುಣ್ಡಾಯಿರುಕ್ಕ, ಶಿಲರ್ಕ್ಕು ಇವೈ ಯನ್ರಿಕ್ಕೇ ಒೞಿಗೈಕ್ಕು ಕಾರಣಮ್, ಪ್ರಪತ್ತಿ ಕಾಲತ್ತಿಲ್ ಫಲಸಙ್ಕಲ್ಪತ್ತಿಲ್ ವೈಷಮ್ಯಮ್; ಪ್ರಾರಬ್ಧ ಕರ್ಮ (ಸುಕೃತ) ವಿಶೇಷ ಮಾಗವುಮಾಮ್. ಮುನ್ಬು ಕೋಲಿನ

ಒಂದೇ ಫಲವನ್ನು ಕೊಡಬೇಕಾಗಿವೆಂಬ, (೩) ಭಿನ್ನಾಧಿಕಾರಿಗಳ ಒಂದೇ ಅನುಷ್ಠಾನಕ್ಕೆ ಫಲವು ಒಂದಾದರೂ ಫಲಪ್ರಾಪ್ತಿಯಲ್ಲಿ ಕಾಲ ವ್ಯತ್ಯಾಸವು ಸರಿಯಲ್ಲವೆಂಬ ವ ಮೂರು ಆಕ್ಷೇಪಗಳೂ ಹಿಂದೆ ಖಂಡಿಸಲ್ಪಟ್ಟವು.

ಹಾಗೆಯೇ ಪ್ರಾಸಙ್ಗಿಕವಾಗಿ, ಪ್ರವಚನ ಕಾಲದ ಸಙ್ಕಲ್ಪಭೇದದಿಂದ ಭಗವತ್ಸಾಕ್ಷಾತ್ಕಾರಾದಿಗಳು ಕೆಲವರಿಗೆ ಲಭಿಸಬಹುದು; ಇನ್ನು ಕೆಲವರಿಗೆ ಲಭಿಸದೇ ಇರಬಹುದು ಎಂದು ಉಪದೇಶಿಸುತ್ತಾರೆ. ಆೞ್ವಾರ್-ಶ್ರೀ ನಮ್ಮಾೞ್ವಾರವರು ಆೞ್ವಾರ್ಗಳ್ ಎಂಬ ಪಾಠವಾದರೆ ಎಲ್ಲಾ (ಹತ್ತು) ಆೞ್ವಾರುಗಳು, ಮತ್ತು ಸಾಧಮಾನಿಗಳು ಉಳ್ಳಿಟ್ಟಾರ್ಕ್ಕು-ಮೊದಲಾದವರಿಗೆ, ಭಗವತ್ಸಾಕ್ಷಾತ್ಕಾರಾದಿಗಳು, ಇಲ್ಲಿ ಆದಿ ಪದದಿಂದ ಉಪಾಯಾನುಷ್ಠಾನಾನಂತರ ಬುದ್ಧಿಪೂರ್ವಕ ಅಕೃತ್ಯಕರಣ ಕೃತ್ಯಾಕರಣರೂಪ ಅಪರಾಧಗಳಿಲ್ಲದೇ ಇರೋಣವೂ ಸಹ ಹೇಳಲ್ಪಟ್ಟಿತು. ಇದು ಸಾರಾಸ್ವಾದಿನಿಯವರ ಅಭಿಪ್ರಾಯವು, ಸಾರದೀಪಿಕೆಯವರು ಆ ಭಗವಂತನ ಸಾಕ್ಷಾತ್ಕಾರದಿಂದುಂಟಾಗುವ ಆನಂದವೂ ನಿರಪರಾಧ ಕೈಂಕರ್ಯವೂ, ಹೇಳಲ್ಪಟ್ಟಿತೆಂದು ಅಭಿಪ್ರಾಯಪಡುವರು; ಉಂಡಾಯಿರುಕ್ಕ - ಪ್ರಾಪ್ತವಾಗಿರುವಾಗ, ಶಿಲರ್ಕ್ಕು-ಇನ್ನು ಕೆಲವರಿಗೆ, ಇವೈ ಯನ್ರಿಕ್ಕೇ ಒೞಿಗೈಕ್ಕು - ಇವುಗಳಿಲ್ಲದೇ ಇರುವದಕ್ಕೂ ಎಂದರೆ ಭಗವತ್ಸಾಕ್ಷಾತ್ಕಾರ ಲಭಿಸದೇ ಇರುವದಕ್ಕೂ ಮತ್ತು ಸಾಧ್ಯೋಪಾಯಾನುಷ್ಠಾನವಾದನಂತರ ಬುದ್ಧಿಪೂರ್ವಕವಾದ ಅಕೃತ್ಯಕರಣ ಕೃತ್ಯಾಕರಣರೂಪ ಅಪರಾಧಗಳು ಸಂಘಟಿಸುವದಕ್ಕೂ ಕಾರಣ ಮೇನೆಂದರೆ- ಪ್ರಪತ್ತಿ ಕಾಲದಲ್ಲಿ ಫಲಸಙ್ಕಲ್ಪದಲ್ಲಿ, ವೈಷಮ್ಯಂ - ವ್ಯತ್ಯಾಸವು ಕೆಲವರು ಪ್ರಪದನಾನುಷ್ಠಾನಕಾಲದಲ್ಲೇ ಭಗವತ್ಸಾಕ್ಷಾತ್ಕಾರ ಉಂಟಾಗಬೇಕೆಂದೂ ಮತ್ತು ಪ್ರಾರಬ್ಧ ಕರ್ಮದ ಪಾಪಾಂಶವು ತೊಲಗಬೇಕೆಂದೂ ಸಙ್ಕಲ್ಪಿಸಿ ಮಾಡುತ್ತಾರೆ; ಆದುದರಿಂದ ಅವರಿಗೆ ಅಂತಹ ಫಲವು. ಇನ್ನು ಕೆಲವರು ಹಾಗೆ ಸಙ್ಕಲ್ಪಿಸದೇ ಪ್ರಪದನ ಮಾಡುತ್ತಾರೆ, ಅಂತಹವರಿಗೆ ಭಗವತ್ಸಾಕ್ಷಾತ್ಕಾರವು ಲಭಿಸದೇ ಇರಬಹುದು, ಮತ್ತು ಪ್ರಾರಬ್ಧ ಕರ್ಮದ ಪಾಪಾಂಶವ ನಾಶಿಸದೇ ಇರಬಹುದು ಎಂಬ ತಾತ್ಪರ್ಯವು. ಆದುದರಿಂದ ಪ್ರಾರಬ್ಧಸುಕೃತ ವಿಶೇಷ **ಮಾಗವುಮಾಮ್** - ಪ್ರಪದನಕಾಲದಲ್ಲಿ ಹಾಗೆ ಸಙ್ಕಲ್ಪಿಸದೆ ಪ್ರಪದನ ಮಾಡಿದವನಿಗೂ ಒಂದುವೇಳೆ ಭಗವತ್ಸಾಕ್ಷಾತ್ಕಾರವು ಲಭಿಸಬಹುದು, ಅದು

ಫಲಾಂಶಮ್ ಸಕೃತ್ ಪ್ರಪತ್ತಿಯಾಲೇ ಸಿದ್ಧಮಾನಾಲುಮ್ ಕೊಲಾದ ಅಂಶತ್ತೈ ಪ್ಪತ್ತ ಪಿನ್ಪು ತೀವ್ರ ಸಂವೇಗಮ್ ಪಿರಿನ್ದಾರ್ಕ್ಕು ಪುನಃ ಪ್ರಪತ್ತಿ ಪಣ್ಣುವುಮಾಮ್.

ಪ್ರಾರಬ್ಧ ಕರ್ಮದ ಸುಕೃತವಿಶೇಷದ ಫಲವಾಗಲೂ ಬಹುದು. ಹೀಗೆ ಹೇಳಿದುದು ಹಾಗೆ ಕೆಲವರಿಗೆ ಲಭಿಸದೇ ಇರುವದು **ಪ್ರಾರಬ್ಧ ದುಷ್ಕೃತ ವಿಶೇಷಮಾಗವುಮಾಮ್** ಎಂದು ಹೇಳುವದಕ್ಕೂ ಉಪಲಕ್ಷಣವಾಗಿ ಇಟ್ಟುಕೊಳ್ಳತಕ್ಕದ್ದು. ಹೀಗೆ ಕೆಲವರಿಗೆ ಭಗವತ್ಸಾಕ್ಷಾತ್ಕಾರ ಉಂಟಾಗುವದಕ್ಕೂ, ಬುದ್ಧಿ ಪೂರ್ವೋತ್ತರಾಘಾದಿಗಳಿಲ್ಲದಿರುವದಕ್ಕೂ, ಎರಡು ಕಾರಣಗಳನ್ನು ತಿಳಿಸಿದರು:—(೧) ಪ್ರಪದನಕಾಲದಲ್ಲಿ ಅವುಗಳಿಗಾಗಿ ಸಙ್ಕಲ್ಪಿಸಿರೋಣವೂ, (೨) ಹಾಗೆ ಸಙ್ಕಲ್ಪಿಸದೇ ಇದ್ದರೂ ಉಂಟಾದರೆ ಪ್ರಾರಬ್ಧ ಸುಕೃತವಿಶೇಷದ ಮೂಲಕವೂ ಎಂದು ಭಾವಿಸತಕ್ಕದ್ದು. ಆಳ್ವಾರುಗಳಲ್ಲಿ ಶ್ರೀ ನಮ್ಮಾಳ್ವಾರ್ರವರಿಗೆ ಸಾಕ್ಷಾತ್ಕಾರವೂ ಜನ್ಮಪ್ರಭೃತಿಯಿಂದಲೇ ಉಂಟು; ನಿತ್ಯಸೂರಿಗಳವತಾರವಾದುದರಿಂದ; ಮತ್ತು ಆರನೆಯ ಪತ್ತಿನಲ್ಲಿ ಶ್ರೀನಿವಾಸನಲ್ಲಿ "ಅಗಲಗಿಲ್ಲೇನ್" ಎಂಬ ಪಾಶುರದಲ್ಲಿ ಸಾಙ್ಗಪ್ರಪದನವನ್ನೂ ಅನುಷ್ಠಿಸಿರುತ್ತಾರೆ, ಪರಮಾತ್ಮ ಸಾಕ್ಷಾತ್ಕಾರವನ್ನೂ ಸಙ್ಕಲ್ಪಿಸಿರುವದರಿಂದ ಅದೂ ಲಭಿಸಿರುತ್ತದೆ. ಅಕ್ರೂರರಿಗೆ ಅವಗಾಹನ ಕಾಲದಲ್ಲಿ ಉಂಟಾದ ಸಾಕ್ಷಾತ್ಕಾರವು ಈ ಎರಡು ಕಾರಣಗಳಿಂದಲೂ ಉಂಟಾಗಿರಬಹುದು; ಶ್ರೀ ವಿದುರರಿಗೆ ಪ್ರಾರಬ್ಧ ಕರ್ಮ ಸುಕೃತಮೂಲಕ ಉಂಟಾಗಿರಬಹುದು.

ಪ್ರಪದನಕಾಲದಲ್ಲಿ ಸಙ್ಕಲ್ಪಿಸದೇ ಇರುವದರಿಂದ ಪರಮಾತ್ಮಸಾಕ್ಷಾತ್ಕಾರವಿಲ್ಲದಿರೋಣವೂ, ಬುದ್ಧಿಪೂರ್ವೋತ್ತರಾಘದ ಸಂಘಟನೆಯೂ ಉಂಟಾಗಬಹುದೆಂದು ಹೇಳಲ್ಪಟ್ಟಿತು. ಆದರೆ ಮೋಕ್ಷಕ್ಕಾಗಿ ಪ್ರಪದನವು ಸಕೃದನುಷ್ಠೇಯವೆಂದು ಹೇಳಿರುವದರಿಂದ, ಭಗವತ್ಸಾಕ್ಷಾತ್ಕಾರವೂ, ಬುದ್ಧಿಪೂರ್ವೋತ್ತರಾಘವಿಲ್ಲದಿರೋಣವೂ ಉಂಟಾಗುವಹಾಗೆ ಮಾಡಿಕೊಳ್ಳುವದಕ್ಕೆ ಏನಾದರೂ ಉಪಾಯ ಉಂಟೋ? ಆಗ ಬುದ್ಧಿಯಿಲ್ಲದೆ ಸಙ್ಕಲ್ಪಿಸಲಿಲ್ಲವು ಆಗ ಸಙ್ಕಲ್ಪಿಸದೇ ನಿಂತು ಹೋದವು ಲಭಿಸುವ ಹಾಗೆ ಮಾಡಿಕೊಳ್ಳಲು ಏನಾದರೂ ಸಾಧನ ಉಂಟೋ? ಎಂಬ ಪ್ರಶ್ನೆಯು ಪ್ರಾಸಙ್ಗಿಕವಾಗಿ ಉಂಟಾಗುತ್ತದೆ. ಆಗಿನ ಪ್ರಪದನಾನುಷ್ಠಾನವು ಮೋಕ್ಷಪ್ರಾಪ್ತಿಗಾಗಿಯಾದುದರಿಂದ ಅದು ಸಕೃದನುಷ್ಠೇಯವೇ ಆದುದರಿಂದ ಆಗ ಪ್ರಾರ್ಥಿಸದೇ ಇರುವ ಅಂಶಗಳಿಗಾಗಿ ಪುನಃ ಪ್ರಪದನವನ್ನು ಅನುಷ್ಠಿಸಬಹುದೆಂದೂ ಇದರಿಂದ ಮೊದಲನುಷ್ಠಿಸಿದ ಪ್ರಪತ್ತಿಗೆ ಏನೊಂದೂ ತೊಂದರೆಯಿಲ್ಲವೆಂದೂ ಉಪದೇಶಿಸುತ್ತಾರೆ. ಮುನ್ಬು - ಮೊದಲು, ಮೊದಲು ಕೋ

ಅಥ ದೃಷ್ಟಾರ್ಥ ಪ್ರಪತ್ತಿ ವೈಫಲ್ಯ ದರ್ಶನ ಪ್ರಯುಕ್ತಾಂ ವಿಶ್ವಾಸ ಶಙ್ಕಾಂ ವಾರಯತಿ

ವೇರೇ ಶಿಲರ್ ದೃಷ್ಟಾರ್ಥ ಪ್ರಪತ್ತಿಗಳಿಲೆ ಶಿಲ ಫಲಿಯಾದೊಳಿಯ ಕ್ಕಣ್ಡು ಸಕಲ ಫಲಸಾಧನಮಾನ ಪ್ರಪತ್ತಿಯಿಲೇ ಅತಿಶಙ್ಕೈ ಪಣ್ಣ ವಾರ್ಗಳ್, ಅವರ್ಗಳ್ಕೈಯುಂ ಮುಲ್ಲಾದ ಶಾಸ್ತ್ರಾರ್ಥಜ್ಞರಿರ್ಪಡಿಗಳಿಲೇ ಕರ್ಮ ಕರ್ತೃ ಸಾಧನವೈಗುಣ್ಯತ್ತೈಯಿಟ್ಟು ತೆಳಿವಿಕ್ಕ ವೇಣುಮ್, ಇಜ್ಜ್ಗ

ಲಿನ ಫಲಾಂಶಮ್ - ಮೋಕ್ಷಾರ್ಥಿಯಾಗಿ ಪ್ರಾರ್ಥಿಸಿದ ಫಲಭಾಗವಾದ ಮುಕ್ತಿಯು, **ಪ್ರಪತ್ತಿಯಾಲೇ ಸಿದ್ಧಮಾನಾಲುಮ್** - ಆ ಪ್ರಪದನದಿಂದ ನಿಸ್ಸಂಶಯವಾಗಿ ಲಭಿಸುವದಾದರೂ, **ಕೊಳ್ಳಾದ ಅಂಶತ್ತೈ ಪ್ಪತ್ತ** - ಆಗ ಅಪೇಕ್ಷಿಸದೇ ಇರುವ ಭಾಗವನ್ನು ಕುರಿತು, **ತೀವ್ರ ಸಂವೇಗಮ್** - ತುಂಬಾ ಪರಿತಾಪವು, **ಪಿರನ್ದಾರ್ಕ್ಕು** - ಹುಟ್ಟಿದವರಿಗೆ, **ಪುನಃ ಪ್ರಪತ್ತಿ ಪಣ್ಣವುಮಾಮ್**- ಪುನಃ ಪ್ರಪತ್ತಿಯನ್ನು ಮಾಡಬಹುದು. ಮೋಕ್ಷಕ್ಕಾಗಿಯೇ ಪುನಃ ಶರಣಾಗತಿಯನ್ನು ಮಾಡುವದು ಯುಕ್ತವಲ್ಲವೇ ಎನ್ನಾ, ಪ್ರಾರಬ್ಧದ ಪಾಪಾಂಶವು ಕಳೆಯುವದಕ್ಕಾಗಿಯಾಗಲಿ, ಬುದ್ಧಿ ಪೂರ್ವಾಘ ಸಂಘಟನೆಯಿಂದ ಪರಿತಾಪ ಹುಟ್ಟಿ ಅದರ ಶಮನಕ್ಕಾಗಿ ಪ್ರಾಯಶ್ಚಿತ್ತರೂಪದಲ್ಲಿಯಾಗಲಿ ಪುನಃ ಶರಣಾಗತಿಯನ್ನು ಮಾಡಬಹುದೆಂಬ ಭಾವವು.

ಮುಂದೆ ದೃಷ್ಟ ಫಲಕ್ಕಾಗಿ ಮಾಡಿದ ಪ್ರಪತ್ತಿಯು ಫಲಿಸದಿರುವ ಪ್ರಯುಕ್ತ ಉಂಟಾಗುವ ಅವಿಶ್ವಾಸ ಶಙ್ಕಾನಿವೃತ್ತಿಯು.

ವೇರೇ ಶಿಲರ್ - ಇನ್ನು ಕೆಲವರು, **ದೃಷ್ಟಾರ್ಥ ಪ್ರಪತ್ತಿಗಳಿಲೇ**- ಪ್ರತ್ಯಕ್ಷಗಳಾದ ಪುರುಷಾರ್ಥಪ್ರಾಪ್ತಿಗಾಗಿ ಮಾಡಿದ ಪ್ರಪತ್ತಿಗಳಲ್ಲಿ, **ಶಿಲ** - ಕೆಲವು ಪುರುಷಾರ್ಥಗಳು, **ಫಲಿಯಾದೊಳಿಯಕ್ಕಣ್ಡು** - ಫಲಿಸದೇ ಇರುವದನ್ನು ಕಂಡು, **ಸಕಲ ಫಲಸಾಧನಮಾನ ಪ್ರಪತ್ತಿಯಿಲೆ** - ಸರಿಯಾಗಿ ಅನುಷ್ಠಿಸಲ್ಪಟ್ಟರೆ ಸಕಲ ಫಲಗಳನ್ನೂ ಸಾಧಿಸಿಕೊಡುವ ಎಂದರೆ ಚತುರ್ವಿಧ ಪುರುಷಾರ್ಥಗಳನ್ನೂ ಸಾಧಿಸಿಕೊಡುವ ಪ್ರಪತ್ತಿಯ ವಿಷಯದಲ್ಲಿ, **ಅತಿಶಙ್ಕೈ** - ಸಾಧ್ಯೋಪಾಯವಾಗಲು ಅರ್ಹವಲ್ಲವೆಂಬ ಹೆಚ್ಚಿನ ಶಂಕೆ ಯನ್ನು, **ಪಣ್ಣುವಾರ್ಗಳ್** - ಮಾಡುವರು; ಕೆಲವರು ಐಶ್ವರ್ಯ ಸುತಗೇಹಪ್ರಾಪ್ತಿಗಾಗಿ ಪ್ರಪತ್ತಿಯನ್ನನುಷ್ಠಿಸಬಹುದು ; ಅವು ಅವರಿಗೆ ಲಭಿಸದೇ ಹೋದುದರಿಂದ ಅದರಲ್ಲಿ ವಿಶ್ವಾಸವನ್ನು ತೊರೆಯಬಹುದು, ಇದರಿಂದ ಪ್ರಪತ್ತಿಯು ಸರಿಯಾದ

ಕರ್ಮವೈಗುಣ್ಯವಾವದು? ಮಹಾವಿಶ್ವಾಸಾದಿಗಳ್ ಕುರೈಗೈ. ಕರ್ತೃವೈಗುಣ್ಯವಾವದು? ಪ್ರಪತ್ತಿಕ್ಕು ಚೊನ್ನ ಅಧಿಕಾರವನ್ ನ್ಯೂನವಾಗೈ ಸಾಧನವೈಗುಣ್ಯವಾವದು? ಯಥಾಶಾಸ್ತ್ರಮ್ ಪ್ರಪತ್ತ್ಯನುಷ್ಠಾನತ್ತುಕ್ಕು

ಸಾಧ್ಯೋಪಾಯವಲ್ಲವೆಂದು ಭಾವಿಸುವದು ಸರಿಯಲ್ಲವು; ಏಕೆಂದರೆ ಪ್ರಪತ್ತಿಯು ದೃಷ್ಟಾದೃಷ್ಟಗಳಾದ ಚತುರ್ವಿಧ ಪುರುಷಾರ್ಥಗಳನ್ನೂ ಸಾಧಿಸಿಕೊಡುವ ಮಾಹಾತ್ಮ್ಯವುಳ್ಳದು, ಶರಣಾಗತನ ಕೋರಿಕೆಯನ್ನು ಸಲ್ಲಿಸುವದಕ್ಕಾಗಿಯೇ ಸರ್ವೇಶ್ವರನು ಬದ್ಧಕಂಕಣನಾಗಿದ್ದಾನೆ. ಹೀಗಿರುವಾಗ ಪ್ರಪತ್ತಿಯು ದೃಷ್ಟಾರ್ಥವನ್ನು ಸಾಧಿಸಿ ಕೊಡದೇ ಹೋದರೆ, ಅದನ್ನನುಷ್ಠಿಸುವ ಕ್ರಮದಲ್ಲಿ ವೈಗುಣ್ಯ ಉಂಟೆಂದು ಭಾವಿಸತಕ್ಕದ್ದು ನ್ಯಾಯವೇ ವಿನಾ, ಅದು ಪ್ರಬಲವಾದ ಉಪಾಯವಾಗಲೇನೂ ಸಂದೇಹವಿಲ್ಲವೆಂದು ಉಪದೇಶಿಸುತ್ತಾರೆ. ಪ್ರಪತ್ತಿಯು ಫಲಿಸದೇ ಇರಲು ಮೂರರ ವೈಗುಣ್ಯ ಮೂಲಕವೆಂದು ಅಂತಹ ಪೂರ್ವಪಕ್ಷಿಗಳಿಗೆ ತಿಳಿಸಿ, ಅವರ ಅಂತಹ ಅಜ್ಞಾನವು ತೊಲಗುವಹಾಗೆ ಮಾಡತಕ್ಕದ್ದೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. ಅವರ್ಗಳೈಯುಮ್ - ಅಂತಹ, ಶಾಸ್ತ್ರಜ್ಞಾನವಿಲ್ಲದೆ ಭ್ರಮೆಯುಳ್ಳವರನ್ನು ಕೂಡ, ಅಲ್ಲಾದ ಶಾಸ್ತ್ರಾರ್ಥಜ್ಞರ್ಕಳ್ಪಡಿಯೇ- ಇತರ ಕಾಮ್ಯಶಾಸ್ತ್ರಗಳಲ್ಲಿ ಕಾರೀರೀ ಮೊದಲಾದ ಯಾಗಗಳಲ್ಲಿರುವ, ಪ್ರಕಾರ ಕರ್ಮವೈಗುಣ್ಯವೇನು, ಕರ್ತೃ ವೈಗುಣ್ಯವೇನು, ಸಾಧನ ವೈಗುಣ್ಯವೇನು, ಯಿಟ್ಟು- ವೆಳಿಯಿಟ್ಟು, ಇವುಗಳ ಮೂಲಕವಾಗಿ ಪ್ರಕಾಶಪಡಿಸಿ, ತೆಳಿವಿಕ್ಕವೇಣುಮ್ - ಸರಿಯಾದ ಜ್ಞಾನವುಂಟಾಗುವಹಾಗೆ ಮಾಡಬೇಕು. ಕಾಮ್ಯ ಭಾಗದಲ್ಲಿ ಶಾಸ್ತ್ರವು "ವೃಷ್ಟಿಕಾಮಃ ಕಾರೀರ್ಯಾಯಜೇತ" ಮಳೆ ಬೇಕೆಂಬಪೇಕ್ಷೆಯುಳ್ಳವನು ಕಾರೀರೀಯಾಗವನ್ನು ಮಾಡಬೇಕೆಂಬ ವಿಧಿ ಇರುತ್ತದೆ. ಈ ಯಜ್ಞದಲ್ಲಿ ಕರ್ಮ ಕರ್ತೃ ಸಾಧನ ವೈಗುಣ್ಯಗಳಿಲ್ಲವಿದ್ದರೆ ಯಜ್ಞಪೂರ್ತಿಯಲ್ಲಿ ಮಳೆಯು ಬರುತ್ತದೆ. ಇಲ್ಲವಾದರೆ ಯಜ್ಞಾಂಗಗಳಲ್ಲಿ ಏನಾದರೂ ನ್ಯೂನತೆಯುಂಟಾದರೆ ಇಲ್ಲವು. ಆಗ ಕಾರೀರೀ ಯಜ್ಞವು ಸತ್ಯವಾದುದಲ್ಲವೆಂಬ ಭಾವವು ಹೇಗೆ ಉಂಟಾಗುವದಿಲ್ಲವೋ, ಹಾಗೆಯೇ ಪ್ರಪತ್ತಿಯೂ ಸಹ ದೃಷ್ಟಾರ್ಥದಲ್ಲಿ ಪ್ರಪತ್ತಿಯು ಫಲಿಸದೇ ಹೋದರೆ ಕರ್ಮ ಕರ್ತೃ ಸಾಧನ ವೈಗುಣ್ಯಗಳಿಂದ ಹಾಗಾಯಿತೆಂದು ಭಾವಿಸತಕ್ಕದ್ದೇ ವಿನಾ, ಅಂತಹ ದೋಷಗಳಿಲ್ಲವಿದ್ದರೆ ಪ್ರಪತ್ತಿಯು ಅಧಿಕಾರಿಯ ದೃಷ್ಟಾರ್ಥವನ್ನೂ ಹಾಗೆ ಅದೃಷ್ಟಾರ್ಥವನ್ನೂ ಸಹ ಸಾಧಿಸಿಕೊಡುವದರಲ್ಲಿ ಈಷದಪಿ ಸಂದೇಹವಿಲ್ಲವೆಂಬ ಭಾವವು ಕಾಮ್ಯ ಕರ್ಮಗಳಲ್ಲಿ ಸಾಙ್ಗವಾಗಿ ಯಥಾವಿಧಿ ಅನುಷ್ಠಾನದಿಂದ ಫಲಸಿದ್ಧಿಯುಂಟೆಂದು ಹೇಗೆ ನಂಬಿಕೆಯೋ, ಹಾಗೆಯೇ ಪ್ರಪದನದಲ್ಲೂ ಎಂದು

ಮೂಲಮಾನ ಸದುಪದೇಶಾದಿಗಳ್ ನಿಕ್ಕೇ ಯೊಳಿಗೈ, ಇವ್ವೈಗುಣ್ಯಙ್ಗಳ್ ನಿಕ್ಕೇ ಪ್ರಪತ್ತಿ ಪಣ್ಣಿನ ಪೋದು ತತ್ಫಲಙ್ಗಳಾಗಕ್ಕೋಲಿನ ದೃಷ್ಟಙ್ಗಳುಮ್ ಸಿದ್ಧಿಕ್ಕಕ್ಕಾಣಾನಿನ್ರೋಮ್.

ಪೂರ್ಣ ನಂಬಿಕೆ ಇರತಕ್ಕದ್ದೆಂಬ ಭಾವವು ಮುಂದೆ **ಕರ್ಮ** ಕರ್ತೃಸಾಧನ ವೈಗುಣ್ಯ ದೋಷಗಳು ಬಾರವುವೆಂಬುದನ್ನು ತಿಳಿಸುತ್ತಾರೆ. ಪ್ರಪತ್ತಿಯು ಸರ್ವಾಧಿಕಾರವಾದುದು. ಹೀಗಿರುವಲ್ಲಿ ಅವಕ್ಕೆ ಕರ್ತೃವೈಗುಣ್ಯವೆಂದರೇನು? ಪ್ರಪದನವು ಬಾವ ಮಾನಸಿಕ ಬುದ್ಧಿ ವಿಶೇಷವೆಂದು ಹೇಳಲ್ಪಟ್ಟಿರುತ್ತದೆ, ಹಾಗಾದರೆ ಅವಕ್ಕೆ ಕರ್ಮವೈಗುಣ್ಯವುಂಟೋ? ಹಾಗೆಯೇ ಅದಕ್ಕೆ ಸಾಧನವೈಗುಣ್ಯವೆಂದರೇನು? ಎಂದರೆ, ಅವು ಮೂರನ್ನು ನಿರೂಪಿಸುತ್ತಾರೆ. ಇಙ್ಗು - ಈ ಸಂದರ್ಭದಲ್ಲಿ, **ಕರ್ಮವೈಗುಣ್ಯಮಾವದು** - ಎಂದರೇನು? ಮಹಾ ವಿಶ್ವಾಸವೇ, ಮೊದಲಾದವುಗಳು. **ಕುರೈಗೈ** - ನ್ಯೂನವಾಗಿರೋಣವು ಎಂದರೆ ಮಹಾ ವಿಶ್ವಾಸರೂಪವಾದ ಅಙ್ಗವೇ ಇಲ್ಲದುದರಿಂದ ಪ್ರಪದನವು ಫಲಿಸಲಿಲ್ಲವೆಂದು ಹೇಳತಕ್ಕದ್ದು; ಇಲ್ಲಿ ಆದಿಶಬ್ದದಿಂದ ಕಾರ್ಪಣ್ಯ ಮೊದಲಾದ ಅಙ್ಗಗಳ ನ್ಯೂನತೆಯೂ ಹೇಳಲ್ಪಟ್ಟಿತು. ಮುಂದೆ ಅಧಿಕಾರಿಯಲ್ಲಿ ನ್ಯೂನತೆ ಎಂಥಾದ್ದೆಂಬುದನ್ನು ತಿಳಿಸುತ್ತಾರೆ. **ಕರ್ತೃವೈಗುಣ್ಯವೆಂದರೇನು? ಪ್ರಪತ್ತಿಕ್ಕು ಮುನ್** - ಪ್ರಪತ್ತಿಗೆ ಹಿಂದೆ ಉಪಪಾದಿಸಿದ ಅಧಿಕಾರವು, **ನ್ಯೂನಮಾಗೈ** - ಇಲ್ಲದಿರೋಣವು ತಾನು ಅನನ್ಯಗತಿಕನಾದುದರಿಂದಲ್ಲವೇ ಪ್ರಪತ್ತಿಗೆ ಯೋಗ್ಯನು, ಹಾಗಲ್ಲದೆ ಶರಣಾಗತಿಯನ್ನು ಮಾಡಿಬಿಟ್ಟು ಉಪಾಯಾಂತರವನ್ನೂ ಅವಲಂಬಿಸಿದರೆ ಶರಣಾಗತಿಯು ಫಲಿಸುವದಿಲ್ಲವು. **ಸಾಧನವೈಗುಣ್ಯವೆಂದರೇನು? ಯಥಾಶಾಸ್ತ್ರಮ್ ಪ್ರಪತ್ತ್ಯನುಷ್ಠಾನತ್ತುಕ್ಕು** - ಶಾಸ್ತ್ರದಲ್ಲಿ ಹೇಗೆ ವಿಧಿಸಿದಿಯೋ ಹಾಗೆ ಪ್ರಪತ್ತಿಯನ್ನು ಅನುಷ್ಠಿಸುವದಕ್ಕೆ, **ಮೂಲಮಾನ** - ಕಾರಣವಾದ, **ಉಪದೇಶಾದಿಗಳ್ ನಿಕ್ಕೇ ಯೊಳಿಗೈ** - ಸದ್ಗುರುವಿನಲ್ಲಿರಬೇಕಾದ ಗುಣಗಳೆಲ್ಲ ಸಂಪೂರ್ಣವಾಗಿ ಇರುವ ಗುರುವಿನ ಲಾಭವೂ ಅಂತವರಿಂದ ಪ್ರಾಪ್ತವಾಗುವ, ಶರಣಾಗತಿ ಶಾಸ್ತ್ರವಿಷಯವಾದ ಉಪದೇಶ ಮುಂತಾದವುಗಳಿಲ್ಲದೇ ಹೋಗೋಣವೂ, ಇಂತಹ ದೋಷಗಳಿಲ್ಲದಹಾಗೆ ದೃಷ್ಟಾರ್ಥಕ್ಕೇಯಾಗಲಿ, ಅದೃಷ್ಟಾರ್ಥಕ್ಕೇಯಾಗಲಿ ಅನುಷ್ಠಿಸಿದ ಪ್ರಪತ್ತಿಯು ಎಂದಿಗೂ ವಿಫಲವಾಗುವದಿಲ್ಲವೆಂದು ಉಪದೇಶಿಸುತ್ತಾರೆ. **ಇವ್ವೈಗುಣ್ಯಙ್ಗಳ್ ನಿಕ್ಕೇ** - ಈ ಮೂರು ವಿಧ ವೈಗುಣ್ಯಗಳೂ ಇಲ್ಲದಹಾಗೆ, **ಪ್ರಪತ್ತಿ ಪಣ್ಣಿನ ಪೋದು** - ಪ್ರಪತ್ತಿಯನ್ನನುಷ್ಠಿಸಿದಾಗ, **ತತ್ಫಲಙ್ಗಳಾಗ** - ಆ ಪ್ರಪತ್ತಿಯ ಫಲಗಳಾಗಿ, **ಕೋಲಿನ** - ಅಪೇಕ್ಷಿಸಿದ, **ದೃಷ್ಟಙ್ಗಳುಮ್** - ಪ್ರತ್ಯಕ್ಷ

ಪ್ರಪತ್ತಿರ್ಭಕ್ತ್ಯಙ್ಗಏವ, ನತು ಅಙ್ಗೀ ಇತಿಪಕ್ಷಸ್ಯನಿರಾಸಃ

ವೇರೇ ಶಿಲರ್ ಪ್ರಪತ್ತಿಶಾಸ್ತ್ರತ್ತೋಡುಮ್ ಶಾಸ್ತ್ರಾಂತರಙ್ಗಳೋಡುಮ್ ವಾಶಿಯರ ಸರ್ವಶಾಸ್ತ್ರಙ್ಗಳುಕ್ಕುಮ್ ಪ್ರವರ್ತಕರಾನ ವ್ಯಾಸಾ

ವಾದ ಪುರುಷಾರ್ಥಗಳೂ ಕೂಡ, ಸಿದ್ಧಿಕ್ಕ ಕಾಣಾನಿನ್ರೋಮ್ - ಸಿದ್ಧಿಸಿರುವದನ್ನು ಕಂಡಿರುವೆವು. ದ್ರೌಪದಿಯ ಮಾನಭಂಗ ಸಮಯದಲ್ಲಿ ದೃಷ್ಟಫಲವಾಗಿ ಸಿದ್ಧಿಸಿದ ಹಾಗೂ, ವಿಭೀಷಣನಿಗೂ ಕುಚೇಲನಿಗೂ ದೃಷ್ಟಫಲವು ಅಪೇಕ್ಷಿತವಲ್ಲದಿದ್ದರೂ ಸಿದ್ಧಿಸಿದಹಾಗೂ, ಧ್ರುವನಿಗೂ ಗಜೇಂದ್ರನಿಗೂ ಸಿದ್ಧಿಸಿದಹಾಗೂ ಪ್ರತ್ಯಕ್ಷವಾಗಿಯೇ ಸಿದ್ಧಿಸುವದೆಂಬ ಭಾವವು. ಆದುದರಿಂದ ಪ್ರಪತ್ತಿಯು ಸರ್ವಾಭೀಷ್ಟಸಾಧಕವಾದ ಸರ್ವಾಧಿಕಾರವಾದ ಸಾಧ್ಯೋಪಾಯವಾಗುವದರಲ್ಲಿ ಸಂದೇಹವಿಲ್ಲವು.

ಮುಂದೆ ಕೆಲವರು ಮೋಕ್ಷೋಪಾಯವು "**ತಮೇವಂ ವಿದ್ವಾನ್ ಅಮೃತ ಇಹ ಭವತಿ, ನಾನ್ಯಃ ಪನ್ಥಾ ಅಯನಾಯವಿದ್ಯತೇ**" ಎಂಬುದನ್ನು ತಮಗೆ ಪ್ರಮಾಣವಾಗಿ ಮಾಡಿಕೊಂಡು, ಭಕ್ತ್ಯುಪಾಯ ಮಾತ್ರವೇ ಮೋಕ್ಷಸಾಧಕವು, ಪ್ರಪತ್ತಿಯಾದರೋ "**ಮಾಮೇವ ಯೇ ಪ್ರಪದ್ಯಂತೇ**" ಎಂಬ (ಗೀ. ೭ ೧೪) ಗೀತಾ ಶ್ಲೋಕದಲ್ಲಿ ಹೇಳಿರುವಹಾಗೆ ಅಙ್ಗಮಾತ್ರವೇ ಎಂದು ಭಾವಿಸುವರು. ಈ ಅಭಿಪ್ರಾಯವನ್ನು ಪ್ರಮಾಣಗಳ ಪೂರ್ವಕವಾಗಿ ಖಂಡಿಸುತ್ತಾರೆ.

ಪ್ರಪತ್ತಿಯು ಸ್ವತಃ ಅಙ್ಗಿಯಾಗಿ ಉಪಾಯವಲ್ಲವು, ಅಙ್ಗಿಯಾದ ಉಪಾಸನಕ್ಕೆ ಅಙ್ಗಮಾತ್ರವೆಂಬ ವಾದ ನಿರಾಸವು

ಮೊದಲು ಪೂರ್ವಪಕ್ಷವನ್ನು ಅನುವಾದಮಾಡಿ ಅನಂತರ ಖಂಡಿಸುತ್ತಾರೆ **ವೇರೇ ಶಿಲರ್**- ಇನ್ನು ಬೇರೆ ಕೆಲವರು, **ಪ್ರಪತ್ತಿಶಾಸ್ತ್ರತ್ತೋಡುಮ್** - ಪ್ರಪತ್ತಿಶಾಸ್ತ್ರದೊಂದಿಗೆಯೂ, **ಶಾಸ್ತ್ರಾಂತರಙ್ಗಳೋಡುಮ್** - ಇನ್ನು ಬೇರೆ ಶಾಸ್ತ್ರಗಳೊಂದಿಗೆಯೂ, **ವಾಶಿಯರ** - ಏನೊಂದೂ ವ್ಯತ್ಯಾಸವಿಲ್ಲದಹಾಗೆ, **ಸರ್ವಶಾಸ್ತ್ರಾರ್ಥಙ್ಗಳುಕ್ಕುಮ್**-ಸಮಸ್ತ ಶಾಸ್ತ್ರಾರ್ಥಗಳಿಗೂ ಪ್ರವರ್ತಕರಾದ, ವ್ಯಾಸರೇ ಮೊದಲಾದವರು, ಆದಿ ಶಬ್ದದಿಂದ ಪರಾಶರಾದಿಗಳು ಹೇಳಲ್ಪಟ್ಟರು, ಪೂರ್ವಪಕ್ಷಿಯು ತನಗೆ ಸಹಾಯವೆಂದು ಭಾವಿಸಿ ಶ್ರೀ ವ್ಯಾಸೋಕ್ತಿಯನ್ನು ಉದಾಹರಿಸುತ್ತಾರೆ; ಶ್ರೀ ವ್ಯಾಸರಿಗಿಂತ ಶಾಸ್ತ್ರಜ್ಞರೂ, ಜ್ಞಾನಿಯೂ ದೊರೆಯಲಾರರು, ಆದುದರಿಂದ ಅವರ ದಿವ್ಯಸೂಕ್ತಿಯನ್ನು ಪ್ರಮಾಣವಾಗಿ ಉದಾಹರಿಸುವರು

ದಿಗಳ್ (೧) "ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃ ಪುನಃ ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಸ್ಸದಾ" ಎನ್ರುವರ್, (೨) "ಹರಿರೇಕಸ್ಸದಾ ಧ್ಯೇಯೋ ಭವದ್ಭಿಸ್ಸತ್ತ್ವ ಸಂಸ್ಥಿತೈಃ" (೩) "ಸ್ಮರ್ತವ್ಯಸ್ಸತತಂ ವಿಷ್ಣುಃ" ಎನ್ರುವರ್, ಇಪ್ಪಡಿ ನಿಷ್ಕರ್ಷಿಯಾನಿರ್ಕ ಸಕೃತ್ಪ್ರಪತ್ತಿಮಾತ್ರಮೇ ಮೋಕ್ಷಸಾಧನಮಾಗಕ್ಕೂಡುಮೋ? (೪) "ಮಾಮೇವ

ತಮ್ಮ ವಾದಕ್ಕೆ ಬಲವೆಂದು ಭಾವಿಸಿ ಹೇಳುತ್ತಾರೆ (೧) "**ಸರ್ವ ಶಾಸ್ತ್ರಾಣಿ** - ಸಮಸ್ತ ಶಾಸ್ತ್ರಗಳನ್ನೂ, **ಆಲೋಡ್ಯ** - ಚನ್ನಾಗಿ ವಿಮರ್ಶಿಸಿ ನೋಡಿ, **ಪುನಃ ಪುನಃ** - ಪೂರ್ವಾಪರ ವಿರೋಧಗಳೂ ಯಾವ ಉಂಟಾಗದೇ ಇರುವದಕ್ಕಾಗಿ, ಅವುಗಳನ್ನು ಪುನಃ ಪುನಃ, **ವಿಚಾರ್ಯ** - ವಿವೇಕೋತ್ಥಜ್ಞಾನದಿಂದ ವಿಚಾರಮಾಡಿ, **ಇದಮೇಕಂ ಸುನಿಷ್ಪನ್ನಂ** - ಇದೊಂದೇ ಸರಿ ಎಂದು ಚನ್ನಾಗಿ ನಿಶ್ಚಯಿಸಲ್ಪಟ್ಟಿತು, ಏನೆಂಪರೆ, **ಧ್ಯೇಯೋ ನಾರಾಯಣಸ್ಸದಾ** - ಮುಕ್ತಿಗೆ ಮುಖ್ಯವಾದ ಉಪಾಯಕ್ಕಾಗಿ ಶ್ರೀಮನ್ನಾರಾಯಣನು ಯಾವಾಗಲೂ ಧ್ಯಾನಿಸತಕ್ಕವನು, ಉಪಾಸಿಸಲ್ಪಡತಕ್ಕವನೆಂಬ ಭಾವವು." **ಎನ್ರುವರ್** - ಎಂಬದಾಗಿಯೂ, (೨) "**ಸತ್ತ್ವ ಸಂಸ್ಥಿತೈಃ** - ಸತ್ತ್ವಮಾರ್ಗದಲ್ಲಿ ಸದಾಚಾರ್ಯದಿಂದ ಸಪ್ರತಿಷ್ಠಿತರಾಗಿರುವ, **ಭವದ್ಭಿಃ** - ನಿಮ್ಮಗಳಿಂದ, **ಶ್ರೀಹರಿಯೇ, ಏಕಃ** - ಜಗತ್ಕಾರಣನಾಗಿಯೂ ಉಪಾಸ್ಯನಾಗಿ ಮೋಕ್ಷಪ್ರದನಾಗಿಯೂ ಆತನೊಬ್ಬನೇ, **ಸದಾ** - ಯಾವಾಗಲೂ, **ಧ್ಯೇಯಃ** - ಉಪಾಸ್ಯನು," **ಎನ್ರುವರ್** - ಎಂಬದಾಗಿಯೂ (೩) "ವಿಷ್ಣುವು, **ಸತತಂ** - ಯಾವಾಗಲೂ, **ಸ್ಮರ್ತವ್ಯಃ** ಸ್ಮರಿಸಲು ಯೋಗ್ಯನು." **ಎನ್ರುವರ್** - ಎಂಬದಾಗಿಯೂ, **ಇಪ್ಪಡಿ ನಿಷ್ಕರ್ಷಿಯಾನಿರ್ಕ** - ಹೀಗೆ ವ್ಯಾಸರು ನಿಷ್ಕರ್ಷಿಸಿ ಹೇಳಿರುವಾಗ, **ಸಕೃತ್ಪ್ರಪತ್ತಿಮಾತ್ರಮೇ** - ಒಂದು ಸಲ ಮಾಡಿದ ಪ್ರಪತ್ತಿ ಮಾತ್ರವೇ, **ಮೋಕ್ಷಸಾಧನಮಾಗಕ್ಕೂಡುಮೋ?** - ಮೋಕ್ಷಕ್ಕೆ ಸಾಧನವಾಗಲು ಸಾಧ್ಯವೋ? ಪ್ರಪತ್ತಿಯು ಅಙ್ಗಮಾತ್ರವೇ ಎಂದು ಭಾವಿಸಿ, ಅಙ್ಗವೇ ಎಲ್ಲಿಯಾದರೂ ಫಲವನ್ನು ಸಾಧಿಸೀತೋ? ಅಙ್ಗಿಯು ಸಾಧಿಸಬಹುದು ಎಂಬ ತಾತ್ಪರ್ಯವು. ಪ್ರಪತ್ತಿಯು ಅಙ್ಗವೇ ಸರಿ ಎಂಬುದಕ್ಕೆ ಗೀತಾಪ್ರಮಾಣವನ್ನು ಉದಾಹರಿಸುತ್ತಾರೆ; ಆದರೆ ಚರಮಶ್ಲೋಕದಲ್ಲಿ ಪ್ರಪತ್ತಿಯನ್ನು ಅಙ್ಗಿಯನ್ನಾಗಿಯೂ, ಉದಾಹರಿಸಿರುತ್ತದೆಯಲ್ಲಾ ಎಂಬಾಕ್ಷೇಪ ಬಂದೀತೆಂದು ಭಾವಿಸಿ, ಅದನ್ನೂ ಕೂಡ ಅಙ್ಗವಾಗಿಯೇ ಭಾವಿಸತಕ್ಕದ್ದೇ

---

(೧) ಭಾರ. ಅನು. ೧೫, ೩೪, (೨) ಹರಿವಂಶ. ೧೩೨. ೫.
(೩) ಹರಿವಂಶ. ೧೩೨. ೧೪ (೪) ಗೀ. ೭. ೧೪.

ಯೇ ಪ್ರಪದ್ಯನ್ತೇ” ಇತ್ಯಾದಿಗಳ್ ಅಙ್ಗ ಪ್ರಪತ್ತಿ ವಿಷಯಙ್ಗಳಾನಾರ್ಪ್ಪೋಲೆ, ಚರಮಶ್ಲೋಕಾದಿಗಳುಮ್ ಸಪರಿಕರ ಪ್ರಪತ್ತಿಯೈ ಭಕ್ತ್ಯಙ್ಗಮಾಗ ವಿಧಿಕ್ಕಿರನವಾಗ ವೇಣ್ಡಾವೋ ವೆನ್ರು ಶೊಲ್ಲುವರ್‌ಗಳ್. ಇದುವು

ನ್ಯಾಯುವೆಂದು ಪೂರ್ವಪಕ್ಷಿಯು ಹೇಳುತ್ತಾರೆ. “ಮಾಮೇವಯೇ ಪ್ರಪದ್ಯನ್ತೇ- “ನನ್ನೊಬ್ಬನನ್ನು ಮಾತ್ರವೇ ಕುರಿತು ಯಾರು ಪ್ರಪತ್ತಿಯನ್ನನುಷ್ಠಿಸುವರೋ ?” **ಇತ್ಯಾದಿಗಳ್** - ಇವೇ ಮೊದಲಾದ ಪ್ರಮಾಣಗಳು, **ಅಙ್ಗಪ್ರಪತ್ತಿ ವಿಷಯಙ್ಗಳಾನಾರ್ಪ್ಪೋಲೇ** - ಉಪಾಸನಕ್ಕೆ ಅಙ್ಗವಾದ ಪ್ರಪತ್ತಿ ಹೇಗೋಹಾಗೆ, ಗೀತಾ ೧೮ನೇ ಅಧ್ಯಾಯದ ೬೬ನೆಯ ಶ್ಲೋಕವಾದ, **ಚರಮ ಶ್ಲೋಕಾದಿಗಳುಮ್** - “ಸರ್ವಧರ್ಮಾನ್” ಎಂಬ ಚರಮಶ್ಲೋಕವೂ, ಆದಿ ಪದದಿಂದ ಅದರಹಾಗೆಯೇ ಸ್ವತಂತ್ರ ಪ್ರಪತ್ತಿಯುಹಾಗೆ ತೋರುವ ಇತರ ಪ್ರಮಾಣಗಳೂ ಕೂಡ, **ಸಪರಿಕರ ಪ್ರಪತ್ತಿಯೈ** - ಅಙ್ಗಗಳಿಂದ ಕೂಡಿದ ಪ್ರಪತ್ತಿಯನ್ನು, **ಭಕ್ತ್ಯಙ್ಗಮಾಗ** - ಉಪಾಸನಕ್ಕೆ ಅಙ್ಗವಾಗಿ, **ವಿಧಿಕ್ಕಿರನವಾಗವೇಣ್ಡಾವೋ**-ವಿಧಿಸುತ್ತದೆ ಎಂದಾಗಬೇಡವೋ? ! **ಎನ್ರು ಶೊಲ್ಲುವರ್‌ಗಳ್** - ಎಂದು ಆಕ್ಷೇಪಿಸಿ ಹೇಳುವರು, “ಮಾಮೇವ ಯೇ ಪ್ರಪದ್ಯಂತೇ” ಎಂಬ ಪೂರ್ಣಶ್ಲೋಕವು ಯಾವುದೆಂದರೆ.

ದೈವೀ ಹ್ಯೇಷಾಗುಣಮಯೀ ಮಮ ಮಾಯಾ ದುರತ್ಯಯಾ ।
ಮಾಮೇವಯೇ ಪ್ರಪದ್ಯಂತೇ ಮಾಯಾಮೇತಾಂತರಂತಿತೇ ॥

ಈ ತ್ರಿಗುಣಾತ್ಮಕವಾದ ಪ್ರಕೃತಿಯು ಲೀಲಾಪರನಾದ ನನ್ನ ಸಂಬಂಧವಾದುದು. ಇದರಲ್ಲಿ ಭೋಗ್ಯತ್ವ ಬುದ್ಧಿಯನ್ನು ಬಿಡುವದು ತುಂಬಾ ಕಷ್ಟವು, ಅದರ ಬಲೆಯಿಂದ ತಪ್ಪಿಸಿಕೊಳ್ಳುವದು ಸುಲಭವಲ್ಲವು ನಿರತಿಶಯಾನಂದ ಸುಖವನ್ನೀಯುವ ನನ್ನನ್ನು ಉಪಾಸನೆ ಮಾಡುವದಕ್ಕೆ ಇದು ದೊಡ್ಡ ಪ್ರತಿ ಬಂಧಕವು. ನನ್ನನ್ನು ಕುರಿತು ಪ್ರಪದನಾನುಷ್ಠಾನವನ್ನು ಮಾಡಿದವರು ಇಂತಹ ಪ್ರಬಲ ಪ್ರತಿಬಂಧಕವನ್ನು ಸುಲಭವಾಗಿ ದಾಟುವರು ಎಂಬುದು ಈ ಶ್ಲೋಕ ತಾತ್ಪರ್ಯವು. ಇದರಿಂದ ಈ ಶರಣಾಗತಿಯು ಮಾಯಾತರಣಕ್ಕಾಗಿಯೂ ಉಪಾಸನೆ ಕೈಗೂಡುವದಕ್ಕಾಗಿಯೂ ವಿಧಿಸಲ್ಪಟ್ಟಿತೆಂಬ ಭಾವವು. ಈ ಅಭಿಪ್ರಾಯಕ್ಕನುಸಾರವಾಗಿಯುಳ್ಳವೇ ಚರಮಶ್ಲೋಕದಲ್ಲಿ ಹೇಳಲ್ಪಟ್ಟಿರುವ ಶರಣಾಗತಿಯನ್ನೂ ಅನ್ವಯಿಸತಕ್ಕದ್ದು? ಅದನ್ನು ಸ್ವತಂತ್ರಪ್ರಪತ್ತಿ ವಿಧಿಯಾಗಿ ಭಾವಿಸಲು ಹೇಗೆ ಸಾಧ್ಯವೆಂಬುದು ಪೂರ್ವಪಕ್ಷಿಯ ಅಭಿಪ್ರಾಯವು. **ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ** ಎಂಬುದರಿಂದ ಉಪಾಸನೆಗೆ ಪ್ರತಿಬಂಧಕಗಳಾದ ಸಮಸ್ತ ಪಾಪಗಳಿಂದಲೂ ಬಿಡಿಸುವೆನು ಅಳಬೇಡ ಎಂಬ ತಾತ್ಪರ್ಯವಿದ್ದರೂ ಇರಬಹುದು

ಮನುಪಪನ್ನಮ್ :—(೧) "ಶರಣಂ ತ್ವಾಂ ಪ್ರಪನ್ನಾ ಯೇ ಧ್ಯಾನ ಯೋಗವಿವರ್ಜಿತಾಃ । ತೇಪಿಮೃತ್ಯುಮತಿಕ್ರಮ್ಯ ಯಾಂತಿ ತದ್ವೈಷ್ಣವಂ ಪದಮ್" ಎನ್ನುವ, (೨) "ಯದ್ಯೇನ ಕಾಮ ಕಾಮೇನ ನಸಾಧ್ಯಂ

ದೆಂಬುದೂ ಮತ್ತು "ಸರ್ವಧರ್ಮಾನ್ ಪರಿತ್ಯಜ್ಯ" ಎಂಬುದರಿಂದ ಮೋಕ್ಷಕ್ಕೆ ಉಪಾಸನರೂಪ ಉಪಾಯಾಂತರ ತ್ಯಾಗವನ್ನೇನೂ ಹೇಳಲಿಲ್ಲವು; ಆ ಉಪಾಯಾಂತರಕ್ಕೆ ಈ ಪ್ರಪದನರೂಪ ಆಜ್ಞಕ್ಕಿಂತ ಬೇರೆಯಾದ ಇತರಗಳ ತ್ಯಾಗವೇ ಬೋಧಿಸಲ್ಪಟ್ಟಿತೆಂದೂ **ಪೂರ್ವ**ಪಕ್ಷಿಯ ಆಶಯವು. ಈ ಅಭಿಪ್ರಾಯಗಳು ಸರಿಯಲ್ಲವೆಂದು ಮುಂದೆ ಉಪಪಾದಿಸುತ್ತಾರೆ :— ಇದು**ವುಮನುಪಪನ್ನಮ್**- ಈ ಪೂರ್ವಪಕ್ಷವೂ ಕೂಡ ಮೇಲಿನ ಇತರ **ಪೂರ್ವ**ಪಕ್ಷಗಳ ಹಾಗೆ ಸಮಂಜಸವಾದುದಲ್ಲವು. **ಮೊ**ದಲು ಪ್ರಮಾಣಗಳನ್ನು ಉದಾಹರಿಸಿ ಸ್ವತಂತ್ರವಾಗಿಯೂ ಪ್ರಪತ್ತಿಯು ಅಜ್ಗ ಎಂಬುವರಲ್ಲಿ ಸಂದೇಹವಿಲ್ಲವೆಂದು ಸ್ಥಾಪಿಸುತ್ತಾರೆ (೧)"**ಧ್ಯಾನಯೋಗವಿವರ್ಜಿತಾಃ** - ಧ್ಯಾನಯೋಗವನ್ನವಲಂಬಿಸಲು ಸಂ**ಪೂರ್ಣ** ಅಶಕ್ತರಾಗಿರುವ, **ಯೇ** - ಯಾರು, **ತ್ವಾಂ** - ಶರಣಾಗತವತ್ಸಲನಾದ ನಿನ್ನನ್ನು, **ಶರಣಂ**-ಶರಣಾಗತಿಯ ಮೂಲಕ ನಿರ್ಹೇತುಕೋಪಾಯನನ್ನಾಗಿ, **ಪ್ರಪನ್ನಾಃ**-ಆಶ್ರಯಿಸುವರೋ, **ತೇಪಿ** - ಭಕ್ತಿಯೋಗನಿಷ್ಠರಹಾಗೆ ಅವರೂ ಕೂಡ, **ಮೃತ್ಯುಂ** - ಸಂಸಾರವನ್ನು **ಅತಿಕ್ರಮ್ಯ** - ದಾಟಿ, **ತತ್** - ಅನಂದಮಯವೆಂದು ಮಹಾ ಪ್ರಸಿದ್ಧಿಯನ್ನು ಹೊಂದಿದ, **ವೈಷ್ಣವಂ ಪದಂ**-ತದ್ವಿಷ್ಣೋಃ **ಪರಮಮ್**ಪದಮ್ ಎಂದು ಶ್ರುತಿಯಲ್ಲಿ ಹೇಳಿರುವ ದಿವ್ಯ ವೈಕುಂಠವನ್ನು, **ಯಾಂತಿ**-ಹೊಂದುತ್ತಾರೆ." ಹೀಗೆ ಈ ಶ್ಲೋಕವಲ್ಲಿ ಭಕ್ತಿಮಾರ್ಗವು ಹೇಗೆಮೋಕ್ಷೋಪಾಯವೋ ಹಾಗೆಯೇ ಉಪಾಸನೆಯ ಗಂಧವೇ ಇಲ್ಲದೆ ಅಸಮರ್ಥರಾದ, ಭಕ್ತಿಗೆ ಅಧಿಕಾರಿಗಳಲ್ಲದ ಸ್ತ್ರೀಪುರುಷರೂ, ಶೂದ್ರಾದಿಗಳೂ ಹೀಗೆ ಸರ್ವರಿಗೂ ಪ್ರಪತ್ತಿಯು ಸ್ವತಂತ್ರವಾದ ಉಪಾಯವೆಂದು ಹೇಳಲ್ಪಟ್ಟಿರುತ್ತದೆ; (೨) " **ಕಾಮಕಾಮೇನ** - ಪುರುಷಾರ್ಥಗಳ ಕಾಮನೆಯುಳ್ಳ, **ಯೇನ** - ಬ್ರಾಹ್ಮಣಾದಿ ತ್ರೈವರ್ಣಿಕರೇ ಆಗಬೇಕೆಂಬ ಆವಶ್ಯಕತೆಯಿಲ್ಲದಿರುವ ಯಾವ ಅಧಿಕಾರಿಯಿಂದಲೇ ಆಗಲಿ, ಸಾಧನಾಂತರೈಃ - ಜ್ಯೋತಿಷ್ಟೋಮಾದಿ ಬೇರೆ ಸಾಧನಗಳಿಂದ, **ನಸಾಧ್ಯಂ** - ಅಧಿಕಾರವಿರುವುದು ದ್ರವ್ಯಸಹಾಯಾದಿಗಳಿಲ್ಲದಿರುವದು, ಇವೇ ಮೊದಲಾದ ಅಸಾಮರ್ಥ್ಯದಿಂದ ಸಾಧಿಸಲು ಅಸಾಧ್ಯವಾದುದು ಯಾವ ಫಲವುಂಟೋ, ಹೀಗೆ ಕಾಮ್ಯ ಕರ್ಮಗಳನ್ನೆನಗಿ ಪಡೆಯಲು ಯಾವ ಅಧಿಕಾರಿಗೆಯಾಗಲಿ ಅಸಾಧ್ಯವಾದ ಮನೋರಥವು ಯಾವುದುಂಟೋ ಅದೂ, ಮತ್ತು

---

(೧) ಬ್ರಾಹ್ಮಪುರಾಣ. (೨) ಅಹಿ. ಸಂ. ೩೭. ೨೫

ಸಾಧನಾಂತರೈಃ । ಮುಮುಕ್ಷುಣಾ ಯತ್ಸಾಂಖ್ಯೇನ ಯೋಗೇನ ನಚ ಭಕ್ತಿತಃ ॥ ಪ್ರಾಪ್ಯತೇ ಪರಮಂ ಧಾಮ ಯತೋನಾವರ್ತತೇ ಯತಿಃ । ತೇನ ತೇನಾಪ್ಯತೇ ತತ್ತನ್ನ್ಯಾಸೇನೈವ ಮಹಾಮುನೇ ॥ ಪರಮಾತ್ಮಾಚ ತೇನೈವ ಸಾಧ್ಯತೇ ಪುರುಷೋತ್ತಮಃ ॥" ಎನ್ನುವ್, ಇತ್ಯಾದಿ ವಚನಗ

ಮುಮುಕ್ಷುಣಾ - ಪ್ರಕೃತಿಬಂಧ ಮೋಕ್ಷವನ್ನು ಅಪೇಕ್ಷಿಸುವ ಅಧಿಕಾರಿಯಿಂದ ಎಂದರೆ ಮೋಕ್ಷಾರ್ಥಿಯಿಂದ, ಇದರಿಂದ ಹಿಂದಿನ **ಪೂರ್ವಾರ್ಧ**ದಿಂದ ಹೇಳಲ್ಪಟ್ಟ ಅಧಿಕಾರಿಗಳು ಬುಭುಕ್ಷುಗಳೇವಿನಾ ಮುಮುಕ್ಷುವಲ್ಲವೆಂಬುದು ವ್ಯಕ್ತವು; ಮುಖ್ಯವಾಗಿ ಅರ್ಥಕಾಮಪರರನ್ನು ಪೂರ್ವಾರ್ಧದಲ್ಲಿ ಹೇಳಿ, ಮೋಕ್ಷಕಾಮರನ್ನು ಉತ್ತರಾರ್ಧಾದಿಗಳಿಂದ ಹೇಳಲ್ಪಟ್ಟಿತೆಂದು ಭಾವಿಸತಕ್ಕದ್ದು; **ಸಾಂಖ್ಯೇನ** - ಜ್ಞಾನಯೋಗದಿಂದಲಾಗಲಿ, **ಯೋಗೇನ** - ಕರ್ಮಯೋಗದಿಂದಲಾಗಲಿ ಕೂಡಿದ, **ಭಕ್ತಿತಃ** - ಭಕ್ತಿಯೋಗದಿಂದಲಾಗಲಿ, **ಯತಿಃ** - ಇಂದ್ರಿಯಗಳ ನಿಯಮನಪೂರ್ವಕ ಐಹಿಕದಲ್ಲಿ ವೈರಾಗ್ಯ ಉಳ್ಳವನು, **ಯತಃ ನಾವರ್ತತೇ**-ಯಾವುದನ್ನು ಹೋಗಿ ಸೇರಿದನಂತರ ಅಲ್ಲಿಂದ ಹಿಂತಿರುಗಿ ಬರುವದೆಂಬುವದಿಲ್ಲವೋ, ಅಂತಹ **ಪರಮಂಧಾಮ** - ಸರ್ವೋತ್ಕೃಷ್ಟವಾದ **ತದ್ವಿಷ್ಣೋಃ ಪರಮಂ ಪದಂ** ಎಂದು ಶ್ರುತಿಯಲ್ಲಿ ಅತಿಶಯವಾಗಿ ಶ್ಲಾಘಿಸಲ್ಪಟ್ಟ ದಿವ್ಯ ವೈಕುಂಠವು, **ನಪ್ರಾಪ್ಯತೇ** - ವಿಘ್ನಗಳು ಕಳೆಯದೆ ಇರುವದರಿಂದಲೋ, ಅಭ್ಯಾಸ ಸಾಲದಿರುವದರಿಂದಲೋ, ವಿಶ್ವಾಸ ಸಾಲದಿರುವದರಿಂದಲೋ, ಅಧಿಕಾರ ಶೂನ್ಯತೆಯಿಂದಲೋ **ನಪ್ರಾಪ್ಯತೇ** - ಹೊಂದಲ್ಪಡುವದಿಲ್ಲವೋ, **ತತ್ತತ್** - ಅವೆಲ್ಲವೂ, ಎಂದರೆ ಆ ಫಲವೆಲ್ಲವೂ, ಓ ಮಹಾ ಮುನಿಯೇ, **ತೇನ ತೇನ** ಆಯಾ ಅಧಿಕಾರಿಯಿಂದ, **ನ್ಯಾಸೇನೈವ** - ಸ್ವತಂತ್ರ ಪ್ರಪತ್ತಿಯಿಂದಲೇ, **ಆಪ್ಯತೇ** ಹೊಂದಲ್ಪಡುತ್ತದೆ. **ತೇನೈವ** - ಆ ಭರನ್ಯಾಸದಿಂದಲೇ, ಪರಮಾತ್ಮನಾದ ಪುರುಷೋತ್ತಮನೂ ಕೂಡ, **ಸಾಧ್ಯತೇ**-ಸಿದ್ಧೋಪಾಯನಾಗಿ ನಿಂತು ರಕ್ಷಿಸುವಹಾಗೆ ಸಾಧಿಸಲ್ಪಡುತ್ತಾನೆ. ಇಲ್ಲಿ ಭಕ್ತಿಯೋಗವಾದ ಉಪಾಸನದಿಂದಲೂ ಸಾಧಿಸಲಸಾಧ್ಯವಾದುದನ್ನೂ ಪ್ರಪತ್ತಿಯಿಂದಲೇ ಸಾಧಿಸಬಹುದೆಂದೂ, ಸರ್ವೇಶ್ವರನು ಸಿದ್ಧೋಪಾಯನಾಗಿ ಉಪಾಸನೆಯಾಸ್ಥಾನದಲ್ಲಿ ತಾನೇ ನಿಂತು ವಿಘ್ನರಹಿತನಾಗಿಯೂ ಖಂಡಿತವಾಗಿಯೂ ನಡೆಸಿಕೊಡುವದರಿಂದ, ಭಕ್ತ್ಯುಪಾಯಕ್ಕಿಂತ ಸುಲಭವಾಗಿ ಸಾಧಿಸಿಕೊಡುವ ಉಪಾಯವೆಂದು ಹೇಳುವದರಿಂದ, ಭರನ್ಯಾಸವೂ ಸ್ವತಂತ್ರವಾದ ಉಪಾಯವೆಂಬುದು ಸಿದ್ಧವು. ಈ ಶ್ಲೋಕಕ್ಕೆ ಸರ್ವಸಮಂಜಸವಾಗಿ ಹೀಗೆ ಅರ್ಥಹೇಳದೆ ಭಿನ್ನಭಿನ್ನವಾಗಿ ಅರ್ಥಮಾಡಿರುತ್ತಾರೆ. "**ಯೇನ**" "**ತೇನ**" ಎಂಬ ಶಬ್ದ

ಗಳು ಅಧಿಕಾರಿ ಪರವಾದ ಶಬ್ದಗಳಲ್ಲವು ಎಂದು ಹೇಳಿ, **ಯಾವ** ಮನಸ್ಸಿನಿಂದ, ಆ ಮನಸ್ಸಿನಿಂದ ಎಂದರ್ಥಮಾಡಿರುತ್ತಾರೆ. ಆಗ ಎರಡು ತೃತೀಯೆಗಳು ಒಟ್ಟಿಗೆ ಹೇಳಿರುವದೂ **ಯೇನ** ಎಂದು ಮನಸ್ಸಿಗೇನೆ ಪ್ರಸಿದ್ಧಿ ಹೇಗೆ? ಇಚ್ಛೆಯು ಆಗಕೂಡದೋ? ಎಂಬ ಆಕ್ಷೇಪಗಳುಂಟಾದೀತು. ಇನ್ನು ಕೇವರು ಭರನ್ಯಾಸವೇ ಸಿದ್ಧೋಪಾಯನನ್ನು ಸಾಧಿಸಿ ಕೊಡುತ್ತದೆಂದು ಹೇಳಿದರೆ **"ಯಮೇವೈಷ ವೃಣುತೇ ತೇನಲಭ್ಯಃ"** "ಸರ್ವೇಶ್ವರನು ಯಾವನನ್ನು ಮುಕ್ತಿಗೆ ಯೋಗ್ಯನೆಂದು ವರಿಸುವನೋ ಅವನಿಗೇ ಮೋಕ್ಷವು" ಎಂಬ ಹೇಳಿಕೆಗೆ ವಿರೋಧವಾಗುವದಿಲ್ಲವೋ ಎಂದಾಕ್ಷೇಪಿಸುವರು. ಆ ಶ್ರುತಿಯು ಸರ್ವೇಶ್ವರನು ತನ್ನಿಷ್ಟಾನುಸಾರ ಮುಕ್ತಿಯನ್ನು ಕೊಡುವನೆಂದು ಹೇಳಲಿಲ್ಲವು. ಯಾವನು ಸಾಧ್ಯೋಪಾಯಾನುಷ್ಠಾನದಲ್ಲಿ ತುಂಬಾ ಪ್ರೀತಿಯನ್ನು ಸರ್ವೇಶ್ವರನಲ್ಲಿ ಮಾಡುವನೋ, ಆದರಿಂದ ಪ್ರೀತನಾದ ಶ್ರಿಯಃಪತಿಯು ಈತನು ಮುಕ್ತಿಗೆ ಯೋಗ್ಯನೆಂದು ವರಿಸುವನೆಂಬ ಭಾವವು. ಇದಕ್ಕೆ ನಿದರ್ಶನವಾಗಿ ಬಾಲಕರು ಬರೀ ಪರೀಕ್ಷೆಗೆ ಹೋಗುವದರಿಂದಲೇ ತೇರ್ಗಡೆಯಾಗುವದಿಲ್ಲವು; ಪರೀಕ್ಷಕನು ಯಾವನನ್ನು ತೇರ್ಗಡೆಗೆ ಅರ್ಹನೆಂದು ಚುನಾಯಿಸುವನೋ ಅವನೇ ಅರ್ಹನಾಗುವನು ಎಂದರೆ ಪರೀಕ್ಷಕನು ತನ್ನಿಷ್ಟಬಂದಂತೆ ತೇರ್ಗಡೆಯನ್ನು ಹೊಂದಿಸುವನೆಂದಾಗುತ್ತದೆಯೇ? ಅಥವಾ ಪರೀಕ್ಷೆಯು ನಿರರ್ಥಕವೆಂದಾಗುತ್ತದೆಯೋ? ಎರಡೂ ಆಗುವದಿಲ್ಲವು. ಹಾಗೆಯೇ ಇಲ್ಲಿಯೂ ಎಂಬ ಭಾವವು. ಪ್ರಪತ್ತಿಯು ಸಾಧ್ಯೋಪಾಯವೆಂಬುದರಲ್ಲಿ ಸಂದೇಹವಿಲ್ಲವು, ಆದರಿಂದ ಪ್ರೀತನಾದ ಸಿದ್ಧೋಪಾಯನಾದ ಪರಮಾತ್ಮನೇ ಈತನು ದಿವ್ಯ ವೈಕುಂಠವನ್ನು ಹೊಂದಲರ್ಹನೆಂದು ವರಿಸತಕ್ಕವನು ಎಂಬ ಭಾವವು. ಈ ಅಭಿಪ್ರಾಯವನ್ನೇ ಸಂಹಿತಾವಾಕ್ಯವಾದ **"ಪರಮಾತ್ಮಾಚ ತೇನೈವ ಸಾಧ್ಯತೇ ಪುರುಷೋತ್ತಮಃ"** ಎಂಬುದು ಸಮರ್ಥಿಸುತ್ತದೆ.

ಆದರೆ, ಇಂತಹ ಸುಲಭೋಪಾಯದ ಉಪದೇಶವು ಗೀತೆಯಲ್ಲಿಲ್ಲದೇ ಇರಬಹುದೇ? ಎಂದರೆ; ಅರ್ಜುನನು ೨-೭ ನೆಯ ಶ್ಲೋಕದಲ್ಲಿ ಮೋಹಜ್ಞಾನವು ತೊಲಗಿ, ತನಗೆ ಪರಮ ಶ್ರೇಯಸ್ಸುಂಟಾಗುವ ಉಪದೇಶಕ್ಕಾಗಿ ಸ್ವತಂತ್ರ ಪ್ರಪತ್ತಿಯನ್ನನುಷ್ಠಿಸಿರುತ್ತಾನೆ. ಪುನಃ ೧೧ನೆಯ ಅಧ್ಯಾಯದ ೪೧, ೪೨, ೪೪ನೆಯ ಶ್ಲೋಕಗಳಲ್ಲಿ ತಾನು ಸ್ನೇಹ ಭಾವದಲ್ಲಿ ಶ್ರೀಕೃಷ್ಣ ಮಾಹಾತ್ಮ್ಯೆಯನ್ನ ತಿಳಿಯದೆಯೂ ಮರೆತೂ ಮಾಡಿದ ಸರ್ವಾಪರಾಧಗಳನ್ನೂ ಕ್ಷಮಿಸು ಎಂದು ಇನ್ನೊಂದು ಸಲ ಸ್ವತಂತ್ರ ಪ್ರಪತ್ತಿಯನ್ನು ಅನುಷ್ಠಿಸಿರುತ್ತಾನೆ ಮತ್ತು ೧೮ನೆಯ ಅಧ್ಯಾಯದ ಚರಮ ಶ್ಲೋಕವು ಅಙ್ಗರೂಪ ಶರಣಾಗತಿಯಾದರೂ ಎರಡಕ್ಕೂ ಅನ್ವಯಿಸುವ ಹಾಗೆ ಉಪದೇಶಿಸಿರುತ್ತಾರೆ.

ಳಾಲೇ, ಸ್ವತಂತ್ರ ಪ್ರಪತ್ತಿ ಸಿದ್ಧಿತ್ತಾಲ್, ಇನ್ನಿಷ್ಠೈ ಯುಡೈಯವನುಕ್ಕು ಶ್ರೀ ವೈಕುಂಠಗದ್ಯತ್ತಿಪಡಿಯಿಲೇ ಸ್ವಯಂ ಫಲವಾಗ "ಧ್ಯೇಯೋ ನಾರಾಯಣಸ್ಸದಾ" ಎನ್ಗಿರ ಅರ್ಥತ್ತಿಲ್ ತಟ್ಟು ವಿಳುಕ್ಕಾದ

ಹೀಗಾದನಂತರ ಶ್ರೀ ವಚನ ಭೂಷಣದಲ್ಲಿ ಮುಕ್ತದೆಶೆಯಲ್ಲಿ ಕೆಲವರು ಅನುಭವಪರರು, ಕೆಲವರು ಕೈಂಕರ್ಯಪರರೆಂದು ಹೇಳುವ ಅಭಿಪ್ರಾಯವು ಸರಿಯಲ್ಲವೆಂದು ಸಾರಸಂಗ್ರಹವ್ಯಾಖ್ಯಾತೃವು ಹೇಳುತ್ತಾರೆ. ಹೇಗೆಂದರೆ, ಶ್ರೀ ಪಿಳ್ಳೈ ಲೋಕಾಚಾರ್ಯರವರ ಅಭಿಪ್ರಾಯಪ್ರಕಾರ ಪರಮಾತ್ಮನ ಸಿದ್ಧೋಪಾಯತ್ವವಾದರೋ ಭೋಗ್ಯತ್ವವೇಷದಿಂದಲೂ ಮತ್ತು ಅವರನ್ನು ಕೈಂಕರ್ಯದಲ್ಲಿ ವಿನಿಯೋಗಿಸುವ ರೂಪದಿಂದಲೂ ಆದುದರಿಂದ ಕೆಲವರು ಅನುಭವಪರರು, ಕೆಲವರು ಕೈಂಕರ್ಯಪರರು ಎಂಬುದು ಅವರ ಅಭಿಪ್ರಾಯವು ಇದು **"ಪರಮಾತ್ಮಾ ಚತೇನೈವ ಸಾಧ್ಯತೇ** ಎಂಬುದರಿಂದ ಭರನ್ಯಾಸದಿಂದಲೇ ಆತನೂ ಸಾಧ್ಯನೆಂದು ಹೇಳಿರುವದರಿಂದ ಸಮಂಜಸವಾಗುವದಿಲ್ಲವು ಮುಕ್ತಿಯಲ್ಲಿ ಸಾಮ್ಯವು ಹೇಳಿರುವದರಿಂದ ಹೀಗೆ ವ್ಯತ್ಯಾಸಗಳನ್ನು ಹೇಳುವದು ಶಾಸ್ತ್ರ ಸಮ್ಮತವಲ್ಲವು." **ಎನ್ರುವ್** - ಎಂದು ಹೇಳುವ, **ಇತ್ಯಾದಿವಚನಙ್ಗಳಾಲೇ** - ಇಂತಹ ಪ್ರಮಾಣವಚನಗಳಿಂದ, **ಸ್ವತಂತ್ರ ಪ್ರಪತ್ತಿ ಸಿದ್ಧಿತ್ತಾಲ್** - ಈ ಅಙ್ಗರೂಪವಾದ ಸ್ವತಂತ್ರಪ್ರಪತ್ತಿಯು ಸಿದ್ಧಿಸಿದರೆ, **ಈ ನಿಷ್ಠೈಯುಡೈಯವನುಕ್ಕು** - ಇಂತಹ ಲಘೂಪಾಯ ನಿಷ್ಠೆಯನ್ನು ಅವಲಂಬಿಸಿದವನಿಗೆ, **ಶ್ರೀ** ಭಾಷ್ಯಕಾರರು ಅವರು ರಚಿಸಿದ ಶ್ರೀವೈಕುಂಠ ಗದ್ಯದಲ್ಲಿ ಹೇಳಿರುವಹಾಗೆ, **ಸ್ವಯಂ ಫಲವಾಕ** - ಸ್ವಯಂ ಅದೇ ಎಂದರೆ ಭಕ್ತಿಯೇ ಫಲವು ಎಂಬವಾಗಿ, **"ಧ್ಯೇಯೋ ನಾರಾಯಣಸ್ಸದಾ"** ಎಂಬುದರ, **ಅರ್ಥತ್ತಿಲ್** - ಅರ್ಥದಲ್ಲಿ, **ತಟ್ಟು ವಿಳಕ್ಕಾಡು ಅನ್ವಯತ್ತುಕ್ಕು ವಿರೋಧವಿಲ್ಲೈ** - ಸ್ವತಃ ಪ್ರಾಪ್ತವಾದ ಅನ್ವಯಕ್ಕೆ, ಈ ಎರಡು ಉಪಾಯಗಳ ಸ್ವರೂಪಾನುಗುಣವಾಗಿ ಅರ್ಥಮಾಡಿದರೆ ವಿರೋಧವಿಲ್ಲವು. ಹೇಗೆಂದರೆ, **ಧ್ಯೇಯೋ ನಾರಾಯಣಸ್ಸದಾ** ಎಂಬ ನ್ಯಾಸೋಕ್ತಿಯಲ್ಲಿ ಹೇಳಿರುವ ಧ್ಯಾನವು ಶಕ್ತನಾದ ಭಕ್ತಿಯೋಗಿಯ ವಿಷಯದಲ್ಲಿ, **"ಭಕ್ತ್ಯಾತ್ವನನ್ಯಯಾ"** ಎಂದು ಹೇಳಿರುವಹಾಗೆ ಉಪಾಯ ರೂಪ ಭಕ್ತಿಯೂ, ಅಶಕ್ತನಾದ ಪ್ರಪತ್ತಿನಿಷ್ಠನ ವಿಷಯದಲ್ಲಿ ಫಲರೂಪ ಭಕ್ತಿಯೂ ಎಂದು ಅನ್ವಯಿಸಬಹುದೆಂಬ ತಾತ್ಪರ್ಯವು. ಅಲ್ಲಿ **ಧ್ಯೇಯಃ** ಎಂದು **ಇಷ್ಟು**ಮಾತ್ರವೇ ಹೇಳಿ, ಉಪಾಯತ್ವರೂಪದಲ್ಲಿಯಾಗಲಿ, ಫಲತ್ವರೂಪದಲ್ಲಿಯಾಗಲಿ ಎಂದು ಹೇಳದೇ ಇರುವದರಿಂದ ಎರಡಕ್ಕೂ ಸಮಂಜಸವಾಗುವಹಾಗೆ ಅನ್ವಯಿಸಬಹುದೆಂಬ ತಾತ್ಪರ್ಯವು. ಶ್ರೀ ವೈಕುಂಠ ಗದ್ಯದಲ್ಲಿ ಶ್ರೀ

ನ್ವಯತ್ತುಕ್ಕು ವಿರೋಧಮಿಲ್ಲೈ. ಇದು ಅರೋಗನುಕ್ಕು ಮಾರೋಗ್ಯಾರ್ಥಿಕ್ಕುಮ್ ಕ್ಷೀರಂ ಸೇವ್ಯ ಮೆನ್ನತ್ತೊಡುಕ್ಕುಮ್.

ಭಾಷ್ಯಕಾರರ ಸೂಕ್ತಿಯು ಯಾವುದೆಂದರೆ "ಮಹಾವಿಭೂತೇ ಶ್ರೀಮತ್ಶ್ಚರಣಾರವಿಂದಯುಗಳಮನನ್ಯಾತ್ಮಸಂಜೀವನೇನ ತದ್ಗತಸ್ಸರ್ವ ಭಾವೇನ ಶರಣ ಮನುವ್ರಜೇತ್, ತತಶ್ಚ ಪ್ರತ್ಯಹಮಾತ್ಮೋಜ್ಜೀವನಾಯೈವ ಮನುಸ್ಮರೇತ್" "ನಿತ್ಯವಿಭೂತಿ ಲೀಲಾವಿಭೂತಿ ಎಂಬ ಉಭಯ ನಿಯಾಮ್ಯವರ್ಗವನ್ನುಳ್ಳ ಮತ್ತು ಶ್ರೀಮತಃ - ಲಕ್ಷ್ಮೀಯುಕ್ತನಾದ ಎಂದರೆ ಶ್ರೀಯಃಪತಿಯಾದ ಶ್ರೀಮನ್ನಾರಾಯಣನ ಪಾದಕಮಲದ್ವಂದ್ವವನ್ನು ಆತ್ಮೋಜ್ಜೀವನ ವಿಷಯದಲ್ಲಿ ಆತನಲ್ಲದೆ ಇನ್ನು ಯಾರಿಗೂ ಸಾಮರ್ಥ್ಯವಿಲ್ಲವೆಂಬ ಭಾವನೆಯಿಂದ ಆತನನ್ನು ಉಪಾಯವನ್ನಾಗಿ ಪರಿಸತಕ್ಕದ್ದು, ತತಶ್ಚ - ಎಂದರೆ ಪ್ರಪದನಾನುಷ್ಠಾನಾಂತರದಲ್ಲಿ, ಪ್ರತಿದಿನವೂ ತನಗೆ ಅಲಭ್ಯವಾದುದು ಮುಂದೆ ಸರ್ವೇಶ್ವರನ ಕರುಣೆಯಿಂದ ಲಭಿಸುತ್ತದೆಂಬ ಮನಸ್ತೃಪ್ತಿಯಿಂದ ಆತ್ಮೋಜ್ಜೀವನಕ್ಕಾಗಿ ಆತನನ್ನು ಧ್ಯಾನಿಸತಕ್ಕದ್ದು. ಇದರಿಂದ ಫಲರೂಪ ಭಕ್ತಿಯು ಹೇಳಲ್ಪಟ್ಟಿತೇ ವಿನಾ ಉಪಾಯರೂಪ ಭಕ್ತಿಯಲ್ಲವು. ಹಾಗಾದರೆ ಧ್ಯೇಯೋ ನಾರಾಯಣಸ್ಸದಾ ಎಂಬುದು ಎರಡು ವಿಧ ಉಪಾಯನಿಷ್ಠರಿಗೂ ಅನ್ವಯಿಸಬಹುದೋ ಎಂದರೆ, ಅನ್ವಯಿಸಿದರೆ ಪ್ರತ್ಯವಾಯವೇನು? ಎಂದು ಕೇಳುತ್ತಾರೆ. ಉಪಾಯರೂಪ ಭಕ್ತಿಯ ವಿಷಯದಲ್ಲಿ ಧ್ಯೇಯೋ ನಾರಾಯಣಸ್ಸದಾ ಎಂಬುದರಿಂದ ಯಾವಜ್ಜೀವವೂ ಉಪಾಸನೆಯನ್ನು ಮಾಡತಕ್ಕದ್ದು ಎಂಬರ್ಥವು. ಫಲರೂಪ ಭಕ್ತಿಯ ವಿಷಯದಲ್ಲಿ, ಭರನ್ಯಾಸರೂಪ ಸಕೃದನುಷ್ಠಾನವನ್ನೂ ಮಾಡಿದರೆ ತನಗುಂಟಾಗುವ ಆತ್ಮೋಜ್ಜೀವನಕ್ಕಾಗಿ ಸರ್ವೇಶ್ವರನನ್ನು ಯಾವಜ್ಜೀವವೂ ಧ್ಯಾನಿಸತಕ್ಕದ್ದು ಸ್ಮರಿಸತಕ್ಕದ್ದು ಎಂಬ ಭಾವವು. ಹೀಗೆ ಒಂದೇ ಪ್ರಯೋಗವು ಎರಡು ಅಧಿಕಾರಿಗಳಿಗೂ ಅನ್ವಯಿಸುವದುಂಟೋ ಎಂದರೆ ಒಂದು ದೃಷ್ಟಾಂತ ಮೂಲಕ ಆಗಬಹುದೆಂದು ತಿಳಿಸುತ್ತಾರೆ:—ಕ್ಷೀರಮ್-ಹಾಲು, ಅರೋಗನಕ್ಕು-ರೋಗವಿಲ್ಲದವನಿಗೂ, ಆರೋಗ್ಯಾರ್ಥಿಕ್ಕುಮ್-ಆರೋಗ್ಯವಿಲ್ಲದೆ ಅದನ್ನು ಬಯಸುವವನಿಗೂ ಸಹ, ಸೇವ್ಯಂ - ಸೇವಿಸಲು ಯೋಗ್ಯವಾದುದು, ಎನ್ನತ್ತೊಡು-ಎಂಬುದರೊಂದಿಗೆ, ಇದು - ಈ, "ಧ್ಯೇಯಃ" ಎಂಬಲ್ಲಿ ತೋರಿಬರುವ ಧ್ಯಾನರೂಪ ಭಕ್ತಿಯು, ಒಕ್ಕುಮ್ - ಸಮಾನವು ಹಾಲು ಹೇಗೆ ಆರೋಗ್ಯವಿರುವವನಿಗೂ ಆರೋಗ್ಯವಿಲ್ಲದೆ ಆರೋಗ್ಯಬೇಕೆಂದಿರುವವನಿಗೂ ಸಹ ಪುಷ್ಟಿಕರವೋ, ಹಾಗೆಯೇ ಭಕ್ತಿಯಿಂದ ಪರಮಾತ್ಮನನ್ನು ಧ್ಯಾನಿಸುವದು, ಭಕ್ತಿನಿಷ್ಠನಿಗೂ

ಅತಃ ಸದಾ ಭಗವತ್ಸ್ಮರಣೇ ಸರ್ವಾಧಿಕಾರತ್ವಮ್.

ಸಾಙ್ಗಮಾನ ಧ್ಯಾನವಿಶೇಷಮ್ ಸರ್ವಾಧಿಕಾರಮನ್ರೇಯಾಗಿಲುಮ್, ಭಗವದ್ವಿಷಯತ್ತಿಲ್ ಅಧಿಕಾರಾನುರೂಪಮಾಗ ಅರಿಯಲಾಮಳವುಮ್ (೧) "ನಿರನ್ತರಮ್ ನಿನೈಪ್ಪದಾಗ ನೀ ನಿನೈಕ್ಕ ವೇಣ್ಡುಮೇ" ಇತ್ಯಾದಿಗಳಿಲ್ಪಡಿಯೇ ಅನುಸಂಧಿಕ್ಕವುಮ್ ಕುರೈಯಿಲ್ಲೈ

ಪ್ರಪತ್ತ್ಯನುಷ್ಠಿಸಿದವನಿಗೂ ಇಬ್ಬರಿಗೂ ಬೇಕಾದುದು. ಭರನ್ಯಾಸ ಮಾಡಿದವನು ಕೃತಕೃತ್ಯನು, ಹಾಲು ಭೋಗ್ಯವಾಗಿರುವ ಆರೋಗ್ಯಸ್ಥಾನೀಯನು, ಇವನಿಗೂ ಕೃತಜ್ಞತಾಭಾವ ಪ್ರದರ್ಶಕವಾಗಿ ತನ್ನ ಸ್ವರೂಪಕ್ಕನುಗುಣವಾದುದಾಗಿ ಭಕ್ತಿರೂಪ ಧ್ಯಾನವು ಯುಕ್ತವು, ಉಪಸನಾನಿಷ್ಠನು ಹಾಲು ಆವಶ್ಯಕವಾಗಿರುವ ಆರೋಗ್ಯವನ್ನು ಬಯಸುವವನ ಸ್ಥಾನೀಯನು; ಇವನಿಗೆ ಭಕ್ತಿರೂಪ ಧ್ಯಾನವು ಉಪಾಯರೂಪದಲ್ಲಿ ಆವಶ್ಯಕವೆಂಬ ಭಾವವು.

ಆದುದರಿಂದ ನಿರಂತರ ಭಗವದ್ಧ್ಯಾನದಲ್ಲಿ ಸರ್ವರಿಗೂ ಅಧಿಕಾರವು.

ಭಕ್ತಿಯು ಅಷ್ಟಾಂಗಯುಕ್ತವಾಗಿ ಧ್ಯಾನಯೋಗಿಗೆ ಆವಶ್ಯಕವು. ಆ ಧ್ಯಾನಯೋಗವು ತ್ರೈವರ್ಣಿಕರಿಗೆ ಮಾತ್ರವೇ? ಹೀಗಿರುವಾಗ, ಭಕ್ತಿಯು ಸರ್ವಾಧಿಕಾರ ಹೇಗೆ? ಎಂದರೆ ಉಪಾಯರೂಪ ಪರಭಕ್ತಿಯು ಉಪಾಸಕನಿಗೇ ಆವಶ್ಯಕವಾದರೂ ಸಾಮಾನ್ಯವಾದ ಭಕ್ತಿಯು ಫಲರೂಪವಾಗಿ ಸಾತ್ವಿಕವಾಗಿ ಸ್ತ್ರೀಶೂದ್ರಾದಿ ಮೊದಲುಗೊಂಡು ಸಮಸ್ತರಿಗೂ ಬೇಕಾದುದೇ ಎಂದು ಸಾಙ್ಗಮಾನ ಎಂದಾರಂಭಿಸಿದ ವಾಕ್ಯಮೂಲಕ ಹೇಳುತ್ತಾರೆ **ಸಾಙ್ಗಮಾನ** - ಅಷ್ಟಾಂಗಗಳಿಂದ ಯುಕ್ತವಾದ, ಧ್ಯಾನ ವಿಶೇಷವು, **ಸರ್ವಾಧಿಕಾರಮನ್ರೇಯಾಗಿಲುಮ್** - ತ್ರೈವರ್ಣಿಕರಾದ ಬ್ರಾಹ್ಮಣ ಕ್ಷತ್ರಿಯ ವೈಶ್ಯರಿಗೆ ಮಾತ್ರವೇ ಅಧಿಕಾರವುಳ್ಳದಾಗಿ ಸ್ತ್ರೀ ಶೂದ್ರಾದಿಗಳಿಗೆ ಅಧಿಕಾರವಿಲ್ಲದುದರಿಂದ ಸರ್ವಾಧಿಕಾರವುಳ್ಳುದಲ್ಲವೇ ಇದ್ದರೂ, **ಭಗವದ್ವಿಷಯತ್ತಿಲ್** - ಭಗವಂತನನ್ನು ಹೊಂದುವ ಸಂದರ್ಭದಲ್ಲಿ, **ಅಧಿಕಾರಾನುರೂಪಮಾಗ** - ಸಮರ್ಥರಾಗಿಯೂ ತ್ರಿವರ್ಣದವರಿಗಿಲ್ಲದ ಸ್ತ್ರೀ ಮೊದಲಾದವರಿಗೆ ಉಪಾಸನವೂ, ತ್ರಿವರ್ಣದವರಿಗೂ ಅಶಕ್ತರಿಗೂ ಪ್ರಪತ್ತಿಯೂ. ಹೀಗೆ ಅವರವರುಗಳ ಅಧಿಕಾರಕ್ಕನುಗುಣವಾಗಿ **ಅರಿಯಲಾಮಳವುಮ್** - ಎಲ್ಲಿವರೆಗೆ ತಿಳಿಸಲು ಸಾಧ್ಯವಾಗುತ್ತದೋ ಅಲ್ಲಿಯವರೆಗೂ (೧) ನಿರನ್ತರಂ-ಯಾವಾ

---

(೧) ತಿರುಚ್ಚಂದವಿರುತ್ತಂ. ೧೦೧.

ಗಲೂ, ನಿನೈಪ್ಪದಾಗ - ಹೇಗೆ ಸ್ಮರಣೆ ಮುಂಟಾಗತಕ್ಕದ್ದೋ ಹಾಗೆ ನೀ - ಕರುಣಾಳುವಾದ ನೀನು, ನಿನೈಕ್ಕವೇಣ್ಡುಮೋ - ಸಙ್ಕಲ್ಪಿಸತಕ್ಕದ್ದು" ಇತ್ಯಾದಿಗಳಿರ್ಪ್ಪಡಿಯೇ - ಇವೇ ಮೊದಲಾದವುಗಳಲ್ಲಿ ಹೇಳಿರುವ ಹಾಗೆ, ಅನುಸಂಧಿಕ್ಕವುಮ್ ಕುರೈಯಿಲ್ಲೈ-ಅನುಸಂಧಾನ ಮಾಡುವದರಲ್ಲೇನೂ ನ್ಯೂನತೆ ಯಿಲ್ಲವು. ಭರನ್ಯಾಸವನ್ನು ಮಾಡಿ ಕೃತಕೃತ್ಯನಾದ ಪ್ರಪನ್ನನಿಗೂ ಕೂಡ ಉಪಾಸನಾರೂಪದಲ್ಲಿ ತೈಲಧಾರಾವದವಿಚ್ಛಿನ್ನವಾದ ಭಗವಂತನ ಸ್ಮರಣೆಯು ಬೇಕಾಗಿಲ್ಲದಿದ್ದರೂ ಸಾಮಾನ್ಯಭಗವತ್ಸ್ಮರಣೆಯು ನಿರಂತರವಾಗಿ ಅಪೇಕ್ಷಿತವೇ ಎಂಬ ಭಾವವು. ಈ ತಿರುಚ್ಚಂದ ವಿರುತ್ತದ ಪೂರ್ಣ ಪಾಠವು ಯಾವುದೆಂದರೆ:—

"ಇರನ್ದುರೈಪ್ಪದುಣ್ಡು ವಾಳಿ ಯೇಮ ನೀರ್ ನಿರತ್ತವಾ ।
ವರನ್ತರುಂ ತಿರುಕ್ಕುರಿಪ್ಪಿಲ್ ವೈತ್ತದಾಗಿಲ್ ಮನ್ನು ಶೀರ್ ।
ಪರನ್ದ ಚಿನ್ದೈ ಯೊನ್ರಿ ನಿನ್ರು ನಿನ್ನ ಪಾದ ಪಙ್ಕಜಂ ।
ನಿರನ್ತರಂ ನಿನೈಪ್ಪದಾಗ ನೀ ನಿನೈಕ್ಕ ವೇಣ್ಡುಮೇ ॥ ೧೦೧ ॥

ಇದರರ್ಥವು:—ಏಮ - ಮಹತ್ತಾಗಿರುವ, ನೀರ್ - ಸಮುದ್ರದ ಹಾಗೆ, ನಿರತ್ತ - "ಅಪ್ರಮೇಯೋ ಮಹೋದಧಿಃ" ಎಂದು ಹೇಳಿರುವಹಾಗೆ ಅಪರಿಚ್ಛಿನ್ನ ಪರಿಪೂರ್ಣತೆಯುಳ್ಳ, ಅವಾ-"ಪಿತಾತ್ವಂ ಮಾತಾತ್ವಂ" ಎಂಬ ಶ್ಲೋಕದಲ್ಲಿ ಉಪಪಾದಿಸಿರುವಹಾಗೆ ನಮಗೆ ಸರ್ವವಿಧ ಬಂಧುವಾದವನೇ, ಇರನ್ದು - ಯಾಚಿಸಿ, ಉರೈಪ್ಪದು ಉಂಡು - ವಿಜ್ಞಾಪಿಸಿಕೊಳ್ಳುವದು ಒಂದುಂಟು, ವಾಳಿ- ನಿನಗೆ ಮಂಗಳಾಶಾಸನವು. ವರಂತರುಮ್ - ಈ ಆತ್ಮಾವಿಗೆ ಕೈಂಕರ್ಯವಾಡುವ ಪರಮ ಶ್ರೇಯಸ್ಸನ್ನುಂಟುಮಾಡುವದೇ ಸ್ವಭಾವವಾಗಿವುಳ್ಳ, ಮನ್ನು ಶೀರ್ - ಸ್ಥಿರವಾದ ಕೈಂಕರ್ಯ ಸಾಮ್ರಾಜ್ಯ ರೂಪಶ್ರೇಯಸ್ಸನ್ನು, ತಿರುಕ್ಕುರಿಪ್ಪಿಲ್ ವೈತ್ತಾಗಿಲ್ - ಮನಸ್ಸಿನಲ್ಲಿಟ್ಟುಕೊಂಡಾದರೆ, ಪರನ್ದ ಚಿನ್ದೈ - ಶಬ್ದಾದಿ ವಿಷಯಗಳಲ್ಲಿ ಪ್ರವರ್ತಿಸುವ ನನ್ನ ಮನಸ್ಸು, ಒನ್ರಿ ನಿನ್ರು-ಮತ್ತೆ ಯಾವುದರಲ್ಲೂ ಹಾಗೆ ಹೋಗದೆ ನಿನ್ನಲ್ಲೇ ಸ್ಥಿರವಾಗಿ ನಿಂತು, ನಿನ ಪಾದ ಪಂಕಯಂ - ನಿನ್ನ ಪಾದ ಕಮಲವನ್ನು, ನಿರಂತರಂ - ವಿಚ್ಛೇದವಿಲ್ಲದಹಾಗೆ, ನಿನೈಪ್ಪದಾಗ - ಧ್ಯಾನಿಸುವಹಾಗೆ, ನೀ ನಿನೈಕ್ಕವೇಣ್ಡುಮ್ - ನೀನು ಸಂಕಲ್ಪಿಸತಕ್ಕದ್ದು."

"ಈ ವೇಳೆ ಉದಾಹರಿಸಿರುವ ಶ್ರೀ ಭಾಷ್ಯಕಾರರವರ ವೈಕುಂಠಗದ್ಯದಲ್ಲಿನ ವಾಕ್ಯದಲ್ಲಿ ಆತ್ಮೋಜ್ಜೀವನಕ್ಕಾಗಿ ಪ್ರತಿದಿನವೂ ಭಗವಂತನನ್ನು ಧ್ಯಾನಿಸತಕ್ಕದ್ದೆಂದು ಹೇಳಿರುವದರಿಂದ, ಸ್ವಯಂ ಫಲರೂಪವಾದ ಭಕ್ತಿಯು ಹೇಳಲ್ಪಟ್ಟಿತೆಂಬುದು ವಿರುದ್ಧಾಭಿಪ್ರಾಯವಾಗುವದು; ಪ್ರತಿದಿನವೂ ಮಾಡತಕ್ಕದ್ದೆಂದು ವಿಧಿಸಿರುವದರಿಂದ ಸಾಙ್ಗಧ್ಯಾನ ವಿಶೇಷವೇ ಹೇಳಬೇಕಾಗುತ್ತದೆ.

ಶ್ರೀ ಭಾಷ್ಯಕಾರೈರ್ಭರನ್ಯಾಸೋಪಾಯಸ್ಯ ಉಪಾದೇಯತ್ವ ಕಥನಮ್.

ಶ್ರೀ ಭಾಷ್ಯಕಾರರು ಇವ್ವುಪಾಯ ನಿಷ್ಠೈಯ್ಯೆ, ಶಿರಿಯ ಗದ್ಯತ್ತಿಲುಮ್, ಪೆರಿಯ ಗದ್ಯತ್ತಿಲುಮ್, ಅರುಳಿಚ್ಚೆಯ್‌ದು ಶ್ರೀವೈಕುಂಠಗದ್ಯ

ಇದೂ ಅಲ್ಲದೆ ಅವರು ಬರೆದಿರುವ ನಿತ್ಯವೆಂಬ ಗ್ರಂಥದಲ್ಲೂ ಪೂಜೋಪಕ್ರಮಾತ್ಪೂರ್ವಂ ಪ್ರತ್ಯಕ್ಷ ರೂಪಾನುಧ್ಯಾನೇನ ಧ್ಯಾಯನ್ನಾಸೀತ ಎಂದು ಹೇಳಿರುವದರಿಂದ ಉಪಾಸನವಾತ್ರವೇ ಉಪಾಯವೆಂದು ಹೇಳಲ್ಪಟ್ಟಹಾಗೆ ತೋರುತ್ತದೆ; ಮತ್ತು ಶ್ರೀ ಭಾಷ್ಯದಲ್ಲಿ ಪ್ರಪದನ ವಿಷಯವೇ ಹೇಳಲ್ಪಡದೆ ವೇದನ ಮೊದಲಾದ ಶಬ್ದಗಳಿಂದ ಉಪಾಸನವೇ ಹೇಳಲ್ಪಟ್ಟಿರುವದರಿಂದಲೂ, ಈ ಉಪಾಸನೆಗೆ ಅನನ್ಯೋಪಾಯತ್ವ ಪ್ರಯೋಗವಿರುವದರಿಂದಲೂ ಉಪಾಸನವೇ ಉಪಾಯವೇ ವಿನಾ ಭರನ್ಯಾಸವಲ್ಲವು" ಎಂಬುದು ಕೆಲವರ ಪೂರ್ವಪಕ್ಷವು; ಮತ್ತು ಶ್ರೀ ಭಗವದ್ಗೀತೆಯ ಚರಮಶ್ಲೋಕದ ಭಾಷ್ಯದಲ್ಲೂ ಉಪಾಸನಾಪರವಾಗಿ ವ್ಯಾಖ್ಯಾನ ಮಾಡಿದರೇ ವಿನಾ ಭರನ್ಯಾಸ ವಿಷಯವಾಗಿ ಅರ್ಥಮಾಡಲಿಲ್ಲವು. ಇವೆಲ್ಲಾ ಕಾರಣಗಳಿಂದಲೂ ಉಪಾಸನವೇ ಸಾಧ್ಯೋಪಾಯವೇ ವಿನಾ ಭರನ್ಯಾಸವಲ್ಲವು ಎಂಬುದು ಕೆಲವರ ಅಭಿಪ್ರಾಯವು. ಇದು ಸರಿಯಾದಭಿಪ್ರಾಯವಲ್ಲವೆಂದು ಮುಂದೆ ತಿಳಿಸುತ್ತಾರೆ. "ಯದ್ಯೇನ ಕಾಮಕಾಮೇನ" ಎಂದಾರಂಭಿಸಿ "ಸಾಧ್ಯತೇ ಪುರುಷೋತ್ತಮಃ" ಎಂದು ಮುಗಿಸಿರುವ ಅಹಿರ್ಬುಧ್ನ್ಯ ವಾಕ್ಯವು ನಿಸ್ಸಂಶಯವಾಗಿ ಈ ಪೂರ್ವಪಕ್ಷವನ್ನು ಖಂಡಿಸುತ್ತದೆ ಎಂದು ತಿಳಿಯತಕ್ಕದ್ದು. ಆದರೂ ಸ್ವತಂತ್ರಪ್ರಪತ್ತಿಯೂ ಸಹ ಉಪಾಯವೇ ಎಂಬದು, ಶ್ರೀ ಭಾಷ್ಯಕಾರರಭಿಪ್ರಾಯವು. ಇದನ್ನು ಮುಂದಿನ ವಾಕ್ಯಗಳಿಂದ ವ್ಯಕ್ತಪಡಿಸುತ್ತಾರೆ.

ಶ್ರೀ ಭಾಷ್ಯಕಾರರೇ ಸ್ವತಂತ್ರಪ್ರಪತ್ತಿಯನ್ನೂ ಉಪಾಯವೆಂದೂ ಅಙ್ಗೀಕರಿಸಿರುತ್ತಾರೆ.

ಶ್ರೀ ಭಾಷ್ಯಕಾರರೂ ಸಹ, ಇಲ್ಲಿ ಶ್ರೀ ಭಾಷ್ಯಕಾರರು ಸ್ವತಂತ್ರಪ್ರಪತ್ತಿಯನ್ನು ಉಪಾಯವಾಗಿ ಅಙ್ಗೀಕರಿಸಲೇ ಇಲ್ಲವೆಂದು ಹೇಳುವ ಪೂರ್ವಪಕ್ಷಕ್ಕೆ ಸಮಾಧಾನೋಕ್ತಿ ಮಾಡುವದರಿಂದ, ಅವರು ಶರಣ ಮುಂತಾದ ಗದ್ಯಗಳಲ್ಲೂ ಉಪಾಯವಾಗಿ ಅಙ್ಗೀಕರಿಸಿರುತ್ತಾರೆಂದು ಹೇಳುವದಕ್ಕಾಗಿ ಹಾಗೆ ಪ್ರಯೋಗವು ಇವ್ವುಪಾಯ ನಿಷ್ಠೈಯ್ಯೆ – ಈ ಭರನ್ಯಾಸವೆಂಬ ಉಪಾಯನಿಷ್ಠೆಯನ್ನು, ಶಿರಿಯ ಗದ್ಯತ್ತಿಲುಮ್ – ಚಿಕ್ಕ ಗದ್ಯದಲ್ಲೂ ಎಂದರೆ ಶ್ರೀರಂಗ ಗದ್ಯದಲ್ಲೂ, ಪೆರಿಯ

ತ್ತಿಲುಮ್ ಇನ್ನಿಷ್ಠೈಯೈಚ್ಚುರುಙ್ಗಕ್ಕಾಟ್ಟಿ, ಇರುನ್ದನಾಳ್ ಪ್ರಾಪ್ಯರುಚಿ ಕುಲೈಯಾದೆ ವಳರ್ನ್ದು ಪೋರುಮ್ಪಡಿಕ್ಕೀಡಾನ ಅನುಸಂಧಾನ ವಿಶೇಷತ್ತೈ "ತತಶ್ಚ ಪ್ರತ್ಯಹ ಮಾತ್ಮೋಜ್ಜೀವನಾಯೈವ ಮನುಸ್ಮರೇತ್" ಎನ್ರು ತುಡಙ್ಗಿ ಅರುಳಿಚ್ಚೆಯ್ದಾರ್.

ಗದ್ಯತ್ತಿಲುಮ್ - ಪೃಥು ಗದ್ಯವಲ್ಲದ ಎಂದರೆ ಶರಣಾಗತಿ ಗದ್ಯದಲ್ಲೂ, **ಅರುಳಿಚ್ಚೆಯ್ದು** - ಅನುಷ್ಠಿಸತಕ್ಕದ್ದೆಂದು ಹೇಳಿ, ಶ್ರೀ ವೈಕುಂಠ ಗದ್ಯದಲ್ಲೂ, **ಇನ್ನಿಷ್ಠೈಯೈ** - ಈ ಸ್ವತಂತ್ರ ಪ್ರಪತ್ತಿ ನಿಷ್ಠೆಯನ್ನು, **ಶುರುಙ್ಗಕ್ಕಾಟ್ಟಿ** - ಸಙ್ಗ್ರಹವಾಗಿ ತೋರಿಸಿ, **ಇರುನ್ದನಾಳ್** - ಪ್ರಪನ್ನನು ಈ ಪೃಥ್ವಿಯಲ್ಲಿರುವ ತನಕ, **ಪ್ರಾಪ್ಯ ರುಚಿಕುಲೈಯಾದೆ** - ಪ್ರಾಪ್ಯನಾದ ಶ್ರೀಯಃಪತಿಯನ್ನು ಹೋಗಿ ಸೇರಬೇಕೆಂಬುದರಲ್ಲಿ ಆಶೆಯು ನಷ್ಟವಾಗದಹಾಗೆ, **ವಳರ್ನ್ದು ಪೋರುಮ್ಪಡಿಕ್ಕೀಡಾನ**-ವೃದ್ಧಿಯಾಗುತ್ತಾ ಹೋಗುವದಕ್ಕನುಗುಣವಾದ, **ಅನುಸಂಧಾನ ವಿಶೇಷವನ್ನು**, "**ತತಶ್ಚ** - ಅನಂತರದಲ್ಲಿ, ಪ್ರತ್ಯಹಂ ಪ್ರತಿದಿನವೂ, ಆತ್ಮೋಜ್ಜೀವನಕ್ಕಾಗಿ, ಏವಂ - ಹೀಗೆಯೇ, **ಅನುಸ್ಮರೇತ್**-ಸ್ಮರಿಸತಕ್ಕದ್ದು," **ಎನ್ರು ತುಡಙ್ಗಿ** - ಎಂದಾರಂಭಿಸಿ, **ಅರುಳಿಚ್ಚೆಯ್ದಾರ್** - ಕೃಪಯಾ ಅಪ್ಪಣೆ ಕೊಡಿಸಿರುತ್ತಾರೆ. ಶಿರಿಯ ಗದ್ಯವಾದ ಶ್ರೀ ರಂಗಗದ್ಯದಲ್ಲಿ ಪ್ರಥಮತಃ ಭಕ್ತಿಯೋಗಕ್ಕೆ ಅಸಮರ್ಥತೆಯನ್ನು, ಭಕ್ತಿತದುಪಾಯತ್ವಕ್ಕೆ ಬೇಕಾದ ಸಮಸ್ತಾತ್ಮಗುಣ ವಿಹೀನನೆಂದು ಹೇಳಿ, ಭಗವನ್ಮಾಯಾತಿರೋಹಿತ ಸ್ವಪ್ರಕಾಶತೆಯಿಂದುಂಟಾದ ಕಾರ್ಪಣ್ಯವನ್ನು ಪ್ರದರ್ಶಿಸಿ, ಅದೃಷ್ಟಸಂತಾರೋಪಾಯಃ ಎಂಬದರಿಂದ ಅನನ್ಯಗತಿತ್ವವನ್ನು ತೋರ್ಪಡಿಸಿ, "ನಿಖಿಲಜನ್ತುಜಾತ ಶರಣ್ಯ" ಎಂದು ಸಂಬೋಧಿಸಿ, ಸಾಧಾರಣ ಜಂತುಗಳಿಗೂ ಕೂಡ ಶರಣ್ಯನಾಗಿರುವವನು ಪ್ರಪನ್ನರಾದ ತನಗೆ ಪರಾಙ್ಮುಖನಾಗುವನೇ ಎಂಬಭಿಪ್ರಾಯವನ್ನು ವ್ಯಕ್ತಪಡಿಸಿ, "ಶ್ರೀಮನ್ನಾರಾಯಣ ತವ ಚರಣಾರವಿಂದಯುಗಳಂ ಶರಣಮಹಂ ಪ್ರಪದ್ಯೇ" ಎಂದು ಶರಣಾಗತಿಯನ್ನನುಷ್ಠಿಸಿ, ಹೀಗೆ ಭರನ್ಯಾಸ ಮಾಡುವಾಗ ಮಹಾ ವಿಶ್ವಾಸವು ತನಗುಂಟೆಂದು "ವಿಶ್ವಾಸಪೂರ್ವಕಂ ಭಗವಂತಂ ನಿತ್ಯಕಿಂಕರತಾಂ ಪ್ರಾರ್ಥಯೇ" ಎಂದು ಹೇಳುತ್ತಾರೆ. ಪೃಥು ಗದ್ಯವಾದ ಶರಣಾಗತಿ ಗದ್ಯದಲ್ಲಿ, ಪ್ರಥಮತಃ ಶ್ರೀ ಶರಣಾಗತಿಯನ್ನು ಪುರುಷಕಾರತ್ವೇನ ಅನುಷ್ಠಿಸಿ ಅನಂತರ ಶ್ರಿಯಃಪತಿಯ ರಕ್ಷಣೋಪಯುಕ್ತ ಕಲ್ಯಾಣ ಗುಣಗಳನ್ನೆಲ್ಲಾ ಅನುಸಂಧಾನಮಾಡಿ "ಅಶರಣ್ಯ ಶರಣ್ಯ ಅನನ್ಯ ಶರಣಸ್ತ್ವತ್ಪಾದಾರವಿಂದ ಯುಗಳಂ ಶರಣಮಹಂ ಪ್ರಪದ್ಯೇ" ಎಂದು ಶರಣಾಗತಿಯನ್ನನುಷ್ಠಿಸಿರು

ಇಪ್ರಪನ್ನನುಕ್ಕು (೧) “ಪೂಶಿತ್ತುವರ್ ಪೋಕ್ಕಿನೇನ್ ಪೋದು” ಎಙ್ಗಿರ ಅನನ್ಯ ಪ್ರಯೋಜನಮಾನ ಪೂಜಾವಿಶೇಷತ್ತೈ, (೨) “ಅಥ ಪರಮೈಕಾಂತಿನೋ ಭಗವದಾರಾಧನ ಪ್ರಯೋಗಂ ವಕ್ಷ್ಯೇ, ಭಗವ

ತ್ತಾರೆ ಸರ್ವೇಶ್ವರನು ಪ್ರತಿವಚನ ರೂಪದಲ್ಲಿ ಅಭಯವನ್ನು “ನಿತ್ಯಕಿಂಕರೋ ಭವಿಷ್ಯಸಿ, ಮಾತೇಭೂದತ್ರ ಸಂಶಯಃ” ಎಂದು ದಯಪಾಲಿಸಿರುತ್ತಾನೆ. ಇದನ್ನು ಅನುಸಂಧಾನ ವಿಶೇಷವೆಂದು ಹೇಳಿರುತ್ತಾರೆ; ಏಕೆಂದರೆ ಭರನ್ಯಾಸವು ಗುರುಮುಖೇನ ಸಕೃದನುಷ್ಠೇಯವು. ಈ ಗದ್ಯಗಳಲ್ಲಿ ಶರಣಮಹಂ ಪ್ರಪದ್ಯೇ ಇತ್ಯಾದಿಗಳನ್ನು ನಿತ್ಯವೂ ಪಠನ ಮಾಡುವದರಿಂದ ನಿತ್ಯವೂ ಶರಣಾಗತಿಯನ್ನನುಷ್ಠಿಸಿದ ಹಾಗಾಗುವುದು. ಪ್ರತಿದಿನದಲ್ಲೂ ದ್ವಯಮಂತ್ರೋಚ್ಚಾರಣ ರೂಪ ಜಪವು ಹೇಗೆ ಭರನ್ಯಾಸವಾಗದೆ ಅದರ ಮಾಹಾತ್ಮ್ಯದ ಅನುಸಂಧಾನವೋ, ಹಾಗೆಯೇ ಈ ಗದ್ಯ ಪಠನವೂ ಎಂದು ಭಾವಿಸತಕ್ಕದ್ದು. ಹಾಗಾದರೆ ಈ ಅನುಸಂಧಾನದಿಂದುಂಟಾಗುವ ಪ್ರಯೋಜನವೇನೆಂದು ಪ್ರಶ್ನಿಸಬಹುದು. ಫಲರೂಪ ಭಕ್ತಿಯು ಸದಾ ನೆಲೆಗೊಂಡಿರುವದೇ ಪ್ರಯೋಜನವು. ಇದನ್ನೇ ಪ್ರಾಪ್ಯರುಚಿ ಕುಲೈಯಾದೇ ವಳರ್ನ್ದು ಪೋರುಮ್ ಪಡಿಕ್ಕೇಡಾನ ಅನುಸಂಧಾನವೆಂದು ಹೇಳಿರುತ್ತಾರೆ

ಆದರೆ ಶ್ರೀ ಭಾಷ್ಯಕಾರರು ತಾವು ಬರೆದಿರುವ “ನಿತ್ಯ”ವೆಂಬ ಭಗವದಾರಾಧನ ಕ್ರಮಾದಿಗಳನ್ನು ತಿಳಿಸುವ ಗ್ರಂಥದಲ್ಲಿ “ಪ್ರತ್ಯಕ್ಷರೂಪಾನುಧ್ಯಾನೇನ ಧ್ಯಾಯನ್ನಾಸೀತ” ಎಂದು ಉಪಾಸನ ರೂಪಸಾಕ್ಷಾತ್ಕಾರವನ್ನೇ ಉಪದೇಶಿಸಿರುವ ಹಾಗೆ ತೋರುತ್ತದೆಯಲ್ಲಾ ಎಂದರೆ ಹಾಗಲ್ಲವೆಂದೂ, ಅದು ಪ್ರಪನ್ನನಿಗೆ ಬೇಕಾದ ಫಲರೂಪ ಧ್ಯಾನವಾದ ಭಗವತ್ಕೈಂಕರ್ಯಕರತೆಯನ್ನೂ ಪರಮೈಕಾಂತಿತ್ವವನ್ನೂ ಬೋಧಿಸುತ್ತದೆ ಎಂದು ಹೇಳುತ್ತಾರೆ.

ಇಪ್ರಪನ್ನನುಕ್ಕು - ಈ ಪ್ರಪನ್ನನಿಗೆ (೧) “ಪೂಶಿತ್ತುವರ್ ಪೋಕ್ಕಿನೇನ್ ಪೋದು,” ಸರ್ವೇಶ್ವರನನ್ನು ಆರಾಧಿಸುತ್ತಾ ಕಾಲವನ್ನು ಕಳೆದೆನು” ಎಙ್ಗಿರ - ಎಂಬದಾಗಿ ಹೇಳುವ, ಅನನ್ಯಪ್ರಯೋಜನಮಾನ - ಸ್ವತಃ ಪ್ರಯೋಜನವಾಗಿ ಇನ್ನು ಬೇರೆ ಪ್ರಯೋಜನಕ್ಕಾಗಿ ಅಲ್ಲದ, ಪೂಜಾವಿಶೇಷತ್ತೈ - ಭಗವದಾರಾಧನೆಯನ್ನು, (೨) “ಅಥ - ಅನಂತರದಲ್ಲಿ, ಪರಮೈಕಾಂತಿನಃ - ಪರಮೈಕಾಂತಿಯ, ಭಗವದಾರಾಧನ ಪ್ರಯೋಗವನ್ನು, ವಕ್ಷ್ಯೇ - ಹೇಳುವೆನು; ಭಗ

---

(೧) ನಾನ್ಮುಗನ್ ತಿರುವಂದಾದಿ ೬೩. (೨) ಶ್ರೀ ಭಾಷ್ಯಕಾರರ ನಿತ್ಯಂ.

ತ್ಕೈಙ್ಕರ್ಯೈಕರತಿಃ ಪರಮೈಕಾಂತೀ ಭೂತ್ವಾ" ಎನ್ರು ತುಡಙ್ಗಿ, ನಿತ್ಯತ್ತಿಲೇ "ಅತ್ಯರ್ಥಪ್ರಿಯಾ ವಿರತ ವಿಶದತಮ ಪ್ರತ್ಯಕ್ಷರೂಪಾನು ಧ್ಯಾನೇನ ಧ್ಯಾಯನ್ನಾಸೀತ" ಎನ್ರು ಮರುಳಿಚ್ಚೆಯ್‌ದಾರ್.

ವತ್ಕೈಙ್ಕರ್ಯೈಕರತಿಃ - ಭಗವತ್ಕೈಙ್ಕರ್ಯ ಒಂದರಲ್ಲೇ ಆಶೆಯುಳ್ಳವನಾಗಿ, ಇದರಿಂದ ಇಂದ್ರಿಯೋಪಭೋಗಾದಿಗಳಲ್ಲಿ ಮನಸ್ಸಿಲ್ಲದವನಾಗಿ ಇರಬೇಕೆಂಬ ತಾತ್ಪರ್ಯವು. ಐಹಿಕಾಸಕ್ತಿಯಿಲ್ಲದೇ ಭಗವಂತನಾರಾಧನೆಯಲ್ಲಿ ಮನಸ್ಸಿಟ್ಟ' ಪರಮೈಕಾಂತೀಭೂತ್ವಾ - ಪರಮೈಕಾಂತಿಯಾಗಿ, ಆತನೊಬ್ಬನಲ್ಲೇ ಮನಸ್ಸನ್ನಿಟ್ಟವನಾಗಿ" ಎನ್ರುತುಡಙ್ಗಿ - ಎದಾರಂಭಿಸಿ, ನಿತ್ಯತ್ತಿಲೇ - ಶ್ರೀ ಭಾಷ್ಯಕಾರರು ಅನುಗ್ರಹಿಸಿರುವ ನಿತ್ಯವೆಂಬ ಗ್ರಂಥದಲ್ಲಿ, "ಅತ್ಯರ್ಥಪ್ರಿಯ - ನಿರತಿಶಯ ಪ್ರಿಯವಾಗಿ, ಅವಿರತ - ಎಡೆಬಿಡದ, ವಿಶದತಮ - ಅತ್ಯಂತ ವಿಶದವಾದ, ಪ್ರತ್ಯಕ್ಷರೂಪ - ಸಾಕ್ಷಾತ್ಕರಿಸಿರುವ, ಅನುಧ್ಯಾನೇನ - ಅನುಸಂಧಾನದಿಂದ ಕೂಡಿ, ಧ್ಯಾಯನ್ - ಪರಮಾತ್ಮನನ್ನು ಧ್ಯಾನಿಸುತ್ತಾ, ಆಸೀತ - ಕೂತುಇರತಕ್ಕದ್ದು" ಎನ್ರುಮ್ - ಎಂದು, ಅರುಳಿಚ್ಚೆಯ್‌ದಾರ್ - ಅಪ್ಪಣೆ ಕೊಡಿಸಿರುತ್ತಾರೆ ಇಲ್ಲಿ ನಿತ್ಯವೆಂಬ ಗ್ರಂಥವು ಪ್ರತಿದಿನದಲ್ಲೂ ಪ್ರಪನ್ನನೂ ಭಗವತ್ಕೈಙ್ಕರ್ಯ ರೂಪದಲ್ಲಿ ಮಾಡತಕ್ಕ ನಿತ್ಯ ನೈಮಿತ್ತಿಕ ಅನುಷ್ಠಾನಗಳನ್ನು ತಿಳಿಸುವ ಗ್ರಂಥವಾಗಿರುವದರಿಂದಲೂ ಶರಣಾಗತಿ ಗದ್ಯದಲ್ಲಿ ಹೇಳಿರುವ ಸ್ವತಂತ್ರ ಪ್ರಪತ್ತಿನಿಷ್ಠೆಯನ್ನು ಅನುಷ್ಠಿಸಿದ ನಂತರ ಉತ್ತರಕೃತ್ಯರೂಪದಲ್ಲಿ ಮಾಡುವ ಕೈಂಕರ್ಯ ವಿಷಯವಾದುದರಿಂದಲೂ, ಇಲ್ಲಿನ ಧ್ಯಾನವು, ಉಪಾಸನವನ್ನು ಎಂದಿಗೂ ಬೋಧಿಸಲಾರದು; ಆದುದರಿಂದ ಫಲರೂಪ ಭಕ್ತಿಗೆ ಸಹಕಾರಿಯಾಗಿ ಪ್ರತಿದಿನವೂ ಮಾಡತಕ್ಕ ನಿತ್ಯ ಕರ್ಮಾನುಷ್ಠಾನಕ್ಕೆ ಸೇರಿದ ಭಗವದಾರಾಧನ ರೂಪ ಧ್ಯಾನ ವಿಶೇಷವೆಂದು ಭಾವಿಸತಕ್ಕದ್ದು. ಇದೂ ಭಗವದಾರಾಧನಾಂಗವಾದ ಫಲರೂಪ ಧ್ಯಾನವೇ ವಿನಾ ಉಪಾಸನವಲ್ಲವೆಂಬ ಭಾವವು. ಪೂಶಿತ್ತುಂ ಪೋಕ್ಕಿನೇನ್ ಎಂಬ ಪೂರಾ ಪಾಶುರವು ಯಾವುದೆಂದರೆ:—

ತರಿತ್ತಿರುನ್ದೇನಾಗವೇ ತಾರಾಗಣಪ್ಪೋರ್
ವಿರಿತ್ತುರೈತ್ತವೆನ್ನಾಗತ್ತುನ್ನೈ-ತ್ತೆರಿತ್ತೆಳುದಿ
ವಾಶಿತ್ತುಙ್ಕೇಟ್ಟುಮ್ ವಣಙ್ಗಿ ವಳಿಪಟ್ಟುಮ್
ಪೂಶಿತ್ತುಮ್ಪೋಕ್ಕಿನೇನ್ ಪೋದು ॥ ೬೩ ॥ ಇದರರ್ಥವೇನೆಂದರೆ:—

ತಾರಾಗಣಪ್ಪೋರ್ ವಿರಿತ್ತುರೈತ್ತ - ನಕ್ಷತ್ರಗಳ ಸಂಚಾರವನ್ನು ಜ್ಯೋತಿಶ್ಶಾಸ್ತ್ರಮುಖೇನ ವಿಶದವಾಗಿ ಹೇಳಿದ, ವೆನ್ನಾಗತ್ತುನ್ನೈ - ಶತ್ರುಗಳಿಗೆ

ಭಯಂಕರನಾಗಿರುವ ಆದಿಶೇಷನಿಗೆ ಆತ್ಮನಾಗಿರುವ ನಿನ್ನನ್ನು, **ಎಳುದಿ ವಾಶಿತ್ತು ಕ್ಕೇಟ್ಟುಮ್** - ಬರೆದು, ಓದಿ, ಕೇಳಿ, ಎಂದರೆ ನಿನ್ನ ಮಾಹಾತ್ಮ್ಯೆಯೇನು, ದಿವ್ಯಚೇಷ್ಟಿತಗಳೇನು ನೀನು ಹೇಳಿದ ಶಾಸ್ತ್ರಗಳೇನು, ಇವುಗಳನ್ನು ಬರೆದು ಓದಿ ಮತ್ತು ಗುರುಗಳಮೂಲಕ ಉಪಾಯ ಯಾವುದೆಂದು ಕೇಳಿ, ತಿಳಿದು **ವಣಙ್ಗಿ** - ನಿನ್ನನ್ನು ಶರಣಾಗತಿಯ ಮೂಲಕ ಅಂತಹ ಗುರುವಿನ ಮೂಲಕವೇ, **ವಳಿಪಟ್ಟುಮ್** - ಅದರ ಅನುಸಂಧಾನಾದಿಗಳೇ ಯಾತ್ರೆಯಾಗಿ, **ಪೂಶಿತ್ತುಂ** - ಉತ್ತರ ಕೃತ್ಯರೂಪದಲ್ಲಿ ಆತನ ಆರಾಧನೆಯನ್ನು ಮಾಡಿಕೊಂಡು, **ಪೋಕ್ಕಿನೇನ್ ಪೋದು** - ಕಾಲವನ್ನು ಕಳೆದೆನು, **ಆಕನೇ ತರುತ್ತಿರನ್ದೇನ್** - ಆದುದರಿಂದಲೇ ನಾನು ಒಳ್ಳೆ ಸತ್ತೆಯನ್ನು ಹೊಂದಿರುತ್ತೇನೆ; **ಲೋಕದಲ್ಲಿ** ಎಲ್ಲರೂ ಹೀಗೆ ಮಾಡುವದಿಲ್ಲವೇ ಎಂದು ಆಳ್ವಾರವರಿಗೆ ಅವರ ವಿಷಯದಲ್ಲಿ ಪರಿತಾಪವೂ, ತಮ್ಮ ವಿಷಯದಲ್ಲಿ ಸಮಾಧಾನವೂ ಇಲ್ಲಿ ದ್ಯೋತಿತವು. ಶ್ರೀ ಭಾಷ್ಯಕಾರರು ತಾವು ಅನುಗ್ರಹಿಸಿರುವ ನಿತ್ಯವೆಂಬ ಗ್ರಂಥದಲ್ಲಿ ಹೇಳಿರುವ ಧ್ಯಾನಯುಕ್ತವಾದ ಪೂಜಾವಿಶೇಷವು ಉಪಾಸನೆಯ ವಿಷಯವಲ್ಲವೆಂದೂ, ಪ್ರಪತ್ತಿ ನಿಷ್ಠನಿಗೆ ಸ್ವಯಂ ಪ್ರಯೋಜನವಾದ ಭಕ್ತಿ ಪರೀವಾಹ ಕೈಙ್ಕರ್ಯವೆಂದೂ, ಸಂಧ್ಯಾವಂದನಾದಿ ನಿತ್ಯ ನೈಮಿತ್ತಿಕಗಳೂ ಕೂಡ ಹೇಗೆ ಕೈಙ್ಕರ್ಯಗಳೋ, ಹಾಗೆಯೇ ಧ್ಯಾನಯುಕ್ತ ಭಗವದಾರಾಧನೆಯೂ ಕೂಡ ಭಗವತ್ಪ್ರೀತಿಜನಕ ಕೈಙ್ಕರ್ಯವೇ ಎಂಬ ಭಾವವು. ಹಾಗೆ ಶ್ರೀ ಭಾಷ್ಯಕಾರರು ಹೇಳಿರುವದು ಪ್ರಮಾಣಪುರಸ್ಸರವಾಗಿಯೇ ಹೇಳಿರುತ್ತಾರೆ ಭಗವಚ್ಛಾಸ್ತ್ರವೂ ಆಳ್ವಾರ್ ಆಚಾರ್ಯರುಗಳೂ ವ್ಯಾಸ ದಕ್ಷಾದಿ ಮಹರ್ಷಿಗಳೂ ಹಾಗೆಯೇ ವಿಧಿಸಿರುತ್ತಾರೆಂದು ಹೇಳುತ್ತಾರೆ. ಹೀಗೆ ಶ್ರೀ ಭಾಷ್ಯಕಾರರು ಉಪದೇಶಿಸಿರುವ ಪಾಂಚಕಾಲಿಕ ಭಗವದಾರಾಧನರೂಪ ಅನುಷ್ಠಾನಗಳು ಅವರೇ ಸ್ವತಂತ್ರಿಸಿ ವಿಧಿಸಿದ ಕ್ರಮವಲ್ಲವೆಂದೂ ಶಾಸ್ತ್ರಪ್ರಮಾಣ ಸಮ್ಮತಿಯೂ, ಮಹರ್ಷಿಗಳು ಮತ್ತು ಆಳ್ವಾರಾಚಾರ್ಯರುಗಳು ಅನುಷ್ಠಿಸುವದರಿಂದ ಶಿಷ್ಟಾಚಾರ ಸಮ್ಮತಿಯೂ, ಉಂಟೆಂದು ಹೇಳುತ್ತಾರೆ.

ಅಭಿಗಮನಾದಿ ಪಾಂಚಕಾಲಿಕಾನುಷ್ಠಾನಗಳ ಕರ್ತವ್ಯತೆಯು.

ಸ್ವತಂತ್ರ ಪ್ರಪತ್ತಿಯನ್ನು ಅನುಷ್ಠಿಸಿದವನಿಗೂ ಕೂಡ ಭಗವದ್ಧ್ಯಾನವಲ್ಲಿ ಸ್ವಯಂ ಪ್ರಯೋಜನವಾಗಿ ಫಲರೂಪವಾಗಿ ಅನ್ವಯ ಉಂಟೆಂದು ಉಪದೇಶಿಸಿದರು. ಪಾಂಚಕಾಲಿಕ ಅನುಷ್ಠಾನಗಳ ಕರ್ತವ್ಯತೆಯನ್ನು ಪ್ರತಿಪಾದಿಸಿ, ಅವು ಹೇಗೆ ಪ್ರಪನ್ನನಿಗೆ ಮುಖ್ಯವಾಗಿ ಕರ್ತವ್ಯಗಳೋ, ಹಾಗೆಯೇ ಇದೂ ಎಂದು ಹೇಳಿ ಇಂತಹ ಧ್ಯಾನವು ಸ್ವಯಂಪ್ರಯೋಜನವಾಗಿ ಸರ್ವಾಧಿಕಾರವುಳ್ಳದ್ದು, ಎಂಬುದ

ಅಭಿಗಮನಾದೀನಾಂ ಸ್ವಯಂ ಪ್ರಯೋಜನತ್ವೇನ ಕರ್ತವ್ಯತ್ವಂ

ಇಪ್ಪಡಿ ಅನನ್ಯ ಪ್ರಯೋಜನ ನಿರಂತರ ಭಗವದನುಸಂಧಾನ ಪರೀವಾಹಮಾನ ಕೈಙ್ಕರ್ಯತ್ತಿಲೇ ಭಗವಚ್ಛಾಸ್ತ್ರೋಕ್ತಮುಮಾಯ್, ವ್ಯಾಸದಕ್ಷಾದಿ ಮತಙ್ಗಳೋಡುಮ್ ಸಂಗತಮಾಯ್, (೧) "ಮುರನ್ತಿಕಳು" ಮೆಙ್ಗಿರ ಪಾಟ್ಟಿಲ್, (೨) "ಇರುಮು ಪ್ಪೊಳದೇತ್ತಿ" ಎಙ್ಗಿರ ಪಾಶುರತ್ತುಕ್ಕು ವಿವಕ್ಷಿತಮಾಗ ಆಚಾರ್ಯರ್‌ಗಳ್ ಪಣ್ಣಿನ ಕಾಲ ವಿಭಾಗತ್ತೈ (೩)"ಅಭಿಗಚ್ಛೇ ಹರಿಂ ಪ್ರಾತಃ ಪಶ್ಚಾದ್ದ್ರವ್ಯಾಣಿಚಾರ್ಜಯೇತ್ । ಅರ್ಚ

ರಲ್ಲಿ ಸಂದೇಹವಿಲ್ಲವೆಂದು ತೋರಿಸಿ ಅದಕ್ಕೆ ಪ್ರಮಾಣಗಳನ್ನು ಸೂಚಿಸುತ್ತಾರೆ.

ಇಪ್ಪಡಿ - ಶ್ರೀ ಭಾಷ್ಯಕಾರರು ಅಪ್ಪಣೆ ಕೊಡಿಸಿರುವ ಮೇರೆಗೆ ಅಥವಾ ಇದೇ ಪ್ರಕಾರವಾಗಿಯೇ ಹೀಗೆ, **ಅನನ್ಯಪ್ರಯೋಜನ**-ಬೇರೆ ಯಾವ ಪ್ರಯೋಜನಕ್ಕೂ ಅಲ್ಲವೆ ಸ್ವಯಂ ಪ್ರಯೋಜನವಾದ, **ನಿರಂತರವೂ ಭಗವದನುಸಂಧಾನದ, ಪರೀವಾಹಮಾನ,** ಪ್ರವಾಹವಾದ **ಕೈಙ್ಕರ್ಯದಲ್ಲಿ, ಭಗವಚ್ಛಾಸ್ತ್ರೋಕ್ತಮುಮಾಯ್**-ಭಗವಚ್ಛಾಸ್ತ್ರದಲ್ಲಿ ಹೇಳಲ್ಪಟ್ಟು, **ವ್ಯಾಸದಕ್ಷಾದಿಗಳ, ಮತಙ್ಗಳೋಡು ಸಙ್ಗತಮಾಯ್** - ಅಭಿಪ್ರಾಯದೊಂದಿಗೆ ಸೇರಿರುದಾಗಿ ಎಂದರೆ ಆ ಮಹರ್ಷಿಗಳ ಅಭಿಪ್ರಾಯಕ್ಕನುಗುಣವಾಗಿ, **"ಮುರನ್ತಿಗಳುಮ್"** ಎಂಬ ಕುಲಶೇಖರಾಳ್ವಾರ್ರವರ ಪೆರುಮಾಳ್ ತಿರುಮೊಳಿಯ ಏಳನೆಯ ಪಾಶುರದಲ್ಲಿ **"ಇರಮು ಪ್ಪೊಳದೇತ್ತಿ"** ಎರಡಾಗಿರುವ ಮತ್ತು ಮೂರಾಗಿರುವ ಎಂದರೆ ಐದಾಗಿರುವ ಕಾಲದಲ್ಲಿ ಸ್ತೋತ್ರಮಾಡಿ ಎಂದರೆ ಪಾಂಚಕಾಲಿಕ ಅನುಷ್ಠಾನಗಳಿಂದ ಭಗವಂತನನ್ನು ಅರ್ಚಿಸಿ ಎಂಬರ್ಥವು. **ಎಙ್ಗಿರ ಪಾಶುರತ್ತುಕ್ಕು** - ಎನ್ನುವ ಪಾಶುರದ, **ವಿವಕ್ಷಿತಮಾಗ** - ಉಪದೇಶಕ್ಕೆ ಉದ್ದೇಶ್ಯವಾಗಿ, **ಆಚಾರ್ಯರ್‌ಗಳ್** - ಶ್ರೀಭಾಷ್ಯಕಾರರೂ ಮತ್ತು ವಂಗಿಪುರದ ನಂಬಿ ಮೊದಲಾದ ಆಚಾರ್ಯರುಗಳು, **ಪಣ್ಣಿನಕಾಲ ವಿಭಾಗತ್ತೈ** - ಮಾಡಿದ ಪಾಂಚಕಾಲಿಕ ವಿಭಾಗವನ್ನು, (ಇದು **ನಿತ್ಯತ್ತಿಲೆ ಸಙ್ಗ್ರಹಿತ್ತಾರ್** ಎಂಬುದಕ್ಕೆ ಕರ್ಮವು), ಕಾಲವಿಭಾಗ ಹೇಗೆ ಎಂದರೆ ಹೇಳುತ್ತಾರೆ:—"**ಪ್ರಾತಃ** - ಪ್ರಾತಃಕಾಲದಲ್ಲಿ, **ಹರಿಂ** – ದುರಿತನಾಶಕನಾದ ಭಗವಂತನನ್ನು, **ಅಭಿಗಚ್ಛೇ** - ಅಭಿಗಮನಾರಾಧನವನ್ನು ಮಾಡಿ, **ಪಶ್ಚಾತ್** - ಅನಂತರ, **ದ್ರವ್ಯಾಣಿ**-ಆರಾಧನೆಗೆ ಬೇಕಾದ ತುಳಸೀ ಪುಷ್ಪ ಮೊದ

---

(೧) ಪೆರಿ. ತಿರು. ೧. ೭. (೨) ಪೆರು. ತಿರು. ೧. ೭. (೩) ವಂಗಿ. ನಿತ್ಯಂ.

ಯಂಶ್ಚ ತತೋ ದೇವಂ ತತೋ ಮಂತ್ರಾನ್ ಜಪನ್ನಪಿ ॥ ಧ್ಯಾಯನ್ನಪಿ ಪರಂದೇವಂ ಕಾಲೇಷೂಕ್ತೇಷು ಪಂಚಸು । ವರ್ತಮಾನಸ್ಸದಾಚೈವಂ ಪಾಂಚಕಾಲಿಕವರ್ತ್ಮನಾ ॥ ಸ್ವಾರ್ಜಿತೈರ್ಗಂಧ ಪುಷ್ಪಾದ್ಯೈಶ್ಶುಭೈಶ್ಶಕ್ತ್ಯನುರೂಪತಃ । ಆರಾಧಯನ್ ಹರಿಂ ಭಕ್ತ್ಯಾ ಗಮಯಿಷ್ಯಾಮಿ ವಾಸರಾನ್”

ಲಾದ ದ್ರವ್ಯಗಳನ್ನು, **ಆರ್ಜಯನ್** - ಸಂಪಾದಿಸುವವನಾಗಿ (ಇದರಿಂದ) ಎರಡನೆಯ ಉಪಾದಾನಕಾಲವು ಹೇಳಲ್ಪಟ್ಟಿತು, **ತತಃ** - ಅನಂತರ, **ದೇವಂ**-ಲೀಲಾಸಕ್ತನಾದ, ಸರ್ವೇಶ್ವರನನ್ನು, **ಅರ್ಚಯನ್** - ಆರಾಧಿಸುವವನಾಗಿ (ಇದರಿಂದ ಮೂರನೆಯ ಇಜ್ಯಾಕಾಲವು ಬೋಧಿಸಲ್ಪಟ್ಟಿತು) **ತತಃ** - ಅನಂತರ, **ಮಂತ್ರಾನ್ ಜಪನ್ನಪಿ** - ಅಷ್ಟಾಕ್ಷರ ದ್ವಯ ದ್ವಾದಶಾಕ್ಷರಾದಿ ಮಂತ್ರಗಳನ್ನು ಜಪಮಾಡಿಕೊಂಡವನಾಗಿ, (ಸ್ವಾಧ್ಯಾಯಕಾಲ) **ಪರಂದೇವಂ** - ಸರ್ವೋತ್ಕೃಷ್ಟನಾಗಿರುವ ಸರ್ವೇಶ್ವರನನ್ನು, **ಧ್ಯಾಯನ್ನಪಿ** - ಧ್ಯಾನಿಸುವವನಾಗಿ (ಯೋಗಕಾಲ) ಹೀಗೆ **ಉಕ್ತೇಷು ಪಂಚಸು ಕಾಲೇಷು** - ಹೇಳಲ್ಪಟ್ಟ ಐದು ಕಾಲಗಳಲ್ಲೂ, **ವರ್ತಮಾನಃ**-ಇರುವವನಾಗಿ, **ಸದಾ ಚ**-ಯಾವಾಗಲೂ, **ಏವಂ** ಈ ಪ್ರಕಾರವಾಗಿ, **ಪಾಂಚಕಾಲಿಕ ವರ್ತ್ಮನಾ** - ಐದು ಕಾಲಗಳಲ್ಲೂ ಆರಾಧಿಸುವ ಮಾರ್ಗದಿಂದ, **ಸ್ವಾರ್ಜಿತೈಃ** - ತನ್ನಿಂದಲೇ ಸಂಪಾದಿಸಲ್ಪಟ್ಟ, ಇತರರಿಂದ ಸಂಪಾದಿಸಲ್ಪಟ್ಟದುದು ಅಷ್ಟು ಪ್ರಶಸ್ತವಲ್ಲವೆಂಬುದು ಇದರಿಂದ ಏರ್ಪಟ್ಟಿತು, **ಶುಭೈಃ** - ಮಂಗಳಕರಗಳಾದ, **ಗಂಧ ಪುಷ್ಪಾದ್ಯೈಃ** - ಗಂಧ ಪುಷ್ಪ ಮೊದಲಾದವುಗಳಿಂದ, ಧೂಪ ದೀಪ ನಿವೇದನ ಮೊದಲಾದವುಗಳು ಆದಿ ಶಬ್ದದಿಂದ ಹೇಳಲ್ಪಟ್ಟವು, **ಶಕ್ತ್ಯನುರೂಪತಃ ಆರಾಧಯನ್** - ತನ್ನ ಶಕ್ತಿಗೆ ಅನುಸಾರವಾಗಿ ಆರಾಧಿಸುವವನಾಗಿ, **ವಾಸರಾನ್**-ದಿನಗಳನ್ನು, **ಗಮಯಿಷ್ಯಾಮಿ**-ಕಳೆಯುವೆನು ಎಂದರೆ ಕಾಲಯಾಪನೆ ಮಾಡುವೆನು; ದೇವರು ತನಗೆ ಅನುಗ್ರಹಿಸಿರುವ ಸ್ಥಿತಿಗೆ ಅನುಗುಣವಾಗಿ ಆರಾಧಿಸತಕ್ಕದ್ದು, ತುಂಬಾ ಬಡವನಾಗಿದ್ದರೆ, **ಪತ್ರಂ ಪುಷ್ಪಂ** ಎಂಬುದಾಗಿ ಅಲ್ಪವಾದವುಗಳನ್ನು ಒಪ್ಪಿಸಿದರೂ ಸ್ವೀಕರಿಸುವನು, ಶ್ರೀಮಂತನಾದರೋ ತನ್ನ ಸ್ಥಿತಿಗೆ ಅನುಗುಣವಾಗಿ ಉತ್ತಮ ವಸ್ತುಗಳನ್ನು ಸಮರ್ಪಿಸಿ ಆರಾಧಿಸತಕ್ಕದ್ದು; ಅಥವಾ **ಶಕ್ತ್ಯನುರೂಪತಃ** ಎಂಬುದನ್ನು ಆರಾಧಯನ್ ಎಂಬುದರೊಂದಿಗೆ ಅನ್ವಯಿಸಿದರೆ, ದೇಹಾರೋಗ್ಯ ಭಾಗ್ಯಗಳೂ ತುಂಬಾ ಶಕ್ತಿಯಿರುವಾಗ ಚೆನ್ನಾಗಿ ಶಾಸ್ತ್ರರೀತ್ಯಾ ಆರಾಧಿಸತಕ್ಕದ್ದೆಂದೂ, ದೇಹಾರೋಗ್ಯ ಶಕ್ತಿಗಳು ಕಡಿಮೆಯಾಗಿದ್ದರೆ ತದನುಗುಣವಾಗಿ ಆರಾಧಿಸತಕ್ಕದ್ದೆಂದೂ [illegible] **ಮಾಡಬಹುದು;” ಎನ್ನು** - ಎಂಬದಾಗಿ, **ಭಾಷ್ಯಕಾರರ್**-ತನ್ನ ಯತಿವರ್ಯರು,

ಎನ್ರು ಭಾಷ್ಯಕಾರರ್ ಅರುಳಿಚ್ಚೆಯ್ಯ ಕೇಟ್ಟು, ವಂಗಿ ಪುರತ್ತು ನಮ್ಬಿ ನಿತ್ಯತ್ತಿಲೆ ಸಙ್ಗ್ರಹಿತ್ತಾರ್.

ಅರುಳಿಚ್ಚೆಯ್ಯಕೇಟ್ಟು - ಉಪದೇಶಿಸಿದುದನ್ನು ಕೇಳಿ, ವಂಗಿಪುರುತ್ತುನಮ್ಬಿ- ವಂಗಿಪುರದ ನಂಬಿಯವರು, ನಿತ್ಯತ್ತಿಲೇ - ತಾವು ಬರೆದ ಐನೂರು ಶ್ಲೋಕಗಳುಳ್ಳ ಪಾಂಚಕಾಲಿಕ ಅನುಷ್ಠಾನ ಪ್ರಕ್ರಿಯೆಯನ್ನು ತೋರಿಸುವ ನಿತ್ಯ ವೆಂಬ ಗ್ರಂಥದಲ್ಲಿ, ಸಂಗ್ರಹಿತ್ತಾರ್ - ಸಂಗ್ರಹಿಸಿ ಹೀಗೆ ಹೇಳಿರುತ್ತಾರೆ.

ಈ ಪಾಂಚಕಾಲಿಕಾನುಷ್ಠಾನವು ಭಗವಚ್ಛಾಸ್ತ್ರದಲ್ಲಿ ಹೇಳಲ್ಪಟ್ಟಿರುತ್ತದೆ ಎಂದು ತಿಳಿಸುತ್ತಾರೆ:—ಜಯಾಖ್ಯ ಸಂಹಿತೆಯಲ್ಲಿ "ಏಕೋಹಿ ಶ್ರೂಯತೇ ದೇವ ಕಾಲೋ ಲೋಕೇ ಸದಾ ಪರಃ। ಪಂಚಕಾಲಾ ಸ್ತ್ವಯೋದ್ದಿಷ್ಟಾಃ ಕಿಮೇ ತನ್ಮೇಽತ್ರ ಸಂಶಯ" ಕಾಲವೆಲ್ಲಾ ಒಂದೇಯಾಗಿ ತೋರುತ್ತಿರುವಲ್ಲಿ, ಪಂಚಕಾಲವೆಂದು ನಿನ್ನಿಂದ ಉಪದೇಶಿಸಲ್ಪಟ್ಟಿತಲ್ಲಾ, ಆ ಸಂಶಯವನ್ನು ಹೋಗಲಾಡಿಸು ಎಂದು ನಾರದರಿಂದ ಪ್ರಶ್ನಿಸಲ್ಪಡಲಾಗಿ ಭಗವಂತನು ಹೇಳುತ್ತಾನೇನೆಂದರೆ :—

"ಏಕಸ್ಯೈವ ಹಿ ಕಾಲಸ್ಯ ವಾಸರೀಯಸ್ಯ ನಾರದ।
ಆ ಪ್ರಭಾತಾನ್ನಿಶಾಂತಂ ಸ್ಯ ಪಂಚಧಾ ಪರಿಕಲ್ಪನಾ॥
ಪೃಥಕ್ಕರ್ಮವಶಾತ್ತ್ಯಯಾರ್ಗ ನಕಾಲಾ ಬಹವ ಸ್ಸ್ಮೃತಾಃ"

ಕಾಲವೆನ್ನುವುದು ಒಂದೇ. ಅನೇಕವಲ್ಲವು. ಒಂದುದಿನದಲ್ಲೇ ಪ್ರಭಾತಸಮಯ ಮೊದಲುಗೊಂಡು ರಾತ್ರಿಯಾಗ ವವರೆಗೂ ಇರುವಕಾಲ ಐದಾಗಿ ಭಾಗಿಸಿ ಆಯಾ ಭಾಗಗಳಲ್ಲಿ ಮಾಡತಕ್ಕ ಕಾರ್ಯವು ಬೇರೆಬೇರೆಯೆಂದು ತಿಳಿಯತಕ್ಕದ್ದು ಎಂದು ಭಗವಂತನು ಹೇಳಲು, ಆ ಐದು ಕಾಲಗಳಲ್ಲೂ ಮಾಡತಕ್ಕದ್ದು ಯಾವುವು ಎಂದು ನಾರದರಿಂದ ಪ್ರಶ್ನಿಸಲ್ಪಟ್ಟ ಭಗವಂತನೇ ಪುನಃ ಹೇಳುತ್ತಾನೆ :—

ಬ್ರಾಹ್ಮ್ಯ ಮುಹೂರ್ತ ದಾರಭ್ಯ ಪ್ರಾಗಂಶಂ ವಿಪ್ರ ವಾಸರೇ। ಜಪಧ್ಯಾನಾರ್ಚನಸ್ತೋತ್ರೈಃ ಕರ್ಮಣಾಕೃತ್ಯ ಸಂಯುತೈಃ। ಅಭಿಗಚ್ಛೇ ಜ್ಜಗದ್ಯೋನಿಂ ತಚ್ಚಾಭಿಗಮನಂ ಸ್ಮೃತಂ। ತತಃ ಪುಷ್ಪಫಲಾದೀನಾಮರ್ಥಾಯಾರ್ಜನ ಮಾಚರೇತ್। ಭಗವದ್ಯಾಗ ನಿಷ್ಪತ್ತಿ ಕಾರಣಂ ಪ್ರಹರಾತ್ಪರಂ। ತದುಪಾದಾನ ಸಂಜ್ಞಂ ವೈ ಕರ್ಮಕಾಲ ಮದಾಶ್ರಿತಂ। ತತೋಷ್ಟಾಂಗೇನಯೋಗೇನ ಪೂಜಯೇತ್ಪರಮೇಶ್ವರಂ ಸಾಧಿಕಂ ಪ್ರಹರಂ ವಿಪ್ರ

ಇಜ್ಯಾಕಾಲಸ್ತು ಕಸ್ಸ್ಮೃತಃ । ಶ್ರವಣಂ ಚಿಂತನಂ ವ್ಯಾಖ್ಯಾ ತತಃ ಪಾಠ ಸಮನ್ವಿತಾ । ಸ್ವಾಧ್ಯಾಯ ಸಂಜ್ಞಂ ತದ್ವಿದ್ಧಿ ಕಾಲಾಂತಂ ಮುನಿಸತ್ತಮ । ದಿವಾವಸಾನೇ ಸಂಪ್ರಾಪ್ತೇ ಪ್ರೋಕ್ತಾಂ ಕೃತ್ವಾ ಸಮಭ್ಯಸೇತ್ । ಯೋಗಂ ನಿಶಾವಸಾನೇಚ ವಿಶ್ರಮೇ ನಾಂತರೀಕೃತಂ । ಪಂಚಮೋ ಯೋಗ ಸಂಜ್ಞೋಸೌ ಕಾಲಾಂಶೋ ಬ್ರಹ್ಮಸಿದ್ಧಿದ ॥

ಇದರಿಂದ ಹಗಲಿನ ಕಾಲವು ರಾತ್ರಿಯವರೆಗೂ (೧) ಅಭಿಗಮನ (೨) ಉಪಾದಾನ (೩) ಇಜ್ಯಾ (೪) ಸ್ವಾಧ್ಯಾಯ (೫) ಯೋಗವೆಂಬದಾಗಿ ಐದಾಗಿ ವಿಭಜನೆಮಾಡಿ, ಆ ಕಾಲಗಳಲ್ಲಿ ಏನು ಮಾಡತಕ್ಕದ್ದೆಂಬುದು ವಂಗಿ ನಿತ್ಯದಲ್ಲಿ ಹೇಳಿರುವಹಾಗೆ ಎಂದು ಭಾವಿಸತಕ್ಕದ್ದು.

(೨) ಪಾದ್ಮ ಪುರಾಣದಲ್ಲಿ:—"ಪಂಚಕಾಲ ವಿಧಿಜ್ಞಾನಾಂ ಪ್ರಾಶಸ್ತ್ಯಂ ಭಗವನ್ನಿಹ । ಕಥಿತಂ ಪಂಚಕೇ ಕಾಲಾ ವಿಧಯಶ್ಚಾಪಿ ಪಂಚಕೇ" ಎಂಬದಾಗಿ ಚತುರ್ಮುಖನಿಂದ ಕೇಳಲ್ಪಡಲಾಗಿ ಭಗವಂತನು ಹೇಳುತ್ತಾನೆ:— "ಆದ್ಯಂ ತ್ವಭಿಗಮನಮುಪಾದಾನಂ ತತಃ ಪರಂ । ಇಜ್ಯಾಚ ಪಶ್ಚಾತ್ಸ್ವಾಧ್ಯಾಯ ಸ್ತತೋಯೋಗಸ್ತತಃ ಪರಂ । ಪಂಚೈವ ವಿಧಯಸ್ತೇಷಾಂ ಕಾಲಾಃ ಪಂಚೈವತೇ ಕ್ರಮಾತ್" ಎಂಬದಾಗಿ

(೩) ಸಾತ್ವತ ಪೌಷ್ಕರಗಳಲ್ಲೂ ಹೀಗೆಯೇ ಹೇಳಲ್ಪಟ್ಟಿರುತ್ತದೆ.

(೪) ಶ್ರೀ ವ್ಯಾಸಮಹರ್ಷಿಯು ಹೇಳಿರುವದೇನೆಂದರೆ:—"ಬ್ರಾಹ್ಮೇ ಮುಹೂರ್ತೇ ಉತ್ಥಾಯ" ಎಂದು ಪ್ರಾರಂಭಿಸಿ, "ಅಥಾಗತ್ಯ ಗೃಹಂ ವಿಪ್ರಸ್ಸಮಾಚಮ್ಯ ಯಥಾವಿಧಿ । ಪ್ರಜ್ವಾಲ್ಯ ವಹ್ನಿಂ ವಿಧಿವತ್" ಎಂದು ಮುಗಿಸಿ ಬೆಳಗ್ಗೆ ಹೋಮ ಪರ್ಯಂತ ಪ್ರಾತಸ್ಸ್ನಾನ ಕ್ರಿಯಾಕಲಾಪವನ್ನೆಲ್ಲಾ ಹೇಳಿ, "ದೇವಾದೀನಾಂ ನಮಸ್ಕುರ್ಯಾದುಪಹಾರಂ ನಿವೇದಯೇತ್" ಎಂದು ಅಭಿಗಮನವನ್ನು ಹೇಳಿ, "ಉಪೇಯಾದೀಶ್ವರಂ ಚಾಪಿ ಯೋಗಕ್ಷೇಮಾರ್ಥ ಸಿದ್ಧಯೇ । ಸಾಧಯೇ ದ್ವಿವಿಧಾನರ್ಥಾನ್" ಎಂದು ಉಪಾದಾನವನ್ನು ಹೇಳಿ "ತತೋ ಮಧ್ಯಾಹ್ನ ಸಮಯೇ" ಎಂದಾರಂಭಿಸಿ, "ನ ವಿಷ್ಣ್ವಾರಾಧನಾತ್ಪುಣ್ಯಂ ವಿದ್ಯತೇ ಕರ್ಮ ವೈದಿಕಂ । ತಸ್ಮಾದನಾದಿಮಧ್ಯಾಂತಂ ನಿತ್ಯಮಾರಾಧಯೇದ್ಧರಿಂ । ತದ್ವಿಷ್ಣೋರಿತಿ ಮಂತ್ರೇಣ ಸೂಕ್ತೇನ ಪುರುಷೇಣತು । ನೈತಾಭ್ಯಾಂ ಸದೃಶೋ ಮಂತ್ರೋ ವೇದೇಷೂಕ್ತಶ್ಚತುರ್ಷ್ವಪಿ । ನಿವೇದಯೀತ ಸ್ವಾತ್ಮಾನಂ ವಿಷ್ಣಾವಮಲ ತೇಜಸಿ" ಹೀಗೆ ಭಗವದಾರಾಧನವನ್ನು ಇಜ್ಯಾ ಕಾಲದಲ್ಲಿ ಮಾಡತಕ್ಕದ್ದೆಂದು ವಿಧಿಸಿ, (ಇಲ್ಲಿ ಭಗವದಾರಾಧನವು ಸ್ವಪದಸಾನುಸಂಧಾನವೇ ಎಂದೂ ಅವುಗಳಲ್ಲಿ "ತದ್ವಿಷ್ಣೋಃ ಪರಮಂ

ಪದಂ” ಎಂಬ ಮಂತ್ರವೂ, ಪುರುಷ ಸೂಕ್ತವೂ ಸಹ ವೇದಗಳಲ್ಲೆಲ್ಲಾ ಸರ್ವ ಶ್ರೇಷ್ಠವೆಂದು ಮಹರ್ಷಿಯಿಂದ ಹೇಳಲ್ಪಟ್ಟಿತು.) ಅಲ್ಲಿಂದ ಭೋಜನ, ಸ್ವಲ್ಪ ವಿಶ್ರಮ, ಅನಂತರ ಸ್ವಾಧ್ಯಾಯ ಕ್ರಮವೆಂದು ಹೇಳಲು, “ಭುಕ್ತ್ವೈವಂ ಸುಖಮಾಸ್ಥಾಯ ತದನ್ನಂ ಪರಿಣಾಮಯೇತ್ । ಇತಿಹಾಸ ಪುರಾಣಾಭ್ಯಾಮ್ ವೇದಂ ಸಮುಪಬೃಹ್ಮಯೇತ್” ಎಂದು ಸ್ವಾಧ್ಯಾಯವನ್ನು ಹೇಳಿ, “ತಥಾಕ್ಷರೇಣಸ್ವಾತ್ಮಾನಂ ಯೋಜಯೇತ್ಬ್ರಹ್ಮಣೇತಿಹಿ। ಸರ್ವೇಷಾಮೇವ ಯೋಗಾನಾಮಾತ್ಮಯೋಗಃ ಪರಸ್ಸ್ಮೃತಃ।ಯೋಗೇನ ವಿಧಿನಾ ಕುರ್ವಾತ್ಸಯಾತಿ ಪದ ಮಕ್ಷಯಂ” ಎಂದು ಯೋಗವನ್ನು ಹೇಳಿ, ಕೊನೆಗೆ “ತದೇತದಖಿಲೇನೋಕ್ತ, ಮಹನ್ಯಹನಿ ಯನ್ಮಯಾ । ಬ್ರಾಹ್ಮಣಾನಾಂ ಕೃತ್ಯಜಾತ ಮಪವರ್ಗ ಫಲಪ್ರದಂ” ಹೀಗೆ ಪ್ರತಿ ದಿನವೂ ಪಾಂಚಕಾಲಿಕ ಅನುಷ್ಠಾನಗಳನ್ನು ನಡಿಸೋಣವು ಮುಕ್ತಿಪ್ರದವೆಂದು ಹೇಳಿ ಮುಗಿಸಿರುತ್ತಾರೆ.

ಳ ದಕ್ಷರಿಂದ ಹೇಳಲ್ಪಟ್ಟಿರುವದೇನೆಂದರೆ:—ಪ್ರಾತರುತ್ಥಾಯ ಕರ್ತವ್ಯಮ್ ಯದ್ದ್ವಿಜೇನ ದಿನೇದಿನೇ । ತತ್ಸರ್ವಂ ಸಂಪ್ರವಕ್ಷ್ಯಾಮಿ ದ್ವಿಜಾನಾಮುಪಕಾರಕಂ” ಬೆಳಿಗ್ಗೆ ಎದ್ದು ಪ್ರತಿದಿನವಲ್ಲೂ ಬ್ರಾಹ್ಮಣನು ಅಥವಾ ತ್ರಿವರ್ಣದವರು ಮಾಡತಕ್ಕದ್ದು ಏನೆಂಬುದನ್ನು ತಿಳಿಸುತ್ತೇನೆಂದು ಸಂಕಲ್ಪಿಸಿ “ಅಜ್ಞಾನಾದಥವಾಲೋಭಾತ್ತ್ಯಾಗೇನ ಪತಿತೋ ಭವೇತ್” ಎಂದು ಹೀಗೆ ಈ ನಿತ್ಯ ನೈಮಿತ್ತಿಕಗಳನ್ನು ಬಿಟ್ಟರೆ ಪ್ರತ್ಯವಾಯವೆಂದು ತಿಳಿಸಿ, “ದಿವಸಸ್ಯಾದ್ಯಭಾಗೇನ ಕೃತ್ಯಂ ತಸ್ಯೋಪದಿಶ್ಯತೇ” ಎಂದಾರಂಭಿಸಿ, ದಿವಸವನ್ನು ಎಂಟು ಭಾಗವಾಗಿ ಭಾಗಿಸಿ, ಸಂಧ್ಯಾಹೀನೋಽಶುಚಿರ್ನಿತ್ಯ ಮನರ್ಹಸ್ಸರ್ವಕರ್ಮಸು । ಯದನ್ಯತ್ಕುರುತೇ ಕರ್ಮ ನ ತಸ್ಯ ಫಲಭಾಗ್ಭವೇತ್”ಸಂಧ್ಯಾವಂದನೆ ಮಾಡದವನು ಯಾವಾಗಲೂ ಅಶುಚಿಯೇ, ಸಮಸ್ತ ಕರ್ಮಗಳಿಗೂ ಅನರ್ಹನು, ಆತನು ಯಾವ ಇತರ ಕರ್ಮವನ್ನೆಸಗಿದರೂ, ಫಲಭಾಕ್ಕಾಗುವದಿಲ್ಲವು ಎಂದು ಹೇಳಿ ಮುಗಿಸುವವರಲ್ಲಿ, ಸ್ನಾನಾಚಮನ ಸಂಧ್ಯಾವಂದನೆಗಳ ಕ್ರಮಗಳನ್ನು ಚನ್ನಾಗಿ ಹೇಳಿ “ದೇವಕಾರ್ಯಂ ತತಃಕೃತ್ವಾಗುರುಮಙ್ಗಳವೀಕ್ಷಣಂ । ದೇವಕಾರ್ಯಸ್ಯ ಸರ್ವಸ್ಯ ಪೂರ್ವಾಹ್ಣಸ್ತು ವಿಶಿಷ್ಯತೇ” ಎಂದು ಅಭಿಗಮನವನ್ನು ಹೇಳಿ. ಅನಂತರ, “ಸಮಿತ್ಪುಷ್ಪ ಕುಶಾದೀನಾಂಸಕಾಲಸ್ಸಮುದಾಹೃತಃ” ಎಂದು ಉಪಾದಾನವನ್ನು ಹೇಳಿ. “ಪಂಚಮೇತು ತಥಾ ಭಾಗೇ ಸಂವಿಭಾಗೋ ಯಥಾರ್ಹತಃ । ಪಿತೃದೇವ ಮನುಷ್ಯಾಣಾಂ ಕೀಟಾನಾಂ ಚೋಪ ದಿಶ್ಯತೇ” ಹಿಂದೆ ದೇವತಾರ್ಚನವೆಂದು ಹೇಳಿದ ಸ್ಥಳವಲ್ಲೇ ಇಲ್ಲಿ ಸಂವಿಭಾಗ ಶಬ್ದಪ್ರಯೋಗಮಾಡಿರುವದರಿಂದ ಇಜ್ಯೆಯನ್ನೂ ಹೇಳಿ, “ಇತಿಹಾಸ ಪುರಾಣಾಭ್ಯಾಂ ಷಷ್ಠಂ

ಸಪ್ತಮುಭ್ಯಸೇತ್” ಎಂದು ಸ್ವಾಧ್ಯಾಯವನ್ನು ಹೇಳಿ, “ಅಷ್ಟಮೇ ಲೋಕಯಾತ್ರಾಂತು” ಎಂದಾರಂಭಿಸಿ, “ಸರ್ವಭಾವ ವಿನಿರ್ಮುಕ್ತಂ ಕ್ಷೇತ್ರಜ್ಞಂ ಬ್ರಹ್ಮಣಿನ್ಯಸೇತ್ । ಏತದ್ಧ್ಯಾನಂ ಯೋಗಶ್ಚ ಶೇಷೋನ್ಯೋಗ್ರಂಥ ವಿಸ್ತರಃ” ಎಂದು ಮುಗಿಸಿ ಯೋಗವನ್ನು ಹೇಳಿರುತ್ತದೆ.

ಹೀಗೆ ಈ ಪ್ರಮಾಣಗಳ ಮೂಲಕ ಪಂಚಕಾಲದಲ್ಲೂ ಪ್ರಪನ್ನನು ಮಾಡುವ ನಿತ್ಯಕರ್ಮಗಳೆಲ್ಲಾ ಸಾಕ್ಷಾದ್ಭಗವದಾರಾಧನರೂಪಗಳೆಂಬುದು ವ್ಯಕ್ತವು. ಇನ್ನು ಆಳ್ವಾರುಗಳೂ ಈ ಕ್ರಮವನ್ನೇ ಅಂಗೀಕರಿಸುತ್ತಾರೆಂಬುದಕ್ಕೆ “ಮರುನ್ದಿಕಳುಂ” ಎಂಬ ಪಾಶುರವನ್ನು ಉದಾಹರಿಸಿರುತ್ತಾರೆ. ಅದು ಯಾವುದೆಂದರೆ– “ಮರನ್ದಿಕಳು ಮನಮೊಳಿತ್ತು ವಞ್ಜ ಮಾತ್ತಿಯೈಮ್ಬುಲನ್ಗಳಡಕ್ಕಿಯಿಡರ್ಪ್ಪಾರತ್ತುನ್ಬಂ । ತುರನ್ದು ಇರುಮುಪ್ಪೊಳದೇತ್ತಿ ಯೆಲ್ಲೈಯಿಲ್ಲಾತ್ತೊನ್ನೆರಿಕ್ಕಣ್ ನಿಲ್ಲೈ ನಿನ್ರ ತೊಣ್ಡರಾನ । ಅರನ್ದಿಗಳು ಮನತ್ತವರ್ ತಙ್ಗತಿಯೈಪ್ಪೊನ್ನಿ ಯಣಿಯರಙ್ಗತ್ತರವಣೈಯಿರ್ಪ್ಪಳ್ಳಿಕೊಳ್ಳುಮ್ । ನಿರನ್ದಿಗಳು ಮಾಯೋನೈಕ್ಕಣ್ಡೆನ್ ಕಣ್ಗಳ್ ನೀರ್ಮಲ್ಗವೆನ್ರು ಕೊಲೋ ನಿರ್ಕುನಾಳೇ” ಇದರರ್ಥವು. ಮರಮ್ - ಕೊಲೆ ಮೊದಲಾದವುಗಳಿಂದ, ತಿಗಳುಮ್ - ನಲಿಯುವ, ಉಜ್ವಲಿಸುವ, ಮನಂ - ಮನಸ್ಸನ್ನು. ಒಳಿತ್ತು - ವಾಸನೆಯೊಂದಿಗೆ ಹೋಗಲಾಡಿಸಿ ವಂಜಮ್ - ಸುಳ್ಳನ್ನು, ಮಾತ್ತಿ - ಹೋಗಲಾಡಿಸಿ, ಐಮ್ಬುಲಙ್ಗಳ್ - ಪಂಚೇಂದ್ರಿಯಗಳನ್ನು, ಅಡಕ್ಕಿ - ಶಬ್ದಾದಿ ವಿಷಯಗಳಲ್ಲಿ ಪ್ರವರ್ತಿಸದಹಾಗೆ ಅಡಗಿಸಿ, ಇಡರ್ - ದುಃಖೋದರ್ಕವಾದ, ಪಾರಂ ತುನ್ಬಂ - ಭಾರವಾದ ಅಗಾಧವಾದ ಪಾಪವನ್ನು, ತುರನ್ದು - ಹತ್ತಾಗಿ ಕೊಯಿದು, ಇರುಮುಪ್ಪೊಳಿದು - ಎರಡು ಮೂರು ಕಾಲವೆಂದೂ ಪಂಚಕಾಲದಲ್ಲೂ, ಅಭಿಗಮನ, ಉಪಾದಾನ, ಇಜ್ಯಾ, ಸ್ವಾಧ್ಯಾಯ, ಯೋಗ, ಎಂಬ ಐದು ಕಾಲದಲ್ಲೂ, ಏತ್ತಿ - ಸ್ವಾಮಿಯನ್ನು ಆರಾಧನೆ ಮೂಲಕ ಸ್ತೋತ್ರಮಾಡಿ, ಎಲ್ಲೈಯಿಲ್ಲಾ ತ್ತೊಲ್ ನೆರಿ ನಿಲ್ಲೈ ನಿನ್ರ - ಅಳತೆಯಿಲ್ಲದ ಹಿಂದಿನ ಸಂಪ್ರದಾಯರೂಪ ಆಚಾರದಲ್ಲಿ ಯಾರಿಂದಲೂ ಕದಲಿಸಲಾಗದಹಾಗೆ ಸ್ಥಿರವಾಗಿರುವ, ತೊಣ್ಡರಾನ - ದಾಸಭೂತರಾದ, ಶೇಷತ್ವವನ್ನು ಚೆನ್ನಾಗಿ ಅರಿತಿರುವ, ಅರನ್ದಿಗಳುಮ್ ಮನತ್ತವರ್ - ಆನೃಶಂಸ್ಯ ರೂಪ ಧರ್ಮದಿಂದ ಪ್ರಕಾಶಿಸುತ್ತಲಿರುವ ಮನಸ್ಸನ್ನು ಹೊಂದಿರುವ ಶ್ರೀವೈಷ್ಣವರುಗಳಿಗೆ, ಕದಿಯೈ - ಶರಣು ಪ್ರಾಪಕ ಪ್ರಾಪ್ಯನಾಗಿರುವ, ಪೊನ್ನಿ - ಕಾವೇರಿಯಿಂದ ಸುತ್ತಲ್ಪಟ್ಟು, ಅಣಿ ಅರಙ್ಗತ್ತು - ಲೀಲಾ ವಿಭೂತಿಗೆ ಆಭರಣ ರೂಪವಾದ ದೇವಾಲಯದಲ್ಲಿ, ಅರವು ಅಣೈಯಿಲ್ - ಶೇಷ ಪರ್ಯಂಕದಲ್ಲಿ, ಪಳ್ಳಿಕೊಳ್ಳುಮ್ - ಶಯನಿಸಿರುವ, ಬಿಚ

ಇಪ್ಪಡಿ ಪೆರಿಯ ಜೀಯರುಳ್ಳಿಟ್ಟಾರ್ ನಿತ್ಯಙ್ಗಳಿಲುಮ್ ಕಣ್ಡುಕೊಳ್ವದು. ಇವತ್ತಿಲುಳ್ಳ ವೈಷಮ್ಯಙ್ಗಳ್ ಅಪ್ಪೋಸಂಹಿತಾ ವಿಶೇಷಙ್ಗಳಿಲೇ

ಮಾಡಿಸಿರುವ, ನಿರಂತಿಗಳುಮ್ - ಲಾವಣ್ಯದಿಂದ ಪ್ರಕಾಶಿಸುತ್ತಿರುವ, ಮಾಯೋನೈ - ಆಶ್ಚರ್ಯಭೂತನಾದ ಶ್ರೀರಂಗನಾಥನನ್ನು, ಎನ್ ಕಣ್ಗಳ್ - ನನ್ನ ಕಣ್ಣುಗಳು, ಕಣ್ಡು - ಮನದಣಿಯುವನೋಡಿ, ನೀರ್ ಮಲ್ಗ - ಆನಂದಾಶ್ರುಗಳು ಪ್ರವಹಿಸುವ ಹಾಗೆ, ನಿರ್ಕುಮ್ ನಾಳ್ - ಇರುವ ಕಾಲವು, ಎನ್ರುಕೊಲ್ಲೋ-ಯಾವಾಗ ಲಭಿಸುತ್ತದೋ ತಿಳಿಯದು ಎಂಬ ಭಾವವು. ಈ ಪಾಶುರದಲ್ಲಿ ಪಂಚಕಾಲದಲ್ಲೂ ಭಗವದಾರಾಧನರೂಪವೃತ್ತಿಯು ವಿಧಿಸಲ್ಪಟ್ಟಿರುವವರಿಂದ ಉದಾಹರಿಸಲ್ಪಟ್ಟಿತು. ಇವುಗಳನ್ನನುಸರಿಸಿಯೇ ವಙ್ಗಿಪುರದ ನಂಬಿಯವರಿಗೆ ಶ್ರೀ ಭಾಷ್ಯಕಾರರು ಉಪದೇಶಿಸಿದರು. ಇದು ಸಾರ್ವತ್ರಿಕವಾಗಿ ತಿಳಿಯಲಿ ಎಂಬ ಉದಾರ ಭಾವದಿಂದ ಶ್ರೀ ವಙ್ಗಿಪುರದ ನಂಬಿಯವರು ತಾವು ಬರೆದ ನಿತ್ಯವೆಂಬ ಗ್ರಂಥದಲ್ಲಿ "ಅಭಿಗಚ್ಛೇತ್ ಹರಿಂ ಪ್ರಾತಃ" ಎಂದಾರಂಭಿಸಿ ಪಾಂಚಕಾಲಿಕಾನುಷ್ಠಾನಗಳನ್ನು ಉಪದೇಶಿಸಿರುತ್ತಾರೆ. ಈ ವಿಷಯವನ್ನು ಉಭಯ ಕಲಿಯವರೂ ಒಪ್ಪತಕ್ಕದ್ದೇ ಎಂದು ಶ್ರೀ ನಂಜೀಯರೂ ಅವರು ಬರೆದ ನಿತ್ಯದಲ್ಲೂ ಹಾಗೆಯೇ ಉಪದೇಶಿಸಿರುತ್ತಾರೆಂದು ಹೇಳುತ್ತಾರೆ.—

ಇಪ್ಪಡಿ - ಈ ಪಾಂಚಕಾಲಿಕವಾದ ಅನುಷ್ಠಾನ ಕ್ರಮವನ್ನು, ಪೆರಿಯ ಜೀಯರುಳ್ಳಿಟ್ಟಾರ್ - ಶ್ರೀ ನಂಜೀಯರೇ ಮೊದಲಾದವರು, ಮೊದಲಾದವರು ಎಂಬುದರಿಂದ ಶ್ರೀನಾರಾಯಣ ಮುನಿಗಳು ಹೇಳಲ್ಪಟ್ಟರು; ಶ್ರೀ ಭಾಷ್ಯಕಾರರವರು ಉಪದೇಶಿಸಿರುವಹಾಗೆ ಪಾಂಚಕಾಲಿಕ ಭಗವದಾರಾಧನ ರೂಪಾನುಷ್ಠಾನವೇನೋ ಒಪ್ಪತಕ್ಕದ್ದೇ; ಆದರೆ ಇವರುಗಳು ಬರೆದಿರುವ, ನಿತ್ಯಗಳಲ್ಲಿ, ಕಂಡುಕೊಳ್ವದು - ತಿಳಿದುಕೊಳ್ಳತಕ್ಕದ್ದು. ಇವರು ಬರೆದಿರುವ ನಿತ್ಯಗಳಲ್ಲಿ ವ್ಯತ್ಯಾಸಗಳಿವೆಯಲ್ಲಾ, ಹಾಗಾದರೆ ಯಾವ ಗ್ರಂಥದಲ್ಲಿ ಹೇಳಿರುವ ಕ್ರಮವನ್ನು ಅನುಸರಿಸತಕ್ಕದ್ದು ಎಂಬ ಪ್ರಶ್ನೆಗೆ ಸಮಾಧಾನವನ್ನು ಹೇಳುತ್ತಾರೆ. ಈ ವ್ಯತ್ಯಾಸಗಳಿಗೆ ಕಾರಣವು ಅವರವರುಗಳು ಪ್ರಮಾಣವಾಗಿಟ್ಟುಕೊಂಡು ಬರೆದ ಸಂಹಿತೆಗಳಲ್ಲಿರುವ ವಾಕ್ಯಗಳು. ಅವುಗಳು ವಿಕಲ್ಪಗಳಾಗಿರುವುದರಿಂದ ಯಾವ ಕ್ರಮವನ್ನಾದರೂ ಈ ಭಗವದಾರಾಧನರೂಪಾನುಷ್ಠಾನದಲ್ಲಿ ಅವಲಂಬಿಸಬಹುದು ಎಂದು ಮುಂದೆ ಹೇಳುತ್ತಾರೆ.

ಇವತ್ತಿಲುಳ್ಳ ವೈಷಮ್ಯಙ್ಗಳ್ - ಈ ನಿತ್ಯಗಳಲ್ಲಿ ಹೇಳಿರುವ ಕ್ರಮಗಳಲ್ಲಿರುವ ವ್ಯತ್ಯಾಸಗಳು, ಅಪ್ಪೋಸಂಹಿತಾ ವಿಶೇಷಙ್ಗಳಿಲೇ - ಆವರುಗಳು ಅನು

ಶೊಲ್ಲುಮ್ ವಿಕಲ್ಪಙ್ಗಳಾಲೇ ಸಙ್ಗತಙ್ಗಳ್: ಇಪ್ಪಡಿ ಯೋಗ್ಯಯಾಲೇ (೧) "ನ ದೇವಲೋಕಾ ಕ್ರಮಣಂ" (೨) "ಭವಾಂಸ್ತು ಸಹ ವೈದೇಹ್ಯಾ"

ಸರಿಸಿರುವ ಪಾಂಚರಾತ್ರ ಸಂಹಿತಾ ವಿಶೇಷಗಳಲ್ಲಿ, ಶೊಲ್ಲುಮ್ ವಿಕಲ್ಪಙ್ಗಳಾಲೇ- ಹೇಳುವ ವಿಕಲ್ಪಗಳಿಂದ, **ಸಂಗತಙ್ಗಳ್** - ಉಪಾದೇಯಗಳೇ; ಎರಡು ಮೂರು ಕ್ರಮಗಳಿಗೆ ಫಲವು ಒಂದೇ ಆದರೆ ಅವುಗಳು ವಿಕಲ್ಪಗಳೆನಿಸುವುವು; ಅವುಗಳೆಲ್ಲಾ ಉಪಾದೇಯಗಳೇ; ಆದುದರಿಂದ ಅವುಗಳಲ್ಲಿ ಯಾವುದಾದರೂ ಒಂದನ್ನು ಅವಲಂಬಿಸಬಹುದೆಂಬ ತಾತ್ಪರ್ಯವು. ಈಗ ಉಪಾಸನೆಗೂ ಪ್ರಪತ್ತಿಗೂ ಫಲ ಒಂದೇ ಆದುದರಿಂದ, ಎರಡುವಿಧ ಉಪಾಯಗಳೂ ಉಪಾದೇಯಗಳೇ; ಆದುದರಿಂದ ಅಧಿಕಾರಾನುಗುಣವಾಗಿ ಯಾವುದಾದರೂ ಒಂದನ್ನು ಅವಲಂಬಿಸಬಹುದು; ಇದರ ಹಾಗೆಯೇ ಆ ನಿತ್ಯಗಳಲ್ಲಿ ಹೇಳಿರುವ ಕ್ರಮಗಳಲ್ಲಿ ಯಾವುದಾದರೂ ಒಂದನ್ನು ಅವಲಂಬಿಸಬಹುದು; ಅದರಲ್ಲಿ ಅಸಂಗತವಾದುದು ಯಾವುದೂ ಇಲ್ಲವೆಂಬ ಭಾವವು. ಹೀಗೆ ನಾನಾ ವಿಕಲ್ಪಗಳಿದ್ದರೂ ಸ್ವೇಚ್ಛಾನುಗುಣ ಪ್ರವರ್ತನೆಯನ್ನನುಸರಿಸಿ ತನ್ನ ಮನಬಂದಂತೆ ಅವಲಂಬಿಸಕೂಡದೆಂದೂ, ಆ ಪ್ರವರ್ತನೆಯು ಸ್ವಾಚಾರ್ಯೋಪದಿಷ್ಟಕ್ರಮವೇ ಆಗಿರಬೇಕೆಂದೂ, ಇದೀಗ ಪ್ರಪನ್ನನಿಗೆ ಅವಶ್ಯ ಕರ್ತವ್ಯವೆಂದೂ, ಕೆಲವು ಪ್ರಮಾಣಮೂಲಕ ಉಪದೇಶಿಸಿ ಪಾಂಚಕಾಲಿಕ ನಿತ್ಯನೈಮಿತ್ತಿಕಗಳು ಅವಶ್ಯಕವಾಗಿ ಕರ್ತವ್ಯಗಳೆಂದು ನಿಗಮನಮಾಡಿ ಹೇಳುತ್ತಾರೆ:—**ಇಪ್ಪಡಿಯೋಗ್ಯಯಾಲೇ** - ಈ ಭಗವತ್ಕೈಂಕರ್ಯವು ಸ್ವಯಂ ಪ್ರಯೋಜನತಯಾ ವಿಹಿತವಾಗಿರುವದರಿಂದ, ಲಕ್ಷ್ಮಣನು ಶ್ರೀ ಸೀತಾರಾಮರಲ್ಲಿ ಪೂರ್ಣ ಶರಣಾಗತಿಯನ್ನು ಅನುಷ್ಠಿಸಿ, ಅನನ್ಯೋಪಾಯತ್ವವನ್ನೂ ಅನನ್ಯ ಪ್ರಯೋಜನತ್ವವನ್ನೂ ಪ್ರಕಟಿಸಿರುವ ಪ್ರಕರಣವನ್ನು ಉದಾಹರಿಸಿ, ಶ್ರೀರಾಮ ಕೈಂಕರ್ಯ ಪ್ರೀಣನವಿನಾ ತನಗೇ ಬೇರೇ ಪ್ರಯೋಜನವಿಲ್ಲವೆಂಬುದನ್ನು ತಿಳಿಸಿದುದನ್ನು ಉದಾಹರಿಸುತ್ತಾರೆ:—**"ನ ದೇವಲೋಕಾಕ್ರಮಣಂ ನಾಮರತ್ವಮಹಂ ವೃಣೇ । ಐಶ್ವರ್ಯಂ ವಾಪಿ ಲೋಕಾನಾಂ ಕಾಮಯೇ ನ ತ್ವಯಾವಿನಾ" ತ್ವಯಾವಿನಾ** - ಸರ್ವವಿಧ ಬಾಂಧವನಾಗಿರುವ ನೀನಲ್ಲದೆ ಎಂದರೆ ನಿನಗೆ ಸರ್ವವಿಧ ಕೈಂಕರ್ಯಗಳನ್ನೆಸಗಿ ನಿನ್ನ ಪ್ರೀತಿಗೆ ಪಾತ್ರನಾಗಿರುವದು ವಿನಾ ಎಂಬ ಭಾವವು, **ಲೋಕಾನಾಂ ಐಶ್ವರ್ಯಂವಾ** - ತ್ರಿಲೋಕಗಳ ಐಶ್ವರ್ಯವನ್ನಾಗಲಿ, ಅಥವಾ, ರುದ್ರ ಬ್ರಹ್ಮ ಕುಬೇರಾದಿ ಲೋಕಗಳ ಐಶ್ವರ್ಯವನ್ನಾಗಲಿ, **ನಕಾಮಯೇ** - ನಾನು ಅಪೇಕ್ಷಿಸುವದಿಲ್ಲವು, **ನಾಮರತ್ವಂವಾ**

(೧) ರಾಮಾ. ಅಯೋಧ್ಯಾ. ೩೧. ೫. (೨) ರಾಮಾ. ಅಯೋಧ್ಯಾ. ೩೧. ೨೫.

ಅಹಂವೃಣೇ-ಜರಾಮರಣ ಮೋಕ್ಷಾಯ ಎಂದು (ಗೀ. ೭ ೨೯) ಯಲ್ಲಿ ಹೇಳಿರುವ ಕೈವಲ್ಯಾರ್ಥಿಯ ಅಪುನರಾವೃತ್ತಿ ದೆಶೆಯನ್ನಾಗಲಿ ನಾನು ಅಪೇಕ್ಷಿಸುವ ದಿಲ್ಲವು, ಅಥವಾ ನ ದೇವಲೋಕಾಕ್ರಮಣಮಪಿ ವಾ ಅಹಂ ವೃಣೇ-"ದೇವಾ ನಾಂ ಪೂರಯೋಧ್ಯಾ" ನಿತ್ಯಸೂರಿಗಳಿರುವ ಪಟ್ಟಣವು ಅಯೋಧ್ಯೆಯು ಎಂದು ಹೇಳಿರುವಹಾಗೆ ದೇವಲೋಕವೆಂದರೆ ದಿವ್ಯ ವೈಕುಂಠವು ಅದರ ಪ್ರಾಪ್ತಿ ಯನ್ನೂ ಕೂಡ ನಾನು ಅಪೇಕ್ಷಿಸುವದಿಲ್ಲವು ಎಂಬರ್ಥವು. ಇದರಿಂದ ಸ್ವಾಮಿ ಕೈಙ್ಕರ್ಯವೂ ತತ್ಪ್ರೀಣನವೇ ಪ್ರಯೋಜನಗಳೇ ವಿನಾ ತನಗೆ ಇನ್ನು ಯಾವ ಪ್ರಯೋಜನವೂ ಬೇಕಿಲ್ಲವೆಂಬ ಅನನ್ಯ ಪ್ರಯೋಜನತ್ವವು ಪ್ರದರ್ಶಿಸಲ್ಪಟ್ಟಿತು ಎಂಬೂ, ಇದರಿಂದ ಪ್ರಪನ್ನನೂ ಸಹ ಮಾಡತಕ್ಕ ಸರ್ವ ವಿಧವಾದ ನಿತ್ಯ ನೈಮಿತ್ತಿಕ ರೂಪಗಳೂ ಸ್ವಪ್ರಯೋಜನಕ್ಕಾಗಿ ಅಲ್ಲದೆ ಸ್ವಯಂಪ್ರಯೋಜನಗ ಳಾಗಿ ಭಗವತ್ಪ್ರೀಣನ ರೂಪವಾಗಿ ಮಾಡತಕ್ಕದ್ದೆಂಬುದು ವಿಧಿಸಲ್ಪಟ್ಟಿತು. "ಭವಾಂಸ್ತು ಸಹ ವೈದೇಹ್ಯಾ ಗಿರಿಸಾನುಷು ರಂಸ್ಯತೇ। ಅಹಂ ಸರ್ವಂ ಕರಿ ಷ್ಯಾಮಿ ಜಾಗ್ರತಸ್ಸ್ವಪತಶ್ಚ ತೇ" ಭವಾಂಸ್ತು - ಸರ್ವಶೇಷಿಯಾಗಿರುವದ ರಿಂದ ಸ್ವಾಮಿಯಾದ ನೀನಾದರೋ, ವೈದೇಹ್ಯಾ ಸಹ - ನಿನ್ನ ಪತ್ನಿಯಾದ ಸೀತೆ ಯೊಂದಿಗೆ, ಗಿರಿಸಾನುಷು - ಈ ಪರ್ವತ ತಪ್ಪಲುಗಳಲ್ಲಿ, ರಂಸ್ಯತೇ - ಇವೆಲ್ಲಾ ನಿನಗೆ, ಲೀಲಾರೂಪವಾದುದರಿಂದ ವಿಹರಿಸು; ಅಹಂ - ನಿನಗೆ ಸಹಜ ದಾಸಭೂತ ನಾಗಿ ನಿನಗೆ ಕೈಙ್ಕರ್ಯಮಾಡುವದೇ ಮುಖ್ಯವೃತ್ತಿಯಾಗಿರುವ ನಾನು, ತೇ ಜಾಗ್ರತಸ್ಸ್ವಪತಶ್ಚ -ನೀನು ಎದ್ದೇ ಇರಲಿ, ನಿದ್ರೆ ಮಾಡುತ್ತೇ ಇರಲಿ, ಇಂತಹ ನಿನಗೆ, ಸರ್ವಂ ಕರಿಷ್ಯಾಮಿ- ಸರ್ವದೇಶ ಸರ್ವಕಾಲ, ಸರ್ವಾವಸ್ಥೋಚಿತ ಸರ್ವ ವಿಧ ಕೈಂಕರ್ಯಗಳನ್ನೂ ನನ್ನ ಪ್ರಯೋಜನಕ್ಕಾಗಲ್ಲದೆ ನಿನ್ನ ಪ್ರೀಣನಾರ್ಥವಾಗಿ ಮಾಡುವೆನು. ಭಗವತ್ಪ್ರೀತಿ ಮಾತ್ರವೇ ತನಗೆ ಪ್ರಯೋಜನವೆಂದು ಲಕ್ಷ್ಮಣನು ಯಾವಾಗ ಹೇಳಿಕೊಂಡನೋ, ಆತನು ಸಂಪೂರ್ಣ ಕೈಂಕರ್ಯವನ್ನು ಮಾಡಿ ದರೆ ಎಷ್ಟು ಪ್ರೀತಿಯೋ ಅಷ್ಟು ಪ್ರೀತಿಯುಕ್ತನಾದನೆಂದು ಸುಪ್ರೀತಃ ಎಂಬ ಪ್ರಯೋಗದಿಂದ ಉತ್ತರ ಶ್ಲೋಕದಲ್ಲಿ "ರಾಮಸ್ತ್ವನೇನ ವಾಕ್ಯೇನ ಸು ಪ್ರೀತಃ" ಎಂದು ಮಹರ್ಷಿಯು ಹೇಳಿರುತ್ತಾರೆ. ಇದರಿಂದ ಶೇಷಭೂತನಾದ ಚೇತನನು ಮಾಡುವ ಕೈಂಕರ್ಯವೂ ನಾರಾಯಣನಿಗೊಬ್ಬನಿಗೇ ಅಲ್ಲವೆಂದೂ, ಅದಕ್ಕೆ ಲಕ್ಷ್ಮೀಯುಕ್ತ ನಾರಾಯಣನೇ ಉದ್ದೇಶ್ಯನೆಂದೂ, ಸಹ ವೈದೇಹ್ಯಾ ಎಂಬ ಪ್ರಯೋಗದಿಂದ ದ್ವಯಮಂತ್ರದ ಉತ್ತರಖಂಡಾರ್ಥವೂ, ಪ್ರಾಪ್ಯಸ್ವರೂ ಪವೂ ಪ್ರದರ್ಶಿಸಲ್ಪಟ್ಟವು. ಶ್ರೀರಾಮನು ನಿದ್ರಿಸುವಾಗಲೂ ತಾನು ನಿದ್ರೆಯಿಲ್ಲದೆ ಯಾವ ಕಾಲದಲ್ಲಿ ಯಾವ ದೇಶದಲ್ಲಿ ಯಾವ ವಿಧ ಕೈಂಕರ್ಯಮಾಡಬೇಕಾಗು

೩) "ಯತ್ರ ಕುತ್ರ ಕುಲೇ ವಾಸೋ ಯೇಷು ಕೇಷು ಭವೋಸ್ತುಮೇ ।
ತವದಾಸ್ಯೈಕ ಭೋಗೇಸ್ಯಾತ್ಸದಾ ಸರ್ವತ್ರ ಮೇ ರತಿಃ ॥ ಕರ್ಮಣಾಮನಸಾ
ವಾಚಾ ಶಿರಸಾವಾ ಕಥಂಚನ । ತ್ವಾಂ ವಿನಾ ನಾನ್ಯ ಮುದ್ದಿಶ್ಯ ಕರಿಷ್ಯೇ

ತ್ರ ದೇಶೇ ಎಂಬ ಅತ್ಯಂತಪ್ರೀತನಾಗಿ ಕಾಪಿರುತ್ತೇನೆ ಎಂಬುದರಿಂದ ಅನನ್ಯ ಪ್ರಯೋಜನತ್ವವು ಸೂಚಿತವು; (೩) ದಾಸ, ನನಗೆ ಎಂದರೆ ದಾಸಭೂತನಾಗಿ ಕೈಂಕರ್ಯ ಮಾಡುವುದೇ ನನಗೆ ಪ್ರಿಯವು, ಅದೇ ನನಗೆ ಪರಮಸಾಮ್ರಾಜ್ಯವೆಂದು ಭಾವಿಸಿರುವ ನನಗೆ, ಯತ್ರ ಕುತ್ರ ಕುಲೇ ವಾಸಃ-ಪ್ರಾರಬ್ಧಾನುಗುಣವಾಗಿ ಉತ್ಕೃಷ್ಟ ಕುಲದಲ್ಲೇ ಅಥವಾ ನಿಕೃಷ್ಟ ಕುಲದಲ್ಲೇ ವಾಸವು, ಅಸ್ತು-ಆದರೂ, ಯೇಷು ಕೇಷು - ಯಾವುದೇ ಜನ್ಮವುಳ್ಳದಾದರೂ ಉತ್ಕೃಷ್ಟ ನಿಕೃಷ್ಟ ಜಾತಿಯಲ್ಲೇ ಆಗಲಿ ಭವಃ ಅಸ್ತು - ಜನ್ಮವೇ ಉಂಟಾಗಲಿ, ಮೇ - ಅಂತಹ ನನಗೆ, ರತಿಃ - ಆಸಕ್ತಿಯು, ಸರ್ವತ್ರ - ನಾನಿರುವ ಎಲ್ಲಾ ಪ್ರದೇಶದಲ್ಲೂ, ಸದಾ - ನಾನಿರುವ ಎಲ್ಲಾ ಕಾಲದಲ್ಲೂ, ತವದಾಸ್ಯೈಕ ಭೋಗೇ - ನಿನಗೆ ಕೈಂಕರ್ಯ ಮಾಡುವ ದೆಂಬುವ ಮುಖ್ಯವಾದ ಭೋಗದಲ್ಲಿ ಮಾತ್ರವೇ, ಸ್ಯಾತ್ - ಉಂಟಾಗಲಿ; ಕರ್ಮಣಾ - ಆರಾಧನರೂಪ ಕರ್ಮದಿಂದಲೇ ಆಗಲಿ, ಮನಸಾ - ಮಾನಸಿಕ ಆರಾಧನರೂಪಧ್ಯಾನದಿಂದಲೇ ಆಗಲಿ, ವಾಚಾ - ಆರಾಧನರೂಪ ಸ್ತುತಿಯಿಂದಲೇ ಆಗಲಿ, ಶಿರಸಾ ವಾ - ನಮಸ್ಕಾರಾದಿಗಳನ್ನು ಮಾಡುವ ಶಿರಸ್ಸಿನಿಂದ, ಇಲ್ಲಿ ಮನಸ್ಸು, ವಾಕ್ಕು, ಶಿರಸ್ಸು ಎಂಬ ಎಲ್ಲಾ ದೇಹಾವಯವಗಳಾದುದರಿಂದ ಕರ್ಮಣಾ ಎಂಬುದಕ್ಕೆ ಕರ್ಮಗಳನ್ನು ಮಾಡಲು ಸಾಧನಗಳಾದ ಕೈಕಾಲುಗಳೂ ಅವುಗಳಿಗೆ ಸಹಾಯಕಗಳಾದ ಚಕ್ಷುರಾದಿ ಇಂದ್ರಿಯಗಳು ಹೇಳಲ್ಪಟ್ಟವೆಂದು ಭಾವಿಸಬಹುದು, ಅಥವಾ "ಯನ್ಮನಸಾ ಧ್ಯಾಯತೇ, ತದ್ವಾಚಾ ವದತಿ ತತ್ಕರ್ಮಣಾ ಕರೋತಿ" ಎಂಬುವುದರಿಂದ ಮನಸ್ಸಿನಿಂದ ಧ್ಯಾನಿಸಿ, ವಾಕ್ಕಿನಿಂದ ಸ್ತುತಿಸಿ, ಆರಾಧನರೂಪ ಕರ್ಮವನ್ನೇ ಎಂದೇ ಅರ್ಥಮಾಡಿ ಕೊಳ್ಳಬಹುದು. ಕಥಂಚನ - ಯಾವ ಪ್ರಕಾರದಿಂದಲೂ, ತ್ವಾಂ ವಿನಾ - ದಾಸನಾದ ನನಗೆ ಸ್ವಾಮಿ ನೀನೇ, ಅದರಿಂದ ನಿನ್ನನ್ನು ಬಿಟ್ಟು, ಅನ್ಯಮುದ್ದಿಶ್ಯ - ಇತರ ತುಚ್ಛ ದೇವತೆಗಳನ್ನು ಕುರಿತು ಕಿಂಚಿದಪಿ ಏನೊಂದನ್ನೂ ಎಂಬುದರಿಂದ ಸಾಮಾನ್ಯವಾದವನ್ನೂ ಕೂಡ, ನ ಕರಿಷ್ಯೇ - ನಾನು ಮಾಡುವುದಿಲ್ಲವು, ಅನನ್ಯಾರ್ಹರಾದವರ ಮಹಾತ್ಮನ ನನ್ನ ಸ್ವರೂಪಕ್ಕೇ ಒಂದಿಕೊಂಬ ಭಾವವು.

---

(೩) ದ್ವಿತೀಯ ಜಿತಂತಾ.

ಕಿಂಚಿದಪ್ಯಹನ್"॥ (೪) "ತನಕ್ಕೇಯಾಗ ವೆನ್ನೈಕ್ಕೊಳ್ಳವಿಲ್ಲಾದೆ" ಎಙ್ಗಿರಪಡಿಯೇ ಭಗವತ್ಪ್ರೀತಿಮಾತ್ರಪ್ರಯೋಜನಮಾನ ಕೈಙ್ಕರ್ಯತ್ತಿಲೇ ಸ್ವಾಚಾರ್ಯೋಪದಿಷ್ಟಮಾಯಿರುಪ್ಪದೊರು ಶಾಸ್ತ್ರೀಯಪ್ರಕ್ರಿಯೈಯೈಕ್ಕೊಂಡು ಯಥಾಕಾಲಮನುಷ್ಠಿಕ್ಕ ಪ್ರಾಪ್ತಮ್.

ಇನ್ನೂ ಭಗವತ್ಪ್ರೀಣನಾರ್ಥವಾಗಿಯೇ ತನ್ನ ಪ್ರಯೋಜನವಾಗಿ ಭಗವತ್ಕೈಂಕರ್ಯವನ್ನು ಮಾಡಬೇಕೆಂಬುದು ಹೇಳಲ್ಪಟ್ಟಿತು.

(೪) **ತನಕ್ಕೇಯಾಗ** - ನನಗೆ ಮಾತ್ರವೇ, ಎಂದರೆ ಶೇಷಭೂತನಾಗಿ ಕೈಂಕರ್ಯವಾಡಿಕೊಂಡು ಪರತಂತ್ರನಾಗಿರುವ ಹಾಗೆ, ಅನ್ಯ ಜೀವರುಗಳಿಗೆ ಯಾರಿಗೂ ಶೇಷಭೂತನಾಗದೆ ಎಂಬ ಭಾವ ಸೂಚಿತವು. **ಎನ್ನೈ ಕೊಳ್ಳವಿಲ್ಲಾದೆ** - ನನ್ನನ್ನು ಸ್ವೀಕರಿಸಬೇಕು, ಇದೇ ಶ್ರೀಕೃಷ್ಣನಲ್ಲಿ ಪ್ರಾರ್ಥನೆಯು ಎಂಬ ಭಾವವು. ಪೂರ್ವಾ ಪಾಸುರ ಮತ್ತು ಅರ್ಥಗಳಿಗೆ ಗ್ರಂಥ ನೋಡು ಪುಟ ನೋಡಿ; **ಎಙ್ಗಿರಪಡಿಯೇ** - ಎಂಬ ಪ್ರಮಾಣಗಳಲ್ಲಿ ಹೇಳಿರುವ ಹಾಗೆ, **ಭಗವತ್ಪ್ರೀತಿಮಾತ್ರಮೇ** ಪ್ರಯೋಜನವಾಗಿರುವ, **ಕೈಙ್ಕರ್ಯತ್ತಿಲೇ** - ಕೈಙ್ಕರ್ಯದಲ್ಲಿ, ಇಲ್ಲಿ ಮಾತ್ರ ಶಬ್ದದಿಂದ ಭಗವತ್ಪ್ರೀತಿಯಲ್ಲದೆ ಇನ್ಯಾವ ಪ್ರಯೋಜನವನ್ನು ತಾನು ಅಪೇಕ್ಷಿಸಕೂಡದೆಂದು ಹೇಳಲ್ಪಟ್ಟಿತು, ಹೀಗೆ ಸ್ವಯಂ ಪ್ರಯೋಜನವಾದ ಕೈಙ್ಕರ್ಯದಲ್ಲಿ, **ಸ್ವಾಚಾರ್ಯೋಪದಿಷ್ಟಮಾಯ್** - ತನ್ನ ಸ್ವಂತ ಆಚಾರ್ಯರಿಂದ ಉಪದೇಶಿಸಲ್ಪಟ್ಟುದಾಗಿದೆ. **ಇರುಪ್ಪದೊರು ಶಾಸ್ತ್ರೀಯ ಪ್ರಕ್ರಿಯೈಯೈ ಕೊಂಡು** - ಒಂದು ಶಾಸ್ತ್ರ ಪದ್ಧತಿಯನ್ನು ಅನುಸರಿಸಿರುವ ಮಾರ್ಗವನ್ನು ಕೈಕೊಂಡು, **ಯಥಾಕಾಲಮ್** - ಶಾಸ್ತ್ರವಿಹಿತವಾದ ಕಾಲದಲ್ಲಿ ತನಗೆ ಎಷ್ಟು ಅವಕಾಶ ದೊರೆಯುವುದೋ ಅಷ್ಟು ಕಾಲ, **ಅನುಷ್ಠಿಕ್ಕ ಪ್ರಾಪ್ತಮ್**- ಈ ಅಭಿಗಮನಾದಿ ಪಂಚಕಾಲ ಅನುಷ್ಠಾನಗಳು ಇವುಗಳಲ್ಲಿ ಸಂಬಂಧಪಡುವವು ಉಚಿತವು. ಈ ರೀತಿ ಅನುಷ್ಠಿಸುವ ಅಭಿಗಮನಾರಾಧನಾದಿ ನಿತ್ಯನೈಮಿತ್ತಿಕಾನುಷ್ಠಾನಗಳು ಶಾಸ್ತ್ರ ಪ್ರಕ್ರಿಯೆಯನ್ನು ಅನುಸರಿಸಿದವುಗಳಾಗಬೇಕು; ಇಷ್ಟೇ ಅಲ್ಲದೆ ಸ್ವಾಚಾರ್ಯೋಪದಿಷ್ಟವಾಗಬೇಕು. ಆದುದರಿಂದ ಸ್ವಾಚಾರ್ಯೋಪದೇಶವು ಆವಶ್ಯಕವೆಂದು ಹೇಳಿದ್ದಲ್ಲದೆ ಅದು ಶಾಸ್ತ್ರಮರ್ಯಾದೆಗೆ ವಿರೋಧವಾಗಕೂಡದೆಂದು ಹೇಳಲ್ಪಟ್ಟಿತು. ಶಾಸ್ತ್ರಮರ್ಯಾದೆಯನ್ನು ಮೀರಿದುದಾದರೆ ಸ್ವಾಚಾರ್ಯೋಪದಿಷ್ಟವಾದರೂ ಗ್ರಾಹ್ಯ

---

(೪) ತಿರು. ೨. ೯. ೪

ವಲ್ಲವು. ಶಾಸ್ತ್ರದ ರೀತಿ ವಿರೋಧ ಆಚರಿಸುವವು, ದೇಹಧಾರಿಗಳಾದವರು ಆಚಾರ್ಯ ಸ್ಥಾನಕ್ಕೆ ಯೋಗ್ಯವಲ್ಲವೆಂಬ ಭಾವವು. "ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ । ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂಗತಿಮ್" ಎಂಬ (ಗೀ. ೧೬. ೨೩) ಶ್ಲೋಕವೂ ಇಲ್ಲಿ ಅನುಸಂಧೇಯವು. ಶಾಸ್ತ್ರದಲ್ಲಿ ವಿಕಲ್ಪ ವೈವಿಧ್ಯಾದಿಗಳು ಬೋಧಿತವಾಗಿದ್ದಪಕ್ಷದಲ್ಲಿ ಸ್ವಾಚಾರ್ಯರಿಗೆ ಯಾವುದು ಇಷ್ಟವೋ ಹಾಗೆ ನಡೆಸತಕ್ಕದ್ದೆಂಬ ಭಾವವು. ಭಗವದಾರಾಧನೆಗಳಲ್ಲಿ ಕ್ರಮವೂ ಷೋಡಶೋಪಚಾರಗಳೂ ಒಂದೇ ಆಗಿದ್ದರೂ, ಶೀಘ್ರತೆ, ಮಂತ್ರಗಳೂ ಪೌರುಷೇಯವು ಬೇರೆ ಬೇರೆಯಾಗಬಹುದು. ಅವುಗಳಲ್ಲಿ ಯಾವುದು ಸ್ವಾಚಾರ್ಯೋಪದಿಷ್ಟವೋ ಅದನ್ನು ಅವಲಂಬಿಸಬಹುದೆಂಬ ತಾತ್ಪರ್ಯವು. ಹೀಗೆ ಈ ನಿತ್ಯನೈಮಿತ್ತಿಕ ಕರ್ಮಗಳಲ್ಲಿ ಸೇರಿದ ಭಗವದಾರಾಧನೆ ಮುಂತಾದವುಗಳನ್ನಾಚರಿಸುವಾಗ ಯಾವವಿಧ ಫಲದಲ್ಲಿಯೂ ಮಮತೆಯಿಲ್ಲದೆ ಕೇವಲ ಭಗವತ್ಪ್ರೀತ್ಯರ್ಥವಾಗಿ ನಡೆಸತಕ್ಕದ್ದೆಂಬುದು ಉಪದೇಶವು. ಆದರೆ "ಪ್ರಯೋಜನ ಮನುದ್ದಿಶ್ಯ ನಮಂದೋಽಪಿ ಪ್ರವರ್ತತೇ" ಎಂದಿರುವಾಗ ಏನೂ ಪ್ರಯೋಜನವಿಲ್ಲದೆ ಕೈಂಕರ್ಯರೂಪ ಆರಾಧನೆಯನ್ನು ಯಾವ ಮಂದಬುದ್ಧಿಯುಳ್ಳವನೂ ಮಾಡಲಾರನು, ಹೀಗಿರುವಾಗ ಅದರ ಪ್ರಯೋಜನಭಾವ ಹೇಗೆ ಕೂಡುತ್ತದೆ? ಮತ್ತು ಪ್ರಪನ್ನನಾದವನೇನೋ ಇಂತಹ ಕೈಂಕರ್ಯವನ್ನು ಫಲಾಭಿಸಂಧಿ ಇಲ್ಲದೇ ನಡೆಸಬಹುದು. ಆದರೆ ಬಹು ಆಯಾಸ ಸಾಧ್ಯವಾದ ಇಂತಹ ಕೈಂಕರ್ಯದಲ್ಲಿ ಸಾಧಾರಣವಾಗಿ ಮಮತೆಯು ಹೇಗೆ ಹುಟ್ಟಲಾರದೆ ಇದ್ದೀತು? ಎಂದರೆ, ನಾಥನಾದ ಸ್ವಾಮಿಯು ತನ್ನ ದಾಸನ ಕೈಂಕರ್ಯದಲ್ಲಿ ಮಮತೆಯನ್ನಿಟ್ಟು ಅದನ್ನು ಸ್ವೀಕರಿಸುವುದು ಒಂದು ದೊಡ್ಡ ಪರಮಲಾಭವಲ್ಲವೋ? ತನಗೆ ಇಂತಹ ನಿರತಿಶಯ ಸುಖಾನುಭವವನ್ನುಂಟುಮಾಡುವ ಸ್ವಾಮಿಯು ಸುಪ್ರೀತನಾಗುವುದೂ ಪರಮಲಾಭವಲ್ಲವೋ? ಎಂಬ ಭಾವವು. ಹೀಗೆ ಭಗವತ್ಪ್ರೀತ್ಯರ್ಥವಾಗಿ ಸಾಂಧ್ಯಕಾಲಿಕ ಸರ್ವ ನಿತ್ಯ ನೈಮಿತ್ತಿಕಾದಿಗಳೆಲ್ಲವನ್ನೂ ಪ್ರಪನ್ನನು ಅವಶ್ಯವಾಗಿ ಅನುಷ್ಠಿಸತಕ್ಕದ್ದು ಎಂಬುದು ಮುಖ್ಯ ತಾತ್ಪರ್ಯವು.

ಈ ಪ್ರಪನ್ನನು ಫಲಾಭಿಸಂಧಿರಹಿತನಾಗಿಯೇ ಕೇವಲ ಭಗವತ್ಪ್ರೀತ್ಯರ್ಥವಾಗಿಯೇ ಈ ಭಗವದಾರಾಧನಾದಿಗಳಾದ ನಿತ್ಯ ನೈಮಿತ್ತಿಕಗಳನ್ನು ಮಾಡಿದರೂ ಇದು, ಏನಾದರೂ ಫಲಗಳನ್ನು ಕೊಡದೆ ಹೋಗುವುದಿಲ್ಲ. ವಿಭೀಷಣನು ಶ್ರೀರಾಮನಲ್ಲಿ ಶರಣಾಗತಿಯನ್ನು ಫಲಾಂತರಾಪೇಕ್ಷೆಯಿಲ್ಲದೆ ಭಗವತ್ಪ್ರೀತ್ಯರ್ಥವಾಗಿಯೇ ಮಾಡಿದರೂ, ಅತ್ಯಲ್ಪಕಾಲದಲ್ಲೇ ಆ ಲಂಕಾರಾಜ್ಯಾಭಿಷೇಕಕ್ಕೆ ಪಾತ್ರನಾಯಿತೆಂಬ ಹಾಗೆಯೇ ಇಲ್ಲಿ ಭಗವದಾರಾಧನಾದಿಗಳೂ ಅನೇಕ ದುಷ್ಕೃತಗಳು ದೂರವಾಗುವದಕ್ಕೆ ಕಾರಣವಾಗಬಹುದೆಂದು ಹೇಳುತ್ತಾರೆ.

ಅಭಿಗಮನಾದಿ ನಿತ್ಯನೈಮಿತ್ತಿಕಾನಾಮನೇಕಾನರ್ಥ ಪರಿಹಾರಕತ್ವಸ್ಯ ಕಥನಮ್.

ಇಪ್ಪಡಿ ನಿತ್ಯಮಾಗ ವಿಧಿಕ್ಕೈರ ಭಗವದಭಿಗಮನಾದಿಗಳಿಲ್ ಲೋಕಾಯತಿಕರ್ಪೋಲೆ ಖ್ಯಾತಿ ಲಾಭ ಪೂಜೈಗಳುಕ್ಕಾಗವಾದಲ್, ತತ್ತ್ವಜ್ಞಾನ ವೈರಾಗ್ಯಗಳಿಲ್ಲಾದಾರ್ಪೋಲೆ ಪ್ರಯೋಜನಾಂತರತ್ತುಕ್ಕಾಗವಾದಲ್, ಪೂರ್ಣೋಪಾಯರಲ್ಲಾದಾರ್ಪೋಲೆ ಮೋಕ್ಷಾರ್ಥಮಾಗವಾದಲ್, ಅನ್ರಿಕ್ಕೇ ಮುಕ್ತರ್ಪೋಲೆ ಸ್ವಾಮ್ಯಭಿಮತತ್ತೈ ನಡತ್ತವೇಣು

ಅಭಿಗಮನಾದಿ ನಿತ್ಯನೈಮಿತ್ತಿಕಗಳು ಅನೇಕ ಅನರ್ಥ ಪರಿಹಾರಕಗಳು.

ಇಪ್ಪಡಿ - ಮೇಲೆ ಹೇಳಿದ ರೀತಿಯಲ್ಲಿ, **ನಿತ್ಯಮಾಗವಿಧಿಕ್ಕೈರ** - ಪ್ರತಿನಿತ್ಯವೂ ಮಾಡಬೇಕೆಂದು ವಿಧಿಸಿರುವ, **ಭಗವದಭಿಗಮನಾದಿಗಳಿಲ್** - ಭಗವಂತನನ್ನು ಆರಾಧಿಸುವದೇ ಮೊದಲಾದವುಗಳಲ್ಲಿ. **ಲೋಕಾಯತಿಕರ್ಪ್ಪೋಲೆ** - ದೇವರು, ವೇದಗಳು, ಜೀವಾತ್ಮ, ವೈಕುಂಠ ಮೊದಲಾಗಿ ಕಣ್ಣಿಗೆ ಕಾಣಿಸದೇ ಇರುವವು ಯಾವುವೂ ಇಲ್ಲವೆಂದು ಹೇಳುವವರಾಗಿ ಬರೀ ಐಹಿಕ ಪ್ರಯೋಜನಗಳೇ ಪ್ರಯೋಜನಗಳೆಂದು ಹೇಳುವ ಚಾರ್ವಾಕರ ಹಾಗೆ, **ಖ್ಯಾತಿ ಲಾಭ ಪೂಜೈಗಳುಕ್ಕಾಗ ವಾದಲ್** - ತನಗೆ ಉಂಟಾಗುವ ಖ್ಯಾತಿ, ಲಾಭ ಮತ್ತು ಮರ್ಯಾದೆ ಇಂತಹ ಐಹಿಕ ಪ್ರಯೋಜನಗಳಿಗಾಗಿಯಾಗಲಿ, **ತತ್ತ್ವಜ್ಞಾನ ವೈರಾಗ್ಯಜ್ಗಳಿಲ್ಲಾದಾರ್ಪ್ಪೋಲೆ** - ಮುಕ್ತಿದಾಯಕನಾದ ಶ್ರೀಮನ್ನಾರಾಯಣನೊಬ್ಬನಿದ್ದಾನೆಂಬ ತತ್ತ್ವಜ್ಞಾನವೇನು, ಐಹಿಕಸುಖಭೋಗಗಳೂ ಸ್ವರ್ಗಾದಿ ಸುಖಗಳೂ ನಶ್ವರಗಳು ಆದುದರಿಂದ ಅವುಗಳು ತುಚ್ಛವಾದವುಗಳೆಂಬ ವೈರಾಗ್ಯವೇನು, ಇಂತಹ ಜ್ಞಾನಗಳಿಲ್ಲದ ಅಜ್ಞಾನಿ ಹಾಗೆ, **ಪ್ರಯೋಜನಾಂತರತ್ತುಕಾಗವಾದಲ್** - ಮೋಕ್ಷೇತರದಾದ ಸ್ವರ್ಗಾದಿ ಉಪಭೋಗಗಳಿಗಾಗಿಯಾಗಲಿ, **ಪೂರ್ಣೋಪಾಯರಲ್ಲಾದಾರ್ ಪೋಲೆ** - ಸಿದ್ಧೋಪಾಯವಾದ ಶರಣಾಗತಿಯನ್ನು ಸಂಪೂರ್ಣವಾಗಿ ಅನುಷ್ಠಿಸದೇ ಇರುವವರ ಹಾಗೆ, **ಮೋಕ್ಷಾರ್ಥಮಾಗವಾದಲ್** - ಮೋಕ್ಷವನ್ನು ಸಂಪಾದಿಸುವದಕ್ಕಾಗಿ ಎಂದಾಗಲಿ, **ಅನ್ರಿಕ್ಕೇ** - ಇಲ್ಲದೆ ಎಂದರೆ ಇಂತಹ ಪ್ರಯೋಜನಗಳಭಿಲಾಷೆಯಾವುದೂ ಇಲ್ಲದೆ ಎಂಬ ಭಾವವು. **ಮುಕ್ತರ್ಪ್ಪೋಲೇ** - ಮುಕ್ತರು ಹೇಗೆ ಅನುಷ್ಠಿಸುತ್ತಾರೋ ಹಾಗೆ, ಅವರು ಹೇಗೆ

ಮುಜ್ಞ್ಗರ ರುಚಿಯಾಲೆ ಯಥಾ ಶಾಸ್ತ್ರಮ್ ಸ್ವಯಂ ಪ್ರಯೋಜನಮಾಗ ವಿಳಿನ್ದಾಲ್ ಇವ್ವಭಿಗಮನಾದಿಗಳ್, (೧) ಅನ್ಯಾಭಿಗಮನಮುಂ (೨) ಅನ್ಯಾರ್ಥ ಪ್ರವೃತ್ತಿಯುಂ (೩) ಅನ್ಯ ಯಜನಮುಂ (೪) ಅನ್ಯ ಶಬ್ದಙ್ಗಳುಂ (೫) ಅನ್ಯ ಚಿನ್ತೈಯುಂ ಆಗಿರ ಛಿದ್ರಙ್ಗಳ್ ಪುಗುರಾದಪಡಿಕ್ಕು ಕಡಕಮಾಯಿರುಕ್ಕುಮ್.

ಅನುಷ್ಠಿಸುತ್ತಾರೆಂದರೆ ಸ್ವಾಮ್ಯಭಿಮತಕೈಂಕರ್ಯ ನಿಷ್ಠರಾದ ಮುಜ್ಞ್ಗರ ರುಚಿ **ಯಾಲೇ**-ಸ್ವಾಮಿಯಾದ ಶ್ರಿಯಃಪತಿಗೆ ಇಷ್ಟವಾದ ಕೈಂಕರ್ಯವನ್ನು ಮಾಡಬೇಕೆಂಬ ವಿಶ್ವಾಸದಿಂದ, **ಯಥಾಶಾಸ್ತ್ರಮ್**-ಶಾಸ್ತ್ರದಲ್ಲಿ ಹೇಳಿರುವ ಮೇರೆಗೆ, **ಸ್ವಯಂ ಪ್ರಯೋಜನಮಾಗ**-ಕೈಂಕರ್ಯವೇ ಪ್ರಯೋಜನವಲ್ಲದೆ ಇನ್ನು ಯಾವ ಪ್ರಯೋಜನಕ್ಕಾಗಿಯೂ ಅಲ್ಲದೆ, **ಇಳಿನ್ದಾಲ್**-ಕೈಂಕರ್ಯದಲ್ಲಿ ಪ್ರವೇಶವಿದ್ದರೆ, **ಇವ್ವಭಿಗಮನಾದಿಗಳ್**-ಈ ಸ್ವಾಮಿಯ ಆರಾಧನೆ ಮೊದಲಾದವುಗಳು, (ಇದೇ ಕರ್ತೃಪದವು) (೧) **ಅನ್ಯಾಭಿಗಮನಮುಂ** - ಅನ್ಯದೇವತಾರಾಧನವೂ (೨) **ಅನ್ಯಾರ್ಥಪ್ರವೃತ್ತಿಯುಮ್** - ಐಹಿಕಕ್ಕಾಗಿ ಪ್ರವೃತ್ತಿಯೂ, (೩) **ಅನ್ಯ ಯಜನಮುಮ್** - ಅನ್ಯ ದೇವತೆಯನ್ನುದ್ದೇಶಿಸಿ ಯಾಗವೂ, (೪) **ಅನ್ಯ ಶಬ್ದಙ್ಗಳುಮ್** - ಅನ್ಯದೇವತಾನಾಮ ಗ್ರಹಣವೂ. (೫) **ಅನ್ಯ ಚಿನ್ತೈಯುಮ್**- ಇತರ ವಿಷಯವಾದ ಚಿಂತೆಯೂ, **ಆಗಿರ** - ಇವೇ ಮೊದಲಾದವುಗಳಾದ, **ಛಿದ್ರಙ್ಗಳ್** - ಅಪಥ್ಯಗಳು, **ಪುಗುರಾದಪಡಿಕ್ಕು**-ಪ್ರವೇಶಿಸದೇ ಇರುವಹಾಗೆ, **ಕಡಕಮಾಯಿರುಕ್ಕುಮ್** - ತಡೆಯಾಗಿರುತ್ತವೆ. ಅಭಿಗಮನ ಪಂಚಕಗಳು, ಈ ಅನರ್ಥ ಪಂಚಕಗಳ ಪ್ರವೇಶಕ್ಕೆ ಅಡ್ಡಿಯಾಗಿರುವ ಪ್ರಯೋಜನವುಳ್ಳವು ಎಂಬ ತಾತ್ಪರ್ಯವು. ಕೆರೆಯ ಪ್ರವೇಶಕ್ಕೆ ಹೇಗೆ ಅಡ್ಡಿಯಾಗುತ್ತದೋ ಹಾಗೆ ಅಭಿಗಮನಾದಿ ಪಂಚಕಗಳು, ಈ ಅನ್ಯಾಭಿಗಮನಾದಿ ಪಂಚಕಗಳನ್ನು ಒಳಗೆ ಪ್ರವೇಶಿಸದಹಾಗೆ ಅಡ್ಡಿಮಾಡುತ್ತವೆ ಎಂದು ಭಾವವು. ಇವು ವಿಷಯಗಳು ಪ್ರಪನ್ನನ ಸ್ವರೂಪಕ್ಕೆ ವಿರುದ್ಧವಾದುವು. ಆದ್ದರಿಂದ ಈ ಅಭಿಗಮನಾದಿ ನಿತ್ಯವಾದ ಅಪ್ರಾಕೃತ ಕೈಂಕರ್ಯದಿಂದ ತಡೆಗಟ್ಟಿದೆ ಎಂದು ಹೇಳಿದರು. ಫಲಾಭಿಸಂಧಿರಹಿತವಾದ ಈ ಅಭಿಗಮನಾದಿ ಕೈಂಕರ್ಯಗಳಿಂದ ಪ್ರಪನ್ನನಿಗುಂಟಾಗುವ ಪ್ರಯೋಜನವೇನು ಎಂದರೆ ಭಗವದಾರಾಧನೆಯೂ ಸಂಧ್ಯಾವಂದನಾದಿ ನಿತ್ಯನೈಮಿತ್ತಿಕಗಳಿಗೆ ಅಡ್ಡಿಯಲ್ಲ; ತನಗೆ ಅನುಕೂಲವಿಲ್ಲವೆಂದು ಇತರರ ಕೈಯಲ್ಲಿ ಭಗವದಾರಾಧನೆಯನ್ನು ಮಾಡಿಸುವವನೂ ಅದರಲ್ಲೂ ಪ್ರಪನ್ನನಾಗಿ ಭಗವದಾರಾಧನೆಯನ್ನು ಮಾಡದವನು ಬರೀ ನಿಂದ್ಯನೆಂದು ಇದರಿಂದ ಹೇಳಿದಂತಾಯಿತು.

ಅನ್ಯಾಭಿಗಮನಾದಿ ಪಂಚಕಾನಾಂ ಪ್ರಪನ್ನ ವಿರುದ್ಧತ್ವೇ ಪ್ರಮಾಣಾನಿ.

೧. ಅನ್ಯಾಭಿಗಮನ ಮಾಗಾದೆನ್ನು ಮಿಡತ್ತಿಲ್ (೧) ಇನಿಪ್ಪೋಯ್ ಒರುವರ್ ತನಕ್ಕುಪ್ಪಣಿನ್ದು ಕಡೈತ್ತಲೈ ನಿರ್ಕ್ಕ ನಿನ್ ಶಾಯ್ವು ಯಳಿವು ಕಣ್ಡಾಯ್" ಎನ್ರು ಪೆರಿಯಾಳ್ವಾರರುಳಿಚ್ಚೆಯ್ದಾರ್

ಅನ್ಯಾಭಿಗಮನಾದಿ ಪಂಚಕಗಳು ಪ್ರಪನ್ನನಿಗೆ ವಿರುದ್ಧವಾದ ವೆಂಬುದಕ್ಕೆ ಪ್ರಮಾಣಗಳು.

೧. ಅನ್ಯಾಭಿಗಮನಂ - ಅನ್ಯದೇವತಾರಾಧನೆಯು. ಆಗಾದು - ಈ ಪ್ರಪನ್ನನಿಗೆ ಸ್ವರೂಪವಿರುದ್ಧವು. ಎನ್ನುಮಿಡತ್ತಿಲ್ - ಎಂಬ ಸಂದರ್ಭವನ್ನು (೧) "ಇನಿಪ್ಪೋಯ್" ಎನ್ರು - ಎಂಬ ಪಾಶುರದಲ್ಲಿ, ಪೆರಿಯಾಳ್ವಾರವರು ತಾವು ಬರೆದ ತಿರುಮೊಳಿಯಲ್ಲಿ, ಅರುಳಿಚ್ಚೆಯ್ದಾರ್ - ಅನ್ವಗ್ರಹಿಸಿರುತ್ತಾರೆ:— ಆ ಪಾಶುರವು ಯಾವುದೆಂದರೆ: —ಉನಕ್ಕುಪ್ಪಣಿ ಶೆಯ್ದಿರುಕ್ಕುಮ್ ತವಮುಡೈಯೇನಿನಿಪ್ಪೋಯ್ ಯೊರುವನ್ । ತನಕ್ಕುಪ್ಪಣಿನ್ದು ಕಡೈತ್ತಲೈ ನಿರ್ಕ್ಕ ನಿನ್ ಶಾಯ್ವು ಯಳಿವು ಕಣ್ಡಾಯ್ । ಪುನ ತುಳಾಯ್ಮಾಲೈ ಪುಕೈಪ್ಪುದುವವಿ ಕಟ್ಟಿಯರ್ ಪೊನ್ನಡಿ ವಾಳ್ಗವೆನ್ರು । ಇನಕ್ಕುರುವರ್ ಪುದಿಯದುಣ್ಣುಮೆಳಿಲ್ ಮಾಲಿರುಂಶೋಲೈ ಯೆನ್ದಾಯ್ ॥

ಅರ್ಥವು ಇನಕ್ಕುರುವರ್-ಸ್ತ್ರೀಯರೂ ಪುರುಷರೂ ಬಾಲರೂ ವೃದ್ಧರೂ ಹೀಗೆ ಗುಂಪುಕೂಡಿಬಂದಿರುವ ಗದ್ದೆ ತೋಟಗಳಲ್ಲಿ ಕೆಲಸಮಾಡುವ ಕೋವರ ಜಾತಿಯವರು, ಉರ್ ಪೊನ್ನಡಿವಾಳ್ಗ ಎನ್ರು-"ಉನ್ನಡಿ ಶೇವಡಿ ಶೆವ್ವಿತಿರುಕ್ಕಾಪ್ಪು" ಎಂದು ಹೇಳುವಹಾಗೆ ನಿನಗೆ ಮಂಗಳಾಶಾಸನಮಾಡುವದಕ್ಕಾಗಿ ಪಲ್ಲಾಣ್ಡನ್ನು ಹಾಡಿ, ಪುನಮ್ ತಿನೈಕ್ಕುಱ್ - ಹೊಲದಲ್ಲಿ ಬಿಟ್ಟ ಧಾನ್ಯದ ತೆನೆಯನ್ನು ಕೊಯಿದು ತಂದು, ಪುದು ಅವಿ - ಆ ನೈರನ್ನು ಉಪಯೋಗಿಸಿಕೊಳ್ಳುವದಕ್ಕೆ ಮೊದಲು ಹೊಸ ಅಕ್ಕಿಯಿಂದ ನಿನಗೆ ಭೋಗ್ಯವಾಗಿರುವಹಾಗೆ ಹವಿಸ್ಸನ್ನು ಮಾಡಿ, ಕಾಟ್ಟಿ - ನಿನಗೆ ನಿವೇದನವನ್ನು ಮಾಡಿ, ಪುತಿಯದುಣ್ಣುಮ್ ಎಳಿಲ್ - ಶ್ರೀಕೃಷ್ಣನು ಬೆಣ್ಣೆಯನ್ನು ಸ್ವೀಕರಿಸಿದ ರೀತಿ ಈ ಹೊಸ ಹವಿಸ್ಸನ್ನು ಭುಜಿಸುವ ಸೊಬಗನ್ನು ಹೊಂದಿದ, ಮಾಲಿರುಂಶೋಲೈ ಎನ್ದಾಯ್ -

(೧) ಪೆರಿಯಾಳ್ವಾರ್ ತಿರುಮೊಳಿ ೫. ೩. ೩.

ಮಾಲಿರುಂಚೋಲೆ ಎಂಬ ದಿವ್ಯದೇಶದಲ್ಲಿ ಬಿಜಮಾಡಿಸಿರುವ ಎಮ್ಮಪ್ಪನೇ, ಉನಕ್ಕು - ಶೇಷಿಯಾದ ನಿನಗೆ, ಪಣಿಸೆಯ್ದು - ಶೇಷಭೂತನಾದ ನಾನು ನಿತ್ಯ ಕೈಂಕರ್ಯವನ್ನು ಮಾಡುವಂತೆ. ಇರುಕ್ಕುಮ್ - ಹೀಗಿಲ್ಲದೆ ಅಚಿತ್ಪ್ರಾಯನಾಗಿರುವ ನಾನು "ಕಿಂತನೋನಂ ತತೋವಿದುಃ ಎಂದು ಹೇಳಿರುವಹಾಗೆ ಸತ್ತೆಯುಳ್ಳವನಾದೆನು, ತನಮುಡೈಯೋರ್ - ಅಂತಹ "ಕಿಂಕರತ್ವಾಧಿ ರಾಜ್ಯಂ" ಎಂದು ಹೇಳುವಹಾಗೆ ಕೈಂಕರ್ಯ ಸಾಮ್ರಾಜ್ಯವನ್ನು ಹೊಂದುವ ಸುಕೃತವನ್ನು ನಿನ್ನ ಅನುಗ್ರಹದಿಂದ ಹೊಂದಿದೇನೆಂದಿರುವೆನು; ಇನಿ - ಹೀಗಿರುವಾಗ ಇನ್ನು ಮೇಲೆ, ಶ್ರೋಯರ್ - ಆಶ್ರಿತ ವತ್ಸಲನಾಯರ್ ಶರಣಾಗತರ ಸಂರಕ್ಷಣೆಯಲ್ಲಿ ಬದ್ಧಾದರನಾಗಿರುವ ನಿನ್ನನ್ನನಾದರಣೆಮಾಡಿ ಅನ್ಯತ್ರಹೋಗಿ, ಒರುವರ್ ತನಕ್ಕು - ನಮ್ಮಹಾಗೆ ಜೀವಕೋಟಿಗೆ ಸೇರಿ ನಮಗಿಂತ ಸ್ವಲ್ಪಹೆಚ್ಚು ಅಧಿಕಾರವನ್ನು ಸ್ವಾಮಿಕೃಪೆಯಿಂದ ಹೊಂದಿ ಅಲ್ಪಾಸ್ಥಿರ ಫಲಪ್ರದರಾದ ಬ್ರಹ್ಮರುದ್ರೇಂದ್ರಾದಿಗಳಲ್ಲಿ ಒಬ್ಬನನ್ನು, ಶಣಿನ್ನು - ನಿನ್ನ ಪಾದದಲ್ಲೇ ಇಡಲು ಯೋಗ್ಯವಾದ ತಲೆಯನ್ನು ಅಂತವನಿಗೆ ಬಾಗಿಸಿ, ಕಡೈತ್ತಲೈ - ನಿನ್ನ ಬಾಗಿಲು ಕಾಯುವದನ್ನು ಬಿಟ್ಟು, ಅವನ ನಿವಾಸದ ಕೊನೆಯ ಬಾಗಿಲಲ್ಲಿ, ನಿರ್ಕ್ಕ - ಕೈಜೋಡಿಸಿ ನಿಂತಿರುವದು ನಿರ್ಕಮಾಮ್ರೋ - ನಿನ್ನ ದಿವ್ಯ ತೇಜಸ್ಸಿಗೆ, ಅಳಿವುಕೆಂಡಾಯ್ - ಹಾನಿಕರವಾದುದಲ್ಲವೇ? ಹೀಗಾಗ ನನ್ನ ಸ್ವರೂಪಕ್ಕೆ ಹಾನಿ ಉಂಟುಮಾಡುವಹಾಗೆ ಮಾಡಿಕೊಂಡನೋ; ಆಗ ನನ್ನ ಸ್ವರೂಪವೂ ಹಾಳೇ ಆಯಿತು ಎಂಬ ಭಾವವೂ ಸೂಚಿತವು. ಪ್ರಥಮತಃ ನನಗೆ ನಾನು ದಾಸನು ಎಂಬ ಜ್ಞಾನಬೇಕು. ಅನಂತರ ದಾಸನಿಗೆ ಉಚಿತವಾದ ವೃತ್ತಿಯನ್ನು ಹಿಡಿದಿರುವದರಲ್ಲಿ ಆಸೆಯುಂಟಾಗಬೇಕು, ಆದುದರಿಂದ ತನ್ನ ಶೇಷಿಗೆ ತಾನು ಕೈಂಕರ್ಯವಮಾಡುವದೇ ತನಗೆ ಸತ್ತೆಯನ್ನೀಯುವಂತಾದ್ದು, ಅದಿಲ್ಲದಿದ್ದರೆ ತನ್ನ ಆತ್ಮೋಜ್ಜೀವನಕ್ಕೆ ನಾಶವಾದೀತೆಂಬ ಸ್ಥಿರಪ್ರಜ್ಞೆಯುಂಟಾಗಬೇಕು. ಇಂತಹ ಜ್ಞಾನವುಳ್ಳ ನಾನು ಅನ್ಯದೇವತೆಗಳ ಕಾಲಿಗೆ ಬಿದ್ದು ಅವರ ಬಾಗಿಲುಕಾದು ನನ್ನ ಸ್ವರೂಪವನ್ನು ಹಾಳುಮಾಡಿಕೊಂಡು, ನಿನ್ನ ಮಹಿಮೆಗೆ ಕುಂದಕವಾಗುವಹಾಗೆ ಎಂದಿಗಾದರೂ ಮಾಡುವೆನೇ ಎಂಬುದು ಆಳ್ವಾರವರ ತಾತ್ಪರ್ಯವು. ಇದರಿಂದ ಅನ್ಯಾಭಿಗಮನದ ಪ್ರಸಕ್ತಿ ಸ್ವರೂಪಕ್ಕೆ ವಿರುದ್ಧವೆಂಬುದು ಹೇಳಲ್ಪಟ್ಟಿತು.

೨. ಪ್ರಪನ್ನನಿಗೆ ಇತರ ದೇವತೆಯಿಂದ ಪ್ರಯೋಜನವು ಕೂಡದು; ಎನ್ನ ಪಿತಕ್ಕಿಯುವಾರ್ - ಎಷ್ಟುವ [illegible] (೨) ಕೊರ್ರೈ - ವನ್ನು, ಕೊಡುಕ್ಕು - [illegible] ಎಂಬುವನ್ನು ಬಿಟ್ಟು ಮುತ್ತ [illegible] ಇವುಗಳನ್ನು, ವೇಣ್ಡು ವದಿಲ್ಲ - ಅಪೇಕ್ಷಿಸುವದಿಲ್ಲವು. ಏಕೆಂದರೆ ಇದು ಜನ್ಮಕಾಲದಲ್ಲೇ ಪ್ರಾರಬ್ಧ

೨. ಅನ್ಯಾರ್ಥ ಪ್ರವೃತ್ತಿ ಯಾಗಾದೆನ್ನು ಮಿಡಕ್ಕೈಯುಮ್ (೨) "ಕೂರೈ ಶೋಱಿವೈ ವೇಣ್ಡುವದಿಲ್ಲೈ" ಎನ್ರರುಳಿಚ್ಚೆಯ್‌ದಾರ್.

ಕರ್ಮಾನುಗುಣವಾಗಿ ಸ್ವಾಮಿ ಸಙ್ಕಲ್ಪಾನುಸಾರವಾಗಿ ಏರ್ಪಟ್ಟವಾದುದರಿಂದ ಅಪೇಕ್ಷಿಸುವದಿಲ್ಲವೆಂಬ ಭಾವವು; ಪೂರಾ ಪಾಸುರವು ಯಾವುದೆಂದರೆ:—"**ನೆಡುಮ್ಮೈಯರಾಲುಲಗೇಳು** ಮಳನ್ದಾಯ್ ನಿನ್ಮಲಾ ನೆಡಿಯಾ ಯಡಿಯೇನ್ನೈ । ಕ್ಕುಡಿಮ್ಮೈ ಕೊಳ್ವದರ್ಕ್ಕು ಯುಱವೇಣ್ಡಾ ಕೂರೈ ಶೋಱಿವೈ ವೇಣ್ಡುವ ದಿಲ್ಲೈ । ಅಡಿಮೆ ಯೆನ್ನುಮಕ್ಕೋಯಿನ್ಮೈಯಾಲೇ ಯಙ್ಗಙ್ಗೇ ಯವ್ವೈಪ್ಪೋದರುಙ್ಗಣ್ಡಾಯ್ । ಕೊಡುಮ್ಮೈ ಕಂಸನೈ ಕೊನ್ರು ನಿನ್ದಾದೈ ಕೋತ್ತವನ್ದಳೈ ಕೋಳ್ವಿಡುತ್ತಾನೇ ೪॥ ಇದರರ್ಥವು. **ನೆಡುಮ್ಮೈಯಾಲ್ ಉಲಗೇಳುಮ್ ಅಳನ್ದಾಯ್** - ದೀರ್ಘವಾಗಿ ವ್ಯಾಪಿಸಿ ತ್ರಿವಿಕ್ರಮನಾಗಿ, ಸಮಸ್ತ ಲೋಕವನ್ನು ಅಳೆದಿರುತ್ತೀಯೇ, ಬಲಿಯ ಎದುರಿಗೆ ವಾಮನನಾಗಿ ತನ್ನ ಮೂರು ಹೆಜ್ಜೆಯ ಭೂಮಿಯನ್ನು ನೀನು ಪ್ರಾರ್ಥಿಸಬಹುದು; ಅದು ಅನ್ಯಾರ್ಥ ಪ್ರವೃತ್ತಿಯಾಗಲಿಲ್ಲವೋ ಎಂದರೆ, **ನಿನ್ಮಲಾ** - ಹೀಗೆ ವಂಚಿಸಿ ಬಲಿಯಿಂದ ಮೂರು ಹೆಜ್ಜೆಯ ನೆಲವನ್ನು ಪಡೆದುದು ದೋಷವೋ ಎಂದರೆ ಸ್ವಪ್ರಯೋಜನವಿಲ್ಲದೆ ಪರಪ್ರಯೋಜನಕ್ಕಾಗಿಯೇ ಮಾಡಿದುದರಿಂದ ದೋಷರಹಿತನಾದವನು, ಅದೂ ಅಲ್ಲದೆ ತನ್ನ ಪವಿತ್ರಗಳಾದ ಪಾದಗಳಿಂದ ಎಲ್ಲವನ್ನೂ ಪಾವನಮಾಡಿದುದರಿಂದಲಾಗಲಿ ನಿನ್ಮಲಾ; ಹೀಗೆ ಎಲ್ಲವನ್ನೂ ಆಕ್ರಮಿಸಿ ಎಲ್ಲವೂ ನಿನ್ನ ಪಾದದ ನೆರಳಿನಲ್ಲಿರುವಹಾಗೆ ಮಾಡಿಕೊಂಡಿದುದರಿಂದ ಸರ್ವಸ್ಯ ಧಾರಕ ಪೋಷಕ ಭೋಗ್ಯನಾಗಿರುವದರಿಂದ, **ನೆಡಿಯಾಯ್** - ಆಶ್ರಿತರಿಗೆ ಮಾತ್ರ ಸರ್ವಾಧಿಕನಾಗಿ, ಸರ್ವಾಧಿಕನು ಹೇಗೆಂದರೆ ಸ್ವರೂಪ ರೂಪಗುಣ ವಿಭವೈಶ್ವರ್ಯಾದಿಗಳಿಂದ ಸರ್ವಾಧಿಕನಾಗಿ, **ಕೊಡುಮ್ಮೈ ಕಞ್ಜನೈ ಕೊನ್ರು** - ತಂಗಿಯನ್ನೇ ಕೊಲ್ಲಲು ಯತ್ನಿಸಿ ಮತ್ತು ಆಕೆಯ ಮಕ್ಕಳುಗಳಲ್ಲಿ ಆರು ಮಕ್ಕಳನ್ನು ಕೊಂದು, ಹೀಗೆ ಕ್ರೂರ ಪಾಪಿಷ್ಠನಾದ ಕಂಸನನ್ನು ಕೊಂದು **ನಿನ್‌ತಾದೈ** - ನಿನ್ನ ತಂದೆಯಾದ ವಸುದೇವನ **ಕೊತ್ತವನ್ ತಳೈಕೊಳ್** - ಬೀಗಹಾಕಲ್ಪಟ್ಟ ಬಲಿಷ್ಠವಾದ ಬೇಡಿಯ ಬೀಗವನ್ನು, **ವಿಡುತ್ತಾನೇ** - ತೆಗೆದು ಹಾಕಿದವನೇ. ಹೀಗೆ ಕ್ರೂರನಾಗಿ ಅತಿ ಬಲಿಷ್ಠನಾಗಿರುವ ಕಂಸನನ್ನು ಕೊಂದವನಿಗೆ, ಈ ನನ್ನ ಕ್ರೂರಗಳಾದ ಕಾಮಕ್ರೋಧಗಳೆಂಬ ಶತ್ರುಗಳನ್ನು ಕೊಂದು, ಪ್ರಕೃತಿಯಿಂದುಂಟಾದ ಸಂಸಾರವೆಂಬ

---

(೨) ಪೆರಿಯಾಳ್ವಾರ್ ತಿರುಮೊಳಿ ೫. ೧. ೪.

ಬೇಡಿಯುನ್ನು ಭೇದಿಸುವದು ನಿನಗೊಂದು ಕಷ್ಟವೇ ಎಂಬ ಭಾವವು ಸೂಚಿತವು ಕಂಸನಾದರೋ ನಿನಗೆ ಶತ್ರುಸ್ಥಾನದಲ್ಲಿದ್ದವನು, ನಾನಾದರೋ, **ಅಡಿಯೇನೈ** - ನಿನಗೆ **ಸರ್ವ** ವಿಧಹಲ್ಲೂ ಪರತಂತ್ರನಾಗಿ ಶೇಷಭಾವದಿಂದ ದಾಸನಾಗಿರುವ ನನ್ನನ್ನು, **ಅಡಿನೈ ಕೊಳ್ಳುದರ್ಕೆ** - **ಅಂತಹ** ದಾಸಭೂತನ ಅಲ್ಪ ಪ್ರಾರ್ಥನೆಯಾಗಿ ನಾನು ಮಾಡುವ ಅಲ್ಪ ಕೈಙ್ಕರ್ಯವನ್ನು ಪರಿಗ್ರಹಿಸುವದರಲ್ಲಿ, ಶೇಷಭೂತನ ಸ್ವರೂಪಾನುರೂಪವಾದ ವೃತ್ತಿಯನ್ನು ಸ್ವೀಕರಿಸುವದರಲ್ಲಿ, **ಐಯುರವೇಣ್ಡಾ** - ನೀನು ಸ್ವಲ್ಪವೂ ಸಂದೇಹ ಪಡಬೇಡ; ಹೀಗೆ ನನ್ನ ಅಲ್ಪ ಕೈಙ್ಕರ್ಯವನ್ನು ಸ್ವೀಕರಿಸಿದರೇನೇ, ನನಗೆ ಅನುಗ್ರಹವುಂಟಾಗಿ ನನಗೆ ಅದು ಧಾರಕ ಪೋಷಕವಾಗಿ ನನಗೆ **ಸತ್ತಾ**ದಾಯಕವಾಗುತ್ತದೆ, ಆ ಕೈಙ್ಕರ್ಯವೇ ಸ್ವಯಂ ಪ್ರಯೋಜನವೇ ವಿನಾ ಇನ್ನು ಯಾವ ಐಹಿಕಾದಿ ಪುರುಷಾರ್ಥಕ್ಕಾಗಲಿ ನಾನು ನಿನ್ನನ್ನೇನಾದರೂ ತೊಂದರೆ ಮಾಡುತ್ತಾನೋ ಎಂದು ಸಂದೇಹ ಪಡಬೇಡ ಎಂಬ ಭಾವವು; "**ನತೇ ದುಃಖಂ ಕರಿಷ್ಯಾಮಿ ನಿವಸಂತೀ ತ್ವಯಾ ಸಹ**" ಎಂದು ಸೀತೆಯು ಶ್ರೀರಾಮನಲ್ಲಿ ಅರಿಕೆ ಮಾಡಿಕೊಂಡಹಾಗೆ, ಶ್ರೀ ಆಳ್ವಾರವರೂ ಪರಮಾತ್ಮನಲ್ಲಿ ಅರಿಕೆ ಮಾಡಿಕೊಳ್ಳುತ್ತಾರೆ, ಅದನ್ನೇ ಮುಂದೆ ವ್ಯಕ್ತಪಡಿಸುತ್ತಾರೆ, **ಕೂರುಶೋರಿನೈ** - ಅನ್ನಬಟ್ಟೆ ಇವೇ ಮೊದಲಾದ ಐಹಿಕಗಳನ್ನು, **ವೇಣ್ಡುವದಿಲ್ಲೈ**-ಅಪೇಕ್ಷಿಸುವದಿಲ್ಲವು; ಅದೇನು ಹಾಗೆ ಎಂದರೆ ನಿನಗೆ ಮಾಡುವ ಕೈಙ್ಕರ್ಯ ಸಾಮ್ರಾಜ್ಯದ ಮುಂದೆ, ಯಾವ ಇತರ ಪುರುಷಾರ್ಥಗಳೂ ಇಲ್ಲವು. ದೇಹಕ್ಕಿಂತ ಆತ್ಮಾ ವಿಲಕ್ಷಣನಾದುದರಿಂದ, ಶಬ್ದಾದಿಗಳು ಪುರುಷಾರ್ಥಗಳಾಗಲಾರವು. ಸ್ವಾಮಿಗೆ ಪರತಂತ್ರನಾಗುವದರಿಂದ ಸ್ವಾನುಭವವು ಪುರುಷಾರ್ಥವಲ್ಲವು; ಜೀವಾತ್ಮ ಸ್ವರೂಪವು ನಿತ್ಯವಾಗಿರುವದರಿಂದ, ಸ್ವರೂಪನಾಶವು ಪುರುಷಾರ್ಥವಲ್ಲವು. ಜ್ಞಾನಗುಣಕನಾಗಿರುವದರಿಂದ ಗುಣನಾಶವು ಪುರುಷಾರ್ಥವಾಗುವದಿಲ್ಲವು. ಹಾಗಾದರೆ ಪುರುಷಾರ್ಥವು ಏನು ಎಂದರೆ ಶೇಷಭೂತನಾದ ಈತನು ಪರಮಾತ್ಮನಿಗೆ ನಿತ್ಯಕೈಙ್ಕರ್ಯವನ್ನು ಮಾಡುವಹಾಗೆ ಅನುಗ್ರಹವೇ ಪುರುಷಾರ್ಥವು; ಅಂತಹ ಪುರುಷಾರ್ಥವನ್ನು ಅನುಗ್ರಹಿಸು ಎಂದು ಬೇಡುತ್ತಾರೆ. **ಅಡಿನ್ಮೈಎನ್ರಮ್** - ದಾಸ್ಯವೆನ್ನುವ, **ಆ**-ಅಂತಹ, **ಕೋಯಿನ್ಮೈಯಾಲೇ** - ಸಾಮ್ರಾಜ್ಯ ಪದವಿಯನ್ನು ಹೊಂದುವದರಿಂದ, **ಅನ್ನೈ**-ನಿರ್ವಾಹವಿಲ್ಲದೆ **ಈ** ಅನ್ನ ಬಟ್ಟೆ ಮೊದಲಾದವು, ಅವರ ಮಹಿಮೆಯಿಂದ, **ಅಙ್ಗಙ್ಗೇ** - ಅಲ್ಲಲ್ಲೇ, **ಪೋದರುಮ್ ಕೆಂಡಾಯ್** - ಬರುತ್ತದೆ ಅಲ್ಲವೇ, ಇದರಿಂದ ಐಹಿಕಗಳಲ್ಲಿ ಪ್ರಪನ್ನನಿಗೆ ಈ ಪರಿ ಅಭಿಲಾಷೆಯು ಕೂಡದು. "**ಪರಿತ್ಯಕ್ತಾ ಮಯಾಲಂಕಾ ಮಿತ್ರಾಣಿಚ ಧನಾನಿಚ**" ಎಂದೂ, **ತ್ಯಕ್ತ್ವಾ ಪುತ್ರಾಂಶ್ಚ ದಾರಾಂಶ್ಚ** ಎಂದೂ, ವಿಭೀಷ

೩. ಅನ್ಯ ಯಜನ ಮಾಗಾದೆನ್ನು ಮಿಡತ್ತೆ (೩) "ಉನ್ನಿತ್ತು ಮತ್ತೊರು ದೆಯ್ವಮ್ ತೊಳಾಳನ್ನೆ ಯಲ್ಲಾಲ್" ಎನ್ರುಮ್,

---

ಜನು ಹೇಳಿದಹಾಗೆ ಎಲ್ಲಾ ಐಹಿಕಗಳೂ ತುಚ್ಛವೂ ಅಲ್ಲದೆ ಸಾಕ್ಷಾದ್ಬಂಧಕಗಳು; ಆದುದರಿಂದ ಐಹಿಕಗಳು ಅನುಕೂಲವೇ ಆಗಲಿ ಪ್ರತಿಕೂಲವೇ ಆಗಲಿ, ಅವುಗಳಲ್ಲಿ ಮನಸ್ಸಿಡಕೂಡದು. ಸೀತೆಯು ಹಾಗೆ "ನೈಷಾ ಪಶ್ಯತಿ ರಾಕ್ಷಸ್ಯೋ ನೈತಾನ್ ಪುಷ್ಪಫಲದ್ರುಮಾನ್" (ರಾ. ಸುಂ. ೧೬. ೨೩.) ಪ್ರತಿಕೂಲರಾದ ರಾಕ್ಷಸೀಯರನ್ನು ಆಕೆಯು ನೋಡುತ್ತಿರಲಿಲ್ಲವು; ಅನುಕೂಲಗಳಾದ ಮನೋಹರಗಳಾದ ಪುಷ್ಪ ಫಲಗಳುಳ್ಳ ವೃಕ್ಷಗಳನ್ನು ಕಣ್ಣೆತ್ತಿ ನೋಡಲಿಲ್ಲವು; ಇನ್ನು ಯಾರನ್ನು ಧ್ಯಾನಿಸಲೂ ಮನಸಿಟ್ಟು ನೋಡುತ್ತಿದ್ದಳೆಂದರೆ "ಏಕಸ್ಥಹೃದಯಾನೂನಂ ರಾಮಮೇವಾನುಪಶ್ಯತಿ" ಶ್ರೀರಾಮನನ್ನೇ ಚಿಂತಿಸುತ್ತಾ ನೋಡುತ್ತಿದ್ದಳು ಎಂಬುದು ಹೇಗೋ ಹಾಗೆಯೇ ಪ್ರಪನ್ನನೂ ಇರತಕ್ಕದ್ದೆಂಬುದು ಇದರಿಂದ ಸೂಚಿತವು.

೩. ಅನ್ಯದೇವತಾರಾಧನೆಯು ಕೂಡದು, ಎಂದರೆ ಸ್ವರೂಪವಿರುದ್ಧವು ಎನ್ನುವ ಸಂದರ್ಭವನ್ನು ನಮ್ಮಾಳ್ವಾರವರು (೩) "ಉನ್ನಿತ್ತು ಮತ್ತೊರು" ಎಂಬ ಪಾಶುರದಲ್ಲಿ ಉಪದೇಶಿಸಿರುತ್ತಾರೆಂದು ಹೇಳುತ್ತಾರೆ. ಪೂರಾ ಪಾಶುರಕ್ಕೂ ಅದರ ಅರ್ಥಕ್ಕೂ ೬೩೮ನೆಯ ಪುಟ ನೋಡಿ. ಇಲ್ಲಿ ಪತಿವ್ರತಾ ಧರ್ಮವನ್ನು ಕೈಕೊಂಡಿರುವ ಇವಳು, ಶ್ರೀಕೃಷ್ಣನ ಪಾದಾರವಿಂದದಲ್ಲಿ ನೀವುಗಳು ಐಕಾಂತ್ಯಾನುಸಂಧಾನಮಾಡಿರಿ; ಆತನೇ ನಮಗೆಲ್ಲಾ ರಕ್ಷಕನೆಂಬ ನಂಬಿಕೆಯಿಂದ ಅನ್ಯದೇವತಾ ಸಂಬಂಧವಿಲ್ಲದಹಾಗೆ ಸ್ತೋತ್ರಮಾಡಿರಿ; ಆದರಿಂದ ಆ ಪತಿವ್ರತೆಗೆ ಶಾಂತಿಯುಂಟಾಗುತ್ತದೆಂದು ಹೇಳುತ್ತಾಳೆ—ಅವನೈ ಯಲ್ಲಾಲ್ "ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂ" ಎಂದೂ "ಅಭಯಂ ಸರ್ವಭೂತೇಭ್ಯೋ ದದಾಮಿ" ಎಂದೂ ಕಂಕಣ ಬದ್ಧನಾಗಿರುವ ಮಹೋದಾರನನ್ನು ಬಿಟ್ಟು, ಈಕೆಯು, ಮತ್ತೊರು ದೇಯ್ವಮ್- ನಮ್ಮ ಹಾಗೆಯೇ ಜೀವಕೋಟಿಗೆ ಸೇರಿ ಪ್ರಜಾಪತಿ ಪಶುಪತಿ ಎಂದು ಸ್ವಾಮಿಯು ಕೊಟ್ಟ ನಾಮಗಳನ್ನು ಧರಿಸಿರುವ ನಮ್ಮ ಹಾಗೆ ಬದ್ಧರಾದ ದೇವತೆಗಳು ಯಾರನ್ನೂ, ತೊಳಾಳ್-ಸ್ತೋತ್ರಮಾಡಲಾರಳು ಎಂದು ಹೇಳುವದರಿಂದ, ಪ್ರಪನ್ನನಿಗೆ ಬೇಕಾದ ಪತಿವ್ರತಾ ಧರ್ಮಕ್ಕೆ ಸಮಾನವಾದ ಅನನ್ಯದೈವತ್ವವು ಪ್ರಕಟಿಸಲ್ಪಟ್ಟಿತು. ಪತಿವ್ರತಾ

(೩) ತಿರು. ೪. ೬. ೧೦.

(೪) "ತೇವನೆಮ್ಬೊರುವನಕ್ಕಲ್ಲಾಲ್ ಪೂವುಮ್ ಪೂಶನೈಯುಮ್ ತಗುಮೋ"

ಶ್ರೀರಾಮನಿಗೆ ಪ್ರಾಣ ಸೀತೆಯು ಇದನ್ನು ಪ್ರಕಟಿಸುತ್ತಾಳೆ:—"ಅನನ್ಯದೈವತ್ವಮಿದಂ ಕ್ಷಮಾಚ ಭೋಗ್ಯೇಷು ತೃಪ್ತಿರ್ನಿಯಮಶ್ಚ ಧರ್ಮೇ" ಹೀಗಿರುವ ದೇಗ ಪತಿವ್ರತಾತ್ವವು ಪ್ರಪನ್ನನೂ ಹಾಗೆಯೇ ಇರಬೇಕು; ಅತನಲ್ಲದೆ ಇನ್ನು ಯಾರನ್ನೂ ಸ್ಪರಿಸಕೂಡದು; ಇಯಂ ಕ್ಷಮಾಚ - ತತ್ಪ್ರಾಪ್ತಿಗೆ ವಾಂಛಿತವಾಗಿ ಪ್ರಾರಬ್ಧಾನುಗುಣವಾಗಿ ಎಷ್ಟು ಕ್ಲೇಶ ಉಂಟಾದರೂ ಸೀತೆಯು ರಾಕ್ಷಸಿಗಳ ಬಾಧೆಯನ್ನು ಸಹಿಸಿದಹಾಗೆ, ಇಯಂ ಕ್ಷಮಾಚ ಇರಬೇಕು; ಪ್ರಾರಬ್ಧಾನುಗುಣವಾಗಿ ಈ ಲೋಕದ ಸುಖಕ್ಕೆ ಮನಸ್ಸನ್ನು ಕೂಡ ಕೊಡದೆ, ಒಂದುವೇಳೆ ಭೋಗ್ಯೇಷು ತೃಪ್ತಿರ್ [illegible] ತತ್ಪ್ರಾಪ್ತಿಯವರೆಗೂ ಆದರೂ, ಇಷ್ಟವಾಗಿಯೇ ಭಾವಿಸತಕ್ಕದ್ದು; ನಿಯಮಶ್ಚ ಧರ್ಮೇ-ಶಾಸ್ತ್ರಚೋದಿತಮಾರ್ಗಗಳಲ್ಲಿ ನಿತ್ಯನೈಮಿತ್ತಿಕಗಳನುಷ್ಠಾನ [illegible] ಇವೆಲ್ಲ ಧರ್ಮಗಳೂ ಪತಿವ್ರತೆಯು ಹಾಗೆ ಇರತಕ್ಕದ್ದೆಂಬುದು "[illegible]" ಎನ್ನು - ಎಂಬದಾಗಿಯೂ, ಮತ್ತು

೪. ಈ ಶ್ಲೋಕದಿಂದ ಪುಷ್ಪಾರ್ಚನೆ ಮೊದಲಾದ ಸಕಲಾರಾಧನೆಗಳೂ ಬ್ರಹ್ಮಾದ್ಯಾನುಳ್ಳ ದೇವಲೋಕಕ್ಕೂ, ಮನುಷ್ಯಾದಿಗಳುಳ್ಳ ಇಹಲೋಕವೆಲ್ಲ [illegible] ಕಾರಣಭೂತನಾದ ಸರ್ವೇಶ್ವರನಿಗಲ್ಲದೆ ಇನ್ನು ಯಾರಿಗೂ ಸಲ್ಲದೆಂದು ಹೇಳುತ್ತಾರೆ. ಈ ಪೂರಾ ಪಾಶುರವು ಯಾವುದೆಂದರೆ:—"ತೇವು ಮೆಪ್ಪೊರುಳುಮ್ ಪಡೈಕ್ಕ ಪೂವಿಲ್ ನಾನ್ಮುಗನೈ ಪಡೈತ್ತ। ತೇವನೆಮ್ಬೊರು ಮಾನುಕ್ಕಲ್ಲಾಲ್, ಪೂವುಂಪೂಶನೈಯುಮ್ ತಗುಮೋ" ತೇವುಮ್ - ಬ್ರಹ್ಮಾದಿಗಳಾದ [illegible] ಸಮಸ್ತ ದೇವಜಾತಿಯನ್ನೂ, ಎಪ್ಪೊರುಳುಮ್ - ಮನುಷ್ಯಾದಿ [illegible] ಇಹಲೋಕ [illegible]ಗಳನ್ನೂ, ಪಡೈಕ್ಕ - ಸೃಷ್ಟಿಸುವದಕ್ಕಾಗಿ, ಪೂವಿಲ್ ನಾನ್ಮುಗನೈ ಪಡೈತ್ತ - ತನ್ನ ನಾಭೀಕಮಲದಲ್ಲಿ ಚತುರ್ಮುಖಬ್ರಹ್ಮನನ್ನು ಉಂಟುಮಾಡಿದ, ದೇವನ್ ಎಂಬೆರುಮಾನುಕ್ಕು ಅಲ್ಲಾಲ್ - [illegible] ಅಥವಾ ದೇವ[illegible] [illegible]ನಾದ ಸರ್ವೇಶ್ವರನಿಗಲ್ಲದೆ ಇನ್ನು [illegible]. ಪೂವುಮ್ ಪೂಶನೈಯುಮ್ - [illegible], ತಗುಮೋ - ಸಲ್ಲುತ್ತದೆಯೋ. ಶ್ರೀ[illegible] ತಗುಮೋ ಅಥವಾ [illegible] ಅತನಿಂದುಂ

(೪) ತಿರು. ೨. ೨. ೪

ಎನ್ರುವನ್, (೫) "ಈನ್ರೋಳಿರುಕ್ಕ ಮಣ್ಣೈ ನೀರಾಟ್ಟಿ" ಎನ್ರುವನ್

ಟಾದ ಬ್ರಹ್ಮರುದ್ರಾದಿಗಳಿಗೆ ಸರಿಯೇ ಎಂಬ ಭಾವವು ಭೀಷ್ಮರು ರಾಜಸೂಯ ಸಭೆಯಲ್ಲಿ ಹೇಳುತ್ತಾರೆ:—"**ಕೋನಾರ್ಹಂ ಮನ್ಯತೇ ಕೃಷ್ಣಂ ಕೋವಾಪ್ಯೇನಂ ನ ಪೂಜಯೇತ್**" (೪. ೧. ೩೩.) ಯಾರುತಾನೇ ಕೃಷ್ಣನು ಪೂಜೆಗೆ ಅರ್ಹನಲ್ಲವೆಂದು ಹೇಳುವರು? ಯಾರು ತಾನೇ ಆತನನ್ನು ಪೂಜಿಸದೇ ಇರುವರು? ಎಂದು ಹೇಳಿ, ಕೃಷ್ಣನೇ ಪೂಜೆಗೆ ಅರ್ಹನೇ ವಿನಾ ಇತರರಲ್ಲವೆಂದು ಸ್ಥಾಪಿಸಿರುತ್ತಾರೆ; ಅದೇನು ಹಾಗೆ ಎಂದರೆ ಹೇಳುತ್ತಾರೆ:—"**ಅಭೂತ ಸಂಪ್ಲವೇಪ್ರಾಪ್ತೇ ಪ್ರಲೀನೇ ಪ್ರಕೃತೌ ಮಹಾನ್ । ಏಕಸ್ತಿಷ್ಠತಿ ಸರ್ವಾತ್ಮಾ ಸತು ನಾರಾಯಣ ಪ್ರಭುಃ**" ॥ (ಸಭಾ. ೪೦. ೪೨. ೨೫.) "ಪ್ರಳಯದಲ್ಲಿ ಎಲ್ಲಾ ಭೂತಗಳೂ ಸೂಕ್ಷ್ಮದೆಶೆಯಲ್ಲಿ ಲೀನವಾದಾಗ ಒಬ್ಬನಲ್ಲವೇ ಆ ಸೂಕ್ಷ್ಮದೆಶೆಯಲ್ಲಿರುವ ಎಲ್ಲಕ್ಕೂ ಆತ್ಮಾವಾಗಿ ನಿಂತಿರುವ ಪ್ರಭುವಾದ ನಾರಾಯಣನು, ಅಂತವನೇ ಅವತಾರಿಯಾಗಿ ಶ್ರೀಕೃಷ್ಣನಾಗಿರುವಾಗ ಆತನಿಗಲ್ಲದೆ ಇನ್ನು ಯಾರಿಗೆ ಪೂಜೆಯು ಅರ್ಹವೆಂಬ ತಾತ್ಪರ್ಯವು." **ಎನ್ರುವನ್** - ಎಂಬುದಾಗಿಯೂ, ಮತ್ತು (೫) **ಈನ್ರೋಳಿರುಕ್ಕ**-ಶುಶ್ರೂಷೆ ಮಾಡಲು ಯೋಗ್ಯಳಾಗಿ "**ಮಾತೃದೇವೋ ಭವ**" ಎಂದು ಶ್ರುತಿಯು ಹೇಳುವ ಹಾಗೆ ದೇವತಾ ಸದೃಶಳಾದ ಹೆತ್ತತಾಯಿಯಿರುವಾಗಲೇ, **ಮಣ್ಣೈ ನೀರಾಟ್ಟಿ** - ಮರದಿಂದ ಮಾಡಿದುದಕ್ಕೆ ಅಭಿಷೇಕ ಮಾಡಿಸಿ, **ಎನ್ರುವನ್** - ಎಂಬದಾಗಿಯೂ ; ಪೂರಾ ಪಾಶುರವು ಯಾವುದೆಂದರೆ :—

ಓ ಓ ಉಲಗಿನತಾಯಲ್‌ವೇ, ಈನ್ರೋಳಿರುಕ್ಕಮಣ್ಣೈ ನೀರಾಟ್ಟಿ, ಪಡೈತ್ತಿ ಡನ್ದುಂಡು ಮಿಳ್ನ್ ತಾಳನ್‌ದು ತೇರ್‌ನ್ದು ಉಲಗಳಿಕ್ಕುಮ್ ಮುದರ್ ಪೆರುಮ್ ಕಡವುಳ್ ನಿರ್ಪ, ಪುಡೈಪ್ಪಲ್ಲದಾನರಿ ದೆಯ್‌ವಮ್ ಪೇಣುದಲ್, ತನದು ಪುಲ್ಲರಿವಾಣ್ಮೈ ಪೊರುನ್ದಕ್ಕಾಟ್ಟಿ ಕ್ಕೊಲ್ವನ ಮ್ಮದಲಾ ವಲ್ಲನ ಮುಯಲುಮ್ ಇನ್ನೈಯ ಶೆಯ್‌ಗೈಯಿನ್ ಪುದನ್ ಪಳಿತ್ತೊನ್ಮಾ ಮಾಯ ಪ್ಪಿರುವಿಯುಳ್ ನೀಜ್ಞಾಪ್ಪನ್ ಮಾಮಾಯತ್ತ ಮುನ್ದು ಮಾನಳಿರ್‌ನ್ದೇ ॥

ಅರ್ಥವು :—**ಉಲಗು** - ಲೋಕವನ್ನು, **ಹಡೈತ್ತು** - ಆದಿಯಲ್ಲಿ ಸೃಷ್ಟಿಸಿ, **ಇಡನ್ದು** - ವರಾಹಾವತಾರದಲ್ಲಿ ಅಂಡಭಿತ್ತಿಯಿಂದ ಕೋರೆದಾಡೆಯಿಂದ ಎತ್ತಿ, **ಉಣ್ಡು**-ಪ್ರಳಯಕಾಲದಲ್ಲಿ ಎಲ್ಲವನ್ನೂ ನುಂಗಿ ಎಂದರೆ ಸೂಕ್ಷ್ಮದೆಶೆಯಲ್ಲಿ ತನ್ನಲ್ಲಿ

(೫) ತಿರು. ೨. ೨, ೪.

(೬)"ಮತ್ತಿಜ್ಞೋರ್ ಪುದುದ್ದೆಯ್ವಮ್ ಕೊಣ್ಡಾಡುನ್ನೋಣ್ಡೀರ್ ಪೆತ್ತ

ಏಕೀಭವಿಸಿಕೊಂಡು, ಪುಮಿಳ್ನ್ದು-ಪುನಃ ಅವಾಂತರ ಸೃಷ್ಟಿದೆಶೆಯಲ್ಲಿ ಹೊರಗೆ ಹಾಕಿ, ಅಳನ್ದು - ತ್ರಿವಿಕ್ರಮಾವತಾರದಲ್ಲಿ ಲೋಕವನ್ನೆಲ್ಲಾ ಅಳೆದು ಆಕ್ರಮಿಸಿ, ತೇರ್ನ್ದು-ಅನಂತರ ರಕ್ಷಣೋಪಾಯವನ್ನು ಚಿಂತಿಸಿ, ಅಳಿಕ್ಕುಮ್ - ರಕ್ಷಿಸುವ, ಮುದಲ್ - ಆದಿಕಾರಣನಾಗಿ, ಪೆರುಂ ಕಡವುಳ್-ಪರದೇವತೆಯಾದ ಶ್ರೀಮನ್ನಾರಾಯಣನು, ನಿರ್ಪ - ಸರ್ವ ಶರಣ್ಯನಾಗಿರುವಾಗ, ಅವನೈ ವಿಟ್ಟು- ಅಂತಹ ಕರುಣಾಸಾಗರನಾಗಿ ಸರ್ವಶಕ್ತನಾಗಿರುವವನನ್ನು ಬಿಟ್ಟು, ಪುಡೈ-ವಿಭೂತಿ ಪ್ರಕರಣಗಳಲ್ಲಿ ಹೇಳಲ್ಪಟ್ಟವನಾಗಿ, ಪಲ-ಕೆಲವು ಪ್ರಕಾರವುಳ್ಳವನಾಗಿ, ತಾನ್- ಸರ್ವೇಶ್ವರನನ್ನೇ ಆಶ್ರಯಿಸಬೇಕಾಗಿರುವ ತಾನೆ, ಅರಿ-ತಿಳಿದ, ದೆಯ್ವಮ್- ದೇವತೆಗಳನ್ನು, ಪೇಣುದಲ್ - ಆದರಿಸೋಣವು, ತನದು - ತನ್ನ, ಪುಲ್ - ಕ್ಷುದ್ರವಾದ, ಅರಿವು - ಬುದ್ಧಿಯು, ಎಂದರೆ ಅಜ್ಞಾನವು ಎಂಬರ್ಥವು, ಆಣ್ಮೈ ಪೊರನ್ದು ಕಾಟ್ಟ - ದೊಡ್ಡವರ ಮನಸ್ಸಿಗೆ ತಾಕುವಹಾಗೆ ಪ್ರಕಾಶಿಸಿ, ಈ ನ್ರೋಳ್ - ಹೆತ್ತ ಜನನಿಯು, ಇರುಕ್ಕ - ಬದುಕಿರುವಾಗಲೇ, ಅವಳನ್ನು ಅನಾದರಿಸಿ, ಮಣ್ಣೈ ನೀರಾಟ್ಟಿ - ಒಂದು ಮರದಿಂದ ಮಾಡಿದ ಬೊಂಬೆಗೆ ಅಭಿಷೇಕಾದಿ ಉಪಚಾರಗಳನ್ನು ಮಾಡಿ, ಶೆಯ್ಗೈ - ಶುಶ್ರೂಷಾದಿ ಆರಾಧನರೂಪವ ಅನುಷ್ಠಾನವು, ಕೊಲ್ಲನ ಮುದಲಾ - ಹಿಂಸೆಯೇ ಮೊದಲಾದ, ಅಲ್ಲನ - ನಿಷಿದ್ಧಗಳಾದ, ಮುಯಲುಮ್ ಇನ್ನೈಯಾ - ಇಂತಹ ಪ್ರಯತ್ನಕ್ಕೆ ಸಮಾನವಾದುದು, ಅಳಿ - ಆ ದೇವತೆಗಳು ಕೊಡುವ ಫಲವಾದರೋ, ತುನ್ಬಿನ್ಪ - ದುಃಖಮಿಶ್ರವಾದ ಸುಖವು; ಆದುದರಿಂದ, ಅಂತಹ ಕ್ಷುದ್ರ ದೇವತೆಗಳ ಆಶ್ರಯಣವು, ತೊಲ್ - ಅನಾದಿಯಾಗಿ ಬಂದ, ಮಾ - ಮಹತ್ತಾಗಿ ದುರ್ನಿವಾರವಾದ, ಮಾಯಮ್ - ಆಶ್ಚರ್ಯಕರವಾದ, ಪಿರಿವಿಯುಳ್-ಸಂಸಾರ ದೆಶೆಯಿಂದ, ನೀಙ್ಗಾ- ಬಿಡುಗಡೆಯಿಲ್ಲದೆ, ಪಲ್ - ಅನೇಕ ವಿಧವಾದ, ಮಾ - ದುರ್ನಿವಾರವಾಗಿ ಮಹತ್ತಾದ, ಮಾಯತ್ತು - ಮೋಹಜನಕಗಳಾದ ಶಬ್ದಾದಿ ವಿಷಯಗಳಲ್ಲಿ, ನಳಿರ್ನ್ದು - ದುಃಖಿಸಿಕೊಂಡು, ಅಳುನ್ದುಮಾ-ಕೆಟ್ಟುಹೋಗಲು ಕಾರಣವಾಗುತ್ತದೆ, ಉಲಗಿನದು - ಲೋಕದ, ಇಯಲ್ಬು - ಸ್ವಭಾವವು, ಓಓ - ಅಹೋ ಎಷ್ಟು ಆಶ್ಚರ್ಯಕರವಾದುದು, ಹೀಗೆ ಸರ್ವ ಶೇಷಿಯಾಗಿ ಪರಮೋದಾರನಾಗಿ ಆಶ್ರಿತ ಸಂರಕ್ಷಣೆಯಲ್ಲಿ ಬದ್ಧಾದರನಾಗಿರುವ ಸರ್ವೇಶ್ವರನನ್ನು ಸರ್ವಕಾಲದಲ್ಲೂ ಆರಾಧನೆ

(೬) ಪೆರಿ. ತಿರು. ೧೧. ೬. ೬.

ತ್ತಾಯಿರುಕ್ಕ ಮಣ್ಣೆ ವೆಸ್ಸೀರಾಟ್ಟುತಿರೋ ಮಾಟ್ಟಾದ ತಗವತ್ತಿರೇ" ಎನ್ರು ವರ್, ಇತ್ಯಾದಿಗಳಾಲೇ ಅರುಳಿಚ್ಚೆಯ್ದಾರ್ಗಳ್. ಸಪ್ತರ್ಷಿ ಸಂವಾದತ್ತ

ಮೊದಲಾದವನ್ನು ಚಿತ್ತತ್ವಮಾಡುವದನ್ನು ಬಿಟ್ಟು, ಅವಗಾಢವಾಗಿ ಅತೀಂದ್ರಿಯ ಚರಿತ್ರದ ಅನ್ಯದೇವತಾರಾಧನೆಯಲ್ಲಿ ಪ್ರವರ್ತಿಸಿ, ಈ ಸಂಸಾರ ಜೀವನದಲ್ಲಿ ದುಃಖಾನುಭವದಲ್ಲೇ ಸಿಲುಕಿದವರಾಗಿ ಅನ್ಯಾಯವಾಗಿ ಹಾಳುಮಾಡಿಕೊಳ್ಳುತ್ತಾರೆಯೋ, ಈ ಲೋಕದ ಸ್ವಭಾವವೇ ಹೀಗೆಯೇ, ಎಂದಾಗಿ ಹೇಳುತ್ತಾರೆ. "ಪುತ್ತಿ ಅತಿನ್ನಾರ್" ಇತ್ಯಾದಿ (ಪೆ. ೧೧. ೬. ೬) ಪೇಯಿರುಕ್ಕು ನೆಡುವೆಳ್ಳಮ್ ಪೆರುವಿಶುಂಬಿಸ್ ಪಿರಾಕೊಡಿ ಪ್ಪೆರುಗು ಕಾಲಮ್ । ತಾಯಿರುಕ್ಕುವರ್ ಪಣ್ಣುಮೇಯುಮ್ ಕ್ರತ್ತ ಮಿಯಾಪ್ಪರತ್ತ ಯಿಯಲ್ಲುಕೊಳ್ಳಂದ । ಪ್ರೋಯಿರುಕ್ಕ ಮುರಂಜಿನ್ನಾರ್ ಪುದುಮೈಯಾವದ್ ಕೊಂಡಾಡುಂ ಕಾಣಿಕ್ಕಿರ್ । ಪೆರ್ತಾಯಿರುಕ್ಕ ಮಣ್ಣೆ ವೆಸ್ಸೀರಾಟ್ಟುದಿರೋ ಮಾಟ್ಟಾದ ತಗವುಡೈಯೀರ್!" ಇದರರ್ಥವು ಪೇಯಿರುಕ್ಕುವರ್ ಎನ್ರು ಇತ್ಯಾದಿಗಳಾಲೇ - ಎಂಬಿವೇ ಮೊದಲಾದ ಪಾಶುರಗಳ ಮೂಲಕ, ಅರುಳಿಚ್ಚೆಯ್ದಾರ್ಗಳ್ - ಆಳ್ವಾರುಗಳು ಹೇಳುರುತ್ತಾರೆ. ಮುಂದೆ ಆಳ್ವಾರುಗಳ ದಿವ್ಯ ಸೂಕ್ತಿ ಪ್ರಮಾಣಗಳು ಮಾತ್ರವೇ ಅಲ್ಲದೆ ಅನ್ಯದೇವತಾ ಭಜನವನ್ನು ಮಹರ್ಷಿಯೂ ನಿಂದಿಸುತ್ತಾರೆಂದು ಭಾರತ ಅನುಶಾಸನ ಪರ್ವದಲ್ಲಿ ಸಪ್ತರ್ಷಿಗಳ ಸಂವಾದದಲ್ಲಿ ಇದ್ದ ಮಹರ್ಷಿಯು ಕಥೆಯನ್ನು ಉದಾಹರಿಸುತ್ತಾರೆ. ಪ್ರಕರಣವೇನೆಂದರೆ, ಸಪ್ತರ್ಷಿಗಳಾದ ಅತ್ರಿ, ಅರುಂಧತೀ ಸಹಿತರಾದ ವಸಿಷ್ಠರು, ಕಶ್ಯಪ, ಭರದ್ವಾಜ, ಗೌತಮ, ವಿಶ್ವಾಮಿತ್ರ, ಜಮದಗ್ನಿ, ಮೊದಲಾದವರು ಪರಸ್ಪರ ಬಹು ಸ್ನೇಹದಿಂದ ಒಟ್ಟಾಗಿ ಸಂಚರಿಸುತ್ತಿರುವಾಗ ಬಹುಕಾಲ ಬರಗಾಲವಾಗಿ ಜನಸ್ತೋಮವು ಹಸಿವಿನಿಂದ ಬಾಧ್ಯ ಪೀಡಿತರಾದರು. ಇಂದ್ರನು, ಹಾಗೆ, ಅವರೆಲ್ಲರಿಗೆ ಎಲ್ಲೂ ಆಹಾರವನ್ನು ಹುಡುಕುವವರಾಗಿ ಒಂದು ಪದ್ಮಸರಸ್ಸನ್ನು ಸೇರಿದರು. ಅಲ್ಲಿ ಅಭ್ಯಂತರದಲ್ಲಿ ರಾದ ಒಬ್ಬ ರಾಕ್ಷಸಿಯು ಇದ್ದಳು. ಇವರುಗಳು ಆಕೆಯನ್ನು ಒಂದೊಂದು ಕಮಲಗಳನ್ನು ಕೇಳಲು, ಆಕೆ ಪ್ರತಿಯಾಗಿ, ಆ ರಾಕ್ಷಸಿಯು ನನ್ನ ಹೆಸರಿಗೆ ಹೇಳಿ, ಹಾಗೆ ಹೇಳಿದವರಿಗೆ ಕೊಡುವೆನು ಎಂದಳು. ಎಲ್ಲರೂ ಕಷ್ಟವಾಗಿ ತಮ್ಮ ಹೆಸರನ್ನು ಅರ್ಥದೊಡನೆ ಹೇಳಿದರು. ಶುನಸ್ಸಖನು ತನ್ನ ಹೆಸರನ್ನು ಹೇಳುವಾಗ, ಆ ರಾಕ್ಷಸಿಗೆ ಗಮನಕ್ಕೆ ಬರಲಿಲ್ಲ. ಇಂದ್ರನು ಕುಪಿತನಾಗಿ, ತನ್ನ ತ್ರಿದಂಡದಿಂದ ಹೊಡೆದನು, ಆಕೆಯು ಭೂಮಿಯಲ್ಲಿ ಬಿದ್ದು ಭಸ್ಮವಾದಳು. ಅನಂತರ ಮಹರ್ಷಿಗಳು ಆ ಸರೋವರದಲ್ಲಿ ಮಿಂದು

ಲುಮ್, (೭) "ವಿಷ್ಣುಂ ಬ್ರಹ್ಮಣ್ಯದೇವೇಶಂ ಸರ್ವದೇವ (ಲೋಕ) ನಮಸ್ಕೃತಮ್ । ತ್ರೈಲೋಕ್ಯ ಸ್ಥಿತಿ ಸಂಹಾರ ಸೃಷ್ಟಿಹೇತುಂ ನಿರೀಶ್ವರಮ್ । ಅಧಾತಾರಂ ವಿಧಾತಾರಂ ಸಂಧಾತಾರಂ ಜಗದ್ಗುರುಮ್ । ವಿಹಾಯ ಸ ಭಜತ್ಯನ್ಯಂ ಬಿಸಸ್ತೈನ್ಯಂ ಕರೋತಿ ಯಃ । ವಿಷ್ಣುಧರ್ಮಪರೋ ನ ಸ್ಯಾತ್ ವಿಷ್ಣುಧರ್ಮ ಗರೀಯಸಃ । ಸ್ವಧರ್ಮ ವೃತ (ವೃತ್ತ) ಶೀಲ ಸ್ಯಾತ್ ಬಿಸಸ್ತೈನ್ಯಂ ಕರೋತಿ ಯಃ" ॥ ಎನ್ನುವದಾಗಿ ಹೇಳಲ್ಪಟ್ಟಿದೆ.

ಋಷಿಗಳನ್ನು ... ಪ್ರಾಣಾಂತರವಾಗಿ ಬಂದು ನೋಡಲು ತಾವರೆಗೆಡ್ಡೆಗಳೊಂದೂ ಇರಲಿಲ್ಲ. ಆಗ ಆ ಮಹರ್ಷಿಗಳೆಲ್ಲಾ ಶಪಥಮಾಡುತ್ತಾರೇನೆಂದರೆ ಯಾವನು ಈ ತಾವರೆಗೆಡ್ಡೆಗಳ ಚೌರ್ಯವನ್ನು ಮಾಡಿರುತ್ತಾನೋ ಅವನು ಇಂತಹ ಅನರ್ಥಗಳನ್ನು ಅನುಭವಿಸಲಿ, ನಾವು ಎಂದಿಗೂ ಈ ಚೋರಕೃತ್ಯವನ್ನು ಮಾಡಲಿಲ್ಲವೆಂಬುದಾಗಿ ಹೇಳುವ ಪ್ರಕರಣದಲ್ಲಿ ಮಹರ್ಷಿ ಕಶ್ಯಪರು ಮಾಡುವ ಶಪಥವು ಇದು. ಆಗ ಇಂದ್ರನು ಆ ಮಹರ್ಷಿಗಳನ್ನು ಕುರಿತು ಈ ರಾಕ್ಷಸಿಯು ನಿಮಗೆ ತೊಂದರೆ ಮಾಡುವಳೆಂಬ ಭಯದಿಂದ ನಿಮ್ಮೊಂದಿಗೆ ಶುನಸ್ಸಖನಾಗಿ ಬಂದು ಆಕೆಯನ್ನು ಕೊಂದು ನಿಮ್ಮನ್ನು ರಕ್ಷಿಸಿರುವೆನು. ನಿಮ್ಮ ರಕ್ಷಣಾರ್ಥವಾಗಿ ನಿಮ್ಮೊಂದಿಗೆ ಇದ್ದೆನು. ಬಿಸಸ್ತೈನ್ಯವನ್ನು ನಿಮ್ಮ ಪರೀಕ್ಷಾರ್ಥವಾಗಿ ಮಾಡಿದವನು ನಾನೇ, ನೀವು ಯಾರೂ ಅಲ್ಲವು. ಇದರಿಂದ ನೀವು ತಿಳಿಯತಕ್ಕದ್ದೇನೆಂದರೆ ಎಂತಹ ಕಷ್ಟಕಾಲದ ಆಪತ್ಕಾಲಗಳಲ್ಲಿ ಲೋಭವನ್ನು ಬಿಡತಕ್ಕದು ಎಂದು ಹೇಳಿ ಹೊರಟುಹೋದನು. "ಯಃ - ಯಾವನು, ಬಿಸಸ್ತೈನ್ಯಂ ಕರೋತಿ - ತಾವರೆಗೆಡ್ಡೆಯ ಕಳುವನ್ನು ಮಾಡಿರುತ್ತಾನೋ. ಸಃ - ಅವನು, "ಬ್ರಹ್ಮಣ್ಯದೇವೇಶಂ - ಬ್ರಾಹ್ಮಣ ದೇವತೆಗಳು, ಇವುಗಳಿಗೆಲ್ಲಾ ಸ್ವಾಮಿಯಾದ, ಸರ್ವದೇವನಮಸ್ಕೃತಮ್ - ಬ್ರಹ್ಮರುದ್ರೇಂದ್ರಾದಿ ಸಕಲದೇವತೆಗಳಿಂದಲೂ ನಮಸ್ಕೃತನಾದ ತ್ರೈಲೋಕ್ಯಸ್ಥಿತಿಸಂಹಾರಸೃಷ್ಟಿಹೇತುಮ್ - ಮೇಲಿನ ಏಳುಲೋಕ, ಮಧ್ಯದ ಭೂಲೋಕ, ಕೆಳಗಿನ ಏಳುಲೋಕ ಇವುಗಳು ತ್ರಿಲೋಕಗಳು; ಇವುಗಳ ಸೃಷ್ಟಿ ಸ್ಥಿತಿ ಪ್ರಳಯಗಳಿಗೆ ಕಾರಣಭೂತನಾದ, ನಿರೀಶ್ವರಂ - ತನಗೆ ಯಾರೂ ನಿಯಾಮಕರಿಲ್ಲದೆ ಸ್ವಾತಂತ್ರ್ಯವುಳ್ಳವನಾದ, ಅಧಾತಾರಂ - ಅನಂತನೆಂಬ ಧಾರಕಂ, ಎಲ್ಲದಕ್ಕೂ ಆಧಾರಭೂತನಾಗಿರುವ, ಸ್ಥಿತಿ ನಿಯಾಮಕನಾದ, ವಿಧಾತಾರಂ - ಸೃಷ್ಟಿಕರ್ತನಾದ, ಸಂಧಾತಾರಂ - ಸಂ - ವಿಶೇಷವಾಗಿ ... ಎಲ್ಲರ ... ಮಾಡುವವನಾದ, ಜಗ

(೭) ಭಾರ. ಅನು. ೧೪೩- ೫೯-೬೧.

೪. ಅನ್ಯಕೀರ್ತನ ಮಾಗಾದೆನ್ನು ಮಿಡತ್ತ್ರೈ (೧) "ವಾಯುವನ್ನೈ ಯಲ್ಲದು ವಾಳ್‌ತ್ತಾದು"

ದ್ಗುರುಂ - ಲೋಕಕ್ಕೆಲ್ಲಾ ಆದಿ ಗುರುವಾದ, ವಿಷ್ಣುಂ-ಶ್ರೀ ಮಹಾವಿಷ್ಣುವನ್ನು, ವಿಹಾಯ - ಬಿಟ್ಟು, ಅನ್ಯಂ - ತುಚ್ಛವಾದ ಅನ್ಯದೇವತೆಯನ್ನು, ಭಜತು- ಭಜಿಸಲಿ ; ತಾವರೇದಂಟನ್ನು ಕಳವು ಮಾಡಿದವನಿಗೆ ಸರ್ವೇಶ್ವರನನ್ನು ತ್ಯಜಿಸಿ ಅನ್ಯದೇವತಾ ಭಜನಮಾಡಿದ ಮಹಾದೋಷಪ್ರಾಪ್ತಿಯುಂಟಾಗಲಿ ಎಂಬ ಭಾವವು. ಇವರಿಂದ ಅನ್ಯದೇವತಾ ಭಜನವು ತುಂಬಾ ದೋಷಾವಹವಾದುದೆಂದೂ ಮಾತಾ ಪಿತೃ ಗುರುವಧೆಗಳಿಗೆ ಸಮಾನವಾದ ಮಹಾ ಪಾತಕವೆಂದೂ ಹೇಳಿದಂತಾಯಿತು, ಯಃ - ಯಾವನು, ಬಿಸಸ್ತೈನ್ಯಂಕರೋತಿ - ಕಮಲಗಳ ಕಳವನ್ನು ಮಾಡಿರು, ತ್ತಾನೋ, ಸಃ - ಅವನು, ವಿಷ್ಣುಧರ್ಮ ಪರನು, ನ ಸ್ಯಾತ್ - ಆಗಬೇಡ ಇಷ್ಟೇ ಅಲ್ಲವು, ವಿಷ್ಣು ಧರ್ಮಕ್ಕೆ ಪರಾಙ್ಮುಖನೂ ಆಗಲಿ, ಕುಧರ್ಮ (ವೃತ್ತ) ವೃತಶೀಲಸ್ಯಾತ್-ಕೆಟ್ಟಮಾರ್ಗಗಳಲ್ಲಿ ಆತನಿಗೆ ಪ್ರವೃತ್ತಿಯುಂಟಾಗಲಿ; ಎಂದರೆ ತಾನು ಕಳ್ಳತನ ಮಾಡಿದ್ದರೆ ತನಗೆ ಈ ಮಹಾದೋಷಗಳೆಲ್ಲಾ ಪ್ರಾಪ್ತವಾಗಲಿ ಎಂಬ ಭಾವವು."

೪ ಅನ್ಯಕೀರ್ತನ ಮಾಗಾದೆನ್ನುಮಿಡಮ್ - ಸರ್ವೇಶ್ವರನಲ್ಲದ ಇತರರ ಸಂಕೀರ್ತನವು ಪ್ರಪನ್ನನಿಗೆ ಕೂಡದೆಂಬ ಸಂದರ್ಭದಲ್ಲಿ, "ವಾಯುವನ್ನೈ ಯಲ್ಲದು ವಾಳ್‌ತ್ತಾದು" ವಾಗಿಂದ್ರಿಯವು ಆ ಸರ್ವೇಶ್ವರನನ್ನಲ್ಲದೆ ಇನ್ನು ಯಾರನ್ನೂ ಸ್ತೋತ್ರಮಾಡಲಾರದು ಎಂದರೆ ಸರ್ವ ವಿಧದಲ್ಲೂ ಮಹೋಪಕಾರಕನಾದ ಸರ್ವೇಶ್ವರನನ್ನು ಬಿಟ್ಟು ಅನ್ಯರನ್ನು ಸ್ತೋತ್ರಮಾಡುವದು ನಿಂದಿತವು ಎಂಬ ಭಾವವು. ಸರ್ವೇಶ್ವರನು ಕೃಪಯಾ ದಯಪಾಲಿಸಿದ ಕರಣ ಕಳೇಬರಗಳಿಗೆ ಸಾರ್ಥಕ್ಯವು. ಅನನ್ಯಾರ್ಹತೆಯಿಂದ ಆತನಿಗೇ ಪ್ರಯೋಜನವಾಗಿರುವದೇ ಎಂದು ಹೇಳುತ್ತಾರೆ. "ವಾಯುವನ್ನೈ ಯಲ್ಲದು ವಾಳ್‌ತ್ತಾದು, ಕೈಯುಲಗನ್ ತಾಯುವನ್ನೈ ಯಲ್ಲದು ತಾನ್ತೊಳಾ ; - ಪೇಯ್‌ಮುಲೈ ಎಞ್ಜಾಗಾಗವುಣ್ಣಾನುರುವೋಡು ಪೇರಲ್ಲಾಲ್ ಕಾಣಾಕಣ್, ಕೇಳಾಶೆವಿ ||೧೧||

ವಾಯುವನ್ನೈ ಯಲ್ಲದುವಾಳ್‌ತ್ತಾದು - ವಾಕ್ಕು ಆತನನ್ನಲ್ಲದೆ ಇತರ ದೇವತೆಗಳನ್ನು ಸ್ತೋತ್ರಮನ್ನು ಮಾಡದು ; ಕೈಯು ಉಲಕಂ ತಾಯುವನ್ನೈಯಲ್ಲದು- ತ್ರಿವಿಕ್ರಮನಾಗಿ ಅಳೆದವನಲ್ಲದೆ ಯಾರನ್ನೂ, ತಾನ್ತೊಳಾ - ನಮಸ್ಕರಿಸಲಾ

---

(೧) ಮುದಲ್ ತಿರುವಂದಾದಿ. ೧೧.

ದಿರದು ಎಂದರೆ ಆತನನ್ನು ನಮಸ್ಕರಿಸದೆ ನಿಲ್ಲಲಾರದು, **ಪೇಯ್** ಇತ್ಯಾದಿ - ರಾಕ್ಷಸಿಯಾದ **ಪೂತನೆಯ** ಸ್ತನದ ವಿಷವನ್ನುಂಡವನ ಪರಮ ಲಾವಣ್ಯಯುಕ್ತ ದಿವ್ಯ ಮಙ್ಗಳ ವಿಗ್ರಹವನ್ನಲ್ಲದೆ ಬೇರೆ ಯಾವುದನ್ನೂ ನೋಡದು ಎಂದರೆ ಆತನ ದೇಹ ಲಾವಣ್ಯವು ಕಣ್ಣನ್ನು ಆಕರ್ಷಿಸುತ್ತದೆ ಎಂಬ ಭಾವವು; ಹಾಗೆಯೇ ಶೆವಿ-ಕಿವಿಯೂ, ಆತನ **ಪೇರಲ್ಲಾಲ್**-ದಿವ್ಯ ನಾಮಗಳನ್ನಲ್ಲದೆ, ಬೇರೆ ಯಾವುದನ್ನೂ, **ಕೇಳಾ** - ಕೇಳದು, **ಅಲ್ಲಾಲ್**-ಎನ್ನುವದರಿಂದ ಐಹಿಕ ಕಾಮುಗಳಾದ ಸುಂದರ ಸ್ತ್ರೀಯನ್ನು ನೋಡೋಣ ಆಕೆಯ ಸಂಗೀತವನ್ನು ಕೇಳೋಣ ಇಂತಾಪೇಕ್ಷರಲ್ಲಿ ಮನಸ್ಸಿಲ್ಲವೆಂಬ ಭಾವವು. ಆತನು **ಹೃಷೀಕೇಶನಾದುದರಿಂದ** ನನ್ನ ಸರ್ವೇಂದ್ರಿಯಗಳನ್ನೂ ಆಕರ್ಷಿಸಿರುತ್ತಾನೆಂಬ ಭಾವವು. ೧೨೪೩-೪೩ನೆಯ ಪುಟಗಳನ್ನು ನೋಡಿ.

(೨) "**ಶೊನ್ನಾಲ್ ವಿರೋಧ ಮಿದಾಗಿಲು ಶೆಯ್ದುಲ್ಲುನರ್ಗ ಕೇಣ್ಮಿನೋ ।**
ವೆನ್ನಾವಿಲೀ ಕವಿಯಾ ನೊರುವರ್ಕ್ಕು ಜೆಪ್ಗೊಡುಕ್ಕಿಲೇನ್ ।
ತೆನ್ನಾತೆನಾವೆನ್ರು ವಣ್ಡು ಮುರಲ್ ತಿರುವೇಙ್ಗಡ ।
ತ್ತೆನ್ನಾನೈಯೆನ್ನಪ್ಪ ನೆನ್ಪುರುಮಾನುಳನಾಗವೇ ॥೧॥

"**ಶೊನ್ನಾಲ್**-ಹಿತವನ್ನು ಹೇಳಿದರೂ, **ವಿರೋಧಮ್** - ಹಿತವೆಂದರಿಯದೆ ಅಹಿತವಾದುದೆಂದು ಭಾವಿಸುವರು; ಆತ್ಮಾದಾಸನು, ವಿಷ್ಣುವು ಸರ್ವೇಶ್ವರನು ಎಂಬ ಪ್ರಹ್ಲಾದೋಕ್ತಿಯು ತಂದೆಯಾದ ಹಿರಣ್ಯಕಶಿಪುವಿಗೆ "**ವಕ್ಷ್ಯಾಮಿ ಸಾರಭೂತಂ ತವಾಜ್ಞಯಾ**"(ವಿ ಪು. ೧.೧೭.೧೪)ಎಂದು ಹೇಳಿರುವಹಾಗೆ,ಸಾರಭೂತವಾದುದೂ ಸಹ, ಅಹಿತವು; ಹಾಗೆಯೇ ಸರ್ವೇಶ್ವರನಾದ ರಾಮನೊಂದಿಗೆ ವೈರವು ಬೇಡ,ಸೀತೆಯನ್ನು ಸಮರ್ಪಿಸಿ ಶರಣಾಗತನಾಗಿ ಸುಖವಾಗಿ ಬಾಳು ಎಂದು ಹೇಳಿದ ತಮ್ಮನ ನುಡಿಯು ರಾವಣನಿಗೆ ಅಹಿತವಾಯಿತು,ಹಾಗೆಯೇ ಸರ್ವೇಶ್ವರನು ತನ್ನನ್ನು ಸ್ತುತಿಸಲೆಂದು ಉದಾರ ಭಾವದಿಂದ ಕೊಟ್ಟ ನಾಲಿಗೆಯಿಂದ ತುಚ್ಛರಾದ ರಾಜರು, ತುಚ್ಛರಾದ ಅನ್ಯದೇವತೆಗಳು ಇಂತಪರನ್ನು ಸ್ತುತಿಸಬೇಡಿರಿ, ಓ ಕವಿಗಳೇ ತಿರುಮಲೆಯಲ್ಲಿರುವ ತಿರುವೇಙ್ಗಡ ಸ್ವಾಮಿಯನ್ನೇ ಸ್ತುತಿಸಿ ಎಂದು ಹೇಳಿದರೆ ಅದು ನಿಮಗೆ ವಿರೋಧವು ಎಂಬ ಭಾವವು; ಆದರೂ **ಶೊಲ್ಲುವೀ ಕೇಣ್ಮಿನೋ** ಆದರೂ ನೀವು ಈಗ ಮಾಡುತ್ತಿರುವದು ನಿಮಗೆ ಸ್ವರೂಪವಲ್ಲವೆಂದು ಭಾವಿಸಿ, ನಿಮಗೆ ಹಿತವಮಾಡಲು ಪ್ರೇರಿತನಾಗಿ ಪ್ರಹ್ಲಾದನು ಅಸುರ ಪುತ್ರರಿಗೆ ಹಿತಹೇಳಿದ ಹಾಗೆ ಹೇಳುವೆನು, ದಯವಿಟ್ಟು ಲಾಲಿಸಿ, ಜ್ಞಾನಿಗಳಾದ ಪ್ರಸನ್ನರ ಮಾತು ಹಾಗಿರಲಿ, **ವಣ್ಡು** - ಕೀಟವಾದ ಭ್ರಮರವೂ ಕೂಡ ಮಧುಪಾನಮಾಡಿ ತೆನ್ನಾತೆನ್ನಾ **ಮುರಲ್** ಎಂದು ಝೇಂಕಾರಮಾಡುತ್ತಿರುವ, ತೆನ್ನಾ ಎಂದರೆ ತೇ

(೨) "ಶೊನ್ನಾಲ್ ವಿರೋಧಮ್" ಇತ್ಯಾದಿಗಳಲ್ಲಿಯೇ ಅರುಳಿಚ್ಚೆಯ್‌ದಾರ್.

ನಾ-ನಮ್ಮಗಳ ನಾಲಿಗೆಯು ಶ್ರೀನಿವಾಸನನ್ನು ಸ್ತುತಿಸಿದುದರಿಂದ, ಜೇನುತುಪ್ಪವು ಎಂದೇನಾದರು ಹೇಳುತ್ತವೆಯೋ ಎಂಬ ಹಾಗೆ ಝೇಂಕರಿಸುವ ಎಂಬ ಭಾವವು. ಅಥವಾ ತಮಗೆ ಅಮೃತ ಸದೃಶ ಮಧುವನ್ನಿತ್ತುದರಿಂದೇನಾದರೂ ಸ್ತೋತ್ರಮಾಡುತ್ತವೋ ಎಂಬುವಹಾಗೆ ಇಂಪಾದ ಶಬ್ದಮಾಡುತ್ತಿರುವ ತಿರುವೇಙ್ಗಡತ್ತು-ತಿರು ಮಲೆಯಲ್ಲಿರುವವನಾಗಿ, ಎನ್ನಾನೆ-ನನ್ನ ಸ್ತುತಿಗೆ ವಿಷಯನಾಗಿ, ಎನ್ನಪ್ಪ - ನನಗೆ ಮಹೋಪಕಾರಕನಾಗಿ ದಾಯಧನರೂಪದಲ್ಲಿ ಪರಮ ನಿಶ್ಶ್ರೇಯಸ್ಸನ್ನು ಕೊಡುವ ಕಂದೆಯಾಗಿ, ಎಂಬೆರುಮಾನ್-ನನಗೆ ಸ್ವಾಮಿಯಾಗಿ ಪರಮ ಪ್ರಾಪ್ಯನಾದ ಶ್ರೀನಿವಾಸನು, ಉಳನಾಕ-ನನ್ನ ಈ ಪಾಶುರಗಳ ರೂಪವಾದ ಗಾನವನ್ನು ಕೇಳುವದಕ್ಕಾಗಿಯೇ ಬಿಜಮಾಡಿಸಿರುವಾಗ, ಭಕ್ತನ ಗಾನವನ್ನು ಕೇಳುವದೇ ತನಗೆ ಸ್ವರೂಪವೆಂದು ಭಾವಿಸಿರುವನೆಂಬುದು ಸೂಚಿತವು, ಹೀಗಿರುವಾಗ, ಎನ್ ನಾವಿಲ್ - ತನ್ನ ನಾಲಿಗೆಯು ಸತ್ತೆಗೆ ಪ್ರಯೋಜನವಾಗಿ, ಇನ್ ಕವಿ - ಈ ಮಧುರವಾಗಿರುವ ಪಾಶುರರೂಪದಲ್ಲಿರುವ ಕವಿತ್ವವನ್ನು, ಕವಿತ್ವವೇನೋ ಹೌದು, ಮಧುರ ಹೇಗೆ ಎಂದರೆ ಯಾವಾಗ ಸರ್ವೇಶ್ವರನ ಸ್ತುತಿಯಲ್ಲಿ ಆ ಕವಿತ್ವವು ಇಡಲ್ಪಟ್ಟಿತೋ ಆಗ ಅದು "ಮಧುರಾದಪಿ ತನ್ಮಧುರಂ" ಎಂಬ ಭಾವವು; ಇಂತಹ ಕವಿತ್ವವನ್ನು, ಯಾನ್ - ಅನನ್ಯಾರ್ಹ ಶೇಷಭೂತನಾದ ನಾನು, ಒರುವರುಕ್ಕುಮ್ - ಇನ್ನು ಯಾರಿಗೂ, ಎಂದರೆ ಇತರ ಕವಿಗಳು ಮಾಡುವಹಾಗೆ ಅನ್ಯದೇವತೆಗಳನ್ನಾಗಲಿ, ಇಹಲೋಕದ ರಾಜರುಗಳನ್ನಾಗಲಿ, ಕೊಡುಕ್ಕಿಲೇನ್ - ಕೊಡುವದಿಲ್ಲವು, ಓ ಶ್ರೀನಿವಾಸನೇ ನಿನಗೇನೇ ನಿರುಪಾಧಿಕ ದಾಸಭೂತನಾದ ನಾನು, ನಿನ್ನನ್ನು ಸ್ತುತಿಸುವದಕ್ಕಾಗಿ ನೀನು ದಯಪಾಲಿಸಿದ ಸತ್ತೆಯಿಂದ ನಾಲಿಗೆಯು ಪವಿತ್ರತೆಯನ್ನು ಹೊಂದಿ ನಿನ್ನನ್ನು ಈ ಪಾಶುರಗಳ ಮೂಲಕ ಆನಂದದಿಂದ ಸ್ತುತಿಸುತ್ತಿರುವಾಗ, ಇಂತಹ ಕವಿತ್ವವನ್ನು ಅನರ್ಹರಾದವರಿಗೆ ಕೊಡಲು ನನಗೆ ಶಕ್ತಿ ಎಲ್ಲಿಯದು ಎಂಬುದು ತಾತ್ಪರ್ಯವು ಅಸೇವ್ಯಸೇವಯುರೂಪದಲ್ಲಿ ಅನರ್ಹರಾಗಿರುವರನ್ನು ಅಲ್ಪಫಲಗಳಿಗಾಗಿ ಸ್ತುತಿಸುವದು ನ್ಯಾಯವಲ್ಲವೆಂದೂ, ನಮ್ಮನ್ನು ಈ ಒಳ್ಳೇಸ್ಥಿತಿಗೆ ಬರುವಹಾಗೆ ಉಪಕರಿಸಿರುವ ಶ್ರೀನಿವಾಸನನ್ನು ಸ್ತುತಿಸುವದು ಯುಕ್ತವೆಂದೂ, ನಿಮಗೆ ಹೇಳಿದರೆ ನಿಮಗೆ ರಚಿಸದು ಮತ್ತು ವಿರೋಧವು. ಭಗವಂತನನ್ನು ಸ್ತುತಿಸುವದೇ ನಾಲಿಗೆಗೆ ಸಾರ್ಥಕ್ಯವೆಂದು ಒಂದು ಕೀಟವಾದ ಭ್ರಮರವೂಕೂಡ ತೆನ್ನಾ ತೆನ್ನಾ,

ತಿರು. ೩ ೯ ೧.

೫. ಅನ್ಯ ಚಿನ್ತನ ಮಾಗಾದೆನ್ನು ಮಿಡತ್ತೈ (೧) "ಶಿನ್ದೈ ಮತ್ತೊನ್ರಿನ್ನಿ ತಿರತ್ತಲ್ಲಾತ್ತನ್ನೈ ದೇವಪಿರಾನ್ ನರಿಯುಮ್" ಎನ್ರುಮ್,

ಎಂದು ಶೇಂಕರಿಸುವದನ್ನು ನೋಡಿದರೆ ಭಗವಂತನ ಸ್ತೋತ್ರದಿಂದ ನಾನಾಲಿಗೆಯು, ತೇನ್ - ಮಧುವಿನೋಪಾದಿಯಲ್ಲಿ ಮಧುರವಾದುದು ಎಂದು ಕೂಗುತ್ತಿರುವಾಗ, ಸ್ವಾಮಿಯು ನನಗೆ ಸರ್ವೋಪಕಾರಕನಾಗಿ, ಇಂಪಾದ ಈ ಆತನ ಸ್ತೋತ್ರದಿಂದ ಸತ್ತೆಯನ್ನು ದಾಸನು ಹೊಂದಿರುವಾಗ, ಆತನನ್ನು ಸ್ತುತಿಸುವದನ್ನು ಬಿಟ್ಟು, ದರಿದ್ರವಾದ ಕಾಸಿಗಾಗಿ ಅನರ್ಹರಾದ ರಾಜರೇನು, ಇತರ ಧನಿಕರೇನು, ಇಂತವರನ್ನು ಸ್ತುತಿಸುವೆನೇ ಎಂಬ ತಾತ್ಪರ್ಯವು" ಇತ್ಯಾದಿಗಳಿಲ್ - ಇವೇ ಮೊದಲಾದ ಪಾಶುರಗಳಲ್ಲಿ, ಅರುಳಿ ಚ್ಚೆಯ್‌ದಾರ್ - ಕೃಪೆಯಾ ಅಪ್ಪಣೆಕೊಡಿಸಿರುತ್ತಾರೆ, ಯಾರು ಎಂದರೆ ಪೂದತ್ತಾಳ್ವಾರ್ ಮುದಲ್ ತಿರುವಂದಾದಿಯಲ್ಲೂ, ನಮ್ಮಾಳ್ವಾರ್ರವರು ತಿರುವಾಯ್ ಮೊಳಿಯಲ್ಲೂ ಎಂಬ ಭಾವವು.

ಅನ್ಯಚಿನ್ತನಮಾಗಾದೆನ್ನು ಮಿಡತ್ತೈ-ಶ್ರೀ ಮಹಾವಿಷ್ಣುವಲ್ಲದೆ ಇತರ ದೇವತಾಚಿನ್ತನವು ಸರಿಯಲ್ಲವೆಂಬುವ ಸಂದರ್ಭದಲ್ಲಿ "ಶಿನ್ದೈ ಮತ್ತೊನ್ರಿ" ಎನ್ರು - ಎಂಬುವ ಪಾಶುರದಲ್ಲಿ ಉಪದೇಶಿಸಿರುತ್ತಾರೆ.

(೧) ಈ ಪೂರಾಪಾಶುರವು ಯಾವುದೆಂದರೆ:—

ಶಿನ್ದೈಮತ್ತೊನ್ರಿನ್ರಿ ತಿರತ್ತಲ್ಲಾತ್ತನ್ನೈ ದೇವಪಿರಾನ್ ನರಿಯುಮ್।
ಶಿನ್ದೈಯಿನಾಲ್ ಶೆಯ್‌ವದಾನರಿಯಾದನ ಮಾಯಙ್ಗಳೊನ್ರುಮಿಲ್ಲೈ।
ಶಿನ್ದೈಯಿನಾಲ್ ಶೊಲ್ಲಿನಾಲ್ ಶೆಯ್‌ಕೈಯಾನಿಲತ್ತೇವರ್ ಕುಳುವಣಙ್ಗುಮ್।
ಶಿನ್ದೈಮಗಿಳ್ ತಿರುವಾರನ್ ಮಾರ್ಬತ್ತು ಉರೈ ತೀರ್ತ್ತನುಕ್ಕಱ್ಱಪಿನ್ನೇ॥

ಇದರರ್ಥವು:—**ಶಿನ್ದೈಯಿನಾಲ್** - ಮನಸ್ಸಿನಿಂದ, **ಶೊಲ್ಲಿನಾಲ್** - ವಾಕ್ಕಿನಿಂದ, **ಶೆಯ್ ಕೈಯಾಲ್** - ಕರ್ಮಗಳಿಂದ ಎಂದರೆ ಮನೋವಾಕ್ಕಾಯದ ಮೂಲಕವಾಗಿ, ಮಹಾ ಭಾಗವತೋತ್ತಮರ, **ಕುಳು** - ಸಂಘವು, **ವಣಙ್ಗುಂ** - ಬಂದು ನಮಸ್ಕರಿಸುವ, **ಶಿನ್ದೈ** - ಅವರುಗಳ ಮನಸ್ಸನ್ನು, **ಮಗಿಳ್** - ಸಂತೋಷಪಡಿಸುವ, **ತಿರುವಾರ್ಮಾರ್ಬು** - ತಿರುವಾರ್ಮಾರ್ಬು ಎಂಬಲ್ಲಿ, **ಉರೈ** - ಬಿಜಮಾಡಿಸಿರುವ, **ತೀರ್ತನುಕ್ಕು**-ಮಹಾ ಪರಿಶುದ್ಧನಾಗಿರುವ ಪುರುಷೋತ್ತಮನಿಗೆ, **ಅಱ್ಱಪಿನ್**-ಶೇಷಭೂತನೆಂದಾದ ಬಳಿಕ, **ಶಿನ್ದೈ**-ನನ್ನ ಮನಸ್ಸು, **ಮತ್ತೊನ್ರಿನ್**-ಬೇರೆ ಯಾವುವನ್ನೂ, **ತಿರತ್ತಲ್ಲಾ** - ಉದ್ದೇಶ್ಯವಾಗಿ ಭಾವಿಸದೇ ಇರುವ, **ತನ್ನೈ**-ಸ್ವಭಾವವನ್ನು, **ತೇವರ್ ಪಿರಾನ್** - ಸೂರಿ ಸೇವ್ಯನಾದ ಸರ್ವಜ್ಞನಾದವನು

ತಿರು. ೭ ೧೦. ೧೦.

(೨) "ಅ(ವ) ರುನ್ತೇವರ್ ಮತ್ತ್ರುಳರೆನ್ರೇನ್ ಮನತ್ತಿರೈಯುಮ್ ಕರುರ್ತೇ" ಎನ್ರು ಮರುಳಿಚ್ಚೆಯ್‌ದಾರ್.

ತಾನೇ, ಅರಿಯುಮ್ - ತಿಳಿಯುವನು, ಶಿನ್ತೈಯನಾಲ್ - ನಮ್ಮ ಮನಸ್ಸಿನಿಂದ, ಶೆಯ್‌ವ ಮಾಯಙ್ಗಳ್ - ಮಾಡುವ ವಂಚನೆಗಳನ್ನು, ತಾರ್ - ಆ ಸರ್ವಜ್ಞನಾದ, ಸ್ವಾಮಿಯು ತಾನೇ, ಅರಿಯಾದನ ಒನ್ರುಮ್ ಇಲ್ಲೈ - ತಿಳಿಯದೇ ಇರುವದು ಯಾವುದೂ ಇಲ್ಲವು.

ತಿರುವಾರ್ರ ವಿಳೈ ಎಂಬ ಊರಲ್ಲಿ ಬಿಜಮಾಡಿಸಿರುವ ಸ್ವಾಮಿಯು ಎಂತವನೆಂದರೆ "ಯನ್ಮನಸಾ ಧ್ಯಾಯತಿ ತದ್ವಾಚಾವದತಿ ತತ್ಕರ್ಮಣಾ ಕರೋತಿ" ಎಂದು ಹೇಳಿರುವಹಾಗೆ ಮನೋವಾಕ್ಕರ್ಮಗಳೆಲ್ಲಾ ಒಂದೇರೀತಿಯಲ್ಲಿರುವ ಕಾಪಟ್ಯವಿಲ್ಲದಿರುವ ಮಹಾ ಭಾಗವತರು ಬಂದು ನಮಸ್ಕಾರಮಾಡಿದುದರಿಂದ, ಪರಮ ಪ್ರೀತನಾಗಿ, ತಾನು ಆನಂದಮಯನಾಗಿರುವದರಿಂದ ಅವರುಗಳನ್ನೂ ಶ್ರುತಿಯಲ್ಲಿ "ಆನಂದಯಾತಿ" ಎಂದು ಹೇಳಿರುವಹಾಗೆ, ಅವರಿಗೆ ಪರಮ ಸಂತೋಷವನ್ನುಂಟುಮಾಡುವದಕ್ಕಾಗಿಯೂ ಅವರುಗಳ ಮನೋರಥವನ್ನು ಸಲ್ಲಿಸುವದಕ್ಕಾಗಿಯೂ ಈ ತಿರುವಾರ್ರ ವಿಳೈಯಲ್ಲಿ ಬಿಜಮಾಡಿಸಿರುವನು; ಹೀಗೆ ಈ ಮಹಾ ಪರಿಶುದ್ಧರಾದ ಮಹಾ ಭಾಗವತೋತ್ತಮರಾದ ಪ್ರಪನ್ನರು ಈತನೇ ಪ್ರಾಪ್ಯನೆಂದು ಭಾವಿಸಿ ಪದೇಪದೆ ಬಂದು ನಮಸ್ಕರಿಸಿದುದರಿಂದ, ಈತನೇನಾದರೂ ತೀರ್‌ತ್ತನಾಗಿ, ಮಹಾಪರಿಶುದ್ಧನಾದನೋ ಎಂಬಹಾಗೆ ಬಿಜಮಾಡಿಸಿರುವವನು; ಭಾಗವತಶೋತ್ತಮರು ತೀರ್ಥರು; ಆದುದರಿಂದ ಸ್ವಾಮಿಯ ಪಾದವನ್ನೂ ಕೂಡ "ತೀರ್ಥೀಕುರ್ವನ್ತಿ" ಪರಿಶುದ್ಧವನ್ನಾಗಿ ಮಾಡಿದುದರಿಂದ ಆತನೂ ತೀರ್‌ತನು ಇಂತವನಿಗೆ ನಾನು ಅನನ್ಯಾರ್ಹ ಶೇಷನೆಂದು ನಂಬಿ, ಈ ತಿರುವಾರ್ರ ವಿಳೆಯ ಸ್ವಾಮಿಯೇ ಪರಮ ಪ್ರಾಪ್ಯನೆಂದು ನಂಬಿ ಆಶ್ರಯಿಸಿರುವೆನು. ಅನ್ಯ ದೇವತೆಯನ್ನು ಮನಸ್ಸಿನಲ್ಲಿ ಆಶ್ರಯಿಸಿ, ಇಲ್ಲಿ ಭಾಗವತರೆಲ್ಲಾ ತಾವು ಆಶ್ರಯಿಸಿದಹಾಗೆ ನಾನು ಆಶ್ರಯಿಸಿರುತ್ತೇನೆಂದು ವಂಚಿಸುವದಕ್ಕಾಗಿಯೂ ಬಂದವನಲ್ಲವು, ಇದೇ ದಿವ್ಯ ವೈಕುಂಠವೆಂದು ಭಾವಿಸಿ, ಪರಮ ಪದವನ್ನೂ ಬೇಡದೆ ಬಂದವನು. ಇದಕ್ಕೆ ಸಾಕ್ಷಿಯಾರು ಎಂದರೆ ಆತನ ಮನಸ್ಸೇ; ಆತನು ಸರ್ವಜ್ಞನಾದುದರಿಂದ ನಮ್ಮಗಳ ಮನಸ್ಸನ್ನೂ ಕೂಡ ತಿಳಿಯುವ ಸರ್ವಜ್ಞತೆಯು ಆತನಲ್ಲುಂಟು. ಅದನ್ನು ಮರೆಮಾಚಲು ಸಾಧ್ಯವಿಲ್ಲವು. ಆತನನ್ನೇ ಬೇಕಾದರೆ ಕೇಳಿ ತಿಳಿಯಬಹುದು ಎಂಬ ಭಾವವು. ದುಷ್ಯಂತನು ಶಕುಂತಳೆಯನ್ನು ಮದುವೆ

(೨) ಪೆರಿ. ತಿರು. ೮.೧೦.೨.

ಮಾಡಿಕೊಂಡು ಶಾಪಗ್ರಸ್ತನಾಗಿ ಮದುವೆಮಾಡಿಕೊಳ್ಳಲಿಲ್ಲವೆಂದು ಸಭೆಯಲ್ಲಿ ಹೆಂಡತಿಯನ್ನು ನಿರಾಕರಿಸಿದುದರಿಂದ ಕೋಪಗೊಂಡು ಹೇಳುತ್ತಾಳೆ. ನಿನ್ನ ವ್ಯಾಪಾರವೇ ಒಂದು ವಿಧವಾಯಿತು, ಬಾಯಲ್ಲಿ ಈಗ ಹೇಳುವದು ಬೇರೆ ವಿಧವಾಯಿತು. ಈ ಕೌಟಿಲ್ಯವನ್ನು ಸರ್ವೇಶ್ವರನು ತಿಳಿಯದೆ ಇರುವದಿಲ್ಲವು ಎಂದು ಮೂದಲಿಸುತ್ತಾಳೆ :—ಏಕೋಽಹಮಸ್ಮೀತಿ ಚ ಮನ್ಯಸೇತ್ವಂ ನ ಹೃಚ್ಛಯಂವೇತ್ಸಿ ಕವಿಂ ಪುರಾಣಮ್। ಯೋ ವೇದಿತಾ ಕರ್ಮಣಃ ಪಾಪಕಸ್ಯ ತಸ್ಯಾಂತಿಕೇ ತ್ವಂ ವೃಜಿನಂ ಕರೋಷಿ" ಆವತ್ತು ನನ್ನನ್ನು ಮದುವೆಮಾಡಿಕೊಂಡಿದುದು ಗೋಪ್ಯವಾದುದರಿಂದ ಯಾರೂ ತಿಳಿಯಲಾರರು ; ಆದುದರಿಂದ ನಿರಾಕರಿಸಿ ಕಳುಹಿಸಿ ಬಿಡೋಣವೆಂದು ಈ ಅನಾಥಳಾಗಿ ಪತಿವ್ರತಾಧರ್ಮದಲ್ಲಿರುವವಳನ್ನು ತ್ಯಾಗ ಮಾಡಿದ ಅಪರಾಧವನ್ನು ನಿನ್ನಹೃದಯಾಂತರ್ವರ್ತಿಯಾದ ಸರ್ವೇಶ್ವರನು ತಿಳಿಯಲಾರನೆಂದು ಭಾವಿಸಿರುತ್ತೀಯೇ ; ನೀನು ಮಾಡುವ ದುಷ್ಕರ್ಮಗಳನ್ನು ಸರ್ವಜ್ಞನಾಗಿರುವದರಿಂದ ಕಣ್ಣಾರ ನೋಡುತ್ತಿರುವನು ಎಂದು ಪತಿಯನ್ನು ಕುರಿತು ಶಕುನ್ತಳೆಯು ಹೇಳಿದಹಾಗೆಯೇ ನನ್ನ ಮನಸ್ಸಿನಲ್ಲಿರುವದನ್ನೂ ಕೂಡ ಆತನು ತಿಳಿಯಲು ಶಕ್ತನು. ಆದುದರಿಂದ ಏನೊಂದೂ ವಂಚನೆ ಯಿಲ್ಲವು ಈ ಸ್ವಾಮಿಯೇ ನನಗೆ ಪ್ರಾಪ್ಯನೆಂಬುದು ಸತ್ಯವು. ಹೀಗೆ ಹೇಳಿದುದರಿಂದ ಅನ್ಯ ಚಿಂತನವು ಸರ್ವಥಾ ಇಲ್ಲವೆಂದು ಹೇಳಿದಂತಾಯಿತು". ಎನ್ರುಮ್ - ಎಂಬ ಪಾಗಿಯೂ, ನಮ್ಮಾಳ್ವಾರ್ರವರು ಅರುಳಿಚ್ಚೆಯ್‌ದಾರ್ - ಅಪ್ಪಣೆ ಕೊಡಿಸಿರುತ್ತಾರೆ. (೨) ಅನ್ಯ ಚಿಂತನವು ಸರಿಯಲ್ಲವೆಂಬುದಕ್ಕೆ ಇನ್ನೊಂದು ಪ್ರಮಾಣವನ್ನು ಉದಾಹರಿಸುವರಾಗಿ ತಿರುಮಂಗೈಯಾಳ್ವಾರವರೂ ಹಾಗೆಯೇ ಹೇಳಿರುತ್ತಾರೆಂದು ತಿಳಿಸುತ್ತಾರೆ. ಈ "ಪರು ದೇವರ್" ಎಂಬ ವಾಕ್ಯವಿರುವ ಪೂರಾ ಪಾಶುರವು ಯಾವುದೆಂದರೆ :—

ಪೆರುನೀರುಮ್ ವಿಣ್ಣುಮ್ಮಲೆಯುಮುಲಗೇಳ್ಳುಮ್ ।
ಒರು ತಾರಾ ನಿನ್ನುಳೊಡುಕ್ಕಿ ಯನಿನ್ನೈ ಯಲ್ಲಾಲ್ ।
ವರುದೇವರ್ ಮಱ್ಱುಳರೆನ್ರೆನ್ಮನತ್ತಿರೈಯುಮ್ ।
ಜ್ಞರು ತೇನಾರ್ ಕಣ್ಣು ಪುರತ್ತು ರೈಯೆಮ್ಮಾನೆ ॥೨॥

ಇದರರ್ಥವು :—ಪೆರುನೀರುಮ್ - ಅಗಾಧವಾಗಿ ವಿಶಾಲವಾಗಿರುವ ಸಮುದ್ರವನ್ನೂ, ವಿಣ್ಣುಮ್-ಆಕಾಶವನ್ನೂ, ಮಲೆಯುಮ್-ಕುಲಾಚಲಗಳನ್ನೂ ಉಲಗೇಳುಮ್ - ಲೋಕಗಳನ್ನೂ, ಒರುತಾರಾ-ಪ್ರಳಯದಲ್ಲಿ ಒಂದು ಮಾಲೆಯಾಗಿರುವಳ್ಳವನಾಗಿ ಅಘನಾ ಇವುಗಳನ್ನೆಲ್ಲಾ ಒಂದು ಮಾಲೆಯಾಗಿ ಪ್ರಳಯ

ಕಾಲದಲ್ಲಿ ಉಳ್ಳವನೇ ಎಂದು ಸಂಬೋಧನೆಯಾಗಿಯಾಗಲಿ ಭಾವಿಸಬಹುದು. ಇವುಗಳನ್ನೆಲ್ಲಾ ಉದರದಲ್ಲಿ ಸೂಕ್ಷ್ಮದೇಶೆಯಲ್ಲಿ ಪ್ರಳಯಕಾಲದಲ್ಲಿ ಧರಿಸಿರುವ ದೆಂಬುದು ನಿನಗೇನೂ ಶ್ರಮವಿಲ್ಲವು ಒಂದು ಮಾಲೆಯನ್ನು ಧರಿಸಿದಹಾಗೆ ಎಂಬ ಭಾವವು. ಅದೂ ಅಲ್ಲದೆ ಒಂದು ಹಾರವನ್ನು ಧರಿಸಿ ನಿಂತಿರುವದು ಹೇಗೆ ತೋರುತ್ತದೆ ಎಂದರೆ ನಿನ್ನ ಉದರದಲ್ಲಿರುವ ಚೇತನರು ತನ್ನನ್ನಾಶ್ರಯಿಸಿದಪಕ್ಷ ದಲ್ಲಿ ಅವರನ್ನು ರಕ್ಷಿಸುವ ದೃಢಸಙ್ಕಲ್ಪವುಳ್ಳವನು ತಾನು ಎಂದು ಪ್ರತಿಜ್ಞೆಯನ್ನು ಮಾಡುವದಕ್ಕಾಗಿ ಹಾರವನ್ನು ಹಾಕಿಕೊಂಡಿರುವಹಾಗೆ ಇದೆ ಎಂಬ ಭಾವವೂ ತೋರಿಬರುತ್ತದೆ. **ನಿನ್ನೊಳೊಡುಕ್ಕಿ** - ನಿನ್ನ ಉದರದ ಏಕದೇಶದಲ್ಲಿ ಇಟ್ಟು ಕೊಂಡಿರುವ, **ನಿನ್ನೈಯಲ್ಲಾಲ್**-ನಿನ್ನ ಮೂಲಕವಲ್ಲದೆ, **ವರುದೇವರ್ ಮತ್ತು ಳರೆ**-ನಾನು ಆಶ್ರಯಣೀಯನೆಂದು ಬಂದು ನಿಂತಿರುವ ದೇವತೆಯು, **ಮತ್ತುಳ ರೆನ್ರು** - ಬೇರೆ ಉಂಟೆಂದು, **ಮನತ್ತು** - ನನ್ನ ಮನಸ್ಸಿನಲ್ಲಿ, **ಇರೈಯುಮ್** - ಸ್ವಲ್ಪವಾಗಲಿ, **ಕರುದೇನ್** - ಪೂರ್ವಪಕ್ಷರೂಪದಲ್ಲಿಯೂ ಕೂಡ ನೆನೆಸಲಾರೆನು, ಸ್ಮರಿಸುವದಿಲ್ಲವು ಎಂಬ ಭಾವವು. ಚತುರ್ಮುಖ ಬ್ರಹ್ಮನೆಂದೂ, ಪರಮೇಶ್ವರನು ಅಥವಾ ಈಶನೂ ಎಂದೂ,ಮಹೇಂದ್ರನೆಂದೂ ಹೀಗೆಲ್ಲಾ ಹೆಸರು ಧರಿಸಿ ಬಂದಿರುವ ದೇವತೆಗಳನ್ನೆಲ್ಲಾ ಪ್ರಳಯದಲ್ಲಿ ಸರ್ವೇಶ್ವರನು ತನ್ನ ಹೊಟ್ಟೆಯಲ್ಲಿಟ್ಟುಕೊಂಡು, ಇವರಿಗೆ ಒಳ್ಳೇ ಅಧಿಕಾರಗಳನ್ನು ಕೊಡಬೇಕೆಂದು ಸಙ್ಕಲ್ಪಿಸಿದುದರಿಂದ, ಅವ ನಿಂದ ಎಂಜಲು ರೂಪದಲ್ಲಿ ಇವರು ಉಗಳಲ್ಪಟ್ಟವರು; ಹೀಗೆ ಆತನಿಂದಲೇ ಸತ್ತೆ ಯನ್ನು ಹೊಂದಿ ತಾವೇ ಆಶ್ರಯಣೀಯರೆಂದು ಹೇಳಿಕೊಳ್ಳುವ ಈ ದೇವತೆಗಳನ್ನು ನಾನು ಎಂದಿಗಾದರೂ ಮನಸ್ಸಿನಲ್ಲಾದರೂ ಸ್ಮರಿಸುವನೇ? ಒಂದು ವೇಳೆ ಇವರೇ ನಾದರೂ ಆಶ್ರಯಿಸಲು ಯೋಗ್ಯರಾಗಬಹುದೋ ಎಂಬ ಪೂರ್ವಪಕ್ಷವನ್ನು ಮಾಡಿ ಯಾಗಲಿ ಸ್ಮರಿಸುವನೋ? ಎಂದಿಗೂ ಇಲ್ಲವೆಂಬ ಭಾವವು; **ಕಣ್ಣಪುರತ್ತುರೈ ಯುಮ್ಮಾನೇ** – ಕಣ್ಣಪುರದಲ್ಲಿ ಬಿಜಮಾಡಿಸಿರುವ ಸ್ವಾಮಿಯೇ, ಪ್ರಳಯಾಪತ್ತಿ ನಲ್ಲಿ ತನ್ನ ಉದರದಲ್ಲಿಟ್ಟು ಸಂರಕ್ಷಿಸಿ ಚೇತನರು ತನ್ನನ್ನಾಶ್ರಯಿಸಿ ನಿರತಿಶಯ ಸುಖವನ್ನು ಹೊಂದಲಿ ಎಂಬ ಪರಮ ಕೃಪಯಾ ಕರಣ ಕಳೇಬರ ಯೋಗ, ಸಚ್ಛಾಸ್ತ್ರ, ಸದುಪದೇಶಕರನ್ನೆಲ್ಲಾ ಒದಗಿಸಿಕೊಟ್ಟು, ಅರ್ಚಾವತಾರಿಯಾಗಿ ತಿರುಕ್ಕಣ್ಣಪುರದಲ್ಲಿ ಬಿಜಮಾಡಿಸಿ, ಈ ಸಂಸಾರವೆಂಬ ಪ್ರಳಯವನ್ನು ಹೋಗ ಲಾಡಿಸಬೇಕೆಂದು ವನಮಾಲೆಯನ್ನು ಧರಿಸಿ ಸತ್ಯ ಸಙ್ಕಲ್ಪನಾಗಿ ನೆಲಸಿರುವಾಗ, ಇತರರಾದ ನಮ್ಮ ಹಾಗೆಯೇ ಸಂಸಾರಿಗಳಾಗಿರುವ ದೇವತೆಗಳನ್ನು ಮನಸ್ಸಿನಿಂದ ಲಾದರೂ ಸ್ಮರಿಸುವೆನೇ ? ಎಂಬತಾತ್ಪರ್ಯವು.

ಈ ಅಭಿಗಮನಾದಿ ನಿತ್ಯ ನೈಮಿತ್ತಿಕಗಳು ಪ್ರಪನ್ನನಿಗೆ ಅನೇಕಾನರ್ಥಗಳು

ಅಭಿಗಮನಾದಿಷು ಅನಧಿಕೃತಾನಾ ಮುಕ್ತಾನರ್ಥ ನಿವಾರಣಂ ಕಥಮ್ ?

ಇಜ್ಯಾರಾಧನಾದಿ ಕ್ರಮಙ್ಗಳಿಲ್ ಅನಧಿಕೃತರ್ಕ್ಕು ಇಕ್ಕಾಲಙ್ಗಳಿಲ್ಲಾತ್ತಿಲುಮ್ ತಙ್ಗಳುಕ್ಕುಯೋಗ್ಯಮಾನ ನಿತ್ಯ ನೈಮಿತ್ತಿಕಙ್ಗಳಾಲುಮ್,

ತೊಲಗಲು ಸಹಕಾರಿಯಾಗಬಹುದೆಂದು ಹೇಳಲ್ಪಟ್ಟಿತು. ಇಂತಹ ಪ್ರಯೋಜನವು, ಆರಾಧನೆ ಮೊದಲಾದ ನಿತ್ಯ ನೈಮಿತ್ತಿಕಗಳನ್ನು ಅನುಷ್ಠಿಸಲು ಯೋಗ್ಯತೆಯುಳ್ಳ ತ್ರೈವರ್ಣಿಕರಿಗೆ ಮಾತ್ರವೇ ಎಂದು ಹೇಳಿದರೆ ಪ್ರಪನ್ನರಾದ ಸ್ತ್ರೀಶೂದ್ರಾದಿಗಳಿಗೆ ಇಂತಹ ಸುಕೃತವಿಶೇಷವಿಲ್ಲವೆಂದು ಹೇಳಿದಂತಾಗುತ್ತದೆ. ಇಂತಹ ಅನ್ಯಾಯವನ್ನು ಸರ್ವೇಶ್ವರನು ಎಂದಿಗಾದರೂ ಮಾಡಿಯಾನೋ? ಹಾಗಾದರೆ ಅಂತಹ ಅನಧಿಕೃತರ ವಿಷಯದಲ್ಲಿ ಹೇಗೆ ಎಂದರೆ ಹೇಳುತ್ತಾರೆ.

ಹಾಗಾದರೆ ಅಭಿಗಮನಾಧಿಗಳಲ್ಲಿ ಅಧಿಕಾರವಿಲ್ಲದವರಿಗೆ ಅನರ್ಥ ನಿವಾರಣೆಯು ಹೇಗೆ?

ಬ್ರಾಹ್ಮಣ ಕ್ಷತ್ರಿಯ ವೈಶ್ಯರಾದ ತ್ರೈವರ್ಣಿಕರಿಗೆ ನಿತ್ಯ ನೈಮಿತ್ತಿಕಗಳು ಅವುಗಳಲ್ಲೇ ಸೇರಿದ ಅಭಿಗಮನಾರಾಧನಾದಿಗಳೇನೋ ಉಂಟು, ಅವುಗಳಿಂದ ಅನರ್ಥನಾಶರೂಪ ಪ್ರಯೋಜನ ಉಂಟಾಗುತ್ತದೆಂದು ಹೇಳಬಹುದು. ಆದರೆ **"ಜಪ ಸ್ತಪಸ್ತೀರ್ಥಸೇವಾ ಪ್ರವ್ರಜ್ಯಾ ಮಂತ್ರಸಾಧನಂ। ದೇವತಾರಾಧನಂ ಚೇತಿ ಸ್ತ್ರೀಶೂದ್ರ ಪತನಾನಿ ಷಟ್"** ಜಪ, ತಪ, ಪತಿಶುಶ್ರೂಷೆಯನ್ನು ಬಿಟ್ಟು ತೀರ್ಥಯಾತ್ರೆಗಳು ಸಂನ್ಯಾಸವೂ ಮಂತ್ರೋಪಾಯವೂ ದೇವತಾರಾಧನವೂ ಈ ಆರನ್ನು ಸ್ತ್ರೀಶೂದ್ರರು ಅನುಷ್ಠಿಸಿದುದಾದರೆ ಅವರಿಗೆ ಪತನಕ್ಕೆ ಕಾರಣವಾಗುತ್ತವೆ. ಹೀಗೆ ಅಭಿಗಮನಾರಾಧನೆಗಳಲ್ಲಿ ಶೂದ್ರರಿಗೆ ಅಧಿಕಾರವಿಲ್ಲವಾದುದರಿಂದ ಪ್ರಪನ್ನರಾದ ಅವರುಗಳಿಗೂ ಭಗವತ್ಕೈಂಕರ್ಯ ಭಾಗವತ ಕೈಂಕರ್ಯ ಸಿದ್ಧಿಯುಂಟಾಗುವ ಪ್ರಕಾರವನ್ನೂ ಮುಂದಿನ ವಾಕ್ಯದಮೂಲಕವೂ, ಆ ವಿಷಯದಲ್ಲಿ ಪ್ರಮಾಣಗಳನ್ನೂ ಅದರ ಮುಂದಿನವಾಕ್ಯವಾದ "ಇನ್ವರ್ತ್ತೈ". ಎಂಬುದರ ಮೂಲಕವೂ ಉಪದೇಶಿಸುತ್ತಾರೆ. ಭಾಗವತಕೈಂಕರ್ಯಮೂಲಕ ಭಗವತ್ಕೈಂಕರ್ಯ ಸಿದ್ಧಿ ಎಂದುಪದೇಶಿಸುತ್ತಾರೆ. **ಇಜ್ಯಾರಾಧನಕ್ರಮಙ್ಗಳಿಲ್** - ಈ ಭಗವದಾರಾಧನೆಯ ಕ್ರಮಗಳಲ್ಲಿ, **ಅನಧಿಕೃತರ್ಕ್ಕುಮ್** - ಅಧಿಕಾರವಿಲ್ಲದ ಸ್ತ್ರೀಶೂದ್ರರಿಗೂ ಸಹ, **ಇಕ್ಕಾಲಙ್ಗಳಿಲ್ಲಾತ್ತಿಲುಮ್** - ಈ ಎಲ್ಲಾ ಕಾಲದಲ್ಲೂ, **ತಙ್ಗಳುಕ್ಕುಯೋಗ್ಯಮಾನ** - ಇಲ್ಲಿ ತಙ್ಗಳುಕ್ಕು ಎಂಬುದು ಮುಂದೆ ಬರುವ್ ಪರನು ಭಾಗ

ಸಂಕೀರ್ತನಾದಿಗಳಾಲುಮ್, ಸಮಾರಾಧನಾದಿ ಯೋಗ್ಯರಾನ ಪರಮ ಭಾಗವತರ್ಕ್ಕು ಪ್ಪರತಂತ್ರರಾಯ್ ಯಥಾಧಿಕಾರಂ ವಲ್ಲತೇನ್ನೈ ಶೆಯ್‌ದುಮ್ ಇಕ್ಕೈಙ್ಕರ್ಯ ಮಿಳವಾದೊಳಿಯಲಾಮ್.

ವತರಾನ" - ಎಂಬುದಕ್ಕೆ ಅನ್ವಯವು, ಪರಮ ಭಾಗವತರಾದ ತಮಗೆ ಯೋಗ್ಯಗಳಾದ ನಿತ್ಯ ನೈಮಿತ್ತಿಕ ಕರ್ಮಾನುಷ್ಠಾನಗಳಿಂದಲೂ, **ಸಂಕೀರ್ತನಾದಿಗಳಾಲುಮ್** - ಸ್ತೋತ್ರಗಳೇ ಮೊದಲಾದವುಗಳ ಮೂಲಕ ಕೀರ್ತನ ಅಥವಾ ಭಗವನ್ನಾಮ ಸಂಕೀರ್ತನಗಳಿಂದಲೂ. **ಆದಿ** ಪದದಿಂದ ಗುರು ಪರಂಪರಾನುಸಂಧಾನ, ಅಷ್ಟೋತ್ತರ ಶತಸಹಸ್ರಾದಿಗಳಮೂಲಕ ಅರ್ಚನ, ಭಗವತ್ಪ್ರಬಂಧಸೇವೆ, ಪುಷ್ಪ ತುಲಸ್ಯಾದ್ಯಾಹರಣ, ಮಾಲಾಕರಣ, ದೀಪಾರೋಪಣ, ಭಗವನ್ಮಂದಿರ ಸಂಮಾರ್ಜನಾದಿ ವಿವಿಧ ಕೈಙ್ಕರ್ಯಗಳು ಸೂಚಿಸಲ್ಪಟ್ಟವು, ಇಂತಹ ಅನುಷ್ಠಾನಗಳಿಂದ **ಸಮಾರಾಧನಾದಿ ಯೋಗ್ಯರಾದ** - ಅಭಿಗಮನಾದಿ ಭಗವದಾರಾಧನೆಗೆ ಅರ್ಹರಾದ, **ಪರಮ ಭಾಗವತರ್ಕು** - ಪರಮ ಭಾಗವತರಿಗೆ, **ಪರತಂತ್ರರಾಯ್**- ಅಧೀನರಾಗಿ, ಶೇಷಭೂತರಾಗಿ ಎಂಬರ್ಥವು, **ಯಥಾಧಿಕಾರಮ್** - ತಮ್ಮ ಅಧಿಕಾರಾನುಗುಣವಾಗಿ, **ವಲ್‌ತೇನ್ನೈಶೆಯ್‌ದುಮ್** - ತನಗೆ ಸಾಮರ್ಥ್ಯವಿರುವ ಕೈಙ್ಕರ್ಯಗಳನ್ನು ಮಾಡುತ್ತಾ, **ಇಕ್ಕೈಙ್ಕರ್ಯಂ** - ಇಂತಹ ಕೈಙ್ಕರ್ಯವು ಎಂದರೆ ಅಭಿಗಮನಾದಿ ಕೈಙ್ಕರ್ಯಮೂಲಕ ಉಂಟಾಗುವ ಅನರ್ಥನಾಶಕರೂಪಕೈಙ್ಕರ್ಯವು, **ಇಳಿವಾದೊಳಿಯಲಾಮ್**-ಇಲ್ಲದೆ ಹೋಗುವಂಥಾಪ್ದನ್ನು ತಪ್ಪಿಸಿಕೊಳ್ಳಬಹುದು ಎಂದರೆ ಈ ರೂಪವಾಗಿ ಸಿದ್ಧಿಸುತ್ತದೆ ಎಂಬರ್ಥವು. ಮಹಾ ಭಾಗವತರಿಗೆ ಶೇಷಭೂತರಾಗಿ ಅವರಿಂದ ಅಜ್ಞಾಪಿಸಲ್ಪಟ್ಟಕೈಙ್ಕರ್ಯಗಳನ್ನು ನಡೆಸುವದರಿಂದಲೂ. ಅವರಿಗೇ ಶೇಷಭೂತರಾಗಿ ಕೈಙ್ಕರ್ಯಗಳನ್ನೆಸಗುವದರಿಂದಲೂ ಸಿದ್ಧಿಸುತ್ತದೆ ಆದುದರಿಂದಲೇ ಸ್ತ್ರೀಶೂದ್ರರಿಗೆ ತ್ರೈವರ್ಣಿಕರಹಾಗೆ ಯಾವ ನಿತ್ಯ ನೈಮಿತ್ತಿಕಗಳನುಷ್ಠಾನ ಮತ್ತು ಭಗವದಾರಾಧನೆಗಳ ಆವಶ್ಯಕತೆ ಇಲ್ಲವು. ಸ್ತ್ರೀಗೆ ಮಹಾ ಭಾಗವತ ಸ್ಥಾನದಲ್ಲೇ ಪತಿಯೇ ಆಗಿ, ಆತನ ಕೈಙ್ಕರ್ಯರೂಪವಾದ ಭರ್ತೃಶುಶ್ರೂಷೆಯ ಮಾತ್ರದಿಂದಲೇ ಸಮಸ್ತ ಅನರ್ಥಗಳ ವಿನಾಶವುಂಟಾಗುವದರಿಂದಲೂ, ಶೂದ್ರಾದಿಗಳಿಗೆ ಮಹಾ ಭಾಗವತನಿಗೆ ಪರತಂತ್ರರಾಗಿ ಮಾಡುವ ಕೈಙ್ಕರ್ಯಗಳಿಂದ ಅವರಿಗೆ ಅನರ್ಥಗಳ ವಿನಾಶವೂ ಉಂಟಾಗುವದರಿಂದಲೂ, ಶ್ರೀ ವ್ಯಾಸ ಮಹರ್ಷಿಯು, ಕಲಿಯುಗದಲ್ಲಿ **ಯೋಷಿತಸ್ಸಾಧು ಧರ್ನ್ಯಾಸ್ತಾಸ್ತಾಭ್ಯೋ ಧನ್ಯತರೋಸ್ತಿಕಃ"** ಎಂದೂ **"ಶೂದ್ರಸ್ಸಾಧುಃ" "ಶೂದ್ರ ಧನ್ಯೋಸಿಚಾಬ್ರವೀತ್"** ಎಂದೂ, ಎಂದರೆ ಕಲಿಯುಗದಲ್ಲಿ ಸ್ತ್ರೀಯರುಗಳು ಬಹಳ ಸಾಧುಗಳೂ

ಇನ್ನರ್ಥತ್ತೈ (೧) "ಆರಾಧನಾನಾಂ ಸರ್ವೇಷಾಂ ವಿಷ್ಣೋರಾರಾಧನಂ ಪರಮ್ । ತಸ್ಮಾತ್ಪರತರಂ ಪ್ರೋಕ್ತಂ ತದೀಯಾರಾಧನಂ ಪರಮ್" । ಎನ್ರುಮ್, (೨) "ಕುನ್ರುಮೆಡುತ್ತ ಪಿರಾ ನಡಿಯಾರೊಡು ಮೊನ್ರಿ ನಿನ್ರ

ಧನ್ಯರೂ,ಅವರಿಗಿಂತ ಧನ್ಯರು ಯಾರಿದ್ದಾರೆಂದೂ, ಹಾಗೆಯೇ ಶೂದ್ರನೂ ಸಾಧುವು ಧನ್ಯನು ಎಂದೂ ಹೇಳಿರುತ್ತಾರೆ. (ವಿ. ಪು. ೬. ೨. ೭-೮); ಏಕೆಂದರೆ ತಿಳಿಸು ತ್ತಾರೆ:—**"ಸ್ವಲ್ಪೇನಹಿ ಪ್ರಯತ್ನೇನ ಧರ್ಮಸ್ಸಿಧ್ಯತಿ ವೈಕಲೌ । ಶೂದ್ರೈ ಶ್ಚ ದ್ವಿಜಶುಶ್ರೂಷಾ ತತ್ಪರೈರ್ದ್ವಿಜ ಸತ್ತಮಾಃ । ತಥಾ ಸ್ತ್ರೀಭಿರನಾಯಾ ಸಾತ್ ಪತಿ ಶುಶ್ರೂಷಯೈವಹಿ"** ಶೂದ್ರರಿಗೆ ಬ್ರಹ್ಮವಿತ್ತುಗಳ ಶುಶ್ರೂಷೆಯಿಂ ದಲೇ,ಸ್ತ್ರೀಯರಿಗೆ ಪತಿಶುಶ್ರೂಷೆಯಿಂದಲೇ, ಹೀಗೆ ಅಲ್ಪಾಯಾಸದಿಂದಲೇ ಇಂತಹ ಧರ್ಮಾನುಷ್ಠಾನರೂಪಸಿದ್ಧಿಯು ಲಭಿಸುತ್ತದೆ, ಎಂದು ಮಹರ್ಷಿಗಳನ್ನು ಕುರಿತು ಉಪದೇಶಿಸಿರುತ್ತಾರೆ. ಸ್ತ್ರೀಗಳಿಗೆ ಭರ್ತೃ ಶುಶ್ರೂಷಯೇ ಪರಮ ಧರ್ಮನೆಂಬುದಕ್ಕೆ ಶ್ರೀ ವಾಲ್ಮೀಕಿ ಮಹರ್ಷಿಯ ದಿವ್ಯಸೂಕ್ತಿಗಳಿಗಾಗಿ (ರಾ. ಅಯೋಧ್ಯಾ. ೨೪-೨೫. ೨೬)ಶ್ಲೋಕಗಳನ್ನು ಪರಾಂಬರಿಸಿ. ಹೀಗೆ ಭಾಗವತಾರಾಧನದಿಂದಲೇ ನಿತ್ಯಕರ್ಮಾ ಭಿಗಮಸಾದಿಗಳಲ್ಲಿ ಅನಧಿಕೃತರಾದ ಸ್ತ್ರೀ ಶೂದ್ರಾದಿಗಳಿಗೆ ಇವುಗಳಿಂದುಂಟಾಗುವ ಫಲವೇ ಸಿದ್ಧಿಸುತ್ತದೆ ಎಂಬುದಕ್ಕೆ ಪ್ರಮಾಣಗಳನ್ನು ದಯಪಾಲಿಸುತ್ತಾರೆ

ಇನ್ನರ್ಥತ್ತೈ - ಈ ಅಭಿಪ್ರಾಯವನ್ನೇ, ಭಗವತ್ಕೈಙ್ಕರ್ಯರೂಪ ಭಗವ ದಾರಾಧನದಿಂದ ಯಾವ ಭಗವತ್ಪ್ರೀತಿಯು ಸಿದ್ಧಿಸಿ ಅನರ್ಥನಿವೃತ್ತಿಗಳುಂಟಾಗು ತ್ತವೋ, ಅದೇ ಭಾಗವತ ಕೈಙ್ಕರ್ಯ ಮೂಲಕವೇ ಅನಧಿಕಾರಿಗಳಿಗೆ ಲಭಿಸುತ್ತದೆ ಎಂಬ ಅಭಿಪ್ರಾಯವನ್ನೇ ಎಂಬ ಭಾವವು, (೧) **ಸರ್ವೇಷಾಂ** - ಸಮಸ್ತವಾದ **ಆರಾಧನಾನಾಂ ಮಧ್ಯೇ** - ಆರಾಧನೆಗಳಲ್ಲಿ, **ವಿಷ್ಣೋರಾರಾಧನಂ** - ವಿಷ್ಣು ವಿನ ಆರಾಧನೆಯು, **ಪರಂ** - ಶ್ರೇಷ್ಠವಾದುವೆಂದು, **ಪ್ರೋಕ್ತಂ** - ಹೇಳಲ್ಪಟ್ಟಿ ರುತ್ತದೆ, **ತಸ್ಮಾತ್** - ಆ ವಿಷ್ಣುವಿನ ಆರಾಧನೆಗಿಂತಲೂ, **ಪರಂ**-ಶ್ರೇಷ್ಠವಾದುದು, **ತದೀಯಾರಾಧನಂ** - ವಿಷ್ಣು ಭಕ್ತರ ಆರಾಧನೆಯು, **ಪರತರಂ** - ತುಂಬಾ ಶ್ರೇಷ್ಠವಾದುದಾಗಿ, **ಪ್ರೋಕ್ತಂ** - ಹೇಳಲ್ಪಟ್ಟಿರುತ್ತದೆ," **ಎನ್ರುಂ** - ಎಂಬದಾ ಗಿಯೂ, (೨) ಈ ತಿರುವಾಯ್ ಮೊಳಿಯ ಹತ್ತು ಪಾಶುರಗಳನ್ನೂ ಅರ್ಥದೊಂ ದಿಗೆ ಪಠನ ಮಾಡುವವರಿಗೆ ಸರ್ವವಿಧದಲ್ಲೂ ವಿಜಯ ಉಂಟೆಂದು ಫಲಶ್ರುತಿ ಯನ್ನು ಹೇಳುತ್ತಾರೆ, **ಕುನ್ರುಮೆಡುತ್ತ** - ಇಂದ್ರನ ಕ್ರೂರಕೃತ್ಯದಿಂದ ರಕ್ಷಿಸುವ

---

(೧) ಪಾದ್ಮೋತ್ತರ ೨೯. ೮೧ (೨) ತಿರು. ೭. ೪. ೧೧.

ಶಡಗೋಪನುರ್ೈ ಶೆಯಲ್"ಎನ್ರುಂ (೩) "ಏತ್ತಿ ಯಿರುಪ್ಪಾರೈ ವೆಲ್ಲುಮೇ, ಮತ್ತವರೈ ಶಾತ್ತಿಯಿರುಪ್ಪಾರ್ ತವಮ್" ಎನ್ರುಮ್, ಅರುಳಿಚ್ಚೆಯ್ ದಾರ್ ಗಳ್.

ದಕ್ಕಾಗಿ ಗೋವರ್ಧನೋದ್ಧರಣಮಾಡಿದ, **ಓರಾಕ್** - ಸರ್ವ ವಿಧದಲ್ಲೂ ಮಹೋಪಕಾರನಾದ ಶ್ರೀಕೃಷ್ಣನ, **ಅಡಿಯಾರೋಡುಮ್** - ದಾಸರಾದ ಭಕ್ತರೊಂದಿಗೆ, **ಒನ್ರಿನಿನ್ರ** - ವಿಶೇಷ ಪ್ರೀತಿಯಿಂದ ಏಕೀಭವಿಸಿ ನಿಲ್ಲುವ ಸ್ವರೂಪವನ್ನು ಹೊಂದಿ, **ಶಠಗೋಪರ್** - ಶ್ರೀ ನಮ್ಮಾಳ್ವಾರವರಾದ ತಮ್ಮ, **ಉರ್ೈಶೆಯಲ್**-ವಾಚಿಕರೂಪ ಕೈಂಕರ್ಯವಾಗಿ, ಮುಂದೆ, "**ನನ್ರಿ ಪುನೈನ್ದ ವೋರಾಯಿರತ್ತುಳ್ಳಿವೈ। ವೆನ್ರಿತರುಮ್ ಪತ್ತುಮ್ ಮೇವಿ ಕೆರ್ಪಾರ್ಕ್ಕೇ**" ಎಂದು **ಉತ್ತ**ರಾರ್ಧವಿರುತ್ತದೆ; **ಓರ್ ಆಯಿರತ್ತುಳ್** - ಅದ್ವಿತೀಯವಾದ ಸಾವಿರ ಪಾಶುರಗಳಲ್ಲಿ, **ನನ್ರಿ ಪುನೈನ್ದ** - ಸರ್ವೇಶ್ವರನ ವಿಜಯ ಸೂಚಕ ದಿವ್ಯ ಚೇಷ್ಟಿತಗಳಿಂದ ಪೂರ್ಣವಾದ, **ಇವೈ ಪತ್ತುಮ್** - ಈ ಹತ್ತು ಪಾಶುರಗಳನ್ನೂ, **ಮೇವಿಕರ್ಪಾರ್ಕ್ಕು** - ಅರ್ಥಸಹಿತವಾಗಿ ಅಭ್ಯಸಿಸುವರಿಗೆ, **ವೆನ್ರಿತರುಮ್** - ಸಮಸ್ತ ವಿಜಯಗಳನ್ನೂ ಅವು ಕೊಡುತ್ತವೆ, ಇಲ್ಲಿ ಶ್ರೀ ನಮ್ಮಾಳ್ವಾರವರು ತಮಗೆ ಶ್ರೀ ಕೃಷ್ಣನ ಭಕ್ತರೊಂದಿಗೆ ಸೇರಿಮಾಡುವ ವಾಚಿಕ ಕೈಙ್ಕರ್ಯವೇ ತಮಗೆ ಸ್ವರೂಪವಾಗಿ ಭಾವಿಸಿರುತ್ತಾರೆ" **ಎನ್ರುಮ್** - ಎಂಬದಾಗಿಯೂ ಮತ್ತು

(೩) ಇದು ಉತ್ತರಾರ್ಧವು. **ಪೂರ್ವಾರ್ಧವು**--

"**ಮಾರಾಯತಾನವನೈ ವಳ್ಳುಗಿರಾಲ್ ಮಾರ್ ಇರಣ್ಡು**
ಕೂರಾಕಕ್ಕೀರಿಯ ಕೋಳರಿಯೈ-ವೇರಾಕ" ಎಂದು.

ಮಾರಾಯತಾನವನೈ - ಸರ್ವೇಶ್ವರನಿಗೆ ಶತ್ರುವಾಗಿ ಆಚರಿಸಕೂಡದೆಂದು ತಿಳಿಯದ ಹಿರಣ್ಯಕಶಿಪುವೆಂಬ ರಾಕ್ಷಸನನ್ನು, **ವಳ್ಳುಗಿರಾಲ್**-ಕ್ರೂರಗಳಾದ ಉಗುರುಗಳಿಂದ, **ಮಾರ್** - ವಕ್ಷಸ್ಥಳವನ್ನು, **ಇರಣ್ಡು ಕೂರಾಗ**-ಎರಡು ಭಾಗವಾಗಿ, **ಕೀರಿಯ** - ಸೀಳಿದ, **ಕೋಳ್ ಅರಿಯೈ** - ಮಹಾ ಪರಾಕ್ರಮಿಯಾದ ಶ್ರೀನರಸಿಂಹ ಸ್ವಾಮಿಯನ್ನು, **ಏತ್ತಿ ಇರುಪ್ಪಾರೈ** - ಸ್ತೋತ್ರಮಾಡುವ ಮಹಾ ಭಾಗವತೋತ್ತಮರ ಮತ್ತು, **ಅವರೈ** - ಅಂತಹ ಭಾಗವತೋತ್ತಮರನ್ನು, **ಶಾತ್ತಿಯಿರುಪ್ಪಾರ್** - ಆಶ್ರಯಿಸಿರುವವರ, ಅಥವಾ ಸ್ತೋತ್ರಮಾಡುವವರ, **ತವಮ್**-ಸುಕೃತವು, **ವೆಲ್ಲುಮೇ** - ಜಯಶೀಲವಾದುದೇ, ಇಲ್ಲಿ ಭಗವದಾರಾಧನ ಸ್ತೋತ್ರ

---

(೩) ನಾನ್ಮುಗನ್ತಿರುವಂದಾದಿ. ೧೮.

ಇಕ್ಕ್ರಿಯೈಗಳೈ ತಾಙ್ಗಳ್ ಅನುಷ್ಠಿತ್ತು ಉಕಪಾರ್ಕ್ಕುಮ್,
ಇದು ಕಣ್ಡು ಉಕಪ್ಪಾರ್ಕ್ಕುಮ್, ಜಗದ್ವ್ಯಾಪಾರಂ ಪಣ್ಣವಧಿಕೃತ

ಮಾಡುವವರಿಗಿಂತಲೂ, ಇಂತಹ ಭಾಗವತರನ್ನು ಆರಾಧಿಸುವವರು ಮಹಾ ಸುಕೃತಶಾಲಿಗಳು ಎಂದು ಹೇಳಲ್ಪಟ್ಟಿತು." **ಎನ್ರುಮ್** - ಎಂಬದಾಗಿಯೂ, **ಅರುಳಿಚ್ಚೆಯ್‌ದಾರ್‌ಗಳ್** - ಕೃಪಯಾ ಉಪದೇಶಿಸಿರುತ್ತಾರೆ; ಯಾರು ಎಂದರೆ ಪಾದ್ಮೋತ್ತರ ಕರ್ತಾವಾದ ಶ್ರೀ ವ್ಯಾಸ ಮಹರ್ಷಿಯೂ, ನಾನ್ಮುಕನ್ತಿರುವನ್ದಾದಿ ಕರ್ತಾವಾದ ತಿರುಮಳಿಶೈಯಾಳ್ವಾರ್‌ರವರೂ ಎಂದು ಇಟ್ಟುಕೊಳ್ಳತಕ್ಕದ್ದು.

ಹೀಗೆ ಭಗವದಾರಾಧನಾದಿ ನಿತ್ಯ ನೈಮಿತ್ತಿಕಗಳಲ್ಲಿ ಅನಧಿಕೃತರಿಗೂ, ತದಧಿಕೃತರ ಆಶ್ರಯಣದ ಮೂಲಕ, ಅಧಿಕೃತರಿಗೆ ಉಂಟಾಗುವದು ಯಾವ ಫಲವೋ, ಆ ಫಲವೇ ಬರೀ ಆಶ್ರಯಣ ಮೂಲಕವೇ ಉಂಟಾಗುತ್ತದೆಂದು ಶ್ರೀ ಆಳ್ವಾರಾದಿ ದಿವ್ಯ ಸೂಕ್ತಿಪ್ರಮಾಣಗಳ ಮೂಲಕ ತೋರ್ಪಡಿಸಿದರು. ಪ್ರಪನ್ನರಾದ ಅಧಿಕೃತರಿಗೆ ಹೇಗೆ ಅನರ್ಥ ನಿವೃತ್ತಿರೂಪಪ್ರಯೋಜನವೋ, ಹಾಗೆಯೇ ಮಹಾ ಭಾಗವತಾಶ್ರಯಣದಿಂದಲೇ ಅನಧಿಕೃತ ಪ್ರಪನ್ನರಿಗೂ ಅನರ್ಥ ನಿವೃತ್ತಿಯು ದೊರೆಯುತ್ತದೆಂದು ಹೇಳಲ್ಪಟ್ಟಿತು. ಮುಂದಿನ ವಾಕ್ಯದಿಂದ ಇದರಲ್ಲಿ ಸಂಶಯ ಬೇಕಿಲ್ಲವೆಂಬುದಕ್ಕಾಗಿ ಒಂದು ದೃಷ್ಟಾಂತ ಮೂಲಕ ಸಮರ್ಥನೆ ಮಾಡಿ ಹೇಳುತ್ತಾರೆ:—**ಇಕ್ಕ್ರಿಯೈಗಳೈ** - ಈ ಭಗವದಾರಾಧನಾದಿ ನಿತ್ಯ ನೈಮಿತ್ತಿಕಗಳನ್ನು, **ತಾಙ್ಗಳ್ ಅನುಷ್ಠಿತ್ತು** - ತಮಗೇ ಅಧಿಕಾರವಿರುವದರಿಂದ ಅನುಷ್ಠಿಸಿ, **ಉಗಪ್ಪಾರ್ಕ್ಕುಮ್** - ಭಗವತ್ಪ್ರೀಣನವು ದೊರೆಯುತ್ತದೆಂದು ಸಂತೋಷಪಡುವವರಿಗೂ, **ಇದು ಕಣ್ಡು ಉಗಪ್ಪಾರ್ಕ್ಕುಮ್** - ತಮಗೆ ಅಧಿಕಾರವಿಲ್ಲದುದರಿಂದ, ತಾವು ಆಶ್ರಯಿಸಿದ ಭಾಗವತರು ಇವುಗಳನ್ನು ಮಾಡುವದನ್ನು ನೋಡಿ, ತಮಗೂ ಭಗವತ್ಪ್ರೀತಿಯುಂಟಾಗುತ್ತದೆಂಬ ಭಾವನೆಯಿಂದ ಸಂತೋಷಚಿತ್ತರಾಗಿರುವವರಿಗೂ, **ಭೋಗಮ್ ಏಕರೂಪಮ್** - ಅದರಿಂದುಂಟಾಗುವ ಆನಂದವೂ ಫಲವೂ ಒಂದೇ ವಿಧವಾದುದು; ಅದನ್ನು ಈಗ ಸ್ಥಾಪಿಸಿದ ಒಂದು ದೃಷ್ಟಾಂತಮೂಲಕ ವ್ಯಕ್ತಪಡಿಸುತ್ತಾರೆ. ಆದರೆ ಅಭಿಗಮನಾದಿ ಆರಾಧನೆಗಳನ್ನು ನಡೆಸುವವರುಗಳಿಗೆ ಉಂಟಾಗುವ ಆನಂದವು ಸುಮ್ಮನೆ ಅವುಗಳನ್ನು ನೋಡುತ್ತಿರುವ ಅಥವಾ ಅಲ್ಪಸಹಾಯವನ್ನು ಮಾಡುವ ಅನಧಿಕೃತರಿಗೆ ಹೇಗೆ ಉಂಟಾದೀತು ? ಎರಡೂ ಒಂದೇ ಹೇಗೆ ಆದೀತು ? ಇಬ್ಬರಿಗೂ ಒಂದೇ ವಿಧ ಫಲವೆಂದರೆ ಒಪ್ಪತಕ್ಕದ್ದೇ ಎಂಬ ಸಂದೇಹವು ಬಾಧಿಸಬಹುದು. ಹಾಗೆ ಸಂದೇಹಕ್ಕೆ ಸ್ವಲ್ಪವೂ ಅವಕಾಶವಿಲ್ಲವೆಂದು ಒಂದು ದೃಷ್ಟಾಂತ

ನಾನ ಈಶ್ವರನುಕ್ಕುಮ್ ಮುಕ್ತರುಕ್ಕುಮ್ ಪೋಲೆ, ಭೋಗಮೇಕ ರೂಪಮ್. (೧) "ಧರ್ಮಶ್ರುತೋವಾ ದೃಷ್ಟೋವಾ ಸ್ಮೃತೋವಾ ಕಥಿತೋಪಿವಾ । ಅನುಮೋದಿತೋವಾ ರಾಜೇಂದ್ರ ಪುನಾತಿ ಪುರುಷಂಸದಾ" ಎಙ್ಗಿರ ಪಾವನತ್ವಮ್ಪೋಲೆ ಭೋಗ್ಯತ್ವಮುಮ್ ಕುರೈ ಯಿಲ್ಲೈ-

ಮೂಲಕ ತಿಳಿಸುತ್ತಾರೆ. ಹಿಂದೆ ಮುಕ್ತರೆಲ್ಲರಿಗೂ ಆನಂದವು ಒಂದೇ ಸಮನಾದುದೆಂದೂ, ಆ ಆನಂದವು ಪರಮಾತ್ಮನ ಆನಂದಕ್ಕೂ ಸಮವೆಂದು ಸ್ಥಾಪಿಸಿದರು, ಆದೃಷ್ಟಾಂತಮೂಲಕವೇ ಇದನ್ನೂ ಸ್ಥಾಪಿಸುತ್ತಾರೆ:—**ಜಗದ್ವ್ಯಾಪಾರಂಪಣ್ಣವಧಿಕೃತನಾನ ಈಶ್ವರನುಕ್ಕುಮ್** - ಜಗದ್ವ್ಯಾಪಾರವನ್ನು ನಡೆಸುವ ಅಧಿಕಾರವುಳ್ಳ ಸರ್ವೇಶ್ವರನಿಗೂ, **ಮುಕ್ತರುಕ್ಕುಂಪೋಲೆ** - ಮುಕ್ತರಿಗೂ ಭೋಗವು ಹೇಗೆ ಏಕರೂಪವೋ, ಹಾಗೆಯೇ ಇಲ್ಲಿಯೂ ಈ ಕೈಙ್ಕರ್ಯಗಳಲ್ಲಿ ಅಧಿಕಾರಿವಿರುವವರಿಗೂ ಅವರನ್ನು ಆಶ್ರಯಿಸಿರುವ ಅನಧಿಕಾರಗಳಿಗೂ ಭೋಗವು ಏಕರೂಪವು ಆದುದರಿಂದ ಈ ವಿಷಯದಲ್ಲಿ ಸಂದೇಹವು ಬೇಕಿಲ್ಲವೆಂಬ ಭಾವವು. ಹಾಗೆ ಈ ಅಧಿಕಾರಿಗಳಿಗೂ ಅನಧಿಕಾರಿಗಳಿಗೂ ಭೋಗವು ಏಕರೂಪವೆಂದು ಶ್ರೀ ವ್ಯಾಸ ಮಹರ್ಷಿಯು ಹೇಳಿರುತ್ತಾರೆಂದು ಭಾರತ ಪ್ರಮಾಣವನ್ನು ಮುಂದೆ ಉದಾಹರಿಸುತ್ತಾರೆ. "**ಧರ್ಮಃ** - ಧರ್ಮವು, ಶಾಸ್ತ್ರದಲ್ಲಿ ವಿಧಿ ನಿಷೇಧರೂಪದಲ್ಲಿ ಹೇಳಿರುವದು, ಶಾಸ್ತ್ರವಿಹಿತವಾದ ಅನುಷ್ಠಾನವು, **ಶ್ರುತೋವಾ** - ಉಪದೇಶರೂಪದಲ್ಲಿ ಕೇಳಲ್ಪಟ್ಟರಾಗಲಿ, **ದೃಷ್ಟೋವಾ** - ಅಂತಹ ಕೈಙ್ಕರ್ಯವು ನೋಡಲ್ಪಟ್ಟರಾಗಲಿ, **ಸ್ಮೃತೋವಾ** - ಹಿಂದೆ ನಡೆದುದನ್ನು ಸ್ಮರಿಸಲ್ಪಟ್ಟರಾಗಲಿ, **ಕಥಿತೋಪಿವಾ** - ಹೇಳಲ್ಪಟ್ಟರಾಗಲಿ, **ಅನುಮೋದಿತೋವಾ** - ಬಹು ಚನ್ನಾಗಿ ನಡೆಯಿತು ಎಂದು ಅದನ್ನು ಅಙ್ಗೀಕರಿಸಲ್ಪಟ್ಟರಾಗಲಿ, **ಹೇ ರಾಜೇಂದ್ರ** - ಓರಾಜಶ್ರೇಷ್ಠನೇ, **ಸದಾ** - ಯಾವಾಗಲೂ, **ಪುರುಷಂ** - ಅಧಿಕಾರಿಯನ್ನು, **ಪುನಾತಿ**- ಪವಿತ್ರೀಕರಿಸುತ್ತದೆ. ಪಾಪಗಳು ತೊಲಗುವದರಿಂದ ಪರಿಶುದ್ಧನಾಗುತ್ತಾನೆ. ಧರ್ಮಾನುಷ್ಠಾನವನ್ನು ತಾನೇ ಮಾಡಬೇಕೆಂಬ ಆವಶ್ಯಕತೆಯು ಇರುವದಿಲ್ಲವು, ಅದನ್ನು ಕೇಳಿದರೂ ಸರಿಯೇ, ಅಥವಾ ಕಣ್ಣಿನಿಂದ ನೋಡಿದರೂ ಸರಿಯೇ, ಅದನ್ನು ಸ್ಮರಿಸಿದರೂ ಸರಿಯೇ, ಅದನ್ನು ಕುರಿತು ಪಠಿಸಿದರೂ ಸರಿಯೇ, ಅಥವಾ ಅದನ್ನು ಅಙ್ಗೀಕರಿಸಿದರೂ ಸರಿಯೇ ಈತನಿಗೆ ಪಾಪಪರಿಹಾರಮೂಲಕ ಪವಿತ್ರತೆ ಯುಂಟಾಗುತ್ತದೆಂದು ಹೇಳಲ್ಪಟ್ಟಿರುತ್ತದೆ. **ಎಙ್ಗಿರ ಪಾವನತ್ವಂಪೋಲೆ** ಎಂಬ ಪ್ರಮಾಣದಲ್ಲಿ ಹೇಳಲ್ಪಟ್ಟಿರುವ ಪಾವನತ್ವವು ಈ ಎಲ್ಲರಿಗೂ

(೧) ಭಾರ. ಆಶಂ. ೯೬, ೩೧.

ಹೇಗೆ ಸಮವೋ, ಹಾಗೆಯೇ, ಭೋಗ್ಯತ್ವವೂ ಏಕರೂಪವಾಗ - ಈ ಭಗವದಾರಾಧನಾದಿಗಳಲ್ಲಿ ಅಧಿಕಾರವಿರುವವರಿಗೂ, ಅಧಿಕಾರ ವಿಲ್ಲದವರಿಗೂ ಭೋಗ್ಯತ್ವವು ಸಮವೆಂದು ಹೇಳುವದಕ್ಕೇನೂ ಕೊರತೆಯಿಲ್ಲ - ಕುಂದಕವಿಲ್ಲವು. ಆದರೆ ಜ್ಯೋತಿಷ್ಟೋಮ ಯಜ್ಞಾನುಷ್ಠಾನವನ್ನು ಮಾಡುವವನಿಗೆ, ಸ್ವರ್ಗಪ್ರಾಪ್ತಿ ಫಲವುಂಟು, ಅಂಥಾವನನ್ನು ಆಶ್ರಯಿಸಿದವನು ಅದನ್ನು ನೋಡುವದರಮಾತ್ರದಿಂದಲೇ ಸ್ವರ್ಗಪ್ರಾಪ್ತಿ ಹೊಂದುವನೆಂದರೆ ಅಸಂಗತವಲ್ಲವೋ, ಎಂದಾಕ್ಷೇಪ ತಂದರೆ, ಅಲ್ಲಿ ಫಲವು ಮುಖ್ಯ ಕಲ್ಪವಾದ ಅನುಷ್ಠಾನಕ್ಕೆ ಮಾತ್ರವೇ ಹೇಳಿತೇ ವಿನಾ ಅನುಕಲ್ಪವಾದ ನೋಡುವದೇ ಮೊದಲಾದುದಕ್ಕೆ ಹೇಳಲಿಲ್ಲವು ಆದುದರಿಂದ ನೋಡುವವರಿಗೆ ಸ್ವರ್ಗವಿಲ್ಲವು. ಆದರೆ ಪಾವನತ್ವವೇನೋ ಉಂಟು. ಇದು ಪ್ರಪನ್ನ ವಿಷಯವು, ಅಂತಹ ಸ್ವರ್ಗಪ್ರಾಪ್ತಿ ವಿಷಯವಾದುದಲ್ಲವು. ಪ್ರಮಾಣವು ಪಾವನತ್ವಫಲ ವಿಷಯವಾಗಿ ಅದು ಎಲ್ಲರಿಗೂ ಏಕರೂಪವೆಂದು ಹೇಳುವದರಿಂದ, ನಮಗೆ ಅದು ಗ್ರಾಹ್ಯವೆಂದು ಭಾವಿಸತಕ್ಕದ್ದು. ಆದುದರಿಂದ ಭಗವದಾರಾಧನಾದಿ ನಿತ್ಯನೈಮಿತ್ತಿಕಗಳನ್ನು ಅನಧಿಕೃತರು ತಾವೇ ಮಾಡದಿದ್ದರೂ, ಹಾಗೆ ಅನುಷ್ಠಿಸುವ ಮಹಾ ಭಾಗವತರನ್ನಾಶ್ರಯಿಸಿ, ಅವರುಗಳು ಮಾಡುವವನ್ನೇ ಅನುಮೋದಿಸಿ ಅದಕ್ಕೆ ಬೇಕಾದ ಸಹಾಯಗಳನ್ನು ಅವರ ಆಜ್ಞಾಧಾರಿಗಳಾಗಿ ಶಿರಸಾವಹಿಸಿ, ನಡೆಸುವದರಿಂದಲೇ ಅಂತಹ ಫಲವೇ ಎಂದರೆ ಅನರ್ಥನಿವೃತ್ತಿಯು ಉಂಟಾಗುತ್ತದೆಂದು ಸಮರ್ಥಿಸಿ ಸಪ್ರಮಾಣವಾಗಿ ಉಪದೇಶಿಸಿರುತ್ತಾರೆ.

ಹೀಗೆ ಭಗವದಾರಾಧನೆಯಲ್ಲಿ ಸ್ತ್ರೀ ಶೂದ್ರಾದಿಗಳಿಗೆ ಅಧಿಕಾರವಿಲ್ಲದಿದ್ದರೂ ಪತಿವ್ರತಾಸ್ತ್ರೀಯು ಪತಿಯನ್ನೇ ಪರದೈವವೆಂದು ಆಶ್ರಯಿಸಿರುವದರಿಂದ, ಪತಿಯು ಅನುಷ್ಠಿಸುವ ಭಗವದಾರಾಧನಾದಿ ನಿತ್ಯನೈಮಿತ್ತಿಕಗಳಿಂದಲೇ ಆಕೆಗೂ ಅನಿಷ್ಟನಿವೃತ್ತಿಯ ಮೂಲಕ ಪಾವನತ್ವವೂ, ಶೂದ್ರಾದಿ ಅನಧಿಕೃತರಿಗೂ ಮಹಾ ಭಾಗವತನನ್ನು ಆಶ್ರಯಿಸಿದರೆ, ಆ ಭಾಗವತನು ಅನುಷ್ಠಿಸುವ ನಿತ್ಯನೈಮಿತ್ತಿಕಗಳಿಂದಲೇ ಅವರಿಗೂ ಪಾವನತ್ವವು ಲಭಿಸುತ್ತದೆಂದು ಸ್ಥಾಪಿಸಲ್ಪಟ್ಟಿತು. ಆದರೆ ಪ್ರಪನ್ನರಾದ ಸ್ತ್ರೀ ಶೂದ್ರಾದಿಗಳಿಗೂ ಭಗವದನುಸ್ಮರಣೆಯು ಅವಶ್ಯಕವು ಧ್ಯೇಯೋ ನಾರಾಯಣಸ್ಸದಾ ಎಂದು ಹೇಳಿರುವದು ಸಾರ್ವತ್ರಿಕವಾಗಿ ಹೇಳಿರುವಂತಾದ್ದು. ಅವರಲ್ಲಿ ಎಲ್ಲರಿಗೂ ಅಧಿಕಾರವುಂಟು. ಈ ಧ್ಯಾನವು ಅಷ್ಟಾಕ್ಷರ ಮೂಲಕವಾಗಿ ಮಾಡುವದೇ ಪ್ರಶಸ್ತವು. ಆದರೆ ಈ ಅನಧಿಕಾರಿಗಳಿಗೆ ಮೂಲಮಂತ್ರೋಚ್ಚಾರಣೆಯು ಕೂಡಲ್ಲವಲ್ಲಾ, ಹೀಗಿರುವಾಗ ಸರ್ವಾಧಿಕಾರವಾದ ಈ ಭಗವದನುಸ್ಮರಣೆಯನ್ನು ಅವರುಗಳು ಯಾವರೀತಿಯಲ್ಲಿ ಮಾಡತಕ್ಕದ್ದೆಂಬುದನ್ನು ಮುಂದೆ ಉಪದೇಶಿಸುತ್ತಾರೆ :—

ಅನಧಿಕೃತ ಪ್ರಪನ್ನೈಃ ಭಗವದನುಸ್ಮರಣಂ ಕಥಂ ಕರ್ತವ್ಯಂ ?

ಅಪ್ಪಡಿಯೇ (೧) “ತಸ್ಮಾತ್ಸಪ್ರಣವಂ ಶೂದ್ರೋ ಮನ್ನಾಮಾನಿ ನಕೀರ್ತಯೇತ್” ಎನ್ರು ಮಹಾ ಭಾರತತ್ತಿಲುಮ್, (೨) ಅಷ್ಟಾಕ್ಷರ ಜಪ ಸ್ತ್ರೀಣಾಂ ಪ್ರಕೃತ್ಯೈವ ವಿಧೀಯತೇ । ನ ಸ್ವರಃ ಪ್ರಣವೋಽಙ್ಗಾನಿ ನಾ

ಅನಧಿಕೃತರಾದ ಪ್ರಪನ್ನರಿಂದ ಭಗವದನುಸ್ಮರಣೆಯು ಹೇಗೆಮಾಡತಕ್ಕದ್ದು ?

ಅಪ್ಪಡಿಯೇ - ಭಗವದಾರಾಧನಾದಿಗಳಲ್ಲಿ ಅಧಿಕೃತರಾದವರಿಗೆ ಪಾಂಚಕಾಲಿಕ ಭಗವದನುಸ್ಮರಣೆ ರಹಸ್ಯಮಂತ್ರಾದಿ ರಹಸ್ಯಗಳ ಮೂಲಕ ಧ್ಯಾನವೂ ಸಹ ಹೇಗೆ ಆವಶ್ಯಕವೋ ಹಾಗೆಯೇ, ಮುಂದೆ ಅನಧಿಕೃತರಾದ ಸ್ತ್ರೀ ಶೂದ್ರಾದಿಗಳಿಗೆ ಭಗವದನುಸ್ಮರಣವು ಆವಶ್ಯಕವೆಂದು ಹೇಳಿ ಭಗವದನುಸ್ಮರಣ ರಸತ್ತುಕ್ಕು - ಭಗವದನುಸ್ಮರಣದಿಂದುಂಟಾಗುವ ಆನಂದಕ್ಕೇನೂ ಅವರಿಗೂ, ಕುರೈಯಿಲ್ಲೈ - ನ್ಯೂನತೆಯಿಲ್ಲವೆಂದು ಹೇಳುತ್ತಾರೆ; ಅದಕ್ಕೆ ಕೆಲವು ಪ್ರಮಾಣಗಳನ್ನುದಾಹರಿಸುತ್ತಾರೆ (೧) ತಸ್ಮಾತ್-ಆಕಾರಣದಿಂದ ಶೂದ್ರನು ಮನ್ನಾಮಾನಿ - ನನ್ನ ನಾಮಗಳನ್ನು, ಅಷ್ಟೋತ್ತರ ಸಹಸ್ರ ನಾಮಾದಿಗಳಲ್ಲಿ, ಸಪ್ರಣವಂ ಪ್ರಣವ ಸಹಿತವಾಗಿ, ನ ಕೀರ್ತಯೇತ್ ಉಚ್ಚರಿಸಬಾರದು ಆತನು, ಹರಿಃ ಓಂ ಎಂದು ಹೇಳಕೂಡದು, ಓಂ ಶ್ರೀಕೃಷ್ಣಾಯನಮಃ, ಓಂ ಶ್ರೀ ರಾಮಾಯನಮಃ ಎಂದೂ ಹೇಳಕೂಡದು, ದೇವರ ನಾಮಗಳನ್ನೇ ಉಚ್ಚರಿಸಬಾರದು ಎಂಬ ಅಭಿಪ್ರಾಯವಲ್ಲವು; ಓಂ ಎಂದು ಪ್ರಣವನೊಂದಿಗೆ ಉಚ್ಚರಿಸತಕ್ಕದ್ದಲ್ಲವೆಂಬ ಭಾವವು” ಎನ್ರು ಭಾರತತ್ತಿಲುಮ್ ಎಂದು ಭಾರತದಲ್ಲೂ (೨) ಮತ್ತು, ಸ್ತ್ರೀಣಾಂ - ಬ್ರಾಹ್ಮಣಾದಿ ತ್ರೈವರ್ಣಿಕ ಸ್ತ್ರೀಯರುಗಳಿಗೆ, ಸುಮ್ಮನೆ ಸ್ತ್ರೀಣಾಂ ಎಂದಿದ್ದರೂ ಹೀಗೆ ಅರ್ಥವನ್ನು ಗೋಬಲೀವರ್ದನ್ಯಾಯದಿಂದ ಮಾಡಿರುತ್ತದೆ, ಏಕೆಂದರೆ ಮುಂದೆ ಸ್ತ್ರೀಣಾಂತು ಶೂದ್ರಜಾತೀನಾಂ ಎಂದು ಶೂದ್ರಸ್ತ್ರೀಯರಿಗೆ ಬೇರೇ ವಿಧಾನವು ಹೇಳಲ್ಪಟ್ಟಿರುತ್ತದೆ, ಅಷ್ಟಾಕ್ಷರ ಜಪಃ - ಮೂಲ ಮಂತ್ರ ಜಪವು, ಪ್ರಕೃತ್ಯೈವ - ಮಂತ್ರವೆಷ್ಟೋ ಅಷ್ಟು ಮಾತ್ರದಿಂದಲೇ ಎಂದರೆ ಸ್ವರದಿಂದ ಉಚ್ಚಾರಣೆಯೂ ಕೂಡದು, ಪ್ರಣವದಿಂದ ಉಚ್ಚಾರಣೆಯೂ ಕೂಡದೆಂಬುದು ತಾತ್ಪರ್ಯವು. ಇದನ್ನೇ ಮುಂದೆ

(೧) ಭಾರ. ಅಶಂ.೧೧೫. ೧೪. (೨) ನಾರದೀಯೇ,

ಷ್ಯನ್ಯ ವಿಧಯಸ್ತಥಾ । ಸ್ತ್ರೀಣಾಂತು ಶೂದ್ರಜಾತೀನಾಂ ಮಂತ್ರ ಮಾತ್ರೋಕ್ತಿ ರಿಷ್ಯತೇ" ಎನ್ರು ನಾರದೀಯಾದಿಗಳಿಲುಮ್, (೩) "ನಮೋ ನಾರಾಯಣೇತ್ಯುಕ್ತ್ವಾ ಶ್ವಪಾಕಃ ಪುನರಾಗಮತ್" ಎನ್ರು ಶ್ರೀ ವರಾಹ ಪುರಾಣತ್ತಿಲುಮ್, (೪) "ನಾಯಿನಾಲ್ ನಮೋ ನಾರಣಾವೆನ್ನ ಮತ್ತ ಕೆತ್ತಿಡಕ್ಕೈಗಳ್ಳೈ ಕ್ಕೊಳ್ಪ್ಪಿ" ಎನ್ರುಮ್, (೫) ನಾನುಂ ಶೊಲ್ಲಿಲ್ ನಮೋ

ವಿವರಿಸುತ್ತಾರೆ :—**ನ ಸ್ವರಃ ಪ್ರಣವೋಽಜ್ಗಾನಿ** - ಉದಾತ್ತಾದಿ ಸ್ವರದೊಂದಿಗೆ ಉಚ್ಚಾರಣೆಯಿಲ್ಲದೆಯೂ, ಪ್ರಣವವಿಲ್ಲದೆಯೂ, ಅಙ್ಗನ್ಯಾಸ ಕರನ್ಯಾಸಾದಿಗಳಿಲ್ಲದೆಯೂ ಇರತಕ್ಕದ್ದು, **ತಥಾ** - ಹಾಗೆಯೇ, **ನಾಪ್ಯನ್ಯ ವಿಧಯಃ** - ಬೇರೆ ಇನ್ನು ಯಾವ ವಿಧಿಗಳೂ ಇಲ್ಲವು, ಋಷಿ ಛಂದಸ್ಸುಗಳೂ ಇಲ್ಲವು ಎಂಬ ಭಾವವು. ಈ ಪ್ರಮಾಣವನ್ನೇ ಮುಂದೆ ಪುನಃ ಮೂಲಮಂತ್ರಾಧಿಕಾರದಲ್ಲೂ ಉದಾಹರಿಸಿರುತ್ತಾರೆ. ಅಲ್ಲಿ ಮಂತ್ರಗಳ ಉಪದೇಶವು ವೈದಿಕ, ವೈದಿಕ ತಾಂತ್ರಿಕ, ತಾಂತ್ರಿಕವೆಂದು ಮೂರು ವಿಧವೆಂದೂ, ಬ್ರಾಹ್ಮಣನಿಗೆ ವೈದಿಕವಾಗಿಯೂ, ಕ್ಷತ್ರಿಯರಿಗೆ ವೈದಿಕ ತಾಂತ್ರಿಕವಾಗಿಯೂ, ವೈಶ್ಯ ಶೂದ್ರರಿಗೆ ತಾಂತ್ರಿಕವಾಗಿಯೂ ಇರತಕ್ಕದ್ದೆಂದು ಪಾಂಚರಾತ್ರದಲ್ಲಿ ಹೇಳಲ್ಪಟ್ಟಿದೆಯೆಂದು ತಿಳಿಸಿ, ಮೂಲಮಂತ್ರವು ಪ್ರಣವ ಚತುರ್ಥಿಗಳಿಲ್ಲದುದಾದರೆ ಮಂತ್ರಾಧಿಕಾರವಿಲ್ಲದ ಸರ್ವರಿಗೂ ಉಪಯುಕ್ತವಾದುದಾಗುತ್ತದೆಂದು ಹೇಳಲ್ಪಟ್ಟಿರುತ್ತದೆ." **ಎನ್ರು** - ಎಂಬದಾಗಿ, **ನಾರದೀಯಾದಿಗಳುಮ್** ನಾರದೀಯ ಪುರಾಣವೇ ಮೊದಲಾದವುಗಳಲ್ಲೂ (೩) **ನಮೋ ನಾರಾಯಣೇತ್ಯುಕ್ತ್ವಾ** - ಪ್ರಣವ ಚತುರ್ಥಿಗಳಿಲ್ಲದೆ ಸ್ವರದಿಂದಲೂ ಉಚ್ಚರಿಸದೆ ಸುಮ್ಮನೆ **ನಮೋನಾರಾಯಣಾ** ಎಂದು ಇಷ್ಟುಮಾತ್ರ ಉಚ್ಚರಿಸಿದರೆ, **ಶ್ವಪಾಕಃ**-ನಾಯಿ ಮಾಂಸವನ್ನು ತಿನ್ನುವ ಚಂಡಾಲನೂ ಕೂಡ, **ಪುನರಾಗಮತ್** - ಪುನಃ ಹಿಂತಿರುಗಿಬಂದನು, ಹಾಗೆ ಮಂತ್ರವನ್ನು ಉಚ್ಚರಿಸಿದುದರಿಂದ ಅಧೋಗತಿಯಿಂದ ಹಿಂತಿರುಗಿದನು ಎಂಬ ಭಾವವು," **ಎನ್ರು** - ಎಂಬದಾಗಿ, **ಶ್ರೀವರಾಹ** ಪುರಾಣದಲ್ಲೂ, (೪) "**ನಾಯಿನಾಲ್**" ಇತ್ಯಾದಿ-ಇದರ ಅರ್ಥ ತಾತ್ಪರ್ಯಗಳಿಗೆ ೧೮೫೭-೮ ನೆಯ ಪುಟಗಳನ್ನು ನೋಡಿ. **ಎನ್ರುಮ್**-ಎಂಬದಾಗಿಯೂ (೫) ತಿರುಮಂಗೈಯಾಳ್ವಾರ್ ಅನುಗ್ರಹಿಸಿರುವ ಪೆರಿಯ ತಿರುಮೊಳಿ ಆರಾಂಶತ್ತು ಪತ್ತಾಂ ತಿರುಮೊಳಿಯ ಪ್ರತಿಯೊಂದು ಪಾಶುರದಲ್ಲೂ ."ನಾನುಮ್ ಶೊಲ್ಲಿಲ್ ನಮೋ ನಾರಾಯಣನೋ" ಎಂದು ಪಲ್ಲವಿರೂಪದಲ್ಲಿ ಇರುತ್ತದೆ.

---

(೩) ವರಾಹಪುರಾಣ ೧೩೯-೫೩ (೪) ಪೆರಿ. ತಿರು. ೪. ೫. ೬. (೫) ಪೆರಿ. ೬. ೧೦. ೧

ನಾರಾಯಣನೋ" ಎನ್ರುವರ್, ಶೊಲ್ಲುಗಿರಪಡಿಯೇ ತಿರುಮಂತ್ರಮಾಗಿರ ಎಟ್ಟುಕ್ಕಣ್ಣಾನ ಕರುಪ್ಪಿಲೇ ವೇರ್ ಪ್ಪತ್ತುವರ್ ತಲೈಯಾಡೈಯುವರ್ ಕಳಿನ್ದಾಲ್ ನಡುವುಳ್ಳ ಅಂಶಮ್ ಸರ್ವೋಪಜೀವ್ಯಮಾಗಿರಾಪ್ಪೋಲೆ ಪ್ರಪತ್ತಿ ನಿಷ್ಠರೆಲ್ಲಾರ್ಕ್ಕುಮ್ ಸರ್ವಕಾಲತ್ತಿಲುಮ್ ಭಗವದನು

ಹೀಗೆ "**ನಾಮುಮ್ ಶೊಲ್ಲಿಲ್**" ಪರಮಪುರುಷನ ನಾಮಗಳನ್ನು ಹೇಳಲಾಗಿ ಆತನು ಎಂತವನೆಂದರೆ, ಶ್ರಿಯಃಪತಿಯಾಗಿ, ಆಶ್ರಿತಸುಲಭನಾಗಿ ಅತಿ ಮಾನುಷ ಚೇಷ್ಟಿತೆಗಳನ್ನು ನಡೆಸುವ ಸಾಮರ್ಥ್ಯವುಳ್ಳವನಾಗಿ, ವಿರೋಧಿನಿರಸನ ಶೀಲನಾಗಿ ಉಭಯವಿಭೂತಿಯುಕ್ತನಾಗಿರುವ ಪರಮಪುರುಷನ ನಾಮವನ್ನು ಹೇಳಿದರೆ ನಮಗೆ ಇಷ್ಟಾರ್ಥಸಿದ್ಧಿಯುಂಟು. ಅದನ್ನು ಹೇಳುವದು ಹೇಗೆ ಎಂದರೆ "**ನಮೋ ನಾರಾಯಣನೋ**" ಮೂಲಮಂತ್ರದಲ್ಲಿ ಹೇಳಿರುವ "**ನಮೋನಾರಾಯಣ**" ಎಂಬದಾಗಿ ಎಂಬ ತಾತ್ಪರ್ಯವು. ಮೊದಲು ಪಾಶುರದಲ್ಲಿ **ಕಂಡುಕೊಣ್ಡೇನ್ ನಾರಾಯಣಾವೆನ್ನುಮ್ ನಾಮಮ್** " ಎಂಬ ಅಭಿಪ್ರಾಯವೇ ಇಲ್ಲಿಯೂ ಸ್ಮಾರಿತವು" **ಶೊಲ್ಲುಗಿರಪಡಿಯೇ** - ಹೇಳಿರುವ ಮೇರೆಗೆ, **ತಿರುಮಂತ್ರಮಾಗಿರ** - ಮೂಲಮಂತ್ರವಾಗಿರುವ, **ಎಟ್ಟುಕ್ಕಣ್ಣಾನ** - ಎಂಟು ಗೆಣ್ಣುಗಳುಳ್ಳ, **ಕರುಪ್ಪಿಲೇ** - ಕಬ್ಬಿನಲ್ಲಿ, **ವೇರ್ ಪತ್ತುಮ್** - ಮೂಲಭಾಗವನ್ನೂ, ಬುಡವನ್ನೂ, **ತಲೆಯಾಡೈ** - ಅಗ್ರ ಭಾಗವಾದ ಸೋಗೆಯನ್ನೂ, **ಕಳಿನ್ದಾಲ್** - ತೆಗದುಹಾಕಿದರೆ, **ನಡುವುಳ್ಳಅಂಶಮ್** - ಮಧ್ಯಭಾಗವು, **ಸರ್ವೋಪಜೀವ್ಯಮಾಗಿರಾಪ್ಪೋಲೆ** - ಸಮಸ್ತರಿಗೂ ಸತ್ತ್ವವನ್ನು ಕೊಡುವ ರೀತಿಯಲ್ಲಿ ಭೋಗ್ಯವಾಗಿರುವಹಾಗೆ, **ಪ್ರಪತ್ತಿ ನಿಷ್ಠರೆಲ್ಲಾರ್ಕ್ಕುಮ್** - ಪ್ರಪತ್ತಿಯನ್ನನುಷ್ಠಿಸುವರೆಲ್ಲರಿಗೂ, ಸ್ತ್ರೀ ಶೂದ್ರಾದಿಗಳೆಲ್ಲರಿಗೂ ಎಂಬಭಿಪ್ರಾಯವು, ಭಗವದನುಸ್ಮರಣದಿಂದುಂಟಾಗುವ, ರಸತ್ತುಕ್ಕು-ಆನಂದಕ್ಕೆ ಎಂದರೆ ಆನಂದಪ್ರಾಪ್ತಿಗೆ ವಿರೋಧವಿಲ್ಲವು. ಇಲ್ಲಿ ತಿರುಮಂತ್ರವು ಅಮೃತವೆಂದು ಹೇಳಿಸಿಕೊಳ್ಳುವ ಮೋಕ್ಷಾನಂದಪ್ರಾಪ್ತಿಯನ್ನುಂಟುಮಾಡುವದರಿಂದ ಸ್ವಾದುತಮವಾದ ಕಬ್ಬಿಗೆ ಹೋಲಿಸಲ್ಪಟ್ಟಿರುತ್ತದೆ. ಅದು ಅಷ್ಟಾಕ್ಷರ ಮಂತ್ರವಾದುದರಿಂದ ಎಂಟು ಗೆಣ್ಣುಗಳುಳ್ಳದ್ದು; ಸರ್ವರಿಗೂ ಭೋಗ್ಯವಾಗುವದಕ್ಕೆ ಕೆಳಗಿನ ಕಠಿಣವಾದ ಗಂಟಿನ ಭಾಗವನ್ನು ಮೇಲಿನ ರುಚಿಯಿಲ್ಲದ ತೆಂಡೆಭಾಗವನ್ನೂ ಕಬ್ಬಿನಲ್ಲಿ ತೆಗದುಹಾಕಿದರೆ, ಸರ್ವರಿಗೂ ಹೇಗೆ ಭೋಗ್ಯವಾದುದಾಗುತ್ತದೆಯೋ, ಹಾಗೆಯೇ ಮೂಲಮಂತ್ರದ ಮೂಲಭಾಗವಾದ ಪ್ರಣವವನ್ನೂ, ಅಗ್ರಭಾಗವಾದ ಚತುರ್ಥಿಯನ್ನೂ ತೆಗದುಹಾಕಿದರೆ, ಸರ್ವಾಧಿಕಾರವುಳ್ಳದಾಗುತ್ತದೆಂಬ ಭಾವವು. ಪ್ರಣವಚತುರ್ಥಿ

ಸ್ಮರಣರಸತ್ತ್ರಕ್ಕೆ ವಿರೋಧವಿಲ್ಲ. ಸಪರಿಕರವಾದ ವಿಲಕ್ಷಣಭಕ್ತಿಯೋಗವಾಗಲಿರೆ ಶಿಲರ್ಕ್ಕೆ ವಿರೋಧವುಳ್ಳದು. ಕ್ಷಣಮಾತ್ರ ಸಾಧ್ಯವಾದ ಪ್ರಪ

ಗಳಿಲ್ಲದಿದ್ದರೆ ವಿರೋಧವಿಲ್ಲ ಎಂದು ಹೇಳಿರುವದರಿಂದ, ಪ್ರಣವ ಚತುರ್ಥಿಗಳು ಇದ್ದರೆ, ಪಾಂಚರಾತ್ರಾದಿ ಅನೇಕ ಪ್ರಮಾಣಗಳಿಗೆ ವ್ಯತ್ಯಸ್ತವಾದುದರಿಂದ ಈ ಅಧಿಕಾರಿಗಳಿಗೆ ವಿರೋಧವೆಂಬ ತಾತ್ಪರ್ಯವು; ಸ್ತ್ರೀ ಶೂದ್ರಾದಿಗಳಿಗೆ ಪ್ರಣವವು ಕೂಡದೆಂಬುದಕ್ಕೆ ಮಹಾಭಾರತ ವಚನವನ್ನೂ, ಸ್ವರ ಕೂಡದೆಂಬುದಕ್ಕೆ ನಾರದೀಯ ವಚನವನ್ನೂ, ಪ್ರಣವಚತುರ್ಥಿಗಳಿಲ್ಲದಿದ್ದರೆ ಸರ್ವವಿಷಯವಾಗುತ್ತದೆಂಬುದಕ್ಕೆ ಶ್ರೀ ವಾರಾಹ ವಚನವನ್ನೂ, ಉದಾಹರಿಸಿ, ಆಳ್ವಾರುಗಳಭಿಪ್ರಾಯವೂ ಹಾಗೆಯೇ ಎಂಬುದಕ್ಕೆ ಶ್ರೀ ತಿರುಮಂಗೈಯಾಳ್ವಾರವರ ಪಾಶುರವನ್ನು ಉದಾಹರಿಸಿರುತ್ತಾರೆ. ಭಕ್ತಿಯೋಗಕ್ಕೀಗ ತ್ರೈವರ್ಣಿಕರೇ ಆಗಿರಬೇಕೆಂಬ ಆವಶ್ಯಕವೆಂದೂ ಇತರರಿಗೆ ಕೂಡದೆಂಬ ವಿರೋಧೋಕ್ತಿಯುಂಟು; ಈ ಪ್ರಪತ್ತ್ಯುಪಾಯದಲ್ಲಾದರೋ ಹಾಗಿಲ್ಲವು; ಭಗವದನುಸ್ಮರಣರೂಪ ಆನಂದವು ಸಾರ್ವತ್ರಿಕವಾಗಿ ಉಂಟು. ಈ ಸರ್ವೋಪಜೀವ್ಯವಾಗಿರುವ ವೈಲಕ್ಷಣ್ಯವು ಭಕ್ತಿಯೋಗಕ್ಕಿಲ್ಲವೆಂಬ ಭಾವವು. **ಸರ್ವಕಾಲತ್ತಿಲುಮ್** ಎಂದು ಹೇಳಿರುವದು ದೇಹಯಾತ್ರಾದಿ ಆವಶ್ಯಕಗಳಾದ ಕಾರ್ಯಗಳಿಗೆ ಬೇಕಾದ ಕಾಲವಲ್ಲದ ಮಿಕ್ಕ ಎಲ್ಲಾ ಕಾಲಗಳಲ್ಲೂ ಭಗವದನುಸ್ಮರಣಮಾಡುವದು ಪ್ರಪನ್ನನಿಗೆ ಉಚಿತವಾದುದೆಂದು ಇದರಿಂದ ಹೇಳಲ್ಪಟ್ಟಿತು. ಹಾಗೆಯೇ ಶ್ರೀ ಭಾಷ್ಯಕಾರರಿಗೆ ಸರ್ವಲೋಕಶರಣ್ಯನಾದ ಶ್ರೀ ರಂಗನಾಥನು ಉಪದೇಶಿಸಿದನೆಂದು ಹೇಳುತ್ತಾರೆ. ಹೀಗೆ ಭಗವದನುಸ್ಮರಣವು "**ವಿದ್ವಾಂಸ ಏವ ಮಾನಸೇ ರಮನ್ತೇ**" ಎಂಬ (ತೈ. ನಾ) ಶ್ರುತಿವಾಕ್ಯದ ಹಾಗೆ, ಪರಮಾನಂದಪ್ರದವೆಂದು ಹೇಳುವದಕ್ಕಾಗಿಯೇ, **ಭಗವದನುಸ್ಮರಣರಸತ್ತ್ರಕ್ಕೆ** ಎಂಬ ಪ್ರಯೋಗವು. ಈ ಸ್ವತಂತ್ರಪ್ರಪತ್ಯನುಷ್ಠಾನಮಾಡಿದ ಸಮಸ್ತ ಪ್ರಪನ್ನರೂ ಈ ಭಗವದನುಸ್ಮರಣವನ್ನು ಪ್ರಣವಚತುರ್ಥಿಗಳಿಲ್ಲದ ಮೂಲ ಮಂತ್ರ ಜಪದಿಂದ ಮಾಡಬಹುದು. ಇದೀಗ ಮಹತ್ತಾದ ಉಪಕಾರವು. ಈ ಅನುಕೂಲವು ಭಕ್ತಿಯೋಗಕ್ಕೆ ಇಲ್ಲವೆಂದೂ ತ್ರೈವರ್ಣಿಕರು ಮಾತ್ರವೇ ಸಪರಿಕರವಾದ ಭಕ್ತಿಯೋಗವನ್ನವಲಂಬಿಸತಕ್ಕದ್ದೇ ವಿನಾ, ಇತರರು ಅನುಷ್ಠಿಸಿದುದಾದರೆ ವಿರೋಧವೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ:—**ಸಪರಿಕರವಾದ** - ಶ್ರವಣಮನನಾದಿ ಅಂಗಗಳಿಂದ ಸೇರಿದ, ವಿಲಕ್ಷಣವಾದ, ಏತಕ್ಕೆ ವಿಲಕ್ಷಣವೆಂದರೆ "**ಭಜನಸುಖನೈಕಸ್ಯ ವಿಪುಳಂ**" ಎಂದು ಹೇಳಿರುವ ಹಾಗೆ ತೈಲಧಾರಾವಚ್ಛಿನ್ನ ಸತತ ಧ್ಯಾನದಿಂದ ಉಂಟಾಗತಕ್ಕ ಆನಂದವು ಅಪನ್ಯಸವಾದುದು, ಆದುದರಿಂದ

ದನಂ, ಸಿದ್ಧಮಾನವಳವಿಲುವರ್, (೧) "ದ್ವಯಮರ್ಥಾನುಸಂಧಾನೇನ ಸಹ ಸದೈವಂ ವಕ್ತಾ" ಎನ್ರು ಶರಣ್ಯ ನರುಳಿ ಚೆಯ್‌ದಾನಿರೇ.

ವಿಲಕ್ಷಣವಾದ **ಭಕ್ತಿಯೋಗವೀಗ ಶಿಲರ್ಕ್ಕು** - ಕೆಲವರಿಗೆ ಎಂದರೆ ಸ್ತ್ರೀ ಶೂದ್ರಾದಿಗಳಿಗೆ, ವಿರೋಧವುಳ್ಳದುದು ಇಂತಹ ಭಗವಧ್ಯಾನರೂಪ ಅನುಸ್ಮರಣೆಯಲ್ಲಿ ಸಮಸ್ತ ಪ್ರಪನ್ನರಿಗೂ ಅಧಿಕಾರ ಉಂಟೆಂದೂ, ಅದನ್ನು ಪ್ರಣವ ಚತುರ್ಥಿರಹಿತ ಮೂಲಮಂತ್ರ ಜಪದಿಂದ ಮಾತ್ರವೇ ಅಲ್ಲದೆ, ದ್ವಯಮಂತ್ರೋಚ್ಚಾರಣ ಮೂಲಕವಾಗಿಯೂ ನಡೆಸಬಹುದೆಂದೂ, ಈ ಸಂದರ್ಭದಲ್ಲಿ ಶರಣ್ಯನಾದ ಶ್ರೀರಙ್ಗನಾಥೋಕ್ತಿಯೇ ಇದೆ ಎಂದೂ ಮುಂದಿನ ವಾಕ್ಯದಿಂದ ತಿಳಿಸುತ್ತಾರೆ:— **ಕ್ಷಣಮಾತ್ರಸಾಧ್ಯಮಾನ**- ಅಲ್ಪಕಾಲದಲ್ಲಿ ಸಕೃದನುಷ್ಠಾನದಿಂದ ಸಾಧ್ಯವಾದ ಇಲ್ಲಿ ಕ್ಷಣವೆಂಬುದು ಬೌದ್ಧನು ಹೇಳುವ ಕ್ಷಣವಲ್ಲವು, ಅಲ್ಪಕಾಲವೆಂಬರ್ಥವು; ಏಕೆಂದರೆ ಪ್ರಪದನಾನುಷ್ಠಾನವು ಬೌದ್ಧನು ಹೇಳುವ ಕ್ಷಣಕಾಲದಲ್ಲಿ ಆಗುವದಿಲ್ಲವು. **ಪ್ರಪದನಂ**-ಸ್ವತಂತ್ರ ಪ್ರಪತ್ತಿಯು, **ಸಿದ್ಧಮಾನ ವಳಿವಿಲುವರ್**- ಸಿದ್ಧಿಸಿ ಈತನು ಕೃತ ಕೃತ್ಯನೆಂದು ಹೇಳಿಸಿಕೊಂಡರೂ ಉತ್ತರಕೃತ್ಯವಾಗಿ, ಭಗವದನುಸ್ಮರಣವೂ ಈ ಕೃತಕೃತ್ಯನಾದ ಪ್ರಪನ್ನನಿಗೆ ಆವಶ್ಯಕವೆಂದು ಹೇಳುತ್ತಾರೆ, "**ಏವಂ** - ಈ ಪ್ರಕಾರವಾಗಿ ವಿರಕ್ತಿಭಾವದಿಂದ ಐಹಿಕದಲ್ಲಿ ಮಮತೆಯನ್ನು ತೊರೆದು, ಭಗವಂತನನ್ನು ಸ್ಮರಿಸುತ್ತಾ, **ಸದಾ** - ಯಾವಾಗಲೂ ಎಂದರೆ ತನಗೆ ನಿರ್ವಾಹವಿಲ್ಲದೆ ದೇಹಯಾತ್ರೆಗೆ ಬೇಕಾದ ಕಾಲವೇನು, ಈತನಿಗೆ ನಿಯತಕರ್ಮಗಳ ಅನುಷ್ಠಾನವೇನು, ಇಂತಹವುಗಳಿಗೆ ಅನ್ವಯಿಸಿ ಮಿಕ್ಕ ಎಲ್ಲಾ ಕಾಲದಲ್ಲೂ ಎಂಬರ್ಥವು, **ಅರ್ಥಾನುಸಂಧಾನೇನ ಸಹ** - ಮಂತ್ರದಲ್ಲಿ ಬೋಧಿತವಾದ ಸಮಸ್ತ ಅರ್ಥಗಳನ್ನು ತಿಳಿದು ಅನುಸಂಧಾನದೊಡನೆ **ದ್ವಯಂ** - ದ್ವಯಮಂತ್ರವನ್ನು, **ವಕ್ತಾ** - ಉಚ್ಚರಿಸುವವನಾಗಿ" **ಎನ್ರು** ಎಂಬದಾಗಿ, **ಶರಣ್ಯರ್** - ಸರ್ವಲೋಕ ಶರಣ್ಯನಾದ ಶ್ರೀರಙ್ಗನಾಥನು, **ಅರುಳಿ ಚೆಯ್‌ದಾನಿರೇ** - ಶ್ರೀಭಾಷ್ಯಕಾರರವರಿಗೆ ಪರಮಕೃಪಯಾ ಉಪದೇಶಿಸಿದನಲ್ಲವೇ? ಶ್ರೀಯತಿವರ್ಯರು ಶ್ರೀರಙ್ಗನಾಥನನ್ನು ಕುರಿತು ಮಾಡಿದ ಪ್ರಶ್ನೆಗೆ ಸರ್ವೇಶ್ವರನು ದಯಪಾಲಿಸಿದ ಉತ್ತರವು. ಹೀಗೆ ದ್ವಯಮಂತ್ರಾರ್ಥಾನುಸಂಧಾನದೊಂದಿಗೆ ಸದಾ ದ್ವಯಮಂತ್ರವನ್ನು ಉಚ್ಚರಿಸುತ್ತಾ, ತನ್ನನ್ನೇ ನಿರಂತರ ಧ್ಯಾನಿಸುತ್ತಾ "**ಅತ್ರೈವ ಶ್ರೀರಙ್ಗೇ ಸುಖಮಾಸ್ವ**" ದೇಹಪಾತದವರೆಗೆ ಈ ಶ್ರೀರಙ್ಗದಲ್ಲೇ ಸುಖದಿಂದ ಇದ್ದುಬಿಡು ಎಂದು ಆಜ್ಞಾಪಿಸಿದರು. ಈಪ್ರ

---

(೧) ಶರಣಾಗತಿ ಗದ್ಯಂ.

ದನವು ಕ್ಷಣಮಾತ್ರ ಸಾಧ್ಯವೆಂದು ಹೇಳಿದುದರಿಂದ ಭಕ್ತಿಮಾರ್ಗಕ್ಕಿಂತ ಅತಿ ಸುಲಭೋಪಾಯವಾಗಿ ಸರ್ವಾಧಿಕಾರವಾಗಿರುವ ಪ್ರಭಾವಸೂಚಿತವಾದುದರಿಂದ, ಮುಂದೆ ಪ್ರಭಾವ ವ್ಯವಸ್ಥಾಧಿಕಾರವು ಹೇಳಲ್ಪಡುತ್ತದೆಂಬುದು ಸೂಚಿತವು. ಅದೂ ಅಲ್ಲದೆ ಪ್ರಪನ್ನನು ತನಗೆ ಸ್ವರೂಪವಾದ ಭಗವದನುಸ್ಮರಣಕ್ಕೆ ಪರಿಕರ ರಹಿತ ಮೂಲ ಮಂತ್ರೋಚ್ಚಾರಣೆಯಹಾಗೆ ದ್ವಯವನ್ನೂ ಕೂಡ ಉಚ್ಚರಿಸಬಹು ವೆಂದು ಇದರಿಂದ ಸೂಚಿತವು. ಆದರೆ ಶರಣ್ಯೋಕ್ತಿಯು ಪರಮ ಬ್ರಹ್ಮ ವಿತ್ತಾದ ಶ್ರೀ ಯತಿವರ್ಯರಿಗೆ ಹೇಳಿದುದು ಅದು ಹೇಗೆ ಸರ್ವಾಧಿಕಾರವುಳ್ಳದು ಎಂದು ಹೇಳಲಾದೀತು ಎಂದರೆ ಶ್ರೀ ಯತಿವರ್ಯರೇ ಈ ದ್ವಯಮಂತ್ರದ ಉಪದೇಶವನ್ನು ತಮ್ಮ ಗುರುವಾದ ತಿರುಕ್ಕೋಟ್ಟಿಯೂರ್ ನಂಬಿಯವರಿಂದ ಹೊಂದಿದ ಒಡನೆಯೇ ತಮ್ಮನ್ನು ಆಶ್ರಯಿಸಿದ ಸಮಸ್ತ ಪ್ರಪನ್ನರಿಗೂ ಉಪ ದೇಶಿಸಿಬಿಟ್ಟರು. ಆ ಗೋಷ್ಠಿಯಲ್ಲಿ ಬ್ರಾಹ್ಮಣರು ಮಾತ್ರವೇ ಇದ್ದರೆಂದು ಹೇಳಿಲ್ಲವು. ಶ್ರೀ ಯತಿವರ್ಯರ ವಿಶೇಷ ಪ್ರಿಯಶಿಷ್ಯನಾದ ಬ್ರಾಹ್ಮಣೇತರನಾದ ದಾಸಿಯು ಇರಲಿಲ್ಲವೆಂದು ಹೇಳಲು ಪ್ರಮಾಣವಿಲ್ಲವು. ಇದರ ವ್ಯಾಖ್ಯಾನದಲ್ಲಿ ಶ್ರೀ ಸಾರ ಪ್ರಕಾಶಿಕಾ ವ್ಯಾಖ್ಯಾತೃವು ಹೀಗೆ ಅಪ್ಪಣೆ ಕೊಡಿಸಿರುತ್ತಾರೆ:— **"ದ್ವಯಪ್ರತಿಪಾದ್ಯತಯಾಪಿ ಭಗವತೋ ನಿರಂತರಧ್ಯಾನಸ್ಯ ಭಗವತೈವೋಕ್ತತ್ವಾತ್ತದ್ದ್ವಯಸ್ಯ ಸರ್ವಾಧಿಕಾರತ್ವಾತ್ಸರ್ವೇಷಾಂ ಭಗವದ್ಧ್ಯಾನಂ ಸಂಭವತ್ಯೇವ"** ಭಗವಂತನ ನಿರಂತರ ಧ್ಯಾನವನ್ನು ದ್ವಯಮಂತ್ರ ಮೂಲಕವಾಗಿಯೂ ನಡೆಸಬಹುದೆಂದು ತಾನೇ ಸ್ವತಃ ಹೇಳಿರುವದರಿಂದ, ಆ ದ್ವಯ ಮಂತ್ರಕ್ಕೆ ಸರ್ವಾಧಿಕಾರತ್ವವಿರುವದರಿಂದಲೂ ಸಮಸ್ತಪ್ರಪನ್ನರಿಗೂ ಭಗವ ದ್ಧ್ಯಾನವೂ ಉಂಟೇ ಉಂಟೆಂದು ಹೇಳಿರುತ್ತಾರೆ. **ಸದೈವ ವಕ್ತಾ** - ಯಾವಾಗಲೂ ದ್ವಯಮಂತ್ರವನ್ನೇ ಪಠಿಸುವನಾಗಿ ಎಂದು ಹೇಳಿರುವದರಿಂದ ನಿಷಿದ್ಧವಾದ ಮತ್ತು ಕಾಮ್ಯ ಕರ್ಮಗಳಲ್ಲಿ ಸರ್ವಾತ್ಮನಾ ಪ್ರವರ್ತಿಸಕೂಡದೆಂದು ಸ್ಪಷ್ಟ ವಾಗಿ ಹೇಳಿದಂತಾಯಿತು. ಇವು ಪ್ರಪನ್ನರಿಗೆ ಸರ್ವಾತ್ಮನಾ ಸ್ವರೂಪವಿರುದ್ಧವು. ದ್ರವ್ಯಾಪೇಕ್ಷನ್ನಿಟ್ಟುಕೊಂಡು ಮನೆಮನೆಗೆ ಎಂದಿಗೂ ತಿರುಗಕೂಡದು, ಮತ್ತು ದ್ರವ್ಯಾರ್ಜನೆಗಾಗಿ ನಾನಾವಿಧ ಕ್ಲೇಶಗಳನ್ನೂ ಪ್ರವೃತ್ತಿಗಳನ್ನೂ ಇಟ್ಟುಕೊಳ್ಳ ಕೂಡದೆಂದು ಹೇಳಿದಂತಾಯಿತು. **ಸದೈವಂ ವಕ್ತಾ** ಎಂದು ಹೇಳಿರುವದರಿಂದ ಪ್ರಪನ್ನನ ಮುಖವನ್ನು ನೋಡಿದರೆ ಈತನ ಕೆಳಗಿನ ತುಟಿಯು ದ್ವಯೋಚ್ಚಾರಣೆಯಿಂದ ಅದುರುತ್ತಿರಬೇಕೆಂದು ಕೆಲವು ಮಹನೀಯರು ಹೇಳಿರುತ್ತಾರೆ. ಬರೀ ಮಂತ್ರೋಚ್ಚಾರಣೆಯೇ ಸಾಲದು, ಅದರ ಉಪದೇಶಜ್ಞಾನವೂ ಆವಶ್ಯಕ ವೆಂಬುದು **"ದ್ವಯಮರ್ಥಾನುಸಂಧಾನೇನ"** ಎಂಬ ಪ್ರಯೋಗದಿಂದ ವ್ಯಕ್ತವು.

ಭಕ್ತಪ್ರಪನ್ನಯೋಸ್ಸಾಧನತ್ವಫಲತ್ವರೂಪ ಭಗವದ್ಧ್ಯಾನಸ್ಯಾವಶ್ಯಕ ತ್ವಮಿತಿ ಉಪಸಂಹರತಿ.

ಆಗೈಯಾಲ್ "ಧ್ಯೇಯೋನಾರಾಯಣಸ್ಸದಾ" ಎನ್ರುದುವುಮ್ ಯಥಾಧಿಕಾರಂ, ಶಿಲರ್ಕ್ಕು ಉಪಾಯಮಾಗವುಮ್, ಶಿಲರ್ಕ್ಕುಫಲಮಾಗ ವುಮ್, ಕೊಳ್ಳುಗೈಯಾಲಿದು ಸ್ವತಂತ್ರಪ್ರಪತ್ತಿಕ್ಕು ವಿರುದ್ಧಮನ್ರು.

ಇದು ಅನುಷ್ಠಾನಮಂತ್ರವಾದುದರಿಂದ ಗುರುಮುಖೇನ ಇದರರ್ಥದ ಉಪದೇಶ ವನ್ನು ಹೊಂದಿ, ಆ ಗುರುವಿನ ಉಚ್ಚಾರಣಾನುಚ್ಚಾರಣರೂಪವಾಗಿ ಅನುಷ್ಠಿಸ ತಕ್ಕದ್ದೆಂಬುದೂ ಸೂಚಿತವು. ಎಲ್ಲರಿಗೂ ಪ್ರಪತ್ತಿಯಲ್ಲಿ ಅಧಿಕಾರವಿರುವದ ರಿಂದಲೂ, ಇದು ಅನುಷ್ಠಾನಮಂತ್ರವಾದುದರಿಂದಲೂ, ಇದಕ್ಕೆ ಸರ್ವಾಧಿಕಾರತ್ವ ಉಂಟೆಂಬುದು ವ್ಯಕ್ತವು.

ಭಕ್ತಪ್ರಪನ್ನರಿಬ್ಬರಿಗೂ ಸಾಧನತ್ವಫಲತ್ವರೂಪದಲ್ಲಿ ಭಗವದ್ಧ್ಯಾನವು ಆವಶ್ಯಕವೆಂಬುದರ ಉಪಸಂಹಾರವು.

ಆಗೈಯಾಲ್ - ಹೀಗೆ ಭಗವದನುಸ್ಮರಣವು ಪ್ರಪದನಾನುಷ್ಠಾನಮಾಡಿ ಕೃತಕೃತ್ಯನಾದವನಿಗೂ ಕೂಡ ಆವಶ್ಯಕವಾಗಿರುವದರಿಂದ, **ಧ್ಯೇಯೋ ನಾರಾ ಯಣಸ್ಸದಾ" ಎನ್ರುದುವುಮ್**-ಎಂಬುದೂ ಕೂಡ, **ಯಥಾಧಿಕಾರಮ್**-ಧ್ಯಾನಿ ಸುವನಿಗೆ ಅಧಿಕಾರವಿರುವ ರೀತಿಯಲ್ಲಿ, ಎಂದರೆ ತ್ರೈವರ್ಣಿಕನಾಗಿ ಸಮರ್ಥನಾಗಿ ದ್ದರೆ, **ಶಿಲರ್ಕ್ಕು** - ಕೆಲವರಿಗೆ, **ಉಪಾಯಮಾಗುವುಮ್** - ಉಪಾಯರೂಪ ದಲ್ಲಿ ಐಕಾಂತ್ಯದಿಂದ ಉಪಾಸನರೂಪವಾಗಿಯೂ, **ಶಿಲರ್ಕ್ಕು ಫಲಮಾಗುವುಮ್**- ಇನ್ನು ಕೆಲವರಿಗೆ ಸ್ತ್ರೀ ಶೂದ್ರಾದಿಗಳಿಗೂ ಮತ್ತು ಅಸಮರ್ಥರಿಗೂ, **ಫಲಮಾ ಗುವುಮ್** - ಪ್ರಪದನರೂಪವಾಗಿ ತದನಂತರ ಭಗವದನುಸಂಧಾನರೂಪವಾ ಗಿಯೂ, **ಕೊಳ್ಳುಗೈಯಾಲೇ** - ಅಂಗೀಕರಿಸುವದರಿಂದ, **ಇದು** - ಸದಾ ಭಗ ವದನುಸಂಧಾನವು, **ಸ್ವತಂತ್ರಪ್ರಪತ್ತಿಕ್ಕುಮ್ ವಿರುದ್ಧಮನ್ರು** - ವಿರುದ್ಧವಾ ದುದಲ್ಲವು. ಈ **"ಧ್ಯೇಯೋ ನಾರಾಯಣಸ್ಸದಾ"** ಎಂಬ ಮಹಾ ಭಾರತ ವಚನದಿಂದ ಉಪಾಯವು ಭಕ್ತಿಯೋಗವಾದ ಪಕ್ಷದಲ್ಲಿ, ಉಪಾಸನರೂಪದಲ್ಲಿ ಭಗವಧ್ಯಾನವು ವಿಧಿಸಲ್ಪಟ್ಟಿತೆಂದು ತಿಳಿಯತಕ್ಕದ್ದು. ಹಾಗಲ್ಲದೆ ಉಪಾಯವು ಸ್ವತಂತ್ರ ಪ್ರಪತ್ತಿಯಾದರೆ, ಆಗಲೂ ಧ್ಯಾನವು ಉಪಾಯರೂಪದಲ್ಲಿ ಕೃತಕೃತ್ಯ ನಾದ ಪ್ರಯುಕ್ತ ಬೇಕಾಗಿಲ್ಲದಿದ್ದರೂ, ಪ್ರಪನ್ನನಿಗೆ ಸ್ವರೂಪದಾಯಕವಾಗಿ ಭಗ ವದನುಸಂಧಾನವು ಆಯಾ ಅಧಿಕಾರಿಗಳನ್ನು ಕುರಿತು ಹೇಳಿದ ರೀತಿಯಲ್ಲಿ,ಮೂಲ

ಮಂತ್ರ ಅಥವಾ ದ್ವಯಮಂತ್ರೋಚ್ಚಾರಣೆಗಳ ಮೂಲಕ ನಡೆಸತಕ್ಕದ್ದೆಂಬ ಭಾವವು. ಶ್ರೀಮನ್ನಾರಾಯಣನು ಒಂದು ಸಂದರ್ಭದಲ್ಲಿ ಉಪಾಯರೂಪವಾಗಿಯೂ, ಇನ್ನೊಂದು ಸಂದರ್ಭದಲ್ಲಿ ಫಲರೂಪವಾಗಿಯೂ,ಧ್ಯೇಯನೆಂದು ಸ್ಥಾಪಿಸಲ್ಪಟ್ಟಿತು.

"ಧ್ಯೇಯೋ ನಾರಾಯಣಸ್ಸದಾ" ಎಂಬ ಭಾರತ ವಚನಾನುಸಾರವಾಗಿ ಉಪಾಸನ ಒಂದೇ ಉಪಾಯವಾಗಿ ಕಂಡರೂ, ಪ್ರಪದನವೆಂಬುದು ಇನ್ನೊಂದು ಸರ್ವಾಧಿಕಾರವುಳ್ಳ ಉಪಾಯವು, ಅದಕ್ಕೂ ಕೂಡ ಬಲಾತ್ಕಾರವಾಗಿ ಭಾರತ ವಾಕ್ಯವನ್ನು ಅನ್ವಯಿಸಬಹುದೆಂದು ಹೇಳಿ, ಆಗ ಧ್ಯಾನವೆಂದರೆ ಭಗವದನುಸ್ಮರಣವೆಂದು ಹೇಳಿದಿರಿ; ಶ್ರುತಿಯೂಕೂಡ ಉಪಾಸನವನ್ನೇ ಉಪಾಯವಾಗಿ **"ನಾನ್ಯಃಪನ್ಥಾ ವಿದ್ಯತೇ ಅಯನಾಯ"** ಎಂದು ಹೇಳಿರುತ್ತದೆ. ಇದೂ ಅಲ್ಲದೆ ಶ್ರೀ ಭಾಷ್ಯದಲ್ಲೂ, ಗೀತಾಭಾಷ್ಯದಲ್ಲೂ ಶ್ರೀ ಭಾಷ್ಯಕಾರರು ಉಪಾಯವಾಗಿ ಹೇಳಿರುವದು ಉಪಾಸನವೇ. ಪ್ರಪದನವು ಹೇಗೆ ಉಪಾಯವು ಎಂದಾಕ್ಷೇಪ ತಂದರೆ, ಅದಕ್ಕೆ ಸಮಾಧಾನವಾಗಿ ಹೇಳಬಹುದು ಏನೆಂದರೆ—ಶ್ರೀ ಭಾಷ್ಯಕಾರರವರು ವಶೀಕರಣ ಪರಂಪರೆಗಳನ್ನು ತಿಳಿಸುವದರಲ್ಲಿ ಕಡೆಗೆ **"ತಸ್ಯ ಚ ವಶೀಕರಣಂ ತಚ್ಛರಣಾಗತಿರೇವ"** ಎಂದು ಪ್ರಪದನವೂ ಉಪಾಯವೆಂದು ಹೇಳಿದ್ದಾರಲ್ಲಾ, ಎಂದರೆ, ಶ್ರೀ ಭಾಷ್ಯದಲ್ಲೂ, ಶ್ರೀ ಗೀತಾಭಾಷ್ಯದಲ್ಲೂ ಹೇಳಿರುವ ಪ್ರಪತ್ತಿಯು ಅಙ್ಗ ಪ್ರಪತ್ತಿಯೇ ವಿನಾ, ಅಙ್ಗಿರೂಪದಲ್ಲಿಲ್ಲವು; ಗೀತೆಯ ೭ನೆಯ ಅಧ್ಯಾಯದ ೧೪ನೆಯ ಶ್ಲೋಕದಲ್ಲಿ **"ಮಾಮೇವ ಯೇ ಪ್ರಪದ್ಯನ್ತೇ ಮಾಯಾ ಮೇತಾಂ ತರನ್ತಿ ತೇ"** ಎಂಬುದಕ್ಕೆ ಶ್ರೀ ಭಾಷ್ಯಕಾರರವರು **ಮಾಯಾಮುತ್ಸಜ್ಯ ಮಾಮೇವೋ ಪಾಸತ ಇತ್ಯರ್ಥಃ** ಎಂದು ವ್ಯಾಖ್ಯಾನ ಮಾಡಿರುವದರಿಂದ ಇಲ್ಲಿ ಹೇಳಿರುವ ಪ್ರಪತ್ತಿಯು ಅಂಗ ಪ್ರಪತ್ತಿ ಎಂದು ಹೇಳಿದಂತಾಯಿತು, ಮತ್ತು **"ಸರ್ವಧರ್ಮಾ ಪರಿತ್ಯಜ್ಯ"** ಎಂಬ ಚರಮಶ್ಲೋಕದಲ್ಲಿ **ಮಾಮೇಕಂ ಶರಣಂ ವ್ರಜ"** ಎಂದು ವಿಧಿಸಿರುವ ಪ್ರಪದನವೂ ಅಙ್ಗಶರಣಾಗತಿಯೇ; ಆದುದರಿಂದ ಶ್ರೀ ಭಾಷ್ಯಕಾರರಿಗೆ ಉಪಾಸನವೇ ಉಪಾಯವೆಂಬ ಭಿಪ್ರಾಯವೇ ವಿನಾ ಪ್ರಪದನವಲ್ಲವೆಂದು ಪೂರ್ವಪಕ್ಷವನ್ನು ತರಬಹುದೆಂದು ಭಾವಿಸಿ, ಮುಂದಿನ ವಾಕ್ಯದಿಂದ ಸಮಾಧಾನವನ್ನು ಹೇಳುತ್ತಾರೆ. ಶ್ರೀ ಭಾಷ್ಯದಲ್ಲೂ ಶ್ರೀ ಗೀತಾ ಭಾಷ್ಯದಲ್ಲೂ ಹೇಳಿರುವ ಪ್ರಪದನವು ಅಙ್ಗರೂಪ ಶರಣಾಗತಿಯೇ, ಇದನ್ನು ಎಲ್ಲರೂ ಒಪ್ಪತಕ್ಕದ್ದೇ. ಒಂದು ಸಂದರ್ಭದಲ್ಲಿ ಅಙ್ಗವಾದುದು ಇನ್ನೊಂದು ಸಂದರ್ಭದಲ್ಲಿ ಅಙ್ಗಿಯಾಗಕೂಡದೆಂಬ ನಿಯಮವೇನೂ ಇಲ್ಲವು. ಸ್ವತಂತ್ರ ಪ್ರಪತ್ತಿಯು ಅಙ್ಗಿಯು ಇದನ್ನೇ ಶರಣಾಗತಿ ಗದ್ಯದಲ್ಲಿ ಅವರೇ ಉಪದೇಶಿಸಿರುತ್ತಾರೆ. ಶ್ರೀ ಯಾಮುನೇಯರೂ "ನ ಧರ್ಮ

ನಿಷ್ಠೋಽಸ್ಮಿ" ಎಂಬ ಶ್ಲೋಕದಲ್ಲಿ ಪ್ರಪತ್ತಿಯನ್ನು ಅಙ್ಗಿಯಾಗಿಯೇ ಭಾವಿಸಿರು ತ್ತಾರೆ ಅಂತೂ ಎರಡು ವಿಧ ಉಪಾಯಾನುಷ್ಠಾನಕ್ಕೂ ಪ್ರಪದನವು ಆವಶ್ಯಕವು; ಉಪಾಸನರೂಪಕ್ಕೆ ಅಙ್ಗವು, ಭರನ್ಯಾಸಕ್ಕೆ ಅಙ್ಗಿಯು. ಆದುದರಿಂದ ಪ್ರಪದನ ಮೂಲಕ ಶರಣಾಗತಿಯನ್ನು ಮಾಡದೆ ಎಂದರೆ ಪ್ರಪನ್ನನಾಗದೇ ಮೋಕ್ಷವೇ ಇಲ್ಲವೆಂದು ಶ್ರೀ ನಿಗಮಾಂತದೇಶಿಕರವರು "**ಪ್ರಪನ್ನಾದನ್ಯೇಷಾಂ ನದಿಶತಿ ಮುಕುಂದೋ ನಿಜಪದಂ**" ಎಂಬ ಶ್ಲೋಕದಲ್ಲಿ ತಿಳಿಸಿರುತ್ತಾರೆ. ಶ್ರೀ ಭಾಷ್ಯ ಕಾರರು ಈ ಎರಡು ವಿಧೋಪಾಯಗಳಲ್ಲಿ ಯಾವುದನ್ನು ಅವಲಂಬಿಸಿದರು ಎಂದರೆ ಭರನ್ಯಾಸವನ್ನೇ ಅನುಷ್ಠಿಸಿದರೆಂಬುದು, **ಕ್ಷಣಮಾತ್ರ ಸಾಧ್ಯಮಾನ ಪ್ರಪ ದನಂ ಸಿದ್ಧಮಾನ ವಳಿವಿಲುಮ್** ಎಂಬ ಪ್ರಯೋಗದಿಂದ ವ್ಯಕ್ತಪಡುತ್ತದೆ. ಆದುದರಿಂದ ಪ್ರಪದನವು ಎರಡು ಆಕಾರವುಳ್ಳದ್ದೆಂದೂ ಅಙ್ಗರೂಪವಾದು ದನ್ನು ಶ್ರೀ ಭಾಷ್ಯ ಗೀತಾ ಭಾಷ್ಯದಲ್ಲಿ ಶ್ರೀ ಭಾಷ್ಯಕಾರರು ಉಪಪಾದಿಸಿದ ರೆಂದೂ ಅಙ್ಗಿರೂಪವಾಗಿ ಶ್ರೀಮದಹಿರ್ಬುಧ್ನ್ಯ ಪಾಂಚರಾತ್ರ, ಪದ್ಮಪುರಾ ಣಾದಿಗಳಲ್ಲಿ ಬೋಧಿತವಾದುದನ್ನು ಶರಣಾಗತಿ ಗದ್ಯದಲ್ಲಿ ಉಪದೇಶಿಸಿದ ರೆಂದೂ ಮುಂದಿನವಾಕ್ಯದಿಂದ ತಿಳಿಸಿ, ಶ್ರೀ ಭಾಷ್ಯಕಾರರಿಗೆ ಎರಡು ವಿಧವಾದ ಉಪಾಯಗಳೂ ಅಭಿಮತವಾದವುಗಳೇ ಎಂದು ತಿಳಿಸುತ್ತಾರೆ. ಆದರೆ ಈ ಸಂದ ರ್ಭದಲ್ಲಿ ಇನ್ನೊಂದು ಆಕ್ಷೇಪಣೆಯನ್ನು ತರಬಹುದು. ಒಂದೇ ಅನುಷ್ಠಾನಕ್ಕೆ ಎರಡು ವಿಧವಾದ ಆಕಾರ ಹೇಗೆ? ಪ್ರಪದನವು ಎರಡು ಕಡೆಯಲ್ಲೂ ಅಙ್ಗವೆಂದು ಭಾವಿಸತಕ್ಕದ್ದು ಅಥವಾ ಅಙ್ಗಿ ಎಂದು ಭಾವಿಸತಕ್ಕದ್ದು, ಭಕ್ತಿ ರೂಪಧ್ಯಾನವು ಎರಡಕ್ಕೂ ಆವಶ್ಯಕವೆಂದು ಹೇಳಿ ಪ್ರಪದನವೇ ಅಙ್ಗಿಯಾಗಿ ಮೋಕ್ಷಸಾಧಕವೆಂದೂ ಹೇಳಬಹುದು, ಅಥವಾ ಭಕ್ತಿರೂಪಧ್ಯಾನವೇ ಎರಡುಕಡೆ ಯಲ್ಲೂ ಅಙ್ಗಿ ಎಂದು ಹೇಳಿ, ಅದಕ್ಕೆ ಕಾರಣ ಭೂತವಾಗಿ ಅಙ್ಗವಾಗಿ ಎರಡು ಕಡೆಯಲ್ಲೂ ಪ್ರಪದನವು ಎಂದು ಭಾವಿಸುವದಾದರೂ ಯುಕ್ತವು. ಈ ಪೂರ್ವ ಪಕ್ಷಕ್ಕೂ ಸಹ "**ಇಪ್ರಪತ್ತಿ ಅಙ್ಗಮಾನ**" ಎಂದಾರಂಭಿಸಿ ಹೇಳಿರುವ ವಾಕ್ಯ ಮೂಲಕ ಸಮಾಧಾನವನ್ನು ಹೇಳುತ್ತಾರೆ. ಶರಣಾಗತಿಯು ಅಙ್ಗವಾಗಿಯಾ ಗಲಿ, ಸ್ವತಂತ್ರವಾಗಿಯಾಗಲಿ ಮೋಕ್ಷಸಾಧಕವೆಂಬುದಕ್ಕೆ "**ಸಾಧನಾಂತರ ಯುಕ್ತಾನಾ ಪ್ರಪತ್ತಿಸ್ಸ್ವಯಮೇವ ನಾ । ಸಾಧಯೇನ್ಮುಕ್ತಿ, ಕಾಮಾನಾಂ ವಿಮುಕ್ತಿಂ ಪ್ರಣವೋ ಯಥಾ**" ಇತ್ಯಾದಿ ಪ್ರಮಾಣಗಳಿರುವದರಿಂದಲೇ, ಶ್ರೀ ಭಾಷ್ಯಕಾರರೂ ಸಹ ಈ ಎರಡುವಿಧ ಆಕಾರಗಳನ್ನೂ ಮನಸ್ಸಿನಲ್ಲಿಟ್ಟು ತಸ್ಯ ಚ **ವಶೀಕರಣಂ ತಚ್ಛರಣಾಗತಿರೇವ**" ಎಂದು ಹೇಳಿದರು; ಇದಕ್ಕೆ ನಿದರ್ಶನವು **ಪ್ರಣವೋ**ಪಾಸನೆಯು; ಇದೇ ಬೃಹದಾರಣ್ಯಕ ಛಾಂದೋಗ್ಯಗಳಲ್ಲಿ ಹೇಳಿರುವ

ಪ್ರಪತ್ತೇಃ ಅಙ್ಗಾಙ್ಗರೂಪಯೋಃ ಶ್ರೀ ಭಾಷ್ಯಕಾರಾಭಿಮತತ್ವಕಥನಮ್

ಇಪ್ಪ್ರಪತ್ತಿ ಅಙ್ಗಮಾನ ವೇಷತ್ತೈ ಭಾಷ್ಯಾದಿಗಳಿಲೇ ಉದಾಹರಿತ್ತರುಳಿನಾರ್; ಸ್ವತಂತ್ರಮಾನ ವೇಷತ್ತೈ ಗದ್ಯತ್ತಿಲೆ ಅರುಳಿಚ್ಚೆಯ್‌ದಾರ್.

ಹಾಗೆ ಸ್ವತಂತ್ರೋಪಾಸನೆಯಾದರೂ ಆಗಬಹುದು; ಪುಣ್ಯಾಹವು ಸ್ವತಂತ್ರ ಕರ್ಮವಾಗಿಯಾಗಲಿ ಅಥವಾ ಇತರ ಕರ್ಮಗಳಾದ ಚೌಲ, ಉಪನಯನ, ವಿವಾಹಾದಿಗಳಿಗೆ ಅಙ್ಗವಾಗಿಯಾಗಲಿ ಹೇಗೆ ಆಗಬಹುದೋ ಹಾಗೆ, ಶರಣಾಗತಿಯು ಅಙ್ಗರೂಪವಾಗಿರುವ ಆಕಾರವನ್ನು ಶ್ರೀ ಭಾಷ್ಯದಲ್ಲೂ ಶ್ರೀ ಗೀತಾಭಾಷ್ಯದಲ್ಲೂ ಹೊರಪಡಿಸಿದರು; ಅಙ್ಗರೂಪವಾಗಿರುವ ಆಕಾರವನ್ನು **ಶರಣಂ ತ್ವಾಂ ಪ್ರಪನ್ನಾಯೇ ಧ್ಯಾನಯೋಗ ವಿವರ್ಜಿತಾಃ । ಪರಮಾತ್ಮಾ ಚ ತೇನೈವ ಸಾಧ್ಯತೇ ಪುರುಷೋತ್ತಮಃ"** ಉಪಾಸನರೂಪ ಧ್ಯಾನಯೋಗಕ್ಕೆ ಅಸಮರ್ಥರಾದ ಪ್ರಪನ್ನರು ಅಙ್ಗಿರೂಪ ಪ್ರಪತ್ತ್ಯನುಷ್ಠಾನದಮೂಲಕ ಮುಕ್ತಿಯನ್ನೈದಿದರೆಂದು ಹೇಳುವ ಇತ್ಯಾದಿ ಪ್ರಮಾಣಗಳ ಪರಿಶೀಲನದ ಮೂಲಕ, ಸ್ವಾನುಷ್ಠಾನಪೂರ್ವಕವಾಗಿ ಶ್ರೀ ಶರಣಾಗತಿಗದ್ಯದಲ್ಲಿ ಉಪದೇಶಿಸಿರುತ್ತಾರೆಂದು ಹೇಳುತ್ತಾರೆ:—

ಪ್ರಪದನಕ್ಕೆ ಅಙ್ಗಾಙ್ಗಿಭಾವ ಉಂಟೆಂಬುದು ಶ್ರೀ ಭಾಷ್ಯಕಾರರಿಗೆ ಅಭಿಮತವು.

ಇಪ್ಪ್ರಪತ್ತಿ - ಈ ಪ್ರಪದನವು, **ಅಙ್ಗಮಾನವೇಷತ್ತೈ** - ಉಪಾಸನಮಾರ್ಗಗಳಿಗೆ, **ಅಙ್ಗಮಾನವೇಷತ್ತೈ** - ಅಙ್ಗವಾಗಿರುವ ಆಕಾರವನ್ನು, **ಭಾಷ್ಯಾದಿಗಳಿಲೇ**-ಶ್ರೀಭಾಷ್ಯಗೀತಾಭಾಷ್ಯಗಳಲ್ಲಿ, **ಉದಾಹರಿತ್ತರುಳಿನಾರ್**-ಕೃಪಯಾ ಶ್ರೀಭಾಷ್ಯಕಾರರು ಉದಾಹರಿಸಿದರು. **ಸ್ವತಂತ್ರಮಾನವೇಷತ್ತೈ** - ಪ್ರಪದನವೇ ಸ್ವತಂತ್ರವಾದ ; ಉಪಾಯವಾಗಿರುವ ಆಕಾರವನ್ನು, **ಗದ್ಯತ್ತಿಲೇ ಅರುಳಿಚ್ಚೆಯ್‌ದಾರ್** - ಶರಣಾಗತಿಗದ್ಯದಲ್ಲಿ ಕೃಪಯಾ ಉಪದೇಶಿಸಿರುತ್ತಾರೆ. ಹೀಗೆ ಪ್ರಪದನವು ಎರಡು ಆಕಾರವುಳ್ಳದ್ದೆಂಬುದು ನಿಸ್ಸಂಶಯವೆಂಬುದನ್ನು ಶ್ರೀ **ಭಾಷ್ಯ**ಕಾರರೇ ವ್ಯಕ್ತಪಡಿಸಿರುತ್ತಾರೆ. ಶರಣಾಗತಿ ಗದ್ಯದ ಅಂತ್ಯದಲ್ಲಿ "**ಅನೃತಂ ನೋಕ್ತಪೂರ್ವಂ ಮೇ**" ಎಂಬಲ್ಲಿಂದ "**ನಿಸ್ಸಂಶಯಃ ಸ್ಸುಖಮಾಸ್ಸ್ವ**" ಎಂದು ಮುಗಿಸಿರುವ ಶರಣ್ಯೋಕ್ತಿಯನ್ನು ಚೆನ್ನಾಗಿ ಪರ್ಯಾಲೋಚಿಸಿದರೆ, ಇದು ವ್ಯಕ್ತಪಡುತ್ತದೆ. ಇಲ್ಲಿ "**ಸಕೃದೇವಪ್ರಪನ್ನಾಯ ತವಾ**

(೧) "**ಕ್ಲೇಶಾನಾಂ ಚ ಕ್ಷಯಕರಂ ಯೋಗಾದನ್ಯನ್ನ ವಿದ್ಯತೇ**"

ಸ್ಮೀತಿ ಚಯಾಚತೇ । ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ" ಎಂದು ಶ್ರೀ ವಿಭೀಷಣಾಳ್ವಾರ್ ವಿಷಯದಲ್ಲಿ ಶ್ರೀರಾಮನಾಗಿ ತಾನು ಹೇಳಿರುವ ಸ್ವತಂತ್ರ ಪ್ರಪತ್ತಿ ನಿಷ್ಠನ ವಿಷಯದಲ್ಲೆಂಬುದು ಸುಸ್ಪಷ್ಟವು. ಅರ್ಜುನನ ವಿಷಯದಲ್ಲಿ ಕೃಷ್ಣಾವತಾರಿಯಾಗಿ "**ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂವ್ರಜ । ಅಹಂ ತ್ವಾ ಸರ್ವ ಪಾಪೇಭ್ಯೋ ಮೋಕ್ಷ್ಯ ಯಿಷ್ಯಾಮಿ ಮಾಶುಚಃ**" ಎಂದು ಹೇಳಿರುವದು ಅಙ್ಗಪ್ರಪತ್ತಿ ವಿಷಯವೆಂದು ಅಲ್ಲಿ ವ್ಯಾಖ್ಯಾನಮಾಡಿದರೂ, ಈ ಶರಣಾಗತಿ ಗದ್ಯದಲ್ಲಿ ಈ ಎರಡು ಶ್ಲೋಕಗಳನ್ನೂ ಒಟ್ಟಿಗೆ ಸೇರಿಸಿ ಶರಣ್ಯನು ಸ್ವತಂತ್ರ ಪ್ರಪತ್ತಿ ವಿಷಯದಲ್ಲೂ ಹೇಳಿರುವದರಿಂದ, "**ಸರ್ವಧರ್ಮಾನ್ ಪರಿತ್ಯಜ್ಯ**" ನೆಂಬಶ್ಲೋಕವೂ ಸ್ವತಂತ್ರಪ್ರಪತ್ತಿಯನ್ನೂ ಕೂಡ ಬೋಧಿಸುತ್ತದೆಂಬುದು ಸ್ಪಷ್ಟವು. ಇದರಲ್ಲಿ ಸಂಶಯಬೇಡವೆಂದು ತಿಳಿಸುವದಕ್ಕಾಗಿ "**ಇತಿ ಮಯೈವಹಿ ಉಕ್ತಮ್**" ಎಂದು ಶರಣ್ಯನಿಂದ ಹೇಳಲ್ಪಟ್ಟಿರುತ್ತದೆ. ಆದುದರಿಂದ "**ಸರ್ವಧರ್ಮಾನ್**" ಎಂಬ ಶ್ಲೋಕವು ಎರಡುವಿಧವಾದ ಶರಣಾಗತಿಯನ್ನೂ ಬೋಧಿಸುತ್ತದೆ ಎಂಬುದರಲ್ಲಿ ನಿಸ್ಸಂದೇಹವು. ಆದುದರಿಂದಲೇ "**ಸಕೃದೇವ**" ಎಂಬುದು ಹೇಗೆ ಶ್ರೀ ರಾಮಾಯಣ ಚರಮಶ್ಲೋಕವೋ ಹಾಗೆಯೇ "**ಸರ್ವಧರ್ಮಾನ್**" ಎಂಬುದು ಗೀತಾಚರಮಶ್ಲೋಕವಾಗುವದರಲ್ಲಿ ಸಂದೇಹವಿಲ್ಲವು, ಹೀಗೆ "**ಸರ್ವಧರ್ಮಾನ್**" ಎಂಬ ಶ್ಲೋಕದಲ್ಲಿ ಅಙ್ಗ ಪ್ರಪತ್ತಿಯೂ ಸ್ವತಂತ್ರ ಪ್ರಪತ್ತಿಯೂ ಎರಡೂ ವಿವಕ್ಷಿತವು. ಹಾಗೆಯೇ ಗೀತೆಯ ೭-೧೪ ಶ್ಲೋಕವಾದ "**ಮಾಮೇವಯೇ ಪ್ರಪದ್ಯನ್ತೇ**" ಎಂಬ ಶ್ಲೋಕದಲ್ಲೂ ಸಹ ಎರಡೂ ವಿವಕ್ಷಿತವು. ದಾಸನು ಆ ಶ್ಲೋಕಕ್ಕೆ ಬರೆದಿರುವ ಆಚಾರ್ಯಹೃದಯಾನ್ವೇಷಿಣೀ ಎಂಬ ಗೀತಾ ಭಾಷ್ಯವನ್ನು ಪರಾಂಬರಿಸಬಹುದು.

ಹಾಗಾದರೆ ಶ್ರೀ ಭಾರತ ಅನುಶಾಸನ ಪರ್ವದಲ್ಲೂ, ವಿಷ್ಣುಧರ್ಮದಲ್ಲೂ ಭಕ್ತಿಯೋಗವೊಂದೇ ಉಪಾಯವೆಂದು ಹೇಳಿದೆಯಲ್ಲಾ, ಆ ವಾಕ್ಯಗಳಿಗೂ ಶ್ರೀಭಾಷ್ಯಕಾರರಭಿಪ್ರಾಯಕ್ಕೂ ಐಕ ಕಂಠ್ಯವು ಹೇಗೆ? ಎಂಬ ಪೂರ್ವಪಕ್ಷ ಬಂದೀತೆಂದು ಭಾವಿಸಿ, ಈ ಪ್ರಮಾಣಗಳು ಭಕ್ತಿಯೋಗ ನಿಷ್ಠರನ್ನು ಮಾತ್ರ ಕುರಿತು ಹೇಳಿದುದಾದುದರಿಂದಲೂ, ಸ್ವತಂತ್ರ ಪ್ರಪತ್ತಿಯು ಬೇರೇ ವಿಧಿ ಬಲದಿಂದ ಪ್ರಾಪ್ತವಾದುದರಿಂದ ಏನೊಂದೂ ವಿರೋಧವಿಲ್ಲವೆಂದು ಸಾಧ್ಯೋಪಾಯ ಶೋಧನವಿಷಯವನ್ನು ಮುಗಿಸುತ್ತಾರೆ—(೧) **ಕ್ಲೇಶಾನಾಂಚ ಕ್ಷಯಕರಂ** - ದುಃಖ

---

(೧) ಭಾರ. ಅನು ೧೮೬ ೧.೧.

(೨) [illegible] ಕರ್ಮಣಾಂ [illegible]
[illegible] ಸ್ವತಂತ್ರ ಪ್ರವೃತ್ತಿ [illegible]
[illegible]
(೩) [illegible]
[illegible] ಸ್ವತಂತ್ರ ಪ್ರವೃತ್ತಿ [illegible]
[illegible] ಅಧಿಕಾರಿಯಾದವನಿಗೆ [illegible]
[illegible] ಯೋಗಾದಪ್ಯತ್ ಎಂಬ [illegible]
[illegible]

೨. ವಿ. ತ. ೧೦೨. ೪.

ಕ್ಕುಮ್ ಕಲಕ್ಕಙ್ಗಳುಕ್ಕು ಪರಿಹಾರಮ್ ನಿಕ್ಷೇಪ ರಕ್ಷೈಯಿಲೇ ಕಣ್ಡು ಕೊಳ್ವದು.

ರಹಸ್ಯತ್ರಯೇ ಸಾಧ್ಯೋಪಾಯಸ್ಯಾನುಸಂಧೇಯತ್ವಂ

ಇಸ್ಸಾಧ್ಯೋಪಾಯಂ ಶೋಧಿತಮಾನ ಕಟ್ಟಳೈಯಿಲೆ ರಹಸ್ಯತ್ರಯ ತ್ತಿಲ್ ಯಥಾಸ್ಥಾನ ಮನುಸಂಧೇಯಮ್

ದೆಂದು **ಹೇಳುತ್ತಾರೆ, ಇಪ್ಪಡಿ** - ಹೀಗೆ ಹಿಂದೆ ಉಪಪಾದಿಸಿದ ರೀತಿಯಲ್ಲೇ ಸಾಧ್ಯೋಪಾಯ ವಿಷಯವಾಗಿ, **ಮೆತ್ತುಮ್** - ಈಮೇಲೆ ಪ್ರಕರಣಾನುಗುಣ ವಾಗಿ ಉಪಪಾದಿಸಲ್ಪಟ್ಟವಲ್ಲದೇ ಬೇರೇ, **ಪಿರಕ್ಕುಮ್** - ಉಂಟಾಗುವ, **ಕಲಕ್ಕ ಙ್ಗಳುಕ್ಕು ಪರಿಹಾರಮ್** - ಶಙ್ಕೆಗಳಿಗೆ ಪರಿಹಾರವನ್ನು, **ನಿಕ್ಷೇಪರಕ್ಷೈಯಲ್ಲಿ, ಕಣ್ಡುಕೊಳ್ವದು** - ಕಾಣಬಹುದು. ಈ ಉಪಾಯಕ್ಕೆ ಸ್ವತಂತ್ರ ಪ್ರಪತ್ತಿ ಎಂದು ಹೇಳಿರುವದು ಸರಿಯೋ? ಭಕ್ತಿಯೂ ಪ್ರಪತ್ತಿಯೂ ಸಹ ಒಂದೇ ಉಪಾ ಯವಲ್ಲವೊ ? ಪ್ರಪತ್ತಿಯೊಂದು ಸಾಧ್ಯೋಪಾಯವೆನ್ನುವದಕ್ಕೆ ಹಿಂದಿನ ಕಾಲಗ ಳಲ್ಲಿ ಯಾರೂ ಅದನ್ನು ಅನುಷ್ಠಿಸಿದಹಾಗೆ ಕಾಣಬರುವದೇ ಇಲ್ಲವಾದುದರಿಂದ ಅದನ್ನು ಉಪಾಯವೆಂದು ಭಾವಿಸುವದು ಹೇಗೆ? ಆದುದರಿಂದ ಪೂರ್ವಸಂಪ್ರದಾ ಯಕ್ಕೆ ವಿರುದ್ಧವಾದುದಲ್ಲವೇ? ಪ್ರಪತ್ತಿರೂಪಜ್ಞಾನವೇನು ಸ್ಮೃತಿರೂಪವೇ? ಅನುಭವರೂಪವೇ? ಸ್ಮೃತಿರೂಪವೆಂದರೆ ಸಕೃತ್ಸ್ಮೃತಿರೂಪವಾದುದೇ? ಅಥವಾ ತೈಲಧಾರೆಯಹಾಗೆ ಸ್ಮೃತಿ ಸಂತಾನರೂಪವಾದುದೇ? ಇತ್ಯಾದಿ ಶಙ್ಕೆಗಳು; ಇವುಗಳಿಗೆ ಪರಿಹಾರವು ನಿಕ್ಷೇಪರಕ್ಷೆಯಲ್ಲಿ ದೊರಕುತ್ತವೆ ಎಂಬ ಭಾವವು

ರಹಸ್ಯತ್ರಯಗಳಲ್ಲಿ ಸಾಧ್ಯೋಪಾಯದ ಅನುಸಂಧಾನದ ಸ್ಥಳಗಳು.

ಈ ಸಾಧ್ಯೋಪಾಯವು, ಶೋಧಿತಮಾನ ಕಟ್ಟಳೈಯಿಲೆ - ಶೋಧಿಸ ಲ್ಪಟ್ಟ ರೀತಿಯಲ್ಲಿ ಎಂದರೆ ಅದರ ವಿಷಯವಾದ ಸಂಶಯಗಳು ಪರಿಹರಿಸಲ್ಪಟ್ಟ ರೀತಿಯಲ್ಲಿ ರಹಸ್ಯತ್ರಯದಲ್ಲಿ, **ಯಥಾಸ್ಥಾನಂ** - ಎಲ್ಲೆಲ್ಲಿ ಉಪಪಾದಿಸಲ್ಪಟ್ಟ ವೆಯೋ ಅವನ್ನು, ಅನುಸಂಧಾನಮಾಡಬಹುದು. ಸುಲಭವಾಗಿ ಗ್ರಹಿಸಬಹುದಾ ದುದರಿಂದ ತಾವು ಅವುಗಳನ್ನು ಸೂಚಿಸುವ ಆವಶ್ಯಕತೆ ಇಲ್ಲವೆಂಬ ಭಾವವು ತೋರಿ ಬರುತ್ತದೆ, ಆಸ್ಥಳಗಳು ಯಾವುವೆಂದರೆ :— **ಮೂಲಮಂತ್ರದಲ್ಲಿ, ನಮಃ** ಎಂಬ ಶಬ್ದದಲ್ಲಿ ಅಖಂಡ **ನಮಶ್ಶಬ್ದವು** ಪ್ರಪದನವನ್ನು ಸೂಚಿಸುತ್ತದೆ. ಇದನ್ನು ಚನ್ನಾಗಿ ಮೂಲ ಮಂತ್ರಾಧಿಕಾರದಲ್ಲಿ ಉಪಪಾದಿಸಿರುತ್ತಾರೆ. ಮಾರ್ಕಂಡೇ ಯರು ಪಂಚಪಾಂಡವರಿಗೂ ತುಂಬಾ ಕೃಪೆಯಿಂದ ಉಪದೇಶಿಸಿರುತ್ತಾರೆ, **"ಗಚ್ಛ ಧ್ವಮೇನಂ ಶರಣಂಶರಣ್ಯಂ ಪುರುಷರ್ಷಭಾಃ"** ಓ ಪುರುಷ ಶ್ರೇಷ್ಠರಾದ

ಪಾಂಡವರುಗಳಿರಾ, ನಿಮ್ಮ ಬಂಧುವಾದ ಶ್ರೀಕೃಷ್ಣನು ಸಾಮಾನ್ಯನಲ್ಲವು, ಆತನೇ ಮಾಧವನು, ಶ್ರಿಯಃಪತಿಯು, ಆತನೇ ಸರ್ವಲೋಕ ಶರಣ್ಯನಾದುದರಿಂದ ಆತನಲ್ಲಿ ಶರಣಾಗತಿಯನ್ನು ಮಾಡಿ" ಎನ್ನಲು, ಆಗ, "**ದ್ರೌಪದ್ಯಾಸ್ಸಹಿತಾಸ್ಸರ್ವೇ ನಮಶ್ಚಕ್ರುರ್ಜನಾರ್ದನಂ**" ಆಗ ದ್ರೌಪದೀ ಸಮೇತರಾಗಿ ಅವರೆಲ್ಲರೂ ಜನಾರ್ದನನನ್ನು ಶರಣ ಹೊಂದಿದರು," ಎಂಬ ವಾಕ್ಯವನ್ನೂ, "**ನಮಸಾ ಯೋ ಕರೋದ್ದೇವೇ ಸಸ್ವಧ್ವರ ಇತೀರಿತಃ**" ನಮಸ್ಕಾರಪೂರ್ವಕವಾಗಿ ಯಾವನು ಭರನ್ಯಾಸ ಮಾಡುತ್ತಾನೋ, ಆ ಯಾಗವೀಗ ಉತ್ಕೃಷ್ಟಯಾಗವೆಂದು ಹೇಳಿಸಿಕೊಳ್ಳುತ್ತದೆ" ಎಂಬ ಅಹಿರ್ಬುಧ್ನ್ಯ ವಾಕ್ಯವನ್ನೂ ಅಲ್ಲಿ ಉದಾಹರಿಸಿರುತ್ತಾರೆ. ಹಾಗೆಯೇ **ದ್ವಯದಲ್ಲೂ** ಸಾಧ್ಯೋಪಾಯವು **ಶರಣಮಹಂ ಪ್ರಪದ್ಯೇ** ಎಂಬಲ್ಲಿ **ಸೂಚಿತವು**. ಚರಮಶ್ಲೋಕದಲ್ಲೂ "**ಮಾಮೇಕಂ ಶರಣಂ ವ್ರಜ**" ಎಂಬ ವಿಧ್ಯುಕ್ತಿಯಲ್ಲಿ ಈ ಸಾಧ್ಯೋಪಾಯವು ಸೂಚಿತವು. ಹೀಗೆ ಸಾಧ್ಯೋಪಾಯವನ್ನು ಹೇಳಿದ ಸ್ಥಳಗಳನ್ನು ಬಹು ಸುಲಭವಾಗಿ ಗ್ರಹಿಸಬಹುದಾದುದರಿಂದ **ಯಥಾಸ್ಥಾನಂ** ಎಂಬ ಪ್ರಯೋಗವು. ಹೀಗೆ ಈ ಸ್ಥಳಗಳಲ್ಲಿ ಹೇಳಲ್ಪಟ್ಟ ಸಾಧ್ಯೋಪಾಯದ ಅಭಿಪ್ರಾಯವೂ ತಾವು ಈಗ ಸ್ಥಾಪಿಸಿದ ರೀತಿಗೆ ಅನುಸಾರವಾಗಿಯೇ ಇರುತ್ತದೆಂದು ತಿಳಿಸುವದಕ್ಕಾಗಿ "**ಇಜ್ಜ್ಞಶೋಧಿತಮಾನ ಕಟ್ಟಳೈಯಿಲೇ**" ಎಂಬ ಪ್ರಯೋಗವು ಈ ಅಧಿಕಾರವನ್ನು ಉಪಸಂಹಾರಮಾಡಲು ಹೊರಟು ಹಿಂದಿನ ಕ್ರಮವನ್ನನುಸರಿಸಿ ಒಂದು ಪಾಶುರ ಮತ್ತು ಒಂದು ಶ್ಲೋಕ ಇವುಗಳ ಮೂಲಕ ಅಧಿಕಾರಾರ್ಥವನ್ನು ಸಙ್ಗ್ರಹಿಸಿ ಹೇಳಿ ಪರಿಸಮಾಪ್ತಿಯನ್ನು ಮಾಡುತ್ತಾರೆ. ಈ ಮುಂದಿನ ಪಾಶುರದಲ್ಲಿ ಸಿದ್ಧೋಪಾಯನ ವಶೀಕರಣಕ್ಕಾಗಿ ಸಾಧ್ಯೋಪಾಯವು ಆವಶ್ಯಕವೆಂದು ಹೇಳುತ್ತಾರೆ; ಅದರೆ, "**ಯಮೇವೈಷವೃಣುತೇ ತೇನ ಲಭ್ಯಃ**" ಪರಮಾತ್ಮನು ಯಾವನನ್ನು ವರಿಸುವನೋ ಅವನಿಗೇನೇ ಪ್ರಾಪ್ಯನು ಎಂದು ಶ್ರುತಿಯು ಹೇಳಿರುವಾಗ ಸಾಧ್ಯೋಪಾಯದ ಆವಶ್ಯಕತೆ ಏಕೆ? ಎಂಬ ಪೂರ್ವಪಕ್ಷಕ್ಕೂ ಹಾಗೆಯೇ ಸಮಾಧಾನವನ್ನು ಹೇಳುತ್ತಾರೆ. ಈ ಸಾಧ್ಯೋಪಾಯಾನುಷ್ಠಾನದಿಂದ ಪ್ರೀತನಾಗಿ ಯಾವನು ನಿತ್ಯವಿಭೂತಿಯಲ್ಲಿರಲು ಯೋಗ್ಯನೆಂದು ವರಿಸುವನೋ ಆತನಿಗೆ ಮಾತ್ರವೇ ಲಭ್ಯನೆಂಬುದು ಶ್ರುತ್ಯಭಿಪ್ರಾಯವಾದುದರಿಂದ ಏನೊಂದೂ ವಿರೋಧವಿಲ್ಲವೆಂದು ಹೇಳುತ್ತಾರೆ ಉಪಾಯಾನುಷ್ಠಾನವನ್ನು ಸರಿಯಾಗಿ ಭಗವಂತನು ಪ್ರೀತನಾಗುವಹಾಗೆ ಮಾಡಿದರ ಫಲಕಾರಿಯು. ಉಪಾಯಾನುಷ್ಠಾನದಹಾಗೆ ಕೇವಲ ಪ್ರವೃತ್ತಿಮಾತ್ರ ಯಿದ್ದುದಾದರೆ ಫಲಕಾರಿಯಾಗದು. ಪರೀಕ್ಷೆಗೆ ಅನೇಕ ತರುಣರು ಹೋಗಬಹುದು. ಪರೀಕ್ಷಿಸುವ ಪಂಡಿತನು ಯಾವನನ್ನು ಮಾತ್ರ ಅವನು ಬರೆದಿರುವ ಉತ್ತರಗ

ಪರಿಕ್ಕಿನ್ರನನ್ ಪರರ್ ಯೊಪರ್ರೈ ಯೆನ್ನು ಮರ್ರೈಯುದನಿಲ್ ।
ವಿರಕ್ಕಿನ್ರದುಮ್ ಕುರಿಯೊನ್ರಾಲ್ ವಿನೈಯರ್ರೈಯಾದಲಿನಾಮ್ ।
ಉರೈಕ್ಕಿನ್ರ ನನ್ನೆರಿ [illegible] ನನ್ನಿಲಕನ್ ।
ತರಿಕ್ಕಿನ್ರ ತಾರಕನಾರ್ ತಗವಾ [illegible] ರಿಕ್ಕಿನ್ರ ನಮೇ ॥ [illegible] ॥

ಳಿಂದ ಜೀವಗನ್ನೂ ಭಾವಿಸುವರು? ಅವನ ಪಾದಗಳು ಹೇಗೆ [illegible] ತೊಂದುತ್ತಾನೆಯೋ [illegible] ಎಂದು ಭಾವಿಸಿದ್ದರು.

ಅರ್ಥ—ಪರರ್ - ಸರ್ವಶ್ರೇಷ್ಠನಾದ ಸರ್ವೇಶ್ವರನು, ಯೊಪರ್ರೈ - "ನಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ ನ ಬಹುನಾ ಶ್ರುತೇನ ಯಮೇವೈಷ ವೃಣುತೇ ತೇನ ಲಭ್ಯಃ" (ಕಠ ೧. ೨ ೨೩ ಮುಂ. ೩ ೨. ೩) ಎಂದು ಉಪನಿಷತ್ತುಗಳಲ್ಲಿ ಹೇಳಿರುವಹಾಗೆ ಯಾವನೊಬ್ಬನನ್ನು, ಪರಿಕ್ಕಿನ್ರನರ್ - ವರಿಸುತ್ತಾನೆಯೋ, ಮರ್ರೈಯುದನಿಲ್ - ವೇದದಲ್ಲಿ ಎಂದರೆ ಮೇಲೆ ಹೇಳಿದ ಮುಂಡಕ ಕಠೋಪನಿಷತ್ತುಗಳಲ್ಲಿ, ವಿರಕ್ಕಿನ್ರದುಮ್ - ವಿಸ್ತರಿಸಿ, ಪ್ರಕಾಶಿಸುವಹಾಗೆ ಹೇಳಿರುವ ಆತನ ವರಿಸುವಿಕೆಯೂ ಕೂಡ, ವಿನೈಯರ್ರೈ - ಅನಾದಿ ಕರ್ಮ ಪ್ರವಾಹದಿಂದ ಭಗವನ್ನಿಗ್ರಹಕ್ಕೆ ಪಾತ್ರರಾಗಿರುವಹಾಗೆ ಪಾಪ ಭೂಯಿಷ್ಠರಾದವರಾಗಿರುವದರಿಂದಲೇ, ಕುರಿಯೊನ್ರಾಲ್ - ವ್ಯಾಜರೂಪದಲ್ಲಿ ಭಕ್ತಿ ಪ್ರಪತ್ತಿಗಳೆಂಬ ಸಾಧನೋಪಾಯಗಳಲ್ಲಿ ಒಂದರ ಅನುಷ್ಠಾನ ಮೂಲಕವಾಗಿಯೇ! ಆ ಪಾಪಿಜನರು ಸಾಧ್ಯೋಪಾಯವಿಲ್ಲದೆ ತಾನು ಸಿದ್ಧೋಪಾಯನಾಗಿ ವರಿಸುವನೆಂಬ ತಾತ್ಪರ್ಯವು. ಆದಲಿನ್ - ಆ ಕಾರಣದಿಂದ, ನಾಮ್-ಪಾಪರಾಶಿಗಳಾದ ನಾವು, ಉರೈಗಿನ್ರ - ಶಾಸ್ತ್ರಗಳಲ್ಲಿ ವಿಧಿಸಲ್ಪಟ್ಟಿರುವ, ನನ್ನೆರಿ - ಪರಮ ಶ್ರೇಷ್ಠವಾದ [illegible] ಭಕ್ತಿ ಪ್ರಪತ್ತಿಗಳು, ಓರುಂ ಪಡಿಗಳಿಲ್ ಓರ್ನ್ದು - [illegible] ವಿಚಾರ [illegible] ಉಲಗತ್ತಿರಿಕ್ಕಿನ್ರ ಅಂತರ್ಯಾಮಿಯಾಗಿ [illegible]. ತಾರಕನಾರ್ - ಸಂಸಾರ ಸಮುದ್ರವನ್ನು ದಾಟಿಸುವ [illegible]. ತಗವಾರ್ - ಅತ್ಯಂತರವು [illegible] ಪ್ರಿಯನನ್ನಾಗಿ ಭಾವಿಸುವ ಸರ್ವೇಶ್ವರನು, ತರಿಕಿನ್ರನರ್ - ಉಜ್ಜೀವನ [illegible] ದಾವರೋದು ನಿರ್ಧರಿಸಿರುವೆವು.

ತಾತ್ಪರ್ಯ—ಇಲ್ಲಿ ಸರ್ವೇಶ್ವರನನ್ನು ಪರರ್ ಎಂದು ಹೇಳಿರುವದು, "ಅಕ್ಷರಾತ್ಪರತಃ ಪರಃ" ಎಂದು ಮುಂಡಕ (೨ ೧-೨)ದಲ್ಲಿ ಹೇಳಿರುವಹಾಗೆ ಜಗತ್ತಿನ ಎಲ್ಲಾ ಭೂತಗಳಿಗಿಂತಲೂ ಸರ್ವೋತ್ಕೃಷ್ಟನೆಂದೂ ಹೇಳಿರುವದರಿಂದ

ಬ್ರಹ್ಮ ರುದ್ರಾದಿಗಳಾಗಿ ಈ ಲೋಕದ ಶ್ರೇಷ್ಠರಾಗಿ ಮೋಕ್ಷದ ಪಕ್ವ ಶಕ್ತಿ ಯಿಲ್ಲದ ಅಸಮರ್ಥರನ್ನು ಪ್ರಪನ್ನರು ಆಶ್ರಯಿಸಿದರೆ ತಮ್ಮ ಇಷ್ಟಾರ್ಥ ಸಿದ್ಧಿಸದು; ಪರತ್ವಾದಿ ಆಶ್ರಯೋಪಯುಕ್ತ ಕಲ್ಯಾಣ ಗುಣೋಪಹಿತನನ್ನು ಆಶ್ರಯಿಸಿದವರಿಗೇ ಮನೋರಥ ಪೂರ್ಣವೆಂಬುದು ಸೂಚಿತವು. ಇಂತಹ ಸರ್ವೇಶ್ವರನ ಶಕ್ತಿ ಯೊಂದಿಗೆ "ಸ ಚ ಮಮ ಪ್ರಿಯಃ" ಎಂದೂ "ಜ್ಞಾನೀ ತ್ವಾತ್ಮೈವ ಮೇ ಮತಂ" ಎಂದೂ ಆಶ್ರಿತರ ವಿಷಯದಲ್ಲಿ ಪರಮ ಕಾರುಣಿಕನು ಆತನು ಎಂದು ತೋರಿಸುವದಕ್ಕಾಗಿ, ತಗವಾಲ್ ಎಂಬ ಪ್ರಯೋಗವು ಅಂತ್ಯದಲ್ಲಿಯೂ ಇರುತ್ತದೆ. ಇವೆರಡು ಗುಣಗಳಾದ ಸರ್ವ ಶಕ್ತಿತ್ವ ಕಾರುಣ್ಯಗಳುಳ್ಳವನನ್ನು ಆಶ್ರಯಿಸಿದರೆ ಫಲದಲ್ಲಿ ಈಷದಪಿ ಸಂದೇಹವೇ ಇಲ್ಲವು ಎಂದು ತರಿಗಿನ್ರನನೋ ಎಂಬುದ ರಿಂದ ನಿರ್ಭರತ್ವವನ್ನು ಸೂಚಿಸಿರುತ್ತಾರೆ.

ಆದರೆ ಬಂಧದಲ್ಲಿ ಸಿಕ್ಕಿ ನರಳುತ್ತಿರುವ ಜೀವ ವರ್ಗವನ್ನು ರಕ್ಷಿಸಬೇಕೆಂದು ಸುವ್ರತವನ್ನು ಧರಿಸಿರುವ ಈ ಕರುಣಾನಿಧಿಯನ್ನು ಆಶ್ರಯಿಸಬೇಕೋ? ಶ್ರುತಿ ಯಲ್ಲಿ "ನಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ ನ ಬಹು ನಾ ಶ್ರುತೇನ, ಯಮೇವೈಷ ವೃಣುತೇ ತೇನ ಲಭ್ಯಃ" ಎಂದು ಶ್ರುತಿಯಿರು ವದರಿಂದ ಆತನು ಸರ್ವಸ್ವತಂತ್ರನಾಗಿ, ತನಗೆ ಯಾರ ವಿಷಯದಲ್ಲಿ ಇಷ್ಟ ಉಂಟಾ ಗುತ್ತದೋ ಅವರಿಗೆ ತಾನು ಪ್ರಾಪ್ಯನು" ಎಂಬುದರಿಂದ ಸರ್ವೇಶ್ವರನೇ ಸ್ವತಂ ತ್ರನಾಗಿ ಮುಕ್ತಿ ಕೊಡುವನು. ಈ ಭಕ್ತಿ ಪ್ರಪತ್ತಿರೂಪ ನಿರ್ಭರೋಪಾಯಗಳಿಂದ ಪ್ರಯೋಜನವೇನು ಎಂದು ಆಕ್ಷೇಪವನ್ನು ತರಬಹುದೆಂದು ಯೋಚಿಸಿ, ಅದಕ್ಕೆ ಸರಿಯಾದ ಉತ್ತರವನ್ನು ದಯಪಾಲಿಸುತ್ತಾರೆ: ಸ್ವತಂತ್ರನಾಗಿ ತನ್ನ ಇಷ್ಟಬಂ ದಂತೆ ಮುಕ್ತಿ ಕೊಡುವನು ಎಂದು ಹೇಳಿ ಬಿಟ್ಟರೆ, ಕರುಣಾನಿಧಿಯಾಗಿಯೂ ಸಮರ್ಥನಾಗಿಯೂ ಸ್ವತಂತ್ರನಾಗಿಯೂ ಇರುವದರಿಂದ ಸರ್ವರಿಗೂ ಮುಕ್ತಿ ಯನ್ನು ಕೊಟ್ಟಿರಬೇಕಾಗಿತ್ತು. ಹಾಗಿದ್ದರೆ ಲೆಕ್ಕ ಮಾಡಲು ಅಸಾಧ್ಯವಾಗಿರುವ ಜೀವಕೋಟಿಯು ಬಂಧದಲ್ಲೇ ನರಳುತ್ತಾ ಇದೆ. ಹಾಗಲ್ಲದೆ, ಇಷ್ಟಬಂದಹಾಗೆ ಕೆಲವರಿಗೆ ಮಾತ್ರ ಮುಕ್ತಿ ಕೊಡುವನು ಎಂದರೆ ವೈಷಮ್ಯ ನೈರ್ಘೃಣ್ಯಕ್ಕೆ ಒಳ ಗಾಗುವನು. ಆದುದರಿಂದ ಮುಕ್ತಿಗೆ ಪ್ರಧಾನ ಕಾರಣಭೂತನು ಸರ್ವೇಶ್ವರನೇ ಯಾದರೂ ತಾನು ಎಲ್ಲರಿಗೂ ಇಷ್ಟಬಂದಂತೆ ಮುಕ್ತಿಯನ್ನು ಕೊಡುವದಿಲ್ಲವೆಂದೂ, ಎರಡು ವಿಧವಾದ ಉಪಾಯಗಳಲ್ಲಿ ಯಾವದನ್ನಾದರೂ ತಾನು ಶಾಸ್ತ್ರಗಳಲ್ಲಿ ಹೇಳಿ ರುವಹಾಗೆ ಸರಿಯಾಗಿ ಯಾವ ಚೇತನನಾದರೂ ಅನುಷ್ಠಿಸಿದರೇ ಅವನ್ನು ವ್ಯಾಜೀಕರಿಸಿ, ಮುಕ್ತಿಯನ್ನು ಕೊಡುತ್ತಾನೆಂದೂ, ಅದರಿಂದಲೇ ಮು ಕುಂದನೆಂಬ ನಾಮಧೇಯವು ಸರ್ವೇಶ್ವರನಿಗೆ ಸಲ್ಲತಕ್ಕದ್ದೆಂದೂ ಸೂಚಿಸುತ್ತ,

ಕ್ಕಾಗಿಯೇ ಪಿರಗಿನ್ರುದುಮ್ ಕುರಿಯೊನ್ರಾಲ್ ಎಂಬ ಪ್ರಯೋಗವು. ಇದ ರಿಂದ ಎರಡು ವಿಷಯವು ಸೂಚಿತವು,—(೧) ವ್ಯಾಜರೂಪವಾಗಿ ಭಕ್ತಿ ಅಥವಾ ಪ್ರಪತ್ತಿರೂಪ ಉಪಾಯಾನುಷ್ಠಾನವೂ ಆವಶ್ಯಕವು. (೨) ಆ ಉಪಾಯಾನು ಷ್ಠಾನವು ಶಾಸ್ತ್ರ ಸಮ್ಮತವಾದುದಾಗಿ ಅದರಿಂದ ಪರಮ ಕಾರುಣಿಕನು ಪ್ರೀತ ನಾಗಬೇಕು. ಆದುದರಿಂದ ಯಮೇವೈಷ ವೃಣುತೇ ಎಂಬ ಶ್ರುತಿಯು ಇದನ್ನೇ ಉಪದೇಶಿಸುತ್ತದೆ. ಬರೀ ಉಪಾಯಾನುಷ್ಠಾನವು ಸಾಲದು, ಅದರಿಂದ ಭಗ ವಂತನು ಪ್ರೀತನಾಗಿ ಈ ಅಧಿಕಾರಿಯನ್ನು ವರಿಸಿದರೆ, ಆಗೀಗ ತೇನ ಲಭ್ಯನು ಎಂದು ಹೇಳಿರುತ್ತದೆಯಾದುದರಿಂದ ಸಾಧ್ಯೋಪಾಯಾನುಷ್ಠಾನ ವಿಷಯದಲ್ಲಿ ಶಙ್ಕೆಗೆ ಅವಕಾಶವಿಲ್ಲವೆಂದುಪದೇಶಿಸಿರುತ್ತಾರೆ. ಹಾಗೆಯೇ ಗೀತೆಯಲ್ಲೂ ಪರ ಮಾತ್ಮನೇ ಹೇಳಿಕೊಂಡಿರುತ್ತಾನೆ. ಈ ಶ್ರುತ್ಯರ್ಥವನ್ನೇ ಬಹುನಿಪುಣತರ ವಾಗಿ ಶ್ರೀಕೃಷ್ಣನು ಅಲ್ಲಿ ಉಪಪಾದಿಸಿರುವದರಿಂದ ಶ್ರೀಭಾಷ್ಯಕಾರರು ಆ ಶ್ಲೋಕ ಗಳ ವ್ಯಾಖ್ಯಾನದಲ್ಲಿ ಈ ಕಠಶ್ರುತಿಯನ್ನೇ ಉದಾಹರಿಸಿರುತ್ತಾರೆ. ಅವು ಯಾವುವೆಂದರೆ :—

ನಾಹಂವೇದೈರ್ನ ತಪಸಾ ನ ದಾನೇನ ನ ಚೇಜ್ಯಯಾ ।
ಶಕ್ಯ ಏವಂ ವಿಧೋ ದ್ರಷ್ಟುಂ ದೃಷ್ಟವಾನಸಿ ಮಾಂ ಯಥಾ ।
ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಮೇವಂ ವಿಧೋಽರ್ಜುನ ।
ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ ॥

(ಗೀ ೧೧. ೫೩. ೫೪) ನನ್ನಲ್ಲಿ ಭಕ್ತಿಯಿಲ್ಲದ ಬರೀ ವೇದಗಳಿಂದಲೂ ಎಂದರೆ ಅವುಗಳನ್ನು ಗುರುಗಳ ಮೂಲಕ ಅಧ್ಯಯನವನ್ನು ಹೇಳಿಸಿಕೊಳ್ಳುವದೇನು, ಅವನ್ನೇ ಪ್ರವಚನಮಾಡುವದೇನು, ಇನ್ನೊಬ್ಬರಿಗೆ ಅಧ್ಯಯನ ಹೇಳುವದೇನು, ಇವುಗಳಿಂದಲೂ,ಬರೀ ಯಾಗದಾನಹೋಮತಪಸ್ಸುಗಳಿಂದಲೂ ನನ್ನನ್ನು ಸಾಕ್ಷಾ ತ್ಕರಿಸಲು ಸಾಧ್ಯನಲ್ಲವು. ಇನ್ನು ಹೇಗೆ ಸಾಧ್ಯನೆಂದರೆ, ಅವ್ಯಭಿಚರಿತ ಏಕಾನ್ತ್ಯ ಭಕ್ತಿಯಿಂದ ಸರಿಯಾಗಿ ಶಾಸ್ತ್ರಗಳ ಮೂಲಕ ತಿಳಿಯಲೂ ಶಕ್ಯನು, ಯಥಾವ ತ್ತಾಗಿ ಸಾಕ್ಷಾತ್ಕರಿಸಲು ಶಕ್ತನು,ಯಥಾವತ್ತಾಗಿ ಪರಿಪೂರ್ಣನಾದ ನನ್ನನ್ನನುಭವಿ ಸಲೂ ಸಾಧ್ಯನ." ಎಂಬುದು ಅರ್ಥವು, ಈ ಶ್ಲೋಕಗಳು ಸಾಧ್ಯೋಪಾಯದ ಆವ ಶ್ಯಕತೆಯನ್ನೂ, ಅದರಿಂದ ಭಗವಂತನು ಸುಪ್ರೀತನಾಗಿ ಸಾಧ್ಯೋಪಾಯಾನುಷ್ಠಾ ನವು ಪೂರ್ಣವಾಗುವಹಾಗೆ ಮಾಡಿ ಪ್ರಾಪ್ಯನಾಗುವನೆಂಬರ್ಥವನ್ನೂ ಸೂಚಿಸುತ್ತ ವೆ. ರಾಜ್ಯಾಡಳಿತೆಗಳಿಗೆ ಯೋಗ್ಯರಾಗಿರುವವರನ್ನು ಚುನಾಯಿಸುವದರಲ್ಲಿ ರಾಜನೇ ಯದ್ಯಪಿ ಸ್ವತಂತ್ರನಾದರೂ ತನಗೆ ಯಾವುದೊಂದು ಪಕ್ಷಪಾತ ಬುದ್ಧಿಯೂ ಇಲ್ಲವೆಂದು ತೋರಿಸಲು, ಸಿವಿಲ್ ಸರ್ವಿಸ್ ಪರೀಕ್ಷೆ ಯೆಂಬ ಒಂದು ವ್ಯಾಜವನ್ನು

ಏರ್ಪಡಿಸಿ ಅದರಲ್ಲಿ ತೇರ್ಗಡೆ ಹೊಂದಿದವರನ್ನೇ ಹೇಗೆ ವರಿಸುತ್ತಾನೋ ಹಾಗೆಯೇ ಸರ್ವೇಶ್ವರನೂ ಸಹ ತನಗೆ ಯಾವ ಪಕ್ಷಪಾತಗಳೂ ಇಲ್ಲವೆಂದೂ ಭಕ್ತಿ ಪ್ರಪತ್ತ್ಯುಪಾಯಾನುಷ್ಠಾನಗಳನ್ನೇ ವ್ಯಾಜೀಕರಿಸಿ, ಅವುಗಳನ್ನು ಶಾಸ್ತ್ರೋಕ್ತರೀತ್ಯಾ ಸರಿಯಾಗಿ ನಡೆಸಿದವರಿಗೆ ಮಾತ್ರವೇ ಮೋಕ್ಷವನ್ನು ಅನುಗ್ರಹಿಸುವನು. ಆದುದರಿಂದ ವ್ಯಾಜವು ಆವಶ್ಯಕವೆಂದು **ಕುರಿಯೊನ್ರಾಲ್** ಎಂಬ ಪ್ರಯೋಗದಿಂದ ಉಪದೇಶಿಸಿರುತ್ತಾರೆ. ಶ್ರೀ ಭಾಷ್ಯಕಾರರವರೂ "**ಯಮೇವೈಷ ವೃಣುತೇ**" ಎಂಬಲ್ಲಿ ಹೇಳಿರುವ ವರಣವು ಶ್ರಿಯಃಪತಿಯು ನಿರ್ಹೇತುಕವಾಗಿ ಮಾಡುವದಿಲ್ಲವೆಂದೂ ಹೇತುಸಾಪೇಕ್ಷೆಯಾಗಿಯೇ ನಡೆಸುವನೆಂದೂ, ಉಪಪಾದಿಸಿರುತ್ತಾರೆ. ಈ ಸಂದರ್ಭದಲ್ಲಿ ಅವರು ಹೇಳಿರುವದೇನೆಂದರೆ:— "**ಪ್ರಿಯತಮ ಏವ ಹಿ ವರಣೀಯೋ ಭವತಿ, ಯಸ್ಯಾಯಂ ನಿರತಿಶಯ ಪ್ರಿಯಸ್ಸ ಏವಾಸ್ಯ ಪ್ರಿಯತಮೋ ಭವತಿ; ಪ್ರೀತಿ ರೂಪತಾಪನ್ನ ಭಕ್ತಿರೇವ ವರಣ ಹೇತು ತಯಾ ಶ್ರುತ್ಯಭಿಪ್ರೇತಾ; ನ ತು ನಿರ್ಹೇತುಕಂ ವರಣಂ**" ಇದರ ಅರ್ಥವೇನೆಂದರೆ, "ಯಾವನು ತುಂಬಾ ಪ್ರಿಯತಮನಾಗುವನೋ ಅವನು ತಾನೇ ಸರ್ವೇಶ್ವರನಿಂದ ವರಿಸಲು ಯೋಗ್ಯನಾಗುವನು; ಪ್ರೀತಿ ರೂಪವನ್ನು ಹೊಂದಿದ ಭಕ್ತಿಯಾಗ ಸರ್ವೇಶ್ವರನಿಂದ ವರಿಸಲ್ಪಡುವದಕ್ಕೆ ಹೇತುವಾಗುತ್ತದೆಂಬುದೇ "**ಯಮೈವೈಷ ವೃಣುತೇ**" ಎಂಬ ಶ್ರುತಿಯ ಅಭಿಪ್ರಾಯವು; ಕಾರಣವೇನೂ ಇಲ್ಲದೇನೇ ಸರ್ವೇಶ್ವರನು ವರಿಸುವನೆಂಬ ಅಭಿಪ್ರಾಯವಲ್ಲವು". ಆದುದರಿಂದ ಪರಮ ಪುರುಷವರಣೀಯತೆಗೆ ಹೇತು ಭೂತಗಳಾದ ಈ ಸಾಧ್ಯೋಪಾಯಗಳ ವಿಷಯಗಳಲ್ಲಿ ಯಾವ ವಿಧವಾದ ಶಂಕೆಯೂ ಯುಕ್ತವಲ್ಲವು; ಭಕ್ತ್ಯುಪಾಯವು ಸ್ವರೂಪವಿರುದ್ಧವೆಂದೂ, ಪ್ರಪತ್ತಿಯು ಪೂರ್ವೀಕರಾದ ಮುನಿ ಜನಗಳು ಅನುಷ್ಠಿಸಲಿಲ್ಲವೆಂದೂ ಇತ್ಯಾದಿ ಆಕ್ಷೇಪಗಳೆಲ್ಲಾ ಶಾಸ್ತ್ರವನ್ನು ತ್ಯಜಿಸಿ ಮಾಡುವಂತವುಗಳೆಂದು ತಿಳಿಸುವದಕ್ಕಾಗಿ **ಉರೈಕ್ಕಿನ್ರ** ನನ್ನೆರಿ ಎಂದು ಹೇಳಿ, ಶಾಸ್ತ್ರಚೋದಿತಗಳಾಗಿ ಯಿರುವದರಿಂದ ಅವುಗಳು **ನಲ್ ನೆರಿ** ಉತ್ಕೃಷ್ಟಮಾರ್ಗಗಳೆಂದು ಹೇಳಿ, ಅವುಗಳನ್ನು **ಓರುನ್ನುಡಿಗಳಿಲ್ ಓರ್ನ್ದು** ಶಾಸ್ತ್ರಗಳಲ್ಲಿ ಹೇಳಿರುವಹಾಗೆ ಅನುಷ್ಠಿಸಿ ಈ ಅನುಷ್ಠಾನಗಳು ಶ್ರಿಯಃಪತಿಯನ್ನು ವಶೀಕರಣಮಾಡಿಕೊಳ್ಳುವ ಉಪಾಯಗಳೆಂಬ ಅನುಸಂಧಾನ ಬೇಕೆಂದು ಹೇಳಿರುತ್ತಾರೆ. ಈ ಸಾಧ್ಯೋಪಾಯಗಳನ್ನನುಷ್ಠಿಸಿ ಪ್ರಪನ್ನನಾಗದೇ ಇದ್ದರೆ ಈ ಕರುಣಾಸಾಗರನು ಮೋಕ್ಷವನ್ನೀಯನು ಎಂದು "**ಪ್ರಪನ್ನಾದನ್ಯೇಷಾಂ ನ ದಿಶತಿ ಮುಕುಂದೋ ನಿಜಪದಮ್**" ಎಂದು ಸ್ವಾಮಿಯವರೇ ಕಂಠೋಕ್ತವಾಗಿ ಹಿಂದೆ ತಿಳಿಸಿರುತ್ತಾರೆ. ಆದುದರಿಂದ ಭಕ್ತಿ ಪ್ರಪತ್ತಿಗಳೇ ಮೋಕ್ಷ ಸಾಧಕಗಳಾದ ಉಪಾಯಗಳು ಎಂಬುದೇ ಸಿದ್ಧಾಂತವು ಎಂಬ ಭಾವವು.

ಆಗಲಿ, ಇವುಗಳನ್ನೇನೋ ಮೋಕ್ಷೋಪಾಯಗಳೆಂದೇ ಅಂಗೀಕರಿಸೋಣ; ಶಾಸ್ತ್ರ ಸಮ್ಮತವಾಗಿಯೇ ಸರಿಯಾಗಿಯೇ ಅನುಷ್ಠಿಸತಕ್ಕದ್ದೆಂದೂ ಒಪ್ಪೋಣ; ಹೀಗೆಲ್ಲಾ ಮಾಡಿದರೂ ಭಗವಂತನು ಸುಪ್ರೀತನಾಗದೇ ಹೋದರೂ ಆಗಲೂ ಅವು ನಿರರ್ಥಕಗಳಲ್ಲವೋ? ಎಂದರೆ ಹೇಳುತ್ತಾರೆ; ಉಲಗಮ್ ದರಿಕ್ಕಿನ್ರತಾರಕನಾರ್ ಸನ್ನಿಧಿಸುವನು; ಸಮಸ್ತ ಜಗತ್ತಿಗೂ ಆತನೇ ಧಾರಕನಾಗಿರುತ್ತಾನೆ. ಆತನ ಪ್ರಶಾಸನೆ ನಿಯಮನದಲ್ಲಿ ಸಮಸ್ತ "ದ್ಯಾವಾಪೃಥಿವ್ಯೌ ವಿಧೃತೌ ತಿಷ್ಠತಃ," "ಏಷ ಸೇತುರ್ವಿಧರಣಃ" "ಏಷಾಂ ಲೋಕಾನಾಂ ಅಸಂಭೇದಾಯ" ಎಂದು ಹೇಳಿರುವಹಾಗೆ ಈ ಲೋಕ ನಿಯಮನದಲ್ಲಿ ಬದ್ಧಕಂಕಣನಾಗಿ ಕಾತಿರುವಾಗ, ತನ್ನ ನಿಯಮನಾನುಸಾರ ಉಪಾಯಾನುಷ್ಠಾನಮಾಡಿದ ಜೀವನನ್ನು ಎಂದಿಗಾದರೂ ಮರೆತಾನೋ? "ಜ್ಞಾನೀತ್ವಾತ್ಮೈವಮೇ ಮತಂ" ತಾನು ಎಲ್ಲಾದಕ್ಕೂ ಆತ್ಮನಾಗಿರುವದು ಹಾಗಿರಲಿ, ಆತನೇ ತನಗೆ ಆತ್ಮ ಎಂದು ಭಗವಂತನು ಹೇಳಿಕೊಂಡಿರುತ್ತಾನೆ "ಮಿತ್ರಭಾವೇನ ಸಂಪ್ರಾಪ್ತಂ ನ ತ್ಯಜೇಯಂ ಕಥಂಚನ" ಎಂದು ಹೇಳಿರುತ್ತಾನೆ. ಆದುದರಿಂದ ಆತನನ್ನು ತಾರಕನಾರ್ ಎಂದು ಹೇಳಿರುತ್ತಾರೆ, ಸಂಸಾರ ತಾರಕನು ಎಂದರ್ಥವನ್ನಾಗಲಿ ಹೇಳಬಹುದು. ಅಥವಾ "ಏತಂ ಸೇತುಂ ತೀರ್ತ್ವಾ" (ಛಾ. ೮. ೪. ೧.) ಎಂಬಲ್ಲಿ "ತರತಿಶ್ಚ ಪ್ರಾಪ್ತಿವಚನಃ" ಎಂದು ಭಾಷ್ಯವಿರುವದುದರಿಂದ ತಾರಕನಾರ್ ಎಂಬುವದರಿಂದ ತಾನೇ ಪ್ರಾಪ್ತಿಯು ಎಂದೂ ಅರ್ಥ ಹೇಳಬಹುದು. ಅಥವಾ "ಸಂಸಾರಸಾಗರ ನಿಮಗ್ನ"ರಾದವರ ಉತ್ತಾರಣೆಯಲ್ಲಿ ಬಧ್ಧಾದರನಾದುದರಿಂದಲಾಗಲಿ "ತಾರಕನಾರ್"ನೆಂದು ಪ್ರಯೋಗಿಸಿರಬಹುದು. ಇದರಿಂದ ಆತನ ಪ್ರಾಪ್ತಿಯುಂಟಾಗುವದರಲ್ಲಿ ಸಂದೇಹವಿಲ್ಲವೆಂಬುದೂ ಸೂಚಿತವು. ಹಾಗೆ ತಾನು ಪ್ರಾಪ್ಯನಾಗಿ ಸಾಯುಜ್ಯವನ್ನೂ ಸಾಷ್ಟಿರ್ತೆಯನ್ನೂ ದಯಪಾಲಿಸುವದೂ ತನ್ನ ಕೃಪಾಸ್ವಭಾವವೇ ವಿನಾ ಬೇರೆಯಲ್ಲಾ ಎಂದು ತಿಳಿಸುವದಕ್ಕಾಗಿ "ತಕವಾಲ್" ಎಂಬ ಪ್ರಯೋಗವು. ಆದರೆ ಈ ಅನಾದಿ ಕರ್ಮ ಪ್ರವಾಹಮೂಲಕ ವಿಸ್ಮೃಯರೇ, ಮಹಾಪರಾಧಿಗಳ ಭಯವಿಲ್ಲವೋ ಎಂದರೆ ಪ್ರಸನ್ನನಾದ ಬಳಿಕ ಆತನನ್ನೇ ನಿರಂತರ ಧ್ಯಾನಮಾಡುತ್ತಾ ಆತನ ಪ್ರೀತಿಯನ್ನು ಸಂಪಾದಿಸಿದ ಬಳಿಕ "ತಸ್ಮಿನ್ ಪ್ರಸನ್ನೇ ಕಿಮಿಹಾಸ್ತ್ಯಲಭ್ಯಂ.... ನಿಸ್ಸಂಶಯೋಮುಕ್ತಿ ಫಲಪ್ರದಾತಃ" ಎಂದು ಹೇಳಿರುವ ಮೇರೆಗೆ ಅನಿಷ್ಟನಿವೃತ್ತಿಮೂಲಕ ಇಷ್ಟಪ್ರಾಪ್ತಿಯಲ್ಲಿ ಈಷದಪಿ ಸಂದೇಹವಿಲ್ಲವೆಂದು ಸೂಚಿಸುವದಕ್ಕಾಗಿ "ತರಕ್ಕನ್ರ ನಮೋ" ಎಂದು ಪ್ರಯೋಗಿಸಿರುತ್ತಾರೆ.

ಅವತಾರಿಕೆ:—ಸಿದ್ಧೋಪಾಯನಾದ ಸರ್ವೇಶ್ವರನು ಸ್ವತಃ ಸರ್ವಜ್ಞನು, ಸರ್ವಶಕ್ತನು, ಸ್ವತಂತ್ರನು, ಇದಲ್ಲದೆ ನಮಗೆಲ್ಲಾ ಸಹಜವಾದ ಪರಮ ಸುಹೃತ್ತು; ಶೇಷಿಯು, ಕರುಣಾಕಾಗರನು; ನಾವು ಆತನಿಗೆ ಸಹಜವಾಗಿರುವ ಅಸ್ವತಂತ್ರರಾಗಿರುವ ಮಕ್ಕಳು, ದಾಸರು, ಸಂಸಾರ ಸಾಗರದಲ್ಲಿ ಬಿದ್ದು ಒದ್ದಾಡುತ್ತಿರುವವರು. ಇಂತವರು ಆತನನ್ನು ಈ ಸಾಧ್ಯೋಪಾಯಗಳನ್ನನುಷ್ಠಿಸಿ ಬೇಡಿಕೊಳ್ಳಬೇಕೇ? ಹಾಗೆ ಬೇಡಿದನಂತರ ರಕ್ಷಿಸೋಣವು ಆತನ ಪ್ರಭಾವಕ್ಕೆ ಕುಂದಕವಲ್ಲವೇ? ಸಾಧ್ಯೋಪಾಯವು ಆವಶ್ಯಕವೆಂದರೆ, ಸಿದ್ಧೋಪಾಯ ಪ್ರಾಧಾನ್ಯಕ್ಕೂ ಏಕತ್ವಕ್ಕೂ ವಿರೋಧವಲ್ಲವೇ? ಸಾಧ್ಯೋಪಾಯದಿಂದ ವಶ್ಯನೆಂದರೆ ಸರ್ವೇಶ್ವರನಿಗೆ ಸಿದ್ಧೋಪಾಯತ್ವವು ಹೇಗೆ ಕೂಡುತ್ತದೆ? ಸಾಧ್ಯೋಪಾಯವೂ ಆವಶ್ಯಕವೇ ಎಂದರೆ ಸಾಧ್ಯೋಪಾಯವಿಲ್ಲದೆ ರಕ್ಷಿಸಲು ಆತನಿಗೆ ಶಕ್ತಿಯಿಲ್ಲವೆಂದು ಆತನ ಸರ್ವಶಕ್ತಿತ್ವಕ್ಕೆ ನ್ಯೂನತೆಯಲ್ಲವೋ? ಇತ್ಯಾದಿ ಅನೇಕ ಆಕ್ಷೇಪಗಳೆಲ್ಲಾ ಸರಿಯಾದ ಆಕ್ಷೇಪಗಳಲ್ಲವೆಂದು ಹೇಳುತ್ತಾರೆ.

ಮೇಲೆ ಹೇಳಲ್ಪಟ್ಟ ಸಾಧ್ಯೋಪಾಯಶೋಧನವು ಸ್ವಾಚಾರ್ಯ ಕೃಪಾಲಬ್ಧವಾದುದೆನ್ನುತ್ತಾರೆ.

ಸತ್ತರ್ಕಗಳಲ್ಲದ ಆಕ್ಷೇಪಗಳನ್ನೆಲ್ಲಾ ನಿರ್ಮೂಲನಮಾಡುವ ಸಿದ್ಧಾನ್ತವನ್ನೊಳಗೊಂಡಿರುವ ತರ್ಕವಿದ್ಯೆಯಲ್ಲೇ ಶಿಕ್ಷಿತರಾಗಿರುವದೂ ಅಲ್ಲದೆ, ಕೆಮ್ಮಣ್ಣಿನಿಂದ ಕಲುಷಿತವಾದ ನೀರು ಚಿಲ್ಲದ ಬೀಜದಿಂದ ನೈರ್ಮಲ್ಯವನ್ನು ಹೇಗೆ ಹೊಂದುತ್ತದೋ, ಹಾಗೆ ತಮ್ಮ ಆಚಾರ್ಯರುಗಳು ಉಪನಿಷತ್ತುಗಳ ಸಾರತಮವಾದ ಉಪದೇಶದಿಂದ ಅಂತಹ ತರ್ಕಗಳಿಂದ ಕಲುಷಿತವಾಗದಹಾಗೆ ಪರಿಶುದ್ಧವಾದ ಜ್ಞಾನವುಳ್ಳವರು; ಅವರುಗಳ ತರ್ಕ ನೈಪುಣ್ಯತೆಯೆಲ್ಲಾ ಸಾರಭೂತವಾದ ಉಪನಿಷತ್ತುಗಳ ಜ್ಞಾನದಿಂದ ಪ್ರತಿಷ್ಠಿತವಾದ ಸತ್ತರ್ಕವು. ಅಂತಹ ಸತ್ತರ್ಕದಿಂದ ಸಮಸ್ತ ಇಂದ್ರಜಾಲರೂಪ ಕುತರ್ಕಗಳ ಕಾಲುಷ್ಯವೆಲ್ಲಾ ತೊಲಗಿ ಸ್ವಚ್ಛವಾದ ಜ್ಞಾನವಿಕಾಸವುಳ್ಳವರು. ಅಂತಹ ಪರಮಾಚಾರ್ಯರ ಕೃಪಾಪೂರ್ಣವಾದ ಉಪದೇಶವು ಲಭಿಸಿದುದರಿಂದ ಈ ಸಾಧ್ಯೋಪಾಯ ಶೋಧನವನ್ನು ತಾವು ಮಾಡಿರುವವಾಗಿ ಹೇಳಿಕೊಳ್ಳುತ್ತಾರೆ.

ಅರ್ಥ:—ನಮ್ಮ ಮಹನೀಯರಾದ ಮಹಾಪ್ರಾಜ್ಞರಾದ ಪೂರ್ವಾಚಾರ್ಯರುಗಳು ನಮಗೆ ಪರಮಕೃಪೆಯಿಂದ ಸದುಪದೇಶವನ್ನು ಮಾಡಿರುತ್ತಾರೆಂದು ಹೇಳುತ್ತಾರೆ. ಏನನ್ನು ಉಪದೇಶಿಸಿರುತ್ತಾರೆಂದರೆ:—ನಃ-ನಮ್ಮಗಳಿಗೆ, ಸಾಧ್ಯಾಂ- ಸಾಧ್ಯೋಪಾಯವಾದ, ಭಕ್ತಿ ಅಥವಾ ಪ್ರಪತ್ತಿಮಾರ್ಗವನ್ನು, ಪ್ರಕರಣವು ಪ್ರಪತ್ತಿಮಾರ್ಗವಾದುದರಿಂದ, ಸಾಧ್ಯಾಂ ಎಂಬುದರಿಂದ ಪ್ರಪತ್ತಿ ಎಂದು ಇಟ್ಟುಕೊಳ್ಳಬಹುದು. ಸಿದ್ಧೋಪಾಯ ವಶೀಕ್ರಿಯಾಂ-ಸಿದ್ಧೋಪಾಯನಾದ ಶ್ರಿಯಃಪತಿಯನ್ನು ವಶೀ

ಉಕ್ತಪ್ರಕಾರ ಸಾಧ್ಯೋಪಾಯಶೋಧಕತ್ವಂ ಸ್ವಾಚಾರ್ಯ
ಕೃಪಾಲಬ್ಧಮಿತ್ಯಾಹ.

ತತ್ತದ್ಧೈತುಕ ಹೇತುಕೇ ಕೃತಧಿಯಸ್ತರ್ಕೇಂದ್ರಜಾಲಕ್ರಮೇ ।
ಬಿಭ್ರಾಣಾಃ ಕಥಕಪ್ರಧಾನ ಗಣನೇ ನಿಷ್ಠಾಂ ಕನಿಷ್ಠಾಶ್ರಯಾಮ್ ।
ಅಧ್ಯಾತ್ಮಶ್ರುತಿ ಸಂಪ್ರದಾಯ ಕತಕೈರದ್ಧಾ ವಿಶುದ್ಧಾಶಯಾ ।
ಸಿದ್ಧೋಪಾಯವಶೀಕ್ರಿಯಾಮಕೃಷತ ಸ ಸ್ವಾಧ್ಯಾಂ ಸಮಧ್ಯಾಪಯನ್ ॥೫೭॥

ಇತಿ ಕವಿತಾರ್ಕಿಕಸಿಂಹಸ್ಯ ಸರ್ವತಂತ್ರಸ್ವತಂತ್ರಸ್ಯ ಶ್ರೀವೇದಾಂತಾಚಾರ್ಯಸ್ಯ ಕೃತಿಷು ಶ್ರೀಮದ್ರಹಸ್ಯತ್ರಯಸಾರೇ ಸಾಧ್ಯೋಪಾಯಶೋಧನಾಧಿಕಾರಶ್ಚತುರ್ವಿಂಶಃ ॥

ಕರಣೋಪಾಯವನ್ನಾಗಿ, ಇತಿ - ಎಂಬದಾಗಿ, ಸಮಧ್ಯಾಪಯನ್ - ವೇದಾಂತ ಶಾಸ್ತ್ರ ಸಾರ್ವಭೌಮರಾದ ಪ್ರಯುಕ್ತ ಚನ್ನಾಗಿ ಬುದ್ಧಿಯನ್ನು ಕಲಿಸಿರುತ್ತಾರೆ, ಬಹು ಸ್ವಾರಸ್ಯವಾಗಿ ನಿಸ್ಸಂದೇಹವಾಗಿ, ಯಾವದೊಂದು ಶಂಕೆಗಳಿಗೂ, ಅವಕಾಶ ವಿಲ್ಲದಹಾಗೆ ಕೃಪಯಾ ಉಪದೇಶಿಸಿರುತ್ತಾರೆ. ಅವರು ಎಂತವರೆಂದರೆ ಹೇಳುತ್ತಾರೆ:—ಪೂರ್ವಾರ್ಧದಿಂದ ದುಷ್ಟ ಹೇತುಗಳನ್ನು ಹೇಳಿ ಕುತರ್ಕಗಳನ್ನು ಮಾಡುವ ಯುಕ್ತಿವಾದಗಳಿಗೆ, ಸರಿಯಾದ ಯುಕ್ತಿಗಳನ್ನೇ ಹೇಳಿ, ಅವರುಗಳ ವಾದಗಳನ್ನು ಜಯಿಸುವ ತರ್ಕವಿದ್ಯೆಗಳಲ್ಲಿ ಚನ್ನಾಗಿ ಶಿಕ್ಷಿತರಾಗಿರುವ ತಾರ್ಕಿಕಾಗ್ರೇಸರರು ಎಂದು ಹೇಳುತ್ತಾರೆ, (೧) ತತ್ತದ್ಧೈತುಕ ಹೇತುಕೇ - ತತ್ತತ್ - ಆಯಾ ಎಂದರೆ ನಾನಾ ವಿಧವಾದ, ಹೈತುಕ - ಶಾಸ್ತ್ರಗಳನ್ನು ದೂರೀಕೃತಮಾಡಿ, ಬರೀ ಯುಕ್ತಿಗಳಾದ ಹೇತುಗಳನ್ನು ಎಂದರೆ ಕಾರಣಗಳನ್ನು ಹೇಳಿ ವಾದಮಾಡುವರು, ಕುತರ್ಕಗಳ ಮೂಲಕ ವಾದಮಾಡುವವರು ಹೈತುಕರು, ಅಂತವರ, ಹೇತುಕೇ - ಕಾರಣವಾಗಿವುಳ್ಳ, ತರ್ಕೇಂದ್ರಜಾಲಕ್ರಮೇ - ತರ್ಕ - ಇಂತಹ ತರ್ಕವೆಂಬ, ಇಂದ್ರಜಾಲಕ್ರಮೇ ಬುದ್ಧಿಯನ್ನು ಮೋಸಗೊಳಿಸುವ ಕ್ರಮದಲ್ಲಿ, ಕೃತಧಿಯಃ-ಶಿಕ್ಷಿತವಾದ ಬುದ್ಧಿಯುಳ್ಳವರಾದುದರಿಂದಲೇ, ಕಥಕ ಪ್ರಧಾನ ಗಣನೇ - ತಾರ್ಕಿಕಾಗ್ರೇಸರರನ್ನು ಗಣನೆ ಮಾಡುವದರಲ್ಲಿ, ಕನಿಷ್ಠಾಶ್ರಯಾಂ - ಕಿರುಬೆರಳಿನ, ಆಶ್ರಯವನ್ನು, ಬಿಭ್ರಾಣಾಃ - ಧರಿಸಿರುವಂತಹ ಪೂರ್ವಾಚಾರ್ಯರು, ತಾರ್ಕಿಕರೆಲ್ಲಿ ಮೊದಲು ಯಾರು ಎಂದು ಹೆಸರಗಳನ್ನು ಕಿರುಬೆರಳಲ್ಲಿಟ್ಟು ಎಣಿಸುವಾಗ, ನಮ್ಮ ಪೂರ್ವಾಚಾರ್ಯರುಗಳಾದ ಯಾಮುನೇಯರೂ ಶ್ರೀ ಭಾಷ್ಯಕಾರರೂ, ಹಾಗೆಯೇ ಈಚೆಗೆ ನಡಾದೂರಮ್ಮಾಳ್ ಕಿಡಾಂಬಿ ಅಪ್ಪುಳ್ಳಾರ್ ಮೊದಲಾದವರೂ ಎಂಬ ಭಾವವು; ಅವರುಗಳ ಉಪದೇಶದಿಂದ ತರ್ಕಶಾಸ್ತ್ರದಲ್ಲಿ ಪ್ರವೀಣತೆಯನ್ನು ಹೊಂದಿ ಕವಿತಾರ್ಕಿಕ ಸಿಂಹರೆಂದು ಪ್ರಸಿದ್ಧರಾದ ತಾವೂ ಸಹ ಸೂಚಿಸಲ್ಪಟ್ಟರು. ಹೀಗೆ ಪರಪಕ್ಷಕುತರ್ಕಗಳನ್ನು ಅಂತಹ ಯುಕ್ತಿವಾದಗಳಿಂದಲೇ ನಿರ್ಮೂಲಮಾಡುವ ಶಕ್ತಿಯುಳ್ಳವರೆಂಬ ಭಾವವು.

ಆದರೆ ಅಂತಹ ಯುಕ್ತಿವಾದ ಮಾತ್ರವೇ ಅಷ್ಟು ಪ್ರಶಸ್ತವಲ್ಲವು. ಇನ್ನೊ ಹೆಚ್ಚು ವೈಲಕ್ಷಣ್ಯವೂ ಉಂಟೆಂದು ಉತ್ತರಾರ್ಧದಿಂದ ತಿಳಿಸುತ್ತಾರೆ. ಪರವಾದಿಗಳ ತರ್ಕವಾದವೋ ಶಾಸ್ತ್ರವನ್ನು ತ್ಯಜಿಸಿದ ಕುತರ್ಕವು. ನಮ್ಮವರ ತರ್ಕವಾದವೋ ವೇದಾಂತಶಾಸ್ತ್ರಜ್ಞಾನದಿಂದ ಸುಪ್ರತಿಷ್ಠಿತವಾದ ಸತ್ತರ್ಕವು; ಅಂತಹ ತರ್ಕದಿಂದ ಸರ್ವಸಂಶಯಗಳನ್ನು ಕಳೆದುಕೊಂಡು ಪರಿಶುದ್ಧವಾದ ಅಂತಃಕರಣವುಳ್ಳವರೆಂದು ಹೇಳುತ್ತಾರೆ (೨) ಅಧ್ಯಾತ್ಮಶ್ರುತಿಸಂಪ್ರದಾಯಕತಕೈಃ- ಅಧ್ಯಾತ್ಮ ಶ್ರುತಿ - ವೇದಾಂತ ವಿದ್ಯೆಯನ್ನು ಬೋಧಿಸುವ ಶ್ರುತಿಗಳು ಇವು ಯಾವುವೆಂದರೆ ಮುಖ್ಯವಾಗಿ ದಶೋಪನಿಷತ್ತುಗಳು, ಇವುಗಳ ಸಂಪ್ರದಾಯ - ಗುರುಶಿಷ್ಯಕ್ರಮದಿಂದ ಅವಿಚ್ಛಿನ್ನವಾಗಿ ಪ್ರಾಪ್ತವಾದ ಉಪದೇಶಗಳೆಂಬ, ಕತಕೈಃ - ಕಶ್ಮಲವಾಗಿ ಕೆರೆಯನೀರಿನಹಾಗೆ ಕೆಂಪಗೆ ಕಲುಷಿತವಾದ ನೀರನ್ನು ಶುದ್ಧಿಮಾಡುವ ಸತ್ತರ್ಕರೂಪಗಳಲ್ಲಿರುವ ಚಿಲ್ಲದ ಬೀಜಗಳಿಂದ, ಆಢ್ಯಾ - ಬಹುಚನ್ನಾಗಿ, ವಿಶುದ್ಧಾಶಯಾಃ - ನಿರ್ಮಲವಾದ ಮನಸ್ಸುಗಳನ್ನುಳ್ಳವರು, ಇಂತಹ ಬರೀ ಯುಕ್ತಿವಾದದಿಂದಲೂ, ಮತ್ತು ವೇದಾಂತ ಶಾಸ್ತ್ರಜ್ಞಾನದಿಂದಲೂ ಗೆಲ್ಲಲು ಸಾಮರ್ಥ್ಯವುಳ್ಳ ತಾರ್ಕಿಕಾಗ್ರೇಸರರಾದ ತಮ್ಮ ಆಚಾರ್ಯರುಗಳು ಸಾಧ್ಯೋಪಾಯದಿಂದಲೇ ಸಿದ್ಧೋಪಾಯನು ವಶ್ಯನೆಂದು ಉಪದೇಶಿಸಿರುತ್ತಾರೆ. ಈ ಉಪದೇಶದಲ್ಲಿ ಪ್ರಧಾನವಾದ ಉಪದೇಶವು ಯಾವುದೆಂದರೆ.—"ತಸ್ಯ ಚ ವಶೀಕರಣಾಂ ತಚ್ಛರಣಾಗತಿರೇವ" ಎಂಬ ಶ್ರೀ ಭಾಷ್ಯಕಾರರ ಶ್ರೀಸೂಕ್ತಿಯು. ಆ ಸಿದ್ಧೋಪಾಯನಾಗಿ ಕರುಣಾನಿಧಿಯಾದ ಶ್ರಿಯಃಪತಿಯನ್ನು ವಶೀಕರಣಮಾಡಿಕೊಳ್ಳಬೇಕಾದರೆ, ಆತನ ಪಾದಾರವಿಂದದಲ್ಲಿ ಅನುಷ್ಠಿಸಿದ ಶರಣಾಗತಿಯೇ ಇದೇ ಸಾಧ್ಯೋಪಾಯವು ಇದು ಎರಡು ವಿಧವು (೧) ಅಙ್ಗರೂಪದಲ್ಲಿ ಭಕ್ತ್ಯುಪಾಯವು ಹೇಳಲ್ಪಟ್ಟಿತು (೨) ಅಙ್ಗರೂಪದಲ್ಲಿ ಪ್ರಪತ್ತ್ಯುಪಾಯವು ಹೇಳಲ್ಪಟ್ಟಿತು. ಮೊದಲನೆಯದು "ಮಾಮೇವ ಯೇ ಪ್ರಪದ್ಯಂತೇ" ಎಂದು (ಗೀತಾ ೭-೧೪) ಶ್ಲೋಕದಲ್ಲಿಯೂ, "ಮಾಂ ನಮಸ್ಕುರು ಮಾಮೇವೈಷ್ಯಸಿ" ಎಂದು (ಗೀತಾ ೯-೩೪) ಶ್ಲೋಕದಲ್ಲಿಯೂ, "ಮಾಮೇಕಂ ಶರಣಂ ವ್ರಜ" ಎಂದು ಗೀತಾ ೧೮-೬೬ನೆಯ ಶ್ಲೋಕದಲ್ಲಿಯೂ, ಹೀಗೆಲ್ಲಾ ಉಪದಾನವು. ಅಙ್ಗರೂಪ ಪ್ರಪತ್ತಿಯು (ಗೀ. ೧೮. ೬೬) ಶ್ಲೋಕದಲ್ಲಿಯೂ ಕಠಶ್ರುತಿಯಲ್ಲಿಯೂ, ವಸುರಣ್ಯೋ ಮಂತ್ರದಲ್ಲಿಯೂ, ಭಗವಚ್ಛಾಸ್ತ್ರದಲ್ಲಿಯೂ, ರಾಮಾಯಣ, ಭಾರತ, ಭಾಗವತಗಳಾದ ಇತಿಹಾಸಗಳಲ್ಲಿಯೂ, ಇನ್ನೂ ಶಾಂಡಿಲ್ಯ ಸ್ಮೃತಿ, ಅಹಿರ್ಬುಧ್ನ್ಯಸಂಹಿತೆ ಮೊದಲಾದವುಗಳಲ್ಲಿಯೂ ಉಪಪಾದಿತವು. ಹಾಗಾದರೆ ಗೀತೆಯಲ್ಲಿ ಈ ಪ್ರಕರಣ ಪ್ರಪತ್ತಿಯ ಮೇಲೆ ಬ್ರಹ್ಮ ಎಂಬುದೇ ಅನೇಕ ವ್ಯಾಧಿಗಳನ್ನು ಛೇದಿಸುವ ಶಸ್ತ್ರವಾದ ಶಾಸ್ತ್ರ

ಅಲ್ಲಿನ ಒಂದು ವಿಧವಾದ ಪ್ರಬಲರೋಗಕ್ಕೆ ಭೇಷಜವೆಂದು ಹೇಳಿದರೆ, ಇತರ ರೋಗಗಳಿಗೂ ಭೇಷಜವಲ್ಲವೆಂದು ಊಹಿಸಲು ಕಾರಣವಿಲ್ಲವು ಆದುದರಿಂದ ಗೀತಾ ಚರಮಶ್ಲೋಕವು ಎರಡು ವಿಧ ಶರಣಾಗತಿಯನ್ನೂ ಉಪದೇಶಿಸುತ್ತ ದೆಂದು ಭಾವಿಸತಕ್ಕದ್ದು. ಈ ಅಭಿಪ್ರಾಯಗಳನ್ನೆಲ್ಲವನ್ನೂ ಮೇಲಿನ ಶ್ರೀಭಾಷ್ಯ ಕಾರರ ದಿವ್ಯಸೂಕ್ತಿಯನ್ನೂ ಮನಸ್ಸಿನಲ್ಲಿಟ್ಟೇ, ಈ ಸಿದ್ಧೋಪಾಯ ಸಾಧ್ಯೋ ಪಾಯ ವಿಷಯಗಳಲ್ಲಿ ಉಂಟಾಗಬಹುದಾದ ಸರ್ವ ಸಂಶಯಗಳೂ ನಿಲ್ಲಲು ಸಾಧ್ಯವೇ ಇಲ್ಲವು. ಶ್ರೀ ಯಾಮುನೇಯರು ಶ್ರೀ ಭಾಷ್ಯಕಾರರು ಮೊದಲಾದ ತಾರ್ಕಿಕಾಗ್ರೇಸರರು ಇತರ ಸಿದ್ಧಾಂತಿಗಳನ್ನೆಲ್ಲಾ ತಮ್ಮ ಸತ್ತರ್ಕಗಳಿಂದ ಜಯಿಸಿ ಪೂರ್ವಪಕ್ಷ ಸಿದ್ಧಾನ್ತಗಳನ್ನೆಲ್ಲಾ ಅವರುಗಳನುಗ್ರಹಿಸಿರುವ ಸಿದ್ಧಿತ್ರಯ ಶ್ರೀ ಭಾಷ್ಯಾದಿಗ್ರಂಥಗಳಲ್ಲಿ ವ್ಯಕ್ತಪಡಿಸಿರುತ್ತಾರೆ. ಆ ಅಭಿಪ್ರಾಯಗಳನ್ನೇ ತಾವೂ ಉಪಪಾದನೆಮಾಡಿ, ಶತದೂಷಣೀ ಪರಮತಭಂಗ, ನ್ಯಾಯಸಿದ್ಧಾಂಜನ, ನಿಕ್ಷೇಪ ರಕ್ಷೆ ಮುಂತಾದ ಗ್ರಂಥಗಳಲ್ಲಿ ವ್ಯಕ್ತಪಡಿಸಿರುತ್ತೇನೆಂಬಂಶವೂ ಸೂಚಿತವು. ಆದುದು ರಿಂದ ತತ್ತ್ವದ್ವೈತುಕಹೇತುಕೇ, ತರ್ಕೇಂದ್ರಜಾಲಕ್ರಮೇ ಕೃತಧಿಯಃ ಎಂದು ತಮ್ಮ ಪೂರ್ವಾಚಾರ್ಯರನ್ನು ಕುರಿತು ಹೇಳಿದರು. ಬರೀ ತರ್ಕವು ಶಾಸ್ತ್ರಸಮ್ಮತ ವಿಲ್ಲದ್ದಾದರೆ ಕುತರ್ಕವಾಗುತ್ತದೆ. ಆದರಿಂದ ಪ್ರತಿಷ್ಠಿತಜ್ಞಾನವು ದೊರೆಯುವ ದಿಲ್ಲವೆಂದು "ತರ್ಕಾಽಪ್ರತಿಷ್ಠಾನಾದಪಿ" (೨.೧.೧೧.) ಎಂಬ ಬ್ರಹ್ಮ ಸೂತ್ರದಲ್ಲಿ ಶ್ರೀ ವ್ಯಾಸಮಹರ್ಷಿಯು ಹೇಳಿರುತ್ತಾರೆ. ಶ್ರೀದೇಶಿಕರೂ ಸಙ್ಕಲ್ಪ ಸೂರ್ಯೋದಯ ದಲ್ಲಿ, ತರ್ಕೋನಪ್ರತಿತಿಷ್ಠತಿ, ಕೇವಲತರ್ಕವೇ ಪ್ರತಿಷ್ಠಿತ ಜ್ಞಾನವನ್ನುಂಟು ಮಾಡುವದಿಲ್ಲವೆಂದು ಹೇಳಿರುತ್ತಾರೆ. ಜಗನ್ಮಿಥ್ಯಾದೃಶ್ಯತ್ವಾತ್ ರಜ್ಜುಸರ್ಪ ವತ್ ಎಂದು ಅನುಮಿತಿ ಯುಕ್ತಿಯಿಂದ ಸಾಧಿಸಿದರೆ ಅದೇ ಯುಕ್ತಿಯಿಂದಲೇ ಪರಬ್ರಹ್ಮ ಮಿಥ್ಯಾ ದೃಶ್ಯತ್ವಾತ್ ಎಂದು ಪ್ರತಿದ್ವಂದ್ವಿಯಾಗಿ ಅನುಮಿತಿ ಹೇಳಲು ಶಕ್ತಿಯುಳ್ಳವರೆಂಬ ಭಾವವು. ಇಂತಹ ಹೇತುಗಳಿಂದ ಸಾಧಿಸುವ ದೆಲ್ಲಾ ಇಂದ್ರಜಾಲಕ್ರಮವೆಂದು ಹೇಳಲ್ಪಟ್ಟಿತು. ಈ ಇಂದ್ರಜಾಲ ಕ್ರಮ ವನ್ನು ಮನಸ್ಸಿನಲ್ಲಿಟ್ಟು ಆಕ್ಕಿಯಾಳ್ವಾನ್ ನೆಂಬ ಅದ್ವೈತಿ ಸನ್ಯಾಸಿಯು, ಯಾಮು ನೇಯರನ್ನು ವಾದಕ್ಕೆ ಕರೆದು, ಹೇಳುತ್ತಾರೇನೆಂದರೆ.—ನೀವು ಮೂರು ವಾಕ್ಯಗ ಳನ್ನು ಹೇಳಬಹುದು, ಅಹುದು ಎಂಬುದನ್ನು ಅಲ್ಲವೆಂದು ನಾನು ಸಾಧಿಸಿಕೊಡು ವೆನು, ನೀವು ಅಲ್ಲವೆಂದು ಹೇಳಿದುದನ್ನು ನಾನು ಹೌದು ಎಂದು ಸಾಧಿಸುವೆನು ಎಂದು ಹೇಳಲಾಗಿ, ಇಂತಹ ಇಂದ್ರಜಾಲೋಕ್ತಿಗೆ ತತ್ಸದೃಶವಾದ ಯುಕ್ತಿಯೇ ಪರಮ ಭೇಷಜವಾಗಿ ತಿಳಿದು ಯಾಮುನೇಯರು ಅದು ರಾಜನ ಸಭಾಂಗಣವಾದು ದರಿಂದ "ರಾಜನು ಸಾರ್ವಭೌಮನೆಂದೂ, ರಾಜಪತ್ನೀ ಪತಿವ್ರತೆಯೆಂದೂ" ತಿಳಿಸಿ, ಇದನ್ನು ಅಲ್ಲವೆಂದು ಸಾಧಿಸಿ ನೋಡೋಣವೆಂದೂ, "ನಿಮ್ಮ ತಾಯಿಯು ಬಂಜೆ

ಯಲ್ಲವು ಎಂದು ಹೇಳಿ" ಬಂಜೆಯೆಂದು ಸಾಧಿಸಿ ಎಂದೂ, ಹೇಳಲು; ಇದಕ್ಕೆ ರಾಜ ಪುರೋಹಿತನು ಬಹಳ ಲಜ್ಜಿತನಾಗಲು; ಯುಕ್ತಿಮಾತ್ರವಲ್ಲದೆ ಅನಂತರ ಶಾಸ್ತ್ರವಾದಗಳಲ್ಲೂ ಜಿತರಾದರೆಂಬ ವೃತ್ತಾಂತ ಉಂಟು. ಹಾಗೆಯೇ ಶ್ರೀ ಭಾಷ್ಯಕಾರರಿಗೆ ವಿದ್ಯಾಗುರುಗಳಾದ ಯಾದವಪ್ರಕಾಶರೂ ಶ್ರೀ ಭಾಷ್ಯಕಾರರ ಶಿಷ್ಯರಾದ ಶ್ರೀ ಕೂರೇಶರೊಂದಿಗೆ ವಾದಮಾಡಿ ಸೋತು ವಿಶಿಷ್ಟಾದ್ವೈತ ಸಿದ್ಧಾಂತವನ್ನವಲಂಬಿಸಿ ಶ್ರೀ ವೈಷ್ಣವ ಯತಿಗಳಾಗಿ ಯತಿಧರ್ಮ ಸಮುಚ್ಚಯವೆಂಬ ಗ್ರಂಥವನ್ನು ಬರೆದು ಪ್ರಖ್ಯಾತರಾದರೆಂಬ ವೃತ್ತಾಂತವುಂಟು. ಹಾಗೆಯೇ ವೇದಾಂತಿ ಎಂಬ ನಾಮಧೇಯವುಳ್ಳ ಅದ್ವೈತಿಗಳು ಶ್ರೀ ಪರಾಶರ ಭಟ್ಟರಿಂದ ವಾದದಲ್ಲಿ ಜಿತರಾಗಿ ಶ್ರೀ ವೈಷ್ಣವ ಸಂನ್ಯಾಸಿಯಾಗಿ ನಂಜೀಯರೆಂಬ ಯತಿಯಾಗಿ ಮಹಾಪ್ರಸಿದ್ಧರಾದರೆಂಬ ಇತಿಹಾಸ ಉಂಟು. ಆದುದರಿಂದ ನಮ್ಮ ಪೂರ್ವಾಚಾರ್ಯರುಗಳೆಲ್ಲಾ ಕಥಕಪ್ರಧಾನ ಗಣನೆಯಲ್ಲಿ,ದತ್ತಕನಿಷ್ಠಕಾಂಗುಳಿಯುಳ್ಳವರು ; ತಾರ್ತ್ತಿಕಾಗ್ರೇಸರರು ಯಾರೆಂದು ಗಣನೆ ಮಾಡುವದರಲ್ಲಿ ಮೊದಲನೆಯದಾದ ಕಿರುಬೆಟ್ಟನಿಂದ ಎಣಿಸಲ್ಪಡುವವರು; ತಮ್ಮ ಹಾಗೆ ತಾರ್ಕಿಕ ಸಿಂಹರಾದ ನಮ್ಮ ಸಿದ್ಧಾನ್ತದ ತಾರ್ಕಿಕ ಶಿಖಾಮಣಿಗಳು ಎಂದು ಹೇಳಿಕೊಂಡಿರುತ್ತಾರೆ. ಆದುದರಿಂದಲೇ ನಿಷ್ಠಾಂ ಕನಿಷ್ಠಾಶ್ರಯಾಂ ಬಿಭ್ರಾಣಾಃ ಎಂಬ ಪ್ರಯೋಗವು. ಗಣನೆಯಲ್ಲಿ ಕನಿಷ್ಠ ಬೆರಳಿಗೆ ಪ್ರಾಥಮ್ಯವೆಂಬುದು "ಪುರಾ ಕವೀನಾಂ ಗಣನಾಪ್ರಸಂಗೇ" ಕಾಳಿದಾಸ ಕವಿಯೇ ದತ್ತಕನಿಷ್ಠಕನೆಂದೂ, ಆತನಿಗೆ ಸರಿಯಾದ ಎರಡನೆಯ ಕವಿಯೇ ದೊರೆಯದೇ ಇದ್ದುದರಿಂದ ಅನಾಮಿಕಾ ಎಂಬ ಎರಡನೆಯ ಬೆರಳು "ಅನಾಮಿಕಾ ಸಾರ್ಥವತೀ ಬಭೂವ" ಎಂದು ಅನಾಮಿಕಾ ಎಂಬ ಹೆಸರು ಅರ್ಥವತ್ತಾದುದೆಂದು ಕವಿಗಳು ವರ್ಣಿಸಿರುತ್ತಾರೆ. ಆದುದರಿಂದ ಅಗ್ರೇಸರತ್ವವನ್ನು ಹೇಳುವದಕ್ಕಾಗಿ ಕನಿಷ್ಠಾಶ್ರಯಾಂ ಎಂಬ ಪ್ರಯೋಗವು.

ನಮ್ಮ ಈ ಪೂರ್ವಾಚಾರ್ಯರುಗಳ ಮಹತ್ವವು ಬರೀ ತರ್ಕ ನೈಪುಣ್ಯದಿಂದ ಮಾತ್ರವೇ ಅಲ್ಲವು. ಹಾಗೆ ಬರೀ ತರ್ಕನೈಪುಣ್ಯವುಳ್ಳ ಮನಸ್ಸು ನೀರು ಕೆಂಪಗಿರುವ ಕೆರೆಯಹಾಗೆ ನಿರ್ಮಲವಾಗಿರದು. ಇತರ ಸಿದ್ಧಾನ್ತಿಗಳ ಮನಸ್ಸು ಹೇಗೆ ಕಲ್ಮಷವಿಲವಾಗಿರುತ್ತದೋ ಹಾಗೆಯೇ ಇರುತ್ತಿತ್ತು. ನಮ್ಮ ಪೂರ್ವಾಚಾರ್ಯರಾದ ತಾರ್ಕಿಕ ಶಿಖಾಮಣಿಗಳೋ ಎಂದರೆ, ಅಧ್ಯಾತ್ಮಶ್ರುತಿಸಂಪ್ರದಾಯ ಕತಕೈಃ ವಿಶುದ್ಧಾಶಯರು ಉಪನಿಷತ್ತುಗಳ ಸಾರಭೂತಾರ್ಥಗಳ ಅವಿಚ್ಛಿನ್ನ ಉಪದೇಶ ಮೂಲಕ ಗುರುಶಿಷ್ಯಕ್ರಮದಿಂದ ಒದಗಿದ ಜ್ಞಾನವೆಂಬ ಚಿಲ್ಲದ ಬೀಜಗಳಿಂದ ನಿರ್ಮಲೀಕೃತಗಳಾದ ಮನಸ್ಸನ್ನುಳ್ಳವರು. ಉಪನಿಷತ್ತುಗಳಿಗೆ, ಕಲುಷಿತವಾದ ಮತಿಗಳ ಹಾಗೆ ಅಪಾರ್ಥಗಳನು ಹೇಳದವರು, ದ್ವೈಪಾಯನರು ತಮ್ಮ ಸೂತ್ರಗಳಲ್ಲಿ ಸರಿಯಾದ ಅರ್ಥಗಳನು ಬೋಧಿಸಿದವನ್ನು ಯಥಾರ್ಥವಾಗಿ ಉಪದೇಶ ಮೂ

ಲಕ ಗ್ರಹಿಸಿದವರು. ಆದುದರಿಂದ ಶ್ರೀ ದೇಶಿಕರವರೇ ಸಙ್ಕಲ್ಪ ಸೂರ್ಯೋ ದಯದಲ್ಲಿ ತಮ್ಮ ಸಿದ್ಧಾಂತವು "ನಾಥೋಪಜ್ಞಂ ಪ್ರವೃತ್ತಂ ಬಹುಭಿ ರುಪಚಿತಂ ಯಾಮುನೇಯಪ್ರಬಂಧೈ । ತ್ರಾತಂ ಸಮ್ಯಗ್ಯತೀಂದ್ರೈ ರಿದಮಖಿಲತಮಃಕರ್ಶನಂ ದರ್ಶನಂ ನಃ॥"(೪೯) ಹೀಗೆ ಈ ಮೂರು ಮಹನೀ ಯರುಗಳಾದ ನಾಥಮುನಿ, ಯಾಮುನಮುನಿ, ಶ್ರೀ ರಾಮಾನುಜಮುನಿ ಇವರುಗಳ ಸತ್ತ್ವಗಳಿಂದ ಪ್ರತ್ಯಕ್ಷಾನುಮಾನ ಶಬ್ದಪ್ರಮಾಣಗಳಲ್ಲಿ ಅಪಲಾಪಾದಿ ಯಾವ ದೋಷಗಳೂ ಇಲ್ಲವಹಾಗೆ ಸಕಲಸಿದ್ಧಾಂತಗಳಲ್ಲಿರುವ ಶಙ್ಕಾರೂಪ ಅಂಧಕಾರ ವೆಲ್ಲಾ ತಮ್ಮ ಸಿದ್ಧಾಂತದ ಬೆಳಕಿನಿಂದ ತೊಲಗಿರುತ್ತವೆಂದು ಹೇಳಿಕೊಂಡಿರು ತ್ತಾರೆ. ಶ್ರೀ ಭಾಷ್ಯಕಾರರವರು ದಯಪಾಲಿಸಿದ ಸರ್ವಸಮಂಜಸಾರ್ಥಗಳು ಶ್ರೀ ಭಾಷ್ಯದಲ್ಲೂ ವೇದಾರ್ಥಸಂಗ್ರಹದಲ್ಲೂ ಹೇಳಲ್ಪಟ್ಟ ಸಮಂಜಸಾರ್ಥಗಳೇ ಗುರುಶಿಷ್ಯಕ್ರಮದಲ್ಲಿ ಬಂದುದೇ ಶ್ರುತಪ್ರಕಾಶಿಕೆಯಲ್ಲೂ ಪ್ರತಿಷ್ಠಿತಗಳಾಗಿ ಹಾಗೆಯೇ ಸಂಪ್ರದಾಯಕ್ರಮದಿಂದ ಶ್ರೀ ನಡಾದೂರಮ್ಮಾಳ್, ತಮ್ಮ ಮಾತುಲರು ಇವರಿಂದ ತಮಗೂ ಹೀಗೆ ಪರಂಪರಾಕ್ರಮದಿಂದ ಬಂದಿರುತ್ತವೆ ಎಂಬುದ ಸೂಚಿಸಲ್ಪಟ್ಟಿತು. ಇಂತಹ ಮಹನೀಯರ ಸರ್ವೋತ್ಕೃಷ್ಟವಾದ ಪರಮಹಿತ ವಾದ ನಿಸ್ಸಂಶಯವಾದ ಉಪದೇಶವು ಯಾವುದೆಂದರೆ:—ಕರುಣಾಸಾಗರನಾದ ಆಶ್ರಿತ ವತ್ಸಲನಾದ ಸಿದ್ಧೋಪಾಯನಾದ ಶ್ರಿಯಃಪತಿಯನ್ನು ವಶೀಕರಣಕ್ಕಾಗಿ, ಸೀತೆಯು ರಾವಣನಿಗೆ ಉಪದೇಶಿಸಿದ ರೀತಿಯಲ್ಲಿ, "ಪ್ರಸಾದಯಸ್ವತ್ವಂ ಚೈನಂ ಶರಣಾಗತವತ್ಸಲಂ" ಸಾಧ್ಯೋಪಾಯದಿಂದ ಪ್ರಸನ್ನನಾಗಿ ಮಾಡಿಕೊಳ್ಳತಕ್ಕದ್ದು ಆವಶ್ಯಕವು. ಇದನ್ನು ತಮ್ಮ ವಾದಮೂಲಕವಾಗಿ ಮಾತ್ರವೇ ಉಪಪಾದಿಸಿದು ದಲ್ಲವು. ಈ ಅರ್ಥಗಳು ತಮಗೆ ವಾದಿನಡಾದೂರಮ್ಮಾಳ್, ಆತ್ರೇಯ ರಾಮಾನು ಜಾಚಾರ್ಯರಾದ ಗುರುವರ್ಯರುಗಳಿಂದ ಪರಮಹಿತದಿಂದ ಉಪದೇಶಿಸಲ್ಪಟ್ಟವು. ಆದುದರಿಂದ ಸರ್ವರೂ ಇದೇ ಪರಮಹಿತವೆಂದು ಭಾವಿಸಿ ಪ್ರಮಾದರಹಿತರಾಗಿ ಗ್ರಹಿಸತಕ್ಕ ವಿಷಯವೆಂದು ಪರಮಕೃಪೆಯಾ ಉಪದೇಶಿಸಿರುತ್ತಾರೆ.

ಸಾರದೀಪಿಕಾವ್ಯಾಖ್ಯಾತೃವು ಈ ಅಧಿಕಾರದ ಸಙ್ಗ್ರಹಾರ್ಥವನ್ನು ಸೂಚಿಸಿರುತ್ತಾರೆ, ಹೇಗೆಂದರೆ:—"ಇಪ್ಪಡಿ ಇವ್ವಧಿಕಾರತ್ತಿಲ್ (೧)ಪ್ರಪತ್ತಿ ಯಿನ್ ಸರ್ವಾಧಿಕಾರತ್ವಮುಮ್, (೨) ವಿಶ್ವಾಸಾದಿಗಳಂಗಿಯನ್ನು ನಿಕ್ಷೇಪ ಮೋಅಂಗಿ ಎನ್ನು ಮಿಡಮುಮ್, ಮತ್ತು (೩) ಮುಣ್ಡಾನ ಶಙ್ಕಾ ವಿಶೇಷ ಪರಿಹಾರಙ್ಗಳುಮ್, (೪) ಭಕ್ತ್ಯಾದಿಗಳುಕ್ಕು ಸ್ವರೂಪವಿರುದ್ಧತ್ವಾದಿ ಶಙ್ಕಾಪರಿಹಾರಮುಮ್, (೫) ಸ್ವರಕ್ಷಣಾರ್ಥವ್ಯಾಪಾರಂ ವಿಹಿತಮೆನ್ನು ಮಿಡಮುಮ್, (೬) ವಿಹಿತತ್ವಾಭ್ಯುಕ್ತಿ ಪ್ರಪತ್ತಿಗಳಿರುಣ್ಣುಮ್ ಯಥಾಧಿ ಕಾರಂ ಸಂಗ್ರಹಿಸಿನ್ರುಮ್. (೭) ಭಕ್ತಿಯು ಮಾಹಾತ್ಮ್ಯದುಚಿ ಪರಿ

ಗ್ರಹೀತಮೆನ್ರುಮ್,(೮) ಕಲಿಯಗತ್ತಿಲುಮ್ ಭಕ್ತಿಕ್ಕಧಿಕಾರಿಗಳ್ ಸಂಭಾವಿತರೆನ್ರುಮ್,(೯) ಅಶಕ್ತಾಧಿಕಾರಿಕ್ಕು ಭಕ್ತಿಸ್ವಾಧಿಕಾರವಿರುದ್ಧಮೆನ್ರುಮ್, (೧೦) ನ್ಯಾಸವಿದ್ಯೆಯೇ ಸರ್ವವಿದ್ಯೆಗಳಿಲೆ ಶ್ರೇಷ್ಠಮೆನ್ರುಮ್, (೧೧) ಪರಿಕರ ವಿಷಯಶಙ್ಕಾಪರಿಹಾರಙ್ಗಳುಮ್ (೧೨) ಭಕ್ತಿಪ್ರಪತ್ತಿಗಳಿರಣ್ಡುಮ್ ಅಭಿಸಂಧಿ ಭೇದತ್ತಾಲೆ ವಿರುದ್ಧ ಫಲಸಾಧನಮಾಗಕ್ಕೂಡುಮೆನ್ರುಮ್, (೧೩) ಪ್ರಯೋಜನಾಂತರಪರಕ್ಕು ಇವೈ ಪ್ರವೃತ್ತಿ ಧರ್ಮಕೋಟಿಯಿಲೆ ನಿರ್ಕ್ಕುಮೆನ್ರುಮ್, (೧೪) ಅನ್ಯಾಭಿಗಮನಾದಿಗಳಾಗಾದೆನ್ರುಮ್, (೧೫) ಪ್ರಪನ್ನರ್ಕ್ಕು ಸರ್ವಕಾಲತ್ತಿಲುಮ್ ಭಗವದನುಸ್ಮರಣರೂಪ ಫಲಭಕ್ತ್ಯನುವರ್ತನತ್ತುಕ್ಕು ವಿರೋಧಮಿಲ್ಲೈಯೆನ್ರುಮ್ ಶೊಲ್ಲಿತ್ತಲೈಕ್ಕಟ್ಟಿನಾರ್"

ಈ ಅಧಿಕಾರದಲ್ಲಿ ಏನೇನು ಉಪಪಾದಿಸಲ್ಪಟ್ಟಿದೆ ಎಂಬುದನ್ನು ಅಧಿಕಾರ ಮಧ್ಯದಲ್ಲಿ ನಾವು ಕಾಣಿಸಿರುವ ವಿಷಯ ಸೂಚನೆಗಳಿಂದಲೂ ಗ್ರಹಿಸಬಹುದು.

ಅಧಿಕಾರಾರ್ಥಸಙ್ಗ್ರಹವನ್ನು ಸಾರದೀಪಿಕೆಯವರು ಸಂಸ್ಕೃತ ಶ್ಲೋಕಗಳ ಮೂಲಕ ಹೇಳಿರುವದನ್ನು ಸಾರವಿವರಣೆಯವರೂ ಉದಾಹರಿಸಿರುತ್ತಾರೆ:—"ಬದ್ಧಿಸೌಕರ್ಯಾಯ ಸಾರದೀಪಿಕಾಯಾ ಮುಕ್ತಾಧಿಕಾರಾರ್ಥ ಸಙ್ಗ್ರಹ ಕಾರಿಕಾಲಿಖ್ಯಂತೇ—"ಪ್ರಪತ್ತೇರ್ವೈದಿಕತ್ವೇಽಪಿ ಸರ್ವವರ್ಣಾಧಿಕಾರತಾ। ವಿಶ್ವಾಸಃ ಪ್ರಾರ್ಥನಾ ಚಾತ್ಮ ರಕ್ಷಾಭರ ಸಮರ್ಪಣೇ ॥೧॥ ಪರ್ಯವಸ್ಯತ್ಯತಶ್ಶಾಸ್ತ್ರೇ ನ್ಯಾಸೋಙ್ಗಿತ್ವೇನ ವಿಧೀಯತೇ। ಅಂಗ ಪಂಚಕ ಸಂಪನ್ನಂ ರಕ್ಷಾಭರಸಮರ್ಪಣಮ್ ॥೨॥ ಪ್ರಪತ್ತಿಶಾಸ್ತ್ರವಿಹಿತಂ ಸರ್ವದೇಶಿಕ ಸಮ್ಮತಂ। ನಸ್ವರೂಪವಿರುದ್ಧತ್ವಮ್ ಭಕ್ತ್ಯಾದೇರ್ವಿಹಿತತ್ವತಃ ॥೩॥ ನಾಹಂಕಾರಾದಿ ಗರ್ಭತ್ವಮಸ್ಯ ಶಾಸ್ತ್ರೇಷು ಕಥ್ಯತೇ। ಶೇಷತಾ ವಿರುದ್ಧತ್ವ ಪಾರತಂತ್ರ್ಯವಿರೋಧಿತೇ ।೪॥ ಶೇಷತ್ವಂ ಪಾರತಂತ್ರ್ಯಂ ಚ ಮುಕ್ತಾವಪಿ ಚ ವಿಶ್ರುತಮ್। ನಚೈಕಾಂತ್ಯ ವಿರುದ್ಧತ್ವಂ ಶ್ರೀಶಸಂರಾಧನತ್ವತಃ ॥೫॥ ಪ್ರಾಪ್ಯಾನುರೂಪತಾ ಭಾವ್ಯೋ ನಾನ್ಯೇಷಾಂ ಯುಕ್ತಿಗೋಚರಃ। ಶಾಸ್ತ್ರಾದೇನಾವಸೇಯತ್ವಾತ್ತೋ ಭಕ್ತಿಃ ಪ್ರಾಪ್ಯೋಚಿತಾಮತಾ ॥೬॥ ಪರಮರ್ಷಿಗೃಹೀತತ್ವಾನ್ನೈವಾಚಾರ್ಯ ಬಹಿಷ್ಕೃತಾ। ಕಲೌ ನಿಷೇಧೋ ನೈವಾಸ್ಯಾಸ್ತದಶಕ್ತೇರ್ವಿರುಧ್ಯತೇ ॥೭॥ ಸಂಭಾವಿತಸ್ವಭಾವತ್ವಂ ನಾಂಗಾನಾಂ ವಿಹಿತತ್ವತಃ। ಸಂಭಾವಿತತ್ವೇ ಚಾಂಗಾನಾಂ ವಿಶ್ವಾಸೇ ಸ್ಯೈತದಾ ಪತೇತ್ ॥೮॥ ವಿಶ್ವಾಸ ತಾರತಮ್ಯಸ್ಯ ಸಂಭವಾಲ್ಲೋಕಶಾಸ್ತ್ರಯೋಃ। ಮಹಾನೇವಹಿ ವಿಶ್ವಾಸಃ ಪ್ರಪತ್ತೇರಂಗಮಿಷ್ಯತೇ ॥೯॥ ತತ್ಕಾಲೇ ಮಂದ ವಿಶ್ವಾಸಾನಪಿ ಶ್ರೀಶೋಧಿಕಾರಿಣಃ। ಕ್ರಮೇಣ ಪೂರ್ಣ ವಿಶ್ವಾಸಾನ್ಕೃತ್ವಾಪಾತಿ ದಯಾನಿಧಿಃ ॥೧೦॥ ಉಪಾಯಾಂತರ ಶಕ್ತ್ಯಾದಿ ವಿಳಂಬ ಕ್ಷಮತಾ ಫಲೇ। ನ್ಯಾ

ಸಾದೇಃ ಭರ್ಜನೇ ಹೇತು ರ್ನವಿಶ್ವಾಸಾದಿ ಶೂನ್ಯತಾ ॥೧೧॥ ಕ್ವಚಿತ್ಪ್ರಪನ್ನೇ
ಭಗವತ್ಸಾಕ್ಷಾತ್ಕಾರಾದಿ ದೃಶ್ಯತೇ । ನ್ಯಾಸೇ ಸಙ್ಕಲ್ಪ ವೈಷಮ್ಯಾತ್ಪ್ರಾರಬ್ಧ
ಸುಕೃತಾತ್ಪರಾ ॥೧೨॥ ಕೇಚಿದ್ದೃಷ್ಟಫಲಾಸಿದ್ಧ್ಯೈನ್ಯಾಸೇಸುವಿಹಿತೇ
ಫಲೇ । ಕರ್ತು ಕರ್ತ್ರಾದಿ ವೈಗುಣ್ಯಾತ್ಫಲಾಸಿದ್ಧಿರ್ಹಿ ಸರ್ವತಃ ॥೧೩॥
ವಿರುದ್ಧ ಫಲ ಹೇತುತ್ವ ಮಭಿಸಂಧಿವಶಾದ್ಭವೇತ್ । ಏಕಸ್ಯ ರಾಜ್ಞಿ ದಾ
ತವ್ಯ ಜಂಬೀರ ಫಲನೀತಿತಃ ॥೧೪॥ ಪ್ರವೃತ್ತಿ ಧರ್ಮಾಸ್ಸ್ತೋಭಕ್ತಿ ಪ್ರಪ
ತ್ತೀ ಕಾಮುಕಾಮಿನಾಂ । ನಿವೃತ್ತಿಧರ್ಮಾ ತಾವೇವ ಭಗವಚ್ಚರಣಾರ್ಥಿನಾಂ
ಆವೃತ್ತ್ಯನಾವೃತ್ತಿ ವಶಾದ್ವಿಷಮಾವಪಿ ತಾವುಭೌ । ಮೋಕ್ಷೈಕ ಫಲದಾ
ಸ್ಯಾತಾಂ ಅಧಿಕಾರಿ ವಿಶೇಷತಃ ॥೧೬॥ ಉಪಾಯ ಫಲಯೋರೇಕ ರೂಪ
ತ್ವೇಪಿ ಪ್ರಪನ್ನಯೋಃ । ಫಲೇವಿಳಂಬಾವಿಳಂಬೌ ತ್ವರಾಯಾ ಸ್ತಾ
ತಮ್ಯತಃ ॥೧೭॥ ಸಾಧ್ಯೋಪಾಯ ಪ್ರಸನ್ನೋಯಸ್ಸಿದ್ಧೋಪಾಯಃ ಫಲ
ಪ್ರದಃ। ತತ್ಸಿದ್ಧಸಾಧ್ಯಯೋಃ ಕಾರ್ಯಂ ಫಲಂ ಶಾಸ್ತ್ರೇಷು ವರ್ಣ್ಯತೇ ॥೧೮॥
ಹರಿರೇಕಸ್ಸದಾ ಧ್ಯೇಯಃ ಇತ್ಯಾದ್ಯುಕ್ತ್ಯನುಸಾರತಃ। ಅಂಗಪ್ರಪತ್ತಿ ಪರತಾಂ
ಶ್ಲೋಕಸ್ಯಾಹುರ್ನತನ್ಮತಂ ॥೧೯॥ "ಹರಿರೇಕಸ್ಸದಾಧ್ಯೇಯ" ಇತ್ಯಾದಿಭಿ
ವಿಧೀಯತೇ। ಸ್ವತಂತ್ರನ್ಯಾಸನಿಷ್ಠಸ್ಯ ಫಲರೂಪ ಮುಪಾಸನಮ್ ॥೨೦॥ ಕೈ
ಕರ್ಯೇಕ್ರಿಯಮಾಣೇತು ಖ್ಯಾತಿಲಾಭ ವಿವರ್ಜಿತಃ । ಪ್ರಯೋಜನಾಂತರಾ
ಚ್ಛೂರ್ವೋಕ್ಷಂಚಾಪಿ ಫಲಂತ್ಯಜೇತ್ ॥ ೨೧ ॥ ಸ್ವಯಂಪ್ರಯೋಜನತ್ವೇ
ಮುಕ್ತವತ್ಸರ್ವಮಾಚರೇತ್ । ಅನ್ಯಾಭಿಗಮನಂ ತ್ಯಾಜ್ಯಂ ತಥಾನ್ಯಾಥ
ಪ್ರವೃತ್ತಯಃ ॥೨೨॥ ಅನ್ಯಪೂಜಾನ್ಯಕೀರ್ತಿಶ್ಚ ತ್ಯಾಜ್ಯಮನ್ಯ ವಿಚಿನ್ತನಮ್
ಏತೇಷಾಂ ವಿನಿವೃತ್ತ್ಯರ್ಥಂ ಹರಾವಭಿಗಮಾದಿಕಮ್ ॥೨೩॥ ವಿಧೀಯತೇ
ಶಾಸ್ತ್ರೇಷು ಕಾಲೇಷೂಕ್ತೇಷು ಪಂಚಸು । ಅನರ್ಹಾಣಾಮಪಿನೃಣಾಂ ದೇ
ವಾಭಿಗಮನಾದಿಷು ॥೨೪॥ ಸ್ವಯೋಗ್ಯನಿತ್ಯ ಕೃತ್ಯೈರ್ವಾಸ್ಥಿತಿ ಶ್ಶುಶ್ರೂಷ
ಯಾಪಿವಾ । ವಿಲಕ್ಷಣೋಭಕ್ತಿಯೋಗಃ ಸ್ತ್ರೀಶೂದ್ರಾಣಾಂ ನಿಷಿಧ್ಯತೇ॥೨೫
ಸರ್ವೇಷಾಂ ಸರ್ವದಾ ಕಾರ್ಯೋ ದೇಹಾನುಸ್ಮೃತಿಲಕ್ಷಣಃ । ಕ್ಲೇಶಾನಾಂ
ಕ್ಷಯಕರಂ ಯೋಗಾದನ್ಯ ನ್ನ ವಿದ್ಯತೇ ॥೨೬॥ ಇತ್ಯಾದಿಷು ಪ್ರಪನ್ನೇಭ
ಇತರತ್ರನಿಯಮ್ಯತೇ ॥ ಇತಿ.

ಶ್ರೀಮದ್ರಹಸ್ಯತ್ರಯಸಾರದ ಇಪ್ಪತ್ತುನಾಲ್ಕನೆಯ
ಸಾಧ್ಯೋಪಾಯಶೋಧನಾಧಿಕಾರಕ್ಕೆ
ತಿರುನಾರಾಯಣಪುರಂ ವಿಜಯರಾಘವಶರ್ಮನ
ಆಚಾರ್ಯಹೃದಯಾನ್ವೇಷಿಣೀ
ಎಂಬ ಪ್ರತಿಪದ ಕನ್ನಡ ಟೀಕಾ ತಾತ್ಪರ್ಯಗಳು ಸಂಪೂರ್ಣವಾದವು.